ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964

ಪ್ರಕರಣಗಳ ಅನುಕ್ರಮಣಿಕೆ

ಉದ್ದೇಶ ಮತ್ತು ಕಾರಣಗಳ ಹೇಳಿಕೆ:
ಪ್ರಕರಣಗಳು:

ಅಧ್ಯಾಯ I
ಪ್ರಾರಂಭಿಕ

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.
2. ಪರಿಭಾಷೆಗಳು.

ಅಧ್ಯಾಯ-II
ಮುನ್ಸಿಪಲ್ ಏರಿಯಾಗಳ ರಚನೆ

3. ಚಿಕ್ಕನಗರ ಪ್ರದೇಶವನ್ನು ನಿರ್ದಿಷ್ಟಪಡಿಸುವುದು.
4. ಪ್ರದೇಶಗಳನ್ನು ಚಿಕ್ಕನಗರ ಪ್ರದೇಶಗಳಲ್ಲಿ ಸೇರಿಸುವುದಕ್ಕೆ ಅಥವಾ ಅದರಿಂದ ಅವುಗಳನ್ನು ಬಿಟ್ಟುಬಿಡುವುದಕ್ಕೆ ಅಧಿಕಾರ ಮತ್ತು ಅದರ ಪರಿಣಾಮ.
5. ಗಡಿ ಗುರುತುಗಳನ್ನು ನಿಲ್ಲಿಸುವುದು ಮತ್ತು ಅವುಗಳ ನಿರ್ವಹಣೆ.
6. ಬಿಟ್ಟುಬಿಡಲಾಗಿದೆ.
7. ಅಸ್ತಿತ್ವ ಕೊನೆಗೊಂಡಿರುವ ಚಿಕ್ಕನಗರ ಪ್ರದೇಶದ ಮುನ್ಸಿಪಲ್ ಕೌನ್ಸಿಲ್‌ನ ಸ್ವತ್ತು ಮತ್ತು ಹಕ್ಕುಗಳು ಸರ್ಕಾರದಲ್ಲಿ ನಿಹಿತವಾಗತಕ್ಕದ್ದು.
8. ಎರಡು ಅಥವಾ ಹೆಚ್ಚು ಸ್ಥಳಗಳನ್ನು ಒಳಗೊಂಡಿರುವ ಚಿಕ್ಕನಗರ ಪ್ರದೇಶದ ನಾಮಕರಣ.
9. ಚಿಕ್ಕನಗರ ಪ್ರದೇಶಗಳ ರಚನೆ, ರದ್ದಿಯಾತಿ, ಇತ್ಯಾದಿಗಳಿಗಾಗಿ ಪ್ರಕ್ರಿಯೆ.
10. ಸಿಟಿ ಮತ್ತು ಟೌನ್ ಮುನ್ಸಿಪಲ್ ಕೌನ್ಸಿಲ್‌ಗಳನ್ನು ನಿಗಮನಗೊಳಿಸುವುದು.
11. ಮುನ್ಸಿಪಲ್ ಕೌನ್ಸಿಲ್‌ಗಳ ರಚನೆ.
12. ಬಿಟ್ಟುಬಿಡಲಾಗಿದೆ.
13. ಚುನಾವಣೆಗಳಿಗಾಗಿ ವಾರ್ಡುಗಳು.
14. ಮತದಾರರ ಪಟ್ಟಿ.
15. ಅಭ್ಯರ್ಥಿಗಳ ಅರ್ಹತೆ.
16. ಕೌನ್ಸಿಲರ್ ಆಗಲು ಸಾಮಾನ್ಯ ಅನರ್ಹತೆಗಳು.
16ಎ. ಚುನಾವಣಾ ವೆಚ್ಚಗಳ ಲೆಕ್ಕ ಮತ್ತು ಅವುಗಳ ಗರಿಷ್ಠ ಮಿತಿ.
16ಬಿ. ಲೆಕ್ಕವನ್ನು ಚುನಾವಣಾ ಅಧಿಕಾರಿಗೆ ಸಲ್ಲಿಸುವುದು.
16ಸಿ. ಚುನಾವಣಾ ವೆಚ್ಚಗಳ ಲೆಕ್ಕವನ್ನು ಸಲ್ಲಿಸಲು ವಿಫಲನಾಗುವುದು.
17. ಕೌನ್ಸಿಲರ್ ಗಳ ಸಾರ್ವತ್ರಿಕ ಚುನಾವಣೆ.
18. ಕೌನ್ಸಿಲರ್ ಗಳ ಪದಾವಧಿ.
18 ಎ. ಕೌನ್ಸಿಲರ್ ಗಳಿಗೆ ಭತ್ಯೆಗಳು.
19. ಆಕಸ್ಮಿಕ ಖಾಲಿ ಸ್ಥಾನಗಳನ್ನು ಹೇಗೆ ಭರ್ತಿ ಮಾಡಬೇಕು.
20. ಚುನಾವಣೆಗಳ ಫಲಿತಾಂಶಗಳ ಪ್ರಕಟಣೆ.
21. ಚುನಾವಣಾ ತಕರಾರು ಅರ್ಜಿಗಳು.
22. ಅರ್ಜಿದಾರನು ಕ್ಲೇಮು ಮಾಡಬಹುದಾದ ಪರಿಹಾರ.
23. ಚುನಾವಣೆಗಳು ಶೂನ್ಯವೆಂದು ಘೋಷಿಸುವುದಕ್ಕಾಗಿ ಆಧಾರಗಳು.
24. ಚುನಾವಣಾ ನ್ಯಾಯಾಧಿಕರಣವು ಅನುಸರಿಬೇಕಾದ ಪ್ರಕ್ರಿಯೆ.
25. ಚುನಾವಣಾ ನ್ಯಾಯಾಧಿಕರಣದ ತೀರ್ಮಾನ.
26. ಮತಗಳ ಸಮಾನತೆಯ ಸಂದರ್ಭದಲ್ಲಿ ಪ್ರಕ್ರಿಯೆ.
27. ಅಪೀಲು.
28. ಪ್ರಶ್ನಿಸಿದ ಹೊರತು, ಚುನಾವಣೆಯು ಸಿಂಧುವಾಗಿರತಕ್ಕದ್ದು.
29. ಭ್ರಷ್ಟಾಚಾರಗಳು.
30. ಮತದಾನದ ರಹಸ್ಯ ಪಾಲನೆ.

31. ಚುನಾವಣೆಗಳಲ್ಲಿ ಅಧಿಕಾರಿಗಳು, ಮೊದಲಾದವರು ಅಭ್ಯರ್ಥಿಗಳಿಗಾಗಿ ಕೆಲಸ ಮಾಡತಕ್ಕದ್ದಲ್ಲ ಅಥವಾ ಮತದಾನ ಮಾಡಲು ಪ್ರಭಾವ ಬೀರತಕ್ಕದ್ದಲ್ಲ.
32. ಮತದಾನ ಕೇಂದ್ರಗಳಲ್ಲಿ ಅಥವಾ ಅವುಗಳ ಹತ್ತಿರದಲ್ಲಿ ಪ್ರಚಾರದ ನಿಷೇಧ.
33. ಮತದಾನ ಕೇಂದ್ರಗಳ ಒಳಗೆ ಅಥವಾ ಅವುಗಳ ಹತ್ತಿರ ಅವ್ಯವಸ್ಥಿತ ವರ್ತನೆಗಾಗಿ ದಂಡನೆ.
34. ಮತದಾನ ಕೇಂದ್ರಗಳಲ್ಲಿ ದುರ್ವರ್ತನೆಗಾಗಿ ದಂಡನೆ.
35. ಚುನಾವಣೆಗಳಿಗೆ ಸಂಬಂಧಿಸಿದಂತೆ ಸರ್ಕಾರಿ ಕರ್ತವ್ಯದ ಉಲ್ಲಂಘನೆಗಳು.
36. ಮತಪತ್ರಗಳು ಅಥವಾ ಮತಯಂತ್ರಗಳನ್ನು ಮತದಾನ ಕೇಂದ್ರದಿಂದ ತೆಗೆದುಕೊಂಡು ಹೋಗುವುದು ಅಪರಾಧವಾಗತಕ್ಕದ್ದು.
37. ಇತರ ಅಪರಾಧಗಳು ಮತ್ತು ಅವುಗಳಿಗೆ ದಂಡನೆಗಳು.
38. ಚುನಾವಣೆಗಳ ನಿಯಂತ್ರಣ.
38 ಎ. ರಿಟರ್ನಿಂಗ್ ಆಫೀಸರ್, ಪ್ರಿಸೈಡಿಂಗ್ ಆಫೀಸರ್ ಮುಂತಾದವರು ರಾಜ್ಯ ಚುನಾವಣಾ ಆಯೋಗಕ್ಕೆ ಪ್ರತಿನಿಯೋಜಿತರಾಗಿರುವುದಾಗಿ ಭಾವಿಸತಕ್ಕದ್ದು.
38 ಬಿ. ಚುನಾವಣೆಗಳಲ್ಲಿ ಮತಯಂತ್ರ.
39. ಚುನಾವಣೆಗಳಿಗೆ ಸಂಬಂಧಪಟ್ಟ ದಾವೆಗಳ ಪ್ರತಿಷೇಧ, ಇತ್ಯಾದಿ.
40. ರಾಜೀನಾಮೆ.
41. ಪದದಿಂದ ತೆಗೆದು ಹಾಕುವ ಬಗ್ಗೆ ಹೊಣೆಗಾರಿಕೆ.
42. ಅಧ್ಯಕ್ಷ ಮತ್ತು .
43. ಅಧ್ಯಕ್ಷನ ಪ್ರಕಾರ್ಯಗಳು.
44. ಉಪಾಧ್ಯಕ್ಷನ ಪ್ರಕಾರ್ಯಗಳು.
45. ಪ್ರತಿಯೊಬ್ಬ ಕೌನ್ಸಿಲರ್ ಮತ್ತು ಅಧ್ಯಕ್ಷನ ಹಕ್ಕುಗಳು ಹಾಗೂ ವಿಶೇಷಾಧಿಕಾರಗಳು.

46. ಹೊಸ ಅಧ್ಯಕ್ಷ ಅಥವಾ ಉಪಾಧ್ಯಕ್ಷನಿಗೆ ಪ್ರಭಾರವಹಿಸಿಕೊಡಲು ನಿರಾಕರಿಸುವುದಕ್ಕೆ ದಂಡನೆ.

ಅಧ್ಯಾಯIII
ಮುನ್ಸಿಪಲ್ ಕೌನ್ಸಿಲ್‌ನಿಂದ ಕಾರ್ಯನಿರ್ವಹಣೆ

47. ಸಭೆ.
47 ಎ. ಬಿಟ್ಟುಬಿಡಲಾಗಿದೆ.
48. ಸಭೆಯ ನೋಟೀಸ್ ಮತ್ತು ವ್ಯವಹಾರ.
49. ಸಭೆಗಳನ್ನು ನಡೆಸುವ ಸ್ಥಳ ಮತ್ತು ಅಲ್ಲಿ ಸುವ್ಯವಸ್ಥೆಯ ಪಾಲನೆ.
50. ಕೋರಂ.
51. ಅಧ್ಯಕ್ಷಾಧಿಕಾರಿ.
52. ಪ್ರಶ್ನೆಗಳನ್ನು ತೀರ್ಮಾನಿಸುವ ವಿಧಾನ.
53. ಸಭೆಗಳಲ್ಲಿ ನಡೆಸಬೇಕಾದ ವ್ಯವಹಾರ ಮತ್ತು ವ್ಯವಹಾರಗಳ ಕ್ರಮಾನುಗತವನ್ನು ಹೇಗೆ ಇತ್ಯರ್ಥಪಡಿಸತಕ್ಕದ್ದು.
54. ವ್ಯವಹರಣೆಗಳ ನಡವಳಿಕೆಗಳು.
55. ಕೌನ್ಸಿಲರ್ ಗಳು ತಾವು ಹಿತಾಸಕ್ತಿ ಹೊಂದಿರುವಂಥ ವಿಷಯಗಳ ಮೇಲೆ ಮತ ನೀಡತಕ್ಕದ್ದಲ್ಲ.
56. ಸಭೆಗಳ ಮುಂದೂಡಿಕೆ.
57. ನಿರ್ಣಯ ಮಾರ್ಪಾಡು ಮತ್ತು ರದ್ದಿಯಾತಿ.
58. ಸೂಚನೆಗಳು ಮತ್ತು ತಿದ್ದುಪಡಿಗಳು.
59. ಸಾಮಾನ್ಯ ಸಭೆಗಳನ್ನು ನಡೆಸುವುದು.
60. ಕೆಲವು ಸಂದರ್ಭದಲ್ಲಿ ನಡೆಸಬೇಕಾಗಿರುವ ವ್ಯವಹಾರಗಳ ನೋಟೀಸನ್ನು ಸರ್ಕಾರದ ಎಕ್ಸಿಕ್ಯೂಟಿವ್ ಇಂಜನಿಯರ್ ಗೆ ಕೊಡತಕ್ಕದ್ದು.
61. ಕೆಲವು ಸರ್ಕಾರಿ ಅಧಿಕಾರಿಗಳು ಮುನ್ಸಿಪಲ್ ಕೌನ್ಸಿಲ್‌ನ ಸಭೆಗಳಿಗೆ ಹಾಜರಾಗಬಹುದು.
62. ಅಡ್ಡ ಪ್ರಶ್ನೆ.

63. ಸ್ಥಾಯೀ ಸಮಿತಿ.
64. ಬಿಟ್ಟುಬಿಡಲಾಗಿದೆ.
65. ಆಕಸ್ಮಿಕ ಖಾಲಿ ಸ್ಥಾನಗಳು.
66. ಸ್ಥಾಯೀ ಸಮಿತಿಯ ಅಧ್ಯಕ್ಷ.
67. ಸಭೆಗಳಲ್ಲಿನ ಪ್ರಕ್ರಿಯೆ.
68. ಪರಿಚಲನೆಯ ಮೂಲಕ ಪ್ರಕ್ರಿಯೆ.
69. ಮುನ್ಸಿಪಲ್ ಕೌನ್ಸಿಲ್‌ನ ಅನುದೇಶಗಳಿಗೆ ಸಮಿತಿಗಳ ಅಧೀನತೆ ಮತ್ತು ಮುನ್ಸಿಪಲ್ ಕೌನ್ಸಿಲ್‌ನ ಕಡ್ಡಾಯ ಕೋರಿಕೆಗಳ ಪಾಲನೆ.
70. ಯಾವ ಅಧಿಕಾರಿಗಳ ವೆಚ್ಚಗಳನ್ನು ಸಂದಾಯ ಮಾಡಬಹುದೋ ಆ ಅಧಿಕಾರಿಗಳಿಗೆ ಪ್ರತ್ಯಾಯೋಜಿಸಬಹುದಾದ ಅಧಿಕಾರಗಳು, ಕರ್ತವ್ಯಗಳು ಮತ್ತು ಪ್ರಕಾರ್ಯಗಳು.
71. ಸ್ಥಳೀಯ ನಿಕಾಯಗಳ ಜಂಟಿ ಸಮಿತಿಗಳು ಹಾಗೂ ದಾರಿ ಸುಂಕವನ್ನು ಜಂಟಿಯಾಗಿ ವಿಧಿಸುವುದು.
71 ಎ. ಮುನ್ಸಿಪಲ್ ಕೌನ್ಸಿಲ್ ಸಿಬ್ಬಂದಿ.
72. ಬಾಡಿಗೆಗೆ ಕೊಡಲು, ಮಾರಾಟ ಮಾಡಲು ಮತ್ತು ಕರಾರು ಮಾಡಿಕೊಳ್ಳಲು ಮುನ್ಸಿಪಲ್ ಕೌನ್ಸಿಲ್‌ನ ಸಕ್ಷಮತೆ.
73. ಸ್ವತ್ತಿನ ವರ್ಗಾವಣೆಯು ಷರತ್ತುಗಳಿಗೆ ಒಳಪಟ್ಟಿರಬಹುದು.
74. ಮುನ್ಸಿಪಲ್ ಕಾಮಗಾರಿಗಳನ್ನು ನಿರ್ವಹಿಸಲು ಸರ್ಕಾರದಿಂದ ನೇಮಕಗೊಂಡ ಅಧಿಕಾರಿಗಳಿಂದ ಕರಾರುಗಳು ಮತ್ತು ಅಂಥ ಕಾಮಗಾರಿಗಳಿಗಾಗಿ ಸಂದಾಯ.
75. ಭೂಮಿಯ ಕಡ್ಡಾಯ ಆರ್ಜನೆ.
76. ಮುನ್ಸಿಪಲ್ ಕೌನ್ಸಿಲ್‌ಗಳು ವಹಿಸಿದ ಎಲ್ಲಾ ಖರ್ಚುಗಳು ಮತ್ತು ವೆಚ್ಚಗಳಿಗಾಗಿ ಮುನ್ಸಿಪಲ್ ನಿಧಿಯು ಸಾಮಾನ್ಯವಾಗಿ ಗುರಿಯಾಗಿರತಕ್ಕದ್ದು.
77. ಮುನ್ಸಿಪಲ್ ಕೌನ್ಸಿಲ್‌ನ ಅಧಿಕಾರಿ ಅಥವಾ ನೌಕರನು ಅಂಥ ಮುನ್ಸಿಪಲ್ ಕೌನ್ಸಿಲ್‌ನೊಂದಿಗೆ ಯಾವುದೇ ಕರಾರಿನಲ್ಲಿ ಹಿತಾಸಕ್ತಿ ಹೊಂದಿರತಕ್ಕದ್ದಲ್ಲ.
78. ಮುನ್ಸಿಪಲ್ ಕೌನ್ಸಿಲ್‌ನೊಂದಿಗೆ ಯಾವುದೇ ಕರಾರು, ಇತ್ಯಾದಿಗಳಲ್ಲಿ ಕೌನ್ಸಿಲರ್ ನು ಹಿತಾಸಕ್ತಿಯನ್ನು ಹೊಂದಿರುವುದಕ್ಕಾಗಿ ದಂಡನೆ.
79. ಕೌನ್ಸಿಲರ್, ಮುಂತಾದವರನ್ನು ಸರ್ಕಾರಿ ನೌಕರರೆಂದು ಭಾವಿಸತಕ್ಕದ್ದು.
80. ವ್ಯವಹರಣೆಗಳ ಸಿಂಧುತ್ವ.

[ಅಧ್ಯಾಯ III-ಎ

ನೆರೆಹೊರೆ ಗುಂಪು, ಪ್ರದೇಶ ಸಭಾ ಮತ್ತು ವಾರ್ಡ್ ಸಮಿತಿ

80 ಎ. **ಪರಿಭಾಷೆಗಳು ಮತ್ತು ಅನ್ವಯಿಸುವಿಕೆ**
80 ಬಿ. **ನೆರೆಹೊರೆ ಗುಂಪಿನ ರಚನೆ**
80 ಸಿ. **ನೆರೆಹೊರೆ ಗುಂಪಿನ ಸಭೆಗಳು**
80 ಡಿ. **ನೆರೆಹೊರೆ ಗುಂಪಿನ ಪ್ರತಿನಿಧಿ, ಪದಾವಧಿ ಮತ್ತು ಭತ್ಯೆ**
80 ಇ. **ನೆರೆಹೊರೆ ಗುಂಪಿನ ಅಧಿಕಾರಗಳು ಮತ್ತು ಪ್ರಕಾರ್ಯಗಳು**
80 ಎಫ್. **ನೆರೆಹೊರೆ ಗುಂಪಿನ ಪ್ರತಿನಿಧಿ/ಹೆಚ್ಚುವರಿ ಪ್ರತಿನಿಧಿಯನ್ನು ತೆಗೆದುಹಾಕುವುದು**
80 ಜಿ. **ಪ್ರದೇಶ ಸಭಾಗಳ ರಚನೆ**
80 ಹೆಚ್. **ಪ್ರದೇಶ ಸಭಾದ ಸಭೆಗಳು**
80 ಐ. **ಪ್ರದೇಶ ಸಭಾದ ಪ್ರತಿನಿಧಿ.**
80 ಜೆ. **ಪ್ರದೇಶ ಸಭಾಗಳ ಅಧಿಕಾರಗಳು ಮತ್ತು ಪ್ರಕಾರ್ಯಗಳು**
80 ಕೆ. **ಅಪೀಲು**
80 ಎಲ್. **ಪ್ರದೇಶ ಸಭಾದ ಪ್ರತಿನಿಧಿ ಅಥವಾ ಹೆಚ್ಚುವರಿ ಪ್ರತಿನಿಧಿಗಳನ್ನು ತೆಗೆದು ಹಾಕುವುದು**
80 ಎಂ. **ವಾರ್ಡ್ ಸಮಿತಿಯ ರಚನೆ**
80 ಎನ್. **ವಾರ್ಡ್ ಸಮಿತಿಯ ಸಭೆ**
80 ಒ. **ವಾರ್ಡ್ ಸಮಿತಿಯ ಪ್ರಕಾರ್ಯಗಳು**
80 ಪಿ. **ವಾರ್ಡ್ ಸಮಿತಿಯ ಸದಸ್ಯರನ್ನು ತೆಗೆದುಹಾಕುವುದು**
80 ಕ್ಯು. **ಅಪೀಲು**

ಅಧ್ಯಾಯ IV
ಮುನ್ಸಿಪಲ್ ಸ್ವತ್ತು ಮತ್ತು ನಿಧಿ

81. ಮುನ್ಸಿಪಲ್ ಸ್ವತ್ತು.
82. ಮುನ್ಸಿಪಲ್ ಕೌನ್ಸಿಲ್‌ನಿಂದ ಅಥವಾ ಅದರ ವಿರುದ್ಧವಾಗಿ ಸ್ವತ್ತಿಗಾಗಿನ ಕ್ಲೇಮುಗಳ ತೀರ್ಮಾನ.
83. ಮುನ್ಸಿಪಲ್ ನಿಧಿ.
84. ಮುನ್ಸಿಪಲ್ ನಿಧಿ ಮತ್ತು ಸ್ವತ್ತಿನ ವಿನಿಯೋಗ.
85. ಹೆಚ್ಚುವರಿ ನಿಧಿಯನ್ನು ಠೇವಣಿ ಇಡಲು ಮತ್ತು ಹೂಡಲು ಅಧಿಕಾರ.
86. ಹಣ ಸಾಲ ಪಡೆಯಲು ಮುನ್ಸಿಪಲ್ ಕೌನ್ಸಿಲುಗಳ ಅಧಿಕಾರ.

ಅಧ್ಯಾಯ V
ಮುನ್ಸಿಪಲ್ ಕೌನ್ಸಿಲ್‌ಗಳ ನಿರ್ಬಂಧಕ ಮತ್ತು ವಿವೇಚನಾತ್ಮಕ ಪ್ರಕಾರ್ಯಗಳು

87. ಮುನ್ಸಿಪಲ್ ಕೌನ್ಸಿಲ್‌ಗಳ ನಿರ್ಬಂಧಕ ಪ್ರಕಾರ್ಯಗಳು.
88. ವಿಶೇಷ ಪ್ರಕಾರ್ಯಗಳು.
89. ಯಾವುದೇ ಪ್ರಕಾರ್ಯದಿಂದ ಮುನ್ಸಿಪಲ್ ಕೌನ್ಸಿಲ್‌ನ್ನು ವಿನಾಯಿತಿಗೊಳಿಸಲು ಸರ್ಕಾರದ ಅಧಿಕಾರ.
90. ಕೊಳವೆಗಳ ಮೂಲಕ ಸರಬರಾಜು ಮಾಡಿದ ನೀರಿನ ವಿಶ್ಲೇಷಣೆ ಮತ್ತು ಪರಿಶೀಲನೆ.
91. ಮುನ್ಸಿಪಲ್ ಕೌನ್ಸಿಲ್‌ಗಳ ವಿವೇಚನಾತ್‌ಮಕ ಪ್ರಕಾರ್ಯಗಳು.
92. ಖಾಯಂ ಆಗಿ ಅಥವಾ ವರ್ಷಗಳ ಅವಧಿಗಾಗಿ ಬದ್ಧವಾಗಿರುವುದಕ್ಕಾಗಿ ತಾತ್ಪರ್ಯವಾಗುವ ವ್ಯವಸ್ಥೆಗಳು.
93. ಮುನ್ಸಿಪಲ್ ಕೌನ್ಸಿಲ್ ನಿರ್ವಹಿಸುತ್ತಿರುವ ಸಾರ್ವಜನಿಕ ಸಂಸ್ಥೆಯ ವ್ಯವಸ್ಥಾಪನೆಯು ಅದರಲ್ಲಿ ನಿಹಿತವಾಗತಕ್ಕದ್ದು.

ಅಧ್ಯಾಯVI
ಮುನ್ಸಿಪಲ್ ತೆರಿಗೆ ನಿರ್ಧರಣೆ
ತೆರಿಗೆಗಳು ಮತ್ತು ವಿಧಿಸುವುದಕ್ಕಾಗಿನ ಪ್ರಕ್ರಿಯೆ

94. ವಿಧಿಸಬಹುದಾದ ತೆರಿಗೆಗಳು.
94 ಎ. ಮಾಜಿ ಸೈನಿಕನ ಕಟ್ಟಡ ಮತ್ತು ಭೂಮಿಯ ಮೇಲಿನ ಆಸ್ತಿ ತೆರಿಗೆಯ ವಿನಾಯಿತಿ.
94 ಎಎ. ನಗರ ಸಾರಿಗೆ ಉಪಕರವನ್ನು ವಿಧಿಸುವುದು.
95. ಬಿಟ್ಟುಬಿಡಲಾಗಿದೆ.
96. ಬಿಟ್ಟುಬಿಡಲಾಗಿದೆ.
97. ನೋಟೀಸಿನೊಂದಿಗೆ ಮಂಜೂರಾದ ನಿರ್ಣಯಗಳನ್ನು ಪ್ರಕಟಿಸುವುದು.
98. ಅಸ್ತಿತ್ವದಲ್ಲಿರುವ ಯಾವುದೇ ತೆರಿಗೆಯನ್ನುನಿಲಂಬನಗೊಳಿಸಲು,ಕಡಿಮೆ ಮಾಡಲು ಅಥವಾ ರದ್ದುಗೊಳಿಸಲು ಅಧಿಕಾರ.

ಸ್ಥಿರ ಸ್ವತ್ತುಗಳ ವರ್ಗಾವಣೆಗಳ ಮೇಲೆ ಸುಂಕ

99. ಸ್ಥಿರ ಸ್ವತ್ತುಗಳ ವರ್ಗಾವಣೆಗಳ ಮೇಲೆ ಸುಂಕ.

ವಾಹನಗಳು, ದೋಣಿಗಳು, ಪ್ರಾಣಿಗಳು ಮತ್ತು ನಾಯಿಗಳ ಮೇಲೆ ತೆರಿಗೆ

100. ಬಿಟ್ಟುಬಿಡಲಾಗಿದೆ.

ಕಟ್ಟಡಗಳು ಮತ್ತು ಭೂಮಿಗಳ ಮೇಲೆ ತೆರಿಗೆ ನಿರ್ಧಾರಣೆ ಮತ್ತು ತೆರಿಗೆಗೆ ಅವುಗಳು ಗುರಿಯಾಗುವುದು

101. ಸ್ವತ್ತು ತೆರಿಗೆಯ ವಿವರಣೆ ಮತ್ತು ವರ್ಗ.
101 ಎ. ಉಪಬಂಧಗಳ ಅನ್ವಯಿಸುವಿಕೆ.
102. ಸ್ವತ್ತು ತೆರಿಗೆಯ ನಿರ್ಧರಣೆಯ ವಿಧಾನ.
102 ಎ. ಸ್ವತ್ತು ತೆರಿಗೆಯನ್ನು ಹೆಚ್ಚಿಸುವುದು.
103. ಸ್ವತ್ತು ಅಧಿಭೋಗದಲ್ಲಿರುವ ಕಟ್ಟಡಕ್ಕೆ ವಿನಾಯಿತಿ.
104. ಬಿಟ್ಟುಬಿಡಲಾಗಿದೆ.
105. ಸ್ವತ್ತು ತೆರಿಗೆಯ ನಿರ್ಧರಣೆ.
106. ಸ್ವತ್ತು ತೆರಿಗೆಯ ರಿಜಿಸ್ಟರ್ ನ್ನು ಸಿದ್ಧಪಡಿಸುವುದು ಮತ್ತು ಪ್ರಕಟಿಸುವುದು.
107. ಕಾನೂನುಬಾಹಿರ ಕಟ್ಟಡದ ಮೇಲೆ ದಂಡ ವಿಧಿಸುವುದು.
107 ಎ. ಭೂಮಿಗಳ ಮತ್ತು ಕಟ್ಟಡಗಳ ಸರ್ವೇ ಮಾಡುವುದು ಮತ್ತು ಸ್ವತ್ತು ರಿಜಿಸ್ಟರ್ ನ್ನು ಸಿದ್ಧಪಡಿಸುವುದು.
108. ಕಟ್ಟಡವನ್ನು ಕೆಡವಲು ಅಥವಾ ತೆಗೆದುಹಾಕಲುಮುನ್ಸಿಪಲ್ ಕೌನ್ಸಿಲಿಗೆ ನೋಟೀಸನ್ನು ಕೊಡತಕ್ಕದ್ದು.
109. ಬಿಟ್ಟುಬಿಡಲಾಗಿದೆ.
110. ಮುಖ್ಯವಾಗಿ ಯಾರಿಂದ ತೆರಿಗೆಯು ವಸೂಲೀಯವಾಗತಕ್ಕದ್ದು.
110 ಎ. ಬಿಟ್ಟುಬಿಡಲಾಗಿದೆ.
111. ಸ್ವತ್ತು ತೆರಿಗೆಯ ಸಂದಾಯಕ್ಕೆ ಮುಖ್ಯವಾಗಿ ಹೊಣೆಯಾಗಿರುವ ವ್ಯಕ್ತಿಗಳಿಂದ ಸ್ವಾಮ್ಯದ ಎಲ್ಲಾ ವರ್ಗಾವಣೆಗಳ ಬಗ್ಗೆ ಮುನ್ಸಿಪಲ್ ಕೌನ್ಸಿಲ್‌ಗೆ ನೋಟೀಸನ್ನು ಕೊಡತಕ್ಕದ್ದು.
112. ನೋಟೀಸಿನ ನಮೂನೆ.
113. ಸ್ವತ್ತು ತೆರಿಗೆಯ ರಿಜಿಸ್ಟರ್ ನಲ್ಲಿ ವರ್ಗಾವಣೆ ಪಡೆದವನ ಹೆಸರನ್ನು ನಮೂದಿಸತಕ್ಕದ್ದು.
114. ವರ್ಗಾವಣೆಯ ನೋಟೀಸು ಇಲ್ಲದಿರುವಲ್ಲಿ ಸ್ವತ್ತು ತೆರಿಗೆಯ ಸಂದಾಯಕ್ಕೆ ಹೊಣೆಗಾರಿಕೆಯು ಮುಂದುವರಿಯುವುದು.
115. ತೆರಿಗೆ ನಿರ್ಧರಣೆಯಿಂದ ತಪ್ಪಿಸಿಕೊಂಡ ಸಂದರ್ಭದಲ್ಲಿ ತೆರಿಗೆ ನಿರ್ಧರಣೆ ಮಾಡಲು ಅಧಿಕಾರ.
116 ರಿಂದ 122 ರವರೆಗೆ ಬಿಟ್ಟುಬಿಡಲಾಗಿದೆ .
123 ರಿಂದ 127 ರವರೆಗೆ ಬಿಟ್ಟುಬಿಡಲಾಗಿದೆ .
128. ಬಿಟ್ಟುಬಿಡಲಾಗಿದೆ.
129. ಬಿಟ್ಟುಬಿಡಲಾಗಿದೆ.
130. ಮತ್ತು 131ನ್ನು ಬಿಟ್ಟುಬಿಡಲಾಗಿದೆ.
132. ಬಿಟ್ಟುಬಿಡಲಾಗಿದೆ.

ಜಾಹೀರಾತುಗಳು ಮತ್ತು ಜಾಹೀರಾತುಗಳ ತೆರಿಗೆ

133. ಮುನ್ಸಿಪಲ್ ಕೌನ್ಸಿಲ್‌ನ ಬರಹದ ಅನುಮತಿಯಿಲ್ಲದ ಜಾಹೀರಾತುಗಳ ನಿಷೇಧ.
134. ಕೆಲವು ಸಂದರ್ಭಗಳಲ್ಲಿ ಮುನ್ಸಿಪಲ್ ಕೌನ್ಸಿಲ್‌ನ ಅನುಮತಿಯು ಶೂನ್ಯವಾಗಿರತಕ್ಕದ್ದು.
135. ಉಲ್ಲಂಘನೆಯ ಸಂದರ್ಭದಲ್ಲಿ ಪೂರ್ವಭಾವನೆ.
136. ಅನಧಿಕೃತ ಜಾಹೀರಾತುಗಳನ್ನು ತೆಗೆದುಹಾಕುವುದು.

ಫೀಜು, ಇತ್ಯಾದಿಗಳನ್ನು ವಿಧಿಸಲು ಅಧಿಕಾರ

137. ಜಾತ್ರೆ, ಉರುಸು ಇತ್ಯಾದಿಗಳಿಗೆ ಸಂಬಂಧಿಸಿದಂತೆ ಫೀಜುಗಳು.
138. ಕೆಲವು ಲೈಸೆನ್ಸುಗಳು ಇತ್ಯಾದಿಗಳಿಗೆ ಮುನ್ಸಿಪಲ್ ಕೌನ್ಸಿಲ್ ಫೀಜುಗಳನ್ನು ವಿಧಿಸಬಹುದು.

ತೆರಿಗೆಗಳಿಗೆ ಸಂಬಂಧಿಸಿದಂತೆ ವಿಶೇಷ ಉಪಬಂಧಗಳು

139. ತೆರಿಗೆಗಳಿಗೆ ಬದಲಾಗಿ ನಿಗದಿಪಡಿಸಿದ ಚಾರ್ಜುಗಳು ಮತ್ತು ಅವುಗಳ ಸಂದಾಯಕ್ಕಾಗಿ ಒಪ್ಪಂದಗಳು.

140. ಆಕ್ಷೇಪಣೀಯ ತೆರಿಗೆಗಳ ವಿಧಿಸುವಿಕೆಯನ್ನು ಅಮಾನತುಗೊಳಿಸಲು ಅಥವಾ ನಿಷೇಧಿಸಲು ಸರ್ಕಾರದ ಅಧಿಕಾರ.
141. ತೆರಿಗೆಗಳನ್ನು ವಿಧಿಸಲು ಮುನ್ಸಿಪಲ್ ಕೌನ್ಸಿಲ್‌ನ್ನು ಅಗತ್ಯಪಡಿಸಲು ಸರ್ಕಾರದ ಅಧಿಕಾರ.

ಅಧ್ಯಾಯVII
ಮುನ್ಸಿಪಲ್ ಕ್ಲೇಮುಗಳನ್ನು ವಸೂಲಿ ಮಾಡುವುದು

142. ತೆರಿಗೆಗಳಿಗಾಗಿ ಬಿಲ್ಲನ್ನು ಸಲ್ಲಿಸುವುದು.
143. ಜಪ್ತಿ.
144. ಕರಸ್ಥಗೊಳಿಸಿದ ಅಥವಾ ಜಪ್ತಿ ಮಾಡಿದ ಸರಕುಗಳ ಮತ್ತು ಸ್ವತ್ತಿನ ಮಾರಾಟ.
145. ಮಾರಾಟಗಳಿಗೆ ಸಂಬಂಧಿಸಿದಂತೆ ಪ್ರಕ್ರಿಯೆ, ಇತ್ಯಾದಿ.
146. ಜಿಲ್ಲೆಯ ಹೊರಗಡೆ ಮಾರಾಟ.
147. ಕರಸ್ಥವು ಕಾರ್ಯಸಾಧ್ಯವಲ್ಲದಾಗ ಪ್ರಕ್ರಿಯೆ.
148. ಮುನ್ಸಿಪಲ್ ಏರಿಯಾವನ್ನು ಬಿಡಲಿರುವ ವ್ಯಕ್ತಿಗಳ ವಿರುದ್ಧ ಕ್ಷಿಪ್ರ ವ್ಯವಹರಣೆಯನ್ನು ತೆಗೆದುಕೊಳ್ಳಬಹುದು.
149. ಫೀಜುಗಳು.
150. ಮ್ಯಾಜಿಸ್ಟ್ರೇಟ್ ನಿಗೆ ಅಪೀಲು.
151. ತೆರಿಗೆಗಾಗಿ ಖಾಲಿ ಭೂಮಿ, ಕಟ್ಟಡ ಇತ್ಯಾದಿಗಳ ಹೊಣೆಗಾರಿಕೆ.
152. ಕರಸ್ಥ ಮತ್ತು ಮಾರಾಟದ ಮೂಲಕ ವಸೂಲಿ ಮಾಡುವ ಅಧಿಕಾರದ ನಿಲಂಬನ.
153. ಎಲ್ಲಾ ಸಂದಾಯಗಳಿಗೆ ರಸೀದಿಯನ್ನು ಕೊಡತಕ್ಕದ್ದು.
154. ಭೂಮಿಯ ಮೇಲಿನ ಬಾಡಿಗೆ ವಸೂಲಿ.

ಅಧ್ಯಾಯ VII
ಮೇಲ್ಪಾಟು ಯೋಜನೆಗಳು ಮತ್ತು ಮೇಲ್ಪಾಟು ಮಂಡಲಿಗಳು

155. ಕಾಮಗಾರಿಗಳನ್ನು ಕೈಕೊಳ್ಳಲು ಮತ್ತು ಮೇಲ್ಪಾಟುಗಳಿಗಾಗಿ ವೆಚ್ಚವನ್ನು ವಹಿಸಲು ಮುನ್ಸಿಪಲ್ ಕೌನ್ಸಿಲ್‌ನ ಅಧಿಕಾರ, ಇತ್ಯಾದಿ.
156. ಮೇಲ್ಪಾಟು ಯೋಜನೆಯಲ್ಲಿ ಒದಗಿಸಬೇಕಾದ ವಿವರಗಳು.
157. ಯೋಜನೆಯು ಪೂರ್ಣಗೊಂಡ ಮೇಲೆ ಪ್ರಕ್ರಿಯೆ.
158. ಯೋಜನೆಯನ್ನು ಅನಂತರ ಮಂಜೂರಾತಿಗಾಗಿ ಸರ್ಕಾರಕ್ಕೆ ಕಳುಹಿಸಿಕೊಡುವುದು.
159. ಮಂಜೂರಾತಿಯನ್ನು ಸ್ವೀಕರಿಸಿದ ಮೇಲೆ ಆರ್ಜಿಸಬೇಕಾದ ಭೂಮಿಯ ವಿವರಗಳನ್ನು ಕೊಟ್ಟು ಘೋಷಣೆಯನ್ನು ಪ್ರಕಟಿಸುವುದು.
160. ಅಭಿವೃದ್ಧಿ ಫೀಜಿನ ಸಂದಾಯ.
161. ಮುನ್ಸಿಪಲ್ ಕೌನ್ಸಿಲ್‌ನಿಂದ ಅಭಿವೃದ್ಧಿ ಫೀಜಿನ ನಿರ್ಧರಣೆ.
162. ಮಧ್ಯಸ್ಥಗಾರನಿಂದ ಅಭಿವೃದ್ಧಿ ಫೀಜಿನ ನಿರ್ಧಾರ.
163. ಮಧ್ಯಸ್ಥಗಾರನ ಫೀಜು.
164. ಮಧ್ಯಸ್ಥಗಾರನ ಅಧಿಕಾರಗಳು ಮತ್ತು ಕರ್ತವ್ಯಗಳು.
165. ಅಭಿವೃದ್ಧಿ ಫೀಜಿನ ಸಂದಾಯಕ್ಕೆ ಹೊಣೆಯಾಗಿರುವ ವ್ಯಕ್ತಿಗಳಿಗೆ ಮುನ್ಸಿಪಲ್ ಕೌನ್ಸಿಲ್ ನೋಟೀಸ್ ಕೊಡುವುದು.
166. ಭೂಮಿಯ ಮೇಲಿನ ಋಣಭಾರವೆಂದು ಅಭಿವೃದ್ಧಿ ಫೀಜಿನ ಸಂದಾಯ ಮಾಡಲು ಒಪ್ಪಂದ.
167. ಅಭಿವೃದ್ಧಿ ಫೀಜನ್ನು ಸಂದಾಯ ಮಾಡುವುದು ಪ್ರಥಮ ಋಣಭಾರವಾಗಿರತಕ್ಕದ್ದು.
168. 161, 162 ಅಥವಾ 166ನೇ ಪ್ರಕರಣದನುಸಾರವಾಗಿ ಸಂದಾಯವಾಗಬೇಕಾದ ಹಣದ ವಸೂಲಿ.
169. ಸಂದಾಯದ ಒಪ್ಪಂದವು ಹೊಸ ಘೋಷಣೆಯ ಮೇರೆಗಿನ ಆರ್ಜನೆಗೆ ಅಡ್ಡಿಯಾಗತಕ್ಕದ್ದಲ್ಲ.

170. ಹೊಸ ಬಡಾವಣೆಗಳು ಅಥವಾ ಲೇಔಟ್ ಗಳನ್ನು ರೂಪಿಸುವುದು ಅಥವಾ ಹೊಸ ಖಾಸಗಿ ಬೀದಿಗಳನ್ನು ನಿರ್ಮಿಸುವುದು.
171. ಬಡಾವಣೆ, ಲೇಔಟ್ ಅಥವಾ ಬೀದಿಯ ಬದಲಾವಣೆ ಅಥವಾ ನಾಶಪಡಿಸುವಿಕೆ.
172. ಕಾಮಗಾರಿಯನ್ನು ನಿರ್ವಹಿಸುವಂತೆ ಆದೇಶಿಸಲು ಅಥವಾ ತಪ್ಪಿದರೆ, ಅದನ್ನು ತಾನೇ ಸ್ವತಃ ನೆರವೇರಿಸಲು ಮುನ್ಸಿಪಲ್ ಕೌನ್ಸಿಲ್‌ನ ಅಧಿಕಾರ.
173. ಮೇಲ್ಮಾಟು ಮಂಡಲಿಯ ಸ್ಥಾಪನೆ.
174. ಮೇಲ್ಮಾಟು ಮಂಡಲಿಯ ಸ್ವತ್ತು, ಹಣಕಾಸು, ಅಧಿಕಾರಗಳು, ಇತ್ಯಾದಿ.

ಅಧ್ಯಾಯ IX
ಅಧಿಕಾರಗಳು ಮತ್ತು ಅಪರಾಧಗಳು
ರಸ್ತೆಗಳಿಗೆ ಸಂಬಂಧಿಸಿದಂತೆ ಅಧಿಕಾರಗಳು

175. ರಸ್ತೆ, ಇತ್ಯಾದಿಗಳ ಬಗ್ಗೆ ಅಧಿಕಾರ.
176. ಬೀದಿಗಳನ್ನು ದುರಸ್ತಿಗೊಳಿಸಲು ಮತ್ತು ಅಂಥ ಬೀದಿಗಳು ಸಾರ್ವಜನಿಕವಾದವುಗಳೆಂದು ಘೋಷಿಸಲು ಅಧಿಕಾರ.
177. ಒಡೆಯರ ಆಕ್ಷೇಪಣೆಗಳಿಗೊಳಪಟ್ಟು ಯಾವುದೇ ಬೀದಿಯನ್ನು ಸಾರ್ವಜನಿಕ ಬೀದಿ ಎಂದು ಘೋಷಿಸಲು ಅಧಿಕಾರ.
178. ಬೀದಿಗಳನ್ನು ತಾತ್ಕಾಲಿಕವಾಗಿ ಮುಚ್ಚುವುದು.
179. ಸಾರ್ವಜನಿಕ ಬೀದಿಯ ನಿಯತರೇಖೆ.
180. ಬೀದಿಗಳ ನಿಯತರೇಖೆಯೊಳಗೆ ಕಟ್ಟಡಗಳ ನಿರ್ಮಾಣದ ನಿಯಂತ್ರಣ.

ಕಟ್ಟಡಗಳು, ಮೊದಲಾದವುಗಳನ್ನು ನಿಯಂತ್ರಿಸಲು ಅಧಿಕಾರಗಳು.

181. ಮುಂಚಾಚಿಕೊಂಡಿರುವ ಕಟ್ಟಡಗಳನ್ನು ಹಿಂದಕ್ಕೆ ಸರಿಸುವುದು.
182. ಬೀದಿಯ ನಿಯತರೇಖೆಯನ್ನು ಮುಂದಕ್ಕೆ ಸರಿಸುವುದು.
183. ಬೀದಿಗಳ ಮೂಲೆಯಲ್ಲಿರುವ ಕಟ್ಟಡಗಳು.
184. ಕಟ್ಟಡಗಳ ಚಾವಣಿ ಮತ್ತು ಹೊರಗೋಡೆಗಳನ್ನು ಸುಲಭ ದಹ್ಯ ಸಾಮಗ್ರಿಗಳಿಂದ ಮಾಡತಕ್ಕದ್ದಲ್ಲ.
185. ಕಟ್ಟಡಗಳ ಮಟ್ಟ.
186. ಧಾನ್ಯವನ್ನು ಸಂಗ್ರಹಿಸಲು ಉಗ್ರಾಣಗಳಿಗಾಗಿ ಇಲಿಗಳಿಗೆ ಅಬೇಧ್ಯವಾದ ಕಟ್ಟಡ.
187. ಹೊಸ ಕಟ್ಟಡಗಳ ಬಗ್ಗೆ ನೋಟೀಸ್.
187 ಎ - ಕಾನೂನುಬಾಹಿರವಾದ ಕೆಲವು ಕಟ್ಟಡಗಳನ್ನು ಸಕ್ರಮಗೊಳಿಸುವುದು.
187 ಬಿ - ಅನಧಿಕೃತ ಮಾರ್ಗಾಂತರಗಳು ಅಥವಾ ನಿರ್ಮಾಣಗಳನ್ನು ತಡೆಯಲು ವಿಫಲನಾದ ಆ ಪ್ರದೇಶದ ಅಧಿಕಾರ ವ್ಯಾಪ್ತಿಯುಳ್ಳ ಅಧಿಕಾರಿಗೆ ದಂಡ.
188. ತಪ್ಪು ನಿರೂಪಣೆಯ ಮೇರೆಗೆ ಕೊಡಲಾದ ಮಂಜೂರಾತಿ.
189. ಕೆಲವು ಪ್ರದೇಶಗಳಲ್ಲಿ ಅನುಮತಿ ಇಲ್ಲದೆ ಕಟ್ಟಡಗಳ ಕಟ್ಟುವಿಕೆಯನ್ನು ನಿಷೇಧಿಸಲು ಸರ್ಕಾರದ ಅಧಿಕಾರ.
190. ಮುಕ್ತಾಯ ಪ್ರಮಾಣಪತ್ರಗಳು, ಸ್ವಾಧೀನಪಡಿಸಿಕೊಳ್ಳಲು ಅಥವಾ ಉಪಯೋಗಿಸಲು ಅನುಮತಿ.
191. ಗುಡಿಸಲುಗಳ ನಿಯಂತ್ರಣ.
192. ಗುಡಿಸಲುಗಳ ಮೇಲ್ಮಾಟು.

ಚರಂಡಿ ವ್ಯವಸ್ಥೆ, ನೀರು ಸರಬರಾಜು ಗೃಹಗಳು, ಇತ್ಯಾದಿಗಳಿಗೆ ಸಂಬಂಧಿಸಿದಂತೆ ಅಧಿಕಾರ.

193. ಚರಂಡಿಗಳು, ಇತ್ಯಾದಿಗಳ ಮೇಲೆ ಮುನ್ಸಿಪಾಲಿಟಿಯ ನಿಯಂತ್ರಣ.
194. ಚರಂಡಿಗಳನ್ನು ಮಾಡುವುದಕ್ಕಾಗಿ ಅಧಿಕಾರಗಳು.
195. ಮನೆಗಳಿಗೆ ಸಾಕಷ್ಟು ಚರಂಡಿ ವ್ಯವಸ್ಥೆ.

196. ಮುನ್ಸಿಪಲ್ ಚರಂಡಿಗಳೊಳಕ್ಕೆ ಹರಿಯಬಿಡಲು ಕಟ್ಟಡಗಳ ಅಥವಾ ಖಾಲಿ ಭೂಮಿಯ ಒಡೆಯರ ಮತ್ತು ಅಧಿಭೋಗದಾರರ ಅಧಿಕಾರ.
197. ಇತರ ವ್ಯಕ್ತಿಗಳಿಗೆ ಸೇರಿದ ಭೂಮಿಯ ಮೂಲಕ ಅಥವಾ ಚರಂಡಿಯನ್ನು ಒಯ್ಯಲು ಹಕ್ಕು.

198. ಚರಂಡಿಯನ್ನು ಒಯ್ಯಲಾಗಿರುವಂಥ ಭೂಮಿಯ ಒಡೆಯನಿಗೆ, ಅದರ ಮೇಲೆ ತರುವಾಯ ಕಟ್ಟುವುದರ ಬಗೆಗಿನ ಇರುವ ಹಕ್ಕುಗಳು.
199. ಕಕ್ಕಸುಗಳು, ಇತ್ಯಾದಿಗಳ ಬಗ್ಗೆ ವ್ಯವಸ್ಥೆ.
200. ಕಕ್ಕಸುಗಳು ಇತ್ಯಾದಿಗಳನ್ನು ಬದಲಾಯಿಸುವ, ದುರಸ್ತಿ ಮಾಡುವ ಮತ್ತು ಸರಿಯಾದ ಸ್ಥಿತಿಯಲ್ಲಿಡುವ ಬಗ್ಗೆ ಖರ್ಚು.
201. ಅಸ್ತಿತ್ವದಲ್ಲಿರುವ ಖಾಸಗಿ ಚರಂಡಿಗಳನ್ನು ಮುಚ್ಚಲು ಅಧಿಕಾರ.
202. ಅನಧಿಕೃತವಾಗಿ ನಿರ್ಮಿಸಿದ, ಪುನರ್ ನಿರ್ಮಿಸಿದ ಅಥವಾ ನಿಲ್ಲಿಸದ ಗ್ರಾಮಸಾರ ಚರಂಡಿಗಳು, ಇತ್ಯಾದಿಗಳಿಗೆ ಸಂಬಂಧಿಸಿದಂತೆ ಅಧಿಕಾರ.
203. ಮುನ್ಸಿಪಲ್ ಚರಂಡಿಗಳ ಮೇಲೆ ಒತ್ತುವರಿ, ಇತ್ಯಾದಿ.
204. ಚರಂಡಿಗಳು, ಇತ್ಯಾದಿಗಳ ಪರಿಶೀಲನೆ.
205. ಮುನ್ಸಿಪಲ್ ಕೌನ್ಸಿಲ್‌ಗಳನ್ನು ಸಂಬಂಧಪಟ್ಟ ವ್ಯಕ್ತಿಗಳಿಗೆ ಅವುಗಳನ್ನು ನಿರ್ವಹಿಸುವ ಆಯ್ಕೆಯ ಅವಕಾಶವನ್ನು ಕೊಡದೆಯೇ ನಿರ್ವಹಿಸಬಹುದು.
206. ಪ್ರಧಾನ ನೀರು ಕೊಳವೆ, ಇತ್ಯಾದಿಗಳನ್ನು ಒಯ್ಯುವ ಅಧಿಕಾರ.
207. ಲೈಸೆನ್ಸ್ ಪಡೆದ ಕೊಳಾಯಿಗಾರ ಅಥವಾ ಲೈಸೆನ್ಸ್ ಪಡೆದ ನೀರು ಸರಬರಾಜು ಕಂಟ್ರಾಕ್ಟರನು ಮಾಡಬೇಕಾದ ಕೆಲಸಗಳು.

ಬಾಹ್ಯ ರಚನೆಗಳು, ಇತ್ಯಾದಿಗಳಿಗೆ ಸಂಬಂಧಿಸಿದಂತೆ ಅಧಿಕಾರ.

208. ಕೆಲವು ಮುಂಚಾಚುವಿಕೆಗಳಿಗೆ ಅನುಮತಿ ಅಗತ್ಯ.
209. ಮಳೆ ನೀರಿಗಾಗಿ ಹರಿದೋಣಿಗಳು ಮತ್ತು ಕೊಳವೆಗಳು.
210. ಮನೆಗಳಿಗೆ ಬ್ರ್ಯಾಕೆಟ್ಟುಗಳು, ಇತ್ಯಾದಿಗಳನ್ನು ಜೋಡಿಸುವುದು.
211. ಬೀದಿಗಳಿಗೆ ಹೆಸರಿಡುವುದು ಮತ್ತು ಮನೆಗಳಿಗೆ ಸಂಖ್ಯೆ ಕೊಡುವುದು.
212. ಮುಳ್ಳು ಬೇಲಿಗಳು, ಮರಗಳು, ಇತ್ಯಾದಿಗಳನ್ನು ತೆಗೆದುಹಾಕುವುದು ಮತ್ತು ಸವರುವುದು.

ಸಾರ್ವಜನಿಕ ಆರೋಗ್ಯ ಸುರಕ್ಷತೆ ಮತ್ತು ಅನುಕೂಲತೆಯ ಸಂವರ್ಧನೆಗಾಗಿ ಅಧಿಕಾರ

213. ಪಾಳುಬಿದ್ದ ಅಥವಾ ಅಪಾಯಕಾರಿಯಾದ ಕಟ್ಟಡಗಳು.
213 ಎ. ಅಪಾಯಕಾರಿ ಮರಗಳ ಸಂದರ್ಭದಲ್ಲಿ ಮುನ್ನೆಚ್ಚರಿಕೆ.
214. ಅಪಾಯಕಾರಿ, ಹರಿಯದೆ ನಿಂತ ಅಥವಾ ಅನೈರ್ಮಲ್ಯ ನೀರು ಸರಬರಾಜು ಮೂಲಗಳ ಬಗೆಗಿನ ಅಧಿಕಾರಗಳು ಮತ್ತು ಕರ್ತವ್ಯಗಳು.
215. ನೆಲಗಟ್ಟು, ಇತ್ಯಾದಿಗಳನ್ನು ಸ್ವಳ ತಪ್ಪಿಸುವುದು.
216. ಸಾರ್ವಜನಿಕ ಬೀದಿಗಳು ಮತ್ತು ಬಹಿರಂಗ ಜಾಗಗಳ ಮೇಲೆ ಅಡ್ಡಿ ಮತ್ತು ಒತ್ತುವರಿಗಳು.
217. ದುರಸ್ತಿ, ಇತ್ಯಾದಿಗಳನ್ನು ಮಾಡುವಾಗ ಹಲಗೆ ಬೇಲಿಗಳನ್ನು ಹಾಕತಕ್ಕದ್ದು.
218. ಸಾರ್ವಜನಿಕ ಬೀದಿಯಲ್ಲಿ ಕೆಲಸವನ್ನು ನಿರ್ವಹಿಸುವಾಗ ಸೌಲಭ್ಯಗಳ ವ್ಯವಸ್ಥೆ.
219. ಅನುಮತಿಯಿಲ್ಲದೆ ಬೀದಿಯಲ್ಲಿ ಮರಮುಟ್ಟುಗಳನ್ನು ಇಡತಕ್ಕದ್ದಲ್ಲ ಅಥವಾ ರಂಧ್ರ ಮಾಡತಕ್ಕದ್ದಲ್ಲ.
220. ಅಸಾಧಾರಣ ಸಂಚಾರದ ಮೂಲಕ ಉಂಟಾದ ವೆಚ್ಚಗಳನ್ನುವಸೂಲ್ಮಾಡಲು ಮುನ್ಸಿಪಲ್ ಕೌನ್ಸಿಲ್‌ನ ಅಧಿಕಾರ.
221. ಅಪಾಯಕಾರಿ ಕಲ್ಲುಗಣಿ ಕೆಲಸ.
222. ನಾಯಿಗಳ ಬಗ್ಗೆ ಉಪಬಂಧ.
223. ಹಂದಿಗಳನ್ನು ಇಟ್ಟುಕೊಳ್ಳುವ ಬಗ್ಗೆ ಉಪಬಂಧ.

ಉಪದ್ರವವನ್ನು ತಡೆಗಟ್ಟಲು ಅಧಿಕಾರಗಳು.

224. ಧೂಳು, ಇತ್ಯಾದಿಗಳನ್ನು ತಂದು ಹಾಕುವುದು.
225. ಗ್ರಾಮಸಾರವನ್ನು ಹೊರಬಿಡುವುದು, ಇತ್ಯಾದಿ.
226. ಹೊಲಸನ್ನು ತೆಗೆದುಹಾಕದೇ ಇರುವುದು, ಇತ್ಯಾದಿ.
227. ಮಲವನ್ನು ಹೊರಹಾಕುವುದು.
228. ಹೊಲಸು ಕಟ್ಟಡಗಳು, ಇತ್ಯಾದಿ.
229. ತ್ಯಜಿಸಿದ ಮತ್ತು ಅಸಹ್ಯವಾದ ಕಟ್ಟಡಗಳು.
230. ಮನುಷ್ಯವಾಸಕ್ಕೆ ಯೋಗ್ಯವಲ್ಲದ ಕಟ್ಟಡಗಳು ಅಥವಾ ಕಟ್ಟಡಗಳಲ್ಲಿನ ಕೊಠಡಿಗಳು.
231. ಮನುಷ್ಯ ವಾಸಕ್ಕೆ ಯೋಗ್ಯವಲ್ಲದ ಕಟ್ಟಡಗಳನ್ನು ಕೆಡವಿ ಹಾಕುವುದಕ್ಕೆ ಆದೇಶ ನೀಡಲು ನಗರ ಮುನ್ಸಿಪಲ್ ಕೌನ್ಸಿಲ್‌ಗಳ ಅಧಿಕಾರ.
232. ಕಟ್ಟಡಗಳನ್ನು ಪ್ರವೇಶಿಸಲು ಮತ್ತು ಪರಿಶೀಲಿಸಲು, ಇತ್ಯಾದಿಗಳ ಬಗ್ಗೆ ಅಧಿಕಾರ.
233. ಸ್ನಾನ ಸೌಲಭ್ಯಗಳ ವ್ಯವಸ್ಥೆ.
234. ನೀರನ್ನು ಮಲಿನಗೊಳಿಸುವುದು.
235. ಅಗಸರ ಬಟ್ಟೆ ಒಗೆಯುವುದನ್ನು ನಿಯಂತ್ರಿಸುವುದು.
236. ಬಾವಿಗಳು ಇತ್ಯಾದಿಗಳಿಂದ ಆಗುವ ಉಪದ್ರವಗಳ ಉಪಶಮನ.
237. ಕೆಲವು ಬಗೆಯ ಸಾಗುವಳಿಯ ನಿಯಂತ್ರಣ ಅಥವಾ ನಿಷೇಧ.
238. ಅಸಹ್ಯಕರ ಗೊಬ್ಬರ, ಇತ್ಯಾದಿಯ ಉಪಯೋಗ.
239. ಜಾನುವಾರುಗಳನ್ನು ಕಟ್ಟಿಹಾಕುವುದು, ಇತ್ಯಾದಿ.
240. ಪ್ರಾಣಿಗಳಿಗೆ ಹೊಲಸನ್ನು ತಿನ್ನಿಸುವುದು.
241. ಹೊಗೆಯ ಬಳಕೆ.
242. ಉಪದ್ರವದ ನಿಷೇಧ.

ಮಾರುಕಟ್ಟೆಗಳು, ಸರಕುಗಳ ಮಾರಾಟ, ಇತ್ಯಾದಿಗಳ ನಿಯಂತ್ರಣ.

243. ಮಾರುಕಟ್ಟೆಗಳು, ಕಸಾಯಿ ಖಾನೆಗಳು ಮತ್ತು ಕೆಲವು ವ್ಯವಹಾರಗಳಿಗೆ ಲೈಸೆನ್ಸ್ ಗಳನ್ನು ಕೊಡುವುದು.
244. ಮಾರುಕಟ್ಟೆಗಳನ್ನು ಮತ್ತು ಕಸಾಯಿಖಾನೆಗಳನ್ನು ತೆರೆಯುವುದು, ಮುಚ್ಚುವುದು ಮತ್ತು ಬಾಡಿಗೆಗೆ ಕೊಡುವುದು.
245. ಕುಷ್ಠ ರೋಗಿಗಳು ಮತ್ತು ಗಲಭೆಕೋರರು, ಮುಂತಾದವರನ್ನು ಮಾರುಕಟ್ಟೆಗಳಿಂದ ಹೊರದೂಡಲು ಅಧಿಕಾರ.
246. ಮುನ್ಸಿಪಲ್ ಪರಿಮಿತಿಗಳಿಂದ ಹೊರಗಡೆ ಕಸಾಯಿಖಾನೆಗಳು, ಇತ್ಯಾದಿ.
247. ಅನಾರೋಗ್ಯಕರ ಆಹಾರ ವಸ್ತುಗಳು ಮತ್ತು ಪಾನೀಯ ಅಪಾಯಕಾರಿ ರೋಗಗಳನ್ನು ತಡೆಗಟ್ಟುವುದು.
248. ಸೋಂಕು ರೋಗಗಳನ್ನು ತಡೆಗಟ್ಟುವುದು.
249. ಸೋಂಕು ರೋಗ ತಲೆದೋರುವ ಭಯ ಅಥವಾ ವಾಸ್ತವಿಕವಾಗಿ ಅದು ತಲೆದೋರಿದಾಗ ಮುನ್ಸಿಪಲ್ ಕೌನ್ಸಿಲಿನ ಕರ್ತವ್ಯಗಳು.
250. ಅಧಿಕಾರಿಗಳ ಮತ್ತು ಆದೇಶಗಳ ಹಿಂತೆಗೆದುಕೊಳ್ಳುವಿಕೆ ಮತ್ತು ಮಾರ್ಪಾಟು
251. ಕುದುರೆಗಳು, ನಾಯಿಗಳು, ಜಾನುವಾರುಗಳು, ಕುರಿಗಳು ಅಥವಾ ಮೇಕೆಗಳ ರೋಗಗಳಿಗೆ ಸಂಬಂಧಿಸಿದಂತೆ ಮುನ್ಸಿಪಲ್ ಕೌನ್ಸಿಲಿನ ಕರ್ತವ್ಯಗಳು.
252. ಕಟ್ಟಡಗಳ ಒಳಭಾಗದಲ್ಲಿ ಜನನಿಬಿಡತೆಯನ್ನು ಕಡಿಮೆ ಮಾಡಲು ವ್ಯವಹರಣೆಗಳು.
253. ಸರ್ಕಾರವು ಅಧಿಸೂಚಿಸಿದ ಜನನಿಬಿಡತೆ ಪ್ರದೇಶಗಳಿಗೆ ಸಂಬಂಧಿಸಿದಂತೆ ಸರ್ಕಾರವು ಪ್ರದಾನ ಮಾಡಬಹುದಾದಂಥ ವಿಶೇಷ ಅಧಿಕಾರಗಳು.
254. ಪೂಜಾ ಸ್ಥಳದಲ್ಲಿ ಸಮಾಧಿ ಅಥವಾ ಗೋರಿ ನಿರ್ಮಾಣದ ನಿಷೇಧ.
255. ಸತ್ತವರ ವಿಲೆಗಾಗಿ ಸ್ಥಳಗಳನ್ನು ಮುಚ್ಚುವುದು.

ಕೆಲವು ವ್ಯಾಪಾರಗಳು ಮತ್ತು ಉದ್ಯೋಗಗಳಿಂದ ಉಂಟಾಗುವ ಉಪದ್ರವಗಳು

256. ಲೈಸೆನ್ಸ್ ಪಡೆಯದೆ ಕೆಲವು ಉದ್ದೇಶಗಳಿಗಾಗಿ ಆವರಣವನ್ನು ಉಪಯೋಗಿಸತಕ್ಕದ್ದು.
257. 256ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಉದ್ದೇಶಗಳಿಗಾಗಿ ವಿಶಿಷ್ಟ ಪ್ರದೇಶಗಳಲ್ಲಿನ ಆವರಣದ ಉಪಯೋಗವನ್ನು ತಡೆಗಟ್ಟಲು ಮುನ್ಸಿಪಲ್ ಕಮೀಷನರನ ಅಥವಾ ಚೀಫ್ ಆಫೀಸರನ ಅಧಿಕಾರ.
258. ಔದ್ಯಮಿಕ ಉದ್ದೇಶಗಳಿಗೆ ಉಪಯೋಗಿಸುವುದಕ್ಕಾಗಿ ಪ್ರದೇಶಗಳನ್ನು ಪ್ರತ್ಯೇಕವಾಗಿರಿಸುವುದು.
259. ಜನನಿಬಿಢವಾದ ಸ್ಥಳಗಳಲ್ಲಿನ ಕಾರ್ಖಾನೆಗಳು.
260. ಕೆಲಸಗಾರರನ್ನು ಕರೆಯಲು ಅಥವಾ ಕಳುಹಿಸಲು ಸೈರನ್ ಅಥವಾ ಶಿಳ್ಳೆಯ ಉಪಯೋಗ.

ಸಾಮಾನ್ಯ ದಂಡನೆ, ನೋಟೀಸುಗಳ ಜಾರಿ ಮತ್ತು ಸಂಕೀರ್ಣ ಉಪಬಂಧಗಳು.

261. ಅಗ್ನಿಶಾಮಕದಳದವರಿಗೆ ಪೊಲೀಸು ಮತ್ತು ಮುನ್ಸಿಪಲ್ ಅಧಿಕಾರಿಗಳು ನೆರವು ನೀಡುವುದು.
262. ನೋಟೀಸುಗಳ ಜಾರಿ, ಇತ್ಯಾದಿ.
262 ಎ. ಅನಧಿಕೃತ ಭೂ ಸ್ವಾಧೀನತೆಗೆ ನಿಷೇಧ.
263. ಸಾಮಾನ್ಯ ದಂಡನೆ.
264. ಒಡೆಯ ಅಥವಾ ಅಧಿಭೋಗದಾರನು ತಪ್ಪುವಲ್ಲಿ ಮುನ್ಸಿಪಲ್ ಕೌನ್ಸಿಲ್ ಕೆಲಸವನ್ನು ನಿರ್ವಹಿಸಬಹುದು ಮತ್ತು ವೆಚ್ಚವನ್ನು ವಸೂಲು ಮಾಡಬಹುದು.
265. ಒಡೆಯನು ತಪ್ಪಿದಲ್ಲಿ ಸ್ವಾಧೀನದಾರನು ಕೆಲಸವನ್ನು ನಿರ್ವಹಿಸಬಹುದು ಮತ್ತು ಅವನ ಬಾಡಿಗೆಯಿಂದ ವೆಚ್ಚಗಳನ್ನು ಮುರಿದುಕೊಳ್ಳಬಹುದು.
266. ಅಧಿನಿಯಮದ ಜಾರಿಯನ್ನು ಯಾರೇ ಸ್ವಾಧೀನದಾರನು ವಿರೋಧಿಸಿದರೆ ವ್ಯವಹರಣೆಗಳು.

267. ಈ ಅಧಿನಿಯಮದ ಉದ್ದೇಶಗಳಿಗಾಗಿ ಪ್ರವೇಶ.
268. ಕೆಲವು ಪ್ರಕರಣಗಳಲ್ಲಿ ಪರಿಹಾರದ ನಿರ್ಧರಣೆ.
269. ಖರ್ಚುಗಳನ್ನು ಅಥವಾ ವೆಚ್ಚಗಳನ್ನು ನಿರ್ಧರಿಸುವ ಮತ್ತು ವಸೂಲ್ಮಾಡುವ ಬಗೆ.
270. ಮುನ್ಸಿಪಲ್ ಚುನಾವಣೆಗಳಿಗಾಗಿ ಆವರಣಗಳು, ವಾಹನಗಳು, ಇತ್ಯಾದಿಗಳನ್ನು ಕಡ್ಡಾಯವಾಗಿ ಕೋರುವುದು.
271. ನಷ್ಟಪರಿಹಾರದ ಸಂದಾಯ.
272. ಮಾಹಿತಿಯನ್ನು ಪಡೆಯಲು ಅಧಿಕಾರ.
273. ಕಡ್ಡಾಯವಾಗಿ ಕೋರಲಾದ ಆವರಣದಿಂದ ಹೊರಹಾಕುವುದು.
274. ಕಡ್ಡಾಯ ಕೋರಿಕೆಯಿಂದ ಆವರಣಗಳ ಬಿಡುಗಡೆ.
275. ಕಡ್ಡಾಯ ಕೋರಿಕೆಯ ಬಗ್ಗೆ ಯಾವುದೇ ಆದೇಶದ ಉಲ್ಲಂಘನೆಗಾಗಿ ದಂಡನೆ.

ಅಧ್ಯಾಯ X
ಪ್ರಾಸಿಕ್ಯೂಷನ್‌ಗಳು, ದಾವೆಗಳು ಮತ್ತು ಪೊಲೀಸರ ಅಧಿಕಾರಗಳು

276. ಮುನ್ಸಿಪಲ್ ಕೌನ್ಸಿಲ್, ಪ್ರಾಸಿಕ್ಯೂಟ್ ಮಾಡಬಹುದು.
277. ಅಪರಾಧಗಳನ್ನು ರಾಜಿ ಮಾಡಿಕೊಳ್ಳಲು ಅಧಿಕಾರ.
278. ಜಫ್ತಿ, ಇತ್ಯಾದಿಗಾಗಿ ಕಾಲಪರಿಮಿತಿ.
279. ನಮೂನೆಯಲ್ಲಿ ದೋಷವಿದ್ದಾಗ್ಯೂ ಜಫ್ತಿಯು ಕಾನೂನುಸಮ್ಮತ.
280. ಮುನ್ಸಿಪಲ್ ಸ್ವತ್ತಿಗೆ ಆದ ಹಾನಿಯನ್ನು ತುಂಬಿಕೊಡುವ ಬಗ್ಗೆ.
281. ದಾವೆಯ ಮೂಲಕ ಪರ್ಯಾಯ ಪ್ರಕ್ರಿಯೆ.
282. ರಾಜಿ ಮಾಡಿಕೊಳ್ಳುವ ಅಧಿಕಾರ, ಇತ್ಯಾದಿ.
283. ಸದ್ಭಾವನೆಯಲ್ಲಿ ಮಾಡಲಾದ ಕಾರ್ಯಗಳಿಗಾಗಿ ಮುನ್ಸಿಪಾಲಿಟಿಯ ಅದರ ಅಧಿಕಾರಿಗಳು, ನೌಕರರು, ಇತ್ಯಾದಿ ವಿರುದ್ಧ ದಾವೆಗಳ ಪ್ರತಿಷೇಧ.
284. ದಾವೆಗಳಿಗಾಗಿ ಪೂರ್ವಭಾವಿ ನೋಟೀಸು ನೀಡಿಕೆ.
285. ಪೊಲೀಸ್ ಅಧಿಕಾರಿಗಳ ಅಧಿಕಾರ ಮತ್ತು ಕರ್ತವ್ಯಗಳು.

ಅಧ್ಯಾಯXI
ಮುನ್ಸಿಪಾಲಿಟಿಯ ಲೆಕ್ಕಪತ್ರಗಳು ಮತ್ತು ಆಡಳಿತ ವರದಿಗಳು

286. ಬಜೆಟ್ ಸೇರಿಸಿರದ ವೆಚ್ಚದ ನಿಷೇಧ.
287. ಲೆಕ್ಕಪತ್ರಗಳ ಮಂಡನೆ.
288. ಬಜೆಟ್‌ನ ಪರಿಷ್ಕರಣೆ.
289. ಲೆಕ್ಕಪತ್ರಗಳ ನಿರ್ವಹಣೆ ಮತ್ತು ವೆಚ್ಚದ ಮೇಲೆ ನಿರ್ಬಂಧಗಳು.
290. ಲೆಕ್ಕಪತ್ರಗಳ ಲೆಕ್ಕಪರಿಶೋಧನೆ.
291. ದಸ್ತಾವೇಜುಗಳ ಹಾಜರುಪಡಿಸುವಿಕೆ ಮತ್ತು ಸಂಬಂಧಪಟ್ಟ ವ್ಯಕ್ತಿಗಳ ಹಾಜರಾತಿಯನ್ನು ಅಗತ್ಯಪಡಿಸಲು ಲೆಕ್ಕಪರಿಶೋಧಕನ ಅಧಿಕಾರ, ಇತ್ಯಾದಿ.
292. 291ನೇ ಪ್ರಕರಣದ ಮೇರೆಗೆ ಕಡ್ಡಾಯ ಕೋರಿಕೆಯ ಉಲ್ಲಂಘನೆಗಾಗಿ ದಂಡ.
293. ಸರ್ಕಾರವು ನಿರ್ದೇಶಿಸಬಹುದಾದಂಥ ಕೆಲವು ಅಧಿಕಾರಿಗಳಿಗೆ ಮತ್ತು ನಿಕಾಯಗಳಿಗೆ ಲೆಕ್ಕಪರಿಶೋಧನಾ ವರದಿಯನ್ನು ಕಳುಹಿಸತಕ್ಕದ್ದು.
294. ಲೆಕ್ಕಪರಿಶೋಧನಾ ವರದಿಯು ಒಳಗೊಂಡಿರಬೇಕಾದ ಅಂಶಗಳು.
295. ಮುನ್ಸಿಪಲ್ ಕೌನ್ಸಿಲ್ ದೋಷವನ್ನು ಪರಿಹರಿಸಿಕೊಳ್ಳತಕ್ಕದ್ದು.
296. ಅತೀವ ನಿರ್ಲಕ್ಷತೆ ಅಥವಾ ದುರ್ವರ್ತನೆಯಿಂದ ಉಂಟಾದ ಕಾನೂನುಬಾಹಿರ ಸಂದಾಯ ಅಥವಾ ನಷ್ಟಕ್ಕೆ ಪೌರಾಡಳಿತ ನಿರ್ದೇಶಕನು ಅಧಿಭಾರ ಅಥವಾ ವೆಚ್ಚ ಹೊರಿಸತಕ್ಕದ್ದು.
297. ಅಧಿಭಾರಗಳು ಮತ್ತು ವೆಚ್ಚಗಳನ್ನು ವಸೂಲಿ ಮಾಡುವ ಬಗೆ.
298. ಅಧಿಭಾರ ಅಥವಾ ವೆಚ್ಚ ಹೊರಿಸುವಿಕೆಯ ಆದೇಶದ ವಿರುದ್ಧ ಅರ್ಜಿ.
299. ಲೆಕ್ಕಪರಿಶೋಧಕರ ಕಡ್ಡಾಯ ಕೋರಿಕೆಗೆ ಸಂಬಂಧಿಸಿದಂತೆ ವೆಚ್ಚಗಳನ್ನು ಮುನ್ಸಿಪಲ್ ನಿಧಿಯಿಂದ ಸಂದಾಯ ಮಾಡತಕ್ಕದ್ದಲ್ಲ.
300. ಸರ್ಕಾರಕ್ಕೆ ಲೆಕ್ಕಪತ್ರಗಳನ್ನು ರವಾನಿಸುವುದು.
301. ಲೆಕ್ಕಪತ್ರಗಳ ಪ್ರಕಟಣೆ.
302. ವಾರ್ಷಿಕ ಆಡಳಿತ ವರದಿ.
302 ಎ. ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸುವುದು.
302 ಬಿ. ಹಣಕಾಸು ಆಯೋಗ.

ಅಧ್ಯಾಯ XII
ನಿಯಂತ್ರಣ

303. ಮುಖ್ಯ ನಿಯಂತ್ರಣ ಪ್ರಾಧಿಕಾರಿ.
304. ಪರಿವೀಕ್ಷಣೆ ಮತ್ತು ಮೇಲ್ವಿಚಾರಣೆಯ ಅಧಿಕಾರ.
305. ಮುನ್ಸಿಪಲ್ ಕೌನ್ಸಿಲ್‌ನ ಕಚೇರಿಯನ್ನು ಪರಿಶೀಲಿಸಲು ಅಧಿಕಾರ.
306. ಮುನ್ಸಿಪಲ್ ಕೌನ್ಸಿಲ್‌ಗಳ ಆದೇಶಗಳು, ಇತ್ಯಾದಿಗಳ ಜಾರಿಯನ್ನು ಅಮಾನತುಗೊಳಿಸಲು ಡೆಪ್ಯುಟಿ ಕಮೀಷನರನ ಅಧಿಕಾರ.
307. ಕೆಲವು ಸಂದರ್ಭಗಳಲ್ಲಿ ಕಾಮಗಾರಿಯ ನಿರ್ವಹಣೆ.
308. ನಷ್ಟ, ಪೋಲು ಅಥವಾ ದುರ್ವಿನಿಯೋಗಕ್ಕಾಗಿ ಕೌನ್ಸಿಲರುಗಳ ಹೊಣೆ.
309. ಸಿಟಿ ಮುನ್ಸಿಪಲ್ ಕೌನ್ಸಿಲ್‌ಗಳಿಗೆ ಸಂಬಂಧಿಸಿದಂತೆ ಪೌರಾಡಳಿತ ನಿರ್ದೇಶಕನ ಅಧಿಕಾರ.
310. ಮುನ್ಸಿಪಲ್ ವಿಷಯಗಳಲ್ಲಿ ಸರ್ಕಾರಿ ವಿಚಾರಣೆ
311. ಸಿಬ್ಬಂದಿಯ ನಿಯೋಜನೆಯಲ್ಲಿ ದುಂದುವೆಚ್ಚವನ್ನು ತಡೆಗಟ್ಟಲು ಪೌರಾಡಳಿತ ನಿರ್ದೇಶಕನ ಅಧಿಕಾರ.
312. ಸರ್ಕಾರವು, ಆರೋಗ್ಯ ಅಧಿಕಾರಿಯನ್ನು ನೇಮಕ ಮಾಡಲು ಯಾವುದೇ ಮುನ್ಸಿಪಲ್ ಕೌನ್ಸಿಲ್‌ನ್ನು ಅಗತ್ಯಪಡಿಸಬಹುದು.
313. ಮುನ್ಸಿಪಲ್ ಕೌನ್ಸಿಲ್ ತಪ್ಪಿದಲ್ಲಿ ಕರ್ತವ್ಯಗಳ ನೆರವೇರಿಕೆಗಾಗಿ ವ್ಯವಸ್ಥೆ ಮಾಡಲು ಸರ್ಕಾರದ ಅಧಿಕಾರ.

314. ಮುನ್ಸಿಪಾಲಿಟಿ ನಿಧಿಯ ಅಭಿರಕ್ಷೆಯನ್ನು ಹೊಂದಿರುವ ವ್ಯಕ್ತಿಗೆ ಸರ್ಕಾರದ ಬಾಕಿಗಳನ್ನು ಸಂದಾಯ ಮಾಡುವಂತೆ ನಿರ್ದೇಶಿಸಲು ಸರ್ಕಾರದ ಅಧಿಕಾರ.
315. ಕೆಲವು ಸಂದರ್ಭಗಳಲ್ಲಿ ಆಡಳಿತಗಾರರನ್ನು ನೇಮಿಸಲು ಅಧಿಕಾರ.
316. ಕೆಲವು ಸಂದರ್ಭಗಳಲ್ಲಿ ಮುನ್ಸಿಪಲ್ ಕೌನ್ಸಿಲ್‌ನ್ನು ರದ್ದುಗೊಳಿಸಲು ಸರ್ಕಾರದ ಅಧಿಕಾರ.

317. ಮುನ್ಸಿಪಲ್ ಕೌನ್ಸಿಲ್‌ಗಳ ನಡುವಣ ವಿವಾದಗಳು.
318. ಮುನ್ಸಿಪಲ್ ಕೌನ್ಸಿಲಿನ ಪರವಾಗಿ ಅಥವಾ ಅದು ತಪ್ಪಿದಲ್ಲಿ ಕಾರ್ಯನಿರ್ವಹಿಸುವ ಅಧಿಕಾರಗಳ ಅಧಿಕಾರ ಮತ್ತು ಮುನ್ಸಿಪಲ್ ನಿಧಿಯ ಹೊಣೆ.
319. ಮುನ್ಸಿಪಲ್ ಕೌನ್ಸಿಲ್‌ಗಳ ಉಪವಿಧಿಗಳನ್ನು ರದ್ದುಗೊಳಿಸಲು ಅಥವಾ ಮಾರ್ಪಾಡು ಮಾಡಲು ಸರ್ಕಾರದ ಅಧಿಕಾರ.
320. ಅಧಿಕಾರಿಗಳನ್ನು ವರ್ಗಾವಣೆ ಮಾಡಲು ಅಧಿಕಾರಗಳು.
321. ಸರ್ಕಾರದಿಂದ ಅಧಿಕಾರಗಳ ಪ್ರತ್ಯಾಯೋಜನೆಗಳು.
322. ಪುನರೀಕ್ಷಣೆ.

ಅಧ್ಯಾಯXIII
ನಿಯಮಗಳು ಮತ್ತು ಉಪವಿಧಿಗಳು

323. ಸರ್ಕಾರದಿಂದ ನಿಯಮಗಳ ರಚನೆ.
324. ಉಪವಿಧಿಗಳ ರಚನಾಧಿಕಾರ.
325. ಮಾದರಿ ಉಪವಿಧಿಗಳನ್ನು ರಚಿಸಲು ಸರ್ಕಾರದ ಅಧಿಕಾರ ಮತ್ತು ಮುನ್ಸಿಪಲ್ ಕೌನ್ಸಿಲ್‌ಗಳು ಅಂಥ ಉಪವಿಧಿಗಳನ್ನು ಅಂಗೀಕರಿಸುವುದು.
326. ನಿಯಮಗಳು ಮತ್ತು ಉಪವಿಧಿಗಳನ್ನು ಮುದ್ರಿಸತಕ್ಕದ್ದು ಮತ್ತು ಮಾರಾಟ ಮಾಡತಕ್ಕದ್ದು.

ಅಧ್ಯಾಯ XIV
ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ಮತ್ತು ಇತರ ಮುನ್ಸಿಪಲ್ ಅಧಿಕಾರಿಗಳ ನೇಮಕಾತಿ ಮತ್ತು ಅಧಿಕಾರಗಳು

327. ಚೀಫ್ ಆಫೀಸರನ ನೇಮಕಾತಿ.
328. ಆರೋಗ್ಯ ಅಧಿಕಾರಿಯ ನೇಮಕಾತಿ.
329. ಚೀಫ್ ಆಫೀಸರನ ಕರ್ತವ್ಯಗಳು.
330. ಚೀಫ್ ಆಫೀಸರುಗಳ ಅಧಿಕಾರಗಳು.
331. ಮುನ್ಸಿಪಲ್ ಕಮಿಷನರ್ ನ ನೇಮಕಾತಿ.
332. ಪದದಿಂದ ತೆಗೆದು ಹಾಕುವುದು.
333. ಮುನ್ಸಿಪಲ್ ಕಮಿಷನರನ ಸಂಬಳ.
334. ಇತರ ವ್ಯವಹಾರಗಳಲ್ಲಿ ತೊಡಗುವ ಬಗ್ಗೆ ನಿಷೇಧ.
335. ಗೈರುಹಾಜರಿಯ ರಜೆ.
336. ಮುನ್ಸಿಪಲ್ ಕಮಿಷನರ್ ನ ಪಿಂಚಣಿ ಮತ್ತು ರಜಾಭತ್ಯೆಗಳ ಬಗ್ಗೆ ಮುನ್ಸಿಪಲ್ ಕೌನ್ಸಿಲ್‌ನಿಂದ ವಂತಿಗೆ.
337. ವಿವರಪಟ್ಟಿಕೆಗಳು, ವರದಿಗಳು ಅಥವಾ ದಸ್ತಾವೇಜುಗಳ ಹಾಜರುಪಡಿಸುವಿಕೆಯನ್ನು ಅಗತ್ಯಪಡಿಸಲು ಮುನ್ಸಿಪಲ್ ಕೌನ್ಸಿಲ್‌ನ ಅಧಿಕಾರ.
338. ಮುನ್ಸಿಪಲ್ ಕಮಿಷನರುಗಳ ಅಧಿಕಾರಗಳು ಮತ್ತು ಅವುಗಳ ಪರಿಮಿತಿಗಳು.
339. ಮುನ್ಸಿಪಲ್ ಕಮಿಷನರನು ಅಥವಾ ಚೀಫ್ ಆಫೀಸರನು ಇತರ ಅಧಿಕಾರಗಳನ್ನು ಚಲಾಯಿಸಿಲು ಅಧಿಕೃತನಾಗಿರುವುದಾಗಿ ಭಾವಿಸತಕ್ಕದ್ದು.
340. ಮುನ್ಸಿಪಲ್ ಕೌನ್ಸಿಲ್, ಇತ್ಯಾದಿಗಳ ಸಭೆಗಳಿಗೆ ಹಾಜರಾಗಲು ಮುನ್ಸಿಪಲ್ ಕಮಿಷನರನ ಮತ್ತು ಚೀಫ್ ಆಫೀಸರನ ಹಕ್ಕು.

341. ಮುನ್ಸಿಪಲ್ ಕಮಿಷನರನು ಅಥವಾ ಚೀಫ್ ಆಫೀಸರನು ಕೊಟ್ಟ ಕಾನೂನುಸಮ್ಮತ ನಿರ್ದೇಶನವನ್ನು ಉಲ್ಲಂಘಿಸುವ ವ್ಯಕ್ತಿಗೆ ದಂಡನೆ.
342. ನೇಮಿಸಲು, ರಜಾ ಮಂಜೂರು ಮಾಡಲು, ಶಿಕ್ಷಿಸಲು ಮತ್ತು ಕೆಲಸದಿಂದ ವಜಾ ಮಾಡಲು ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನ ಅಧಿಕಾರಗಳು.
343. ಅಪೀಲಿಗೆ ಒಳಪಟ್ಟ ಆದೇಶಗಳು.
344. ಮುನ್ಸಿಪಲ್ ಕಮಿಷನರನ ಅಧಿಕಾರಗಳ ಪ್ರತ್ಯಾಯೋಜನೆ.
345. ಮುನ್ಸಿಪಲ್ ಕೌನ್ಸಿಲ್‌ನ ಪರವಾಗಿ ಕರಾರುಗಳನ್ನು ಮಾಡಿಕೊಳ್ಳಲು ಅಧಿಕಾರ.
346. ಕರಾರುಗಳನ್ನು ಮಾಡಿಕೊಳ್ಳುವ ವಿಧಾನ.
347. ಐದುನೂರು ರೂಪಾಯಿಗಳಿಗೆ ಮೀರುವ ವೆಚ್ಚವನ್ನೊಳಗೊಳ್ಳುವ ಕರಾರುಗಳಿಗೆ ಟೆಂಡರುಗಳನ್ನು ಕರೆಯತಕ್ಕದ್ದು.
348. ಕರಾರನ್ನು ನೆರವೇರಿಸುವುದಕ್ಕಾಗಿ ಭದ್ರತೆಯನ್ನು ಯಾವಾಗ ತೆಗೆದುಕೊಳ್ಳತಕ್ಕದ್ದು.

ಅಧ್ಯಾಯ XV
ಪಟ್ಟಣ ಪಂಚಾಯಿತಿ

349. ಪರಿವರ್ತನೀಯ ಪ್ರದೇಶವನ್ನು ನಿರ್ದಿಷ್ಟಪಡಿಸುವುದು.
350. ಮುನ್ಸಿಪಲ್ ಏರಿಯಾ.
351. ಪರಿವರ್ತನೀಯ ಪ್ರದೇಶಕ್ಕಾಗಿ ಪಟ್ಟಣ ಪಂಚಾಯಿತಿಯ ರಚನೆ.
352. ಪಟ್ಟಣ ಪಂಚಾಯಿತಿಗೆ ಚುನಾವಣೆ.
353. ಈ ಅಧಿನಿಯಮದ ಉಪಬಂಧಗಳನ್ನು ಪರಿವರ್ತನೀಯ ಪ್ರದೇಶಗಳಿಗೆ ವಿಸ್ತರಿಸುವ ಅಧಿಕಾರ.
354. ಪರಿವರ್ತನಾ ಪ್ರದೇಶಕ್ಕೆ ಈ ಅಧಿನಿಯಮವನ್ನು ಅನ್ವಯಿಸುವುದರ ಪರಿಣಾಮ.
355. ಪಂಚಾಯಿತಿ ಪ್ರದೇಶವನ್ನು ವರ್ಗಾವಣೀಯ ಪ್ರದೇಶದೊಳಗೆ ವಿಲೀನಗೊಳಿಸುವುದರ ಪರಿಣಾಮ.
355 ಎ. ಪಂಚಾಯಿತಿ ಪ್ರದೇಶದ ಭಾಗವನ್ನು ವರ್ಗಾವಣೀಯ ಪ್ರದೇಶದೊಳಗೆ ವಿಲೀನಗೊಳಿಸುವುದರ ಪರಿಣಾಮ.
355 ಬಿ. ಪಂಚಾಯಿತಿ ಪ್ರದೇಶವನ್ನು ವರ್ಗಾವಣೀಯ ಪ್ರದೇಶದೊಳಗೆ ವಿಲೀನಗೊಳಿಸುವುದರ ಪರಿಣಾಮ.
355 ಸಿ. ಪರಿವರ್ತನೀಯ ಪ್ರದೇಶದ ಭಾಗವನ್ನು ಚಿಕ್ಕನಗರ ಪ್ರದೇಶದೊಳಗೆ ವಿಲೀನಗೊಳಿಸುವುದರ ಪರಿಣಾಮ.
355 ಡಿ. ವರ್ಗಾವಣೀಯ ಪ್ರದೇಶವನ್ನು ಒಂದು ಚಿಕ್ಕನಗರ ಪ್ರದೇಶದೊಳಗೆ ವಿಲೀನಗೊಳಿಸುವುದರ ಪರಿಣಾಮ.
355 ಇ. ವರ್ಗಾವಣೀಯ ಪ್ರದೇಶವನ್ನು ಚಿಕ್ಕನಗರ ಪ್ರದೇಶಕ್ಕೆ ವಿಲೀನಗೊಳಿಸುವುದರ ಪರಿಣಾಮ.

ಅಧ್ಯಾಯ XVI
ಪಂಚಾಯಿತಿಯ ಪ್ರದೇಶವನ್ನು ಚಿಕ್ಕನಗರ ಪ್ರದೇಶವಾಗಿ ಪರಿವರ್ತಿಸುವ ಬಗ್ಗೆ ಹಾಗೂ ಚಿಕ್ಕನಗರ ಪ್ರದೇಶಗಳನ್ನುವಿಲೀನಗೊಳಿಸುವುದರ ಬಗ್ಗೆ ಮತ್ತು ವಿಭಾಗಿಸುವುದರ ಬಗ್ಗೆ ಉಪಬಂಧಗಳು, ಇತ್ಯಾದಿ

356. ಅರ್ಥ ವಿವರಣೆ.
357. ಪಂಚಾಯಿತಿ ಪ್ರದೇಶವನ್ನು ಚಿಕ್ಕನಗರ ಪ್ರದೇಶವನ್ನಾಗಿ ಪರಿವರ್ತಿಸುವುದರ ಪರಿಣಾಮ.
358. ಮಧ್ಯಕಾಲೀನ ಮುನ್ಸಿಪಲ್ ಕೌನ್ಸಿಲ್‌ನ ಸದಸ್ಯರುಗಳ ಪದಾವಧಿ ಮತ್ತು ಅವರ ಇತರ ಅಧಿಕಾರಗಳು.
359. ಪಂಚಾಯಿತಿ ಪ್ರದೇಶವನ್ನು ಚಿಕ್ಕನಗರ ಪ್ರದೇಶದಲ್ಲಿ ವಿಲೀನಗೊಳಿಸುವುದರ ಪರಿಣಾಮ.
360. ಪಂಚಾಯಿತಿ ಪ್ರದೇಶದ ಭಾಗವನ್ನು ಚಿಕ್ಕನಗರ ಪ್ರದೇಶದಲ್ಲಿ ವಿಲೀನಗೊಳಿಸುವುದರ ಪರಿಣಾಮ.

361. ಟೌನ್. ಮುನ್ಸಿಪಲ್ ಏರಿಯಾಗಳನ್ನು ನಗರ ಮುನ್ಸಿಪಲ್ ಏರಿಯಾಗಳನ್ನಾಗಿ ಪರಿವರ್ತಿಸುವುದು.
362. ಸಿಟಿ ಮುನ್ಸಿಪಲ್ ಏರಿಯಾಗಳನ್ನು ಪಟ್ಟಣ ಪ್ರದೇಶಗಳನ್ನಾಗಿ ಪರಿವರ್ತಿಸುವುದು.
363. ಹೊಂದಿಕೊಂಡಿರುವ ಎರಡು ಚಿಕ್ಕನಗರ ಪ್ರದೇಶಗಳ ವಿಲೀನೀಕರಣ.
363 ಎ. ಬಿಟ್ಟುಬಿಡಲಾಗಿದೆ.
364. ತೊಂದರೆಗಳ ನಿವಾರಣೆ.

ಅಧ್ಯಾಯXVI-ಎ

364 (ಎ) ಕೈಗಾರಿಕಾ ಪಟ್ಟಣ ಪ್ರದೇಶದ ವೈಶಿಷ್ಟ್ಯ.
364 (ಬಿ) ಕೈಗಾರಿಕಾ ಪಟ್ಟಣ ಪ್ರದೇಶ ಪ್ರಾಧಿಕಾರದ ಸಂರಚನೆ.
364 (ಸಿ) ಅಧ್ಯಕ್ಷರ ಹಾಗೂ ಸದಸ್ಯರುಗಳ ಪದಾವಧಿ.
364 (ಡಿ) ಕೈಗಾರಿಕಾ ಪಟ್ಟಣ ಪ್ರದೇಶದ ಕಾರ್ಯನಿರ್ವಹಣೆ.
364 (ಇ) ದಾಖಲೆಗಳ ಅಧಿಪ್ರಮಾಣೀಕರಣ.
364 (ಎಫ್) ಕೈಗಾರಿಕಾ ಪಟ್ಟಣ ಪ್ರದೇಶದ ಪ್ರಕಾರ್ಯಗಳು ಮತ್ತು ಕರ್ತವ್ಯಗಳು.
364 (ಜಿ) ಕೈಗಾರಿಕಾ ಪಟ್ಟಣ ಪ್ರದೇಶ ಪ್ರಾಧಿಕಾರದ ಅಧಿಕಾರಗಳು.
364 (ಹೆಚ್) ಕೈಗಾರಿಕಾ ಪಟ್ಟಣ ಪ್ರದೇಶದ ಪ್ರಾಧಿಕಾರಕ್ಕೆ ಈ ಅಧಿನಿಯಮದ ಉಪಬಂಧಗಳನ್ನು ವಿಸ್ತರಿಸುವ ಅಧಿಕಾರ.
364 (ಐ) ಕೈಗಾರಿಕಾ ಪಟ್ಟಣ ಪ್ರದೇಶದ ನಿಧಿಗಳು, ಬಜೆಟ್ ಹಾಗೂ ಲೆಕ್ಕಪತ್ರಗಳು.
364 (ಜೆ) ಸ್ವತ್ತು ತೆರಿಗೆಯ ವಿಧಿಸುವಿಕೆ ಮತ್ತು ಸಂಗ್ರಹಣೆ.
364 (ಕೆ) ನೇಮಕಾತಿಯ ಅಧಿಕಾರ, ಅಧಿಕಾರಿಗಳ ಮತ್ತು ಸಿಬ್ಬಂದಿ ವರ್ಗದವರ ಸೇವಾ ಷರತ್ತುಗಳು.

364 (ಎಲ್) ವಿವರಪಟ್ಟಿಕೆಗಳು.
364 (ಎಮ್) ಪ್ರಾಧಿಕಾರಕ್ಕೆ ನಿರ್ದೇಶನಗಳನ್ನು ನೀಡಲು ಅಧಿಕಾರ.
364 (ಎನ್) ಆಡಳಿತಗಾರರನ್ನು ನೇಮಕ ಮಾಡುವ ಅಧಿಕಾರ.
364 (ಓ) ಪಂಚಾಯಿತಿ ಪ್ರದೇಶ ಅಥವಾ ವರ್ಗಾವಣೀಯ ಪ್ರದೇಶ, ಚಿಕ್ಕನಗರ ಪ್ರದೇಶ ಅಥವಾ ದೊಡ್ಡನಗರ ಪ್ರದೇಶದ ಭಾಗವನ್ನು ಕೈಗಾರಿಕಾ ಪಟ್ಟಣ ಪ್ರದೇಶಕ್ಕೆ ವಿಲೀನಗೊಳಿಸುವುದರ ಪರಿಣಾಮ.
364 (ಪಿ) ವಿನಿಯಮನಗಳು.
364 (ಕ್ಯೂ) ತೊಂದರೆಗಳನ್ನು ನಿವಾರಿಸುವುದು.

ಅಧ್ಯಾಯXVII
ಸಂಕೀರ್ಣಗಳು

365. ಕರ್ನಾಟಕ ಮುನ್ಸಿಪಲ್ ಆಡಳಿತ ಸೇವೆ.
366. ಲೋಕೋಪಯೋಗಿ ಕಾಮಗಾರಿಗಳ ನಿರ್ವಹಣೆಗಾಗಿ ಏಜನ್ಸಿ.
367. ಕರ್ನಾಟಕ ಪೌರಾಡಳಿತ ಸೇವೆಯ ಬಗ್ಗೆ ವಸೂಲಿ.
368. ಅನರ್ಹಗೊಂಡಿದ್ದಾಗ ಮುನ್ಸಿಪಲ್ ಕೌನ್ಸಿಲ್‌ನ ಕೌನ್ಸಿಲರ್, ಅಧ್ಯಕ್ಷ ಅಥವಾ ಉಪಾಧ್ಯಕ್ಷನಾಗಿ ಕಾರ್ಯನಿರ್ವಹಿಸುವುದಕ್ಕಾಗಿ ದಂಡನೆ.
369. ಹಿತಾಸಕ್ತಿಯುಳ್ಳ ಸದಸ್ಯರು ಮತ ನೀಡುವುದಕ್ಕಾಗಿ ದಂಡನೆ.
370. ಕರಾರಿನಲ್ಲಿ ಹಿತಾಸಕ್ತಿಯನ್ನು ಅಧಿಕಾರಿ ಅಥವಾ ನೌಕರನು ಆರ್ಜಿಸುವುದಕ್ಕಾಗಿ ದಂಡನೆ.
371. ಸವಾಲು ಮಾಡುವುದರ ನಿಷೇಧ.
372. ಕಂಪನಿಗಳಿಂದ ಅಪರಾಧಗಳು.
372 ಎ- ಭಾವುಟದ ಅಧಿಕೃತ ಪ್ರದರ್ಶನ.
373. ನೋಟೀಸು, ಇತ್ಯಾದಿಗಳ ಮೇಲೆ ರುಜುವನ್ನು ಮುದ್ರೆ ಒತ್ತುವುದು.
374. ಲೈಸೆನ್ಸುಗಳು, ಇತ್ಯಾದಿಗಳ ಸಂಬಂಧದಲ್ಲಿ ಉಪಬಂಧಗಳು.
375. ಮುನ್ಸಿಪಲ್ ಸೇವೆಯಲ್ಲಿ ನಿಯೋಜಿತರಾದ ಜಾಡಮಾಲಿಗಳು ಮತ್ತು ವ್ಯಕ್ತಿಗಳ ಕೆಲವು ಇತರ ವರ್ಗಗಳ ಸೇವಾ ಷರತ್ತುಗಳು.

376. ದಸ್ತಾವೇಜು ಅಥವಾ ನಮೂದನೆಯನ್ನು ಸಾಕ್ಷಿಯಾಗಿ ಅಂಗೀಕರಿಸುವುದು.
377. ಲೈಸೆನ್ಸ್ ಕೊಡುವಿಕೆ ಮತ್ತು ಇತರ ಉಪಬಂಧಗಳು ಸರ್ಕಾರಕ್ಕೆ ಅನ್ವಯವಾಗತಕ್ಕದ್ದಲ್ಲ.
378. ಬಸ್ ನಿಲುಗಡೆಗಳಿಗೆ, ಪ್ರಯಾಣಿಕರ ಆಶ್ರಯಗಳಿಗೆ ಲೈಸೆನ್ಸು ಕೊಡುವಿಕೆಯ ಉಪಬಂಧಗಳು ಅನ್ವಯವಾಗತಕ್ಕದ್ದಲ್ಲ, ಇತ್ಯಾದಿ.
379. ಕರ್ನಾಟಕ ವ್ಯವಸಾಯೋತ್ಪನ್ನ ಮಾರುಕಟ್ಟೆ (ವಿನಿಯಮ) ಅಧಿನಿಯಮ, 1966ರ ಉಪಬಂಧಗಳು ಬಾಧಕವಾಗತಕ್ಕದ್ದಲ್ಲ.
380. ಮೇಲ್ಪಾಟು ಅಧಿನಿಯಮಗಳ ಉಪಬಂಧಗಳಿಗೆ ಬಾಧಕವಾಗತಕ್ಕದ್ದಲ್ಲ.
381. ಮಧ್ಯಾಕಾಲೀನ ಉಪಬಂಧಗಳು.
382. ನಿರಸನ ಮತ್ತು ಉಳಿಸುವಿಕೆಗಳು.
383. ಈ ಅಧಿನಿಯಮವನ್ನು ಜಾರಿಗೊಳಿಸುವುದಕ್ಕೆ ಆದೇಶಗಳು.
384. ಬಿಟ್ಟುಬಿಡಲಾಗಿದೆ.
385. ಬಿಟ್ಟುಬಿಡಲಾಗಿದೆ.
386. ಬಿಟ್ಟುಬಿಡಲಾಗಿದೆ.
387. ಯೋಜನಾ ಪ್ರಾಧಿಕಾರದೊಂದಿಗೆ ಸಮಾಲೋಚನೆ.
388. ಪೌರಾಡಳಿತ ನಿರ್ದೇಶನಾಲಯ.
388 ಎ . ನಿರ್ದೇಶನ ಮತ್ತು ನಿಯಂತ್ರಣ.
389. ತೊಂದರೆಗಳನ್ನು ನಿವಾರಿಸುವುದು.

ಅನುಸೂಚಿ - I ಬಿಟ್ಟುಬಿಡಲಾಗಿದೆ
ಅನುಸೂಚಿ - II ಬಿಟ್ಟುಬಿಡಲಾಗಿದೆ
ಅನುಸೂಚಿ - III ಬಿಟ್ಟುಬಿಡಲಾಗಿದೆ
ಅನುಸೂಚಿ - IV ಬಿಟ್ಟುಬಿಡಲಾಗಿದೆ
ಅನುಸೂಚಿ - Vಬಿಟ್ಟುಬಿಡಲಾಗಿದೆ
ಅನುಸೂಚಿ –VI
ಅನುಸೂಚಿ - VII
ಅನುಸೂಚಿ -VIII
ಅನುಸೂಚಿ - IX
ಅನುಸೂಚಿ -X
ಅನುಸೂಚಿ - XI
ಅನುಸೂಚಿ - XII
ಅನುಸೂಚಿ - XIII

ಉದ್ದೇಶ ಮತ್ತು ಕಾರಣಗಳ ಹೇಳಿಕೆ

I

1964ರ ಅಧಿನಿಯಮ22.- ರಾಜ್ಯದಲ್ಲಿರುವ ನಗರಸಭೆಗಳು ವಿವಿಧ ಪ್ರದೇಶಗಳಲ್ಲಿ ಜಾರಿಯಲ್ಲಿರುವ ಏಳು ಬೇರೆಬೇರೆ ಅಧಿನಿಯಮಗಳ ಅಡಿಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿವೆ. ಹೀಗಾಗಿ ಇಡೀ ರಾಜ್ಯಕ್ಕೆ ಒಂದು ಏಕರೂಪದ ಕಾನೂನನ್ನು ತರಲು ಈ ವಿಧೇಯಕವನ್ನು ಮಂಡಿಸಲಾಗಿದೆ. ಈ ವಿಧೇಯಕದ ಪ್ರಕರಣದಲ್ಲಿರುವ ಉಪಬಂಧಗಳು ಬಹುತೇಕ ಒಂದೇ ಬಗೆಯವುಗಳಾಗಿರುವುದರಿಂದ ಈ ವಿಧೇಯಕವು, ಸಿಟಿ ಮುನ್ಸಿಪಾಲಿಟಿಗಳಿಗೆ ಹಾಗೂ ಟೌನ್ ಮುನ್ಸಿಪಾಲಿಟಿಗಳಿಗೆ ಅನ್ವಯವಾಗುತ್ತದೆ ಮತ್ತು ಎರಡೂ ಬಗೆಯ ಮುನ್ಸಿಪಾಲಿಟಿಗಳಿಗೆ ಒಂದೇ ಅಧಿನಿಯಮ ಇರುವುದು ಅನುಕೂಲಕರ. ವಿಧೇಯಕದಲ್ಲಿ, ಪ್ರಸ್ತುತ ಜಾರಿಯಲ್ಲಿರುವ ಅಧಿನಿಯಮದ ಮುಖ್ಯ ವೈಶಿಷ್ಟ್ಯಗಳು ಅಡಕವಾಗಿವೆ. ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಲು ಮತ್ತು ಕಾರ್ಯಗತಗೊಳಿಸಲು ಹಾಗೂ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತಗೊಳಿಸುವ ಮೂಲಕ ಮೌಲ್ಯ ಹೆಚ್ಚಿದ ಭೂಮಿಯ ಮೇಲೆ ಬೆಟರ್ ಮೆಂಟ್ ಫೀಜುಗಳನ್ನು ವಿಧಿಸುವ ಸಲುವಾಗಿ ವಿಧೇಯಕದ IX ನೇ ಅಧ್ಯಾಯದಲ್ಲಿ ಉಪಬಂಧವನ್ನು ಸಹ ಕಲ್ಪಿಸಲಾಗಿದೆ.

(ದಿನಾಂಕ 30ನೇ ಮಾರ್ಚ್ 1963ರ ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ), ಭಾಗ IV-2ಎ ಯಲ್ಲಿ ಸಂ.46 ಎಂದು ಪುಟ ಸಂಖ್ಯೆ. 292ರಲ್ಲಿ ಪ್ರಕಟಿಸಲಾಗಿದೆ).

II

1966ರ ತಿದ್ದುಪಡಿ ಅಧಿನಿಯಮ 34.- ಮುಖ್ಯಾಧಿಕಾರಿಯ ಪ್ರಕಾರ್ಯಗಳ ಮೇಲೆ ನಿಯಂತ್ರಣವನ್ನು ಚಲಾಯಿಸುವುದಕ್ಕಾಗಿ ನಗರಸಭೆಗಳನ್ನು ಸಶಕ್ತಗೊಳಿಸುವ ಉದ್ದೇಶದಿಂದ, ಮೈಸೂರು ಮುನ್ಸಿಪಾಲಿಟಿಗಳ ಅಧಿನಿಯಮ, 1964ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. ಅಧಿನಿಯಮದ ಸಮರ್ಪಕ ಕಾರ್ಯನಿರ್ವಹಣೆಗೆ ಅನುಕೂಲ ಕಲ್ಪಿಸಲು ಅವಶ್ಯಕವೆಂದು ಕಂಡುಬಂದ ಕೆಲವು ಇತರ ತಿದ್ದುಪಡಿಗಳನ್ನು ಮಾಡಲು ಈ ಅವಕಾಶಗಳನ್ನು ಬಳಸಿಕೊಳ್ಳಲಾಗಿದೆ.

ಆದ್ದರಿಂದ ಈ ವಿಧೇಯಕ.

(ದಿನಾಂಕ 28ನೇ ಜುಲೈ 1966ರ ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ), ಭಾಗ IV-2ಎ ಯಲ್ಲಿ ಸಂ.132 ಎಂದು ಪುಟ ಸಂಖ್ಯೆ.8ರಲ್ಲಿ ಪ್ರಕಟಿಸಲಾಗಿದೆ).

III

1976ರ ತಿದ್ದುಪಡಿ ಅಧಿನಿಯಮ 2.- ಬೆಂಗಳೂರು ನಗರಪಾಲಿಕೆಗೆ ಹಾಗೂ ರಾಜ್ಯದಲ್ಲಿರುವ ಮುನ್ಸಿಪಾಲಿಟಿಗಳಿಗೆ ಮಾರಾಟ, ದಾನ, ವಿನಿಮಯ ಮೊದಲಾದ ಲಿಖಿತಗಳ ಮೇಲೆ ಸ್ಟ್ಯಾಂಪು ಅಧಿನಿಯಮದ ಮೇರೆಗೆ ವಿಧಿಸಿದ ಸುಂಕಗಳ ಮೇಲೆ, ಸರ್ ಚಾರ್ಜ್ ರೂಪದಲ್ಲಿ ಸ್ಥಿರಾಸ್ತಿಯ ವರ್ಗಾವಣೆಯ ಮೇಲೆ ಹೆಚ್ಚುವರಿ ಸುಂಕವನ್ನು ವಿಧಿಸಲು ಅಧಿಕಾರ ಕೊಡಲಾಗಿದೆ. ಮಾರಾಟವಾಗಿದ್ದರೆ ಪ್ರತಿಫಲದ ಮೊತ್ತವು ಹಾಗೂ ದಾನ, ವಿನಿಮಯವಾಗಿದ್ದರೆ ಮೌಲ್ಯವು ಲೆವಿಯನ್ನು ವಿಧಿಸುವುದಕ್ಕೆ ಆಧಾರವಾಗಿತ್ತು.

ಆದರೆ ಮಾರಾಟ ಮೊದಲಾದಂಥ ಸಂದರ್ಭಗಳಲ್ಲಿ ಸದರಿ ಆಧಾರವು ಮಾರುಕಟ್ಟೆ ಮೌಲ್ಯವಾಗಿರಬೇಕೆಂದು ಬದಲಾವಣೆ ಮಾಡಿ ಸ್ಟಾಂಪ್ ಅಧಿನಿಯಮವನ್ನು, 1975ರ ಅಧಿನಿಯಮ ಸಂಖ್ಯೆ 12 ರ ಮೂಲಕ ತಿದ್ದುಪಡಿ ಮಾಡಲಾಯಿತು. ಆದ್ದರಿಂದ ಮುನ್ಸಿಪಲ್ ಕಾನೂನುಗಳಲ್ಲಿ ತತ್ಪರಿಣಾಮದ ತಿದ್ದುಪಡಿಗಳನ್ನು ಮಾಡುವುದು ಅವಶ್ಯಕವಾಗಿದೆ. ಹುಬ್ಬಳ್ಳಿ-ಧಾರವಾಡ ಮುನ್ಸಿಪಲ್ ಕಾರ್ಪೊರೇಷನ್ ಯಾವ ಮುಂಬಯಿ ಪ್ರಾಂತೀಯ ಮುನ್ಸಿಪಲ್ ಕಾರ್ಪೊರೇಷನ್ ಅಧಿನಿಯಮ, 1949ರ ಅಡಿಯಲ್ಲಿ ಸ್ಥಾಪನೆಯಾಗಿದೆಯೋ ಆ ಮುಂಬಯಿ ಪ್ರಾಂತೀಯ ಮುನ್ಸಿಪಲ್ ಕಾರ್ಪೊರೇಷನ್ ಅಧಿನಿಯಮ, 1949 ರಲ್ಲಿ ಸಂವಾದಿ ಉಪಬಂಧವು ಇರಲಿಲ್ಲ. ಏಕರೂಪತೆಯನ್ನು ತರುವ ಸಲುವಾಗಿ ಆ ಬಗ್ಗೆ ಉಪಬಂಧ ಕಲ್ಪಿಸುವುದು ಸಹ ಅವಶ್ಯಕವೆಂದು ಪರಿಗಣಿಸಲಾಗಿತ್ತು.

ಆದ್ದರಿಂದ, ಕರ್ನಾಟಕ ಮುನ್ಸಿಪಲ್ ಕಾನೂನುಗಳ (ತಿದ್ದುಪಡಿ) ಅಧ್ಯಾದೇಶ, 1975ನ್ನು ಹೊರಡಿಸಲಾಗಿತ್ತು.

ಸದರಿ ಅಧ್ಯಾದೇಶಕ್ಕೆ ಬದಲಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

(ದಿನಾಂಕ 22ನೇ ಜನವರಿ 1976ರ ಕರ್ನಾಟಕ ರಾಜ್ಯಪತ್ರದ ಭಾಗ IV-2ಎ ಯಲ್ಲಿ ಪುಟ ಸಂಖ್ಯೆ. 7-8 ರಲ್ಲಿ ಪ್ರಕಟಿಸಲಾಗಿದೆ).

IV

1976ರ ತಿದ್ದುಪಡಿ ಅಧಿನಿಯಮ 39.- ರಾಜ್ಯದ ರಾಜಸ್ವಗಳನ್ನು ಹೆಚ್ಚಿಸುವ ಉದ್ದೇಶದಿಂದ, ನಗರ ಭೂಮಿಯ ಮೇಲೆ ತೆರಿಗೆ ವಿಧಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. 1975 ರ ಏಪ್ರಿಲ್ 1 ಜಾರಿಗೆ ಬರುವಂತೆ, ಬೆಂಗಳೂರು ಮತ್ತು ಹುಬ್ಬಳ್ಳಿ-ಧಾರವಾಡ ನಗರಗಳಲ್ಲಿ ಹಾಗೂ ಮೈಸೂರು, ಮಂಗಳೂರು, ಬೆಳಗಾವಿ, ಗುಲ್ಬರ್ಗಾ, ಬಳ್ಳಾರಿ, ದಾವಣಗೆರೆ, ಬಿಜಾಪುರ, ಶಿವಮೊಗ್ಗ ಮತ್ತು ಭದ್ರಾವತಿ ನಗರಸಭಾ ಪ್ರದೇಶಗಳಲ್ಲಿ ಈ ತೆರಿಗೆಯನ್ನು ಸಂದಾಯ ಮಾಡಬೇಕಾಗಿದೆ. ಇತರ ಸ್ಥಳಗಳಿಗೆ ಸಂಬಂಧಪಟ್ಟಂತೆ ಜಾರಿಯ ದಿನಾಂಕವನ್ನು ಅಧಿಸೂಚಿಸಲಾಗುತ್ತದೆ. ಕೃಷಿಯೇತರ ಕರನಿರ್ಧರಣೆ, ಭೂಮಿ ಬಾಡಿಗೆ, ಜೋಡಿ ಅಥವಾ ಜೋಡಿ ಕಂದಾಯ ಹಾಗೂ ಆ ಭೂಮಿಗೆ ಸಂಬಂಧಪಟ್ಟಂತೆ ಸಂದಾಯವಾಗಬೇಕಾಗದ, ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಿದ ಯಾವುದೇ ಇತರ ಮೊಬಲಗನ್ನು ಒಳಗೊಂಡಂತೆ ಭೂ ಕಂದಾಯ ನಿರ್ಧರಣೆಗೆ ಬದಲಾಗಿ ಈ ತೆರಿಗೆ ಇರುತ್ತದೆ. ನಗರ ಭೂಮಿಯ ಮಾರುಕಟ್ಟೆ ಮೌಲ್ಯದ ಮೇಲೆ ಶ್ರೇಣಿಗೆ ಅನುಸಾರವಾಗಿ ಇದನ್ನು ವಿಧಿಸಲಾಗುತ್ತದೆ. ಮಾರುಕಟ್ಟೆ ಮೌಲ್ಯವನ್ನು ನಿರ್ಧರಿಸುವುದಕ್ಕಾಗಿ ಕಾರ್ಯವಿಧಾನವನ್ನು ರೂಪಿಸಲಾಗಿದೆ ಹಾಗೂ ಒಂದು ಸಲ ಮಾರುಕಟ್ಟೆ ಮೌಲ್ಯ ನಿರ್ಧಾರವಾದ ಮೇಲೆ ಒಮ್ಮೆಗೆ ಅದು ಐದು ವರ್ಷಗಳವರೆಗೆ ಚಾಲ್ತಿಯಲ್ಲಿರುತ್ತದೆ.ಬಾಧಿತ ವ್ಯಕ್ತಿಗಳು ನ್ಯಾಯಾಧಿಕರಣಕ್ಕೆ ಅಪೀಲನ್ನು ಮಾಡಿಕೊಳ್ಳಲು ಅವಕಾಶವನ್ನು ಕಲ್ಪಿಸಲಾಗಿದೆ.223 ಚದರ ಮೀಟರುಗಳನ್ನು ಮೀರದ ತುಣುಕು ಭೂಮಿಗೆ ಹಾಗೂ ಸಾರ್ವಜನಿಕರ ಉದ್ದೇಶಗಳಿಗಾಗಿ ಬಳಸಲಾಗುವ ಭೂಮಿಗೆ ತೆರಿಗೆ ಸಂದಾಯ ಮಾಡದಂತೆ ವಿನಾಯಿತಿ ಕೊಡಲಾಗಿದೆ.

(ದಿನಾಂಕ 14ನೇ ಫೆಬ್ರವರಿ, 1975ರ ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ), ಭಾಗ IV-2ಎ ಯಲ್ಲಿ ಸಂ.343 ಎಂದು ಪುಟ ಸಂಖ್ಯೆ.27ರಲ್ಲಿ ಪ್ರಕಟಿಸಲಾಗಿದೆ).

V

1976ರ ತಿದ್ದುಪಡಿ ಅಧಿನಿಯಮ 83.- 1964ರ ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮಕ್ಕೆ, 1964ರ ಮೇ 7 ರಂದು ರಾಷ್ಟ್ರಪತಿಯವರ ಸಮ್ಮತಿ ದೊರಕಿದೆ ಮತ್ತು ಅದು ರಾಜ್ಯದಲ್ಲಿ ಜಾರಿಗೆ ಬಂದಿತು. ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964ನ್ನು ಪರಾಮರ್ಶಿಸುವ ಉದ್ದೇಶದಿಂದ, 1969ರಲ್ಲಿ ನಡೆದ ಕರ್ನಾಟಕ ರಾಜ್ಯ ಮುನ್ಸಿಪಲ್ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಕ್ರಿಯಾ ಸಮಿತಿಯ ಸಮ್ಮೇಳನದಲ್ಲಿ ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ 1964ನ್ನು ಪರಿಷ್ಕರಿಸಬೇಕೆಂಬ ಅಪೇಕ್ಷೆ ವ್ಯಕ್ತವಾಯಿತು. ಅದರಂತೆ, ಅಧಿನಿಯಮದ ಉಪಬಂಧಗಳನ್ನು ಸವಿವರವಾಗಿ ಪರಿಷ್ಕರಿಸಲು ಮತ್ತು ಅದಕ್ಕೆ ತಿದ್ದುಪಡಿಗಳನ್ನು ಸೂಚಿಸಲು ಒಂದು ಸಮಿತಿಯನ್ನು ರಚಿಸಲಾಯಿತು. ಅಧಿನಿಯಮದ ಉಪಬಂಧಗಳನ್ನು ಅನುಷ್ಠಾನಗೊಳಿಸುವಾಗ ಕೆಲವು ತೊಂದರೆಗಳಿರುವುದನ್ನು ಸಹ ಗುರುತಿಸಲಾಯಿತು. ಡಿವಿಷನಲ್ ಕಮಿಷನರ್ ಗಳು ಹಾಗೂ ರಾಜ್ಯ ಲೆಕ್ಕಪತ್ರಗಳ ಇಲಾಖೆಯ ನಿಯಂತ್ರಕರು ಸಹ ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964ಕ್ಕೆ ಕೆಲವು ತಿದ್ದುಪಡಿಗಳನ್ನು ಪ್ರಸ್ತಾವಿಸಿದ್ದಾರೆ.

ಕಾನೂನು ಹಾಗೂ ಪೌರಾಡಳಿತ ಸಚಿವರ ಅಧ್ಯಕ್ಷತೆಯಲ್ಲಿ ಈ ಸಮಿತಿಯನ್ನು ರಚಿಸಲಾಯಿತು. ಸಮಿತಿಯು, ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964ರ ಉಪಬಂಧಗಳ ಬಗ್ಗೆ ಸವಿವರವಾದ ಅಧ್ಯಯನವನ್ನು ನಡೆಸಿದೆ ಹಾಗೂ ವಿವಿಧ ಮೂಲಗಳಿಂದ ಬಂದ ಪ್ರಸ್ತಾವನೆಗಳನ್ನು ಹಾಗೂ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಕೆಲವು ತಿದ್ದುಪಡಿಗಳನ್ನು ವಿಧೇಯಕದ ರೂಪದಲ್ಲಿ ಪ್ರಸ್ತಾವಿಸಲಾಗಿದೆ.

ವಿಧೇಯಕದ ಪ್ರಮುಖ ಅಂಶಗಳು ಈ ಕೆಳಕಂಡಂತಿದೆ:-

1. ಜನಸಂಖ್ಯೆಗೆ ಅನುಗುಣವಾಗಿ ಕೌನ್ಸಿಲರ್ ಗಳ ಸಂಖ್ಯೆಯನ್ನು ಹೆಚ್ಚಿಸುವುದು.
2. ಪ್ರಾಂತೀಯ ವಿಭಾಗಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಅಕ್ಕಪಕ್ಕದ ವಿಭಾಗಗಳನ್ನು ಒಳಗೊಳ್ಳುವಂತೆ ರಚಿಸುವುದು.

3. ನಾಮಪತ್ರಗಳನ್ನು ಸಲ್ಲಿಸುವುದಕ್ಕೆ ಇರುವ ಕೊನೆಯ ದಿನಾಂಕದವರೆಗೆ ಮತದಾರರ ಪಟ್ಟಿಯಲ್ಲಿ ತಿದ್ದುಪಾಟುಗಳನ್ನು ಮಾಡಬಹುದು.
4. ಕೌನ್ಸಿಲರ್ ಗಳನ್ನು, ಅವರು ಅಸ್ಪøಶ್ಯತೆ ನಿವಾರಣೆ ಅಧಿನಿಯಮ ಹಾಗೂ ಆಹಾರ ಕಲಬೆರೆಕೆ ಅಧಿನಿಯಮ ಮೊದಲಾದವುಗಳ ಅಡಿಯಲ್ಲಿ ಅಪರಾಧಗಳನ್ನು ಮಾಡಿದರೆ ಕೌನ್ಸಿಲರ್ ಗಳಾಗದಂತೆ ಅನರ್ಹಗೊಳಿಸುವುದು.
5. ಪ್ರತಿಯೊಬ್ಬ ಕೌನ್ಸಿಲರ್ ಮುನ್ಸಿಪಲ್ ನಿಧಿಯಿಂದ ಮಾಸಿಕ ಭತ್ಯೆಯನ್ನು ಪಡೆಯಬಹುದು.
6. ಚುನಾವಣೆಗಳು ಸರ್ಕಾರದ ನಿಯಂತ್ರಣ ಮತ್ತು ಮೇಲ್ವಿಚಾರಣೆಗೆ ಒಳಪಟ್ಟಿರತಕ್ಕದ್ದು ಹಾಗೂ ಸರ್ಕಾರವು, ಕೌನ್ಸಿಲರ್ ಗಳ ಚುನಾವಣೆಯನ್ನು ನಡೆಸುವ ಉದ್ದೇಶದ ಎಲ್ಲಾ ಅಥವಾ ಯಾವುದೇ ವಿಷಯಗಳಿಗೆ ಉಪಬಂಧ ಕಲ್ಪಿಸುವುದಕ್ಕಾಗಿ ಅಥವಾ ನಿಯಂತ್ರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.
7. ಕೌನ್ಸಿಲರ್ ಗಳು, ಉಪಾಧ್ಯಕ್ಷರು ಹಾಗೂ ಅಧ್ಯಕ್ಷರು, ಲಿಖಿತದಲ್ಲಿ ನೋಟೀಸನ್ನು ನೀಡುವ ಮೂಲಕ ರಾಜೀನಾಮೆ ಸಲ್ಲಿಸಬಹುದು ಮತ್ತು ಅಂಥ ರಾಜೀನಾಮೆಯನ್ನು ಸ್ವೀಕರಿಸಿದ ತರುವಾಯ ಹತ್ತನೇ ದಿನದ ಮುಕ್ತಾಯದಂದು ಅದು ಜಾರಿಗೆ ಬರತಕ್ಕದ್ದು.
8. ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಭತ್ಯೆಗಳನ್ನು ಪರಿಷ್ಕರಿಸಲಾಗಿದೆ.
9. ಅಧ್ಯಕ್ಷರಿಗೆ ಹೆಚ್ಚುವರಿ ಅಧಿಕಾರಗಳನ್ನು ನೀಡಲಾಗಿದೆ ಹಾಗೂ ಅಧ್ಯಕ್ಷರುಗಳು ಎಲ್ಲಾ ಸ್ಥಾಯೀ ಸಮಿತಿಗಳ ಪದನಿಮಿತ್ತ ಸದಸ್ಯರುಗಳಾಗಿರತಕ್ಕದ್ದು, ಆದರೆ ಅವರಿಗೆ ಯಾವುದೇ ಪ್ರಶ್ನೆಯ ಮೇಲೆ ಮತ ನೀಡುವ ಹಕ್ಕು ಇರತಕ್ಕದ್ದಲ್ಲ.
10. ಪ್ರತಿಯೊಬ್ಬ ಕೌನ್ಸಿಲರ್ ಗೆ ಮುಂದಿನ ಸಭೆಗೆ ಮುಂಚೆ, ಸಭೆಯ ನಡವಳಿಗಳ ಪ್ರತಿಗಳನ್ನು ಒದಗಿಸತಕ್ಕದ್ದು.
11. ಸ್ಥಾಯಿ ಸಮಿತಿಯ ಅಧ್ಯಕ್ಷನು, ಏಕ ವರ್ಗಾವಣೀಯ ಮತ ಪದ್ಧತಿಯ ಮೂಲಕ ಅದರ ಸದಸ್ಯರುಗಳಿಂದ ಚುನಾಯಿತನಾಗತಕ್ಕದ್ದು.
12. ಬಾಡಿಗೆ ನೀಡಲು, ಮಾರಾಟ ಮಾಡಲು ಅಥವಾ ಗುತ್ತಿಗೆ ನೀಡಲು ಕೌನ್ಸಿಲ್‌ಗೆ ಇರುವ ಅಧಿಕಾರವನ್ನು ಹೆಚ್ಚಿಸಲಾಗಿದೆ.
13. ಕೆಲವು ಸಂದರ್ಭಗಳಲ್ಲಿ, ನಗರ ಸಭೆಯನ್ನು ರದ್ದುಪಡಿಸಲು ಸರ್ಕಾರಕ್ಕೆ ಇರುವ ಅಧಿಕಾರವು ಒಂದು ವರ್ಷವನ್ನು ಮೀರತಕ್ಕದ್ದಲ್ಲ.
14. ಅಧಿಸೂಚಿತ ಪ್ರದೇಶಗಳನ್ನು, ಪಟ್ಟಣ ಮಂಡಳಿಗಳನ್ನು, ನೈರ್ಮಲ್ಯ ಮಂಡಳಿಗಳು, ಮೊದಲಾದವುಗಳನ್ನುಮುನ್ಸಿಪಾಲಿಟಿಗಳಾಗಿ ಪರಿವರ್ತಿಸಲು ಉಪಬಂಧ ಕಲ್ಪಿಸಲಾಗಿದೆ.
15. ಪೌರಾಡಳಿತ ಸೇವೆಗಳ ಮೇಲಿನ ವೆಚ್ಚಗಳನ್ನು ಸಂಚಿತ ನಿಧಿಯಿಂದ ಭರಿಸಲು ಉಪಬಂಧ ಕಲ್ಪಿಸಲಾಗಿದೆ.
16. ಮದರಾಸು ಸಾರ್ವಜನಿಕ ಆರೋಗ್ಯ ಅಧಿನಿಯಮವು ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮದ ವ್ಯಾಪ್ತಿಯೊಳಗೆಬರುವ ನೌಕರರುಗಳಿಗೆ ಅನ್ವಯವಾಗುವಷ್ಟರಮಟ್ಟಿಗೆ ನಿರಸಿತವಾಗತಕ್ಕದ್ದು.

ಆದ್ದರಿಂದ ಈ ವಿಧೇಯಕ.

(ದಿನಾಂಕ 18ನೇ ಮಾರ್ಚ್ 1976ರ ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ), ಭಾಗ IV-2ಎ ಯಲ್ಲಿ ಸಂ.1539 ಎಂದು, ಪುಟ ಸಂಖ್ಯೆ.17-19ರಲ್ಲಿ ಪ್ರಕಟಿಸಲಾಗಿದೆ).

VI

1979ರ ತಿದ್ದುಪಡಿ ಅಧಿನಿಯಮ 13.- ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964 (ಕರ್ನಾಟಕ ಅಧಿನಿಯಮ 1964ರ 22)ರ 18ನೇ ಪ್ರಕರಣವು, ಸಾರ್ವತ್ರಿಕ ಚುನಾವಣೆಯಲ್ಲಿ ಚುನಾಯಿತರಾದ ಕೌನ್ಸಿಲರ್ ಗಳ ಅವಧಿಯು ನಾಲ್ಕು ವರ್ಷಗಳಾಗಿರತಕ್ಕದ್ದೆಂದು ಉಪಬಂಧಿಸುತ್ತದೆ. ವಿವಿಧ ಕಾರಣಗಳಿಂದಾಗಿ, ಕೆಲವು ಮುನ್ಸಿಪಾಲಿಟಿಗಳಲ್ಲಿ, ಮುನಿಸಿಪಲ್ ಕೌನ್ಸಿಲರ್ ಗಳ ಅವಧಿಯು ಮುಗಿದ ನಿಕಟ ತರುವಾಯದಲ್ಲೇ ಅವರ ಚುನಾವಣೆಯನ್ನು ನಡೆಸಲು ಸಾಧ್ಯವಾಗಿರುವುದಿಲ್ಲ.

ಹೀಗಾಗಿ ಅವರು ಚುನಾಯಿತ ಕೌನ್ಸಿಲರ್ ಗಳಾಗಿ ತಮ್ಮ ಪ್ರಕಾರ್ಯದಲ್ಲಿ ಮುಂದುವರೆಯುತ್ತಾರೆ.ಅವರ ಕಾರ್ಯಗಳನ್ನು ಸಿಂಧುಗೊಳಿಸಲು ಚುನಾಯಿತ ಕೌನ್ಸಿಲರ್ ಗಳ ಅವಧಿಯನ್ನು 24 ತಿಂಗಳುಗಳನ್ನು ಮೀರದ ಅವಧಿಯವರೆಗೆ ವಿಸ್ತರಿಸುವ ಅಧಿಕಾರಗಳನ್ನು ಪಡೆಯಲು ಪ್ರಸ್ತಾವಿಸಲಾಗಿದೆ.

ಸದಸ್ಯರು, ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ರಾಜೀನಾಮೆಗೆ ಸಂಬಂಧಿಸಿದ ಉಪಬಂಧಗಳನ್ನು 40ನೇ ಪ್ರಕರಣಕ್ಕೆ ತಿದ್ದುಪಡಿ ಮಾಡುವ ಮೂಲಕ ಸರಳಗೊಳಿಸಲಾಗಿದೆ ಹಾಗೂ ಸ್ಪಷ್ಟಗೊಳಿಸಲಾಗಿದೆ.

ಅಧ್ಯಕ್ಷರ ಅವಧಿಯನ್ನು ಮಿತಿಗೊಳಿಸುವ ಪರಿಷತ್ತಿನ ಠರಾವಿನ ಜಾರಿಯನ್ನು, ಅಂಥ ಠರಾವನ್ನು ಹೊರಡಿಸುವ ಪರಿಷತ್ತಿನ ಅವಧಿಯವರೆಗೆ ಮಾತ್ರ ಮಿತಿಗೊಳಿಸಲು 42ನೇ ಪ್ರಕರಣದಲ್ಲಿ ಉಪಬಂಧವನ್ನು ಮಾಡಲಾಗುತ್ತಿದೆ.

ಕೆಲವು ಕಾರ್ಯನಿರ್ವಹಣಾ ತೊಂದರೆಗಳನ್ನು ನಿವಾರಿಸಲು, ಕೆಲವು ಇತರ ಕಿರು ತಿದ್ದುಪಡಿಗಳನ್ನು ಮಾಡಲು ಈ ಅವಕಾಶವನ್ನು ಬಳಸಿಕೊಳ್ಳಲಾಗಿದೆ.

ಆದ್ದರಿಂದ ಈ ವಿಧೇಯಕ.

(ದಿನಾಂಕ 24ನೇ ಜನವರಿ 1979ರ ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ), ಭಾಗ IV-2ಎ ಯಲ್ಲಿ ಸಂ.78 ಎಂದು, ಪುಟ ಸಂಖ್ಯೆ.5 ರಲ್ಲಿ ಪ್ರಕಟಿಸಲಾಗಿದೆ).

VII

1979ರ ತಿದ್ದುಪಡಿ ಅಧಿನಿಯಮ 21.- ರಾಜ್ಯದ ರಾಜಸ್ವಗಳನ್ನು ಹೆಚ್ಚಿಸುವ ಉದ್ದೇಶದಿಂದ ತೆರಿಗೆ ನಿರ್ಧರಣೆ ಹಾಗೂ ಇತರ ಕಾನೂನುಗಳನ್ನು ತಿದ್ದುಪಡಿ ಮಾಡಲು ಪ್ರಸ್ತಾವಿಸಲಾಗಿದೆ. ಕೆಲವು ಇತರ ತಿದ್ದುಪಡಿಗಳನ್ನು ಮಾಡಲು ಸಹ ಈ ಅವಕಾಶವನ್ನು ಬಳಸಿಕೊಳ್ಳಲಾಗಿದೆ.

ಆದ್ದರಿಂದ ಈ ವಿಧೇಯಕ.

(ದಿನಾಂಕ 27ನೇ ಮಾರ್ಚ್ 1979ರ ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ), ಭಾಗ IV-2ಎ ಯಲ್ಲಿ ಸಂಖ್ಯೆ 259 ಎಂದು ಪುಟ ಸಂಖ್ಯೆ 43ರಲ್ಲಿ ಪ್ರಕಟಿಸಲಾಗಿದೆ).

VIII

1981ರ ತಿದ್ದುಪಡಿ ಅಧಿನಿಯಮ 22.- ಮುನ್ಸಿಪಲ್ ಕಾರ್ಪೊರೇಷನ್‌ಗಳನ್ನು ಹಾಗೂ ಮುನ್ಸಿಪಲ್ ಕೌನ್ಸಿಲ್‌ಗಳನ್ನು, 1973-74ನೇ ಸಾಲಿನಿಂದ ಜಾರಿಗೆ ಬರುವಂತೆ, ಪ್ರತಿವರ್ಷವೂ ತಮಗೆ ಬರುವ ರಾಜಸ್ವದಲ್ಲಿ ಶೇಕಡಾ 18ರಷ್ಟನ್ನು, ತಮ್ಮ ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟ ಜಾತಿಗಳ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣಕ್ಕಾಗಿ ಮೀಸಲಿರಿಸಲು ಕೋರಿಕೊಳ್ಳಲಾಗಿತ್ತು. ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣಕ್ಕಾಗಿ, ಸಾಕಷ್ಟು ಮುಂಚಿತವಾಗಿ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ ಹಾಗೂ ಅವುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವ ಉದ್ದೇಶದಿಂದ, ಪ್ರತಿಯೊಂದು ಮುನ್ಸಿಪಲ್ ಕೌನ್ಸಿಲ್‌ನಲ್ಲಿ ಒಂದು ಸಾಮಾಜಿಕ ನ್ಯಾಯ ಸಮಿತಿಯನ್ನು ರಚಿಸುವುದು ಹಾಗೂ ತನ್ನ ವ್ಯಾಪ್ತಿಯಲ್ಲಿ ಇರುವ ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ಜನರ ಕಲ್ಯಾಣಕ್ಕಾಗಿ ಕಾರ್ಯಚಟುವಟಿಕೆಗಳನ್ನು ಮತ್ತು ಕಾರ್ಯಕ್ರಮಗಳನ್ನು ರೂಪಿಸುವ ಜವಾಬ್ದಾರಿಯನ್ನು ಸದರಿ ಸಮಿತಿಗೆ ವಹಿಸುವುದು ಅವಶ್ಯಕವಾಗಿದೆ.

ಆದ್ದರಿಂದ ಈ ವಿಧೇಯಕ.

(ದಿನಾಂಕ 03ನೇ ಫೆಬ್ರವರಿ 1981ರ ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ), ಭಾಗ IV-2ಎ ಯಲ್ಲಿ ಸಂ.82 ಎಂದು, ಪುಟ ಸಂಖ್ಯೆ.4ರಲ್ಲಿ ಪ್ರಕಟಿಸಲಾಗಿದೆ).

IX

1982ರ ತಿದ್ದುಪಡಿ ಅಧಿನಿಯಮ 26.- ಕರ್ನಾಟಕ ವೃತ್ತಿಗಳು, ವ್ಯಾಪಾರಗಳು, ಆಜೀವಿಕೆಗಳು ಮತ್ತು ಉದ್ಯೋಗದ ಮೇಲಿನ ತೆರಿಗೆ ಅಧಿನಿಯಮ, 1976ರ ಮೇರೆಗೆ ತೆರಿಗೆ ಹೊಣೆಗಾರಿಕೆಗೆ ಗುರಿಯಾಗಬೇಕಾದರೆ ಒಂದು ವರ್ಷದಲ್ಲಿ ಕೆಲವೊಂದು ಕನಿಷ್ಠ ಅವಧಿಯಲ್ಲಿ ವೃತ್ತಿಯನ್ನು ನಿರ್ವಹಿಸಬೇಕೆಂದು ತೀರ್ಮಾನಿಸಲಾಗಿದೆ. ಒಂದು ವರ್ಷಕ್ಕೆ 120 ದಿನಗಳ ಕನಿಷ್ಠ ಅವಧಿಯನ್ನು ನಿಗದಿಪಡಿಸುವುದು ಅಪೇಕ್ಷಣೀಯವೆಂದು ಪರಿಗಣಿಸಲಾಗಿದೆ.

ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮದ 94ನೇ ಪ್ರಕರಣದ (xi) ನೇ ಬಾಬಿನ ಪರಂತುಕದ ಪ್ರಕಾರ ಮುನ್ಸಿಪಾಲಿಟಿಯು ವೃತ್ತಿ ತೆರಿಗೆಯನ್ನು ವಿಧಿಸಿದರೆ (xi)ನೇ ಬಾಬಿನಲ್ಲಿ ಹೇಳಿರುವ ತೆರಿಗೆಯನ್ನು ವಿಧಿಸುವಂತಿಲ್ಲ. ಎಲ್ಲ ಪ್ರಕರಣಗಳಲ್ಲಿ ವೃತ್ತಿ ತೆರಿಗೆಯನ್ನು ಪ್ರಸ್ತುತ ವಿಧಿಸಲಾಗುತ್ತಿರುವುದರಿಂದ, ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮದ ಪರಂತುಕದ (xi)ನೇ ಬಾಬನ್ನು ಬಿಟ್ಟುಬಿಡಲಾಗುತ್ತಿದೆ..

ಆದ್ದರಿಂದ ಈ ವಿಧೇಯಕ.

(ದಿನಾಂಕ 10ನೇ ಜೂನ್, 1982ರ ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ), ಭಾಗ IV2ಎ ಯಲ್ಲಿ ಸಂ.469 ಎಂದು, ಪುಟ ಸಂಖ್ಯೆ.3ರಲ್ಲಿ ಪ್ರಕಟಿಸಲಾಗಿದೆ).

X

1982ರ ತಿದ್ದುಪಡಿ ಅಧಿನಿಯಮ 28.- ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964ರ 321ನೇ ಪ್ರಕರಣವು ಡಿವಿಷನಲ್ ಕಮಿಷನರ್ ಗಳಿಗೆ ತನ್ನ ಅಧಿಕಾರಗಳನ್ನು ವಹಿಸಿಕೊಡಲು ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ, ಶೀಘ್ರವಾಗಿ ಮತ್ತು ಅತಿ ತ್ವರಿತವಾಗಿ ವಿಲೇವಾರಿಯನ್ನು ಮಾಡುವ ದೃಷ್ಟಿಯಿಂದ ಜಿಲ್ಲಾಧಿಕಾರಿಗಳಿಗೆ ಸಹ ತನ್ನ ಅಧಿಕಾರಗಳನ್ನು ವಹಿಸಿಕೊಡಲು ಸರ್ಕಾರಕ್ಕೆ ಅಧಿಕಾರವನ್ನು ನೀಡಲು ಪ್ರಸ್ತಾವಿಸಲಾಗಿದೆ.

ಚೀಫ್ ಆಫೀಸರ್ ಗಳುಹಾಗೂ ಮುನಿಸಿಪಲ್ ಕಮಿಷನರ್ ಗಳು, ಮುನ್ಸಿಪಲ್ ಕೌನ್ಸಿಲ್‌ಗಳ ಮಂಜೂರಾತಿ ಇಲ್ಲದೆ 60 ರೂಪಾಯಿಗಳಿಗಿಂತ ಹೆಚ್ಚಿರದ ಮಾಸಿಕ ವೇತನವನ್ನು ಹೊಂದಿರುವ ಹುದ್ದೆಗಳಿಗೆ ನೇಮಕಗಳನ್ನು ಮಾಡಿಕೊಳ್ಳಬಹುದು ಎಂದು ಅಧಿನಿಯಮದ 342(1)ನೇ ಪ್ರಕರಣವು ಉಪಬಂಧಿಸುತ್ತದೆ.

1977 ರಲ್ಲಿ ವೇತನ ಶ್ರೇಣಿಗಳನ್ನು ಪರಿಷ್ಕರಣೆ ಮಾಡಿದ ಕಾರಣದಿಂದಾಗಿ, ಅತ್ಯಂತ ಕಡಿಮೆಯ ವೇತನಶ್ರೇಣಿ ಯಾವುದೆಂದರೆ 250-400 ರೂಪಾಯಿಗಳ ಮಾಸಿಕ ವೇತನವು 60/- ರೂಪಾಯಿಗಳನ್ನು ಮೀರಿಲ್ಲದ ಹುದ್ದೆಗಳು ಯಾವುದೂ ಇರುವುದಿಲ್ಲ. ಆದ್ದರಿಂದ ನಿಯಮಗಳ ಮೂಲಕ ಸದರಿ ಹಣದ ಪರಿಮಿತಿಯನ್ನು ಗೊತ್ತುಪಡಿಸಬಹುದೆಂದು ಉಪಬಂಧ ಕಲ್ಪಿಸಲು 342ನೇ ಪ್ರಕರಣವನ್ನು ತಿದ್ದುಪಡಿ ಮಾಡಲು ಪ್ರಸ್ತಾವಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ದಿನಾಂಕ 27ನೇ ಜೂನ್ 1981ರ ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ), ಭಾಗ IV-2ಎ ಯಲ್ಲಿ ಸಂಖ್ಯೆ 488 ಎಂದು, ಪುಟ ಸಂಖ್ಯೆ 3ರಲ್ಲಿ ಪ್ರಕಟಿಸಲಾಗಿದೆ).

XI

1983ರ ತಿದ್ದುಪಡಿ ಅಧಿನಿಯಮ 12.- ಕಾಲಚಕ್ರ ಉರುಳಿದಂತೆ, ಜೀವನದ ಎಲ್ಲಾ ರಂಗಗಳಲ್ಲಿ ಮಹಿಳೆಯರು ಪಾಲ್ಗೊಳ್ಳುವುದು ನಿರಂತರವಾಗಿ ಹೆಚ್ಚುತ್ತಿದೆ. ಮುನ್ಸಿಪಲ್ ವ್ಯವಹಾರಗಳಲ್ಲಿ ಮಹಿಳೆಯರು ತಮ್ಮನ್ನು ಹೆಚ್ಚುಹೆಚ್ಚು ತೊಡಗಿಸಿಕೊಳ್ಳುವಂತೆ ಮಾಡುವ ಉದ್ದೇಶದಿಂದ, ಕೌನ್ಸಿಲರ್ ಗಳ ಒಟ್ಟು ಸಂಖ್ಯೆಯಲ್ಲಿ ಮಹಿಳೆಯರಿಗೆ ಹತ್ತಿರ ಹತ್ತಿರ ಶೇಕಡಾ 20 ರವರೆಗೆ ಮೀಸಲಾತಿಯನ್ನು ಹೆಚ್ಚಿಸುವ ಮೂಲಕ ಮಹಿಳೆಯರಿಗೆ ಸಾಕಷ್ಟು ಪ್ರಾತಿನಿಧ್ಯವನ್ನು ನೀಡಲು ಪ್ರಸ್ತಾವಿಸಲಾಗಿದೆ. ಮುನ್ಸಿಪಾಲಿಟಿಗಳನ್ನು ಏಕಸದಸ್ಯ ಮತಕ್ಷೇತ್ರಗಳನ್ನಾಗಿ ವಿಭಾಗಿಸಲು ಅಧಿಕಾರವನ್ನು ಪಡೆದುಕೊಳ್ಳಲಾಗುತ್ತಿದೆ.

18 ವರ್ಷ ವಯಸ್ಸು ತುಂಬಿರುವ ಎಲ್ಲಾ ವ್ಯಕ್ತಿಗಳನ್ನು, ಮುನ್ಸಿಪಾಲಿಟಿಗಳ ಚುನಾವಣೆಯಲ್ಲಿ ಮತದಾನ ಮಾಡುವುದಕ್ಕೆ ಅರ್ಹರನ್ನಾಗಿಸಲು ಪ್ರಸ್ತಾಪಿಸಲಾಗಿದೆ. ಕೆಲವು ಕಿರು ತಿದ್ದುಪಡಿಗಳನ್ನು ಮಾಡಲು ಈ ಅವಕಾಶವನ್ನು ಬಳಸಿಕೊಳ್ಳಲಾಗಿದೆ.

ಆದ್ದರಿಂದ ಈ ವಿಧೇಯಕ.

(ದಿನಾಂಕ 25ನೇ ಮಾರ್ಚ್ 1983ರ ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ), ಭಾಗ IV2ಎ ಯಲ್ಲಿ ಸಂಖ್ಯೆ 188 ಎಂದು, ಪುಟ ಸಂಖ್ಯೆ 5ರಲ್ಲಿ ಪ್ರಕಟಿಸಲಾಗಿದೆ)

XII

1984ರ ತಿದ್ದುಪಡಿ ಅಧಿನಿಯಮ 2.- (ಟಿಪ್ಪಣಿ: ಈ ಅಧಿನಿಯಮದ ಮೂಲಕ, ಕರ್ನಾಟಕ ವಿವಾಹಗಳ (ನೋಂದಣಿ ಹಾಗೂ ಸಂಕೀರ್ಣ ಉಪಬಂಧಗಳು) ಅಧಿನಿಯಮ, 1976ನ್ನು

ಅಧಿನಿಯಮಿಸಲಾಗಿತ್ತು. ಅದರಲ್ಲಿ, ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮಕ್ಕೆ ಕೆಲವು ಆನುಷಂಗಿಕ ತಿದ್ದುಪಡಿಗಳನ್ನು ಮಾಡಲಾಗಿದೆ.)

XIII

1984ರ ತಿದ್ದುಪಡಿ ಅಧಿನಿಯಮ 33.- ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ರವರು ಸರ್ಕಾರಕ್ಕೆ ಬರೆದಂಥ ರಹಸ್ಯ ಪತ್ರಗಳನ್ನು ಹೊರತುಪಡಿಸಿ, ಉಳಿದ ಎಲ್ಲಾ ಪತ್ರವ್ಯವಹಾರಗಳ ಪ್ರತಿಗಳನ್ನು ಏಕಕಾಲಕ್ಕೆ ಅಧ್ಯಕ್ಷರಿಗೆ ಕಳುಹಿಸಿಕೊಡತಕ್ಕದ್ದೆಂದು ಉಪಬಂಧಿಸಲು ಪ್ರಸ್ತಾಪಿಸಲಾಗಿದೆ.

ವಿಧಾನಸಭೆಯ ಸದಸ್ಯರು ಮುನ್ಸಿಪಲ್ ಕೌನ್ಸಿಲ್‌ನ ಮತ್ತು ಅದರ ಸ್ಥಾಯೀ ಸಮಿತಿಗಳ ಸಭೆಗಳಲ್ಲಿ ಭಾಗವಹಿಸಲು ಸಾಧ್ಯವಾಗುವಂತೆ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ. ಆದಾಗ್ಯೂ, ಅವರು ಕೌನ್ಸಿಲ್‌ನಲ್ಲಿ ಅಥವಾ ಸ್ಥಾಯೀ ಸಮಿತಿಯಲ್ಲಿನ ಯಾವುದೇ ಚುನಾಯಿತ ಸ್ಥಾನಕ್ಕೆ ಮತ ಚಲಾಯಿಸುವ ಅಥವಾ ಸ್ಪರ್ಧಿಸುವ ಹಕ್ಕು ಇರುವುದಿಲ್ಲ.

ಮುನ್ಸಿಪಲ್ ಕೌನ್ಸಿಲ್‌ನ ಅಧ್ಯಕ್ಷರು ಅಥವಾ ಉಪಾಧ್ಯಕ್ಷರು, ತಮ್ಮ ವಿರುದ್ಧ ಮಂಡಿಸಿರುವ ಅವಿಶ್ವಾಸ ನಿರ್ಣಯದ ಚರ್ಚೆಯಲ್ಲಿ ಕೌನ್ಸಿಲ್‌ನ ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದಲ್ಲವೆಂದು ಉಪಬಂಧಿಸಲು ಪ್ರಸ್ತಾವಿಸಲಾಗಿದೆ. ಆದಾಗ್ಯೂ, ಅವರಿಗೆ ಚರ್ಚೆಯಲ್ಲಿ ಪಾಲ್ಗೊಳ್ಳುವ ಹಕ್ಕು ಹಾಗೂ ಮತ ಚಲಾಯಿಸುವ ಹಕ್ಕು ಇರುತ್ತದೆ.

ಪ್ರಸ್ತುತ, ಕಟ್ಟಡಗಳ ಮತ್ತು ಭೂಮಿಯ ಮೇಲಿನ ತೆರಿಗೆ ಹಾಗೂ ನೀರು ಸರಬರಾಜು ವೆಚ್ಚ ಇವೆರಡೂ ರೂಪದಲ್ಲಿ ಮುನ್ಸಿಪಾಲಿಟಿಗಳು ನೀರಿನ ದರವನ್ನು ವಿಧಿಸುತ್ತಿವೆ. ಉಚ್ಚ ನ್ಯಾಯಾಲಯವು ಹಾಲಿ ಇರುವ ನಿಬಂಧನೆಗೆ ಅನುಸಾರವಾಗಿ ಎರಡೂ ರೂಪಗಳಲ್ಲಿ ನೀರಿನ ದರ ವಿಧಿಸಲು ಅವಕಾಶ ಇಲ್ಲವೆಂದು ತೀರ್ಪು ನೀಡಿದೆ. ಆ ನಿಬಂಧನೆಗೆ ಸೂಕ್ತ ಮಾರ್ಪಾಟುಗಳನ್ನು ಮಾಡುವ ಮೂಲಕ ಎರಡೂ ರೂಪಗಳಲ್ಲಿ ತೆರಿಗೆ ವಿಧಿಸುವುದು ಮತ್ತು ಇದುವರೆಗೆ ಹಾಗೆ ಮಾಡಿರುವ ತೆರಿಗೆ ಸಂಗ್ರಹವನ್ನು ಸಿಂಧುಗೊಳಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಮುನ್ಸಿಪಾಲಿಟಿ ಬಸ್ ನಿಲ್ದಾಣಗಳನ್ನು ಬಳಸುವ ಬಸ್ಸುಗಳ ಮೇಲೆ ವಿಧಿಸಬಹುದಾದ ಗರಿಷ್ಠ ಶುಲ್ಕವನ್ನು ಇಪ್ಪತ್ತೈದು ಪೈಸೆಯಿಂದ ಐದು ರೂಪಾಯಿಗಳಿಗೆ ಹೆಚ್ಚಿಸಲು ಪ್ರಸ್ತಾವಿಸಲಾಗಿದೆ.ವಾಸ್ತವಿಕ ದರವನ್ನು ಬೈಲಾಗಳಲ್ಲಿ ನಿರ್ದಿಷ್ಟಪಡಿಸಲಾಗುತ್ತದೆ.

ಆದ್ದರಿಂದ ಈ ವಿಧೇಯಕ.

(ದಿನಾಂಕ 29ನೇ ಮಾರ್ಚ್ 1984ರ ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ), ಭಾಗ IV-2ಎ ಯಲ್ಲಿ ಸಂಖ್ಯೆ 194 ಎಂದು, ಪುಟ ಸಂಖ್ಯೆ 5ರಲ್ಲಿ ಪ್ರಕಟಿಸಲಾಗಿದೆ)

XIV

1984ರ ತಿದ್ದುಪಡಿ ಅಧಿನಿಯಮ 34.- ಮುನ್ಸಿಪಾಲಿಟಿಗಳಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ, ಇಂಪ್ರೂವ್‌ಮೆಂಟ್ ಬೋರ್ಡ್‌ಗಳಿಗೆ ಹಾಗೂ ಇತರ ಸ್ಥಳೀಯ ಸಂಸ್ಥೆಗಳಿಗೆ ಸೇರಿದ ಭೂಮಿಯನ್ನು ಒತ್ತುವರಿ ಮಾಡಿಕೊಳ್ಳುತ್ತಿರುವ ಸಮಸ್ಯೆಯು ತೀವ್ರ ಸ್ವರೂಪವನ್ನು ಪಡೆಯುತ್ತಿದೆ. ಅಂಥ ಒತ್ತುವರಿಗಳಿಗಾಗಿ ಘೋರ ದಂಡನೆಗಳನ್ನು ವಿಧಿಸುವುದು ಅವಶ್ಯವಾಗಿದೆ.

2. ಮೈಸೂರಿನ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್‌ಗೆ ಗ್ರಾಮ ಪಂಚಾಯಿತಿಗಳಿಗೆ, ತಾಲ್ಲೂಕು ಮಂಡಳಿಗಳಿಗೆ, ಮುನಿಸಿಪಲ್ ಕೌನ್ಸಿಲ್‌ಗಳಿಗೆ, ಮುನ್ಸಿಪಲ್ ಕಾರ್ಪೊರೇಷನ್‌ಗಳಿಗೆ, ಇಂಪ್ರೂವ್‌ಮೆಂಟ್ ಬೋರ್ಡ್‌ಗಳಿಗೆ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಗಳಿಗೆ ಸೇರಿದ ಭೂಮಿಯಲ್ಲಿ ಒತ್ತುವರಿ ಮಾಡಿಕೊಂಡಿದ್ದರೆ ಅದು, ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರವಾಸದಿಂದ ಮತ್ತು ಐದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯವಾದ ಅಪರಾಧವಾಗುತ್ತದೆ ಎಂಬ ಉಪಬಂಧವನ್ನು ಸೇರಿಸಲು ಪ್ರಸ್ತಾವಿಸಲಾಗಿದೆ. ಅಲ್ಲದೆ, ಸದರಿ ಯಾವುದೇ ಸಂಸ್ಥೆಗಳಿಗೆ ಸೇರಿದ ಭೂಮಿಯನ್ನು ಅನಧಿಕೃವಾಗಿ ಅಧಿಭೋಗಕ್ಕೆ ಪಡೆದ ಯಾರೇ ವ್ಯಕ್ತಿಯು ಮತ್ತು ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರನನ್ನು ಹೊರಹಾಕುವ) ಅಧಿನಿಯಮ, 1974ರ 5(1)ನೇ ಪ್ರಕರಣದ ಮೇರೆಗೆ ನೀಡಿದ ಆದೇಶದ ಅನುಸಾರವಾಗಿ, ಅಂಥ ಭೂಮಿಯನ್ನು ತೆರವು ಮಾಡಲು ತಪ್ಪುವ ಯಾರೇ ವ್ಯಕ್ತಿಯು, ಅಪರಾಧ ನಿರ್ಣಯವಾದ ಮೇಲೆ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರವಾಸದಿಂದ ಹಾಗೂ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಮೊದಲ ಅಪರಾಧ ನಿರ್ಣಯದ ದಿನಾಂಕದ ತರುವಾಯ ಅಧಿಭೋಗವು ಮುಂದುವರೆಯುವ

ಪ್ರತಿಯೊಂದು ದಿನಕ್ಕೆ, ಭೂಮಿಯ ಪ್ರತಿ ಎಕರೆಗೆ ಅಥವಾ ಅದರ ಭಾಗಕ್ಕೆ 50 ರೂಪಾಯಿಗಳಿಗೆ ವಿಸ್ತರಿಸಬಹುದಾದ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದೆಂದು ಸಹ ಪ್ರಸ್ತಾವಿಸಲಾಗಿದೆ. ಈ ಅಪರಾಧಗಳನ್ನು ಮಾಡುವುದಕ್ಕೆ ಉದ್ದೇಶಪೂರ್ವಕವಾಗಿ ನೆರವಾಗುವ ಅಥವಾ ದುಷ್ಪ್ರೇರಿಸುವ ವ್ಯಕ್ತಿಯು ಸಹ ಇದೇ ದಂಡನೆಗೆ ಒಳಗಾಗಲು ಹೊಣೆಗಾರನಾಗಿರತಕ್ಕದ್ದೆಂಬ ಉಪಬಂಧವನ್ನು ಸಹ ಈ ಮುಂದಿನ ಶಾಸನಗಳಲ್ಲಿ ಸೇರಿಸಲು ಪ್ರಸ್ತಾವಿಸಲಾಗಿದೆ.

(1) ಮೈಸೂರು ನಗರಾಭಿವೃದ್ಧಿ ಅಧಿನಿಯಮ, 1903.

(2) ಕರ್ನಾಟಕ ಗ್ರಾಮ ಪಂಚಾಯಿತಿಗಳ ಹಾಗೂ ಸ್ಥಳೀಯ ಸಂಸ್ಥೆಗಳ ಅಧಿನಿಯಮ, 1959

(3) ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964.

(4) ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್‌ಗಳ ಅಧಿನಿಯಮ, 1976.

(5) ಕರ್ನಾಟಕ ಇಂಪ್ರೂವ್‌ಮೆಂಟ್ ಬೋರ್ಡ್‌ಗಳ ಅಧಿನಿಯಮ, 1976.

(6) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1976.

3. ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನಾ) ಅಧಿನಿಯಮ, 1974ರ IIIಎ ಅಧ್ಯಾಯದ ಅನ್ವಯವನ್ನು ಇಡೀ ರಾಜ್ಯಕ್ಕೆ ವಿಸ್ತರಿಸಲು ಹಾಗೂ ಈಗಾಗಲೇ ಲೈಸೆನ್ಸ್ ಕೊಡುವ ಪ್ರಾಧಿಕಾರವು ಇಲ್ಲದ ಕಡೆಯಲ್ಲಿ ತಾಲ್ಲೂಕಿನ ತಹಸಿಲ್ದಾರರನ್ನು ಲೈಸೆನ್ಸ್ ನೀಡಿಕೆ ಪ್ರಾಧಿಕಾರಿಯೆಂದು ನಿಯೋಜಿಸಲು ಪ್ರಸ್ತಾವಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ದಿನಾಂಕ 8ನೇ ಫೆಬ್ರವರಿ 1984ರ ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ), ಭಾಗ IV-2ಎ ಯಲ್ಲಿ ಸಂಖ್ಯೆ 104 ಎಂದು ಪುಟ ಸಂಖ್ಯೆ 8-9ರಲ್ಲಿ ಪ್ರಕಟಿಸಲಾಗಿದೆ)

XV

1986ರ ತಿದ್ದುಪಡಿ ಅಧಿನಿಯಮ 33.- ಪ್ರಸ್ತುತ ಮುನ್ಸಿಪಲ್ ಕೌನ್ಸಿಲ್‌ಗಳಲ್ಲಿ, ನೀರು ಸರಬರಾಜು ಯೋಜನೆಗಳನ್ನು ಸಮರ್ಥವಾಗಿ ಅನುಷ್ಠಾನಗೊಳಿಸಲು ಸಾಕಷ್ಟು ಹಣ ಇಲ್ಲ. ಸರ್ಕಾರವು, ನೀರು ಸರಬರಾಜು ಯೋಜನೆಗಳ ನಿರ್ವಹಣಾಕಾರ್ಯವನ್ನು ವಹಿಸಿಕೊಳ್ಳಲು ಹಾಗೂ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಅವುಗಳನ್ನು ಹಂತಹಂತವಾಗಿ ವಹಿಸಿಕೊಡಲು ಪ್ರಸ್ತಾವಿಸಲಾಗಿದೆ. ಆದ್ದರಿಂದ, ಆ ಉದ್ದೇಶಕ್ಕಾಗಿ ಅಗತ್ಯವಾಗಿರುವ ಸಂಪನ್ಮೂಲಗಳನ್ನು ಸಂಗ್ರಹಿಸಲು ಆಸ್ತಿ ತೆರಿಗೆಯ ಮೇಲೆ ಶೇಕಡಾ 10 ರಷ್ಟು ನೀರು ಸರಬರಾಜು ಉಪಕರವನ್ನು ವಿಧಿಸಲು ಪ್ರಸ್ತಾವಿಸಲಾಗಿದೆ.

2. ಸರ್ಕಾರ ಹಾಗೂ ಡಿವಿಷನಲ್ ಕಮಿಷನರ್ ಇವರಿಬ್ಬರೂ ಇದುವರೆಗೆ ಚಲಾಯಿಸುತ್ತಿದ್ದಂಥ ಪುನರೀಕ್ಷಣಾ ಅಧಿಕಾರಗಳನ್ನು ಡಿವಿಷನಲ್ ಕಮಿಷನರ್ ರೊಬ್ಬರಿಗೇ ವಹಿಸಿಕೊಡಲು ಪ್ರಸ್ತಾವಿಸಲಾಗಿದೆ.

3. ಕಮಿಷನರ್ ಗಳು ಹಾಗೂ ಜಿಲ್ಲಾಧಿಕಾರಿಗಳು ಚಲಾಯಿಸುವ ಕೆಲವು ಅಧಿಕಾರಗಳನ್ನು ಪೌರಾಡಳಿತ ಇಲಾಖೆಯ ನಿರ್ದೇಶಕರಿಗೆ ಸರ್ಕಾರವು, ವಹಿಸಿಕೊಡುವುದಕ್ಕಾಗಿ ಸರ್ಕಾರಕ್ಕೆ ಅಧಿಕಾರವನ್ನು ಕೊಡಲು ಉಪಬಂಧಗಳನ್ನು ಕಲ್ಪಿಸಲಾಗಿದೆ.

4. ಕರ್ನಾಟಕ ಜಿಲ್ಲಾ ಪಂಚಾಯತಿಗಳ, ತಾಲ್ಲೂಕು ಪಂಚಾಯತಿ ಸಮಿತಿಗಳ, ಮಂಡಲ ಪಂಚಾಯತಿಗಳ ಹಾಗೂ ನ್ಯಾಯ ಪಂಚಾಯತಿಗಳ ಅಧಿನಿಯಮ, 1983 ಜಾರಿಗೆ ಬಂದ ಕಾರಣದಿಂದಾಗಿ ಅವಶ್ಯಕವಾಗಿರುವ ಕೆಲವು ಬದಲಾವಣೆಗಳನ್ನು ಮಾಡಲು ಸಹ ಈ ಅವಕಾಶವನ್ನು ಬಳಸಿಕೊಳ್ಳಲಾಗಿದೆ.

ಕರ್ನಾಟಕ ವಿಧಾನ ಪರಿಷತ್ ಅಧಿವೇಶನದಲ್ಲಿಲ್ಲದಿದ್ದುರಿಂದ ಮತ್ತು ವಿಷಯವು ಬಹಳ ತುರ್ತಿನದಾಗಿದ್ದುದರಿಂದ, ಕರ್ನಾಟಕ ಮುನ್ಸಿಪಾಲಿಟಿಗಳ (ತಿದ್ದುಪಡಿ) ಅಧ್ಯಾದೇಶ, 1986 (ಕರ್ನಾಟಕ ಅಧ್ಯಾದೇಶ 1986ರ 7) ಇದನ್ನು ಪ್ರಸ್ತಾಪಿಸಲಾಯಿತು ಮತ್ತು ಸದರಿ ಅಧ್ಯಾದೇಶದ ಬದಲಿಗೆ ಈ ವಿಧೇಯಕವನ್ನು ಮಂಡಿಸಬೇಕಾಗಿದೆ.

ಆದ್ದರಿಂದ ಈ ವಿಧೇಯಕ.

(ದಿನಾಂಕ 19ನೇ ಆಗಸ್ಟ್ 1986ರ ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ), ಭಾಗ IV-2ಎ ಯಲ್ಲಿ ಸಂಖ್ಯೆ 625 ಎಂದು, ಪುಟ ಸಂಖ್ಯೆ 8ರಲ್ಲಿ ಪ್ರಕಟಿಸಲಾಗಿದೆ).

XVI

1987ರ ತಿದ್ದುಪಡಿ ಅಧಿನಿಯಮ 20.- ಜಿಲ್ಲಾ ಪರಿಷತ್ತುಗಳ, ಮಂಡಲ ಪಂಚಾಯಿತಿಗಳ ಸದಸ್ಯರುಗಳು ಹಾಗೂ ಮುನ್ಸಿಪಲ್ ಕಾರ್ಪೊರೇಷನ್‌ಗಳ ಮತ್ತು ಸಿಟಿ ಹಾಗೂ ಟೌನ್ ಮುನ್ಸಿಪಲ್ ಕೌನ್ಸಿಲ್‌ಗಳ ಕೌನ್ಸಿಲರ್ ಗಳು, ಯಾವ ಪಕ್ಷದ ಅಭ್ಯರ್ಥಿಗಳಾಗಿ ಸ್ಪರ್ಧಿಸಿ ಗೆದ್ದಿದ್ದರೋ ಆ ಪಕ್ಷದಿಂದ ಇನ್ನೊಂದು ರಾಜಕೀಯ ಪಕ್ಷಕ್ಕೆ ಪಕ್ಷಾಂತರ ಮಾಡುವುದನ್ನು ನಿಷೇಧಿಸುವುದಕ್ಕಾಗಿ ಉಪಬಂಧ ಕಲ್ಪಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. ಸ್ಥಳೀಯ ಸಂಸ್ಥೆಗಳಲ್ಲಿ ಆರೋಗ್ಯಕಾರಿ ರಾಜಕೀಯ ವ್ಯವಸ್ಥೆಯನ್ನು ತರುವ ಉದ್ದೇಶದಿಂದ, ಪಕ್ಷಗಳ ವಿಲೀನದ ಅಥವಾ ವಿಭಜನೆಯ ಪ್ರಕರಣಗಳಲ್ಲಿ ಕೆಲವು ಷರತ್ತುಗಳಿಗೊಳಪಟ್ಟು ಅಂಥ ಕೌನ್ಸಿಲರ್ ಗಳನ್ನು ಅನರ್ಹಗೊಳಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿ ಹಾಗೂ ನ್ಯಾಯ ಪಂಚಾಯಿತಿ ಅಧಿನಿಯಮ, 1983 (ಕರ್ನಾಟಕ ಅಧಿನಿಯಮ 1985ರ 20), ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್‌ಗಳ ಅಧಿನಿಯಮ, 1976 (ಕರ್ನಾಟಕ ಅಧಿನಿಯಮ 1977ರ 14) ಮತ್ತು ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964 (ಕರ್ನಾಟಕ ಅಧಿನಿಯಮ, 1964ರ 22)

- ಇವುಗಳನ್ನು ತಿದ್ದುಪಡಿ ಮಾಡಲು ಈ ಅವಕಾಶವನ್ನು ಬಳಸಿಕೊಳ್ಳಲಾಗಿದೆ.

ಕರ್ನಾಟಕ ವಿಧಾನಸಭೆಯು ಅಧಿವೇಶನದಲ್ಲಿಲ್ಲದಿದ್ದುರಿಂದ ಮತ್ತು ವಿಷಯವು ತುರ್ತಿನದಾಗಿದ್ದುದರಿಂದ ಕರ್ನಾಟಕ ಸ್ಥಳೀಯ ಪ್ರಾಧಿಕಾರಿಗಳ (ಪಕ್ಷಾಂತರ ನಿಷೇಧ) ಅಧ್ಯಾದೇಶ 1986 (ಕರ್ನಾಟಕ ಅಧ್ಯಾದೇಶ 1986ರ ಸಂಖ್ಯೆ 18) ಇದನ್ನು ಪ್ರಖ್ಯಾಪಿಸಲಾಗಿತ್ತು.

ಸದರಿ ಅಧ್ಯಾದೇಶದ ಬದಲಿಗೆ ಈ ವಿಧೇಯಕವನ್ನು ಮುಂಡಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(1987ರ ವಿಧಾನಸಭಾ ವಿಧೇಯಕ ಸಂಖ್ಯೆ 3 ರಿಂದ ಪಡೆಯಲಾಗಿದೆ.)

XVII

1990ರ ತಿದ್ದುಪಡಿ ಅಧಿನಿಯಮ 2.- ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964 ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್‌ಗಳ ಅಧಿನಿಯಮ, 1976 ಮತ್ತು ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿಗಳು ಹಾಗೂ ನ್ಯಾಯ ಪಂಚಾಯಿತಿಗಳ ಅಧಿನಿಯಮ, 1983 - ಇವುಗಳಲ್ಲಿ 18 ವರ್ಷ ವಯಸ್ಸು ತುಂಬಿರುವ ವ್ಯಕ್ತಿಗಳಿಗೆ ಮತ ಚಲಾಯಿಸುವ ಹಕ್ಕನ್ನು ಪ್ರಧಾನ ಮಾಡುವ ಉದ್ದೇಶದಿಂದ ಹೆಚ್ಚುವರಿ ಮತದಾರರ ಪಟ್ಟಿಯನ್ನು ಸಿದ್ಧಪಡಿಸುವುದಕ್ಕಾಗಿ ಉಪಬಂಧಗಳು ಇವೆ.

ಜನತಾ ಪ್ರಾತಿನಿಧ್ಯ ಅಧಿನಿಯಮಕ್ಕೆ ಮಾಡಿರುವ ತಿದ್ದುಪಡಿಗಳಿಗೆ ಅನುಸಾರವಾಗಿ, ವಿಧಾನಸಭಾ ಹಾಗೂ ಸಂಸದೀಯ ಮತ ಕ್ಷೇತ್ರಗಳ ಚುನಾವಣೆಗಾಗಿ ಸಿದ್ಧಪಡಿಸಿರುವ ಮತದಾರರ ಪಟ್ಟಿಯಲ್ಲಿ ಈಗ, ಮತ ಚಲಾಯಿಸಲು ನಿಗದಿಪಡಿಸಿರುವ 18 ವರ್ಷ ವಯಸ್ಸು ತುಂಬಿರುವ ವ್ಯಕ್ತಿಗಳೂ ಇರುತ್ತಾರೆ.

ಈ ಸಂದರ್ಭಗಳಲ್ಲಿ, ಸಮಂಜಸವಾದ ಹಾಗೂ ಆನುಷಂಗಿಕವಾದ ತಿದ್ದುಪಡಿಗಳನ್ನು ಮಾಡುವ ಮೂಲಕ, ಹೆಚ್ಚುವರಿ ಮತದಾರರ ಪಟ್ಟಿಯನ್ನು ಸಿದ್ಧಪಡಿಸಲು ಅಗತ್ಯವಾದ ಉಪಬಂಧಗಳನ್ನು ಬಿಟ್ಟುಬಿಡಲು ನಿರ್ಧರಿಸಲಾಗಿದೆ.

ಕೌನ್ಸಿಲರ್ ಗಳು, ಕಾರ್ಪೊರೇಟರ್ ಗಳು ಮತ್ತು ಜಿಲ್ಲಾ ಪರಿಷತ್ತಿನ ಸದಸ್ಯರುಗಳಿಗೆ ನಿಗದಿತ ಐದು ವರ್ಷಗಳ ಏಕರೀತಿಯ ಪದಾವಧಿ ಇರಬೇಕೆಂದು ಸಹ ಪ್ರಸ್ತಾವಿಸಲಾಗಿದೆ. ತತ್ಪರಿಣಾಮವಾಗಿ ಕೌನ್ಸಿಲರ್ ಗಳ ನಾಲ್ಕು ವರ್ಷಗಳ ಶಾಸನಬದ್ಧ ಕಾಲಾವಧಿಯನ್ನು ಕಾರ್ಪೊರೇಟರ್ ಗಳ ಮತ್ತು ಜಿಲ್ಲಾ ಪರಿಷತ್‌ಗಳ ಸದಸ್ಯರ ಪದಾವಧಿಗೆ ಸರಿಸಮಾನವಾಗಿ ಐದು ವರ್ಷಗಳಿಗೆ ಹೆಚ್ಚಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ದಿನಾಂಕ 20ನೇ ಡಿಸೆಂಬರ್ 1989ರ ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ), ಭಾಗ IV - 2ಎ ಯಲ್ಲಿ ಸಂಖ್ಯೆ 616 ಎಂದು ಪುಟ ಸಂಖ್ಯೆ 5ರಲ್ಲಿ ಪ್ರಕಟಿಸಲಾಗಿದೆ)

XVIII

1990ರ ತಿದ್ದುಪಡಿ ಅಧಿನಿಯಮ 14.- (ಟಿಪ್ಪಣಿ: ಈ ಅಧಿನಿಯಮದ ಮೂಲಕ, ಸಿವಿಲ್ ಸೇವಾ ಅಧಿನಿಯಮವು ಅಧಿನಿಯಮಿತವಾಗಿದೆ. ಅದರಲ್ಲಿ, ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮವೂ ಸೇರಿದಂತೆ, ಕೆಲವು ಅಧಿನಿಯಮಗಳಿಗೆ, ಕೆಲವು ಆನುಷಂಗಿಕ ತಿದ್ದುಪಡಿಗಳನ್ನು ಮಾಡಲಾಗಿದೆ)

XIX

1991ರ ತಿದ್ದುಪಡಿ ಅಧಿನಿಯಮ 22.- ನಗರಪಾಲಿಕೆ ಮತ್ತು ಸಿಟಿ ಅಥವಾ ಟೌನ್ ಮುನಿಸಿಪಲ್ ಕೌನ್ಸಿಲ್‌ಗಳ ಕಛೇರಿಗಳ ಮೇಲೆ ರಾಷ್ಟ್ರಧ್ವಜವನ್ನು ಅಥವಾ ರಾಜ್ಯ ಸರ್ಕಾರವು ಅನುಮೋದಿಸಿರುವ ಧ್ವಜವನ್ನು ಹೊರತುಪಡಿಸಿ ಇತರ ಯಾವುದೇ ಧ್ವಜವನ್ನು ಪ್ರದರ್ಶಿಸುವುದನ್ನು ನಿಷೇಧಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ದಿನಾಂಕ 15ನೇ ಮಾರ್ಚ್ 1991ರ ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ), ಭಾಗ IV-2ಎ ಯಲ್ಲಿ ಸಂಖ್ಯೆ 97 ಎಂದು ಪುಟ ಸಂಖ್ಯೆ 187ರಲ್ಲಿ ಪ್ರಕಟಿಸಲಾಗಿದೆ)

XX

1994ರ ತಿದ್ದುಪಡಿ ಅಧಿನಿಯಮ 36.- ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964ನ್ನು ಸಂವಿಧಾನ (ಎಪ್ಪತ್ನಾಲ್ಕನೇ ತಿದ್ದುಪಡಿ) ಅಧಿನಿಯಮ, 1992ರ ಉಪಬಂಧಗಳಿಗೆ ಅನುಸಾರವಾಗಿರುವಂತೆ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ವಿಧೇಯಕವು, ಇತರ ಅಂಶಗಳ ಜೊತೆಯಲ್ಲಿ ಈ ಮುಂದಿನ ವಿಷಯಗಳಿಗೆ ಉಪಬಂಧವನ್ನು ಕಲ್ಪಿಸುತ್ತದೆ:-

(1) ಜನಸಂಖ್ಯೆ, ಆ ಪ್ರದೇಶದಲ್ಲಿ ಉತ್ಪತ್ತಿಯಾಗುವ ಆದಾಯ, ಕೃಷಿಯೇತರ ಕಾರ್ಯಚಟುವಟಿಕೆಗಳಲ್ಲಿ ಉದ್ಯೋಗದ ಶೇಕಡಾ ಪ್ರಮಾಣ ಮತ್ತು 3ನೇ ಪ್ರಕರಣದಲ್ಲಿ ಹಾಗೂ 349ನೇ ಪ್ರಕರಣದಲ್ಲಿ ಹೇಳಿರುವ ಕೆಲವು ಇತರ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ರಾಜ್ಯಪಾಲರು ಚಿಕ್ಕನಗರ ಪ್ರದೇಶ ಹಾಗೂ ಪರಿವರ್ತನೀಯ ಪ್ರದೇಶಗಳನ್ನು ನಿರ್ದಿಷ್ಟಪಡಿಸುವುದು.

(2) ಮುನಿಸಿಪಲ್ ಕೌನ್ಸಿಲ್ ಹಾಗೂ ಪಟ್ಟಣ ಪಂಚಾಯಿತಿಗಳನ್ನು ರಚಿಸುವುದು.

(3) ಮುನಿಸಿಪಲ್ ಕೌನ್ಸಿಲ್‌ಗಳು ಹಾಗೂ ಪಟ್ಟಣ ಪಂಚಾಯಿತಿಗಳಲ್ಲಿ, ಪರಿಶಿಷ್ಟ ಜಾತಿಗಳಿಗೆ, ಪರಿಶಿಷ್ಟ ಪಂಗಡಗಳಿಗೆ, ಹಿಂದುಳಿದ ವರ್ಗಗಳಿಗೆ ಮತ್ತು ಮಹಿಳೆಯರಿಗೆ ಸ್ಥಾನಗಳನ್ನು ಹಾಗೂ ಅಧ್ಯಕ್ಷರ ಸ್ಥಾನವನ್ನು ಮೀಸಲಿಡುವುದು.

(4) ರಾಜ್ಯ ಚುನಾವಣಾ ಆಯೋಗದಿಂದ ಮತದಾರರ ಪಟ್ಟಿಯ ಸಿದ್ಧತೆ ಹಾಗೂ ಚುನಾವಣೆಯನ್ನು ನಡೆಸುವುದಕ್ಕೆ ಸಂಬಂಧಿಸಿದಂತೆ, ರಾಜ್ಯ ಚುನಾವಣಾ ಆಯೋಗದಿಂದ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣ.

(5) ಮುನಿಸಿಪಲ್ ಕೌನ್ಸಿಲ್‌ಗಳ ಮತ್ತು ಪಟ್ಟಣ ಪಂಚಾಯಿತಿಗಳ ಹಣಕಾಸಿನ ಸ್ಥಿತಿಗತಿಯನ್ನು ಪುನರವಲೋಕಿಸಲು ಮತ್ತು ರಾಜ್ಯಪಾಲರಿಗೆ ಶಿಫಾರಸು ಮಾಡಲು, ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದ ಅಡಿಯಲ್ಲಿ ಹಣಕಾಸು ಆಯೋಗವನ್ನು ರಚಿಸುವುದು.

(6) ಪರಿವರ್ತನೆಗೊಳ್ಳುತ್ತಿರುವ ಪ್ರದೇಶವನ್ನು, ಸಣ್ಣ ನಗರ ಪ್ರದೇಶವನ್ನಾಗಿ ಅಥವಾ ಪಂಚಾಯಿತಿ ಪ್ರದೇಶವನ್ನಾಗಿ ಹಾಗೂ ಪಂಚಾಯಿತಿ ಪ್ರದೇಶವನ್ನು ಪರಿವರ್ತನಗೊಳ್ಳುತ್ತಿರುವ ಪ್ರದೇಶವಾಗಿ ವಿಲೀನಗೊಳಿಸುವುದು ಅಥವಾ ಪರಿವರ್ತಿಸುವುದು.

ಕೆಲವು ಆನುಷಂಗಿಕ ಬದಲಾವಣೆಗಳನ್ನು ಸಹ ಮಾಡಲಾಗಿದೆ.

ವಿಷಯವು ತುರ್ತಿನದ್ದಾಗಿದ್ದುದರಿಂದ ಮತ್ತು ಕರ್ನಾಟಕ ವಿಧಾನ ಸಭೆಯು ಅಧಿವೇಶನದಲಿಲ್ಲದಿದ್ದುದರಿಂದ, ಕರ್ನಾಟಕ ಮುನಿಸಿಪಾಲಿಟಿಗಳ (ತಿದ್ದುಪಡಿ) ಅಧ್ಯಾದೇಶ, 1994ನ್ನು ಪ್ರಖ್ಯಾಪಿಸಲಾಗಿತ್ತು.

ಸದರಿ ಅಧ್ಯಾದೇಶದ ಬದಲಿಗೆ ಈ ವಿಧೇಯಕವನ್ನು ಮಂಡಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(1994ರ ವಿಧಾನ ಪರಿಷತ್ ವಿಧೇಯಕ ಸಂಖ್ಯೆ 1 ರಿಂದ ಪಡೆಯಲಾಗಿದೆ).

XXI

1995ರ ತಿದ್ದುಪಡಿ ಅಧಿನಿಯಮ 20.- ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964 (ಕನಾಟಕ ಅಧಿನಿಯಮ 1964ರ 22)ರ 9ನೇ ಪ್ರಕರಣವು, ಸ್ಥಳೀಯ ಪ್ರದೇಶವನ್ನು ಚಿಕ್ಕನಗರ ಪ್ರದೇಶವಾಗಿ ರಚಿಸುವ ಅಥವಾ ಒಂದು ನಿರ್ದಿಷ್ಟ ರೀತಿಯಲ್ಲಿ ಚಿಕ್ಕ ನಗರ ಪ್ರದೇಶದ ಎಲ್ಲೆಗಳನ್ನು ಬದಲಾಯಿಸುವ ಅಥವಾ ಸಂದರ್ಭಾನುಸಾರ ಸ್ಥಳೀಯ ಪ್ರದೇಶವು ಚಿಕ್ಕ ನಗರ ಪ್ರದೇಶವಾಗಿರುವುದು ಕೊನೆಗೊಳ್ಳತಕ್ಕದ್ದೆಂದು ಘೋಷಿಸುವ ಪ್ರಸ್ತಾವಕ್ಕೆ ಸಂಬಂಧಪಟ್ಟಂತೆ ಎಲ್ಲ ವ್ಯಕ್ತಿಗಳು ಸಲ್ಲಿಸುವ ಯಾವುದೇ ಆಕ್ಷೇಪಣೆಗಳನ್ನು ಪರಿಶೀಲಿಸಲು ಎರಡು ತಿಂಗಳ ಕಾಲಾವಕಾಶವನ್ನು ನೀಡುತ್ತದೆ. ಯಾವುದೇ ನಗರ ಪ್ರದೇಶಗಳನ್ನು ಚಿಕ್ಕ ನಗರ ಪ್ರದೇಶವೆಂದು ನಿರ್ದಿಷ್ಟಪಡಿಸುವ ಕಾರ್ಯವು ಮುನಿಸಿಪಲ್ ಕೌನ್ಸಿಲ್‌ನ ಇಡೀ ಚುನಾವಣಾ ಪ್ರಕ್ರಿಯೆಯಲ್ಲಿ ಮೊದಲ ಹೆಜ್ಜೆಯಾಗಿದೆ. ಕೌನ್ಸಿಲರ್ ಗಳ ಪದಾವಧಿಯು ಮುಕ್ತಾಯವಾದ ಪರಿಣಾಮವಾಗಿ, ಮುನಿಸಿಪಲ್ ಕೌನ್ಸಿಲ್‌ಗೆ ಆಡಳಿತಗಾರರನ್ನು ನೇಮಕ ಮಾಡಿಕೊಳ್ಳಲಾಗಿದೆ ಮತ್ತು ಹೊಸ ನಿಕಾಯಗಳ ರಚನೆಗೆ ಅಂಥ ಚುನಾವಣೆಯನ್ನು, ಆದಷ್ಟು ಬೇಗನೆ ಪೂರ್ಣಗೊಳಿಸಬೇಕಾಗುತ್ತದೆ. ಸದರಿ ಪ್ರಕರಣದಲ್ಲಿ ನೀಡಿರುವ ಎರಡು ತಿಂಗಳ ಅವಧಿಯು ತುಂಬಾ ದೀರ್ಘವಾಗಿರುವುದರಿಂದ 'ಎರಡು ತಿಂಗಳ' ಅವಧಿಯನ್ನು "ಮೂವತ್ತು ದಿನಗಳಿಗೆ ತಗ್ಗಿಸಲು ಸದರಿ ಪ್ರಕರಣವನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(1995ರ ವಿಧಾನಸಭಾ ವಿಧೇಯಕ ಸಂಖ್ಯೆ 24 ರಿಂದ ಪಡೆಯಲಾಗಿದೆ).

XXII

1995ರ ತಿದ್ದುಪಡಿ ಅಧಿನಿಯಮ 24.- ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ,-

(i) ಹಾಲಿ ಇರುವ ಹಿಂದುಳಿದ ವರ್ಗಗಳ ವ್ಯಾಖ್ಯಾನದ ಬದಲಿಗೆ ಪಂಚಾಯತ್‌ರಾಜ್ ಅಧಿನಿಯಮ, 1993ರಲ್ಲಿ ಒಳಗೊಂಡಿರುವ "ಹಿಂದುಳಿದ ವರ್ಗಗಳ" ವ್ಯಾಖ್ಯಾನದ ಮಾದರಿಯಲ್ಲಿ ವ್ಯಾಖ್ಯಾನವನ್ನು ಪ್ರತಿಯೋಜಿಸುವುದು;

(ii) ಹಿಂದುಳಿದ ವರ್ಗಗಳಿಗೆ ಮೀಸಲಾಗಿರುವ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಸ್ಥಾನಗಳಲ್ಲಿ 'ಎ' ಪ್ರವರ್ಗಕ್ಕೆ ಶೇಕಡಾ ಎಂಭತ್ತರಷ್ಟು ಹಾಗೂ 'ಬಿ' ಪ್ರವರ್ಗಕ್ಕೆ ಉಳಿದ ಶೇಕಡಾ ಇಪ್ಪತ್ತರಷ್ಟನ್ನು ಮೀಸಲಿಡುವುದು;

(iii) ಮುನಿಸಿಪಲ್ ಕೌನ್ಸಿಲ್‌ಗಳು ಹಾಗೂ ಪಟ್ಟಣ ಪಂಚಾಯಿತಿಗಳಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಿಟ್ಟಿರುವಸ್ಥಾನಗಳಲ್ಲಿ 'ಎ' ವರ್ಗಕ್ಕೆ ಶೇಕಡಾ ಎಂಭತ್ತರಷ್ಟನ್ನು ಹಾಗೂ 'ಬಿ' ವರ್ಗಕ್ಕೆ ಉಳಿದ ಶೇಕಡಾ ಇಪ್ಪತ್ತರಷ್ಟನ್ನು ಮೀಸಲಿಡುವುದು;

(iv) ರಿಟರ್ನಿಂಗ್ ಆಫೀಸರುಗಳು, ಸಹಾಯಕ ರಿಟರ್ನಿಂಗ್ ಆಫೀಸರ್ ಗಳು, ಪ್ರಿಸೈಡಿಂಗ್ ಆಫೀಸರ್ ಗಳು, ಮೊದಲಾದ ಅಧಿಕಾರಿಗಳು ರಾಜ್ಯ ಚುನಾವಣಾ ಆಯೋಗದ ನಿಯಂತ್ರಣ, ಅಧೀಕ್ಷಣೆ ಮತ್ತು ಶಿಸ್ತಿಗೆ ಒಳಪಡಬೇಕಾದ ರೀತಿಯಲ್ಲಿ ಅಂಥ ಅಧಿಕಾರಿಗಳನ್ನು ಚುನಾವಣೆ ಪ್ರಾರಂಭವಾಗುವ ಅವಧಿಯಿಂದ, ಚುನಾವಣಾ ಫಲಿತಾಂಶದ ಘೋಷಣೆಯ ದಿನಾಂಕದೊಂದಿಗೆ ಅಂತ್ಯವಾಗುವ ಅವಧಿಯವರೆಗೆ ರಾಜ್ಯ ಚುನಾವಣಾ ಆಯೋಗಕ್ಕೆ ಭಾವಿತ ಪ್ರತಿಯೋಜನೆ ಮಾಡಲು ಉಪಬಂಧ ಕಲ್ಪಿಸುವುದು.

ಆದ್ದರಿಂದ ಈ ವಿಧೇಯಕ.

(1995ರ ವಿಧಾನಸಭಾ ವಿಧೇಯಕ ಸಂಖ್ಯೆ 26 ರಿಂದ ಪಡೆಯಲಾಗಿದೆ)

XXIII

1998ರ ತಿದ್ದುಪಡಿ ಅಧಿನಿಯಮ 24.- ಲೋಕಸಭೆ ಹಾಗೂ ವಿಧಾನಸಭೆಯ ಸದಸ್ಯರುಗಳು, ಸಂದರ್ಭಾನುಸಾರ, ಮುನ್ಸಿಪಲ್ ಏರಿಯಾದ ಅಥವಾ ನಗರದ ವ್ಯಾಪ್ತಿಯೊಳಗೆ ಮತದಾರರಾಗಿ ನೋಂದಣಿಯಾಗತಕ್ಕದೆಂಬ ಅಗತ್ಯತೆಯನ್ನು ರದ್ದುಪಡಿಸಲು ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ, 1964ರ 11ನೇ ಪ್ರಕರಣದ ಹಾಗೂ ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್‌ಗಳ

ಅಧಿನಿಯಮ, 1976ರ 7ನೇ ಪ್ರಕರಣದ ಉಪಬಂಧಗಳನ್ನು ಭಾರತ ಸಂವಿಧಾನದ 243ಆರ್ ಅನುಚ್ಛೇದಕ್ಕೆ ಅನುಗುಣವಾಗಿರುವ ಹಾಗೆ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ದಿನಾಂಕ 15ನೇ ಮೇ 1996ರ ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ), ಭಾಗ IV-2ಎ ಯಲ್ಲಿ ಸಂಖ್ಯೆ 600 ಎಂದು ಪುಟ ಸಂಖ್ಯೆ 2ರಲ್ಲಿ ಪ್ರಕಟಿಸಲಾಗಿದೆ)

XXIV

2000ರ ತಿದ್ದುಪಡಿ ಅಧಿನಿಯಮ 22.- ಕಾಲಕಾಲಕ್ಕೆ, ಕರ್ನಾಟಕ ಕಾನೂನುಗಳ ಸಂಹಿತೆಯ ಅಪ್ ಟು ಡೇಟ್ ಸಂಪುಟಗಳನ್ನು ಸಿದ್ಧಪಡಿಸುವುದು ಮತ್ತು ಬಳಕೆ ಮುಗಿದಿರುವ ಎಲ್ಲಾ ಅಧಿನಿಯಮಗಳನ್ನು ಮತ್ತು ತಿದ್ದುಪಡಿ ಅಧಿನಿಯಮಗಳನ್ನು ನಿರಸನಗೊಳಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಮೇಲಿನ ಉದ್ದೇಶಕ್ಕಾಗಿ, ಸರ್ಕಾರವು, ಏಕ ಸದಸ್ಯ ಸಮಿತಿಯನ್ನು ರಚಿಸಿದೆ. ಸಮಿತಿಯು, 01.01.1956 ರಿಂದ 31.12.1998ರ ವರೆಗಿನ ಅವಧಿಯ ಕರ್ನಾಟಕ ಅಧಿನಿಯಮಗಳನ್ನು ಪುನರವಲೋಕಿಸಿ ಈ ಮುಂದಿನ ಬಗೆಗಳ ಅಧಿನಿಯಮಗಳನ್ನು ನಿರಸನಗೊಳಿಸಲು ಬಯಸುವ "ನಿರಸನಗೊಳಿಸುವ ಮತ್ತು ತಿದ್ದುಪಡಿ ಮಾಡುವ ವಿಧೇಯಕ, 2000"ನ್ನು ಮಂಡಿಸಲು ಪ್ರಸ್ತಾಪಿಸಿದೆ,-

(i) ಕರ್ನಾಟಕ ಅಧಿನಿಯಮಗಳನ್ನು ತಿದ್ದುಪಡಿ ಮಾಡಿದಂಥ ಈಗ ಜಾರಿಯಲ್ಲಿರುವ ಅಥವಾ ಇಲ್ಲದಿರುವ ಅಧಿನಿಯಮಗಳು;

(ii) ಯಾವ ಅಧಿನಿಯಮಗಳು ಪ್ರಾದೇಶಿಕ ಅಧಿನಿಯಮಗಳನ್ನು ತಿದ್ದುಪಡಿ ಮಾಡಿವೆಯೋ ಹಾಗೂ ಜಾರಿಯಲ್ಲಿ ಇಲ್ಲವೋ ಆ ಅಧಿನಿಯಮಗಳು;

(iii) ಬಳಕೆ ಮುಗಿದಿರುವ ಅಧಿನಿಯಮಗಳಾದ ಧನವಿನಿಯೋಗ ಅಧಿನಿಯಮಗಳು;

(iv) ನ್ಯಾಯಾಲಯವು ರದ್ದುಪಡಿಸಿರುವ ಅಥವಾ ಅವಶ್ಯಕ ಇಂಗಿತದ ಮೂಲಕ ರದ್ದುಪಡಿಸಿರುವ ಅಧಿನಿಯಮಗಳು;

(v) ಕೇಂದ್ರ ಅಧಿನಿಯಮಗಳ ಪರಿಣಾಮದಿಂದಾಗಿ ನಿರಸನಗೊಂಡ ಅಧಿನಿಯಮಗಳು; ಮತ್ತು

(vi) ತಾತ್ಕಾಲಿಕವಾಗಿದ್ದ ಅಧಿನಿಯಮಗಳು ಹಾಗೂ ಬಳಕೆ ಮುಗಿದು ಹೋಗಿರುವ ಅಧಿನಿಯಮಗಳು.

ಈ ವಿಧೇಯಕದಲ್ಲಿ,-

(i) ಕೇಂದ್ರ ಅಧಿನಿಯಮಗಳನ್ನು ತಿದ್ದುಪಡಿ ಮಾಡುವ ಅಧಿನಿಯಮಗಳು ಹಾಗೂ ಜಾರಿಯಲ್ಲಿರುವ ಪ್ರಾದೇಶಿಕ ಅಧಿನಿಯಮಗಳು; ಮತ್ತು

(ii) ಈಗಾಗಲೇ ವ್ಯಕ್ತವಾಗಿ ನಿರಸಿತವಾಗಿರುವ ಅಧಿನಿಯಗಳು.

- ಸೇರಿಲ್ಲ.

ಬಳಕೆ ಮುಗಿದು ಹೋಗಿರುವ ಎಲ್ಲಾ ಅಧಿನಿಯಮಗಳನ್ನು ಮತ್ತು ತಿದ್ದುಪಡಿ ಅಧಿನಿಯಮಗಳನ್ನು ನಿರಸನಗೊಳಿಸಲು ಮತ್ತು ಶಾಸನಗಳ ಪುಸ್ತಕದಿಂದ ತೆಗೆದುಹಾಕಲು ಈ ವಿಧೇಯಕವನ್ನು ಮಂಡಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2000ದ ವಿಧಾನಸಭಾ ವಿಧೇಯಕ ಸಂಖ್ಯೆ 17 ರಿಂದ ಪಡೆಯಲಾಗಿದೆ)

XXV

2001ರ ತಿದ್ದುಪಡಿ ಅಧಿನಿಯಮ 28.- ಆಸ್ತಿ ತೆರಿಗೆ ನಿರ್ಧರಣೆಯ ಪ್ರಕ್ರಿಯೆಯನ್ನು ಸರಳಗೊಳಿಸಲು ಸ್ವಯಂ ಆಸ್ತಿ ತೆರಿಗೆ ನಿರ್ಧರಣೆ ಪದ್ಧತಿಯನ್ನು ಪ್ರಾರಂಭಿಸಲು ಮತ್ತು ಈ ಮುಂದಿನ ವಿಷಯಗಳಿಗಾಗಿ ಉಪಬಂಧ ಕಲ್ಪಿಸಲು ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1946ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

(1) ಆಸ್ತಿ ತೆರಿಗೆ ನಿರ್ಧರಣೆಯ ಉದ್ದೇಶಕ್ಕಾಗಿ, ತಿಂಗಳಿನಿಂದ ತಿಂಗಳಿಗೆ ಅಥವಾ ವರ್ಷದಿಂದ ವರ್ಷಕ್ಕೆ ಕಟ್ಟಡವನ್ನು ಬಾಡಿಗೆಗೆ ಕೊಟ್ಟರೆ ವರ್ಷ ವರ್ಷಕ್ಕೆ ಇಂತಿಷ್ಟು ಒಟ್ಟು ಬಾಡಿಗೆ ಬರುತ್ತದೆಂದು

ಸಮಂಜಸವಾಗಿ ನಿರೀಕ್ಷಿಸಬಹುದೋ ಆ ಕಟ್ಟಡದ ಒಟ್ಟು ವಾರ್ಷಿಕ ಬಾಡಿಗೆಯ ಆಧಾರದ ಮೇಲೆ ಪ್ರಮಾಣಾನುಸಾರ ಮೌಲ್ಯವನ್ನು ನಿರ್ಧರಿಸುವ ಪದ್ಧತಿಯನ್ನು ರದ್ದುಗೊಳಿಸುವುದು;

(2) ಭೂಮಿಯ ಅಂದಾಜು ಮಾರುಕಟ್ಟೆ ಮೌಲ್ಯ ಹಾಗೂ ಕಟ್ಟಡ ನಿರ್ಮಾಣದ ಅಂದಾಜು ವೆಚ್ಚವನ್ನು ಗಮನದಲ್ಲಿಟ್ಟುಕೊಂಡು, ತೆರಿಗೆ ವಿಧಿಸಬಹುದಾದ ಬಂಡವಾಳ ಮೌಲ್ಯದ ಆಧಾರದ ಮೇಲೆ ಆಸ್ತಿ ತೆರಿಗೆ ನಿರ್ಧರಣೆ ಮಾಡುವ ಪದ್ಧತಿಯನ್ನು ಪ್ರಾರಂಭಿಸುವುದು;

(3) ಸ್ಥಳ, ಕಟ್ಟಡ ನಿರ್ಮಾಣ ಮಾಡಿರುವ ರೀತಿ, ಸ್ವತ್ತಿನ ಬಳಕೆಯ ಸ್ವರೂಪ, ಭೂಮಿಯ ವಿಸ್ತೀರ್ಣ, ಕಟ್ಟಡದ ಮೇಲುಪಾಯದ ವಿಸ್ತೀರ್ಣ ಹಾಗೂ ಕಟ್ಟಡದ ವಯಸ್ಸು ಇವುಗಳಿಗೆ ಸಂಬಂಧಿಸಿದಂತೆ ಮುನ್ಸಿಪಾಲಿಟಿಗಳು ನಿಗದಿಪಡಿಸಿರುವ ತೆರಿಗೆ ವಿಧಿಸಬಹುದಾದ ಬಂಡವಾಳ ಮೌಲ್ಯದ ಅಂಥ ಶೇಕಡಾ ಪ್ರಮಾಣದ ಪ್ರಕಾರ ಆಸ್ತಿ ತೆರಿಗೆಯನ್ನು ವಿಧಿಸುವುದು;

(4) ಮಾಲೀಕರು ಅಥವಾ ಅಧಿಭೋಗದಾರರು ಆಸ್ತಿ ತೆರಿಗೆ ಸಂದಾಯ ಮಾಡುವುದಕ್ಕಾಗಿ ಮತ್ತು ವಿವರ ಪಟ್ಟಿಕೆಗಳನ್ನು ಸಲ್ಲಿಸುವುದಕ್ಕಾಗಿ ಉಪಬಂಧ ಕಲ್ಪಿಸುವುದು;

(5) ನಿರ್ದಿಷ್ಟಪಡಿಸಿದ ಅವಧಿಯೊಳಗೆ ವಿವರಪಟ್ಟಿಕೆಗಳನ್ನು ಸಲ್ಲಿಸುವ ಮಾಲೀಕರುಗಳಿಗೆ ತೆರಿಗೆಯ ಶೇಕಡಾ ಐದರ ದರದಲ್ಲಿ ಪ್ರೋತ್ಸಾಹ ರೂಪದ ರಿಯಾಯಿತಿಯನ್ನು ನೀಡಲು ಉಪಬಂಧ ಕಲ್ಪಿಸುವುದು;

(6) ವಿವರ ಪಟ್ಟಿಕೆಗಳನ್ನು ಸಲ್ಲಿಸಲು ತಪ್ಪಿದ ಸಂದರ್ಭಗಳಲ್ಲಿ ತೆರಿಗೆಯ ಶೇಕಡಾ ಐವತ್ತರ ದರದಲ್ಲಿ ದಂಡವನ್ನು ವಿಧಿಸುವುದು;

(7) ಆಸ್ತಿ ತೆರಿಗೆಯಿಂದ ವಿನಾಯಿತಿ ಪಡೆದ ಆಸ್ತಿಗಳಿಗೆ ಸಂಬಂಧಪಟ್ಟಂತೆ, ಸೇವಾ ವೆಚ್ಚಗಳನ್ನು ಸಂಗ್ರಹಿಸುವುದು.

(8) ಕಾನೂನುಬಾಹಿರ ಕಟ್ಟಡ ನಿರ್ಮಾಣಕ್ಕಾಗಿ ಕೈಗೊಳ್ಳಬೇಕಾದ ಯಾವುದೇ ನಡವಳಿಗಳಿಗೆ ಅಥವಾ ಕ್ರಮಕ್ಕೆ ಬಾಧಕವಾಗದಂತೆ ಕಾನೂನುಬಾಹಿರ ಕಟ್ಟಡಗಳಿಗೆ ವಿಧಿಸಬಹುದಾದ ಆಸ್ತಿ ತೆರಿಗೆಯ ಎರಡರಷ್ಟಕ್ಕೆ ಸಮಾನವಾದ ದಂಡವನ್ನು ವಸೂಲಿ ಮಾಡುವುದು;

(9) ಸಾರ್ವಜನಿಕ ಮಾಹಿತಿಗಾಗಿ ಆಸ್ತಿ ತೆರಿಗೆ ರಿಜಿಸ್ಟರನ್ನು ಪ್ರಕಟಿಸುವುದು;

(10) ಭೂಮಿ ಮತ್ತು ಕಟ್ಟಡಗಳ ಸಮೀಕ್ಷೆಯನ್ನು ಕೈಗೊಳ್ಳುವುದು ಹಾಗೂ ಆಸ್ತಿ ರಿಜಿಸ್ಟರನ್ನು ಸಿದ್ಧಪಡಿಸುವುದು.

ಕೆಲವು ಇತರ ಆನುಷಂಗಿಕ ಮತ್ತು ಪ್ರಾಸಂಗಿಕ ತಿದ್ದುಪಡಿಗಳನ್ನು ಸಹ ಮಾಡಲಾಗಿದೆ

ಆದ್ದರಿಂದ ಈ ವಿಧೇಯಕ.

(ವಿಧಾನಸಭಾ ವಿಧೇಯಕ ಸಂಖ್ಯೆ 2000ದ 31 ರಿಂದ ಪಡೆಯಲಾಗಿದೆ)

XXVI

2003ರ ತಿದ್ದುಪಡಿ ಅಧಿನಿಯಮ 8.- 2003-04ನೇ ಸಾಲಿನ ಬಜೆಟ್ ಭಾಷಣದಲ್ಲಿ ಮಾಡಿದ ಪ್ರಸ್ತಾವನೆಗಳನ್ನು ಜಾರಿಗೆ ತರಲು, ಕರ್ನಾಟಕ ಸ್ಟ್ಯಾಂಪ್ ಅಧಿನಿಯಮ, 1957, ಕರ್ನಾಟಕ ಮುನ್ಸಿಪಾಲಿಟಿಗಳಅಧಿನಿಯಮ, 1964, ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್‌ಗಳ ಅಧಿನಿಯಮ, 1976 ಮತ್ತು ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ, 1993 ಇವುಗಳನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ

[2003ರ ವಿಧಾನಸಭಾ ವಿಧೇಯಕ ಸಂಖ್ಯೆ 8]

(ಭಾರತ ಸಂವಿಧಾನ ಏಳನೇ ಅನುಸೂಚಿಯ IIನೇ ಪಟ್ಟಿಯ 5 ಮತ್ತು 63ನೇ ನಮೂದುಗಳು)

XXVII

2003ರ ತಿದ್ದುಪಡಿ ಅಧಿನಿಯಮ 23.- ಮುನಿಸಿಪಲ್ ಕೌನ್ಸಿಲ್‌ಗಳು ಹಾಗೂ ಪಟ್ಟಣ ಪಂಚಾಯಿತ್‌ಗಳಲ್ಲಿನ ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ವ್ಯಕ್ತಿಗಳಿಗೆ ಕನಿಷ್ಠ ಪ್ರಾತಿನಿಧ್ಯ ನೀಡುವುದಕ್ಕಾಗಿ ಉಪಬಂಧ ಕಲ್ಪಿಸಲು, ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964ಕ್ಕೆ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಪ್ರತಿಯೊಂದು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಲೋಕಸಭೆಯ ಸದಸ್ಯರು ಹಾಗೂ ರಾಜ್ಯ ವಿಧಾನಸಭೆಯ ಸದಸ್ಯರು ಸಂಬಂಧಪಟ್ಟ ಪುರಸಭೆಗಳಲ್ಲಿ ಪ್ರಾತಿನಿಧ್ಯ ಹೊಂದಿರಬೇಕೆಂದು ಸಂವಿಧಾನದ 74ನೇ ತಿದ್ದುಪಡಿಯು ಉಪಬಂಧ ಕಲ್ಪಿಸುತ್ತದೆ. 1994ರಲ್ಲಿ ಅಧಿನಿಯಮಗಳನ್ನು ತಿದ್ದುಪಡಿ ಮಾಡಿದಾಗ, ಲೋಕಸಭಾ ಸದಸ್ಯರಿಗೆ ಮತ್ತು ರಾಜ್ಯ ವಿಧಾನಸಭಾ ಸದಸ್ಯರಿಗೆ ಹಾಗೂ

ಪರಿಷತ್ತಿನ ಸದಸ್ಯರುಗಳಿಗೆ, ಪುರಸಭೆಗಳಲ್ಲಿ ಚರ್ಚೆಗಳಲ್ಲಿ ಭಾಗವಹಿಸುವುದಕ್ಕೆ ಮತ್ತು ಕೌನ್ಸಿಲ್‌ನಲ್ಲಿ ಮತ ಚಲಾಯಿಸುವುದಕ್ಕೆ ಅನುಮತಿಸುವುದನ್ನು ಖಚಿತಪಡಿಸಿಕೊಳ್ಳಲು 11ನೇ ಪ್ರಕರಣದ ಉಪಬಂಧಗಳನ್ನು ತಿದ್ದುಪಡಿ ಮಾಡಲಾಯಿತು. ಈ ನಿರ್ದಿಷ್ಟ ಉಪಬಂಧವನ್ನು, ಪಟ್ಟಣ ಪಂಚಾಯಿತಿಗಳಿಗೆ ಸಂಬಂಧಪಟ್ಟಂತೆ ಸೇರ್ಪಡೆ ಮಾಡಿರಲಿಲ್ಲ, ಆದ್ದರಿಂದ ಆ ಉದ್ದೇಶಕ್ಕಾಗಿ 352ನೇ ಪ್ರಕರಣವನ್ನು ತಿದ್ದುಪಡಿ ಮಾಡಲು ಪ್ರಸ್ತಾವಿಸಲಾಗಿದೆ.

ಆದ್ದರಿಂದ ಈ ವಿಧೇಯಕ

[2002ರ ವಿಧಾನಸಭಾ ವಿಧೇಯಕ ಸಂಖ್ಯೆ 20]

[ಭಾರತ ಸಂವಿಧಾನದ ಏಳನೇ ಅನುಸೂಚಿಯ IIIನೇ ಪಟ್ಟಿಯ 5ನೇ ನಮೂದು]

XXVIII

2003ರ ತಿದ್ದುಪಡಿ ಅಧಿನಿಯಮ 24.- ಕೈಗಾರಿಕಾ ಉಪನಗರವನ್ನು ನಿರ್ದಿಷ್ಟಪಡಿಸುವುದಕ್ಕಾಗಿ ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964ರ 3ನೇ ಪ್ರಕರಣದ (1)ನೇ ಉಪ-ಪ್ರಕರಣವು ಹಾಗೂ (3)ನೇ ಉಪ-ಪ್ರಕರಣದ ಎರಡನೇ ಪರಂತುಕವು ಉಪಬಂಧ ಕಲ್ಪಿಸುತ್ತದೆ. ಸದರಿ ಉಪಬಂಧವನ್ನು ಬಿಟ್ಟುಬಿಡುವುದಕ್ಕಾಗಿ ಮತ್ತು ಕೈಗಾರಿಕಾ ಉಪನಗರವನ್ನು ಹಾಗೂ ಇತರ ಸಂಬಂಧಪಟ್ಟ ವಿಷಯಗಳನ್ನು ನಿರ್ದಿಷ್ಟಪಡಿಸುವುದಕ್ಕಾಗಿ ಹಾಗೂ ಆ ಬಗ್ಗೆ ವಿಸ್ತೃತವಾದ ಉಪಬಂಧಗಳನ್ನು ಮಾಡಲು ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964ರಲ್ಲಿ ಒಂದು ಪ್ರತ್ಯೇಕವಾದ ಅಧ್ಯಾಯವನ್ನು ಸೇರಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. ಆದ್ದರಿಂದ, ಈ ಮುಂದಿನ ವಿಷಯಗಳಿಗಾಗಿ ಉಪಬಂಧ ಕಲ್ಪಿಸಲು ಹೊಸ XVI-ಎ ಅಧ್ಯಾಯವನ್ನು ಸೇರಿಸಲು ಪ್ರಸ್ತಾವಿಸಲಾಗಿದೆ

(i) ಪ್ರಸ್ತಾವಿತ 364ಎ ಪ್ರಕರಣದಲ್ಲಿ ನಮೂದಿಸಿರುವ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಕೈಗಾರಿಕಾ ಉಪನಗರವನ್ನು ನಿರ್ದಿಷ್ಟಪಡಿಸುವುದು;

(ii) ಕೈಗಾರಿಕಾ ಉಪನಗರ ಪ್ರಾಧಿಕಾರದ ರಚನೆ ಹಾಗೂ ಅದರ ಸಂಯೋಜನೆ;

(iii) ಅಧ್ಯಕ್ಷರ ಮತ್ತು ಇತರ ಸದಸ್ಯರುಗಳ ಪದಾವಧಿ;

(iv) ಕೈಗಾರಿಕಾ ಉಪನಗರ ಪ್ರಾಧಿಕಾರದ ಕಾರ್ಯನಿರ್ವಹಣೆ ಮತ್ತು ಅದರ ಪ್ರಕಾರ್ಯಗಳು ಹಾಗೂ ಕರ್ತವ್ಯಗಳು.

(v) 175 ರಿಂದ 275ರ ವರೆಗಿನ ಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿರುವ ಮುನ್ಸಿಪಲ್ ಕೌನ್ಸಿಲ್‌ನ ಅಧಿಕಾರಗಳನ್ನು ಕೈಗಾರಿಕಾ ಉಪನಗರ ಪ್ರಾಧಿಕಾರಕ್ಕೆ ಪ್ರದಾನ ಮಾಡುವುದು;

(vi) ಮುನಿಸಿಪಲ್ ಕೌನಿಲ್‌ಗೆ ಅನ್ವಯವಾಗುವ ಅಧಿನಿಯಮದ ಉಪಬಂಧಗಳನ್ನು, ನಿಯಮಗಳನ್ನು ಮತ್ತು ಬೈಲಾಗಳನ್ನು ಕೈಗಾರಿಕಾ ಉಪನಗರ ಪ್ರಾಧಿಕಾರಕ್ಕೆ ವಿಸ್ತರಿಸಲು ಅಧಿಕಾರ;

(vii) ಕೈಗಾರಿಕಾ ಉಪನಗರ ಪ್ರಾಧಿಕಾರದ ನಿಧಿಗಳು, ಆಯವ್ಯಯ ಮತ್ತು ಲೆಕ್ಕಪತ್ರಗಳು;

(viii) ಆಸ್ತಿ ತೆರಿಗೆಯನ್ನು ವಿಧಿಸಲು ಹಾಗೂ ಸಂಗ್ರಹಿಸಲು ಅಧಿಕಾರ.

(ix) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯನ್ನು ಮತ್ತು ಇತರ ಅಧಿಕಾರಿಗಳನ್ನು ಹಾಗೂ ಸಿಬ್ಬಂದಿ ವರ್ಗದವರನ್ನು ನೇಮಕ ಮಾಡಲು ಅಧಿಕಾರ ಹಾಗೂ ಅವರ ಸೇವಾ ಷರತ್ತುಗಳು;

(x) ಆಡಳಿತಗಾರರನ್ನು ನೇಮಕ ಮಾಡಲು ಅಧಿಕಾರ;

(xi) ಪಂಚಾಯಿತ್ ಪ್ರದೇಶ, ಇತ್ಯಾದಿಗಳು ಅಥವಾ ಅದರ ಭಾಗವನ್ನು, ಕೈಗಾರಿಕಾ ಉಪನಗರಗಳಾಗಿ ಪರಿವರ್ತಿಸುವ ಕಾರ್ಯ;

(xii) ವಿನಿಯಮಗಳನ್ನು ಮಾಡಲು ಅಧಿಕಾರ.

ಪ್ರಾಸಂಗಿಕವಾದ ಮತ್ತು ಆನುಷಂಗಿಕವಾದ ಕೆಲವು ಇತರ ಉಪಬಂಧಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ

[2002ರ ವಿಧಾನ ಪರಿಷತ್ ವಿಧೇಯಕ ಸಂಖ್ಯೆ 12]

(ಭಾರತ ಸಂವಿಧಾನ ಏಳನೇ ಅನುಸೂಚಿಯ IIನೇ ಪಟ್ಟಿಯ 243ಕ್ಯೂ ಅನುಚ್ಛೇದ ಹಾಗೂ 5ನೇ ನಮೂದು)

XXIX

2003ರ ತಿದ್ದುಪಡಿ ಅಧಿನಿಯಮ 31.- ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964 (ಕರ್ನಾಟಕ ಅಧಿನಿಯಮ 1964ರ 22)ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ,-

1) ಜಿಲ್ಲಾ ಕೇಂದ್ರಗಳಿರುವಂಥ ಚಿಕ್ಕನಗರ ಪ್ರದೇಶದ ಜನಸಂಖ್ಯೆಯು ಐವತ್ತು ಸಾವಿರಕ್ಕಿಂತ ಕಡಿಮೆ ಇದ್ದರೂ, ಅದನ್ನು ಸಿಟಿ ಮುನ್ಸಿಪಲ್ ಏರಿಯಾ ನಿರ್ದಿಷ್ಟಪಡಿಸುವುದಕ್ಕಾಗಿ ಉಪಬಂಧ ಕಲ್ಪಿಸುವುದು;
2) ಅಧ್ಯಕ್ಷರಲ್ಲಿ ಅಥವಾ ಉಪಾಧ್ಯಕ್ಷರಲ್ಲಿ ಅವಿಶ್ವಾಸವನ್ನು ವ್ಯಕ್ತಪಡಿಸುವ ನಿರ್ಣಯವು ಮತ ನೀಡುವ ಹಕ್ಕನ್ನು ಹೊಂದಿರುವ ಕೌನ್ಸಿಲರ್ ಗಳ ಒಟ್ಟು ಸಂಖ್ಯೆಯ ಬಹುಮತದ ಮೂಲಕ ಹಾಗೂ ಮತ ಚಲಾಯಿಸುವ ಹಕ್ಕನ್ನು ಹೊಂದಿರುವ ಮತ್ತು ಹಾಜರಿದ್ದು ಮತ ಚಲಾಯಿಸುವ ಕೌನ್ಸಿಲರ್ ಗಳ ಮೂರನೇ ಎರಡರಷ್ಟಕ್ಕಿಂತ ಕಡಿಮೆ ಇಲ್ಲದ ಬಹುಮತದ ಮೂಲಕ ಅಂಗೀಕಾರವಾಗಬೇಕೆಂದು ಅಗತ್ಯಪಡಿಸುವುದು;
3) ತೆರಿಗೆ ವಿಧಿಸಲು ಸರ್ಕಾರದ ಮಂಜೂರಾತಿ ಪಡೆಯುವ ಅಗತ್ಯತೆಯನ್ನು ಬಿಟ್ಟುಬಿಡುವುದು;
4) ಖಾಲಿ ನಿವೇಶನದ ಮೇಲಿನ ಆಸ್ತಿ ತೆರಿಗೆಯ ದರವನ್ನು ಸಾರ್ವಜನಿಕರು ಸಲ್ಲಿಸಿರುವ ಅನೇಕ ಆಕ್ಷೇಪಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಈಗಿರುವ ಕನಿಷ್ಠ ಶೇಕಡಾ 0.3 ಮತ್ತು ಗರಿಷ್ಠ ಶೇಕಡಾ 0.6 ರ ದರವನ್ನು ಕಡಿಮೆ ಮಾಡುವುದು;
5) ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್‌ಗಳ ಅಧಿನಿಯಮ 1976ರಲ್ಲಿ ಹೇಳಿರುವಂತೆ, ಸಾರ್ವಜನಿಕ ಉಪಾಸನಾ ಸ್ಥಳಗಳು ಧರ್ಮಾರ್ಥ ಉದ್ದೇಶದ ಛತ್ರಗಳು ಇತ್ಯಾದಿಗಳಿಗೆ ಸಂಬಂಧಪಟ್ಟಂತೆ ಆಸ್ತಿ ತೆರಿಗೆಯನ್ನು ವಿಧಿಸದೆ ವಿನಾಯಿತಿ ನೀಡುವುದಕ್ಕಾಗಿ ಉಪಬಂಧ ಕಲ್ಪಿಸುವುದು;
6) ಬಾಕಿ ಇರುವ ಆಸ್ತಿ ತೆರಿಗೆಯನ್ನು ತಡವಾಗಿ ಸಂದಾಯ ಮಾಡಿದ್ದಕ್ಕಾಗಿ ತಿಂಗಳಿಗೆ ಶೇಕಡಾ 2ರಷ್ಟು ದಂಡವನ್ನು ವಿಧಿಸುವುದು;
7) ತೆರಿಗೆಯ ಹೊರೆಯನ್ನು ಕಡಿಮೆ ಮಾಡಲು ನೀರಿನ ಉಪಕರವನ್ನು ವಿಧಿಸುವುದಕ್ಕೆ ಸಂಬಂಧಿಸಿದ ಉಪಬಂಧಗಳನ್ನು ಬಿಟ್ಟುಬಿಡುವುದು;
8) 225 ಚದರ ಮೀಟರುಗಳವರೆಗಿನ ಅಳತೆಯ ನಿವೇಶನದಲ್ಲಿ ನಿರ್ಮಿಸಿರುವ ವಸತಿ ಕಟ್ಟಡದ ಸುತ್ತಲೂ ಇರುವ ಗರಿಷ್ಠ 50 ಚದರ ಮೀಟರುಗಳ ಖಾಲಿ ಜಾಗಕ್ಕೆ ಆಸ್ತಿ ತೆರಿಗೆ ವಿಧಿಸದೆ ವಿನಾಯಿತಿ ನೀಡುವುದು;
9) ಸರ್ಕಾರದ ಮತ್ತು ಇತರ ಅಧಿಕಾರಿಗಳ ಅಧಿಕಾರಗಳನ್ನು ಪ್ರತ್ಯಾಯೋಜಿಸುವುದಕ್ಕಾಗಿ ಉಪಬಂಧ ಕಲ್ಪಿಸುವುದು;
10) ಈಗಾಗಲೇ ಮಾಡಿರುವ ಕರನಿರ್ಧರಣೆ ಇತ್ಯಾದಿಗಳನ್ನು ಸಿಂಧುಗೊಳಿಸುವುದು.

ಕೆಲವು ಇತರ ಪ್ರಾಸಂಗಿಕವಾದ ಮತ್ತು ಆನುಷಂಗಿಕವಾದ ತಿದ್ದುಪಡಿಗಳನ್ನು ಸಹ ಮಾಡಲಾಗಿದೆ.

ವಿಷಯವು, ತುರ್ತು ಸ್ವರೂಪದ್ದಾಗಿದ್ದುದರಿಂದ ಮತ್ತು ಕರ್ನಾಟಕ ವಿಧಾನ ಪರಿಷತ್ತು ಅಧಿವೇಶನದಲ್ಲಿಲ್ಲದಿದ್ದುರಿಂದ, ಕರ್ನಾಟಕ ಮುನ್ಸಿಪಾಲಿಟಿಗಳಿಗೆ (ತಿದ್ದುಪಡಿ) ಅಧ್ಯಾದೇಶ 2003ನ್ನು ಪ್ರಖ್ಯಾಪಿಸಲಾಗಿತ್ತು.

ಆದ್ದರಿಂದ ಈ ವಿಧೇಯಕ

[2003ರ ವಿಧಾನಸಭಾ ವಿಧೇಯಕ ಸಂಖ್ಯೆ 19]

(ಭಾರತ ಸಂವಿಧಾನ ಏಳನೇ ಅನುಸೂಚಿಯ II ನೇ ಪಟ್ಟಿಯ 5ನೇ ನಮೂದು)

XXX

2003ರ ತಿದ್ದುಪಡಿ ಅಧಿನಿಯಮ 40.- ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳು, ಪ್ರಚಾರ ಮತ್ತು ಇತರ ಚುನಾವಣಾಪೂರ್ವ ಕಾರ್ಯಾಚರಣೆಗಳಿಗೆ ಸಂಬಂಧಿಸಿದ ಚಟುವಟಿಕೆಗಳ ಮೇಲೆ ಅಪಾರ ಮೊತ್ತದ ಹಣವನ್ನು ವೆಚ್ಚ ಮಾಡುತ್ತಿದ್ದು, ಇದು ಭ್ರಷ್ಟಾಚಾರಕ್ಕೆ ಸಮಾನವಾದುದೆಂದು ಜನಸಾಮಾನ್ಯರಿಂದ ಬಂದ ದೂರುಗಳನ್ನು ಪರಿಗಣಿಸಿ, ರಾಜ್ಯ

ಚುನಾವಣಾ ಆಯೋಗವು, ಚುನಾವಣಾ ವೆಚ್ಚಗಳ ಲೆಕ್ಕವನ್ನು ಸಲ್ಲಿಸಲು ತಪ್ಪಿದ್ದಕ್ಕಾಗಿ ಅಂಥವರನ್ನು ಅನರ್ಹಗೊಳಿಸಲು ಅವಕಾಶ ಕಲ್ಪಿಸುವ ಒಂದು ಹೊಸ ಉಪಬಂಧವನ್ನು ಸೇರಿಸಲು ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ, 1974ಕ್ಕೆ ಸೂಕ್ತ ತಿದ್ದುಪಡಿ ತರಲು ಪ್ರಸ್ತಾವಿಸಲಾಗಿದೆ.

ಆದ್ದರಿಂದ ಈ ವಿಧೇಯಕ

[2002ರ ವಿಧಾನಸಭಾ ವಿಧೇಯಕ ಸಂಖ್ಯೆ 22]

(ಭಾರತ ಸಂವಿಧಾನ ಏಳನೇ ಅನುಸೂಚಿಯ II ನೇ ಪಟ್ಟಿಯ 5ನೇ ನಮೂದು)

XXXI

2004ರ ತಿದ್ದುಪಡಿ ಅಧಿನಿಯಮ 17.- ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ಅಧಿನಿಯಮ, 2003 ಮತ್ತು ಕರ್ನಾಟಕ ಮುನ್ಸಿಪಾಲಿಟಿಗಳ (ತಿದ್ದುಪಡಿ) ಅಧಿನಿಯಮ, 2003ಕ್ಕೆ ಅನುಸಾರವಾಗಿ ಸ್ವತ್ತಿನ ಮಾಲೀಕರನ್ನು, 2002-2003ನೇ ಹಾಗೂ 2003-2004ನೇ ಸಾಲಿನ ಆಸ್ತಿ ತೆರಿಗೆಯನ್ನು 30ನೇ ಸೆಪ್ಟೆಂಬರ್ 2003ಕ್ಕೆ ಮುಂಚೆ ದಂಡರಹಿತವಾಗಿ ಸಂದಾಯ ಮಾಡಲು ಅಗತ್ಯಪಡಿಸಲಾಗಿದೆ. ದಂಡರಹಿತ ತೆರಿಗೆಯನ್ನು ಸಂದಾಯ ಮಾಡುವ ಅವಧಿಯನ್ನು ವಿಸ್ತರಿಸುವಂತೆ ಜನಸಾಮಾನ್ಯರು ಮನವಿಗಳನ್ನು ಮಾಡಿಕೊಂಡಿದ್ದಾರೆ. ಆದ್ದರಿಂದ ತೆರಿಗೆದಾರರಿಗೆ ಕೆಲವು ಅನುಕೂಲಗಳನ್ನು ಕಲ್ಪಿಸಿಕೊಡುವ ಉದ್ದೇಶದಿಂದ, ದಂಡರಹಿತ ತೆರಿಗೆ ಸಂದಾಯ ಮಾಡುವ ಅವಧಿಯನ್ನು 31ನೇ ಮಾರ್ಚ್ 2004ರ ವರೆಗೆ ವಿಸ್ತರಿಸಲು ಪ್ರಸ್ತಾವಿಸಲಾಗಿದೆ.

ಆದ್ದರಿಂದ ಈ ವಿಧೇಯಕ

[2004ರ ವಿಧಾನಸಭಾ ವಿಧೇಯಕ ಸಂಖ್ಯೆ 8]

(ಭಾರತ ಸಂವಿಧಾನ ಏಳನೇ ಅನುಸೂಚಿಯ II ನೇ ಪಟ್ಟಿಯ 5ನೇ ನಮೂದು)

XXXII

2005ರ ತಿದ್ದುಪಡಿ ಅಧಿನಿಯಮ 5.- ಈ ಮುಂದಿನ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸುವ ಸಲುವಾಗಿ ಮುನಿಸಿಪಾಲಿಟಿಗಳ ಅಧಿನಿಯಮ, 1964 (ಕರ್ನಾಟಕ ಅಧಿನಿಯಮ, 1964ರ 22) ಮತ್ತು ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್‌ಗಳ ಅಧಿನಿಯಮ, 1976 (ಕರ್ನಾಟಕ ಅಧಿನಿಯಮ 1977ರ14) - ಇವುಗಳಿಗೆ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ,-

(1) 2002-2003ನೇ, 2003-2004ನೇ ಮತ್ತು 2004-2005ನೇ ಸಾಲುಗಳಿಗೆ ವಿಧಿಸಿದ ಆಸ್ತಿ ತೆರಿಗೆಯನ್ನು 2001-2002ನೇ ಸಾಲಿಗಾಗಿ ವಿಧಿಸಿದ ತೆರಿಗೆಯ ಎರಡೂವರೆ ಪಟ್ಟಿನಿಂದ ಎರಡು ಪಟ್ಟಿಗೆ ಕಡಿಮೆ ಮಾಡುವುದು;

(2) ಮುನ್ಸಿಪಾಲಿಟಿಗಳಲ್ಲಿರುವ ಮತ್ತು ನಗರಪಾಲಿಕೆಗಳಲ್ಲಿರುವ ಎಲ್ಲಾ ವರ್ಗಗಳ ಕಟ್ಟಡಗಳ ಸುತ್ತಮುತ್ತಲಿನ ಖಾಲಿ ಭೂಮಿಗೆ ಸಂಬಂಧಿಸಿದಂತೆ ಸ್ವತ್ತು ತೆರಿಗೆಯಲ್ಲಿ ವಿನಾಯಿತಿ;

(3) ಒಂದು ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆಯುಳ್ಳ ಮುನಿಸಿಪಾಲಿಟಿಗಳಲ್ಲಿರುವ ಖಾಲಿ ನಿವೇಶನದ ಮೇಲಿನ ತೆರಿಗೆಯಲ್ಲಿ ಪೂರ್ಣ ವಿನಾಯಿತಿ;

(4) 2005-2006ನೇ ಸಾಲಿನಿಂದ ಪ್ರಾರಂಭಿಸಿ ಪ್ರತಿ ಮೂರು ವರ್ಷಗಳಿಗೊಮ್ಮೆ ಸ್ವತ್ತು ತೆರಿಗೆಯನ್ನು ಹೆಚ್ಚಿಸುವುದು ಹಾಗೂ ಅಂಥ ಹೆಚ್ಚಳಕ್ಕಾಗಿ ಮಾರ್ಗಸೂಚಿಗಳನ್ನು ನೀಡುವುದು;

(5) ಒಂದು ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆಯುಳ್ಳ ಮುನಿಸಿಪಾಲಿಟಿಗಳಲ್ಲಿ ಇರುವ ವಾಣಿಜ್ಯ ಕಟ್ಟಡಗಳ ಮೇಲಿನ ತೆರಿಗೆಯ ಗರಿಷ್ಠ ಮಿತಿಯನ್ನು ಶೇಕಡಾ 1.5 ರಿಂದ ಶೇಕಡಾ 0.9ಕ್ಕೆ ಮತ್ತು ವಸತಿ ಕಟ್ಟಡಗಳ ಸಂಬಂಧದಲ್ಲಿ ಶೇಕಡಾ 1.0 ಯಿಂದ ಶೇಕಡಾ 0.6ಕ್ಕೆ ಇಳಿಸುವುದು;

(6) ಕೆಲವು ಇತರ ಆನುಷಂಗಿಕ ತಿದ್ದುಪಡಿಗಳನ್ನು ಸಹ ಮಾಡಲಾಗಿದೆ.

ಕೆಲವು ಬದಲಾವಣೆಯೊಂದಿಗೆ, ಕರ್ನಾಟಕ ಮುನಿಸಿಪಾಲಿಟಿಗಳ (ತಿದ್ದುಪಡಿ) ಅಧ್ಯಾದೇಶ, 2004 (ಕರ್ನಾಟಕ ಅಧ್ಯಾದೇಶ 2004ರ 3) ಮತ್ತು ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್‌ಗಳ (ತಿದ್ದುಪಡಿ) ಅಧ್ಯಾದೇಶ, 2004 (ಕರ್ನಾಟಕ ಅಧ್ಯಾದೇಶ 2004ರ 2) ಇವುಗಳ ಬದಲಿಗೆ ಈ ವಿಧೇಯಕವನ್ನು ಮಂಡಿಸಲಾಗಿದೆ.

ಆದ್ದರಿಂದ ಈ ವಿಧೇಯಕ

XXXIII

2007ರ ತಿದ್ದುಪಡಿ ಅಧಿನಿಯಮ 1.- ಈ ಮುಂದೆ ಹೇಳಿರುವ ರೀತಿಯಲ್ಲಿ ಎಂದರೆ ಕೆಲವು ಅನಧಿಕೃತ ಕಟ್ಟಡ ನಿರ್ಮಾಣಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಸಕ್ರಮಗೊಳಿಸುವುದಕ್ಕಾಗಿ ಉಪಬಂಧ ಕಲ್ಪಿಸುವುದು ಮತ್ತು ಈ ಮುಂದಿನ ರೀತಿಯಲ್ಲಿ ಅಂದರೆ,-

(1) ನಿರ್ದಿಷ್ಟಪಡಿಸಿರುವ ಶುಲ್ಕವನ್ನು ಸಂದಾಯ ಮಾಡುವುದಕ್ಕೊಳಪಟ್ಟು,-

(ಎ) ತಿದ್ದುಪಡಿ ಅಧಿನಿಯಮವನ್ನು ಅಂಗೀಕರಿಸುವ ದಿನಾಂಕದಂದು ಇದ್ದಂಥ ಎಲ್ಲಾ ಅನಧಿಕೃತ ಕಟ್ಟಡಗಳನ್ನು;

(ಬಿ) ಭೂ ಬಳಕೆಯಲ್ಲಿ ಬದಲಾವಣೆಯ ಎಲ್ಲ ಉಲ್ಲಂಘನೆಗಳನ್ನು;

(ಸಿ) ಈ ಮುಂದಿನವುಗಳ ಅಭಿವೃದ್ಧಿಗೆ ಉಂಟು ಮಾಡುವಂಥವುಗಳನ್ನು ಹೊರತುಪಡಿಸಿ, ರೆವಿನ್ಯೂ ನಿವೇಶನಗಳಲ್ಲಿ ನಿರ್ಮಿಸಲಾದ ಎಲ್ಲಾ ಕಟ್ಟಡಗಳನ್ನು,-

ಆದರೆ,-

(i) ವರ್ತುಲ ರಸ್ತೆಯ, ಹೆದ್ದಾರಿಗಳ ಪಂಕ್ತೀಕರಣಕ್ಕೆ

(ii) ಸರ್ಕಾರಕ್ಕೆ, ಸ್ಥಳೀಯ ಪ್ರಾಧಿಕಾರಗಳಿಗೆ ಮತ್ತು ಅಭಿವೃದ್ಧಿ ಪ್ರಾಧಿಕಾರಗಳಿಗೆ ಸೇರಿದ ಭೂಮಿಯಲ್ಲಿ ಮತ್ತು ಉದ್ಯಾನವನಗಳಲ್ಲಿ ಹಾಗೂ ಖಾಲಿ ಜಾಗಗಳಲ್ಲಿ

(iii) ವಾಹನ ನಿಲುಗಡೆ ಸ್ಥಳವೆಂದು ಮೀಸಲಿಟ್ಟಿರುವ ನೆಲಮಹಡಿಯಲ್ಲಿ, ಮತ್ತು

- ಮಾಡಿರುವ ಸುಧಾರಣೆಗಳನ್ನು ಬಿಟ್ಟು, ಸಕ್ರಮಗೊಳಿಸುವುದಕ್ಕಾಗಿ;

(2) ಅನುಮತಿಸಿದ ವಿವಿಧ ಬಗೆಗಳ ಉಲ್ಲಂಘನೆಗಾಗಿ ಶುಲ್ಕವನ್ನು ನಿಗದಿಪಡಿಸುವುದಕ್ಕಾಗಿ

(3) ಇತರ ಆನುಷಂಗಿಕ ಹಾಗೂ ಪ್ರಾಸಂಗಿಕ ವಿಷಯಗಳಿಗೆ ಉಪಬಂಧ ಕಲ್ಪಿಸುವುದಕ್ಕಾಗಿ

ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961, ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್‌ಗಳ ಅಧಿನಿಯಮ, 1976 ಮತ್ತು ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964 ಇವುಗಳನ್ನು ತಿದ್ದುಪಡಿ ಮಾಡುವ ಮೂಲಕ ಸಕ್ರಮೀಕರಣದ ಮಾನದಂಡಗಳನ್ನು ನಿರ್ಧರಿಸುವುದಕ್ಕಾಗಿ ಉಪಬಂಧ ಕಲ್ಪಿಸುವುದು ಅವಶ್ಯ ಹಾಗೂ ವಿಹಿತವೆಂದು ಪರಿಗಣಿಸಲಾಗಿದೆ,

ಆದ್ದರಿಂದ ಈ ವಿಧೇಯಕ

[2004ರ ವಿಧಾನಸಭಾ ವಿಧೇಯಕ ಸಂಖ್ಯೆ 11]

(ಭಾರತ ಸಂವಿಧಾನ ಏಳನೇ ಅನುಸೂಚಿಯ II ನೇ ಪಟ್ಟಿಯ 5 ಮತ್ತು 18ನೇ ನಮೂದುಗಳು ಹಾಗೂ III ನೇ ಪಟ್ಟಿಯ 20ನೇ ನಮೂದು)

XXXIV

2007ರ ತಿದ್ದುಪಡಿ ಅಧಿನಿಯಮ 17.- ಸಹಾಯಕ ಸಿಬ್ಬಂದಿ ವರ್ಗದವರೊಂದಿಗೆ ಬೆಂಗಳೂರು, ಮೈಸೂರು, ಗುಲ್ಬರ್ಗಾ ಮತ್ತು ಬೆಳಗಾವಿಗೆ ರೀಜನಲ್ ಕಮಿಷನರ್ ಗಳ ಹುದ್ದೆಗಳನ್ನು, ಸರ್ಕಾರಿ ಆದೇಶ ಸಂಖ್ಯೆ: ಆರ್. ಡಿ 9 ಬಿಎಂಎಂ 2003, ದಿನಾಂಕ: 8.9.2005ರ ಮೇರೆಗೆ ಸೃಜಿಸಲಾಗಿದೆ.

ಸಂಬಂಧಪಟ್ಟ ಅಧಿನಿಯಮಗಳಿಗೆ ಅಗತ್ಯ ತಿದ್ದುಪಡಿಗಳನ್ನು ಮಾಡುವ ಮೂಲಕ ರೀಜನಲ್ ಕಮಿಷನರ್ ಗೆ ಶಾಸನಾತ್ಮಕ ಅಧಿಕಾರಗಳನ್ನು ಪ್ರದಾನ ಮಾಡಬೇಕಾಗುತ್ತದೆ.

ವಿಷಯವು ತುರ್ತು ಸ್ವರೂಪದ್ದಾಗಿದ್ದುದರಿಂದ ಮತ್ತು ಕರ್ನಾಟಕ ವಿಧಾನ ಮಂಡಲವು ಅಧಿವೇಶನದಲಿಲ್ಲದಿದ್ದುದರಿಂದ, ಮೇಲಿನ ಉದ್ದೇಶವನ್ನು ಕಾರ್ಯರೂಪಕ್ಕೆ ತರುವುದಕ್ಕಾಗಿ, ಕರ್ನಾಟಕ ಭೂ ಕಂದಾಯ ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ) ಅಧ್ಯಾದೇಶ, 2006 (2006ರ ಕರ್ನಾಟಕ ಅಧ್ಯಾದೇಶ ಸಂ 5)ನ್ನು ಪ್ರಖ್ಯಾಪಿಸಲಾಗಿತ್ತು.

ಆದ್ದರಿಂದ ಈ ವಿಧೇಯಕ.

[2007ರ ವಿಧಾನಸಭಾ ವಿಧೇಯಕ ಸಂಖ್ಯೆ 7]

[ಭಾರತ ಸಂವಿಧಾನ ಏಳನೇ ಅನುಸೂಚಿಯ II ನೇ ಪಟ್ಟಿಯ 5 ಮತ್ತು 18ನೇ ನಮೂದು]

XXXV

2009ರ ತಿದ್ದುಪಡಿ ಅಧಿನಿಯಮ 17.- ರಾಜ್ಯ ಚುನಾವಣಾ ಆಯೋಗವು, ನಗರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸುವಲ್ಲಿ ವಿದ್ಯುನ್ಮಾನ ಮತಯಂತ್ರಗಳನ್ನು ಬಳಸಲು ನಿರ್ಧರಿಸಿದೆ. ವಿದ್ಯುನ್ಮಾನ ಮತಯಂತ್ರಗಳ ಬಳಕೆಯು, ಚುನಾವಣಾ ವೆಚ್ಚವನ್ನು ಕಡಿಮೆಗೊಳಿಸುವುದಲ್ಲದೆ, ಮತ ಎಣಿಕೆಯ ಪ್ರಕ್ರಿಯೆಯನ್ನು ಸಹ ಸುಲಭಗೊಳಿಸುತ್ತದೆ. ರಾಜ್ಯ ಚುನಾವಣಾ ಆಯೋಗವು ಈ ಬಗ್ಗೆ ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964 ಹಾಗೂ ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್‌ಗಳ ಅಧಿನಿಯಮ, 1976ಕ್ಕೆ ತಿದ್ದುಪಡಿ ಮಾಡುವಂತೆ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ವಿದ್ಯುನ್ಮಾನ ಮತಯಂತ್ರಗಳನ್ನು ಬಳಸಲು ರಾಜ್ಯ ಚುನಾವಣಾ ಆಯೋಗಕ್ಕೆ ಅನುಕೂಲ ಮಾಡಿಕೊಡಲು ಯಾವುವಾದರೂ ಅವಶ್ಯಕ ಉಪಬಂಧಗಳು ಇದ್ದರೆ, ಆ ಎಲ್ಲ ಉಪಬಂಧಗಳನ್ನು ಸೇರಿಸಲು ಸಹ ಸರ್ಕಾರವನ್ನು ಕೋರಿದೆ.

ಆದ್ದರಿಂದ, ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ವಿದ್ಯುನ್ಮಾನ ಮತಯಂತ್ರಗಳನ್ನು ಬಳಸಲು, ರಾಜ್ಯ ಚುನಾವಣಾ ಆಯೋಗಕ್ಕೆ ಅನುಕೂಲ ಕಲ್ಪಿಸಿಕೊಡಲು, ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964 ಮತ್ತು ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್‌ಗಳ ಅಧಿನಿಯಮ, 1976ಕ್ಕೆ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ವಿಷಯವು ತುರ್ತು ಸ್ವರೂಪದ್ದಾಗಿದ್ದುದರಿಂದ ಮತ್ತು ಕರ್ನಾಟಕ ರಾಜ್ಯ ವಿಧಾನ ಮಂಡಲದ ಎರಡೂ ಸದನಗಳು ಅಧಿವೇಶನದಲ್ಲಿಲ್ಲದಿದ್ದುದರಿಂದ, ಕರ್ನಾಟಕದ ರಾಜ್ಯಪಾಲರು, ಕರ್ನಾಟಕ ಮುನಿಸಿಪಾಲಿಟಿಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧ್ಯಾದೇಶ 2009 (2009ರ ಕರ್ನಾಟಕ ಅಧ್ಯಾದೇಶ ಸಂ. 1) ನ್ನು ಪ್ರಖ್ಯಾಪಿಸಿದ್ದರು.

ಸದರಿ ಅಧ್ಯಾದೇಶದ ಬದಲಿಗೆ ಈ ವಿಧೇಯಕವನ್ನು ಮಂಡಿಸಿದೆ.

ಆದ್ದರಿಂದ ಈ ವಿಧೇಯಕ

[2009ರ ವಿಧಾನಸಭಾ ವಿಧೇಯಕ ಸಂಖ್ಯೆ 30, ಕಡತ ಸಂಖ್ಯೆ ಡಿಪಿಎಎಲ್ 25 ಶಾಸನ 2009]
[ಭಾರತ ಸಂವಿಧಾನ ಏಳನೇ ಅನುಸೂಚಿಯ II ನೇ ಪಟ್ಟಿಯ 5ನೇ ನಮೂದು]

XXXVI

2011ರ ತಿದ್ದುಪಡಿ ಅಧಿನಿಯಮ 24.- ಸ್ವತ್ತು ತೆರಿಗೆಯನ್ನು ನಿರ್ಧರಿಸುವಾಗ ಮತ್ತು ಸಂಗ್ರಹಿಸುವಾಗ ನಗರ ಸ್ಥಳೀಯ ಸಂಸ್ಥೆಗಳಿಗೆ ನೆರವು ನೀಡಲು ಹಾಗೂ ಲೆಕ್ಕಪರಿಶೋಧನಾ ವರದಿಯನ್ನು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸುವುದಕ್ಕೆ ಸಂಬಂಧಿಸಿದ ಉಪಬಂಧಗಳನ್ನು ಕಲ್ಪಿಸಲು, ರಾಜ್ಯ ಸರ್ಕಾರಗಳು ಸ್ವತ್ತು ತೆರಿಗೆ ಮಂಡಳಿಯನ್ನು ಸ್ಥಾಪಿಸಬೇಕೆಂದು ಭಾರತದ 13ನೇ ಹಣಕಾಸು ಆಯೋಗವು ಶಿಫಾರಸ್ಸು ಮಾಡಿದೆ. ಆದ್ದರಿಂದ ಆ ಬಗ್ಗೆ ಉಪಬಂಧ ಕಲ್ಪಿಸಲು ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್‌ಗಳ ಅಧಿನಿಯಮ, 1976 (ಕರ್ನಾಟಕ ಅಧಿನಿಯಮ 1977ರ 14) ಮತ್ತು ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1969 (ಕರ್ನಾಟಕ ಅಧಿನಿಯಮ 1964ರ 22)ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ

[2011ರ ವಿಧಾನಸಭಾ ವಿಧೇಯಕ ಸಂಖ್ಯೆ 26, ಕಡತ ಸಂಖ್ಯೆ ಸಂವ್ಯಶಾಇ 25 ಶಾಸನ 2011]
[ಭಾರತ ಸಂವಿಧಾನ ಏಳನೇ ಅನುಸೂಚಿಯ II ನೇ ಪಟ್ಟಿಯ 5 ಮತ್ತು 49ನೇ ನಮೂದುಗಳು]

XXXVII

2012ರ ತಿದ್ದುಪಡಿ ಅಧಿನಿಯಮ 19.- ಈ ಮುಂದಿನ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವುದಕ್ಕಾಗಿ, ಎಂದರೆ,-

(ಎ) ಮುನ್ಸಿಪಲ್ ಕಾರ್ಪೊರೇಷನ್‌ಗಳ ಪ್ರದೇಶಗಳಲ್ಲಿ ಕೆಲವು ಷರತ್ತುಗಳಿಗೊಳಪಟ್ಟು, ಕುಟುಂಬ ವಾಸಿಗಳು ಮಳೆ ನೀರು ಕೊಯ್ಲು ವ್ಯವಸ್ಥೆಯನ್ನು ನಿರ್ಮಿಸಬೇಕೆಂದು ಕಡ್ಡಾಯಗೊಳಿಸುವುದಕ್ಕೆ;

(ಬಿ) ಮಾಜಿ ಸೈನಿಕರಿಗೆ ಅಥವಾ ಸೈನಿಕರ ಕುಟುಂಬದವರಿಗೆ ಸೇರಿರುವ ಕಟ್ಟಡದ ಮತ್ತು ಭೂಮಿಯ ಮೇಲಿನ ಸ್ವತ್ತು ತೆರಿಗೆಯಲ್ಲಿ ವಿನಾಯಿತಿ ನೀಡುವುದು;

(ಸಿ) ಮುನ್ಸಿಪಲ್ ಸಂಸ್ಥೆಗಳು ವಿಧಿಸಬಹುದಾದ ಸ್ವತ್ತು ತೆರಿಗೆಯ ಗರಿಷ್ಠ ಮಿತಿಯನ್ನು ಹೆಚ್ಚಿಸುವುದು.

ಆದ್ದರಿಂದ ಈ ವಿಧೇಯಕ

ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964ನ್ನು ಮತ್ತು ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್‌ಗಳ ಅಧಿನಿಯಮ, 1976ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

[2011ರ ವಿಧಾನಸಭಾ ವಿಧೇಯಕ ಸಂಖ್ಯೆ 46, ಕಡತ ಸಂಖ್ಯೆ ಸಂವ್ಯಶಾಇ 4 ಶಾಸನ 2011]

[ಭಾರತ ಸಂವಿಧಾನ ಏಳನೇ ಅನುಸೂಚಿಯ II ನೇ ಪಟ್ಟಿಯ 5ನೇ ನಮೂದು]

XXXVIII

2012ರ ತಿದ್ದುಪಡಿ ಅಧಿನಿಯಮ 20.- ಸ್ಥಳೀಯ ಸಂಸ್ಥೆಗಳಿಗೆ ಕಾರ್ಯನಿರ್ವಹಣಾ ಅನುದಾನಗಳನ್ನು ಮಂಜೂರು ಮಾಡುವುದಕ್ಕಾಗಿ ಹದಿಮೂರನೇ ಹಣಕಾಸು ಆಯೋಗವು ವಿಧಿಸಿದ ಒಂಭತ್ತು ಷರತ್ತುಗಳ ಪೈಕಿ ಸದರಿ ಸ್ಥಳೀಯ ಸಂಸ್ಥೆಗಳ ಮೇಲ್ವಿಚಾರಣೆ ಮತ್ತು ತಾಂತ್ರಿಕ ಪರಿಶೋಧನಾ ಕಾರ್ಯವನ್ನು ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೇಖಾಪಾಲರಿಗೆ ವಹಿಸಿಕೊಡಬೇಕು ಎಂಬುದು ಒಂದು ಷರತ್ತಾಗಿದೆ. ಈ ಷರತ್ತನ್ನು ರಾಜ್ಯ ಸರ್ಕಾರವು 2012ರ ಮಾರ್ಚ್ ತಿಂಗಳು ಅಂತ್ಯಗೊಳ್ಳುವುದಕ್ಕೆ ಮುಂಚೆ ನೆರವೇರಿಸಬೇಕಾಗಿದೆ. ಮಹಾಲೇಖಪಾಲರೂ ಸಹ ಕೆಲವು ಮಾರ್ಪಾಟುಗಳನ್ನು ಮಾಡಲು ಸಲಹೆ ನೀಡಿದ್ದಾರೆ.

ಆದ್ದರಿಂದ, ಈ ಮೇಲಿನ ವಿಷಯಗಳಿಗೆ ಉಪಬಂಧ ಕಲ್ಪಿಸುವುದಕ್ಕಾಗಿ, ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್‌ಗಳ ಅಧಿನಿಯಮ, 1976 (ಕರ್ನಾಟಕ ಅಧಿನಿಯಮ 1977ರ 14) ಮತ್ತು ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ, 1964 (ಕರ್ನಾಟಕ ಅಧಿನಿಯಮ 1964ರ 22)ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ವಿಷಯವು ತುರ್ತು ಸ್ವರೂಪದ್ದಾಗಿದ್ದುದರಿಂದ ಮತ್ತು ಕರ್ನಾಟಕ ರಾಜ್ಯ ವಿಧಾನ ಮಂಡಲದ ಎರಡೂ ಸದನಗಳು ಅಧಿವೇಶನದಲಿಲ್ಲದಿದ್ದುದರಿಂದ, ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್‌ಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧ್ಯಾದೇಶ, 2012 (ಕರ್ನಾಟಕ ಅಧ್ಯಾದೇಶ ಸಂ. 2012ರ 1) ಇದನ್ನು 14.3.2012 ರಂದು ಪ್ರಖ್ಯಾಪಿಸಲಾಗಿತ್ತು.

ಸದರಿ ಅಧ್ಯಾದೇಶದ ಬದಲಿಗೆ ಈ ವಿಧೇಯಕವನ್ನು ಮಂಡಿಸಲಾಗಿದೆ.

ಆದ್ದರಿಂದ ವಿಧೇಯಕ.

[2012ರ ವಿಧಾನಸಭಾ ವಿಧೇಯಕ ಸಂಖ್ಯೆ 15, ಕಡತ ಸಂಖ್ಯೆ ಸಂವ್ಯಶಾಇ 21 ಶಾಸನ 2012]

[ಭಾರತ ಸಂವಿಧಾನ ಏಳನೇ ಅನುಸೂಚಿಯ II ನೇ ಪಟ್ಟಿಯ 5ನೇ ನಮೂದು]

XXXIX

2012ರ ತಿದ್ದುಪಡಿ ಅಧಿನಿಯಮ 31.- ರಾಜ್ಯ ಸರ್ಕಾರವು, ಆಯವ್ಯಯ ಬೆಂಬಲದೊಂದಿಗೆ ಮತ್ತು ಸ್ವತ್ತು ತೆರಿಗೆಯ ಮೇಲೆ ಉಪಕರದ ಮೂಲಕ ಸಂಗ್ರಹಿಸಬೇಕಾದ ಮೊಬಲಗಿನೊಂದಿಗೆ, ನಗರ ಸಾರಿಗೆಯಲ್ಲಿ ಹಣಕಾಸು ಸಂವರ್ಧನೆಗಾಗಿ ಮತ್ತು ಸಾಮಥ್ರ್ಯ ನಿರ್ಮಾಣಕ್ಕಾಗಿ ರಾಜ್ಯ ನಗರ ಸಾರಿಗೆ ನಿಧಿಯನ್ನು ಸ್ಥಾಪಿಸಿದೆ. ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ, 1964 ಮತ್ತು ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್‌ಗಳ ಅಧಿನಿಯಮ, 1976ರ ಈಗಿನ ಉಪಬಂಧಗಳು, ನಗರ ಸಾರಿಗೆಗಾಗಿ ಉಪಕರವನ್ನು ಸಂಗ್ರಹಿಸುವುದಕ್ಕಾಗಿ ಅವಕಾಶ ಕಲ್ಪಿಸಿರುವುದಿಲ್ಲ. ಆದ್ದರಿಂದ ಸುಸ್ಥಿರ ನಗರ ಸಾರಿಗೆ ವ್ಯವಸ್ಥೆಯನ್ನು ಉತ್ತೇಜಿಸುವ ಹಾಗೂ ಮೂಲಸೌಕರ್ಯವನ್ನು ಹೆಚ್ಚಿಸುವ ಉದ್ದೇಶಕ್ಕಾಗಿ ಗೊತ್ತುಪಡಿಸಿದ ದರಗಳಲ್ಲಿ ಉಪಕರದ ಸಂಗ್ರಹಣೆಗಾಗಿ ಹಾಗೆ ವಸೂಲಿ ಮಾಡಲಾದ ಉಪಕರವು ರಾಜ್ಯನಗರ ಸಾರಿಗೆ ನಿಧಿಯ ಒಂದು ಭಾಗವಾಗಿರತಕ್ಕದ್ದೆಂದು ಉಪಬಂಧ ಕಲ್ಪಿಸಲು ಸದರಿ ಅಧಿನಿಯಮಗಳನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. ಕೆಲವು ಇತರ ಪ್ರಾಸಂಗಿಕ ಮತ್ತು ಆನುಷಂಗಿಕ ಉಪಬಂಧಗಳನ್ನು ಮಾಡಲು ಸಹ ಪ್ರಸ್ತಾವಿಸಲಾಗಿದೆ.

ಆದ್ದರಿಂದ ಈ ವಿಧೇಯಕ

[2012ರ ವಿಧಾನಸಭಾ ವಿಧೇಯಕ ಸಂಖ್ಯೆ 16, ಕಡತ ಸಂಖ್ಯೆ ಸಂವ್ಯಶಾಇ 20 ಶಾಸನ 2012]

[ಭಾರತ ಸಂವಿಧಾನ ಏಳನೇ ಅನುಸೂಚಿಯ II ನೇ ಪಟ್ಟಿಯ 5ನೇ ನಮೂದು]

XL

2012ರ ತಿದ್ದುಪಡಿ ಅಧಿನಿಯಮ 32.- ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇಕಡಾ ಐವತ್ತರಷ್ಟನ್ನು ಮೀರದ ಸ್ಥಾನಗಳನ್ನು ಮೀಸಲಿಡುವುದಕ್ಕಾಗಿ ಉಪಬಂಧ ಕಲ್ಪಿಸಿ ಆ

ಮೂಲಕ ರಿಟ್ ಅರ್ಜಿ (ಸಿವಿಲ್) ಸಂ.1994ರ 1356ರಲ್ಲಿ ಕೆ. ಕೃಷ್ಣಮೂರ್ತಿ ಮತ್ತು ಇತರರು-ವಿರುದ್ಧ-ಭಾರತ ಒಕ್ಕೂಟದ ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪನ್ನು ಜಾರಿಗೆ ತರುವ ಸಲುವಾಗಿ, ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964 (ಕರ್ನಾಟಕ ಅಧಿನಿಯಮ 1964ರ 22) ಮತ್ತು ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್‌ಗಳ ಅಧಿನಿಯಮ, 1976 (ಕರ್ನಾಟಕ ಅಧಿನಿಯಮ 1977ರ 14)ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ..

ಆದ್ದರಿಂದ ಈ ವಿಧೇಯಕ.

[2012ರ ವಿಧಾನಸಭಾ ವಿಧೇಯಕ ಸಂಖ್ಯೆ 19, ಕಡತ ಸಂಖ್ಯೆ ಸಂವ್ಯಶಾಇ 13 ಶಾಸನ 2012]

[ಭಾರತ ಸಂವಿಧಾನ ಏಳನೇ ಅನುಸೂಚಿಯII ನೇ ಪಟ್ಟಿಯ 5ನೇ ನಮೂದು]

XLI

2013ರ ತಿದ್ದುಪಡಿ ಅಧಿನಿಯಮ 57.- ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11), ಕರ್ನಾಟಕ ಪೌರ ನಿಗಮಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14) ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22) ಇವುಗಳಿಗೆ ತಿದ್ದುಪಡಿ ಮಾಡಿ

(ಎ) ಈ ತಿದ್ದುಪಡಿ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಒಂದು ವರ್ಷದ ಅವಧಿಯಲ್ಲಿ ಸಕ್ರಮಗೊಳಿಸುವುದಕ್ಕಾಗಿ ಅರ್ಜಿಯನ್ನು ಸಲ್ಲಿಸುವುದಕ್ಕೆ ಇರುವ ಕಾಲಮಿತಿಯನ್ನು ವಿಸ್ತರಿಸುವುದು;

(ಬಿ) ಕಾನೂನಿನ ಉಪಬಂಧಗಳನ್ನು ಹಾಗೂ ಕಟ್ಟಡದ ಉಪವಿಧಿಗಳನ್ನು ಉಲ್ಲಂಘಿಸಿ 2009ರ ಡಿಸೆಂಬರ್ 3ನೇ ದಿನಕ್ಕೆ ಮುಂಚೆ ನಿರ್ಮಿಸಿರುವ ಕಟ್ಟಡಗಳನ್ನು ಸಕ್ರಮಗೊಳಿಸುವುದು;

(ಸಿ) ಅಂಥ ಕಟ್ಟಡಗಳನ್ನು ಸಕ್ರಮಗೊಳಿಸುವುದಕ್ಕಾಗಿ ಇರುವ ಶುಲ್ಕವನ್ನು/ ಮೊಬಲಗನ್ನು ಕಡಿಮೆ ಮಾಡುವುದು.

ಉಪಬಂಧ ಕಲ್ಪಿಸುವುದಕ್ಕಾಗಿ, ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2009ರ ವಿಧಾನಸಭಾ ವಿಧೇಯಕ ಸಂಖ್ಯೆ 43, ಕಡತ ಸಂಖ್ಯೆ ಸಂವ್ಯಶಾಇ 52 ಶಾಸನ 2009]

[ಭಾರತ ಸಂವಿಧಾನ ಏಳನೇ ಅನುಸೂಚಿಯ II ನೇ ಪಟ್ಟಿಯ 5 ಮತ್ತು 18ನೇ ನಮೂದುಗಳು ಹಾಗೂ III ನೇ ಪಟ್ಟಿಯ20ನೇ ನಮೂದು]

XLII

2013ರ ತಿದ್ದುಪಡಿ ಅಧಿನಿಯಮ 67.- ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11), ಕರ್ನಾಟಕ ಪೌರ ನಿಗಮಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14) ಮತ್ತು ಕರ್ನಾಟಕ ಮುನ್ಸಿಪಾಲಿಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22) ಇವುಗಳಿಗೆ ತಿದ್ದುಪಡಿ ಮಾಡಿ ಈ ಮುಂದಿನ ವಿಷಯಗಳಿಗೆ ,-

(1) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ) ಅಧ್ಯಾದೇಶ, 2013 (2013ರ ಕರ್ನಾಟಕ ಅಧ್ಯಾದೇಶ 2)ರ ಉದ್ಘೋಷಣೆಯ ದಿನಾಂಕದವರೆಗಿನ ಅನಧಿಕೃತ ಕಟ್ಟಡಗಳನ್ನು ಸಕ್ರಮಗೊಳಿಸುವುದಕ್ಕಾಗಿ ನೀಡಿದ್ದ ಕಾಲಮಿತಿಯನ್ನು ವಿಸ್ತರಿಸುವುದಕ್ಕೆ; ಮತ್ತು

(2) ಅನಧಿಕೃತ ಕಟ್ಟಡಗಳನ್ನು ಸಕ್ರಮಗೊಳಿಸುವುದಕ್ಕಾಗಿ ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕವನ್ನು ನಿರ್ದಿಷ್ಟಪಡಿಸಲು ಸರ್ಕಾರಕ್ಕೆ ಅಧಿಕಾರ ನೀಡುವುದಕ್ಕೆ, ಉಪಬಂಧ ಕಲ್ಪಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ವಿಷಯವು ತುರ್ತು ಸ್ವರೂಪದ್ದಾಗಿದ್ದುದರಿಂದ ಮತ್ತು ಕರ್ನಾಟಕ ರಾಜ್ಯ ವಿಧಾನ ಮಂಡಲದ ಎರಡೂ ಸದನಗಳು ಅಧಿವೇಶನದಲ್ಲಿಲ್ಲದಿದ್ದುದರಿಂದ, ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ) ಅಧ್ಯಾದೇಶ, 2013 (2013ರ ಕರ್ನಾಟಕ ಅಧ್ಯಾದೇಶ 2) ನ್ನು 19.10.2013 ರಂದು ಪ್ರಖ್ಯಾಪಿಸಲಾಗಿತ್ತು.

ಸದರಿ ಅಧ್ಯಾದೇಶದ ಬದಲಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2013ರ ವಿಧಾನಸಭಾ ವಿಧೇಯಕ ಸಂಖ್ಯೆ 19, ಕಡತ ಸಂಖ್ಯೆ ಸಂವ್ಯಶಾಇ 46 ಶಾಸನ 2013]

[ಭಾರತ ಸಂವಿಧಾನ ಏಳನೇ ಅನುಸೂಚಿಯ II ನೇ ಪಟ್ಟಿಯ 5ನೇ ನಮೂದು]

XLIII

2015ರ ತಿದ್ದುಪಡಿ ಅಧಿನಿಯಮ 06.- ರಿಟ್ ಅರ್ಜಿ ಸಂಖ್ಯೆಗಳು 1/2011 ಮತ್ತು 551-552/2011 ಸಿ/ಡಬ್ಲ್ಯೂ ರಿಟ್ ಅರ್ಜಿ ಸಂಖ್ಯೆಗಳು 1009/2011 ಇವುಗಳಲ್ಲಿ ಮತ್ತು ಇತರೆ ರಿಟ್ ಅರ್ಜಿಗಳಲ್ಲಿ ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯವು ನೀಡಿರುವ ಅಭಿಪ್ರಾಯಗಳನ್ನು ಪಾಲಿಸಲು ಮತ್ತು ನಗರ ಸ್ಥಳೀಯ ಸಂಸ್ಥೆಗಳ ದೂರಸಂಪರ್ಕ ಗೋಪುರಗಳ ಹಾಗೂ ಜಾಹೀರಾತು ಕಟ್ಟಡಗಳ ಮೇಲೆ ತೆರಿಗೆ ವಿಧಿಸುವುದನ್ನು ಕಾರ್ಯರೂಪಕ್ಕೆ ತರಲು, ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22) ಮತ್ತು ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್‌ಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14) - ಇವುಗಳನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಕೆಲವು ಪ್ರಾಸಂಗಿಕ ತಿದ್ದುಪಡಿಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

[2014ರ ವಿಧಾನಸಭಾ ವಿಧೇಯಕ ಸಂಖ್ಯೆ 56, ಕಡತ ಸಂಖ್ಯೆ ಸಂವ್ಯಶಾಇ 32 ಶಾಸನ 2014]

[ಭಾರತ ಸಂವಿಧಾನ ಏಳನೇ ಅನುಸೂಚಿಯ II ನೇ ಪಟ್ಟಿಯ 5ನೇ ನಮೂದು]

XLIV

2015ರ ತಿದ್ದುಪಡಿ ಅಧಿನಿಯಮ 42.- ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರ ವ್ಯಾಪ್ತಿಯಲ್ಲಿ ವ್ಯಾಪಾರ ಪರವಾನಗಿ ಪಡೆದುಕೊಳ್ಳುವುದಕ್ಕೆ ಕೆಲವು ಉದ್ದಿಮೆಗಳಿಗೆ ವಿನಾಯಿತಿ ನೀಡುವುದಕ್ಕೆ ಸಂಬಂಧಪಟ್ಟಂತೆ ಕರ್ನಾಟಕ ಕೈಗಾರಿಕಾ ನೀತಿ 2014-2019 ರ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರಲು, ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 22) ಮತ್ತು ಮುನ್ಸಿಪಲ್ ಕಾರ್ಪೊರೇಷನ್‌ಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14) - ಇವುಗಳನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2015ರ ವಿಧಾನಸಭಾ ವಿಧೇಯಕ ಸಂಖ್ಯೆ 38. ಕಡತ ಸಂಖ್ಯೆ ಸಂವ್ಯಶಾಇ 46 ಶಾಸನ 2015)

(ಭಾರತ ಸಂವಿಧಾನ ಏಳನೇ ಅನುಸೂಚಿಯ II ನೇ ಪಟ್ಟಿಯ 5ನೇ ನಮೂದು)

XLV

2020ರ **ತಿದ್ದುಪಡಿ ಅಧಿನಿಯಮ ಸಂಖ್ಯೆ** 10.-ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳ ಪೈಕಿ None of the above (NOTA) (ಮೇಲಿನ ಯಾರೊಬ್ಬರಿಗೂ ಅಲ್ಲ) ಕುರಿತು ಮತಪತ್ರಗಳಲ್ಲಿ ಹಾಗೂ ವಿದ್ಯುನ್ಮಾನ ಮತಯಂತ್ರದಲ್ಲಿ ಮತದಾರರಿಗೆ ಆಯ್ಕೆಯನ್ನು ನೀಡಲು ಕರ್ನಾಟಕ ಪೌರ ಸಭೆಗಳ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ 22) ಮತ್ತು ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976ನ್ನು (1977ರ ಕರ್ನಾಟಕ ಅಧಿನಿಯಮ 14) ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ

ಆದ್ದರಿಂದ ಈ ವಿಧೇಯಕ.

[2020ರ ವಿಧಾನಸಭೆಯ ವಿಧೇಯಕ ಸಂಖ್ಯೆ:12, ಕಡತ ಸಂಖ್ಯೆ: ಸಂವ್ಯಶಾಇ 12 ಶಾಸನ 2019]

[ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 5ನೆಯ ನಮೂದನೆಯಡಿಯಲ್ಲಿ ಬರುತ್ತದೆ]

[ಕರ್ನಾಟಕ ರಾಜ್ಯ ಪತ್ರದ ಭಾಗ-IV, ವಿಶೇಷ ಪತ್ರಿಕೆ ಸಂಖ್ಯೆ: 154 ದಿನಾಂಕ: 27.04.2020ರಲ್ಲಿ ಪ್ರಕಟಣೆಗೊಂಡಿದೆ]

XLVI

2020ರ ತಿದ್ದುಪಡಿ ಅಧಿನಿಯಮ ಸಂಖ್ಯೆ 39.- ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976ರ (1977ರ ಕರ್ನಾಟಕ ಅಧಿನಿಯಮ 14) ಅಡಿಯಲ್ಲಿ ನಗರಪಾಲಿಕೆ ಹಂತದಲ್ಲಿ ರಚನೆಯಾದ ಪ್ರದೇಶ ಸಭಾ ಮತ್ತು ವಾರ್ಡ್ ಸಮಿತಿಯ ರೀತಿಯಲ್ಲಿ ವಾರ್ಡ್‌ನ ಜನರ ಭಾಗವಹಿಸುವಿಕೆಯೊಂದಿಗೆ ಉತ್ತಮ ಆಡಳಿತವನ್ನು ನೀಡುವುದಕ್ಕಾಗಿ ಸಂವಿಧಾನದ 243ಎಸ್ ಅನುಚ್ಛೇದದ ಅನುಸಾರ ರಾಜ್ಯದಲ್ಲಿನ ಎಲ್ಲಾ ಪೌರಸಭೆಗಳಲ್ಲಿ ನೆರೆಹೊರೆ ಗುಂಪುಗಳು, ಪ್ರದೇಶ ಸಭಾಗಳು ಮತ್ತು ವಾರ್ಡ್ ಸಮಿತಿಗಳು ಇವುಗಳನ್ನು ಅವುಗಳಿಗೆ ನಿರ್ದಿಷ್ಟಪಡಿಸಿದ ಅಧಿಕಾರಗಳು, ಪ್ರಕಾರ್ಯಗಳು ಮತ್ತು ಜವಾಬ್ದಾರಿಗಳೊಂದಿಗೆ ಸ್ಥಾಪಿಸಲು ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ 22) ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ.

[2020ರ ವಿಧಾನಸಭೆಯ ವಿಧೇಯಕ ಸಂಖ್ಯೆ: 28, ಕಡತ ಸಂಖ್ಯೆ: ಸಂವ್ಯಶಾಇ 09 ಶಾಸನ 2019]
[ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 5ನೇಯ ನಮೂದನೆಯಡಿಯಲ್ಲಿ ಬರುತ್ತದೆ]
[ಕರ್ನಾಟಕ ರಾಜ್ಯ ಪತ್ರದ ಭಾಗ-IVA, ವಿಶೇಷ ಪತ್ರಿಕೆ ಸಂಖ್ಯೆ: 465 ದಿನಾಂಕ: 19.10.2020ರಲ್ಲಿ ಪ್ರಕಟಣೆಗೊಂಡಿದೆ]

XLVII

2021ರ ತಿದ್ದುಪಡಿ ಅಧಿನಿಯಮ ಸಂಖ್ಯೆ 03.- ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ 22) ಈ ಮುಂದಿನವುಗಳಿಗಾಗಿ,-

(i) ಅಸ್ತಿತ್ವದಲ್ಲಿರುವ ಸ್ವತ್ತು ತೆರಿಗೆ ವ್ಯವಸ್ಥೆಯನ್ನು ಪರಿಷ್ಕರಿಸಲು ಹಾಗೂ ಸರಳೀಕೃತ ಸ್ವತ್ತು ತೆರಿಗೆ ಮೂಲಾಧಾರವನ್ನು ಉಪಬಂಧಿಸಲು;

(ii) ಕರ್ನಾಟಕ ಸ್ಟ್ಯಾಂಪುಗಳ ಅಧಿನಿಯಮ, 1957ರ ಅಡಿಯಲ್ಲಿ ಚಾಲ್ತಿಯಲ್ಲಿರುವ ಮಾರುಕಟ್ಟೆ ಮಾರ್ಗಸೂಚಿ ಮೌಲ್ಯಗಳಿಗೆ ಸ್ವತ್ತು ತೆರಿಗೆ ಮೂಲಾಧಾರವನ್ನು ಜೋಡಿಸುವ ಮೂಲಕ ಪೌರಸಭೆಗಳ ರಾಜಸ್ವಗಳನ್ನು ಸುಧಾರಿಸಲು; ಮತ್ತು

(iii) ಪೌರಸಭೆಗಳ ಸಬಲೀಕರಣದ ಉದ್ದೇಶಕ್ಕಾಗಿ ಸ್ವತ್ತು ತೆರಿಗೆ ಸುಧಾರಣೆಯನ್ನು ತರುವುದು ಅಪೇಕ್ಷಣೀಯವಾಗಿದ್ದು, 2020-21ನೇ ವರ್ಷಕ್ಕಾಗಿ ನಿವ್ವಳ ರಾಜ್ಯ ದೇಶೀಯ ಉತ್ಪನ್ನದ (ಜಿಎಸ್‌ಡಿಪಿ) ಶೇಕಡಾ 0.25 ಹೆಚ್ಚುವರಿ ಸಾಲಪಡೆವ ಮಿತಿಗೆ ಅರ್ಹವಾಗುವಂತೆ ರಾಜ್ಯ ಸರ್ಕಾರವನ್ನು ಸಶಕ್ತಗೊಳಿಸಲು,

-ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ವಿಷಯವು ತುರ್ತುಸ್ವರೂಪದ್ದಾದ್ದರಿಂದ ಮತ್ತು ಕರ್ನಾಟಕ ವಿಧಾನಮಂಡಲದ ಉಭಯ ಸದನಗಳು ಅಧಿವೇಶನದಲ್ಲಿ ಇಲ್ಲದಿದ್ದುದರಿಂದ, ಮೇಲಿನ ಉದ್ದೇಶವನ್ನು ಸಾಧಿಸಲು ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ಅಧ್ಯಾದೇಶ, 2021ನ್ನು (2021ರ ಕರ್ನಾಟಕ ಅಧ್ಯಾದೇಶ 02) ಪ್ರಖ್ಯಾಪಿಸಲಾಗಿತ್ತು.

ಈ ವಿಧೇಯಕವು ಅಧ್ಯಾದೇಶದ ಬದಲಿ ವಿಧೇಯಕವಾಗಿದೆ.

ಆದ್ದರಿಂದ ಈ ವಿಧೇಯಕ.

[2021ರ ವಿಧಾನಸಭೆಯ ವಿಧೇಯಕ ಸಂಖ್ಯೆ: 07, ಕಡತ ಸಂಖ್ಯೆ: ಸಂವ್ಯಶಾಇ 06 ಶಾಸನ 2021]
[ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 05 ನೇಯ ನಮೂದನೆಯಡಿಯಲ್ಲಿ ಬರುತ್ತದೆ]
[ಕರ್ನಾಟಕ ರಾಜ್ಯ ಪತ್ರದ ಭಾಗ-IVA, ವಿಶೇಷ ಪತ್ರಿಕೆ ಸಂಖ್ಯೆ: 191 ದಿನಾಂಕ: 18.02.2021ರಲ್ಲಿ ಪ್ರಕಟಣೆಗೊಂಡಿದೆ]

XLVIII

2021ರ ತಿದ್ದುಪಡಿ ಅಧಿನಿಯಮ ಸಂಖ್ಯೆ 07.- 2020-21ನೇ ಹಣಕಾಸು ವರ್ಷದಲ್ಲಿ ಕೋವಿಡ್-19ರ ಸಾಂಕ್ರಾಮಿಕದಿಂದಾಗಿ, ಆಸ್ತಿ ತೆರಿಗೆ ಪಾವತಿಯ ಕಾಲಮಿತಿಯನ್ನು ವಿಸ್ತರಿಸಲು ಹಾಗೂ ಈ ತಿದ್ದುಪಡಿ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಒಂದು ತಿಂಗಳ ಒಳಗಾಗಿ ತೆರಿಗೆಯನ್ನು ಪಾವತಿಸಿದ ಸಂದರ್ಭದಲ್ಲಿ ಶೇಕಡ ಐದರ ರಿಯಾಯಿತಿಯನ್ನು ನೀಡುವುದಕ್ಕೆ ಉಪಬಂಧ ಕಲ್ಪಿಸಲೂ ಸಹ ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ 22) ಮತ್ತು ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976ನ್ನು (1977ರ ಕರ್ನಾಟಕ ಅಧಿನಿಯಮ 14) ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ.

[2021ರ ವಿಧಾನಸಭೆಯ ವಿಧೇಯಕ ಸಂಖ್ಯೆ: 06, ಕಡತ ಸಂಖ್ಯೆ: ಸಂವ್ಯಶಾಇ 83 ಶಾಸನ 2020]
[ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 05 ನೇಯ ನಮೂದನೆಯಡಿಯಲ್ಲಿ ಬರುತ್ತದೆ]
[ಕರ್ನಾಟಕ ರಾಜ್ಯ ಪತ್ರದ ಭಾಗ-IVA, ವಿಶೇಷ ಪತ್ರಿಕೆ ಸಂಖ್ಯೆ: 193 ದಿನಾಂಕ: 19.02.2021ರಲ್ಲಿಪ್ರಕಟಣೆಗೊಂಡಿದೆ]

XLIX

2021ರ ತಿದ್ದುಪಡಿ ಅಧಿನಿಯಮ ಸಂಖ್ಯೆ 16.- ಸಿವಿಲ್ ರಿಟ್ ಅರ್ಜಿ ಸಂಖ್ಯೆ 1151/2017(ಪಿಐಎಲ್-ಡಬ್ಲ್ಯೂ) ಇದರಲ್ಲಿ ಭಾರತದ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿರುವ ನಿರ್ದೇಶನಕ್ಕೆ ಅನುಸಾರವಾಗಿ, ಕುಷ್ಠರೋಗವು ಗುಣಪಡಿಸಬಹುದಾದ ಖಾಯಿಲೆಯಾಗಿದ್ದು, ಅದರಿಂದ ನರಳುತ್ತಿರುವ ವ್ಯಕ್ತಿಗಳ ವಿರುದ್ಧ ತಾರತಮ್ಯವನ್ನು ತೊಡೆದು ಹಾಕಲು, ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ 22) ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2021ರ ವಿಧಾನಸಭೆಯ ವಿಧೇಯಕ ಸಂಖ್ಯೆ: 12, ಕಡತ ಸಂಖ್ಯೆ: ಸಂವ್ಯಶಾಇ 02 ಶಾಸನ 2021]
[ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 05 ನೇಯ ನಮೂದನೆಯಡಿಯಲ್ಲಿ ಬರುತ್ತದೆ]
[ಕರ್ನಾಟಕ ರಾಜ್ಯ ಪತ್ರದ ಭಾಗ-IVA, ವಿಶೇಷ ಪತ್ರಿಕೆ ಸಂಖ್ಯೆ: 377 ದಿನಾಂಕ: 31.03.2021ರಲ್ಲಿ ಪ್ರಕಟಣೆಗೊಂಡಿದೆ]

L

2021ರ ತಿದ್ದುಪಡಿ ಅಧಿನಿಯಮ ಸಂಖ್ಯೆ 30.- ಜಾಹೀರಾತು ತೆರಿಗೆಯು ಸರಕು ಮತ್ತು ಸೇವೆಗಳ ತೆರಿಗೆಯ ಅಡಿಯಲ್ಲಿ ಸೇರಿರುವುದರಿಂದ ನಗರ ಸ್ಥಳೀಯ ಸಂಸ್ಥೆಗಳು ಕಂದಾಯ ನಷ್ಟವನ್ನು ಅನುಭವಿಸದೇ ಇರುವಂತೆ ಮಾಡಲು ನಗರ ಸ್ಥಳೀಯ ಸಂಸ್ಥೆಗಳಿಗೆ ಅವುಗಳ ಕ್ಷೇತ್ರವ್ಯಾಪ್ತಿಯೊಳಗೆ ಬಹಿರಂಗ ಜಾಹೀರಾತುಗಳನ್ನು ನಿಲ್ಲಿಸುವುದಕ್ಕೆ (erect) ಅನುಮತಿಯನ್ನು ಮಂಜೂರು ಮಾಡುವುದಕ್ಕಾಗಿ ಶುಲ್ಕವನ್ನುವಿಧಿಸಲು ಅಧಿಕಾರವನ್ನು ನೀಡುವುದಕ್ಕೆ ಉಪಬಂಧ ಕಲ್ಪಿಸಲು ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ 22) ಮತ್ತು ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976ನ್ನು (1977ರ ಕರ್ನಾಟಕ ಅಧಿನಿಯಮ 14) ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ.

[2021ರ ವಿಧಾನಸಭೆಯ ವಿಧೇಯಕ ಸಂಖ್ಯೆ: 31, ಕಡತ ಸಂಖ್ಯೆ: ಸಂವ್ಯಶಾಇ 29 ಶಾಸನ 2021]

[ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 5ನೇಯ ನಮೂದನೇ ಮತ್ತು ಅನುಚ್ಛೇದ 243Xನ ಅಡಿಯಲ್ಲಿ ಬರುತ್ತದೆ]
[ಕರ್ನಾಟಕ ರಾಜ್ಯ ಪತ್ರದ ಭಾಗ-IVA, ವಿಶೇಷ ಪತ್ರಿಕೆ ಸಂಖ್ಯೆ: 819 ದಿನಾಂಕ: 07.10.2021ರಲ್ಲಿ ಪ್ರಕಟಣೆಗೊಂಡಿದೆ]

LI

2022ರ ತಿದ್ದುಪಡಿ ಅಧಿನಿಯಮ ಸಂಖ್ಯೆ: 02 ರಾಜ್ಯದಲ್ಲಿ ಕೈಗಾರಿಕೆಗಳ ಸ್ಥಾಪನೆಯನ್ನು ಉತ್ತೇಜಿಸುವುದಕ್ಕೆ ಪಾಲಿಕೆಗಳು ಮತ್ತು ಇತರ ನಗರ ಸ್ಥಳೀಯ ನಿಕಾಯಗಳಲ್ಲಿ ಕೈಗಾರಿಕಾ ಕಟ್ಟಡಗಳಿಗೆ ವಿಧಿಸಬೇಕಾದ ಸ್ವತ್ತು ತೆರಿಗೆ ಪ್ರತ್ಯೇಕ ದರವನ್ನು ನಿರ್ದಿಷ್ಟಪಡಿಸಲು, 2021-22ರ ಆಯವ್ಯಯ ಭಾಷಣದಲ್ಲಿ ಮಾಡಲಾದ ಪ್ರಸ್ತಾವನೆಯನ್ನು ಜಾರಿಗೊಳಿಸಲು ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ನ್ನು ಮತ್ತು ಕರ್ನಾಟಕ ಪೌರಸಭೆಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22)ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2021ರ ವಿಧಾನಸಭೆಯ ವಿಧೇಯಕ ಸಂಖ್ಯೆ-41, ಕಡತ ಸಂಖ್ಯೆ:ಸಂವ್ಯಶಾಇ 51 ಶಾಸನ 2021]
[ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 5ನೇ ನಮೂದನೆಯಡಿಯಲ್ಲಿ ಬರುತ್ತದೆ]
[ಕರ್ನಾಟಕ ರಾಜ್ಯ ಪತ್ರದ ಭಾಗ-IVA ವಿಶೇಷ ಪತ್ರಕೆ ಸಂಖ್ಯೆ:47 ದಿನಾಂಕ: 13.01.2022ರಲ್ಲಿ ಪ್ರಕಟಗೊಂಡಿದೆ]

LII

2022ರ ಅಧಿನಿಯಮ ಸಂಖ್ಯೆ:33 ಸ್ಥಳೀಯ ಯೋಜನಾ ಪ್ರಾಧಿಕಾರಗಳ ಅಧಿಕಾರ ವ್ಯಾಪ್ತಿಗೆ ಒಳಪಡದೇ ಇರುವ ಪ್ರದೇಶಗಳಲ್ಲಿ ಕಟ್ಟಡದ ನಕ್ಷೆಗೆ ಮಂಜೂರಾತಿಯನ್ನು ಪಡೆಯುವಲ್ಲಿನ ತಾಂತ್ರಿಕ ತೊಂದರೆಗಳನ್ನು ತೆಗೆದು ಹಾಕಲು ದಿನಾಂಕ:11.05.2022ರಂದು ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಸಣ್ಣ ನೀರಾವರಿ ಮಂತ್ರಿಯವರ ನೇತೃತ್ವದಲ್ಲಿ ಇ-ಸ್ವತ್ತು ಹಾಗೂ ಇ-ಖಾತಾ ಬಗ್ಗೆ ಸಚಿವ ಸಂಪುಟ ಉಪಸಮಿತಿಯ ಸಭೆ ನಡೆಸಲಾಯಿತು. ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ (1963ರ ಕರ್ನಾಟಕ ಅಧಿನಿಯಮ11)ರ 4-ಕೆ ಪ್ರಕರಣವು ಸ್ಥಳೀಯ ಯೋಜನಾ ಪ್ರಾಧಿಕಾರದ ಹೊರತಾದ ಪ್ರದೇಶಗಳ ಭೂಮಿಯಲ್ಲಿನ ಅಭಿವೃದ್ಧಿಯ ವಿನಿಯಮವನ್ನು ಗೊತ್ತುಪಡಿಸುವುದು ಈ ದೃಷ್ಟಿಯಿಂದ ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ 1964 (1964ರ ಕರ್ನಾಟಕ ಅಧಿನಿಯಮ 22)ರ 387ನೇ ಪ್ರಕರಣದ ಉಪಬಂಧಗಳನ್ನು ದಿನಾಂಕ:12.08.2021 ರಿಂದ ಅಂದರೆ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ11)ದ 4-ಕೆ ಪ್ರಕರಣವನ್ನು ಸೇರಿಸಲಾದ ದಿನಾಂಕದಿಂದ ಜಾರಿಗೆ ಬರುವಂತೆ ಬಿಟ್ಟುಬಿಡುವುದು ಅವಶ್ಯಕವಾಗಿದೆ.

ಆದ್ದರಿಂದ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಇಲಾಖೆಯಿಂದ ಗ್ರಾಮಾಂತರ ಪ್ರದೇಶದಲ್ಲಿ ಕಟ್ಟಡದ ನಕ್ಷೆಗಳಿಗೆ ಅನುಮೋದನೆ ಪಡೆಯುವುದರಿಂದ ವಿನಾಯಿತಿಗೆ ಮತ್ತು ಇದಕ್ಕೆ ಸಂಬಂಧಪಟ್ಟ ಅಥವಾ ಆನುಷಂಗಿಕ ವಿಷಯಗಳಿಗಾಗಿ ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ 1964 (1964ರ ಕರ್ನಾಟಕ ಅಧಿನಿಯಮ22) ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ವಿಷಯವು ತುರ್ತುಸ್ವರೂಪವಾದ್ದರಿಂದ ಮತ್ತು ಕರ್ನಾಟಕ ವಿಧಾನಮಂಡಲದ ಉಭಯ ಸದನಗಳು ಅಧಿವೇಶನದಲ್ಲಿ ಇಲ್ಲದಿದ್ದುದರಿಂದ, ಮೇಲಿನ ಉದ್ದೇಶವನ್ನು ಸಾಧಿಸಲು ಕರ್ನಾಟಕ ಮುನಿಸಿಪಾಲಿಟಿಗಳ (ತಿದ್ದುಪಡಿ) ಅಧ್ಯಾದೇಶ, 2022ನ್ನು (2022ರ ಕರ್ನಾಟಕ ಅಧ್ಯಾದೇಶ 03) ಪ್ರಖ್ಯಾಪಿಸಲಾಗಿತ್ತು.

ಈ ವಿಧೇಯಕವು ಅಧ್ಯಾದೇಶದ ಬದಲಿ ವಿಧೇಯಕವಾಗಿದೆ.

ಆದ್ದರಿಂದ ಈ ವಿಧೇಯಕ.

[2022ರ ವಿಧಾನಸಭೆಯ ವಿಧೇಯಕ ಸಂಖ್ಯೆ:16, ಕಡತ ಸಂಖ್ಯೆ:ಸಂವ್ಯಶಾಇ 15 ಶಾಸನ 2022]
[ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 5ನೇ ನಮೂದನೆಯಡಿ ಬರುತ್ತದೆ.]
[ಕರ್ನಾಟಕ ರಾಜ್ಯ ಪತ್ರದ ಭಾಗ IVಎ ವಿಶೇಷ ರಾಜ್ಯ ಪತ್ರಿಕೆ ಸಂಖ್ಯೆ:517, ದಿನಾಂಕ:13.10.2022 ರಲ್ಲಿ ಪ್ರಕಟಗೊಂಡಿದೆ]

LIII

2024ರ ತಿದ್ದುಪಡಿ ಅಧಿನಿಯಮ ಸಂಖ್ಯೆ:43:- ಈ ಮುಂದಿನವುಗಳಿಗಾಗಿ ,-

(i) ನಗರ ಸ್ಥಳೀಯ ಪ್ರಾಧಿಕಾರಗಳ ವ್ಯಾಪ್ತಿಯಡಿಯಲ್ಲಿನ ಎಲ್ಲಾ ಆಸ್ತಿಗಳನ್ನು ಅವುಗಳ ಆರ್ಥಿಕ ಸಂಪನ್ಮೂಲಗಳ ಪರಿಜಾಲ (network) ಅಡಿಯಲ್ಲಿ ತರಲು;

(ii) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿನಿಯಮ, 2020 (2020ರ ಕರ್ನಾಟಕ ಅಧಿನಿಯಮ53)ರಲ್ಲಿ ಉಪಬಂಧಿಸಲಾದಂತೆ ಸರ್ಕಾರಿ ಭೂಮಿಯ ಹೊರತಾಗಿ ಅನಧಿಕೃತ ವಸತಿ ಪ್ರದೇಶಗಳಲ್ಲಿನ ಆವರಣಗಳು ಮತ್ತು ಕಟ್ಟಡಗಳಿಗೆ ಹಾಗೂ ಅಧಿಕೃತ ವಸತಿ ಪ್ರದೇಶಗಳಲ್ಲಿನ ಅನಧಿಕೃತ ಕಟ್ಟಡಗಳಿಗೆ ಸ್ವತ್ತು ತೆರಿಗೆಯ ಉಪಬಂಧಗಳನ್ನು ವಿಸ್ತರಿಸಲು;

(iii) ಇ-ಆಸ್ತಿ ತಂತ್ರಾಂಶದ ಕುರಿತು ಅವಶ್ಯಕ ಉಪಬಂಧಗಳನ್ನು ಕಲ್ಪಿಸಲು; ಮತ್ತು

(iv) ಸದರಿ ಅಧಿನಿಯಮಗಳ ಉಪಬಂಧಗಳ ಅನನುಪಾಲನೆಯ (non-compliance) ಸಂದರ್ಭದಲ್ಲಿ ಅಧಿಕಾರಿಗಳಿಗೆ ದಂಡನೆಯನ್ನು ಉಪಬಂಧಿಸಲು,

- ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ 1964 (1964ರ ಕರ್ನಾಟಕ ಅಧಿನಿಯಮ 22)ನ್ನು ಮತ್ತು ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ14)ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ.

[2024ರ ವಿಧಾನ ಸಭೆಯ ವಿಧೇಯಕ ಸಂಖ್ಯೆ: 31, ಕಡತ ಸಂಖ್ಯೆ:ಸಂವ್ಯಶಾಇ 33 ಶಾಸನ 2024]

[ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 5ನೇ ನಮೂದನೆಯಡಿ ಬರುತ್ತದೆ.]

[ಕರ್ನಾಟಕ ರಾಜ್ಯ ಪತ್ರದ ಭಾಗ IVಎ ವಿಶೇಷ ರಾಜ್ಯ ಪತ್ರಿಕೆ ಸಂಖ್ಯೆ:434, ದಿನಾಂಕ:10.09.2024 ರಲ್ಲಿ ಪ್ರಕಟಗೊಂಡಿದೆ]

LIV

2025ರ ಅಧಿನಿಯಮ ಸಂಖ್ಯೆ: 64 ಈ ಮುಂದಿನವುಗಳಿಗಾಗಿ, ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ,-

(i) ಕಡಿತಗೊಳಿಸುವಿಕೆ ಮತ್ತು ಅನಿಯಂತ್ರಣಗೊಳುಸುವಿಕೆಯನ್ನು ಅನುಪಾಲಿಸುವುದಕ್ಕಾಗಿ ಭಾರತ ಸರ್ಕಾರದ ಶಿಫಾರಸ್ಸುಗಳನ್ನು ನಿಗಮಿತಗೊಳಿಸುವುದು;

(ii) ಕಟ್ಟಡ ನಕ್ಷೆಗಳ ಅನುಮತಿಗಳನ್ನು ಮಂಜೂರು ಮಾಡುವ ಕಾರ್ಯವಿಧಾನವನ್ನು ಸರಳೀಕರಿಸುವುದು;

(iii) ಅನುಮತಿಸಲಾದ ನಕ್ಷೆಗಳ ಉಪಬಂಧಗಳನುಸಾರ ನಿರ್ಮಾಣಗಳನ್ನು ಮಾಡಿರುವುದನ್ನು ಸ್ಪಷ್ಟಪಡಿಸಲು ಮತ್ತು ಸ್ಥಳೀಯ ಪ್ರಾಧಿಕಾರಕ್ಕೆ ವರದಿ ನೀಡಲು, ಕಟ್ಟಡದ ನಿವೇಶನಗಳಿಗೆ ನಿರ್ಮಾಣದ ಮೊದಲು, ನಿರ್ಮಾಣದ ಸಮಯದಲ್ಲಿ ಮತ್ತು ಸಂದರ್ಭಾನುಸಾರ ನಿರ್ಮಾಣದ ತರುವಾಯ ಪಟ್ಟಿ ಮಾಡಲಾದ ವೃತಿಪರರನ್ನು ತಪಾಸಣೆ ಮಾಡಲು ಉಪಬಂಧಗಳನ್ನು ಪರಿಚಯಿಸುವುದು;

(iv) ಸ್ವಯಂ ಪ್ರಮಾಣೀಕರಣದ ಮುಖಾಂತರ ಸರ್ಕಾರವು ಅಧಿಸೂಚಿಸಿದಂತೆ ಕಟ್ಟಡಗಳಿಗೆ ಅನುಮತಿ ಮಂಜೂರು ಮಾಡುವುದನ್ನು ಒಳಗೊಳ್ಳುವುದು;

(v)ಉಲ್ಲಂಘನೆಯ ಪ್ರಕರಣಗಳಲ್ಲಿ ಪಟ್ಟಿ ಮಾಡಲಾದ ವೃತ್ತಿಪರರಿಗೆ ದಂಡನಾ ಉಪಬಂಧವನ್ನು ಒಳಗೊಳ್ಳುವುದು;

(vi)ಮಾಲೀಕರಿಂದ ಪಟ್ಟಿ ಮಾಡಲಾದ ವೃತ್ತಿಪರರು ಶುಲ್ಕವನ್ನು ಸಂಗ್ರಹಿಸುವುದನ್ನು ಒಳಗೊಂಡಂತೆ ಮುನ್ಸಿಪಾಲಿಟಿಗಳು ಲೆವಿಯನ್ನು ವಿಧಿಸುವುದಕ್ಕಾಗಿ ಉಪಬಂಧಗಳನ್ನು ಕಲ್ಪಿಸುವುದು;

(vii) ವ್ಯಾಪಾರ ಲೈಸೆನ್ಸ್‌ನ್ನು ತರ್ಕಬದ್ಧಗೊಳಿಸುವುದು.

ಆದ್ದರಿಂದ ಈ ವಿಧೇಯಕ.

[2025ರ ವಿಧಾನ ಸಭೆಯ ವಿಧೇಯಕ ಸಂಖ್ಯೆ: 53, ಕಡತ ಸಂಖ್ಯೆ:ಸಂವ್ಯಶಾಇ 56 ಶಾಸನ 2025]
[ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 5ನೇ ನಮೂದನೆಯಡಿ ಬರುತ್ತದೆ.]
[ಕರ್ನಾಟಕ ರಾಜ್ಯ ಪತ್ರದ ಭಾಗ IVಎ ವಿಶೇಷ ರಾಜ್ಯ ಪತ್ರಿಕೆ ಸಂಖ್ಯೆ:585, ದಿನಾಂಕ:12.09.2025ರಲ್ಲಿ ಪ್ರಕಟಗೊಂಡಿದೆ]

1964ರ [1][ಕರ್ನಾಟಕ ಅಧಿನಿಯಮ][1] ಸಂಖ್ಯೆ 22

(1964ರ ಮೇ ಏಳನೆಯ ದಿನದಂದು [1][ಕರ್ನಾಟಕ ರಾಜ್ಯಪತ್ರ][1]ದಲ್ಲಿ ಮೊದಲು ಪ್ರಕಟವಾಗಿದೆ)

[1][ಕರ್ನಾಟಕ][1] ಮುನ್ಸಿಪಾಲಿಟಿಗಳ ಅಧಿನಿಯಮ, 1964

(1964ರ ಏಪ್ರಿಲ್ ಏಳನೆಯ ದಿನದಂದು ರಾಷ್ಟ್ರಪತಿಯವರ ಅನುಮತಿಯನ್ನು ಪಡೆಯಲಾಗಿದೆ)

(1966ರ 34, 1976ರ 2, 1976ರ 39, 1976ರ 83, 1979ರ 13, 1979ರ 21, 1981ರ 22, 1982ರ 26, 1982ರ 28, 1983ರ 12, 1984ರ 2, 1984ರ 33, 1984ರ 34, 1986ರ 33, 1987ರ 20, 1990ರ 2, 1990ರ 14, 1991ರ 22, 1994ರ 36, 1995ರ 20, 1995ರ 24, 1998ರ 24, 2000ರ 22, 2001ರ 28, 2003ರ 8, 2003ರ 23, 2003ರ 24, 2003ರ 31, 2003ರ 40, 2004ರ 17, 2005ರ 5, 2007ರ 1, 2007ರ 17, 2009ರ 17, 2011ರ 24, 2012ರ 19, 2012ರ 20, 2012ರ 31, 2012ರ 32, 2013ರ 57, 2013ರ 67, 2015ರ 06 , 2015ರ 42 ,2020ರ 10, 2020ರ 39, 2021ರ 03, 2021ರ 07, 2021ರ 16, 2021ರ 30, 2022ರ 02, 2022ರ 33, 2024ರ 43 ಮತ್ತು 2025ರ 64 ಈ ಅಧಿನಿಯಮಗಳ ಮೂಲಕ ತಿದ್ದುಪಡಿಯಾಗಿದೆ.)

[1][ಕರ್ನಾಟಕ ರಾಜ್ಯ][1]ದಲ್ಲಿ ಪಟ್ಟಣಗಳು ಮತ್ತು ನಗರಗಳಲ್ಲಿ ಮುನ್ಸಿಪಲ್ ವ್ಯವಹಾರಗಳ ನಿರ್ವಹಣೆಗೆ ಸಂಬಂಧಪಟ್ಟ ಕಾನೂನನ್ನು ಕ್ರೋಡೀಕರಿಸಲು ಮತ್ತು ತಿದ್ದುಪಡಿ ಮಾಡಲು ಅಧಿನಿಯಮ;

[1][ಕರ್ನಾಟಕ ರಾಜ್ಯ][1]ದಲ್ಲಿ ಮುನ್ಸಿಪಲ್ ಕಾರ್ಪೊರೇಷನ್‌ಗಳನ್ನು ಸ್ಥಾಪಿಸಿರುವ ನಗರಗಳನ್ನು ಹೊರತುಪಡಿಸಿ ಪಟ್ಟಣಗಳಲ್ಲಿ ಮತ್ತು ಇತರ ನಗರಗಳಲ್ಲಿ ಮುನ್ಸಿಪಲ್ ವ್ಯವಹಾರಗಳ ನಿರ್ವಹಣೆಗೆ ಸಂಬಂಧಪಟ್ಟ ಕಾನೂನನ್ನು ಕ್ರೋಡೀಕರಿಸುವುದು ಮತ್ತು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಹದಿನಾಲ್ಕನೆಯ ವರ್ಷದಲ್ಲಿ [1][ಕರ್ನಾಟಕ ರಾಜ್ಯ][1] ವಿಧಾನಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದು:-

1. 1973ರ ಕರ್ನಾಟಕ ಕಾನೂನು ಅಳವಡಿಕೆಗಳ ಆದೇಶದ ಮೂಲಕ 01.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

ಅಧ್ಯಾಯ-I
ಪ್ರಾರಂಭಿಕ

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು 1964ರ [1][ಕರ್ನಾಟಕ][1] ಮುನ್ಸಿಪಾಲಿಟಿಗಳ ಅಧಿನಿಯಮ ಎಂದು ಕರೆಯತಕ್ಕದು.

1. 1973ರ ಕರ್ನಾಟಕ ಕಾನೂನು ಅಳವಡಿಕೆಗಳ ಆದೇಶದ ಮೂಲಕ 01.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(2) ಇದು ಇಡೀ [1][ಕರ್ನಾಟಕ ರಾಜ್ಯ][1]ಕ್ಕೆ ವ್ಯಾಪ್ತವಾಗತಕ್ಕದ್ದು.

1. 1973ರ ಕರ್ನಾಟಕ ಕಾನೂನು ಅಳವಡಿಕೆಗಳ ಆದೇಶದ ಮೂಲಕ 01.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(3) ಈ ಪ್ರಕರಣ ಮತ್ತು 2ನೇ, 323ನೇ, 365ನೇ, 381ನೇ, 383ನೇ, 384ನೇ ಮತ್ತು 385ನೇ ಪ್ರಕರಣಗಳು ಕೂಡಲೇ ಜಾರಿಗೆ ಬರತಕ್ಕದ್ದು. * ಮತ್ತು ಈ ಅಧಿನಿಯಮದ ಉಳಿದ ಭಾಗವು ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ [1][ದಿನಾಂಕ][1]ದಂದು ಜಾರಿಗೆ ಬರತಕ್ಕದ್ದು.

1. ಅಧಿನಿಯಮದ ಉಳಿದ ಭಾಗವು ಅಧಿಸೂಚನೆಯ ಮೂಲಕ 1.4.1965 ರಂದು ಜಾರಿಗೆ ಬಂದಿದೆ. ಅಧಿಸೂಚನೆಯ ಅಧಿನಿಯಮದ ಕೊನೆಯಲ್ಲಿದೆ.

2. ಪರಿಭಾಷೆಗಳು.- ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(1) [1][xxx][1]

1.2001ರ ಅಧಿನಿಯಮ 28ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][(1ಎ) ``ಹಿಂದುಳಿದ ವರ್ಗಗಳು" ಎಂದರೆ, ಮುನ್ಸಿಪಲ್ ಕೌನ್ಸಿಲ್ ಅಥವಾ ಪಟ್ಟಣ ಪಂಚಾಯಿತಿಯ ಸ್ಥಾನಗಳಲ್ಲಿ ಮತ್ತು ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಹುದ್ದೆಗಳಲ್ಲಿ ಮೀಸಲಾತಿಯ ಉದ್ದೇಶಕ್ಕಾಗಿ, ಕಾಲಕಾಲಕ್ಕೆ ಸರ್ಕಾರವು ಎ ಮತ್ತು ಬಿ ಪ್ರವರ್ಗಗಳೆಂಬುದಾಗಿ ವರ್ಗೀಕರಿಸಬಹುದಾದ ಮತ್ತು ಅಧಿಸೂಚಿಸಬಹುದಾದಂಥ ನಾಗರಿಕರ ವರ್ಗ ಮತ್ತು ವರ್ಗಗಳು][1]

1.1995ರ ಅಧಿನಿಯಮ 24ರ ಮೂಲಕ 26.09.1995 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) `` betterment fee'' ಎಂದರೆ ಮೇಲ್ಪಾಟು ಯೋಜನೆಯನ್ನು ಕಾರ್ಯರೂಪಕ್ಕೆ ತಂದ ಪರಿಣಾಮವಾಗಿ ಭೂಮಿಯ ಮೌಲ್ಯದಲ್ಲಿ ಆದ ಹೆಚ್ಚಳಕ್ಕೆ ಸಂಬಂಧಿಸಿದಂತೆ 160ನೇ ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಫೀಜು;

(3) ``ಕಟ್ಟಡ'' ವು ಮನೆ, ಹೊರಮನೆ, ಲಾಯ, ಕಕ್ಕಸು, ಮೂತ್ರ ಪಾತ್ರೆ, ಶೆಡ್ಡು, ಗುಡಿಸಲು, ಗೋಡೆ, ವರಾಂಡ, ಸ್ಥಿರ ವೇದಿಕೆ, ಮೇಲ್ಪಾಯ, ಬಾಗಿಲು ಮೆಟ್ಟಿಲು, ಮೆಟ್ಟಿಲು ಸಾಲು ಇವುಗಳನ್ನು ಅಥವಾ [1][ದೂರ ಸಂಪರ್ಕ ಗೋಪುರ ಅಥವಾ ಯಾವುದೇ ಹೆಸರಿನಿಂದ ಕರೆಯಲ್ಪಡುವ ಜಾಹೀರಾತು ಫಲಕಗಳೂ ಸೇರಿದಂತೆ][1] ಕಲ್ಲುಗೆಲಸದಿಂದ, ಇಟ್ಟಿಗೆಯಿಂದ, ಮರದಿಂದ, ಮಣ್ಣಿನಿಂದ, ಲೋಹದಿಂದ ಅಥವಾ ಇತರ ಯಾವುದೇ ಸಾಮಗ್ರಿಯಿಂದ ನಿರ್ಮಿಸಿದ ಇತರ ಯಾವುದೇ ರಚನೆಯನ್ನು ಒಳಗೊಳ್ಳುತ್ತದೆ. ಆದರೆ ಸಾಗಿಸಬಹುದಾದ ಆಸರೆಯನ್ನು ಒಳಗೊಳ್ಳುವುದಿಲ್ಲ;

1. 2015ರ ಅಧಿನಿಯಮ 06ರ ಮೂಲಕ 9.01.2015 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(4) ``ನಗರ ಮುನ್ಸಿಪಲ್ ಕೌನ್ಸಿಲ್'' ಎಂದರೆ, ಈ ಅಧಿನಿಯಮದ ಮೇರೆಗೆ ಸ್ಥಾಪಿತವಾದ ನಗರ ಮುನ್ಸಿಪಲ್ ಕೌನ್ಸಿಲ್;

[1][(5) ``ಕಮಿಷನರ್'' ಎಂದರೆ, ಈ ಅಧಿನಿಯಮದ ಮೇರೆಗೆ ಕಮಿಷನರ್ ರ ಕರ್ತವ್ಯಗಳನ್ನು ನೆರವೇರಿಸಲು ನೇಮಕಗೊಂಡ ರೀಜನಲ್ ಕಮಿಷನರ್ ಅಥವಾ ಇತರೆ ಅಧಿಕಾರಿ;][1]

1.2007ರ ಅಧಿನಿಯಮ 17ರ ಮೂಲಕ 5.1.2007 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(6) ``ಕೌನ್ಸಿಲರ್'' ಎಂದರೆ ಮುನ್ಸಿಪಲ್ ಕೌನ್ಸಿಲ್ ನ [1][ಅಥವಾ ಪಟ್ಟಣ ಪಂಚಾಯಿತಿಯ][1] ಕಾನೂನುಸಮ್ಮತ ಸದಸ್ಯನಾಗಿರುವ ಯಾರೇ ವ್ಯಕ್ತಿ;

1.1995ರ ಅಧಿನಿಯಮ 24ರ ಮೂಲಕ 26.09.1995 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(7) ``ಅಪಾಯಕಾರಿ ರೋಗ'' ಎಂದರೆ,-

(ಎ) ಕಾಲರಾ, ಪ್ಲೇಗು, ದಡಾರ, ಸಿಡುಬು, ಕ್ಷಯ, ಕುಷ್ಠ, ಕರುಳಿನ ವಿಷಮಶೀತಜ್ವರ, ಸೆರಿಬ್ರೊ-ಸ್ಪೈನಲ್ ಮೆನಿಂಜೈಟಿಸ್ ಮತ್ತು ಡಿಫ್ತೀರಿಯಾ; ಮತ್ತು

(ಬಿ) ಈ ಅಧಿನಿಯಮದ ಉದ್ದೇಶಗಳಿಗಾಗಿ ಸರ್ಕಾರವು ಅಧಿಸೂಚನೆಯ ಮೂಲಕ ಯಾವ ರೋಗವನ್ನು ಅಪಾಯಕಾರಿ ರೋಗವೆಂದು ಘೋಷಿಸುತ್ತದೋ ಆ ಇತರ ಯಾವುದೇ ಸ್ಥಳೀಯ, ಸಾಂಕ್ರಾಮಿಕ ಅಥವಾ ಸೋಂಕು ರೋಗ;

(8) ``ಈ ಅಧಿನಿಯಮದ ಪ್ರಾರಂಭದ ದಿನಾಂಕ'' ಎಂದರೆ 1ನೇ ಪ್ರಕರಣದ (3)ನೇ ಉಪ ಪ್ರಕರಣದ ಮೇರೆಗೆ ಗೊತ್ತುಪಡಿಸಿದ ದಿನಾಂಕ;

[1][(8ಎ) 'ಪೌರಾಡಳಿತ ನಿರ್ದೇಶಕರು' ಎಂದರೆ, 388ನೇ ಪ್ರಕರಣದ (1-ಎ) ಉಪ-ಪ್ರಕರಣದ ಅಡಿಯಲ್ಲಿ ನೇಮಕಗೊಂಡಿರುವ ಪೌರಾಡಳಿತ ನಿರ್ದೇಶಕರು]1

1.2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(9) ``ಚುನಾವಣಾ ನ್ಯಾಯಾಧಿಕರಣ'' ಎಂದರೆ ಯಾವುದೇ ಪ್ರದೇಶಕ್ಕೆ ಸಂಬಂಧಿಸಿದಂತೆ, ಚುನಾವಣಾ ನ್ಯಾಯಾಧಿಕರಣವೆಂದು ಸರ್ಕಾರವು ಅಧಿಸೂಚನೆಯ ಮೂಲಕ ನೇಮಕ ಮಾಡಿದ ಯಾರೇ ನ್ಯಾಯಿಕ ಅಧಿಕಾರಿ ಮತ್ತು ಅಂಥ ಯಾರೇ ನ್ಯಾಯಿಕ ಅಧಿಕಾರಿಯನ್ನು ನೇಮಕ ಮಾಡಿರದಿದ್ದರೆ, ಯಾವ ಪ್ರದೇಶದೊಳಗೆ ಚುನಾವಣೆಯನ್ನು ನಡೆಸಲಾಗಿದೆಯೋ ಅಥವಾ ನಡೆಸಬೇಕಾಗಿತ್ತೋ ಆ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ [1][ಸಿವಿಲ್ ನ್ಯಾಯಾಧೀಶ][1].

1. 1973ರ ಕರ್ನಾಟಕ ಕಾನೂನು ಅಳವಡಿಕೆಗಳ ಆದೇಶದ ಮೂಲಕ 01.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

[1][ವಿವರಣೆ:- XXX][1]

1. ಎಸ್ಒ 1911, 24.10.1973 ರಂತೆ ಬಿಟ್ಟುಬಿಡಲಾಗಿದೆ.

[1][(9ಎ) "ಪಟ್ಟಿ ಮಾಡಲಾದ ವೃತ್ತಿಪರರು" ಎಂದರೆ, ವೃತ್ತಿಪರರಾದ ವಾಸ್ತುಶಿಲ್ಪಿಗಳು, ಇಂಜಿನಿಯರುಗಳು, ರಚನಾ ವಿನ್ಯಾಸ ಸಮಾಲೋಚಕರು, ಯಾಂತ್ರಿಕ, ವಿದ್ಯುನ್ಮಾನ ಮತ್ತು ಕೊಳಾಯಿ ಸಂಬಂಧಿ (ಎಂಇಪಿ) ಸಲಹೆಗಾರರು, ಪಟ್ಟಣ ಯೋಜಕರು, ಪರಿಸರ ಸಮಾಲೋಚಕರು ಮುಂತಾದವರು ಸಂದರ್ಭಾನುಸಾರ ಕಟ್ಟಡ ನಿರ್ಮಾಣದ ಮೊದಲು, ನಿರ್ಮಾಣದ ಸಮಯದಲ್ಲಿ ಮತ್ತು ನಂತರ ಪರಿಶೀಲಿಸಲು, ಅನುಮೋದಿತ ಯೋಜನೆಗಳ ಉಪಬಂಧಗಳನುಸಾರ ಮಾಡಲಾದ ನಿರ್ಮಾಣಗಳನ್ನು ಪ್ರಮಾಣೀಕರಿಸಲು ಮತ್ತು ಸ್ಥಳೀಯ ಪ್ರಾಧಿಕಾರಕ್ಕೆ ವರದಿ ಮಾಡಲು ಹಾಗೂ ಸರ್ಕಾರವು ಅಧಿಸೂಚಿಸಿದಂತೆ ಕೆಲವು

ಕಟ್ಟಡಗಳ ಕಟ್ಟಡ ನಕ್ಷೆಗಳನ್ನು ಮಂಜೂರು ಮಾಡಲು ಸಹ ಸ್ಥಳೀಯ ಪ್ರಾಧಿಕಾರದಿಂದ ಅಧಿಕೃತಗೊಳಿಸಿದ ವ್ಯಕ್ತಿಗಳು ಎಂಬುದಾಗಿ ಪಟ್ಟಿ ಮಾಡಲಾದವರು".][1]

1. 2025ರ ಅಧಿನಿಯಮ 64ರ ಮೂಲಕ 12.09.2025 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(10) ``ಸರ್ಕಾರ'' ಎಂದರೆ ರಾಜ್ಯ ಸರ್ಕಾರ;

(11) ``ಗುಡಿಸಲು'' ಎಂದರೆ, ಬಹುಮಟ್ಟಿಗೆ ಮರದಿಂದ, ಬಿದಿರಿನಿಂದ, ಮಣ್ಣಿನಿಂದ, ಎಲೆಗಳಿಂದ, ಹುಲ್ಲಿನಿಂದ, ಬಟ್ಟೆಯಿಂದ ಅಥವಾ ಮಟ್ಟಿಯಿಂದ ನಿರ್ಮಿಸಿದ ಯಾವುದೇ ಕಟ್ಟಡ ಮತ್ತು ಈ ಅಧಿನಿಯಮದ ಉದ್ದೇಶಗಳಿಗಾಗಿ ಮುನ್ಸಿಪಲ್ ಕೌನ್ಸಿಲ್ ಯಾವ ಬಗೆಯ ಸಾಮಗ್ರಿಯಿಂದ ನಿರ್ಮಿಸಿದ ರಚನೆಯನ್ನು ಗುಡಿಸಲೆಂದು ಘೋಷಿಸುತ್ತದೋ ಆ ಬಗೆಯ ಸಾಮಗ್ರಿಯಿಂದ ನಿರ್ಮಿಸಿದ ಯಾವುದೇ ರಚನೆಯನ್ನು ಒಳಗೊಳ್ಳುತ್ತದೆ;

(12) ``ಭೂಮಿ''ಯು, ಯಾವ ಭೂಮಿಯ ಮೇಲೆ ಕಟ್ಟಲಾಗಿದೆಯೋ ಅಥವಾ ಯಾವ ಭೂಮಿ ನೀರಿನಿಂದ ಆವೃತವಾಗಿದೆಯೋ ಆ ಭೂಮಿಯನ್ನು, ಭೂಮಿಯಿಂದ ಉದ್ಭವಿಸುವ ಪ್ರಯೋಜನಗಳನ್ನು, ಭೂಮಿಗೆ ಲಗತ್ತಾದ ವಸ್ತುಗಳನ್ನು ಅಥವಾ ಭೂಮಿಗೆ ಲಗತ್ತಾದ ವಸ್ತುವಿಗೆ ಶಾಶ್ವತವಾಗಿ ಅಂಟಿಕೊಂಡಿರುವ ವಸ್ತುಗಳನ್ನು ಮತ್ತು ಯಾವುದೇ ಬೀದಿಯ ಮೇಲೆ ಕಾನೂನು ಮೂಲಕ ಸೃಜಿಸಿದ ಹಕ್ಕುಗಳನ್ನು ಒಳಗೊಳ್ಳುತ್ತದೆ;

(13) ``ಮಾರುಕಟ್ಟೆ'' ಯು ಯಾವ ಸ್ಥಳದಲ್ಲಿ ಮಾಂಸ, ಮೀನು, ಹಣ್ಣು, ತರಕಾರಿಗಳ, ಮನುಷ್ಯನ ಆಹಾರವಾಗಿರುವ ಪ್ರಾಣಿಗಳ ಅಥವಾ ಮನುಷ್ಯನ ಯಾವುದೇ ಬಗೆಯ ಆಹಾರದ ಇತರ ಯಾವುದೇ ವಸ್ತುಗಳ- ಮಾರಾಟಕ್ಕಾಗಿ ಅಥವಾ ಮಾರಾಟ ಮಾಡಲು ಪ್ರದರ್ಶಿಸುವ ಉದ್ದೇಶಕ್ಕಾಗಿ, ಕೊಳ್ಳುವವರ ಮತ್ತು ಮಾರುವವರ ಅಂಥ ಸ್ಥಳದಲ್ಲಿ ಗುಂಪು ಸೇರಲು ಯಾವುದೇ ಸಾಮಾನ್ಯ ನಿಯಂತ್ರಣವಿಲ್ಲದಿದ್ದರೂ ಅಥವಾ ಆ ಸ್ಥಳದ ಒಡೆಯನು ಅಥವಾ ಇತರ ಯಾರೇ ವ್ಯಕ್ತಿಯು ಮಾರುಕಟ್ಟೆ ವ್ಯವಹಾರದ ಮೇಲೆ ಅಥವಾ ಆ ಸ್ಥಳಕ್ಕೆ ಮೇಲಿಂದ ಮೇಲೆ ಬರುವ ವ್ಯಕ್ತಿಗಳ ಮೇಲೆ ಯಾವುದೇ ನಿಯಂತ್ರಣವನ್ನು ಚಲಾಯಿಸುತ್ತಿರಲಿ ಅಥವಾ ಚಲಾಯಿಸದೆ ಇರಲಿ ಅಂಥ ಸ್ಥಳದ ಒಡೆಯರ ಸಮ್ಮತಿಯಿಂದ ಅಥವಾ ಸಮ್ಮತಿ ಇಲ್ಲದೆ ಜನರು ಸೇರುತ್ತಾರೋ ಆ ಯಾವುದೇ ಸ್ಥಳವನ್ನು ಒಳಗೊಳ್ಳುತ್ತದೆ;

(14) ``ಮುನ್ಸಿಪಲ್ ಕೌನ್ಸಿಲ್'' ಎಂದರೆ, ಈ ಅಧಿನಿಯಮದ ಮೇರೆಗೆ ಸ್ಥಾಪಿತವಾದ ಟೌನ್ ಅಥವಾ ಸಿಟಿ [1][ಮುನ್ಸಿಪಲ್ ಪ್ರದೇಶ][1]ದ ಕೌನ್ಸಿಲ್.

1.1994ರ ಅಧಿನಿಯಮ 36ರ ಮೂಲಕ 1.6.1964 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(15) "ಮುನ್ಸಿಪಲ್ ಪ್ರದೇಶ" ಎಂದರೆ, ಚಿಕ್ಕ ನಗರ ಪ್ರದೇಶವೆಂದು ನಿರ್ದಿಷ್ಟಪಡಿಸಿರುವ ಯಾವುದೇ ಪ್ರದೇಶ ಮತ್ತು 3ನೇ ಪ್ರಕರಣದ ಅಡಿಯಲ್ಲಿ ಯಾವ ಪ್ರದೇಶವನ್ನು ಮುನ್ಸಿಪಲ್ ಪ್ರದೇಶವೆಂದು ಯಾವ ಪ್ರದೇಶವನ್ನು ಭಾವಿಸಲಾಗುತ್ತದೋ ಆ ಯಾವುದೇ ಪ್ರದೇಶ ಮತ್ತು ಇದು 350ನೇ ಪ್ರಕರಣದ ಅಡಿಯಲ್ಲಿ ಯಾವ ಸ್ಥಳೀಯ ಪ್ರದೇಶವನ್ನು ಮುನ್ಸಿಪಲ್ ಪ್ರದೇಶವೆಂದು ಭಾವಿಸಲಾಗುತ್ತದೋ ಆ ಯಾವುದೇ ಸ್ಥಳೀಯ ಪ್ರದೇಶವನ್ನು ಒಳಗೊಳ್ಳುತ್ತದೆ][1]

1.1994ರ ಅಧಿನಿಯಮ 36ರ ಮೂಲಕ 1.6.1964 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(16) ``ಅಧಿಸೂಚನೆ'' ಎಂದರೆ, ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ;

(17) ``ಉಪದ್ರವ'' ಎಂಬುದು, ಹಾನಿ, ಅಪಾಯ, ಕಿರುಕುಳ ಉಂಟುಮಾಡುವ ಅಥವಾ ಉಂಟು ಮಾಡಬಹುದಾದ ಅಥವಾ ಕಣ್ಣಿನಿಂದ ಕಾಣುವ, ವಾಸನೆಯನ್ನು ಗ್ರಹಿಸುವ ಅಥವಾ ಕಿವಿಯಿಂದ ಕೇಳುವ ಶಕ್ತಿಗೆ ಹಾನಿ ಮಾಡುವ ಅಥವಾ ಮಾಡಬಹುದಾದ ಅಪಾಯಕಾರಿಯಾಗುವ ಅಥವಾ ವಿಶ್ರಾಂತಿ ಅಥವಾ ನಿದ್ರೆಗೆ ಅಡ್ಡಿಯುಂಟುಮಾಡುವ, ಕಿರಿಕಿರಿಯನ್ನುಂಟು ಮಾಡುವ ಅಥವಾ ಮಾಡಬಹುದಾದ ಅಥವಾ ಪ್ರಾಣಕ್ಕೆ ಅಪಾಯಕಾರಿಯಾದ ಅಥವಾ ಅಪಾಯಕಾರಿಯಾಗಬಹುದಾದ ಅಥವಾ ಆರೋಗ್ಯ ಅಥವಾ ಸ್ವತ್ತಿಗೆ ಹಾನಿಕಾರಕವಾದ ಯಾವುದೇ ಕಾರ್ಯ, ಲೋಪ, ಸ್ಥಳ, ಪ್ರಾಣಿ ಅಥವಾ ವಸ್ತುವನ್ನು ಒಳಗೊಳ್ಳುತ್ತದೆ;

(18) ``ಅಧಿಭೋಗದಾರ'' ಪದವು,-

(ಎ) ಯಾವ ಭೂಮಿಗೆ ಅಥವಾ ಕಟ್ಟಡಕ್ಕೆ ಸಂಬಂಧಿಸಿದಂತೆ ಅಂಥ ಬಾಡಿಗೆಯನ್ನು ಸಂದಾಯ ಮಾಡಲಾಗಿದೆಯೋ ಅಥವಾ ಮಾಡಬೇಕಾಗಿದೆಯೋ ಆ ಯಾವುದೇ ಭೂಮಿಯ ಅಥವಾ ಕಟ್ಟಡದ ಬಾಡಿಗೆಯನ್ನು ಅಥವಾ ಬಾಡಿಗೆಯ ಯಾವುದೇ

ಭಾಗವನ್ನು ಒಡೆಯನಿಗೆ ತತ್ಕಾಲದಲ್ಲಿ ಸಂದಾಯ ಮಾಡುತ್ತಿರುವ ಅಥವಾ ಸಂದಾಯ ಮಾಡಲು ಹೊಣೆಯಾಗಿರುವ ಯಾರೇ ವ್ಯಕ್ತಿಯನ್ನು;

(ಬಿ) ತನ್ನ ಭೂಮಿ ಅಥವಾ ಕಟ್ಟಡದ ಅಧಿಭೋಗದಲ್ಲಿರುವ ಅಥವಾ ಅನ್ಯಥಾ ಉಪಯೋಗಿಸುತ್ತಿರುವ ಒಡೆಯನನ್ನು;

(ಸಿ) ಯಾವುದೇ ಭೂಮಿ ಅಥವಾ ಕಟ್ಟಡದ ಬಾಡಿಗೆ ರಹಿತ ಬಾಡಿಗೆದಾರನನ್ನು;

(ಡಿ) ಯಾವುದೇ ಭೂಮಿ ಅಥವಾ ಕಟ್ಟಡದ ಅಧಿಭೋಗದಲ್ಲಿರುವ ಲೈಸೆನ್ಸುದಾರನನ್ನು; ಮತ್ತು

(ಇ) ಯಾವುದೇ ಭೂಮಿ ಅಥವಾ ಕಟ್ಟಡದ ಉಪಯೋಗ ಮತ್ತು ಅಧಿಭೋಗಕ್ಕಾಗಿಹಾಗೂ ಪರಿಹಾರವನ್ನು ಮಾಲೀಕನಿಗೆ ಸಂದಾಯ ಮಾಡಲು ಹೊಣೆಯಾಗಿರುವ ಯಾರೇ ವ್ಯಕ್ತಿಯನ್ನು;

- ಒಳಗೊಳ್ಳುತ್ತದೆ.

[1][(19)xxx][1]

1. 1979ರ ಅಧಿನಿಯಮ 21ರ ಮೂಲಕ 31.3.1979 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(20) ``ಒಡೆಯ'' ಪದವು ಯಾವ ವ್ಯಕ್ತಿಯು ತತ್ಕಾಲದಲ್ಲಿ ತನಗಾಗಿ ಅಥವಾ ತನಗೋಸ್ಕರ ಮತ್ತು ಇತರರಿಗೋಸ್ಕರ ಅಥವಾ ಇತರ ಯಾರೇ ವ್ಯಕ್ತಿಗಾಗಿ ಏಜೆಂಟಾಗಿ, ಟ್ರಸ್ಟಿಯಾಗಿ, ಪಾಲಕ ಅಥವಾ ರಿಸೀವರನಾಗಿ ಯಾವುದೇ ಭೂಮಿಯ ಅಥವಾ ಕಟ್ಟಡದ ಬಾಡಿಗೆಯನ್ನು ಸ್ವೀಕರಿಸುತ್ತಿರುವ ಅಥವಾ ಸ್ವೀಕರಿಸಲು ಹಕ್ಕುಳ್ಳ ಅಥವಾ ಯಾವ ವ್ಯಕ್ತಿಯು ಭೂಮಿಯನ್ನು ಅಥವಾ ಕಟ್ಟಡವನ್ನು ಅಥವಾ ಅದರ ಭಾಗವನ್ನು ಬಾಡಿಗೆದಾರನಿಗೆ ಬಾಡಿಗೆಗೆ ಕೊಟ್ಟಿದ್ದರೆ ಬಾಡಿಗೆಯನ್ನು ಸ್ವೀಕರಿಸುವ ಅಥವಾ ಸ್ವೀಕರಿಸಲು ಹಕ್ಕುಳ್ಳ ವ್ಯಕ್ತಿಯನ್ನು ಒಳಗೊಳ್ಳುತ್ತದೆ ಮತ್ತು 1950ರ ನಿರ್ವಾಸಿತ ಸ್ವತ್ತಿನ ಆಡಳಿತ ಅಧಿನಿಯಮದ (1950ರ ಕೇಂದ್ರ ಅಧಿನಿಯಮ XXXI) ರ ಮೇರೆಗೆ ತನ್ನಲ್ಲಿ ನಿಹಿತವಾದ ನಿರ್ವಾಸಿತ ಸ್ವತ್ತಿಗೆ ಸಂಬಂಧಿಸಿದಂತೆ ನಿರ್ವಾಸಿತ ಸ್ವತ್ತಿನ ಅಭಿರಕ್ಷಕನನ್ನು ಸಹ ಒಳಗೊಳ್ಳುತ್ತದೆ;

[1][(20ಎ) "ಜನಸಂಖ್ಯೆ" ಎಂದರೆ, ಈ ಹಿಂದೆ ನಡೆಸಿದ ಯಾವ ಜನಗಣತಿಯ ಅಂಕಿಸಂಖ್ಯೆಗಳನ್ನು ಪ್ರಕಟಿಸಲಾಗಿದೆಯೋ ಆ ಹಿಂದಿನ ನಿಕಟಪೂರ್ವ ಜನಗಣತಿಯಲ್ಲಿ ಕಂಡುಕೊಂಡಿರುವ ಜನಸಂಖ್ಯೆ][1]

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(21) ''ನಿಯಮಿಸಿದ'' ಎಂದರೆ, ಈ ಅಧಿನಿಯಮದ ಮೇರೆಗೆ ಸರ್ಕಾರವು ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(22) ``ಖಾಸಗಿ ಬೀದಿ'' ಎಂದರೆ, ಸಾರ್ವಜನಿಕ ಬೀದಿಯಲ್ಲದ ಯಾವುದೇ ಬೀದಿ, ರಸ್ತೆ, ಚೌಕ, ಅಂಗಳ, ಸಂದಿ, ಮಾರ್ಗ ಅಥವಾ ಸವಾರಿ ಮಾರ್ಗ, ಆದರೆ ಅದು ಆವರಣದ ಒಡೆಯನು ಅಂಥ ಆವರಣಕ್ಕೆ ಹೋಗಿ ಬರಲು ಅಥವಾ ಅದನ್ನು ಅನುಕೂಲಕರವಾಗಿ ಬಳಸಿಕೊಳ್ಳಲು ತನ್ನ ಸ್ವಂತ ಭೂಮಿಯ ಮೇಲೆ ರಚಿಸಿದ ದಾರಿಯನ್ನು ಒಳಗೊಳ್ಳುವುದಿಲ್ಲ;

(23) ``ಪಬ್ಲಿಕ್ ಸೆಕ್ಯೂರಿಟಿಗಳು'' ಎಂದರೆ,-

(ಎ) ಭಾರತ ಸರ್ಕಾರದ ಸೆಕ್ಯೂರಿಟಿಗಳು;

(ಬಿ) [1][ಕರ್ನಾಟಕ ಸರ್ಕಾರ][1] ದ ಅಥವಾ ಇತರ ಯಾವುದೇ ರಾಜ್ಯ ಸರ್ಕಾರದಿಂದ ಸೆಕ್ಯೂರಿಟಿಗಳು;

1. 1973ರ ಕರ್ನಾಟಕ ಕಾನೂನು ಅಳವಡಿಕೆಗಳ ಆದೇಶದ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(ಸಿ) ಆ ರಾಜ್ಯದಲ್ಲಿ ಜಾರಿಯಲ್ಲಿರುವ ಕಾನೂನಿನ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಯಾವುದೇ ಸ್ಥಳೀಯ ಪ್ರಾಧಿಕಾರವು ಅಥವಾ ಅದು ಅದರ ಪರವಾಗಿ ಹಣಕ್ಕಾಗಿ ಹೊರಡಿಸಿದ ಡಿಬೆಂಚರ್ ಗಳು ಅಥವಾ ಇತರ ಸೆಕ್ಯೂರಿಟಿಗಳು; ಅಥವಾ

(ಡಿ) ಈ ಬಗ್ಗೆ ಸರ್ಕಾರವು ಮಾಡಿದಂಥ ಯಾವುದೇ ಆದೇಶದ ಮೂಲಕ ಸ್ಪಷ್ಟವಾಗಿ ಅಧಿಕೃತಗೊಳಿಸಿದ ಸೆಕ್ಯೂರಿಟಿ;

(24) ``ಸಾರ್ವಜನಿಕ ಬೀದಿ'' ಎಂದರೆ, ಸಂಚಾರ ಬೀದಿಯಾಗಿರಲಿ ಅಥವಾ ಅಲ್ಲದಿರಲಿ, ಸಾರ್ವಜನಿಕರು ದಾರಿಯ ಹಕ್ಕನ್ನು ಹೊಂದಿರುವ ಯಾವುದೇ ಬೀದಿ, ರಸ್ತೆ, ಚೌಕ, ಅಂಗಳ, ಸಂದಿ, ಮಾರ್ಗ ಅಥವಾ ಸವಾರಿದಾರಿ, ಮತ್ತು,-

(ಎ) ಯಾವುದೇ ಸಾರ್ವಜನಿಕ ಸೇತುವೆ ಮೇಲಿನ ಅಥವಾ ಒಡ್ಡುದಾರಿ ಮೇಲಿನ ನಡುರಸ್ತೆ;

(ಬಿ) ಯಾವುದೇ ಅಂಥ ಬೀದಿಗೆ, ಸಾರ್ವಜನಿಕ ಸೇತುವೆಗೆ ಅಥವಾ ಒಡ್ಡುದಾರಿಗೆ ಲಗತ್ತಾಗಿರುವ ಕಾಲುದಾರಿ;

(ಸಿ) ಯಾವುದೇ ಅಂಥ ಬೀದಿ, ಸಾರ್ವಜನಿಕ ಸೇತುವೆ ಅಥವಾ ಒಡ್ಡು ದಾರಿಗೆ ಹೊಂದಿಕೊಂಡಿರುವ ಚರಂಡಿಗಳನ್ನು ಮತ್ತು ಯಾವ ಭೂಮಿಗೆ ಹೊಂದಿಕೊಂಡಿರುವ ಸ್ವತ್ತು ಖಾಸಗಿಯದೇ ಆಗಿರಲಿ ಅಥವಾ ಸರ್ಕಾರಕ್ಕೆ ಅಥವಾ ಮುನ್ಸಿಪಲ್ ಕೌನ್ಸಿಲ್‌ಗೆ ಸೇರಿರುವ ಸ್ವತ್ತೇ ಆಗಿರಲಿ, ಆ ಭೂಮಿಯು ಯಾವುದೇ ನೆಲಗಟ್ಟಿನಿಂದ, ವರಾಂಡದಿಂದ ಅಥವಾ ಇತರ ರಚನೆಯಿಂದ ಎಲ್ಲೆಗಳವರೆಗಿನ ನಡುರಸ್ತೆಯ ಎರಡೂ ಬದಿಯಲ್ಲಿರುವ ಮುಚ್ಚಿದ ಅಥವಾ ಮುಚ್ಚಿರದಿರುವಲ್ಲಿ ಭೂಮಿಯನ್ನು ಒಳಗೊಳ್ಳುತ್ತದೆ; ಮತ್ತು

(ಡಿ) ಈ ಅಧಿನಿಯಮದ ಯಾವುದೇ ಉಪಬಂಧದ ಮೇರೆಗೆ ಸಾರ್ವಜನಿಕ ರಸ್ತೆಯೆನಿಸುವ ಅಥವಾ ಸಾರ್ವಜನಿಕ ರಸ್ತೆಯೆಂದು ಘೋಷಿಸಿದ ಯಾವುದೇ ಬೀದಿ;

(25) ``ಅನುಸೂಚಿತ ಜಾತಿಗಳು'' ಎಂದರೆ, ತತ್ಕಾಲದಲ್ಲಿ ಜಾರಿಯಲ್ಲಿರುವ 1950ರ ಸಂವಿಧಾನ (ಅನುಸೂಚಿತ ಜಾತಿಗಳು) ಆದೇಶದಲ್ಲಿ ಮತ್ತು 1950ರ ಸಂವಿಧಾನ (ಅನುಸೂಚಿತ ಬುಡಕಟ್ಟುಗಳು) ಆದೇಶದಲ್ಲಿ [1][ಕರ್ನಾಟಕ ರಾಜ್ಯ][1] ಕ್ಕೆ ಸಂಬಂಧಿಸಿದಂತೆ ಅಥವಾ ಅದರ ಯಾವುದೇ ಪ್ರದೇಶಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟಪಡಿಸಿದ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳು;

1. 1973ರ ಕರ್ನಾಟಕ ಕಾನೂನು ಅಳವಡಿಕೆಗಳ ಆದೇಶದ ಮೂಲಕ 01.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

[1][(25ಎ) ``ರಾಜ್ಯ ಚುನಾವಣಾ ಆಯೋಗ'' ಎಂದರೆ, ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1933ರ 308ನೇ ಪ್ರಕರಣದ ಮೇರೆಗೆ ಸ್ಥಾಪಿಸಿದ ಕರ್ನಾಟಕ ರಾಜ್ಯ ಚುನಾವಣಾ ಆಯೋಗ.][1]

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(26) ``ಬೀದಿ'' ಎಂದರೆ, ಸಂಚಾರದ ಬೀದಿಯಾಗಿರಲಿ ಅಥವಾ ಅಲ್ಲದಿರಲಿ, ಶಾಶ್ವತವಾಗಿ ಅಥವಾ ತಾತ್ಕಾಲಿಕವಾಗಿ ಸಾರ್ವಜನಿಕರು ಹೋಗಿ ಬರುವ ಯಾವುದೇ ರಸ್ತೆ, ಕಾಲು ದಾರಿ, ಚೌಕ, ಅಂಗಳ, ಸಂದಿ ಅಥವಾ ದಾರಿ; ಮತ್ತು ಅದು ಖಾಸಗಿ ಸ್ವತ್ತಾಗಿರಬಹುದಾಗಿದ್ದರೂ ಕೂಡ, ಮತ್ತು ಅದಕ್ಕೆ ಮನೆಗಳು, ಅಂಗಡಿಗಳು ಅಥವಾ ಇತರ ಕಟ್ಟಡಗಳು ಲಗತ್ತಾಗಿದ್ದರೆ, ಯಾವುದೇ ಗೇಟಿನಿಂದ, ಕಂಬದಿಂದ, ಸರಪಳಿಯಿಂದ ಅಥವಾ ಇತರ ಬೇಲಿಯಿಂದ ಭಾಗಶಃ ಅಥವಾ ಪೂರ್ತಿಯಾಗಿ ತಡೆಗಟ್ಟಿದ್ದಾಗ್ಯೂ, ಯಾರೇ ವ್ಯಕ್ತಿಯು, ಅಂಥ ವ್ಯಕ್ತಿಗಳು ಅಂಥ ಕಟ್ಟಡಗಳ ಅಧಿಭೋಗದಾರರಾಗಿರಲಿ ಅಥವಾ ಆಗಿಲ್ಲದಿರಲಿ ಅದನ್ನು ಯಾವುದೇ ಸಾರ್ವಜನಿಕ ಸ್ಥಳಕ್ಕೆ ಅಥವಾ ಸಂಚಾರ ಬೀದಿಗೆ ಹೋಗಿ ಬರಲು ಮಾರ್ಗವಾಗಿ ಬಳಸುತ್ತಿದ್ದರೆ, ಆ ಪ್ರತಿಯೊಂದು ಖಾಲಿ ಜಾಗವನ್ನು ಅದು ಒಳಗೊಳ್ಳುತ್ತದೆ. ಆದರೆ, ಅಂಥ ಯಾವುದೇ ಕಟ್ಟಡದ ಅಧಿಭೋಗದಾರನು, ಯಾವ ಸ್ಥಳದ ಯಾವುದೇ ಭಾಗವನ್ನು ಹಿಂದೆ ಹೇಳಿದಂತೆ ಬಳಸದಂತೆ ಇತರ ಎಲ್ಲ ವ್ಯಕ್ತಿಗಳನ್ನು ಎಲ್ಲ ವೇಳೆಗಳಲ್ಲಿ ತಡೆಗಟ್ಟಲು ಹಕ್ಕನ್ನು ಹೊಂದಿರುವನೋ ಅಂಥ ಸ್ಥಳದ ಯಾವುದೇ ಭಾಗವನ್ನು ಒಳಗೊಳ್ಳತಕ್ಕದಲ್ಲ;

(27) ``ತೆರಿಗೆ'' ಎಂಬುದು ಯಾವುದೇ ದಾರಿಸುಂಕ, ದರ, ಸೆಸ್, ಫೀಜು ಅಥವಾ ಈ ಅಧಿನಿಯಮದ ಮೇರೆಗೆ ವಿಧಿಸಬಹುದಾದ ಇತರ ಸುಂಕವನ್ನು ಒಳಗೊಳ್ಳುತ್ತದೆ;

[1][(27ಎ) "ತೆರಿಗೆಗೆ ಗುರಿಯಾಗತಕ್ಕ ಸ್ವತ್ತಿನ ಮೂಲ ಮೌಲ್ಯ" ಎಂದರೆ, ಈ ಅಧಿನಿಯಮ ಮತ್ತು ನಿಯಮಗಳ ಉಪಬಂದಗಳಿಗೆ ಅನುಗುಣವಾಗಿ [2][ಕಟ್ಟಡಗಳ ಅಥವಾ ಖಾಲಿ ಭೂಮಿಯ ಅಥವಾ ಅವೆರಡರ ತೆರಿಗೆ]2 ಯ ನಿರ್ಧರಣೆಯ ಉದ್ದೇಶಕ್ಕಾಗಿ ಕಟ್ಟಡವು ಆವರಿಸಿಕೊಂಡಿರುವ ಯಾವುದೇ ಭೂಮಿಯು ಸೇರಿದಂತೆ ಯಾವುದೇ ಕಟ್ಟಡಗಳಿಗೆ ಅಥವಾ ಖಾಲಿ ಭೂಮಿಗೆ ಅಥವಾ ಅವೆರಡಕ್ಕೆ ನಿಗದಿಪಡಿಸಿರುವ ಮೌಲ್ಯ][2]][1]

1. 2001ರ ಅಧಿನಿಯಮ 28ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 2003ರ ಅಧಿನಿಯಮ 31ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(28) ``ಟೌನ್ ಮುನ್ಸಿಪಲ್ ಕೌನ್ಸಿಲ್'' ಎಂದರೆ, ಈ ಅಧಿನಿಯಮದ ಮೇರೆಗೆ ಸ್ಥಾಪಿತವಾದ ಟೌನ್ ಮುನ್ಸಿಪಲ್ ಕೌನ್ಸಿಲ್;

[1][(28ಎ)] "ಪಟ್ಟಣ ಪಂಚಾಯತ್" ಎಂದರೆ, ಈ ಅಧಿನಿಯಮದ ಮೇರೆಗೆ ಸ್ಥಾಪಿತವಾದ ಪಟ್ಟಣ ಪಂಚಾಯತ್;][1]

1.1995ರ ಅಧಿನಿಯಮ 24ರ ಮೂಲಕ 26.9.1995 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(28ಬಿ) "ಖಾಲಿ ಭೂಮಿ" ಎಂದರೆ, ಯಾವುದೇ ಕಟ್ಟಡವನ್ನು ಕಟ್ಟಿರದ ಭೂಮಿ; [2][ಆದರೆ ಕಟ್ಟಡಕ್ಕೆ ಹೊಂದಿಕೊಂಡಿರುವ ಭೂಮಿಯನ್ನು ಒಳಗೊಳ್ಳುವುದಿಲ್ಲ.][2]][1].

1. 2003ರ ಅಧಿನಿಯಮ 31ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 2005ರ ಅಧಿನಿಯಮ 5ರ ಮೂಲಕ 1.4.2005 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(29) ``ವಾಹನ'' ಪದವು ವಾಹನ ಸಾಗಣೆ, ವ್ಯಾನ್, ಟ್ರಕ್ಕು, ಕೈಗಾಡಿ, ಬೈಸಿಕಲ್, ಟ್ರೈಸಿಕಲ್, ಸೈಕಲ್ ರಿಕ್ಷಾ ಮತ್ತು ಸಾರ್ವಜನಿಕ ಬೀದಿಯ ಮೇಲೆ ಬಳಸುವ ಅಥವಾ ಬಳಸಲು ಸಮರ್ಥವಾಗಿರುವ, ಚಕ್ರ ಇರುವ ಪ್ರತಿಯೊಂದು ವಾಹನವನ್ನು ಒಳಗೊಳ್ಳುತ್ತದೆ.

ಅಧ್ಯಾಯ-II

[1][ಮುನ್ಸಿಪಲ್ ಏರಿಯಾಗಳ][1] ರಚನೆ

1. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][**3. ಚಿಕ್ಕ ನಗರ ಪ್ರದೇಶವನ್ನು ನಿರ್ದಿಷ್ಟಪಡಿಸುವುದು.-** (1) 9ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು ರಾಜ್ಯಪಾಲರು,-

(ಎ) ಯಾವುದೇ ಪ್ರದೇಶದ ಜನಸಂಖ್ಯೆಯನ್ನು;

(ಬಿ) ಅಂಥ ಪ್ರದೇಶದ ಜನ ಸಾಂದ್ರತೆಯನ್ನು;

(ಸಿ) ಅಂಥ ಪ್ರದೇಶದ ಸ್ಥಳೀಯ ಆಡಳಿತಕ್ಕಾಗಿ ಉತ್ಪತ್ತಿ ಮಾಡುತ್ತಿರುವ ರಾಜಸ್ವವನ್ನು;

(ಡಿ) ಅಂಥ ಪ್ರದೇಶದಲ್ಲಿ ಕೃಷಿಯೇತರ ಚಟುವಟಿಕೆಗಳಲ್ಲಿ ಉದ್ಯೋಗದ ಶೇಕಡಾ ಪ್ರಮಾಣವನ್ನು;

(ಇ) ಅಂಥ ಪ್ರದೇಶದ ಆರ್ಥಿಕ ಮಹತ್ವವನ್ನು; ಮತ್ತು

(ಎಫ್) ನಿಯಮಿಸಬಹುದಾದಂಥ ಇತರ ಅಂಶಗಳನ್ನು

- ಗಮನದಲ್ಲಿಟ್ಟುಕೊಂಡು, ಅಂಥ ಪ್ರದೇಶವನ್ನು ಚಿಕ್ಕ ನಗರ ಪ್ರದೇಶವೆಂದು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದು ಮತ್ತು ಅಂಥ ಚಿಕ್ಕ ನಗರ ಪ್ರದೇಶವನ್ನು ಮುನ್ಸಿಪಲ್ ಏರಿಯಾಯೆಂದು ಭಾವಿಸತಕ್ಕದ್ದು.

ಪರಂತು,-

(i) ಅಂಥ ಪ್ರದೇಶದ ಜನಸಂಖ್ಯೆಯು, ಇಪ್ಪತ್ತು ಸಾವಿರಕ್ಕಿಂತ ಕಡಿಮೆಯಿಲ್ಲದ ಹಾಗೂ ಮೂರು ಲಕ್ಷ ಮೀರದ ಹೊರತು;

(ii) ಅಂಥ ಪ್ರದೇಶದ ಜನಸಂಖ್ಯಾ ಸಾಂದ್ರತೆಯು, ಒಂದು ಚದರಕಿಲೋಮೀಟರ್ ಪ್ರದೇಶಕ್ಕೆ ಒಂದು ಸಾವಿರದ ಐದುನೂರು ನಿವಾಸಿಗಳಿಗಿಂತ ಕಡಿಮೆಯಿಲ್ಲದ ಹೊರತು.

(iii) ಹಿಂದಿನ ನಿಕಟಪೂರ್ವ ಜನಗಣತಿಯಲ್ಲಿ ಅಂಥ ಪ್ರದೇಶದಿಂದ ಸ್ಥಳೀಯ ಆಡಳಿತಕ್ಕಾಗಿ ಮತ್ತು ತೆರಿಗೇತರ ಸಂಪನ್ಮೂಲಗಳಿಂದ, ಉತ್ಪಾದಿತ ರಾಜಸ್ವ ವಾರ್ಷಿಕ ಒಂಬತ್ತು ಲಕ್ಷ ಅಥವಾ ವಾರ್ಷಿಕ ತಲಾ ಒಬ್ಬನಿಗೆ ನಲವತ್ತೈದು ರೂ.ಗಳ ದರದಂತೆ ಲೆಕ್ಕಹಾಕಲಾದ ಮೊತ್ತ ಇವೆರಡರಲ್ಲಿ ಯಾವುದು ಹೆಚ್ಚೋ ಆ ಮೊತ್ತಕ್ಕಿಂತ ಕಡಿಮೆಯಿರದ ಹೊರತು.

(iv) ಕೃಷಿಯೇತರ ಚಟುವಟಿಕೆಗಳಲ್ಲಿ ಉದ್ಯೋಗದ ಶೇಕಡಾ ಪ್ರಮಾಣವು, ಒಟ್ಟು ಉದ್ಯೋಗದ ಶೇಕಡಾ ಐವತ್ತಕ್ಕಿಂತ ಕಡಿಮೆ ಇಲ್ಲದಿದ್ದ ಹೊರತು.

- ಅಂಥ ಯಾವ ಪ್ರದೇಶವನ್ನೂ, ಚಿಕ್ಕನಗರ ಪ್ರದೇಶವೆಂದು ಹಾಗೆ ನಿರ್ದಿಷ್ಟಪಡಿಸತಕ್ಕದ್ದಲ್ಲ,-

[1][xxx][1]

1. 2003ರ ಅಧಿನಿಯಮ 24ರ ಮೂಲಕ 21.8.2003 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(2) ರಾಜ್ಯಪಾಲರು, ಉಪ-ಪ್ರಕರಣ (1)ರಲ್ಲಿ ಯಾವುದೇ ಪ್ರದೇಶವನ್ನು ಚಿಕ್ಕನಗರ ಪ್ರದೇಶವೆಂದು ನಿರ್ದಿಷ್ಟಪಡಿಸುವಾಗ ಅಂಥ ಪ್ರದೇಶದ ಜನಸಂಖ್ಯೆಯು ಐವತ್ತು ಸಾವಿರಕ್ಕಿಂತ

ಕಡಿಮೆಯಿರದಿದ್ದರೆ ಅಂಥ ಪ್ರದೇಶವನ್ನು ಸಿಟಿ ಮುನ್ಸಿಪಲ್ ಏರಿಯಾ ಎಂದು ಅಥವಾ ಜನಸಂಖ್ಯೆಯ ಇಪ್ಪತ್ತು ಸಾವಿರಕ್ಕಿಂತ ಕಡಿಮೆ ಇರದೆ, ಆದರೆ ಐವತ್ತು ಸಾವಿರಕ್ಕಿಂತ ಕಡಿಮೆಯಿದ್ದರೆ, ಟೌನ್ ಮುನ್ಸಿಪಲ್ ಏರಿಯಾ ಎಂದು ಸಹ ನಿರ್ದಿಷ್ಟಪಡಿಸಬಹುದು.

[1][ಪರಂತು, ಅಂಥ ಚಿಕ್ಕನಗರ ಪ್ರದೇಶದಲ್ಲಿ ಜಿಲ್ಲಾ ಕೇಂದ್ರ ಕಾರ್ಯಸ್ಥಾನವಿದ್ದರೆ, ರಾಜ್ಯಪಾಲರು, ಆ ಪ್ರದೇಶದ ಜನಸಂಖ್ಯೆಯು ಐವತ್ತು ಸಾವಿರಕ್ಕಿಂತ ಕಡಿಮೆ ಇದ್ದಾಗ್ಯೂ ಅಂಥ ಪ್ರದೇಶವನ್ನು ಸಿಟಿ ಮುನ್ಸಿಪಲ್ ಏರಿಯಾ ಎಂದು ನಿರ್ದಿಷ್ಟಪಡಿಸಬಹುದು][1]

1. 2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][ಮತ್ತು ಪರಂತು, ಈ ಅಧಿನಿಯಮದಲ್ಲಿ ಒಳಗೊಂಡಿರುವುದಕ್ಕೆ ತದ್ವಿರುದ್ಧವಾದುದು ಏನೇ ಇದ್ದರೂ, ಸಿಟಿ ಮುನ್ಸಿಪಲ್ ಏರಿಯಾವಾಗಬೇಕಾದ ಅಥವಾ ಟೌನ್ ಮುನ್ಸಿಪಲ್ ಏರಿಯಾ ಆಗಬೇಕಾದ ಯಾವುದೇ ಪ್ರದೇಶವನ್ನು ನಿರ್ದಿಷ್ಟಪಡಿಸಿದ ತರುವಾಯ, ಅದರ ಜನಸಂಖ್ಯೆಯು, ಕೈಗಾರಿಕಾ ಟೌನ್‌ಶಿಪ್‌ಗಳ ನಿಮಿತ್ತ ಇಳಿಮುಖವಾಗಿದ್ದರೆ, ಅದರ ಸ್ಥಾನಮಾನವು, ಈ ಪ್ರಕರಣದ ಅಡಿಯಲ್ಲಿ ಏರಿಯಾ ನಿಯಮಿಸಬಹುದಾದಂತೆ ಸಂದರ್ಭಾನುಸಾರ ಆ ಪ್ರದೇಶವನ್ನು ಹೊಸದಾಗಿ ನಿರ್ದಿಷ್ಟಪಡಿಸುವವರೆಗೆ ಅಂಥ ಸಿಟಿ ಮುನ್ಸಿಪಲ್ ಏರಿಯಾ ಎಂದು ಅಥವಾ ಟೌನ್ ಮುನ್ಸಿಪಲ್ ಏರಿಯಾ ಎಂದು ಮುಂದುವರಿಯತಕ್ಕದ್ದು][1].

1. 2003ರ ಅಧಿನಿಯಮ 24ರ ಮೂಲಕ 21.8.2003 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(3)XXX][1]

1. 2003ರ ಅಧಿನಿಯಮ 24ರ ಮೂಲಕ (3)ನೇ ಉಪಪ್ರಕರಣವನ್ನು 21.8.2003 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(4) ಉಪ-ಪ್ರಕರಣದ (1)ರಲ್ಲಿ ಏನೇ ಒಳಗೊಂಡಿದ್ದರೂ, ದಂಡು ಪ್ರದೇಶವು ಅಥವಾ ಅದರ ಭಾಗವು ಯಾವುದೇ ಅಂಥ ಮುನ್ಸಿಪಲ್ ಏರಿಯಾದಲ್ಲಿ ಸೇರತಕ್ಕದ್ದಲ್ಲ.

(5) ಉಪಪ್ರಕರಣ (1)ರ ಅಡಿಯಲ್ಲಿ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯು, ಅದು ಯಾವ ಚಿಕ್ಕ ನಗರ ಪ್ರದೇಶಕ್ಕೆ ಅಥವಾ ಕೈಗಾರಿಕಾ ಟೌನ್ ಶಿಪ್‌ಗೆ ಸಂಬಂಧಪಟ್ಟಿದೆಯೋ ಆ ಚಿಕ್ಕನಗರ ಪ್ರದೇಶದ ಅಥವಾ ಸಂದರ್ಭಾನುಸಾರ ಕೈಗಾರಿಕಾ ಟೌನ್‌ಶಿಪ್‌ನ ಎಲ್ಲೆಗಳನ್ನು ನಿರ್ಧರಿಸುತ್ತದೆ.][1]

1. 3ನೇ ಉಪ-ಪ್ರಕರಣದಿಂದ (5)ನೇ ಉಪ-ಪ್ರಕರಣದವರೆಗೆ, 1994ರ ಅಧಿನಿಯಮ 36ರ ಮೂಲಕ 1-6-1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

4. ಪ್ರದೇಶಗಳನ್ನು [1][ಚಿಕ್ಕನಗರ ಪ್ರದೇಶ][1]ಗಳಲ್ಲಿ ಸೇರಿಸುವುದಕ್ಕೆ ಅಥವಾ ಅದರಿಂದ ಅವುಗಳನ್ನು ಬಿಟ್ಟುಬಿಡುವುದಕ್ಕೆ ಅಧಿಕಾರ ಮತ್ತು ಅದರ ಪರಿಣಾಮ.- (1) [1][ರಾಜ್ಯಪಾಲರು][1] ಮುನಿಸಿಪಲ್ ಕೌನ್ಸಿಲ್‌ನೊಡನೆ ಸಮಾಲೋಚಿಸಿದ ತರುವಾಯ ಮತ್ತು 9ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು ಮತ್ತು [2][3ನೇ ಪ್ರಕರಣದ (1)ನೇ ಉಪ-ಪ್ರಕರಣದ (ಎ) ಯಿಂದ (ಎಫ್) ಖಂಡಗಳವರೆಗಿನ ಉಪಬಂಧಗಳನ್ನು ಗಮನದಲ್ಲಿಟ್ಟುಕೊಂಡು][2], ಅಧಿಸೂಚನೆಯ ಮೂಲಕ,-

1. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 1994ರ ಅಧಿನಿಯಮ 38ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಎ) [1][ಚಿಕ್ಕನಗರ ಪ್ರದೇಶ][1] ಕ್ಕೆ ಹೊಂದಿಕೊಂಡಿರುವ ಯಾವುದೇ ಸ್ಥಳೀಯ ಪ್ರದೇಶವನ್ನು ಅದರಲ್ಲಿ ಸೇರಿಸಬಹುದು.

1. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಬಿ) [1][ಚಿಕ್ಕ ನಗರ ಪ್ರದೇಶ][1] ದಲ್ಲಿ ಒಳಗೊಂಡಿರುವ ಯಾವುದೇ ಸ್ಥಳೀಯ ಪ್ರದೇಶವನ್ನು ಅದರಿಂದ ಬಿಟ್ಟುಬಿಡಬಹುದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಪ್ರತಿಯೊಂದು ಅಂಥ ಅಧಿಸೂಚನೆಯು, ಅದು ಯಾವ ಸ್ಥಳೀಯ ಪ್ರದೇಶಕ್ಕೆ ಸಂಬಂಧಿಸಿದೆಯೋ, ಆ ಸ್ಥಳೀಯ ಪ್ರದೇಶದ ಎಲ್ಲೆಗಳನ್ನು ನಿರ್ಧರಿಸತಕ್ಕದ್ದು.

(3) ಯಾವುದೇ [1][ಚಿಕ್ಕ ನಗರ ಪ್ರದೇಶ][1]ದಲ್ಲಿ ಸ್ಥಳೀಯ ಪ್ರದೇಶವನ್ನು ಸೇರಿಸಿದಾಗ ಈ ಅಧಿನಿಯಮದ ಮೇರೆಗೆ ಮತ್ತು ಈ ಅಧಿನಿಯಮದ ಅಥವಾ ಅಂಥ [1][ಚಿಕ್ಕ ನಗರ ಪ್ರದೇಶ][1]ಕ್ಕೆ

ಅನ್ವಯವಾಗುವ ಇತರ ಯಾವುದೇ ಕಾನೂನಿನ ಮೇರೆಗೆ ಹೊರಡಿಸಿದ, ಮಾಡಿದ ಅಥವಾ ಪ್ರದತ್ತವಾದ ಎಲ್ಲಾ ಅಧಿಸೂಚನೆಗಳು, ನಿಯಮಗಳು, ಬೈಲಾಗಳು, ಆದೇಶಗಳು, ನಿರ್ಣಯಗಳು, ನಿರ್ದೇಶನಗಳು ಮತ್ತು ಅಧಿಕಾರಗಳು (ವಿಧಿಸಿದ ಯಾವುದೇ ತೆರಿಗೆಯನ್ನು ಒಳಗೊಂಡಂತೆ), (1)ನೇ ಉಪ-ಪ್ರಕರಣದ ಮೇರೆಗೆ ಅಧಿಸೂಚನೆಯು ಪ್ರಕಟವಾದ ದಿನಾಂಕದಿಂದ ಸದರಿ ಪ್ರದೇಶಕ್ಕೆ ಅನ್ವಯವಾಗತಕ್ಕದ್ದು.

1. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(4) ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅನ್ಯಥಾ ಉಪಬಂಧಿಸಿರುವುದನ್ನುಳಿದು [1][ಯಾವುದೇ ಚಿಕ್ಕನಗರ ಪ್ರದೇಶ][1]ದಿಂದ ಸ್ಥಳೀಯ ಪ್ರದೇಶವನ್ನು ಬಿಟ್ಟುಬಿಡುವಾಗ,-

1. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(i) ಅಂಥ ಪ್ರದೇಶದಲ್ಲಿನ ಮುನ್ಸಿಪಲ್ ಕೌನ್ಸಿಲ್‌ನ ಹಕ್ಕುಗಳು ಮತ್ತು ಹೊಣೆಗಾರಿಕೆಗಳು ಸರ್ಕಾರದಲ್ಲಿ ನಿಹಿತಗೊಳ್ಳತಕ್ಕದು; ಮತ್ತು

(ii) ಸರ್ಕಾರವು, ಮುನ್ಸಿಪಲ್ ಕೌನ್ಸಿಲ್‌ನೊಡನೆ ಸಮಾಲೋಚಿಸಿದ ತರುವಾಯ ಮುನ್ಸಿಪಲ್ ಕೌನ್ಸಿಲ್ ನಲ್ಲಿ ನಿಹಿತವಾದ ಮುನ್ಸಿಪಲ್ ನಿಧಿಯ ಮತ್ತು ಎಲ್ಲ ಇತರ ಸ್ವತ್ತುಗಳ ಯಾವ ಭಾಗವನ್ನು ಸ್ಥಳೀಯ ಪ್ರದೇಶದ ನಿವಾಸಿಗಳ ಪ್ರಯೋಜನಕ್ಕಾಗಿ ಸರ್ಕಾರದಲ್ಲಿ ನಿಹಿತಗೊಳಿಸತಕ್ಕದೆಂಬುದನ್ನು ಮತ್ತು ಮುನ್ಸಿಪಲ್ ಕೌನ್ಸಿಲ್‌ನ ಹೊಣೆಗಾರಿಕೆಗಳನ್ನು ಮುನ್ಸಿಪಲ್ ಕೌನ್ಸಿಲ್ ಮತ್ತು ಸರ್ಕಾರದ ನಡುವೆ ಹೇಗೆ ಹಂಚಿಕೆ ಮಾಡತಕ್ಕದ್ದು ಎಂಬುದನ್ನು ನಿರ್ಧರಿಸತಕ್ಕದ್ದು.

5. ಗಡಿ ಗುರುತುಗಳನ್ನು ನಿಲ್ಲಿಸುವುದು ಮತ್ತು ಅವುಗಳ ನಿರ್ವಹಣೆ.- ಇದು ಪ್ರತಿಯೊಂದು ಮುನ್ಸಿಪಲ್ ಪ್ರದೇಶದಲ್ಲಿ ಮುನ್ಸಿಪಲ್ ಕೌನ್ಸಿಲ್‌ನ ಕರ್ತವ್ಯವಾಗಿರತಕ್ಕದ್ದು ಮತ್ತು [2][ಪೌರಾಡಳಿತ ನಿರ್ದೇಶಕರು][2] ಅಥವಾ ಡೆಪ್ಯುಟಿ ಕಮಿಷನರ್ ನು, ಪ್ರತಿಯೊಂದು [1][ಮುನ್ಸಿಪಲ್ ಏರಿಯಾ][1] ದಲ್ಲಿ ಮತ್ತು ಯಾವ ಮುನ್ಸಿಪಲ್ ಕೌನ್ಸಿಲ್‌ನ ಸ್ಥಳೀಯ ಎಲ್ಲೆಗಳನ್ನು ಬದಲಾಯಿಸಲಾಗಿದೆಯೋ ಆ ಪ್ರತಿಯೊಂದು ಮುನ್ಸಿಪಲ್ ಕೌನ್ಸಿಲ್‌ನಲ್ಲಿ, ಮುನ್ಸಿಪಲ್ ಎಲ್ಲೆಗಳಲ್ಲಿ ಅಥವಾ ಬದಲಾಯಿಸಿದ ಎಲ್ಲೆಗಳಲ್ಲಿ ನಿರ್ಧರಿಸುವ, ಡೆಪ್ಯುಟಿ ಕಮಿಷನರನು ಅನುಮೋದಿಸತಕ್ಕಂಥ ವಿವರಣೆಯಂತೆ ಮತ್ತು ಅಂಥ ಸ್ಥಳಗಳಲ್ಲಿ ಗಟ್ಟಿ ಮುಟ್ಟಾದ ಗಡಿ ಗುರುತುಗಳನ್ನು ತನ್ನ ಸ್ವಂತ ಖರ್ಚಿನಲ್ಲಿ ನಿಲ್ಲಿಸುವಂತೆ ಅಥವಾ ನಿರ್ಮಿಸುವಂತೆ ಅಗತ್ಯಪಡಿಸಿದರೆ, ತನ್ನ ಅಧಿಕಾರಕ್ಕೆ ಒಳಪಟ್ಟು, ಮಾಡತಕ್ಕದ್ದು ಮತ್ತು ಆ ತರುವಾಯ ಅದು ತನ್ನ ಸ್ವಂತ ಖರ್ಚಿನಲ್ಲಿ ಅವುಗಳನ್ನು ನಿರ್ವಹಿಸತಕ್ಕದ್ದು.

1. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][6.XXX][1]

1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

7.ಅಸ್ತಿತ್ವ ಕೊನೆಗೊಂಡಿರುವ [1][ಚಿಕ್ಕ ನಗರ ಪ್ರದೇಶ][1]ದ ಮುನಿಸಿಪಲ್ ಕೌನ್ಸಿಲ್‌ನ ಸ್ವತ್ತು ಮತ್ತು ಹಕ್ಕುಗಳು ಸರ್ಕಾರದಲ್ಲಿ ನಿಹಿತವಾಗತಕ್ಕದ್ದು.- (1) 9ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, [1][ರಾಜ್ಯಪಾಲ][1]ನು, ಅಧಿಸೂಚನೆಯ ಮೂಲಕ, ಯಾವುದೇ ಸ್ಥಳೀಯ ಪ್ರದೇಶವು, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬೇಕಾದ ದಿನಾಂಕದಿಂದ [1][ಚಿಕ್‌ನಗರ ಪ್ರದೇಶ][1]ವಾಗಿರುವುದು ಕೊನೆಗೊಳ್ಳತಕ್ಕದೆಂದು ಘೋಷಿಸಬಹುದು.

1. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಯಾವುದೇ ಸ್ಥಳೀಯ ಪ್ರದೇಶವು [1][ಚಿಕ್ಕ ನಗರ ಪ್ರದೇಶವಾಗಿರುವುದು ಕೊನೆಗೊಂಡಾಗ][1] ಅದಕ್ಕಾಗಿ ರಚಿತವಾದ ಮುನ್ಸಿಪಲ್ ಕೌನ್ಸಿಲ್ ಅಸ್ತಿತ್ವದಲ್ಲಿರುವುದು ಕೊನೆಗೊಳ್ಳತಕ್ಕದ್ದು ಮತ್ತು ಅಂಥ ಯಾವುದೇ [1][ಮುನಿಸಿಪಲ್ ಕೌನ್ಸಿಲ್][1]ನಲ್ಲಿ ನಿಹಿತವಾಗಿರುವ ಸ್ವತ್ತು ಮತ್ತು ಹಕ್ಕುಗಳು, ಅವುಗಳಿಗೆ ಸಂಬಂಧಪಡುವ ಎಲ್ಲಾ ಋಣಭಾರಗಳಿಗೆ ಮತ್ತು ಹೊಣೆಗಾರಿಕೆಗಳಿಗೊಳಪಟ್ಟು ಸರ್ಕಾರದಲ್ಲಿ ನಿಹಿತವಾಗತಕ್ಕದ್ದು ಮತ್ತು ಅದರ

ಉತ್ಪತ್ತಿಗಳೇನಾದರೂ ಇದ್ದರೆ, ಅವುಗಳನ್ನು ಅಂಥ [1][ಮುನ್ಸಿಪಲ್ ಕೌನ್ಸಿಲ್][1] ಅಧಿಕಾರ ವ್ಯಾಪ್ತಿಯನ್ನು ಹೊಂದಿದ್ದ ಸ್ಥಳೀಯ ಪ್ರದೇಶಗಳ ಪ್ರಯೋಜನಕ್ಕಾಗಿ ಸರ್ಕಾರದ ಆದೇಶಗಳ ಮೇರೆಗೆ ವೆಚ್ಚ ಮಾಡತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

8. ಎರಡು ಅಥವಾ ಹೆಚ್ಚು ಸ್ಥಳಗಳನ್ನು ಒಳಗೊಂಡಿರುವ [1][ಚಿಕ್ಕ ನಗರ ಪ್ರದೇಶ][1]ದ ನಾಮಕರಣ.- ವಿಭಿನ್ನ ಹೆಸರುಗಳನ್ನು ಹೊಂದಿರುವ ಎರಡು ಅಥವಾ ಹೆಚ್ಚು ಸ್ಥಳಗಳನ್ನು ಒಂದೇ ಚಿಕ್ಕ ನಗರ ಪ್ರದೇಶವಾಗಿ ರೂಪಿಸಿದಾಗ, [1][ಚಿಕ್ಕ ನಗರ ಪ್ರದೇಶ][1]ದ ಹೆಸರನ್ನು [1][ರಾಜ್ಯಪಾಲರು][1] ನಿರ್ಧರಿಸತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

9. [1][ಚಿಕ್ಕ ನಗರ ಪ್ರದೇಶ][1] ಗಳ ರಚನೆ, ರದ್ದಿಯಾತಿ, ಇತ್ಯಾದಿಗಳಿಗಾಗಿ ಪ್ರಕ್ರಿಯೆ.- ಯಾವುದೇ ಸ್ಥಳೀಯ ಪ್ರದೇಶವನ್ನು [1][ಚಿಕ್ಕ ನಗರ ಪ್ರದೇಶ][1] ವೆಂದು ಘೋಷಿಸುವ ಅಥವಾ ಅಂಥ ಯಾವುದೇ [1][ಚಿಕ್ಕ ನಗರ ಪ್ರದೇಶ][1]ದ ಎಲ್ಲೆಗಳನ್ನು ಬದಲಾಯಿಸುವ ಅಥವಾ ಯಾವುದೇ ಸ್ಥಳೀಯ ಪ್ರದೇಶವು [1][ಚಿಕ್ಕ ನಗರ ಪ್ರದೇಶ][1] ವಾಗಿರುವುದು ಕೊನೆಗೊಳ್ಳತಕ್ಕದ್ದೆಂದು ಘೋಷಿಸುವ ಯಾವುದೇ ಅಧಿಸೂಚನೆಯ ಪ್ರಕಟಣೆಗೆ ಮುಂಚೆ [2][ಮೂವತ್ತು ದಿನಗಳಿ][2]ಗಿಂತ ಕಡಿಮೆಯಿಲ್ಲದಂತೆ ರಾಜ್ಯಪಾಲನು ಸಂದರ್ಭಾನುಸಾರ ಆ ಸ್ಥಳೀಯ ಪ್ರದೇಶವನ್ನು [1][ಚಿಕ್ಕ ನಗರ ಪ್ರದೇಶ][1] ವೆಂದು ರಚಿಸಲು ಅಥವಾ ನಿರ್ದಿಷ್ಟ ರೀತಿಯಲ್ಲಿ [1][ಚಿಕ್ಕ ನಗರ ಪ್ರದೇಶ][1]ದ ಎಲ್ಲೆಗಳನ್ನು ಬದಲಾಯಿಸಲು ಅಥವಾ ಆ ಸ್ಥಳೀಯ ಪ್ರದೇಶವು [1][ಚಿಕ್ಕ ನಗರ ಪ್ರದೇಶ][1] ವಾಗಿರುವುದು ಕೊನೆಗೊಳ್ಳತಕ್ಕದೆಂದು ಘೋಷಿಸಲು ಉದ್ದೇಸಿಸಲಾಗಿದೆಯೆಂಬುದನ್ನು ಪ್ರಕಟಿಸುವ ಮತ್ತು ಸದರಿ ಪ್ರಸ್ತಾವಕ್ಕೆ ಯಾವುದೇ ಆಕ್ಷೇಪಣೆಯನ್ನು ವ್ಯಕ್ತಪಡಿಸಬಯಸುವ ಎಲ್ಲ ವ್ಯಕ್ತಿಗಳು ಉದ್ಘೋಷಣೆಯನ್ನು, ಆ ಉದ್ಘೋಷಣೆಯ ದಿನಾಂಕದಿಂದ [2][ಮೂವತ್ತು ದಿನಗಳ][2] ಒಳಗಾಗಿ ತಮ್ಮ ಆಕ್ಷೇಪಣೆಗಳಿಗೆ ಕಾರಣಗಳ ಸಹಿತ ಬರಹದಲ್ಲಿ [3][ಪೌರಾಡಳಿತ ನಿರ್ದೇಶಕ][3] ರಿಗೆ ಸಲ್ಲಿಸತಕ್ಕದ್ದು ಎಂದು ಅಗತ್ಯಪಡಿಸಿ ರಾಜ್ಯಪಾಲರು ಸರ್ಕಾರಿ ರಾಜ್ಯಪತ್ರದಲ್ಲಿ ಇಂಗ್ಲಿಷ್ ಮತ್ತು ಕನ್ನಡದಲ್ಲಿ ಪ್ರಕಟಿಸುವಂತೆ ಮಾಡತಕ್ಕದ್ದು ಮತ್ತು ಅದನ್ನು ಕನ್ನಡದಲ್ಲಿ ಸದರಿ ಸ್ಥಳೀಯ ಪ್ರದೇಶದಲ್ಲಿ ಎದ್ದು ಕಾಣುವ ಸ್ಥಳಗಳಲ್ಲಿ ಹಾಕಿಸತಕ್ಕದ್ದು ಮತ್ತು ಯಾವುದೇ ನಿವಾಸಿ ಪ್ರದೇಶವನ್ನು [1][ಚಿಕ್ಕ ನಗರ ಪ್ರದೇಶ][1]ಕ್ಕೆ ಸೇರಿಸಲು ಅಥವಾ ಅದರಿಂದ ಬಿಟ್ಟುಬಿಡಲು ಉದ್ದೇಶಿಸಿದಾಗಲೆಲ್ಲ, ಅಂಥ ಪ್ರದೇಶದಲ್ಲಿ ಎದ್ದುಕಾಣುವ ಸ್ಥಳಗಳಲ್ಲಿ ಅಂಥ ಉದ್ಘೋಷಣೆಯ ಪ್ರತಿಯನ್ನು ಹಾಕುವುದು ಸಹ ಮುನ್ಸಿಪಲ್ ಕೌನ್ಸಿಲ್‌ನ ಕರ್ತವ್ಯವಾಗಿರತಕ್ಕದ್ದು. ಕಮಿಷನರ್ ಹಾಗೆ ಒಪ್ಪಿಸಿದ ಪ್ರತಿಯೊಂದು ಆಕ್ಷೇಪಣೆಯನ್ನು [3][ಪೌರಾಡಳಿತ ನಿರ್ದೇಶಕ][3]ನು ಸಾಧ್ಯವಾದಷ್ಟು ಬೇಗನೆ [1][ರಾಜ್ಯಪಾಲರಿಗೆ][1] ಕಳುಹಿಸಿಕೊಡತಕ್ಕದ್ದು.

1. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2.1995ರ ಅಧಿನಿಯಮ 20ರ ಮೂಲಕ 7.7.1995 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

3. 2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಆಕ್ಷೇಪಣೆಗಳನ್ನೇನಾದರೂ ಸಲ್ಲಿಸಿದ್ದರೆ, ಅವು ಸಾಲದು ಅಥವಾ ಅಸಿಂಧುವೆಂದು [ಅವರು][1] ಅಭಿಪ್ರಾಯಪಟ್ಟಿದ್ದ ಹೊರತು, ಹಿಂದೆ ಹೇಳಿದಂಥ ಯಾವುದೇ ಅಧಿಸೂಚನೆಯನ್ನು [1][ರಾಜ್ಯಪಾಲರು][1] ಹೊರಡಿಸತಕ್ಕದ್ದಲ್ಲ.

1. 2000ರ ಅಧಿನಿಯಮ 22ರ ಮೂಲಕ 29.11.2000 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

10. ಸಿಟಿ ಮತ್ತು ಟೌನ್ ಮುನ್ಸಿಪಲ್ ಕೌನ್ಸಿಲ್‌ಗಳನ್ನು ನಿಗಮನಗೊಳಿಸುವುದು.- (1) ಪ್ರತಿಯೊಂದು [1][ಮುನ್ಸಿಪಲ್ ಏರಿಯಾ][1] ದಲ್ಲಿ ಮುನ್ಸಿಪಲ್ ಕೌನ್ಸಿಲ್ ಇರತಕ್ಕದ್ದು ಮತ್ತು ಅಂಥ ಪ್ರತಿಯೊಂದು ಮುನ್ಸಿಪಲ್ ಕೌನ್ಸಿಲ್ ಸಂದರ್ಭಾನುಸಾರ ``..... ಸಿಟಿ ಮುನ್ಸಿಪಲ್ ಕೌನ್ಸಿಲ್'' ಅಥವಾ ``.....ದ ಟೌನ್ ಮುನ್ಸಿಪಲ್ ಕೌನ್ಸಿಲ್'' ಎಂಬ ಹೆಸರಿನ ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಸ್ವತ್ತನ್ನು ಆರ್ಜಿಸಲು, ಹೊಂದಲು ಮತ್ತು ವಿಲೆ ಮಾಡಲು ಮತ್ತು ಕರಾರು ಮಾಡಿಕೊಳ್ಳುವ ಅಧಿಕಾರದೊಂದಿಗೆ ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮುದ್ರೆಯನ್ನು ಹೊಂದಿರತಕ್ಕದ್ದು ಮತ್ತು [2][(ಚೀಫ್ ಆಫೀಸರ್ ಅಥವಾ

ಮುನಿಸಿಪಲ್ ಕಮಿಷನರ್ ನ ಮೂಲಕ)][2] ಸದರಿ ಹೆಸರಿನಿಂದ ದಾವೆಯನ್ನು ಹೂಡಬಹುದು ಮತ್ತು ದಾವೆಗೆ ಗುರಿಯಾಗಬಹುದು.

1. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2.1966ರ ಅಧಿನಿಯಮ 34ರ ಮೂಲಕ 16.01.1967 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದಂತೆ ಹೊರತು, ಮುನ್ಸಿಪಲ್ ಆಡಳಿತವು [1][ಮುನ್ಸಿಪಲ್ ಏರಿಯಾದಲ್ಲಿ][1] ನಿಹಿತವಾಗಿರತಕ್ಕದ್ದು.

1. 2004ರ ಅಧಿನಿಯಮ 36ರ ಮೂಲಕ 1.6.1994ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][11. ಮುನ್ಸಿಪಲ್ ಕೌನ್ಸಿಲ್ ಗಳ ರಚನೆ.- (1) ಮುನ್ಸಿಪಲ್ ಕೌನ್ಸಿಲ್,-

1. 2004ರ ಅಧಿನಿಯಮ 36ರ ಮೂಲಕ 1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಎ) ಕೆಳಗಿನ ಕೋಷ್ಟಕದ (2)ನೇ ಅಂಕಣದಲ್ಲಿನ ನಮೂದುಗಳಲ್ಲಿ ನಿರ್ದಿಷ್ಟಪಡಿಸಿರುವ ಮುನ್ಸಿಪಾಲ್ ಪ್ರದೇಶಗಳು ಅದರ ಎದುರಿನ ಅಂಕಣ (3)ರಲ್ಲಿ ನಿರ್ದಿಷ್ಟಪಡಿಸಿರುವಷ್ಟು ಸಂಖ್ಯೆಯ ನೇರವಾಗಿ ಚುನಾಯಿತರಾಗಿರುವ ಕೌನ್ಸಿಲರ್ ಗಳನ್ನು ಹೊಂದಿರತಕ್ಕದು, ಎಂದರೆ,-

ಕೋಷ್ಟಕ

ಕ್ರ. ಸಂ.	**ಮುನ್ಸಿಪಲ್ ಪ್ರದೇಶದ ಜನಸಂಖ್ಯೆ**	ಕೌನ್ಸಿಲರ್ ಗಳ ಸಂಖ್ಯೆ
(1)	20,000ಕ್ಕಿಂತ ಕಡಿಮೆಯಿಲ್ಲದ, ಆದರೆ 40,000 ಕ್ಕಿಂತ ಕಡಿಮೆ ಜನಸಂಖ್ಯೆಯನ್ನು ಹೊಂದಿರುವ ಮುನ್ಸಿಪಲ್ ಏರಿಯಾ	23
(2)	40,000 ಕ್ಕಿಂತ ಕಡಿಮೆಯಿಲ್ಲದ, ಆದರೆ 50,000 ಕ್ಕಿಂತ ಕಡಿಮೆ ಜನಸಂಖ್ಯೆಯನ್ನು ಹೊಂದಿರುವ ಮುನ್ಸಿಪಲ್ ಏರಿಯಾ	27
(3)	50,000 ಕ್ಕಿಂತ ಕಡಿಮೆಯಿಲ್ಲದ, ಆದರೆ ಒಂದು ಲಕ್ಷಕ್ಕಿಂತ ಜನಸಂಖ್ಯೆಯನ್ನು ಹೊಂದಿರುವ ಮುನ್ಸಿಪಲ್ ಏರಿಯಾ	31
(4)	ಒಂದು ಲಕ್ಷಕ್ಕಿಂತ ಕಡಿಮೆಯಿಲ್ಲದ, ಆದರೆ ಮೂರು ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆಯನ್ನು ಹೊಂದಿರುವ ಮುನ್ಸಿಪಲ್ ಏರಿಯಾ	35

(ಬಿ) ಮುನ್ಸಿಪಲ್ ಏರಿಯಾ ನಿವಾಸಿಗಳ ಪೈಕಿ ಸರ್ಕಾರದಿಂದ ನಾಮನಿರ್ದೇಶಿತರಾದ, ಐದಕ್ಕಿಂತ ಹೆಚ್ಚಿಲ್ಲದ ವ್ಯಕ್ತಿಗಳು, ಅಂದರೆ

(i) ಆರೋಗ್ಯ, ಪಟ್ಟಣ ಯೋಜನೆ ಅಥವಾ ಉದ್ಯೋಗಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಅಥವಾ ಪೌರಾಡಳಿತದಲ್ಲಿ ವಿಶೇಷ ಜ್ಞಾನವನ್ನು ಹಾಗೂ ಅನುಭವವನ್ನು ಹೊಂದಿರುವ ವ್ಯಕ್ತಿಗಳು; ಅಥವಾ

(ii) ಸಮಾಜ ಸೇವಕರು.

(ಸಿ) ಚುನಾವಣಾ ಕ್ಷೇತ್ರಗಳು ಲೋಕಸಭಾ ಸದಸ್ಯರ ಹಾಗೂ ವಿಧಾನಸಭಾ ಸದಸ್ಯರುಗಳ ಯಾವ ಮುನ್ಸಿಪಲ್ ಏರಿಯಾದೊಳಗೆ ಇವೆಯೋ [1][xxx][1] ಆ ಮುನ್ಸಿಪಲ್ ಏರಿಯಾವನ್ನು ಪೂರ್ಣವಾಗಿ ಅಥವಾ ಭಾಗಶಃ ಪ್ರತಿನಿಧಿಸುತ್ತಿರುವ ಲೋಕಸಭಾ ಸದಸ್ಯರುಗಳನ್ನು ಹಾಗೂ ವಿಧಾನಸಭಾ ಸದಸ್ಯರುಗಳನ್ನು;

1. 1998ರ ಅಧಿನಿಯಮ 24ರ ಮೂಲಕ 10.6.1998 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(ಡಿ) ಮುನ್ಸಿಪಲ್ ಏರಿಯಾದೊಳಗೆ ಮತದಾರರಾಗಿ ನೊಂದಾಯಿತರಾದ ರಾಜ್ಯ ಸಭೆಯ ಸದಸ್ಯರುಗಳನ್ನು ಹಾಗೂ ರಾಜ್ಯ ವಿಧಾನಪರಿಷತ್ತಿನ ಸದಸ್ಯರನ್ನು

- ಹೊಂದಿರತಕ್ಕದ್ದು.

ಪರಂತು, (ಬಿ) ಖಂಡದಲ್ಲಿ ಉಲ್ಲೇಖಿಸಿರುವ ವ್ಯಕ್ತಿಗಳು, ಮುನಿಸಿಪಲ್ ಕೌನ್ಸಿಲ್‌ನ ಸಭೆಗಳಲ್ಲಿ ಮತ ಹಾಕುವ ಹಕ್ಕನ್ನು ಹೊಂದಿರತಕ್ಕದ್ದಲ್ಲ.

(2) ಮುನ್ಸಿಪಲ್ ಕೌನ್ಸಿಲ್‌ನಲ್ಲಿ,-

(ಎ) ಪರಿಶಿಷ್ಟ ಜಾತಿಗಳಿಗೆ; ಮತ್ತು

(ಬಿ) ಪರಿಶಿಷ್ಟ ಪಂಗಡಗಳಿಗೆ;

ಸ್ಥಾನಗಳನ್ನು ಮೀಸಲಿರಿಸತಕ್ಕದ್ದು ಮತ್ತು ಹಾಗೆ ಮೀಸಲಿಟ್ಟ ಸ್ಥಾನಗಳ ಸಂಖ್ಯೆಯು, ಮುನ್ಸಿಪಲ್ ಏರಿಯಾದಲ್ಲಿರುವ ಪರಿಶಿಷ್ಟ ಜಾತಿಗಳ ಅಥವಾ ಮುನ್ಸಿಪಲ್ ಏರಿಯಾದಲ್ಲಿರುವ ಪರಿಶಿಷ್ಟ ಪಂಗಡಗಳ ಜನಸಂಖ್ಯೆಯು ಮುನ್ಸಿಪಲ್ ಏರಿಯಾದಲ್ಲಿನ ಒಟ್ಟು ಜನಸಂಖ್ಯೆಯಲ್ಲಿ ಯಾವ ಅನುಪಾತದಲ್ಲಿರುವುದೋ ಆದಷ್ಟು ಮಟ್ಟಿಗೆ ಮುನಿಸಿಪಲ್ ಕೌನ್ಸಿಲ್‌ನಲ್ಲಿ ನೇರ ಚುನಾವಣೆಯ ಮೂಲಕ ಭರ್ತಿ ಮಾಡಬೇಕಾದ ಸ್ಥಾನಗಳ ಒಟ್ಟು ಸಂಖ್ಯೆಯಲ್ಲಿ ಅದೇ ಅನುಪಾತದಲ್ಲಿರತಕ್ಕದ್ದು.

[1][ಪರಂತು, ಮುನಿಸಿಪಲ್ ಕೌನ್ಸಿಲ್‌ನಲ್ಲಿ, ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗಾಗಿ ಕನಿಷ್ಠಪಕ್ಷ ಒಂದು ಸ್ಥಾನವನ್ನು ಮೀಸಲಿರಿಸತಕ್ಕದ್ದು.

ಮತ್ತು ಪರಂತು, ಪರಿಶಿಷ್ಟ ಜಾತಿಗಳ ವ್ಯಕ್ತಿಯು ಲಭ್ಯವಿಲ್ಲದಿದ್ದಲ್ಲಿ, ಆ ಪ್ರವರ್ಗಕ್ಕಾಗಿ ಮೀಸಲಿಟ್ಟ ಸ್ಥಾನವನ್ನು, ಪ್ರತಿಯಾಗಿ ಪರಿಶಿಷ್ಟ ಪಂಗಡಗಳ ವ್ಯಕ್ತಿಗಳಿಂದ ಭರ್ತಿ ಮಾಡತಕ್ಕದ್ದು.][1]

1. 2003ರ ಅಧಿನಿಯಮ 23ರ ಮೂಲಕ 10.11.2003 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(3) ಮುನಿಸಿಪಲ್ ಕೌನ್ಸಿಲ್‌ನಲ್ಲಿ, ನೇರ ಚುನಾವಣೆಯ ಮೂಲಕ ಭರ್ತಿ ಮಾಡಬೇಕಾಗಿರುವ ಒಟ್ಟು ಸ್ಥಾನಗಳ ಸಂಖ್ಯೆಯಲ್ಲಿ ಸರಿಸುಮಾರು ಮೂರನೇ ಒಂದು ಭಾಗದಷ್ಟು ಸ್ಥಾನಗಳನ್ನು ಹಿಂದುಳಿದ ವರ್ಗಗಳ ವ್ಯಕ್ತಿಗಳಿಗಾಗಿ ಮೀಸಲಿರಿಸತಕ್ಕದ್ದು.

[1][ಪರಂತು, ಈ ಉಪ-ಪ್ರಕರಣದ ಅಡಿಯಲ್ಲಿ ಮೀಸಲಿರಿಸಿದ ಸ್ಥಾನಗಳ ಪೈಕಿ ಅಂಥ ಸ್ಥಾನಗಳ ಒಟ್ಟು ಸಂಖ್ಯೆಯಲ್ಲಿನ ಶೇಕಡಾ ಎಂಬತ್ತರಷ್ಟು ಸ್ಥಾನಗಳನ್ನು "ಎ" ಪ್ರವರ್ಗದ ವ್ಯಕ್ತಿಗಳಿಗೆ ಮೀಸಲಿರಿಸತಕ್ಕದ್ದು ಮತ್ತು ಉಳಿದ ಶೇಕಡಾ ಇಪ್ಪತ್ತರಷ್ಟು ಸ್ಥಾನಗಳನ್ನು "ಬಿ" ಪ್ರವರ್ಗದ ವ್ಯಕ್ತಿಗಳಿಗೆ ಮೀಸಲಿರಿಸತಕ್ಕದ್ದು.

ಮತ್ತು ಪರಂತು, "ಎ" ಪ್ರವರ್ಗದ ವ್ಯಕ್ತಿಗಳು ಲಭ್ಯವಿಲ್ಲದಿದ್ದರೆ, ಆ ಪ್ರವರ್ಗಕ್ಕೆ ಮೀಸಲಿರಿಸಿದ ಸ್ಥಾನಗಳನ್ನು "ಬಿ" ಪ್ರವರ್ಗದ ವ್ಯಕ್ತಿಗಳಿಂದ ಭರ್ತಿ ಮಾಡಿಕೊಳ್ಳತಕ್ಕದ್ದು ಮತ್ತು 'ಬಿ' ಪ್ರವರ್ಗದ ವ್ಯಕ್ತಿಗಳು ಲಭ್ಯವಿಲ್ಲದಿದ್ದಲ್ಲಿ, ಆ ಪ್ರವರ್ಗಕ್ಕೆ ಮೀಸಲಿರಿಸಿದ ಸ್ಥಾನಗಳನ್ನು 'ಎ' ಪ್ರವರ್ಗದ ವ್ಯಕ್ತಿಗಳಿಂದ ಭರ್ತಿಮಾಡಿಕೊಳ್ಳತಕ್ಕದ್ದು.

[2][ಮತ್ತು ಪರಂತು, ಈ ಉಪ-ಪ್ರಕರಣದ ಅಡಿಯಲ್ಲಿ, ಹಿಂದುಳಿದ ವರ್ಗಗಳಿಗಾಗಿ ಹಾಗೆ ಮೀಸಲಿರಿಸಿದ ಸ್ಥಾನಗಳ ಸಂಖ್ಯೆಯನ್ನು, (2)ನೇ ಉಪ-ಪ್ರಕರಣದ ಅಡಿಯಲ್ಲಿ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳಿಗೆ ಹಾಗೂ ಈ ಉಪ-ಪ್ರಕರಣದ ಅಡಿಯಲ್ಲಿ, ಹಿಂದುಳಿದ ವರ್ಗಗಳಿಗಾಗಿ ಮೀಸಲಿರಿಸಿದ ಸ್ಥಾನಗಳ ಒಟ್ಟು ಸಂಖ್ಯೆಯು, ಮುನಿಸಿಪಲ್ ಕೌನ್ಸಿಲ್‌ನಲ್ಲಿರುವ ಸ್ಥಾನಗಳ ಒಟ್ಟು ಸಂಖ್ಯೆಯ ಶೇಕಡಾ ಐವತ್ತನ್ನು ಮೀರದಂತೆ ನಿರ್ಧರಿಸತಕ್ಕದ್ದು.][2]

ವಿವರಣೆ,- ಈ ಉಪ-ಪ್ರಕರಣದ ಉದ್ದೇಶಗಳಿಗಾಗಿ, 42ನೇ ಪ್ರಕರಣದ (2ಎ) ಉಪ-ಪ್ರಕರಣದ ಹಾಗೂ 352ನೇ ಪ್ರಕರಣದ (5)ನೇ ಉಪ-ಪ್ರಕರಣದ ಉದ್ದೇಶಕ್ಕಾಗಿ "ಎ" ಮತ್ತು "ಬಿ" ಪ್ರವರ್ಗಗಳೆಂದರೆ, 2ನೇ ಪ್ರಕರಣದ (1ಎ) ಖಂಡದಲ್ಲಿ ಉಲ್ಲೇಖಿಸಿರುವ "ಎ" ಮತ್ತು "ಬಿ" ಪ್ರವರ್ಗಗಳೆಂದು ಅರ್ಥೈಸತಕ್ಕದ್ದು.][1]

1. 1995ರ ಅಧಿನಿಯಮ 24ರ ಮೂಲಕ 26-9-1995 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 2012ರ ಅಧಿನಿಯಮ 32ರ ಮೂಲಕ 30-8-2012 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(4) ಮುನಿಸಿಪಲ್ ಕೌನ್ಸಿಲ್‌ನಲ್ಲಿ ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳ ಮತ್ತು ಹಿಂದುಳಿದ ವರ್ಗಗಳ ಪ್ರತಿಯೊಂದು ಪ್ರವರ್ಗದ ವ್ಯಕ್ತಿಗಳಿಗೆ ಮೀಸಲಿಟ್ಟಿರುವ ಸ್ಥಾನಗಳ ಮತ್ತು ನೇರ ಚುನಾವಣೆ ಮೂಲಕ ತುಂಬಬೇಕಾದ ಮೀಸಲಿಟ್ಟಿರದ ಸ್ಥಾನಗಳ ಪೈಕಿ [1][ಶೇಕಡಾ ಐವತ್ತಕ್ಕಿಂತ ಹೆಚ್ಚಿಗೆ ಇಲ್ಲದಷ್ಟು][1] ಸ್ಥಾನಗಳನ್ನು ಮಹಿಳೆಯರಿಗಾಗಿ ಮೀಸಲಿಡತಕ್ಕದ್ದು.

ಪರಂತು, (2)ನೇ, (3)ನೇ ಮತ್ತು (4)ನೇ ಉಪ-ಪ್ರಕರಣದಲ್ಲಿ ಹೇಳಿರುವಂತೆ ಮೀಸಲಿರಿಸಿದ ಸ್ಥಾನಗಳನ್ನು ಮುನ್ಸಿಪಲ್ ಏರಿಯಾದಲ್ಲಿ ಬೇರೆ ಬೇರೆ ವಾರ್ಡುಗಳಿಗೆ ಸರದಿಯಂತೆ ಹಂಚಿಕೆ ಮಾಡತಕ್ಕದ್ದು.

1. 2012ರ ಅಧಿನಿಯಮ 32ರ ಮೂಲಕ 30.8.2012 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(5) ಉಪ-ಪ್ರಕರಣ (1) ರ (ಎ) ಖಂಡದಲ್ಲಿ ಉಲ್ಲೇಖಿಸಿರುವ ಕೌನ್ಸಿಲರ್ ಗಳನ್ನು ಈ ಅಧಿನಿಯಮದಲ್ಲಿ ಹೇಳಿರುವಂತಹ ರೀತಿಯಲ್ಲಿ ಚುನಾಯಿಸತಕ್ಕದ್ದು.

(6) ಉಪ-ಪ್ರಕರಣ (2)ರಲ್ಲಿ, (3) ರಲ್ಲಿ ಮತ್ತು (4) ರಲ್ಲಿರುವ ಯಾವುದೂ, ಪರಿಶಿಷ್ಟ ಜಾತಿಗಳ, ಪರಿಶಿಷ್ಟ ಪಂಗಡಗಳ ಹಾಗೂ ಹಿಂದುಳಿದ ವರ್ಗಗಳ ಸದಸ್ಯರು ಅಥವಾ ಮಹಿಳಾ ಸದಸ್ಯರು, ಮೀಸಲಿರಿಸದಿರುವ ಸ್ಥಾನಗಳ ಚುನಾವಣೆಗೆ ನಿಲ್ಲುವುದನ್ನು ತಡೆಯುತ್ತದೆಂದು ಭಾವಿಸತಕ್ಕದ್ದಲ್ಲ.][2]

[1][12. XXX][1]

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

13. ಚುನಾವಣೆಗಳಿಗಾಗಿ [1][ವಾರ್ಡುಗಳು][1].- 2[(1)]2 ಪ್ರಕರಣ 11 ರ [1][(1)ನೇ ಉಪ-ಪ್ರಕರಣದ (ಎ) ಖಂಡದ][1] ಮೇರೆಗೆ ಸ್ಥಾನಗಳನ್ನು ಭರ್ತಿ ಮಾಡಲು ಚುನಾಯಿಸಬೇಕಾದ ಕೌನ್ಸಿಲರ್ ಗಳ ಚುನಾವಣೆಯ ಉದ್ದೇಶಕ್ಕಾಗಿ ಸರ್ಕಾರವು, [3][xxx][3] ಅಧಿಸೂಚನೆಯ ಮೂಲಕ,-

1. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಮರು ಸಂಖ್ಯೆ ನೀಡಲಾಗಿದೆ.

3. 1983ರ ಅಧಿನಿಯಮ 12ರ ಮೂಲಕ 24.2.1983 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(ಎ) [1][ಮುನ್ಸಿಪಲ್ ಏರಿಯಾ][1]ವನ್ನು ಎಷ್ಟು ಸ್ಥಳೀಯ ವಾರ್ಡ್‌ಗಳನ್ನಾಗಿ ವಿಂಗಡಿಸಬೇಕಾಗುತ್ತದೋ ಅಷ್ಟು ಸ್ಥಳೀಯ [1][ವಾರ್ಡುಗಳ][1] ಸಂಖ್ಯೆಯನ್ನು;

1. 1994ರ ಅಧಿನಿಯಮ ಸಂಖ್ಯೆ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಬಿ) ಪ್ರತಿಯೊಂದು ಸ್ಥಳೀಯ [1][ವಾರ್ಡಿ][1]ನ ವಿಸ್ತೀರ್ಣವನ್ನು.

1. 1994ರ ಅಧಿನಿಯಮ ಸಂಖ್ಯೆ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಸಿ) ಪ್ರತಿಯೊಂದು ಸ್ಥಳೀಯ [1][ವಾರ್ಡಿ][1]ಗೆ [2][ಒಂದರಂತೆ ಹಂಚಿಕೆ ಮಾಡಿದ ಸ್ಥಾನಗಳ ಸಂಖ್ಯೆಯನ್ನು [3][xxx][3]][2] ಇರತಕ್ಕದ್ದು; ಮತ್ತು

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2.1993ರ ಅಧಿನಿಯಮ 12ರ ಮೂಲಕ 24.2.1983 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

3.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(ಡಿ) ಪ್ರತಿಯೊಂದು ಸ್ಥಳೀಯ [1][ವಾರ್ಡಿ][1]ನಲ್ಲಿ, [1][ಪರಿಶಿಷ್ಟ ಜಾತಿಗಳಿಗಾಗಿ, ಪರಿಶಿಷ್ಟ ಪಂಗಡಗಳಿಗಾಗಿ, ಹಿಂದುಳಿದ ವರ್ಗಗಳಿಗಾಗಿ ಹಾಗೂ ಮಹಿಳೆಯರಿಗಾಗಿ][1] ಸ್ಥಾನಗಳನ್ನೇನಾದರೂ ಮೀಸಲಿರಿಸಿದ್ದರೆ ಅವುಗಳ ಸಂಖ್ಯೆಯನ್ನು

- ನಿರ್ಧರಿಸತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][ಪರಂತು, ರೂಪಿಸಿದ ಸ್ಥಳೀಯ [2][ವಾರ್ಡುಗಳು][2], ಸಾಧ್ಯವಾದಷ್ಟು ಮಟ್ಟಿಗೆ, ಹೊಂದಿಕೊಂಡಿರುವ ಬ್ಲಾಕ್‌ಗಳನ್ನು ಒಳಗೊಂಡಿರತಕ್ಕದ್ದು.][1]

1.1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(1ಎ) ಉಪಪ್ರಕರಣ (1) ರ ಅಡಿಯಲ್ಲಿ ಯಾವುದೇ ಅಧಿಸೂಚನೆಯನ್ನು, ಯಾವುದೇ ಕಾನೂನು ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ.][1]

1.1983ರ ಅಧಿನಿಯಮ 12ರ ಮೂಲಕ 24.2.1983 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(2) ಮತ್ತು (3)XXX][1]

1.23.2.1979 ರಿಂದ ಜಾರಿಗೆ ಬರುವಂತೆ 1976ರ ಅಧಿನಿಯಮ 83ರ ಮೂಲಕ ಸೇರಿಸಲಾಗಿದೆ ಮತ್ತು 1979ರ ಅಧಿನಿಯಮ 13ರ ಮೂಲಕ ಬಿಟ್ಟುಬಿಡಲಾಗಿದೆ.

14. ಮತದಾರರ ಪಟ್ಟಿ.-[1][(1) ಮುನಿಸಿಪಲ್ ಕೌನ್ಸಿಲ್‌ನ ಮತದಾರರ ಪಟ್ಟಿಯನ್ನು, ರಾಜ್ಯ ಚುನಾವಣಾ ಆಯೋಗದ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣಕೊಳಪಟ್ಟು ಸಿದ್ಧಪಡಿಸತಕ್ಕದ್ದು.

ಪರಂತು, ಯಾವುದೇ ವಾರ್ಡಿನಲ್ಲಿ ಸೇರಿಸಿರುವ ಮುನ್ಸಿಪಲ್ ಏರಿಯಾ ಅಂಥ ಭಾಗಕ್ಕೆ, ತತ್ಕಾಲದಲ್ಲಿ ಜಾರಿಯಲ್ಲಿರುವ, ಕರ್ನಾಟಕ ವಿಧಾನಸಭಾ ಮತದಾರರ ಪಟ್ಟಿಯನ್ನು, ಅಂತಹ

ವಾರ್ಡಿಗೆ ಮುನಿಸಿಪಲ್ ಕೌನ್ಸಿಲ್‌ನ ಮತದಾರರ ಪಟ್ಟಿಯನ್ನು ಸಿದ್ಧಪಡಿಸುವ ಉದ್ದೇಶಕ್ಕಾಗಿ ಅಳವಡಿಸಿಕೊಳ್ಳಬಹುದು.

ಮತ್ತು ಪರಂತು, ಮುನ್ಸಿಪಲ್ ಕೌನ್ಸಿಲ್‌ನ ಅಂಥ ವಾರ್ಡಿಗಾಗಿ ಇರುವ ಮತದಾರರ ಪಟ್ಟಿಯು, ಅಂಥ ವಾರ್ಡಿಗೆ ಚುನಾವಣೆಗಾಗಿ ನಾಮನಿರ್ದೇಶನ ಮಾಡುವುದಕ್ಕೆ ಇರುವ ಕೊನೆಯ ದಿನದ ನಂತರ ಮತ್ತು ಅಂಥ ಚುನಾವಣೆಯು ಮುಕ್ತಾಯಗೊಳ್ಳುವುದಕ್ಕೆ ಮೊದಲು ಮಾಡಿದ ಯಾವುದೇ ನಮೂದಿನ ತಿದ್ದುಪಡಿಯನ್ನು,ಬದಲಾವಣೆಯನ್ನು, ಸೇರ್ಪಡೆಯನ್ನು ಅಥವಾ ಲೋಪವನ್ನು ಒಳಗೊಳ್ಳತಕ್ಕದ್ದಲ್ಲ.][1]

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) [1][ಮುನ್ಸಿಪಲ್ ಏರಿಯಾ][1]ಕ್ಕೆ ಸಂಬಂಧಿಸಿದಂತೆ, ಈ ಬಗ್ಗೆ, [1][ರಾಜ್ಯ ಚುನಾವಣಾ ಆಯೋಗ][1] ವು ಹೆಸರಿಸಿದ ಅಧಿಕಾರಿಯು, ಅಂಥ [1][ಮುನ್ಸಿಪಲ್ ಏರಿಯಾ][1]ದ ಪ್ರತಿ [1][ವಾರ್ಡ್][1]ಗೆ ಮತದಾರರ ಪಟ್ಟಿಯನ್ನು ಇಟ್ಟಿರತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ವಿವರಣೆ:- ಈ ಪ್ರಕರಣದ ಉದ್ದೇಶಕ್ಕಾಗಿ ``ಮತದಾರರ ಪಟ್ಟಿ'' ಎಂದರೆ ತತ್ಕಾಲದಲ್ಲಿ ಜಾರಿಯಲ್ಲಿರುವ 1950ರ ಜನತಾ ಪ್ರಾತಿನಿಧ್ಯ ಅಧಿನಿಯಮ (ಕೇಂದ್ರ ಅಧಿನಿಯಮ 1950ರXLIII)ದ ಉಪಬಂಧಗಳ ಮೇರೆಗೆ ತಯಾರಿಸಿದ ಮತದಾರರ ಪಟ್ಟಿ.

(3) ಉಪ-ಪ್ರಕರಣ (1)ರಲ್ಲಿ ಉಲ್ಲೇಖಿಸಿರುವ ಮತದಾರರ ಪಟ್ಟಿಯಲ್ಲಿ ಯಾವ ವ್ಯಕ್ತಿಯ ಹೆಸರಿದೆಯೋ ಆ ಪ್ರತಿಯೊಬ್ಬ ವ್ಯಕ್ತಿಯು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಅನರ್ಹಗೊಂಡಿದ್ದ ಹೊರತು, ಯಾವ ವಾರ್ಡ್‌ಗೆ ಅಂಥ ಪಟ್ಟಿಯು ಸಂಬಂಧಿಸಿದೆಯೋ ಆ [1][ವಾರ್ಡ್][1]ನ ಸದಸ್ಯನ ಚುನಾವಣೆಯಲ್ಲಿ ಮತ ನೀಡಲು ಅರ್ಹನಾಗಿರತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(4) ಪ್ರತಿಯೊಂದು [1][ವಾರ್ಡ್][1]ನಲ್ಲಿ, ಆ [1][ವಾರ್ಡ್][1]ನಿಂದ ಚುನಾಯಿತರಾಗಬೇಕಾದ ಕೌನ್ಸಿಲರ್ ಗಳು ಎಷ್ಟಿರುವರೋ ಅಷ್ಟು ಮತಗಳನ್ನು ಮತದಾರನು ಹೊಂದಿರತಕ್ಕದ್ದು, ಆದರೆ ಯಾರೇ ಮತದಾರನು ಯಾವುದೇ ಚುನಾವಣೆಯಲ್ಲಿ ಯಾರೇ ಒಬ್ಬ ಅಭ್ಯರ್ಥಿಗೆ ಒಂದು ಮತಕ್ಕಿಂತ ಹೆಚ್ಚು ಮತವನ್ನು ಕೊಡತಕ್ಕದ್ದಲ್ಲ.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

15. ಅಭ್ಯರ್ಥಿಗಳ ಅರ್ಹತೆ.- (1) [1][ಮುನ್ಸಿಪಲ್ ಏರಿಯಾ][1]ದ ಯಾವುದೇ [1][ವಾರ್ಡ್][1]ನಮತದಾರರ ಪಟ್ಟಿಯಲ್ಲಿ ಹೆಸರಿರುವ ಪ್ರತಿಯೊಬ್ಬ ವ್ಯಕ್ತಿಯು, ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೇರೆಗೆ ಅನರ್ಹಗೊಂಡಿದ್ದ ಹೊರತು, ಆ [1][ವಾರ್ಡ್][1]ನ ಅಥವಾ ಮುನ್ಸಿಪಾಲಿಟಿಗಳ ಇತರ ಯಾವುದೇ ವಾರ್ಡಿನ ಚುನಾವಣೆಯಲ್ಲಿ ಚುನಾಯಿತನಾಗಲು ಅರ್ಹನಾಗಿರತಕ್ಕದ್ದು ಮತ್ತು ಅಂಥ ಪಟ್ಟಿಯಲ್ಲಿ ಹೆಸರು ಇಲ್ಲದಿರುವ ಪ್ರತಿಯೊಬ್ಬ ವ್ಯಕ್ತಿಯು [1][ಮುನ್ಸಿಪಲ್ ಏರಿಯಾ][1]ದ ಯಾವುದೇ [1][ವಾರ್ಡ್][1]ನ ಚುನಾವಣೆಯಲ್ಲಿ ಚುನಾಯಿತನಾಗಲು ಅರ್ಹನಾಗಿರತಕ್ಕದ್ದಲ್ಲ:

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಪರಂತು,-

(ಎ) ಪರಿಶಿಷ್ಟ ಜಾತಿಗಳಿಗೆ ಅಥವಾ [1][ಪರಿಶಿಷ್ಟ ಪಂಗಡ][1] ಗಳಿಗೆ ಮೀಸಲಿಟ್ಟ ಸ್ಥಾನಕ್ಕೆ, ಅವನು ಆ ಯಾವುದೇ ಜಾತಿಗಳ ಅಥವಾ ಪಂಗಡಗಳ ವ್ಯಕ್ತಿಯಾಗಿರದಿದ್ದರೆ;

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(ಎಎ) ಹಿಂದುಳಿದ ವರ್ಗಗಳಿಗೆ ಮೀಸಲಿಟ್ಟ ಸ್ಥಾನಕ್ಕೆ ಅವನು ಆ ವರ್ಗಗಳ ವ್ಯಕ್ತಿಯಾಗಿರದಿದ್ದರೆ][1];

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಬಿ) ಮಹಿಳೆಯರಿಗೆ ಮೀಸಲಿಟ್ಟ ಸ್ಥಾನಕ್ಕೆ ಅಂಥ ವ್ಯಕ್ತಿಯು ಮಹಿಳೆಯಾಗಿರದಿದ್ದರೆ;

ಚುನಾಯಿತನಾಗಲು ಅರ್ಹನಾಗಿರತಕ್ಕದ್ದಲ್ಲ.

(2) ವ್ಯಕ್ತಿಯು ಒಳಗಾಗಿರುವ ಯಾವುದೇ ಅನರ್ಹತೆಗೆ ಒಳಪಟ್ಟು, ಚುನಾವಣೆಯಲ್ಲಿ ಸಂದರ್ಭಾನುಸಾರ ಮತದಾನ ಮಾಡಲು ವ್ಯಕ್ತಿಯು ಅರ್ಹನಾಗಿರುವನೇ ಅಥವಾ ಅರ್ಹನಾಗಿಲ್ಲವೇ

ಅಥವಾ ಚುನಾಯಿತನಾಗಲು ಅರ್ಹನಾಗಿರುವನೇ ಅಥವಾ ಅರ್ಹನಾಗಿಲ್ಲವೇ ಎಂಬುದನ್ನು ಈ ಪ್ರಕರಣದ ಮೇರೆಗೆ ನಿರ್ಧರಿಸುವ ಉದ್ದೇಶಕ್ಕಾಗಿ ಮತದಾರರ ಪಟ್ಟಿಯು ನಿರ್ಣಾಯಕ ಸಾಕ್ಷ್ಯವಾಗಿರತಕ್ಕದ್ದು.

16. ಕೌನ್ಸಿಲರ್ ಆಗಲು ಸಾಮಾನ್ಯ ಅನರ್ಹತೆಗಳು.- (1) ವ್ಯಕ್ತಿಯು ಕೌನ್ಸಿಲರ್ ನಾಗಿ ಆಯ್ಕೆಯಾಗಲು ಮತ್ತು ಹಾಗೆ ಕೌನ್ಸಿಲರ್ ನಾಗಿರಲು,-

(ಎ) ಅವನು ಕ್ರಿಮಿನಲ್ ನ್ಯಾಯಾಲಯದಿಂದ,-

(i) ನೈತಿಕ ಪತನವನ್ನೊಳಗೊಳ್ಳುವಂಥ ಮತ್ತು ಆರು ತಿಂಗಳುಗಳನ್ನು ಮೀರುವ ಅವಧಿಯ ಕಾರಾವಾಸದಿಂದ ದಂಡನೀಯನಾಗುವಂಥ ಅಪರಾಧಕ್ಕಾಗಿ; ಅಥವಾ

(ii) 1976ರ ಕರ್ನಾಟಕ ವಿವಾಹಗಳ (ನೋಂದಣಿ ಮತ್ತು ಸಂಕೀರ್ಣ ಉಪಬಂಧಗಳ) ಅಧಿನಿಯಮದ 20, 21 ಅಥವಾ 22ನೇ ಪ್ರಕರಣದ ಮೇರೆಗಿನ ದಂಡನೀಯವಾದ ಅಪರಾಧಕ್ಕಾಗಿ-

- ಕಾರವಾಸದ ಶಿಕ್ಷೆಗೆ ಒಳಗಾಗಿದ್ದು, ಅಂಥ ಶಿಕ್ಷೆಯನ್ನು ವ್ಯತಿರಿಕ್ತಗೊಳಿಸಿರದಿದ್ದರೆ ಅಥವಾ ರದ್ದುಗೊಳಿಸಿಲ್ಲದಿದ್ದರೆ ಅಥವಾ ಅಪರಾಧವನ್ನು ಕ್ಷಮಿಸಿರದಿದ್ದರೆ; ಅಥವಾ

[1][(ಬಿ) 1955ರ ಅಸ್ಪೃಶ್ಯತಾ ಅಪರಾಧ ಅಧಿನಿಯಮದ (1955ರ ಕೇಂದ್ರ ಅಧಿನಿಯಮ 22) ಅಥವಾ 1954ರ ಆಹಾರ ಕಲಬೆರಕೆ ಪ್ರತಿಬಂಧಕ ಅಧಿನಿಯಮದ (1954ರ ಕೇಂದ್ರ ಅಧಿನಿಯಮ 37) ಉಪಬಂಧಗಳ ಮೇರೆಗಿನ ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣೀತನಾಗಿದ್ದರೆ; ಅಥವಾ][1]

1.1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಮತೆ ಪ್ರತಿಯೋಜಿಸಲಾಗಿದೆ.

(ಸಿ) ಭಾರತ ಸರ್ಕಾರದ ಅಧೀನದಲ್ಲಿ ಅಥವಾ ಭಾರತ ಸಂವಿಧಾನದ ಮೊದಲನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ರಾಜ್ಯ ಸರ್ಕಾರದ ಅಧೀನದಲ್ಲಿ ಅಥವಾ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ಘೋಷಿಸಿ ಅನರ್ಹನನ್ನಾಗಿಸಿದಂಥ ಪದಗಳನ್ನು ಹೊರತುಪಡಿಸಿ, ಆ ಯಾವುದೇ ಸರ್ಕಾರಗಳ ನಿಯಂತ್ರಣಕ್ಕೊಳಪಟ್ಟು, ಯಾವುದೇ ಸ್ಥಳೀಯ ಪ್ರಾಧಿಕಾರದ ಅಥವಾ ಇತರ ಪ್ರಾಧಿಕಾರದ ಅಧೀನದಲ್ಲಿ ಯಾವುದೇ ಲಾಭದ ಸ್ಥಾನವನ್ನು ಅವನು ಧಾರಣ ಮಾಡಿದ್ದರೆ; ಅಥವಾ

(ಡಿ) ಸ್ಥಳೀಯ ಪ್ರಾಧಿಕಾರದ ಅಧೀನದಲ್ಲಿನ ಸೇವೆಯಿಂದ ಅಥವಾ ಸರ್ಕಾರದ ಸೇವೆಯಿಂದ ಅವನನ್ನು ವಜಾ ಮಾಡಿದ್ದರೆ; ಅಥವಾ

(ಇ) ಅವನು ನ್ಯಾಯವಾದಿಯಾಗಿದ್ದು, ಸಕ್ಷಮ ಪ್ರಾಧಿಕಾರದ ಆದೇಶದ ಮೂಲಕ ಅವನನ್ನು ವೃತ್ತಿಯಿಂದ ವಜಾ ಮಾಡಿದ್ದರೆ ಅಥವಾ ಅಮಾನತುಗೊಳಿಸಿದ್ದರೆ, ಅಮಾನತು ಮಾಡಿದ್ದಾಗ ಅಂಥ ಅಮಾನತಿನ ಅವಧಿಯಲ್ಲಿ ಅನರ್ಹತೆಯು ಚಾಲ್ತಿಯಲ್ಲಿದ್ದರೆ; ಅಥವಾ

(ಎಫ್) ಈ ಅಧಿನಿಯಮದ 41ನೇ ಪ್ರಕರಣದ ಮೇರೆಗೆ ಅವನನ್ನು ಸ್ಥಾನದಿಂದ ತೆಗೆದುಹಾಕಿದ್ದರೆ; ಅಥವಾ

(ಜಿ) ಅವನು ಅಸ್ವಸ್ಥಚಿತ್ತನಾಗಿದ್ದರೆ ಮತ್ತು ಸಕ್ಷಮ ನ್ಯಾಯಾಲಯದಿಂದ ಹಾಗೆ ಘೋಷಿತನಾಗಿದ್ದರೆ; ಅಥವಾ

(ಹೆಚ್) ಅವನು ಅವಿಮುಕ್ತ ದಿವಾಳಿಯಾಗಿದ್ದರೆ; ಅಥವಾ

(ಐ) ಅವನು ಭಾರತದ ನಾಗರಿಕನಾಗಿರದಿದ್ದರೆ ಅಥವಾ ವಿದೇಶಿ ರಾಜ್ಯದ ಪೌರತ್ವವನ್ನು ಸ್ವಇಚ್ಛೆಯಿಂದ ಪಡೆದಿದ್ದರೆ ಅಥವಾ ವಿದೇಶಿ ರಾಷ್ಟ್ರಕ್ಕೆ ನಿಷ್ಠೆಯಿಂದಿರುವೆನೆಂದು ಅಥವಾ ಬೆಂಬಲಿಗನಾಗಿರುತ್ತೇನೆಂದು ಏನಾದರೂ ಸಮ್ಮತಿ ಕೊಟ್ಟಿದ್ದರೆ; ಅಥವಾ

[1][(ಜೆ) ಅವನು, ರಾಜ್ಯ ವಿಧಾನಸಭಾ ಚುನಾವಣೆಯ ಉದ್ದೇಶಕ್ಕಾಗಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಅಥವಾ ಆ ಮೂಲಕ ಹಾಗೆ ಅನರ್ಹನಾಗಿದ್ದರೆ;

ಪರಂತು, ಯಾರೇ ವ್ಯಕ್ತಿಯನ್ನು ಅವನಿಗೆ ಇಪ್ಪತ್ತೊಂದು ವರ್ಷ ವಯಸ್ಸಾಗಿದ್ದರೂ ಅವನಿಗೆ ಇಪ್ಪತ್ತೈದಕ್ಕಿಂತಲೂ ಕಡಿಮೆ ವಯಸ್ಸಿನವನೆಂಬ ಕಾರಣ ಮಾತ್ರದಿಂದಲೇ ಅನರ್ಹಗೊಳಿಸತಕ್ಕದ್ದಲ್ಲ.][1]

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಕೆ) ಇಲ್ಲಿ ಇನ್ನು ಮುಂದೆ ಉಪಬಂಧಿಸಿರುವುದನ್ನುಳಿದು, ಮುನ್ಸಿಪಲ್ ಕೌನ್ಸಿಲ್‌ನ ಆದೇಶದ ಮೂಲಕ ಮಾಡಿದ ಯಾವುದೇ ಕಾಮಗಾರಿಯಲ್ಲಿ ಅಥವಾ ಮುನ್ಸಿಪಲ್ ಕೌನ್ಸಿಲ್‌ನೊಂದಿಗೆ ಅಥವಾ ಅದರ ಅಧೀನದಲ್ಲಿ ಅಥವಾ ಅದರಿಂದ ಅಥವಾ ಅದರ ಪರವಾಗಿ ಮಾಡಿಕೊಂಡಿರುವ ಯಾವುದೇ ಕರಾರಿನಲ್ಲಿ ಅಥವಾ ನಿಯೋಜನೆಯಲ್ಲಿ ಅವನು ಅಥವಾ ಅವನ ಪಾಲುದಾರನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇ ಪಾಲನ್ನು ಅಥವಾ ಹಿತಾಸಕ್ತಿಯನ್ನು ಹೊಂದಿದ್ದರೆ; ಅಥವಾ

(ಎಲ್) ಮುನ್ಸಿಪಲ್ ಕೌನ್ಸಿಲ್‌ನ ಪರವಾಗಿ ಹಣ ಪಡೆಯುವ ನ್ಯಾಯವಾದಿಯಾಗಿ ನಿಯೋಜಿತನಾಗಿದ್ದರೆ ಅಥವಾ ಮುನ್ಸಿಪಲ್ ಕೌನ್ಸಿಲ್‌ನ ವಿರುದ್ಧವಾಗಿ ನ್ಯಾಯವಾದಿಯಾಗಿ ನಿಯೋಜನೆಯನ್ನು ಅಂಗೀಕರಿಸಿದ್ದರೆ; ಅಥವಾ

(ಎಂ) ಅವನು ಮುನ್ಸಿಪಲ್ ಕೌನ್ಸಿಲ್‌ನ ಲೈಸೆನ್ಸ್ ಪಡೆದ ಮೋಜಣಿದಾರನಾಗಿದ್ದರೆ ಅಥವಾ ಕೊಳಾಯಿಗಾರನಾಗಿದ್ದರೆ ಅಥವಾ ನೀರು ಸರಬರಾಜು ಮಾಡುವ ಕಂಟ್ರಾಕ್ಟರನಾಗಿದ್ದರೆ ಅಥವಾ ಯಾರೇ ಅಂಥ ಲೈಸೆನ್ಸ್ ಪಡೆದ ವ್ಯಕ್ತಿಯು ಪಾಲುಗಾರನಾಗಿರುವ ಫರ್ಮಿನ ಪಾಲುಗಾರನಾಗಿದ್ದರೆ; ಅಥವಾ

(ಎನ್) ಮುನ್ಸಿಪಲ್ ಕೌನ್ಸಿಲ್‌ಗೆ ಅವನು, ಏಜೆಂಟನಾಗಿರುವುದನ್ನು, ರಿಸೀವರ್ ನಾಗಿರುವುದನ್ನು, ನ್ಯಾಸಧಾರಿಯಾಗಿರುವುದನ್ನು ಅಥವಾ ಕಾರ್ಯನಿರ್ವಾಹಕನಾಗಿರುವುದನ್ನು ಹೊರತುಪಡಿಸಿ, ಅವನಿಂದ ಬರಬೇಕಾದ ಯಾವುದೇ ಬಗೆಯ ಯಾವುದೇ ಬಾಕಿಯನ್ನು ಈ ಬಗ್ಗೆ ನೋಟೀಸನ್ನು ಅವನಿಗೆ ಜಾರಿ ಮಾಡಿದ ತರುವಾಯ ಮೂರು ತಿಂಗಳುಗಳೊಳಗಾಗಿ ಸಂದಾಯ ಮಾಡಲು ತಪ್ಪಿದರೆ; ಅಥವಾ

(ಒ) ಚುನಾವಣೆಯ ಸಿಂಧುತ್ವವನ್ನು ಅಥವಾ ಕ್ರಮಬದ್ಧತೆಯನ್ನು ಪ್ರಶ್ನಿಸುವ ವ್ಯವಹರಣೆಗಳಲ್ಲಿ ನಿರ್ಣಯದ ದಿನಾಂಕದಿಂದ ಐದು ವರ್ಷಗಳ ಅವಧಿಯು ಮುಕ್ತಾಯವಾಗಿದ್ದು ಅಥವಾ ಸರ್ಕಾರವು ಆದೇಶದ ಮೂಲಕ ಅನರ್ಹತೆಯನ್ನು ತೆಗೆದುಹಾಕಿದ್ದ ಹೊರತು, ಅವನು,-

(i) ಯಾವುದೇ ಭ್ರಷ್ಟಾಚಾರದ; ಅಥವಾ

(ii) ಭಾರತ ದಂಡ ಸಂಹಿತೆಯ 171ನೇ ಪ್ರಕರಣದ ಅಥವಾ 171ಎಫ್ ಪ್ರಕರಣದ ಮೇರೆಗೆ ದಂಡನೀಯವಾಗಬಹುದಾದ ಯಾವುದೇ ಅಪರಾಧದ ಅಥವಾ ಈ ಅಧಿನಿಯಮದ 36ನೇ ಪ್ರಕರಣದ ಅಥವಾ 37ನೇ ಪ್ರಕರಣದ (2)ನೇ ಉಪ-ಪ್ರಕರಣದ (ಎ) ಖಂಡದ ಮೇರೆಗೆ ದಂಡನೀಯವಾಗಬಹುದಾದ ಯಾವುದೇ ಅಪರಾಧ

- ತಪ್ಪಿತಸ್ಥನೆಂದು ರುಜುವಾತಾಗಿದ್ದರೆ:

ಪರಂತು,-

(ಎ) ಉಪಖಂಡ (ಬಿ) ಯಲ್ಲಿ ಹೇಳಿರುವ ಅನರ್ಹತೆಯು, ಯಾವ ಅವಧಿಗಾಗಿ ವ್ಯಕ್ತಿಯು ಭದ್ರತೆಯನ್ನು ಒದಗಿಸಲು ಆದೇಶಿಸಲಾಗಿತ್ತೋ ಆ ಅವಧಿಯ ಮುಕ್ತಾಯದ ತರುವಾಯ ಪ್ರವರ್ತನೆಯಲ್ಲಿರುವುದು ನಿಂತುಹೋಗತಕ್ಕದ್ದು;

(ಬಿ) ವ್ಯಕ್ತಿಯು,-

(i) ಯಾವುದೇ ನಿವೃತ್ತಿ ವೇತನವನ್ನು; ಅಥವಾ

(ii) ಅಧ್ಯಕ್ಷ ಅಥವಾ ಉಪಾಧ್ಯಕ್ಷ ಅಥವಾ ಕೌನ್ಸಿಲರ್‌ನಾಗಿ ಸೇವೆ ಸಲ್ಲಿಸುತ್ತಿರುವುದಕ್ಕಾಗಿ ಸರ್ಕಾರವು ಅನುಮೋದಿಸಿದ ಯಾವುದೇ ಭತ್ಯೆಯನ್ನು ಅಥವಾ ಸೌಲಭ್ಯವನ್ನು

- ಸ್ವೀಕರಿಸುತ್ತಿರುವ ಕಾರಣ ಮಾತ್ರದಿಂದಲೇ (ಸಿ) ಖಂಡದ ಮೇರೆಗೆ ಯಾವುದೇ ಅನರ್ಹತೆಗೆ ಒಳಗಾಗಿದ್ದಾನೆಂದು ಭಾವಿಸತಕ್ಕದ್ದಲ್ಲ;

(ಸಿ) (ಎ), (ಡಿ) ಮತ್ತು (ಎಫ್) ಖಂಡಗಳಲ್ಲಿ ಹೇಳಿರುವ ಅನರ್ಹತೆಯು ಅಂಥ ಶಿಕ್ಷೆಯ, ವಜಾ ಅಥವಾ ತೆಗೆದುಹಾಕಿದ ದಿನಾಂಕದಿಂದ ನಾಲ್ಕು ವರ್ಷಗಳು ಮುಕ್ತಾಯವಾದ ತರುವಾಯ ಅಥವಾ ಸರ್ಕಾರದ ಆದೇಶದ ಮೂಲಕ ಮುಂಚಿತವಾಗಿ ಪ್ರವರ್ತನೆಯಲ್ಲಿರುವುದು ನಿಂತುಹೋಗತಕ್ಕದ್ದು;

(ಡಿ) ವ್ಯಕ್ತಿಯು,-

(i) ಯಾವುದೇ ಸ್ಥಿರ ಸ್ವತ್ತಿನ ಯಾವುದೇ ಗೇಣಿ, ಮಾರಾಟ ಅಥವಾ ಖರೀದಿಯಲ್ಲಿ ಅಥವಾ ಅದಕ್ಕಾಗಿನ ಯಾವುದೇ ಒಪ್ಪಂದದಲ್ಲಿ ಯಾವುದೇ ಪಾಲು ಅಥವಾ ಹಿತಾಸಕ್ತಿಯನ್ನು ಹೊಂದಿರುವ; ಅಥವಾ

(ii) ವ್ಯವಸ್ಥಾಪಕ ನಿರ್ದೇಶಕ ಅಥವಾ ಏಜೆಂಟನಾಗಿ ಹೊರತು, ಯಾವುದೇ ಜಾಯಿಂಟ್ ಸ್ಟಾಕ್ ಕಂಪನಿಯಲ್ಲಿ ಅಥವಾ ಸಂಘಗಳ ನೋಂದಣಿ ಅಧಿನಿಯಮದ ಮೇರೆಗೆ ನೊಂದಾಯಿತವಾದ ಯಾವುದೇ ಸಾಹಿತ್ಯಕ ಸಂಘದಲ್ಲಿ ಅಥವಾ ಮುನ್ಸಿಪಲ್ ಕೌನ್ಸಿಲ್‌ನೊಂದಿಗೆ ಕರಾರು ಮಾಡಿಕೊಂಡಿರುವ ಅಥವಾ ಅದರಿಂದ ಅಥವಾ ಅದರ ಪರವಾಗಿ ನಿಯೋಜಿತವಾಗಿರುವ ಯಾವುದೇ ಸಹಕಾರ ಸಂಘದಲ್ಲಿ ಪಾಲು ಅಥವಾ ಹಿತಾಸಕ್ತಿಯನ್ನು ಹೊಂದಿರುವ; ಅಥವಾ

(iii) ಮುನ್ಸಿಪಲ್ ಕೌನ್ಸಿಲ್‌ನ ವ್ಯವಹಾರಗಳಿಗೆ ಸಂಬಂಧಪಟ್ಟ ಯಾವುದೇ ಜಾಹೀರಾತನ್ನು ಯಾವ ವೃತ್ತಪತ್ರಿಕೆಯಲ್ಲಿ ಸೇರಿಸಲಾಗಬಹುದೋ ಅಂಥ ಯಾವುದೇ ವೃತ್ತಪತ್ರಿಕೆಯಲ್ಲಿ ಪಾಲು ಅಥವಾ ಹಿತಾಸಕ್ತಿಯನ್ನು ಹೊಂದಿರುವ; ಅಥವಾ

(iv) ಮುನ್ಸಿಪಲ್ ಕೌನ್ಸಿಲ್ ಅಥವಾ ಅದರ ಪರವಾಗಿ ಎತ್ತಲಾದ ಯಾವುದೇ ಸಾಲದಲ್ಲಿ ಡಿಬೆಂಚರನ್ನು ಧಾರಣ ಮಾಡಿರುವ ಅಥವಾ ಅದರಲ್ಲಿ ಅನ್ಯಥಾ ಹಿತಾಸಕ್ತಿ ಹೊಂದಿರುವ; ಅಥವಾ

(v) ಯಾವುದೇ ಅಧಿಕೃತ ವರ್ಷದಲ್ಲಿ ನಿಯಮಿಸಬಹುದಾದಂಥ ಮೊಬಲಗನ್ನು ಮೀರದ ಮೌಲ್ಯಕ್ಕೆ ಅವನು ನಿಯತವಾಗಿ ವ್ಯಾಪಾರ ಮಾಡುತ್ತಿರುವ ಯಾವುದೇ ವಸ್ತುವನ್ನು ಮುನ್ಸಿಪಲ್ ಕೌನ್ಸಿಲ್‌ಗೆ ಮಾಡುವ ಆಗಾಗಿನ ಮಾರಾಟದಲ್ಲಿ ಪಾಲು ಅಥವಾ ಹಿತಾಸಕ್ತಿಯನ್ನು ಹೊಂದಿರುವ;

(vi) ಯಾವುದೇ ಅಧಿಕೃತ ವರ್ಷದಲ್ಲಿ ಐವತ್ತು ರೂಪಾಯಿಗಳಿಗೆ ಮೀರದ ಅಥವಾ ಐದುನೂರು ರೂಪಾಯಿಗಳಿಗೆ ಮೀರದ ನಿಯಮಿಸಬಹುದಾದಂಥ ಹೆಚ್ಚಿನ ಮೊಬಲಗಿಗಾಗಿ ಯಾವುದೇ ವಸ್ತುವನ್ನು ಆಗಾಗ ಮುನ್ಸಿಪಲ್ ಕೌನ್ಸಿಲ್ ಗೆ ಬಾಡಿಗೆಗೆ ಕೊಡುವುದರಲ್ಲಿ ಅಥವಾ ಮುನ್ಸಿಪಲ್ ಕೌನ್ಸಿಲ್‌ನಿಂದ ಬಾಡಿಗೆಗಾಗಿ ಪಡೆಯುವುದರಲ್ಲಿ ಪಾಲು ಅಥವಾ ಹಿತಾಸಕ್ತಿಯನ್ನು ಹೊಂದಿರುವ,

- ಕಾರಣದಿಂದಾಗಿ (ಕೆ) ಉಪಖಂಡದ ಮೇರೆಗಿನ ಅನರ್ಹತೆಗೆ ಒಳಗಾಗಿದ್ದಾನೆಂದು ಭಾವಿಸತಕ್ಕದ್ದಲ್ಲ.

[1][(1ಎ) ಒಬ್ಬ ವ್ಯಕ್ತಿಯನ್ನು, ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳು (ಪಕ್ಷಕಾರ ನಿಷೇಧ) ಅಧಿನಿಯಮ, 1987ರ ಅಡಿಯಲ್ಲಿ, ಅವನನ್ನು ಅನರ್ಹಗೊಳಿಸಿದ್ದಲ್ಲಿ, ಕೌನ್ಸಿಲರ್‌ನಾಗಿ ಆಯ್ಕೆ ಮಾಡಲು ಮತ್ತು ಕೌನ್ಸಿಲರ್ ನಾಗಿರಲು ಅನರ್ಹನಾಗಿರತಕ್ಕದ್ದು.][1]

1.1987ರ ಅಧಿನಿಯಮ 20ರ ಮೂಲಕ 29.12.1986 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[2][(1ಬಿ) ಒಬ್ಬ ವ್ಯಕ್ತಿಯನ್ನು, 16ಸಿ ಪ್ರಕರಣದ ಅಡಿಯಲ್ಲಿ ಅನರ್ಹಗೊಳಿಸಲಾಗಿದ್ದರೆ, ಅವನು ಕೌನ್ಸಿಲರ್ ನಾಗಿ ಆಯ್ಕೆಯಾಗಲು ಮತ್ತು ಕೌನ್ಸಿಲರ್ ನಾಗಿರಲು ಅನರ್ಹನಾಗಿರತಕ್ಕದ್ದು.

ಪರಂತು, ಈ ಉಪ-ಪ್ರಕರಣದ ಅಡಿಯಲ್ಲಿ ಅನರ್ಹತೆಯು 16ಸಿ ಪ್ರಕರಣದ ಅಡಿಯಲ್ಲಿ ಮಾಡಲಾದ ಆದೇಶದ ದಿನಾಂಕದಿಂದ ಮೂರು ವರ್ಷಗಳು ಮುಕ್ತಾಯವಾದ ತರುವಾಯ ಪ್ರವರ್ತನೆಯಲ್ಲಿರುವುದು ನಿಂತುಹೋಗತಕ್ಕದ್ದು.][1]

1.2003ರ ಅಧಿನಿಯಮ 40ರ ಮೂಲಕ 10.11.2003 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) ಯಾರೇ ಕೌನ್ಸಿಲರ್‌ನನ್ನು, ಅವನು ಯಾವ ಅವಧಿಗೆ ಚುನಾಯಿತನಾಗಿದ್ದಾನೋ ಆ ಅವಧಿಯಲ್ಲೇ-

(ಎ) (1)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಅನರ್ಹತೆಗೊಳಗಾದರೆ; ಅಥವಾ

(ಬಿ) (i) ಅಂಥ ಪಾಲು ಅಥವಾ ಹಿತಾಸಕ್ತಿಯ ಮೌಲ್ಯವು ಏನೇ ಆಗಿರಬಹುದಾದರೂ (1)ನೇ ಉಪ-ಪ್ರಕರಣದ ಪರಂತುಕದ (ಡಿ) ಖಂಡದ (i), (ii), (iii) ಅಥವಾ (iv)ನೇ ಉಪ-ಖಂಡಗಳಲ್ಲಿ ವಿವರಿಸಲಾದ ಯಾವುದೇ ಅಂಥ ಪಾಲು ಅಥವಾ

ಹಿತಾಸಕ್ತಿಯನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ತಾನೇ ಸ್ವತಃ ಅಥವಾ ತನ್ನ ಪಾಲುದಾರನ ಮೂಲಕ ಅವನು ಹೊಂದಿರುವ; ಅಥವಾ

(ii) ಅವನು ಮೂಲಕರ್ತ ಅಥವಾ ಇತರ ವ್ಯಕ್ತಿಯ ಪರವಾಗಿ ಅವನು ವೃತ್ತಿಪರ ಹಿತಾಸಕ್ತಿಯನ್ನು ಹೊಂದಿರುವ; ಅಥವಾ

(iii) ಆ ಕಾಲದಲ್ಲಿ ಮುನ್ಸಿಪಲ್ ಕೌನ್ಸಿಲ್‌ನ ವಿರುದ್ಧ ಯಾವುದೇ ವ್ಯವಹರಣೆಯಲ್ಲಿ ಅವನು ತೊಡಗಿರುವ

- ಯಾವುದೇ ವಿಷಯದ ಚರ್ಚೆಯಲ್ಲಿ ಕೌನ್ಸಿಲರ್ ನಾಗಿ ಮತದಾನ ಮಾಡಿದರೆ ಅಥವಾ ಭಾಗವಹಿಸಿದರೆ;

(ಸಿ) ಮುನ್ಸಿಪಲ್ ಕೌನ್ಸಿಲ್‌ನ ಅನುಮತಿ ಪಡೆದ ಹೊರತು, ಕ್ರಮಾನುಗತ ಮೂರು ತಿಂಗಳುಗಳ ಅವಧಿಯಲ್ಲಿ ಮುನ್ಸಿಪಲ್ ಕೌನ್ಸಿಲ್‌ನ ಸಭೆಗಳಿಗೆ ಅವನು ಗೈರುಹಾಜರಾದರೆ:

ಪರಂತು, ಕ್ರಮಾನುಗತ ಆರು ತಿಂಗಳುಗಳಿಗೆ ಮೀರದ ಅವಧಿಯಲ್ಲಿ ಮುನ್ಸಿಪಲ್ ಕೌನ್ಸಿಲ್ ಸಭೆಗಳಿಗೆ ಗೈರುಹಾಜರಾದ ಸಂದರ್ಭದಲ್ಲಿ ಯಾವುದೇ ಅಂಥ ಅನುಮತಿಯನ್ನು ಮಂಜೂರು ಮಾಡತಕ್ಕದ್ದಲ್ಲ:

ಮತ್ತು ಪರಂತು, ತಾನು ಗೈರುಹಾಜರಾಗಲು ಅನುಮತಿಗಾಗಿ, ಮುನ್ಸಿಪಲ್ ಕೌನ್ಸಿಲ್‌ಗೆ ಕೌನ್ಸಿಲರ್ ನು ಅರ್ಜಿಯನ್ನು ಸಲ್ಲಿಸಿದಾಗ ಮತ್ತು ಆ ಅರ್ಜಿಯ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗಾಗಿ ಆ ಅರ್ಜಿಯ ಮೇಲಿನ ತನ್ನ ತೀರ್ಮಾನವನ್ನು ಅರ್ಜಿದಾರನಿಗೆ ತಿಳಿಸಲು ಮುನ್ಸಿಪಲ್ ಕೌನ್ಸಿಲ್ ತಪ್ಪಿದಾಗ ಕೇಳಿಕೊಂಡಿದ್ದ ಅನುಮತಿಯು ಮುನ್ಸಿಪಲ್ ಕೌನ್ಸಿಲ್‌ನಿಂದ ಮಂಜೂರು ಮಾಡಲಾಗಿದೆಯೆಂದು ಭಾವಿಸತಕ್ಕದ್ದು.

ಡೆಪ್ಯುಟಿ ಕಮಿಷನರನು ತಾನು ಸೂಕ್ತವೆಂದು ಭಾವಿಸಬಹುದಾದಂಥ ವಿಚಾರಣೆಯ ತರುವಾಯ ತಾನಾಗಿಯೇ ಆಗಲಿ ಅಥವಾ ಅವನಿಗೆ ಮಾಡಲಾದ ವರದಿಯ ಮೇಲಾಗಲಿ ಮತ್ತು ಸಂಬಂಧಪಟ್ಟ ವ್ಯಕ್ತಿಯ ಸ್ಥಾನವು ಖಾಲಿಯಾಗಿರುವುದಕ್ಕಾಗಿ ಘೋಷಿಸತಕ್ಕದ್ದು.

(3) ಉಪ-ಪ್ರಕರಣದ (2)ರ ಮೇರೆಗೆ ಡೆಪ್ಯುಟಿ ಕಮಿಷನರನ ತೀರ್ಮಾನದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಆದೇಶದಿಂದ ಬಾಧಿತನಾದ ವ್ಯಕ್ತಿಯು ನಗರ [1][ಪೌರಾಡಳಿತ ನಿರ್ದೇಶಕ][1]ನಾಗಿದ್ದರೆ, ಅಂಥ ತೀರ್ಮಾನದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗಾಗಿ ಸರ್ಕಾರಕ್ಕೆ, ಮತ್ತು ಅಂಥ ವ್ಯಕ್ತಿಯು ಪಟ್ಟಣ [1][ಪೌರಾಡಳಿತ ನಿರ್ದೇಶಕ][1]ನಾಗಿದ್ದರೆ ಕಮಿಷನರನಿಗೆ ಅಪೀಲು ಮಾಡಿಕೊಳ್ಳಬಹುದು ಮತ್ತು ಅಂಥ ಅಪೀಲಿನ ಮೇಲೆ ಸರ್ಕಾರ ಅಥವಾ ಕಮಿಷನರನು ಮಾಡಿದ ಆದೇಶಗಳು ಅಂತಿಮವಾಗಿರತಕ್ಕದ್ದು:

1.2003ರ ಅಧಿನಿಯಮ 31ರ ಮೂಲಕ 20.08.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಪರಂತು, ಯಾರೇ ಕೌನ್ಸಿಲರ್ ನ ವಿರುದ್ಧ ತನ್ನ ಅಹವಾಲು ಹೇಳಿಕೊಳ್ಳಲು ಅವನಿಗೆ ಯುಕ್ತ ಅವಕಾಶವನ್ನು ಕೊಡದೆ (2) ಮತ್ತು (3)ನೇ ಉಪ-ಪ್ರಕರಣಗಳ ಮೇರೆಗೆ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

[1][16ಎ. ಚುನಾವಣಾ ವೆಚ್ಚಗಳ ಲೆಕ್ಕ ಮತ್ತು ಅವುಗಳ ಗರಿಷ್ಠ ಮಿತಿ.- (1) ಈ ಅಧಿನಿಯಮದ ಅಡಿಯಲ್ಲಿ, ಚುನಾವಣೆಯಲ್ಲಿನ ಪ್ರತಿಯೊಬ್ಬ ಅಭ್ಯರ್ಥಿಯು, ಅವನು ಚುನಾವಣಾ ಅಭ್ಯರ್ಥಿಯಾಗಿ ನಾಮನಿರ್ದೇಶಿತನಾದ ದಿನಾಂಕ ಮತ್ತು ಅದರ ಫಲಿತಾಂಶದ ಘೋಷಣೆಯ ದಿನಾಂಕ ಇವುಗಳ ನಡುವಣ ಅವಧಿಯಲ್ಲಿ, ಎರಡೂ ದಿನಾಂಕಗಳು ಸೇರಿ, ಚುನಾವಣೆಗೆ ಸಂಬಂಧಿಸಿದಂತೆ, ತಾನು ಅಥವಾ ತನ್ನ ಚುನಾವಣಾ ಏಜೆಂಟನು ವಹಿಸಿದ ಅಥವಾ ಪ್ರಾಧೀಕರಿಸಿದ ಎಲ್ಲ ವೆಚ್ಚಗಳ ಪ್ರತ್ಯೇಕವಾದ ಮತ್ತು ಸರಿಯಾದ ಲೆಕ್ಕಗಳನ್ನು ಸ್ವತಃ ತಾನಾಗಲೀ ಅಥವಾ ತನ್ನ ಚುನಾವಣಾ ಏಜೆಂಟನಾಗಲೀ ಇಡತಕ್ಕದ್ದು.

(2) ಈ ಅಧಿನಿಯಮದ ಅಡಿಯಲ್ಲಿ, ಅಭ್ಯರ್ಥಿಯ ಚುನಾವಣೆಗೆ ಸಂಬಂಧಿಸಿದಂತೆ ಒಂದು ರಾಜಕೀಯ ಪಕ್ಷವು ಅಥವಾ ಇತರ ಯಾವುದೇ ಅಸೋಸಿಯೇಷನ್ ಅಥವಾ ನಿಕಾಯ ಅಥವಾ ವ್ಯಕ್ತಿಗಳು ಅಥವಾ ಯಾವೊಬ್ಬ ವ್ಯಕ್ತಿಯು (ಅಭ್ಯರ್ಥಿಯನ್ನು ಅಥವಾ ಅವರ ಚುನಾವಣಾ ಏಜೆಂಟನನ್ನು ಹೊರತುಪಡಿಸಿ) ವಹಿಸಿದ ಅಥವಾ ಪ್ರಾಧೀಕರಿಸಿದ ಯಾವುದೇ ವೆಚ್ಚವನ್ನು (1)ನೇ ಉಪ-ಪ್ರಕರಣದ ಉದ್ದೇಶಕ್ಕಾಗಿ, ಅಭ್ಯರ್ಥಿಯು ಅಥವಾ ಅವನ ಚುನಾವಣಾ ಏಜೆಂಟನು, ಚುನಾವಣೆಗೆ ಸಂಬಂಧಿಸಿದಂತೆ ವಹಿಸಿದ ವೆಚ್ಚವೆಂದು ಭಾವಿಸತಕ್ಕದ್ದಲ್ಲ.

ವಿವರಣೆ 1: ಈ ಉಪ-ಪ್ರಕರಣದ ಉದ್ದೇಶಗಳಿಗಾಗಿ "ರಾಜಕೀಯ ಪಕ್ಷ" ಎಂಬುದಕ್ಕೆ ತತ್ಕಾಲದಲ್ಲಿ ಜಾರಿಯಲ್ಲಿರುವ ಚುನಾವಣಾ ಚಿಹ್ನೆಗಳ (ಮೀಸಲಾತಿ ಮತ್ತು ಹಂಚಿಕೆ) ಆದೇಶ, 1968 ರಲ್ಲಿರುವಂಥ ಅರ್ಥವನ್ನೇ ಹೊಂದಿರತಕ್ಕದ್ದು.

ವಿವರಣೆ 2: ಸಂದೇಹಗಳ ನಿವಾರಣೆಗಾಗಿ, ಯಾವೊಬ್ಬ ಅಭ್ಯರ್ಥಿಯ ಅಥವಾ ಆತನ ಚುನಾವಣಾ ಏಜೆಂಟನ ಅಥವಾ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಒಪ್ಪಿಗೆ ಪಡೆದು ಕಾರ್ಯನಿರ್ವಹಿಸುತ್ತಿರುವ ಯಾವೊಬ್ಬ ಇತರ ವ್ಯಕ್ತಿಯ ಸಲುವಾಗಿ (ಅಭ್ಯರ್ಥಿಯು ಧಾರಣ ಮಾಡಿದ ಪದದ ಕಾರಣದಿಂದಾಗಿ ಅಥವಾ ಯಾವುದೇ ಇತರ ಕಾರಣದಿಂದಾಗಿ) ಅಥವಾ ಅವರಿಗಾಗಿ ಅಥವಾ ಅವರ ಸಂಬಂಧದಲ್ಲಿ ತನ್ನ ಅಧಿಕೃತ ಕರ್ತವ್ಯ ನಿರ್ವಹಣೆಯಲ್ಲಿ ಅಥವಾ ಕರ್ತವ್ಯ ನಿರ್ವಹಣೆಯಲ್ಲಿರುವನೆಂದು ತಾತ್ಪರ್ಯವಾಗುವ ಸರ್ಕಾರದ ಸೇವೆಯಲ್ಲಿರುವ ಅಥವಾ ನಿಗಮದ ಸೇವೆಯಲ್ಲಿರುವ ಯಾವೊಬ್ಬ ವ್ಯಕ್ತಿಯು ಮಾಡಿದ ಯಾವುದೇ ವ್ಯವಸ್ಥೆ, ಒದಗಿಸಿದ ಸೌಲಭ್ಯಗಳು ಅಥವಾ ಮಾಡಿದ ಇತರ ಯಾವುದೇ ಕೃತ್ಯ ಅಥವಾ ಕಾರ್ಯದ ಸಂಬಂಧದಲ್ಲಿ ವಹಿಸಿದ ಯಾವುದೇ ವೆಚ್ಚವನ್ನು ಈ ಪ್ರಕರಣದ ಉದ್ದೇಶಕ್ಕಾಗಿ, ಅಭ್ಯರ್ಥಿಯು ಅಥವಾ ಅವನ ಚುನಾವಣಾ ಏಜೆಂಟನು ವಹಿಸಿದ ಅಥವಾ ಪ್ರಾಧೀಕರಿಸಿದ ಚುನಾವಣೆಯ ಸಂಬಂಧದ ವೆಚ್ಚವೆಂಬುದಾಗಿ ಭಾವಿಸತಕ್ಕದ್ದಲ್ಲವೆಂದು ಈ ಮೂಲಕ ಘೋಷಿಸಲಾಗಿದೆ.

(3) ಲೆಕ್ಕವು, ನಿಯಮಿಸಬಹುದಾದಂಥ ವಿವರಣೆಗಳನ್ನು ಒಳಗೊಂಡಿರತಕ್ಕದ್ದು.

(4) ಸದರಿ ವೆಚ್ಚದ ಒಟ್ಟು ಮೊತ್ತವು, ನಿಯಮಿಸಬಹುದಾದಂಥ ಮೊಬಲಗನ್ನು ಮೀರತಕ್ಕದ್ದಲ್ಲ.

16ಬಿ. ಲೆಕ್ಕವನ್ನು ಚುನಾವಣಾ ಅಧಿಕಾರಿಗೆ ಸಲ್ಲಿಸುವುದು.- ಈ ಅಧಿನಿಯಮದ ಮೇರೆಗೆ ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವ ಪ್ರತಿಯೊಬ್ಬ ಅಭ್ಯರ್ಥಿಯು, ಚುನಾಯಿತ ಅಭ್ಯರ್ಥಿಯ ಚುನಾವಣೆಯ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಅಥವಾ ಚುನಾವಣೆಯಲ್ಲಿ ಒಬ್ಬರಿಗಿಂತ ಹೆಚ್ಚಿನ ಸಂಖ್ಯೆಯ ಚುನಾಯಿತ ಅಭ್ಯರ್ಥಿಗಳಿದ್ದರೆ ಮತ್ತು ಚುನಾವಣೆಯ ದಿನಾಂಕಗಳು ಬೇರೆಬೇರೆಯಾಗಿದ್ದಲ್ಲಿ, ಆ ಎರಡು ದಿನಾಂಕಗಳಲ್ಲಿಯ ತರುವಾಯದ ದಿನಾಂಕದಂದು, 16ಎ ಪ್ರಕರಣದ ಅಡಿಯಲ್ಲಿ ತಾನು ಅಥವಾ ತನ್ನ ಚುನಾವಣಾ ಏಜೆಂಟನು ಇಟ್ಟಿದ್ದ ಲೆಕ್ಕಗಳ ಒಂದು ಯಥಾ ಪ್ರತಿಯಾಗಿರುವ ತನ್ನ ಚುನಾವಣೆಯ ಲೆಕ್ಕವನ್ನು ಈ ಅಧಿನಿಯಮದ ಅಡಿಯಲ್ಲಿ, ಚುನಾವಣೆಗಾಗಿ ನೇಮಕಗೊಂಡು ಚುನಾವಣಾ ಅಧಿಕಾರಿಗೆ ಸಲ್ಲಿಸತಕ್ಕದ್ದು.

16ಸಿ. ಚುನಾವಣಾ ವೆಚ್ಚಗಳ ಲೆಕ್ಕವನ್ನು ಸಲ್ಲಿಸಲು ವಿಫಲನಾಗುವುದು.- ಯಾವೊಬ್ಬ ವ್ಯಕ್ತಿಯು,

(ಎ) ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಅಗತ್ಯಪಡಿಸಲಾದ ಅವಧಿಯೊಳಗೆ ಮತ್ತು ರೀತಿಯಲ್ಲಿ, ಚುನಾವಣಾ ವೆಚ್ಚಗಳ ಲೆಕ್ಕವನ್ನು ಸಲ್ಲಿಸಲು ವಿಫಲನಾಗಿರುವನೆಂದು; ಮತ್ತು

(ಬಿ) ಹಾಗೆ ಸಲ್ಲಿಸಲು ವಿಫಲನಾದುದಕ್ಕೆ ಯುಕ್ತ ಕಾರಣ ಅಥವಾ ಸಮರ್ಥನೆ ಇಲ್ಲವೆಂದು,-

- ರಾಜ್ಯ ಚುನಾವಣಾ ಆಯೋಗಕ್ಕೆ ಮನವರಿಕೆಯಾದರೆ, ರಾಜ್ಯ ಚುನಾವಣಾ ಆಯೋಗವು ಸರ್ಕಾರಿ ರಾಜ್ಯಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ, ಅವನನ್ನು ಅನರ್ಹನೆಂದು ಘೋಷಿಸತಕ್ಕದ್ದು ಮತ್ತು ಅಂಥ ಯಾವೊಬ್ಬ ವ್ಯಕ್ತಿಯು, ಆದೇಶವನ್ನು ಹೊರಡಿಸಿದ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ಅನರ್ಹನಾಗಿರತಕ್ಕದ್ದು.]1

1.2003ರ ಅಧಿನಿಯಮ 46ರ ಮೂಲಕ 10-11-2003 ರಿಂದ ಜಾರಿಗೆ ಬರುವಂತೆ 16ಎ, 16ಬಿ ಮತ್ತು 16ಸಿ ಯನ್ನು ಸೇರಿಸಲಾಗಿದೆ.

17. ಕೌನ್ಸಿಲರ್ ಗಳ ಸಾರ್ವತ್ರಿಕ ಚುನಾವಣೆ.- (1) ಮುನ್ಸಿಪಲ್ ಕೌನ್ಸಿಲ್‌ನ್ನು ಮೊದಲ ಬಾರಿಗೆ ಅಥವಾ 315ನೇ ಪ್ರಕರಣದ ಮೇರೆಗೆ ಆಡಳಿತಗಾರನನ್ನು ನೇಮಕ ಮಾಡಿದಂಥ [1][ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ][1] 316ನೇ ಪ್ರಕರಣದ ಮೇರೆಗೆ [1][ನಿರ್ದಿಷ್ಟಪಡಿಸಲಾಗಿರುವ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ][1] ರಚಿಸುವ ಉದ್ದೇಶಕ್ಕಾಗಿ ಕೌನ್ಸಿಲರ್ ಗಳ ಸಾರ್ವತ್ರಿಕ ಚುನಾವಣೆಯನ್ನು ನಡೆಸತಕ್ಕದ್ದು.

1. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಕಾಲಕ್ರಮದಲ್ಲಿ, ಕೌನ್ಸಿಲರ್ ಗಳ ಪದದಲ್ಲಿ ಉದ್ಭವಿಸುವ ಖಾಲಿ ಸ್ಥಾನಗಳನ್ನು ಭರ್ತಿ ಮಾಡುವ ಉದ್ದೇಶಕ್ಕಾಗಿಯೂ ಸಹ ಸಾರ್ವತ್ರಿಕ ಚುನಾವಣೆಯನ್ನು ನಡೆಸತಕ್ಕದ್ದು.

18. ಕೌನ್ಸಿಲರ್ ಗಳ ಪದಾವಧಿ:- (1) [1][ಕೌನ್ಸಿಲರ್ ನ ಪದಾವಧಿಯು,-

1. 1979ರ ಅಧಿನಿಯಮ 13ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ (1)ನೇ ಉಪಪ್ರಕರಣವನ್ನು ಪ್ರತಿಯೋಜಿಸಲಾಗಿದೆ..

(ಎ) ಸಾರ್ವತ್ರಿಕ ಚುನಾವಣೆಯಲ್ಲಿ ಚುನಾಯಿತರಾದ ಕೌನ್ಸಿಲರ್ ಪದಾವಧಿಯು [1][ಐದು ವರ್ಷಗಳಾಗಿರ][1]ತಕ್ಕದ್ದು.

1. 1990ರ ಅಧಿನಿಯಮ 2ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][ಪರಂತುಕ XXX][1]

1. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][(ಬಿ) 11ನೇ ಪ್ರಕರಣದ (1)ನೇ ಉಪ-ಪ್ರಕರಣದ (ಬಿ) ಖಂಡದ ಮೇರೆಗೆ ನಾಮನಿರ್ದೇಶಿತನಾದ ಕೌನ್ಸಿಲರ್ ನ ಪದಾವಧಿಯು ಸರ್ಕಾರದ ಇಚ್ಛೆಗೆ ಒಳಪಟ್ಟು ಐದು ವರ್ಷಗಳಾಗಿರತಕ್ಕದ್ದು.][1]

1. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(1ಎ) ಸಾರ್ವತ್ರಿಕ ಚುನಾವಣೆಯಲ್ಲಿ ಚುನಾಯಿತರಾದ ಅಥವಾ 11ನೇ ಪ್ರಕರಣದ (1)ನೇ ಉಪ-ಪ್ರಕರಣದ (ಬಿ) ಖಂಡದ ಮೇರೆಗೆ ನಾಮನಿರ್ದೇಶಿತದ ಕೌನ್ಸಿಲರ್ ನ ಪದಾವಧಿಯು, ಮುನಿಸಿಪಲ್ ಕೌನ್ಸಿಲ್‌ನ ಮೊದಲ ಸಭೆಗೆ ನೇಮಕವಾದ ದಿನಾಂಕದಿಂದ ಪ್ರಾರಂಭಿಸತಕ್ಕದ್ದು.][1]][1]

1. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಆಕಸ್ಮಿಕ ಖಾಲಿ ಸ್ಥಾನವನ್ನು ಭರ್ತಿ ಮಾಡಲು [1][XXX][1] , [2][XXX][2] ಚುನಾಯಿತನಾದ ಕೌನ್ಸಿಲರ್ ನ ಪದಾವಧಿಯು, ಖಾಲಿಸ್ಥಾನವು ಉಂಟಾಗದಿದ್ದರೆ, ಯಾವ ಕೌನ್ಸಿಲರ್ ನ ಸ್ಥಾನದಲ್ಲಿ [3][XXX][3] ಅವನು ಚುನಾಯಿತನಾಗಿರುವನೋ ಆ ಕೌನ್ಸಿಲರ್ ನು ಪದಧಾರಣ ಮಾಡಲು ಹಕ್ಕುಳ್ಳವನಾಗಿರಬಹುದಾದಷ್ಟು ಅವಧಿಯವರೆಗೆ ಮಾತ್ರ ಮುಂದುವರಿಯತಕ್ಕದ್ದು.

1. 2000ದ ಅಧಿನಿಯಮ 22ರ ಮೂಲಕ 29.11.2000 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.
2. 1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.
3. 1979ರ ಅಧಿನಿಯಮ 13ರ ಮೂಲಕ 2.9.1978 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][(3) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಚುನಾಯಿತರಾಗಬೇಕಾದ ಕೌನ್ಸಿಲರ್ ಗಳ ಒಟ್ಟು ಸಂಖ್ಯೆಯಲ್ಲಿ ಮೂರನೆಯ ಎರಡರಷ್ಟು ಕೌನ್ಸಿಲರ್ ಗಳು ಚುನಾಯಿತರಾಗಿದ್ದಲ್ಲಿ, ಮುನಿಸಿಪಲ್ ಕೌನ್ಸಿಲ್ ಈ ಅಧಿನಿಯಮದ ಅಡಿಯಲ್ಲಿ ಯುಕ್ತವಾಗಿ ರಚಿತವಾಗಿದೆಯೆಂದು ಭಾವಿಸತಕ್ಕದ್ದು.][1]

1. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][18ಎ. ಕೌನ್ಸಿಲರ್ ಗಳಿಗೆ ಭತ್ಯೆಗಳು.- ಮುನ್ಸಿಪಲ್ ನಿಧಿಗಳಿಂದ, ಪ್ರತಿಯೊಬ್ಬ ಕೌನ್ಸಿಲರ್ ನು, ಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸಬಹುದಾದಂಥ ಒಂದು ನೂರು ರೂಪಾಯಿಗಳಿಗೆ ಮೀರದ ಮಾಹೆಯಾನ ಭತ್ಯೆಯನ್ನು ಸ್ವೀಕರಿಸಬಹುದು ಮತ್ತು ವಿವಿಧ ಮುನ್ಸಿಪಲ್ ಕೌನ್ಸಿಲ್‌ಗಳಿಗೆ ಬೇರೆ ಬೇರೆ ದರಗಳನ್ನು ನಿಗದಿಪಡಿಸಬಹುದು.][1]

1. 1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

19. ಆಕಸ್ಮಿಕ ಖಾಲಿಸ್ಥಾನಗಳನ್ನು ಹೇಗೆ ಭರ್ತಿ ಮಾಡಬೇಕು.- ಕೌನ್ಸಿಲರ್ ನಾಗಿ ಚುನಾಯಿತನಾದ [1][XXX][1] ವ್ಯಕ್ತಿಯ ರಾಜೀನಾಮೆ ಅಥವಾ ಪದವನ್ನು ಅಂಗೀಕರಿಸದೇ ಇರುವ ಮೂಲಕ ಅಥವಾ ಅಂಥ ವ್ಯಕ್ತಿಯು ಕೌನ್ಸಿಲರ್ ನಾಗಿರಲು ಅನರ್ಹನಾಗುವ ಮೂಲಕ ಅಥವಾ 23ನೇ ಪ್ರಕರಣದ ಉಪಬಂಧಗಳ ಮೇರೆಗೆ ಯಾವುದೇ ಚುನಾವಣೆಯನ್ನು ರದ್ದುಗೊಳಿಸುವುದರ ಮೂಲಕ ಅಥವಾ ಅವನ ಪದಾವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಉಂಟಾದ ಕೌನ್ಸಿಲರ್ ನ ಮರಣದ ಅಥವಾ ಅವನನ್ನು ತೆಗೆದುಹಾಕುವುದು ಅಥವಾ ಅವನ ಅಸಮರ್ಥತೆಯ ಮೂಲಕ ಸ್ಥಾನವು ಖಾಲಿ ಆದಲ್ಲಿ, ಆ ಖಾಲಿ ಸ್ಥಾನವನ್ನು, ಅಂಥ ಖಾಲಿ ಸ್ಥಾನ ಸಂಭವಿಸಿದ ತರುವಾಯ ಆದಷ್ಟು ಬೇಗನೆ ಅದಕ್ಕೆ ವ್ಯಕ್ತಿಯನ್ನು ಚುನಾಯಿಸುವ ಮೂಲಕ ಭರ್ತಿ ಮಾಡತಕ್ಕದ್ದು:

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

ಪರಂತು, 18ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಕೌನ್ಸಿಲರ್ ಗಳ ಪದಾವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ [1][ಆರು][1] ತಿಂಗಳುಗಳೊಳಗೆ ಸಂಭವಿಸುವ ಆಕಸ್ಮಿಕ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಯಾವುದೇ ಚುನಾವಣೆಯನ್ನು ನಡೆಸತಕ್ಕದ್ದಲ್ಲ.

1.1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

20. ಚುನಾವಣೆಗಳ ಫಲಿತಾಂಶಗಳ ಪ್ರಕಟಣೆ.- ಮುನ್ಸಿಪಲ್ ಕೌನ್ಸಿಲ್‌ಗೆ ಸಂದರ್ಭಾನುಸಾರ, ಕೌನ್ಸಿಲರ್ ಗಳು, ಅಧ್ಯಕ್ಷ ಅಥವಾ ಉಪಾಧ್ಯಕ್ಷನಾಗಿ ಚುನಾಯಿತರಾದ [1][xxx][1] ವ್ಯಕ್ತಿಗಳ ಹೆಸರುಗಳನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸತಕ್ಕದ್ದು:

1.1994ರ ಅಧಿನಿಯಮ 36ರ ಮೂಲಕ 1.4.1994 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

ಪರಂತು, ಸಾರ್ವತ್ರಿಕ ಚುನಾವಣೆಯಲ್ಲಿ ಚುನಾಯಿತರಾದ ಮತ್ತು [1][11ನೇ ಪ್ರಕರಣದ ಮೇರೆಗೆ ನೇಮಕಗೊಂಡ][1] ಎಲ್ಲಾ ಕೌನ್ಸಿಲರ್ ಗಳ ಹೆಸರುಗಳನ್ನು ಸಾಧ್ಯವಾದಷ್ಟುಮಟ್ಟಿಗೆ ಏಕಕಾಲದಲ್ಲಿ ಹಾಗೆಯೇ ಪ್ರಕಟಿಸತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

21. ಚುನಾವಣಾ ತಕರಾರು ಅರ್ಜಿಗಳು.- (1) ಚುನಾವಣೆ ಫಲಿತಾಂಶವನ್ನು, ಘೋಷಣೆಯ ದಿನಾಂಕದಿಂದ ಹದಿನೈದು ದಿವಸಗಳೊಳಗಾಗಿ ಚುನಾವಣಾ ನ್ಯಾಯಾಧಿಕರಣಕ್ಕೆ ಚುನಾವಣಾ ಅರ್ಜಿಯನ್ನು ಸಲ್ಲಿಸುವ ಮೂಲಕವಲ್ಲದೇ ಕೌನ್ಸಿಲರ್ ನ ಯಾವುದೇ ಚುನಾವಣೆಯನ್ನು ಪ್ರಶ್ನಿಸತಕ್ಕದಲ್ಲ.

(2) 23ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಒಂದು ಅಥವಾ ಹೆಚ್ಚಿನ ಕಾರಣಗಳ ಮೇಲೆ ಅಂಥ ಯಾವುದೇ ಚುನಾವಣೆಯನ್ನು ಪ್ರಶ್ನಿಸುವ ತಕರಾರು ಅಜಿಯನ್ನು,-

(ಎ) ಅಂಥ ಚುನಾವಣೆಯಲ್ಲಿನ ಯಾರೇ ಅಭ್ಯರ್ಥಿಯು, ಅಥವಾ

(ಬಿ) ಸಂಬಂಧಪಟ್ಟ ವಿಭಾಗದ ಯಾರೇ ಮತದಾರನು,

- ಸಲ್ಲಿಸಬಹುದು.

(3) ಅರ್ಜಿದಾರನು ಚುನಾವಣೆಯಲ್ಲಿನ ಎಲ್ಲಾ ಅಭ್ಯರ್ಥಿಗಳನ್ನು ತನ್ನ ಅರ್ಜಿಗೆ ಪ್ರತ್ಯರ್ಜಿದಾರರನ್ನಾಗಿ ಸೇರಿಸತಕ್ಕದ್ದು.

(4) ಚುನಾವಣಾ ಅರ್ಜಿಯು,-

(ಎ) ಯಾವ ಪ್ರಮುಖ ಸಂಗತಿಗಳ ಮೇಲೆ ಅರ್ಜಿದಾರನು ಆಧರಿಸಿರುತ್ತಾನೋ ಆ ಪ್ರಮುಖ ಸಂಗತಿಗಳ ಸಂಕ್ಷಿಪ್ತ ನಿರೂಪಣೆಯನ್ನು ಒಳಗೊಂಡಿರತಕ್ಕದ್ದು;

(ಬಿ) ಯಾವ ಕಾರಣ ಅಥವಾ ಕಾರಣಗಳ ಮೇಲೆ ಚುನಾವಣೆಯನ್ನು ಪ್ರಶ್ನಿಸಲಾಗಿದೆಯೋ ಆ ಕಾರಣ ಅಥವಾ ಕಾರಣಗಳನ್ನು ಸಾಕಷ್ಟು ವಿವರಣೆಗಳೊಂದಿಗೆ ನಿರೂಪಿಸತಕ್ಕದ್ದು;

(ಸಿ) ಅದಕ್ಕೆ ಅರ್ಜಿದಾರನು ರುಜು ಮಾಡತಕ್ಕದ್ದು ಮತ್ತು ವಾದ ಮತ್ತು ಪ್ರತಿವಾದ ಪತ್ರಗಳ ಸತ್ಯಾಪನೆಗಾಗಿ 1908ರ ಸಿವಿಲ್ ಪ್ರಕ್ರಿಯಾ ಸಂಹಿತೆಯಲ್ಲಿ ಹೇಳಲಾದ ರೀತಿಯಲ್ಲಿ ಸತ್ಯಾಪಿಸತಕ್ಕದ್ದು.

22. ಅರ್ಜಿದಾರನು ಕ್ಲೇಮು ಮಾಡಬಹುದಾದ ಪರಿಹಾರ.- (1) ಅರ್ಜಿದಾರನು,-

(ಎ) ಚುನಾಯಿತರಾದ ಎಲ್ಲಾ ಅಥವಾ ಯಾರೇ ಅಭ್ಯರ್ಥಿಯ ಚುನಾವಣೆಯು ಶೂನ್ಯವಾಗಿದೆ ಎಂಬ ಘೋಷಣೆಯನ್ನು; ಮತ್ತು

(ಬಿ) ತಾನೇ ಅಥವಾ ಯಾರೇ ಇತರ ಅಭ್ಯರ್ಥಿಯು ಕ್ರಮಬದ್ಧವಾಗಿ ಚುನಾಯಿತನಾಗಿರುವುದಾಗಿ ಇನ್ನೂ ಹೆಚ್ಚಿನ ಘೋಷಣೆಯನ್ನು,

- ಕ್ಲೇಮು ಮಾಡಬಹುದು.

(2) `ಚುನಾಯಿತನಾದ ಅಭ್ಯರ್ಥಿ' ಎಂಬ ಪದಾವಳಿಗೆ, ಕ್ರಮಬದ್ಧವಾಗಿ ಚುನಾಯಿತನಾಗಿದ್ದಾನೆಂದು ಘೋಷಿಸಲಾದ ಅಭ್ಯರ್ಥಿ ಎಂದು ಅರ್ಥ.

23. ಚುನಾವಣೆಗಳು ಶೂನ್ಯವೆಂದು ಘೋಷಿಸುವುದಕ್ಕಾಗಿ ಆಧಾರಗಳು.- (1) ಉಪ-ಪ್ರಕರಣದ (2) ರ ಉಪಬಂಧಗಳಿಗೊಳಪಟ್ಟು,-

(ಎ) ಅವನ ಚುನಾವಣೆಯ ದಿನಾಂಕದಂದು ಚುನಾಯಿತನಾದ ಅಭ್ಯರ್ಥಿಯು ಈ ಅಧಿನಿಯಮದ ಮೇರೆಗೆ ಕೌನ್ಸಿಲರ್ ನಾಗಿ ಆಯ್ಕೆ ಆಗುವುದಕ್ಕೆ ಅರ್ಹನಾಗಿರಲಿಲ್ಲವೆಂದು ಅಥವಾ ಅನರ್ಹಗೊಂಡಿದ್ದನೆಂದು; ಅಥವಾ

(ಬಿ) ಚುನಾಯಿತನಾದ ಅಭ್ಯರ್ಥಿ ಅಥವಾ ಅವನ ಏಜೆಂಟನು ಅಥವಾ ಚುನಾಯಿತ ಅಭ್ಯರ್ಥಿಯ ಅಥವಾ ಅವನ ಏಜೆಂಟನ ಸಮ್ಮತಿಯಿಂದ ಇತರ ಯಾರೇ ವ್ಯಕ್ತಿಯು ಯಾವುದೇ ಭ್ರಷ್ಟಾಚಾರವನ್ನು ಮಾಡಿದ್ದಾನೆಂದು; ಅಥವಾ

(ಸಿ) ಯಾವುದೇ ನಾಮನಿರ್ದೇಶನ ಪತ್ರವನ್ನು ಅನುಚಿತವಾಗಿ ತಿರಸ್ಕರಿಸಲಾಗಿದೆ ಎಂದು; ಅಥವಾ

(ಡಿ) ಆ ಚುನಾವಣೆಯ ಫಲಿತಾಂಶವು ಚುನಾಯಿತನಾದ ಅಭ್ಯರ್ಥಿಗೆ ಸಂಬಂಧಪಟ್ಟಂತೆ,-

(i) ಯಾವುದೇ ನಾಮನಿರ್ದೇಶನವನ್ನು ಅನುಚಿತವಾಗಿ ಅಂಗೀಕರಿಸುವ ಮೂಲಕ;

(ii) ಚುನಾಯಿತನಾದ ಅಭ್ಯರ್ಥಿಯ ಹಿತಾಸಕ್ತಿಯಲ್ಲಿ ಏಜೆಂಟ್ ಅಥವಾ ಅಭ್ಯರ್ಥಿಯ ಸಮ್ಮತಿಯಿಂದ ಕಾರ್ಯನಿರ್ವಹಿಸುವ ಯಾರೇ ಇತರ ವ್ಯಕ್ತಿಯು ಮಾಡಿದ ಯಾವುದೇ ಭ್ರಷ್ಟಾಚಾರದಿಂದ;

(iii) ಯಾವುದೇ ಮತವನ್ನು ಅನುಚಿತವಾಗಿ ಅಂಗೀಕರಿಸುವುದು ಅಥವಾ ತಿರಸ್ಕರಿಸುವುದರಿಂದ ಅಥವಾ ಶೂನ್ಯವಾದ ಯಾವುದೇ ಮತವನ್ನು ಸ್ವೀಕರಿಸುವುದರಿಂದ; ಅಥವಾ

(iv) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮಗಳ ಅಥವಾ ಮಾಡಿದ ಆದೇಶಗಳ ಉಪಬಂಧಗಳ ಅನುಪಾಲನೆಯಿಂದ ಮುಖ್ಯವಾಗಿ ಬಾಧಿತವಾಗಿದೆ ಎಂದು ಚುನಾವಣಾ ನ್ಯಾಯಾಧಿಕರಣವು ಅಭಿಪ್ರಾಯಪಟ್ಟರೆ,

- ಚುನಾವಣಾ ನ್ಯಾಯಾಧಿಕರಣವು, ಚುನಾಯಿತನಾದ ಅಭ್ಯರ್ಥಿಯ ಚುನಾವಣೆಯನ್ನು ಶೂನ್ಯವೆಂದು ಘೋಷಿಸತಕ್ಕದ್ದು.

(2) ಚುನಾವಣಾ ನ್ಯಾಯಾಧಿಕರಣದ ಅಭಿಪ್ರಾಯದಲ್ಲಿ ಚುನಾಯಿತನಾದ ಅಭ್ಯರ್ಥಿಯ ಯಾರೇ ಏಜೆಂಟನು ಯಾವುದೇ ಭ್ರಷ್ಟಾಚಾರದ ತಪ್ಪಿತಸ್ಥನಾಗಿದ್ದರೆ, ಆದರೆ,-

(ಎ) ಅಭ್ಯರ್ಥಿಯು ಚುನಾವಣೆಯಲ್ಲಿ ಅಂಥ ಯಾವುದೇ ಭ್ರಷ್ಟಾಚಾರವನ್ನು ಮಾಡಿಲ್ಲವೆಂದು ಮತ್ತು ಅಂಥ ಪ್ರತಿಯೊಂದು ಭ್ರಷ್ಟಾಚಾರವು ಆ ಅಭ್ಯರ್ಥಿಯ ಆದೇಶಗಳಿಗೆ ತದ್ವಿರುದ್ಧವಾಗಿ ಮತ್ತು ಆತನ ಸಮ್ಮತಿಯಿಲ್ಲದೆ ಮಾಡಲಾಯಿತೆಂದು;

(ಬಿ) ಆ ಅಭ್ಯರ್ಥಿಯು ಚುನಾವಣೆಯಲ್ಲಿ ಭ್ರಷ್ಟಾಚಾರಗಳನ್ನು ಮಾಡುವುದನ್ನು ತಡೆಗಟ್ಟಲು ಎಲ್ಲ ಯುಕ್ತ ಕ್ರಮಗಳನ್ನು ತೆಗೆದುಕೊಂಡಿದ್ದಾನೆಂದು; ಮತ್ತು

(ಸಿ) ಇತರ ಎಲ್ಲ ವಿಷಯಗಳಲ್ಲಿ ಚುನಾವಣೆಯ ಆ ಅಭ್ಯರ್ಥಿ ಅಥವಾ ಅವನ ಯಾರೇ ಏಜೆಂಟನ ಯಾವುದೇ ಭ್ರಷ್ಟಾಚಾರದಿಂದ ಮುಕ್ತವಾಗಿದ್ದಿತು ಎಂದು,

- ನ್ಯಾಯಾಧಿಕರಣಕ್ಕೆ ಮನದಟ್ಟಾದರೆ ಆಗ ನ್ಯಾಯಾಧಿಕರಣವು ಚುನಾಯಿತನಾದ ಅಭ್ಯರ್ಥಿಯ ಚುನಾವಣೆಯು ಶೂನ್ಯವಲ್ಲವೆಂದು ತೀರ್ಮಾನಿಸಬಹುದು.

24. ಚುನಾವಣಾ ನ್ಯಾಯಾಧಿಕರಣವು ಅನುಸರಿಸಬೇಕಾದ ಪ್ರಕ್ರಿಯೆ.- ಈ ಅಧಿನಿಯಮದ ಮೇರೆಗಿನ ಚುನಾವಣಾ ಅರ್ಜಿಯ ಅಧಿವಿಚಾರಣೆ ಮತ್ತು ಅದರ ವಿಲೆಯಲ್ಲಿ ದಾವೆಗಳಿಗೆ ಸಂಬಂಧಿಸಿದಂತೆ 1908ರ ಸಿವಿಲ್ ಪ್ರಕ್ರಿಯಾ ಸಂಹಿತೆಯಲ್ಲಿ ಉಪಬಂಧಿಸಿರುವ ಪ್ರಕ್ರಿಯೆಯನ್ನು, ಅದನ್ನು ಅನ್ವಯ ಮಾಡಬಹುದಾದಷ್ಟರಮಟ್ಟಿಗೆ ಚುನಾವಣಾ ನ್ಯಾಯಾಧಿಕರಣವು ಅನುಸರಿಸತಕ್ಕದ್ದು.

25. ಚುನಾವಣಾ ನ್ಯಾಯಾಧಿಕರಣದ ತೀರ್ಮಾನ.- (1) ಚುನಾವಣಾ ಅರ್ಜಿಯ ಅಧಿವಿಚಾರಣೆಯ ಕೊನೆಯಲ್ಲಿ ಚುನಾವಣಾ ನ್ಯಾಯಾಧಿಕರಣವು,-

(ಎ) ಚುನಾವಣೆಯಲ್ಲಿ ಯಾರೇ ವ್ಯಕ್ತಿಯು, ಅವನ ಮತವನ್ನು ಕೊಡಲು ಮನವೊಲಿಸುವ; ಅಥವಾ

(ಬಿ) ಚುನಾಯಿತರಾದ ಎಲ್ಲ ಅಭ್ಯರ್ಥಿಗಳ ಅಥವಾ ಯಾರೇ ಅಭ್ಯರ್ಥಿಯ ಚುನಾವಣೆಯು ಶೂನ್ಯವೆಂದು ಘೋಷಿಸುವ; ಅಥವಾ

(ಸಿ) ಚುನಾಯಿತರಾದ ಎಲ್ಲ ಅಥವಾ ಯಾರೇ ಅಭ್ಯರ್ಥಿಯ ಚುನಾವಣೆಯು ಶೂನ್ಯವಾದುದೆಂದು ಮತ್ತು ಅರ್ಜಿದಾರ ಅಥವಾ ಇತರ ಯಾರೇ ಅಭ್ಯರ್ಥಿಯು ಕ್ರಮಬದ್ಧವಾಗಿ ಚುನಾಯಿತನಾಗಿದ್ದಾನೆಂದು ಘೋಷಿಸುವ

- ಆದೇಶವನ್ನು ಮಾಡತಕ್ಕದ್ದು.

(2) ಚುನಾವಣಾ ಅರ್ಜಿಯನ್ನು ಸಲ್ಲಿಸಿರುವ ಯಾರೇ ವ್ಯಕ್ತಿಯು ಚುನಾಯಿತನಾದ ಅಭ್ಯರ್ಥಿಯ ಚುನಾವಣೆಯನ್ನು ಪ್ರಶ್ನಿಸುವುದರ ಜೊತೆಗೆ ತಾನೇ ಅಥವಾ ಇತರ ಯಾರೇ ಅಭ್ಯರ್ಥಿಯು ಕ್ರಮಬದ್ಧವಾಗಿ ಚುನಾಯಿತನಾಗಿದ್ದಾನೆಂಬ ಘೋಷಣೆಯನ್ನು ಕ್ಲೇಮು ಮಾಡಿದ್ದರೆ ಮತ್ತು ಚುನಾವಣೆ ನ್ಯಾಯಾಧಿಕರಣವು,-

(ಎ) ವಾಸ್ತವವಾಗಿ ಅರ್ಜಿದಾರ ಅಥವಾ ಅಂಥ ಇತರ ಅಭ್ಯರ್ಥಿಯು ಸಿಂಧುವಾದ ಮತಗಳಲ್ಲಿ ಬಹುಮತವನ್ನು ಪಡೆದಿದ್ದಾನೆಂದು; ಅಥವಾ

(ಬಿ) ಚುನಾಯಿತ ಅಭ್ಯರ್ಥಿಯು ಭ್ರಷ್ಟಾಚಾರ ಅಥವಾ ಕಾನೂನುಬಾಹಿರ ಆಚರಣೆಗಳ ಮೂಲಕ ಮತಗಳನ್ನು ಪಡೆದುಕೊಳ್ಳದೆ ಇದ್ದಲ್ಲಿ ಅರ್ಜಿದಾರ ಅಥವಾ ಇತರ ಅಭ್ಯರ್ಥಿಯು ಸಿಂಧುವಾದ ಮತಗಳ ಬಹುಮತವನ್ನು ಪಡೆಯುತ್ತಿದ್ದಾನೆಂದು ಅಭಿಪ್ರಾಯಪಟ್ಟರೆ,

- ಆ ನ್ಯಾಯಧಿಕರಣ ಚುನಾಯಿತ ಅಭ್ಯರ್ಥಿಯ ಚುನಾವಣೆಯು ಶೂನ್ಯವೆಂದು ಘೋಷಿಸಿದ ತರುವಾಯ ಸಂದರ್ಭಾನುಸಾರ ಅರ್ಜಿದಾರ ಅಥವಾ ಅಂಥ ಇತರ ಅಭ್ಯರ್ಥಿಯು ಕ್ರಮಬದ್ಧವಾಗಿ ಚುನಾಯಿತನಾಗಿದ್ದಾನೆಂದು ಘೋಷಿಸತಕ್ಕದ್ದು.

26. ಮತಗಳ ಸಮಾನತೆಯ ಸಂದರ್ಭದಲ್ಲಿ ಪ್ರಕ್ರಿಯೆ.- ಚುನಾವಣಾ ಅರ್ಜಿಯ ಅಧಿವಿಚಾರಣೆಯಲ್ಲಿ ಚುನಾವಣೆಯಲ್ಲಿನ ಯಾರೇ ಅಭ್ಯರ್ಥಿಗಳ ನಡುವೆ ಮತಗಳ ಸಮಾನತೆ ಇರುವುದಾಗಿ ಕಂಡುಬಂದರೆ ಮತ್ತು ಒಂದು ಮತವನ್ನು ಸೇರಿಸುವುದರಿಂದ ಆ ಅಭ್ಯರ್ಥಿಗಳ ಪೈಕಿ ಯಾರೇ ಅಭ್ಯರ್ಥಿಯು ಚುನಾಯಿತನಾಗಿದ್ದಾನೆಂದು ಘೋಷಿಸಿಕೊಳ್ಳಲು ಹಕ್ಕನ್ನು ಉಂಟು ಮಾಡುವುದಾದರೆ ಆಗ ಚುನಾವಣಾ ನ್ಯಾಯಾಧಿಕರಣವು, ಆ ಇಬ್ಬರ ನಡುವೆ ಚೀಟಿ ಎತ್ತುವ ಮೂಲಕ ತೀರ್ಮಾನಿಸತಕ್ಕದ್ದು ಮತ್ತು ಚೀಟಿ ಎತ್ತಿದಾಗ ಯಾರ ಹೆಸರು ಬರುತ್ತದೋ ಅವನು ಹೆಚ್ಚಿನ ಮತವನ್ನು ಪಡೆದಿದ್ದ ಹಾಗೆ ಭಾವಿಸಿ ಮುಂದುವರೆಯತಕ್ಕದ್ದು.

27. ಅಪೀಲು.- 25ನೇ ಪ್ರಕರಣದ ಮೇರೆಗೆ ಚುನಾವಣಾ ನ್ಯಾಯಾಧಿಕರಣವು ಮಾಡಿದ ಆದೇಶದಿಂದ ಉಚ್ಚ ನ್ಯಾಯಾಲಯಕ್ಕೆ, ಆ ಆದೇಶದ ಪ್ರತಿಯನ್ನು ಪಡೆದುಕೊಳ್ಳಲು ಅಗತ್ಯವಾದ ಕಾಲವನ್ನು ಹೊರತುಪಡಿಸಿ ಆದೇಶದ ದಿನಾಂಕದಿಂದ ಮೂವತ್ತು ದಿವಸಗಳ ಒಳಗಾಗಿ ಅಪೀಲನ್ನು ಹೂಡಲು ಅವಕಾಶವಿರತಕ್ಕದ್ದು ಮತ್ತು ಅಂಥ ಅಪೀಲಿನ ಮೇಲೆ ಉಚ್ಚ ನ್ಯಾಯಾಲಯದ ತೀರ್ಮಾನವು ಅಂತಿಮ ಮತ್ತು ನಿರ್ಣಾಯಕವಾಗಿರತಕ್ಕದ್ದು.

28. ಪ್ರಶ್ನಿಸಿದ ಹೊರತು ಚುನಾವಣೆಯು ಸಿಂಧುವಾಗಿರತಕ್ಕದ್ದು.- ಹಿಂದೆ ಹೇಳಿದ ಉಪಬಂಧಗಳಿಗೆ ಅನುಸಾರವಾಗಿ ಪ್ರಶ್ನಿತವಾಗದ ಕೌನ್ಸಿಲರ್ ನ ಚುನಾವಣೆಯು ಸರಿಯಾದ ಮತ್ತು ಸಿಂಧುವಾದ ಚುನಾವಣೆಯೆಂದು ಭಾವಿಸತಕ್ಕದ್ದು.

29. ಭ್ರಷ್ಟಾಚಾರಗಳು.- ಈ ಅಧಿನಿಯಮದ ಉದ್ದೇಶಗಳಿಗಾಗಿ ಈ ಕೆಳಕಂಡವುಗಳನ್ನು ಭ್ರಷ್ಟಾಚಾರಗಳೆಂದು ಭಾವಿಸತಕ್ಕದ್ದು:-

(1) ``ಲಂಚಗುಳಿತನ'' ತತ್ಕಾಲದಲ್ಲಿ ಜಾರಿಯಲ್ಲಿರುವ 1951ರ ಜನತಾ ಪ್ರಾತಿನಿಧ್ಯ ಅಧಿನಿಯಮ, (1951ರ ಕೇಂದ್ರ ಅಧಿನಿಯಮXLIII)ದ 123ನೇ ಪ್ರಕರಣದ (1)ನೇ ಖಂಡದಲ್ಲಿ ಪರಿಭಾಷಿಸಿರುವಂತೆ ಲಂಚಗುಳಿತನ;

(2) ತತ್ಕಾಲದಲ್ಲಿ ಜಾರಿಯಲ್ಲಿರುವ ಸದರಿ ಪ್ರಕರಣದ (2)ನೇ ಖಂಡದಲ್ಲಿ ಪರಿಭಾಷಿಸಿರುವಂತೆ ``ಅನುಚಿತ ಪ್ರಭಾವ'';

(3) ಅಭ್ಯರ್ಥಿ ಅಥವಾ ಅವನ ಏಜೆಂಟನು ಅಥವಾ ಇತರ ಯಾರೇ ವ್ಯಕ್ತಿಯು ಜಾತಿ, ಮೂಲವಂಶ, ಕೋಮು ಅಥವಾ ಧರ್ಮದ ಆಧಾರದ ಮೇಲೆ ಮತ ನೀಡುವಂತೆ ಅಥವಾ ಮತ ನೀಡದಿರುವಂತೆ ವ್ಯವಸ್ಥಿತವಾಗಿ ವಿನಂತಿಸಿಕೊಳ್ಳುವುದು ಅಥವಾ ಆ ಅಭ್ಯರ್ಥಿಯ ಚುನಾವಣಾ ಭವಿಷ್ಯದ ಮುಂದುವರಿಕೆಗಾಗಿ ಧಾರ್ಮಿಕ ಚಿಹ್ನೆಗಳನ್ನು ಉಪಯೋಗಿಸಿಕೊಳ್ಳುವುದು ಅಥವಾ ವಿನಂತಿಸಿಕೊಳ್ಳುವುದು ರಾಷ್ಟ್ರಧ್ವಜ ಅಥವಾ ರಾಷ್ಟ್ರ

ಲಾಂಛನದ ರಾಷ್ಟ್ರೀಯ ಚಿಹ್ನೆಗಳನ್ನು ಉಪಯೋಗಿಸಿಕೊಳ್ಳುವುದು ಅಥವಾ ಅವುಗಳಿಗಾಗಿ ವಿನಂತಿಸಿಕೊಳ್ಳುವುದು;

(4) ಯಾರೇ ಅಭ್ಯರ್ಥಿ ಅಥವಾ ಅವನ ಏಜೆಂಟನು ಅಥವಾ ಇತರ ಯಾರೇ ವ್ಯಕ್ತಿಯು ಅಭ್ಯರ್ಥಿಯ ವೈಯಕ್ತಿಕ ಚಾರಿತ್ರ್ಯ ಅಥವಾ ವರ್ತನೆಗೆ ಸಂಬಂಧಪಟ್ಟಂತೆ ಅಥವಾ ಉಮೇದುವಾರಿಕೆಗೆ ಯಾರೇ ಅಭ್ಯರ್ಥಿಯ ಉಮೇದುವಾರಿಕೆ ಅಥವಾ ಸ್ಪರ್ಧೆಯಿಂದ ಹಿಂತೆಗೆದುಕೊಳ್ಳುವಿಕೆಗೆ ಸಂಬಂಧಪಟ್ಟಂತೆ ಅಭ್ಯರ್ಥಿಯ ಭವಿಷ್ಯಕ್ಕೆ ಪ್ರತಿಕೂಲವನ್ನುಂಟು ಮಾಡಲು ಯುಕ್ತವಾಗಿ ಉದ್ದೇಶಿಸಿದ ಹೇಳಿಕೆಯಾಗಿರುವ ಸುಳ್ಳಾದಂಥ ಮತ್ತು ಸುಳ್ಳೆಂದು ಅವನು ನಂಬುವ ಅಥವಾ ಸತ್ಯವೆಂದು ನಂಬದಂಥ ಸಂಗತಿಯ ಯಾವುದೇ ಹೇಳಿಕೆಯನ್ನು ಪ್ರಕಟಿಸುವುದು;

(5) ಅಭ್ಯರ್ಥಿ ಅಥವಾ ಅವನ ಏಜೆಂಟನು ಅಥವಾ ಇತರ ಯಾರೇ ವ್ಯಕ್ತಿಯು ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳಿಗನುಸಾರವಾಗಿ (ಸ್ವತಃ ಅಭ್ಯರ್ಥಿ ಮತ್ತು ಅವನ ಕುಟುಂಬದ ಸದಸ್ಯರು ಅಥವಾ ಅವನ ಏಜೆಂಟನು-ಇವರನ್ನು ಹೊರತುಪಡಿಸಿ) ಯಾವುದೇ ಮತದಾನ ಕೇಂದ್ರಕ್ಕೆ ಅಥವಾ ಮತದಾನ ಕೇಂದ್ರದಿಂದ ಯಾರೇ ಮತದಾರನ ವಾಹನಕ್ಕಾಗಿ ಸಂದಾಯದ ಮೇಲೆ ಅಥವಾ ಅನ್ಯಥಾ ಯಾವುದೇ ವಾಹನ ಅಥವಾ ನೌಕೆಯನ್ನು ಬಾಡಿಗೆಗೆ ಪಡೆಯುವುದು ಅಥವಾ ಒದಗಿಸುವುದು:

ಪರಂತು, ಮತದಾರ ಅವನ ಖರ್ಚಿನಲ್ಲಿ ಅಥವಾ ಅನೇಕ ಮತದಾರರು ಅವರ ಜಂಟಿ ಖರ್ಚಿನಲ್ಲಿ ಯಾವುದೇ ಅಂಥ ಮತದಾನ ಕೇಂದ್ರಕ್ಕೆ ಅಥವಾ ಅಲ್ಲಿಂದ ಅವನು ಅಥವಾ ಅವರ ವಾಹನೋದ್ದೇಶಕ್ಕಾಗಿ ವಾಹನವನ್ನು ಅಥವಾ ನೌಕೆಯನ್ನು ಬಾಡಿಗೆಗೆ ಪಡೆಯುವುದು, ಹಾಗೆ ಬಾಡಿಗೆಗೆ ಪಡೆದುಕೊಂಡ ವಾಹನ ಅಥವಾ ನೌಕೆಯು ಯಂತ್ರಶಕ್ತಿಯಿಂದ ಚಾಲಿತ ವಾಹನ ಅಥವಾ ನೌಕೆಯಾಗಿದ್ದರೆ ಈ ಖಂಡದ ಮೇರೆಗೆ ಭ್ರಷ್ಟಾಚಾರವೆಂದು ಭಾವಿಸತಕ್ಕದ್ದಲ್ಲ;

ಮತ್ತು ಪರಂತು, ಅಂಥ ಯಾವುದೇ ಮತದಾನ ಕೇಂದ್ರಕ್ಕೆ ಹೋಗುವ ಅಥವಾ ಅಲ್ಲಿಂದ ಬರುವ ಉದ್ದೇಶಕ್ಕಾಗಿ ಮತದಾರನು ತನ್ನ ಸ್ವಂತ ಖರ್ಚಿನಲ್ಲಿ ಯಾವುದೇ ಸಾರ್ವಜನಿಕ ಸಾರಿಗೆ ವಾಹನ ಅಥವಾ ನೌಕೆ ಅಥವಾ ಯಾವುದೇ ರೈಲ್ವೆ ಭೋಗಿಯನ್ನು ಉಪಯೋಗಿಸುವುದನ್ನು ಈ ಖಂಡದ ಮೇರೆಗೆ ಭ್ರಷ್ಟಚಾರವೆಂದು ಭಾವಿಸತಕ್ಕದ್ದಲ್ಲ:

ವಿವರಣೆ:- ಈ ಖಂಡದಲ್ಲಿ ``ವಾಹನ'' ಎಂಬ ಪದಕ್ಕೆ ಯಂತ್ರಶಕ್ತಿಯಿಂದ ಅಥವಾ ಅನ್ಯಥಾ ಚಲಿಸುವ ಮತ್ತು ಬೇರೆ ವಾಹನಗಳನ್ನು ಎಳೆಯಲು ಅಥವಾ ಅನ್ಯಥಾ ಉಪಯೋಗಿಸುವ, ರಸ್ತೆ ಸಾಗಣೆ ಉದ್ದೇಶಕ್ಕಾಗಿ ಉಪಯೋಗಿಸುವ ಅಥವಾ ಉಪಯೋಗಿಸಲು ಸಮರ್ಥವಾಗಿರುವ ಯಾವುದೇ ವಾಹನ ಎಂದು ಅರ್ಥ.

(6) ಮಾದಕ ಪೇಯಗಳನ್ನು ಒದಗಿಸುವ ಯಾವುದೇ ಸಭೆಯನ್ನು ನಡೆಸುವುದು;

(7) ಅದರ ಮುದ್ರಕನ ಮತ್ತು ಪ್ರಕಾಶಕನ ಹೆಸರು ಮತ್ತು ವಿಳಾಸವನ್ನು ಹೊಂದಿರದಂಥ ಚುನಾವಣೆಗೆ ಉಲ್ಲೇಖವನ್ನು ಹೊಂದಿರುವ ಯಾವುದೇ ಸುತ್ತೋಲೆ, ಪ್ರಕಟಣಾ ಪತ್ರ ಅಥವಾ ಭಿತ್ತಿ ಪತ್ರವನ್ನು ಹೊರಡಿಸುವುದು;

(8) ಸರ್ಕಾರವು ನಿಯಮಗಳ ಮೂಲಕ ಭ್ರಷ್ಟಾಚಾರ ಎಂದು ನಿರ್ದಿಷ್ಟಪಡಿಸಬಹುದಾದಂಥ ಯಾವುದೇ ಇತರ ಆಚರಣೆ.

30. ಮತದಾನದ ರಹಸ್ಯ ಪಾಲನೆ.- (1) ಚುನಾವಣೆಯಲ್ಲಿ ಮತಗಳ ದಾಖಲಾತಿ ಅಥವಾ ಎಣಿಕೆಗೆ ಸಂಬಂಧಪಟ್ಟಂತೆ ಯಾವುದೇ ಕರ್ತವ್ಯವನ್ನು ನೆರವೇರಿಸುವ ಪ್ರತಿಯೊಬ್ಬ ಅಧಿಕಾರಿ, ಗುಮಾಸ್ತ, ಏಜೆಂಟ್ ಅಥವಾ ಇತರ ವ್ಯಕ್ತಿಯು ಮತದಾನದ ರಹಸ್ಯವನ್ನು ಕಾಪಾಡತಕ್ಕದ್ದು ಮತ್ತು ಕಾಪಾಡುವಲ್ಲಿ ನೆರವಾಗತಕ್ಕದ್ದು ಮತ್ತು (ಯಾವುದೇ ಕಾನೂನಿನ ಮೂಲಕ ಅಥವಾ ಮೇರೆಗೆ ಅಧಿಕೃತವಾದ ಯಾವುದೇ ಉದ್ದೇಶಕ್ಕಾಗಿ ಹೊರತು) ಅಂಥ ರಹಸ್ಯವನ್ನು ಉಲ್ಲಂಘಿಸುವ ಉದ್ದೇಶದಿಂದ ಯಾರೇ ವ್ಯಕ್ತಿಗೆ ಯಾವುದೇ ಮಾಹಿತಿಯನ್ನು ತಿಳಿಸತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಮೂರು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವರೆಡರಿಂದಲೂ ದಂಡಿತನಾಗತಕ್ಕದ್ದು.

31. ಚುನಾವಣೆಗಳಲ್ಲಿ ಅಧಿಕಾರಿಗಳು ಮೊದಲಾದವರು ಅಭ್ಯರ್ಥಿಗಳಿಗಾಗಿ ಕೆಲಸ ಮಾಡತಕ್ಕದಲ್ಲ ಅಥವಾ ಮತದಾನ ಮಾಡಲು ಪ್ರಭಾವ ಬೀರತಕ್ಕದ್ದಲ್ಲ.- (1) ಚುನಾವಣೆಯಲ್ಲಿ ಚುನಾವಣಾಧಿಕಾರಿ, ಅಥವಾ ಸಹಾಯಕ ಚುನಾವಣಾಧಿಕಾರಿ ಅಥವಾ ಅಧ್ಯಕ್ಷಾಧಿಕಾರಿ ಅಥವಾ ಮತದಾನ ಅಧಿಕಾರಿಯಾಗಿರುವ ಯಾರೇ ವ್ಯಕ್ತಿಯು ಅಥವಾ ಚುನಾವಣೆಗೆ ಸಂಬಂಧಪಟ್ಟಂತೆ ಯಾವುದೇ ಕರ್ತವ್ಯವನ್ನು ನೆರವೇರಿಸಲು ಚುನಾವಣಾಧಿಕಾರಿ ಅಥವಾ ಅಧ್ಯಕ್ಷಾಧಿಕಾರಿಯಿಂದ ನೇಮಕಗೊಂಡ ಅಧಿಕಾರಿ ಅಥವಾ ಗುಮಾಸ್ತನು ಆ ಚುನಾವಣೆಯನ್ನು ನಡೆಸುವಲ್ಲಿ ಅಥವಾ ಅದರ ವ್ಯವಸ್ಥಾಪನೆಯಲ್ಲಿ ಅಭ್ಯರ್ಥಿಯ ಚುನಾವಣೆಯ ಭವಿಷ್ಯದ ವರ್ಧನೆಗಾಗಿ ಯಾವುದೇ ಕಾರ್ಯವನ್ನು (ಮತಕೊಡುವುದನ್ನು ಹೊರತುಪಡಿಸಿ) ಮಾಡತಕ್ಕದ್ದಲ್ಲ.

(2) ಹಿಂದೆ ಹೇಳಿದಂಥ ಯಾರೇ ವ್ಯಕ್ತಿ ಮತ್ತು ಪೊಲೀಸ್ ದಳದ ಯಾರೇ ಸದಸ್ಯನು,-

(ಎ) ಚುನಾವಣೆಯಲ್ಲಿ ತನ್ನ ಮತವನ್ನು ಕೊಡಲು ಯಾರೇ ವ್ಯಕ್ತಿಯ ಮನವೊಲಿಸಲು; ಅಥವಾ

(ಬಿ) ಚುನಾವಣೆಯಲ್ಲಿ ತನ್ನ ಮತವನ್ನು ಕೊಡುವುದರಿಂದ ಯಾರೇ ವ್ಯಕ್ತಿಯನ್ನು ವಿಮುಖಗೊಳಿಸಲು; ಅಥವಾ

(ಸಿ) ಚುನಾವಣೆಯಲ್ಲಿ ಯಾರೇ ವ್ಯಕ್ತಿಯ ಮತ ನೀಡಿಕೆಯಲ್ಲಿ ಯಾವುದೇ ರೀತಿಯಲ್ಲಿ ಪ್ರಭಾವ ಬೀರಲು,

- ಪ್ರಯತ್ನಿಸತಕ್ಕದ್ದಲ್ಲ.

(3) (1)ನೇ ಉಪ-ಪ್ರಕರಣ ಅಥವಾ (2)ನೇ ಉಪ-ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಆರು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

32. ಮತದಾನ ಕೇಂದ್ರಗಳಲ್ಲಿ ಅಥವಾ ಅವುಗಳ ಹತ್ತಿರದಲ್ಲಿ ಪ್ರಚಾರದ ನಿಷೇಧ.- (1) ಯಾರೇ ವ್ಯಕ್ತಿಯು, ಯಾವುದೇ ಮತದಾನ ಕೇಂದ್ರದಲ್ಲಿ ಮತದಾನ ನಡೆಯುವ ದಿನಾಂಕ ಅಥವಾ ದಿನಾಂಕಗಳಲ್ಲಿ ಆ ಮತದಾನ ಕೇಂದ್ರದೊಳಗೆ ಅಥವಾ ಮತದಾನ ಕೇಂದ್ರದಿಂದ ಒಂದು ನೂರು ಗಜಗಳ ಅಂತರದೊಳಗಿನ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸ್ಥಳದಲ್ಲಿ ಈ ಕೆಳಕಂಡ ಯಾವುದೇ ಕಾರ್ಯವನ್ನು ಮಾಡತಕ್ಕದಲ್ಲ; ಎಂದರೆ,-

(ಎ) ಮತಗಳಿಗಾಗಿ ಪ್ರಚಾರ ಮಾಡುವುದು; ಅಥವಾ

(ಬಿ) ಯಾರೇ ಮತದಾರನ ಮತವನ್ನು ಯಾಚಿಸುವುದು; ಅಥವಾ

(ಸಿ) ಯಾರೇ ನಿರ್ದಿಷ್ಟ ಅಭ್ಯರ್ಥಿಗೆ ಮತ ನೀಡದಿರುವಂತೆ ಯಾರೇ ಮತದಾರನನ್ನು ಮನವೊಲಿಸುವುದು; ಅಥವಾ

(ಡಿ) ಚುನಾವಣೆಯಲ್ಲಿ ಮತ ನೀಡದಿರಲು ಯಾರೇ ಮತದಾರನನ್ನು ಮನವೊಲಿಸುವುದು; ಅಥವಾ

(ಇ) ಚುನಾವಣೆಗೆ ಸಂಬಂಧಪಟ್ಟ ಯಾವುದೇ ಸೂಚನೆ ಅಥವಾ ಚಿಹ್ನೆಯನ್ನು (ಸರ್ಕಾರೀ ನೋಟೀಸನ್ನು ಹೊರತುಪಡಿಸಿ) ಪ್ರದರ್ಶಿಸುವುದು.

(2) ಉಪ-ಪ್ರಕರಣ (1) ರ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಎರಡು ನೂರ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(3) ಈ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕದ್ದು.

33. ಮತದಾನ ಕೇಂದ್ರಗಳ ಒಳಗೆ ಅಥವಾ ಅವುಗಳ ಹತ್ತಿರ ಅಶಿಸ್ತಿನ ವರ್ತನೆಗಾಗಿ ದಂಡನೆ.- (1) ಯಾರೇ ವ್ಯಕ್ತಿಯು ಯಾವುದೇ ಮತದಾನ ಕೇಂದ್ರದಲ್ಲಿ ಮತದಾನ ನಡೆಯುವ ದಿನಾಂಕ ಅಥವಾ ದಿನಾಂಕಗಳಲ್ಲಿ ಮತದಾನ ಕೇಂದ್ರಕ್ಕೆ ಮತದಾನ ಮಾಡಲು ಭೇಟಿ ಕೊಡುವ ಯಾರೇ ವ್ಯಕ್ತಿಗೆ ಕಿರುಕುಳವುಂಟು ಮಾಡುವಂತೆ ಅಥವಾ ಮತದಾನ ಕೇಂದ್ರದಲ್ಲಿ ಕರ್ತವ್ಯನಿರತರಾದ ಅಧಿಕಾರಿ ಅಥವಾ ವ್ಯಕ್ತಿಗಳ ಕೆಲಸದಲ್ಲಿ ಹಸ್ತಕ್ಷೇಪ ಮಾಡುವ ಹಾಗೆ,-

(ಎ) ಮತದಾನ ಕೇಂದ್ರದ ಒಳಗೆ ಅಥವಾ ಮತದಾನ ಕೇಂದ್ರದ ಪ್ರವೇಶದಲ್ಲಿ ಅಥವಾ ಅದರ ನೆರೆಹೊರೆಯಲ್ಲಿನ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸ್ಥಳದಲ್ಲಿ ಮನುಷ್ಯನ ಧ್ವನಿಯನ್ನು ಹೆಚ್ಚು ಮಾಡುವ ಅಥವಾ ಪುನರುತ್ಪಾದನೆ

ಮಾಡುವುದಕ್ಕಾಗಿ ಮೆಗಾ ಫೋನ್ ಅಥವಾ ಧ್ವನಿವರ್ಧಕಗಳಂಥ ಯಾವುವೇ ಉಪಕರಣಗಳನ್ನು ಉಪಯೋಗಿಸತಕ್ಕದ್ದಲ್ಲ ಅಥವಾ ನಿರ್ವಹಿಸತಕ್ಕದ್ದಲ್ಲ; ಅಥವಾ

(ಬಿ) ಮತದಾನ ಕೇಂದ್ರದ ಒಳಗೆ ಅಥವಾ ಅದರ ಪ್ರವೇಶದಲ್ಲಿ ಅಥವಾ ಅದರ ನೆರೆಹೊರೆಯಲ್ಲಿ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸ್ಥಳದಲ್ಲಿ ಕೂಗಾಡತಕ್ಕದ್ದಲ್ಲ ಅಥವಾ ಅನ್ಯಥಾ ಅವ್ಯವಸ್ಥಿತ ರೀತಿಯಲ್ಲಿ ವರ್ತಿಸತಕ್ಕದ್ದಲ್ಲ.

(2) ಉಪ-ಪ್ರಕರಣ (1)ರ ಉಪಬಂಧಗಳನ್ನು ಉಲ್ಲಂಘಿಸುವ ಅಥವಾ ಉಲ್ಲಂಘನೆಗೆ ಇಚ್ಛಾಪೂರ್ವಕವಾಗಿ ನೆರವು ನೀಡುವ ಅಥವಾ ದುಷ್ಪ್ರೇರಿಸುವ ಯಾರೇ ವ್ಯಕ್ತಿಯು ಮೂರು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಅವಧಿಯವರೆಗಿನ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(3) ಈ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು ಯಾರೇ ವ್ಯಕ್ತಿಯು ಮಾಡುತ್ತಿದ್ದಾನೆಂದು ಅಥವಾ ಮಾಡಿದ್ದಾನೆಂದು ಮತದಾನ ಕೇಂದ್ರದ ಅಧ್ಯಕ್ಷಾಧಿಕಾರಿಗೆ ನಂಬಲು ಕಾರಣವಿದ್ದರೆ ಅಂಥ ವ್ಯಕ್ತಿಯನ್ನು ದಸ್ತಗಿರಿ ಮಾಡಲು ಯಾರೇ ಪೊಲೀಸ್ ಅಧಿಕಾರಿಗೆ ಅವನು ನಿರ್ದೇಶಿಸಬಹುದು ಮತ್ತು ಆ ತರುವಾಯ ಪೊಲೀಸ್ ಅಧಿಕಾರಿಯು ಅವನನ್ನು ದಸ್ತಗಿರಿ ಮಾಡತಕ್ಕದ್ದು.

(4) ಯಾರೇ ಪೊಲೀಸ್ ಅಧಿಕಾರಿಯು, (1)ನೇ ಉಪ-ಪ್ರಕರಣದ ಉಪಬಂಧಗಳ ಯಾವುದೇ ಉಲ್ಲಂಘನೆಯನ್ನು ತಡೆಗಟ್ಟುವುದಕ್ಕಾಗಿ ಯುಕ್ತವಾಗಿ ಅವಶ್ಯವಾಗಬಹುದಾದಂಥ ಕ್ರಮಗಳನ್ನು ಕೈಕೊಳ್ಳಬಹುದು ಮತ್ತು ಅಂಥ ಬಲವನ್ನು ಉಪಯೋಗಿಸಬಹುದು ಮತ್ತು ಅಂಥ ಉಲ್ಲಂಘನೆಗಾಗಿ ಉಪಯೋಗಿಸಿದ ಯಾವುದೇ ಉಪಕರಣಗಳನ್ನು ಅಭಿಗ್ರಹಿಸಬಹುದು.

34. ಮತದಾನ ಕೇಂದ್ರದಲ್ಲಿ ದುರ್ವರ್ತನೆಗಾಗಿ ದಂಡನೆ.- (1) ಯಾರೇ ವ್ಯಕ್ತಿಯು ಯಾವುದೇ ಮತದಾನ ಕೇಂದ್ರದಲ್ಲಿ ಮತದಾನಕ್ಕೆ ನಿಗದಿಪಡಿಸಲಾದ ವೇಳೆಗಳಲ್ಲಿ ತಾನು ದುರ್ವರ್ತನೆಯಿಂದ ನಡೆದುಕೊಂಡರೆ ಅಥವಾ ಅಧ್ಯಕ್ಷಾಧಿಕಾರಿಯ ಕಾನೂನುಸಮ್ಮತ ನಿರ್ದೇಶನಗಳನ್ನು ಪಾಲಿಸಲು ತಪ್ಪಿದರೆ ಅಧ್ಯಕ್ಷಾಧಿಕಾರಿ ಅಥವಾ ಕರ್ತವ್ಯದ ಮೇಲಿರುವ ಯಾರೇ ಪೊಲೀಸ್ ಅಧಿಕಾರಿ ಅಥವಾ ಅಂಥ ಅಧ್ಯಕ್ಷ ಅಧಿಕಾರಿಯಿಂದ ಈ ಬಗ್ಗೆ ಅಧಿಕೃತನಾದ ಯಾರೇ ವ್ಯಕ್ತಿಯು ಅವನನ್ನು ಮತದಾನ ಕೇಂದ್ರದಿಂದ ತೆಗೆದುಹಾಕಬಹುದು.

(2) ಉಪ-ಪ್ರಕರಣ (1)ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು, ಮತದಾನ ಕೇಂದ್ರದಲ್ಲಿ ಮತದಾನ ಮಾಡಲು ಅನ್ಯಥಾ ಹಕ್ಕುಳ್ಳ ಯಾರೇ ಮತದಾರನನ್ನು ಆ ಕೇಂದ್ರದಲ್ಲಿ ಮತದಾನದ ಅವಕಾಶ ಹೊಂದಿರುವುದನ್ನು ತಡೆಗಟ್ಟುವ ಹಾಗೆ ಚಲಾಯಿಸತಕ್ಕದ್ದಲ್ಲ.

(3) ಮತದಾನ ಕೇಂದ್ರದಿಂದ ಹಾಗೆ ತೆಗೆದು ಹಾಕಲಾದ ಯಾರೇ ವ್ಯಕ್ತಿಯು, ಅಧ್ಯಕ್ಷಾಧಿಕಾರಿಯ ಅನುಮತಿಯಿಲ್ಲದೆ ಮತದಾನ ಕೇಂದ್ರವನ್ನು ಪುನಃ ಪ್ರವೇಶಿಸಿದರೆ ಅವನು ಮೂರು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಅವಧಿಯವರೆಗಿನ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(4) ಉಪ-ಪ್ರಕರಣ (3)ರ ಮೇರೆಗೆ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕದ್ದು.

35. ಚುನಾವಣೆಗಳಿಗೆ ಸಂಬಂಧಿಸಿದಂತೆ ಸರ್ಕಾರಿ ಕರ್ತವ್ಯದ ಉಲ್ಲಂಘನೆಗಳು.- (1) ಈ ಪ್ರಕರಣವು ಅನ್ವಯವಾಗುವ ಯಾರೇ ವ್ಯಕ್ತಿಯು ಯುಕ್ತ ಕಾರಣವಿಲ್ಲದೆ ಅವನ ಸರ್ಕಾರಿ ಕರ್ತವ್ಯದ ಉಲ್ಲಂಘನೆಯಲ್ಲಿ ಯಾವುದೇ ಕೃತ್ಯ ಅಥವಾ ಲೋಪದ ತಪ್ಪಿತಸ್ಥನಾದರೆ, ಐದುನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ಹಿಂದೆ ಹೇಳಿದ ಯಾವುದೇ ಅಂಥ ಕಾರ್ಯ ಅಥವಾ ಲೋಪಕ್ಕೆ ಸಂಬಂಧಿಸಿದಂತೆ ಹಾನಿಪರಿಹಾರಕ್ಕಾಗಿ ಅಂಥ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

(3) ಈ ಪ್ರಕರಣವು ಅನ್ವಯವಾಗುವ ವ್ಯಕ್ತಿಗಳು, ಚುನಾವಣಾಧಿಕಾರಿಗಳು, ಸಹಾಯಕ ಚುನಾವಣಾಧಿಕಾರಿಗಳು, ಅಧ್ಯಕ್ಷಾಧಿಕಾರಿಗಳು, ಮತದಾನ ಅಧಿಕಾರಿಗಳು ಮತ್ತು ಚುನಾವಣೆಯಲ್ಲಿ ನಾಮಪತ್ರಗಳನ್ನು ಸ್ವೀಕರಿಸುವ ಅಥವಾ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವ ಅಥವಾ ಮತಗಳನ್ನು ದಾಖಲು ಮಾಡುವ ಅಥವಾ ಎಣಿಸುವುದಕ್ಕೆ ಸಂಬಂಧಿಸಿದಂತೆ ಯಾವುದೇ ಕರ್ತವ್ಯವನ್ನು ನೆರವೇರಿಸಲು ನೇಮಕಗೊಂಡ ಯಾರೇ ಇತರ ವ್ಯಕ್ತಿ ಆಗಿರುತ್ತಾರೆ ಮತ್ತು ಈ

ಪ್ರಕರಣದ ಉದ್ದೇಶಗಳಿಗಾಗಿ ``ಸರ್ಕಾರಿ ಕರ್ತವ್ಯ' ಎಂಬ ಪದಾವಳಿಯನ್ನು ತದನುಸಾರವಾಗಿ ಅರ್ಥೈಸತಕ್ಕದ್ದು ಆದರೆ ಅದು ಅಂಥ ಚುನಾವಣೆಗೆ ಸಂಬಂಧಪಟ್ಟಂತೆ ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅಲ್ಲದೆ ಅನ್ಯಥಾ ವಿಧಿಸಿದ ಕರ್ತವ್ಯಗಳನ್ನು ಒಳಗೊಳ್ಳತಕ್ಕದ್ದಲ್ಲ.

36. ಮತಪತ್ರಗಳನ್ನು [1][ಅಥವಾ ಮತಯಂತ್ರಗಳನ್ನು][1] ಮತದಾನ ಕೇಂದ್ರದಿಂದ ತೆಗೆದುಕೊಂಡು ಹೋಗುವುದು ಅಪರಾಧವಾಗತಕ್ಕದ್ದು.- (1) ಯಾವುದೇ ಚುನಾವಣೆಯಲ್ಲಿ ಯಾರೇ ವ್ಯಕ್ತಿಯು ಮತದಾನ ಕೇಂದ್ರದಿಂದ ಹೊರಕ್ಕೆ ಮತಪತ್ರಗಳನ್ನು [1][ಅಥವಾ ಮತಯಂತ್ರ][1]ವನ್ನು ಮೋಸದಿಂದ ತೆಗೆದುಕೊಂಡು ಹೋದರೆ ಅಥವಾ ತೆಗೆದುಕೊಂಡು ಹೋಗಲು ಪ್ರಯತ್ನಿಸಿದರೆ ಅಥವಾ ಅಂಥ ಯಾವುದೇ ಕಾರ್ಯವನ್ನು ಮಾಡುವುದಕ್ಕೆ ಉದ್ದೇಶಪೂರ್ವಕವಾಗಿ ನೆರವು ನೀಡಿದರೆ ಅಥವಾ ದುಷ್ಪ್ರೇರಿಸಿದರೆ ಅವನು ಒಂದು ವರ್ಷದವರೆಗೆ ವಿಸ್ತರಿಸಬಹುದಾದಂಥ ಅವಧಿಯವರೆಗೆ ಕಾರಾವಾಸದಿಂದ ಅಥವಾ ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

1. 2009ರ ಅಧಿನಿಯಮ 17ರ ಮೂಲಕ 28.5.2009 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ ಎಂದು ಭಾವಿಸಲಾಗಿದೆ.

(2) ಉಪ-ಪ್ರಕರಣ (1)ರ ಮೇರೆಗೆ ದಂಡನೀಯವಾಗುವ ಅಪರಾಧವನ್ನು ಯಾರೇ ವ್ಯಕ್ತಿಯು ಮಾಡುತ್ತಿದ್ದಾನೆ ಎಂದು ಅಥವಾ ಮಾಡಿದ್ದಾನೆ ಎಂದು ಮತದಾನ ಕೇಂದ್ರದ ಅಧ್ಯಕ್ಷಾಧಿಕಾರಿಗೆ ನಂಬಲು ಕಾರಣವಿದ್ದರೆ ಅಂಥ ಅಧಿಕಾರಿಯು ಅಂಥ ವ್ಯಕ್ತಿಯು ಮತದಾನ ಕೇಂದ್ರವನ್ನು ಬಿಟ್ಟು ಹೋಗುವ ಮುಂಚೆ ಅಂಥ ವ್ಯಕ್ತಿಯನ್ನು ದಸ್ತಗಿರಿ ಮಾಡಬಹುದು ಅಥವಾ ಪೊಲೀಸ್ ಅಧಿಕಾರಿಗೆ ದಸ್ತಗಿರಿ ಮಾಡುವಂತೆ ನಿರ್ದೇಶಿಸಬಹುದು ಮತ್ತು ಅಂಥ ವ್ಯಕ್ತಿಯ ಶೋಧನೆಯನ್ನು ಮಾಡಬಹುದು ಅಥವಾ ಪೊಲೀಸ್ ಅಧಿಕಾರಿಯು ಅವನನ್ನು ಶೋಧಿಸುವಂತೆ ಮಾಡಬಹುದು:

ಪರಂತು, ಮಹಿಳೆಯನ್ನು ಶೋಧನೆ ಮಾಡಿಸುವುದು ಅವಶ್ಯವಾದಾಗ ಆ ಶೋಧನೆಯನ್ನು ಮತ್ತೊಬ್ಬ ಮಹಿಳೆಯಿಂದ ಸಭ್ಯತೆಗೆ ಕಟ್ಟುನಿಟ್ಟಾದ ಗಮನ ನೀಡಿ ಮಾಡಿಸತಕ್ಕದ್ದು.

(3) ದಸ್ತಗಿರಿಯಾದ ವ್ಯಕ್ತಿಯ ಬಳಿ ಶೋಧನೆ ಮಾಡಿದಾಗ ಕಂಡುಬಂದ ಯಾವುದೇ ಮತಪತ್ರ [1][ಅಥವಾ ಮತಯಂತ್ರ][1] ವನ್ನು ಆ ಅಧ್ಯಕ್ಷಾಧಿಕಾರಿಯು ಪೊಲೀಸ್ ಅಧಿಕಾರಿಗೆ ಸುರಕ್ಷಿತ ಅಭಿರಕ್ಷೆಗಾಗಿ ಒಪ್ಪಿಸತಕ್ಕದ್ದು ಅಥವಾ ಪೊಲೀಸ್ ಅಧಿಕಾರಿಯು ಶೋಧನೆಯನ್ನು ಮಾಡಿದಾಗ ಅದನ್ನು ಅಂಥ ಅಧಿಕಾರಿಯು ಸುರಕ್ಷಿತ ಅಭಿರಕ್ಷೆಯಲ್ಲಿ ಇಟ್ಟುಕೊಳ್ಳತಕ್ಕದ್ದು.

1. 2009ರ ಅಧಿನಿಯಮ 17ರ ಮೂಲಕ 28.5.2009 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ ಎಂದು ಭಾವಿಸಲಾಗಿದೆ.

(4) ಉಪ-ಪ್ರಕರಣ (1)ರ ಮೇರೆಗೆ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕದ್ದು.

37. ಇತರ ಅಪರಾಧಗಳು ಮತ್ತು ಅವುಗಳಿಗೆ ದಂಡನೆಗಳು.- (1) ಯಾರೇ ವ್ಯಕ್ತಿಯು ಯಾವುದೇ ಚುನಾವಣೆಯಲ್ಲಿ,-

(ಎ) ಯಾವುದೇ ನಾಮಪತ್ರವನ್ನು ಮೋಸದಿಂದ ವಿರೂಪಗೊಳಿಸಿದರೆ ಅಥವಾ ಮೋಸದಿಂದ ನಾಶಪಡಿಸಿದರೆ; ಅಥವಾ

(ಬಿ) ಚುನಾವಣಾಧಿಕಾರಿಯ ಅಧಿಕಾರದ ಮೂಲಕ ಅಥವಾ ಅದರ ಮೇರೆಗೆ ಅಂಟಿಸಲಾದ ಯಾವುದೇ ಪಟ್ಟಿ, ನೋಟೀಸು ಅಥವಾ ಇತರ ದಸ್ತಾವೇಜನ್ನು ಮೋಸದಿಂದ ವಿರೂಪಗೊಳಿಸಿದರೆ, ನಾಶಪಡಿಸಿದರೆ ಅಥವಾ ತೆಗೆದುಹಾಕಿದರೆ; ಅಥವಾ

(ಸಿ) ಯಾವುದೇ ಮತಪತ್ರ [1][ಅಥವಾ ಮತಯಂತ್ರ][1] ಅಥವಾ ಯಾವುದೇ ಮತಪತ್ರ [1][ಅಥವಾ ಮತಯಂತ್ರ][1] ದ ಮೇಲಿನ ಅಧಿಕೃತ ಗುರುತನ್ನು ಮೋಸದಿಂದ ವಿರೂಪಗೊಳಿಸಿದರೆ ಅಥವಾ ಮೋಸದಿಂದ ನಾಶಪಡಿಸಿದರೆ; ಅಥವಾ

1. 2009ರ ಅಧಿನಿಯಮ 17ರ ಮೂಲಕ 28.05.2009 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ ಎಂದು ಭಾವಿಸಲಾಗಿದೆ.

(ಡಿ) ಸೂಕ್ತ ಅಧಿಕಾರವಿಲ್ಲದೆ ಯಾರೇ ವ್ಯಕ್ತಿಗೆ ಯಾವುದೇ ಮತಪತ್ರವನ್ನು ಒದಗಿಸಿದರೆ ಅಥವಾ ಯಾರೇ ವ್ಯಕ್ತಿಯಿಂದ ಯಾವುದೇ ಮತಪತ್ರ [1][ಅಥವಾ ಮತಯಂತ್ರ][1]ವನ್ನು ಸ್ವೀಕರಿಸಿದರೆ ಅಥವಾ ಯಾವುದೇ ಮತಪತ್ರ [1][ಅಥವಾ ಮತಯಂತ್ರ][1]ವನ್ನು ಸ್ವಾಧೀನದಲ್ಲಿ ಇಟ್ಟುಕೊಂಡಿದ್ದರೆ; ಅಥವಾ

1. 2009ರ ಅಧಿನಿಯಮ 17ರ ಮೂಲಕ 28.05.2009 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ ಎಂದು ಭಾವಿಸಲಾಗಿದೆ.

(ಇ) ಯಾವ ಮತಪತ್ರವನ್ನು ಒಳಕ್ಕೆ ಹಾಕಲು ಅವನನ್ನು ಕಾನೂನು ಮೂಲಕ ಅಧಿಕೃತಗೊಳಿಸಲಾಗಿದೆಯೋ, ಆ ಮತಪತ್ರವನ್ನಲ್ಲದೆ ಬೇರೆ ಏನನ್ನಾದರೂ ಯಾವುದೇ ಮತಪೆಟ್ಟಿಗೆಯೊಳಕ್ಕೆ ಮೋಸದಿಂದ ಹಾಕಿದರೆ; ಅಥವಾ

(ಎಫ್) ಯುಕ್ತ ಅಧಿಕಾರವಿಲ್ಲದೆ ಚುನಾವಣಾ ಉದ್ದೇಶಗಳಿಗಾಗಿ ಆಗ ಉಪಯೋಗದಲ್ಲಿರುವ ಯಾವುದೇ ಮತಪೆಟ್ಟಿಗೆ ಅಥವಾ ಮತಪತ್ರ [1][ಅಥವಾ ಮತಯಂತ್ರ][1] ವನ್ನು ನಾಶಗೊಳಿಸಿದರೆ, ತೆಗೆದುಕೊಂಡು ಹೋದರೆ, ತೆರೆದರೆ ಅಥವಾ ಅನ್ಯಥಾ ಹಸ್ತಕ್ಷೇಪ ಮಾಡಿದರೆ; ಅಥವಾ

1. 2009ರ ಅಧಿನಿಯಮ 17ರ ಮೂಲಕ 28.05.2009 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ ಎಂದು ಭಾವಿಸಲಾಗಿದೆ.

(ಜಿ) ಸಂದರ್ಭಾನುಸಾರ, ಮೋಸದಿಂದ ಅಥವಾ ಸೂಕ್ತ ಅಧಿಕಾರವಿಲ್ಲದೆ ಮೇಲೆ ಹೇಳಿದ ಕಾರ್ಯಗಳಲ್ಲಿ ಯಾವುದನ್ನಾದರೂ ಮಾಡಲು ಪ್ರಯತ್ನಿಸಿದರೆ ಅಥವಾ ಅಂಥ ಯಾವುದೇಕಾರ್ಯಗಳನ್ನು ಮಾಡಲು ಉದ್ದೇಶಪೂರ್ವಕವಾಗಿ ನೆರವು ನೀಡಿದರೆ ಅಥವಾ ದುಷ್ಪ್ರೇರಿಸಿದರೆಅವನು ಚುನಾವಣಾ ಅಪರಾಧದ ತಪ್ಪಿತಸ್ಥನಾಗತಕ್ಕದ್ದು.

1. 2009ರ ಅಧಿನಿಯಮ 17ರ ಮೂಲಕ 28.05.2009 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ ಎಂದು ಭಾವಿಸಲಾಗಿದೆ.

(2) ಈ ಪ್ರಕರಣದ ಮೇರೆಗೆ ಚುನಾವಣಾ ಅಪರಾಧದ ತಪ್ಪಿತಸ್ಥನಾದ ಯಾರೇ ವ್ಯಕ್ತಿಯು,-

(ಎ) ಅವನು ಮತದಾನ ಕೇಂದ್ರದಲ್ಲಿ ಚುನಾವಣಾಧಿಕಾರಿ ಅಥವಾ ಸಹಾಯಕ ಚುನಾವಣಾಧಿಕಾರಿ ಅಥವಾ ಅಧ್ಯಕ್ಷಾಧಿಕಾರಿ ಅಥವಾ ಚುನಾವಣೆಗೆ ಸಂಬಂಧಪಟ್ಟಂತೆ ಸರ್ಕಾರಿ ಕರ್ತವ್ಯದ ಮೇಲೆ ನಿಯೋಜಿತನಾದ ಯಾರೇ ಇತರ ಅಧಿಕಾರಿ ಅಥವಾ ಗುಮಾಸ್ತನಾಗಿದ್ದರೆ ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು;

(ಬಿ) ಅವನು ಇತರ ಯಾರೇ ವ್ಯಕ್ತಿಯಾಗಿದ್ದರೆ, ಅವನು ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(3) ಈ ಪ್ರಕರಣದ ಉದ್ದೇಶಗಳಿಗಾಗಿ ವ್ಯಕ್ತಿಯು ಮತ ಎಣಿಕೆಯನ್ನು ಒಳಗೊಂಡಂತೆ ಚುನಾವಣೆ ಅಥವಾ ಚುನಾವಣೆಯ ಭಾಗವನ್ನು ನಡೆಸಲು ಪಾಲ್ಗೊಳ್ಳುವುದು ಅವನ ಕರ್ತವ್ಯವಾಗಿದ್ದರೆ ಅಥವಾ ಅಂಥ ಚುನಾವಣೆಗೆ ಸಂಬಂಧಪಟ್ಟಂತೆ ಉಪಯೋಗಿಸಲಾದ ಮತಪತ್ರಗಳು [1][ಅಥವಾ ಮತಯಂತ್ರ][1] ಮತ್ತು ಇತರ ದಸ್ತಾವೇಜುಗಳಿಗೆ ಚುನಾವಣೆಯ ತರುವಾಯವು ಜವಾಬ್ದಾರನಾಗಿದ್ದರೆ ಅವನು ಸರ್ಕಾರಿ ಕರ್ತವ್ಯದ ಮೇಲಿರುವನೆಂದು ಭಾವಿಸತಕ್ಕದು. ಆದರೆ ``ಸರ್ಕಾರಿ ಕರ್ತವ್ಯ'' ಎಂಬ ಪದಾವಳಿಯು ಅಂಥ ಚುನಾವಣೆಗೆ ಸಂಬಂಧಪಟ್ಟಂತೆ ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅಲ್ಲದೆ ಅನ್ಯಥಾ ವಿಧಿಸಿದ ಯಾವುದೇ ಕರ್ತವ್ಯವನ್ನು ಒಳಗೊಳ್ಳತಕ್ಕದಲ್ಲ.

1. 2009ರ ಅಧಿನಿಯಮ 17ರ ಮೂಲಕ 28.05.2009 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ ಎಂದು ಭಾವಿಸಲಾಗಿದೆ.

(4) ಉಪ-ಪ್ರಕರಣ (2)ರ (ಬಿ) ಖಂಡದ ಮೇರೆಗೆ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕದು.

(5) ಡೆಪ್ಯುಟಿ ಕಮೀಷನರನ ಆದೇಶದ ಮೂಲಕ ಅಥವಾ ಅವನ ಅಧಿಕಾರದ ಮೇರೆಗೆ ಮಾಡಿದ್ದ ಫಿರ್ಯಾದು ಇದ್ದ ಹೊರತು 31ನೇ ಪ್ರಕರಣದ ಮೇರೆಗೆ ಅಥವಾ 35ನೇ ಪ್ರಕರಣದ ಮೇರೆಗೆ, ಈ ಪ್ರಕರಣದ (2)ನೇ ಉಪ-ಪ್ರಕರಣದ (ಎ) ಖಂಡದ ಮೇರೆಗಿನ ಯಾವುದೇ ಅಪರಾಧವನ್ನು ಯಾವುದೇ ನ್ಯಾಯಾಲಯವು ಸಂಜ್ಞೇಯತೆಗೆ ತೆಗೆದುಕೊಳ್ಳತಕ್ಕದಲ್ಲ.

[1][38. ಚುನಾವಣೆಗಳ ನಿಯಂತ್ರಣ:-[2][(1) ಮುನಿಸಿಪಲ್ ಕೌನ್ಸಿಲ್‌ನ ಎಲ್ಲಾ ಚುನಾವಣೆಗಳಿಗಾಗಿ ಮತದಾರರ ಪಟ್ಟಿಯ ಸಿದ್ಧತೆಯ ಮತ್ತು ಚುನಾವಣೆ ನಡೆಸುವ ಬಗೆಗಿನ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣದೊಂದಿಗೆ ರಾಜ್ಯ ಚುನಾವಣಾ ಆಯೋಗದಲ್ಲಿ ನಿಹಿತವಾಗಿರತಕ್ಕದ್ದು.][2]][1]

1. 1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಉಪ-ಪ್ರಕರಣ (1)ನ್ನು ಪ್ರತಿಯೋಜಿಸಲಾಗಿದೆ.

(2) [1][ಉಪಪ್ರಕರಣ (1)ಕ್ಕೆ ಒಳಪಟ್ಟು][1] ಹಿಂದೆ ಹೇಳಿದುದರ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಸರ್ಕಾರವು ಅಧಿಸೂಚನೆಯ ಮೂಲಕ ಮತ್ತು ಪೂರ್ವ ಪ್ರಕಟಣೆಯ ತರುವಾಯ, ಈ ಅಧಿನಿಯಮದ ಮೇರೆಗೆ ಕೌನ್ಸಿಲರ್ ಗಳ ಚುನಾವಣೆಗಳನ್ನು ನಡೆಸುವ ಉದ್ದೇಶಕ್ಕಾಗಿ ಕೆಳಕಂಡ ಎಲ್ಲ ಅಥವಾ ಯಾವುದೇ ವಿಷಯದ ಬಗ್ಗೆ ಉಪಬಂಧಿಸಲು ಅಥವಾ ವಿನಿಯಮಿಸಲು ನಿಯಮಗಳನ್ನು ರಚಿಸಬಹುದು, ಎಂದರೆ:-

1. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಎ) [1][ವಾರ್ಡ್][1]ಗಾಗಿ ಮತದಾರರ ಪಟ್ಟಿಯಲ್ಲಿ ಒಂದು ಅಥವಾ ಹೆಚ್ಚು ಅಂಥ ಭಾಗಗಳನ್ನು ರಚಿಸುವ ಉದ್ದೇಶಕ್ಕಾಗಿ ವಿಧಾನ ಸಭಾ ಕ್ಷೇತ್ರಗಳಿಗಾಗಿನ ಮತದಾರರ ಪಟ್ಟಿಗಳನ್ನು ಭಾಗಗಳಾಗಿ ವಿಭಜಿಸುವ ರೀತಿ ಮತ್ತು ಅಂಥ ವಿಭಜನೆಯನ್ನು ಕಾರ್ಯಗತಗೊಳಿಸಬೇಕಾದ ಅಧಿಕಾರಿ ಅಥವಾ ಪ್ರಾಧಿಕಾರ;

1. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಬಿ) ಮತದಾರರ ಪಟ್ಟಿಗಳ ಪರಿಷ್ಕರಣೆ ಮತ್ತು ಸರಿಪಡಿಸುವಿಕೆ;

(ಸಿ)ಪ್ರಾದೇಶಿಕ [1][ವಾರ್ಡುಗಳ][1] ಮರುವಿಂಗಡಣೆ;

1. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಡಿ) ಚುನಾವಣೆಗಳನ್ನು ನಡೆಸುವುದಕ್ಕಾಗಿ ಚುನಾವಣಾಧಿಕಾರಿಗಳು, ಸಹಾಯಕ ಚುನಾವಣಾಧಿಕಾರಿಗಳು, ಅಧ್ಯಕ್ಷಾಧಿಕಾರಿಗಳು ಮತ್ತು ಮತದಾನದ ಅಧಿಕಾರಿಗಳ ನೇಮಕಾತಿ;

(ಇ) ಅಭ್ಯರ್ಥಿಗಳ ನಾಮನಿರ್ದೇಶನ, ನಾಮಪತ್ರಗಳ ನಮೂನೆ, ನಾಮಪತ್ರಗಳಿಗೆ ಆಕ್ಷೇಪಣೆಗಳು ಮತ್ತು ನಾಮಪತ್ರಗಳ ಪರಿಶೀಲನೆ;

(ಎಫ್) ಅಭ್ಯರ್ಥಿಗಳು ಇಡಬೇಕಾದ ಠೇವಣಿಗಳು ಅಂಥ ಠೇವಣಿಗಳನ್ನು ಇಡುವ ಕಾಲ ಮತ್ತು ರೀತಿ ಅಂಥ ಠೇವಣಿಗಳನ್ನು ಅಭ್ಯರ್ಥಿಗಳಿಗೆ ಮರುಪಾವತಿ ಮಾಡಬೇಕಾದ ಅಥವಾ ಮುನ್ಸಿಪಲ್ ಕೌನ್ಸಿಲ್‌ಗೆ ಮುಟ್ಟುಗೋಲು ಮಾಡಬೇಕಾದ ಸಂದರ್ಭಗಳು;

(ಜಿ) ಅಭ್ಯರ್ಥಿಗಳನ್ನು ಹಿಂತೆಗೆದುಕೊಳ್ಳುವುದು;

(ಹೆಚ್) ಅಭ್ಯರ್ಥಿಗಳ ಏಜೆಂಟರ ನೇಮಕಾತಿ;

(ಐ) ಸ್ಪರ್ಧೆ ಇರುವ ಮತ್ತು ಇಲ್ಲದ ಚುನಾವಣೆಗಳಲ್ಲಿನ ಪ್ರಕ್ರಿಯೆ ಮತ್ತು [1][ಅನುಸೂಚಿತ ಜಾತಿ ಅನುಸೂಚಿತ ಪಂಗಡ, ಹಿಂದುಳಿದ ವರ್ಗಗಳು ಮತ್ತು ಮಹಿಳೆಯರಿಗಾಗಿ][1] ಯಾವುದೇ ಸ್ಥಾನವನ್ನು ಕಾಯ್ದಿರಿಸಿದ [1][ವಾರ್ಡುಗಳಲ್ಲಿನ][1] ಚುನಾವಣೆಗಳಲ್ಲಿ ವಿಶೇಷ ಪ್ರಕ್ರಿಯೆ;

1. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಜೆ) ಮತದಾನಕ್ಕಾಗಿ ದಿನಾಂಕ, ಕಾಲ ಮತ್ತು ಸ್ಥಳ; ಮತ್ತು-

(i) ಪ್ರತಿಯೊಂದು 1[ವಾರ್ಡ್]1ಗೆ ಮತದಾನ ಕೇಂದ್ರಗಳನ್ನು ಗೊತ್ತುಪಡಿಸುವುದು;

1. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ii) ಮತ ಚಲಾಯಿಸಲು ಮತದಾನ ಕೇಂದ್ರವನ್ನು ತೆರೆದಿಡಬೇಕಾದಂಥ ವೇಳೆಗಳು;

(iii) ಮತಪತ್ರಗಳ ಮುದ್ರಣ ಮತ್ತು ನೀಡಿಕೆ;

(iv) ಮತದಾರರ ಪಟ್ಟಿ ಉಲ್ಲೇಖಿಸುವ ಮೂಲಕ ಮತದಾರರನ್ನು ಪರೀಕ್ಷಿಸುವುದು;

(v) ಮತದಾರನ ಎಡಗೈನ ತೋರುಬೆರಳು, ಅಥವಾ ಇತರ ಯಾವುದೇ ಬೆರಳು, ಅಥವಾ ಅವಯವದ ಮೇಲೆ ಅಳಿಸಲಾಗದ ಶಾಯಿಯಿಂದ ಗುರುತು ಮಾಡುವುದು ಮತ್ತು ಮತದಾರರ ಪರರೂಪಧಾರಣೆಯನ್ನು ತಡೆಗಟ್ಟುವ ಹಾಗೆ, ಈಗಾಗಲೇ ಅಂಥ ಗುರುತು ಹೊಂದಿರುವಂಥ ವ್ಯಕ್ತಿಯು ಆ ಕಾಲದಲ್ಲಿ, ಅಂಥ ಮತಪತ್ರಕ್ಕಾಗಿ ಮನವಿ ಸಲ್ಲಿಸಿದರೆ, ಯಾರೇ ವ್ಯಕ್ತಿಗೆ ಯಾವುದೇ ಮತಪತ್ರ ಕೊಡುವುದನ್ನು ನಿಷೇಧಿಸುವುದು;

(vi) ಮತಗಳನ್ನು ಕೊಡಬೇಕಾದ ಮತ್ತು ವಿಶೇಷವಾಗಿ ಅನಕ್ಷರಸ್ಥ ಮತದಾರರು ಅಥವಾ ದೈಹಿಕ ಅಥವಾ ಇತರ ಅಸಾಮರ್ಥ್ಯವಿರುವ ಮತದಾರರ ಸಂದರ್ಭದಲ್ಲಿ ಮತ ಕೊಡಬೇಕಾದ ರೀತಿ;

[1][(viಎ) ಮತಯಂತ್ರಗಳ ಮೂಲಕ ಮತಗಳನ್ನು ಹಾಕುವ ಮತ್ತು ದಾಖಲಿಸುವ ರೀತಿ;][1]

1. 2009ರ ಅಧಿನಿಯಮ 17ರ ಮೂಲಕ 28.5.2009 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ ಎಂದು ಭಾವಿಸಲಾಗಿದೆ.

1[(vi-ಬಿ) ಅರ್ಹ ಮತದಾರನು, ಚುನಾವಣೆಯಲ್ಲಿ ಸ್ಪರ್ಧಿಸಿದ ಅಭ್ಯರ್ಥಿಗಳ ಪೈಕಿಯಾವೊಬ್ಬ ಅಭ್ಯರ್ಥಿಯ ಪರವಾಗಿ ತನ್ನ ಮತವನ್ನು ಚಲಾಯಿಸಲು ಇಚ್ಛಿಸದಿರುವ ಸಂದರ್ಭದಲ್ಲಿ ಆತನು None Of The Above (NOTA) (ಮೇಲಿನ ಯಾರೊಬ್ಬರಿಗೂ ಅಲ್ಲ) ಎಂದು ಮತವನ್ನು ಚಲಾಯಿಸುವ ರೀತಿ]1

1. 2020ರ ಅಧಿನಿಯಮ 10ರ ಮೂಲಕ 27.4.2020 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ ಎಂದು ಭಾವಿಸಲಾಗಿದೆ.

(vii) ಆಕ್ಷೇಪಿತ ಮತಗಳು ಮತ್ತು ನೀಡಿದ ಮತಗಳ ಬಗ್ಗೆ ಅನುಸರಿಸಬೇಕಾದ ಪ್ರಕ್ರಿಯೆ;

(viii) ಮತಗಳ ಪರಿಶೀಲನೆ, ಮತಗಳ ಎಣಿಕೆ, ಫಲಿತಾಂಶಗಳ ಘೋಷಣೆ ಮತ್ತು ಪ್ರಕಟಣೆ ಮತ್ತು ಸಮಾನ ಮತಗಳ ಸಂದರ್ಭದಲ್ಲಿ ಅಥವಾ ಕೌನ್ಸಿಲರ್ ನು ಒಂದಕ್ಕಿಂತ ಹೆಚ್ಚಿನ [1][ವಾರ್ಡ್][1] ಅನ್ನು ಪ್ರತಿನಿಧಿಸಲು ಚುನಾಯಿತನಾದ ಸಂದರ್ಭದಲ್ಲಿನ ಪ್ರಕ್ರಿಯೆ;

1. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ix) ಚುನಾವಣೆಗಳಿಗೆ ಸಂಬಂಧಪಟ್ಟ ಕಾಗದಪತ್ರಗಳ ಅಭಿರಕ್ಷೆ ಮತ್ತು ವಿಲೆ;

(x) ದೊಂಬಿ, ಹಿಂಸಾಚಾರ ಅಥವಾ ಯಾವುದೇ ಇತರ ಸಾಕಷ್ಟು ಕಾರಣದಿಂದ ಯಾವುದೇ ರೀತಿಯಅಡ್ಡಿ ಉಂಟಾದ ಸಂದರ್ಭದಲ್ಲಿ ಮತದಾನದ ನಿಲಂಬನ ಮತ್ತು ಹೊಸ ಮತದಾನನಡೆಸುವುದು;

(xi) ಎಣಿಕೆಗೆ ಮುಂಚೆ ಮತ ಪೆಟ್ಟಿಗೆಗಳ ನಾಶ ಅಥವಾ ಅವುಗಳನ್ನು ಕೆಡಿಸುವಿಕೆಯ ಸಂದರ್ಭದಲ್ಲಿ ಹೊಸ ಮತದಾನವನ್ನು ನಡೆಸುವುದು;

(xii) ಮತದಾನಕ್ಕೆ ಮುಂಚೆ ಅಭ್ಯರ್ಥಿಯು ಮರಣದ ಸಂದರ್ಭದಲ್ಲಿ ಮತದಾನವನ್ನು ನಡೆಸುವುದನ್ನು ಪ್ರತ್ಯಾದೇಶಿಸುವುದು;

- ಇವುಗಳನ್ನು ಒಳಗೊಂಡಂತೆ ಚುನಾವಣೆಯನ್ನು ನಡೆಸುವುದಕ್ಕೆ ಸಂಬಂಧಪಟ್ಟ ಇತರ ವಿಷಯಗಳು;

(ಕೆ) ದಿನಾಂಕ, ಸಮಯ ಮತ್ತು ಸ್ಥಳ, ಚುನಾವಣಾ ಅರ್ಜಿಯ ಮೇಲೆ ಸಂದಾಯ ಮಾಡಬೇಕಾದ ಫೀಜು;

(ಎಲ್) ಯಾವ ಚುನಾವಣೆಗಳು ಅಥವಾ ಚುನಾವಣಾ ವಿವಾದಗಳಿಗೆ ಸಂಬಂಧಿಸಿದಂತೆ ಸರ್ಕಾರವು ಈ ಪ್ರಕರಣದ ಮೇರೆಗೆ ನಿಯಮಗಳನ್ನು ರಚಿಸುವುದು ಅವಶ್ಯವೆಂದು ಭಾವಿಸುವುದೋ ಆ ಚುನಾವಣೆಗಳು ಅಥವಾ ಚುನಾವಣಾ ವಿವಾದಗಳಿಗೆ ಅಥವಾ ಯಾವುದಕ್ಕೆ ಸಂಬಂಧಿಸಿದಂತೆ, ಈ ಅಧಿನಿಯಮವು ಯಾವುದೇ ಉಪಬಂಧವನ್ನು ಮಾಡಿಲ್ಲವೋ ಅಥವಾ ಸಾಕಷ್ಟಿಲ್ಲದ ಉಪಬಂಧವನ್ನು ಮಾಡಿದೆಯೋ, ಮತ್ತು ಸರ್ಕಾರದ ಅಭಿಪ್ರಾಯದಲ್ಲಿ ಉಪಬಂಧವು ಅವಶ್ಯವಿರುವುದೋ ಅದಕ್ಕೆ ಸಂಬಂಧಪಟ್ಟ ಯಾವುದೇ ಇತರ ವಿಷಯ.

(3) ಈ ಪ್ರಕರಣದ ಮೇರೆಗೆ ಯಾವುದೇ ನಿಯಮವನ್ನು ರಚಿಸುವಲ್ಲಿ ಅವುಗಳ ಉಲ್ಲಂಘನೆಯು ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯವಾಗತಕ್ಕದ್ದೆಂದು ಸರ್ಕಾರವು ಉಪಬಂಧಿಸಬಹುದು.]1

[1][38ಎ.ರಿಟರ್ನಿಂಗ್ ಆಫೀಸರ್, ಪ್ರಿಸೈಡಿಂಗ್ ಅಫೀಸರ್ ಮುಂತಾದವರು, ರಾಜ್ಯ ಚುನಾವಣಾ ಆಯೋಗಕ್ಕೆ ಪ್ರತಿನಿಯೋಜಿತರಾಗಿರುವುದಾಗಿ ಭಾವಿಸತಕ್ಕದ್ದು.:- ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಅಡಿಯಲ್ಲಿ ಕೌನ್ಸಿಲರ್ ಗಳಿಗಾಗಿ ಯಾವುದೇ ಚುನಾವಣೆ ನಡೆಸುವುದಕ್ಕೆ ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ನೇಮಕ ಮಾಡಲಾದ ರಿಟರ್ನಿಂಗ್ ಆಫೀಸರ್, ಸಹಾಯಕ ರಿಟರ್ನಿಂಗ್ ಆಫೀಸರ್, ಪ್ರಿಸೈಡಿಂಗ್ ಆಫೀಸರ್, ಪೋಲಿಂಗ್ ಆಫೀಸರ್ ಮತ್ತು ಇತರ ಯಾರೇ ಅಧಿಕಾರಿಯು ಮತ್ತು ಸರ್ಕಾರದಿಂದ ಸಕಾಲಕ್ಕೆ ನಿಯಮಿಸಲಾದ ಯಾವೊಬ್ಬ ಪೊಲೀಸ್ ಅಧಿಕಾರಿಯು, ಅಂಥ ಚುನಾವಣೆ ನಡೆಸಲು ಕರೆ ನೀಡುವ ಅಧಿಸೂಚನೆಯ

ದಿನಾಂಕದಂದು ಮತ್ತು ದಿನಾಂಕದಿಂದ ಅಂಥ ಚುನಾವಣೆಯ ಫಲಿತಾಂಶಗಳು ಘೋಷಿತವಾಗುವ ದಿನಾಂಕದವರೆಗಿನ ಅವಧಿಗೆ ರಾಜ್ಯ ಚುನಾವಣಾ ಆಯೋಗಕ್ಕೆ ಪ್ರತಿನಿಯೋಜಿತರಾಗಿರುವುದಾಗಿ ಭಾವಿಸತಕ್ಕದ್ದು ಮತ್ತು ಅದಕ್ಕನುಸಾರವಾಗಿ, ಅಂಥ ಅಧಿಕಾರಿಗಳು, ಆ ಅವಧಿಯಲ್ಲಿ ರಾಜ್ಯ ಚುನಾವಣಾ ಆಯೋಗದ ನಿಯಂತ್ರಣ, ಮೇಲ್ವಿಚಾರಣೆ ಮತ್ತು ಶಿಸ್ತಿಗೆ ಒಳಪಟ್ಟಿರತಕ್ಕದ್ದು.][1]

1. 1995ರ ಅಧಿನಿಯಮ 24ರ ಮೂಲಕ 26.9.1995 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][**38ಬಿ.ಚುನಾವಣೆಗಳಲ್ಲಿ ಮತಯಂತ್ರ:-** ಈ ಅಧಿನಿಯಮದಲ್ಲಿ ಅಥವಾ ಅದರ ಅಡಿಯಲ್ಲಿ ಮಾಡಲಾದ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ಮತಯಂತ್ರಗಳ ಮೂಲಕ ಮತಗಳನ್ನು ನೀಡುವುದನ್ನು ಅಥವಾ ದಾಖಲಿಸುವುದನ್ನು, ಪ್ರತಿಯೊಂದು ನಿರ್ದಿಷ್ಟ ಪ್ರಕರಣದ ಸಂದರ್ಭಗಳನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ಚುನಾವಣಾ ಆಯೋಗವು ನಿರ್ದಿಷ್ಟಪಡಿಸಬಹುದಾದಂಥ ಚುನಾವಣಾ ಕ್ಷೇತ್ರ ಅಥವಾ ಚುನಾವಣಾ ಕ್ಷೇತ್ರಗಳಲ್ಲಿ ಅಂಗೀಕರಿಸಬಹುದು.

ವಿವರಣೆ.- ಈ ಪ್ರಕರಣದ ಉದ್ದೇಶಕ್ಕಾಗಿ 'ಮತಯಂತ್ರ' ಎಂದರೆ, ವಿದ್ಯುನ್ಮಾನದ ಮೂಲಕವಾಗಲಿ ಅಥವಾ ಬೇರೆ ರೀತಿಯಲ್ಲಾಗಲೀ ನಡೆಸುವ ಮತಗಳನ್ನು ನೀಡುವುದಕ್ಕೆ ಅಥವಾ ದಾಖಲಿಸುವುದಕ್ಕೆ ಬಳಸುವ ಯಾವುದೇ ಯಂತ್ರ ಅಥವಾ ಉಪಕರಣ ಎಂದು ಅರ್ಥ ಮತ್ತು ಈ ಅಧಿನಿಯಮದಲ್ಲಿ ಅಥವಾ ಅದರ ಅಡಿಯಲ್ಲಿ ರಚಿಸಿರುವ ನಿಯಮಗಳಲ್ಲಿ ಮತಪಟ್ಟಿಗೆ ಅಥವಾ ಮತಪತ್ರದಲ್ಲಿ ಮಾಡಿರುವ ಯಾವುದೇ ಉಲ್ಲೇಖವು, ಅನ್ಯಥಾ ಉಪಬಂಧಿಸಿರುವುದನ್ನುಳಿದು, ಯಾವುದೇ ಚುನಾವಣೆಯಲ್ಲಿ, ಅಂಥ ಮತಯಂತ್ರವನ್ನು ಎಲ್ಲೆಲ್ಲಿ ಬಳಸಲಾಗಿದೆಯೋ ಅಲ್ಲಿ, ಅಂಥ ಮತಯಂತ್ರಕ್ಕೆ ಉಲ್ಲೇಖವನ್ನು ಮಾಡಿರುವುದಾಗಿ ಅರ್ಥೈಸತಕ್ಕದ್ದು.][1]

1. 2009ರ ಅಧಿನಿಯಮ 17ರ ಮೂಲಕ 28.5.2009 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ ಎಂದು ಭಾವಿಸಲಾಗಿದೆ.

39. ಚುನಾವಣೆಗಳಿಗೆ ಸಂಬಂಧಪಟ್ಟ ದಾವೆಗಳ ಪ್ರತಿಷೇಧ ಇತ್ಯಾದಿ.- ಈ ಅಧಿನಿಯಮದ ಉಪಬಂಧಗಳು ಅಥವಾ ಈ ಅಧಿನಿಯಮದ ಮೇರೆಗೆ ರಚಿಸಲಾದ ಯಾವುದೇ ನಿಯಮದ ಮೂಲಕ ಅಧಿಕೃತಗೊಳಿಸಿದಂಥ ದಾವೆಯಾಗಿದ್ದ ಹೊರತು ಕೌನ್ಸಿಲರ್, ಅಧ್ಯಕ್ಷ ಅಥವಾ ಉಪಾಧ್ಯಕ್ಷನ ಚುನಾವಣೆ, ನೇಮಕಾತಿ ಅಥವಾ ತೆಗೆದುಹಾಕುವುದಕ್ಕೆ ಸಂಬಂಧಪಟ್ಟ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ದಾವೆಯನ್ನು ಸಿವಿಲ್ ನ್ಯಾಯಾಲಯವು ಪುರಸ್ಕರಿಸತಕ್ಕದ್ದಲ್ಲ.

[1][**40. ರಾಜೀನಾಮೆ**.- (2)ನೆಯ ಉಪ-ಪ್ರಕರಣದ ಉಪಬಂಧಗಳಿಗೊಳಪಟ್ಟು,-

(ಎ) ಟೌನ್ ಮುನ್ಸಿಪಲ್ ಕೌನ್ಸಿಲ್‌ನ ಸಂದರ್ಭದಲ್ಲಿ ಡೆಪ್ಯುಟಿ ಕಮೀಷನರ್ ನಿಗೆ;

(ಬಿ) ಸಿಟಿ ಮುನ್ಸಿಪಲ್ ಕೌನ್ಸಿಲ್‌ನ ಸಂದರ್ಭದಲ್ಲಿ [2][ಪೌರಾಡಳಿತ ನಿರ್ದೇಶಕರಿಗೆ][2]

- ಅದಕ್ಕಾಗಿ ಬರಹದಲ್ಲಿನ ನೋಟೀಸನ್ನು ಕೊಡುವ ಮೂಲಕ ಕೌನ್ಸಿಲರ್ ನು ತನ್ನ ಸದಸ್ಯತ್ವಕ್ಕೆ ರಾಜೀನಾಮೆ ನೀಡಬಹುದು ಮತ್ತು ಅಧ್ಯಕ್ಷ ಅಥವಾ ಉಪಾಧ್ಯಕ್ಷನು ತನ್ನ ಸದಸ್ಯತ್ವಕ್ಕೆ ಅಥವಾ ಅಧ್ಯಕ್ಷ ಅಥವಾ ಉಪಾಧ್ಯಕ್ಷನ ಪದಕ್ಕೆ ರಾಜೀನಾಮೆ ನೀಡಬಹುದು.

(2) ಉಪ-ಪ್ರಕರಣ (1)ರ ಮೇರೆಗಿನ ರಾಜೀನಾಮೆಯು, ರಾಜೀನಾಮೆಯ ನೋಟೀಸನ್ನು ಸ್ವೀಕರಿಸಿದ ತರುವಾಯ ಈ ಮಧ್ಯ ಹಿಂತೆಗೆದುಕೊಂಡಿದ್ದ ಹೊರತು ಹತ್ತನೇ ದಿನವು ಮುಕ್ತಾಯವಾದ ಮೇಲೆ ಪರಿಣಾಮಕಾರಿಯಾಗತಕ್ಕದ್ದು.]1

1. 1979ರ ಅಧಿನಿಯಮ 13ರ ಮೂಲಕ 23.2.1979 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

41. ಪದದಿಂದ ತೆಗೆದುಹಾಕುವ ಬಗ್ಗೆ ಹೊಣೆಗಾರಿಕೆ.- (1) ಈ ಅಧಿನಿಯಮದ ಮೇರೆಗೆ ಚುನಾಯಿತನಾದ [1][xxx][1] ಯಾರೇ ಕೌನ್ಸಿಲರ್ ನ[2][xxx][2] ಮತ್ತು ಸರ್ಕಾರವು ಅವಶ್ಯವೆಂದು ಭಾವಿಸುವಂಥ ವಿಚಾರಣೆಯ ತರುವಾಯ, ಅಂಥ ಕೌನ್ಸಿಲರ್ ನು ತನ್ನ ಕರ್ತವ್ಯಗಳ ನಿರ್ವಹಣೆಯಲ್ಲಿ ದುರ್ವರ್ತನೆಯ ಅಥವಾ ಯಾವುದೇ ಅಪಮಾನಕರ ವರ್ತನೆಯ ಬಗ್ಗೆ ತಪ್ಪಿತಸ್ಥನಾಗಿದ್ದರೆ, ಅಥವಾ ಕೌನ್ಸಿಲರ್ ನಾಗಿ ತನ್ನ ಕರ್ತವ್ಯಗಳನ್ನು ನೆರವೇರಿಸುವಲ್ಲಿ ಅಸಮರ್ಥನಾಗಿದ್ದರೆ, ಮುನ್ಸಿಪಲ್ ಕೌನ್ಸಿಲ್‌ನ ಶಿಫಾರಸ್ಸಿನ ಮೇಲೆ ಅದು ಸೂಕ್ತವೆಂದು ಭಾವಿಸಿದರೆ, ತೆಗೆದುಹಾಕಬಹುದು:

1.1994ರ ಅಧಿನಿಯಮ 36ರ ಮೂಲಕ 1.6.1964 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

2.1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][ಪರಂತು, ಯಾರೇ ಕೌನ್ಸಿಲರ್ ನನ್ನು ವಿಚಾರಣೆಗೆ ಒಪ್ಪಿಸುವುದಕ್ಕಾಗಿ ಅವಕಾಶವನ್ನು ಕೊಟ್ಟ ತರುವಾಯದ ಹೊರತು ತೆಗೆದುಹಾಕತಕ್ಕದ್ದಲ್ಲ.][1]

1. 1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) 42ನೇ ಪ್ರಕರಣದ (10)ನೇ ಉಪ-ಪ್ರಕರಣದ ಮೇರೆಗೆ ಯಾರೇ ವ್ಯಕ್ತಿಯನ್ನು, ಅವನ ಕರ್ತವ್ಯಗಳ ನಿರ್ವಹಣೆಯಲ್ಲಿ ದುರ್ವರ್ತನೆಗಾಗಿ ಅಧ್ಯಕ್ಷ ಅಥವಾ ಉಪಾಧ್ಯಕ್ಷ ಪದದಿಂದ ತೆಗೆದುಹಾಕಿದಾಗ ಅಂಥ ತೆಗೆದುಹಾಕುವಿಕೆಯ ದಿನಾಂಕದಿಂದ ಅವನು ಕೌನ್ಸಿಲರ್ ನಾಗಿರುವುದು ನಿಂತುಹೋಗತಕ್ಕದ್ದು ಮತ್ತು (1)ನೇ ಉಪ-ಪ್ರಕರಣದ ಮೇರೆಗೆ ಕೌನ್ಸಿಲರ್ ನ ಪದದಿಂದ ಅವನನ್ನು ತೆಗೆದುಹಾಕಿರುವುದಾಗಿ ಭಾವಿಸತಕ್ಕದ್ದು.

42. ಅಧ್ಯಕ್ಷ ಮತ್ತು ಉಪಾಧ್ಯಕ್ಷ.- (1) ಪ್ರತಿಯೊಂದು ಮುನ್ಸಿಪಲ್ ಕೌನ್ಸಿಲ್‌ಗೆ ಒಬ್ಬ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಇರತಕ್ಕದು.

[1][(2) ಉಪ-ಪ್ರಕರಣ (2ಎ) ಉಪಬಂಧಗಳಿಗೊಳಪಟ್ಟು, ಕೌನ್ಸಿಲರ್ ಗಳು, ಸಾರ್ವತ್ರಿಕ ಚುನಾವಣೆಯ ನಂತರ ಮುನಿಸಿಪಲ್ ಕೌನ್ಸಿಲ್‌ನ ಮೊದಲ ಸಭೆಯಲ್ಲಿ ಮತ್ತು ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಪದಾವಧಿಯು ಮುಕ್ತಾಯವಾಗುವ ನಿಕಟಪೂರ್ವದಲ್ಲಿ ನಡೆಸಲಾಗುವ ತರುವಾಯದ ಸಭೆಯಲ್ಲಿ ಚುನಾಯಿತ ಕೌನ್ಸಿಲರ್ ಗಳ ಪೈಕಿ ಇಬ್ಬರು ಸದಸ್ಯರನ್ನು ಅನುಕ್ರಮವಾಗಿ, ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನಾಗಿ ಮಾಡತಕ್ಕದ್ದು. ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಯಲ್ಲಿ ಆಕಸ್ಮಿಕ ರಿಕ್ತತೆಯುಂಟಾದಾಗಲೆಲ್ಲ, ಚುನಾಯಿತ ಕೌನ್ಸಿಲರ್ ಗಳ ಪೈಕಿ ಮತ್ತೊಬ್ಬ ಸದಸ್ಯನನ್ನು ಸಂದರ್ಭಾನುಸಾರವಾಗಿ, ಅಧ್ಯಕ್ಷ ಅಥವಾ ಉಪಾಧ್ಯಕ್ಷರನ್ನಾಗಿ ಚುನಾಯಿಸತಕ್ಕದ್ದು.][1]

1. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[2][(2ಎ). ಸರ್ಕಾರವು ನಿಯಮಿಸಲಾದ ರೀತಿಯಲ್ಲಿ.-

1. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ (2ಎ) ಉಪ-ಪ್ರಕರಣವನ್ನು ಸೇರಿಸಲಾಗಿದೆ.

(ಎ) ರಾಜ್ಯದಲ್ಲಿನ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಹುದ್ದೆಗಳನ್ನು ಅಂಥ ಸಂಖ್ಯೆಯ ಹುದ್ದೆಗಳನ್ನು ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗೆ ಮೀಸಲಿರಿಸತಕ್ಕದ್ದು ಮತ್ತು ಅಂಥ ಹುದ್ದೆಗಳ ಸಂಖ್ಯೆಯು, ರಾಜ್ಯದಲ್ಲಿರುವ ಅನುಸೂಚಿತ ಜಾತಿಗಳ ಅಥವಾ ರಾಜ್ಯದಲ್ಲಿರುವ ಅನುಸೂಚಿತ ಪಂಗಡಗಳ ಜನಸಂಖ್ಯೆಯು ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಯಾವ ಅನುಪಾತದಲ್ಲಿರುವುದೋ, ಆ ರಾಜ್ಯದಲ್ಲಿನ ಒಟ್ಟು ಹುದ್ದೆಗಳ ಸಂಖ್ಯೆಗೆ ಸರಿಸುಮಾರು ಅದೇ ಪ್ರಮಾಣದಲ್ಲಿರತಕ್ಕದ್ದು;

(ಬಿ) ರಾಜ್ಯದಲ್ಲಿನ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಗಳ ಒಟ್ಟು ಸಂಖ್ಯೆಯಲ್ಲಿ ಸರಿಸುಮಾರು ಮೂರನೇ ಒಂದು ಭಾಗದಷ್ಟು ಸಂಖ್ಯೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಗಳನ್ನು ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಗೆ ಮೀಸಲಿರಿಸತಕ್ಕದ್ದು;

[1][ಪರಂತು, ಈ ಖಂಡದ ಮೇರೆಗೆ ಮೀಸಲಿರಿಸಿದ ಹುದ್ದೆಗಳ ಪೈಕಿ ಅಂಥ ಹುದ್ದೆಗಳ ಒಟ್ಟು ಸಂಖ್ಯೆಯಲ್ಲಿ ಶೇಕಡಾ ಎಂಭತ್ತರಷ್ಟು ಹುದ್ದೆಗಳನ್ನು 'ಎ' ಪ್ರವರ್ಗದ ಅಡಿಯಲ್ಲಿ ಬರುವ ವ್ಯಕ್ತಿಗಳಿಗಾಗಿ ಮೀಸಲಿರಿಸತಕ್ಕದ್ದು ಮತ್ತು ಉಳಿದ ಶೇಕಡಾ ಇಪ್ಪತ್ತರಷ್ಟು ಹುದ್ದೆಗಳನ್ನು 'ಬಿ' ಪ್ರವರ್ಗದ ಅಡಿಯಲ್ಲಿ ಬರುವ ವ್ಯಕ್ತಿಗಳಿಗಾಗಿ ಮೀಸಲಿರಿಸತಕ್ಕದ್ದು.

ಮತ್ತು ಪರಂತು, 'ಎ' ಪ್ರವರ್ಗದ ಅಡಿಯಲ್ಲಿ ಬರುವ ವ್ಯಕ್ತಿಗಳು ಲಭ್ಯವಿಲ್ಲದಿದ್ದರೆ, ಆ ಪ್ರವರ್ಗಕ್ಕಾಗಿ ಮೀಸಲಿರಿಸಿದ ಹುದ್ದೆಗಳನ್ನು 'ಬಿ' ಪ್ರವರ್ಗದ ಅಡಿಯಲ್ಲಿ ಬರುವ ವ್ಯಕ್ತಿಗಳನ್ನು ಸಹ ಅದಕ್ಕೆ ಪ್ರತಿಯಾಗಿ ಭರ್ತಿ ಮಾಡಿಕೊಳ್ಳತಕ್ಕದ್ದು.]1

[2][ಮತ್ತು ಪರಂತು, ಈ ಖಂಡದ ಮೇರೆಗೆ, ಹಿಂದುಳಿದ ವರ್ಗಗಳಿಗಾಗಿ ಮೀಸಲಿರಿಸಿದ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಹುದ್ದೆಗಳ ಸಂಖ್ಯೆಯನ್ನು ಈ ಖಂಡದ ಮೇರೆಗೆ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು ಹಾಗೂ ಹಿಂದುಳಿದ ವರ್ಗಗಳಿಗಾಗಿ ಮೀಸಲಿರಿಸಿದ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಹುದ್ದೆಗಳ ಒಟ್ಟು ಸಂಖ್ಯೆಯು, ರಾಜ್ಯದಲ್ಲಿನ ಮುನಿಸಿಪಲ್ ಕೌನ್ಸಿಲ್‌ನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಹುದ್ದೆಗಳ ಒಟ್ಟು ಸಂಖ್ಯೆಯ ಶೇಕಡಾ ಐವತ್ತನ್ನು ಮೀರದಂತೆ ನಿರ್ಧರಿಸತಕ್ಕದ್ದು.][2]

1. 1995ರ ಅಧಿನಿಯಮ 24ರ ಮೂಲಕ 26.9.1995 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 2012ರ ಅಧಿನಿಯಮ 32ರ ಮೂಲಕ 30.8.2012 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಸಿ) ರಾಜ್ಯದಲ್ಲಿನ [1][ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಗಳ ಒಟ್ಟು ಸಂಖ್ಯೆಯಲ್ಲಿ ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು ಮತ್ತು ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳ ಪ್ರತಿಯೊಂದು ಪ್ರವರ್ಗಕ್ಕೂ ಮೀಸಲಿಟ್ಟಿರುವ ಮತ್ತು ಮೀಸಲಿಟ್ಟರದ ಹುದ್ದೆಗಳಲ್ಲಿ ಶೇಕಡಾ ಐವತ್ತಕ್ಕಿಂತ ಹೆಚ್ಚಿಗೆ ಇಲ್ಲದಷ್ಟು][1] ಹುದ್ದೆಗಳನ್ನು ಮಹಿಳೆಯರಿಗೆ ಮೀಸಲಿರಸತಕ್ಕುದು.

ಪರಂತು, ಈ ಉಪ-ಪ್ರಕರಣದ ಅಡಿಯಲ್ಲಿ ಮೀಸಲಿರಿಸಿದ ಹುದ್ದೆಗಳನ್ನು, ವಿವಿಧ ಮುನಿಸಿಪಲ್ ಕೌನ್ಸಿಲ್‌ಗಳಿಗೆ ನಿಯಮಿಸಲಾದ ರೀತಿಯಲ್ಲಿ ಸರದಿಯ ಮೂಲಕ ಹಂಚಿಕೆ ಮಾಡತಕ್ಕದ್ದು.

1. 2012ರ ಅಧಿನಿಯಮ 32ರ ಮೂಲಕ 30.8.2012 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ವಿವರಣೆ:- ಸಂದೇಹಗಳ ನಿವಾರಣೆಗಾಗಿ, ಈ ಉಪ-ಪ್ರಕರಣದ ಅಡಿಯಲ್ಲಿ, ಹುದ್ದೆಗಳಮೀಸಲಾತಿಯ ಉದ್ದೇಶಕ್ಕಾಗಿನ ಸರದಿಯ ನಿಯಮವು, 1994ರ ಜೂನ್ ಮೊದಲನೇ ದಿನದ ನಂತರ ನಡೆಸಲಾಗುವ ಮೊದಲ ಸಾರ್ವಜನಿಕ ಚುನಾವಣೆಯಿಂದ ಪ್ರಾರಂಭಿಸತಕ್ಕದ್ದೆಂದು ಈ ಮೂಲಕ ಘೋಷಿಸಲಾಗಿದೆ.][1]

(3) ಅಧ್ಯಕ್ಷ ಮತ್ತು ಉಪಾಧ್ಯಕ್ಷನ ಚುನಾವಣೆ ಮತ್ತು ಸದರಿ ಪದಗಳಲ್ಲಿನ ಖಾಲಿ ಸ್ಥಾನಗಳನ್ನು ಭರ್ತಿ ಮಾಡುವುದು ಮತ್ತು ಅಂಥ ಚುನಾವಣೆಗೆ ಸಂಬಂಧಪಟ್ಟ ವಿವಾದಗಳ ನಿರ್ಧರಣೆಯು [1][xxx][1] ನಿಯಮಿಸಬಹುದಾದಂಥ ನಿಯಮಗಳಿಗನುಸಾರವಾಗಿರತಕ್ಕದ್ದು;

1. 1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ ಮತ್ತು 1994ರ ಅಧಿನಿಯಮ 36ರ ಮೂಲಕ 1.1.1996 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

ಪರಂತು, ಅಂಥ ಚುನಾವಣಾ ವಿವಾದಗಳನ್ನು ನಿರ್ಧರಿಸುವ ಪ್ರಾಧಿಕಾರವು ನಿಯಮಿಸಬಹುದಾದಂಥ ನ್ಯಾಯಿಕ ಅಧಿಕಾರಿಯಾಗಿರತಕ್ಕದ್ದು.

[1][(4)xxx][1]

1. 1994ರ ಅಧಿನಿಯಮ 36ರ ಮೂಲಕ 1.1.1996 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(5) ಮುನ್ಸಿಪಲ್ ಕೌನ್ಸಿಲ್‌ನ ಅಧ್ಯಕ್ಷನ ಪದವು ಖಾಲಿಯಿರುವ ಅವಧಿಯಲ್ಲಿ ಮತ್ತು ಅವನ ಸ್ಥಾನವನ್ನು ವಹಿಸಿಕೊಳ್ಳಲು ಉಪಾಧ್ಯಕ್ಷನು ಇಲ್ಲದಿರುವಾಗ, ಅಥವಾ 44ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೂಲಕ ಅಗತ್ಯಪಡಿಸಿದಂತೆ ಖಾಲಿ ಆಗಿರುವಂಥ ಅಧ್ಯಕ್ಷ ಪದದ ಪ್ರಭಾರವನ್ನು ವಹಿಸಿಕೊಳ್ಳಲು ಉಪಾಧ್ಯಕ್ಷನು ತಪ್ಪಿದರೆ, ಆಗ (10)ನೇ ಉಪ-ಪ್ರಕರಣದ ಮೇರೆಗಿನ ಯಾವುದೇ ಕ್ರಮಕ್ಕೆ ಬಾಧಕವಾಗದಂತೆ ಈ ಅಧಿನಿಯಮದಲ್ಲಿ ಅಥವಾ ಅದರ ಮೇರೆಗೆ ಹೊರಡಿಸಿದ ನಿಯಮಗಳಲ್ಲಿ ಅಥವಾ ಆದೇಶಗಳಲ್ಲಿ ಏನೇ ಅಡಕವಾಗಿದ್ದಾಗ್ಯೂ, [1][ಮುನಿಸಿಪಲ್ ಕೌನ್ಸಿಲ್‌ಗಳ][1] ಸಂದರ್ಭದಲ್ಲಿ ಡೆಪ್ಯುಟಿ ಕಮಿಷನರ್ ನು ಅಥವಾ ತತ್ಕಾಲದಲ್ಲಿ ಡೆಪ್ಯುಟಿ ಕಮಿಷನರ್ ನ ಕರ್ತವ್ಯಗಳನ್ನು ನೆರವೇರಿಸುತ್ತಿರುವ ವ್ಯಕ್ತಿಯು ಮತ್ತು ಪಟ್ಟಣ [1][ಮುನಿಸಿಪಲ್ ಕೌನ್ಸಿಲ್‌ಗಳ][1] ಸಂದರ್ಭದಲ್ಲಿ ಅಸಿಸ್ಟೆಂಟ್ ಕಮಿಷನರ್ ನ ದರ್ಜೆಗೆ ಕಡಿಮೆಯಿಲ್ಲದ, ಅವನಿಂದ ಈ ಬಗ್ಗೆ ನಾಮನಿರ್ದೇಶಿತನಾದ ಯಾರೇ ಅಧಿಕಾರಿ, ಜಿಲ್ಲಾ ಮುಖ್ಯ ಕಾರ್ಯಸ್ಥಾನದಲ್ಲಿನ ಮುನ್ಸಿಪಾಲಿಟಿಗಳ ಸಂದರ್ಭದಲ್ಲಿ ತಹಸೀಲ್ದಾರನು ಅಥವಾ ತತ್ಕಾಲದಲ್ಲಿ ತಹಸೀಲ್ದಾರನ ಕರ್ತವ್ಯಗಳನ್ನು ನೆರವೇರಿಸುತ್ತಿರುವ ವ್ಯಕ್ತಿ ಅಥವಾ ಇತರ [1][ಮುನಿಸಿಪಲ್ ಕೌನ್ಸಿಲ್‌ಗಳ][1] ಸಂದರ್ಭದಲ್ಲಿ [2][ಕೌನ್ಸಿಲರ್ ನಾಗಿರುವುದಕ್ಕೆ ಅನರ್ಹಗೊಂಡಿಲ್ಲದ ಯಾರೇ ಇತರ ವ್ಯಕ್ತಿಯು][2], ಅಧ್ಯಕ್ಷನ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

1. 1994ರ ಅಧಿನಿಯಮ 36ರ ಮೂಲಕ 1.1.1996 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(6) ಅಂಥ ಅಧ್ಯಕ್ಷ ಅಥವಾ ಉಪಾಧ್ಯಕ್ಷನಾಗಿ ತನ್ನ ಕರ್ತವ್ಯಗಳನ್ನು ನೆರವೇರಿಸಲು ಅಸಮರ್ಥನಾಗಬಹುದಾದಂಥ ರೀತಿಯಲ್ಲಿ [1][ಮುನ್ಸಿಪಲ್ ಏರಿಯಾ][1] ದಿಂದ ಎರಡು ತಿಂಗಳಿಗೆ ಮೀರಿದ ಅವಧಿಗೆ ಗೈರುಹಾಜರಾಗುವ ಪ್ರತಿಯೊಬ್ಬ ಅಧ್ಯಕ್ಷನು ಮತ್ತು ಒಂದು ತಿಂಗಳಿಗೆ ಮೀರಿದ

ಅವಧಿಗೆ ಗೈರುಹಾಜರಾಗುವ ಪ್ರತಿಯೊಬ್ಬ ಉಪಾಧ್ಯಕ್ಷನು, ಹಾಗೆ ತಾನು ಗೈರು ಹಾಜರಾಗಲು ಮುನ್ಸಿಪಲ್ ಕೌನ್ಸಿಲ್ ಅನುಮತಿಯನ್ನು ಕೊಟ್ಟಿದ್ದ ಹೊರತು, ಅವನು ಅಧ್ಯಕ್ಷ ಅಥವಾ ಉಪಾಧ್ಯಕ್ಷನಾಗಿರುವುದು ನಿಂತು ಹೋಗತಕ್ಕದ್ದು. ಈ ಉಪ-ಪ್ರಕರಣದ ಮೇರೆಗೆ ಖಾಲಿ ಸ್ಥಾನವು ಉದ್ಭವಿಸಿರುವುದೋ ಹೇಗೆ ಎನ್ನುವ ಪ್ರಶ್ನೆಯನ್ನು ಡೆಪ್ಯುಟಿ ಕಮಿಷನರ್ ನು ತೀರ್ಮಾನಿಸತಕ್ಕದ್ದು.

1. 1994ರ ಅಧಿನಿಯಮ 36ರ ಮೂಲಕ 1.1.1996 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(7) ಉಪ-ಪ್ರಕರಣ(6) ರಮೇರೆಗೆ ಆರು ತಿಂಗಳುಗಳು ಮೀರುವ ಅವಧಿಗಾಗಿ ಅನುಮತಿಯನ್ನು ಕೊಡತಕ್ಕದ್ದಲ್ಲ. ಅಧ್ಯಕ್ಷನಿಗೆ ಅನುಮತಿಯನ್ನು ಮಂಜೂರು ಮಾಡಿದಾಗ ಮತ್ತು ಉಪಾಧ್ಯಕ್ಷನ ಪದವು ಖಾಲಿಯಾಗಿರುವಾಗಲೆಲ್ಲಾ, ಅಧ್ಯಕ್ಷ ಪದದ ಖಾಲಿ ಸ್ಥಾನವನ್ನು ನಿಯಮಿಸಬಹುದಾದಂಥ ಅವಧಿಯೊಳಗೆ ಮತ್ತು ಅಂಥ ರೀತಿಯಲ್ಲಿ [1][ಚುನಾಯಿತ ಕೌನ್ಸಿಲರ್ ಗಳೊಳಗಿಂದ][1] ಮುನ್ಸಿಪಲ್ ಕೌನ್ಸಿಲ್ ಚುನಾವಣೆ ಮೂಲಕ ಭರ್ತಿ ಮಾಡತಕ್ಕದ್ದು. [2][xxx][2] ಉಪಾಧ್ಯಕ್ಷನಿಗೆ ಅನುಮತಿಯನ್ನು ನೀಡಿದಾಗ ಅಥವಾ ಉಪಾಧ್ಯಕ್ಷನು ಅಧ್ಯಕ್ಷನಿಗಾಗಿ ಕಾರ್ಯನಿರ್ವಹಿಸುತ್ತಿರುವಾಗ ಉಪಾಧ್ಯಕ್ಷನ ಪದದಲ್ಲಿ ಖಾಲಿ ಸ್ಥಾನವನ್ನು ಬೇರೊಬ್ಬ [1][ಚುನಾಯಿತ ಕೌನ್ಸಿಲರ್ ನನ್ನು][1] ಅದಕ್ಕೆ ಚುನಾಯಿಸುವ ಮೂಲಕ ಭರ್ತಿ ಮಾಡಬಹುದು.

1.1994ರ ಅಧಿನಿಯಮ 36ರ ಮೂಲಕ 1.1.1996 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2.1994ರ ಅಧಿನಿಯಮ 36ರ ಮೂಲಕ 1.1.1996 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(8) ಮುನ್ಸಿಪಲ್ ಕೌನ್ಸಿಲ್‌ನ ಉಪಾಧ್ಯಕ್ಷನನ್ನು ಮುನ್ಸಿಪಲ್ ಕೌನ್ಸಿಲ್‌ನ ಅಧ್ಯಕ್ಷನನ್ನಾಗಿ ಚುನಾಯಿಸಿದರೆ [1][XXX][1] ಅವನು ಉಪಾಧ್ಯಕ್ಷನಾಗಿ ತನ್ನ ಪದವನ್ನು ಖಾಲಿ ಮಾಡಿರುವುದಾಗಿ ಭಾವಿಸತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.1.1996 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(9) ಮುನ್ಸಿಪಲ್ ಕೌನಿಲ್‌ನ ಪ್ರತಿಯೊಬ್ಬ ಅಧ್ಯಕ್ಷ ಮತ್ತು ಪ್ರತಿಯೊಬ್ಬ ಉಪಾಧ್ಯಕ್ಷನು, ಆ ಉದ್ದೇಶಕ್ಕಾಗಿ ಕರೆದ ವಿಶೇಷ ಸಾಮಾನ್ಯ ಸಭೆಯಲ್ಲಿ [1][ಮತದಾನದ ಹಕ್ಕನ್ನು ಹೊಂದಿರುವ ಕೌನ್ಸಿಲರ್ ಗಳ ಒಟ್ಟು ಸಂಖ್ಯೆಯ ಬಹುಮತದಿಂದ ಮತ್ತು ಮತ ನೀಡುವ ಮತ್ತು ಮತ ಚಲಾಯಿಸುವ ಹಕ್ಕನ್ನು ಹೊಂದಿರುವ ಕೌನ್ಸಿಲರ್ ಗಳ ಮೂರನೇ ಎರಡರಷ್ಟಕ್ಕೆ ಕಡಿಮೆಯಿಲ್ಲದ ಬಹುಮತದಿಂದ][1] ಅವನಲ್ಲಿ ವಿಶ್ವಾಸವಿಲ್ಲವೆಂದು ಹೇಳುವ ನಿರ್ಣಯವನ್ನು ಅಂಗೀಕರಿಸಿದರೆ ತತ್‌ಕ್ಷಣವೇ ಅವನು ತನ್ನ ಪದವನ್ನು ಖಾಲಿ ಮಾಡಿರುವುದಾಗಿ ಭಾವಿಸತಕ್ಕದ್ದು:

1.2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಪರಂತು, ಅಂಥ ನಿರ್ಣಯವನ್ನು, [1][ಮತದಾನದ ಹಕ್ಕನ್ನು ಹೊಂದಿರುವ ಕೌನ್ಸಿಲರ್ ಗಳ ಒಟ್ಟು ಸಂಖ್ಯೆಯ][1] ಮೂರನೇ ಒಂದರಷ್ಟಕ್ಕೆ ಕಡಿಮೆಯಿಲ್ಲದ ಸಂಖ್ಯೆಯ ಕೌನ್ಸಿಲರ್ ಗಳು ನಿರ್ಣಯದ ನೋಟೀಸಿಗೆ ರುಜು ಮಾಡಿದ್ದ ಹೊರತು, ಮತ್ತು ಆ ನಿರ್ಣಯವನ್ನು ಮಂಡಿಸುವ ಉದ್ದೇಶದ ಬಗ್ಗೆ ಕನಿಷ್ಠಪಕ್ಷ ಹತ್ತು ದಿವಸಗಳ ನೋಟೀಸನ್ನು ಕೊಟ್ಟಿದ್ದ ಹೊರತು, ಮಂಡಿಸತಕ್ಕದ್ದಲ್ಲ:

1.2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಮತ್ತು ಪರಂತು, ಯಾರೇ ಅಧ್ಯಕ್ಷ ಅಥವಾ ಉಪಾಧ್ಯಕ್ಷನಲ್ಲಿ ಅವಿಶ್ವಾಸವನ್ನು ವ್ಯಕ್ತಪಡಿಸುವ ನಿರ್ಣಯವನ್ನು ಮುನ್ಸಿಪಲ್ ಕೌನ್ಸಿಲ್ ಪರ್ಯಾಲೋಚಿಸಿರುವಲ್ಲಿ ಮತ್ತು ಅದನ್ನು ತಿರಸ್ಕರಿಸಿರುವಲ್ಲಿ ಅದೇ ಅಧ್ಯಕ್ಷ ಅಥವಾ ಅದೇ ಉಪಾಧ್ಯಕ್ಷನಿಗೆ ಸಂಬಂಧಿಸಿದಂತೆ ಅಂಥದೇ ನಿರ್ಣಯದ ಬಗ್ಗೆ ಮುನ್ಸಿಪಲ್ ಕೌನ್ಸಿಲ್‌ನ ತೀರ್ಮಾನದ ದಿನಾಂಕದಿಂದ ಒಂದು ವರ್ಷದೊಳಗೆ ನೋಟೀಸನ್ನು ಕೊಡತಕ್ಕದ್ದಲ್ಲ ಅಥವಾ ಅದನ್ನು ಮಂಡಿಸತಕ್ಕದ್ದಲ್ಲ.

(10) ಪ್ರತಿಯೊಬ್ಬ ಅಧ್ಯಕ್ಷ ಮತ್ತು ಉಪಾಧ್ಯಕ್ಷನನ್ನು, ಅಂಥ ಅಧ್ಯಕ್ಷ ಅಥವಾ ಉಪಾಧ್ಯಕ್ಷ ಪದದಿಂದ ಅವನ ಕರ್ತವ್ಯಗಳ ನಿರ್ವಹಣೆಯಲ್ಲಿ ದುರ್ವರ್ತನೆಗಾಗಿ ಅಥವಾ ಅವನ ಕರ್ತವ್ಯಗಳನ್ನು ಉಪೇಕ್ಷಿಸುವುದು ಅಥವಾ ಅವುಗಳನ್ನು ನೆರವೇರಿಸಲು ಅಸಮರ್ಥನಾದುದಕ್ಕಾಗಿ ಅಥವಾ ಅವನು ತಾನು ಮುನ್ಸಿಪಲ್ ಕೌನ್ಸಿಲ್‌ಗೆ ಕೊಡಬೇಕಾದ ಬಾಕಿಗಳನ್ನು ಸಂದಾಯ ಮಾಡಲು ಅಸಮರ್ಥನಾದರೆ ಅಥವಾ [2][ಯಾವುದೇ ಡಿಕ್ರಿ ಋಣವನ್ನು ಸಂದಾಯ ಮಾಡದಿರುವುದಕ್ಕಾಗಿ ಸಿವಿಲ್ ಕಾರಾಗೃಹಕ್ಕೆ ಒಪ್ಪಿಸುವುದಕ್ಕಾಗಿನ ಆದೇಶಕ್ಕೆ ಒಳಗಾಗಿದ್ದರೆ][2] ಅಂಥ ಅಧ್ಯಕ್ಷ ಮತ್ತು

ಉಪಾಧ್ಯಕ್ಷನಾಗಿರುವ ಅವನ ಪದದಿಂದ [1][xxx][1] ತೆಗೆದುಹಾಕಬಹುದಾಗಿರತಕ್ಕದ್ದು, ಮತ್ತು 41ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ಕೌನ್ಸಿಲರ್ ನಾಗಿರುವುದು ನಿಂತುಹೋಗಿರದ ಹಾಗೆ ತೆಗೆದುಹಾಕಲಾದ ಅಧ್ಯಕ್ಷ ಮತ್ತು ಉಪಾಧ್ಯಕ್ಷನು 18ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಕೌನ್ಸಿಲರ್ ನ ಪದಾವಧಿಯ ಉಳಿದ ಅವಧಿಯಲ್ಲಿ ಅಧ್ಯಕ್ಷ ಅಥವಾ ಉಪಾಧ್ಯಕ್ಷನಾಗಿ ಮರು ಚುನಾವಣೆಗೆ ಅರ್ಹನಾಗಿರತಕ್ಕದ್ದಲ್ಲ:

1.1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

2.1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][ಪರಂತು, ಅಂಥ ಯಾವುದೇ ಆದೇಶವನ್ನು, ಅಧ್ಯಕ್ಷ ಅಥವಾ ಉಪಾಧ್ಯಕ್ಷನಿಗೆ ವಿವರಣೆಗಳನ್ನು ಒಪ್ಪಿಸಲು ಅವಕಾಶವನ್ನು ಕೊಟ್ಟ ತರುವಾಯ ಹೊರತು ಮಾಡತಕ್ಕದ್ದಲ್ಲ.][1]

1.1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][ವಿವರಣೆ: xxx][1]

1.1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][(11) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದುದನ್ನುಳಿದು, ಅಧ್ಯಕ್ಷ ಮತ್ತು ಉಪಾಧ್ಯಕ್ಷನು, ಅವನ ಚುನಾವಣೆಯ ದಿನಾಂಕದಿಂದ ಮೂವತ್ತು ತಿಂಗಳುಗಳ ಅವಧಿಗಾಗಿ ಪದವನ್ನು ಹೊಂದಿರತಕ್ಕದ್ದು ಹಾಗೂ ಕಲ್ಪಿಸಲಾಗಿರುವ ಕಾಲಗಣನೆಯಲ್ಲಿ ಕೌನ್ಸಿಲರ್ ಗಳಾಗಿರುವುದನ್ನು ಅವರು ಮುಕ್ತಾಯಗೊಳಿಸತಕ್ಕದ್ದಲ್ಲ.][1]

1.1994ರ ಅಧಿನಿಯಮ 36ರ ಮೂಲಕ 1.1.1996 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(12) ಅಧ್ಯಕ್ಷನಾಗಿ ಅಥವಾ ಉಪಾಧ್ಯಕ್ಷನಾಗಿ ತನ್ನ ಪದಾವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ, ಅಧ್ಯಕ್ಷ ಅಥವಾ ಉಪಾಧ್ಯಕ್ಷನಾಗಿ ಅವನ ಪದವನ್ನು ಅಂಗೀಕರಿಸದೆ ಇರುವುದು, ಮರಣ, ರಾಜೀನಾಮೆ ಅಥವಾ ತೆಗೆದು ಹಾಕುವಿಕೆ ಅಥವಾ ಅವನ ಚುನಾವಣೆಯು ಶೂನ್ಯವಾಗುವುದು ಅಥವಾ ಅಂಥ ಪದದಲ್ಲಿ ಕಾರ್ಯನಿರ್ವಹಿಸಲು ಅವನು ಅಸಮರ್ಥನಾಗುವುದು ಅಥವಾ ಕೌನ್ಸಿಲರ್ ನಾಗಿರುವುದು ನಿಂತುಹೋಗುವುದು-ಇವುಗಳ ಸಂದರ್ಭದಲ್ಲಿ, ಹಿಂದೆ ಹೇಳಿದ ಉಪ-ಪ್ರಕರಣಗಳ ಉಪಬಂಧಗಳಿಗನುಸಾರವಾಗಿ, [2][xxx][2], ಖಾಲಿ ಸ್ಥಾನವನ್ನು [1][ಚುನಾವಣೆಯ ಮೂಲಕ][1] ಭರ್ತಿ ಮಾಡತಕ್ಕದ್ದು ಅನ್ಯಥಾ ಉಪಬಂಧಿಸಿರದ ಯಾವುದೇ ಖಾಲಿ ಸ್ಥಾನವು ಉಂಟಾದಾಗ, ಸರ್ಕಾರವು, ಅಂಥ ಖಾಲಿ ಸ್ಥಾನದ ಅವಧಿಯಲ್ಲಿ ಅಧ್ಯಕ್ಷ ಅಥವಾ ಉಪಾಧ್ಯಕ್ಷನ ಎಲ್ಲ ಕರ್ತವ್ಯಗಳನ್ನು ನೆರವೇರಿಸಲು ಮತ್ತು ಎಲ್ಲ ಅಧಿಕಾರಗಳನ್ನು ಚಲಾಯಿಸಲು ಯಾರೇ ಕೌನ್ಸಿಲರ್ ನನ್ನು ನೇಮಕ ಮಾಡಬಹುದು.

1.1994ರ ಅಧಿನಿಯಮ 36ರ ಮೂಲಕ 1.1.1996 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2.1994ರ ಅಧಿನಿಯಮ 36ರ ಮೂಲಕ 1.1.1996 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][(13) ಅಧ್ಯಕ್ಷ ಮತ್ತು ಉಪಾಧ್ಯಕ್ಷನು ಸರ್ಕಾರವು, ಕಾಲಕಾಲಕ್ಕೆ ನಿಗದಿಪಡಿಸಬಹುದಾದಂಥ ಎರಡು ನೂರು ರೂಪಾಯಿಗಳಿಗೆ ಮೀರದ ಮಾಸಿಕ ಭತ್ಯೆಗಳನ್ನು ಮುನ್ಸಿಪಲ್ ನಿಧಿಯಿಂದ ಸ್ವೀಕರಿಸಬಹುದು ಮತ್ತು ಬೇರೆ ಬೇರೆ ಮುನ್ಸಿಪಲ್ ಕೌನ್ಸಿಲ್ ಗಳಿಗೆ ಬೇರೆ ಬೇರೆ ದರಗಳನ್ನು ನಿಗದಿಪಡಿಸಬಹುದು.

(14) ಮುನ್ಸಿಪಲ್ ಕೌನ್ಸಿಲ್, ಆತಿಥ್ಯ ಭತ್ಯೆಯಾಗಿ ಅದು ನಿರ್ಧರಿಸಬಹುದಾದಂತೆ ಒಂದು ಸಾವಿರ ರೂಪಾಯಿಗಳಿಗೆ ಮೀರದಂಥ ಮೊತ್ತವನ್ನು ವಾರ್ಷಿಕವಾಗಿ ಅಧ್ಯಕ್ಷನ ವಶದಲ್ಲಿಡತಕ್ಕದ್ದು.][1]

1.1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

43. ಅಧ್ಯಕ್ಷನ ಪ್ರಕಾರ್ಯಗಳು.- XIV ನೇ ಅಧ್ಯಾಯದ ಉಪಬಂಧಗಳಿಗೊಳಪಟ್ಟು,-

(ಎ) ಯುಕ್ತ ಕಾರಣದಿಂದ ತಡೆಯಲ್ಪಟ್ಟ ಹೊರತು, ಮುನ್ಸಿಪಲ್ ಕೌನ್ಸಿಲ್‌ನ ಎಲ್ಲಾ ಸಭೆಗಳಲ್ಲಿ ಅಧ್ಯಕ್ಷತೆ ವಹಿಸುವುದು ಮತ್ತು 323ನೇ ಪ್ರಕರಣದ (2)ನೇ ಉಪ-ಪ್ರಕರಣದ (ಎ) ಖಂಡದ ಮೇರೆಗೆ ತತ್ಕಾಲದಲ್ಲಿ ಜಾರಿಯಲ್ಲಿರುವ ನಿಯಮಗಳ ಉಪಬಂಧಗಳಿಗೊಳಪಟ್ಟು, ಅಂಥ ಸಭೆಗಳಲ್ಲಿ ವ್ಯವಹಾರ ನಡವಳಿಕೆಯನ್ನು ನಿಯಂತ್ರಿಸುವುದು;

(ಬಿ) ಮುನ್ಸಿಪಲ್ ಕೌನ್ಸಿಲ್‌ನ ಹಣಕಾಸು ಮತ್ತು ಕಾರ್ಯನಿರ್ವಾಹಕ ಆಡಳಿತದ ಮೇಲೆ ನಿಗಾ ಇಡುವುದು;

(ಸಿ) ಈ ಅಧಿನಿಯಮದ ಮೂಲಕ ಅವನಿಗೆ ವಿಶೇಷವಾಗಿ ವಿಧಿಸಿದ ಅಥವಾ ಪ್ರದಾನ ಮಾಡಿದ ಅಥವಾ ಅದರ ಮೇರೆಗೆ ಮತ್ತು ಅದಕ್ಕನುಸಾರವಾಗಿ ಅವನಿಗೆ ವಹಿಸಿಕೊಟ್ಟ ಎಲ್ಲ ಕರ್ತವ್ಯಗಳನ್ನು ನೆರವೇರಿಸುವುದು ಮತ್ತು ಎಲ್ಲ ಅಧಿಕಾರಗಳನ್ನು ಚಲಾಯಿಸುವುದು;

(ಡಿ) ಕಮಿಷನರ್ ನಿಗೆ ಅಥವಾ ಈ ಬಗ್ಗೆ ಕಮಿಷನರನು [1][ಪೌರಾಡಳಿತ ನಿರ್ದೇಶಕ][1] ರಂಥ ಇತರ ಅಧಿಕಾರಿಗೆ ಕಾಲಕಾಲಕ್ಕೆ ನಾಮನಿರ್ದೇಶನ ಮಾಡತಕ್ಕಂಥ ಇತರ ಅಧಿಕಾರಿಗೆ ಮುನ್ಸಿಪಲ್ ಕೌನ್ಸಿಲ್‌ನ ಯಾವುದೇ ಸಭೆಯಲ್ಲಿ ಅಂಗೀಕರಿಸಿದ ಪ್ರತಿಯೊಂದು ನಿರ್ಣಯದ ಪ್ರತಿಯನ್ನು ಹದಿನೈದು ದಿನಗಳ ಅವಧಿಯೊಳಗಾಗಿ ಒದಗಿಸುವುದು; ಮತ್ತು

1.2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಇ) 304ನೇ ಪ್ರಕರಣದ ಮೇರೆಗೆ [1][ಪೌರಾಡಳಿತ ನಿರ್ದೇಶಕನು][1] ಅಥವಾ ಇತರ ಅಧಿಕಾರಿಯು ಕೇಳುವಂಥ ಮುನ್ಸಿಪಲ್ ಕೌನ್ಸಿಲ್‌ನ ಅಥವಾ ಯಾವುದೇ ಸಮಿತಿಯ ವ್ಯವಹರಣೆಗಳ ನಡವಳಿಕೆ ಅಥವಾ ಯಾವುದೇ ಇತರ ದಸ್ತಾವೇಜು ಅಥವಾ ವಸ್ತುವಿನಿಂದ ಯಾವುದೇ ಉದ್ಧೃತವನ್ನು ಒದಗಿಸುವುದು.

1.2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

- ಮುನ್ಸಿಪಲ್ ಕೌನ್ಸಿಲ್ ನ ಅಧ್ಯಕ್ಷನ ಕರ್ತವ್ಯವಾಗಿರತಕ್ಕದ್ದು.

[1][(2) ಮುನ್ಸಿಪಲ್ ಕೌನ್ಸಿಲ್‌ನ ಅಧ್ಯಕ್ಷನು ತುರ್ತು ಸಂದರ್ಭಗಳಲ್ಲಿ ಮುನ್ಸಿಪಲ್ ಕೌನ್ಸಿಲ್‌ನ ಮಂಜೂರಾತಿಯು ಅಗತ್ಯವಿರುವಂಥ ಮತ್ತು ಅವನ ಅಭಿಪ್ರಾಯದಲ್ಲಿ ಸಾರ್ವಜನಿಕ ಸೇವೆ ಅಥವಾ ಸುರಕ್ಷತೆಗಾಗಿ ಕೂಡಲೇ ಅದನ್ನು ನಿರ್ವಹಿಸುವುದು ಅಥವಾ ಮಾಡುವುದು ಅವಶ್ಯವಿರುವಂಥ ಯಾವುದೇ ಕೆಲಸದ ನಿರ್ವಹಣೆ ಅಥವಾ ನಿಲುಗಡೆಯನ್ನು ಅಥವಾ ಯಾವುದೇ ಕಾರ್ಯ ಮಾಡುವುದನ್ನು ನಿರ್ದೇಶಿಸಬಹುದು ಮತ್ತು ಅಂಥ ಕೆಲಸದ ನಿರ್ವಹಣೆಯ ಅಥವಾ ಅಂಥ ಕಾರ್ಯವನ್ನು ಮಾಡುವುದರ ಬಗೆಗಿನ ವೆಚ್ಚಗಳನ್ನು ಮುನ್ಸಿಪಲ್ ನಿಧಿಯಿಂದ ಸಂದಾಯ ಮಾಡತಕ್ಕದ್ದೆಂದು ನಿರ್ದೇಶಿಸಬಹುದು:

ಪರಂತು,-

(ಎ) ಯಾವುದೇ ನಿರ್ದಿಷ್ಟ ಕೆಲಸದ ನಿರ್ವಹಣೆಯನ್ನು ಅಥವಾ ಯಾವುದೇ ನಿರ್ದಿಷ್ಟ ಕಾರ್ಯ ಮಾಡುವುದನ್ನು ನಿಷೇಧಿಸುವ ಮುನ್ಸಿಪಲ್ ಕೌನ್ಸಿಲ್‌ನ ಯಾವುದೇ ಆದೇಶವನ್ನು ಉಲ್ಲಂಘಿಸಿ ಈ ಪ್ರಕರಣದ ಮೇರೆಗೆ ಅವನು ಕಾರ್ಯನಿರ್ವಹಿಸತಕ್ಕದ್ದಲ್ಲ; ಮತ್ತು

(ಬಿ) ಅವನು ಪ್ರಕರಣದ ಮೇರೆಗೆ ಕೈಗೊಂಡ ಕ್ರಮವನ್ನು ಮತ್ತು ಅದಕ್ಕಾಗಿನ ಕಾರಣವನ್ನು ತತ್‌ಕ್ಷಣ ಸ್ಥಾಯೀ ಸಮಿತಿಗೆ ಅದರ ಮುಂದಿನ ಸಭೆಯಲ್ಲಿ ವರದಿ ಮಾಡತಕ್ಕದ್ದು.][1]

1.1966ರ ಅಧಿನಿಯಮ 34ರ ಮೂಲಕ 16.1.1967 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(3) ಅಧ್ಯಕ್ಷನು, ಕೆಳಕಂಡ ಹೆಚ್ಚಿನ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:-

(ಎ) ಕೌನ್ಸಿಲ್‌ನ ಅಥವಾ ಸ್ಥಾಯಿ ಸಮಿತಿಗಳ ನಿರ್ಣಯಗಳನ್ನು ಕಾರ್ಯಗತಗೊಳಿಸಲು [2][ಮುನ್ಸಿಪಲ್ ಕಮಿಷನರ್ ನು][2] ಅಥವಾ ಚೀಫ್ ಆಫೀಸರ್ ನಿಗೆ ನಿರ್ದೇಶನಗಳನ್ನು ಕೊಡುವುದು;

(ಬಿ) ಕೌನ್ಸಿಲ್‌ನ ಆಡಳಿತ ವರದಿ ಮತ್ತು ವಾರ್ಷಿಕ ವರದಿಯನ್ನು ವರ್ಷದ ಮುಕ್ತಾಯಕ್ಕೆ ಮುಂಚೆ ಸಿದ್ಧಪಡಿಸಲು ಮತ್ತು ಇಡಲು ಅಗತ್ಯಪಡಿಸುವುದು;

(ಸಿ) ಲೆಕ್ಕಪರಿಶೋಧನಾ ವರದಿಯಲ್ಲಿ ಎತ್ತಿ ತೋರಿಸಿದ ಅಂಶಗಳನ್ನು ಪಾಲಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನಗಳನ್ನು ಕೊಡುವುದು;

(ಡಿ) ಕೌನ್ಸಿಲ್ ಕೈಗೊಂಡ ಕಾಮಗಾರಿಗಳ ಪರಿಶೀಲನೆ ಮತ್ತು ಮೇಲ್ವಿಚಾರಣೆಯನ್ನು ಕೈಗೊಳ್ಳುವುದು;

(ಇ) ಯಾವುದೇ ದಾಖಲೆಯನ್ನು ತರಿಸಿಕೊಳ್ಳುವುದು, ಆದರೆ ಅದನ್ನು ಒಂದು ತಿಂಗಳ ಒಳಗಾಗಿ ಹಿಂದಿರುಗಿಸತಕ್ಕದ್ದು.

(4) ಅಧ್ಯಕ್ಷನು ಎಲ್ಲ ಸ್ಥಾಯೀ ಸಮಿತಿಗಳ ಪದನಿಮಿತ್ತ ಸದಸ್ಯನಾಗಿರತಕ್ಕದ್ದು, ಆದರೆ ಯಾವುದೇ ಪ್ರಶ್ನೆಯ ಮೇಲೆ ಮತ ನೀಡುವ ಅಧಿಕಾರವಿರತಕ್ಕದ್ದಲ್ಲ.

(5) [2][ಮುನ್ಸಿಪಲ್ ಕಮಿಷನರ್ ನು][2] ಅಥವಾ ಚೀಫ್ ಆಫೀಸರ್ ನು ಸರ್ಕಾರಕ್ಕೆ ಪತ್ರ ವ್ಯವಹಾರವನ್ನು ಮಾಡಿದಾಗಲೆಲ್ಲಾ ಅದೇ ಕಾಲದಲ್ಲಿ ಅವುಗಳ ಪ್ರತಿಗಳನ್ನು ಅಧ್ಯಕ್ಷನಿಗೆ ಕಳಿಹಿಸತಕ್ಕದ್ದು.][1]

1.1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2.1984ರ ಅಧಿನಿಯಮ 33ರ ಮೂಲಕ 26.6.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

44. ಉಪಾಧ್ಯಕ್ಷನ ಪ್ರಕಾರ್ಯಗಳು.- (1) ಈ ಬಗ್ಗೆ ಸರ್ಕಾರವು ಹೊರಡಿಸಿದ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೆ ಅನುಸಾರವಾಗಿ ಅಧ್ಯಕ್ಷನು ಅವನಿಗೆ ಕಾಲಕಾಲಕ್ಕೆ ವಹಿಸಿಕೊಡುವಂಥ ಅಧ್ಯಕ್ಷನ ಅಧಿಕಾರಗಳನ್ನು ಚಲಾಯಿಸುವುದು ಮತ್ತು ಅಂಥ ಕರ್ತವ್ಯಗಳನ್ನು ನೆರವೇರಿಸುವುದು ಮುನ್ಸಿಪಲ್ ಕೌನ್ಸಿಲ್‌ನ ಉಪಾಧ್ಯಕ್ಷನ ಕರ್ತವ್ಯವಾಗಿರತಕ್ಕದ್ದು.

(2) (ಎ) ಅಧ್ಯಕ್ಷನ ಗೈರು ಹಾಜರಿಯಲ್ಲಿ ಮತ್ತು ಯುಕ್ತ ಕಾರಣದಿಂದ ತಡೆಗಟ್ಟಲಾಗಿದ್ದ ಹೊರತು, ಮುನ್ಸಿಪಲ್ ಕೌನ್ಸಿಲ್‌ನ ಸಭೆಗಳಲ್ಲಿ ಅಧ್ಯಕ್ಷತೆ ವಹಿಸುವುದು ಮತ್ತು ಹಾಗೆ ಅಧ್ಯಕ್ಷತೆ ವಹಿಸುವಾಗ 43ನೇ ಪ್ರಕರಣದ (1)ನೇ ಉಪ-ಪ್ರಕರಣದ (ಎ) ಖಂಡದ ಮೇರೆಗೆ ಅಧ್ಯಕ್ಷನಲ್ಲಿ ನಿಹಿತವಾಗಿರುವಂಥದೇ ಅಧಿಕಾರವನ್ನು ಚಲಾಯಿಸುವುದು.

(ಬಿ) ಅಧ್ಯಕ್ಷನ ಉತ್ತರಾಧಿಕಾರ ನೇಮಕಾತಿ ಅಥವಾ ಚುನಾವಣೆ ಆಗುವವರೆಗೆ ಅಥವಾ [1][ಏಳು ದಿವಸಗಳಿಗೆ ಮೀರಿದ ಯಾವುದೇ ಅವಧಿಗೆ][1] ಅಧ್ಯಕ್ಷನ ಗೈರುಹಾಜರಿಯಲ್ಲಿ 2[XXX]2 ಅಧಿಕಾರಗಳನ್ನು ಚಲಾಯಿಸುವುದು ಮತ್ತು ಅಧ್ಯಕ್ಷನ ಕರ್ತವ್ಯಗಳನ್ನು ನೆರವೇರಿಸುವುದು,

- ಉಪಾಧ್ಯಕ್ಷನ ಕರ್ತವ್ಯವಾಗಿರತಕ್ಕದ್ದು.

1.1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2.1966ರ ಅಧಿನಿಯಮ 34ರ ಮೂಲಕ 16.1.1967 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][(3) ಉಪಾಧ್ಯಕ್ಷನು ಎಲ್ಲ ಸ್ಥಾಯೀ ಸಮಿತಿಗಳ ಪದನಿಮಿತ್ತ ಸದಸ್ಯನಾಗಿರತಕ್ಕದ್ದು. ಆದರೆ ಯಾವುದೇ ಪ್ರಶ್ನೆಯ ಮೇಲೆ ಮತ ನೀಡಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.][1]

1.1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

45. ಪ್ರತಿಯೊಬ್ಬ ಕೌನ್ಸಿಲರ್ ಮತ್ತು ಅಧ್ಯಕ್ಷನ ಹಕ್ಕುಗಳು ಹಾಗೂ ವಿಶೇಷಾಧಿಕಾರಗಳು.- (1) ಯಾರೇ ಕೌನ್ಸಿಲರ್ ನು ಮುನ್ಸಿಪಾಲಿಟಿ ಕೆಲಸದ ನಿರ್ವಹಣೆಯಲ್ಲಿ ಯಾವುದೇ ನಿರ್ಲಕ್ಷತೆಗೆ ಯಾವುದೇ ಮುನ್ಸಿಪಾಲಿಟಿ ಸ್ವತ್ತಿನ ಯಾವುದೇ ಪೋಲಾಗುವಿಕೆಗೆ ಅಥವಾ ಯಾವುದೇ ಸ್ಥಳದ ಅವಶ್ಯಕತೆಗಳಿಗೆ ಯುಕ್ತ ಪ್ರಾಧಿಕಾರದ ಗಮನವನ್ನು ಸೆಳೆಯಬಹುದು ಮತ್ತು ತಾನು ಅಪೇಕ್ಷಣೀಯವೆಂದು ಪರ್ಯಾಲೋಚಿಸುವಂಥ ಯಾವುದೇ ಮೇಲ್ಪಾಟುಗಳನ್ನು ಸೂಚಿಸಬಹುದು.

(2) ಪ್ರತಿಯೊಬ್ಬ ಕೌನ್ಸಿಲರ್ ನು ನಿಯಮಿಸಬಹುದಾದಂಥ ನಿಯಮಗಳಿಗೊಳಪಟ್ಟು ಪೌರ ಆಡಳಿತಕ್ಕೆ ಸಂಬಂಧಿಸಿದ ವಿಷಯಗಳ ಮೇಲೆ ಅಡ್ಡ ಪ್ರಶ್ನೆ ಕೇಳಲು ಮತ್ತು ನಿರ್ಣಯಗಳನ್ನು ಮಂಡಿಸಲು ಹಕ್ಕನ್ನು ಹೊಂದಿರತಕ್ಕದ್ದು.

[1][(2ಎ) ಪ್ರತಿಯೊಬ್ಬ ಕೌನ್ಸಿಲರ್ ನಿಗೆ [2][ಪೌರಾಡಳಿತ ನಿರ್ದೇಶಕನು][2] ಅಥವಾ ಚೀಫ್ ಆಫೀಸರನು ಮುಂದಿನ ಸಭೆಯ ನೋಟೀಸಿನೊಂದಿಗೆ ಸಭೆಗಳ ವ್ಯವಹರಣೆಗಳ ಪ್ರತಿಗಳನ್ನು ಒದಗಿಸತಕ್ಕದ್ದು.][1]

1.1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2.2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) ಪ್ರತಿಯೊಬ್ಬ ಕೌನ್ಸಿಲರ್ ನು, ಸಂದರ್ಭಾನುಸಾರ ಚೀಫ್ ಆಫೀಸರ್ ನು ಅಥವಾ ಮುನ್ಸಿಪಲ್ ಕಮಿಷನರ್ ನಿಗೆ ಯುಕ್ತ ನೋಟೀಸನ್ನು ಕೊಟ್ಟ ತರುವಾಯ ಮುನ್ಸಿಪಲ್ ಕೌನ್ಸಿಲ್ ನ ದಾಖಲೆಗಳನ್ನು ನೋಡುವ ಅವಕಾಶವನ್ನು ಹೊಂದಿರತಕ್ಕದ್ದು: ಪರಂತು ಚೀಫ್ ಆಫೀಸರ್ ನು ಅಥವಾ ಮುನ್ಸಿಪಲ್ ಕಮಿಷನರ್ ನು ಬರಹದಲ್ಲಿ ಕೊಟ್ಟ ಕಾರಣಗಳಿಗಾಗಿ ಅಂಥ ನೋಡುವ ಅವಕಾಶವನ್ನು ನಿಷೇಧಿಸಬಹುದು. ಕೌನ್ಸಿಲರ್ ನು ಚೀಫ್ ಆಫೀಸರ್ ನ ಅಥವಾ ಮುನ್ಸಿಪಲ್

ಕಮಿಷನರ್ ನ ಆದೇಶದ ಮೇಲೆ ಅಧ್ಯಕ್ಷನಿಗೆ ಅಪೀಲು ಮಾಡಬಹುದು; ಅವನ ತೀರ್ಮಾನವು ಅಂತಿಮವಾಗಿರತಕ್ಕದ್ದು.

(4) ಅಧ್ಯಕ್ಷನು ಮುನ್ಸಿಪಲ್ ಕೌನ್ಸಿಲ್‌ನ ಎಲ್ಲ ದಾಖಲೆಗಳನ್ನು ನೋಡುವ ಸಂಪೂರ್ಣ ಅವಕಾಶವನ್ನು ಹೊಂದಿರತಕ್ಕದ್ದು ಮತ್ತು ಚೀಫ್ ಆಫೀಸರ್ ನು ಅಥವಾ ಮುನಿಸಿಪಲ್ ಕಮಿಷನರ್ ನು ಪೌರ ಆಡಳಿತಕ್ಕೆ ಸಂಬಂಧಿಸಿದ ಯಾವುದೇ ಮಾಹಿತಿಗಾಗಿನ ಅಧ್ಯಕ್ಷನ ಯಾವುದೇ ಕಡ್ಡಾಯ ಕೋರಿಕೆಯನ್ನು ಅನುಚಿತ ವಿಳಂಬವಿಲ್ಲದೆ ಪಾಲಿಸತಕ್ಕದ್ದು. [1][ಅಧ್ಯಕ್ಷನು ಮುನ್ಸಿಪಲ್ ಕೌನ್ಸಿಲ್‌ನ [2][ಪೌರಾಡಳಿತ ನಿರ್ದೇಶಕ][2], ಚೀಫ್ ಆಫೀಸರ್ ಅಥವಾ ಇತರ ಯಾರೇ ಅಧಿಕಾರಿಯಿಂದ ತರಿಸಿಕೊಳ್ಳಬಹುದು. ಆದರೆ ಹಾಗೆ ತರಿಸಿಕೊಂಡ ಯಾವುದೇ ದಾಖಲೆಯನ್ನು ಒಂದು ತಿಂಗಳೊಳಗೆ ಹಿಂತಿರುಗಿಸತಕ್ಕದ್ದು.][1]

1.1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2.2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

46. ಹೊಸ ಅಧ್ಯಕ್ಷ ಅಥವಾ ಉಪಾಧ್ಯಕ್ಷನಿಗೆ ಪ್ರಭಾರ ವಹಿಸಿಕೊಡಲು ನಿರಾಕರಿಸುವುದಕ್ಕೆ ದಂಡನೆ.- (1) ಹೊಸ ಅಧ್ಯಕ್ಷ ಅಥವಾ ಉಪಾಧ್ಯಕ್ಷನ ಚುನಾವಣೆಯಾದ ಮೇಲೆ ಯಾವ ನಿವೃತ್ತನಾಗುವ ಅಧ್ಯಕ್ಷ ಅಥವಾ ಉಪಾಧ್ಯಕ್ಷನ ಸ್ಥಾನದಲ್ಲಿ ಹೊಸ ಅಧ್ಯಕ್ಷ ಅಥವಾ ಉಪಾಧ್ಯಕ್ಷನನ್ನು ಚುನಾಯಿಸಲಾಗಿದೆಯೋ ಆ ನಿವೃತ್ತನಾಗುವ ಅಧ್ಯಕ್ಷ ಅಥವಾ ಉಪಾಧ್ಯಕ್ಷನು ಮತ್ತು 42ನೇ ಪ್ರಕರಣದ (9) ಅಥವಾ (10)ನೇ ಉಪ-ಪ್ರಕರಣದ ಮೇರೆಗೆ ಅಧ್ಯಕ್ಷ ಅಥವಾ ಉಪಾಧ್ಯಕ್ಷನನ್ನು ತೆಗೆದುಹಾಕಿದ ಮೇಲೆ ಹಾಗೆ ತೆಗೆದುಹಾಕಲಾದ ಅಧ್ಯಕ್ಷ ಅಥವಾ ಉಪಾಧ್ಯಕ್ಷನು ಸಂದರ್ಭಾನುಸಾರ ಅಂಥ ಹೊಸ ಅಧ್ಯಕ್ಷ ಅಥವಾ ಉಪಾಧ್ಯಕ್ಷನಿಗೆ ತನ್ನ ಪದದ ಪ್ರಭಾರವನ್ನು ವಹಿಸಿಕೊಡತಕ್ಕದ್ದು.

(2) ನಿವೃತ್ತನಾಗುವ ಅಧ್ಯಕ್ಷ ಅಥವಾ ಉಪಾಧ್ಯಕ್ಷನು ಅಥವಾ 42ನೇ ಪ್ರಕರಣದ (9) ಅಥವಾ (10)ನೇ ಉಪ-ಪ್ರಕರಣದ ಮೇರೆಗೆ ತೆಗೆದುಹಾಕಲಾದ ಅಧ್ಯಕ್ಷ ಅಥವಾ ಉಪಾಧ್ಯಕ್ಷನು 368ನೇ ಪ್ರಕರಣದ (1)ನೇ ಉಪ-ಪ್ರಕರಣ ಅಥವಾ (3)ನೇ ಉಪ-ಪ್ರಕರಣದ ಮೇರೆಗೆ ಅಗತ್ಯಪಡಿಸಿದಂತೆ ತನ್ನ ಪದದ ಪ್ರಭಾರವನ್ನು ವಹಿಸಿಕೊಡಲು ತಪ್ಪಿದರೆ ಅಥವಾ ನಿರಾಕರಿಸಿದರೆ, ಆಗ ಸದರಿ ಉಪ-ಪ್ರಕರಣದ ಮೇರೆಗಿನ ಯಾವುದೇ ಕ್ರಮಕ್ಕೆ ಬಾಧಕವಾಗದಂತೆ ಸರ್ಕಾರ ಅಥವಾ ಈ ಬಗ್ಗೆ ಸರ್ಕಾರವು ಶಕ್ತಗೊಳಿಸಿದ ಯಾವುದೇ ಪ್ರಾಧಿಕಾರವು ಬರಹದಲ್ಲಿ ಆದೇಶದ ಮೂಲಕ ಸಂದರ್ಭಾನುಸಾರ ಅಧ್ಯಕ್ಷ ಅಥವಾ ಉಪಾಧ್ಯಕ್ಷನನ್ನು ತನ್ನ ಪದದ ಪ್ರಭಾರವನ್ನು ಅಧ್ಯಕ್ಷ ಅಥವಾ ಉಪಾಧ್ಯಕ್ಷನಾಗಿ ಅವನ ಸ್ವಾಧೀನದಲ್ಲಿ ಇರುವ ಮುನ್ಸಿಪಲ್ ಕೌನ್ಸಿಲ್‌ನ ಎಲ್ಲ ಕಾಗದ ಪತ್ರಗಳು ಮತ್ತು ಸ್ವತ್ತು ಯಾವುದಾದರೂ ಇದ್ದರೆ ಅವುಗಳನ್ನು ತಕ್ಷಣ ಹೊಸ ಅಧ್ಯಕ್ಷ ಅಥವಾ ಉಪಾಧ್ಯಕ್ಷನಿಗೆ ವಹಿಸಿಕೊಡಲು ನಿರ್ದೇಶಿಸಬಹುದು.

(3) (3)ನೇ ಉಪ-ಪ್ರಕರಣದ ಮೇರೆಗೆ ನಿರ್ದೇಶನವನ್ನು ಕೊಡಲಾಗಿರುವ ನಿವೃತ್ತನಾಗುವ ಅಧ್ಯಕ್ಷ ಅಥವಾ ಉಪಾಧ್ಯಕ್ಷನ ಅಥವಾ 42ನೇ ಪ್ರಕರಣದ (9) ಅಥವಾ (10)ನೇ ಉಪ-ಪ್ರಕರಣದ ಮೇರೆಗೆ ತೆಗೆದುಹಾಕಲಾದ ಅಧ್ಯಕ್ಷ ಅಥವಾ ಉಪಾಧ್ಯಕ್ಷನು ಅಂಥ ನಿರ್ದೇಶನವನ್ನು ಪಾಲಿಸದಿದ್ದರೆ ಅವನು ಒಂದು ತಿಂಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಸಾದಾ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವರೆಡರಿಂದಲೂ ದಂಡಿತನಾಗತಕ್ಕದ್ದು.

ಅಧ್ಯಾಯ-III
ಮುನ್ಸಿಪಲ್ ಕೌನ್ಸಿಲ್‌ನಿಂದ ಕಾರ್ಯನಿರ್ವಹಣೆ

47. ಸಭೆ.- (1) ಮುನ್ಸಿಪಲ್ ಕೌನ್ಸಿಲ್ ಕಾರ್ಯನಿರ್ವಹಣೆಗಾಗಿ ಪ್ರತಿ ತಿಂಗಳಿನಲ್ಲಿ ಕನಿಷ್ಠ ಪಕ್ಷ ಒಂದು ಸಭೆಯನ್ನು ನಡೆಸತಕ್ಕದ್ದು; [1][ಅದನ್ನು ಸಾಧಾರಣ ಸಾಮಾನ್ಯ ಸಭೆ ಎಂದು ಕರೆಯತಕ್ಕದ್ದು.][1]

1.1966ರ ಅಧಿನಿಯಮ 34ರ ಮೂಲಕ 16.1.1967 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) ಅಧ್ಯಕ್ಷನು ಅವನು ಸೂಕ್ತವೆಂದು ಭಾವಿಸಿದಾಗಲೆಲ್ಲಾ ವಿಶೇಷ ಸಾಮಾನ್ಯ ಸಭೆಯನ್ನು ಕರೆಯಬಹುದು ಮತ್ತು ಕೌನ್ಸಿಲರ್ ಗಳ ಒಟ್ಟು ಸಂಖ್ಯೆಯ ಮೂರನೇ ಒಂದಕ್ಕೆ ಕಡಿಮೆಯಿಲ್ಲದವರ

ಬರಹದಲ್ಲಿನ ಕೋರಿಕೆಯ ಮೇಲೆ ಮತ್ತು ಅಂಥ ಕೋರಿಕೆಯನ್ನು ಸಲ್ಲಿಸಿದ ತರುವಾಯ 15 ದಿವಸಗಳಿಗೆ ಮೀರದ ದಿನಾಂಕದಂದು ಒಂದು ವಿಶೇಷ ಸಾಮಾನ್ಯ ಸಭೆಯನ್ನು ಕರೆಯತಕ್ಕದ್ದು.

(3) ಉಪ-ಪ್ರಕರಣ (2) ರಲ್ಲಿ ಉಪಬಂಧಿಸಿದಂತೆ ಅಧ್ಯಕ್ಷನು ವಿಶೇಷ ಸಾಮಾನ್ಯ ಸಭೆಯನ್ನು ಕರೆಯಲು ತಪ್ಪಿದರೆ, ಉಪಾಧ್ಯಕ್ಷ ಅಥವಾ ಕೌನ್ಸಿಲರುಗಳ ಒಟ್ಟು ಸಂಖ್ಯೆಯ ಮೂರನೇ ಒಂದರಷ್ಟಿನವರು ಕೌನ್ಸಿಲರ್ ಗಳು ಅಂಥ ಕೋರಿಕೆಯನ್ನು ಸಲ್ಲಿಸಿದ ತರುವಾಯ ಮೂವತ್ತು ದಿನಗಳಿಗೆ ಮೀರದ ದಿನದಂದು ಅಂಥ ಸಭೆಯನ್ನು ಕರೆಯಬಹುದು ಮತ್ತು ಚೀಫ್ ಆಫೀಸರ್ ಅಥವಾ ಮುನ್ಸಿಪಲ್ ಕಮೀಷನರ್ ನನ್ನು ಕೌನ್ಸಿಲರ್ ಗಳಿಗೆ ನೋಟೀಸನ್ನು ಕೊಡಲು ಹಾಗೂ ಸಭೆಯನ್ನು ಕರೆಯಲು ಅವಶ್ಯವಾಗಬಹುದಾದಂಥ ಕ್ರಮವನ್ನು ಕೈಗೊಳ್ಳಲು ಅಗತ್ಯಪಡಿಸಬಹುದು.

(4) ಯಾವುದೇ ಸಭೆಯನ್ನು ಮುಂದಿನ ಅಥವಾ ಯಾವುದೇ ತರುವಾಯದ ದಿನಾಂಕದವರೆಗೆ ಮುಂದೂಡಬಹುದು ಮತ್ತು ಮುಂದೂಡಲಾದ ಸಭೆಯನ್ನು ಅದೇ ರೀತಿಯಲ್ಲಿ ಮತ್ತೆ ಮುಂದೂಡಬಹುದು.

[1][47ಎ XXX][1]

1. 1984ರ ಅಧಿನಿಯಮ 33ರ ಮೂಲಕ 26.6.1984 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ ಮತ್ತು 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

48. ಸಭೆಯ ನೋಟೀಸ್ ಮತ್ತು ವ್ಯವಹಾರ.- ಸಾಮಾನ್ಯ ಸಾಧಾರಣ ಸಭೆಯ ಏಳು ದಿನಗಳ ಸ್ಪಷ್ಟ ನೋಟೀಸನ್ನು ಮತ್ತು ವಿಶೇಷ ಸಾಧಾರಣ ಸಭೆಯ ಮೂರು ದಿನಗಳ ಸ್ಪಷ್ಟ ನೋಟೀಸನ್ನು ಅಥವಾ ಅತಿ ಜರೂರು ಸಂದರ್ಭದಲ್ಲಿ, ಯುಕ್ತವಾದಂಥ ಕಡಿಮೆ ಅವಧಿಯ ನೋಟೀಸನ್ನು, ಅಂಥ ಸಭೆಯು ನಡೆಯಬೇಕಾಗಿರುವ ಕಾಲ ಮತ್ತು ಸ್ಥಳವನ್ನು, ಮತ್ತು ಅದರಲ್ಲಿ ನಡೆಸಬೇಕಾದ ವ್ಯವಹಾರವನ್ನು ನಿರ್ದಿಷ್ಟಪಡಿಸಿ, ಚೀಫ್ ಆಫೀಸರ್ ಅಥವಾ ಮುನ್ಸಿಪಲ್ ಕಮಿಷನರ್ ನು ಅದನ್ನು ಕೌನ್ಸಿಲರ್ ಗಳಿಗೆ ಕೊಡತಕ್ಕದ್ದು ಮತ್ತು ಮುನ್ಸಿಪಾಲಿಟಿ ಕಚೇರಿಯಲ್ಲಿ ಅದನ್ನು ಹಾಕತಕ್ಕದ್ದು. ಸದರಿ ನೋಟೀಸು ಅಲ್ಲಿ ಮುಂದಿಡಲು ತಾನು ಉದ್ದೇಶಿಸಿದ, ಸಭೆಗೆ ಮುಂಚೆ ಹತ್ತು ದಿನಗಳಿಗೆ ಕಡಿಮೆಯಿಲ್ಲದ, ಬರಹದಲ್ಲಿನ ನೋಟೀಸನ್ನು, ಕೊಟ್ಟಿರುವ ಯಾವುದೇ ಸೂಚನೆ ಅಥವಾ ಪ್ರಸ್ತಾವವನ್ನು ಮತ್ತು ವಿಶೇಷ ಸಾಮಾನ್ಯ ಸಭೆಯ ಸಂದರ್ಭದಲ್ಲಿ ಅಂಥ ಸಭೆಗಾಗಿ ಬರಹದಲ್ಲಿ ಮಾಡಿದ ಯಾವುದೇ ಕೋರಿಕೆಯಲ್ಲಿ ನಮೂದಿಸಿದ ಯಾವುದೇ ಸೂಚನೆ ಅಥವಾ ಪ್ರಸ್ತಾವವನ್ನು ಒಳಗೊಳ್ಳತಕ್ಕದ್ದು:

ಪರಂತು, ಯಾವ ಸೂಚನೆ ಅಥವಾ ಪ್ರಸ್ತಾವಕ್ಕೆ ಸಂಬಂಧಿಸಿದಂತೆ ನೋಟೀಸನ್ನು ಕೊಡಲಾಗಿದೆಯೋ ಆ ಸೂಚನೆ ಅಥವಾ ಪ್ರಸ್ತಾವವು, ಮುನ್ಸಿಪಾಲಿಟಿ ಆಡಳಿತಕ್ಕೆ ಸಂಬಂಧಿಸಿದ ವಿಷಯಗಳಿಗೆ ಸಂಬಂಧಪಟ್ಟಿರತಕ್ಕದ್ದು ಮತ್ತು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರತಕ್ಕದ್ದಲ್ಲ.

49. ಸಭೆಗಳನ್ನು ನಡೆಸುವ ಸ್ಥಳ ಮತ್ತು ಅಲ್ಲಿ ಸುವ್ಯವಸ್ಥೆಯ ಪಾಲನೆ.- (1) ಆ ಮುನ್ಸಿಪಲ್ ಕೌನ್ಸಿಲ್‌ನ ಪ್ರತಿಯೊಂದು ಸಭೆಯನ್ನು, ಆ ಸಭೆಯನ್ನು ಕರೆಯುವ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬೇಕಾದ ಕಾರಣಗಳಿಗಾಗಿ ಹೊರತು, ಅಂಥ ಮುನ್ಸಿಪಲ್ ಕೌನ್ಸಿಲ್ಮುನ್ಸಿಪಲ್ ಕಛೇರಿಯಾಗಿ ಉಪಯೋಗಿಸುತ್ತಿರುವ ಕಟ್ಟಡದಲ್ಲಿ ನಡೆಸತಕ್ಕದ್ದು.

(2) ಅಧ್ಯಕ್ಷ ಅಥವಾ ಸಭೆಯ ಅಧ್ಯಕ್ಷತೆಯನ್ನು ವಹಿಸಿರುವ ವ್ಯಕ್ತಿಯು ಅಲ್ಲಿ ಸುವ್ಯವಸ್ಥೆಯನ್ನು ಕಾಪಾಡತಕ್ಕದ್ದು ಮತ್ತು ಅಂಥ ಸುವ್ಯವಸ್ಥೆಯನ್ನು ಕಾಪಾಡುವ ಉದ್ದೇಶಕ್ಕಾಗಿ ಅವಶ್ಯವಾದ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು.

(3) ಅಧ್ಯಕ್ಷ ಅಥವಾ ಸಭೆಯ ಅಧ್ಯಕ್ಷತೆಯನ್ನು ವಹಿಸಿರುವ ವ್ಯಕ್ತಿಯು ಅವನ ಅಭಿಪ್ರಾಯದಲ್ಲಿ ಯಾವ ಕೌನ್ಸಿಲರ್ ನ ವರ್ತನೆಯು ಅವ್ಯವಸ್ಥಿತವೆಂದು ತೋರುವುದೋ ಆ ಯಾರೇ ಕೌನ್ಸಿಲರ್ ನನ್ನು ಸಭೆಯಿಂದ ಕೂಡಲೇ ಹಿಂತೆಗೆಯುವಂತೆ ನಿರ್ದೇಶಿಸಬಹುದು. ಹಾಗೆ ಹಿಂತೆಗೆಯಲು ನಿರ್ದೇಶಿಸಲಾದ ಯಾರೇ ಕೌನ್ಸಿಲರ್ ನು ತತ್‌ಕ್ಷಣವೇ ಹಾಗೆ ಮಾಡತಕ್ಕದ್ದು ಮತ್ತು ಅವನು ಸಭೆಯ ಉಳಿದ ಅವಧಿಯಲ್ಲಿ ಗೈರು ಹಾಜರಾಗತಕ್ಕದ್ದು.

(4) ಉಪ-ಪ್ರಕರಣ (5) ಕ್ಕೊಳಪಟ್ಟು ಸಭೆಯಲ್ಲಿ ಹಾಜರಿರುವ ಬಹುಸಂಖ್ಯೆಯ ಸದಸ್ಯರು ಮುನ್ಸಿಪಲ್ ಕೌನ್ಸಿಲ್‌ನ ಮುಂದೆ ಇತ್ಯರ್ಥದಲ್ಲಿರುವ ಯಾವುದೇ ವಿಚಾರಣೆ ಅಥವಾ ಚರ್ಚೆಯು

ಗುಟ್ಟಾಗಿ ನಡೆಯತಕ್ಕದ್ದೆಂದು ತೀರ್ಮಾನಿಸಿದ ಹೊರತು ಪ್ರತಿಯೊಂದು ಸಭೆಯು ಸಾರ್ವಜನಿಕರಿಗೆ ಮುಕ್ತವಾಗಿರತಕ್ಕದ್ದು.

(5) ಸರ್ಕಾರವು, 323ನೇ ಪ್ರಕರಣದ (2)ನೇ ಉಪ-ಪ್ರಕರಣದ (ಕ) ಖಂಡದ ಮೇರೆಗೆ ಮುನ್ಸಿಪಲ್ ಕೌನಿಲ್‌ನ ಸಭೆಗಳಿಗೆ ಸಾರ್ವಜನಿಕರನ್ನು ಸೇರಿಸಿಕೊಳ್ಳುವ ಉದ್ದೇಶಕ್ಕಾಗಿ ಮತ್ತು ಹಾಗೆ ಪ್ರವೇಶ ಪಡೆದ ಯಾರೇ ಸಾರ್ವಜನಿಕನನ್ನು ಅವನು ಸಭೆಯ ನಡವಳಿಕೆಗಳಿಗೆ ಅಡ್ಡಿಪಡಿಸುವನೆಂದು ಅಥವಾ ತೊಂದರೆ ಉಂಟು ಮಾಡುತ್ತಿರುವನೆಂದು ಕಂಡುಬಂದರೆ, ಅವಶ್ಯವಾದರೆ ಬಲಪ್ರಯೋಗದ ಮೂಲಕ ಹೊರ ಹಾಕುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(6) 56ನೇ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ ಸಭೆಯಲ್ಲಿ ಗಂಭೀರ ಅವ್ಯವಸ್ಥೆ ಉದ್ಭವಿಸಿದ ಸಂದರ್ಭದಲ್ಲಿ ಅಧ್ಯಕ್ಷ ಅಥವಾ ಅಧ್ಯಕ್ಷತೆ ವಹಿಸಿರುವ ವ್ಯಕ್ತಿಯು ಹಾಗೆ ಮಾಡುವುದು ಅವಶ್ಯಕವೆಂದು ಅವನು ಯೋಚಿಸಿದ್ದರೆ ಅವನು ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ಸಭೆಯನ್ನು ಮುಂದೂಡಬಹುದು.

50. ಕೋರಂ.- ಸಭೆಯಲ್ಲಿ ಅದರ ಪ್ರಾರಂಭದಿಂದ ಕೊನೆಯವರೆಗೂ ಯಾವುದೇ ಕಾಲದಲ್ಲಿ ಕೌನ್ಸಿಲರ್ ಗಳ ಒಟ್ಟು ಸಂಖ್ಯೆಯ ಮೂರನೇ ಒಂದಕ್ಕಿಂತ ಕಡಿಮೆ ಕೌನ್ಸಿಲರ್ ಗಳು ಹಾಜರಿದ್ದರೆ, ಅಧ್ಯಕ್ಷತೆ ವಹಿಸಿರುವ ಪ್ರಾಧಿಕಾರಿಯು ಮೂವತ್ತು ನಿಮಿಷಗಳವರೆಗೆ ಕಾದ ನಂತರ ಅವನು ಯುಕ್ತವಾಗಿ ನಿಗದಿಪಡಿಸಬಹುದಾದಂಥ ವೇಳೆಗೆ ಮೂರನೆಯ ಅಥವಾ ಮುಂದಿನ ಯಾವುದೇ ಇತರ ದಿನಕ್ಕೆ ಮುಂದೂಡತಕ್ಕದ್ದು ಮತ್ತು ಅಂಥ ಮುಂದೂಡುವಿಕೆಯ ನೋಟೀಸನ್ನು ಮುನ್ಸಿಪಾಲಿಟಿ ಕಛೇರಿಯಲ್ಲಿ ಅಂಟಿಸತಕ್ಕದ್ದು, ಮತ್ತು ಯಾವ ವ್ಯವಹಾರವನ್ನು ಮೂಲ ಸಭೆಯ ಮುಂದೆ ಅದರಲ್ಲಿ ಕೋರಂ ಇದಿದ್ದರೆ ತರಬೇಕಾಗಿತ್ತೋ ಆ ವ್ಯವಹಾರವನ್ನು ಮುಂದೂಡಿದ ಸಭೆಯ ಮುಂದೆ ತರತಕ್ಕದ್ದು ಮತ್ತು ಅಂಥ ಸಭೆಯಲ್ಲಿ ಅದನ್ನು ವಿಲೆ ಮಾಡಬಹುದು: ಪರಂತು ಕೌನ್ಸಿಲರ್ ಗಳಒಟ್ಟು ಸಂಖ್ಯೆಯ ನಾಲ್ಕನೆಯ ಒಂದಕ್ಕಿಂತ ಕಡಿಮೆ ಇಲ್ಲದ ಕೌನ್ಸಿಲರ್ ಗಳು ಹಾಜರಿರತಕ್ಕದ್ದು:

[1][ಪರಂತು, ಅಧ್ಯಕ್ಷ ಅಥವಾ ಉಪಾಧ್ಯಕ್ಷರ ಚುನಾವಣೆಯ ಉದ್ದೇಶಕ್ಕಾಗಿ ಕರೆಯಲಾದ ಯಾವುದೇ ಸಭೆಯನ್ನು, ಕೋರಂನ ಅಭಾವದಿಂದಾಗಿ ಮುಂಬರುವ ದಿನಕ್ಕೆ ಅಥವಾ ಮುಂದಿನ ದಿನಕ್ಕೆ ಮುಂದೂಡಿದರೆ, ಅಂಥ ಮುಂದೂಡಲಾದ ಸಭೆಗೆ ಕೋರಂ ಹೊಂದಲು ಅವಶ್ಯಕವಾಗಿರತಕ್ಕದ್ದಲ್ಲ.][1]

1. 2003ರ ಅಧಿನಿಯಮ 23ರ ಮೂಲಕ 10.11.2003 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

51. ಅಧ್ಯಕ್ಷಾಧಿಕಾರಿ.- (1) ಮುನ್ಸಿಪಲ್ ಕೌನ್ಸಿಲ್‌ನ ಪ್ರತಿಯೊಂದು ಸಭೆಯಲ್ಲಿ ಅಧ್ಯಕ್ಷ ಅಥವಾ ಅವನ ಗೈರು ಹಾಜರಿಯಲ್ಲಿ ಉಪಾಧ್ಯಕ್ಷನು ಅಧ್ಯಕ್ಷತೆ ವಹಿಸತಕ್ಕದ್ದು.

(2) ಸಭೆಯಿಂದ ಅಧ್ಯಕ್ಷ ಮತ್ತು ಉಪಾಧ್ಯಕ್ಷರಿಬ್ಬರ ಗೈರು ಹಾಜರಿಯಲ್ಲಿ ಹಾಜರಿರುವ ಸದಸ್ಯರುಗಳು ತಮ್ಮ ಪೈಕಿ ಒಬ್ಬನನ್ನು ಅಧ್ಯಕ್ಷತೆ ವಹಿಸಲು ಚುನಾಯಿಸತಕ್ಕದ್ದು.

(3) ಅಧ್ಯಕ್ಷ ಅಥವಾ ಸಭೆಯ ಅಧ್ಯಕ್ಷತೆಯನ್ನು ವಹಿಸುವ ವ್ಯಕ್ತಿಯು ಸಮಾನ ಮತಗಳ ಎಲ್ಲಾ ಸಂದರ್ಭಗಳಲ್ಲಿ ದ್ವಿತೀಯ ಅಥವಾ ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು ಮತ್ತು ಚಲಾಯಿಸತಕ್ಕದ್ದು.

[1][(4) ಹಿಂದೆ ಹೇಳಿರುವ ಉಪ-ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಮುನಿಸಿಪಲ್ ಕೌನ್ಸಿಲ್‌ನ ಯಾವುದೇ ಸಭೆಯಲ್ಲಿ, ಅಧ್ಯಕ್ಷನ ವಿಶ್ವಾಸದ ಕೊರತೆಯನ್ನು ವ್ಯಕ್ತಪಡಿಸುವ ಯಾವುದೇ ನಿರ್ಣಯವು ಪರ್ಯಾಲೋಚನೆಯಲ್ಲಿರುವಾಗ ಅಧ್ಯಕ್ಷನು ಹಾಜರಿದ್ದರೂ ಅವನು, ಅಥವಾ ಉಪಾಧ್ಯಕ್ಷನ ವಿಶ್ವಾಸದ ಕೊರತೆಯನ್ನು ವ್ಯಕ್ತಪಡಿಸುವ ಯಾವುದೇ ನಿರ್ಣಯವು ಪರ್ಯಾಲೋಚನೆಯಲ್ಲಿರುವಾಗ ಉಪಾಧ್ಯಕ್ಷನು ಹಾಜರಿದ್ದರೂ ಅವನು ಅಧ್ಯಕ್ಷತೆ ವಹಿಸತಕ್ಕದ್ದಲ್ಲ. ಆದರೆ, ಯಾವುದೇ ಅಂಥ ನಿರ್ಣಯವು ಪರ್ಯಾಲೋಚನೆಯಲ್ಲಿರುವಾಗ ಮುನ್ಸಿಪಲ್ ಕೌನ್ಸಿಲ್‌ನಲ್ಲಿ ಮಾತನಾಡುವ ಹಾಗೂ ಅನ್ಯಥಾ ಪಾಲ್ಗೊಳ್ಳುವ ಹಕ್ಕನ್ನು ಹೊಂದಿರತಕ್ಕದ್ದು. (2)ನೇ ಉಪ-ಪ್ರಕರಣದ ಉಪಬಂಧಗಳನ್ನು, ಅಂಥ ಸಭೆಯಲ್ಲಿ ಅಗತ್ಯ ಬದಲಾವಣೆಗಳೊಂದಿಗೆ ಅನ್ವಯಿಸತಕ್ಕದ್ದು.][1]

1. 1984ರ ಅಧಿನಿಯಮ 33ರ ಮೂಲಕ 10.11.2003 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

52. ಪ್ರಶ್ನೆಗಳನ್ನು ತೀರ್ಮಾನಿಸುವ ವಿಧಾನ.- (1) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದ್ದ ಹೊರತು ಮುನ್ಸಿಪಲ್ ಕೌನ್ಸಿಲ್ ತೀರ್ಮಾನಿಸಬೇಕೆಂದು ಅಗತ್ಯಪಡಿಸಿದ ಎಲ್ಲಾ ವಿಷಯಗಳನ್ನು ಹಾಜರಿದ್ದು ಮತ ಚಲಾಯಿಸುವ ಸದಸ್ಯರ ಬಹುಮತದಿಂದ ತೀರ್ಮಾನಿಸತಕ್ಕದ್ದು.

(2) ಮತದಾನವು ಕೈ ಎತ್ತುವುದರ ಮೂಲಕ ಇರತಕ್ಕದ್ದು. ಆದರೆ ಮುನ್ಸಿಪಲ್ ಕೌನ್ಸಿಲ್ 323ನೇ ಪ್ರಕರಣದ (2)ನೇ ಉಪ-ಪ್ರಕರಣದ (ಎ) ಖಂಡದ ಮೇರೆಗೆ ರಚಿಸಬಹುದಾದಂಥ ನಿಯಮಗಳಿಗೊಳಪಟ್ಟು ಯಾವುದೇ ಪ್ರಶ್ನೆ ಅಥವಾ ಪ್ರಶ್ನೆಗಳ ವರ್ಗವನ್ನು ಮತಚೀಟಿಯ ಮೂಲಕ ತೀರ್ಮಾನಿಸತಕ್ಕದ್ದೆಂದು ನಿರ್ಣಯಿಸಬಹುದು.

(3) ಯಾವುದೇ ಸಭೆಯಲ್ಲಿ ಕನಿಷ್ಠಪಕ್ಷ ನಾಲ್ಕಾರು ಸದಸ್ಯರು ಮತದಾನವಾಗಬೇಕೆಂದು ತಗಾದೆ ಮಾಡಿದ ಹೊರತು ಅಂಥ ಸಭೆಯಲ್ಲಿ ನಿರ್ಣಯವನ್ನು ಅಂಗೀಕೃತವಾಗಿದೆ ಅಥವಾ ಹೋಗಿದೆ ಎಂದು ಅಧ್ಯಕ್ಷ ಅಧಿಕಾರಿಯ ಘೋಷಣೆ ಮತ್ತು ಅದಕ್ಕಾಗಿ ವ್ಯವಹರಣೆಗಳ ನಡವಳಿಕೆಯಲ್ಲಿನ ನಮೂದು, ಈ ಅಧಿನಿಯಮದ ಉದ್ದೇಶಗಳಿಗಾಗಿ ಅಂಥ ನಿರ್ಣಯದ ಪರವಾಗಿ ಅಥವಾ ವಿರುದ್ಧವಾಗಿ ದಾಖಲಾದಂಥ ಮತಗಳ ಸಂಖ್ಯೆ ಅಥವಾ ಪ್ರಮಾಣದ ರುಜುವಾತು ಇಲ್ಲದೆ ಅದು ಸಂಗತಿಯ ನಿರ್ಣಯ ಸಾಕ್ಷ್ಯವಾಗಿರತಕ್ಕದ್ದು.

(4) ಹಿಂದೆ ಹೇಳಿದಂತೆ ಮತದಾನವನ್ನು ತಗಾದೆ ಮಾಡಿದರೆ ಮತದಾನ ಮಾಡಲು ಇಚ್ಛಿಸುವ ಹಾಜರಿರುವ ಎಲ್ಲಾ ಸದಸ್ಯರ ಮತಗಳನ್ನು ಸಭೆಯಲ್ಲಿ ಅಧ್ಯಕ್ಷಾಧಿಕಾರಿಯ ನಿರ್ದೇಶನದ ಮೇರೆಗೆ ತೆಗೆದುಕೊಳ್ಳತಕ್ಕದ್ದು ಮತ್ತು ಮತದಾನದ ಫಲಿತಾಂಶವನ್ನು ಅಂಥ ಸಭೆಯಲ್ಲಿ ಮುನ್ಸಿಪಲ್ ಕೌನ್ಸಿಲ್‌ನ ನಿರ್ಣಯವೆಂದು ಭಾವಿಸತಕ್ಕದ್ದು.

53. ಸಭೆಗಳಲ್ಲಿ ನಡೆಸಬೇಕಾದ ವ್ಯವಹಾರ ಮತ್ತು ವ್ಯವಹಾರಗಳ ಕ್ರಮಾನುಗತವನ್ನು ಹೇಗೆ ಇತ್ಯರ್ಥಪಡಿಸತಕ್ಕದ್ದು.- (1) 59ನೇ ಪ್ರಕರಣದ (2)ನೇ ಉಪ-ಪ್ರಕರಣದ ಪರಂತುಕದಲ್ಲಿ ಉಪಬಂಧಿಸಿರುವಂತೆ ಹೊರತು, ಸಾಮಾನ್ಯ ಸಭೆಯಲ್ಲಿ, ಅಂಥ ಸಭೆಯನ್ನು ಕರೆಯುವ ನೋಟೀಸಿನಲ್ಲಿ ಅಥವಾ ವಿಶೇಷ ಸಾಮಾನ್ಯ ಸಭೆಯ ಸಂದರ್ಭದಲ್ಲಿ ಅಂಥ ಸಭೆಗಾಗಿ ಬರಹದಲ್ಲಿನ ಕೋರಿಕೆಯಲ್ಲಿ ಅದನ್ನು ನಮೂದಿಸಿರುವ ಹೊರತು ಯಾವುದೇ ವ್ಯವಹಾರವನ್ನು ನಡೆಸತಕ್ಕದ್ದಲ್ಲ ಮತ್ತು ಯಾವುದೇ ಪ್ರಸ್ತಾವವನ್ನು ಚರ್ಚಿಸತಕ್ಕದ್ದಲ್ಲ.

(2) ಯಾವ ಕ್ರಮದಲ್ಲಿ ಯಾವುದೇ ವ್ಯವಹಾರ ಅಥವಾ ಪ್ರಸ್ತಾವವನ್ನು ಅಂಥ ಸಭೆಯಲ್ಲಿ ತರತಕ್ಕದ್ದೋ ಆ ಯಾವುದೇ ಕ್ರಮವನ್ನು ಅಧ್ಯಕ್ಷತೆ ವಹಿಸಿರುವ ಪ್ರಾಧಿಕಾರಿಯು ನಿರ್ಧರಿಸತಕ್ಕದ್ದು, ಅವನು ಅಂಥ ವ್ಯವಹಾರದ ನಿರ್ದಿಷ್ಟ ಬಾಬಿಗೆ ಅಥವಾ ಯಾವುದೇ ನಿರ್ದಿಷ್ಟ ಪ್ರಸ್ತಾವಕ್ಕೆ ಆದ್ಯತೆಯನ್ನು ಕೊಡಲು ಯಾರೇ ಸದಸ್ಯನು ಪ್ರಸ್ತಾವಿಸಿದ ಸಂದರ್ಭದಲ್ಲಿ, ಆ ಪ್ರಸ್ತಾವವನ್ನು ಸಭೆಯ ಮುಂದಿಡತಕ್ಕದ್ದು ಮತ್ತು ಪ್ರಸ್ತಾವದ ಪರವಾಗಿ ಅಥವಾ ವಿರುದ್ಧವಾಗಿ ಕೊಡಲಾದ ಮತಗಳ ಬಹುಮತದ ಮೂಲಕ ಮಾರ್ಗದರ್ಶನ ಪಡೆಯತಕ್ಕದ್ದು:

ಪರಂತು, ಅಡ್ಡ ಪ್ರಶ್ನೆಗಳ ಉತ್ತರಗಳಿಗೆ ಆದ್ಯತೆ ಕೊಡತಕ್ಕದ್ದು ಮತ್ತು ಸದರಿ ಉದ್ದೇಶಕ್ಕಾಗಿ ಅರ್ಧ ಗಂಟೆಗಿಂತ ಹೆಚ್ಚು ಕಾಲವನ್ನು ಕೊಡತಕ್ಕದ್ದಲ್ಲ.

54. ವ್ಯವಹರಣೆಗಳ ನಡವಳಿಕೆಗಳು.- ಹಾಜರಿದ್ದ ಕೌನ್ಸಿಲರ್ ಗಳ ಹೆಸರುಗಳು ಮತ್ತು ಸರ್ಕಾರದ ಅಧಿಕಾರಿಗಳು ಯಾರಾದರೂ ಇದ್ದರೆ ಅವರ ಹೆಸರುಗಳು ಮತ್ತು ಪ್ರತಿಯೊಂದು ಸಭೆಯಲ್ಲಿನ ವ್ಯವಹರಣೆಗಳ ನಡವಳಿಕೆಯನ್ನು ಮತ್ತು ಮುನ್ಸಿಪಲ್ ಕೌನ್ಸಿಲ್ ಹಾಗೆ ನಿರ್ಣಯಿಸಿದರೆ ಕನ್ನಡಕ್ಕೆ ಬದಲಾಗಿ ಅಥವಾ ಕನ್ನಡದ ಜೊತೆಯಲ್ಲಿ ಇಂಗ್ಲಿಷ್ ನಲ್ಲಿ ಆ ಉದ್ದೇಶಕ್ಕಾಗಿ ಒದಗಿಸಲಾದ ಪುಸ್ತಕದಲ್ಲಿ ಇಡತಕ್ಕದ್ದು, ಅದಕ್ಕೆ ಅಂಥ ಸಭೆಯ ಅಧ್ಯಕ್ಷತೆ ವಹಿಸಿರುವ ಪ್ರಾಧಿಕಾರಿಯು ರುಜು ಮಾಡತಕ್ಕದ್ದು ಮತ್ತು ಅದು ಎಲ್ಲ ಯುಕ್ತ ಕಾಲಗಳಲ್ಲಿ ಯಾರೇ ಕೌನ್ಸಿಲರ್ ನ ಮತ್ತು ಇತರ ಯಾರೇ ವ್ಯಕ್ತಿಯು ಇಪ್ಪತ್ತು ಪೈಸೆ ಫೀಜನ್ನು ಸಂದಾಯ ಮಾಡಿದ ಮೇಲೆ ಪರಿಶೀಲಿಸಲು ಅದು ಮುಕ್ತವಾಗಿರತಕ್ಕದ್ದು, ಯಾರೇ ಇತರ ವ್ಯಕ್ತಿಯು ಎಲ್ಲಾ ಯುಕ್ತ ಕಾಲಗಳಲ್ಲಿ ಅದನ್ನು ಪರಿಶೀಲನೆ ಮಾಡಲು ಮುಕ್ತವಾಗತಕ್ಕದ್ದು.

55. ಕೌನ್ಸಿಲರ್ ಗಳು ತಾವು ಹಿತಾಸಕ್ತಿ ಹೊಂದಿರುವಂಥ ವಿಷಯಗಳ ಮೇಲೆ ಮತ ನೀಡತಕ್ಕದ್ದಲ್ಲ.- (1) ಯಾರೇ ಕೌನ್ಸಿಲರ್ ನು ಮುನ್ಸಿಪಲ್ ಕೌನ್ಸಿಲ್‌ನ ಅಥವಾ ಅದರ ಯಾವುದೇ ಸಮಿತಿಯ ಸಭೆಯಲ್ಲಿ ಅವನ ಸ್ವಂತ ನಡವಳಿಕೆಗೆ ಸಂಬಂಧಪಟ್ಟ ಯಾವುದೇ ಪ್ರಶ್ನೆಯ ಮೇಲೆ ಮತ ಚಲಾಯಿಸತಕ್ಕದ್ದಲ್ಲ ಅಥವಾ ಅವನ ಹಣಕಾಸು ಹಿತಾಸಕ್ತಿಗೆ ಅಥವಾ ಅವನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಹಿತಾಸಕ್ತಿ ಹೊಂದಿರುವ ಯಾವುದೇ ಸ್ವತ್ತಿಗೆ ಅಥವಾ ಅವನು ವ್ಯವಸ್ಥಾಪಕ ಅಥವಾ ಏಜೆಂಟ್ ಆಗಿರುವ ಯಾವುದೇ ಸ್ವತ್ತಿನ ಅಥವಾ ಸ್ವತ್ತಿಗೆ ಸಂಬಂಧಿಸಿದಂತೆ (ಪಟ್ಟಣ ಅಥವಾ ನಗರದ ಅಥವಾ ಯಾವುದೇ ನಿರ್ದಿಷ್ಟ [1][ವಾರ್ಡ್][1] ನ ನಿವಾಸಿಗಳನ್ನು ಸಾಮಾನ್ಯವಾಗಿ ಬಾಧಿಸುವ

ವಿಷಯವನ್ನು ಹೊರತುಪಡಿಸಿ) ಯಾವುದೇ ವಿಷಯದ ಮೇಲೆ ಮತ ನೀಡತಕ್ಕದ್ದಲ್ಲ ಅಥವಾ ಚರ್ಚೆಯಲ್ಲಿ ಭಾಗವಹಿಸತಕ್ಕದ್ದಲ್ಲ.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಸಭೆಯಲ್ಲಿ ಹಾಜರಿರುವ ಯಾರೇ ಕೌನ್ಸಿಲರ್ ನು ಅಧ್ಯಕ್ಷತೆ ವಹಿಸುವ ಪ್ರಾಧಿಕಾರಿಯು ಚರ್ಚೆಯಲ್ಲಿರುವ ಯಾವುದೇ ವಿಷಯದಲ್ಲಿ ಅಂಥ ಯಾವುದೇ ಹಣಕಾಸು ಹಿತಾಸಕ್ತಿಯನ್ನು ಹೊಂದಿರುವನೆಂದು ನಂಬಿದರೆ, ಮತ್ತು ಅದಕ್ಕಾಗಿ ಸೂಚನೆಯನ್ನು ಅಂಗೀಕರಿಸಿದರೆ ಅಂಥ ಚರ್ಚೆಯ ಕಾಲದಲ್ಲಿ ಅವನು ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದಲ್ಲ ಅಥವಾ ಅದರ ಮೇಲೆ ಮತ ನೀಡತಕ್ಕದ್ದಲ್ಲ ಅಥವಾ ಅದರಲ್ಲಿ ಭಾಗವಹಿಸತಕ್ಕದ್ದಲ್ಲ. ಅಂಥ ಚರ್ಚೆಯು ಮುಂದುವರಿಯುತ್ತಿರುವ ಕಾಲದಲ್ಲಿ ಸಭೆಯ ಅಧ್ಯಕ್ಷತೆಯನ್ನು ವಹಿಸಲು ಯಾರೇ ಇತರ ಕೌನ್ಸಿಲರ್ ನನ್ನು ಆಯ್ಕೆ ಮಾಡಬಹುದು ಅಥವಾ ಚುನಾಯಿಸಬಹುದು.

56. ಸಭೆಗಳ ಮುಂದೂಡಿಕೆ.- ನಿಯಮಿಸಬಹುದಾದಂಥ ನಿಯಮಗಳಿಗೊಳಪಟ್ಟು, ಯಾವುದೇ ಸಾಮಾನ್ಯ ಸಭೆಯನ್ನು ಹಾಜರಿರುವ ಕೌನ್ಸಿಲರ್ ಗಳ ಬಹುಮತದ ಸಮ್ಮತಿಯೊಂದಿಗೆ ಕಾಲಕಾಲಕ್ಕೆ ಅದೇ ದಿನದ ತರುವಾಯದ ವೇಳೆಗೆ ಅಥವಾ ಯಾವುದೇ ಇತರ ದಿನಕ್ಕೆ ಮುಂದೂಡಬಹುದು. ಆದರೆ ಯಾವ ಸಭೆಯನ್ನು ಮುಂದೂಡಲಾಯಿತೋ, ಆ ಸಭೆಯಲ್ಲಿ ವಿಲೆಯಾಗದೆ ಉಳಿದುದನ್ನು ಹೊರತುಪಡಿಸಿ, ಯಾವುದೇ ವ್ಯವಹಾರವನ್ನು, ಯಾವುದೇ ಮುಂದೂಡಿದ ಸಭೆಯಲ್ಲಿ ನಡೆಸತಕ್ಕದ್ದಲ್ಲ. ಮುನ್ಸಿಪಾಲಿಟಿ ಕಛೇರಿಯಲ್ಲಿ ಹಾಕಿದ್ದ ಅಂಥ ಮುಂದೂಡುವಿಕೆಯ ನೋಟೀಸನ್ನು, ಮುಂದೂಡಿದ ಸಭೆಗೆ ಸಾಕಷ್ಟು ಅವಧಿಯ ನೋಟೀಸ್ ಎಂದು ಭಾವಿಸತಕ್ಕದ್ದು.

57. ನಿರ್ಣಯ ಮಾರ್ಪಾಡು ಮತ್ತು ರದ್ದಿಯಾತಿ.- ಮುನ್ಸಿಪಲ್ ಕೌನ್ಸಿಲ್‌ನ ಯಾವುದೇ ನಿರ್ಣಯವನ್ನು 48ನೇ ಪ್ರಕರಣದ ಅಗತ್ಯತೆಗಳನ್ನು ಪೂರೈಸಿ ಅಂಥ ಸಭೆಯಲ್ಲಿ ಅದಕ್ಕಾಗಿ ನೋಟೀಸನ್ನು ಕೊಟ್ಟಿರುವ ಸಾಮಾನ್ಯ ಸಭೆಯಲ್ಲಿ ಕೌನ್ಸಿಲರ್ ಗಳ ಒಟ್ಟು ಸಂಖ್ಯೆಯ ಅರ್ಧಕ್ಕಿಂತ ಕಡಿಮೆಯಲ್ಲಿರುವುದರಿಂದ ಅಂಗೀಕೃತವಾದ ನಿರ್ಣಯದ ಮತ್ತು ಅಂಥ ಸಭೆಯಲ್ಲಿ ಯಾವ ನಿರ್ಣಯವನ್ನು ಮಾರ್ಪಾಟು ಮಾಡಲು ಅಥವಾ ರದ್ದುಗೊಳಿಸಲು ಉದ್ದೇಶಿಸಲಾಗಿದೆಯೋ ಆ ನಿರ್ಣಯವನ್ನು ಪೂರ್ತಿಯಾಗಿ ಮತ್ತು ಅಂಥ ನಿರ್ಣಯದ ಮಾರ್ಪಾಟು ಅಥವಾ ರದ್ದಿಯಾತಿಗಾಗಿನ ಸೂಚನೆ ಅಥವಾ ಪ್ರಸ್ತಾವವನ್ನು ವಿವರಿಸುವ ಮೂಲಕವಲ್ಲದೆ ಅದನ್ನು ಅಂಗೀಕರಿಸಿದ ತರುವಾಯ ಮೂರು ತಿಂಗಳೊಳಗೆ ಮಾರ್ಪಾಡು ಮಾಡತಕ್ಕದ್ದಲ್ಲ ಅಥವಾ ರದ್ದುಗೊಳಿಸತಕ್ಕದ್ದಲ್ಲ.

58. ಸೂಚನೆಗಳು ಮತ್ತು ತಿದ್ದುಪಡಿಗಳು.- (1) ಪ್ರತಿಯೊಂದು ಸೂಚನೆ ಅಥವಾ ಅದರ ಯಾವುದೇ ತಿದ್ದುಪಡಿಯನ್ನು, ಬರಹದಲ್ಲಿ ಸ್ವೀಕರಿಸತಕ್ಕದ್ದು ಮತ್ತು ಅನಂತರ ಕ್ರಮಬದ್ಧವಾಗಿ ಮಂಡಿಸತಕ್ಕದ್ದು, ಪ್ರತಿಯೊಂದು ಸೂಚನೆಯನ್ನು ಅನುಮೋದಿಸತಕ್ಕದ್ದು ಮತ್ತು ಅದನ್ನು ಅನುಮೋದಿಸುವವರೆಗೆ, ಅದರ ಮೇಲೆ ಯಾವುದೇ ಚರ್ಚೆಯು ನಡೆಯತಕ್ಕದ್ದಲ್ಲ, ಇಲ್ಲವೇ ಅದನ್ನು ಮತಕ್ಕೆ ಹಾಕತಕ್ಕದ್ದಲ್ಲ. ಮೂಲ ಸೂಚನೆಯನ್ನು ಕೇವಲ ನಕಾರಗೊಳಿಸುವ ಯಾವುದೇ ತಿದ್ದುಪಡಿಗೆ ಅವಕಾಶ ಕೊಡತಕ್ಕದ್ದಲ್ಲ.

(2) ಯಾವುದೇ ಸೂಚನೆ ಅಥವಾ ಮಾರ್ಪಾಡನ್ನು ಅದನ್ನು ಸೂಚಿಸುವವನು ಮುನ್ಸಿಪಲ್ ಕೌನ್ಸಿಲ್‌ನ ಸಮ್ಮತಿಯೊಂದಿಗೆ ಹಿಂತೆಗೆದುಕೊಳ್ಳಬಹುದು.

(3) ಚರ್ಚೆಯ ಯಾವುದೇ ಹಂತದಲ್ಲಿ, ತಿದ್ದುಪಡಿಗೆ ತಿದ್ದುಪಡಿಯನ್ನು ಮಂಡಿಸಬಹುದು.

(4) ಚರ್ಚೆಯು ಮುಕ್ತಾಯವಾದ ಮೇಲೆ, ಒಂದು ತಿದ್ದುಪಡಿಗೆ ಹಲವಾರು ತಿದ್ದುಪಡಿಗಳು ಇರುವ ಸಂದರ್ಭದಲ್ಲಿ, ಅಧ್ಯಕ್ಷತೆ ವಹಿಸುವ ಪ್ರಾಧಿಕಾರಿಯು ಕೊನೆಯ ತಿದ್ದುಪಡಿಯನ್ನು ಮೊದಲು ಮತಕ್ಕೆ ಹಾಕತಕ್ಕದ್ದು ಮತ್ತು ಅದನ್ನು ವಿಲೆ ಮಾಡಿದ ತರುವಾಯ, ಅದಕ್ಕೆ ಮೊದಲಿನ ತಿದ್ದುಪಡಿಯನ್ನು ಮತಕ್ಕೆ ಹಾಕತಕ್ಕದ್ದು ಮತ್ತು ಎಲ್ಲಾ ತಿದ್ದುಪಡಿಗಳನ್ನು ವಿಲೆ ಮಾಡುವವರೆಗೆ ಹಾಗೆಯೇ ಮಾಡತಕ್ಕದ್ದು. ಸಂದರ್ಭಾನುಸಾರ ಮೂಲ ಸೂಚನೆ ಅಥವಾ ತಿದ್ದುಪಡಿಯಾದ ಸೂಚನೆಯನ್ನು ಅನಂತರ ಮತಕ್ಕೆ ಹಾಕತಕ್ಕದ್ದು.

(5) ಯಾವುದೇ ಸೂಚನೆ ಅಥವಾ ತಿದ್ದುಪಡಿಯು, ಅನೇಕ ಅಂಶಗಳನ್ನು ಒಳಗೊಂಡಿದ್ದಾಗ, ಅಧ್ಯಕ್ಷತೆಯನ್ನು ವಹಿಸುವ ಪ್ರಾಧಿಕಾರಿಯು, ಅದನ್ನು ವಿಭಾಗಿಸಬಹುದು ಮತ್ತು ಪ್ರತಿಯೊಂದು ಅಂಶವನ್ನೂ ಪ್ರತ್ಯೇಕವಾಗಿ ಮತಕ್ಕೆ ಹಾಕಬಹುದು.

(6) ಸೂಚನೆ ಅಥವಾ ತಿದ್ದುಪಡಿಯನ್ನು ಮತಕ್ಕೆ ಹಾಕಿದಾಗ ಮತ್ತು ಅಧ್ಯಕ್ಷತೆ ವಹಿಸಿರುವ ಪ್ರಾಧಿಕಾರಿಯು ಅದನ್ನು ಅಂಗೀಕರಿಸಲಾಗಿದೆಯೆಂದು ಘೋಷಿಸಿದಾಗ ಸೂಚನೆ ಅಥವಾ ತಿದ್ದುಪಡಿಯನ್ನು ತಿದ್ದುಪಡಿ ಮಾಡುವುದಕ್ಕಾಗಿ ಹೆಚ್ಚಿನ ಪ್ರಸ್ತಾವಗಳನ್ನು ಪುರಸ್ಕರಿಸತಕ್ಕದ್ದಲ್ಲ.

59. ಸಾಮಾನ್ಯ ಸಭೆಗಳನ್ನು ನಡೆಸುವುದು.- (1) ಸಾಮಾನ್ಯ ಸಭೆಯಲ್ಲಿ ವ್ಯವಹಾರವನ್ನು ಈ ಕೆಳಕಂಡ ಕ್ರಮದಲ್ಲಿ ನಡೆಸತಕ್ಕದ್ದು:-

(ಎ) ಹಿಂದಿನ ಸಾಮಾನ್ಯ ಸಭೆಯ ಮತ್ತು ಅನಂತರ ನಡೆದ ಯಾವುದೇ ವಿಶೇಷ ಸಭೆಯ ನಡವಳಿಕೆಗಳನ್ನು ಓದತಕ್ಕದ್ದು ಮತ್ತು ಸ್ಥಿರೀಕರಿಸತಕ್ಕದ್ದು;

(ಬಿ) ಹಿಂದಿನ ಸಭೆಯಲ್ಲಿ ಮುಂದೂಡಲಾದ ವ್ಯವಹಾರವನ್ನು ಪರ್ಯಾಲೋಚಿಸತಕ್ಕದ್ದು;

(ಸಿ) ಕಾರ್ಯಸೂಚಿಯಲ್ಲಿ ಸೂಚಿಸಿದ ವಿಷಯಗಳನ್ನು ಅನಂತರ ಪರ್ಯಾಲೋಚಿಸತಕ್ಕದ್ದು;

(2) ಕೌನ್ಸಿಲರ್ ನು, ವ್ಯವಹಾರದ ಪಟ್ಟಿಯಲ್ಲಿ ಸೇರಿಸಲಾದ ವಿಷಯಗಳಿಗೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ಯಾವುದೇ ನಿರ್ಣಯವನ್ನು ಪ್ರಸ್ತಾವಿಸಬಹುದು:

ಪರಂತು, ಅಧ್ಯಕ್ಷನು ವ್ಯವಹಾರದ ಪಟ್ಟಿಯಲ್ಲಿ ಸೇರಿಸಿಲ್ಲದ ಮಾಮೂಲಿ ಸ್ವರೂಪದ ಯಾವುದೇ ಜರೂರು ವಿಷಯವನ್ನು ಯಾರೇ ಕೌನ್ಸಿಲರ್ ನು ಅದಕ್ಕೆ ಆಕ್ಷೇಪ ಮಾಡದಿದ್ದರೆ ಪ್ರಸ್ತಾವ ಮಾಡಬಹುದು.

(3) ಎಲ್ಲಾ ಕ್ರಿಯಾಲೋಪಗಳನ್ನು, ಅಧ್ಯಕ್ಷತೆ ವಹಿಸಿದ ಪ್ರಾಧಿಕಾರಿಯು ತಾನು ಸೂಕ್ತವೆಂದು ಭಾವಿಸಬಹುದಾದಂಥ ಚರ್ಚೆಯೊಂದಿಗೆ ಅಥವಾ ಇಲ್ಲದೆ ತೀರ್ಮಾನಿಸತಕ್ಕದ್ದು ಮತ್ತು ಅವನ ತೀರ್ಮಾನವು ಅಂತಿಮವಾಗಿರತಕ್ಕದ್ದು.

(4) ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳಲ್ಲಿ, ಉಪಬಂಧಿಸಿರದ ಪ್ರಕ್ರಿಯೆಯ ಯಾವುದೇ ಪ್ರಶ್ನೆಯನ್ನು ಹಾಜರಿದ್ದು ಮತ್ತು ಮತ ನೀಡುವ ಕೌನ್ಸಿಲರ್ ಗಳ ಬಹುಮತದ ಮೂಲಕ ತೀರ್ಮಾನಿಸತಕ್ಕದ್ದು.

60. ಕೆಲವು ಸಂದರ್ಭದಲ್ಲಿ ನಡೆಯಬೇಕಾಗಿರುವ ವ್ಯವಹಾರಗಳ ನೋಟೀಸನ್ನು ಸರ್ಕಾರದ ಎಕ್ಸಿಕ್ಯೂಟಿವ್ ಇಂಜಿನಿಯರ್ ಗೆ ಕೊಡತಕ್ಕದ್ದು.- ಅಧ್ಯಕ್ಷತೆ ವಹಿಸಿರುವ ಪ್ರಾಧಿಕಾರಿಯು ಜರೂರೆಂದು ಭಾವಿಸುವಂಥ ಕಾರಣಗಳಿಗಾಗಿ ಹೊರತು, ಲೋಕೋಪಯೋಗಿ ಇಲಾಖೆಯು ಮುನ್ಸಿಪಲ್ ಕೌನ್ಸಿಲ್‌ಗಾಗಿ ನಿರ್ವಹಿಸುತ್ತಿರುವಂಥ ಯಾವುದೇ ಕಾಮಗಾರಿಗೆ ಸಂಬಂಧಪಟ್ಟಂತೆ ಯಾವುದೇ ವ್ಯವಹಾರವನ್ನು, ಮುನ್ಸಿಪಲ್ ಕೌನ್ಸಿಲ್‌ನ ಸಭೆಯಲ್ಲಿ, ಅಂಥ ವ್ಯವಹಾರವನ್ನು ನಡೆಸುವ ಉದ್ದೇಶವನ್ನು ಮತ್ತು ಅಂಥ ವ್ಯವಹಾರಕ್ಕೆ ಸಂಬಂಧಿಸಿದಂತೆ ತರಲಿರುವ ಸೂಚನೆಗಳು ಅಥವಾ ಪ್ರಸ್ತಾವಗಳನ್ನು ಸಂಬಂಧಪಟ್ಟ ಎಕ್ಸಿಕ್ಯೂಟಿವ್ ಇಂಜಿನಿಯರ್ ಅಥವಾ [1][ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ನಿಗೆ][1] ತಿಳಿಸುವ ಪತ್ರವನ್ನು ಸಂಬೋಧಿಸಿದ ಹೊರತು, ವ್ಯವಹರಿಸತಕ್ಕದ್ದಲ್ಲ.

1. 2000 ರಿಂದ ಅಧಿನಿಯಮದ 22ರ ಮೂಲಕ 29.11.2000 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

61. ಕೆಲವು ಸರ್ಕಾರಿ ಅಧಿಕಾರಿಗಳು ಮುನ್ಸಿಪಲ್ ಕೌನ್ಸಿಲ್‌ನ ಸಭೆಗಳಿಗೆ ಹಾಜರಾಗಬಹುದು.- ಸಂಬಂಧಪಟ್ಟ [1][ವಾರ್ಡ್][1]ನ ಎಕ್ಸಿಕ್ಯೂಟಿವ್ ಇಂಜಿನಿಯರ್ ಜಿಲ್ಲೆಯಲ್ಲಿನ ಆರೋಗ್ಯ ಮುಖ್ಯಾಧಿಕಾರಿ ಮತ್ತು ಈ ಬಗ್ಗೆ ಸರ್ಕಾರವು ಅನುಮೋದಿಸಿದ ಮತ್ತು ಅಧಿಸೂಚಿಸಿದ ಇತರ ಯಾರೇ ಅಧಿಕಾರಿಯು, ಮುನ್ಸಿಪಲ್ ಕೌನ್ಸಿಲ್‌ನ ಯಾವುದೇ ಸಭೆಯಲ್ಲಿ ಹಾಜರಿರಬಹುದು ಮತ್ತು ಮುನ್ಸಿಪಲ್ ಕೌನ್ಸಿಲ್‌ನ ಸಮ್ಮತಿಯೊಂದಿಗೆ, ಯಾವ ಪ್ರಶ್ನೆಯ ಮೇಲೆ ತನ್ನ ಪದದ ಕರ್ತವ್ಯಗಳ ಕಾರಣದಿಂದಾಗಿ ಅವನ ಅಭಿಪ್ರಾಯವು ಅಥವಾ ಅವನು ಒದಗಿಸಬಹುದಾದಂಥ ಮಾಹಿತಿಯು ಅಂಥ ಮುನ್ಸಿಪಲ್ ಕೌನ್ಸಿಲ್‌ಗೆ ಉಪಯುಕ್ತವಾಗುವುದೆಂದು ಅವನು ಪರ್ಯಾಯಲೋಚಿಸಿದರೆ ಅಂಥ ಸಭೆಯಲ್ಲಿ ಆ ಯಾವುದೇ ಪ್ರಶ್ನೆಯ ಚರ್ಚೆ ಅಥವಾ ಪರ್ಯಾಯಲೋಚನೆಯಲ್ಲಿ ಭಾಗವಹಿಸಬಹುದು:

ಪರಂತು, ಸದರಿ ಅಧಿಕಾರಿಯು, ಅಂಥ ಯಾವುದೇ ಪ್ರಶ್ನೆಯ ಮೇಲೆ ಮತ ನೀಡಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಲೋಕೋಪಯೋಗಿ ಇಲಾಖೆಯ ಎಕ್ಸಿಕ್ಯೂಟಿವ್ ಇಂಜಿನಿಯರ್ ಅಥವಾ ಜಿಲ್ಲೆಯಲ್ಲಿನ ಆರೋಗ್ಯ ಮುಖ್ಯಾಧಿಕಾರಿ ಅಥವಾ ಶಿಕ್ಷಣಾಧಿಕಾರಿ ಅಥವಾ ಪಶುವೈದ್ಯ ಸೇವೆಗಳು ಮತ್ತು ಪಶುಸಂಗೋಪನಾ ಇಲಾಖೆಯ ಅಧಿಕಾರಿ [1][ಅಥವಾ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯ ಎಕ್ಸಿಕ್ಯೂಟಿವ್ ಇಂಜಿನಿಯರ್ ಅಥವಾ ಜನಾರೋಗ್ಯ ಇಂಜಿನಿಯರಿಂಗ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಅಥವಾ ಪಟ್ಟಣ ಯೋಜನೆಯ ಉಪ ಸಹಾಯಕ ನಿರ್ದೇಶಕ][1] ಅಥವಾ ಈ ಬಗ್ಗೆ ಸರ್ಕಾರವು ಅನುಮೋದಿಸಿದ ಮತ್ತು ಅಧಿಸೂಚಿಸಿದ ಯಾರೇ ಇತರ ಅಧಿಕಾರಿಯ ಹಾಜರಾತಿಯು ಅಂಥ ಮುನ್ಸಿಪಲ್ ಕೌನ್ಸಿಲ್‌ನ ಯಾವುದೇ ಮುಂದಿನ ಸಭೆಯಲ್ಲಿ ಹಿಂದೆ ಹೇಳಿದ ಉದ್ದೇಶಕ್ಕಾಗಿ ಅಪೇಕ್ಷಣೀಯವೆಂದು ಮುನ್ಸಿಪಲ್ ಕೌನ್ಸಿಲ್‌ಗೆ ಕಂಡುಬಂದರೆ, ಉದ್ದೇಶಿತ ಸಭೆಗೆ ಮುಂಚೆ ಹದಿನೈದು ದಿವಸಗಳಿಗೆ ಕಡಿಮೆಯಲ್ಲದಂತೆ ಅಂಥ ಅಧಿಕಾರಿಗೆ ಸಂಬೋಧಿಸಿದ ಪತ್ರದ ಮೂಲಕ ಅದರಲ್ಲಿ ಅವನ ಹಾಜರಾತಿಯನ್ನು ಅಗತ್ಯಪಡಿಸಲು ಮುನ್ಸಿಪಲ್ ಕೌನ್ಸಿಲ್ ಸಕ್ಷಮವಾಗಿರತಕ್ಕದ್ದು ಮತ್ತು ಸದರಿ ಅಧಿಕಾರಿಯು, ಕಾಯಿಲೆ ಅಥವಾ ಇತರ ಯುಕ್ತ ಕಾರಣದಿಂದ ಅಡ್ಡಿ ಉಂಟಾದ ಹೊರತು, ಅಂಥ ಸಭೆಗೆ ಹಾಜರಾಗಲು ಬದ್ಧನಾಗಿರತಕ್ಕದ್ದು:

ಪರಂತು, ಅಂಥ ಅಧಿಕಾರಿಯು ಅಂಥ ಪತ್ರವನ್ನು ಸ್ವೀಕರಿಸಿದ ಮೇಲೆ ತಾನು ಸ್ವತಃ ಹಾಜರಾಗಲು ಅಸಮರ್ಥನಾದರೆ, ತನ್ನ ಉಪ ಅಥವಾ ಸಹಾಯಕ ಅಥವಾ ಇತರ ಸಕ್ಷಮನಾದ ಅಧೀನನಾಗಿರುವವನಿಗೆ ತನ್ನ ಅಭಿಪ್ರಾಯಗಳ ಬಗ್ಗೆ ತಿಳುವಳಿಕೆ ಕೊಡತಕ್ಕದ್ದು ಮತ್ತು ತಾನು ಅಲ್ಲಿ ಖುದ್ದಾಗಿ ಹಾಜರಾಗುವ ಬದಲು ತನ್ನ ಪ್ರತಿನಿಧಿಯಾಗಿ ಸಭೆಗೆ ಅವನನ್ನು ಕಳಿಸಬಹುದು.

1.1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

62. ಅಡ್ಡ ಪ್ರಶ್ನೆ.- (1) ಕೌನ್ಸಿಲರ್ ನು, (2)ನೇ ಉಪ-ಪ್ರಕರಣದ ಉಪಬಂಧಗಳಿಗೊಳಪಟ್ಟು, ಮುನ್ಸಿಪಾಲಿಟಿ ಆಡಳಿತ ಅಥವಾ ಈ ಅಧಿನಿಯಮದ ನಿರ್ವಹಣೆ ಅಥವಾ ಯಾವುದೇ ಮುನ್ಸಿಪಾಲಿಟಿ ಪ್ರಾಧಿಕಾರಗಳ ಪ್ರಕಾರ್ಯಗಳಿಗೆ ಸಂಬಂಧಪಟ್ಟ ಯಾವುದೇ ವಿಷಯದ ಮೇಲೆ, ಪ್ರಶ್ನೆಗಳನ್ನು ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನಿಗೆ ಕೇಳಬಹುದು.

(2) ಪ್ರಶ್ನೆಯನ್ನು ಕೇಳುವ ಹಕ್ಕು ಕೆಳಕಂಡ ಷರತ್ತುಗಳಿಗೊಳಪಟ್ಟಿರತಕ್ಕದ್ದು, ಎಂದರೆ,-

(ಎ) ಪ್ರಶ್ನೆಯನ್ನು ನಿರ್ದಿಷ್ಟಪಡಿಸುವ ಬರಹದಲ್ಲಿನ ಹತ್ತು ಸ್ಪಷ್ಟ ದಿನಗಳಿಗೆ ಕಡಿಮೆಯಿಲ್ಲದ ನೋಟೀಸನ್ನು ಮುನ್ಸಿಪಲ್ ಕಮಿಷನರ್ ನಿಗೆ ಅಥವಾ ಚೀಫ್ ಆಫೀಸರ್ ನಿಗೆ ಕೊಡತಕ್ಕದ್ದು;

(ಬಿ) ಯಾವುದೇ ಸಾಮಾನ್ಯ ಸಭೆಯಲ್ಲಿ ಉತ್ತರಿಸುವುದಕ್ಕಾಗಿ ಯಾರೇ ಕೌನ್ಸಿಲರ್ ನು, ಎರಡಕ್ಕಿಂತ ಹೆಚ್ಚು ಪ್ರಶ್ನೆಗಳನ್ನು ಕಳುಹಿಸತಕ್ಕದ್ದಲ್ಲ;

(ಸಿ) ಯಾವುದೇ ಪ್ರಶ್ನೆಯು,-

(i) ಪ್ರಶ್ನೆಯು ಅರ್ಥವಾಗುವಂತೆ ಮಾಡಲು ಕಟ್ಟುನಿಟ್ಟಾಗಿ ಅವಶ್ಯವಲ್ಲದ ಯಾವುದೇ ಹೆಸರನ್ನು ಅಥವಾ ಹೇಳಿಕೆಯನ್ನು ತರತಕ್ಕದ್ದಲ್ಲ;

(ii) ವಾದಗಳು, ವ್ಯಂಗ್ಯೋಕ್ತಿಗಳು, ಆರೋಪಗಳು, ವಿಶೇಷಣಗಳು ಅಥವಾ ಮಾನಹಾನಿ ಹೇಳಿಕೆಗಳನ್ನು ಒಳಗೊಂಡಿರತಕ್ಕದ್ದಲ್ಲ;

(iii) ಅಭಿಪ್ರಾಯದ ಕೋರಿಕೆ ಅಥವಾ ಕಾಲ್ಪನಿಕ ಪ್ರಸ್ತಾವದ ಪರಿಹಾರಕ್ಕಾಗಿ ಕೇಳತಕ್ಕದ್ದಲ್ಲ;

(iv) ಅವನ ಪದೀಯ ಅಥವಾ ಸಾರ್ವಜನಿಕ ಸ್ಥಾನ ಬಲದಿಂದ ಹೊರತು ಯಾರೇ ವ್ಯಕ್ತಿಯ ಚಾರಿತ್ರ್ಯ ಅಥವಾ ವರ್ತನೆಯ ಬಗ್ಗೆ ಕೇಳತಕ್ಕದ್ದಲ್ಲ;

(v) ಮುನ್ಸಿಪಲ್ ಕೌನ್ಸಿಲ್ ಅಥವಾ ಯಾವುದೇ ಪೌರ ಪ್ರಾಧಿಕಾರಕ್ಕೆ ಮುಖ್ಯವಾಗಿ ಸಂಬಂಧಿಸಿರದಂಥ ವಿಷಯಕ್ಕೆ ಸಂಬಂಧಪಟ್ಟಿರತಕ್ಕದ್ದಲ್ಲ;

(vi) ವೈಯಕ್ತಿಕ ಸ್ವರೂಪದ ಆರೋಪವನ್ನು ಮಾಡತಕ್ಕದ್ದಲ್ಲ ಅಥವಾ ಅದನ್ನು ಒಳಗೊಳ್ಳತಕ್ಕದ್ದಲ್ಲ;

(vii) ಒಂದು ಪ್ರಶ್ನೆಗೆ ಕೊಡುವ ಉತ್ತರದ ಪರಿಮಿತಿಗಳೊಳಗೆ ವ್ಯವಹರಿಸಲು ತುಂಬಾ ದೊಡ್ಡದಾದ ಧೋರಣೆಯ ಪ್ರಶ್ನೆಗಳನ್ನು ಎತ್ತತಕ್ಕದ್ದಲ್ಲ;

(viii) ಈಗಾಗಲೇ ಉತ್ತರಿಸಲಾದ ಅಥವಾ ಉತ್ತರವನ್ನು ನಿರಾಕರಿಸಲಾದಂಥ ಸಾರತಃ ಪ್ರಶ್ನೆಗಳನ್ನು ಮತ್ತೆ ಮತ್ತೆ ಕೇಳತಕ್ಕದ್ದಲ್ಲ;

(ix) ಕ್ಷುಲ್ಲಕ ವಿಷಯಗಳ ಬಗ್ಗೆ ಮಾಹಿತಿಯನ್ನು ಕೇಳತಕ್ಕದ್ದಲ್ಲ;

(x) ಸಾಮಾನ್ಯವಾಗಿ ಪೂರ್ವ ವೃತ್ತಾಂತದ ವಿಷಯಗಳ ಬಗ್ಗೆ ಮಾಹಿತಿಯನ್ನು ಕೇಳತಕ್ಕದ್ದಲ್ಲ;

(xi) ನೋಡಲು ಅವಕಾಶವಿರುವ ದಸ್ತಾವೇಜುಗಳಲ್ಲಿ ಅಥವಾ ಸಾಮಾನ್ಯ ಪರಾಮರ್ಶನ ಕೃತಿಗಳಲ್ಲಿ ಹೇಳಿರುವ ಮಾಹಿತಿಯನ್ನು ಕೇಳತಕ್ಕದ್ದಲ್ಲ;

(xii) ಮುನ್ಸಿಪಲ್ ಕೌನ್ಸಿಲ್‌ಗೆ ಮುಖ್ಯವಾಗಿ ಜವಾಬ್ದಾರರಲ್ಲದ ನಿಕಾಯಗಳ ಅಥವಾ ವ್ಯಕ್ತಿಗಳ ನಿಯಂತ್ರಣದಲ್ಲಿರುವ ವಿಷಯಗಳನ್ನು ಎತ್ತತಕ್ಕದ್ದಲ್ಲ; ಅಥವಾ

(xiii) ನ್ಯಾಯಾಲಯದ ನ್ಯಾಯ ನಿರ್ಣಯದಲ್ಲಿರುವ ವಿಷಯದ ಬಗ್ಗೆ ಯಾವುದೇ ಮಾಹಿತಿಯನ್ನು ಕೇಳತಕ್ಕದ್ದಲ್ಲ.

(3) ಅಧ್ಯಕ್ಷತೆ ವಹಿಸಿರುವ ಪ್ರಾಧಿಕಾರಿಯು, ತನ್ನ ಅಭಿಪ್ರಾಯದಲ್ಲಿ (2)ನೇ ಉಪ-ಪ್ರಕರಣದ ಉಪಬಂಧವನ್ನು ಉಲ್ಲಂಘಿಸುವ ಯಾವುದೇ ಪ್ರಶ್ನೆಗೆ ಅವಕಾಶ ಕೊಡತಕ್ಕದ್ದಲ್ಲ.

(4) ಯಾವುದೇ ಪ್ರಶ್ನೆಯು (2)ನೇ ಉಪ-ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದೆಯೇ ಅಥವಾ ಇಲ್ಲವೇ ಎಂಬ ಸಂದೇಹ ಉದ್ಭವಿಸಿದರೆ, ಅಧ್ಯಕ್ಷತೆ ವಹಿಸಿರುವ ಪ್ರಾಧಿಕಾರಿಯು ಆ ಅಂಶವನ್ನು ತೀರ್ಮಾನಿಸತಕ್ಕದ್ದು ಮತ್ತು ಅವನ ತೀರ್ಮಾನವು ಅಂತಿಮವಾಗಿರತಕ್ಕದ್ದು.

(5) ಮುನ್ಸಿಪಲ್ ಕಮಿಷನರ್ ನು ಅಥವಾ ಚೀಫ್ ಆಫೀಸರ್ ನು, ವಿಶ್ವಾಸದಲ್ಲಿ ಅವನಿಗೆ ತಿಳಿಸಲಾಗಿರುವ ಮಾಹಿತಿಯನ್ನು ಅದು ಕೇಳಿದರೆ ಅಥವಾ ಅಧ್ಯಕ್ಷತೆ ವಹಿಸಿರುವ ಪ್ರಾಧಿಕಾರಿಯ ಅಭಿಪ್ರಾಯದಲ್ಲಿ, ಸಾರ್ವಜನಿಕ ಹಿತಾಸಕ್ತಿ ಅಥವಾ ಮುನ್ಸಿಪಲ್ ಕೌನ್ಸಿಲ್‌ನ ಹಿತಾಸಕ್ತಿಗೆ ಬಾಧಕವಾಗದಂತೆ ಅದನ್ನು ಉತ್ತರಿಸಲಾಗದಿದ್ದರೆ ಅವನು ಅದನ್ನು ಉತ್ತರಿಸಲು ಬದ್ಧನಾಗಿರತಕ್ಕದ್ದಲ್ಲ.

(6) ಸಭೆಯ ಅಧ್ಯಕ್ಷತೆ ವಹಿಸಿರುವ ಪ್ರಾಧಿಕಾರಿಯು ಅಥವಾ ಅಧ್ಯಕ್ಷಾಧಿಕಾರಿಯು, ಅನ್ಯಥಾ ನಿರ್ದೇಶಿಸಿದ ಹೊರತು, ಮುನ್ಸಿಪಲ್ ಕೌನ್ಸಿಲ್ ಸಭೆಯಲ್ಲಿ ಪ್ರತಿಯೊಂದು ಪ್ರಶ್ನೆಯನ್ನು ಮುನ್ಸಿಪಲ್ ಕಮಿಷನರ್ ನು ಅಥವಾ ಚೀಫ್ ಆಫೀಸರ್ ನು ಉತ್ತರಿಸತಕ್ಕದ್ದು.

(7) ಅಂಗೀಕರಿಸಿದ ಪ್ರಶ್ನೆಗಳಿಗೆ ಬರಹದಲ್ಲಿನ ಉತ್ತರಗಳನ್ನು, ಸಾಧ್ಯವಾದಷ್ಟುಮಟ್ಟಿಗೆ ಸಭೆಗೆ ಒಂದು ಗಂಟೆ ಮುಂಚಿತವಾಗಿ ಕೌನ್ಸಿಲರ್ ಗಳಿಗೆ ಕೊಡತಕ್ಕದ್ದು.

(8) ಯಾವುದೇ ಸಭೆಯಲ್ಲಿ ಕಾಲಾವಕಾಶ ಇಲ್ಲದ್ದಕ್ಕಾಗಿ ಅಥವಾ ಅನ್ಯಥಾ ಉತ್ತರಿಸದ ಪ್ರಶ್ನೆಗಳು, ಗತಿಸಿಹೋಗತಕ್ಕದ್ದು.

[1][**63. ಸ್ಥಾಯಿ ಸಮಿತಿ.-** (1) ಪ್ರತಿಯೊಂದು ಮುನ್ಸಿಪಲ್ ಕೌನ್ಸಿಲ್‌ನಲ್ಲಿ, ಈ ಮುಂದಿನ ವಿಷಯಗಳನ್ನು ವ್ಯವಹರಿಸುವ ಒಂದು ಸ್ಥಾಯಿ ಸಮಿತಿ ಇರತಕ್ಕದ್ದು, ಎಂದರೆ:-

(ಎ) ತೆರಿಗೆ ನಿರ್ಧರಣೆ, ಹಣಕಾಸು ಮತ್ತು ಅಪೀಲುಗಳು;

(ಬಿ) ಸಾರ್ವಜನಿಕ ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ;

(ಸಿ) ಪಟ್ಟಣ ಯೋಜನೆ ಮತ್ತು ಪುರೋಭಿವೃದ್ಧಿ;

(ಡಿ) ಲೆಕ್ಕಪತ್ರಗಳು.

(2) ಸ್ಥಾಯೀ ಸಮಿತಿಯು ಮುನ್ಸಿಪಲ್ ಕೌನ್ಸಿಲ್ ನಿರ್ಧರಿಸಬಹುದಾದಂತೆ ಹನ್ನೊಂದಕ್ಕಿಂತ ಹೆಚ್ಚಿಲ್ಲದ ಅಥವಾ ಐದಕ್ಕಿಂತ ಕಡಿಮೆಯಿಲ್ಲದಂಥ ಸಂಖ್ಯೆಯ ಮತ್ತು 323ನೇ ಪ್ರಕರಣದ (2)ನೇ ಉಪ-ಪ್ರಕರಣದ (ಎ) ಖಂಡದ ಮೇರೆಗೆ ರಚಿಸಿದ ನಿಯಮಗಳಿಗನುಸಾರವಾಗಿ ಮುನ್ಸಿಪಲ್ ಕೌನ್ಸಿಲ್‌ನಿಂದ ಚುನಾಯಿತರಾದ ಕೌನ್ಸಿಲರ್ ಗಳನ್ನು ಒಳಗೊಂಡಿರತಕ್ಕದ್ದು.

(3) ಸ್ಥಾಯಿ ಸಮಿತಿಯ ಸದಸ್ಯರುಗಳು ಒಂದು ವರ್ಷದ ಅವಧಿಗಾಗಿ ಪದಧಾರಣ ಮಾಡತಕ್ಕದ್ದು.

(4) ಅಧ್ಯಕ್ಷ ಮತ್ತು ಉಪಾಧ್ಯಕ್ಷನು ಸ್ಥಾಯಿ ಸಮಿತಿಯ ಸದಸ್ಯರಾಗಿ ಚುನಾಯಿತರಾಗಲು ಅರ್ಹರಾಗಿರತಕ್ಕದ್ದಲ್ಲ.

(5) ಸ್ಥಾಯಿ ಸಮಿತಿಯು ಈ ಅಧಿನಿಯಮದ ಮೇರೆಗೆ ಅದಕ್ಕೆ ವಹಿಸಿಕೊಟ್ಟ ಪ್ರಕಾರ್ಯಗಳನ್ನು ಚಲಾಯಿಸತಕ್ಕದ್ದು ಮತ್ತು ವಿಶೇಷವಾಗಿ ಈ ಬಗ್ಗೆ ಮುನ್ಸಿಪಲ್ ಕೌನ್ಸಿಲ್ ಅಥವಾ ಸಾಮಾನ್ಯವಾಗಿ 323ನೇ ಪ್ರಕರಣದ (2)ನೇ ಉಪ-ಪ್ರಕರಣದ (ಎ) ಖಂಡದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದ ಯಾವುದೇ ಪರಿಮಿತಿಗಳಿಗೆ ಮತ್ತು XIVನೇ ಅಧ್ಯಾಯದ ಉಪಬಂಧಗಳಿಗೊಳಪಟ್ಟು ಮುನ್ಸಿಪಲ್ ಕೌನ್ಸಿಲ್‌ನ ಎಲ್ಲ ಅಧಿಕಾರಗಳನ್ನು ಚಲಾಯಿಸತಕ್ಕದ್ದು][1].

1.1994ರ ಅಧಿನಿಯಮ 36ರ ಮೂಲಕ 1.1.1996 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][64. xxx][1]

1.1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

65. ಆಕಸ್ಮಿಕ ಖಾಲಿ ಸ್ಥಾನಗಳು.- ಸ್ಥಾಯಿ ಸಮಿತಿಯಲ್ಲಿ [1][xxx][1] ಉಂಟಾಗುವ ಖಾಲಿ ಸ್ಥಾನವನ್ನು, ಸಾಧ್ಯವಾದಷ್ಟು ಬೇಗನೆ, ಯಾವ ಉಪಬಂಧಗಳ ಮೇರೆಗೆ ಯಾವ ಸದಸ್ಯನ ಸ್ಥಾನವನ್ನು ಭರ್ತಿ ಮಾಡಬೇಕಾಗಿದೆಯೋ ಆ ಸದಸ್ಯನನ್ನು ನೇಮಕ ಮಾಡಿದಂಥವೇ ಉಪಬಂಧಗಳಿಗೊಳಪಟ್ಟು, ಅದಕ್ಕೆ ಸದಸ್ಯನನ್ನು ನೇಮಕಾತಿ ಮೂಲಕ ಭರ್ತಿ ಮಾಡತಕ್ಕದ್ದು, ಈ ಪ್ರಕರಣದ ಮೇರೆಗೆ ನೇಮಕಗೊಂಡ ವ್ಯಕ್ತಿಯು, ಆ ಖಾಲಿಸ್ಥಾನವು ಉಂಟಾಗಿರದಿದ್ದರೆ ಯಾವ ವ್ಯಕ್ತಿಯ ಸ್ಥಾನದಲ್ಲಿ ಅವನನ್ನು ನೇಮಕ ಮಾಡಲಾಗಿದೆಯೋ ಆ ವ್ಯಕ್ತಿಯು ಅದನ್ನು ಧಾರಣ ಮಾಡುತ್ತಿದ್ದನೋ, ಅಲ್ಲಿಯವರೆಗೆ ಮಾತ್ರ ಪದಧಾರಣ ಮಾಡತಕ್ಕದ್ದು. ಯಾರೇ ವ್ಯಕ್ತಿಯು ಈ ಹಿಂದೆ ಸಮಿತಿಯ ಸದಸ್ಯನಾಗಿದ್ದನೆಂಬ ಕಾರಣದ ಮೇಲೆ ಅಂಥ ಯಾವುದೇ ಸಮಿತಿಯ ಸದಸ್ಯನಾಗಿ ನೇಮಕಗೊಳ್ಳಲು ಯಾವುದೇ ಕಾಲದಲ್ಲಿ ಅನರ್ಹನಾಗಿರತಕ್ಕದ್ದಲ್ಲ.

1.1964ರ ಅಧಿನಿಯಮ 36ರ ಮೂಲಕ 1.1.1996 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][**66. ಸ್ಥಾಯಿ ಸಮಿತಿಯ ಅಧ್ಯಕ್ಷ**.- (1) ಸ್ಥಾಯಿ ಸಮಿತಿಯ ಅಧ್ಯಕ್ಷನನ್ನು ಅವರ ಸದಸ್ಯರು ಏಕವರ್ಗಾವಣೀಯ ಮತದ ವ್ಯವಸ್ಥೆಯ ಮೂಲಕ ಚುನಾಯಿಸತಕ್ಕದ್ದು.][1]

1.1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

67. ಸಭೆಗಳಲ್ಲಿನ ಪ್ರಕ್ರಿಯೆ.- (1) 49, 52 ಮತ್ತು 54ನೇ ಪ್ರಕರಣಗಳ ಮತ್ತು 61ನೇ ಪ್ರಕರಣದ (1)ನೇ ಉಪ-ಪ್ರಕರಣದ ಉಪಬಂಧಗಳನ್ನು, ಆ ಉಪಬಂಧಗಳಲ್ಲಿ ಅಡಕವಾಗಿರುವ, ಮುನ್ಸಿಪಲ್ ಕೌನ್ಸಿಲ್‌ನ ಸಭೆಗಳಿಗೆ ಮಾಡಿದ ಎಲ್ಲ ಉಲ್ಲೇಖಗಳಲ್ಲಿ ಸಮಿತಿಯ ಸಭೆಗಳು ಒಳಗೊಂಡಿದ್ದರೆ ಹೇಗೋ ಹಾಗೆ ಸಮಿತಿಗಳ ಎಲ್ಲ ವ್ಯವಹರಣೆಗಳಲ್ಲಿ ಪಾಲಿಸತಕ್ಕದ್ದು. ಯಾವುದೇ ಸಮಿತಿಯ ಅಧ್ಯಕ್ಷನು 1[ಏಳು]1 ದಿನಗಳಿಗೆ ಮೀರದ ಅವಧಿಯವರೆಗೆ ಮುನ್ಸಿಪಾಲಿಟಿಯಿಂದ ಗೈರು ಹಾಜರಾಗಿದ್ದರೆ, ಅವನ ಗೈರು ಹಾಜರಿಯಲ್ಲಿ ಅಧ್ಯಕ್ಷ ಅಥವಾ ಉಪಾಧ್ಯಕ್ಷನು ಅದರ ಸಭೆಯನ್ನು ಕರೆಯಬಹುದು:

ಪರಂತು, 54ನೇ ಪ್ರಕರಣದಲ್ಲಿ ತದ್ವಿರುದ್ಧವಾಗಿ ಏನೇ ಅಡಕವಾಗಿದ್ದಾಗ್ಯೂ, ಸಮಿತಿಗಳು ಅವು ಸೂಕ್ತವೆಂದು ಭಾವಿಸಬಹುದಾದಂತೆ ಇಂಗ್ಲಿಷ್‌ನಲ್ಲಿಯೇ ಆಗಲಿ ಅಥವಾ ಕನ್ನಡದಲ್ಲಿಯೇ ಆಗಲಿ ಅವುಗಳ ವ್ಯವಹರಣೆಗಳನ್ನು ದಾಖಲ್ಮಾಡಬಹುದು.

(2) ಸಮಿತಿಗಳು ತಾವು ಸೂಕ್ತವೆಂದು ಭಾವಿಸುವ ಹಾಗೆ, ಸೇರಬಹುದು ಮತ್ತು ಮುಂದೂಡಬಹುದು. ಆದರೆ ಸಮಿತಿಯ ಅಧ್ಯಕ್ಷನು, ತಾನು ಸೂಕ್ತವೆಂದು ಭಾವಿಸಿದಾಗಲೆಲ್ಲಾ, ಅಂಥ ಸಮಿತಿಯ ವಿಶೇಷ ಸಭೆ ಕರೆಯಬಹುದು ಮತ್ತು ಮುನ್ಸಿಪಲ್ ಕೌನ್ಸಿಲ್‌ನ ಅಧ್ಯಕ್ಷನ, ಅಥವಾ ಸಮಿತಿಯ ಇಬ್ಬರಿಗಿಂತ ಕಡಿಮೆಯಿಲ್ಲದ ಸದಸ್ಯರು ಬರಹದಲ್ಲಿ ಕೋರಿಕೆಯ ಮೇಲೆ ಮತ್ತು ಅಂಥ ಕೋರಿಕೆಯನ್ನು ಸಲ್ಲಿಸಿದ ತರುವಾಯ ಎರಡು ದಿನಗಳಿಗಿಂತ ಹೆಚ್ಚಿಲ್ಲದ ದಿನಾಂಕದಂದು, ಅಂಥ ಸಮಿತಿಯ ವಿಶೇಷ ಸಭೆಯನ್ನು ಕರೆಯತಕ್ಕದ್ದು.

(3) ಯಾವುದೇ ಸಮಿತಿಯ ಸಭೆಯಲ್ಲಿ, ಅಲ್ಲಿ ಮೂರನೇ ಒಂದಕ್ಕಿಂತ ಹೆಚ್ಚಿನ ಸದಸ್ಯರು ಹಾಜರಿದ್ದ ಹೊರತು, ಯಾವುದೇ ವ್ಯವಹಾರವನ್ನು ನಡೆಸತಕ್ಕದ್ದಲ್ಲ.

1.1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

68. ಪರಿಚಲನೆಯ ಮೂಲಕ ಪ್ರಕ್ರಿಯೆ.- (1) 67ನೇ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಸಮಿತಿಯ ಅಧ್ಯಕ್ಷನು, ಸಭೆಯನ್ನು ಕರೆಯುವುದಕ್ಕೆ ಬದಲು ತನ್ನದೇ ಅಥವಾ

ಸಮಿತಿಯ ಇತರ ಯಾರೇ ಸದಸ್ಯನ ಅಥವಾ ಮುನ್ಸಿಪಲ್ ಕಮಿಷನರ್ ನ ಅಥವಾ ಚೀಫ್ ಆಫೀಸರ್ ನ ಅಥವಾ ಮುನ್ಸಿಪಲ್ ಕೌನ್ಸಿಲ್‌ನ ಬರಹದಲ್ಲಿನ ಪ್ರಸ್ತಾವವನ್ನು ಸಮಿತಿಯ ಸದಸ್ಯರ ಅಭಿಪ್ರಾಯೋಕ್ತಿ ಮತ್ತು ಮತಗಳಿಗಾಗಿ ಪರಿಚಲನೆಗೊಳಿಸಬಹುದು.

(2) ಪರಿಚಲಿಸುವ ಮೊದಲು, ಅಧ್ಯಕ್ಷರು ಹಿಂದೆ ಹೇಳಿದಂತೆ ಅಂಥ ಯಾವುದೇ ಪ್ರಸ್ತಾವವನ್ನು ಪರಿಚಲನೆಗೊಳಿಸುವುದಕ್ಕೆ ಮುಂಚೆ ಅಧ್ಯಕ್ಷನು ತಾನು ಸೂಕ್ತವೆಂದು ಭಾವಿಸಿದರೆ ಮತ್ತು 60ನೇ ಪ್ರಕರಣದಲ್ಲಿ ವಿವರಿಸಿದ ಸ್ವರೂಪಕ್ಕೆ ಸಂಬಂಧಪಟ್ಟಂಥ ವ್ಯವಹಾರವಾಗಿದ್ದರೆ, 61ನೇ ಪ್ರಕರಣದ (2)ನೇ ಉಪ-ಪ್ರಕರಣದ ಉಪಬಂಧಗಳ ಮೇರೆಗೆ ಮುನ್ಸಿಪಲ್ ಕೌನ್ಸಿಲ್ ಯಾವ ಅಧಿಕಾರಿಯು ಹಾಜರಾತಿಯನ್ನು ಅಗತ್ಯಪಡಿಸಲು ಹಕ್ಕುಳ್ಳದ್ದಾಗಿರುವುದೋ ಆ ಯಾರೇ ಅಧಿಕಾರಿಯು ದಾಖಲ್ಮಾಡಲು ಇಚ್ಛಿಸುವ ಷರಾಗಳು ಯಾವುದಾದರೂ ಇದ್ದರೆ ಅವುಗಳನ್ನು ಅದರ ಮೇಲೆ ಪಡೆಯತಕ್ಕದ್ದು.

(3) ಹಾಗೆ ಪರಿಚಯಿಸಲಾದ ಯಾವುದೇ ಪ್ರಸ್ತಾವದ ಮೇಲಿನ ತೀರ್ಮಾನವು, ಸದರಿ ಪ್ರಸ್ತಾವವನ್ನು ಪರ್ಯಾಲೋಚಿಸಲು ವಿಶೇಷ ಸಭೆಯನ್ನು ಕರೆದ ಹೊರತು, ಅದರ ಮೇಲೆ ಮತದಾನ ಮಾಡಿದ ಸಮಿತಿಯ ಸದಸ್ಯರ ಬಹುಮತಗಳಿಗೆ ಅನುಸಾರವಾಗಿ ಇರತಕ್ಕದ್ದು.

(4) ಈ ಪ್ರಕರಣದ ಮೇರೆಗೆ ಸಮಿತಿಯು ತೆಗೆದುಕೊಂಡ ಪ್ರತಿಯೊಂದು ತೀರ್ಮಾನವನ್ನು ನಡವಳಿಕೆ ಪುಸ್ತಕದಲ್ಲಿ ದಾಖಲು ಮಾಡತಕ್ಕದ್ದು.

69. ಮುನ್ಸಿಪಲ್ ಕೌನ್ಸಿಲ್‌ನ ಅನುದೇಶಗಳಿಗೆ ಸಮಿತಿಗಳ ಅಧೀನತೆ ಮತ್ತು ಮುನ್ಸಿಪಲ್ ಕೌನ್ಸಿಲ್‌ನ ಕಡ್ಡಾಯ ಕೋರಿಕೆಗಳ ಪಾಲನೆ.- (1) ಪ್ರತಿಯೊಂದು ಸಮಿತಿಯು, ಮುನ್ಸಿಪಲ್ ಕೌನ್ಸಿಲ್ ಅದಕ್ಕೆ ಕಾಲಕಾಲಕ್ಕೆ ಕೊಡಬಹುದಾದ ಯಾವುದೇ ಅನುದೇಶವನ್ನು ಅನುಸರಿಸತಕ್ಕದ್ದು. ಮುನ್ಸಿಪಲ್ ಕೌನ್ಸಿಲ್ ಯಾವುದೇ ಕಾಲದಲ್ಲಿ ಯಾವುದೇ ಸಮಿತಿಯ ವ್ಯವಹರಣೆಗಳ ಯಾವುವೇ ವ್ಯವಹರಣೆಗಳಿಂದ ಯಾವುದೇ ಉದ್ಧೃತಕ್ಕಾಗಿ ಮತ್ತು ಯಾವುದೇ ಸಮಿತಿಯು ಯಾವ ವಿಷಯಕ್ಕೆ ಸಂಬಂಧಿಸಿದಂತೆ ವ್ಯವಹರಿಸಲು ಅಧಿಕೃತಗೊಳಿಸಲಾಗಿದೆಯೋ ಅಥವಾ ನಿರ್ದೇಶಿತವಾಗಿದೆಯೋ ಆ ಯಾವುದೇ ವಿಷಯಕ್ಕೆ ಸಂಬಂಧಿಸಿದ ಅಥವಾ ಸಂಬಂಧಪಟ್ಟ ಯಾವುದೇ ವಿವರಪಟ್ಟಿಕೆ, ವಿವರಣ ಪತ್ರ ಅಥವಾ ಲೆಕ್ಕ ಅಥವಾ ವರದಿಗಾಗಿ ಕೇಳಬಹುದು ಮತ್ತು ಅಂಥ ಪ್ರತಿಯೊಂದು ಕಡ್ಡಾಯ ಕೋರಿಕೆಯನ್ನು ಅನುಚಿತ ವಿಳಂಬವಿಲ್ಲದೆ ಹಾಗೆ ಕೇಳಲಾದ ಸಮಿತಿಯು ಪಾಲಿಸತಕ್ಕದ್ದು.

(2) ಸ್ಥಾಯಿ ಸಮಿತಿಯು, [1][xxx][1] ಮಾಡಿದ ಪ್ರತಿಯೊಂದು ಆದೇಶವು, ಈ ಬಗ್ಗೆ ಸರ್ಕಾರವು ರಚಿಸಬಹುದಾದ ಯಾವುವೇ ನಿಯಮಗಳ ಮೂಲಕ ಅದಕ್ಕೆ ಸಂಬಂಧಿಸಿದಂತೆ ಅಗತ್ಯಪಡಿಸಬಹುದಾದ ಅಥವಾ ಅವಕಾಶ ಮಾಡಿಕೊಡಬಹುದಾದಂಥ ಪರಿವೀಕ್ಷಣೆಗೊಳಪಟ್ಟಿರತಕ್ಕದ್ದು ಮತ್ತು ಅಂಥ ಅಪೀಲಿಗೆ ಅವಕಾಶವಿರತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.1.1996 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

70. ಯಾವ ಅಧಿಕಾರಿಗಳ ವೆಚ್ಚಗಳನ್ನು ಸಂದಾಯ ಮಾಡಬಹುದೋ ಆ ಅಧಿಕಾರಿಗಳಿಗೆ ಪ್ರತ್ಯಾಯೋಜಿಸಬಹುದಾದ ಅಧಿಕಾರಗಳು, ಕರ್ತವ್ಯಗಳು ಮತ್ತು ಪ್ರಕಾರ್ಯಗಳು.- ಮುನ್ಸಿಪಲ್ ಕೌನ್ಸಿಲ್‌ನಿಂದ ಅಥವಾ ಅದರ ಪರವಾಗಿ ಚಲಾಯಿಸಬಹುದಾದ ಅಥವಾ ನೆರವೇರಿಸಬಹುದಾದಂಥ ಯಾವುವೇ ಅಧಿಕಾರಗಳು ಅಥವಾ ಕರ್ತವ್ಯಗಳು ಅಥವಾ ಕಾರ್ಯನಿರ್ವಾಹಕ ಪ್ರಕಾರ್ಯಗಳನ್ನು ಈ ಬಗ್ಗೆ ಸರ್ಕಾರವು ರಚಿಸಬೇಕಾದ ನಿಯಮಗಳ ಅನುಸಾರವಾಗಿ, ಅಧ್ಯಕ್ಷನಿಗೆ ಅಥವಾ ಉಪಾಧ್ಯಕ್ಷನಿಗೆ ಅಥವಾ ಯಾವುದೇ ಸಮಿತಿಯ ಅಧ್ಯಕ್ಷನಿಗೆ ಅಥವಾ ಒಂದು ಅಥವಾ ಹೆಚ್ಚು ವೃತ್ತಿವೇತನ ಪಡೆಯುವ ಅಥವಾ ಗೌರವ ಅಧಿಕಾರಿಗಳಿಗೆ ಪ್ರತ್ಯಾಯೋಜಿಸಬಹುದು. ಆದರೆ XVIನೇ ಅಧ್ಯಾಯದ ಮೇರೆಗೆ ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನಿಗೆ ಅಥವಾ 63ನೇ ಪ್ರಕರಣದ ಮೂಲಕ ಅಥವಾ ಮೇರೆಗೆ ಯಾವುದೇ ಸಮಿತಿಗೆ ಪ್ರದತ್ತವಾಗಿರಬಹುದಾದ ಯಾವುವೇ ಅಧಿಕಾರಗಳಿಗೆ ಅದು ಬಾಧಕವನ್ನುಂಟು ಮಾಡತಕ್ಕದ್ದಲ್ಲ ಮತ್ತು ಹಾಗೆ ಪ್ರತ್ಯಾಯೋಜಿಸಲಾದ ಯಾವುದೇ ಅಧಿಕಾರವನ್ನು ಚಲಾಯಿಸುವ ಅಥವಾ ಯಾವುದೇ ಕರ್ತವ್ಯ ಅಥವಾ ಪ್ರಕಾರ್ಯವನ್ನು ನೆರವೇರಿಸುವ ಪ್ರತಿಯೊಬ್ಬ ವ್ಯಕ್ತಿಗೆ, ಅದರಲ್ಲಿ ಅವನು ಅವಶ್ಯವಾಗಿ ವಹಿಸಿದ ಎಲ್ಲಾ ವೆಚ್ಚಗಳನ್ನು ಸಂದಾಯ ಮಾಡಬಹುದು:

ಪರಂತು, ಮುನ್ಸಿಪಲ್ ಕಮಿಷನರ್ ನು ಇರುವಂಥ [1][ಮುನ್ಸಿಪಲ್ ಏರಿಯಾ][1] ದಲ್ಲಿ, ಈ ಅಧಿನಿಯಮದ ಮೇರೆಗೆ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಬೈಲಾದ

ಮೇರೆಗೆ ಮುನ್ಸಿಪಲ್ ಕೌನ್ಸಿಲರ್ ನಿಗೆ ಪ್ರದತ್ತವಾದ ಅಥವಾ ಅವನ ಮೇಲೆ ವಿಧಿಸಲಾದ ಅಥವಾ ಅವನಲ್ಲಿ ನಿಹಿತಗೊಳಿಸಿದ ಅಧಿಕಾರಗಳು, ಅಥವಾ ಕರ್ತವ್ಯಗಳು ಅಥವಾ ಕಾರ್ಯನಿರ್ವಾಹಕ ಪ್ರಕಾರ್ಯಗಳನ್ನು 344ನೇ ಪ್ರಕರಣದಲ್ಲಿ ಉಪಬಂಧಿಸಿರುವಂತೆ ಹೊರತು ಪ್ರತ್ಯಾಯೋಜಿಸತಕ್ಕದ್ದಲ್ಲ.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

71. ಸ್ಥಳೀಯ ನಿಕಾಯಗಳ ಜಂಟಿ ಸಮಿತಿಗಳು ಹಾಗೂ [1][ದಾರಿಸುಂಕ][1] ವನ್ನು ಜಂಟಿಯಾಗಿ ವಿಧಿಸುವುದು.- (1) ಮುನ್ಸಿಪಲ್ ಕೌನ್ಸಿಲ್ ಕಾಲಕಾಲಕ್ಕೆ,-

1.1979ರ ಅಧಿನಿಯಮ 21ರ ಮೂಲಕ 31.3.1979 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಎ) ಯಾವುದೇ ಇತರ ಮುನ್ಸಿಪಲ್ ಕೌನ್ಸಿಲ್ ಅಥವಾ ಯಾವುದೇ [1][ಪಟ್ಟಣ ಪಂಚಾಯತಿ][1] ದಂಡು ಪ್ರಾಧಿಕಾರ, [1][ತಾಲ್ಲೂಕು ಪಂಚಾಯಿತಿ ಅಥವಾ ಗ್ರಾಮ ಪಂಚಾಯಿತಿ][1] ಗಳು ಅಥವಾ ಅಂಥ [1][ಮುನ್ಸಿಪಲ್ ಕೌನ್ಸಿಲ್‌ಗಳ][1] ಸಂಯೋಗದೊಂದಿಗೆ,-

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(i) ಯಾವ ಉದ್ದೇಶಕ್ಕಾಗಿ ಅವುಗಳು ಜಂಟಿಯಾಗಿ ಹಿತಾಸಕ್ತಿಯನ್ನು ಹೊಂದಿರುವವೋ ಆ ಯಾವುದೇ ಉದ್ದೇಶಕ್ಕಾಗಿ ತಮ್ಮ ತಮ್ಮ ನಿಕಾಯಗಳೊಳಗಿಂದ ಒಂದು ಜಂಟಿ ಸಮಿತಿಯನ್ನು ನೇಮಕ ಮಾಡುವಲ್ಲಿ ಮತ್ತು ಅಂಥ ಪಂಚಾಯಿತಿಗಳ ಅಧ್ಯಕ್ಷನನ್ನು ನೇಮಕ ಮಾಡುವಲ್ಲಿ;

(ii) ಯಾವುದೇ ಅಂಥ ಸಮಿತಿಗೆ ಯಾವುದೇ ಜಂಟಿ ಕಾಮಗಾರಿಯ ನಿರ್ಮಾಣ ಮತ್ತು ಮುಂದಿನ ನಿರ್ವಹಣೆಯ ಬಗ್ಗೆ ಅಂಥ ಪ್ರತಿಯೊಂದು ನಿಕಾಯವನ್ನು ಬದ್ಧಗೊಳಿಸುವ ನಿಬಂಧನೆಗಳನ್ನು ರಚಿಸುವ ಅಧಿಕಾರವನ್ನು ಮತ್ತು ಯಾವುದೇ ಅಂಥ ನಿಕಾಯಗಳು ಚಲಾಯಿಸಬಹುದಾದಂಥ ಯಾವುದೇ ಅಧಿಕಾರವನ್ನು ಪ್ರತ್ಯಾಯೋಜಿಸುವಲ್ಲಿ; ಮತ್ತು

(iii) ಯಾವ ಉದ್ದೇಶಕ್ಕಾಗಿ ಸಮಿತಿಯನ್ನು ನೇಮಕ ಮಾಡಲಾಗಿದೆಯೋ ಆ ಉದ್ದೇಶಕ್ಕೆ ಸಂಬಂಧಿಸಿದಂತೆ ಯಾವುದೇ ಅಂಥ ಸಮಿತಿಯ ವ್ಯವಹರಣೆಗಳನ್ನು ನಿಯಂತ್ರಿಸುವುದಕ್ಕಾಗಿ ನಿಯಮಗಳನ್ನು ರಚಿಸುವಲ್ಲಿ ಮತ್ತು ಮಾರ್ಪಾಡು ಮಾಡುವಲ್ಲಿ

- ಕೂಡಿಕೊಳ್ಳಬಹುದು; ಮತ್ತು

(ಬಿ) ಸರ್ಕಾರದ ಮಂಜೂರಾತಿಗೊಳಪಟ್ಟು ಮುನ್ಸಿಪಲ್ ಕೌನ್ಸಿಲ್, [1][ಪಟ್ಟಣ ಪಂಚಾಯಿತಿ][1] ದಂಡು ಪ್ರಾಧಿಕಾರ, [1][ತಾಲ್ಲೂಕು ಪಂಚಾಯಿತಿ ಅಥವಾ ಗ್ರಾಮ ಪಂಚಾಯಿತಿಗಳು][1] ಅಥವಾ ಸಮಿತಿಗಳು ಅಥವಾ ಹಿಂದೆ ಹೇಳಿದಂತಹ ಸಂಯೋಗಗಳೊಂದಿಗೆ ಹಾಗೆ ಕರಾರು ಮಾಡಿಕೊಳ್ಳುವ ನಿಕಾಯಗಳು [2][ದಾರಿ ಸುಂಕಗಳ ವಿಧಿಸುವಿಕೆ][2] ಯನ್ನು ಸದರಿ ನಿಕಾಯಗಳ ನಿಯಂತ್ರಣಕ್ಕೊಳಪಟ್ಟು, ಪ್ರದೇಶ ಪರಿಮಿತಿಗಳೊಳಗೆ ಪ್ರತ್ಯೇಕವಾಗಿ ವಿಧಿಸುವುದರ ಬದಲು ಒಟ್ಟಾಗಿ ವಿಧಿಸಬಹುದೆಂದು ಒಪ್ಪಂದವನ್ನು ಮಾಡಿಕೊಳ್ಳಬಹುದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2.1979ರ ಅಧಿನಿಯಮ 21ರ ಮೂಲಕ 31.6.1979 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ (1)ನೇ ಉಪ-ಪ್ರಕರಣದ ಉಪ-ಬಂಧಗಳ ಮೇರೆಗೆ ಯಾವುದೇ ಇತರ ಸ್ಥಳೀಯ ಪ್ರಾಧಿಕಾರದ ಸಹಮತಿಯನ್ನು ಮುನ್ಸಿಪಲ್ ಕೌನ್ಸಿಲ್ ಕೋರಿರುವಲ್ಲಿ ಮತ್ತು ಅಂಥ ಇತರ ಸ್ಥಳೀಯ ಪ್ರಾಧಿಕಾರವು ಸಹಮತಿಸಲು ನಿರಾಕರಿಸಿರುವಲ್ಲಿ ಹಿಂದೆ ಹೇಳಿದ [1][ಜಿಲ್ಲಾಧಿಕಾರಿಯು][1] ವಿಷಯದಲ್ಲಿ ದಂಡು ಪ್ರಾಧಿಕಾರವಲ್ಲದ ಅಂಥ ಇತರ ಸ್ಥಳೀಯ ಪ್ರಾಧಿಕಾರದ ಸಹಮತಿಯನ್ನು ಅಗತ್ಯಪಡಿಸಿ ತಾನು ಸೂಕ್ತವೆಂದು ಭಾವಿಸುವಂಥ ಆದೇಶಗಳನ್ನು ಮಾಡಬಹುದು; ಮತ್ತು ಅಂಥ ಇತರ ಸ್ಥಳೀಯ ಪ್ರಾಧಿಕಾರವು ಅಂಥ ಆದೇಶಗಳನ್ನು ಪಾಲಿಸತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) ಈ ಪ್ರಕರಣದ ಮೇರೆಗೆ ಯಾವುದೇ ಉದ್ದೇಶಕ್ಕಾಗಿ ಒಪ್ಪಂದಕ್ಕೆ ಸೇರಿಕೊಂಡ ಅಥವಾ ಅದನ್ನು ಮಾಡಿಕೊಂಡ ನಿಕಾಯಗಳ ನಡುವೆ ಯಾವುದೇ ಭಿನ್ನಾಭಿಪ್ರಾಯಗಳು ಉದ್ಭವಿಸಿದರೆ,

ಅದರ ಬಗ್ಗೆ ಸರ್ಕಾರ ಅಥವಾ ಅದು ಈ ಬಗ್ಗೆ ನೇಮಕ ಮಾಡುವಂಥ ಅಧಿಕಾರಿಯ ತೀರ್ಮಾನವು ಅಂತಿಮವಾಗಿರತಕ್ಕದ್ದು:

ಪರಂತು, ಸಂಬಂಧಪಟ್ಟ ನಿಕಾಯಗಳಲ್ಲಿ ಯಾವುದಾದರೊಂದು ದಂಡು ಪ್ರಾಧಿಕಾರವಾಗಿದ್ದರೆ ಯಾವುದೇ ಅಂಥ ತೀರ್ಮಾನವು ಕೇಂದ್ರ ಸರ್ಕಾರದ ಸಹಮತಿಗೊಳಪಟ್ಟಿರತಕ್ಕದ್ದು.

[1][**71ಎ. ಮುನ್ಸಿಪಲ್ ಕೌನ್ಸಿಲ್ ಸಿಬ್ಬಂದಿ.-** 365ನೇ ಪ್ರಕರಣದ ಉಪಬಂಧಗಳು ಮತ್ತು 323ನೇ ಪ್ರಕರಣದ ಮೇರೆಗೆ ರಚಿಸಲಾದ ನಿಯಮಗಳಿಗೊಳಪಟ್ಟು, ಪ್ರತಿಯೊಂದು ಮುನ್ಸಿಪಲ್ ಕೌನ್ಸಿಲ್ ತನ್ನ ಕರ್ತವ್ಯಗಳನ್ನು ನಿರ್ವಹಿಸಲು ಅವಶ್ಯವಾಗಬಹುದಾದಂಥ ಅಧಿಕಾರಿಗಳು ಮತ್ತು ನೌಕರರನ್ನು ನಿಯೋಜಿಸಿಕೊಳ್ಳಲು ಹಕ್ಕುಳ್ಳದ್ದಾಗಿರತಕ್ಕದ್ದು.][1]

1.1966ರ ಅಧಿನಿಯಮ 34ರ ಮೂಲಕ 1.4.1965 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

72. ಬಾಡಿಗೆಗೆ ಕೊಡಲು, ಮಾರಾಟ ಮಾಡಲು ಮತ್ತು ಕರಾರು ಮಾಡಿಕೊಳ್ಳಲು ಮುನ್ಸಿಪಲ್ ಕೌನ್ಸಿಲ್‌ನ ಸಕ್ಷಮತೆ.- (1) (2) ಮತ್ತು (9)ನೇ ಉಪ-ಪ್ರಕರಣಗಳಲ್ಲಿ ಅಡಕವಾದ ಷರತ್ತುಗಳು ಮತ್ತು ಪರಿಬಂಧಗಳಿಗೆ ಮತ್ತು ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರ ಪರಿಬಂಧಗಳು ಮತ್ತು ಷರತ್ತುಗಳಿಗೊಳಪಟ್ಟು, ಪ್ರತಿಯೊಂದು ಮುನ್ಸಿಪಲ್ ಕೌನ್ಸಿಲ್ ಅದಕ್ಕೆ ಸೇರಿದ ಅಥವಾ ಈ ಅಧಿನಿಯಮದ ಉದ್ದೇಶಕ್ಕಾಗಿ ಅದು ಆರ್ಜಿಸಿದ ಯಾವುದೇ ಚರ ಅಥವಾ ಸ್ಥಿರ ಸ್ವತ್ತನ್ನು ಬಾಡಿಗೆ ಕೊಡಲು, ಮಾರಾಟ ಮಾಡಲು ಅಥವಾ ಅನ್ಯಥಾ ವರ್ಗಾವಣೆ ಮಾಡಲು ಈ ಅಧಿನಿಯಮದ ಮತ್ತು ಉಪಬಂಧಗಳಿಗೆ ಮತ್ತು ಉದ್ದೇಶಗಳಿಗೆ ಅಸಂಗತವಾಗದಿರುವಷ್ಟರಮಟ್ಟಿಗೆ, ಸದರಿ ಉಪಬಂಧಗಳ ಮತ್ತು ಉದ್ದೇಶಗಳನ್ನು ಪರಿಣಾಮಕಾರಿಯಾಗಿಸಲು ಅವಶ್ಯ ಅಥವಾ ವಿಹಿತವೆಂದು ಅದು ಪರ್ಯಾಯಲೋಚಿಸುವಂಥ ಎಲ್ಲಾ ಕರಾರುಗಳನ್ನು ಮಾಡಿಕೊಳ್ಳಲು ಮತ್ತು ಅವುಗಳನ್ನು ನೆರವೇರಿಸಲು ಸಕ್ಷಮವಾಗಿರತಕ್ಕದ್ದು.

(2) ಸರ್ಕಾರದ ಪೂರ್ವ ಮಂಜೂರಾತಿಯನ್ನು ಪಡೆದಿದ್ದ ಹೊರತು, ಅದರ ಮೌಲ್ಯ ಏನೇ ಆಗಿರಲಿ ಯಾವುದೇ ಸ್ಥಿರ ಸ್ವತ್ತಿನ ಉಚಿತ ಮಂಜೂರಾತಿಯು ಮತ್ತು ನಿಗದಿತ ಕನಿಷ್ಠ ಬೆಲೆಗೆ ಯಾವುದೇ ಮಂಜೂರಾತಿಯು ಮತ್ತು ಐದು ವರ್ಷಗಳ ಅವಧಿಗೆ ಮೀರಿದ ಯಾವುದೇ ಬಾಡಿಗೆಗೆ ಕೊಡುವುದು ಮತ್ತು [1][ಇಪ್ಪತ್ತೈದು ಸಾವಿರ][1] ರೂಪಾಯಿಗಳ ಮೌಲ್ಯವನ್ನು ಮೀರಿದ ಸ್ಥಿರ ಸ್ವತ್ತಿನ ಯಾವುದೇ ಮಾರಾಟ ಅಥವಾ ಇತರ ವರ್ಗಾವಣೆಯು ಸಿಂಧುವಾಗಿರತಕ್ಕದ್ದಲ್ಲ.

1.1986ರ ಅಧಿನಿಯಮ 33ರ ಮೂಲಕ 6.6.1986 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) (ಎ) ಒಂದು ವರ್ಷಕ್ಕೆ ಮೀರಿದ ಅವಧಿಗಾಗಿ ಬಾಡಿಗೆ ಕೊಡುವುದರ ಅಥವಾ ಮಾರಾಟದ ಅಥವಾ ಇತರ ವರ್ಗಾವಣೆಯ ಅಥವಾ ಯಾವುದೇ ಸ್ಥಿರ ಸ್ವತ್ತಿನ ಖರೀದಿಗಾಗಿನ ಕರಾರಿನ;

(ಬಿ) ಬಜೆಟ್ ಅನುದಾನದಲ್ಲಿ ಸೇರಿಲ್ಲದ ವೆಚ್ಚವನ್ನು ಒಳಗೊಳ್ಳುವಂಥ ಪ್ರತಿಯೊಂದು ಕರಾರಿನ;

(ಸಿ) ಯಾವ ಕರಾರಿನ ನೆರವೇರಿಕೆಯನ್ನು, ಕರಾರಿನ ದಿನಾಂಕದಂದು ಚಾಲ್ತಿ ಸರ್ಕಾರಿ ವರ್ಷದೊಳಗೆ ಪೂರ್ಣಗೊಳಿಸಲಾಗದೋ ಆ ಪ್ರತಿಯೊಂದು ಕರಾರಿನ,

- ಸಂದರ್ಭದಲ್ಲಿ ಸಾಮಾನ್ಯ ಸಭೆಯಲ್ಲಿ ಅಂಗೀಕರಿಸಿದ ನಿರ್ಣಯದ ಮೂಲಕ ಮುನ್ಸಿಪಲ್ ಕೌನ್ಸಿಲ್‌ನ ಮಂಜೂರಾತಿಯು ಅಗತ್ಯವಿರತಕ್ಕದ್ದು.

(4) ಮುನ್ಸಿಪಲ್ ಕೌನ್ಸಿಲ್‌ಗೆ ಸೇರಿದ ಚರಸ್ವತ್ತಿನ ಖರೀದಿಗಾಗಿನ ಅಥವಾ ಯಾವುದೇ ಚರ ಸ್ವತ್ತಿನ ಮಾರಾಟಕ್ಕಾಗಿನ ಕರಾರಿನ ಸಂದರ್ಭದಲ್ಲಿ ಖರೀದಿಯು ಒಳಗೊಳ್ಳುವಂಥ ವೆಚ್ಚವು ಅಥವಾ ಮುನ್ಸಿಪಾಲಿಟಿಯು ಲೆಕ್ಕಪತ್ರಗಳಲ್ಲಿ ಅಂದಾಜು ಮಾಡಲಾದಂತೆ ಮಾರಬೇಕಾದ ಸ್ವತ್ತಿನ ಮೌಲ್ಯವು ಟೌನ್ ಮುನ್ಸಿಪಲ್ ಕೌನ್ಸಿಲ್ ನ ಸಂದರ್ಭದಲ್ಲಿ ಒಂದು ಸಾವಿರ ರೂಪಾಯಿಗಳನ್ನು ಮೀರಿದರೆ ಮತ್ತು ಸಿಟಿ ಮುನ್ಸಿಪಲ್ ಕೌನ್ಸಿಲ್‌ನ ಸಂದರ್ಭದಲ್ಲಿ ಎರಡು ಸಾವಿರ ರೂಪಾಯಿಗಳನ್ನು ಮೀರಿದರೆ ಮುನ್ಸಿಪಲ್ ಕೌನ್ಸಿಲ್‌ನ ಮಂಜೂರಾತಿಯು ಅಗತ್ಯವಿರತಕ್ಕದ್ದು.

(5) [1][ಐದು ಸಾವಿರ ರೂಪಾಯಿಗಳನ್ನು][1] ಮೀರುವ ವೆಚ್ಚವನ್ನು ಒಳಗೊಳ್ಳುವ ಸಾಮಗ್ರಿಗಳು ಅಥವಾ ಸರಕುಗಳ ಸರಬರಾಜಿಗಾಗಿ ಅಥವಾ ಯಾವುದೇ ಕಾಮಗಾರಿಯ ನಿರ್ವಹಣೆಗಾಗಿ ಯಾವುದೇ ಕರಾರನ್ನು ಮಾಡಿಕೊಳ್ಳುವ ಮುಂಚೆ, ಮುನ್ಸಿಪಲ್ ಕೌನ್ಸಿಲ್ ಕಾಲಕಾಲಕ್ಕೆ ನಿರ್ಧರಿಸಬಹುದಾದಂಥ ರೀತಿಯಲ್ಲಿ ಅಂಥ ಕರಾರನ್ನು ಮಾಡಿಕೊಳ್ಳಲು ಇಚ್ಛಿಸುವ ವ್ಯಕ್ತಿಗಳಿಂದ ಟೆಂಡರುಗಳನ್ನು

ಬಹಿರಂಗವಾಗಿ ಕರೆಯತಕ್ಕದ್ದು ಮತ್ತು ಅಂದಾಜು ಮೌಲ್ಯವು ನಿಯಮಿಸಬಹುದಾದಂಥ ಮೊಬಲಗನ್ನು ಮೀರಿದಾಗ ಯಾವುದೇ ಅಂಥ ಕರಾರನ್ನು ಸರ್ಕಾರದ ಅಥವಾ ಈ ಬಗ್ಗೆ ಸರ್ಕಾರದಿಂದ ಕ್ರಮಬದ್ಧವಾಗಿ ಅಧಿಕೃತನಾದ ಅಧಿಕಾರಿಯ ಪೂರ್ವಾನುಮೋದನೆಯಿಲ್ಲದೆ ಮಾಡಿಕೊಳ್ಳತಕ್ಕದ್ದಲ್ಲ.

1.1976ರ ಅಧಿನಿಯಮ 83 ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(6) (2) ರಿಂದ (4)ನೇ ಉಪ-ಪ್ರಕರಣಗಳಲ್ಲಿ ಅನ್ಯಥಾ ಉಪಬಂಧಿಸಿರದ ಪ್ರತಿಯೊಂದು ಕರಾರಿನ ಸಂದರ್ಭದಲ್ಲಿ ಈ ಅಧಿನಿಯಮದ ಅಥವಾ ಅದರಡಿಯಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ನಿಯಮಗಳ ಉಪಬಂಧಗಳ ಮೇರೆಗೆ ಈ ಬಗ್ಗೆ ಶಕ್ತಗೊಳಿಸಿದಂಥ ಅಂಥ ಸಮಿತಿಯ ಅಥವಾ ವ್ಯಕ್ತಿಯ ಮಂಜೂರಾತಿಯು ಅಗತ್ಯವಾಗಿರತಕ್ಕದ್ದು.

(7) (6)ನೇ ಉಪ-ಪ್ರಕರಣವು ಅನ್ವಯವಾಗುವಂಥ ಕರಾರನ್ನು ಹೊರತುಪಡಿಸಿ ಮುನ್ಸಿಪಲ್ ಕೌನ್ಸಿಲ್ ಅಥವಾ ಅದರ ಪರವಾಗಿ ಮಾಡಿಕೊಂಡ ಪ್ರತಿಯೊಂದು ಕರಾರು ಬರಹದಲ್ಲಿರತಕ್ಕದ್ದು ಮತ್ತು ಅದಕ್ಕೆ ಅಧ್ಯಕ್ಷ ಅಥವಾ ಉಪಾಧ್ಯಕ್ಷ ಮತ್ತು ಇತರ ಇಬ್ಬರು ಕೌನ್ಸಿಲರ್ ಗಳು ರುಜು ಮಾಡತಕ್ಕದ್ದು ಮತ್ತು ಅದಕ್ಕೆ ಮುನ್ಸಿಪಲ್ ಕೌನ್ಸಿಲ್‌ನ ಸಾಮಾನ್ಯ ಮುದ್ರೆಯಿಂದ ಮುದ್ರೆಯನ್ನು ಒತ್ತತಕ್ಕದ್ದು. (6)ನೇ ಉಪ-ಪ್ರಕರಣವು ಅನ್ವಯವಾಗುವಂಥ ಪ್ರತಿಯೊಂದು ಕರಾರು ಆ ಬಗ್ಗೆ ಶಕ್ತಗೊಳಿಸಲಾದ ಅಂಥ ಸಮಿತಿಯ ಅಧ್ಯಕ್ಷ ಅಥವಾ ಅಂಥ ಇತರ ವ್ಯಕ್ತಿಯು ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿಗನುಸಾರವಾಗಿ ಅಂಥ ಅಧ್ಯಕ್ಷ ಅಥವಾ ವ್ಯಕ್ತಿಯು ಅಂಥ ಕರಾರನ್ನು ತನ್ನ ಪರವಾಗಿ ತಾನೇ ಬರೆದುಕೊಟ್ಟಿದ್ದರೆ ಅವನನ್ನು ಬದ್ಧಗೊಳಿಸುತ್ತಿದ್ದಂಥ ರೀತಿ ಮತ್ತು ನಮೂನೆಯಲ್ಲಿ ಬರೆದುಕೊಡತಕ್ಕದ್ದು.

(8) ಈ ಪ್ರಕರಣದ ಅಗತ್ಯಗಳಿಗನುಸಾರವಾಗಿ ಮಾಡಿಲ್ಲದಂಥ ಯಾವುದೇ ಕರಾರು ಸಿಂಧುವಾಗಿರತಕ್ಕದ್ದಲ್ಲ ಅಥವಾ ಮುನ್ಸಿಪಲ್ ಕೌನ್ಸಿಲ್‌ನ್ನು ಬದ್ಧಗೊಳಿಸತಕ್ಕದ್ದಲ್ಲ.

(9) ಈ ಪ್ರಕರಣದ ಉಪಬಂಧಗಳು 86ನೇ ಪ್ರಕರಣದ ಮತ್ತು XIVನೇ ಅಧ್ಯಾಯದ ಉಪಬಂಧಗಳಿಗೊಳಪಟ್ಟಿರತಕ್ಕದ್ದು.

73. ಸ್ಥತ್ತಿನ ವರ್ಗಾವಣೆಯು ಷರತ್ತುಗಳಿಗೊಳಪಟ್ಟಿರಬಹುದು.- ಮುನ್ಸಿಪಲ್ ಕೌನ್ಸಿಲ್‌ನಿಂದ ಮಾಡಿದ ಚರ ಅಥವಾ ಸ್ಥಿರ ಸ್ಥತ್ತಿನ ಮಂಜೂರಾತಿ, ಬಾಡಿಗೆಗೆ ಕೊಡುವಿಕೆ, ಮಾರಾಟ ಅಥವಾ ಇತರ ವರ್ಗಾವಣೆಯು ಮುನ್ಸಿಪಲ್ ಕೌನ್ಸಿಲ್ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೊಳಪಟ್ಟಿರಬಹುದು ಮತ್ತು 1882ರ ಸ್ಥತ್ತು ವರ್ಗಾವಣೆ ಅಧಿನಿಯಮ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಅಡಕವಾಗಿದ್ದಾಗ್ಯೂ ಆ ಮಂಜೂರಾತಿ, ಬಾಡಿಗೆಗೆ ಕೊಡುವುದು, ಮಾರಾಟ ಅಥವಾ ವರ್ಗಾವಣೆಯು ಅಂಥ ಷರತ್ತುಗಳಿಗೊಳಪಟ್ಟಿರಬಹುದು.

74. ಮುನ್ಸಿಪಾಲಿಟಿ ಕಾಮಗಾರಿಗಳನ್ನು ನಿರ್ವಹಿಸಲು ಸರ್ಕಾರದಿಂದ ನೇಮಕಗೊಂಡ ಅಧಿಕಾರಿಗಳಿಂದ ಕರಾರುಗಳು ಮತ್ತು ಅಂಥ ಕಾಮಗಾರಿಗಳಿಗಾಗಿ ಸಂದಾಯ.- 72ನೇ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಮುನ್ಸಿಪಲ್ ಕೌನ್ಸಿಲ್‌ನ ಪರವಾಗಿ ಯಾವುದೇ ಕಾಮಗಾರಿಯನ್ನು ನಿರ್ವಹಿಸಲು ಸರ್ಕಾರದಿಂದ ನೇಮಕಗೊಂಡ ಯಾರೇ ವ್ಯಕ್ತಿಯು, ಸರ್ಕಾರವು ನಿಯಮಿಸಬಹುದಾದಂಥ ನಿಯಂತ್ರಣಕ್ಕೊಳಪಟ್ಟು, ಅಂಥ ಕಾಮಗಾರಿಗೆ ಒದಗಿಸಲಾದ ಮೊತ್ತದಷ್ಟರ ಮಟ್ಟಿಗೆ ಅಂಥ ಕಾಮಗಾರಿಗಳನ್ನು ನಿರ್ವಹಿಸುವ ಉದ್ದೇಶಕ್ಕಾಗಿ ಅವಶ್ಯವಾದಂಥ ಕರಾರುಗಳನ್ನು ಮಾಡಿಕೊಳ್ಳಬಹುದು; ಮತ್ತು ಮುನ್ಸಿಪಲ್ ಕೌನ್ಸಿಲ್ ಹಿಂದೆ ಹೇಳಿದಷ್ಟರ ಮಟ್ಟಿಗೆ, ಸದರಿ ಉದ್ದೇಶಕ್ಕಾಗಿ ಅಗತ್ಯವಾಗಬಹುದಾದಂಥ ಮೊತ್ತಗಳನ್ನು ಹಾಗೆ ನೇಮಕಗೊಂಡ ವ್ಯಕ್ತಿಗೆ ಸಂದಾಯ ಮಾಡತಕ್ಕದ್ದು.

75. ಭೂಮಿಯ ಕಡ್ಡಾಯ ಆರ್ಜನೆ.- ಈ ಅಧಿನಿಯಮದ ಉದ್ದೇಶಗಳಿಗಾಗಿ ಯಾವುದೇ ಸ್ಥಿರಸ್ಥತ್ತು ಮುನ್ಸಿಪಲ್ ಕೌನ್ಸಿಲ್‌ಗೆ ಅಗತ್ಯವಾದಾಗಲೆಲ್ಲಾ ಸರ್ಕಾರವು ಮುನ್ಸಿಪಲ್ ಕೌನ್ಸಿಲ್‌ನ ಕೋರಿಕೆಯ ಮೇರೆಗೆ 1894ರ ಭೂ ಆರ್ಜನಾ ಅಧಿನಿಯಮದ ಮೇರೆಗೆ ಅದರ ಆರ್ಜನೆಯನ್ನು ಮಾಡಿ ಕೊಡಬಹುದು ಮತ್ತು ಆ ಅಧಿನಿಯಮದ ಮೇರೆಗೆ ಕೊಡಲಾದ ನಷ್ಟ ಪರಿಹಾರ ಮತ್ತು ಆ ವ್ಯವಹರಣೆಗಳಿಗೆ ಸಂಬಂಧಿಸಿದಂತೆ ಸರ್ಕಾರವು ವಹಿಸಿದ ಎಲ್ಲಾ ವೆಚ್ಚಗಳನ್ನು ಮುನ್ಸಿಪಲ್ ಕೌನ್ಸಿಲ್ ಸಂದಾಯ ಮಾಡಿದ ಮೇಲೆ ಆ ಸ್ಥಿರಸ್ಥತ್ತನ್ನು ಮುನ್ಸಿಪಲ್ ಕೌನ್ಸಿಲ್‌ಗೆ ವರ್ಗಾವಣೆ ಮಾಡತಕ್ಕದ್ದು ಮತ್ತು ಅದು ಆ ತರುವಾಯ ಅಂಥ ಕೌನ್ಸಿಲ್‌ನಲ್ಲಿ ನಿಹಿತವಾಗತಕ್ಕದ್ದು.

76. ಮುನ್ಸಿಪಲ್ ಕೌನ್ಸಿಲ್‌ಗಳು ವಹಿಸಿದ ಎಲ್ಲಾ ಖರ್ಚುಗಳು ಮತ್ತು ವೆಚ್ಚಗಳಿಗಾಗಿ ಮುನ್ಸಿಪಾಲಿಟಿ ನಿಧಿಯು ಸಾಮಾನ್ಯವಾಗಿ ಗುರಿಯಾಗಿರತಕ್ಕದ್ದು.- (1) ಇಲ್ಲಿ ಇನ್ನು ಮುಂದೆ ಅನ್ಯಥಾ ಉಪಬಂಧಿಸಿದುದನ್ನು ಹೊರತುಪಡಿಸಿ, ಯಾರೇ ಅಧ್ಯಕ್ಷ ಅಥವಾ ಕೌನ್ಸಿಲರ್ ನು, ಮುನ್ಸಿಪಲ್ ಕೌನ್ಸಿಲ್ ಅಥವಾ ಅದರ ಪರವಾಗಿ ಮಾಡಿಕೊಂಡ ಯಾವುದೇ ಕರಾರು ಅಥವಾ ಒಪ್ಪಂದ ಅಥವಾ ವಹಿಸಲಾದ ಯಾವುದೇ ವೆಚ್ಚಕ್ಕೆ ಸಂಬಂಧಿಸಿದಂತೆ ವೈಯಕ್ತಿಕವಾಗಿ ಹೊಣೆಯಾಗಿರತಕ್ಕದ್ದಲ್ಲ.

(2) ಈ ಅಧಿನಿಯಮ ಅಥವಾ ಯಾವುದೇ ಇತರ ಕಾನೂನಿನ ಮೇರೆಗಿನ ಯಾವುದೇ ಇತರ ಕ್ರಮಕ್ಕೆ ಬಾಧಕವಾಗದಂತೆ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಪ್ರತಿಯೊಬ್ಬ ಕೌನ್ಸಿಲರ್ ನು, ಮುನ್ಸಿಪಲ್ ಕಮೀಷನರ್ ನು, ಚೀಫ್ ಆಫೀಸರ್ ನು ಅಥವಾ ಮುನ್ಸಿಪಲ್ ಕೌನ್ಸಿಲ್‌ನ ಇತರ ನಿಯೋಜಕನು, ನಷ್ಟ, ಪೋಲು ಅಥವಾ ದುರ್ವಿನಿಯೋಗಕ್ಕಾಗಿ ಮುನ್ಸಿಪಲ್ ಕೌನ್ಸಿಲ್ ಒಡೆತನ ಹೊಂದಿದ ಅಥವಾ ಅದರಲ್ಲಿ ನಿಹಿತವಾದ ಯಾವುದೇ ಹಣ ಅಥವಾ ಇತರ ಸ್ವತ್ತಿನ ಅಂಥ ನಷ್ಟ, ಪೋಲು ಅಥವಾ ದುರ್ವಿನಿಯೋಗವು ಅವನ ನಿರ್ಲಕ್ಷತೆಯ ನೇರ ಪರಿಣಾಮವಾಗಿ ಅಥವಾ ಅವನ ದುರ್ವರ್ತನೆಯಿಂದ ಉಂಟಾದುದಾಗಿದ್ದರೆ ಅಥವಾ ಅನುಕೂಲಿತವಾಗಿದ್ದರೆ ಹೊಣೆಯಾಗತಕ್ಕದ್ದು.

77. ಮುನ್ಸಿಪಲ್ ಕೌನ್ಸಿಲ್‌ನ ಅಧಿಕಾರಿ ಅಥವಾ ನೌಕರನು ಅಂಥ ಮುನ್ಸಿಪಲ್ ಕೌನ್ಸಿಲ್‌ನೊಂದಿಗೆ ಯಾವುದೇ ಕರಾರಿನಲ್ಲಿ ಹಿತಾಸಕ್ತಿ ಹೊಂದಿರತಕ್ಕದ್ದಲ್ಲ.- (1) ಮುನ್ಸಿಪಾಲಿಟಿ ಅಧಿಕಾರಿ ಅಥವಾ ನೌಕರನಾಗಿ ಅಲ್ಲದೆ ಮುನ್ಸಿಪಲ್ ಕೌನ್ಸಿಲ್‌ನೊಂದಿಗೆ, ಅದರ ಮೂಲಕ ಅಥವಾ ಅದರ ಪರವಾಗಿ ಯಾವುದೇ ಕರಾರಿನಲ್ಲಿ ಅಥವಾ ಮುನ್ಸಿಪಲ್ ಕೌನ್ಸಿಲ್‌ನೊಂದಿಗೆ ಅದರ ಅಧೀನದಲ್ಲಿ, ಅದರ ಮೂಲಕ ಅಥವಾ ಅದರ ಪರವಾಗಿ ಯಾವುದೇ ನಿಯೋಜನೆಯಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ, ತಾನಾಗಿಯೇ ಅಥವಾ ತನ್ನ ಪಾಲುದಾರನ ಮೂಲಕ ಯಾವುದೇ ಪಾಲು ಅಥವಾ ಹಿತಾಸಕ್ತಿಯನ್ನು ಹೊಂದಿರುವ ಯಾರೇ ವ್ಯಕ್ತಿಯು, ಅಂಥ ಮುನ್ಸಿಪಲ್ ಕೌನ್ಸಿಲ್‌ನ ಅಧಿಕಾರಿ ಅಥವಾ ನೌಕರನಾಗಿರಲು ಅನರ್ಹನಾಗಿರತಕ್ಕದ್ದು.

(2) ಯಾರೇ ಮುನ್ಸಿಪಾಲಿಟಿ ಅಧಿಕಾರಿ ಅಥವಾ ನೌಕರನು, (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದಂತಹ ನಿಯೋಜನೆಗಾಗಿನ ಅಂಥ ಯಾವುದೇ ಕರಾರಿನಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ತಾನಾಗಿಯೇ ಅಥವಾ ಅವನ ಪಾಲುದಾರನ ಮೂಲಕ, ಯಾವುದೇ ಪಾಲು ಅಥವಾ ಹಿತಾಸಕ್ತಿಯನ್ನು ಆರ್ಜಿಸಿದರೆ ಅಥವಾ ಆರ್ಜಿಸಿದ್ದರೆ, ನೇಮಕ ಮಾಡಿದ ಪ್ರಾಧಿಕಾರದ ಆದೇಶದ ಮೂಲಕ ವರ್ಗಾಯಿತನಾಗಲು ಅಥವಾ ಅವನ ಪದದಿಂದ ತೆಗೆದು ಹಾಕುವುದಕ್ಕೆ ಅವನು ಗುರಿಯಾಗತಕ್ಕದ್ದು:

ಪರಂತು, ತೆಗೆದುಹಾಕುವ ಆದೇಶವನ್ನು ಮಾಡುವುದಕ್ಕೆ ಮುಂಚೆ, ಅಂಥ ಅಧಿಕಾರಿ ಅಥವಾ ನೌಕರನಿಗೆ ಅವನ ಬಗ್ಗೆ ತೆಗೆದುಕೊಳ್ಳಲು ಉದ್ದೇಶಿಸಿದ ಕ್ರಮದ ವಿರುದ್ಧ ಕಾರಣವನ್ನು ತೋರಿಸಲು ಯುಕ್ತ ಅವಕಾಶವನ್ನು ಕೊಡತಕ್ಕದ್ದು:

ಮತ್ತೂ ಪರಂತು, ಯಾರೇ ವ್ಯಕ್ತಿಯು, ಯಾವುದೇ ಕಂಪನಿಯಲ್ಲಿ ಷೇರುದಾರ, ಅಥವಾ ಅದರ ಸದಸ್ಯನಾಗಿರುವ ಕಾರಣ ಮಾತ್ರದಿಂದ ಅವನು ಅಂಥ ಕಂಪನಿಯ ನಿರ್ದೇಶಕನಾಗಿದ್ದ ಹೊರತು, ಅಂಥ ಕಂಪನಿ ಮತ್ತು ಮುನ್ಸಿಪಲ್ ಕೌನ್ಸಿಲ್‌ನ ನಡುವೆ ಮಾಡಿಕೊಂಡ ಯಾವುದೇ ಕರಾರಿನಲ್ಲಿ ಹಿತಾಸಕ್ತಿಯನ್ನು ಹೊಂದಿರುವುದಾಗಿ ಭಾವಿಸತಕ್ಕದ್ದಲ್ಲ.

ವಿವರಣೆ:- ಈ ಪ್ರಕರಣದ ಉದ್ದೇಶಕ್ಕಾಗಿ ``ಕಂಪನಿ'ಯು ಸಹಕಾರ ಸಂಘವನ್ನು ಒಳಗೊಳ್ಳುತ್ತದೆ.

78. ಮುನ್ಸಿಪಲ್ ಕೌನ್ಸಿಲ್‌ನೊಂದಿಗೆ ಯಾವುದೇ ಕರಾರು ಇತ್ಯಾದಿಗಳಲ್ಲಿ ಕೌನ್ಸಿಲರ್ ನು ಹಿತಾಸಕ್ತಿಯನ್ನು ಹೊಂದಿರುವುದಕ್ಕಾಗಿ ದಂಡನೆ.- ಕೌನ್ಸಿಲರ್ ನಾಗಿರುವುದಕ್ಕಾಗಿ ಆ ಮೂಲಕ ಅನರ್ಹಗೊಳ್ಳದೆಯೇ ವ್ಯಕ್ತಿಗೆ 16ನೇ ಪ್ರಕರಣದ ಮೇರೆಗೆ ಹೊಂದಲು ಅವಕಾಶವಿರುವಂಥ ಪಾಲು ಅಥವಾ ಹಿತಾಸಕ್ತಿಯಾಗಿರದ, ಮುನ್ಸಿಪಲ್ ಕೌನ್ಸಿಲ್‌ನೊಂದಿಗೆ, ಅದರ ಅಧೀನದಲ್ಲಿ ಅದರ ಮೂಲಕ ಅಥವಾ ಅದರ ಪರವಾಗಿ ಯಾವುದೇ ಕರಾರು ಅಥವಾ ನಿಯೋಜನೆಯಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇ ಪಾಲು ಅಥವಾ ಹಿತಾಸಕ್ತಿಯನ್ನು ತಿಳಿದೂ ತಿಳಿದೂ ಆರ್ಜಿಸುವ ಯಾರೇ ಕೌನ್ಸಿಲರ್ ನು ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

79. ಕೌನ್ಸಿಲರ್ ಮುಂತಾದವರನ್ನು ಸರ್ಕಾರಿ ನೌಕರರೆಂದು ಭಾವಿಸತಕ್ಕದ್ದು.- (1) ಮುನ್ಸಿಪಲ್ ಕೌನ್ಸಿಲ್‌ನ ಪ್ರತಿಯೊಬ್ಬ ಕೌನ್ಸಿಲರ್, ಅಧಿಕಾರಿ ಅಥವಾ ನೌಕರ, 290ನೇ ಪ್ರಕರಣದ ಮೇರೆಗೆ ನೇಮಕಗೊಂಡ ಪ್ರತಿಯೊಬ್ಬ ಲೆಕ್ಕಪರಿಶೋಧಕ ಮತ್ತು ಯಾವುದೇ ಮುನ್ಸಿಪಾಲಿಟಿ ತೆರಿಗೆಯನ್ನು ಸಂಗ್ರಹಿಸುವ ಪ್ರತಿಯೊಬ್ಬ ಗುತ್ತಿಗೆದಾರ ಮತ್ತು ಅಂಥ ಯಾರೇ ಗುತ್ತಿಗೆದಾರನಿಂದ ನಿಯೋಜಿತನಾದ ಪ್ರತಿಯೊಬ್ಬ ನೌಕರ ಮತ್ತು ಇತರ ವ್ಯಕ್ತಿಯು, ತತ್ಕಾಲದಲ್ಲಿ ಜಾರಿಯಲ್ಲಿರುವ ಭಾರತ ದಂಡ ಸಂಹಿತೆ 21ನೇ ಪ್ರಕರಣ ಮತ್ತು 1947ರ ಭ್ರಷ್ಟಾಚಾರ ವಿರೋಧ ಅಧಿನಿಯಮ (1947ರ ಕೇಂದ್ರ ಅಧಿನಿಯಮ II)ದ ಅರ್ಥವ್ಯಾಪ್ತಿಯೊಳಗೆ ಲೋಕ ನೌಕರನೆಂದು ಭಾವಿಸತಕ್ಕದ್ದು.

(2) ಭಾರತ ದಂಡ ಸಂಹಿತೆ 161ನೇ ಪ್ರಕರಣದಲ್ಲಿನ ``ರಾಜ್ಯ ಸರ್ಕಾರ'' ಮತ್ತು ``ಸರ್ಕಾರ'' ಎಂಬ ಪದಗಳು ಈ ಪ್ರಕರಣದ (1)ನೇ ಉಪ-ಪ್ರಕರಣದ ಉದ್ದೇಶಗಳಿಗಾಗಿ, ಮುನ್ಸಿಪಲ್ ಕೌನ್ಸಿಲ್‌ನ್ನು ಒಳಗೊಂಡಿರುವುದಾಗಿ ಭಾವಿಸತಕ್ಕದ್ದು.

80. ವ್ಯವಹರಣೆಗಳ ಸಿಂಧುತ್ವ.- ಸಾಮಾನ್ಯ ಸಭೆಯ ಕೌನ್ಸಿಲರ್ ನಾಗಿ, ಅಥವಾ ಅಧ್ಯಕ್ಷನಾಗಿ ಅಥವಾ ಅಧ್ಯಕ್ಷತೆ ವಹಿಸಿರುವ ಪ್ರಾಧಿಕಾರಿಯಾಗಿ ಅಥವಾ ಈ ಅಧಿನಿಯಮದ ಮೇರೆಗೆ ನೇಮಕಗೊಂಡ ಸಮಿತಿಯ ಅಧ್ಯಕ್ಷ ಅಥವಾ ಸದಸ್ಯನಾಗಿ ಕಾರ್ಯನಿರ್ವಹಿಸುತ್ತಿರುವ ಯಾರೇ ವ್ಯಕ್ತಿಯ ಚುನಾವಣೆ ಅಥವಾ ನೇಮಕಾತಿಯಲ್ಲಿನ ಯಾವುದೇ ಅನರ್ಹತೆ ಅಥವಾ ನ್ಯೂನತೆಯು, ಸಂದರ್ಭಾನುಸಾರ ಯಾವ ಮುನ್ಸಿಪಲ್ ಕೌನ್ಸಿಲ್ ಅಥವಾ ಅಂಥ ಯಾವುದೇ ಸಮಿತಿಯ ಯಾವುದೇ ಕಾರ್ಯ ಅಥವಾ ವ್ಯವಹರಣೆಯಲ್ಲಿ, ಅಂಥ ಕಾರ್ಯ ಅಥವಾ ವ್ಯವಹರಣೆಗೆ ಪಾಲ್ಗೊಂಡಿದ್ದ ಬಹುಮತದವರು ಕಾರ್ಯನಿರ್ವಹಿಸಲು ಹಕ್ಕುಳ್ಳವರಾಗಿದ್ದಾಗಲೆಲ್ಲಾ ಅಂಥ ವ್ಯಕ್ತಿಯು ಪಾಲ್ಗೊಂಡಿದ್ದಾನೋ, ಆ ಯಾವುದೇ ಮುನ್ಸಿಪಲ್ ಕೌನ್ಸಿಲ್ ಅಥವಾ ಯಾವುದೇ ಸಮಿತಿಯ ಯಾವುದೇ ಕಾರ್ಯ ಅಥವಾ ವ್ಯವಹರಣೆಯನ್ನು ನಿರರ್ಥಕಗೊಳಿಸುವುದಾಗಿ ಭಾವಿಸತಕ್ಕದ್ದಲ್ಲ.

(2) ಮುನ್ಸಿಪಲ್ ಕೌನ್ಸಿಲ್‌ನ ಅಥವಾ ಈ ಅಧಿನಿಯಮದ ಮೇರೆಗೆ ನೇಮಕಗೊಂಡ ಯಾವುದೇ ಸಮಿತಿಯ ಯಾವುದೇ ನಿರ್ಣಯವು, ಯಾರೇ ಕೌನ್ಸಿಲರ್ ಅಥವಾ ಸದಸ್ಯನಿಗೆ ನೋಟೀಸಿನ ಜಾರಿಯಲ್ಲಿನ ಯಾವುದೇ ಕ್ರಮದೋಷದಿಂದಾಗಿ ಅಸಿಂಧುವೆಂದು ಭಾವಿಸತಕ್ಕದ್ದಲ್ಲ, ಆದರೆ ಮುನ್ಸಿಪಲ್ ಕೌನ್ಸಿಲ್ ಅಥವಾ ಸಮಿತಿಯ ಆ ವ್ಯವಹರಣೆಗಳು ಅಂಥ ಕ್ರಮದೋಷದಿಂದ ಪ್ರತಿಕೂಲವಾಗಿ ಬಾಧಿತವಾಗಿದ್ದಿರಕೂಡದು.

(3) ತದ್ವಿರುದ್ಧವಾಗಿ ರುಜುವಾತು ಆಗುವವರೆಗೆ, ಈ ಅಧಿನಿಯಮದ ಮೇರೆಗೆ ನೇಮಕಗೊಂಡ ಮುನ್ಸಿಪಲ್ ಕೌನ್ಸಿಲ್ ಅಥವಾ ಸಮಿತಿಯ ಪ್ರತಿಯೊಂದು ಸಭೆಯ ವ್ಯವಹರಣೆಗಳಿಗೆ ಸಂಬಂಧಿಸಿದಂತೆ, ನಡವಳಿಕೆಯನ್ನು ಈ ಅಧಿನಿಯಮಕ್ಕನುಸಾರವಾಗಿ ಮಾಡಲಾಗಿದ್ದರೆ ಮತ್ತು ಅದಕ್ಕೆ ರುಜು ಮಾಡಲಾಗಿದ್ದರೆ ಆ ಸಭೆಯನ್ನು ಕ್ರಮಬದ್ಧವಾಗಿ, ಕರೆಯಲಾಗಿತ್ತು ಮತ್ತು ನಡೆಸಲಾಯಿತು ಎಂದು ಭಾವಿಸತಕ್ಕದ್ದು ಮತ್ತು ಸಭೆಯ ಎಲ್ಲಾ ಸದಸ್ಯರು ಕ್ರಮಬದ್ಧವಾಗಿ ಅರ್ಹರಾಗಿದ್ದುದಾಗಿ ಭಾವಿಸತಕ್ಕದ್ದು ಮತ್ತು ವ್ಯವಹರಣೆಗಳು ಸಮಿತಿಯ ವ್ಯವಹರಣೆಗಳಾಗಿರುವಲ್ಲಿ ಅಂಥ ಸಮಿತಿಯನ್ನು ಕ್ರಮಬದ್ಧವಾಗಿ ರಚಿಸಲಾಗಿತ್ತು ಮತ್ತು ನಡವಳಿಕೆಯಲ್ಲಿ ಉಲ್ಲೇಖಿಸಿದ ವಿಷಯಗಳೊಡನೆ ವ್ಯವಹರಿಸಲು ಅಧಿಕಾರ ಹೊಂದಿತ್ತೆಂದು ಭಾವಿಸತಕ್ಕದ್ದು.

(4) ಮುನ್ಸಿಪಲ್ ಕೌನ್ಸಿಲ್ ಅಥವಾ ಸಮಿತಿಯಲ್ಲಿ ಯಾವುದೇ ಖಾಲಿ ಸ್ಥಾನವಿರುವಾಗ ಮುಂದುವರಿಯುತ್ತಿರುವ ಕೌನ್ಸಿಲರ್ ಗಳು ಅಥವಾ ಸದಸ್ಯರು ಯಾವುದೇ ಖಾಲಿಸ್ಥಾನ ಸಂಭವಿಸಿರದಿದ್ದರೆ ಹೇಗೋ ಹಾಗೆ ಕಾರ್ಯನಿರ್ವಹಿಸಬಹುದು.

(5) ಈ ಅಧಿನಿಯಮದ ಮೇರೆಗೆ ಮಾಡಲಾದ ಯಾವುದೇ ಕಾರ್ಯ ಅಥವಾ ಕೈಗೊಂಡ ವ್ಯವಹರಣೆಯನ್ನು, ಪ್ರಕರಣದ ಗುಣಾವಗುಣಗಳಿಗೆ ಬಾಧಕವಾಗದ ಯಾವುದೇ ನ್ಯೂನತೆ ಅಥವಾ ಕ್ರಮದೋಷದ ಕಾರಣ ಮಾತ್ರದಿಂದಲೇ ಪ್ರಶ್ನಿಸತಕ್ಕದ್ದಲ್ಲ.

[1][ಅಧ್ಯಾಯ III-ಎ
ನೆರೆಹೊರೆ ಗುಂಪು, ಪ್ರದೇಶ ಸಭಾ ಮತ್ತು ವಾರ್ಡ್ ಸಮಿತಿ

80ಎ. ಪರಿಭಾಷೆಗಳು ಮತ್ತು ಅನ್ವಯಿಸುವಿಕೆ.- (1) ಈ ಅಧ್ಯಾಯದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(i) "ಪ್ರದೇಶ ಸಭಾ" ಎಂದರೆ, 80ಜಿ ಪ್ರಕರಣದ ಅಡಿಯಲ್ಲಿ ನಿರ್ದಿಷ್ಟ ಮತಗಟ್ಟೆ ಕೇಂದ್ರದೊಳಗೆ ನೆರೆಹೊರೆ ಗುಂಪಿನಿಂದ ಆರಿಸಲಾದ ಪ್ರತಿನಿಧಿಗಳನ್ನು ಪ್ರದೇಶ ಸಭಾವು ಒಳಗೊಳ್ಳುವುದು;

(ii) "ಸಂಘ" ಎಂದರೆ ಕರ್ನಾಟಕ ಸೊಸೈಟಿಗಳ ನೋಂದಣಿ ಅಧಿನಿಯಮ, 1960ರ ಅಡಿಯಲ್ಲಿ ನೋಂದಾಯಿಸಿದ ನ್ಯಾಸ, ಸೊಸೈಟಿ, ಸಂಘ ಅಥವಾ ಸಂಸ್ಥೆ;

(iii) "ನೆರೆಹೊರೆ ಗುಂಪು" ಎಂದರೆ, 80ಬಿ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂತೆ, ಒಂದು ಮತಗಟ್ಟೆ ಕೇಂದ್ರದ ಒಂದು ನೂರು ಅಥವಾ ಅದಕ್ಕಿಂತ ಕಡಿಮೆ ಮತದಾರರನ್ನು ಹೊಂದಿರುವ ಒಂದು ಸಂಸ್ಥೆ ಅಥವಾ ಗುಂಪು;

(iv) "ನೋಡಲ್ ಅಧಿಕಾರಿ" ಎಂದರೆ, ಪೌರ ಆಯುಕ್ತ ಅಥವಾ ಸಂದರ್ಭಾನುಸಾರವಾಗಿ ಮುಖ್ಯಾಧಿಕಾರಿಯು ನೋಡಲ್ ಅಧಿಕಾರಿಯೆಂದು ಹೆಸರಿಸಿರುವ ಪೌರಸಭೆಯ ಯಾವೊಬ್ಬ ಸಿಬ್ಬಂದಿ;

(v) "ಮತಗಟ್ಟೆ ಕೇಂದ್ರ" ಎಂದರೆ, ಪೌರಸಭೆಗಳಿಗೆ ಚುನಾವಣೆಗಳನ್ನು ನಡೆಸುವುದಕ್ಕಾಗಿ ಸ್ಥಾಪಿಸಿರುವ ಮತಗಟ್ಟೆ ಕೇಂದ್ರ;

(vi) "ವಾರ್ಡ್ ಕ್ರಿಯಾ ಯೋಜನೆ"ಯು ಆದ್ಯತೆಯ ಆಧಾರದ ಮೇಲೆ ವಾರ್ಡ್ ಸಮಿತಿಯು ಸಿದ್ಧಪಡಿಸಿದ ವಾರ್ಷಿಕ ಕ್ರಿಯಾ ಯೋಜನೆಯಾಗಿರತಕ್ಕದ್ದು; ಮತ್ತು

(vii) "ವಾರ್ಡ್ ಸಮಿತಿ" ಎಂದರೆ, 80ಎಂ ಪ್ರಕರಣದ ಅಡಿಯಲ್ಲಿ ರಚನೆಯಾದ ಒಂದು ಸಮಿತಿ.

(2) ಈ ಅಧ್ಯಾಯದ ಉಪಬಂಧಗಳು ರಾಜ್ಯದಲ್ಲಿನ ಎಲ್ಲಾ ಪೌರಸಭೆಗಳಿಗೆ ಅನ್ವಯವಾಗತಕ್ಕದ್ದು.

80ಬಿ. ನೆರೆಹೊರೆ ಗುಂಪಿನ ರಚನೆ.- ಒಂದು ವಾರ್ಡಿನ ಅದೇ ಸ್ಥಳ ಅಥವಾ ಬೀದಿ ಅಥವಾ ಬಡಾವಣೆ ಅಥವಾ ನಿವಾಸಿಗಳ ಕಲ್ಯಾಣ ಸಂಘ ಅಥವಾ ವಸತಿಸಮೂಹ ಅಥವಾ ಯಾವುದೇ ಇತರ ತಾಕಿಕೊಂಡಿರುವ ಪ್ರದೇಶದಿಂದ ಪ್ರತಿಯೊಂದು ವಾರ್ಡಿನ ಮತಗಟ್ಟೆ ಕೇಂದ್ರ ಪ್ರದೇಶದಲ್ಲಿ ಸುಮಾರು ಪ್ರತಿ ಒಂದು ನೂರು ಮತದಾರರಿಗೆ ಒಂದು ನೆರೆಹೊರೆ ಗುಂಪು ಇರತಕ್ಕದ್ದು. ಅಂಥ ಸ್ಥಳವು ದೊಡ್ಡದಾಗಿದ್ದು ಮತ್ತು ಹೆಚ್ಚಿನ ಮತದಾರರನ್ನು ಹೊಂದಿದ್ದರೆ, ಆಗ ಅದೇ ಸ್ಥಳದಲ್ಲಿ ಒಂದಕ್ಕಿಂತ ಹೆಚ್ಚು ನೆರೆಹೊರೆ ಗುಂಪುಗಳನ್ನು ರಚಿಸತಕ್ಕದ್ದು.

80ಸಿ. ನೆರೆಹೊರೆ ಗುಂಪಿನ ಸಭೆಗಳು.- (1) ಮಾಲೀಕತ್ವವನ್ನು ಪರಿಗಣಿಸದೆ, ಆ ಪ್ರದೇಶದಲ್ಲಿನ ಸಾಮಾಜಿಕ ಒಗ್ಗೂಡುವಿಕೆಗಾಗಿ ಅದೇ ಸ್ಥಳದಲ್ಲಿಯ ಯಾವುದೇ ಸೌಲಭ್ಯದಲ್ಲಿ ನೆರೆಹೊರೆ ಗುಂಪುಗಳು ಅದರ ಸಭೆಗಳನ್ನು ಮತ್ತು ಅದರ ವಿಚಾರ ವಿನಿಮಯಗಳನ್ನು ನಡೆಸತಕ್ಕದ್ದು.

(2) ಅಗತ್ಯಾನುಸಾರವಾಗಿ, ಆದರೆ, ಮೂರು ತಿಂಗಳುಗಳಿಗೆ ಒಂದು ಬಾರಿಗಿಂತ ಕಡಿಮೆ ಇಲ್ಲದಂತೆ ನೆರೆಹೊರೆ ಗುಂಪುಗಳ ಸಭೆಗಳನ್ನು ಕರೆಯಬಹುದು.

(3) ನೆರೆಹೊರೆ ಗುಂಪಿನ ಸಭೆಯನ್ನು ಕರೆಯುವುದು, ನೆರೆಹೊರೆ ಗುಂಪಿನ ಪೈಕಿ ಆಯ್ಕೆಯಾದ ಪ್ರತಿನಿಧಿಯ ಕರ್ತವ್ಯವಾಗಿರತಕ್ಕದ್ದು.

(4) ನೆರೆಹೊರೆ ಗುಂಪಿನ ಎಲ್ಲಾ ತೀರ್ಮಾನಗಳನ್ನು ಸರಳ ಬಹುಮತದ ಮೂಲಕ ಕೈಗೊಳ್ಳತಕ್ಕದ್ದು.

(5) ನೆರೆಹೊರೆ ಗುಂಪಿನ ಪ್ರತಿನಿಧಿಯು, ವಾರ್ಡಿನ ಮತಗಟ್ಟೆ ಪ್ರದೇಶದ ಪ್ರದೇಶ ಸಭಾದ ಸದಸ್ಯನಾಗತಕ್ಕದ್ದು ಹಾಗೂ ಪ್ರದೇಶ ಸಭಾದ ನಡವಳಿಗಳಲ್ಲಿ ನೆರೆಹೊರೆ ಗುಂಪಿನ ಪ್ರತಿನಿಧಿಯಾಗಿ ಭಾಗವಹಿಸತಕ್ಕದ್ದು.

(6) ನೆರೆಹೊರೆ ಗುಂಪಿನ ಪ್ರತಿನಿಧಿಯು ನೆರೆಹೊರೆ ಗುಂಪಿನ ಸಭೆಯಲ್ಲಿ ತೆಗೆದುಕೊಳ್ಳಬೇಕಾದ ನಿಲುವಿನ ಮೇಲೆ ನಿರ್ಣಯಿಸಿ ಮತ್ತು ಜನಾದೇಶವನ್ನು ಪಡೆದುಕೊಂಡ ತರುವಾಯ ಮಾತ್ರವೇ ಪ್ರದೇಶ ಸಭಾದಲ್ಲಿ ಯಾವುದೇ ಸಮಸ್ಯೆಯನ್ನು ಎತ್ತತಕ್ಕದ್ದು ಅಥವಾ ಯಾವುದೇ ಸಮಸ್ಯೆಯ ಕುರಿತು ಚರ್ಚಿಸತಕ್ಕದ್ದು.

(7) ಪ್ರತಿನಿಧಿಯು, ಪ್ರದೇಶ ಸಭಾದ ತೀರ್ಮಾನಗಳು ಅಥವಾ ವಿಚಾರಗಳ ಮುಖ್ಯಾಂಶವನ್ನು ನೆರೆಹೊರೆ ಗುಂಪಿನ ಸದಸ್ಯರುಗಳಿಗೆ ಪ್ರದೇಶ ಸಭಾದ ಸಭೆಯ ತರುವಾಯ ನೆರೆಹೊರೆ ಗುಂಪಿನ ಮುಂದಿನ ನಿಕಟ ಸಭೆಯಲ್ಲಿ ತಿಳಿಸತಕ್ಕದ್ದು.

(8) ನೆರೆಹೊರೆ ಗುಂಪಿನ ಪ್ರತಿನಿಧಿಗೆ ಲಿಪಿಕ ಸಹಾಯಕರಿರುವುದಿಲ್ಲ, ಅವರೇ ಸಭೆಗಳನ್ನು ಏರ್ಪಾಡು ಮಾಡಬೇಕು, ನಡವಳಿಗಳನ್ನು ನಿರೂಪಿಸಬೇಕು ಮತ್ತು ದಾಖಲೆಗಳನ್ನು ನಿರ್ವಹಿಸಬೇಕು.

(9) ನೆರೆಹೊರೆ ಗುಂಪಿನ ದಾಖಲೆಗಳನ್ನು ಕನಿಷ್ಠ ಐದು ವರ್ಷಗಳ ಅವಧಿಯವರೆಗೆ ನಿರ್ವಹಿಸತಕ್ಕದ್ದು ಮತ್ತು ನೆರೆಹೊರೆಯ ಗುಂಪು ಇಚ್ಛಿಸಿದಲ್ಲಿ ಅದನ್ನು ದೀರ್ಘಾವಧಿಯವರೆಗೆ ನಿರ್ವಹಿಸಬಹುದು.

80ಡಿ. ನೆರೆಹೊರೆ ಗುಂಪಿನ ಪ್ರತಿನಿಧಿ, ಪದಾವಧಿ ಮತ್ತು ಭತ್ಯೆ.- (1) ನೆರೆಹೊರೆಗಳು, ಅವರುಗಳ ಪೈಕಿ ಒಬ್ಬರನ್ನು ಅವರ ಪ್ರತಿನಿಧಿಯಾಗಿ ಆಯ್ಕೆ ಮಾಡತಕ್ಕದ್ದು. ಅವರು, ಆ ನೆರೆಹೊರೆ ಗುಂಪಿನ ಸಭೆಗಳು ಮತ್ತು ವಿಚಾರ ವಿನಿಯಮಗಳ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(2) ಪ್ರತಿನಿಧಿಯ ಗೈರುಹಾಜರಿಯಲ್ಲಿ ಪ್ರತಿನಿಧಿಯ ಪರವಾಗಿ ನಿಲ್ಲಲು ನೆರೆಹೊರೆಗಳು ಒಬ್ಬ ಹೆಚ್ಚುವರಿ ಪ್ರತಿನಿಧಿಯನ್ನೂ ಸಹ ಆಯ್ಕೆ ಮಾಡತಕ್ಕದ್ದು. ಆದಾಗ್ಯೂ, ಪ್ರತಿನಿಧಿಯೊಂದಿಗೆ ಪ್ರದೇಶ ಸಭಾದ ಸಭೆಗಳಲ್ಲಿ ಹೆಚ್ಚುವರಿ ಪ್ರತಿನಿಧಿಯು ಭಾಗವಹಿಸತಕ್ಕದ್ದು ಮತ್ತು ಅಗತ್ಯವಿದ್ದಲ್ಲಿ ಎಲ್ಲಾ ಪ್ರಕಾರ್ಯಗಳಲ್ಲಿಯೂ ಪ್ರತಿನಿಧಿಗೆ ಸಹಕರಿಸತಕ್ಕದ್ದು.

(3) ಲಭ್ಯವಿರುವ ಅರ್ಹ ಸದಸ್ಯರುಗಳಿಂದ ಲಾಟರಿ ಎತ್ತುವ ಮೂಲಕ ಪ್ರತಿನಿಧಿ ಮತ್ತು ಹೆಚ್ಚುವರಿ ಪ್ರತಿನಿಧಿಯನ್ನು ಸದಸ್ಯರುಗಳು ಆಯ್ಕೆ ಮಾಡತಕ್ಕದ್ದು.

(4) ಪ್ರತಿನಿಧಿಯು ಕಡ್ಡಾಯವಾಗಿ ಪಕ್ಷಾತೀತನಾಗಿರತಕ್ಕದ್ದು ಮತ್ತು ಆತನು ಯಾವುದೇ ರಾಜಕೀಯ ಪಕ್ಷದ ಸಹಾನುಭೂತಿಯುಳ್ಳವನು ಮತ್ತು ಸದಸ್ಯನು ಅಥವಾ ಸಜ್ಜಾಗಿರುವವನು ಆಗಿಲ್ಲವೆಂದು ಘೋಷಿಸತಕ್ಕದ್ದು.

(5) ಪ್ರತಿನಿಧಿಯ ಪದಾವಧಿಯು ಮೂವತ್ತು ತಿಂಗಳುಗಳಾಗಿರತಕ್ಕದ್ದು ಮತ್ತು ಐದು ವರ್ಷಗಳ ಒಳಗಾಗಿ ಎರಡನೇ ಅವಧಿಗೆ ಪ್ರತಿನಿಧಿಯಾಗಲು ಯಾವೊಬ್ಬನೂ ಅರ್ಹನಾಗಿರತಕ್ಕದ್ದಲ್ಲ.

(6) ಪ್ರತಿನಿಧಿಯ ಮತ್ತು ಹೆಚ್ಚುವರಿ ಪ್ರತಿನಿಧಿಯ ಸ್ಥಾನಕ್ಕೆ ಒಂದೇ ಲಿಂಗದವರಿರತಕ್ಕದ್ದಲ್ಲ ಮತ್ತು ಅದು ಪ್ರತಿವರ್ಷವೂ ಸರದಿಯಲ್ಲಿರತಕ್ಕದ್ದು.

(7) ಪೌರಸಭೆಯ ಚುನಾವಣೆಯ ತರುವಾಯ ಮೊದಲ ವರ್ಷದಲ್ಲಿ, ಪ್ರತಿನಿಧಿಯ ಸ್ಥಾನವನ್ನು ಮಹಿಳೆಗೆ ಹಂಚಿಕೆಮಾಡತಕ್ಕದ್ದು ಮತ್ತು ಹೆಚ್ಚುವರಿ ಪ್ರತಿನಿಧಿಯ ಸ್ಥಾನವನ್ನು ಪುರುಷನಿಗೆ ಹಂಚಿಕೆಮಾಡತಕ್ಕದ್ದು.

(8) ಪ್ರತಿನಿಧಿಗೆ ಯಾವುದೇ ಭತ್ಯೆ, ಆಸೀನ ಶುಲ್ಕ ಅಥವಾ ಸಂಭಾವನೆಯನ್ನು ಪಾವತಿಸತಕ್ಕದ್ದಲ್ಲ.

(9) ನೆರೆಹೊರೆ ಗುಂಪುಗಳು ಯಾವುದೇ ವೆಚ್ಚವನ್ನು ಭರಿಸದೇ ಸಭೆಗಳನ್ನು ನಡೆಸತಕ್ಕದ್ದು ಹಾಗೂ ಪುರಸಭೆಯಿಂದಾಗಲೀ ಅಥವಾ ಸರ್ಕಾರದಿಂದಾಗಲೀ ಯಾವುದೇ ಮರುಪಾವತಿಯು ಇರತಕ್ಕದ್ದಲ್ಲ.

(10) ನೆರೆಹೊರೆ ಗುಂಪುಗಳು ಪುರಸಭೆಯ ಅಥವಾ ಅನ್ಯಥಾ ಯಾವುದೇ ಸಿಬ್ಬಂದಿಗಳ ಉಪಸ್ಥಿತಿಯನ್ನು ಆಗ್ರಹಿಸತಕ್ಕದ್ದಲ್ಲ.

80ಇ. ನೆರೆಹೊರೆ ಗುಂಪಿನ ಅಧಿಕಾರಗಳು ಮತ್ತು ಪ್ರಕಾರ್ಯಗಳು.- (1) ನೆರೆಹೊರೆ ಗುಂಪು ಈ ಮುಂದಿನ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು, ಎಂದರೆ:-

(i) ಫಲಾನುಭವಿಗಳನ್ನು ಆಯ್ಕೆ ಮಾಡುವುದು;

(ii) ಬೀದಿದೀಪಗಳ ಕಾವಲು ಕಾರ್ಯಾಚರಣೆಗಳು ಮತ್ತು ನಿರ್ವಹಣೆ;

(iii) ಸ್ವಳದ ಎಲ್ಲಾ ಮನೆಯವರು ಆಸ್ತಿ ತೆರಿಗೆಯನ್ನು ಸಂದಾಯ ಮಾಡಿರುವುದನ್ನು ಖಚಿತ ಪಡಿಸಿಕೊಳ್ಳುವುದು;

(iv) ಪ್ರತಿಯೊಂದು ಮನೆಗೆ ವೈಯಕ್ತಿಕ ನೀರಿನ ಮೀಟರ್ ಸಂಪರ್ಕವನ್ನು ಖಚಿತಪಡಿಸಿಕೊಳ್ಳುವುದು ಮತ್ತು ಎಲ್ಲಾ ಮನೆಯವರು ನೀರಿನ ಸುಂಕವನ್ನು ಪಾವತಿಸಿರುವರೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು;

(v) ಘನತ್ಯಾಜ್ಯ ನಿರ್ವಹಣೆಯ ಪ್ರಾಥಮಿಕ ಸಂಗ್ರಹಣೆ ಮತ್ತು ಬೇರ್ಪಡಿಸುವಿಕೆಗೆ ನೆರವಾಗುವುದು ಅಥವಾ ಕೈಗೊಳ್ಳುವುದು;

(vi) ನೆರೆಹೊರೆ ಸ್ವಳದ ನೈರ್ಮಲ್ಯ ಕಾರ್ಯಾಚರಣೆ;

(vii) ನೀರು ಸರಬರಾಜು ನಿರ್ವಹಣೆ, ಬೀದಿ ದೀಪ ನಿರ್ವಹಣೆ, ಘನತ್ಯಾಜ್ಯ ನಿರ್ವಹಣೆ, ಚರಂಡಿಗಳ ಹೂಳೆತ್ತುವಿಕೆ ಇತ್ಯಾದಿಗಳಿಗೆ ಸಂಬಂಧಿಸಿದ ನಾಗರೀಕ ಕಾಮಗಾರಿಗಳಿಗೆ ಸಲಹೆಗಳನ್ನು ನೀಡುವುದು;

(viii) ಪ್ರಸ್ತುತ ವರ್ಷಕ್ಕಾಗಿ ಮತ್ತು ಐದು ವರ್ಷಗಳ ಪೂರ್ಣಾವಧಿಗೆ ಸಾಮಾನ್ಯವಾಗಿ ಸ್ಥಳೀಯವಾದ ಯಾವುದೇ ಅಭಿವೃದ್ಧಿ ಕಾಮಗಾರಿಗಳನ್ನು ಸೂಚಿಸುವುದು;

(ix) ಎಲ್ಲಾ ಸರ್ಕಾರಿ ಮತ್ತು ಪೌರಸಭೆ ಸ್ವತ್ತುಗಳನ್ನು ಯಾರೊಬ್ಬರೂ ಅತಿಕ್ರಮಿಸದಂತೆ ರಕ್ಷಿಸುವುದು;

(x) ವಸತಿ, ಬಡತನ ನಿವಾರಣೆ ಮುಂತಾದ ಅವಶ್ಯವಿರುವ ಸರ್ಕಾರದ ಮತ್ತು ಪೌರಸಭೆಯ ಎಲ್ಲಾ ಸಮಾಜೋ-ಆರ್ಥಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು;

(xi) ಸರ್ಕಾರಿ ಮತ್ತು ಪೌರಸಭೆಯ ಸಾರ್ವಜನಿಕ ಆರೋಗ್ಯ ಅಂಶಗಳು ಮತ್ತು ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದು; ಮತ್ತು

(xii) ಪೌರಸಭೆಯು ಅದಕ್ಕೆ ವಹಿಸಬಹುದಾದ ಅಂಥ ಇತರ ಪ್ರಕಾರ್ಯಗಳನ್ನು ಅದು ನಿರ್ವಹಿಸತಕ್ಕದ್ದು.

(2) ವಾರ್ಡಿನ ನೆರೆಹೊರೆ ಗುಂಪು ಅದರ ವ್ಯವಹಾರ ನಿರ್ವಹಣೆಯಲ್ಲಿ ಅಳವಡಿಸಿಕೊಳ್ಳಬೇಕಾದ ವಿಧಾನವು ನಿಯಮಿಸಬಹುದಾದಂತೆ ಇರತಕ್ಕದ್ದು.

80ಎಫ್. ನೆರೆಹೊರೆ ಗುಂಪಿನ ಪ್ರತಿನಿಧಿ/ಹೆಚ್ಚುವರಿ ಪ್ರತಿನಿಧಿಯನ್ನು ತೆಗೆದುಹಾಕುವುದು.- ನೆರೆಹೊರೆ ಗುಂಪಿನ ಜನಾದೇಶಕ್ಕೆ ವ್ಯತಿರಿಕ್ತವಾಗಿ ನಿಲುವನ್ನು ತೆಗೆದುಕೊಳ್ಳುವ ಪ್ರತಿನಿಧಿಯನ್ನು ನೆರೆಹೊರೆ ಗುಂಪಿನ ಒಟ್ಟು ಸದಸ್ಯರ ಸರಳ ಬಹುಮತದಿಂದ ನೆರೆಹೊರೆ ಗುಂಪು ಬದಲಿಸತಕ್ಕದ್ದು.

80ಜಿ. ಪ್ರದೇಶ ಸಭಾಗಳ ರಚನೆ.- (1) ಪೌರಸಭೆಯ ವಾರ್ಡಿನ ಪ್ರತಿಯೊಂದು ಮತಗಟ್ಟೆ ಕೇಂದ್ರದ ಪ್ರದೇಶಕ್ಕಾಗಿ ಒಂದು ಪ್ರದೇಶ ಸಭಾವು ಇರತಕ್ಕದ್ದು.

(2) ಪೌರಸಭೆಯ ವಾರ್ಡಿನ ಮತಗಟ್ಟೆ ಕೇಂದ್ರ ಪ್ರದೇಶದ ಮಿತಿಗಳ ಒಳಗಿನ ಎಲ್ಲಾ ನೆರೆಹೊರೆ ಗುಂಪಿನ ಪ್ರತಿನಿಧಿಗಳು ಮತ್ತು ಹೆಚ್ಚುವರಿ ಪ್ರತಿನಿಧಿಗಳನ್ನು ಪ್ರದೇಶ ಸಭಾವು ಒಳಗೊಂಡಿರತಕ್ಕದ್ದು:

ಪರಂತು, ಸಭೆಯಲ್ಲಿ ಪ್ರತಿನಿಧಿಯು ಉಪಸ್ಥಿತನಿದ್ದಲ್ಲಿ, ಹೆಚ್ಚುವರಿ ಪ್ರತಿನಿಧಿಗಳು ಮತದಾನದ ಹಕ್ಕುಗಳನ್ನು ಹೊಂದಿರತಕ್ಕದ್ದಲ್ಲ.

80ಎಚ್. ಪ್ರದೇಶ ಸಭಾದ ಸಭೆಗಳು.- (1) ಪ್ರದೇಶ ಸಭಾಗಳು ಅಗತ್ಯಾನುಸಾರವಾಗಿ ಆದರೆ, ಮೂರು ತಿಂಗಳುಗಳಿಗೆ ಒಂದು ಬಾರಿಗೆ ಕಡಿಮೆಯಿಲ್ಲದಂತೆ ಸಭೆಗಳನ್ನು ನಡೆಸತಕ್ಕದ್ದು.

(2) ಸಭೆಗಳನ್ನು ಪೌರಸಭೆ ಅಥವಾ ಯಾವುದೇ ಇತರ ಸರ್ಕಾರಿ ಇಲಾಖೆ ಅಥವಾ ಸರ್ಕಾರಿ ಉದ್ದಿಮೆಗಳಿಗೆ ಸೇರಿರುವ ಯಾವುದೇ ಸಾರ್ವಜನಿಕ ಸ್ಥಳಗಳಲ್ಲಿ ನಡೆಸತಕ್ಕದ್ದು.

(3) ಸರ್ಕಾರಿ ಕಟ್ಟಡ ಅಥವಾ ಸಾರ್ವಜನಿಕ ಆವರಣಗಳು ಲಭ್ಯವಾಗದಿದ್ದ ಸಂದರ್ಭಗಳಲ್ಲಿ ಯಾವುದೇ ಸಂಸ್ಥೆ ಅಥವಾ ವ್ಯಕ್ತಿಗಳು ಉಚಿತ ದರಗಳಲ್ಲಿ ನೀಡಿದ ಯಾವುದೇ ಖಾಸಗಿ ಆವರಣದಲ್ಲಿ ಸಭೆಗಳನ್ನು ನಡೆಸಬಹುದು.

(4) ಸಭೆಗಳನ್ನು ಕರೆಯುವುದು ಮತ್ತು ನಡವಳಿಗಳನ್ನು ದಾಖಲಿಸುವುದು ಪ್ರದೇಶ ಸಭಾದ ಪ್ರತಿನಿಧಿಯ ಕರ್ತವ್ಯವಾಗಿರತಕ್ಕದ್ದು.

(5) ಪ್ರದೇಶ ಸಭಾಕ್ಕೆ ಯಾವುದೇ ಲಿಪಿಕ ಸಹಾಯಕರಿರುವುದಿಲ್ಲ ಮತ್ತು ಪ್ರದೇಶ ಸಭಾದ ಪ್ರತಿನಿಧಿಯು ದಾಖಲೆಗಳನ್ನು ನಿರ್ವಹಿಸತಕ್ಕದ್ದು. ಕನಿಷ್ಠ ಐದು ವರ್ಷಗಳ ಅವಧಿಗಾಗಿ ದಾಖಲೆಗಳನ್ನು ನಿರ್ವಹಿಸತಕ್ಕದ್ದು.

(6) ಪ್ರದೇಶ ಸಭಾದಲ್ಲಿನ ಎಲ್ಲಾ ತೀರ್ಮಾನಗಳನ್ನು ಸರಳ ಬಹುಮತದ ಮೂಲಕ ತೆಗೆದುಕೊಳ್ಳತಕ್ಕದ್ದು.

(7) ಪ್ರದೇಶ ಸಭಾದ ಪ್ರತಿನಿಧಿಯು ವಾರ್ಡಿನ ವಾರ್ಡ್ ಸಮಿತಿಯ ಸದಸ್ಯನಾಗತಕ್ಕದ್ದು ಹಾಗೂ ವಾರ್ಡ್ ಸಮಿತಿಯ ನಡವಳಿಗಳಲ್ಲಿ ಪ್ರದೇಶ ಸಭಾದ ಪ್ರತಿನಿಧಿಯಾಗಿ ಭಾಗವಹಿಸತಕ್ಕದ್ದು.

(8) ಪ್ರದೇಶ ಸಭಾದ ಪ್ರತಿನಿಧಿಯು ಪ್ರದೇಶ ಸಭಾದ ಸಭೆಯಲ್ಲಿ ತೆಗೆದುಕೊಳ್ಳಬೇಕಾದ ನಿಲುವಿನ ಮೇಲೆ ನಿರ್ಧರಿಸಿ ಹಾಗೂ ಜನಾದೇಶ ಪಡೆದುಕೊಂಡ ತರುವಾಯ ಮಾತ್ರವೇ ವಾರ್ಡ್

ಸಮಿತಿಯಲ್ಲಿ ಯಾವುದೇ ಸಮಸ್ಯೆಯನ್ನು ಎತ್ತತಕ್ಕದ್ದು ಅಥವಾ ಯಾವುದೇ ಸಮಸ್ಯೆಯ ಕುರಿತು ಚರ್ಚಿಸತಕ್ಕದ್ದು.

(9) ಪ್ರತಿನಿಧಿಯು, ಪ್ರದೇಶ ಸಭಾದ ಸಭೆಯ ತರುವಾಯದ ತಕ್ಷಣದ ನಿಕಟ ಸಭೆಯಲ್ಲಿ ಪ್ರದೇಶ ಸಭಾದ ಸದಸ್ಯರುಗಳಿಗೆ ವಾರ್ಡ್ ಸಮಿತಿಯ ತೀರ್ಮಾನಗಳು ಅಥವಾ ವಿಚಾರಗಳ ಮುಖ್ಯಾಂಶವನ್ನು ತಿಳಿಸತಕ್ಕದ್ದು.

(10) ಪ್ರದೇಶ ಸಭಾದ ಪ್ರತಿನಿಧಿಗೆ ಲಿಪಿಕ ಸಹಾಯಕರಿರುವುದಿಲ್ಲ, ಅವರೇ ಸಭೆಗಳನ್ನು ಏರ್ಪಡಿಸತಕ್ಕದ್ದು, ನಡವಳಿಗಳನ್ನು ರೂಪಿಸತಕ್ಕದ್ದು ಹಾಗೂ ದಾಖಲೆಗಳನ್ನು ನಿರ್ವಹಿಸತಕ್ಕದ್ದು.

(11) ಪ್ರದೇಶ ಸಭಾದ ದಾಖಲೆಗಳನ್ನು ಕನಿಷ್ಠ ಐದು ವರ್ಷಗಳ ಅವಧಿಯವರೆಗೆ ನಿರ್ವಹಿಸತಕ್ಕದ್ದು.

80ಐ. ಪ್ರದೇಶ ಸಭಾದ ಪ್ರತಿನಿಧಿ.- (1) ಪ್ರದೇಶ ಸಭಾಗಳು ಅವರ ಪೈಕಿ ಒಬ್ಬರನ್ನು ಅವರ ಪ್ರತಿನಿಧಿಯನ್ನಾಗಿ ಅವಿರೋಧವಾಗಿ ಅಥವಾ ಲಾಟರಿಯ ಮೂಲಕ ಆಯ್ಕೆ ಮಾಡತಕ್ಕದ್ದು, ಅವನು ಆ ಪ್ರದೇಶ ಸಭಾದ ಸಭೆಗಳು ಮತ್ತು ವಿಚಾರ ವಿನಿಮಯಗಳ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(2) ಪ್ರದೇಶ ಸಭಾಗಳು ಪ್ರತಿನಿಧಿಯ ಅನುಪಸ್ಥಿತಿಯಲ್ಲಿ ಪ್ರತಿನಿಧಿಯ ಪರವಾಗಿ ನಿಲ್ಲಲು ಒಬ್ಬ ಹೆಚ್ಚುವರಿ ಪ್ರತಿನಿಧಿಯನ್ನು ಸಹ ಆಯ್ಕೆ ಮಾಡತಕ್ಕದ್ದು. ಆದಾಗ್ಯೂ, ಹೆಚ್ಚುವರಿ ಪ್ರತಿನಿಧಿಯು ಪ್ರದೇಶ ಸಭಾದ ಸಭೆಗಳಲ್ಲಿ ಪ್ರತಿನಿಧಿಯೊಂದಿಗೆ ಭಾಗವಹಿಸತಕ್ಕದ್ದು ಹಾಗೂ ಅಗತ್ಯವಿದ್ದಲ್ಲಿ ಎಲ್ಲಾ ಪ್ರಕಾರ್ಯಗಳಲ್ಲಿಯೂ ಪ್ರತಿನಿಧಿಗೆ ಸಹಕರಿಸತಕ್ಕದ್ದು.

(3) ಪ್ರತಿನಿಧಿಯು ಕಡ್ಡಾಯವಾಗಿ ಪಕ್ಷಾತೀತನಾಗಿರತಕ್ಕದ್ದು ಹಾಗೂ ಆತನು ಯಾವುದೇ ರಾಜಕೀಯ ಪಕ್ಷದ ಬಗ್ಗೆ ಸಹಾನುಭೂತಿಯುಳ್ಳವನು ಅಥವಾ ಸದಸ್ಯನು ಅಥವಾ ಸಜ್ಜಾಗಿರುವನಾಗಿಲ್ಲವೆಂದು ಘೋಷಿಸಿಕೊಳ್ಳತಕ್ಕದ್ದು.

(4) ಪ್ರತಿನಿಧಿಯ ಪದಾವಧಿಯು ಮೂವತ್ತು ತಿಂಗಳುಗಳಾಗಿರತಕ್ಕದ್ದು ಹಾಗೂ ಯಾವೊಬ್ಬ ವ್ಯಕ್ತಿಯು ಐದು ವರ್ಷಗಳವರೆಗೆ ಮತ್ತೊಮ್ಮೆ ಪ್ರತಿನಿಧಿಯಾಗತಕ್ಕದ್ದಲ್ಲ.

(5) ಪ್ರತಿನಿಧಿ ಮತ್ತು ಹೆಚ್ಚುವರಿ ಪ್ರತಿನಿಧಿಯ ಸ್ಥಾನದಲ್ಲಿ ಒಂದೇ ಲಿಂಗದವರು ಇರತಕ್ಕದ್ದಲ್ಲ ಹಾಗೂ ಅದು ಪ್ರತಿವರ್ಷ ಸರದಿಯಲ್ಲಿರತಕ್ಕದ್ದು.

(6) ಪೌರಸಭೆಗಳ ಚುನಾವಣೆ ತರುವಾಯದ ಮೊದಲ ವರ್ಷದ, ಪ್ರತಿನಿಧಿಯ ಸ್ಥಾನವನ್ನು ಮಹಿಳೆಯರಿಗೆ ಹಂಚಿಕೆ ಮಾಡತಕ್ಕದ್ದು ಮತ್ತು ಹೆಚ್ಚುವರಿ ಪ್ರತಿನಿಧಿಯ ಸ್ಥಾನವನ್ನು ಪುರುಷರಿಗೆ ಹಂಚಿಕೆ ಮಾಡತಕ್ಕದ್ದು.

(7) ಪ್ರತಿನಿಧಿಗೆ ಯಾವುದೇ ಭತ್ಯೆ, ಆಸೀನ ಶುಲ್ಕ ಅಥವಾ ಸಂಭಾವನೆಯನ್ನು ಪಾವತಿಸತಕ್ಕದ್ದಲ್ಲ.

(8) ಪ್ರದೇಶ ಸಭಾಗಳು ಯಾವುದೇ ವೆಚ್ಚವನ್ನು ಭರಿಸದೇ ಸಭೆಗಳನ್ನು ನಡೆಸತಕ್ಕದ್ದು ಹಾಗೂ ಪೌರಸಭೆ ಅಥವಾ ಸರ್ಕಾರದಿಂದ ಯಾವುದೇ ವೆಚ್ಚ ಮರುಪಾವತಿಯು ಇರತಕ್ಕದ್ದಲ್ಲ.

(9) ಪ್ರದೇಶ ಸಭಾಗಳು ಪೌರಸಭೆಯ ಅಥವಾ ಅನ್ಯಥಾ ಯಾವುದೇ ಸಿಬ್ಬಂದಿಗಳ ಹಾಜರಾತಿಯನ್ನು ಆಗ್ರಹಿಸತಕ್ಕದ್ದಲ್ಲ.

80ಜೆ. ಪ್ರದೇಶ ಸಭಾಗಳ ಅಧಿಕಾರಗಳು ಮತ್ತು ಪ್ರಕಾರ್ಯಗಳು.- (1) ಪ್ರದೇಶ ಸಭಾವು ಈ ಮುಂದಿನ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು, ಎಂದರೆ:-

(i) ನೆರೆಹೊರೆ ಗುಂಪುಗಳ ಎಲ್ಲಾ ಪ್ರಕಾರ್ಯಗಳ ಮೇಲೆ ಅದು ಸಮನ್ವಯ ಸಾಧಿಸತಕ್ಕದ್ದು;

(ii) ನೆರೆಹೊರೆ ಗುಂಪು ಆಯ್ಕೆ ಮಾಡಿದ ಅನರ್ಹ ಫಲಾನುಭವಿಯನ್ನು ಅದು ತೆಗೆದುಹಾಕತಕ್ಕದ್ದು ಆದರೆ, ಯಾವೊಬ್ಬ ಹೊಸ ಫಲಾನುಭವಿಯನ್ನು ಸೇರಿಸತಕ್ಕದ್ದಲ್ಲ ಅಥವಾ ಯಾವೊಬ್ಬ ವ್ಯಕ್ತಿಯ ಅಥವಾ ಜನರ ಗುಂಪಿನ ಮೇಲೆ ಅಥವಾ ಪೌರಸಭೆಯ ಮೇಲೆ ಬದ್ಧವಾಗಿರುವ ನೆರೆಹೊರೆ ಗುಂಪಿನ ಯಾವುದೇ ಇತರ ತೀರ್ಮಾನವನ್ನು ಸರಿಪಡಿಸತಕ್ಕದ್ದಲ್ಲ;

(iii) ಆಸ್ತಿ ತೆರಿಗೆ ಸಂಗ್ರಹಣೆ, ನೀರು ಪೂರೈಕೆ ಸುಂಕದ ಸಂಗ್ರಹಣೆ, ನೀರು ಪೂರೈಕೆ ನಿರ್ವಹಣೆ, ಬೀದಿ ದೀಪಗಳ ಕಾರ್ಯಾಚರಣೆಯ ನಿರ್ವಹಣೆ, ಘನತ್ಯಾಜ್ಯ ನಿರ್ವಹಣಾ ವ್ಯವಸ್ಥೆ, ನೈರ್ಮಲ್ಯ

ನಿರ್ವಹಣೆ ಇತ್ಯಾದಿಗಳಿಗೆ ಸಂಬಂಧಿಸಿದ ಎಲ್ಲಾ ವಿಚಾರಗಳಿಗೆ ಇದು ಕಾರ್ಯಕೌಶಲ್ಯವನ್ನು ಹೊಂದಿರತಕ್ಕದ್ದು ಹಾಗೂ ನೆರೆಹೊರೆ ಗುಂಪುಗಳ ಮೂಲಕ ಕೆಲಸವನ್ನು ನಿರ್ವಹಿಸತಕ್ಕದ್ದು;

(iv) ಪೌರಸಭೆಯಿಂದ ನೀರು ಸರಬರಾಜಿನ ಬಿಡಿಹಂಚಿಕೆಯು ಬೃಹತ್ ಪ್ರಮಾಣದ ನೀರು ಖರೀದಿ, ಬಿಡಿ ಮಾರಾಟ ಮತ್ತು ಪೌರಸಭೆಯ ಪರವಾಗಿ ನೀರು ಸುಂಕದ ಸಂಗ್ರಹಣೆ ಇವುಗಳನ್ನು ಒಳಗೊಳ್ಳತಕ್ಕ ನೀರು ಸರಬರಾಜಿನ ಬಿಡಿ ಹಂಚಿಕೆಯ ಜವಾಬ್ದಾರಿಯನ್ನು ಪೌರಸಭೆಯು ಹಸ್ತಾಂತರಿಸಿದಾಗಲೆಲ್ಲಾ ಸಹ ಅದು ತೆಗೆದುಕೊಳ್ಳಬಹುದು;

(v) ಘನತ್ಯಾಜ್ಯ ನಿರ್ವಹಣೆಯನ್ನು ಅದು ಚೆನ್ನಾಗಿ ನಡೆಸತಕ್ಕದ್ದು, ನೆರೆಯ ವಾರ್ಡ್‌ಗಳಲ್ಲಿ ಅದರ ಅನುಭವವನ್ನು ಹಂಚಿಕೊಳ್ಳಬಹುದು;

(vi) ಅದು ಅದರ ಪ್ರದೇಶದಲ್ಲಿ ಸರ್ಕಾರಿ ಮತ್ತು ಪೌರಸಭೆಯ ಸ್ವತ್ತುಗಳ ಪಟ್ಟಿಯನ್ನು ಸಹ ನಿರ್ವಹಿಸತಕ್ಕದ್ದು ಹಾಗೂ ಸಕ್ಷಮ ಪ್ರಾಧಿಕಾರಕ್ಕೆ ಅದನ್ನು ವರದಿ ಮಾಡುವ ಮೂಲಕ ಅವುಗಳನ್ನು ಯಾವುದೇ ಅತಿಕ್ರಮಣದಿಂದ ರಕ್ಷಿಸತಕ್ಕದ್ದು;

(vii) ಎಲ್ಲಾ ಸಮಾಜೋ-ಆರ್ಥಿಕ ಕಾರ್ಯಕ್ರಮಗಳು, ಪೌರಸಭೆಯ ಮತ್ತು ಸರ್ಕಾರದ ಎಲ್ಲಾ ಆರೋಗ್ಯ ಮತ್ತು ಒಳಚರಂಡಿ ಕಾರ್ಯಕ್ರಮಗಳಿಗಾಗಿ ಇದು ಕಾರ್ಯಕೌಶಲ್ಯವನ್ನು ಹೊಂದಿರತಕ್ಕದ್ದು ಹಾಗೂ ನೆರೆಹೊರೆ ಗುಂಪುಗಳ ಮೂಲಕ ಕೆಲಸವನ್ನು ನಿರ್ವಹಿಸತಕ್ಕದ್ದು;

(viii) ಪ್ರಸ್ತುತ ವರ್ಷದಲ್ಲಿ ಕೈಗೆತ್ತಿಕೊಳ್ಳಬೇಕಾದ ಸ್ಥಳೀಯ ಸಿವಿಲ್ ಕಾಮಗಾರಿಗಳಿಗೆ ಸಂಬಂಧಿಸಿದಂತೆ ನೆರೆಹೊರೆ ಗುಂಪುಗಳ ಪ್ರಸ್ತಾವನೆಗಳನ್ನು ಇದು ಸಂಕಲಿತಗೊಳಿಸತಕ್ಕದ್ದು ಮತ್ತು ಪೌರಸಭೆಯ ಕ್ರಿಯಾಯೋಜನೆಯಲ್ಲಿ ಸೇರಿಸುವ ಸಲುವಾಗಿ ಅದನ್ನು ವಾರ್ಡ್ ಸಮಿತಿಗಳಿಗೆ ರವಾನಿಸತಕ್ಕದ್ದು;

(ix) ನೆರೆಹೊರೆ ಗುಂಪುಗಳಿಂದ ಸೂಚಿಸಿರುವುದನ್ನು ಹೊರತುಪಡಿಸಿ ಇತರ ಯಾವುದೇ ಕಾಮಗಾರಿ ಅಥವಾ 25% ಕ್ಕಿಂತ ಹೆಚ್ಚಿನ ಬಾಬತ್ತುಗಳ ಬಾಬತ್ತನ್ನು ಇದು ಸೇರ್ಪಡೆ ಮಾಡತಕ್ಕದ್ದಲ್ಲ, ಆದರೆ, ಪ್ರಸ್ತುತ ವರ್ಷ ಹಾಗೆಯೇ ಐದು ವರ್ಷಗಳ ಅವಧಿಗಾಗಿ ತೆಗೆಯಬಹುದಾದ ಅಥವಾ ಆದ್ಯತೆ ನೀಡಬಹುದಾದುದು ಎರಡನ್ನೂ ಮಾಡತಕ್ಕದ್ದು;

(x) ನೆರೆಹೊರೆ ಗುಂಪುಗಳ ಒಪ್ಪಿಗೆಯೊಂದಿಗೆ ಯಾವ ಸಮಯದಲ್ಲಾದರೂ ಕ್ರಿಯಾ ಯೋಜನೆಗಳನ್ನು ಅದು ಪರಿಷ್ಕರಿಸತಕ್ಕದ್ದು;

(xi) ಪೌರಸಭೆಯ ಮತ್ತು ಇತರ ಸರ್ಕಾರಿ ಇಲಾಖೆಗಳ ಹಾಗೂ ಸಂಬಂಧಿತ ನಗರ ಸ್ಥಳೀಯ ಸಂಸ್ಥೆಗಳ ಯೋಜನೆಗಳ ಸಾಮಾಜಿಕ ಲೆಕ್ಕಪರಿಶೋಧನೆಯನ್ನು ಅದು ಕೈಗೊಳ್ಳತಕ್ಕದ್ದು; ಮತ್ತು

(xii) ಪೌರಸಭೆ ಅಥವಾ ಯಾವುದೇ ಇತರ ಸರ್ಕಾರಿ ಇಲಾಖೆಗಳು ಅಥವಾ ನಿಕಾಯಗಳು ಕೈಗೊಂಡ ಅಭಿವೃದ್ಧಿ ಕಾಮಗಾರಿಗಳ ಗುಣಮಟ್ಟದ ಬಗ್ಗೆ ಅದು ಜಾಗ್ರತೆಯನ್ನು (vigil) ವಹಿಸತಕ್ಕದ್ದು. ನಿವೇಶನದ ಮೇಲೆ ನಡೆದ ಕಾಮಗಾರಿಗೆ ಸಂಬಂಧಿಸಿದಂತೆ ಮಾಹಿತಿ ಮಂಡಳಿಯನ್ನು (information board) ಖಚಿತಪಡಿಸಿಕೊಳ್ಳುವುದು, ಟೆಂಡರ್ ಷರತ್ತುಗಳ ಅನುಸಾರವಾಗಿ ಸುರಕ್ಷಾ ಮುನ್ನೆಚ್ಚರಿಕೆಗಳನ್ನು ಖಚಿತಪಡಿಸಿವುದು ಹಾಗೂ ಟೆಂಡರ್ ಷರತ್ತುಗಳ ಅನುಸಾರವಾಗಿ ಕಾಮಗಾರಿಯನ್ನು ನಡೆಸಲಾಗುತ್ತಿದೆಯೇ ಎಂಬ ಬಗ್ಗೆ ಮಾಹಿತಿಯನ್ನು ಪಡೆಯುವುದು ಇತ್ಯಾದಿಗಳ ಕುರಿತು ಅಂಥ ಪ್ರಕಾರ್ಯವನ್ನು ಪ್ರದೇಶ ಸಭಾದ ಯಾವೊದೇ ಒಬ್ಬ ವ್ಯಕ್ತಿಯು ತೆಗೆದುಕೊಳ್ಳತಕ್ಕದ್ದಲ್ಲ, ಆದರೆ ಪ್ರದೇಶ ಸಭಾವು ಒಟ್ಟಾರೆಯಾಗಿ ತೆಗೆದುಕೊಳ್ಳತಕ್ಕದ್ದು.

(2) ಪ್ರದೇಶ ಸಭಾವು ಅದರ ವ್ಯವಹಾರ ನಿರ್ವಹಣೆಯಲ್ಲಿ ಅಳವಡಿಸಿಕೊಳ್ಳಬೇಕಾದ ವಿಧಾನವು ನಿಯಮಿಸಬಹುದಾದಂತೆ ಇರತಕ್ಕದ್ದು.

80ಕೆ. **ಅಪೀಲು**.- ಪ್ರದೇಶ ಸಭಾಗಳ ಯಾವುದೇ ತೀರ್ಮಾನದ ವಿರುದ್ಧ ವೈಯಕ್ತಿಕ ಫಲಾನುಭವಿ ಅಥವಾ ಒಬ್ಬ ನಾಗರೀಕ ಅಥವಾ ನೆರೆಹೊರೆ ಗುಂಪು, ವಾರ್ಡ್ ಸಮಿತಿಗೆ ಅಪೀಲನ್ನು ಸಲ್ಲಿಸಬಹುದು. ವಾರ್ಡ್ ಸಮಿತಿಯ ತೀರ್ಮಾನವು ಪ್ರದೇಶ ಸಭಾದ ಮೇಲೆ ಬದ್ಧಕಾರಿಯಾಗಿರತಕ್ಕದ್ದು.

80ಎಲ್. **ಪ್ರದೇಶ ಸಭಾದ ಪ್ರತಿನಿಧಿ ಅಥವಾ ಹೆಚ್ಚುವರಿ ಪ್ರತಿನಿಧಿಗಳನ್ನು ತೆಗೆದು ಹಾಕುವುದು**.- (1) ಪ್ರದೇಶ ಸಭಾದ ಜನಾದೇಶಕ್ಕೆ ವ್ಯತಿರಿಕ್ತವಾದ ನಿಲುವನ್ನು ತೆಗೆದುಕೊಳ್ಳುವ ಪ್ರತಿನಿಧಿಗಳನ್ನು ಪ್ರದೇಶ ಸಭಾದ ಒಟ್ಟು ಸದಸ್ಯರ ಸರಳ ಬಹುಮತದಿಂದ ಬದಲಿಸತಕ್ಕದ್ದು.

(2) ಸಂಬಂಧಿಸಿದ ಪೌರಸಭೆ ಚುನಾವಣೆಯ ಉದ್ದೇಶಕ್ಕಾಗಿ ಕಾಲಕಾಲಕ್ಕೆ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಅಥವಾ ಅದರ ಮೂಲಕ ನಿಯಮಿಸಿದ ಯಾವುದೇ ಅನರ್ಹತೆಗಳಿಗೆ ಯಾವೊಬ್ಬ ವ್ಯಕ್ತಿಯು ಆತನ ಪದಾವಧಿಯ ಯಾವುದೇ ಸಮಯದಲ್ಲಿ ಗುರಿಯಾದಲ್ಲಿ ಆತನು ಪ್ರದೇಶ ಸಭಾ ಪ್ರತಿನಿಧಿಯಾಗಿ ಅಥವಾ ಹೆಚ್ಚುವರಿ ಪ್ರತಿನಿಧಿಯಾಗಿ ಮುಂದುವರೆಯತಕ್ಕದ್ದಲ್ಲ.

80 ಎಂ. ವಾರ್ಡ್ ಸಮಿತಿಯ ರಚನೆ.- (1) ಪೌರಸಭೆಯ ಪ್ರಾದೇಶಿಕ ವ್ಯಾಪ್ತಿಯೊಳಗಿನ ಒಂದು ಅಥವಾ ಹೆಚ್ಚಿನ ವಾರ್ಡ್‌ಗಳಿಗಾಗಿ ವಾರ್ಡ್ ಸಮಿತಿಯು ಇರತಕ್ಕದ್ದು.

(2) ವಾರ್ಡ್ ಸಮಿತಿಯು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:-

(i) ಪ್ರದೇಶ ಸಭಾಗಳ ಎಲ್ಲಾ ಪ್ರತಿನಿಧಿಗಳು ಮತ್ತು ಹೆಚ್ಚುವರಿ ಪ್ರತಿನಿಧಿಗಳು ಸದಸ್ಯರಾಗಿರತಕ್ಕದ್ದು;

(ii) ವಾರ್ಡನ್ನು ಪ್ರತಿನಿಧಿಸುವ ಪುರಸಭೆಗಳ ಕೌನ್ಸಿಲರ್ ಇವರು ವಾರ್ಡ್ ಸಮಿತಿಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು;

(iii) ಪುರಸಭಾ ಆಡಳಿತ ನಿರ್ವಹಣೆ ಅಥವಾ ಸಾರ್ವಜನಿಕ ಆರೋಗ್ಯ, ಗ್ರಾಮಾಂತರ ಯೋಜನೆ ಇತ್ಯಾದಿಗೆ ಸಂಬಂಧಿತ ವಿಷಯಗಳಲ್ಲಿ ಜ್ಞಾನ ಮತ್ತು ಅನುಭವವುಳ್ಳ ಪುರಸಭಾ ಪ್ರದೇಶದ ನಿವಾಸಿಗಳ ಪೈಕಿಯಿಂದ ಜಿಲ್ಲೆಯ ಜಿಲ್ಲಾಧಿಕಾರಿಯವರು ನಾಮನಿರ್ದೇಶಿಸುವ ಐವರು ಇತರ ಸದಸ್ಯರು, ಅವರು ರಾಜಕೀಯ ಪಕ್ಷವೊಂದರ ಸದಸ್ಯರಾಗಿರತಕ್ಕದ್ದಲ್ಲ.

ಅವರಲ್ಲಿ,-

(ಎ) ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಕನಿಷ್ಠ ಇಬ್ಬರು ಸದಸ್ಯರು;

(ಬಿ) ಯಾವುದೇ ಹೆಸರಿನಿಂದ ಕರೆಯಲಾಗಿರುವ ಈ ಕೆಳಗೆ ನಮೂದಿಸಿರುವ ಎಲ್ಲಾ ಷರತ್ತುಗಳನ್ನು ಪೂರೈಸಿರುವ, ಎಂದರೆ:-

(ಎ) ತನ್ನ ನೋಂದಣಿ ಕಚೇರಿಯನ್ನು ಆ ವಾರ್ಡ್‌ನ ಅಧಿಕಾರ ವ್ಯಾಪ್ತಿಯೊಳಗೆ ಹೊಂದಿರತಕ್ಕ; ಮತ್ತು

(ಬಿ) ಅದು ನೋಂದಾಯಿತ ಸಂಘವಾಗಿದ್ದು, ನ್ಯಾಸ ರಕ್ಷಣೆಯ (fiduciary) ಸಾಮರ್ಥ್ಯದಲ್ಲಿ ಸೇವೆಸಲ್ಲಿಸುತ್ತಿರುವ ವ್ಯಕ್ತಿಗಳನ್ನು ಒಳಗೊಂಡಿರತಕ್ಕ,

-ನಿವಾಸಿ ಕಲ್ಯಾಣ ಸಂಘಗಳನ್ನು ಪ್ರತಿನಿಧಿಸುವ ಕನಿಷ್ಠ ಇಬ್ಬರು ಸದಸ್ಯರು, ಅವರಲ್ಲಿ ಒಬ್ಬರು ಮಹಿಳೆಯಾಗಿರತಕ್ಕದ್ದು.

(3) ಕೌನ್ಸಿಲರಾಗಿ ಚುನಾಯಿತನಾಗುವುದರಿಂದ ಅನರ್ಹನಾದ ಯಾವೊಬ್ಬ ವ್ಯಕ್ತಿಯನ್ನು ವಾರ್ಡ್ ಸಮಿತಿಯ ಸದಸ್ಯನಾಗಿ ನಾಮನಿರ್ದೇಶಿಸತಕ್ಕದ್ದಲ್ಲ.

80ಎನ್. ವಾರ್ಡ್ ಸಮಿತಿಯ ಸಭೆ.- (1) ವಾರ್ಡ್ ಸಮಿತಿಯು ಅಗತ್ಯವಾದಾಗಲೆಲ್ಲಾ ಆದರೆ ಒಂದು ತಿಂಗಳಿನಲ್ಲಿ ಕನಿಷ್ಠ ಒಂದು ಸಲ ಸಭೆ ಸೇರತಕ್ಕದ್ದು. ವಾರ್ಡ್ ಸಮಿತಿ ಸಭೆಗೆ ವಾರ್ಡ್ ಕೌನ್ಸಿಲರನು ಅಧ್ಯಕ್ಷನಾಗಿರತಕ್ಕದ್ದು.

(2) ಮೊದಲ ಸಭೆಯ ದಿನಾಂಕವನ್ನು ಹೊಸದಾಗಿ ಚುನಾಯಿತವಾದ ಪೌರಸಭೆಯು ತನ್ನ ಗೊತ್ತುವಳಿಯ ಮೂಲಕ ಗೊತ್ತುಪಡಿಸತಕ್ಕದ್ದು ಮತ್ತು ಅಂಥ ದಿನಾಂಕವನ್ನು ಬದಲಾಯಿಸತಕ್ಕದ್ದಲ್ಲ. ಅಂಥ ನಿರ್ದಿಷ್ಟ ದಿನದಂದು ವಾರ್ಡ್ ಸಮಿತಿಯ ಸಭೆಗೆ ವಾರ್ಡ್ ಸಮಿತಿ ಪ್ರತಿನಿಧಿಯು ಹಾಜರಾಗಲು ಅಸಮರ್ಥನಾದಲ್ಲಿ, ಆಗ ವಾರ್ಡ್ ಸಮಿತಿ ಸದಸ್ಯರು ಸರ್ವಾನುಮತದಿಂದ ಆ ದಿನದ ಸಭೆಯ ಅಧ್ಯಕ್ಷತೆಯನ್ನು ವಹಿಸಲು ತಮ್ಮ ಪೈಕಿ ಯಾರೊಬ್ಬರನ್ನು ಅವಿರೋಧವಾಗಿ ಆಯ್ಕೆ ಮಾಡಬಹುದು.

(3) ವಾರ್ಡ್ ಸಮಿತಿಯು ಸರ್ವಾನುಮತದಿಂದ ತಮ್ಮ ಪೈಕಿ ಒಬ್ಬರನ್ನು ಅವಿರೋಧವಾಗಿ ಅಥವಾ ವಾರ್ಡ್ ಸಮಿತಿಯ ಪೈಕಿಯಿಂದ ಒಬ್ಬರನ್ನು ಲಾಟರಿ ಎತ್ತುವ ಮೂಲಕ ಕಾರ್ಯದರ್ಶಿಯನ್ನಾಗಿ ಆಯ್ಕೆ ಮಾಡತಕ್ಕದ್ದು.

(4) ವಾರ್ಡ್ ಸಮಿತಿಯ ಕಾರ್ಯದರ್ಶಿಯು ವಾರ್ಡ್ ಸಮಿತಿಯ ಸಭೆಯ ಸಂಚಾಲಕನಾಗಿರತಕ್ಕದ್ದು ಮತ್ತು ಆತನು ಛೇರ್ಮನ್ನರೊಡನೆ ಸಮಾಲೋಚಿಸಿ ಸಭೆಯನ್ನು ಕರೆಯತಕ್ಕದ್ದು.

(5) ವಾರ್ಡ್ ಸಮಿತಿಯ ಸಭೆಯ ಎಲ್ಲಾ ಸೂಚನೆ ಪತ್ರಗಳು ಮತ್ತು ವ್ಯವಹರಣೆಗಳನ್ನು ಕಾರ್ಯದರ್ಶಿಯು ದಾಖಲಿಸತಕ್ಕದ್ದು ಮತ್ತು ವಿಡಿಯೋಚಿತ್ರೀಕರಣ ಮಾಡತಕ್ಕದ್ದು ಹಾಗೂ ಅದರ ಪ್ರತಿಯನ್ನು ಹದಿನೈದು ದಿನಗಳೊಳಗೆ ಮುನಿಸಿಪಲ್ ಕೌನ್ಸಿಲ್‌ಗಳಿಗೆ ಕಳುಹಿಸತಕ್ಕದ್ದು.

(6) ಯುಕ್ತ ದರ್ಜೆಯ ಒಬ್ಬ ಅಧಿಕಾರಿಯನ್ನು ಪೌರ ಆಯುಕ್ತ ಅಥವಾ ಮುಖ್ಯಾಧಿಕಾರಿಯ ಪ್ರತಿನಿಧಿಯಾಗಿ ಗೊತ್ತುಪಡಿಸತಕ್ಕದ್ದು ಮತ್ತು ಯಾವುದೇ ಪ್ರಕ್ರಿಯೆ, ನಿಯಮಗಳು ಇತ್ಯಾದಿಗಳ ಕುರಿತು ಮಾಹಿತಿ ಅಥವಾ ಸ್ಪಷ್ಟೀಕರಣವನ್ನು ಒದಗಿಸತಕ್ಕದ್ದು ಆದರೆ, ಸಮಿತಿಯಲ್ಲಿ ಯಾವುದೇ ಪಾತ್ರವನ್ನು ನಿರ್ವಹಿಸತಕ್ಕದ್ದಲ್ಲ.

(7) ವಾರ್ಡ್ ಸಮಿತಿಯ ಎಲ್ಲಾ ತೀರ್ಮಾನಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಹಾಜರಿರುವ ಎಲ್ಲಾ ಸದಸ್ಯರ ಒಮ್ಮತದ ಮೂಲಕ ಕೈಗೊಳ್ಳತಕ್ಕದ್ದು, ಒಮ್ಮತವಿಲ್ಲದಿದ್ದಲ್ಲಿ, ತೀರ್ಮಾನವನ್ನು ಹಾಜರಿರುವ ಸದಸ್ಯರ ಬಹುಮತದ ಮೂಲಕ ತೆಗೆದುಕೊಳ್ಳತಕ್ಕದ್ದು. ಸಮಾನವಾದ ಮತಗಳಿರುವ ಸಂದರ್ಭದಲ್ಲಿ, ಪ್ರಿಸೈಡಿಂಗ್ ಪ್ರಾಧಿಕಾರಿಯು ಗೆಲುವನ್ನು ನಿರ್ಧರಿಸಲು (to break the tie) ತನ್ನ ನಿರ್ಣಾಯಕ ಮತವನ್ನು ಚಲಾಯಿಸತಕ್ಕದ್ದು.

(8) ವಾರ್ಡ್ ಸಮಿತಿಯು ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ವ್ಯವಹರಣೆಗಳು ಅದರಲ್ಲಿ ಯಾವುದೇ ಖಾಲಿಸ್ಥಾನವಿದೆ ಎಂಬ ಆಧಾರದ ಮೇಲೆ ಮಾತ್ರವೇ ಅಸಿಂಧುವಾಗತಕ್ಕದ್ದಲ್ಲ.

(9) ಪೌರಸಭೆಯ ಆಯುಕ್ತ ಅಥವಾ ಸಂದರ್ಭಾನುಸಾರವಾಗಿ ಮುಖ್ಯಾಧಿಕಾರಿ ಅಥವಾ ಆತನ ನಾಮನಿರ್ದೇಶಿತನು, ವಾರ್ಡ್ ಸಮಿತಿಯ ಸಭೆಗಳು ಮತ್ತು ಚರ್ಚೆಗಳಲ್ಲಿ ಭಾಗವಹಿಸಲು ಅರ್ಹನಾಗಿರತಕ್ಕದ್ದು. ವಾರ್ಡ್ ಸಮಿತಿಯ ಚೇರ್‌ಪರ್ಸನ್‌ರವರು, ಸಭೆಗಳಲ್ಲಿ ಭಾಗವಹಿಸಲು ವಿಶೇಷ ಆಹ್ವಾನಿತರನ್ನಾಗಿ ಬರುವಂತೆ ಸಂಬಂಧಪಟ್ಟ ಇಲಾಖೆಯ ಪ್ರತಿನಿಧಿಗಳನ್ನು ಕೋರಬಹುದು.

80ಒ. ವಾರ್ಡ್ ಸಮಿತಿಯ ಪ್ರಕಾರ್ಯಗಳು.- (1) ವಾರ್ಡ್ ಸಮಿತಿಯು ಈ ಮುಂದಿನ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು, ಎಂದರೆ:-

ವಾರ್ಡ್ ಸಮಿತಿಯು,-

(ಎ) ತೆರಿಗೆ ಸಂಗ್ರಹಣೆ, ನೀರು ಸರಬರಾಜು, ನೆಲ ಚರಂಡಿ (Surface drainage) ಒಳಚರಂಡಿ (Underground drainage) ಘನತ್ಯಾಜ್ಯ ನಿರ್ವಹಣೆ, ಬೀದಿ ದೀಪಗಳ ವ್ಯವಸ್ಥೆ ಮುಂತಾದ ಎಲ್ಲಾ ಪ್ರಕಾರ್ಯಗಳ ನಿರ್ವಹಣೆಯಲ್ಲಿ ಪ್ರದೇಶ ಸಭಾದೊಂದಿಗೆ ಸಮನ್ವಯ ಸಾಧಿಸತಕ್ಕದ್ದು;

(ಬಿ) ಪ್ರದೇಶ ಸಭಾಗಳು ಮತ್ತು ನೆರೆಹೊರೆಯ ಸಮೂಹದ ಮೂಲಕ ಯಾವುದೇ ತೊಡಗುವಿಕೆಯ ಮೇಲೆ ಈ ಎಲ್ಲಾ ಬಾಬತ್ತುಗಳು ಮತ್ತು ಕಾಮಗಾರಿಗಳನ್ನು ಕಾರ್ಯಕೌಶಲ್ಯದಿಂದ ನಿರ್ವಹಿಸತಕ್ಕದ್ದು.

(ಸಿ) ನೆರೆಹೊರೆಯ ಸಮೂಹಗಳು ಮತ್ತು ಪ್ರದೇಶ ಸಭಾಗಳಿಗೆ ಸಲಹೆಯನ್ನು ನೀಡತಕ್ಕದ್ದು ಆದರೆ ಅವು ಬಂಧನಕಾರಿ ಸ್ವರೂಪದಲ್ಲಿರತಕ್ಕದ್ದಲ್ಲ.

(ಡಿ) ಸ್ಥಳೀಯ ಸ್ವರೂಪದ ಎಲ್ಲಾ ಅಭಿವೃದ್ಧಿ ಕಾಮಗಾರಿಗಳಿಗಾಗಿ ಚುನಾಯಿತ ಪರಿಷತ್ತಿನ ಐದು ವರ್ಷಗಳ ಅವಧಿಗಾಗಿನ ಕ್ರಿಯಾ ಯೋಜನೆಯಾಗಿ ಪ್ರದೇಶ ಸಭಾವು ಸಲಹೆ ಮಾಡಿದ ಪಟ್ಟಿಯಿಂದ ಸ್ಥಳೀಯ ಸ್ವರೂಪದ ಕಾಮಗಾರಿಗಳಿಗಾಗಿ ಕ್ರಿಯಾ ಯೋಜನೆಗಳನ್ನು ಸಂಕಲಿತಗೊಳಿಸತಕ್ಕದ್ದು.

(ಇ) ಅವುಗಳಲ್ಲಿನ ಕಾಮಗಾರಿಗಳನ್ನು ಆದ್ಯತೆಗನುಸಾರವಾಗಿ ಮಾಡತಕ್ಕದ್ದು ಮತ್ತು ಪ್ರತಿ ವರ್ಷದ ಅನುಷ್ಠಾನಕ್ಕೆ ವಾರ್ಷಿಕ ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸತಕ್ಕದ್ದು.

(ಎಫ್) ಸಾಧ್ಯವಾದಷ್ಟು ಮಟ್ಟಿಗೆ ಪ್ರದೇಶ ಸಭಾಗಳು ಒಟ್ಟುಗೂಡಿಸಿದ ಕ್ರಿಯಾ ಯೋಜನೆಯಿಂದ ವಾರ್ಷಿಕ ಕ್ರಿಯಾ ಯೋಜನೆಗಾಗಿ ಕಾಮಗಾರಿಗಳನ್ನು ಆಯ್ಕೆ ಮಾಡತಕ್ಕದ್ದು ಮತ್ತು ಹೊಸ ಬಾಬತ್ತುಗಳನ್ನು ಸೇರಿಸುವುದನ್ನು (desist) ನಿಲ್ಲಿಸತಕ್ಕದ್ದು.

(ಜಿ) ಸಂಕಲಿತ ಕ್ರಿಯಾ ಯೋಜನೆಯಿಂದ ಹೊರಗಿನ ಕಾಮಗಾರಿಗಳನ್ನು ಆಯ್ಕೆ ಮಾಡುವುದಕ್ಕೆ ಕಾರಣಗಳನ್ನು ಕೊಟ್ಟು ಕ್ರಿಯಾ ಯೋಜನೆಯ ಮೌಲ್ಯದ 25% ರಷ್ಟಕ್ಕೆ ಹೊಸ ಬಾಬತ್ತುಗಳನ್ನು ಸೇರಿಸುವ ಅಧಿಕಾರವನ್ನು ಹೊಂದಿರತಕ್ಕದ್ದು.

(ಎಚ್) ಪ್ರದೇಶ ಸಭಾಗಳು ಐದು ವರ್ಷಗಳಿಗಾಗಿ ಮಾಡಿರುವ ಕ್ರಿಯಾ ಯೋಜನೆಯಲ್ಲಿ ಸೇರಿಸಲಾದ ಕಾಮಗಾರಿಗಳಿಗೆ ಬದಲಾಗಿ ಹೊಸ ಕಾಮಗಾರಿಗಳಿಗೆ ಏಕೆ ಆದ್ಯತೆ ನೀಡಲಾಗಿದೆ ಎಂಬುದಕ್ಕೆ ಸಾಕಷ್ಟು ಕಾರಣವನ್ನು ನೀಡತಕ್ಕದ್ದು.

(ಐ) ಸ್ಥಳೀಯ ಸ್ವರೂಪದಲ್ಲಿರದ ಕಾಮಗಾರಿಗಳನ್ನು ಆಯ್ಕೆ ಮಾಡಲು ವಾರ್ಷಿಕವಾಗಿ ಮತ್ತು ದೀರ್ಘಾವಧಿ ಕ್ರಿಯಾ ಯೋಜನೆಗಳಲ್ಲಿ ಸೇರಿಸಲು ಹಾಗೂ ಪೌರಸಭೆಗೆ ಸಲಹೆ ನೀಡಲು ಸಂಪೂರ್ಣ ಸ್ವಾತಂತ್ರ್ಯವನ್ನು ಹೊಂದಿರತಕ್ಕದ್ದು.

(ಜೆ) ಸ್ಥಳೀಯ ಸ್ವರೂಪದಲ್ಲಿರುವ ಮತ್ತು ಸ್ಥಳೀಯ ಸ್ವರೂಪದಲ್ಲಿರದ ಎರಡೂ ಕಾಮಗಾರಿಗಳಿಗಾಗಿ ಪೌರಸಭೆಯು ಸಿದ್ಧಪಡಿಸಿದ ಕ್ರಿಯಾ ಯೋಜನೆಗಳಲ್ಲಿ ವಾರ್ಡ್ ಸಮಿತಿಯು ಆಯ್ಕೆ ಮಾಡಿದ ಕಾಮಗಾರಿಗಳು ಮತ್ತು ಬಾಬತ್ತುಗಳು ಮಾತ್ರ ಒಳಗೊಳ್ಳತಕ್ಕದ್ದು.

(ಕೆ) ಪ್ರದೇಶ ಸಭಾಗಳು ಮತ್ತು ನೆರೆಹೊರೆಯ ಗುಂಪುಗಳ ನೆರವಿನೊಂದಿಗೆ ತನ್ನ ಅಧಿಕಾರ ವ್ಯಾಪ್ತಿಯಲ್ಲಿ ನಗರ ಸ್ಥಳೀಯ ಸಂಸ್ಥೆಗಳು ಅಥವಾ ಯಾವುದೇ ಸರ್ಕಾರಿ ಇಲಾಖೆಗಳು ಅಥವಾ ಉದ್ಯಮಗಳ ಅಭಿವೃದ್ಧಿ ಕಾಮಗಾರಿಗಳ ಸಾಮಾಜಿಕ ಲೆಕ್ಕ ಪರಿಶೋಧನೆಯನ್ನು ಕೈಗೊಳ್ಳತಕ್ಕದ್ದು.

(ಎಲ್) ಉದ್ಯಾನವನಗಳ ನಿರ್ವಹಣೆ ಅಥವಾ ಅದರ ಮೇಲ್ವಿಚಾರಣೆಯ ಹೊಣೆಗಾರಿಕೆಯನ್ನು ತೆಗೆದುಕೊಳ್ಳತಕ್ಕದ್ದು.

(ಎಂ) ವನ ನಿರ್ಮಾಣ ಮತ್ತು ನಿರ್ವಹಣೆ ಅಥವಾ ಅದರ ಮೇಲ್ವಿಚಾರಣೆಯ ಹೊಣೆಗಾರಿಕೆಯನ್ನು ತೆಗೆದುಕೊಳ್ಳತಕ್ಕದ್ದು.

(ಎನ್) ಮಳೆನೀರು ಕೊಯ್ಲು ಮತ್ತು ನಿರ್ವಹಣೆ ಅಥವಾ ಅದರ ಮೇಲ್ವಿಚಾರಣೆಯ ಹೊಣೆಗಾರಿಕೆಯನ್ನು ತೆಗೆದುಕೊಳ್ಳತಕ್ಕದ್ದು.

(ಒ) ಸರ್ಕಾರದ ಸ್ವತ್ತುಗಳ ಪಟ್ಟಿಯನ್ನು ನಿರ್ವಹಿಸತಕ್ಕದ್ದು ಮತ್ತು ಯಾರೊಬ್ಬರಿಂದ ಯಾವುದೇ ಒತ್ತುವರಿಯಾಗಿರುವುದು ಕಂಡುಬಂದಲ್ಲಿ ಪರಿಷತ್ತಿಗೆ ವರದಿಮಾಡಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

(ಪಿ) ಬೀದಿಗಳು, ರಸ್ತೆಗಳು, ಪಾದಚಾರಿ ಮಾರ್ಗಗಳು ಮತ್ತು ವಾಹನ ನಿಲುಗಡೆ ಸ್ಥಳಗಳನ್ನು ಯಾರೊಬ್ಬರು, ವಿಶೇಷವಾಗಿ ಅಂಗಡಿ ಮಾಲೀಕರು, ತಿರುಗು ವ್ಯಾಪಾರಿಗಳು ಮತ್ತು ಬೀದಿ ವ್ಯಾಪಾರಿಗಳು ಒತ್ತುವರಿ ಮಾಡುವುದನ್ನು ಪ್ರತಿಬಂಧಿಸಲು ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

(ಕ್ಯು) ಕ್ರಮಬದ್ಧವಾದ ಲೈಸನ್ಸನ್ನು ಪಡೆಯದೇ ಕಟ್ಟುತ್ತಿರುವ ಅನಧಿಕೃತ ಲೇಔಟ್‌ಗಳು ಅಥವಾ ಕಟ್ಟಡಗಳು ಅಥವಾ ಅಭಿವೃದ್ಧಿ ಕಾಮಗಾರಿಗಳನ್ನು ಪ್ರತಿಬಂಧಿಸುವುದಕ್ಕೆ ಜವಾಬ್ದಾರರಾಗಿರತಕ್ಕದ್ದು.

(ಆರ್) ಅನಧಿಕೃತ ಲೇಔಟ್‌ಗಳು ಅಥವಾ ಅಭಿವೃದ್ಧಿ ಕಾಮಗಾರಿಗಳು ಅಥವಾ ಕಟ್ಟಡಗಳ ಬಗ್ಗೆ ಪೌರಸಭೆಗಳ ಆಯುಕ್ತರಿಗೆ ಅಥವಾ ಮುಖ್ಯಾಧಿಕಾರಿಗೆ ವರದಿ ಮಾಡತಕ್ಕದ್ದು ಮತ್ತು ಅನಧಿಕೃತ ಅಭಿವೃದ್ಧಿ ಕಾಮಗಾರಿಗಳನ್ನು ನಿಯಂತ್ರಿಸುವುದಕ್ಕೆ ಪೌರಸಭೆಯ ಆಯುಕ್ತರಿಗೆ ಅಥವಾ ಮುಖ್ಯಾಧಿಕಾರಿಗೆ ನೆರವು ನೀಡತಕ್ಕದ್ದು.

(ಎಸ್) ಅನಧಿಕೃತ ಅಭಿವೃದ್ಧಿ ಕಾಮಗಾರಿಗಳನ್ನು ಪ್ರತಿಬಂಧಿಸುವ ಹೊಣೆಗಾರಿಕೆಯನ್ನು ವಹಿಸಲಾಗಿರುವ ಅಧಿಕಾರಿಯೊಂದಿಗೆ, ಅಂಥ ಅನಧಿಕೃತ ಅಭಿವೃದ್ಧಿ ಕಾಮಗಾರಿಗಳನ್ನು ತಕ್ಷಣವೇ ನಿಲ್ಲಿಸಲು, ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

(ಟಿ) ಪೌರಸಭೆಯು ತನಗೆ ವಹಿಸಿದ ಯಾವುದೇ ಇತರ ಹೊಣೆಗಾರಿಕೆಯನ್ನು ತೆಗೆದುಕೊಳ್ಳತಕ್ಕದ್ದು.

(2) ವಾರ್ಡ್ ಸಮಿತಿಯು ಅದರ ವ್ಯವಹಾರ ನಿರ್ವಹಣೆಯಲ್ಲಿ ಅಳವಡಿಸಿಕೊಳ್ಳಬೇಕಾದ ವಿಧಾನವು ನಿಯಮಿಸಬಹುದಾದಂತೆ ಇರತಕ್ಕದ್ದು.

80ಪಿ. ವಾರ್ಡ್ ಸಮಿತಿಯ ಸದಸ್ಯರನ್ನು ತೆಗೆದುಹಾಕುವುದು.- (1) ವಾರ್ಡ್ ಸಮಿತಿಯ ಜನಾದೇಶಕ್ಕೆ ವ್ಯತ್ತಿರಿಕ್ತವಾದ ನಿಲುವನ್ನು ತೆಗೆದುಕೊಳ್ಳುವ ಪ್ರತಿನಿಧಿಯನ್ನು, ವಾರ್ಡ್ ಸಮಿತಿಯಲ್ಲಿ

ಹಾಜರಿರುವ ಒಟ್ಟು ಸದಸ್ಯರ ಸರಳ ಬಹುಮತದ ಮೂಲಕ ವಾರ್ಡ್ ಸಮಿತಿಯಿಂದ ಬದಲಾಯಿಸತಕ್ಕದ್ದು.

(2) ಅನಧಿಕೃತ ಅಭಿವೃದ್ಧಿ ಕಾಮಗಾರಿಗಳನ್ನು ಗುರುತಿಸಿ ಪ್ರತಿಬಂಧಿಸುವಲ್ಲಿ ವಿಫಲನಾಗುವುದೂ ಸಹಾ ಪ್ರತಿನಿಧಿಯನ್ನು ತೆಗೆದುಹಾಕುವುದಕ್ಕೆ ಕಾರಣವಾಗತಕ್ಕದ್ದು.

80ಕ್ಕ. ಅಪೀಲು.- ವಾರ್ಡ್ ಸಮಿತಿಯ ತೀರ್ಮಾನದಿಂದ ಬಾಧಿತವಾದ ಪ್ರದೇಶ ಸಭಾಗಳು ಅಥವಾ ನೆರೆಹೊರೆಯ ಸಮೂಹಗಳು ಅಥವಾ ಯಾವೊಬ್ಬ ವ್ಯಕ್ತಿ ಅಥವಾ ಒಂದು ಸಂಸ್ಥೆಯು, ಪೌರಸಭೆಯ ಆಯುಕ್ತರು ಅಥವಾ ಮುಖ್ಯಾಧಿಕಾರಿಗೆ ಅಪೀಲು ಮಾಡತಕ್ಕದ್ದು.][1]

1.2020ರ ಅಧಿನಿಯಮ 39ರ ಮೂಲಕ 01.12.2020 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

ಅಧ್ಯಾಯ-IV
ಮುನ್ಸಿಪಲ್ ಸ್ವತ್ತು ಮತ್ತು ನಿಧಿ

81. ಮುನ್ಸಿಪಲ್ ಸ್ವತ್ತು.- (1) ಪ್ರತಿಯೊಂದು ಮುನ್ಸಿಪಲ್ ಕೌನ್ಸಿಲ್ ಈ ಅಧಿನಿಯಮದ ಉದ್ದೇಶಕ್ಕಾಗಿ [1][ಮುನ್ಸಿಪಲ್ ಏರಿಯಾ][1]ದ ಪರಿಮಿತಿಗಳೊಳಗೆ ಆಗಲಿ ಅಥವಾ ಹೊರಗೇ ಆಗಲಿ ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನೂ ಆರ್ಜಿಸಬಹುದು ಮತ್ತು ಹೊಂದಿರಬಹುದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಇದರಲ್ಲಿ ನಿರ್ದಿಷ್ಟಪಡಿಸಿದ ಮತ್ತು ಸರ್ಕಾರದಿಂದ ವಿಶೇಷವಾಗಿ ಕಾಯ್ದಿರಿಸಿದ ಸ್ವರೂಪದಲ್ಲಿ ಎಲ್ಲಾ ಸ್ವತ್ತು ಮುನಿಸಿಪಲ್ ಕೌನ್ಸಿಲ್‌ನಲ್ಲಿ ನಿಹಿತವಾಗತಕ್ಕದ್ದು ಮತ್ತು ಅದಕ್ಕೆ ಸೇರಿರತಕ್ಕದ್ದು ಮತ್ತು ಇದು ಸರ್ಕಾರದಿಂದ ವಿಶೇಷವಾಗಿ ಕಾಯ್ದಿರಿಸದ, ಮುನ್ಸಿಪಲ್ ಕೌನ್ಸಿಲ್‌ನಲ್ಲಿ ನಿಹಿತವಾಗಬಹುದಾದಂಥ ಯಾವುದೇ ಸ್ವರೂಪದ ಅಥವಾ ಬಗೆಯ ಇತರ ಎಲ್ಲಾ ಸ್ವತ್ತಿನೊಂದಿಗೆ, ಅದರ ನಿರ್ದೇಶನ, ವ್ಯವಸ್ಥಾಪನೆ ಮತ್ತು ನಿಯಂತ್ರಣದಲ್ಲಿರತಕ್ಕದ್ದು ಮತ್ತು ಅದು ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ಉದ್ದೇಶಗಳಿಗೊಳಪಟ್ಟು, ನ್ಯಾಸಧಾರಿಯಾಗಿ ಹೊಂದಿರತಕ್ಕದ್ದು ಮತ್ತು ವಿನಿಯೋಗಿಸತಕ್ಕದ್ದು, ಎಂದರೆ,-

(ಎ) ಎಲ್ಲಾ ಸಾರ್ವಜನಿಕ ಪಟ್ಟಣ-ಗೋಡೆಗಳು, ಗೇಟುಗಳು, ಮಾರುಕಟ್ಟೆಗಳು, ಕಸಾಯಿಖಾನೆಗಳು, ಗೊಬ್ಬರ ಮತ್ತು ಮರದ ಡಿಪೋಗಳು ಮತ್ತು ಪ್ರತಿಯೊಂದು ವಿವರಣೆಯ ಸಾರ್ವಜನಿಕ ಕಟ್ಟಡಗಳು;

(ಬಿ) ಎಲ್ಲಾ ಸಾರ್ವಜನಿಕ ತೊರೆಗಳು, ಕೆರೆಗಳು, ಜಲಾಶಯಗಳು, ನೀರು ತೊಟ್ಟಿಗಳು, ಬಾವಿಗಳು, ಚಿಲುಮೆಗಳು, ಮೇಲ್ಗಾಲುವೆಗಳು, ನಳಿಕೆಗಳು, ಸುರಂಗಗಳು, ಪಂಪುಗಳು ಮತ್ತು ಇತರ ನೀರು ಕಾಮಗಾರಿಗಳು ಮತ್ತು ಎಲ್ಲಾ ಸೇತುವೆಗಳು, ಕಟ್ಟಡಗಳು, ಇಂಜಿನ್‌ಗಳು, ಕಾಮಗಾರಿಗಳು ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಲಗತ್ತಾದ ಸಾಮಗ್ರಿಗಳು ಮತ್ತು ವಸ್ತುಗಳು ಮತ್ತು ಯಾವುದೇ ಸಾರ್ವಜನಿಕ ಕೆರೆ ಅಥವಾ ಬಾವಿಗೆ ಸೇರಿರುವ ಖಾಸಗೀ ಸ್ವತ್ತಲ್ಲದ ಯಾವುದೇ ಪಕ್ಕದ ಭೂಮಿಯು ಸಹ;

(ಸಿ) ಎಲ್ಲಾ ಸಾರ್ವಜನಿಕ ಗ್ರಾಮಸಾರ ಚರಂಡಿಗಳು ಮತ್ತು ಚರಂಡಿಗಳು ಮತ್ತು ಯಾವುದೇ ಬೀದಿಯಲ್ಲಿ ಅದರ ಗುಂಟ ಅಥವಾ ಅದರ ಕೆಳಗಿರುವ ಎಲ್ಲಾ ಗ್ರಾಮಸಾರ ಚರಂಡಿಗಳು, ಚರಂಡಿಗಳು, ಸುರಂಗಗಳು, ಅಡಿಗಾಲುವೆಗಳು, ಗಟಾರಗಳು ಮತ್ತು ಜಲಮಾರ್ಗಗಳು ಮತ್ತು ಎಲ್ಲ ಕಾಮಗಾರಿಗಳು, ಸಾಮಗ್ರಿಗಳು ಮತ್ತು ಅದಕ್ಕೆ ಸೇರಿದ ವಸ್ತುಗಳು ಹಾಗೂ ಬೀದಿಗಳು, ಮನೆಗಳು, ಕಕ್ಕಸುಗಳು, ಗ್ರಾಮಸಾರ ಚರಂಡಿಗಳು, ರೊಚ್ಚುಗುಂಡಿಗಳು ಅಥವಾ ಬೇರೆ ಕಡೆಯಿಂದ ಮುನ್ಸಿಪಲ್ ಕೌನ್ಸಿಲ್ ಸಂಗ್ರಹಿಸಿದ ಯಾವುದೇ ಬಗೆಯ ಧೂಳು, ಕೊಳೆ, ಸಗಣಿ, ಬೂದಿ, ಪ್ರಾಣಿ, ವಸ್ತು ಅಥವಾ ಯಾವುದೇ ಕಸಕಡ್ಡಿ;

(ಡಿ) ಎಲ್ಲಾ ಸಾರ್ವಜನಿಕ ದೀಪಗಳು, ದೀಪದ ಕಂಬಗಳು ಮತ್ತು ಅವುಗಳಿಗೆ ಜೋಡಿಸಿದ ಅಥವಾ ಅವುಗಳಿಗೆ ಸೇರಿರುವ ಸಾಧನ ಸಾಮಗ್ರಿಗಳು;

(ಇ) ಸ್ಥಳೀಯ ಸಾರ್ವಜನಿಕ ಉದ್ದೇಶಗಳಿಗಾಗಿ ದಾನ ಅಥವಾ ಅನ್ಯಥಾ ಸರ್ಕಾರವು ಅದಕ್ಕೆ ವರ್ಗಾಯಿಸಿದ ಎಲ್ಲಾ ಭೂಮಿಗಳು ಮತ್ತು ಕಟ್ಟಡಗಳು;

(ಎಫ್) ಎಲ್ಲಾ ಸಾರ್ವಜನಿಕ ಬೀದಿಗಳು ಮತ್ತು ನೆಲಗಟ್ಟುಗಳು, ಕಲ್ಲುಗಳು ಮತ್ತು ಅವುಗಳ ಇತರ ಸಾಮಗ್ರಿಗಳು ಮತ್ತು ಎಲ್ಲಾ ಮರಗಳು, ನಿರ್ಮಾಣಗಳು, ಸಾಮಗ್ರಿಗಳು, ಉಪಕರಣಗಳು ಮತ್ತು ಅಂಥ ಬೀದಿಗಳಿಗೆ ಒದಗಿಸಿದ ವಸ್ತುಗಳು:

ಪರಂತು, (ಇ) ಖಂಡದ ಮೇರೆಗೆ ಸರ್ಕಾರವು ಮುನ್ಸಿಪಲ್ ಕೌನ್ಸಿಲ್‌ಗೆ ವರ್ಗಾಯಿಸಿದ ಭೂಮಿಗಳು ವರ್ಗಾವಣೆಯ ಲಿಖಿತದಲ್ಲಿ ಅನ್ಯಥಾ ಸ್ಪಷ್ಟವಾಗಿ ಉಪಬಂಧಿಸಿದ ಹೊರತು ಮುನ್ಸಿಪಲ್ ಕೌನ್ಸಿಲ್‌ಗೆ ಒಡೆತನದ ಹಕ್ಕಿನ ಮೂಲಕ ಸೇರತಕ್ಕದ್ದಲ್ಲ. ಆದರೆ, ವರ್ಗಾವಣೆಯ ನಿಬಂಧನೆಗಳು ಮತ್ತು ಷರತ್ತುಗಳಿಗೊಳಪಟ್ಟು ಅದರಲ್ಲಿ ನಿಹಿತವಾಗತಕ್ಕದ್ದು, ಮತ್ತು ಸದರಿ ಯಾವುದೇ ನಿಬಂಧನೆ ಅಥವಾ ಷರತ್ತಿನ ಉಲ್ಲಂಘನೆಯಾದಲ್ಲಿ, ಅದರ ಮೇಲಿರುವ ಎಲ್ಲಾ ಜೋಡಣೆಗಳು ಮತ್ತು ರಚನೆಗಳನ್ನು ಒಳಗೊಂಡು ಅದಕ್ಕೆ ಲಗತ್ತಾಗಿರುವ ಎಲ್ಲಾ ವಸ್ತುಗಳೊಂದಿಗೆ ಭೂಮಿಗಳು, ಸರ್ಕಾರದಲ್ಲಿ ನಿಹಿತವಾಗತಕ್ಕದ್ದು ಮತ್ತು ಅದರ ಸ್ವಾಧೀನವನ್ನು ಪುನಃ ಪಡೆಯಲು ಸರ್ಕಾರಕ್ಕೆ ಕಾನೂನು ಸಮ್ಮತವಾಗಿರತಕ್ಕದ್ದು.

(3) ಈ ಪ್ರಕರಣದ ಮೇರೆಗೆ ಮುನ್ಸಿಪಲ್ ಕೌನ್ಸಿಲ್‌ನಲ್ಲಿ ನಿಹಿತವಾದ ಅಥವಾ ನಿಹಿತವಾಗುವ ಯಾವುದೇ ಸ್ವತ್ತನ್ನು, ಸರ್ಕಾರವು ನಿರ್ಧರಿಸಬಹುದಾದಂಥ ನಿಬಂಧನೆಗಳ ಮೇಲೆ ಅಧಿಸೂಚನೆಯ ಮೂಲಕ ಕಾಲಕಾಲಕ್ಕೆ ತೆಗೆದುಕೊಳ್ಳುವುದು ಸರ್ಕಾರಕ್ಕೆ ಸಕ್ಷಮವಾಗಿರತಕ್ಕದ್ದು.

82. ಮುನ್ಸಿಪಲ್ ಕೌನ್ಸಿಲ್‌ನಿಂದ ಅಥವಾ ಅದರ ವಿರುದ್ಧವಾಗಿ ಸ್ವತ್ತಿಗಾಗಿನ ಕ್ಲೇಮುಗಳ ತೀರ್ಮಾನ.- (1) ಸಾಮಾನ್ಯವಾಗಿ ಕೃಷಿ ಉದ್ದೇಶಗಳಿಗಾಗಿ ಮಾತ್ರ ಉಪಯೋಗಿಸಲಾದ ಭೂಮಿಗಳನ್ನು ಹೊರತುಪಡಿಸಿ ಭೂಮಿಗಳ ಮೋಜಣಿಯನ್ನು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಮುನ್ಸಿಪಲ್ ಏರಿಯಾದಲ್ಲಿ ಯಾವುದೇ ಕಾನೂನಿನ ಮೇರೆಗೆ, ವಿಸ್ತರಿಸಿರುವ ಅಥವಾ ವಿಸ್ತರಿಸತಕ್ಕಂಥ ಯಾವುದೇ ಸ್ವತ್ತು ಅಥವಾ ಯಾವುದೇ ಸ್ವತ್ತಿನಲ್ಲಿ ಅಥವಾ ಅದರ ಮೇಲೆ ಯಾವುದೇ ಹಕ್ಕನ್ನು ಮುನ್ಸಿಪಲ್ ಕೌನ್ಸಿಲ್ ಅಥವಾ ಅದರ ಪರವಾಗಿ ಅಥವಾ ಮುನ್ಸಿಪಲ್ ಕೌನ್ಸಿಲ್‌ನ ವಿರುದ್ಧವಾಗಿ ಯಾರೇ ವ್ಯಕ್ತಿಯು ಕ್ಲೇಮು ಮಾಡಿರುವಲ್ಲಿ ಡೆಪ್ಯೂಟಿ ಕಮಿಷನರ್ ನಿಗೆ ಯಾವ ವಿಚಾರಣೆಯ ಬಗ್ಗೆ ಕ್ರಮಬದ್ಧವಾದ ನೋಟೀಸನ್ನು ಕೊಡಲಾಗಿದೆಯೋ ಆ ವಿಚಾರಣೆಯ ತರುವಾಯ ಕ್ಲೇಮನ್ನು ತೀರ್ಮಾನಿಸುವ ಆದೇಶವನ್ನು ಮಾಡುವುದು ಕಾನೂನುಸಮ್ಮತವಾಗಿರತಕ್ಕದ್ದು.

(2) ಉಪ-ಪ್ರಕರಣ (1) ರ ಮೇರೆಗೆ ಡೆಪ್ಯುಟಿ ಕಮೀಷನರ್ ನು ಮಾಡಿದ ಯಾವುದೇ ಆದೇಶದ ದಿನಾಂಕದಿಂದ ಒಂದು ವರ್ಷ ಮುಕ್ತಾಯವಾದ ತರುವಾಯ ಯಾವುದೇ ಸಿವಿಲ್ ನ್ಯಾಯಾಲಯದಲ್ಲಿ ಹೂಡಿದ ಯಾವುದೇ ದಾವೆ ಅಥವಾ ಅಂಥ ಆದೇಶದ ವಿರುದ್ಧ ಕಾಲಪರಿಮಿತಿ ಅವಧಿಯೊಳಗೆ ಒಂದು ಅಥವಾ ಹೆಚ್ಚು ಅಪೀಲುಗಳನ್ನು ಮಾಡಲಾಗಿದ್ದರೆ, ಆಗ ಅಂತಿಮ ಅಪೀಲು ಪ್ರಾಧಿಕಾರವು ಮಾಡಿದ ಯಾವುದೇ ಆದೇಶದ ದಿನಾಂಕದಿಂದ (ಕಾಲಪರಿಮಿತಿಯನ್ನು ಪ್ರತಿರಕ್ಷೆಗಾಗಿ ಮಂಡಿಸದಿದ್ದಾಗ್ಯೂ) ಅಂಥ ಆದೇಶವನ್ನು ತಳ್ಳಿಹಾಕಲು ಆ ದಾವೆಯನ್ನು ಹೂಡಿದ್ದರೆ ಅಥವಾ ಅಂಥ ಆದೇಶಕ್ಕೆ ಅಸಂಗತವಾಗಿ ಪರಿಹಾರವನ್ನು ಕ್ಲೇಮು ಮಾಡಿದ್ದರೆ, ಅದನ್ನು ವಜಾ ಮಾಡತಕ್ಕದ್ದು, ಆದರೆ ವಾದಿಯು ಅಂಥ ಆದೇಶದ ಬಗ್ಗೆ ಯುಕ್ತ ನೋಟೀಸನ್ನು ಹೊಂದಿದ್ದಿರಬೇಕು.

(3) ಈ ಪ್ರಕರಣದ (ಎ) ಮೂಲಕ ಡೆಪ್ಯುಟಿ ಕಮೀಷನರ್ ನಿಗೆ ಪ್ರದತ್ತವಾದ ಅಧಿಕಾರಗಳನ್ನು, ಟೌನ್ ಮುನ್ಸಿಪಲ್ ಕೌನ್ಸಿಲ್ ನ ಸಂದರ್ಭದಲ್ಲಿ ಅಸಿಸ್ಟೆಂಟ್ ಕಮೀಷನರ್ ನು [1][ಅಥವಾ ಸರ್ಕಾರವು ನಿರ್ದಿಷ್ಟಪಡಿಸಿದ ಸಮಾನ ದರ್ಜೆಯ ಇತರ ಯಾರೇ ಅಧಿಕಾರಿಯು][1] ಕೂಡ ಚಲಾಯಿಸಬಹುದು.

1.1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಬಿ) ಯಾರೇ ವ್ಯಕ್ತಿಯು, ಈ ಪ್ರಕರಣದ ಮೇರೆಗಿನ ವಿಚಾರಣೆ ಅಥವಾ ಆದೇಶದ ನೋಟೀಸನ್ನು ಸರ್ಕಾರವು ಈ ಬಗ್ಗೆ ರಚಿಸಿದ ನಿಯಮಗಳಿಗನುಸಾರವಾಗಿ ಕೊಡಲಾಗಿದ್ದರೆ ಅದರ ಬಗ್ಗೆ ಯುಕ್ತ ನೋಟೀಸನ್ನು ಹೊಂದಿರುವುದಾಗಿ ಭಾವಿಸತಕ್ಕದ್ದು.

83. ಮುನ್ಸಿಪಲ್ ನಿಧಿ.- ಈ ಅಧಿನಿಯಮದ ಅಥವಾ ಯಾವುದೇ ಕಾನೂನಿನಿಂದಾಗಿ ಮುನ್ಸಿಪಲ್ ಕೌನ್ಸಿಲ್ ಅಥವಾ ಅದರ ಪರವಾಗಿ ಸ್ವೀಕರಿಸಿದ ಎಲ್ಲಾ ಹಣಗಳು; ಈ ಅಧಿನಿಯಮದ ಮೇರೆಗೆ ಅದಕ್ಕೆ ಸಂದಾಯ ಮಾಡಿದ ಅಥವಾ ಅದು ಸಂಗ್ರಹಿಸಿದ ಎಲ್ಲಾ ತೆರಿಗೆಗಳು, ದಾರಿ ಸುಂಕಗಳು ಮತ್ತು ಇತರ ಸುಂಕಗಳು, ಜುಲ್ಮಾನೆಗಳು, ಫೀಜುಗಳು, ದಂಡಗಳು; ಮುನ್ಸಿಪಲ್ ಕೌನ್ಸಿಲ್ ಮಾರಾಟ ಮಾಡಿದ ಭೂಮಿ ಅಥವಾ ಇತರ ಸ್ವತ್ತಿನ ಎಲ್ಲ ಉತ್ಪನ್ನಗಳು, ಮತ್ತು ಅದರ ಭೂಮಿ ಅಥವಾ

ಸ್ವತ್ತಿನಿಂದ ಪ್ರಾಪ್ತವಾಗುವ ಎಲ್ಲ ಬಾಡಿಗೆಗಳು; ಸರ್ಕಾರ ಅಥವಾ ಖಾಸಗೀ ವ್ಯಕ್ತಿಗಳಿಂದ ಅಥವಾ ಅನ್ಯಥಾ ದಾನಗಳು ಅಥವಾ ವರ್ಗಾವಣೆ ಮೂಲಕ ಒದಗಿ ಬರುವ ಎಲ್ಲ ಬಡ್ಡಿ, ಲಾಭಗಳು ಮತ್ತು ಇತರ ಹಣಗಳೂ ಸಹ ಮುನ್ಸಿಪಲ್ ನಿಧಿಯಾಗಿರತಕ್ಕದ್ದು ಮತ್ತು ಅದನ್ನು 81ನೇ ಪ್ರಕರಣದಲ್ಲಿ ಹೇಳಿದ ಸ್ವತ್ತಿನಂತೆ ಅದೇ ರೀತಿಯಲ್ಲಿ ಧಾರಣ ಮಾಡತಕ್ಕದ್ದು ಮತ್ತು ವ್ಯವಹರಿಸತಕ್ಕದ್ದು:

ಪರಂತು,-

(ಎ) ಈ ಪ್ರಕರಣದಲ್ಲಿ ಅಥವಾ 81ನೇ ಪ್ರಕರಣದಲ್ಲಿರುವುದು ಯಾವುದೂ, ಅಂಥ ಮುನ್ಸಿಪಲ್ ಕೌನ್ಸಿಲ್ ಅಥವಾ ಅದರ ಪರವಾಗಿ ಬರೆದುಕೊಟ್ಟ ಟ್ರಸ್ಟಿನ ಯಾವುದೇ ಘೋಷಣೆ ಅಥವಾ ಯಾವುದೇ ಟ್ರಸ್ಟಿನ ಆಡಳಿತಕ್ಕಾಗಿ ಸರ್ಕಾರದ ಆದೇಶದ ಮೂಲಕ ವ್ಯವಸ್ಥೆಗೊಳಿಸಿದ ಯಾವುದೇ ಯೋಜನೆಯ ಮೂಲಕ ಯಾವುದೇ ಮುನ್ಸಿಪಲ್ ಕೌನ್ಸಿಲ್ ಅಂಗೀಕರಿಸಿದ ಅಥವಾ ಅದರ ಮೇಲೆ ವಿಧಿಸಿದ ಯಾವುದೇ ಹೊಣೆಗೆ ಯಾವುದೇ ರೀತಿಯಲ್ಲಿ ಪರಿಣಾಮ ಬೀರತಕ್ಕದ್ದಲ್ಲ.

(ಬಿ) ಮುನ್ಸಿಪಲ್ ಕೌನ್ಸಿಲ್, ಈ ಅಧಿನಿಯಮ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಮೇರೆಗೆ ಅದರ ಮೇಲೆ ವಿಧಿಸಿದ ಅಥವಾ ವಿಧಿಸಬಹುದಾದ ಎಲ್ಲಾ ಹೊಣೆಗಳ ನೆರವೇರಿಕೆಗಾಗಿ ಯುಕ್ತ ಏರ್ಪಾಡನ್ನು ಮಾಡತಕ್ಕ ಷರತ್ತಿಗೊಳಪಟ್ಟು ವಿಶೇಷವಾಗಿ ಶಾಲೆಗಳು ಅಥವಾ ಔಷಧಾಲಯಗಳು ಅಥವಾ ನೀರು ಸರಬರಾಜು ಗೃಹಗಳು ಅಥವಾ ಅಗ್ನಿಶಾಮಕ ದಳಗಳ ಉದ್ದೇಶಗಳಿಗಾಗಿ ಅಥವಾ [1][ಡೆಪ್ಯುಟಿ ಕಮೀಷನರನು][1] ಈ ಬಗ್ಗೆ ಅನುಮೋದಿಸುವಂಥ ಇತರ ಉದ್ದೇಶಗಳಿಗಾಗಿ ಸ್ವೀಕರಿಸಿದ ಅಥವಾ ಪ್ರತ್ಯೇಕವಾಗಿಟ್ಟ ಮುನ್ಸಿಪಲ್ ನಿಧಿಯ ಯಾವುದೇ ಭಾಗವನ್ನು ಮುನ್ಸಿಪಲ್ ಲೆಕ್ಕಪತ್ರಗಳಲ್ಲಿ ಪ್ರತ್ಯೇಕವಾದ ಶೀರ್ಷಿಕೆಗೆ ಜಮೆ ಮಾಡಬಹುದು ಮತ್ತು ಮುನ್ಸಿಪಲ್ ಕೌನ್ಸಿಲ್ ಸರಿಯಾಗಿ ಹಾಗೆ ಜಮೆ ಮಾಡಿದ ಯಾವುದೇ ಮೊತ್ತಗಳನ್ನು, ಯಾವ ವಿಶೇಷ ಉದ್ದೇಶಗಳಿಗಾಗಿ ಅಂಥ ಮೊತ್ತಗಳನ್ನು ಸ್ವೀಕರಿಸಲಾಗಿತ್ತೋ ಅಥವಾ ಪ್ರತ್ಯೇಕವಾಗಿಡಲಾಗಿತ್ತೋ ಆ ಉದ್ದೇಶಗಳಿಗಾಗಿ ಅನನ್ಯವಾಗಿ ವಿನಿಯೋಗಿಸಬಹುದು.

1.2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಸಿ) ಮುನ್ಸಿಪಲ್ ಕೌನ್ಸಿಲ್ 137ನೇ ಪ್ರಕರಣದ ಮೇರೆಗೆ ಸ್ವೀಕರಿಸಿದ ಫೀಜುಗಳನ್ನು ಮುನ್ಸಿಪಾಲಿಟಿ ಲೆಕ್ಕಪತ್ರಗಳ ಪ್ರತ್ಯೇಕ ಶೀರ್ಷಿಕೆಗೆ ಜಮೆ ಮಾಡತಕ್ಕದ್ದು ಮತ್ತು ಮುನ್ಸಿಪಲ್ ಕೌನ್ಸಿಲ್ ಹಾಗೆ ಜಮೆ ಮಾಡಿದ ಯಾವುದೇ ಮೊತ್ತವನ್ನು ಸದರಿ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಉದ್ದೇಶಗಳಿಗಾಗಿ ಅನನ್ಯವಾಗಿ ವಿನಿಯೋಗಿಸತಕ್ಕದ್ದು.

84. ಮುನ್ಸಿಪಲ್ ನಿಧಿ ಮತ್ತು ಸ್ವತ್ತಿನ ವಿನಿಯೋಗ.- (1) ಈ ಅಧಿನಿಯಮದ ಉಪಬಂಧಗಳು ಮತ್ತು ನಿಯಮಿಸಬಹುದಾದಂಥ ನಿಯಮಗಳಿಗೊಳಪಟ್ಟು ಈ ಅಧಿನಿಯಮದ ಮೇರೆಗೆ ಮುನ್ಸಿಪಲ್ ಕೌನ್ಸಿಲ್ ಧಾರಣ ಮಾಡಿದ ಅಥವಾ ಅದರಲ್ಲಿ ನಿಹಿತವಾದ ಮುನ್ಸಿಪಲ್ ನಿಧಿ ಮತ್ತು ಎಲ್ಲಾ ಸ್ವತ್ತು 87, 88 ಮತ್ತು 91ನೇ ಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿದ ಉದ್ದೇಶಗಳಿಗಾಗಿ ಅನ್ವಯಿಸತಕ್ಕದ್ದು ಮತ್ತು ಈ ಅಧಿನಿಯಮ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಯಾವ ಉದ್ದೇಶಗಳಿಗಾಗಿ ಮುನ್ಸಿಪಲ್ ಕೌನ್ಸಿಲ್‌ಗೆ ಅಧಿಕಾರಗಳನ್ನು ಪ್ರದಾನ ಮಾಡಲಾಗಿದೆಯೋ ಅಥವಾ ಕರ್ತವ್ಯಗಳನ್ನು ವಿಧಿಸಲಾಗಿದೆಯೋ ಆ ಇತರ ಎಲ್ಲ ಉದ್ದೇಶಗಳಿಗಾಗಿ ಮತ್ತು [1][ಪೌರಾಡಳಿತ ನಿರ್ದೇಶಕನ][1] ಅಥವಾ ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ, ಯಾವ ಉದ್ದೇಶಗಳಿಗಾಗಿ ಅಂಥ ಸ್ವತ್ತು ಅಥವಾ ನಿಧಿಯ ವಿನಿಯೋಗವು ಸಾರ್ವಜನಿಕ ಹಿತಾಸಕ್ತಿಯಲ್ಲಿರುವುದೋ ಆ ಇತರ ಯಾವುದೇ ಉದ್ದೇಶಗಳಿಗಾಗಿ ವಿನಿಯೋಗಿಸತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಉಪ-ಪ್ರಕರಣ (1)ರಲ್ಲಿ ಏನೇ ಅಡಕವಾಗಿದ್ದಾಗ್ಯೂ, ಅದರಿಂದ ಈ ಬಗ್ಗೆ ಕ್ರಮಬದ್ಧವಾಗಿ ಅಧಿಕೃತಗೊಂಡ ಯಾರೇ ಅಧಿಕಾರಿಯು,-

(ಎ) ಸದರಿ ಪರಿಮಿತಿಗಳಿಗೆ ಮೀರಿದ ವೆಚ್ಚವನ್ನು,-

(i) ಭೂಮಿಯ ಆರ್ಜನೆಯಲ್ಲಿ; ಅಥವಾ

(ii) [1][ಮುನ್ಸಿಪಲ್ ಏರಿಯಾ][1] ದ ನಿವಾಸಿಗಳಿಗೆ ಅಗತ್ಯವಾದ ನೀರಿನ ಸರಬರಾಜನ್ನು ಪಡೆಯುವ ಉದ್ದೇಶಕ್ಕಾಗಿ ಅಥವಾ ಕಾಮಗಾರಿಗಳ ನಿರ್ಮಾಣ,

ನಿರ್ವಹಣೆ, ದುರಸ್ತಿ ಅಥವಾ ಖರೀದಿಗಾಗಿ ಅಥವಾ ಸದರಿ [1][ಮುನ್ಸಿಪಲ್ ಏರಿಯಾ][1] ದ ನಿವಾಸಿಗಳ ಉಪಯೋಗಕ್ಕಾಗಿ ವಿದ್ಯುಚ್ಛಕ್ತಿಯ ಸರಬರಾಜನ್ನು ಒದಗಿಸುವುದಕ್ಕೆ ಅಥವಾ ಸದರಿ ಪರಿಮಿತಿಗಳಿಂದಾಚೆ ಕಸಾಯಿಖಾನೆಗಳನ್ನು ಅಥವಾ ಮಲ ಅಥವಾ ಗ್ರಾಮಸಾರ ಅಥವಾ ಪ್ರಾಣಿಗಳ ಶವಗಳನ್ನು ವಿಲೆ ಮಾಡಲು ಸ್ಥಳಗಳನ್ನು ಸ್ಥಾಪಿಸುವುದಕ್ಕಾಗಿ ಅಥವಾ ಚರಂಡಿ ಕಾಮಗಾರಿಗಳಿಗಾಗಿ ಅಥವಾ ಸಾರ್ವಜನಿಕ ಸಾಗಣೆಗಾಗಿ ಯಾಂತ್ರಿಕನಾಗಿ ಚಾಲಿತವಾದ ಸಾರಿಗೆ ಸೌಲಭ್ಯಗಳನ್ನು ಒದಗಿಸುವ ಉದ್ದೇಶಕ್ಕಾಗಿ ಅಥವಾ ಮುನ್ಸಿಪಾಲಿಟಿಯ ನಿವಾಸಿಗಳ ಪ್ರಯೋಜನಕ್ಕಾಗಿ ಹಾಲು ಅಥವಾ ಹಾಲಿನ ಉತ್ಪನ್ನಗಳ ಸರಬರಾಜು, ವಿತರಣೆ ಮತ್ತು ಅವುಗಳ ಸಂಸ್ಕರಣೆಗಾಗಿ ಡೈರಿಗಳು ಅಥವಾ ಫಾರ್ಮುಗಳನ್ನು ಸ್ಥಾಪಿಸುವ ಉದ್ದೇಶಕ್ಕಾಗಿ ಅಥವಾ ಸದರಿ [1][ಮುನ್ಸಿಪಲ್ ಏರಿಯಾ][1]ದ ನಿವಾಸಿಗಳ ಆರೋಗ್ಯ, ಸುರಕ್ಷತೆ ಅಥವಾ ಅನುಕೂಲವನ್ನು ವೃದ್ಧಿಗೊಳಿಸುವುದಕ್ಕಾಗಿನ ಯಾವುದೇ ಇತರ ಉದ್ದೇಶಕ್ಕೆ,

- ವಹಿಸಬಹುದು. ಅಥವಾ

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಬಿ) [1][ಮುನ್ಸಿಪಲ್ ಏರಿಯಾ][1] ದ ಪರಿಮಿತಿಯೊಳಗಾಗಲಿ ಅಥವಾ ಅದರಾಚೆಯಾಗಲಿ ಸಾರ್ವಜನಿಕ ಆರೋಗ್ಯ, ಶಿಕ್ಷಣ ಅಥವಾ ಅನುಕೂಲವನ್ನು ವೃದ್ಧಿಗೊಳಿಸುವ ಮತ್ತು ವಂತಿಗೆ ಕೊಡುವ ಮುನ್ಸಿಪಲ್ ಕೌನ್ಸಿಲ್‌ನ ಪರಿಮಿತಿಗಳೊಳಗಿನ ನಿವಾಸಿಗಳ ಪ್ರಯೋಜನಕ್ಕಾಗಿನ ಕ್ರಮಗಳಿಗಾಗಿ ಯಾವುದೇ ಇತರ ಮುನ್ಸಿಪಲ್ ಕೌನ್ಸಿಲ್ ಅಥವಾ [1][ತಾಲ್ಲೂಕು ಪಂಚಾಯಿತಿ ಅಥವಾ ಗ್ರಾಮ ಪಂಚಾಯಿತಿ ಅಥವಾ ದಂಡು ಪ್ರದೇಶ ಪ್ರಾಧಿಕಾರ][1] ಅಥವಾ ಪಟ್ಟಣ ಪ್ರದೇಶ ಸಮಿತಿ ಅಥವಾ ಇತರ ಸಾರ್ವಜನಿಕ ಸಂಸ್ಥೆ ಅಥವಾ ವ್ಯಕ್ತಿ ಅಥವಾ ವ್ಯಕ್ತಿಗಳ ನಿಕಾಯಕ್ಕೆ ವಹಿಸಿದ ವೆಚ್ಚಗಳ ಬಗ್ಗೆ ವಂತಿಗೆಯನ್ನು ಕೊಡಬಹುದು; ಅಥವಾ

1. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಸಿ) [1][ಮುನ್ಸಿಪಲ್ ಏರಿಯಾ][1]ದ ಪರಿಮಿತಿಗಳ ಹೊರಗೆ ಪಡೆಯಬಹುದಾದ ವಿದ್ಯಾರ್ಥಿ ವೇತನಗಳನ್ನು ಸೃಜಿಸಬಹುದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) ಈ ಪ್ರಕರಣದಲ್ಲಿ ಅಥವಾ ಈ ಅಧಿನಿಯಮದ ಯಾವುದೇ ಇತರ ಉಪಬಂಧದಲ್ಲಿರುವುದು ಯಾವುದೂ,-

(ಎ) ಯಾವುದೇ ಸ್ಥಳದಲ್ಲಿ, ಅಂಥ ಸ್ಥಳವು ಸದರಿ [1][ಮುನ್ಸಿಪಲ್ ಏರಿಯಾ][1]ದ ಪರಿಮಿತಿಗಳೊಳಗೆ ಇರಲಿ ಅಥವಾ ಇಲ್ಲದಿರಲಿ, ಯಾರೇ ವ್ಯಕ್ತಿ ಅಥವಾ [2][ಕಟ್ಟಡಗಳು ಅಥವಾ ಖಾಲಿ ಭೂಮಿಗಳಿಗೆ][2], ಅಥವಾ ಅದರ ಪ್ರಯೋಜನಕ್ಕಾಗಿ ಮುನ್ಸಿಪಲ್ ಕೌನ್ಸಿಲ್ ಮತ್ತು ಅಂಥ [2][ಕಟ್ಟಡಗಳ ಅಥವಾ ಖಾಲಿ ಭೂಮಿಗಳ][2] ಅಂಥ ವ್ಯಕ್ತಿ ಅಥವಾ ಅಧಿಭೋಗದಾರ ಅಥವಾ ಒಡೆಯನ ನಡುವೆ ಒಪ್ಪಂದದ ಮೂಲಕ ನಿರ್ಧರಿಸತಕ್ಕ ಸಂದಾಯ ಮತ್ತು ಅಂಥ ಸರಬರಾಜು ಅಥವಾ ಅನುಕೂಲತೆಗಳ ಮುಂದುವರಿಕೆಗೆ ಸಂಬಂಧಪಟ್ಟಂತೆ ಅಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಅಂಥ ಚರಂಡಿ ಕಾಮಗಾರಿಗಳ ವ್ಯವಸ್ಥೆಯ ಮೂಲಕ ಒದಗಿಸಿದ ಅನುಕೂಲತೆಗಳನ್ನು ಸದರಿ [1][ಮುನ್ಸಿಪಲ್ ಏರಿಯಾ][1]ದೊಳಗೆ ಈ ಅಧಿನಿಯಮದ ಉದ್ದೇಶಕ್ಕಾಗಿ ಅಗತ್ಯವಿರದ ನೀರಿನ ಅಥವಾ ವಿದ್ಯುಚ್ಛಕ್ತಿಯ ಯಾವುದೇ ಪ್ರಮಾಣವನ್ನು ಸರಬರಾಜು ಮಾಡಲು ಅಥವಾ ವಿಸ್ತರಿಸಲು; ಅಥವಾ

(ಬಿ) ಅಂಥ ಸರಬರಾಜಿನ ಉದ್ದೇಶಕ್ಕಾಗಿ ಅಥವಾ ಅಂಥ ಅನುಕೂಲಗಳ ವಿಸ್ತರಣೆಗಾಗಿ ಅವಶ್ಯವಾದ ಯಾವುದೇ ಸಂಪರ್ಕ ಕೊಳವೆಗಳನ್ನು ಅಥವಾ ಯಾವುದೇ ವಿದ್ಯುತ್ ಸರಬರಾಜು ಲೈನುಗಳ ಅಥವಾ ಇತರ ಕಾಮಗಾರಿಗಳ ನಿರ್ಮಾಣ, ನಿರ್ವಹಣೆ, ದುರಸ್ತಿ ಅಥವಾ ಬದಲಾವಣೆಗಾಗಿ ಹಿಂದೆ ಹೇಳಿದಂತೆ ನಿರ್ಧರಿಸಬಹುದಾದಂಥ ಸಂದಾಯದ ಬಗೆಗಿನ ಅಂಥ ನಿಬಂಧನೆಗಳ ಮೇಲೆ ಯಾವುದೇ ವೆಚ್ಚವನ್ನು ವಹಿಸಲು;

- ಸರ್ಕಾರದ ಅನುಮತಿಯೊಂದಿಗೆ ಹಿಂದೆ ಹೇಳಿದಂತೆ ನೀರು ಸರಬರಾಜು ಅಥವಾ ವಿದ್ಯುಚ್ಛಕ್ತಿ ಅಥವಾ ಚರಂಡಿ ವ್ಯವಸ್ಥೆಗಾಗಿ ಸದರಿ 1[ಮುನ್ಸಿಪಲ್ ಏರಿಯಾ]1 ದ ಪರಿಮಿತಿಗಳಿಂದಾಚೆ ಅದು ಕಾಮಗಾರಿಗಳನ್ನು ನಿರ್ಮಿಸಿದಾಗ ಮುನ್ಸಿಪಲ್ ಕೌನ್ಸಿಲ್‌ಗೆ ಅದು ಕಾನೂನುಬಾಹಿರಗೊಳಿಸುವುದಾಗಿ ಭಾವಿಸತಕ್ಕದ್ದಲ್ಲ.

1. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 2003ರ ಅಧಿನಿಯಮ 31ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

85. ಹೆಚ್ಚುವರಿ ನಿಧಿಯನ್ನು ಠೇವಣಿ ಇಡಲು ಮತ್ತು ಹೂಡಲು ಅಧಿಕಾರ.- (1) ಮುನ್ಸಿಪಲ್ ಕೌನ್ಸಿಲ್‌ಗೆ ಚಾಲ್ತಿ ವೆಚ್ಚಗಳಿಗೆ ಅಗತ್ಯವಿಲ್ಲದಿರಬಹುದಾದಂಥ ಅದರ ವಶದಲ್ಲಿರುವ ಯಾವುದೇ ಹೆಚ್ಚುವರಿ ವಿಧಿಗಳನ್ನು ಸರ್ಕಾರಿ ಉಳಿತಾಯ ಬ್ಯಾಂಕ್ ಅಥವಾ ಸರ್ಕಾರದ ಮಂಜೂರಾತಿಯೊಂದಿಗೆ ಯಾವುದೇ ಅನುಸೂಚಿತ ಬ್ಯಾಂಕಿನಲ್ಲಿ ಅಥವಾ ಸರ್ಕಾರವು ಅನುಮೋದಿಸಿದ ರಾಜ್ಯದಲ್ಲಿನ ಕೇಂದ್ರೀಯ ಸಹಕಾರಿ ಬ್ಯಾಂಕಿನಲ್ಲಿ ಬಡ್ಡಿಯ ಮೇಲೆ ಠೇವಣಿ ಇಡಲು ಮತ್ತು ಅಂಥವೇ ಮಂಜೂರಾತಿಯೊಂದಿಗೆ ಅಂಥ ನಿಧಿಗಳನ್ನು ಸಾರ್ವಜನಿಕ ಭದ್ರತೆಗಳಲ್ಲಿ ಮುನ್ಸಿಪಲ್ ಕೌನ್ಸಿಲ್‌ನ ಹೆಸರಿನಲ್ಲಿ ಹೂಡಲು ಮತ್ತು ಅವಶ್ಯಕವಾಗಬಹುದಾದಂಥ ಭದ್ರತೆಗಳನ್ನು ಕಾಲಕಾಲಕ್ಕೆ ವಿಲೆ ಮಾಡಲು ಕಾನೂನು ಸಮ್ಮತವಾಗಿರತಕ್ಕದ್ದು.

(2) ಚಾಲ್ತಿ ವೆಚ್ಚಗಳಿಗೆ ಅಗತ್ಯವಾಗಬಹುದಾದ್ದಕ್ಕಿಂತ ಹೆಚ್ಚಿನ ಮತ್ತು ಮೇಲ್ಪಟ್ಟ ಎಲ್ಲ ಹೆಚ್ಚುವರಿ ನಿಧಿಗಳನ್ನು (1)ನೇ ಉಪ-ಪ್ರಕರಣದಲ್ಲಿ ಉಪಬಂಧಿಸಿದಂತೆ ಠೇವಣಿ ಇಟ್ಟರೆ ಅಥವಾ ಹೂಡಿದ ಹೊರತು, ಸ್ಥಳೀಯ ಸರ್ಕಾರಿ ಖಜಾನೆ ಅಥವಾ ಅಂಥ ಇತರ ಸ್ಥಳದಲ್ಲಿ ಠೇವಣಿ ಇಡತಕ್ಕದ್ದು ಅಥವಾ ಸರ್ಕಾರವು ಮಂಜೂರ್ಮಾಡಬಹುದಾದಂಥ ಭದ್ರತೆಯಲ್ಲಿ ಹೂಡತಕ್ಕದ್ದು.

86. ಹಣ ಸಾಲ ಪಡೆಯಲು ಮುನ್ಸಿಪಲ್ ಕೌನ್ಸಿಲ್‌ಗಳ ಅಧಿಕಾರ.- ಮುನ್ಸಿಪಲ್ ಕೌನ್ಸಿಲ್ ವಿಶೇಷ ಸಾಮಾನ್ಯ ಸಭೆಯಲ್ಲಿ ಅಂಗೀಕರಿಸಿದ ನಿರ್ಣಯದ ಅನುಸರಣೆಯಲ್ಲಿ ಮತ್ತು ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ಮತ್ತು ಭದ್ರತೆ ಬಡ್ಡಿಯ ದರ, ಅಸಲು ಮತ್ತು ಬಡ್ಡಿಯ ಮರುಸಂದಾಯಕ್ಕೆ ಸಂಬಂಧಪಟ್ಟಂತೆ ಸರ್ಕಾರವು ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ಈ ಅಧಿನಿಯಮದ ಉಪಬಂಧಗಳ ಮೇರೆಗೆ ಕೈಗೊಳ್ಳಲು ಅಗತ್ಯಪಡಿಸಿದ ಅಥವಾ ಶಕ್ತಗೊಳಿಸಿದಂಥ ಖಾಯಂ ಸ್ವರೂಪದ ಯಾವುದೇ ಕಾಮಗಾರಿಯ ನಿರ್ಮಾಣಕ್ಕಾಗಿ ಅಥವಾ ಭೂಮಿಯ ಆರ್ಜನೆಗಾಗಿ ಅಗತ್ಯವಾದ ಹಣದ ಯಾವುದೇ ಮೊತ್ತವನ್ನು ಸರ್ಕಾರದಿಂದಾಗಲಿ ಇಲ್ಲವೆ ಯಾವುದೇ ಬ್ಯಾಂಕು, ನಿಗಮ ಅಥವಾ ವ್ಯಕ್ತಿಯಿಂದಾಗಲಿ ಸಾಲ ಪಡೆಯಬಹುದು.

ಅಧ್ಯಾಯ-V

ಮುನ್ಸಿಪಲ್ ಕೌನ್ಸಿಲ್‌ಗಳ ಕಡ್ಡಾಯ ಮತ್ತು ವಿವೇಚನಾತ್ಮಕ ಪ್ರಕಾರ್ಯಗಳು

87. ಮುನ್ಸಿಪಲ್ ಕೌನ್ಸಿಲ್‌ಗಳ ಕಡ್ಡಾಯದ ಪ್ರಕಾರ್ಯಗಳು.- ಪ್ರತಿಯೊಂದು ಮುನ್ಸಿಪಲ್ ಕೌನ್ಸಿಲ್‌ಗೆ [1][ಮುನ್ಸಿಪಲ್ ಏರಿಯಾ][1]ದೊಳಗೆ ಕೆಳಕಂಡ ವಿಷಯಗಳ ಪ್ರತಿಯೊಂದಕ್ಕಾಗಿ, ಅದು ಕಾನೂನುಬದ್ಧವಾಗಿ ಉಪಯೋಗಿಸಬಹುದಾದ ಅಥವಾ ತೆಗೆದುಕೊಳ್ಳಬಹುದಾದಂಥ ಯಾವುದೇ ಸಾಧನಗಳು ಅಥವಾ ಸಂಪನ್ಮೂಲಗಳ ಮೂಲಕ ಸಾಕಷ್ಟು ವ್ಯವಸ್ಥೆ ಮಾಡುವುದು ಕರ್ತವ್ಯವಾಗಿರತಕ್ಕದ್ದು,-

1. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಎ) ಸಾರ್ವಜನಿಕ ಬೀದಿಗಳು, ಸ್ಥಳಗಳು ಮತ್ತು ಕಟ್ಟಡಗಳಿಗೆ ದೀಪದ ವ್ಯವಸ್ಥೆ;

(ಬಿ) ಸಾರ್ವಜನಿಕ ಬೀದಿಗಳು ಮತ್ತು ಸ್ಥಳಗಳಿಗೆ ನೀರು ಹಾಕುವುದು;

(ಸಿ) ಖಾಸಗಿ ಸ್ವತ್ತಲ್ಲದ, ಸಾರ್ವಜನಿಕರ ಅನುಭೋಗಕ್ಕೆ ಮುಕ್ತವಾಗಿರುವ ಅಂಥ ಜಾಗಗಳು ಮುನ್ಸಿಪಲ್ ಕೌನ್ಸಿಲ್‌ನಲ್ಲಿ ನಿಹಿತವಾಗಿರಲಿ ಅಥವಾ ಇಲ್ಲದಿರಲಿ ಅಂಥ ಸಾರ್ವಜನಿಕ ಬೀದಿಗಳು, ಸ್ಥಳಗಳು ಮತ್ತು ಗ್ರಾಮಸಾರ ಚರಂಡಿಗಳನ್ನು ಸ್ವಚ್ಛಗೊಳಿಸುವುದು, ಹಾನಿಕಾರಕ ಸಸ್ಯಗಳನ್ನು ತೆಗೆದುಹಾಕುವುದು ಮತ್ತು ಎಲ್ಲಾ ಸಾರ್ವಜನಿಕ ಉಪದ್ರವಗಳನ್ನು ಉಪಶಮನಗೊಳಿಸುವುದು;

(ಡಿ) ಬೆಂಕಿ ಸಂಭವಿಸಿದಾಗ ಬೆಂಕಿಯನ್ನು ಆರಿಸುವುದು ಮತ್ತು ಪ್ರಾಣ ಮತ್ತು ಸ್ವತ್ತನ್ನು ಸಂರಕ್ಷಿಸುವುದು;

(ಇ) ಅಸಹ್ಯಕರ ಅಥವಾ ಅಪಾಯಕಾರಿ ವೃತ್ತಿಗಳು ಮತ್ತು ಆಚರಣೆಗಳನ್ನು ನಿಯಂತ್ರಿಸುವುದು ಅಥವಾ ಉಪಶಮನಗೊಳಿಸುವುದು;

(ಎಫ್) ಸಾರ್ವಜನಿಕ ಬೀದಿಗಳು, ಸೇತುವೆಗಳು ಮತ್ತು ಇತರ ಸಾರ್ವಜನಿಕ ಸ್ಥಳಗಳು ಮತ್ತು ಖಾಸಗಿ ಸ್ವತ್ತಲ್ಲದ ಸಾರ್ವಜನಿಕರ ಅನುಭೋಗಕ್ಕೆ ಮುಕ್ತವಾಗಿರುವಂಥ ಜಾಗಗಳಲ್ಲಿ ಅಂಥ ಜಾಗಗಳು ಮುನ್ಸಿಪಲ್ ಕೌನ್ಸಿಲ್‌ನಲ್ಲಿ ನಿಹಿತವಾಗಿರಲಿ ಅಥವಾ ಸರ್ಕಾರಕ್ಕೆ ಸೇರಿರಲಿ ಅವುಗಳಲ್ಲಿಯ ಅಡಚಣೆಗಳನ್ನು ಮತ್ತು ಮುಂಚಾಚುಗಳನ್ನು ತೆಗೆದುಹಾಕುವುದು;

(ಜಿ) ಅಪಾಯಕಾರಿ ಕಟ್ಟಡಗಳು ಅಥವಾ ಸ್ಥಳಗಳನ್ನು ಭದ್ರಪಡಿಸುವುದು ಅಥವಾ ತೆಗೆದುಹಾಕುವುದು ಮತ್ತು ಅನಾರೋಗ್ಯಕರ ಸ್ಥಳಗಳನ್ನು ಹಸನುಗೊಳಿಸುವುದು;

(ಹೆಚ್) ಮೃತರ ವಿಲೆಗಾಗಿ ಸ್ಥಳಗಳನ್ನು ಆರ್ಜಿಸುವುದು ಮತ್ತು ನಿರ್ವಹಿಸುವುದು, ಬದಲಾಯಿಸುವುದು ಮತ್ತು ನಿಯಂತ್ರಿಸುವುದು;

(ಐ) ಸಾರ್ವಜನಿಕ ಬೀದಿಗಳು, ಅಡಿಗಾಲುವೆ, ಮುನ್ಸಿಪಾಲಿಟಿ ಸರಹದ್ದು ಗುರುತುಗಳು, ಮಾರುಕಟ್ಟೆಗಳು, [1][(ತರಕಾರಿಗಳ ಮಾರಾಟಕ್ಕಾಗಿನ ಪ್ರತ್ಯೇಕ ಮತ್ತು ಸೂಕ್ತ ಸ್ಥಳವನ್ನು ಒಳಗೊಂಡು)][1] ಕಸಾಯಿಖಾನೆಗಳು, ಶೌಚಾಲಯಗಳು, ಕಕ್ಕಸ್ಸುಗಳು, ಮೂತ್ರಗಳು, ಚರಂಡಿಗಳು, ಗ್ರಾಮಸಾರ ಚರಂಡಿಗಳು, ಚರಂಡಿ ವ್ಯವಸ್ಥೆ ಕಾಮಗಾರಿಗಳು, ಗ್ರಾಮಸಾರ ಕಾಮಗಾರಿಗಳು, ಸ್ನಾನಗೃಹಗಳು, ತೊಳೆಯುವ ಸ್ಥಳಗಳು, ಕುಡಿಯುವ ನೀರಿನ ಕಾರಂಜಿಗಳು, ಕೆರೆಗಳು, ಬಾವಿಗಳು, ಅಣೆಕಟ್ಟುಗಳು ಮತ್ತು ಅಂಥವುಗಳನ್ನು ನಿರ್ಮಿಸುವುದು, ಬದಲಾಯಿಸುವುದು ಮತ್ತು ನಿರ್ವಹಿಸುವುದು.

1.1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಜೆ) ಈಗಿರುವ ಸರಬರಾಜು ಸಾಕಷ್ಟಿಲ್ಲದಿರುವುದು ಅಥವಾ ಅನಾರೋಗ್ಯಕರ-ವಾಗಿರುವುದರಿಂದಾಗಿ ನಿವಾಸಿಗಳ ಆರೋಗ್ಯಕ್ಕೆ ಅಪಾಯವನ್ನು ತಡೆಗಟ್ಟುವುದಕ್ಕಾಗಿ ಅಂಥ ಸರಬರಾಜು ಅಥವಾ ಹೆಚ್ಚಿನ ಸರಬರಾಜನ್ನು ಯುಕ್ತ ಖರ್ಚಿನಲ್ಲಿ ಪಡೆದುಕೊಳ್ಳಬಹುದಾಗಿರುವಾಗ, ಅಥವಾ ಸರಿಯಾದ ಮತ್ತು ಸಾಕಷ್ಟಾದ ನೀರಿನ ಸರಬರಾಜು ಅಥವಾ ಹೆಚ್ಚಿನ ಸರಬರಾಜನ್ನು ಪಡೆಯುವುದು;

(ಕೆ) ಬೀದಿಗಳಿಗೆ ಹೆಸರಿಡುವುದು ಮತ್ತು ಮನೆಗಳಿಗೆ ಸಂಖ್ಯೆಯನ್ನು ಕೊಡುವುದು;

(ಎಲ್) ಜನನಗಳು ಮತ್ತು ಮರಣಗಳನ್ನು ನೋಂದಾಯಿಸುವುದು;

(ಎಂ) ಸಾರ್ವಜನಿಕ ದೇವಿ ಹಾಕುವುದು;

(ಎನ್) ಪ್ರಾಣಿಗಳ ಲಸಿಕೆಯ ಸರಬರಾಜಿಗಾಗಿ [1][ಮುನ್ಸಿಪಲ್ ಏರಿಯಾ][1]ಗಳಿಗೆ ಅಗತ್ಯವಾದ ಕರುಗಳು, ಹಸುಗಳು ಅಥವಾ ಎಮ್ಮೆಗಳಿಗೆ ಸೂಕ್ತ ಸ್ಥಳಾವಕಾಶವನ್ನು ಒದಗಿಸುವುದು;

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(ಓ) ಪ್ರಾಥಮಿಕ ಪೂರ್ವ ಶಿಕ್ಷಣಕ್ಕಾಗಿ ಶಾಲೆಗಳನ್ನು ಇಟ್ಟುಕೊಂಡು ಬರುವುದು;][1]

1.1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಪಿ) [1][ಮುನ್ಸಿಪಲ್ ಏರಿಯಾ][1]ದೊಳಗಿನ ಪೊಲೀಸರಿಗೆ ಸಂಬಂಧಪಟ್ಟಂತೆ ಈ ಅಧಿನಿಯಮದ 222ನೇ ಪ್ರಕರಣದ ಮೇರೆಗೆ ಜಾರಿಯಲ್ಲಿರುವ ಕಾನೂನಿನ ಮೇರೆಗೆ, ವ್ಯವಹರಿಸಬಹುದಾದಂಥ ನಾಯಿಗಳ ನಾಶ ಅಥವಾ ತಡೆಹಿಡಿದಿರಿಸುವಿಕೆ ಮತ್ತು ಪರಿರಕ್ಷಣೆಗಾಗಿ ಏರ್ಪಾಟು ಮಾಡುವುದು;

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಕ್ಯೂ) ಹುಚ್ಚು ನಾಯಿ ವಿಷ ನಿವಾರಣಾ ಮತ್ತು ಕುಷ್ಟ ರೋಗಿಗಳು ಮತ್ತು ಮಾನಸಿಕ ರೋಗಿಗಳ ಚಿಕಿತ್ಸೆಗಾಗಿ ಸೌಲಭ್ಯಗಳನ್ನು ಒದಗಿಸುವುದು ಮತ್ತು ಮುನ್ಸಿಪಾಲಿಟಿ ಪರಿಮಿತಿಗಳೊಳಗೆ ಅಥವಾ ಹೊರಗೆ ಹುಚ್ಚು ನಾಯಿ ವಿಷ ನಿವಾರಣಾ ಚಿಕಿತ್ಸೆ ಪಡೆಯುತ್ತಿರುವ ಬಡ ವ್ಯಕ್ತಿಗಳ ವೆಚ್ಚಗಳನ್ನು ಭರಿಸುವುದು;

(ಆರ್) ಮಲ ಮತ್ತು ಕಸವನ್ನು ತೆಗೆಯುವುದಕ್ಕಾಗಿ ಮತ್ತು ಮಲ ಮತ್ತು ಕಸವನ್ನು ವಿಲೆ ಮಾಡುವುದಕ್ಕಾಗಿ ಮುನ್ಸಿಪಲ್ ಕೌನ್ಸಿಲ್ ನಿಯೋಜಿಸಿದ ನೌಕರರ ಉಪಯೋಗಕ್ಕಾಗಿ ಮುಚ್ಚಿದ ಲೋಹದ ಸಂಪುಟಗಳನ್ನು ಚಕ್ರಗಳ ಮೇಲೆ ಕ್ರೂಡೀಕರಿಸಿರುವ ಮುಚ್ಚಿದ ಲೋಹದ ಸಂಪುಟಗಳನ್ನು ಒದಗಿಸುವುದು ಮತ್ತು ಸರ್ಕಾರವು ಹಾಗೆ ಅಗತ್ಯಪಡಿಸಿದರೆ, ಅಂಥ ಮಲ ಮತ್ತು ಕಸದಿಂದ ಕಂಪೋಸ್ಟ್ ಗೊಬ್ಬರವನ್ನು ತಯಾರಿಸುವುದು;

ವಿವರಣೆ:- ಈ ಖಂಡದಲ್ಲಿ ``ಕಸ'' ಎಂಬುದರಲ್ಲಿ ಧೂಳು, ಬೂದಿ, ಒಡೆದ ಇಟ್ಟಿಗೆಗಳು, ಗಾರೆ, ಗ್ರಾಮಸಾರ, ಸಗಣಿ, ಕೊಳೆ ಯಾವುದೇ ಬಗೆಯ [1][ಕೊಳೆತ][1] ವಸ್ತುಗಳು ಮತ್ತು ಹೊಲಸು ಒಳಗೊಳ್ಳುತ್ತದೆ.

1.1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಎಸ್) ಮುನ್ಸಿಪಾಲಿಟಿ ಕಸಗುಡಿಸುವವರು ಮತ್ತು ಜಾಡಮಾಲಿಗಳಿಗೆ ಸ್ಥಳಾವಕಾಶವನ್ನು ಒದಗಿಸುವುದು ಮತ್ತು ಈ ಬಗ್ಗೆ ನಿಯಮಿಸಿದ ನಿಯಮಗಳಿಗೊಳಪಟ್ಟು ಅಂಥ ಕಸಗುಡಿಸುವವರು ಮತ್ತು ಜಾಡಮಾಲಿಗಳಿಗೆ ಮನೆಗಳ ನಿರ್ಮಾಣಕ್ಕಾಗಿ ಸಾಲಗಳನ್ನು ಕೊಡುವುದು;

(ಟಿ) ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶಗಳ ಮೂಲಕ ಮುನ್ಸಿಪಲ್ ಕೌನ್ಸಿಲ್ ಒಪ್ಪಿಸಬೇಕೆಂದು ಅಗತ್ಯಪಡಿಸುವಂಥ [1][ಮುನ್ಸಿಪಲ್ ಏರಿಯಾ][1] ದ ಪೌರಾಡಳಿತದ ಮೇಲೆ ವಾರ್ಷಿಕ ವರದಿಗಳನ್ನು ಮುದ್ರಿಸುವುದು; [2][xxx][2]

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2.1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(ಯು) ಈ ಅಧಿನಿಯಮದ ಉದ್ದೇಶಕ್ಕಾಗಿ ಅಥವಾ ಯಾವುದೇ ಮುನ್ಸಿಪಾಲಿಟಿ ಸ್ವತ್ತಿನ ಸಂರಕ್ಷಣೆಗಾಗಿ ಮುನ್ಸಿಪಲ್ ಕೌನ್ಸಿಲ್‌ಗೆ ಬೇಕಾಗಬಹುದಾದಂಥ ಪೊಲೀಸ್ ಅಥವಾ ರಕ್ಷಕರುಗಳಿಗಾಗಿ ವೇತನ ಮತ್ತು ಸಾದಿಲ್ವಾರು ವೆಚ್ಚವನ್ನು ಸಂದಾಯ ಮಾಡುವುದು ಮತ್ತು ಪೊಲೀಸರಿಗೆ ಸಂಬಂಧಪಟ್ಟಂತೆ ಜಾರಿಯಲ್ಲಿರುವ ಕಾನೂನಿನ ಮೇರೆಗೆ ಸರ್ಕಾರವು ಅಗತ್ಯಪಡಿಸಬಹುದಾದಂಥ ಸ್ಥಳಾವಕಾಶವನ್ನು ಒದಗಿಸುವುದು;

[1][(ಯು1) ಜನನ ಮತ್ತು ಮರಣಗಳ ನೋಂದಣಿಯನ್ನು ಒಳಗೊಂಡ ಪ್ರಮುಖ ಅಂಕಿಅಂಶಗಳು.

(ಯು2) ಚರ್ಮ ಶಾಲೆಗಳ ವಿನಿಯಮನ][1]

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(ವಿ) [2][ಮುನ್ಸಿಪಲ್ ಏರಿಯಾ][2] ದೊಳಗಿನ ಎಲ್ಲ ಕಟ್ಟಡಗಳು ಮತ್ತು ನಿವೇಶನಗಳ ತಹಲ್‌ವರೆಗಿನ ದಾಖಲೆಯನ್ನು ಇಡುವುದು;

(ಡಬ್ಲ್ಯು) ರಸ್ತೆ ಬದಿ ಮರಗಳನ್ನು ನೆಡುವುದು ಮತ್ತು ಕಾಪಾಡುವುದು;][1]

1.1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2.1994ರ ಅಧಿನಿಯಮ 36ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

88. ವಿಶೇಷ ಪ್ರಕಾರ್ಯಗಳು.- 87ನೇ ಪ್ರಕರಣದಲ್ಲಿ ನಮೂದಿಸಲಾದಂಥ ಯುಕ್ತ ಮತ್ತು ಸಾಕಷ್ಟು ಉಪಬಂಧ ಮಾಡುವುದಕ್ಕೊಳಪಟ್ಟು, ಪ್ರತಿಯೊಂದು ಮುನ್ಸಿಪಲ್ ಕೌನ್ಸಿಲ್ ಈ ಕೆಳಕಂಡ ವಿಶೇಷ ವಿಷಯಗಳಿಗಾಗಿ ಯುಕ್ತ ಏರ್ಪಾಡನ್ನು ಮಾಡತಕ್ಕದ್ದು, ಎಂದರೆ:-

(ಎ) ಅಪಾಯಕಾರಿ ರೋಗದ ಕಾಲದಲ್ಲಿ ರೋಗಿಗಳಿಗಾಗಿ ವಿಶೇಷ ವೈದ್ಯಕೀಯ ನೆರವು ಮತ್ತು ಸ್ಥಳಾವಕಾಶವನ್ನು ಒದಗಿಸುವುದು; ಮತ್ತು ರೋಗ ಹರಡುವುದನ್ನು ತಡೆಗಟ್ಟಲು ಮತ್ತು ರೋಗ ಮರುಕಳಿಸುವುದನ್ನು ದಮನಗೊಳಿಸಲು ಮತ್ತು ತಡೆಗಟ್ಟಲು ಅಗತ್ಯವಾಗಬಹುದಾಂಥ ಕ್ರಮಗಳನ್ನು ತೆಗೆದುಕೊಳ್ಳುವುದು;

(ಬಿ) [1][ಮುನ್ಸಿಪಲ್ ಏರಿಯಾ][1]ದ ಪರಿಮಿತಿಯೊಳಗೆ ನಿರ್ಗತಿಕ ವ್ಯಕ್ತಿಗಳಿಗಾಗಿ ಕ್ಷಾಮ ಅಥವಾ ಅಭಾವದ ಕಾಲಗಳಲ್ಲಿ ಪರಿಹಾರ ಕೊಡುವುದು ಮತ್ತು ಪರಿಹಾರ ಕಾಮಗಾರಿಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

89. ಯಾವುದೇ ಪ್ರಕಾರ್ಯದಿಂದ ಮುನ್ಸಿಪಲ್ ಕೌನ್ಸಿಲ್‌ನ್ನು ವಿನಾಯಿತಿಗೊಳಿಸಲು ಸರ್ಕಾರದ ಅಧಿಕಾರ.- 87 ಮತ್ತು 88ನೇ ಪ್ರಕರಣಗಳಲ್ಲಿ ಏನೇ ಅಡಕವಾಗಿದ್ದಾಗ್ಯೂ ಸರ್ಕಾರವು, ಯಾವುದೇ ಮುನ್ಸಿಪಲ್ ಕೌನ್ಸಿಲ್ ಗೆ ಆ ಪ್ರಕರಣಗಳ ಯಾವುದೇ ಉಪಬಂಧದಿಂದ ವಿನಾಯಿತಿ ಕೊಡಬಹುದು ಅಥವಾ ಯಾವುದೇ ಮುನ್ಸಿಪಲ್ ಕೌನ್ಸಿಲ್‌ಗೆ ಸಂಬಂಧಿಸಿದಂತೆ ಹಿಂದೆ ಹೇಳಿದ

ಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಪ್ರಕಾರ್ಯವು, 91ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ವಿವೇಚನಾತ್ಮಕ ಕರ್ತವ್ಯವಾಗಿರತಕ್ಕದ್ದೆಂದು ಭಾವಿಸತಕ್ಕದ್ದೆಂದು ಘೋಷಿಸಬಹುದು.

90. ಕೊಳವೆಗಳ ಮೂಲಕ ಸರಬರಾಜು ಮಾಡಿದ ನೀರಿನ ವಿಶ್ಲೇಷಣೆ ಮತ್ತು ಪರಿಶೀಲನೆ.- (1) ಯಾವುದೇ ಮುನ್ಸಿಪಲ್ ಕೌನ್ಸಿಲ್ ನೀರನ್ನು ಕೊಳವೆ ಮೂಲಕ ಸರಬರಾಜು ಮಾಡಿದರೆ, ಈ ಬಗ್ಗೆ ಸರ್ಕಾರವು ಅನುಮೋದಿಸಿದ ಪ್ರಯೋಗಾಲಯದಲ್ಲಿ ಪರಿಶೀಲನೆ ಮತ್ತು ವಿಶ್ಲೇಷಣೆಯ ಮೂಲಕ, ಹಾಗೆ ಸರಬರಾಜು ಮಾಡಿದ ನೀರಿನ ಸ್ಥಿತಿಯನ್ನು ಖಚಿತಪಡಿಸಿಕೊಳ್ಳಲು ಸರ್ಕಾರವು ಮಾಡಿದ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ಧರಿಸಬಹುದಾದಂಥ ಫೀಜುಗಳನ್ನು ಸಂದಾಯ ಮಾಡಿದ ಮೇಲೆ ಅಂಥ ಅಂತರಗಳಲ್ಲಿ ಅಂಥ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು:

ಪರಂತು, ಸರ್ಕಾರವು ಅಧಿಸೂಚನೆಯ ಮೂಲಕ ಯಾವುದೇ ಮುನ್ಸಿಪಲ್ ಕೌನ್ಸಿಲ್‌ನ್ನು ಈ ಪ್ರಕರಣದ ಉಪಬಂಧಗಳಿಂದ ವಿನಾಯಿತಿಗೊಳಿಸಬಹುದು.

91. ಮುನ್ಸಿಪಲ್ ಕೌನ್ಸಿಲ್‌ಗಳ ವಿವೇಚನಾತ್ಮಕ ಪ್ರಕಾರ್ಯಗಳು.- ಪ್ರತಿಯೊಂದು ಮುನ್ಸಿಪಲ್ ಕೌನ್ಸಿಲ್ ತನ್ನ ವಿವೇಚನಾನುಸಾರ ಈ ಕೆಳಕಂಡ ಎಲ್ಲ ಅಥವಾ ಯಾವುವೇ ವಿಷಯಗಳ ಬಗ್ಗೆ ಸಂಪೂರ್ಣವಾಗಿಯೇ ಆಗಲಿ ಅಥವಾ ಭಾಗಶಃವಾಗಿಯಾಗಲಿ ಉಪಬಂಧಿಸಬಹುದು, ಎಂದರೆ,-

(ಎ) ಈ ಹಿಂದೆ ಕಟ್ಟಿದ್ದ ಅಥವಾ ಕಟ್ಟಿಲ್ಲದ ಪ್ರದೇಶಗಳಲ್ಲಿ ಹೊಸ ಸಾರ್ವಜನಿಕ ಬೀದಿಗಳನ್ನು ರಚಿಸುವುದು ಮತ್ತು ಅದೇ ಉದ್ದೇಶಕ್ಕಾಗಿ ಭೂಮಿಯನ್ನು, ಅಂಥ ಬೀದಿಗೆ ಹೊಂದಿಕೊಂಡು ಕಟ್ಟಡಗಳ ಅಥವಾ ಅದರ ಅಂಗಳಗಳ ನಿರ್ಮಾಣಕ್ಕಾಗಿ ಅಗತ್ಯವಿರುವ ಭೂಮಿಯನ್ನು ಒಳಗೊಂಡು ಆರ್ಜಿಸುವುದು;

(ಬಿ) ಸಾರ್ವಜನಿಕ ಉದ್ಯಾನಗಳು, ತೋಟಗಳು, ಗ್ರಂಥಾಲಯಗಳು, ವಸ್ತು ಸಂಗ್ರಹಾಲಯಗಳು, ಮಾನಸಿಕ ಆಸ್ಪತ್ರೆಗಳು, ಸಭಾಂಗಣಗಳು, ಕಚೇರಿಗಳು, ಧರ್ಮಶಾಲೆಗಳು, ಛತ್ರಗಳು, ಮುಸಾಫಿರ್ ಖಾನೆಗಳು, ವಿಶ್ರಾಂತಿ ಗೃಹಗಳು, ಅಸಮರ್ಥ ಅಥವಾ ನಿರ್ಗತಿಕ ವ್ಯಕ್ತಿಗಳಿಗಾಗಿ ಗೃಹಗಳು ಮತ್ತು ಇತರ ಸಾರ್ವಜನಿಕ ಕಟ್ಟಡಗಳನ್ನು ನಿರ್ಮಿಸುವುದು, ಸ್ಥಾಪಿಸುವುದು ಅಥವಾ ನಿರ್ವಹಿಸುವುದು;

[1][(ಸಿ) ನಿರ್ಗತಿಕ ಮಹಿಳೆಯರಿಗೆ ಆಶ್ರಯ ಒದಗಿಸುವುದು;]1

1.1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಡಿ) ಬಡವರ ವಾಸಕ್ಕಾಗಿ ಸೂಕ್ತ ನೈರ್ಮಲ್ಯ ಗೃಹಗಳನ್ನು ಅವಶ್ಯವಿರುವಲ್ಲಿ ನಿರ್ಮಿಸುವುದು ಮತ್ತು ನಿರ್ವಹಿಸುವುದು ಮತ್ತು ಅಂಥ ಗೃಹಗಳ ನಿರ್ಮಾಣಕ್ಕಾಗಿ ಅಥವಾ ಅದಕ್ಕೆ ಸಂಬಂಧಿಸಿದಂತೆ ಅವಶ್ಯ ಮೇಲ್ಪಾಟುಗಳನ್ನು ಮಾಡುವುದಕ್ಕಾಗಿ ಸಾಲಗಳನ್ನು ಮಂಜೂರು ಮಾಡುವುದು;

(ಇ) ಮುನ್ಸಿಪಲ್ ಕೌನ್ಸಿಲ್ ನಿಯೋಜಿಸಿರುವ ಕಸಗುಡಿಸುವವರು ಮತ್ತು ಜಾಡಮಾಲಿಗಳನ್ನು ಹೊರತುಪಡಿಸಿ, ಯಾವುದೇ ವರ್ಗದ ನೌಕರರಿಗೆ ಸ್ಥಳಾವಕಾಶವನ್ನು ಒದಗಿಸುವುದು ಅಥವಾ ಈ ಬಗ್ಗೆ ನಿಯಮಿಸಲಾದ ನಿಯಮಗಳಿಗೊಳಪಟ್ಟು ಗೃಹಗಳ ನಿರ್ಮಾಣಕ್ಕಾಗಿ ಸಾಲಗಳನ್ನು ಮಂಜೂರು ಮಾಡುವುದು;

[1][(ಎಫ್)xxx]1

1.1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(ಜಿ) ರಸ್ತೆ ಬದಿಯ ಮತ್ತು ಇತರ ಮರಗಳನ್ನು ನೆಡುವುದು ಮತ್ತು ಕಾಪಾಡುವುದು;

(ಹೆಚ್) ಅಂಕಿ ಅಂಶಗಳನ್ನು ತೆಗೆದುಕೊಳ್ಳುವುದು ಮತ್ತು ಜನನ-ಮರಣ ಅಂಕಿ ಅಂಶಗಳ ಸರಿಯಾದ ನೋಂದಣಿಯನ್ನು ಪಡೆದುಕೊಳ್ಳಲು ನೆರವಾಗುವ ಮಾಹಿತಿಗಾಗಿ ಪಾರಿತೋಷಕಗಳನ್ನು ಕೊಡುವುದು;

(ಐ) ಮೋಜಣಿ ಮಾಡುವುದು;

(ಜೆ) 256ನೇ ಪ್ರಕರಣದಲ್ಲಿ ನಮೂದಿಸಿದ ಅಸಹ್ಯಕರ ವೃತ್ತಿಗಳನ್ನು ನಡೆಸಲು ಸೂಕ್ತ ಸ್ಥಳಗಳನ್ನು ಪಡೆದುಕೊಳ್ಳುವುದು ಅಥವಾ ಪಡೆದುಕೊಳ್ಳಲು ಸಹಾಯ ಮಾಡುವುದು;

(ಕೆ) ಮುನ್ಸಿಪಲ್ ಕೌನ್ಸಿಲ್‌ನ ನಿಯಂತ್ರಣದಲ್ಲಿರುವ ಗ್ರಾಮಸಾರ ಚರಂಡಿಯೊಳಕ್ಕೆ ಅದರ ಗ್ರಾಮಸಾರವನ್ನು ಸ್ವೀಕರಿಸಲು ಮತ್ತು ಹಾಯಿಸುವುದಕ್ಕಾಗಿ, ಖಾಸಗಿ ಆವರಣಗಳ ಮೇಲೆ ಅಥವಾ ಅವುಗಳ ಉಪಯೋಗಕ್ಕಾಗಿ ಸಂಪುಟಗಳು, ಜೋಡಣೆಗಳು, ಕೊಳವೆಗಳು ಮತ್ತು ಯಾವುದೇ ಬಗೆಯ ಉಪಕರಣಗಳನ್ನು ಸರಬರಾಜು ಮಾಡುವುದು, ನಿರ್ಮಿಸುವುದು ಮತ್ತು ನಿರ್ವಹಿಸುವುದು;

(ಎಲ್) ಸಾರ್ವಜನಿಕ ಸ್ಥಳಗಳಲ್ಲಿ ಅಥವಾ ಸಾರ್ವಜನಿಕರು ಸೇರುವ ಸ್ಥಳಗಳಲ್ಲಿ ಸಂಗೀತ ಅಥವಾ ಇತರ ಮನರಂಜನೆಗಳನ್ನು ಒದಗಿಸುವುದು;

(ಎಮ್) ಸಾರ್ವಜನಿಕ ಆರೋಗ್ಯ ಅಥವಾ ಶಿಶು ಕಲ್ಯಾಣದ ಸಂವರ್ಧನೆ;

(ಎನ್) [1][ಮುನ್ಸಿಪಲ್ ಏರಿಯಾ][1]ದೊಳಗೆ ಅಥವಾ ಹೊರಗೆ ಮಾನವಯಾತನೆಯ ಪರಿಹಾರಕ್ಕಾಗಿ ಯಾವುದೇ ಸಾರ್ವಜನಿಕ ನಿಧಿಗಳಿಗೆ ವಂತಿಗೆ ಕೊಡುವುದು;

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಒ) ಸಾರ್ವಜನಿಕ ಸಭೆಯಲ್ಲಿ ಅಂಗೀಕರಿಸಿದ ನಿರ್ಣಯದ ಮೂಲಕ ಮತ್ತು ಕೌನ್ಸಿಲರ್ ಗಳ ಒಟ್ಟು ಸಂಖ್ಯೆಯ ಅರ್ಧದಷ್ಟುರವರಿಂದ ಬೆಂಬಲಿಸಿದ ಮತ್ತು ಟೌನ್ ಮುನ್ಸಿಪಲ್ ಕೌನ್ಸಿಲ್‌ನ ಸಂದರ್ಭದಲ್ಲಿ ಡೆಪ್ಯುಟಿ ಕಮಿಷನರ್ ಮತ್ತು ಸಿಟಿ ಮುನ್ಸಿಪಲ್ ಕೌನ್ಸಿಲ್‌ನ ಸಂದರ್ಭದಲ್ಲಿ [2][ಪೌರಾಡಳಿತ ನಿರ್ದೇಶಕನ][2] ಪೂರ್ವ ಮಂಜೂರಾತಿಯೊಂದಿಗೆ [1][ಮುನ್ಸಿಪಲ್ ಏರಿಯಾ][1]ದೊಳಗೆ ಯಾವುದೇ ಸಾರ್ವಜನಿಕ ಸತ್ಕಾರ, ಸಾರ್ವಜನಿಕ ಸಮಾರಂಭ, ಸಾರ್ವಜನಿಕ ಉತ್ಸವ, ಸಾರ್ವಜನಿಕ ಮನರಂಜನೆ, ಅಥವಾ ಸಾರ್ವಜನಿಕ ವಸ್ತು ಪ್ರದರ್ಶನವನ್ನು ಏರ್ಪಾಡು ಮಾಡುವುದು:

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2.2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಪರಂತು, ಅಂಥ ಸತ್ಕಾರ, ಉತ್ಸವ, ಮನೋರಂಜನೆ ಅಥವಾ ವಸ್ತು ಪ್ರದರ್ಶನದ ಮೇಲಿನ ವೆಚ್ಚವು ಸಾಮಾನ್ಯವಾಗಿ ಅಥವಾ ವಿಶೇಷವಾಗಿ ನಿಯಮಿಸಬಹುದಾದಂಥ ಪರಿಮಿತಿಗಳನ್ನು ಮೀರತಕ್ಕದ್ದಲ್ಲ;

(ಪಿ) ಅಭಾವ ಕಾಲದಲ್ಲಿ ಜೀವನಾವಶ್ಯಕಗಳ ಮಾರಾಟಕ್ಕಾಗಿ ಅಂಗಡಿಗಳು ಅಥವಾ ಮಳಿಗೆಗಳನ್ನು ಏರ್ಪಾಡು ಮಾಡುವುದು ಅಥವಾ ನಿರ್ವಹಿಸುವುದು;

(ಕ್ಯೂ) ನಿರ್ಗತಿಕ ಅನಾಥರಿಗೆ ಮತ್ತು ನಿರ್ಗತಿಕ ಕುಂಟರಿಗೆ ವಸತಿ ಒದಗಿಸುವುದು ಮತ್ತು ನಿರ್ವಹಿಸುವುದು;

(ಆರ್) ಉಗ್ರಾಣಗಳ ಸ್ಥಾಪನೆಯನ್ನು ನಿಯಂತ್ರಿಸುವ ಯಾವುದೇ ಕಾನೂನಿನ ಉಪಬಂಧಗಳಿಗೊಳಪಟ್ಟು ಉಗ್ರಾಣಗಳನ್ನು ನಿರ್ಮಿಸುವುದು, ಸ್ಥಾಪಿಸುವುದು ಮತ್ತು ನಿರ್ವಹಿಸುವುದು;

(ಎಸ್) ಡೈರಿ ಫಾರಂಗಳು ಮತ್ತು ಕುದುರೆಗಳ ತಳಿ ಸಂವರ್ಧನೆ ಕೇಂದ್ರಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು;

(ಟಿ) [1][ಮುನ್ಸಿಪಲ್ ಏರಿಯಾ][1]ದೊಳಗೆ ಸಾರಿಗೆ ಸೌಲಭ್ಯಗಳ ವ್ಯವಸ್ಥೆ;

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಯು) ಆಂಬ್ಯುಲೆನ್ಸ್ ಸೇವೆಯನ್ನು ಇಟ್ಟುಕೊಂಡು ಬರುವುದು;

(ವಿ) [1][ಮುನ್ಸಿಪಲ್ ಏರಿಯಾದ][1] ಪರಿಮಿತಿಗಳಾಚೆ ನೀರಿನ ಸರಬರಾಜು;

1. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಡಬ್ಲ್ಯೂ) ಹುಲ್ಲುಗಾವಲುಗಳ ಆರ್ಜನೆ ಮತ್ತು ನಿರ್ವಹಣೆ;

(ಎಕ್ಸ್) [1][ಮುನ್ಸಿಪಲ್ ಏರಿಯಾ][1]ಗಳ ಪರಿಮಿತಿಗಳಾಚೆ ಟೆಲಿಫೋನ್ ತಂತಿ ಮಾರ್ಗವನ್ನು ವಿಸ್ತರಿಸಿದಾಗ ಸರ್ಕಾರದ ಪೂರ್ವ ಮಂಜೂರಾತಿಗೊಳಪಟ್ಟು ಟೆಲಿಫೋನ್ ತಂತಿ ಮಾರ್ಗ ನಿರ್ಮಾಣಕ್ಕಾಗಿ ವೆಚ್ಚ ಮಾಡಿದ ಹಣದ ಮೇಲೆ ಬಡ್ಡಿ ಸಂದಾಯಕ್ಕೆ ಖಾತರಿ ಕೊಡುವುದು;

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ವೈ) ಮುನ್ಸಿಪಾಲಿಟಿ ನಿಯೋಜಿತರ ಅಥವಾ ಮುನ್ಸಿಪಾಲಿಟಿ ನಿಯೋಜಿತರ ಯಾವುದೇ ವರ್ಗ ಮತ್ತು ಅವರ ಅವಲಂಬಿತರ ಯೋಗಕ್ಷೇಮವನ್ನು ವೃದ್ಧಿಪಡಿಸುವುದು;

(ಜಡ್) ಸಾರ್ವಜನಿಕ ಸಾಗಣೆಗಾಗಿ ಯಂತ್ರದಿಂದ ಚಾಲಿತವಾದ, ಸಾರಿಗೆ ಸೌಲಭ್ಯಗಳನ್ನು ನಿರ್ಮಿಸುವುದು, ಖರೀದಿಸುವುದು, ಸಂಘಟಿಸುವುದು, ನಿರ್ವಹಿಸುವುದು, ವಿಸ್ತರಿಸುವುದು ಮತ್ತು ವ್ಯವಸ್ಥಾಪಿಸುವುದು;

(ಎಎ) ವಿದ್ಯುಚ್ಛಕ್ತಿ ಸರಬರಾಜಿಗಾಗಿ ಯಾವುದೇ ಕಾಮಗಾರಿಗಳನ್ನು ನಿರ್ಮಿಸುವುದು, ನಿರ್ವಹಿಸುವುದು, ದುರಸ್ತಿ ಮಾಡುವುದು ಮತ್ತು ಖರೀದಿಸುವುದು;

(ಬಿಬಿ) ಗ್ರಂಥಾಲಯಗಳು ಮತ್ತು ವಸ್ತು ಸಂಗ್ರಹಾಲಯ ಯಾವುದೇ ಆಸ್ಪತ್ರೆ, ಔಷಧಾಲಯ ಅಥವಾ ಸಾರ್ವಜನಿಕ ವೈದ್ಯಕೀಯ ಪರಿಹಾರವನ್ನು ಒದಗಿಸುವ ಅಂಥದೇ ಸಂಸ್ಥೆ ಅಥವಾ ಧರ್ಮಾರ್ಥ ಸ್ವರೂಪದ ಯಾವುದೇ ಇತರ ಸಂಸ್ಥೆಯೂ ಒಳಗೊಂಡಂತೆ ಶೈಕ್ಷಣಿಕ ಸಂಸ್ಥೆಗಳ ನಿರ್ಮಾಣ, ಸ್ಥಾಪನೆ ಮತ್ತು ನಿರ್ವಹಣೆಗಾಗಿ ವಂತಿಗೆಗಳನ್ನು ಕೊಡುವುದು;

(ಸಿಸಿ) ಸಾರ್ವಜನಿಕ ಸ್ನಾನಗೃಹಗಳನ್ನು ನಿರ್ಮಿಸುವುದು, ನಿರ್ವಹಿಸುವುದು ಮತ್ತು ವ್ಯವಸ್ಥೆ ಮಾಡುವುದು;

(ಡಿಡಿ) ಗೃಹಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸುವುದು ಅಥವಾ ಸಂವರ್ಧನೆಗೊಳಿಸುವುದು;

(ಇಇ) ಪಶುವೈದ್ಯ ಆಸ್ಪತ್ರೆಗಳ ನಿರ್ಮಾಣ ಮತ್ತು ನಿರ್ವಹಣೆಯೂ ಒಳಗೊಂಡಂತೆ ಜಾನುವಾರು ಮತ್ತು ಪಶುಸಂಪತ್ತನ್ನು ಮೇಲ್ಪಾಟುಗೊಳಿಸುವುದು;

(ಎಫ್‌ಎಫ್) ಪ್ರಸೂತಿ ಗೃಹಗಳು ಮತ್ತು ಶಿಶು ಕಲ್ಯಾಣ ಕೇಂದ್ರಗಳನ್ನು ನಿರ್ವಹಿಸುವುದು;

(ಜಿಜಿ) ಆರ್ಟ್ ಗ್ಯಾಲರಿಗಳನ್ನು ನಿರ್ವಹಿಸುವುದು;

[1][(ಜಿಜಿ1) ಕೊಳಚೆ ಪ್ರದೇಶಗಳನ್ನು ಸುಧಾರಿಸುವುದು ಮತ್ತು ಮೇಲ್ದರ್ಜೆಗೇರಿಸುವುದು;

(ಜಿಜಿ2) ನಗರ ಅರಣ್ಯ ವಿಜ್ಞಾನ, ಪರಿಸರ ಸಂರಕ್ಷಣೆ ಮತ್ತು ಜೀವ ಪರಿಸರದ ಲಕ್ಷಣಗಳನ್ನು ಸಂವರ್ಧಿಸುವುದು;

(ಜಿಜಿ3) ನಗರ ಬಡತನವನ್ನು ಕಡಿಮೆ ಮಾಡುವುದು;

(ಜಿಜಿ4) ಸಾಂಸ್ಕೃತಿಕ, ಶಿಕ್ಷಣ ಮತ್ತು ಸೌಂದರ್ಯ ಶಾಸ್ತ್ರದ ಅಂಶಗಳನ್ನು ಸಂವರ್ಧಿಸುವುದು;][1]

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಹೆಚ್‌ಹೆಚ್) ಸಹಕಾರ ಸಂಘಗಳನ್ನು ಸಂವರ್ಧನೆಗೊಳಿಸುವುದು, ರಚಿಸುವುದು, ವಿಸ್ತರಿಸುವುದು ಅಥವಾ ಅವುಗಳಿಗೆ ಸಹಾಯ ಮಾಡುವುದು; ಮತ್ತು

(ಐಐ) ಶಿಕ್ಷಣ, ಅಥವಾ ಸಾರ್ವಜನಿಕ ಆರೋಗ್ಯ, ಸುರಕ್ಷತೆ ಅಥವಾ ಸಾಮಾನ್ಯ ಕಲ್ಯಾಣ ಅಥವಾ ಅನುಕೂಲತೆ ಅಥವಾ ನಿವಾಸಿಗಳ ಆರ್ಥಿಕ ಪರಿಸ್ಥಿತಿಯ ಪ್ರಗತಿಯನ್ನು ವೃದ್ಧಿಗೊಳಿಸುವ ಸಂಭವವಿರುವಂಥ ಅಥವಾ ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಅವಶ್ಯವಿರುವಂಥ ಇಲ್ಲಿ ಈ ಮುಂಚೆ ನಿರ್ದಿಷ್ಟವಾಗಿ ಹೆಸರಿಸದ ಯಾವುದೇ ಇತರ ವಿಷಯ; ಈ ಬಗ್ಗೆ ವೆಚ್ಚವನ್ನು ಕೌನ್ಸಿಲರ್ ಗಳ ಒಟ್ಟು ಸಂಖ್ಯೆಯ ಮೂರರಲ್ಲಿ ಎರಡಷ್ಟಕ್ಕಿಂತ ಕಡಿಮೆಯಿಲ್ಲದ ಮತಗಳ ಮೂಲಕ ಮತ್ತು ಸರ್ಕಾರದ ಅನುಮೋದನೆಯೊಂದಿಗೆ ಮುನ್ಸಿಪಲ್ ಕೌನ್ಸಿಲ್, ಮುನ್ಸಿಪಲ್ ನಿಧಿಯ ಮೇಲಿನ ಸಮುಚಿತ ಋಣಭಾರವೆಂದು ನಿರ್ಣಯಿಸಿರಬೇಕು.

92. ಕಾಯಂ ಆಗಿ ಅಥವಾ ವರ್ಷಗಳ ಅವಧಿಗಾಗಿ ಬದ್ಧವಾಗಿರುವುದಕ್ಕಾಗಿ ತಾತ್ಪರ್ಯವಾಗುವ ವ್ಯವಸ್ಥೆಗಳು.- ಮುನ್ಸಿಪಲ್ ಕೌನ್ಸಿಲ್ ಯಾವುದೇ ಶೈಕ್ಷಣಿಕ ಅಥವಾ ಧರ್ಮಾರ್ಥ ಸಂಸ್ಥೆಗೆ ಮುನ್ಸಿಪಾಲಿಟಿ ಸ್ವತ್ತು ಅಥವಾ ನಿಧಿಯಿಂದ ವಾರ್ಷಿಕ ವಂತಿಗೆ ಮುಂದುವರಿಸಲು, ವರ್ಷಗಳ ಅವಧಿಗಾಗಿ ಅಥವಾ ಅಪರಿಮಿತ ಅವಧಿಗಾಗಿ ತನ್ನನ್ನು ಅಥವಾ ಅದರ ಉತ್ತರಾಧಿಕಾರಿಗಳನ್ನು ಬದ್ಧವಾಗಿಸಲು ತಾತ್ಪರ್ಯವಾಗುವ ಯಾವುದೇ ವ್ಯವಸ್ಥೆಯನ್ನು ಮಾಡಿಕೊಂಡಿರುವಾಗ ಅಥವಾ ಯಾವುದೇ ವಾಗ್ದಾನವನ್ನು ಮಾಡಿರುವಾಗ, ಸರ್ಕಾರದ ಮಂಜೂರಾತಿಯೊಂದಿಗೆ ಅಂಥ ವ್ಯವಸ್ಥೆ ಅಥವಾ ವಾಗ್ದಾನವನ್ನು ರದ್ದುಗೊಳಿಸುವುದು ಅಥವಾ ಅಂಥ ವಾರ್ಷಿಕ ವಂತಿಗೆಯನ್ನು ಮುಂದುವರಿಸದಿರುವುದು ಅಥವಾ ಕಡಿಮೆ ಮಾಡುವುದು ಮುನ್ಸಿಪಲ್ ಕೌನ್ಸಿಲ್‌ಗೆ ಅಥವಾ ಅದರ ಉತ್ತರಾಧಿಕಾರಿಗೆ ಕಾನೂನುಬದ್ಧವಾಗಿರತಕ್ಕದ್ದು: ಪರಂತು, ಹಾಗೆ ಮಾಡುವ ತನ್ನ ಉದ್ದೇಶದ ಕನಿಷ್ಟಪಕ್ಷ ಹನ್ನೆರಡು ತಿಂಗಳುಗಳ ನೋಟೀಸನ್ನು ಅಂಥ ಸಂಸ್ಥೆಯ ವ್ಯವಸ್ಥಾಪಕ ಅಥವಾ ವ್ಯವಸ್ಥಾಪಕರಿಗೆ ಕೊಟ್ಟಿರತಕ್ಕದ್ದು.

93. ಮುನ್ಸಿಪಲ್ ಕೌನ್ಸಿಲ್ ನಿರ್ವಹಿಸುತ್ತಿರುವ ಸಾರ್ವಜನಿಕ ಸಂಸ್ಥೆಯ ವ್ಯವಸ್ಥಾಪನೆಯು ಅದರಲ್ಲಿ ನಿಹಿತವಾಗತಕ್ಕದ್ದು.- ಮುನ್ಸಿಪಾಲಿಟಿ ಸ್ವತ್ತು ಮತ್ತು ನಿಧಿಗಳಿಂದ ಅನನ್ಯವಾಗಿ ನಿರ್ವಹಿಸಲಾಗುತ್ತಿರುವ ಪ್ರತಿಯೊಂದು ಸಾರ್ವಜನಿಕ ಸಂಸ್ಥೆಯ ವ್ಯವಸ್ಥಾಪನೆ, ನಿಯಂತ್ರಣ ಮತ್ತು ಆಡಳಿತವು ಯಾವ ಮುನ್ಸಿಪಲ್ ಕೌನ್ಸಿಲ್ ಅದನ್ನು ನಿರ್ವಹಿಸುತ್ತಿದೆಯೋ ಆ ಮುನ್ಸಿಪಲ್ ಕೌನ್ಸಿಲ್‌ನಲ್ಲಿ ನಿಹಿತವಾಗತಕ್ಕದ್ದು:

ಪರಂತು, ಸಾರ್ವಜನಿಕ ಶಿಕ್ಷಣ, ಆರೋಗ್ಯ ಮತ್ತು ನೈರ್ಮಲ್ಯಕ್ಕೆ ಸಂಬಂಧಿಸಿದಂತೆ ಮತ್ತು ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಸಾರ್ವಜನಿಕ ಆರೋಗ್ಯ ಇಲಾಖೆಯೊಂದಿಗೆ ಅದರ

ಸಂಬಂಧಗಳ ಬಗ್ಗೆ ಯಾವುದೇ ಮುನ್ಸಿಪಲ್ ಕೌನ್ಸಿಲ್‌ನ ಸ್ವತಂತ್ರ ಅಧಿಕಾರದ ವ್ಯಾಪ್ತಿಯನ್ನು ಸರ್ಕಾರವು ಕಾಲ ಕಾಲಕ್ಕೆ ನಿಯಮಿಸತಕ್ಕದ್ದು.

ಅಧ್ಯಾಯ-VI
ಮುನ್ಸಿಪಾಲಿಟಿ ತೆರಿಗೆ ನಿರ್ಧರಣೆ
ತೆರಿಗೆಗಳು ಮತ್ತು ವಿಧಿಸುವ ಪ್ರಕ್ರಿಯೆ

94. ವಿಧಿಸಬಹುದಾದ ತೆರಿಗೆಗಳು.- (1) ಮುನ್ಸಿಪಲ್ ಕೌನ್ಸಿಲ್ ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೊಳಪಟ್ಟು,-

(ಎ) [1][XXX][1]

1.2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(ಬಿ) [1][xxx][12][ಈ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಿದ][2] ದರಗಳಿಗೆ ಮೀರದಂತೆ

1.2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

2.2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಈ ಕೆಳಕಂಡ ಒಂದು ಯಾವುದೇ ಅಥವಾ ಹೆಚ್ಚು ತೆರಿಗೆಗಳನ್ನು [2][ಅಥವಾ ಶುಲ್ಕವನ್ನು][2] ವಿಧಿಸಬಹುದು:-

[1][(i) ಮುನ್ಸಿಪಲ್ ಏರಿಯಾದೊಳಗೆ ಇರುವ ಕಟ್ಟಡಗಳು ಅಥವಾ ಭೂಮಿಗಳು ಅಥವಾ ಎರಡರ ಮೇಲಿನ ತೆರಿಗೆ; (ಇಲ್ಲಿ ಇನ್ನು ಮುಂದೆ ಸ್ವತ್ತು ತೆರಿಗೆ ಎಂದು ಉಲ್ಲೇಖಿಸಲಾಗಿದೆ)][1]

1.2003ರ ಅಧಿನಿಯಮ 31ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2.2021ರ ಅಧಿನಿಯಮ 30ರ ಮೂಲಕ 07.10.2021ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(ii) xxx][1]

1.1979ರ ಅಧಿನಿಯಮ 21ರ ಮೂಲಕ 31.3.1979 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(iii) [1][XXX][1]

(iv) [1][xxx][1]

1.2003ರ ಅಧಿನಿಯಮ 31ರ ಮೂಲಕ 16.6.2003 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][(v) ರಿಂದ (vii)ರವರೆಗೆ xxx][1]

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][(viii) ಮತ್ತು (ix)][1]

1.2003ರ ಅಧಿನಿಯಮ 31ರ ಮೂಲಕ 16.6.2003 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][(x) xxx][1]

1.1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][(xi) xxx][1]

1.1982ರ ಅಧಿನಿಯಮ 26ರ ಮೂಲಕ 27.7.1982 ರಿಂದ ಜಾರಿಗೆ ಬರುವಂತೆ (xi)ನೇ ಖಂಡ ಮತ್ತು ಪರಂತುಕವನ್ನು ಬಿಟ್ಟುಬಿಡಲಾಗಿದೆ.

(xii) ಹೆಚ್ಚಿನ ಸ್ಟಾಂಪ್ ಸುಂಕದ ಸ್ವರೂಪದಲ್ಲಿ ಸ್ಥಿರ ಸ್ವತ್ತಿನ ವರ್ಗಾವಣೆ ಮೇಲಿನ ಸುಂಕ;

(xiii) ಯಾವುದೇ ಭೂಮಿ, ಕಟ್ಟಡ, ಗೋಡೆ, ಪ್ರಕಟಣ ಪಟ, ಚೌಕಟ್ಟು, ಕಂಬ ಅಥವಾ ರಚನೆಯ ಮೇಲೆ ಅಥವಾ ಮೇಲ್ಭಾಗದಲ್ಲಿ ಅಥವಾ ಯಾವುದೇ ವಾಹನದ ಮೇಲೆ ಅಥವಾ ಅದರಲ್ಲಿ ನಿಲ್ಲಿಸಿದ, ಪ್ರದರ್ಶಿಸಿದ, ಜೋಡಿಸಿದ ಅಥವಾ ಉಳಿಸಿಕೊಂಡ, ಅಥವಾ ಸಾರ್ವಜನಿಕ ಬೀದಿ ಅಥವಾ ಸಾರ್ವಜನಿಕ ಸ್ಥಳದಿಂದ ಯಾವುದೇ ರೀತಿಯಲ್ಲಾಗಲಿ ಸಾರ್ವಜನಿಕರ ದೃಷ್ಟಿಗೆ ಪ್ರದರ್ಶಿಸಿದ ಚಲನಚಿತ್ರ ಸಾಧನಗಳ ಮೂಲಕ ಪ್ರದರ್ಶಿಸಿದ ಯಾವುದೇ ಜಾಹೀರಾತನ್ನು ಒಳಗೊಂಡು ಜಾಹೀರಾತುಗಳ (ವರ್ತಮಾನ ಪತ್ರಿಕೆಗಳಲ್ಲಿ ಹೊರತುಪಡಿಸಿ) ಮೇಲಿನ ತೆರಿಗೆ [1][ಅಥವಾ ಶುಲ್ಕ][1];

ವಿವರಣೆ 1.- ಈ ಉಪ-ಖಂಡದಲ್ಲಿ ``ರಚನೆ'' ಎಂಬ ಪದವು, ಜಾಹೀರಾತು ಮಾಧ್ಯಮವಾಗಿ ಉಪಯೋಗಿಸಿದ ಚಕ್ರಗಳ ಮೇಲಿನ ಯಾವುದೇ ಚಲಿಸುವ ಫಲಕವನ್ನು ಒಳಗೊಳ್ಳುತ್ತದೆ;

ವಿವರಣೆ 2.- ಈ ಉಪ-ಖಂಡದ ಉದ್ದೇಶಕ್ಕಾಗಿ ``ಸಾರ್ವಜನಿಕ ಸ್ಥಳ'' ಎಂದರೆ ಯಾವುದೇ ಸಾರ್ವಜನಿಕರ ಉಪಯೋಗ ಮತ್ತು ಅನುಭೋಗಕ್ಕೆ ಮುಕ್ತವಾಗಿರುವ, ಅದನ್ನು ಸಾರ್ವಜನಿಕರು ವಾಸ್ತವವಾಗಿ ಉಪಯೋಗಿಸುತ್ತಿರಲಿ ಅಥವಾ ಅನುಭೋಗಿಸುತ್ತಿರಲಿ ಅಥವಾ ಇಲ್ಲದಿರಲಿ, ಅಂಥ ಯಾವುದೇ ಸ್ಥಳ;

ವಿವರಣೆ 3.- ಈ ಉಪಖಂಡದಲ್ಲಿ ``ಜಾಹೀರಾತು'' ಎಂಬ ಪದಕ್ಕೆ ಜಾಹೀರಾತು, ಪ್ರಕಟಣೆ ಅಥವಾ ನಿರ್ದೇಶನದ ಸ್ವರೂಪದಲ್ಲಿ ಮತ್ತು ಆ ಉದ್ದೇಶಕ್ಕಾಗಿ ಸಂಪೂರ್ಣವಾಗಿ ಅಥವಾ ಭಾಗಶಃ ಬಳಸಿದ, ದೀಪಗಳಿಂದ ಅಲಂಕರಿಸಿದ ಅಥವಾ ಅಲಂಕರಿಸಿಲ್ಲದ ಯಾವುದೇ ಪದ, ಅಕ್ಷರ, ಮಾದರಿ, ಸಂಕೇತ, ಪ್ರಕಟಣಾ ಪತ್ರ, ನೋಟೀಸು ಸಾಧನ ಅಥವಾ ಪ್ರದರ್ಶಕ ಎಂದರ್ಥ:

1. 2021ರ ಅಧಿನಿಯಮ 30ರ ಮೂಲಕ 07.10.2021ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][XXX][1]

1. 2003ರ ಅಧಿನಿಯಮ 31ರ ಮೂಲಕ 16.6.2003 ರಿಂದ ಜಾರಿಗೆ ಬರುವಂತೆ, ಪರಂತುಕಗಳನ್ನು ಹಾಗೂ (i) ಮತ್ತು (ii) ನೇ ವಿವರಣೆಗಳನ್ನು ಬಿಟ್ಟುಬಿಡಲಾಗಿದೆ.

[1][(1ಎ) ಈ ಮುಂದಿನ ಕಟ್ಟಡಗಳು ಹಾಗೂ ಖಾಲಿ ಭೂಮಿಗಳನ್ನು, ಸ್ವತ್ತು ತೆರಿಗೆಯಿಂದ ವಿನಾಯಿತಿಗೊಳಿಸತಕ್ಕದ್ದು, ಎಂದರೆ:-

(ಎ) ಸಾರ್ವಜನಿಕ ಪೂಜಾ ಸ್ಥಳವಾಗಿ ತೆಗೆದಿರಿಸಿದ ಹಾಗೂ ಹಾಗೆ ವಾಸ್ತವಿಕವಾಗಿ ಬಳಸಲಾಗುತ್ತಿರುವ ಅಥವಾ ಯಾವುದೇ ಇತರ ಉದ್ದೇಶಗಳಿಗಾಗಿ ಉಪಯೋಗಿಸಿಲ್ಲದೇ ಇರುವ ಸ್ಥಳಗಳು;

(ಬಿ) ಉಪಯೋಗಿಸಿದ್ದಕ್ಕಾಗಿ ಬಾಡಿಗೆಯನ್ನು ವಿಧಿಸದ ಛತ್ರಗಳು ಹಾಗೂ ಉಪಯೋಗಿಸಿದ್ದಕ್ಕಾಗಿ ವಿಧಿಸಲಾದ ಬಾಡಿಗೆಯನ್ನು ಧರ್ಮಾರ್ಥ ಉದ್ದೇಶಕ್ಕಾಗಿ ಮಾತ್ರ ಬಳಸುವ ಛತ್ರಗಳು;

(ಸಿ) ನಿರ್ಗತಿಕರಿಗೆ ಅಥವಾ ಪ್ರಾಣಿಗಳಿಗೆ ಆಶ್ರಯ ನೀಡುವ ಧರ್ಮಾರ್ಥ ಉದ್ದೇಶಕ್ಕಾಗಿ ಬಳಸುವ ಸ್ಥಳಗಳು ಮತ್ತು ಅನಾಥಾಶ್ರಮಗಳು, ಕಿವುಡರು ಮತ್ತು ಮೂಖರಿಗಾಗಿ ಇರುವ ನಿಲಯಗಳು ಹಾಗೂ ಶಾಲೆಗಳು, ವೃದ್ಧರು ಹಾಗೂ ನಿರ್ಗತಿಕ ಮಹಿಳೆಯರಿಗಾಗಿನ ಆಶ್ರಯ ತಾಣಗಳು ಮತ್ತು ರಾಜ್ಯ ಸರ್ಕಾರದಿಂದ ಅಂಗೀಕೃತವಾದ, ಸಂಪೂರ್ಣವಾಗಿ ಜನೋಪಕಾರಿ ಉದ್ದೇಶದಿಂದ ನಡೆಸುತ್ತಿರುವ ಸಂಸ್ಥೆಗಳು;

(ಡಿ) ವಾಸಗೃಹಗಳು ಅಥವಾ ಸಾರ್ವಜನಿಕ ಕಚೇರಿಗಳಿಗಾಗಿ ಬಳಸದ ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳು ಹಾಗೂ ಅವಶೇಷಗಳ ಅಧಿನಿಯಮ, 1961 (1962ರ ಕರ್ನಾಟಕ ಅಧಿನಿಯಮ ಸಂಖ್ಯೆ. 7) ಹಾಗೂ ಪ್ರಾಚೀನ ಸ್ಮಾರಕ ಮತ್ತು ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳ ಅಧಿನಿಯಮ, 1958 (1958ರ ಕೇಂದ್ರ ಅಧಿನಿಯಮ 24) ರ ಅಡಿಯಲ್ಲಿ ರಕ್ಷಿತವಾದಂಥ ಪ್ರಾಚೀನ ಸ್ಮಾರಕಗಳು ಅಥವಾ ಅದರ ಭಾಗಗಳು;

(ಇ) ಧರ್ಮಾರ್ಥ ಆಸ್ಪತ್ರೆಗಳು ಮತ್ತು ಔಷಧಾಲಯಗಳು, ಆದರೆ ಅವುಗಳಿಗೆ ಹೊಂದಿಕೊಂಡಿರುವ ವಾಸದ ಗೃಹಗಳನ್ನು ಒಳಗೊಳ್ಳುವುದಿಲ್ಲ;

(ಎಫ್) ರಾಜ್ಯ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದಂಥ, ರೈಲ್ವೆ ಆಡಳಿತವು ನಿರ್ವಹಿಸುತ್ತಿರುವ ಅಂಥ ಆಸ್ಪತ್ರೆಗಳು ಮತ್ತು ಔಷಧಾಲಯಗಳು; ಆದರೆ, ಅವುಗಳಿಗೆ ಹೊಂದಿಕೊಂಡಿರುವ ವಸತಿಗೃಹಗಳನ್ನು ಒಳಗೊಳ್ಳುವುದಿಲ್ಲ;

(ಜಿ) ಪುರಸಭೆಯ ಆಯುಕ್ತರು ಅಥವಾ ಮುಖ್ಯಾಧಿಕಾರಿಯು ಪ್ರಕಟಿಸಿದ ಪಟ್ಟಿಯಲ್ಲಿ ಸೇರಿಸಿರುವ ಸ್ಮಶಾನ ಮತ್ತು ದಹನಭೂಮಿ;

(ಹೆಚ್) ಉಚಿತ ಮನೋರಂಜನಾ ಉದ್ದೇಶಗಳಿಗಾಗಿ ಮೀಸಲಿಟ್ಟಿರುವ ಸರ್ಕಾರಿ ಭೂಮಿ ಮತ್ತು ಸರ್ಕಾರವು ಅಧಿಸೂಚಿಸಬಹುದಾಂಥ, ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ಯಾವುದೇ ಆದಾಯ ದೊರಕದಂಥ ಇತರ ಸರ್ಕಾರಿ ಭೂಮಿ;

(ಐ) (i) ಲಾಭಕ್ಕಾಗಿ ಸ್ಥಾಪಿಸದಿರುವ ಅಥವಾ ನಡೆಸದಿರುವ ವಿದ್ಯಾರ್ಥಿನಿಲಯಗಳಿಗಾಗಿ;

(ii) ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳಿಂದ ಶೈಕ್ಷಣಿಕ ಉದ್ದೇಶಗಳಿಗಾಗಿ

- ಮಾತ್ರವೇ ಬಳಸುತ್ತಿರುವ ಕಟ್ಟಡಗಳು ಮತ್ತು ಖಾಲಿಭೂಮಿಗಳು.

(ಜೆ) ಸರ್ಕಾರಿ ಉದ್ದೇಶಗಳಿಗಾಗಿ ಬಳಸುವ ಮತ್ತು ವಾಸದ ಅಥವಾ ವಾಣಿಜ್ಯ [2][ಅಥವಾ ಕೈಗಾರಿಕೆ][2] ಉದ್ದೇಶಗಳಿಗಾಗಿ ಬಳಸದ ಅಥವಾ ಬಳಸುವ ಉದ್ದೇಶವನ್ನು ಹೊಂದಿಲ್ಲದ, ಕೇಂದ್ರ ಸರ್ಕಾರಕ್ಕೆ ಅಥವಾ ಯಾವುದೇ ರಾಜ್ಯ ಸರ್ಕಾರಕ್ಕೆ ಸೇರಿದ ಕಟ್ಟಡಗಳು ಅಥವಾ ಖಾಲಿಭೂಮಿಗಳು;

(ಕೆ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಗೃಹ ಮಂಡಳಿ, ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987ರ ಅಡಿಯಲ್ಲಿ ರಚಿತವಾದ ನಗರಾಭಿವೃದ್ಧಿ ಪ್ರಾಧಿಕಾರಗಳು ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರಗಳಿಗೆ ಸೇರಿದ, ಆದರೆ ಯಾವುದೇ ಮಂಜೂರಾತಿ, ಹಂಚಿಕೆ ಅಥವಾ ಗುತ್ತಿಗೆಗೆ ಅನುಗುಣವಾಗಿ ಯಾವೊಬ್ಬ ವ್ಯಕ್ತಿಗೆ ಸ್ವಾಧೀನತೆಯನ್ನು ವಹಿಸಿಕೊಟ್ಟಿರದ ಕಟ್ಟಡಗಳು ಮತ್ತು ಖಾಲಿಭೂಮಿಗಳು;

(ಎಲ್) ರಾಜ್ಯ ಸರ್ಕಾರದ ರಾಜಸ್ವ ಲೆಕ್ಕಪತ್ರಗಳಲ್ಲಿ ಕೃಷಿಯ ಉದ್ದೇಶಕ್ಕಾಗಿ ಬಳಸಲಾಗುವ ಭೂಮಿಯೆಂದು ನೋಂದಾಯಿತವಾದ ಮತ್ತು ವಾಸ್ತವಿಕವಾಗಿ ಬೆಳೆಯನ್ನು ಬೆಳೆಯುವ ಉದ್ದೇಶಕ್ಕಾಗಿ ಬಳಸುತ್ತಿರುವ ಭೂಮಿ.

ಪರಂತು, (ಎ), (ಸಿ) ಮತ್ತು (ಇ) ಖಂಡಗಳಲ್ಲಿ ಒಳಗೊಂಡಿರುವುದಾವುದೂ, ಸದರಿ ಖಂಡಗಳಲ್ಲಿ ಉಲ್ಲೇಖಿಸಿದ ಉದ್ದೇಶಗಳಿಗಾಗಿ ಯಾವುದೇ ಕಟ್ಟಡ ಅಥವಾ ಖಾಲಿ ಭೂಮಿಯನ್ನು ಬಳಸುವ ವ್ಯಕ್ತಿ ಅಥವಾ ವ್ಯಕ್ತಿಗಳು ಬಾಡಿಗೆಯನ್ನು ಸಂದಾಯ ಮಾಡುತ್ತಿದ್ದರೆ, ಆ ಕಟ್ಟಡ ಅಥವಾ ಖಾಲಿಭೂಮಿಗೆ ಸ್ವತ್ತು ತೆರಿಗೆಯಿಂದ ವಿನಾಯಿತಿ ನೀಡುವುದಾಗಿ ಭಾವಿಸತಕ್ಕದ್ದಲ್ಲ.

ಮತ್ತೂ ಪರಂತು, (ಜೆ) ಖಂಡದ ಉದ್ದೇಶಗಳಿಗಾಗಿ, ಸರ್ಕಾರ ಅಥವಾ ಸರ್ಕಾರದಿಂದ ಕ್ರಮಬದ್ಧವಾಗಿ ಪ್ರಾಧಿಕೃತವಾದ ಯಾವೊಬ್ಬ ಅಧಿಕಾರಿಯು ಯಾವುದೇ ಕಟ್ಟಡ ಅಥವಾ ಭೂಮಿಯನ್ನು ರಾಜ್ಯ ಸರ್ಕಾರದ ಉದ್ದೇಶಗಳಿಗಾಗಿ ಬಳಸಲಾಗುತ್ತಿದೆಯೆಂದು ಮತ್ತು ವಾಸದ ಅಥವಾ ವಾಣಿಜ್ಯ [2][ಅಥವಾ ಕೈಗಾರಿಕೆ][2] ಉದ್ದೇಶಗಳಿಗಾಗಿ ಬಳಸುತ್ತಿಲ್ಲವೆಂದು ಮತ್ತು ಬಳಸುವ ಉದ್ದೇಶವನ್ನು ಹೊಂದಿಲ್ಲವೆಂದು ನೀಡಿದ ಪ್ರಮಾಣ ಪತ್ರವು ಮುನ್ಸಿಪಲ್ ಪರಿಷತ್ತನ್ನು ಬದ್ಧವಾಗಿಸತಕ್ಕದ್ದು.

(1-ಬಿ) ಯಾವ ಜಾಹೀರಾತು,-

(ಎ) ಯಾವುದೇ ಕಟ್ಟಡದಲ್ಲಿ ನಡೆಸಲಾಗುತ್ತಿರುವ ವ್ಯಾಪಾರ, ವೃತ್ತಿ ಅಥವಾ ವ್ಯವಹಾರಕ್ಕೆ ಸಂಬಂಧಪಟ್ಟಿದ್ದು, ಅದನ್ನು ಆ ಕಟ್ಟಡದ ಕಿಟಕಿಯಲ್ಲಿ ಪ್ರದರ್ಶಿಸುತ್ತಿದ್ದರೆ; ಅಥವಾ

(ಬಿ) ಅಂಥ ಜಾಹೀರಾತನ್ನು ಯಾವ ಭೂಮಿಯ ಮೇರೆಗೆ ಅಥವಾ ಕಟ್ಟಡದ ಮೇಲೆ ಪ್ರದರ್ಶಿಸಲಾಗುತ್ತಿದೆಯೋ ಆ ಭೂಮಿ ಅಥವಾ ಕಟ್ಟಡದೊಳಗೆ ನಡೆಸಲಾಗುತ್ತಿರುವ ವ್ಯಾಪಾರ, ವೃತ್ತಿ ಅಥವಾ ವ್ಯವಹಾರಕ್ಕೆ ಅಥವಾ ಅಂಥ ಭೂಮಿ ಅಥವಾ ಕಟ್ಟಡದ ಅಥವಾ ಅದರಲ್ಲಿನ ಯಾವುದೇ ಸ್ವತ್ತಿನ ಮಾರಾಟಕ್ಕೆ ಅಥವಾ ಅದನ್ನು ಬಾಡಿಗೆಗೆ ಕೊಡುವುದಕ್ಕೆ ಅಥವಾ ಅದರ ಮಾರಾಟಕ್ಕೆ ಅಥವಾ ಅದರಲ್ಲಿ ಅಥವಾ ಅದರ ಮೇಲೆ ಅಥವಾ ಅದರೊಳಗೆ ನಡೆಯಲಿರುವ ಮನೋರಂಜನೆ ಅಥವಾ ಸಭೆಗೆ ಸಂಬಂಧಪಟ್ಟಿದ್ದರೆ; ಅಥವಾ

(ಸಿ) ಆ ಜಾಹೀರಾತನ್ನು ಯಾವ ಭೂಮಿ ಮೇಲೆ ಅಥವಾ ಕಟ್ಟಡದ ಮೇಲೆ ಪ್ರದರ್ಶಿಸಲಾಗವುದೋ ಆ ಭೂಮಿಯ ಅಥವಾ ಕಟ್ಟಡದ ಹೆಸರಿಗೆ ಅಥವಾ ಅಂಥ ಭೂಮಿಯ ಅಥವಾ ಕಟ್ಟಡದ ಮಾಲೀಕ ಅಥವಾ ಅಧಿಭೋಗದಾರನ ಹೆಸರಿಗೆ ಸಂಬಂಧಿಸಿದ್ದರೆ; ಅಥವಾ

(ಡಿ) ರೈಲ್ವೆ ಆಡಳಿತದ ವ್ಯವಹಾರಕ್ಕೆ ಸಂಬಂಧಪಟ್ಟಿದ್ದರೆ ಮತ್ತು ಯಾವುದೇ ರೈಲ್ವೆ ನಿಲ್ದಾಣದೊಳಗೆ ಪ್ರದರ್ಶಿಸಿದ್ದರೆ ಅಥವಾ ರೈಲ್ವೆ ಆಡಳಿತದ ಯಾವುದೇ ಗೋಡೆ ಅಥವಾ ಇತರ ಸ್ವತ್ತಿನ ಮೇಲೆ ಪ್ರದರ್ಶಿಸಿದರೆ; ಅಥವಾ

(ಇ) ರಾಜ್ಯ ಸರ್ಕಾರದ ಯಾವುದೇ ಚಟುವಟಿಕೆಗೆ ಸಂಬಂಧಿಸಿದ್ದರೆ; ಅಥವಾ

(ಎಫ್) ಯಾವುದೇ ಸಾರ್ವಜನಿಕ ಸಭೆಗೆ ಸಂಬಂಧಿಸಿದ್ದರೆ][1]

1. 2003ರ ಅಧಿನಿಯಮ 31ರ ಮೂಲಕ 16.6.2003 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 2022ರ ಅಧಿನಿಯಮ 02ರ ಮೂಲಕ ದಿನಾಂಕ.13.01.2022ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(2) [2][(1ಎ) ಉಪ-ಪ್ರಕರಣ][2]ದ ಅಡಿಯಲ್ಲಿ ಮಂಜೂರು ಮಾಡಿದ ವಿನಾಯಿತಿಗಳು ಏನೇ ಇದ್ದರೂ, ನಾಗರಿಕ ಸೌಲಭ್ಯಗಳನ್ನು ಒದಗಿಸುವುದಕ್ಕಾಗಿ ಮತ್ತು ಸಾಮಾನ್ಯ ಅಥವಾ ವಿಶೇಷ ಸೇವೆಗಳನ್ನು ಸಲ್ಲಿಸಿದ್ದಕ್ಕಾಗಿ ಸೇವಾ ಶುಲ್ಕಗಳನ್ನು ನಿಯಮಿಸಬಹುದಾಂಥ ದರಗಳಲ್ಲಿ ಸಂಗ್ರಹಿಸುವುದಕ್ಕೆ ಮುನಿಸಿಪಲ್ ಕೌನ್ಸಿಲ್‌ಗೆ ಅವಕಾಶವಿರತಕ್ಕದ್ದು.][1].

1.2001ರ ಅಧಿನಿಯಮ 28ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2.2003ರ ಅಧಿನಿಯಮ 31ರ ಮೂಲಕ 16.6.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) (1)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ತೆರಿಗೆಗಳನ್ನು, ಈ ಅಧಿನಿಯಮದ ಉಪಬಂಧಗಳ ಮತ್ತು 323ನೇ ಪ್ರಕರಣದ ಮೇರೆಗೆ ಸರ್ಕಾರವು ರಚಿಸಿದ ನಿಯಮಗಳ ಅನುಸಾರವಾಗಿ ನಿರ್ಧರಿಸತಕ್ಕದ್ದು, ವಿಧಿಸತಕ್ಕದ್ದು ಮತ್ತು ಸಂಗ್ರಹಿಸತಕ್ಕದ್ದು.

[2][1][94ಎ. ಮಾಜಿ ಸೈನಿಕನ ಕಟ್ಟಡ ಮತ್ತು ಭೂಮಿಯ ಮೇಲಿನ ಆಸ್ತಿ ತೆರಿಗೆಯ ವಿನಾಯಿತಿ.- (1) ಈ ಅಧ್ಯಾಯದ, ಮೇಲೆ ಹೇಳಿದ ಉಪಬಂಧಗಳಲ್ಲಿ ಏನೇ ಇದ್ದರೂ, ಮುನ್ಸಿಪಲ್ ಪರಿಷತ್ತು, ನಿಯಮಿಸಬಹುದಾದ ರೀತಿಯಲ್ಲಿ, ಮಾಜಿ ಸೈನಿಕ ಅಥವಾ ಮೃತ ಮಾಜಿ ಸೈನಿಕನ ಕುಟುಂಬಕ್ಕೆ ಸೇರಿದ ಯಾವುದಾದರೂ ಒಂದು ಭೂಮಿ ಅಥವಾ ಕಟ್ಟಡದ ಮೇಲೆ ಆಸ್ತಿ ತೆರಿಗೆಯ ಶೇಕಡಾ ಐವತ್ತರಷ್ಟು ವಿನಾಯಿತಿಗೊಳಿಸಬಹುದು.

ವಿವರಣೆ.- ಈ ಪ್ರಕರಣದ ಉದ್ದೇಶಕ್ಕಾಗಿ,-

(ಎ) "ಮಾಜಿ ಸೈನಿಕ" ಎಂದರೆ, ಕೇಂದ್ರದ ಸ್ಥಾಯಿ ಸೇನೆ, ನೌಕಾಸೇನೆ ಮತ್ತು ವಾಯುಸೇನೆಯಲ್ಲಿನ ಯಾವುದೇ ಶ್ರೇಣಿಯಲ್ಲಿ ಸೇವೆ ಸಲ್ಲಿಸಿರುವ ವ್ಯಕ್ತಿ ಮತ್ತು ರಕ್ಷಣಾ ಭದ್ರತಾ ದಳಗಳು, ಸಾಮಾನ್ಯ ಮೀಸಲು ಇಂಜನಿಯರಿಂಗ್ ದಳ, ಲೋಕ ಸಹಾಯಕ ಸೇನೆ ಹಾಗೂ ಸಹಾಯಕ ಸೇನೆ ಮತ್ತು ಅರೆ ಮಿಲಿಟರಿ ಪಡೆಗಳಲ್ಲಿ ಸೇವೆ ಸಲ್ಲಿಸಿರುವ ವ್ಯಕ್ತಿಯನ್ನು ಒಳಗೊಳ್ಳುವುದಿಲ್ಲ;

(ಬಿ) "ಮೃತ ಮಾಜಿ ಸೈನಿಕನ ಕುಟುಂಬ" ಎಂದರೆ, ಮೃತ ಮಾಜಿ ಸೈನಿಕನ ತಂದೆ, ತಾಯಿ, ಜೀವಂತ ಪತ್ನಿ ಮತ್ತು ಅಪ್ರಾಪ್ತ ವಯಸ್ಕ ಮಕ್ಕಳು:

ಪರಂತು, ಒಂದು ಕಟ್ಟಡದ ಸಂಬಂಧದಲ್ಲಿ, ಇದನ್ನು ಮಾಜಿ ಸೈನಿಕ ಅಥವಾ ಮೃತ ಮಾಜಿ ಸೈನಿಕನ ಕುಟುಂಬದ ಸದಸ್ಯರು, ಅವರ ನಿವಾಸದ ಉದ್ದೇಶಕ್ಕಾಗಿ ಬಳಸುತ್ತಿರಬೇಕು.

ಮತ್ತು ಪರಂತು, ಮಾಜಿ ಸೈನಿಕ ಅಥವಾ ಸಂದರ್ಭಾನುಸಾರವಾಗಿ ಆತನ ಕುಟುಂಬವು, ಕರ್ನಾಟಕ ಸೈನಿಕ ಮಂಡಲಿಯು,-

(i) ಈತನು ಮಾಜಿ ಸೈನಿಕ ಅಥವಾ ಸಂದರ್ಭಾನುಸಾರ ಮೃತ ಮಾಜಿ-ಸೈನಿಕನ ಕುಟುಂಬದ ಸದಸ್ಯನೆಂದು;

(ii) ಈತನು, ಕರ್ನಾಟಕದ ಶಾಶ್ವತ ನಿವಾಸಿ ಎಂದು; ಮತ್ತು

(iii) ಈತನು ಅಂಥ ಕಟ್ಟಡದಲ್ಲಿ ವಾಸ ಮಾಡುತ್ತಿದ್ದಾನೆಂದು

- ನೀಡಿರುವ ಪ್ರಮಾಣಪತ್ರವನ್ನು ಸಲ್ಲಿಸತಕ್ಕದ್ದು.

(2) ನಾಗರಿಕ ಸೌಕರ್ಯಗಳನ್ನು ಒದಗಿಸಲು ಮತ್ತು ಸಲ್ಲಿಸಿದ ಸಾಮಾನ್ಯ ಅಥವಾ ವಿಶೇಷ ಸೇವೆಗಳಿಗೆ ನಿಯಮಿಸಬಹುದಾದಂಥ ದರಗಳಲ್ಲಿ ಸೇವಾ ದರಗಳನ್ನು ಸಂಗ್ರಹಿಸಲು ಮುನ್ಸಿಪಲ್ ಪರಿಷತ್ತು ಮುಕ್ತವಾಗಿರತಕ್ಕದ್ದು.]1]2

1.2003ರ ಅಧಿನಿಯಮ 31ರ ಮೂಲಕ 16.6.2003 ರಿಂದ ಜಾರಿಗೆ ಬರುವಂತೆ 94ಎ ಪ್ರಕರಣವನ್ನು ಬಿಟ್ಟುಬಿಡಲಾಗಿದೆ.

2.2012ರ ಅಧಿನಿಯಮ 19ರ ಮೂಲಕ 28.4.2012 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][**94ಎಎ. ನಗರ ಸಾರಿಗೆ ಉಪಕರವನ್ನು ವಿಧಿಸುವುದು.-** (1) ಈ ಅಧಿನಿಯಮದ 94ನೇ ಪ್ರಕರಣದ ಅಡಿಯಲ್ಲಿ ಸಂಗ್ರಹಿಸಿದ ಸ್ವತ್ತು ತೆರಿಗೆಯ ಮೇಲೆ, ಶೇಕಡಾ ಎರಡಕ್ಕಿಂತ ಹೆಚ್ಚಿರದಂಥ ದರಗಳಲ್ಲಿ ನಗರ ಸಾರಿಗೆ ಉಪಕರವನ್ನು ವಿಧಿಸತಕ್ಕದ್ದು ಹಾಗೂ ಸಂಗ್ರಹಿಸತಕ್ಕದ್ದು ಮತ್ತು ಇದನ್ನು ಹತ್ತಿರದ ರೂಪಾಯಿಗೆ ಪೂರ್ಣಗೊಳಿಸತಕ್ಕದ್ದು.

(2) ಈ ಪ್ರಕರಣದಲ್ಲಿ ಇರುವುದಾವುದೂ ಯಾವುದೇ ಇತರ ಅಧಿನಿಯಮದ ಉಪಬಂಧಗಳ ಜಾರಿಗೆ ಬಾಧಕವನ್ನುಂಟುಮಾಡತಕ್ಕದ್ದಲ್ಲ ಮತ್ತು ಈ ಅಧಿನಿಯಮದ ಅಡಿಯಲ್ಲಿ ನಗರ ಸಾರಿಗೆ ಉಪಕರವನ್ನು ವಿಧಿಸುವುದು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಅಡಿಯಲ್ಲಿ ವಿಧಿಸಬಹುದಾದ ಯಾವುದೇ ಇತರ ಸುಂಕ ಅಥವಾ ಉಪಕರವು ಹೆಚ್ಚುವರಿಯಾಗಿರತಕ್ಕದ್ದು ಮತ್ತು ಬದಲಾಗಿರತಕ್ಕದ್ದಲ್ಲ.

(3) ನಗರ ಸಾರಿಗೆ ಉಪಕರದ ರೂಪದಲ್ಲಿ ಸಂಗ್ರಹಿಸಿದ ಎಲ್ಲಾ ಹಣವನ್ನು ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್‌ಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14) ರ 149ಎ ಪ್ರಕರಣದ ಅಡಿಯಲ್ಲಿ ಸೃಜಿಸಿದ ನಗರ ಸಾರಿಗೆ ನಿಧಿಗೆ ಜಮೆ ಮಾಡತಕ್ಕದ್ದು.

(4) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಉಪಕರದ ಸಂಗ್ರಹಣೆ, ನಗರ ಸಾರಿಗೆ ನಿಧಿಯ ನಿರ್ವಹಣೆ ಮತ್ತು ಬಳಕೆಯ ವಿಧಾನವನ್ನು ನಿಯಮಿಸಲು ನಿಯಮಗಳನ್ನು ರಚಿಸಬಹುದು][1].

1. 2012ರ ಅಧಿನಿಯಮ 31ರ ಮೂಲಕ 7.10.2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][95 ಮತ್ತು 96 xxx][1]

2. 2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ 95 ಮತ್ತು 96ನೇ ಪ್ರಕರಣಗಳನ್ನು ಬಿಟ್ಟುಬಿಡಲಾಗಿದೆ.

[1][**97. ನೋಟೀಸಿನೊಡನೆ ನಿರ್ಣಯವನ್ನು ಪ್ರಕಟಿಸುವುದು.-** (1) ಒಂದು ಮುನ್ಸಿಪಲ್ ಪರಿಷತ್ತು, ಸಾಮಾನ್ಯ ಸಭೆಯಲ್ಲಿ ಅಂಗೀಕರಿಸಿದ ನಿರ್ಣಯದ ಮೂಲಕ 94ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಯಾವುದೇ ತೆರಿಗೆಗಳನ್ನು ವಿಧಿಸತಕ್ಕದ್ದು ಮತ್ತು ಅಂಥ ನಿರ್ಣಯದಲ್ಲಿ, ತೆರಿಗೆಗೆ ಗುರಿಯಾಗತಕ್ಕ ವ್ಯಕ್ತಿಗಳ ಅಥವಾ ಸ್ವತ್ತುಗಳ ವರ್ಗಗಳನ್ನು ಮತ್ತು ಮೊಬಲಗನ್ನು ಅಥವಾ ವಿಧಿಸತಕ್ಕ ತೆರಿಗೆಯ ದರವನ್ನು ನಿರ್ದಿಷ್ಟಪಡಿಸತಕ್ಕದ್ದು. ಅಂಥ ನಿರ್ಣಯವನ್ನು ಜಾರಿಗೊಳಿಸಿದಾಗ, ಮುನ್ಸಿಪಲ್ ಪರಿಷತ್ತು, ಅಂಥ ನಿರ್ಣಯದ ನೋಟೀಸನ್ನು ತನ್ನ ಕಚೇರಿಯ ಸೂಚನಾ ಫಲಕದ ಮೇಲೆ ಪ್ರಕಟಿಸತಕ್ಕದ್ದು ಮತ್ತು ಸ್ಥಳೀಯ ವೃತ್ತ ಪತ್ರಿಕೆಗಳಲ್ಲಿ ಜಾಹೀರಾತು ಮೂಲಕ ಪ್ರಕಟಿಸತಕ್ಕದ್ದು.

(2) ಅಂಥ ನೋಟೀಸಿನ ಪ್ರಕಟಣೆಯು, ಈ ಅಧಿನಿಯಮದ ಮತ್ತು ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಉಪಬಂಧಗಳಿಗನುಸಾರವಾಗಿ, ತೆರಿಗೆಯನ್ನು ವಿಧಿಸಲಾಗಿದೆ ಎಂಬುವುದಕ್ಕೆ ನಿರ್ಣಾಯಕ ಸಾಕ್ಷ್ಯವಾಗಿರತಕ್ಕದ್ದು.][1]

1.2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

98. ಅಸ್ತಿತ್ವದಲ್ಲಿರುವ ಯಾವುದೇ ತೆರಿಗೆಯನ್ನು ಅಮಾನತುಗೊಳಿಸಲು, ಕಡಿಮೆ ಮಾಡಲು ಅಥವಾ ರದ್ದುಗೊಳಿಸಲು ಅಧಿಕಾರ.- (1) ಮುನ್ಸಿಪಲ್ ಕೌನ್ಸಿಲ್ 141ನೇ ಪ್ರಕರಣದ ಪರಂತುಕದ (ಖ) ಖಂಡದಲ್ಲಿ ಅನ್ಯಥಾ ಉಪಬಂಧಿಸಿರುವಂತೆ ಹೊರತು, ಅಸ್ತಿತ್ವದಲ್ಲಿರುವ ಯಾವುದೇ ತೆರಿಗೆಯನ್ನು ಯಾವುದೇ ಕಾಲದಲ್ಲಿ ಸಾಕಷ್ಟು ಕಾರಣಗಳಿಗಾಗಿ ಅಮಾನತುಗೊಳಿಸಬಹುದು, ಮಾರ್ಪಾಡು ಮಾಡಬಹುದು ಅಥವಾ ರದ್ದುಗೊಳಿಸಬಹುದು.

(2) ತೆರಿಗೆಗಳನ್ನು ವಿಧಿಸುವುದಕ್ಕೆ ಸಂಬಂಧಿಸಿದಂತೆ ಈ ಅಧ್ಯಾಯದ ಉಪಬಂಧಗಳು ಸಾಧ್ಯವಾಗಬಹುದಾದಷ್ಟರಮಟ್ಟಿಗೆ ಯಾವುದೇ ತೆರಿಗೆಯು ವಿಧಿಸುವಿಕೆ, ಮಾರ್ಪಾಟು, ಅಥವಾ ರದ್ದಿಯಾತಿಗೆ ಅನ್ವಯವಾಗತಕ್ಕದ್ದು.

[1][(3) (1)ನೇ ಉಪ-ಪ್ರಕರಣದ ಮೇರೆಗೆ ಮುನ್ಸಿಪಲ್ ಕೌನ್ಸಿಲ್ ಮಾಡಿದ ಅಮಾನತು, ಮಾರ್ಪಾಟು, ಅಥವಾ ರದ್ದಿಯಾತಿಯು ಸರ್ಕಾರವು ಅನುಮೋದಿಸಿದ ಹೊರತು ಪರಿಣಾಮಕಾರಿಯಾಗತಕ್ಕದ್ದಲ್ಲ.][1]

1. 1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

ಸ್ಥಿರ ಸ್ವತ್ತುಗಳ ವರ್ಗಾವಣೆಗಳ ಮೇಲೆ ಸುಂಕ

99. ಸ್ಥಿರ ಸ್ವತ್ತುಗಳ ವರ್ಗಾವಣೆಗಳ ಮೇಲೆ ಸುಂಕ.-[1][(1) ಸ್ಥಿರ ಸ್ವತ್ತಿನ ವರ್ಗಾವಣೆಯ ಮೇಲೆ ಸುಂಕವನ್ನು, ಚಿಕ್ಕ ನಗರ ಪ್ರದೇಶದ ಪರಿಮಿತಿಗಳೊಳಗೆ ಇರುವ ಸ್ಥಿರ ಸ್ವತ್ತಿನ ಮಾರಾಟ, ದಾನ, ಅಡಮಾನ, ವಿನಿಮಯ ಮತ್ತು ಗುತ್ತಿಗೆಯ ಲಿಖಿತ ಪತ್ರದ ಮೇಲೆ ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ ಮೂಲಕ ವಿಧಿಸಲಾದ ಸುಂಕದ ಶೇಕಡಾ ಎರಡರಷ್ಟು ದರದಲ್ಲಿ ಅಧಿಭಾರದ ರೂಪದಲ್ಲಿ ವಿಧಿಸತಕ್ಕದ್ದು:][1]

1.2003ರ ಅಧಿನಿಯಮ 8ರ ಮೂಲಕ 1.4.2003 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

ಪರಂತು, ಅಂಥ ಯಾವುದೇ ಸುಂಕವನ್ನು, ಅಡಮಾನದ ಮೂಲಕ ಬದ್ಧಗೊಳಿಸಿದ ಮೊಬಲಗು ಎರಡು ಸಾವಿರದ ಐದು ನೂರು ರೂಪಾಯಿಗಳನ್ನು ಮೀರದಿರುವ ಅಡಮಾನಕ್ಕೆ ಸಂಬಂಧಿಸಿದಂತೆ ವಿಧಿಸತಕ್ಕದ್ದಲ್ಲ.

(2) ವರ್ಗಾವಣೆ ಸುಂಕವನ್ನು ಜಾರಿಗೆ ತಂದ ಮೇಲೆ,-

(ಎ) 1957ರ [1][ಕರ್ನಾಟಕ][1] ಸ್ಟಾಂಪ್ ಅಧಿನಿಯಮದ 28ನೇ ಪ್ರಕರಣವನ್ನು, [2][ಮುನ್ಸಿಪಲ್ ಏರಿಯಾ][2] ದೊಳಗೆ ಮತ್ತು ಅದರಾಚೆ ಇರುವ ಸ್ವತ್ತಿಗೆ ಸಂಬಂಧಿಸಿದಂತೆ, ಪ್ರತ್ಯೇಕವಾಗಿ ವಿವರಗಳನ್ನು ನಿರೂಪಿಸುವಂತೆ ಅದು ನಿರ್ದಿಷ್ಟವಾಗಿ ಅಗತ್ಯಪಡಿಸಿದ್ದರೆ ಹೇಗೋ ಹಾಗೆ ಓದಿಕೊಳ್ಳತಕ್ಕದ್ದು.

1. 1973ರ ಕರ್ನಾಟಕ ಕಾನೂನು ಅಳವಡಿಕೆಗಳ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.
2. 1994ರ ಅಧಿನಿಯಮ 36ರ ಮೂಲಕ 1.8.1997 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಬಿ) ಇದೇ ಅಧಿನಿಯಮದ 61ನೇ ಪ್ರಕರಣವನ್ನು ಅದನ್ನು ಮುನ್ಸಿಪಲ್ ಕೌನ್ಸಿಲ್ ಗೆ ಹಾಗೂ ಸರ್ಕಾರಕ್ಕೆ ಉಲ್ಲೇಖಿಸಿದರೆ ಹೇಗೋ ಹಾಗೆ ಓದಿಕೊಳ್ಳತಕ್ಕದ್ದು.

(3) ಸರ್ಕಾರವು, ಸುಂಕದ ಸಂಗ್ರಹಣೆ, ಅದನ್ನು ಮುನ್ಸಿಪಲ್ ಕೌನ್ಸಿಲ್‌ಗೆ [1][ಅಥವಾ ಪಟ್ಟಣ ಪಂಚಾಯಿತಿ][1]ಗೆ ಸಂದಾಯ ಮಾಡುವುದು ಮತ್ತು ಅದನ್ನು ಸಂಗ್ರಹಿಸುವಲ್ಲಿ ಸರ್ಕಾರವು ವಹಿಸಿದ ಯಾವುದೇ ವೆಚ್ಚಗಳನ್ನು ಮುರಿದುಕೊಳ್ಳುವುದು-ಇವುಗಳನ್ನು ವಿನಿಮಯಕ್ಕಾಗಿ ನಿಯಮಗಳನ್ನು ರಚಿಸಬಹುದು.

1.2003ರ ಅಧಿನಿಯಮ 31ರ ಮೂಲಕ 20.8.2003ರ ಮೂಲಕ ಜಾರಿಗೆ ಬರುವಂತೆ ಸೇರಿಸಲಾಗಿದೆ.

(4) ಯಾವುದೇ ಸುಂಕವನ್ನು,-

(i) ಅಂಥ ಲಿಖಿತಕ್ಕೆ ಸಂಬಂಧಿಸಿದಂತೆ ಈ ಪ್ರಕರಣದ ಮೇರೆಗೆ ವರ್ಗಾವಣೆ ಸುಂಕವನ್ನು ಸಂದಾಯ ಮಾಡಲು, ಈ ವಿನಾಯಿತಿಯು ಇಲ್ಲದಿದ್ದರೆ ಸರ್ಕಾರವು ಹೊಣೆಯಾಗುವ ಸಂದರ್ಭಗಳಲ್ಲಿ ಸರ್ಕಾರದಿಂದ ಅಥವಾ ಅದರ ಪರವಾಗಿ ಅಥವಾ ಅದಕ್ಕೆ ಬರೆದುಕೊಟ್ಟ ಯಾವುದೇ ಲಿಖಿತಕ್ಕೆ ಸಂಬಂಧಿಸಿದಂತೆ, ಅಥವಾ

(ii) 1957ರ [1][ಕರ್ನಾಟಕ][1] ಸ್ಟಾಂಪ್ ಅಧಿನಿಯಮದ ಮೇರೆಗೆ ಸ್ಟಾಂಪ್ ಸುಂಕದಿಂದ ವಿನಾಯಿತಿ ಪಡೆದ ಯಾವುದೇ ಲಿಖಿತಕ್ಕೆ ಸಂಬಂಧಿಸಿದಂತೆ,

- ವಿಧಿಸತಕ್ಕದ್ದಲ್ಲ.

1.1973ರ ಕರ್ನಾಟಕ ಕಾನೂನು ಅಳವಡಿಕೆಗಳ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

[1][100. xxx][1]

1. 2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][101. ಸ್ವತ್ತು ತೆರಿಗೆಯ ವಿವರಣೆ ಮತ್ತು ವರ್ಗ.- (1) ಈ ಅಧಿನಿಯಮದ ಅಥವಾ ಯಾವುದೇ ಇತರ ಕಾನೂನಿನ ಮೇರೆಗೆ ವಿನಾಯಿತಿಗೊಳಿಸಿದ್ದ ಹೊರತು, ನಗರದೊಳಗೆ ಇರುವ ಎಲ್ಲ [2][ಕಟ್ಟಡಗಳ ಅಥವಾ ಖಾಲಿ ಭೂಮಿಯ ಅಥವಾ ಅವೆರಡರ][2] ಮೇಲೆ ಪ್ರತಿವರ್ಷ ಸ್ವತ್ತು ತೆರಿಗೆಯನ್ನು ವಿಧಿಸತಕ್ಕದ್ದು.

1.2001ರ ಅಧಿನಿಯಮ 28ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2.2003ರ ಅಧಿನಿಯಮ 31ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಸ್ವತ್ತು ತೆರಿಗೆಯನ್ನು,-

(ಎ) ವಾಣಿಜ್ಯ ಕಟ್ಟಡಗಳ ಸಂಬಂಧದಲ್ಲಿ ತೆರಿಗೆಗೆ ಗುರಿಯಾಗತಕ್ಕ ಕಟ್ಟಡದ ಮೂಲ ಬೆಲೆಯ ಶೇಕಡಾ 0.5 ಕ್ಕಿಂತ [1][ಒಂದು ಸಾವಿರಕ್ಕೆ ಐದು ರೂಪಾಯಿಗಳು][1] ಕಡಿಮೆಯಿಲ್ಲದ [1][ಶೇಕಡಾ ಮೂರಕ್ಕಿಂತ ಹೆಚ್ಚಿಲ್ಲದ][1] ಶೇಕಡಾವಾರಿನಂತೆ;

1.2012ರ ಅಧಿನಿಯಮ 19ರ ಮೂಲಕ 28.4.2012 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[2][1[xxx][1]][2]

1. 2005ರ ಅಧಿನಿಯಮ 5ರ ಮೂಲಕ 1.4.2005 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 2012ರ ಅಧಿನಿಯಮ 19ರ ಮೂಲಕ 28.4.2012 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(ಬಿ) ವಾಸದ ಕಟ್ಟಡ ಮತ್ತು ವಾಣಿಜ್ಯೇತರ ಕಟ್ಟಡಗಳ ಸಂಬಂಧದಲ್ಲಿ ತೆರಿಗೆಗೆ ಗುರಿಯಾಗತಕ್ಕ, ಕಟ್ಟಡದ ಮೂಲ ಬೆಲೆಯ [2][ಶೇಕಡಾ 0.2 ಕ್ಕಿಂತ (ಒಂದು ಸಾವಿರಕ್ಕೆ ಎರಡು ರೂಪಾಯಿಗಳು)][2] ಕಡಿಮೆಯಿಲ್ಲದ ಮತ್ತು [1][ಶೇಕಡಾ 1.5ಕ್ಕಿಂತ (ಒಂದು ಸಾವಿರಕ್ಕೆ ಹದಿನೈದು ರೂಪಾಯಿಗಳು)][1] ಹೆಚ್ಚಿಲ್ಲದಂಥ ಶೇಕಡಾವಾರಿನಂತೆ;

1.2005ರ ಅಧಿನಿಯಮ 5ರ ಮೂಲಕ 1.4.2005 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 2021ರ ಅಧಿನಿಯಮ 03ರ ಮೂಲಕ ದಿನಾಂಕ: 19.01.2021ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[2][[1][xxx][1]][2]

1.2005ರ ಅಧಿನಿಯಮ 5ರ ಮೂಲಕ 17.3.2005 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2.2012ರ ಅಧಿನಿಯಮ 19ರ ಮೂಲಕ 28.4.2012 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(ಸಿ) [2][xxx][2] ಖಾಲಿ ಭೂಮಿಯ ಸಂಬಂಧದಲ್ಲಿ, ತೆರಿಗೆಗೆ ಗುರಿಯಾಗತಕ್ಕ ಭೂಮಿಯ ಮೂಲ ಬೆಲೆಯ [3][ಶೇಕಡಾ 0.2 ಕ್ಕಿಂತ (ಸಾವಿರಕ್ಕೆ ಎರಡು ರೂಪಾಯಿಗಳು)][3] ಕಡಿಮೆಯಿಲ್ಲದ [1][ಶೇಕಡಾ 0.5 ಕ್ಕಿಂತ (ಸಾವಿರಕ್ಕೆ ಐದು ರೂಪಾಯಿಗಳು) ಹೆಚ್ಚಿಲ್ಲದಂತೆ][1] ಶೇಕಡಾವಾರಿನಂತೆ.

1.2012ರ ಅಧಿನಿಯಮ 19ರ ಮೂಲಕ 28.4.2012 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2.2021ರ ಅಧಿನಿಯಮ 03ರ ಮೂಲಕ ದಿನಾಂಕ. 19.01.2021ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

3.2021ರ ಅಧಿನಿಯಮ 03ರ ಮೂಲಕ ದಿನಾಂಕ. 19.01.2021ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[3][[2][[1][(ಡಿ) ತೆರಿಗೆಗೆ ಗುರಿಯಾಗತಕ್ಕ ಕಟ್ಟಡದ ಮೂಲ ಬೆಲೆಯ (2)ನೇ ಉಪ ಪ್ರಕರಣದ (ಎ) ಖಂಡದ ಅನುಸಾರವಾಗಿ ವಾಣಿಜ್ಯ ಕಟ್ಟಡದ ಸಂದರ್ಭದಲ್ಲಿ ವಿಧಿಸಿದ ದರದ ಶೇಕಡಾ ಎಪ್ಪತ್ತಕ್ಕಿಂತ ಕಡಿಮೆಯಲ್ಲದಂಥ ಶೇಕಡಾವಾರಿನಂತೆ,

–ವಿಧಿಸತಕ್ಕದ್ದು:

ಪರಂತು, ಹಾಗೆ ನಿಗದಿಪಡಿಸಿದ ಶೇಕಡಾವಾರು ದರವು, (ಬಿ) ಖಂಡದ ಅನುಸಾರವಾಗಿ ವಾಣಿಜ್ಯ ಕಟ್ಟಡಗಳನ್ನು ಹೊರತುಪಡಿಸಿ ವಸತಿ ಕಟ್ಟಡಗಳು ಮತ್ತು ಕಟ್ಟಡಗಳ ಸಂದರ್ಭದಲ್ಲಿ ವಿಧಿಸಲಾದ ದರಕ್ಕಿಂತ ಕಡಿಮೆ ಇರತಕ್ಕದ್ದಲ್ಲ.][1]][2]][3]

1. 2012ರ ಅಧಿನಿಯಮ 19ರ ಮೂಲಕ 28.4.2012 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2021ರ ಅಧಿನಿಯಮ 03ರ ಮೂಲಕ ದಿನಾಂಕ. 19.01.2021ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.
3. 2022ರ ಅಧಿನಿಯಮ 02ರ ಮೂಲಕ ದಿನಾಂಕ.13.01.2022ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[3][2][1][(ಇ) xxx][1]][2]][3]

1. 2003ರ ಅಧಿನಿಯಮ 31ರ ಮೂಲಕ (2)ನೇ ಉಪ-ಪ್ರಕರಣದ (ಎ) ಮತ್ತು (ಬಿ) ಖಂಡಗಳು 16.6.2003 ರಿಂದ ಜಾರಿಗೆ ಬಂದಿದೆ ಎಂದು ಹಾಗೂ (ಸಿ) ಯಿಂದ (ಇ) ವರೆಗಿನ ಖಂಡಗಳು 19.11.2001 ರಿಂದ ಜಾರಿಗೆ ಬಂದಿದೆ ಎಂದು ಭಾವಿಸತಕ್ಕದ್ದು.
2. 2012ರ ಅಧಿನಿಯಮ 19ರ ಮೂಲಕ 28.4.2012 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

3. 2021ರ ಅಧಿನಿಯಮ 03ರ ಮೂಲಕ ದಿನಾಂಕ. 19.01.2021ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[2][1][(2-ಎ)xxx][1][2]

1. 2005ರ ಅಧಿನಿಯಮ 5ರ ಮೂಲಕ 1.4.2005 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 2012ರ ಅಧಿನಿಯಮ 19ರ ಮೂಲಕ 28.4.2012 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(3) ಉಪ-ಪ್ರಕರಣ (2)ರಲ್ಲಿ ನಿರ್ದಿಷ್ಟಪಡಿಸಲಾದ ದರಗಳ ಗರಿಷ್ಠ ಹಾಗೂ ಕನಿಷ್ಠ ಪ್ರಯಾಣಕ್ಕೊಳಪಟ್ಟು, ಸ್ಥಳ, ಕಟ್ಟಡ ನಿರ್ಮಾಣದ ಮಾದರಿ, [1][ಖಾಲಿಭೂಮಿಯ ಅಥವಾ ಅವೆರಡರ][1] ಅಥವಾ ಕಟ್ಟಡದ ಉಪಯೋಗದ ಸ್ವರೂಪ, [1][ಖಾಲಿಭೂಮಿ][1]ಯ ವಿಸ್ತೀರ್ಣ ಅಥವಾ ಕಟ್ಟಡದ ಪ್ಲಿಂತ್ ಏರಿಯಾ, ಕಟ್ಟಡದ ಕಾಲಾವಧಿ ಮತ್ತು ನಿಯಮಿಸಬಹುದಾದಂತೆ ಅಂಥ ಮಾನದಂಡಗಳನ್ನು ಗಮನಿಸಿ ತೆರಿಗೆಗೆ ಗುರಿಯಾಗತಕ್ಕ ಕಟ್ಟಡಗಳ ಅಥವಾ [1][ಖಾಲಿಭೂಮಿಯ][1] ಸ್ವತ್ತಿನ ಮೂಲಮೌಲ್ಯದ ಅಂಥ ಶೇಕಡವಾರು ಪ್ರಮಾಣದಲ್ಲಿ ಮುನ್ಸಿಪಲ್ ಕೌನ್ಸಿಲ್ ಸ್ವತ್ತು ತೆರಿಗೆಯನ್ನು ನಿಗದಿಪಡಿಸತಕ್ಕದ್ದು.

1. 2003ರ ಅಧಿನಿಯಮ 31ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಪರಂತು, ಹಾಗೆ ನಿಗದಿಪಡಿಸಲಾದ ಶೇಕಡಾವಾರು ಪ್ರಮಾಣವು, ಬೇರೆಬೇರೆ ಪ್ರದೇಶಗಳಲ್ಲಿ ಮತ್ತು ಕಟ್ಟಡಗಳ ಹಾಗೂ ಭೂಮಿಗಳ ಬೇರೆಬೇರೆ ವರ್ಗಗಳಿಗೆ ಬೇರೆಬೇರೆಯಾಗಿರಬಹುದು.

[2][1][ಮತ್ತು ಪರಂತು ಕಟ್ಟಡಕ್ಕೆ ಹೊಂದಿಕೊಂಡಿರುವ ಒಂದು ಸಾವಿರ ಚದರಡಿಯವರೆಗಿನ ಖಾಲಿ ಭೂಮಿಗೆ ವಿನಾಯತಿಯನ್ನು ನೀಡತಕ್ಕದ್ದು ಮತ್ತು ಒಂದು ಸಾವಿರ ಚದರಡಿಗಿಂತ ಹೆಚ್ಚಿರುವ ಖಾಲಿ ಭೂಮಿಗೆ (2)ನೇ ಉಪಪ್ರಕರಣದ (ಸಿ) ಖಂಡದ ಅನುಸಾರವಾಗಿ ಸ್ವತ್ತು ತೆರಿಗೆಯನ್ನು ವಿಧಿಸತಕ್ಕದ್ದು.][1][2]

1. 2005ರ ಅಧಿನಿಯಮ 5ರ ಮೂಲಕ 1.4.2005 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 2021ರ ಅಧಿನಿಯಮ 03ರ ಮೂಲಕ ದಿನಾಂಕ. 19.01.2021ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][ವಿವರಣೆ,-XXX][1]

1.2003ರ ಅಧಿನಿಯಮ 31ರ ಮೂಲಕ 16.6.2003 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][101ಎ. ಉಪಬಂಧಗಳ ಅನ್ವಯಿಸುವಿಕೆ.- (1) ಕರ್ನಾಟಕ ಪೌರನಿಗಮಗಳ ಅಧಿನಿಯಮ, 1976ರ ಅಧ್ಯಾಯ-IX-ಎ ಇದರ ಉಪಬಂಧಗಳು, ಯಥೋಚಿತ ವ್ಯತ್ಯಾಸಗಳೊಂದಿಗೆ ಈ ಅಧಿನಿಯಮದ ಅಡಿಯಲ್ಲಿ ಸ್ಥಾಪಿತವಾದ ಮುನ್ಸಿಪಾಲಿಟಿಗಳಿಗೆ ಅನ್ವಯವಾಗತಕ್ಕದ್ದು ಮತ್ತು ಸದರಿ ಅಧಿನಿಯಮದ 102ಡಿ ಪ್ರಕರಣದ ಅಡಿಯಲ್ಲಿ ಸ್ಥಾಪಿತವಾದ ಕರ್ನಾಟಕ ಸ್ವತ್ತಿನ ತೆರಿಗೆ ಮಂಡಳಿಯು, ಈ ಅಧಿನಿಯಮದ ಉದ್ದೇಶಕ್ಕಾಗಿ ಸ್ವತ್ತು ತೆರಿಗೆ ಮಂಡಳಿಯೆಂದು ಭಾವಿಸತಕ್ಕದ್ದು ಮತ್ತು ಸದರಿ ಮಂಡಳಿಯು, ಈ ಅಧಿನಿಯಮದ ಅಡಿಯಲ್ಲಿ ಸ್ಥಾಪಿತವಾದ ಮುನ್ಸಿಪಾಲಿಟಿಗಳ ಮೇಲೆ ಅಧಿಕಾರವ್ಯಾಪ್ತಿಯನ್ನು ಹೊಂದಿರತಕ್ಕದ್ದು.

(2) ಯಾವುದೇ ಮುನ್ಸಿಪಾಲಿಟಿ ಅಥವಾ ಮುನ್ಸಿಪಾಲಿಟಿಯ ಯಾವೊಬ್ಬ ಅಧಿಕಾರಿಯು, ಕರ್ನಾಟಕ ಸ್ವತ್ತು ತೆರಿಗೆ ಮಂಡಳಿಯೊಡನೆ ಸಮಾಲೋಚಿಸಿದ ಹೊರತು, ಯಾವುದೇ ವಲಯ, ಪ್ರದೇಶ ಅಥವಾ ಕಟ್ಟಡದ ಯಾವುದೇ ಸ್ವರೂಪ ಅಥವಾ ವರ್ಗದ ಮೌಲ್ಯಮಾಪನವನ್ನು ನಿರ್ಧರಿಸತಕ್ಕದ್ದಲ್ಲ.][1]

1.2011ರ ಅಧಿನಿಯಮ 24ರ ಮೂಲಕ 10.06.2011 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

102. ಸ್ವತ್ತು ತೆರಿಗೆಯ ನಿರ್ಧರಣೆಯ ವಿಧಾನ.- (1) ತೆರಿಗೆಗೆ ಗುರಿಯಾಗತಕ್ಕ ಕಟ್ಟಡದ ಸ್ವತ್ತಿನ ಮೂಲ ಮೌಲ್ಯವನ್ನು, [1][ಕಟ್ಟಡವು ಆವರಿಸಿಕೊಂಡಿರುವ ಭೂಮಿಸಹಿತವಾಗಿ]1 ನಿರ್ಧರಣೆ ಮಾಡತಕ್ಕದ್ದು. ತೆರಿಗೆಗೆ ಗುರಿಯಾಗತಕ್ಕ ಅಂಥ ಭೂಮಿಯ ಸ್ವತ್ತಿನ ಮೂಲ ಮೌಲ್ಯವನ್ನು ಕರ್ನಾಟಕ ಸ್ವಾಮ್ಯಂಪು ಅಧಿನಿಯಮ, 1957ರ 45ಬಿ ಪ್ರಕರಣದ ಅಡಿಯಲ್ಲಿ [2][ಪ್ರಕಟಿಸಲಾದ ಸ್ವತ್ತಿನ [4][ಚಾಲ್ತಿಯಲ್ಲಿರುವ][4] ಮಾರುಕಟ್ಟೆ ಮೌಲ್ಯದ ಮಾರ್ಗಸೂಚಿಗಳನ್ನು][2] ಗಮನದಲ್ಲಿರಿಸಿಕೊಂಡು ನಿರ್ಧರಣೆ ಮಾಡತಕ್ಕದ್ದು. ನಿಯಮಿಸಬಹುದಾದಂಥ ನಿಯಮಗಳಿಗೊಳಪಟ್ಟು, ತೆರಿಗೆಗೆ ಗುರಿಯಾಗತಕ್ಕ ಕಟ್ಟಡದ ಸ್ವತ್ತಿನ ಮೂಲ ಮೌಲ್ಯವು, ಕರ್ನಾಟಕ ಸ್ವಾಮ್ಯಂಪು ಅಧಿನಿಯಮ, 1957ರ 45ಬಿ ಪ್ರಕರಣದ ಅಡಿಯಲ್ಲಿ ಪ್ರಕಟಿಸಿದ ಸ್ವತ್ತುಗಳ [5][3][ಚಾಲ್ತಿಯಲ್ಲಿರುವ ಮಾರುಕಟ್ಟೆ ಮಾರ್ಗಸೂಚಿ ಮೌಲ್ಯದ ಶೇಕಡ ಇಪ್ಪತ್ತೈದಕ್ಕೆ][5] ಸಮನಾದ][3] ತೆರಿಗೆಯಲ್ಲಿ, ತೆರಿಗೆ ನಿರ್ಧರಣೆ ಸಮಯದಲ್ಲಿ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದಂಥ ಸವಕಳಿಯನ್ನು ಕಳೆದ ತರುವಾಯ ಬರುವ ಮೌಲ್ಯವಾಗಿರತಕ್ಕದ್ದು.

1. 2003 ರ ಆಧಿನಿಯಮ 31ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 2003 ರ ಅಧಿನಿಯಮ 31ರ ಮೂಲಕ 16.6.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

3. 2005 ರ ಅಧಿನಿಯಮ 5ರ ಮೂಲಕ 1.4.2005 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

4. 2021ರ ಅಧಿನಿಯಮ 03ರ ಮೂಲಕ ದಿನಾಂಕ. 19.01.2021ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

5. 2021ರ ಅಧಿನಿಯಮ 03ರ ಮೂಲಕ ದಿನಾಂಕ. 19.01.2021ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ತೆರಿಗೆಗೆ ಗುರಿಯಾಗತಕ್ಕ ಖಾಲಿ ಭೂಮಿಯ ಸ್ವತ್ತಿನ ಮೂಲ ಮೌಲ್ಯವನ್ನು, ಕರ್ನಾಟಕ ಸ್ಥಾಯಿಂಪು ಅಧಿನಿಯಮ, 1957ರ 45ಬಿ ಪ್ರಕರಣದ ಅಡಿಯಲ್ಲಿ ಸರ್ಕಾರವು ಅಧಿಸೂಚಿಸಿದ ಭೂಮಿಯ, [2][[1][ಪ್ರಕಟಿಸಲಾದ ಸ್ವತ್ತಿನ [3][ಚಾಲ್ತಿಯಲ್ಲಿರುವ ಮಾರುಕಟ್ಟೆ ಮಾರ್ಗಸೂಚಿ ಮೌಲ್ಯದ ಶೇಕಡ ಇಪ್ಪತ್ತೈದಕ್ಕೆ][1][2]][3]ಸಮಾನಾಗಿ ಮಾಡತಕ್ಕದ್ದು.

1. 2003ರ ಆಧಿನಿಯಮ ಸಂಖ್ಯೆ 31ರ ಮೂಲಕ 16.6..2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 2005ರ ಅಧಿನಿಯಮ ಸಂಖ್ಯೆ 5ರ ಮೂಲಕ 1.4.2005 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

3. 2021ರ ಅಧಿನಿಯಮ 03ರ ಮೂಲಕ ದಿನಾಂಕ. 19.01.2021ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[3][[2][1][102ಎ. ಸ್ವತ್ತು ತೆರಿಗೆಯನ್ನು ಹೆಚ್ಚಿಸುವುದು.- 101 ಮತ್ತು 102ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಅವುಗಳಲ್ಲಿ ಯಾವುದೇ ಉಪಬಂಧದ ಅಡಿಯಲ್ಲಿ ನಿರ್ಧರಣೆ ಮಾಡಿದ ಮತ್ತು ವಿಧಿಸಿದ ಸ್ವತ್ತು ತೆರಿಗೆಯನ್ನು ಕರ್ನಾಟಕ ಸ್ಥಾಂಪುಗಳ ಅಧಿನಿಯಮ, 1957ರ 45ಬಿ ಪ್ರಕರಣದ ಅಡಿಯಲ್ಲಿ ಸ್ವತ್ತಿನ ಮಾರ್ಗಸೂಚಿ ಮೌಲ್ಯದ ಪರಿಷ್ಕರಣೆಯ ವರ್ಷದಲ್ಲಿ ನಿರ್ಧರಣೆ ಮಾಡತಕ್ಕದ್ದು.

(2) ಪ್ರತಿ ಹಣಕಾಸು ವರ್ಷಕ್ಕೆ ಶೇಕಡಾ ಮೂರರಷ್ಟು ಆಸ್ತಿ ತೆರಿಗೆಯು ಹೆಚ್ಚಳವಾಗತಕ್ಕದ್ದು, ಅದರಲ್ಲಿ ಮಾರ್ಗಸೂಚಿ ಮೌಲ್ಯದ ಪರಿಷ್ಕರಣೆ ಮಾಡತಕ್ಕದ್ದಲ್ಲ:

ಪರಂತು, ಪೌರನಿಗಮವು, ಪ್ರತಿ ಹಣಕಾಸು ವರ್ಷಕ್ಕೆ ಶೇಕಡಾ ಐದಕ್ಕಿಂತ ಹೆಚ್ಚಲ್ಲದಷ್ಟು ಅಂಥ ಸ್ವತ್ತು ತೆರಿಗೆಯನ್ನು ಹೆಚ್ಚಿಸಬಹುದು ಮತ್ತು ಬೇರೆ ಬೇರೆ ಪ್ರದೇಶಗಳಿಗೆ ಹಾಗೂ ಬೇರೆ ಬೇರೆ ಕಟ್ಟಡಗಳು ಮತ್ತು ಭೂಮಿಗಳ ವರ್ಗಗಳಿಗೆ ಬೇರೆ ಬೇರೆ ದರಗಳ ಹೆಚ್ಚಳವನ್ನು ಮಾಡಬಹುದು:

ಮತ್ತೂ ಪರಂತು, ಈ ಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ, ಸ್ವತ್ತು ತೆರಿಗೆಯನ್ನು ಇನ್ನೂ ಮುಂಚಿತವಾಗಿ ಪರಿಷ್ಕರಿಸುವಂತೆ ನಿರ್ದೇಶನ ನೀಡಲು ರಾಜ್ಯ ಸರ್ಕಾರಕ್ಕೆ ಇರುವ ಅಧಿಕಾರಕ್ಕೆ ಬಾಧಕ ಉಂಟು ಮಾಡುತ್ತದೆ ಎಂದು ಭಾವಿಸತಕ್ಕದಲ್ಲ.

ವಿವರಣೆ: "ಹಣಕಾಸು ವರ್ಷ" ಎಂದರೆ ಏಪ್ರಿಲ್ ಒಂದನೇ ದಿನಾಂಕದಿಂದ ಪ್ರಾರಂಭವಾಗುವ ವರ್ಷ][1][2]][3]

1. 2005ರ ಅಧಿನಿಯಮ 5ರ ಮೂಲಕ 1.4.2005 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 2012ರ ಅಧಿನಿಯಮ 19ರ ಮೂಲಕ 28.4.2012 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

3. 2021ರ ಅಧಿನಿಯಮ 03ರ ಮೂಲಕ ದಿನಾಂಕ. 19.01.2021ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

103. ಸ್ವಂತ ಅಧಿಭೋಗದಲ್ಲಿರುವ ಕಟ್ಟಡಕ್ಕೆ ವಿನಾಯಿತಿ.- ಅಂಥ ಕಟ್ಟಡದ ಮಾಲೀಕನ ಸ್ವಂತ ಅಧಿಭೋಗದಲ್ಲಿರುವ [1][ಯಾವುದೇ ವಾಸದ ಕಟ್ಟಡ ಅಥವಾ ವಾಸದ ಕಟ್ಟಡದ ಭಾಗಕ್ಕೆ][1] ಸಂಬಂಧಪಟ್ಟಂತೆ ಸ್ವತ್ತು ತೆರಿಗೆಯ ಶೇಕಡಾ ಐವತ್ತರ ದರದಲ್ಲಿ ವಿನಾಯಿತಿಯನ್ನು ನೀಡತಕ್ಕದ್ದು.

1.2003ರ ಅಧಿನಿಯಮ 31ರ ಮೂಲಕ 16.06.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][**104. xxx**][1]

1.2003ರ ಅಧಿನಿಯಮ 31ರ ಮೂಲಕ 16.06.2003 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][**105. ಸ್ವತ್ತು ತೆರಿಗೆಯ ನಿರ್ಧರಣೆ**.- (1) ಈ ಅಧಿನಿಯಮದ ಅಡಿಯಲ್ಲಿ ಸ್ವತ್ತು ತೆರಿಗೆಯನ್ನು ಸಂದಾಯ ಮಾಡಲು ಹೊಣೆಗಾರನಾಗಿರುವ ಪ್ರತಿಯೊಬ್ಬ ಮಾಲೀಕನು ಅಥವಾ ಅಧಿಭೋಗದಾರನು, ಮುನ್ಸಿಪಲ್ ಕಮಿಷನರ್ ನಿಗೆ ಅಥವಾ ಸಂದರ್ಭಾನುಸಾರ ಮುಖ್ಯಾಧಿಕಾರಿಗೆ ಈ ಸಂಬಂಧದಲ್ಲಿ ಅವರು ಪ್ರಾಧಿಕೃತನಾದ ಅಧಿಕಾರಿಗೆ (ಇಲ್ಲಿ ಇನ್ನು ಮುಂದೆ ಪ್ರಾಧಿಕೃತ ಅಧಿಕಾರಿಯೆಂದು ಉಲ್ಲೇಖಿಸಲಾಗಿದೆ) IIIನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಅಂಥ ಅವಧಿಯೊಳಗೆ ಮತ್ತು ಅಂಥ ರೀತಿಯಲ್ಲಿ ಮತ್ತು ಅಂಥ ನಮೂನೆಯಲ್ಲಿ ವಿವರ ಪಟ್ಟಿಕೆಯನ್ನು ಪ್ರತಿವರ್ಷ ಸಲ್ಲಿಸತಕ್ಕದ್ದು:

ಪರಂತು, ತೆರಿಗೆಯನ್ನು ಸಂದಾಯ ಮಾಡಲು ಹೊಣೆಗಾರನಾಗಿರುವ ಮಾಲೀಕನು ಅಥವಾ ಅಧಿಭೋಗದಾರನು ವಿವರ ಪಟ್ಟಿಕೆಯನ್ನು ಸಲ್ಲಿಸಿದರೆ ಮತ್ತು ಬಾಕಿ ಇರುವ ತೆರಿಗೆಯನ್ನು, ವರ್ಷದ ಪ್ರಾರಂಭದ ಮೊದಲನೇ ದಿನಾಂಕದಿಂದ ಒಂದು ತಿಂಗಳೊಳಗೆ ಪಾವತಿ ಮಾಡಿದರೆ, ಆತನು ಸಂದಾಯ ಮಾಡಬೇಕಾದ ತೆರಿಗೆಯ ಮೇಲೆ ಶೇಕಡಾ ಐದರಷ್ಟು ರಿಯಾಯಿತಿಯನ್ನು ಆತನಿಗೆ ನೀಡತಕ್ಕದ್ದು.

[1][ಮತ್ತು ಪರಂತು, 2020-21ನೇ ಹಣಕಾಸು ವರ್ಷಕ್ಕೆ ತೆರಿಗೆಯನ್ನು ಪಾವತಿಸಲು ಹೊಣೆಗಾರನಾಗಿರುವ ಮಾಲೀಕ ಅಥವಾ ಅಧಿಭೋಗದಾರನು ಆತನ ವಿವರಪಟ್ಟಿಕೆ (ರಿಟರ್ನ್ಸ್) ಸಲ್ಲಿಸಿದಲ್ಲಿ ಮತ್ತು ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2021ರ ಪ್ರಾರಂಭದ ದಿನಾಂಕದಿಂದ ಒಂದು ತಿಂಗಳ ಒಳಗಾಗಿ ಬಾಕಿ ಇರುವ ತೆರಿಗೆಯನ್ನು ಕೂಡಾ ಪಾವತಿಸಿದಲ್ಲಿ ಆತನು ಪಾವತಿಸಬಹುದಾದ ತೆರಿಗೆಯ ಮೇಲೆ ಆತನಿಗೆ ಶೇಕಡ ಐದರ ರಿಯಾಯಿತಿಯನ್ನೂ ಸಹ ಅನುಮತಿಸತಕ್ಕದ್ದು.

ಅಲ್ಲದೆ ಪರಂತು, ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2021ರ ಪ್ರಾರಂಭಕ್ಕೆ ಮೊದಲು 2020-21ನೇ ಹಣಕಾಸು ವರ್ಷದಲ್ಲಿ ಪೂರ್ತಿಯಾಗಿ ಆಸ್ತಿ ತೆರಿಗೆಯನ್ನು ಪಾವತಿಸಿದ ಸಂದರ್ಭದಲ್ಲಿ ಹಾಗೆ ಅನುಮತಿಸಲಾದ ರಿಯಾಯಿತಿಯನ್ನು ಮುಂಬರುವ ವರ್ಷಗಳ ತೆರಿಗೆ ಪಾವತಿಯಲ್ಲಿ ಹೊಂದಿಸಿಕೊಳ್ಳತಕ್ಕದ್ದು.][1]

1.2021ರ ಅಧಿನಿಯಮ 07ರ ಮೂಲಕ 19.02.2021ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) ಉಪಪ್ರಕರಣ (1)ರ ಮೇರೆಗೆ ಯಾವುದೇ ವಿವರಪಟ್ಟಿಕೆಯನ್ನು ಯಾರೇ ಮಾಲೀಕನು ಅಥವಾ ಅಧಿಭೋಗದಾರನು, ಸಲ್ಲಿಸುವ ಮೊದಲು, ಅಂಥ ವಿವರಪಟ್ಟಿಕೆಯ ಆಧಾರದ ಮೇಲೆ ಸಂದಾಯ ಮಾಡಬೇಕಾದ ಸ್ವತ್ತು ತೆರಿಗೆಯ ಪೂರ್ಣ ಮೊಬಲಗನ್ನು ಮುಂಗಡವಾಗಿ ಪಾವತಿ ಮಾಡತಕ್ಕದ್ದು ಮತ್ತು ಅಂಥ ತೆರಿಗೆಯನ್ನು ಸಂದಾಯ ಮಾಡಿದ್ದಕ್ಕೆ ತೃಪ್ತಿಕರ ರುಜುವಾತನ್ನು ವಿವರ ಪಟ್ಟಿಕೆಯ ಜೊತೆಯಲ್ಲಿ ಒದಗಿಸತಕ್ಕದ್ದು ಮತ್ತು ಈ ಅಧಿನಿಯಮದ ಉದ್ದೇಶಗಳಿಗಾಗಿ ಹಾಗೆ ಸಂದಾಯ ಮಾಡಬೇಕಾದ ತೆರಿಗೆಯನ್ನು, VII -ನೇ ಅಧ್ಯಾಯದ ಉದ್ದೇಶಕ್ಕಾಗಿ ಅಂಥ ಮಾಲೀಕನಿಂದ ಅಥವಾ ಅಧಿಭೋಗದಾರನಿಂದ ಬಾಕಿ ಇರುವ ಸ್ವತ್ತು ತೆರಿಗೆ ಎಂಬುದಾಗಿ ಭಾವಿಸತಕ್ಕದ್ದು. ಅಂತಿಮ ನಿರ್ಧರಣೆಯನ್ನು ಮಾಡಿದ ತರುವಾಯ, ಹಾಗೆ ಸಂದಾಯ ಮಾಡಲಾದ ಸ್ವತ್ತು ತೆರಿಗೆಯ ಮೊಬಲಗನ್ನು, ಅಂತಿಮವಾಗಿ ತೆರಿಗೆ ನಿರ್ಧರಣೆ ಮಾಡಿದ ಸ್ವತ್ತು ತೆರಿಗೆಯ ಸಂಬಂಧದಲ್ಲಿ ಸಂದಾಯ ಮಾಡಲಾಗಿದೆಯೆಂದು ಭಾವಿಸತಕ್ಕದ್ದು.

(3) ಉಪಪ್ರಕರಣ (1)ರ ಮೇರೆಗೆ ಸಲ್ಲಿಸಿದ ಯಾವುದೇ ವಿವರ ಪಟ್ಟಿಕೆಯು ಸರಿಯಾಗಿದೆ ಮತ್ತು ಪೂರ್ಣವಾಗಿದೆಯೆಂದು ಮುನ್ಸಿಪಲ್ ಕಮಿಷನರ್ ನಿಗೆ ಸಂದರ್ಭಾನುಸಾರ ಮುಖ್ಯಾಧಿಕಾರಿಗೆ ಅಥವಾ ಪ್ರಾಧಿಕೃತ ಅಧಿಕಾರಿಗೆ ಮನದಟ್ಟಾದರೆ, ಅವನು ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಉಪಬಂಧಗಳಿಗೆ ಅನುಸಾರವಾಗಿ ಸ್ವತ್ತು ತೆರಿಗೆಯ ನಿರ್ಧರಣೆ ಮಾಡತಕ್ಕದ್ದು ಮತ್ತು ಸಂಬಂಧಪಟ್ಟ ಮಾಲೀಕನಿಗೆ ಅಥವಾ ಅಧಿಭೋಗದಾರನಿಗೆ ತೆರಿಗೆ ನಿರ್ಧರಣೆಯ ಆದೇಶದ ಪ್ರತಿಯನ್ನು ಕಳುಹಿಸತಕ್ಕದ್ದು. ಈ ಉಪಪ್ರಕರಣದ ಮೇರೆಗಿನ ತೆರಿಗೆ ನಿರ್ಧರಣೆಯನ್ನು, (1)ನೇ ಉಪಪ್ರಕರಣದ ಮೇರೆಗೆ ವಿವರ ಪಟ್ಟಿಕೆಯನ್ನು ಸಲ್ಲಿಸಿದ ದಿನಾಂಕದಿಂದ ಒಂದು ವರ್ಷದೊಳಗೆ ಮಾಡಿ ಮುಗಿಸತಕ್ಕದ್ದು.

[1][ಈ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, (1)ನೇ ಉಪಪ್ರಕರಣದಡಿಯಲ್ಲಿ ಸಲ್ಲಿಸಲಾದ ಯಾವುದೇ ವಿವರಪಟ್ಟಿಕೆಗಾಗಿ 2023-24ರ ಆರ್ಥಿಕ ವರ್ಷದ ಪ್ರಾರಂಭದಿಂದ ಹಿಂದಿನ ಆರು ಆರ್ಥಿಕ ವರ್ಷಗಳಿಗಾಗಿ ಈ ಉಪಪ್ರಕರಣದಡಿಯಲ್ಲಿ ಮಾಡಲಾದ ನಿರ್ಧರಣೆಯನ್ನು ಒಂದು ವರ್ಷದೊಳಗಾಗಿ ನಿರ್ಣಯಿಸತಕ್ಕದ್ದು.][1]

1. 2024ರ ಅಧಿನಿಯಮ 43ರ ಮೂಲಕ ದಿ:10.09.2024 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(4) ಯಾರೇ ಮಾಲೀಕನು ಅಥವಾ ಅಧಿಭೋಗದಾರನು (1)ನೇ ಉಪಪ್ರಕರಣದ ಮೇರೆಗೆ ಅಗತ್ಯಪಡಿಸಲಾದಂತೆ ವಿವರಪಟ್ಟಿಕೆಯನ್ನು ಸಲ್ಲಿಸಲು ವಿಫಲನಾದರೆ [1][ಅಥವಾ (2)ನೇ ಉಪಪ್ರಕರಣದ ಮೇರೆಗೆ ಅಗತ್ಯಪಡಿಸಲಾದಂತೆ ಸ್ವತ್ತು ತೆರಿಗೆಯ ಪೂರ್ಣ ಮೊಬಲಗನ್ನು ಮುಂಗಡವಾಗಿ ಸಂದಾಯ ಮಾಡಲು ವಿಫಲನಾದರೆ][1] ಅಥವಾ ಅಪೂರ್ಣವಾದ ಅಥವಾ ಸರಿಯಲ್ಲದ ವಿವರ ಪಟ್ಟಿಕೆಯನ್ನು ಸಲ್ಲಿಸಿದರೆ, ಮುನ್ಸಿಪಲ್ ಕಮಿಷನರ್ ಅಥವಾ

ಸಂದರ್ಭಾನುಸಾರ ಮುಖ್ಯಾಧಿಕಾರಿಯು ಅಥವಾ ಪ್ರಾಧಿಕೃತ ಅಧಿಕಾರಿಯು [2][ಖಾಲಿಭೂಮಿಯ ಮತ್ತು ಕಟ್ಟಡದ][2] ಪರಿವೀಕ್ಷಣೆಯನ್ನು ಮಾಡಿಸತಕ್ಕದ್ದು ಮತ್ತು ಅವಶ್ಯವೆಂದು ಭಾವಿಸುವಂಥ ಸ್ಥಳೀಯ ವಿಚಾರಣೆ ಮಾಡಿಸತಕ್ಕದ್ದು ಮತ್ತು ಅಂಥ ಪರಿವೀಕ್ಷಣೆಯ ಹಾಗೂ ಸಂಗ್ರಹಿಸಿದ ಮಾಹಿತಿಯ ಆಧಾರದ ಮೇಲೆ ಆತನು ಸ್ವತ್ತು ತೆರಿಗೆಯ ನಿರ್ಧರಣೆ ಮಾಡತಕ್ಕದ್ದು ಮತ್ತು ಸಂಬಂಧಪಟ್ಟ ಮಾಲೀಕನಿಗೆ ಅಥವಾ ಅಧಿಭೋಗದಾರನಿಗೆ ತೆರಿಗೆ ನಿರ್ಧರಣೆಯ ಆದೇಶದ ಪ್ರತಿಯನ್ನು ಕಳುಹಿಸತಕ್ಕದ್ದು.

1. 2003ರ ಅಧಿನಿಯಮ 31ರ ಮೂಲಕ 16.6.2003 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 2003ರ ಅಧಿನಿಯಮ 31ರ ಮೂಲಕ 16.06.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(5) ಉಪಪ್ರಕರಣ (3) ಅಥವಾ (4)ರ ಮೇರೆಗೆ ಸ್ವತ್ತು ತೆರಿಗೆ ನಿರ್ಧರಣೆಯನ್ನು ಮಾಡುವಾಗ, ಮುನ್ಸಿಪಲ್ ಕಮಿಷನರ್ ಅಥವಾ ಸಂದರ್ಭಾನುಸಾರ ಮುಖ್ಯ ಅಧಿಕಾರಿಯು ಅಥವಾ ಪ್ರಾಧಿಕೃತ ಅಧಿಕಾರಿಯು, ಮಾಲೀಕನಿಗೆ ಅಥವಾ ಅಧಿಭೋಗದಾರನಿಗೆ ನಿರ್ಧರಣೆ ಮಾಡಲಾದ ಸ್ವತ್ತು ತೆರಿಗೆಗೆ ಹೆಚ್ಚಿಗೆಯಾಗಿ,-

[1][(ಎ) ಬಾಕಿ ಇರುವ ಸ್ವತ್ತು ತೆರಿಗೆಯ ಮೊಬಲಗನ್ನು ಪಾವತಿ ಮಾಡಲು ಮತ್ತು ವಿವರ ಪಟ್ಟಿಕೆಯನ್ನು ಸಲ್ಲಿಸಲು ತಪ್ಪಿದ ಸಂದರ್ಭದಲ್ಲಿ, ನಿರ್ಧರಿಸಿದ ಮತ್ತು ಬಾಕಿ ಇರುವ ಸ್ವತ್ತು ತೆರಿಗೆಯ ಮೊಬಲಗಿನ ಮೇಲೆ ಪ್ರತಿ ತಿಂಗಳಿಗೆ ಶೇಕಡಾ ಎರಡರ ದರದಲ್ಲಿ;][1]

1. 2003 ರ ಅಧಿನಿಯಮ ಸಂಖ್ಯೆ 31 ರ ಮೂಲಕ 16.6.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಬಿ) ಗೊತ್ತಿದ್ದೂ ಅಪೂರ್ಣವಾದ ಅಥವಾ ಸರಿಯಾಗಿಲ್ಲದ ವಿವರಪಟ್ಟಿಕೆಯನ್ನು ಸಲ್ಲಿಸಿದ ಸಂದರ್ಭದಲ್ಲಿ, ನಿರ್ಧರಣೆ ಮಾಡಿದ ಸ್ವತ್ತು ತೆರಿಗೆಯ ಮತ್ತು ವಿವರ ಪಟ್ಟಿಕೆಯೊಂದಿಗೆ ಪಾವತಿ ಮಾಡಿದ ಸ್ವತ್ತು ತೆರಿಗೆಯ ವ್ಯತ್ಯಾಸದ ಮೊಬಲಗಿನ ಎರಡರಷ್ಟನ್ನು ಮೀರದಂತೆ;

[1][(ಸಿ) ಸ್ವತ್ತು ತೆರಿಗೆಯ ಪೂರ್ಣ ಮೊಬಲಗನ್ನು ಪಾವತಿ ಮಾಡಿದ ತರುವಾಯ ವಿವರಪಟ್ಟಿಕೆಯನ್ನು ಸಲ್ಲಿಸಲು ವಿಫಲನಾದ ಸಂದರ್ಭದಲ್ಲಿ ಒಂದು ನೂರು ರೂಪಾಯಿಗಳು][1]

- ದಂಡವನ್ನು ಪಾವತಿ ಮಾಡುವಂತೆ ಸಹ ನಿರ್ದೇಶಿಸಬಹುದು.

1. 2003 ರ ಅಧಿನಿಯಮ 31 ರ ಮೂಲಕ 16.6.2003 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(6) ನಿರ್ಧರಣೆ ಮಾಡಿದ ಸ್ವತ್ತು ತೆರಿಗೆ ಮತ್ತು ವಿಧಿಸಿದ ದಂಡ ಯಾವುದಾದರೂ ಇದ್ದರೆ, ಅದನ್ನು ಮಾಲೀಕನು ಅಥವಾ ಅಧಿಭೋಗದಾರನು ಒಪ್ಪಿಕೊಳ್ಳಬಹುದು ಅಥವಾ (3) ಅಥವಾ (4)ನೇ ಉಪ ಪ್ರಕರಣದ ಮೇರೆಗೆ ಹೊರಡಿಸಿದ ಆದೇಶದ ಪ್ರತಿಯನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗೆ ಮುನಿಸಿಪಲ್ ಕಮಿಷನರ್ ಗೆ ಅಥವಾ ಸಂದರ್ಭಾನುಸಾರ ಮುಖ್ಯಾಧಿಕಾರಿಗೆ ಅಥವಾ ಪ್ರಾಧಿಕೃತ ಅಧಿಕಾರಿಗೆ ಆಕ್ಷೇಪಣೆಗಳನ್ನು ಸಲ್ಲಿಸಬಹುದು.

(7) ಮುನ್ಸಿಪಲ್ ಕಮಿಷನರ್ ಅಥವಾ ಸಂದರ್ಭಾನುಸಾರ ಮುಖ್ಯಾಧಿಕಾರಿಯು ಅಥವಾ ಪ್ರಾಧಿಕೃತ ಅಧಿಕಾರಿಯು ಆಕ್ಷೇಪಣೆಗಳನ್ನು ಪರಿಗಣಿಸತಕ್ಕದ್ದು ಮತ್ತು ಅಂಥ ತೆರಿಗೆ ನಿರ್ಧರಣೆಯನ್ನು ಮತ್ತು ದಂಡ ಯಾವುದಾದರೂ ಇದ್ದರೆ ಅದನ್ನು ಸ್ಥಿರೀಕರಿಸಿರುವ ಅಥವಾ ಪರಿಷ್ಕರಿಸಿರುವ ಆಕ್ಷೇಪಣೆಗಳನ್ನು ಸಲ್ಲಿಸಿದ ದಿನಾಂಕದಿಂದ ಅರವತ್ತು ದಿನಗಳ ಅವಧಿಯೊಳಗೆ, ಆದೇಶವನ್ನು ಹೊರಡಿಸತಕ್ಕದ್ದು ಮತ್ತು ಆದೇಶದ ಪ್ರತಿಯನ್ನು ಸಂಬಂಧಪಟ್ಟ ಮಾಲೀಕನಿಗೆ ಅಥವಾ ಅಧಿಭೋಗದಾರನಿಗೆ ಕಳುಹಿಸತಕ್ಕದ್ದು.

(8) ಸ್ವತ್ತಿನ ತೆರಿಗೆಯನ್ನು ಮೂಲತಃ ಹೊಣೆಗಾರನಾದ ವ್ಯಕ್ತಿಯು ಪ್ರತಿವರ್ಷ ಪ್ರಾರಂಭವಾದ ನಂತರದ ತೊಂಬತ್ತು ದಿನಗಳೊಳಗಾಗಿ ಸಂದಾಯ ಮಾಡತಕ್ಕದ್ದು. [1][ಸಂದಾಯದ ಹೊಣೆಗಾರನಾದ ವ್ಯಕ್ತಿಯು ಸಂದಾಯ ಮಾಡುವಲ್ಲಿ ವಿಫಲನಾದರೆ, ಅವಧಿಯು ಮುಕ್ತಾಯಗೊಂಡ ತರುವಾಯ ಸಂದಾಯ ಮಾಡದೆ ಉಳಿದಿರುವ ತೆರಿಗೆಯ ಮೊತ್ತದ ಶೇಕಡಾ ಎರಡರ ದರದಲ್ಲಿ ದಂಡವನ್ನು ಪ್ರತಿ ತಿಂಗಳು ಸಂದಾಯ ಮಾಡತಕ್ಕದ್ದು.][1]

[2][ಪರಂತು, 2020-21ನೇ ಹಣಕಾಸು ವರ್ಷಕ್ಕಾಗಿ, ಆಸ್ತಿ ತೆರಿಗೆಯನ್ನು ಪಾವತಿಸಲು ಮೂಲತಃ ಹೊಣೆಗಾರನಾಗಿರುವ ವ್ಯಕ್ತಿಯು ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (ಎರಡನೇ ತಿದ್ದುಪಡಿ) ಅಧಿನಿಯಮ, 2021ರ ಪ್ರಾರಂಭದ ದಿನಾಂಕದ ತರುವಾಯ ಒಂದು ತಿಂಗಳ ಒಳಗಾಗಿ ಅದನ್ನು ಪಾವತಿಸತಕ್ಕದ್ದು.][2]

1. 2003 ರ ಅಧಿನಿಯಮ 31 ರ ಮೂಲಕ 16.6.2003 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2.2021ರ ಅಧಿನಿಯಮ 07ರ ಮೂಲಕ 19.02.2021ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(9) ಯಾವುದೇ [1][ಕಟ್ಟಡದ ಅಥವಾ ಖಾಲಿ ಭೂಮಿಯ][1] ಮಾಲೀಕನು ಅಥವಾ ಅಧಿಭೋಗದಾರನು ವಿವರ ಪಟ್ಟಿಕೆಯನ್ನು ಸಲ್ಲಿಸಲು ಮತ್ತು ಈ ಪ್ರಕರಣದ ಮೇರೆಗೆ ಸ್ವತ್ತು ತೆರಿಗೆ ನಿರ್ಧರಣೆಗೆ ಅನುಕೂಲ ಕಲ್ಪಿಸುವುದಕ್ಕಾಗಿ, ತೆರಿಗೆಗೆ ಗುರಿಯಾಗತಕ್ಕ ಸ್ವತ್ತಿನ ಬಂಡವಾಳ ಮೌಲ್ಯವನ್ನು ಮತ್ತು ಅದರ ಮೇಲೆ ಸಂದಾಯ ಮಾಡಬೇಕಾದ ಸ್ವತ್ತು ತೆರಿಗೆಯನ್ನು ನಿರ್ಧರಿಸುವುದಕ್ಕಾಗಿ ಮುನ್ಸಿಪಲ್ ಕೌನ್ಸಿಲ್ ಕಾಲಕಾಲಕ್ಕೆ ಮಾರ್ಗಸೂಚಿಗಳನ್ನು ಹೊರಡಿಸತಕ್ಕದ್ದು.

1. 2003 ರ ಅಧಿನಿಯಮ 31 ರ ಮೂಲಕ 16.6.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

106. ಸ್ವತ್ತು ತೆರಿಗೆಯ ರಿಜಿಸ್ಟರನ್ನು ಸಿದ್ಧಪಡಿಸುವುದು ಮತ್ತು ಪ್ರಕಟಿಸುವುದು.- (1) ಮುನಿಸಿಪಲ್ ಏರಿಯಾ ಇರುವ [1][ಕಟ್ಟಡಗಳು ಅಥವಾ [2][ಖಾಲಿ ಕಟ್ಟಡ ನಿವೇಶನಗಳು][2]][1] ಅಥವಾ ಅವೆರಡರ ಸಂಬಂಧದಲ್ಲಿ ಅಂಥ ವಿವರಗಳನ್ನೊಳಗೊಂಡ ಸ್ವತ್ತು ತೆರಿಗೆಯ ರಿಜಿಸ್ಟರನ್ನು ಸಿದ್ಧಪಡಿಸತಕ್ಕದ್ದು ಮತ್ತು ನಿಯಮಿಸಬಹುದಾದಂಥ ರೀತಿಯಲ್ಲಿ ಪರಿಷ್ಕರಿಸತಕ್ಕದ್ದು.

[3][(1ಎ) (i) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಕಟ್ಟಡ ನಿರ್ಮಾಣದ ಉದ್ದೇಶಗಳಿಗಾಗಿ ಇರುವ ಕಟ್ಟಡ ನಿವೇಶನಗಳಿಗೆ ಹೊಸ PID (ಸ್ವತ್ತು ಗುರುತಿನ ಸಂಖ್ಯೆ) ಅಥವಾ ಖಾತಾ ನೀಡಲು ಅಧಿಕಾರ ವ್ಯಾಪ್ತಿಯ ಯೋಜನಾ ಪ್ರಾಧಿಕಾರವು ಲೇಔಟ್ ಪ್ಲಾನಿಗಾಗಿ ಪೂರ್ವಾನುಮತಿಯನ್ನು ಆಯುಕ್ತ ಅಥವಾ ಪುರಸಭೆಯ ಮುಖ್ಯಾಧಿಕಾರಿ ಅಥವಾ ಆಯುಕ್ತನಿಂದ ಅಧಿಕೃತಗೊಳಿಸಲಾದ ಯಾರೇ ಅಧಿಕಾರಿ ಅಥವಾ ಮುಖ್ಯಾಧಿಕಾರಿಯಿಂದ ಪಡೆಯತಕ್ಕದ್ದು.

(ii) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರಡಿಯಲ್ಲಿ ಅಧಿಸೂಚಿಸಲಾದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಒಳಪಡುವ ಪೌರ ಪ್ರದೇಶಗಳ ಸಂದರ್ಭದಲ್ಲಿ, ಮಂಜೂರಾದ ಲೇಔಟ್ ಪ್ಲಾನನ್ನು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರ 17ನೇ ಪ್ರಕರಣದಡಿ ಅಧಿಕಾರವ್ಯಾಪ್ತಿಯ ಯೋಜನಾ ಪ್ರಾಧಿಕಾರದಿಂದ ಪಡೆಯತಕ್ಕದ್ದು ಹಾಗೂ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರ 17ನೇ ಪ್ರಕರಣದ ಮತ್ತು 17ನೇ ಪ್ರಕರಣದ ಉಪಪ್ರಕರಣ (2-ಇ) ಉಪಬಂಧಗಳನ್ನು ಅನುಸರಿಸದೆ ಯಾವುದೇ ಹೊಸ ಪಿಐಡಿ ಅಥವಾ ಖಾತಾವನ್ನು ನೀಡತಕ್ಕದ್ದಲ್ಲ.

(iii) ಸ್ಥಳೀಯ ಯೋಜನಾ ಪ್ರದೇಶದ ಅಥವಾ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರಡಿಯಲ್ಲಿ ರಚಿಸಲಾದ ಯೋಜನಾ ಪ್ರಾಧಿಕಾರದ ವ್ಯಾಪ್ತಿಗೆ ಒಳಪಡದಿರುವ ಪೌರ ಪ್ರದೇಶದ ಸಂದರ್ಭದಲ್ಲಿ, ಮಂಜೂರಾದ ಲೇಔಟ್ ಪ್ಲಾನ್ ಅನ್ನು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರ 4-ಕೆ ಪ್ರಕರಣದ (2)ನೇ ಉಪಪ್ರಕರಣದಡಿಯಲ್ಲಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕ ಅಥವಾ ಆತನು ಅಧಿಕೃತಗೊಳಿಸಿದ ಅಧಿಕಾರಿಯಿಂದ ಪಡೆಯತಕ್ಕದ್ದು ಹಾಗೂ ಸಂಬಂಧಪಟ್ಟ ಅಧಿಕಾರಿಯು, ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರ ಉಪಬಂಧಗಳನ್ನು ಅನುಸರಿಸದೆ ಯಾವುದೇ ಹೊಸ ಪಿಐಡಿ ಅಥವಾ ಖಾತಾವನ್ನು ನೀಡತಕ್ಕದ್ದಲ್ಲ:

ಪರಂತು, ಪುರಸಭೆಯ ಯಾರೇ ಅಧಿಕಾರಿಯು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರ ಉಪಬಂಧಗಳನ್ನು

ಅನುಸರಿಸಲು ವಿಫಲನಾದರೆ ಮತ್ತು ಕಾನೂನುಬಾಹಿರವಾಗಿ ರಚಿತವಾದ ಪ್ಲಾಟ್‌ಗೆ ಹೊಸ ಪಿಐಡಿ ಅಥವಾ ಖಾತಾವನ್ನು ನೀಡಿದರೆ, ಸಂಬಂಧಪಟ್ಟ ಅಧಿಕಾರಿಯು ನಿಯಮಿಸಬಹುದಾದಂಥ ದಂಡನೆ ಮತ್ತು ಶಿಕ್ಷೆಗೆ ಹೊಣೆಗಾರನಾಗತಕ್ಕದ್ದು.

(1ಬಿ) (i) ಪುರಸಭೆಯು, ಸರ್ಕಾರಿ ಭೂಮಿಯಲ್ಲಿ, ಯಾವುದೇ ಸ್ಥಳೀಯ ಸಂಸ್ಥೆಗೆ, ಯಾವುದೇ ಶಾಸನಬದ್ಧ ಸಂಸ್ಥೆಗೆ ಅಥವಾ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಒಂದು ಸಂಘ ಸಂಸ್ಥೆಗೆ ಸೇರಿದ ಭೂಮಿಯಲ್ಲಿ, ಕಾನೂನು ಬಾಹಿರವಾಗಿ ನಿರ್ಮಿಸಿದ ಕಟ್ಟಡವನ್ನು ಹೊರತುಪಡಿಸಿ, ಕಟ್ಟಡ ಉಪ ವಿಧಿಗಳು ಉಪಬಂಧಗಳನ್ನು ಉಲ್ಲಂಘಿಸಿ ಕಟ್ಟಿರುವ ಅಥವಾ ಅನಧಿಕೃತ ಲೇಔಟ್‌ನಲ್ಲಿ ಅಥವಾ ರೆವಿನ್ಯೂ ಭೂಮಿಯಲ್ಲಿ ಕಟ್ಟಿರುವ ಕಟ್ಟಡವು ಸೇರಿದಂತೆ ಪ್ರತಿಯೊಂದು ಕಟ್ಟಡಕ್ಕೆ, ಖಾಲಿ ಭೂಮಿಗೆ ಅಥವಾ ಅವೆರಡನ್ನೂ ಒಳಗೊಂಡು ಅಥವಾ ಈ ಉಪಬಂಧದ ಪ್ರಾರಂಭದ ದಿನಾಂಕಕ್ಕೂ ಮೊದಲು ಸೃಜಿಸಿದ ಸ್ವತ್ತಿಗಾಗಿ ಮಾತ್ರ ಅಧಿಭೋಗ ಪ್ರಮಾಣ ಪತ್ರ ಅಥವಾ ಕಟ್ಟಡ ನಿರ್ಮಾಣ ಮುಕ್ತಾಯ ಪ್ರಮಾಣಪತ್ರವನ್ನು ನೀಡದೆಯೇ ವಾಸಕ್ಕೆ ಬಳಸುತ್ತಿರುವ ಕಟ್ಟಡಕ್ಕೆ ಮೊದಲ ವರ್ಷಕ್ಕಾಗಿ ಎರಡು ಪಟ್ಟು ಸ್ವತ್ತು ತೆರಿಗೆಯನ್ನು ವಿಧಿಸಬಹುದು ಮತ್ತು ನಂತರದ ವರ್ಷಗಳಿಗೆ ಸ್ವತ್ತು ತೆರಿಗೆಯನ್ನು ಮಾತ್ರ ವಿಧಿಸತಕ್ಕದ್ದು, ಅದನ್ನು ಒಂದು ಪ್ರತ್ಯೇಕ ರಿಜಿಸ್ಟರಿನಲ್ಲಿ ನಿರ್ವಹಿಸತಕ್ಕದ್ದು. ಕರ್ನಾಟಕ ಮುನಿಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2024ರ ಪ್ರಾರಂಭದ ದಿನಾಂಕದ ತರುವಾಯ ಆ ರಿಜಿಸ್ಟರಿನಲ್ಲಿ ಹೊಸ ಸ್ವತ್ತುಗಳನ್ನು ಸೇರಿಸತಕ್ಕದ್ದಲ್ಲ:

ಪರಂತು, ಈ ಉಪ-ಪ್ರಕರಣದ ಮೇರೆಗೆ ಅಂಥ ಕಟ್ಟಡಗಳಿಗೆ ಅಥವಾ ಖಾಲಿ ಭೂಮಿಗಳಿಗೆ ಸ್ವತ್ತು ತೆರಿಗೆಯನ್ನು ವಿಧಿಸುವುದು ಮತ್ತು ಅದನ್ನು ವಸೂಲು ಮಾಡುವುದು, ಮಾಡಿದ ಯಾವುದೇ ಉಲ್ಲಂಘನೆಯನ್ನು ಸಕ್ರಮಗೊಳಿಸಲು ಯಾವುದೇ ಹಕ್ಕನ್ನಾಗಲಿ ಅಥವಾ ಅಂಥ ಕಟ್ಟಡಕ್ಕೆ ಅಥವಾ ಖಾಲಿ ಭೂಮಿಗೆ ಹಕ್ಕುಸ್ವಾಮ್ಯ, ಒಡೆತನ ಅಥವಾ ಕಾನೂನಿನ ಸ್ಥಾನಮಾನವನ್ನಾಗಲಿ ದೊರಕಿಸಿ ಕೊಡುವುದಿಲ್ಲ. ಅಂಥ ಕಟ್ಟಡಗಳು ಅಥವಾ ಖಾಲಿ ಭೂಮಿಗಳು ಕಾನೂನಿನ ಉಲ್ಲಂಘನೆಗಾಗಿ ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳನ್ವಯ ಯಾವುದೇ ಕಾನೂನು ಕ್ರಮಕ್ಕೆ ಗುರಿಯಾಗಲು ಯಾವಾಗಲೂ ಬದ್ಧವಾಗಿರತಕ್ಕದ್ದು.

(ii) ಪೌರ ಆಯುಕ್ತ ಅಥವಾ ಮುಖ್ಯಾಧಿಕಾರಿಯು (i)ನೇ ಖಂಡದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ದಾಖಲೆಯನ್ನು ನಿರ್ವಹಿಸತಕ್ಕದ್ದು, ಅದು ಈ ಪ್ರಕರಣದಡಿ ತೆರಿಗೆಗೆ ಒಳಪಡಿಸಿದ ಕಾನೂನುಬದ್ಧ ಕಟ್ಟಡಗಳು ಅಥವಾ ಖಾಲಿ ಭೂಮಿಗಳ ಹಾಗೂ ಕಾನೂನುಬದ್ಧವಲ್ಲದ ಕಟ್ಟಡಗಳು ಅಥವಾ ಖಾಲಿ ಭೂಮಿಗಳ ವಿವರಗಳನ್ನು ಒಳಗೊಂಡಿರತಕ್ಕದ್ದು.][3]

1.2003ರ ಅಧಿನಿಯಮ 31ರ ಮೂಲಕ 19.11.2001ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 2024ರ ಅಧಿನಿಯಮ 43ರ ಮೂಲಕ ದಿ:10.09.2024 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

3. 2024ರ ಅಧಿನಿಯಮ 43ರ ಮೂಲಕ ದಿ:10.09.2024 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(2) xxx][1]

1. 2003ರ ಅಧಿನಿಯಮ 31ರ ಮೂಲಕ 20.08.2003 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(3) ಅಧಿಕೃತ ಅಧಿಕಾರಿಯು, ಯಾರೇ ವ್ಯಕ್ತಿಯು ಸಲ್ಲಿಸಿದ ಅರ್ಜಿಯ ಮೇಲೆ ಮತ್ತು ಮುನ್ಸಿಪಲ್ ಕೌನ್ಸಿಲ್ ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದ ಅಂಥ ಶುಲ್ಕವನ್ನು ಪಾವತಿ ಮಾಡುವುದಕ್ಕೊಳಪಟ್ಟು, ವ್ಯಕ್ತಿಗೆ ಅಂಥ ಸೂಕ್ತ ಸಮಯದಲ್ಲಿ ಸ್ವತ್ತು ತೆರಿಗೆಯ ರಿಜಿಸ್ಟರನ್ನು

ಪರಿಶೀಲಿಸಲು ಅನುಮತಿ ನೀಡಬಹುದು ಅಥವಾ ರಿಜಿಸ್ಟರಿನಲ್ಲಿ ಮಾಡಿದ ನಮೂದುಗಳ ಪ್ರಮಾಣೀಕೃತ ಉದ್ಧೃತ ಪ್ರತಿಯನ್ನು ಅಥವಾ ಅದರ ಪ್ರಮಾಣಿತ ಪ್ರತಿಗಳನ್ನು ನೀಡಬಹುದು.

[1][107. XXX][1]

1. 2024ರ ಅಧಿನಿಯಮ 43ರ ಮೂಲಕ ದಿ:10.09.2024 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

107ಎ. ಭೂಮಿಗಳ ಮತ್ತು ಕಟ್ಟಡಗಳ ಸರ್ವೇ ಮಾಡುವುದು ಮತ್ತು ಸ್ವತ್ತು ರಿಜಿಸ್ಟರನ್ನು ಸಿದ್ಧಪಡಿಸುವುದು.- (1) ಮುನ್ಸಿಪಲ್ ಕಮಿಷನರ್ ಅಥವಾ ಸಂದರ್ಭಾನುಸಾರ ಮುಖ್ಯಾಧಿಕಾರಿಯು ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೊಳಪಟ್ಟು, ಸ್ವತ್ತು ತೆರಿಗೆಯ ನಿರ್ಧರಣೆಯ ದೃಷ್ಟಿಯಿಂದ, ಮುನ್ಸಿಸಿಪಲ್ ಕೌನ್ಸಿಲ್‌ದೊಳಗಿನ [1][ಕಟ್ಟಡಗಳ ಅಥವಾ ಖಾಲಿಭೂಮಿಯ ಅಥವಾ ಅವೆರಡರನ್ನು][1] ಸರ್ವೇ ಮಾಡಲು ನಿರ್ದೇಶಿಸತಕ್ಕದ್ದು ಮತ್ತು ಹಾಗೇ ಸರ್ವೇ ಮಾಡಲು ಮತ್ತು ಸ್ವತ್ತು ರಿಜಿಸ್ಟರನ್ನು ಸಿದ್ಧಪಡಿಸಲು ಯಾರೇ ಅರ್ಹ ವ್ಯಕ್ತಿಯ ಅಥವಾ ಏಜೆನ್ಸಿಯ ಸೇವೆಗಳನ್ನು ಪಡೆಯಬಹುದು.

1.2003ರ ಅಧಿನಿಯಮ 31ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಸ್ವತ್ತು ರಿಜಿಸ್ಟರನ್ನು [1][ಕಟ್ಟಡಗಳ ಅಥವಾ ಖಾಲಿಭೂಮಿಗಳ ಅಥವಾ ಅವೆರಡರ][1] ಸಂಬಂಧದಲ್ಲಿ ನಿರ್ದಿಷ್ಟಪಡಿಸಿದಂಥ ರೀತಿಯಲ್ಲಿ ಮತ್ತು ಅಂಥ ವಿವರಗಳನ್ನು ಒಳಗೊಂಡಂತೆ ನಿರ್ವಹಿಸತಕ್ಕದ್ದು.

1.2003ರ ಅಧಿನಿಯಮ 31ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) ಯಾವುದೇ ಕಟ್ಟಡಗಳಿಗೆ ಅಥವಾ ಭೂಮಿಗಳಿಗೆ ಅಥವಾ ಅವೆರಡಕ್ಕೂ ಸಂಬಂಧಿಸಿದಂತೆ ಸ್ವತ್ತು ರಿಜಿಸ್ಟರನ್ನು ಸಿದ್ಧಪಡಿಸುವ ಅಥವಾ ಸ್ವತ್ತು ತೆರಿಗೆಯ ನಿರ್ಧರಣೆಯ ಉದ್ದೇಶಕ್ಕಾಗಿ, ಮುನ್ಸಿಪಲ್ ಕಮಿಷನರ್ ಅಥವಾ ಸಂದರ್ಭಾನುಸಾರ ಮುಖ್ಯಾಧಿಕಾರಿ ಅಥವಾ ಈ ಸಂಬಂಧದಲ್ಲಿ ಅವನಿಂದ ಪ್ರಾಧಿಕೃತನಾದ ಯಾರೇ ವ್ಯಕ್ತಿಯು, ಅಂಥ ಪರಿವೀಕ್ಷಣೆ ಮಾಡುವುದಕ್ಕೂ ಮೊದಲು ಮಾಲೀಕನಿಗೆ ಅಥವಾ ಅಧಿಭೋಗದಾರನಿಗೆ ನೋಟೀಸನ್ನು ಕೊಟ್ಟ ತರುವಾಯ, ಯಾವುದೇ [2][ಖಾಲಿಭೂಮಿಯನ್ನು ಅಥವಾ ಕಟ್ಟಡವನ್ನು][2] ಪ್ರವೇಶಿಸಬಹುದು, ಪರಿವೀಕ್ಷಣೆ ಮಾಡಬಹುದು, ಸರ್ವೇ ಮಾಡಬಹುದು ಅಥವಾ ಅಳತೆ ಮಾಡಬಹುದು ಮತ್ತು ಮಾಲೀಕನು ಅಥವಾ ಅಧಿಭೋಗದಾರನು, ಈ ಉದ್ದೇಶಕ್ಕಾಗಿ ಅಗತ್ಯಪಡಿಸಿದ ಅವಶ್ಯಕ ಮಾಹಿತಿಯನ್ನು ಒದಗಿಸಲು ಬದ್ಧನಾಗಿರತಕ್ಕದ್ದು:][1]

1.2001ರ ಅಧಿನಿಯಮ 28ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ 105 ರಿಂದ 107 ಪ್ರಕರಣಗಳನ್ನು ಪ್ರತಿಯೋಜಿಸಲಾಗಿದೆ ಮತ್ತು 107ಎ ಪ್ರಕರಣವನ್ನು ಸೇರಿಸಲಾಗಿದೆ.

2.2003ರ ಅಧಿನಿಯಮ 31ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

108. ಕಟ್ಟಡವನ್ನು ಕೆಡವಲು ಅಥವಾ ತೆಗೆದುಹಾಕಲು ಮುನ್ಸಿಪಲ್ ಕೌನ್ಸಿಲ್‌ಗೆ ನೋಟೀಸನ್ನು ಕೊಡತಕ್ಕದ್ದು.- (1) [1][ಸ್ವತ್ತು ತೆರಿಗೆ][1] ಸಂದಾಯಕ್ಕೆ ಹೊಣೆಯಾಗಿರುವ ಯಾವುದೇ ಕಟ್ಟಡ ಅಥವಾ ಕಟ್ಟಡದ ಯಾವುದೇ ಭಾಗವು, ಮುನ್ಸಿಪಲ್ ಕೌನ್ಸಿಲ್‌ನ ಆದೇಶದಿಂದಲ್ಲದೆ ಅನ್ಯಥಾ, ಕೆಡವಿದಾಗ ಅಥವಾ ತೆಗೆದು ಹಾಕಿದಾಗ [2][ಕಟ್ಟಡಗಳು ಅಥವಾ ಭೂಮಿಗಳು][2] ಅಥವಾ ಅವರೆಡರ ಮೇಲಿನ ತೆರಿಗೆಯನ್ನು, ಸದರಿ ತೆರಿಗೆಯ ಸಂದಾಯಕ್ಕೆ ಮುಖ್ಯವಾಗಿ ಹೊಣೆಯಾಗಿರುವ ವ್ಯಕ್ತಿಯು, ಅದರ ಬಗ್ಗೆ ಲಿಖಿತದಲ್ಲಿ ನೋಟೀಸನ್ನು ಮುನಿಸಿಪಲ್ ಕೌನ್ಸಿಲ್‌ಗೆ ಕೊಡತಕ್ಕದ್ದು.

1. 2001ರ ಅಧಿನಿಯಮ 28ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 2003ರ ಅಧಿನಿಯಮ 31ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಅಂಥ ನೋಟೀಸ್ ನ್ನು ಕೊಡುವವರೆಗೆ, ಹಿಂದೆ ಹೇಳಿದ ವ್ಯಕ್ತಿಯು ಅದರ ಅಥವಾ ಅದರ ಯಾವುದೇ ಭಾಗವನ್ನು ಕೆಡವಿರದಿದ್ದರೆ ಅಥವಾ ತೆಗೆದುಹಾಕಿರದಿದ್ದರೆ ಅಂಥ ಕಟ್ಟಡಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡಲು ಹೊಣೆಯಾಗದಿದ್ದಿರುವ ಹಾಗೆ ಅಂಥ ಪ್ರತಿಯೊಂದು ತೆರಿಗೆಯನ್ನು ಸಂದಾಯ ಮಾಡಲು ಹೊಣೆಯಾಗಿರುವುದು ಮುಂದುವರಿಯತಕ್ಕದ್ದು.

(3) ಈ ಪ್ರಕರಣದಲ್ಲಿರುವುದು ಯಾವುದೂ ಬಿದ್ದು ಹೋಗಿರುವ ಅಥವಾ ಸುಟ್ಟು ಹೋದಂಥ ಕಟ್ಟಡದ ಅಥವಾ ಕಟ್ಟಡದ ಭಾಗಕ್ಕೆ ಸಂಬಂಧಿಸಿದಂತೆ ಅನ್ವಯವಾಗತಕ್ಕದ್ದಲ್ಲ.

[1][**109. xxx**][1] .

1.2003ರ ಅಧಿನಿಯಮ 31ರ ಮೂಲಕ 16.06.2003 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

110. ಮುಖ್ಯವಾಗಿ ಯಾರಿಂದ ತೆರಿಗೆಯು ವಸೂಲೀಯವಾಗತಕ್ಕದ್ದು.- [1][ಸ್ವತ್ತು ತೆರಿಗೆಯ ರೂಪದಲ್ಲಿ ವಿಧಿಸುವ ಪ್ರತಿಯೊಂದು ತೆರಿಗೆಯು,-.

(ಎ) ಸ್ವತ್ತನ್ನು ಸರ್ಕಾರ ಅಥವಾ ಮುನ್ಸಿಸಿಪಲ್ ಕೌನ್ಸಿಲ್ ಅಥವಾ ಪಟ್ಟಣ ಪಂಚಾಯಿತಿಯಿಂದ ಹೊಂದಿದ್ದಲ್ಲಿ, ವಾಸ್ತವಿಕ ಅಧಿಭೋಗದಾರನಿಂದ;

(ಬಿ) ಸ್ವತ್ತನ್ನು ಮಾಲೀಕನು ಹೊಂದಿದ್ದಲ್ಲಿ, ಮಾಲೀಕನಿಂದ;

(ಸಿ) ಸ್ವತ್ತನ್ನು ಬಾಡಿಗೆಗೆ ನೀಡಿದ್ದಲ್ಲಿ, ಬಾಡಿಗೆಗೆ ಕೊಡುವವನಿಂದ;

(ಡಿ) ಸ್ವತ್ತನ್ನು ಒಳಬಾಡಿಗೆಗೆ ನೀಡಿದ್ದಲ್ಲಿ, ಮೂಲ ಬಾಡಿಗೆಗೆ ಕೊಟ್ಟವನಿಂದ;

(ಇ) ಸ್ವತ್ತನ್ನು ಬಾಡಿಗೆಗೆ ನೀಡದಿದ್ದಲ್ಲಿ, ಬಾಡಿಗೆ ನೀಡುವ ಅಧಿಕಾರ ಯಾರಲ್ಲಿ ನಿಹಿತವಾಗಿದೆಯೋ ಅಂಥ ವ್ಯಕ್ತಿಯಿಂದ;

(ಎಫ್) ಖಾಲಿ ಭೂಮಿಯನ್ನು, ಒಂದು ವರ್ಷವನ್ನು ಮೀರಿದ ಯಾವುದೇ ಅವಧಿಗೆ ಬಾಡಿಗೆದಾರನಿಗೆ ನೀಡಿದ್ದಲ್ಲಿ ಮತ್ತು ಅಂಥ ಬಾಡಿಗೆದಾರನು ಖಾಲಿಭೂಮಿಯ ಮೇಲೆ ಕಟ್ಟಡವನ್ನು ನಿರ್ಮಿಸಿದ್ದಲ್ಲಿ, [2][ಅಂಥ ಕಟ್ಟಡವು ಆಕ್ರಮಿಸಿಕೊಂಡ ಭೂಮಿ][2] ಮತ್ತು ಅದರಲ್ಲಿ ನಿರ್ಮಿಸಿದ ಕಟ್ಟಡದ ಮೇಲಿನ ಸ್ವತ್ತು ತೆರಿಗೆಯು, ಸದರಿ ಬಾಡಿಗೆದಾರನಿಂದ

- ಮೂಲತಃ ಸಂದಾಯವಾಗತಕ್ಕದ್ದು.][1]

1.2003ರ ಅಧಿನಿಯಮ 31ರ ಮೂಲಕ 20.08.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2.2005ರ ಅಧಿನಿಯಮ 5ರ ಮೂಲಕ 1.04.2005 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][xxx][1]

1.2003ರ ಅಧಿನಿಯಮ 28ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಪರಂತುಕವನ್ನು ಬಿಟ್ಟುಬಿಡಲಾಗಿದೆ.

(1) ಭಾಗಗಳಲ್ಲಿ ಅಥವಾ ಫ್ಲಾಟ್‌ಗಳಲ್ಲಿ ಅಥವಾ ಕೊಠಡಿಗಳಲ್ಲಿ ಪ್ರತ್ಯೇಕವಾಗಿ ಒಡೆತನವನ್ನು ಹೊಂದಿರುವ ಅಥವಾ ಹೊಂದಿರುವುದಾಗಿ ತಾತ್ಪರ್ಯವಾಗುವಂಥ ಯಾವುದೇ ಕಟ್ಟಡದ ಹಲವಾರು ಒಡೆಯರ, ಅಂಥ ಒಡೆತನದ ಅವಧಿಯಲ್ಲಿ ಸಂದಾಯವಾಗಬೇಕಾದ ಕಟ್ಟಡದ ಮೇಲಿನ ದರದ ಅಥವಾ ಅದರ ಯಾವುದೇ ಕಂತಿನ ಸಂದಾಯಕ್ಕಾಗಿ ಹೊಣೆಗಾರಿಕೆಯು ಜಂಟಿಯಾಗಿ ಮತ್ತು ಪ್ರತ್ಯೇಕವಾಗಿರತಕ್ಕದ್ದು.

[1][**110-ಎ. xxx**][1]

1.2003ರ ಅಧಿನಿಯಮ 31ರ ಮೂಲಕ 20.08.2003 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

111. [1][ಸ್ವತ್ತು ತೆರಿಗೆಯ][1] ಸಂದಾಯಕ್ಕೆ ಮುಖ್ಯವಾಗಿ ಹೊಣೆಯಾಗಿರುವ ವ್ಯಕ್ತಿಗಳಿಂದ ಸ್ವಾಮ್ಯದ ಎಲ್ಲಾ ವರ್ಗಾವಣೆಗಳ ಬಗ್ಗೆ ಮುನ್ಸಿಪಲ್ ಕೌನ್ಸಿಲ್‌ಗೆ ನೋಟೀಸ್ ನ್ನು ಕೊಡತಕ್ಕದ್ದು.- (1) ಕಟ್ಟಡಗಳ ಅಥವಾ ಭೂಮಿಗಳ ಅಥವಾ ಅವೆರಡರ ಮೇಲೆ ದರದ ರೂಪದಲ್ಲಿ ಯಾವುದೇ ಆವರಣದ ಮೇಲೆ ವಿಧಿಸಿದ ತೆರಿಗೆಯ ಸಂದಾಯಕ್ಕೆ ಮುಖ್ಯವಾಗಿ ಹೊಣೆಯಾಗಿರುವ ಯಾರೇ ವ್ಯಕ್ತಿಯ ಸ್ವಾಮ್ಯವನ್ನು ವರ್ಗಾವಣೆ ಮಾಡಿದಾಗಲೆಲ್ಲಾ, ಯಾವ ವ್ಯಕ್ತಿಯ ಸ್ವಾಮ್ಯವನ್ನು ವರ್ಗಾಯಿಸಲಾಗಿದೆಯೋ ಆ ವ್ಯಕ್ತಿ ಮತ್ತು ಯಾವ ವ್ಯಕ್ತಿಗೆ ಅದನ್ನು ವರ್ಗಾಯಿಸಲಾಗಿದೆಯೋ, ಆ ವ್ಯಕ್ತಿಯು ವರ್ಗಾವಣೆ ಲಿಖಿತವನ್ನು ಬರೆದುಕೊಟ್ಟ ತರುವಾಯ ಅಥವಾ ಅದನ್ನು ನೋಂದಾಯಿಸಿದ್ದರೆ, ನೋಂದಣಿಯ ತರುವಾಯ ಅಥವಾ ಯಾವುದೇ ಲಿಖಿತವನ್ನು ಬರೆದು ಕೊಟ್ಟಿರದಿದ್ದರೆ, ವರ್ಗಾವಣೆಯನ್ನು ಮಾಡಿದ ತರುವಾಯ ಮೂರು ತಿಂಗಳೊಳಗಾಗಿ, ಅಂಥ ವರ್ಗಾವಣೆಯ ನೋಟೀಸನ್ನು ಬರಹದಲ್ಲಿ [1][ಮುನ್ಸಿಪಲ್ ಕಮಿಷನರ್ ಅಥವಾ ಮುಖ್ಯಾಧಿಕಾರಿಗೆ][1] ಕೊಡತಕ್ಕದ್ದು.

1.2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಹಿಂದೆ ಹೇಳಿದಂಥ ಮುಖ್ಯವಾಗಿ ಹೊಣೆಯಾಗಿರುವ ಯಾರೇ ವ್ಯಕ್ತಿಯು ಮೃತನಾದ ಸಂದರ್ಭದಲ್ಲಿ ಮೃತನ ಸ್ವಾಮ್ಯವು ಯಾರಿಗೆ ಪ್ರಾಪ್ತವಾಗತಕ್ಕದ್ದೋ ಆ ವ್ಯಕ್ತಿಯು ಮೃತನ ಮರಣದ ದಿನಾಂಕದಿಂದ ಆರು ತಿಂಗಳೊಳಗಾಗಿ ಅಂಥ ಪ್ರಾಪ್ತಿಯ ನೋಟೀಸನ್ನು [1][ಮುನ್ಸಿಪಲ್ ಕಮಿಷನರ್ ಅಥವಾ ಮುಖ್ಯಾಧಿಕಾರಿಗೆ][1] ಕೊಡತಕ್ಕದ್ದು.

1.2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

112. ನೋಟೀಸಿನ ನಮೂನೆ.- (1) ಪ್ರಕರಣ 111ರ ಮೇರೆಗೆ ಕೊಡಬೇಕಾಗಿರುವ ನೋಟೀಸ್, ಸಂದರ್ಭಾನುಸಾರ 11ನೇ ಪ್ರಕರಣದ ಅಥವಾ VIIIನೇ ಅನುಸೂಚಿ ಅಥವಾ IXನೇ ಅನುಸೂಚಿಯ ನಮೂನೆಯಲ್ಲಿ ಇರತಕ್ಕದ್ದು ಮತ್ತು ಸದರಿ ನಮೂನೆಯ ಮೂಲಕ ಅಗತ್ಯಪಡಿಸಿದ ಎಲ್ಲಾ ವಿವರಗಳನ್ನು ಸ್ಪಷ್ಟವಾಗಿ ಮತ್ತು ಸರಿಯಾಗಿ ನಿರೂಪಿಸತಕ್ಕದ್ದು.

[1][(2). xxx][1]

1.2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][**113. ಸ್ವತ್ತು ತೆರಿಗೆಯ ರಿಜಿಸ್ಟರ್ ನಲ್ಲಿ ವರ್ಗಾವಣೆ ಪಡೆದವನ ಹೆಸರನ್ನು ನಮೂದಿಸತಕ್ಕದ್ದು.-** ಅಂಥ ವರ್ಗಾವಣೆಯು ಅಂಥ ನೋಟೀಸಿನ ಮೂಲಕ ಮುನ್ಸಿಪಲ್ ಕಮಿಷನರ್ ಅಥವಾ ಮುಖ್ಯಾಧಿಕಾರಿಯವರ ಗಮನಕ್ಕೆ ಬಂದಾಗ ವರ್ಗಾವಣೆ ಪಡೆದವನ ಹೆಸರನ್ನು ಸ್ವತ್ತಿನ ತೆರಿಗೆಯ ರಿಜಿಸ್ಟರ್ ಗಳಲ್ಲಿ ನಮೂದಿಸತಕ್ಕದ್ದು.][1]

1. 2003 ರ ಅಧಿನಿಯಮ 31 ರ ಮೂಲಕ 20.08.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

114. ವರ್ಗಾವಣೆಯ ನೋಟೀಸ್ ಇಲ್ಲದಿರುವಲ್ಲಿ [1][ಸ್ವತ್ತು ತೆರಿಗೆ][1]ಯ ಸಂದಾಯಕ್ಕೆ ಹೊಣೆಗಾರಿಕೆಯು ಮುಂದುವರಿಯುವುದು.- (1) [1][ಸ್ವತ್ತು ತೆರಿಗೆ][1]ಯ ರೂಪದಲ್ಲಿ ಯಾವುದೇ ಆವರಣದ ಮೇಲೆ ವಿಧಿಸಿದ ಸಂದಾಯಕ್ಕೆ ಮುಖ್ಯವಾಗಿ ಹೊಣೆಗಾರನಾದ, ಹಿಂದೆ ಹೇಳಿದಂತೆ ಮುನ್ಸಿಪಲ್ ಕೌನ್ಸಿಲ್‌ಗೆ ಅಂಥ ವರ್ಗಾವಣೆಯ ನೋಟೀಸನ್ನು ಕೊಡದೆ, ಅಂಥ ಆವರಣಗಳಿಗೆ ಅಥವಾ ಅದರ ಮೇಲೆ ತನ್ನ ಸ್ವಾಮ್ಯವನ್ನು ವರ್ಗಾವಣೆಗಳನ್ನು ಮಾಡುವ ಪ್ರತಿಯೊಬ್ಬ ವ್ಯಕ್ತಿಯು ಅಂಥ ಉಪೇಕ್ಷೆಯ ಮೂಲಕ ಅವನು ಗುರಿಯಾಗುವಂಥ ಇತರ ಯಾವುದೇ ಹೊಣೆಗಾರಿಕೆಯ ಜೊತೆಗೆ, ಅಂಥ ನೋಟೀಸನ್ನು ಅವನು ಕೊಡುವವರೆಗೆ ಅಥವಾ ಮುನ್ಸಿಪಲ್ ಕೌನ್ಸಿಲ್‌ನ ರಿಜಿಸ್ಟರ್ ಗಳಲ್ಲಿ ನೋಟೀಸನ್ನು ನೀಡುವವರೆಗೆ ಅಥವಾ ವರ್ಗಾವಣೆಯನ್ನು ಮಾಡುವವರೆಗೆ ಅಂಥ ಆವರಣಕ್ಕೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಸಂದಾಯ ಮಾಡಬೇಕಾದ ಎಲ್ಲ ತೆರಿಗೆಗಳ ಸಂದಾಯಕ್ಕೆ ಹೊಣೆಯಾಗಿರುವುದು ಮುಂದುವರಿಯತಕ್ಕದ್ದು.

1.2001ರ ಅಧಿನಿಯಮ 28ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಈ ಪ್ರಕರಣದಲ್ಲಿರುವುದಾವುದೂ, ಸದರಿ ತೆರಿಗೆಗಳಿಗೆ ವರ್ಗಾವಣೆ ಪಡೆದವನ ಹೊಣೆಗಾರಿಕೆಯನ್ನು ಬಾಧಿಸುವುದಾಗಿ ಅಥವಾ ಅದರ ಮೇಲೆ ಬಾಕಿಯಿರುವ ತೆರಿಗೆಗಳನ್ನು ವಸೂಲ್ಮಾಡುವುದಕ್ಕಾಗಿ 151ನೇ ಪ್ರಕರಣದ ಮೂಲಕ ಪ್ರದತ್ತವಾದ ಆವರಣದ ಮೇಲೆ ಮುನ್ಸಿಪಲ್ ಕೌನ್ಸಿಲ್‌ನ ಮುಂಚಿನ ಕ್ಲೇಮನ್ನು ಬಾಧಿಸುವುದಾಗಿ ಭಾವಿಸತಕ್ಕದ್ದಲ್ಲ.

[1][**115. ತೆರಿಗೆ ನಿರ್ಧರಣೆಯಿಂದ ತಪ್ಪಿಸಿಕೊಂಡ ಸಂದರ್ಭದಲ್ಲಿ ತೆರಿಗೆ ನಿರ್ಧರಣೆ ಮಾಡಲು ಅಧಿಕಾರ.-** ಈ ಅಧಿನಿಯಮದಲ್ಲಿ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳಲ್ಲಿ, ತದ್ವಿರುದ್ಧವಾದುದು ಏನೇ ಒಳಗೊಂಡಿದ್ದರೂ, ಈ ಅಧ್ಯಾಯದ ಅಡಿಯಲ್ಲಿ ವಿಧಿಸತಕ್ಕ ಯಾವುದೇ ತೆರಿಗೆಗಳು, ಉಪಕರಗಳ ದರಗಳ, ಶುಲ್ಕಗಳ ಅಥವಾ ಚಾರ್ಜುಗಳ ಪೈಕಿ ಯಾವುದೊಂದನ್ನು ಸಂದಾಯ ಮಾಡಲು ಹೊಣೆಗಾರನಾದ ಯಾರೇ ವ್ಯಕ್ತಿಯು, ಯಾವುದೇ ಕಾರಣಕ್ಕಾಗಿ ಯಾವುದೇ ವರ್ಷದಲ್ಲಿ ತೆರಿಗೆ ನಿರ್ಧರಣೆಯಿಂದ ತಪ್ಪಿಸಿಕೊಂಡಿದ್ದರೆ, ಮುನ್ಸಿಪಲ್ ಕಮಿಷನರ್ ಅಥವಾ ಸಂದರ್ಭಾನುಸಾರ ಮುಖ್ಯಾಧಿಕಾರಿಯು ಅಥವಾ ಪ್ರಾಧಿಕೃತ ಅಧಿಕಾರಿಯು ಯಾವ ದಿನಾಂಕದಂದು ಆ ವ್ಯಕ್ತಿಯ ಸಂಬಂಧದಲ್ಲಿ ತೆರಿಗೆ ನಿರ್ಧರಣೆಯಾಗಬೇಕಾಗಿತ್ತೊ, ಆ ದಿನಾಂಕದಿಂದ ಆರು ವರ್ಷಗಳೊಳಗೆ ಯಾವುದೇ ಕಾಲದಲ್ಲಿ, ಬಾಕಿ ಇರುವ ಆ ತೆರಿಗೆ, ದರ, ಉಪಕರ, ಚಾರ್ಜು ಅಥವಾ ಶುಲ್ಕಗಳು ನಿರ್ಧರಣೆಯ ಒಂದು ನೋಟೀಸನ್ನು ಅಂಥ ವ್ಯಕ್ತಿಗೆ ಜಾರಿಮಾಡಬಹುದು ಮತ್ತು ಹಾಗೆ ಜಾರಿಗೊಳಿಸಿದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ, ಅದರ ಸಂದಾಯಕ್ಕಾಗಿ ಕೋರಬಹುದು ಮತ್ತು ಈ ಅಧಿನಿಯಮದ ಹಾಗೂ ಅದರ ಮೇರೆಗೆ ರಚಿಸಿದ ನಿಯಮಗಳ ಉಪಬಂಧಗಳು, ಯಾವ ವರ್ಷಕ್ಕೆ ತೆರಿಗೆ, ದರ, ಉಪಕರ, ಖರ್ಚು ಅಥವಾ ಶುಲ್ಕಕ್ಕೆ ಸಂಬಂಧಿಸಿವೆಯೋ ಆ ವರ್ಷದಲ್ಲಿ ತೆರಿಗೆ ನಿರ್ಧರಣೆಯನ್ನು ಮಾಡಿದ್ದರೆ ಹೇಗೋ ಹಾಗೆ ಸಾಧ್ಯವಾದಷ್ಟುಮಟ್ಟಿಗೆ ಅನ್ವಯವಾಗತಕ್ಕದ್ದು.][1]

1.2001ರ ಅಧಿನಿಯಮ 28ರ ಮೂಲಕ 12.11.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][116 ರಿಂದ 122 xxx][1]

1.1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][xxx][1] ದಾರಿ ಸುಂಕ

[1][123 ರಿಂದ 127 xxx][1]

1.1979ರ ಅಧಿನಿಯಮ 21ರ ಮೂಲಕ 31.3.1979 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][128 ಮತ್ತು 129 xxx][1]

1.2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][130 ಮತ್ತು 131 xxx][1]

1.1979ರ ಅಧಿನಿಯಮ 21ರ ಮೂಲಕ 31.3.1979 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][132 xxx][1]

1.2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

ಜಾಹೀರಾತುಗಳು ಮತ್ತು ಜಾಹೀರಾತುಗಳ ತೆರಿಗೆ

133. ಮುನ್ಸಿಪಲ್ ಕೌನ್ಸಿಲ್‌ನ ಬರಹದಲ್ಲಿನ ಅನುಮತಿಯಿಲ್ಲದ ಜಾಹೀರಾತುಗಳ ನಿಷೇಧ.- (1) ಯಾವುದೇ ಜಾಹೀರಾತನ್ನು ಮುನ್ಸಿಪಲ್ ಕೌನ್ಸಿಲ್ 94ನೇ ಪ್ರಕರಣದ ಮೇರೆಗೆ ತೆರಿಗೆ [2][ಅಥವಾ ಶುಲ್ಕ][2] ವಿಧಿಸುವಿಕೆಯನ್ನು ನಿರ್ಧರಿಸಿದ ತರುವಾಯ ಯಾವುದೇ ಭೂಮಿ, ಕಟ್ಟಡ, ಗೋಡೆ, ಪ್ರಕಟಣಾ ಫಲಕ, ಚೌಕಟ್ಟು, ಸ್ತಂಭ ಅಥವಾ ರಚನೆಯ ಮೇಲ್ಭಾಗದಲ್ಲಿ ಅಥವಾ ಯಾವುದೇ ವಾಹನದ ಮೇಲೆ ಅಥವಾ ಅಲ್ಲಿ ಪ್ರದರ್ಶಿಸತಕ್ಕದ್ದಲ್ಲ, ನಿಲ್ಲಿಸತಕ್ಕದ್ದಲ್ಲ, ಜೋಡಿಸತಕ್ಕದ್ದಲ್ಲ ಅಥವಾ ಉಳಿಸಿಕೊಳ್ಳತಕ್ಕದ್ದಲ್ಲ ಅಥವಾ ಈ ಅಧಿನಿಯಮದ ಮೇರೆಗೆ ರಚಿಸಿದ ಬೈಲಾಗಳಿಗನುಸಾರವಾಗಿ ಕೊಟ್ಟ ಮುನ್ಸಿಪಲ್ ಕೌನ್ಸಿಲ್‌ನ ಬರಹದಲ್ಲಿನ ಅನುಮತಿಯಿಲ್ಲದೆ [1][ಮುನ್ಸಿಪಲ್ ಏರಿಯಾ][1]ದೊಳಗೆ ಯಾವುದೇ ಸ್ಥಳದಲ್ಲಿ ಯಾವ ರೀತಿಯಲ್ಲಿಯೇ ಆಗಲಿ ಪ್ರದರ್ಶಿಸತಕ್ಕದ್ದಲ್ಲ.

(2) ಮುನ್ಸಿಪಲ್ ಕೌನ್ಸಿಲ್ ಅನುಮತಿಯನ್ನು,-

(i) ಅಂಥ ಜಾಹೀರಾತು, ಈ ಅಧಿನಿಯಮದ ಮೇರೆಗೆ ರಚಿಸಲಾದ ಯಾವುದೇ ಬೈಲಾಗಳನ್ನು ಉಲ್ಲಂಘಿಸಿದರೆ; ಅಥವಾ

(ii) ಅಂಥ ಜಾಹೀರಾತಿಗೆ ಸಂಬಂಧಿಸಿದಂತೆ ಬಾಕಿಯಾಗಿರುವ ತೆರಿಗೆ [2][ಅಥವಾ ಶುಲ್ಕ][2] ಯಾವುದಾದರೂ ಇದ್ದರೆ, ಅದನ್ನು ಸಂದಾಯ ಮಾಡಿರದಿದ್ದರೆ

- ಕೊಡತಕ್ಕದ್ದಲ್ಲ.

(3) ಉಪ-ಪ್ರಕರಣ (2)ರ ಉಪಬಂಧಗಳಿಗೊಳಪಟ್ಟು, ಜಾಹೀರಾತು ತೆರಿಗೆಗೆ ಗುರಿಯಾದ ಜಾಹೀರಾತಿನ ಸಂದರ್ಭದಲ್ಲಿ ಮುನ್ಸಿಪಲ್ ಕೌನ್ಸಿಲ್ ಯಾವ ಅವಧಿಗೆ ತೆರಿಗೆಯ ಸಂದಾಯವು ಸಂಬಂಧಪಟ್ಟಿದೆಯೋ ಆ ಅವಧಿಗೆ ಅನುಮತಿಯನ್ನು ಕೊಡತಕ್ಕದ್ದು ಮತ್ತು ಅಂಥ ಅನುಮತಿಗೆ ಸಂಬಂಧಿಸಿದ ಯಾವುದೇ ಫೀಜನ್ನು ವಿಧಿಸತಕ್ಕದ್ದಲ್ಲ.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2.2021ರ ಅಧಿನಿಯಮ 30ರ ಮೂಲಕ 07.10.2021ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

134. ಕೆಲವು ಸಂದರ್ಭಗಳಲ್ಲಿ ಮುನ್ಸಿಪಲ್ ಕೌನ್ಸಿಲ್‌ನ ಅನುಮತಿಯು ಅನೂರ್ಜಿತವಾಗತಕ್ಕದ್ದು.- 133ನೇ ಪ್ರಕರಣದ ಮೇರೆಗೆ ಕೊಡಲಾದ ಅನುಮತಿಯು ಈ ಕೆಳಕಂಡ ಸಂದರ್ಭಗಳಲ್ಲಿ ಅನೂರ್ಜಿತವಾಗತಕ್ಕದ್ದು, ಎಂದರೆ:-

(ಎ) ಜಾಹೀರಾತು, ಈ ಅಧಿನಿಯಮದ ಮೇರೆಗೆ ರಚಿಸಲಾದ ಯಾವುದೇ ಬೈಲಾವನ್ನು ಉಲ್ಲಂಘಿಸಿದರೆ;

(ಬಿ) ಮುನ್ಸಿಪಲ್ ಕೌನ್ಸಿಲ್‌ನ ಪೂರ್ವಾನುಮತಿಯಿಲ್ಲದೆ ಜಾಹೀರಾತು ಅಥವಾ ಅದರ ಯಾವುದೇ ಭಾಗದಲ್ಲಿ ಯಾವುದೇ ಮುಖ್ಯ ಬದಲಾವಣೆಯನ್ನು ಮಾಡಿದರೆ;

(ಸಿ) ಆಕಸ್ಮಿಕವಾಗಲ್ಲದೆ ಅನ್ಯಥಾ ಜಾಹೀರಾತು ಅಥವಾ ಅದರ ಯಾವುದೇ ಭಾಗವು ಬಿದ್ದರೆ;

(ಡಿ) ಜಾಹೀರಾತನ್ನು ಪ್ರದರ್ಶಿಸಲಾದ, ನಿಲ್ಲಿಸಲಾದ, ಜೋಡಿಸಲಾದ ಅಥವಾ ಉಳಿಸಿಕೊಂಡಿರುವಂಥ ಕಟ್ಟಡ ಗೋಡೆ, ಪ್ರಕಟಣಾ ಫಲಕ, ಚೌಕಟ್ಟು, ಸ್ತಂಭ ಅಥವಾ ರಚನೆ ಮೇಲೆ ಅಥವಾ ಮೇಲ್ಭಾಗದಲ್ಲಿಯಾವುದೇ ಸೇರಿಕೆ ಅಥವಾ ಬದಲಾವಣೆಯನ್ನು ಜಾಹೀರಾತಿಗೆ ಅಥವಾ ಅದರಯಾವುದೇ ಭಾಗಕ್ಕೆ ಬಾಧಕವಾಗುವ ಹಾಗೆ ಮಾಡಿದರೆ;

(ಇ) ಯಾವ ಕಟ್ಟಡ, ಗೋಡೆ, ಪ್ರಕಟಣಾ ಫಲಕ, ಚೌಕಟ್ಟು, ಸ್ತಂಭ ಅಥವಾ ರಚನೆಯ ಮೇಲೆ ಅಥವಾ ಮೇಲ್ಭಾಗದಲ್ಲಿ ಜಾಹೀರಾತನ್ನು ಪ್ರದರ್ಶಿಸಲಾಗಿದೆಯೋ, ನಿಲ್ಲಿಸಲಾಗಿದೆಯೋ, ಜೋಡಿಸಲಾಗಿದೆಯೋ ಅಥವಾ ಉಳಿಸಿಕೊಳ್ಳಲಾಗಿದೆಯೋ ಆ ಕಟ್ಟಡ, ಗೋಡೆ, ಪ್ರಕಟಣಾ ಫಲಕ,ಚೌಕಟ್ಟು, ಸ್ತಂಭ ಅಥವಾ ರಚನೆಯನ್ನು ಕೆಡವಿಹಾಕಿದರೆ ಅಥವಾ ನಾಶಪಡಿಸಿದರೆ.

135. ಉಲ್ಲಂಘನೆಯ ಸಂದರ್ಭದಲ್ಲಿ ಪೂರ್ವಭಾವನೆ.- ಈ ಅಧಿನಿಯಮದ ಉಪಬಂಧಗಳ ಅಥವಾ ಅದರ ಮೇರೆಗೆ ರಚಿಸಲಾದ ಯಾವುವೇ ಬೈಲಾಗಳನ್ನು ಉಲ್ಲಂಘಿಸಿ ಯಾವುದೇ ಜಾಹೀರಾತನ್ನು ಯಾವುದೇ ಕಟ್ಟಡ, ಭೂಮಿ, ಗೋಡೆ, ಪ್ರಕಟಣಾ ಫಲಕ,ಚೌಕಟ್ಟು, ಸ್ತಂಭ ಅಥವಾ ರಚನೆಯ ಮೇಲೆ ಅಥವಾ ಮೇಲ್ಭಾಗದಲ್ಲಿ ಅಥವಾ ಯಾವುದೇ ವಾಹನದ ಮೇಲೆ ಅಥವಾ ಅದರೊಳಗೆ ಪ್ರದರ್ಶಿಸಿದರೆ, ನಿರ್ಮಿಸಿದರೆ, ಜೋಡಿಸಿದರೆ ಅಥವಾ ಉಳಿಸಿಟ್ಟುಕೊಂಡರೆ ಸಾರ್ವಜನಿಕ ಬೀದಿ ಅಥವಾ ಸಾರ್ವಜನಿಕ ಸ್ಥಳದಿಂದ ಸಾರ್ವಜನಿಕರ ದೃಷ್ಟಿಗೆ ಬೀಳುವಂತೆ ಪ್ರದರ್ಶಿಸಿದರೆ ತದ್ವಿರುದ್ಧವಾದುದನ್ನು ರುಜುವಾತುಪಡಿಸುವ ಹೊರತು ಮತ್ತು ಯಾರ ಪರವಾಗಿ ಜಾಹೀರಾತು ಇದೆಯೆಂದು ತಾತ್ಪರ್ಯವಾಗುವುದೋ ಆ ವ್ಯಕ್ತಿ ಅಥವಾ ವ್ಯಕ್ತಿಗಳು ಅಥವಾ ಅಂಥ ವ್ಯಕ್ತಿ ಅಥವಾ ವ್ಯಕ್ತಿಗಳ ಏಜೆಂಟರು ಉಲ್ಲಂಘನೆಯನ್ನು ಮಾಡಿರುವುದಾಗಿ ಪೂರ್ವಭಾವನೆ ಮಾಡತಕ್ಕದ್ದು.

136. ಅನಧಿಕೃತ ಜಾಹೀರಾತುಗಳನ್ನು ತೆಗೆದುಹಾಕುವುದು.- 133ನೇ ಪ್ರಕರಣದ ಉಪಬಂಧವನ್ನು ಉಲ್ಲಂಘಿಸಿ ಯಾವುದೇ ಜಾಹೀರಾತನ್ನು ಪ್ರದರ್ಶಿಸಿದರೆ, ನಿಲ್ಲಿಸಿದರೆ, ಜೋಡಿಸಿದರೆ ಅಥವಾ ಉಳಿಸಿಕೊಂಡರೆ ಅಥವಾ ಯಾವುದೇ ಅವಧಿಗಾಗಿ ಅದರ ಪ್ರದರ್ಶನ, ನಿಲ್ಲಿಸುವಿಕೆ, ಜೋಡಣೆ ಅಥವಾ ಉಳಿಸಿಕೊಳ್ಳುವಿಕೆಗಾಗಿ ಬರಹದಲ್ಲಿನ ಅನುಮತಿಯು ಮುಕ್ತಾಯಗೊಂಡ ಅಥವಾ ಶೂನ್ಯವಾದ ತರುವಾಯ ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನು, ಯಾವುದರ ಮೇಲೆ ಅಥವಾ ಮೇಲ್ಭಾಗದಲ್ಲಿ ಅದನ್ನು ಪ್ರದರ್ಶಿಸಿದ, ನಿಲ್ಲಿಸಿದ, ಜೋಡಿಸಿದ ಅಥವಾ ಉಳಿಸಿಕೊಂಡ ಭೂಮಿ, ಕಟ್ಟಡ, ಗೋಡೆ, ಪ್ರಕಟಣಾ ಫಲಕ, ಚೌಕಟ್ಟು, ಸ್ತಂಭ ಅಥವಾ ರಚನೆ ಅಥವಾ ವಾಹನದ ಒಡೆಯ ಅಥವಾ ಅಧಿಭೋಗದಾರನನ್ನು ಬರಹದಲ್ಲಿನ ನೋಟೀಸಿನ ಮೂಲಕ ಅಂಥ ಜಾಹೀರಾತನ್ನು ಕೆಳಗಿಳಿಸುವಂತೆ ಅಥವಾ ತೆಗೆದುಹಾಕುವಂತೆ ಅಗತ್ಯಪಡಿಸಬಹುದು ಅಥವಾ ಯಾವುದೇ ಭೂಮಿ, ಕಟ್ಟಡ, ಸ್ವತ್ತು ಅಥವಾ ವಾಹನವನ್ನು ಪ್ರವೇಶಿಸಬಹುದು ಮತ್ತು ಜಾಹೀರಾತನ್ನು ಕಳಚಿಹಾಕಬಹುದು, ಕೆಳಗಿಳಿಸಬಹುದು ಅಥವಾ ತೆಗೆದುಹಾಕಬಹುದು ಅಥವಾ ಕೆಡಿಸಬಹುದು, ವಿರೂಪಗೊಳಿಸಬಹುದು ಅಥವಾ ಮರೆ ಮಾಡಬಹುದು.

ಫೀಜು ಇತ್ಯಾದಿಗಳನ್ನು ವಿಧಿಸಲು ಅಧಿಕಾರ

137. ಜಾತ್ರೆ, ಉರುಸು ಇತ್ಯಾದಿಗಳಿಗೆ ಸಂಬಂಧಿಸಿದಂತೆ ಫೀಜುಗಳು.- (1) ಮುನ್ಸಿಪಲ್ ಕೌನ್ಸಿಲ್, [1][ಮುನ್ಸಿಪಲ್ ಏರಿಯಾ][1]ದ ಪರಿಮಿತಿಗಳೊಳಗೆ ನಿಯತಕಾಲಿಕವಾಗಿ ಬರುವ ಯಾವುದೇ ಪವಿತ್ರ ಸ್ಥಳ, ಜಾತ್ರೆ ಅಥವಾ ಉರುಸಿಗೆ ಸೇರುವ ವ್ಯಕ್ತಿಗಳಿಗೆ ಆರೋಗ್ಯ ಮತ್ತು ಅನುಕೂಲತೆಗಾಗಿ ವಿಶೇಷ ಏರ್ಪಾಡುಗಳನ್ನು ಮಾಡುವುದು ಅವಶ್ಯವೆಂದು ಅದು ಅಭಿಪ್ರಾಯಪಟ್ಟರೆ ನಿರ್ಣಯದ ಮೂಲಕ ಮತ್ತು ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ಅಂಥ ಪವಿತ್ರ ಸ್ಥಳ, ಜಾತ್ರೆ ಅಥವಾ ಉರುಸುಗಳಿಗೆ ಸೇರುವ ಹನ್ನೆರಡು ವರ್ಷಗಳಿಗೆ ಮೇಲ್ಪಟ್ಟ ವ್ಯಕ್ತಿಗಳ ಮೇಲೆ ತಲಾವಾರು ಐವತ್ತು ನಯಾ ಪೈಸೆಗಳಿಗೆ ಮೀರದಂತೆ ಫೀಜನ್ನು ವಿಧಿಸಬಹುದು ಮತ್ತು ಅಂಥ ನಿರ್ಣಯದಲ್ಲಿ ಫೀಜಿನ ದರ ಮತ್ತು ಫೀಜನ್ನು ವಿಧಿಸಬೇಕಾದ ಅವಧಿ ಅಥವಾ ಅವಧಿಗಳನ್ನು ನಿರ್ದಿಷ್ಟಪಡಿಸಬಹುದು. ಈ ಪ್ರಕರಣದ ಮೇರೆಗೆ ಫೀಜಿನ ವಿಧಿಸುವಿಕೆಯನ್ನು, ನಿಯಮಿಸಬಹುದಾದಂಥ ರೀತಿಯಲ್ಲಿ ಅಂಥ [1][ಮುನ್ಸಿಪಲ್ ಏರಿಯಾ][1] ದಲ್ಲಿ ಪ್ರಕಟಪಡಿಸತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಈ ಪ್ರಕರಣದ ಮೇರೆಗೆ ವಸೂಲ್ಮಾಡಿದ ಫೀಜುಗಳ ಉತ್ಪನ್ನಗಳ ಯಾವುದೇ ಭಾಗವನ್ನು ಅಂಥ ಫೀಜುಗಳ ಸಂಗ್ರಹಕ್ಕಾಗಿನ ಸಿಬ್ಬಂದಿ ವೆಚ್ಚಗಳನ್ನು ಭರಿಸಲು ಮತ್ತು ಅಂಥ ಸೇರುವ ವ್ಯಕ್ತಿಗಳ ಆರೋಗ್ಯ ಮತ್ತು ಅನುಕೂಲತೆಗಾಗಿ ಏರ್ಪಾಡುಗಳನ್ನು ಮಾಡುವುದಕ್ಕಾಗಿ ಅಥವಾ ಅಂಥ ಪ್ರದೇಶದ ಸುಧಾರಣೆ ಅಥವಾ ಅಭಿವೃದ್ಧಿಗಾಗಿ ಅಲ್ಲದೆ ಇತರ ಉದ್ದೇಶಗಳಿಗೆ ವೆಚ್ಚ ಮಾಡತಕ್ಕದ್ದಲ್ಲ.

(3) ಅಂಥ ಫೀಜುಗಳ ವಿಧಿಸುವಿಕೆ ಮತ್ತು ಸಂಗ್ರಹಣೆಯನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಮಾಡತಕ್ಕದ್ದು ಮತ್ತು ಅಂಥ ಷರತ್ತುಗಳು ಮತ್ತು ವಿನಾಯಿತಿಗೊಳಪಟ್ಟು ಮಾಡತಕ್ಕದ್ದು.

138. ಕೆಲವು ಲೈಸೆನ್ಸ್‌ಗಳು, ಇತ್ಯಾದಿಗಳಿಗಾಗಿ ಮುನ್ಸಿಪಲ್ ಕೌನ್ಸಿಲ್ ಫೀಜುಗಳನ್ನು ವಿಧಿಸಬಹುದು.- (1) ಈ ಅಧಿನಿಯಮದ ಮೇರೆಗೆ ಮುನ್ಸಿಪಲ್ ಕೌನ್ಸಿಲ್ ಯಾವುದೇ ಲೈಸೆನ್ಸ್ ಅಥವಾ ಪರ್ಮಿಟ್‌ನ್ನು ಮಂಜೂರ್ಮಾಡಿದಾಗ ಯಾವುದೇ ತಾತ್ಕಾಲಿಕ ನಿರ್ಮಿತಿಯನ್ನು ಮಾಡುವುದಕ್ಕಾಗಿ ಅಥವಾ ಯಾವುದೇ ಮುಂಚಾಚುವಿಕೆಯನ್ನು ಹಾಕುವುದಕ್ಕಾಗಿ ಅಥವಾ ಯಾವುದೇ ಮುನ್ಸಿಪಲ್ ಕೌನ್ಸಿಲ್‌ನಲ್ಲಿ ನಿಹಿತವಾದ ಯಾವುದೇ ಸಾರ್ವಜನಿಕ ಬೀದಿ ಅಥವಾ ಇತರ ಭೂಮಿಯ ತಾತ್ಕಾಲಿಕ ಅಧಿಭೋಗಕ್ಕಾಗಿ ಅದು ಅನುಮತಿಯನ್ನು ನೀಡಿದಾಗ, ಮುನ್ಸಿಪಲ್ ಕೌನ್ಸಿಲ್ ಅಂಥ ಲೈಸೆನ್ಸ್ ಅಥವಾ ಅನುಮತಿಗಾಗಿ ಫೀಜನ್ನು ವಿಧಿಸಬಹುದು:

ಪರಂತು, ಮುಂಚಾಚುವಿಕೆಯನ್ನು ಹಾಕುವುದಕ್ಕಾಗಿ ಅನುಮತಿಯನ್ನು ನೀಡಿದಾಗ ಅಂಥ ಅನುಮತಿಯನ್ನು ನೀಡುವ ಪ್ರಾಧಿಕಾರವು, ಆ ಮುಂಚಾಚುವಿಕೆಯನ್ನು ತೆಗೆದುಹಾಕುವವರೆಗೆ ಪ್ರತಿವರ್ಷ ಆವರ್ತಕ ಫೀಜನ್ನು ವಿಧಿಸಬಹುದು.

(2) ಮುನ್ಸಿಪಲ್ ಕೌನ್ಸಿಲ್ ತನ್ನ ಅನುಮತಿ ಅಥವಾ ಲೈಸೆನ್ಸ್ ಇಲ್ಲದೆ ಯಾರೇ ವ್ಯಕ್ತಿಯು ಯಾವುದೇ ನಿರ್ಮಿತಿ ಅಥವಾ ಮುಂಚಾಚುವಿಕೆಗಾಗಿ ಅಥವಾ ಮುನ್ಸಿಪಲ್ ಕೌನ್ಸಿಲ್‌ನಲ್ಲಿ ನಿಹಿತವಾದ ಯಾವುದೇ ಸಾರ್ವಜನಿಕ ಅಥವಾ ಇತರ ಭೂಮಿಯ ಉಪಯೋಗ ಅಥವಾ ಅಧಿಭೋಗಕ್ಕಾಗಿ ದಂಡದ ರೂಪದಲ್ಲಿ ಹೆಚ್ಚಿನ ಫೀಜನ್ನು ವಿಧಿಸಬಹುದು. ಅಂಥ ಫೀಜನ್ನು ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧದ ಮೇರೆಗೆ ವ್ಯಕ್ತಿಯು ಗುರಿಯಾಗಬಹುದಾದ ಯಾವುದೇ ಇತರ ದಂಡ ಅಥವಾ ಹೊಣೆಗಾರಿಕೆಯನ್ನು ಗಣನೆಗೆ ತೆಗೆದುಕೊಳ್ಳದೆ ವಿಧಿಸಬಹುದಾಗಿದೆ. ಅಂಥ ಹೆಚ್ಚಿನ ಫೀಜಿನ ದರಗಳನ್ನು ಮುನ್ಸಿಪಲ್ ಕೌನ್ಸಿಲ್‌ಗೆ ರಚಿಸಿದ ಬೈಲಾಗಳ ಮೂಲಕ ನಿರ್ಧರಿಸತಕ್ಕದ್ದು.

(3) ಮುನ್ಸಿಪಲ್ ಕೌನ್ಸಿಲ್ ನಿರ್ವಹಿಸುತ್ತಿರುವ ಬಸ್ ನಿಲ್ದಾಣದ ಉಪಯೋಗಕ್ಕಾಗಿ 324ನೇ ಪ್ರಕರಣದ ಮೇರೆಗೆ ರಚಿಸಿದ ಬೈಲಾಗಳ ಮೂಲಕ ನಿಗದಿಗೊಳಿಸಬಹುದಾದಂತೆ ಮುನ್ಸಿಪಲ್ ಕೌನ್ಸಿಲ್ ಬಸ್ ಒಂದಕ್ಕೆ [1][ಐದು ರೂಪಾಯಿ][1] ಗಳಿಗೆ ಮೀರದಂಥ ಫೀಜನ್ನು ವಿಧಿಸಬಹುದು:

1.1984ರ ಅಧಿನಿಯಮ 33ರ ಮೂಲಕ 26.6.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಪರಂತು, ಪ್ರಯಾಣಿಕರಿಗಾಗಿ ಸಾಕಷ್ಟು ಸೌಲಭ್ಯಗಳುಳ್ಳ ಬಸ್ ನಿಲ್ದಾಣವನ್ನು ಸ್ಥಾಪಿಸಿದ ಹೊರತು ಮತ್ತು ಅಂಥ ವಿಧಿಸುವಿಕೆಗಾಗಿ ಡೆಪ್ಯುಟಿ ಕಮಿಷನರ್ ನ ಪೂರ್ವ ಮಂಜೂರಾತಿಯನ್ನು ಪಡೆದಿರುವ ಹೊರತು ಈ ಉಪ-ಪ್ರಕರಣದ ಮೇರೆಗೆ ಯಾವುದೇ ಅಂಥ ಫೀಜನ್ನು ವಿಧಿಸತಕ್ಕದ್ದಲ್ಲ.

(4) ಮುನ್ಸಿಪಲ್ ಕೌನ್ಸಿಲ್‌ಗೆ ಸೇರಿದ 324ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ ಹೇಳಿದ ಯಾವುದೇ ಅಂಥ ಸ್ಥಳದ ಉಪಯೋಗಕ್ಕಾಗಿ ಆ ಉಪ-ಪ್ರಕರಣದ (ಕ) ಖಂಡದ ಮೇರೆಗಿನ ಬೈಲಾಗಳ ಮೂಲಕವಾಗಿಯಾಗಲಿ ಅಥವಾ ಮುನ್ಸಿಪಲ್ ಆಡಳಿತಕ್ಕೆ ಸಂಬಂಧಿಸಿದ ಯಾವುದೇ ಇತರ ಉದ್ದೇಶಕ್ಕಾಗಿ ಆಗಲಿ ಗೊತ್ತುಪಡಿಸಿದಂಥ ಫೀಜುಗಳನ್ನು ಸಹಮುನ್ಸಿಪಲ್ ಕೌನ್ಸಿಲ್ ವಿಧಿಸಬಹುದು.

(5) ಬಹಿರಂಗ ಹರಾಜು ಅಥವಾ ಖಾಸಗಿ ಕರಾರಿನ ಮೂಲಕ 4ನೇ ಉಪ-ಪ್ರಕರಣದ ಮೇರೆಗೆ ವಿಧಿಸಬಹುದಾದ ಯಾವುದೇ ಫೀಜಿನ ವಸೂಲಿಯನ್ನು ಗುತ್ತಿಗೆಗೆ ಕೊಡುವುದು ಮುನ್ಸಿಪಲ್ ಕೌನ್ಸಿಲ್ ಗೆ ಕಾನೂನು ಸಮ್ಮತವಾಗಿರತಕ್ಕದ್ದು.

(6) ಉಪ-ಪ್ರಕರಣ 5ರ ಮೇರೆಗೆ ಯಾವುದೇ ಫೀಜನ್ನು ಗುತ್ತಿಗೆಗೆ ಕೊಟ್ಟಾಗ, ಅಂಥ ಫೀಜನ್ನು ಸಂಗ್ರಹಿಸಲು ಗುತ್ತಿಗೆ ಪಡೆದವನು ನಿಯೋಜಿಸಿದ ಯಾರೇ ವ್ಯಕ್ತಿ ಅಥವಾ ಗುತ್ತಿಗೆ ಪಡೆದವನು ಸ್ವತಃ ಗುತ್ತಿಗೆಯ ಷರತ್ತುಗಳಿಗೊಳಪಟ್ಟು, ಫೀಜನ್ನು ಸಂಗ್ರಹಿಸಬಹುದು ಅಥವಾ ಫೀಜನ್ನು ಸಂದಾಯ ಮಾಡಲು ಹೊಣೆಯಾಗಿರುವ ಆದರೆ ಅದನ್ನು ಸಂದಾಯ ಮಾಡಲು ನಿರಾಕರಿಸಿದ ಯಾರೇ ವ್ಯಕ್ತಿಯನ್ನು ಯಾವುದರ ಉಪಯೋಗಕ್ಕಾಗಿ ಫೀಜನ್ನು ಸಂದಾಯ ಮಾಡಬೇಕಾಗಿದೆಯೋ ಆ ಸ್ಥಳದಿಂದ ಹೊರಹಾಕಬಹುದು.

ತೆರಿಗೆಗಳಿಗೆ ಸಂಬಂಧಿಸಿದಂತೆ ವಿಶೇಷ ಉಪಬಂಧಗಳು

139. ತೆರಿಗೆಗಳಿಗೆ ಬದಲಾಗಿ ನಿಗದಿಪಡಿಸಿದ ಚಾರ್ಜುಗಳು ಮತ್ತು ಅವುಗಳ ಸಂದಾಯಕ್ಕಾಗಿ ಒಪ್ಪಂದಗಳು.- (1) ಮುನ್ಸಿಪಲ್ ಕೌನ್ಸಿಲ್, ನೀರಿನ ದರವನ್ನು ವಿಧಿಸುವ ಬದಲು ಅಥವಾ ವೈಯಕ್ತಿಕ ಪ್ರಕರಣಗಳಲ್ಲಿ ನೀರಿನ ದರವನ್ನು ವಿಧಿಸಿರುವಲ್ಲಿ, ಮುನ್ಸಿಪಲ್ ಕೌನ್ಸಿಲ್‌ಗೆ ಸೇರಿದ ನೀರಿನ ಸರಬರಾಜಿಗೆ ಸಂಬಂಧಿಸಿದಂತೆ ಅಥವಾ ಯಾವುದೇ ಖಾಸಗಿ [1][ಖಾಲಿಭೂಮಿಗಳ ಅಥವಾ ಕಟ್ಟಡಗಳಿಗೆ][1] ಸಂಬಂಧಪಟ್ಟಂತೆ ಉಪಯೋಗಕ್ಕಾಗಿ ವಿಧಿಸಿದ ದರವನ್ನು ವಸೂಲಿ ಮಾಡುವ ಬದಲು,-

1.2003ರ ಅಧಿನಿಯಮ 31ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಎ) ಪ್ರಕರಣ 323ರ ಮೇರೆಗೆ ಜಾರಿಯಲ್ಲಿರುವ ನಿಯಮಗಳಲ್ಲಿ ನಿರ್ದಿಷ್ಟಪಡಿಸತಕ್ಕಂಥ ದರಗಳಿಗೆ ಮೀರದಂಥ ದರಗಳಲ್ಲಿ ಅಳತೆ ಮೂಲಕ ಖಚಿತಪಡಿಸಿಕೊಂಡಂತೆ ಹಾಗೆ ಉಪಯೋಗಿಸಿದ ಪ್ರಮಾಣಕ್ಕೆ ಅನುಸಾರವಾಗಿ ಸರಬರಾಜಿಗೆ ಚಾರ್ಜುಗಳನ್ನು ನಿಗದಿಪಡಿಸಬಹುದು; ಅಥವಾ

(ಬಿ) ಅವನ ಅರ್ಜಿಯ ಮೇಲೆ ಯಾರೇ ವ್ಯಕ್ತಿಯೊಂದಿಗೆ ಅಂಥ ವ್ಯಕ್ತಿಯೊಂದಿಗೆ ಮಾಡಿಕೊಂಡ ಒಪ್ಪಂದದ ಮೂಲಕ ಅದು ನಿಗದಿಪಡಿಸುವಂಥ ನಿಬಂಧನೆಗಳು ಮತ್ತು ಅಂಥ ಷರತ್ತುಗಳಿಗೊಳಪಟ್ಟು ಅಂಥ ಪರಿಮಾಣಗಳಲ್ಲಿ ಅಥವಾ ಅಂಥ ಉದ್ದೇಶಗಳಿಗಾಗಿ ಅಲಂಕಾರಿಕ ಅಥವಾ ನೀರಾವರಿ ಅಥವಾ ವ್ಯಾಪಾರ, ತಯಾರಿಕೆ ಅಥವಾ ಇತರ ಯಾವುದೇ ಉದ್ದೇಶಕ್ಕಾಗಿಯಾಗಲಿ ಮುನ್ಸಿಪಲ್ ಕೌನ್ಸಿಲ್‌ಗೆ ಸೇರಿದ ನೀರನ್ನು ನಿಯತಕಾಲಿಕವಾಗಿ ಅಥವಾ ಅನ್ಯಥಾ ಸಂದಾಯದ ಮೇಲೆ ಸರಬರಾಜು ಮಾಡಲು ಏರ್ಪಾಡು ಮಾಡಬಹುದು:

ಪರಂತು,-

(i) ಮೀಟರುಗಳು, ಸಂಪರ್ಕ ಕೊಳವೆಗಳು ಮತ್ತು ಅಂಥ ಸರಬರಾಜಿಗಾಗಿ ಅವಶ್ಯಕವಾದ ಮತ್ತು ಪ್ರಾಸಂಗಿಕವಾದ ಎಲ್ಲ ಇತರ ಅಂಥ ಕಾಮಗಾರಿಗಳು ಮತ್ತು ಎಲ್ಲ ದುರಸ್ತಿಗಳು, ವಿಸ್ತರಣೆಗಳು ಮತ್ತು ಅಂಥ ಕಾಮಗಾರಿಗಳ ಬದಲಾವಣೆಗಳು ಮುನ್ಸಿಪಲ್ ಕೌನ್ಸಿಲ್‌ನ ನಿಯಂತ್ರಣದಲ್ಲಿ ಇರತಕ್ಕದ್ದು ಮತ್ತು ಅದರ ವೆಚ್ಚವು ಮುನ್ಸಿಪಲ್ ಕೌನ್ಸಿಲ್‌ನ ನಿಯಮಗಳು ಅಥವಾ ಬೈಲಾಗಳಿಗೆ ಅಸಂಗತವಾಗದಷ್ಟರಮಟ್ಟಿಗೆ ವೆಚ್ಚಗಳಿಗೆ ಅಥವಾ ಅಂಥ ಸರಬರಾಜಿಗೆ ಸಂಬಂಧಪಟ್ಟಂತೆ ನಿಗದಿಪಡಿಸಿದ ಸಂದಾಯಗಳಿಗೆ ಹೊಣೆಯಾಗಿರುವ ವ್ಯಕ್ತಿಗಳು ಭರಿಸತಕ್ಕದ್ದು; ಮತ್ತು

(ii) ಅಂಥ ನೀರಿನ ಸರಬರಾಜನ್ನು ಅದರ ಪರಿಮಿತಿ ಅಥವಾ ನಿಲುಗಡೆ ಮತ್ತು 324ನೇ ಪ್ರಕರಣದ ಮೇರೆಗೆ ತತ್ಕಾಲದಲ್ಲಿ ಜಾರಿಯಲ್ಲಿರುವ ಬೈಲಾಗಳಲ್ಲಿ ನಿಯಮಿಸಲಾದಂತೆ ಪೋಲು ಅಥವಾ ದುರುಪಯೋಗದ ತಡೆಗೆ ಸಂಬಂಧಿಸಿದಂತೆ ಇರತಕ್ಕದ್ದು ಮತ್ತು ಅಂಥ ಎಲ್ಲ ಷರತ್ತುಗಳಿಗೊಳಪಟ್ಟು ಮಂಜೂರು ಮಾಡಲಾಗಿದೆಯೆಂದು ಭಾವಿಸತಕ್ಕದ್ದು.

(2) ಮುನ್ಸಿಪಲ್ ಕೌನ್ಸಿಲ್, ಯಾವುದೇ ಒಂದು ಉದ್ದೇಶಕ್ಕಾಗಿ ಉಪಯೋಗಿಸಿದ ಮತ್ತು ಒಂದೇ ವ್ಯವಸ್ಥಾಪನೆಯಲ್ಲಿರುವ ಯಾವುದೇ ಕಾರ್ಖಾನೆ, ಹೊಟೇಲ್, ಕ್ಲಬ್ ಅಥವಾ [1][ಕಟ್ಟಡಗಳ ಅಥವಾ ಖಾಲಿಭೂಮಿಗಳ][1] ಯಾವುದೇ ಸಮೂಹದ ಸ್ವಚ್ಛತೆಗಾಗಿ ಏರ್ಪಾಡು ಮಾಡಿರುವಲ್ಲಿ ಈ ಅಧ್ಯಾಯದ ಮೇರೆಗೆ ಅದಕ್ಕೆ ಸಂಬಂಧಪಟ್ಟಂತೆ ಯಾವುದೇ ವಿಶೇಷ ನೈರ್ಮಲ್ಯ ಉಪಕರವನ್ನು ವಿಧಿಸುವ ಬದಲು, ಅದರ ನಿಯತಕಾಲಿಕ ಸಂದಾಯಗಳಿಗಾಗಿ ವಿಶೇಷ ದರ ಮತ್ತು ದಿನಾಂಕಗಳು ಹಾಗೂ ಇತರ ಷರತ್ತುಗಳನ್ನು ನಿಗದಿಪಡಿಸಬಹುದು; ಅಂಥ ದರ, ದಿನಾಂಕಗಳು ಮತ್ತು ಷರತ್ತುಗಳನ್ನು,-

(i) 323ನೇ ಪ್ರಕರಣದ ಮೇರೆಗೆ ತತ್ಕಾಲದಲ್ಲಿ ಜಾರಿಯಲ್ಲಿರುವ ನಿಯಮಗಳ ಅನುಸಾರವಾಗಿಯಾಗಲಿ; ಅಥವಾ

(ii) ಉಪಕರಕ್ಕೆ ಅನ್ಯಥಾ ಗುರಿಯಾಗಬಹುದಾದ ವ್ಯಕ್ತಿಯೊಂದಿಗೆ ಬರಹದಲ್ಲಿನ ಒಪ್ಪಂದದ ಮೂಲಕವಾಗಿಯಾಗಲಿ,

- ನಿರ್ಧರಿಸತಕ್ಕದ್ದು:

ಪರಂತು, ಅಂಥ ದರದ ಮೊಬಲಗನ್ನು, ನಿಗದಿಪಡಿಸುವಲ್ಲಿ ಒದಗಿಸಲಾಗುವ ಸೇವೆಗೆ ಮುನ್ಸಿಪಲ್ ಕೌನ್ಸಿಲ್‌ಗೆ ಸಂಭವನೀಯ ಖರ್ಚಿನ ಬಗ್ಗೆ ಯುಕ್ತ ಗಮನ ನೀಡತಕ್ಕದ್ದು.

1.2003ರ ಅಧಿನಿಯಮ 31ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) ಮುನ್ಸಿಪಲ್ ಕೌನ್ಸಿಲ್ ಸವಾರಿ, ಎಳೆಯುವುದಕ್ಕಾಗಿ ಅಥವಾ ಹೊರುವುದಕ್ಕಾಗಿ ಉಪಯೋಗಿಸುವ ಮತ್ತು ಅಂಥ ಉಪಯೋಗಕ್ಕಾಗಿ [1][ಮುನ್ಸಿಪಲ್ ಏರಿಯಾ][1]ದೊಳಗೆ ಇಟ್ಟ ವಾಹನಗಳು ಅಥವಾ ಪ್ರಾಣಿಗಳ ಮೇಲೆ ತೆರಿಗೆಯನ್ನು ವಿಧಿಸಿರುವಲ್ಲಿ, ಹಿಂದೆ ಹೇಳಿದಂತೆ ವಿಧಿಸಿದ ತೆರಿಗೆಯಿಂದಾಗಿ ಸಂದಾಯ ಮಾಡಲು ಅಂಥ ಇಟ್ಟುಕೊಂಡಿರುವವನು ಅನ್ಯಥಾ ಹೊಣೆಗಾರನಾಗಿರುತ್ತಿದ್ದನೋ ಆ ಯಾವುದೇ ಮೊಬಲಗಿಗೆ ಬದಲಾಗಿ, ಒಂದು ಬಾರಿಗೆ ಒಂದು ವರ್ಷ ಮೀರದ ಯಾವುದೇ ಅವಧಿಗಾಗಿ ಒಟ್ಟಿಗೆ ಸಂದಾಯ ಮಾಡುವುದಕ್ಕಾಗಿ ಯಾವುದೇ ಕುದುರೆಶಾಲೆ ಅಥವಾ ಮಾರಾಟಕ್ಕಾಗಿ ಮತ್ತು ಬಾಡಿಗೆಗಾಗಿ ಇಟ್ಟ ಕುದುರೆಗಳನ್ನು ಅಥವಾ ವಾಹನಗಳನ್ನು ಇಟ್ಟುಕೊಂಡಿರುವವನೊಂದಿಗೆ ಅದು ರಾಜಿ ಮಾಡಿಕೊಳ್ಳಬಹುದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(4) ಮುನ್ಸಿಪಲ್ ಕೌನ್ಸಿಲ್ ಯಾರೇ ವ್ಯಕ್ತಿಯೊಂದಿಗೆ ಅಂಥ ವ್ಯಕ್ತಿಗೆ ಸೇರಿದ ಯಾವುದೇ ವಾಹನದ ಸಂಬಂಧದಲ್ಲಿ ಸಂದಾಯ ಮಾಡಬೇಕಾದ ಎಲ್ಲ ದಾರಿಸುಂಕಗಳಿಗೆ ಬದಲಾಗಿ ಒಮ್ಮೆಗೆ ಒಂದು ವರ್ಷಕ್ಕೆ ಮೀರದಂಥ ಅವಧಿಗೆ ಮುನ್ಸಿಪಲ್ ಕೌನ್ಸಿಲ್ ಅನುಮೋದಿಸಿದ ಪ್ರಮಾಣದ ಅನುಸಾರವಾಗಿ ಮತ್ತು ಮಾಸಿಕವಾಗಿ, ತ್ರೈಮಾಸಿಕವಾಗಿ ಅಥವಾ ಅರ್ಧವಾರ್ಷಿಕವಾಗಿ ಸಂದಾಯ ಮಾಡುವುದಕ್ಕಾಗಿ ರಾಜಿ ಮಾಡಿಕೊಳ್ಳಬಹುದು ಮತ್ತು ಆ [1][ಮುನ್ಸಿಪಲ್ ಏರಿಯಾ][1]ದ ಪರಿಮಿತಿಯೊಳಗೆ ವಾಹನ ಅಥವಾ ಪ್ರಾಣಿಯ ಉಚಿತ ಪ್ರವೇಶಕ್ಕಾಗಿ ಪಾಸನ್ನು ಕೊಡಬಹುದು: ಪರಂತು, ವಿಧಿಸಿದ ಮೊತ್ತವು ಪಾಸನ್ನು ನೀಡಿದ ಅವಧಿಯಲ್ಲಿ ವಾಹನವು ದಿನಕ್ಕೊಂದು ಬಾರಿ ದಾರಿ ಸುಂಕವನ್ನು ಸಂದಾಯ ಮಾಡಬೇಕಾಗಿದ್ದರೆ ಯಾವ ಮೊಬಲಗನ್ನು ಅಂಥ ವ್ಯಕ್ತಿಯು ಸಂದಾಯ ಮಾಡಲು ಹೊಣೆಯಾಗಿರುತ್ತಿದ್ದನೋ ಆ ಮೊಬಲಗಿಗೆ ಅರ್ಧಕ್ಕಿಂತ ಕಡಿಮೆಯಿಲ್ಲದಂತಿರತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(5) ಉಪ-ಪ್ರಕರಣ (1) ರ ಮೇರೆಗೆ ಚಾರ್ಜುಗಳು, ಸಂದಾಯಗಳು ಅಥವಾ ವೆಚ್ಚಗಳಿಗಾಗಿ ಅಥವಾ (2)ನೇ ಉಪ-ಪ್ರಕರಣದ ಮೇರೆಗೆ, ವಿಶೇಷ ದರವೆಂದು ಅಥವಾ (3)ನೇ ಉಪ-ಪ್ರಕರಣದ ಮೇರೆಗೆ ಒಟ್ಟು ಮೊತ್ತವೆಂದು ಮುನ್ಸಿಪಲ್ ಕೌನ್ಸಿಲ್ ಕ್ಲೇಮು ಮಾಡಿದ ಪ್ರತಿಯೊಂದು ಮೊತ್ತವನ್ನು VII ನೇ ಅಧ್ಯಾಯದ ಉದ್ದೇಶಗಳಿಗಾಗಿ ಸದರಿ ಅಧ್ಯಾಯದ ಮೇರೆಗೆ ವಸೂಲು ಮಾಡಬಹುದಾದ ತೆರಿಗೆಯಂತೆ ಕ್ಲೇಮು ಮಾಡಿದ ಮೊಬಲಗಿನ ಹಾಗೆ ಭಾವಿಸತಕ್ಕದ್ದು ಮತ್ತು ಅದೇ ರೀತಿಯಲ್ಲಿಯೇ ವಸೂಲೀಯವಾಗತಕ್ಕದ್ದು:

ಪರಂತು, ಈ ಪ್ರಕರಣದಲ್ಲಿರುವುದಾವುದೂ, ಮುನ್ಸಿಪಲ್ ಕೌನ್ಸಿಲ್‌ಗೆ ಸೇರಿದ ಆದರೆ ಈ ಅಧಿನಿಯಮದ ಉದ್ದೇಶಗಳಿಗಾಗಿ ಅಗತ್ಯವಾಗಿರದ ಯಾವುದೇ ಪ್ರಮಾಣದ ನೀರನ್ನು ಮುನ್ಸಿಪಲ್ ಕೌನ್ಸಿಲ್ ಸೂಕ್ತವೆಂದು ಯೋಚಿಸಬಹುದಾದಂಥ ದರಗಳು ಮತ್ತು ಷರತ್ತುಗಳ ಮೇಲೆ [1][ಮುನ್ಸಿಪಲ್ ಏರಿಯಾ][1]ದ ಪರಿಮಿತಿಗಳಾಚೆ ಉಪಯೋಗಿಸಲು, ಸರಬರಾಜು ಮಾಡಲು ಯಾರೇ ವ್ಯಕ್ತಿಯೊಂದಿಗೆ ಕರಾರು ಮಾಡಿಕೊಳ್ಳಲು ಮುನ್ಸಿಪಲ್ ಕೌನ್ಸಿಲ್ ನ ಹಕ್ಕು ಅಥವಾ ಅಧಿಕಾರಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

140. ಆಕ್ಷೇಪಣೀಯ ತೆರಿಗೆಗಳ ವಿಧಿಸುವಿಕೆಯನ್ನು ಅಮಾನತ್ತುಗೊಳಿಸಲು ಅಥವಾ ನಿಷೇಧಿಸಲು ಸರ್ಕಾರದ ಅಧಿಕಾರ.- (1) ಮುನ್ಸಿಪಲ್ ಕೌನ್ಸಿಲ್ ವಿಧಿಸಬಹುದಾದ ಯಾವುದೇ ತೆರಿಗೆ ಅಥವಾ ಫೀಜು ಅದರ ವ್ಯಾಪ್ತಿಯಲ್ಲಿ ಅನುಚಿತವಾದುದು ಅಥವಾ ಅದರ ಅಥವಾ ಅದರ ಯಾವುದೇ ಭಾಗದ ವಿಧಿಸುವಿಕೆಯು ಸಾರ್ವಜನಿಕರ ಹಿತದೃಷ್ಟಿಗಳಿಗೆ ಹಾನಿಕರವಾದುದೆಂದು ಯಾವುದೇ ಸಮಯದಲ್ಲಿ ಮಾಡಿದ ಫಿರ್ಯಾದಿನ ಮೇಲೆ ಅಥವಾ ಅನ್ಯಥಾ ಸರ್ಕಾರಕ್ಕೆ ಕಂಡುಬಂದರೆ ಅದು ಈ ಬಗ್ಗೆ ನಿಗದಿಗೊಳಿಸತಕ್ಕ ಅವಧಿಯೊಳಗೆ ಸದರಿ ತೆರಿಗೆ ಅಥವಾ ಫೀಜಿನಲ್ಲಿ ಇದೆ ಎಂದು ಕಂಡುಬರುವ ಯಾವುವೇ ಆಕ್ಷೇಪಣೆಯನ್ನು ತೆಗೆದುಹಾಕಲು ಕ್ರಮಗಳನ್ನು ಕೈಗೊಳ್ಳಲು ಸದರಿ ಮುನ್ಸಿಪಲ್ ಕೌನ್ಸಿಲ್‌ನ್ನು ಅಗತ್ಯಪಡಿಸಬಹುದು ಮತ್ತು ಹಾಗೆ ನಿಗದಿಪಡಿಸಿದ ಅವಧಿಯೊಳಗೆ ಅಂಥ ಅಗತ್ಯತೆಗಳನ್ನು ಸರ್ಕಾರಕ್ಕೆ ತೃಪ್ತಿಯಾಗುವಂತೆ ಜಾರಿಗೆ ತರದಿದ್ದರೆ ಅದು ಅಧಿಸೂಚನೆಯ ಮೂಲಕ ಅದಕ್ಕೆ ಆಕ್ಷೇಪಣೆಯನ್ನು ತೆಗೆದುಹಾಕುವ ಸಮಯದವರೆಗೆ ಅಂಥ ತೆರಿಗೆ ಅಥವಾ ಫೀಜು ಅಥವಾ ಅದರ ಅಂಥ ಭಾಗದ ವಸೂಲಿಯನ್ನು ಅಮಾನತ್ತುಗೊಳಿಸಬಹುದು.

(2) ಸರ್ಕಾರವು ಯಾವುದೇ ಕಾಲದಲ್ಲಿ ಅಧಿಸೂಚನೆಯ ಮೂಲಕ ಯಾವುದೇ ಅಂಥ ಅಮಾನತ್ತನ್ನು ರದ್ದುಗೊಳಿಸಬಹುದು.

[1][141. ತೆರಿಗೆಗಳನ್ನು ವಿಧಿಸಲು ಮುನ್ಸಿಪಲ್ ಕೌನ್ಸಿಲ್‌ನ್ನು ಅಗತ್ಯಪಡಿಸಲು ಸರ್ಕಾರದ ಅಧಿಕಾರ.- ಸರ್ಕಾರವು ಅಧಿಸೂಚನೆಯ ಮೂಲಕ 94ನೇ ಪ್ರಕರಣದ ಅಡಿಯಲ್ಲಿ ತಾನು ಸೂಕ್ತವೆಂದು ಭಾವಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ವ್ಯಾಪ್ತಿಯವರೆಗೆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಯಾವುದೇ ತೆರಿಗೆಯನ್ನು ವಿಧಿಸುವಂತೆ, ಮುನಿಸಿಪಲ್ ಕೌನ್ಸಿಲ್ ಅಥವಾ ಪಟ್ಟಣ ಪಂಚಾಯಿತಿಯನ್ನು ಅಗತ್ಯಪಡಿಸಬಹುದು ಮತ್ತು ಸಂದರ್ಭಾನುಸಾರ ಮುನ್ಸಿಪಲ್ ಕೌನ್ಸಿಲ್ ಅಥವಾ ಪಟ್ಟಣ ಪಂಚಾಯಿತಿಯು ಅಗತ್ಯಪಡಿಸಲಾದಂತೆ ತೆರಿಗೆಯನ್ನು ವಿಧಿಸಲು ಕೂಡಲೇ ಮುಂದುವರಿಯತಕ್ಕದ್ದು:][1]

1.2003ರ ಅಧಿನಿಯಮ 21ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಅಧ್ಯಾಯ-VII
ಮುನ್ಸಿಪಲ್ ಕ್ಲೇಮುಗಳನ್ನು ವಸೂಲಿ ಮಾಡುವುದು

142. ತೆರಿಗೆಗಳಿಗಾಗಿ ಬಿಲ್ಲನ್ನು ಸಲ್ಲಿಸುವುದು.- (1) (ಎ) ಈ ಅಧಿನಿಯಮದ ಯಾವುದೇ ಉಪಬಂಧಗಳ ಮೂಲಕ ಅಥವಾ ಮೇರೆಗೆ ಈ ಅಧ್ಯಾಯದ ಮೂಲಕ ಉಪಬಂಧಿಸಲಾದ ರೀತಿಯಲ್ಲಿ ಯಾವುದೇ ಮೊಬಲಗನ್ನು ವಸೂಲೀಯವಾಗತಕ್ಕದ್ದೆಂದು ಘೋಷಿಸಿದಾಗ; ಅಥವಾ

(ಬಿ) ಯಾವುದೇ [1][ಮುನ್ಸಿಪಲ್ ಏರಿಯಾ][1]ದಲ್ಲಿ ಈಗ ವಿಧಿಸಿದ ಅಥವಾ ಇನ್ನು ಮುಂದೆ ವಿಧಿಸಬಹುದಾದ ಯಾವುದೇ ತೆರಿಗೆಯ ಬಾಬ್ತಿನ ಮೊಬಲಗು ಅಥವಾ ಕಂತು ಆಗಿ ಕ್ಲೇಮು ಮಾಡಬಹುದಾದಂಥ ಯಾವುದೇ ಮೊಬಲಗು ಬಾಕಿಯಾಗಿರುವಾಗ,

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಮುನ್ಸಿಪಲ್ ಕೌನ್ಸಿಲ್, ಕಾರ್ಯಸಾಧ್ಯವಾದಷ್ಟು ಕಡಿಮೆ ವಿಳಂಬದಲ್ಲಿ ಅದರ ಸಂದಾಯಕ್ಕೆ ಹೊಣೆಯಾಗಿರುವ ವ್ಯಕ್ತಿಗೆ, ಬಾಕಿಯೆಂದು ಕ್ಲೇಮು ಮಾಡಿದ ಮೊತ್ತಕ್ಕಾಗಿ ಬಿಲ್ಲನ್ನು ಸಲ್ಲಿಸುವಂತೆ ಮಾಡತಕ್ಕದ್ದು:

ಪರಂತು, ಯಾವುದೇ ಅಂಥ ಬಿಲ್ಲು,-

(i) ವಾಹನಗಳ ಮೇಲೆ ತೆರಿಗೆ;

(ii) ನಾಯಿಗಳ ಮೇಲೆ ತೆರಿಗೆ;

(iii) [1][xxx][1] ತಗಾದೆಯ ಮೇಲೆ ಸಂದಾಯ ಮಾಡಬೇಕಾದ ದಾರಿಸುಂಕ;

1. 1979ರ ಅಧಿನಿಯಮ 21ರ ಮೂಲಕ 31.3.1979 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(iv) ಜಾಹೀರಾತುಗಳ ಮೇಲಿನ ತೆರಿಗೆ

[1][(v) 105ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ವಿಧಿಸತಕ್ಕ ದಂಡವೂ ಸೇರಿದಂತೆ ಸ್ವತ್ತು ತೆರಿಗೆ][1]

1. 2001 ರ ಅಧಿನಿಯಮ 28 ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

- ಇವುಗಳ ಸಂದರ್ಭದಲ್ಲಿ ಅವಶ್ಯವಾಗಿರತಕ್ಕದ್ದಲ್ಲ:

ಮತ್ತು ಪರಂತು, ಅಂಥ ಯಾವುದೇ ಬಿಲ್ಲನ್ನು ಯಾರೇ ವ್ಯಕ್ತಿಗೆ ಅವನ ನಿಯೋಜಕನು ಅವನ ಸಂಬಳ, ಮಜೂರಿ ಅಥವಾ ಸಂಭಾವನೆಯಿಂದ ಮುರಿದುಕೊಳ್ಳಲಾದ ತೆರಿಗೆಯಷ್ಟರ ಮಟ್ಟಿಗೆ ವೃತ್ತಿ ತೆರಿಗೆ ಸಂದಾಯಕ್ಕಾಗಿ ಸಲ್ಲಿಸತಕ್ಕದ್ದಲ್ಲ.

(2) ಪ್ರತಿಯೊಂದು ಅಂಥ ಬಿಲ್ಲು,-

(ಎ) ಯಾವ ಅವಧಿಗಾಗಿ ಎಂಬುದನ್ನು; ಮತ್ತು

(ಬಿ) ಯಾವ ಸ್ವತ್ತು, ಉದ್ಯೋಗ ಅಥವಾ ವಸ್ತುವಿಗೆ ಸಂಬಂಧಪಟ್ಟಂತೆ ಮೊತ್ತವನ್ನು ಕ್ಲೇಮು ಮಾಡಲಾಗಿದೆಯೋ ಆ ಸ್ವತ್ತು, ಉದ್ಯೋಗ ಅಥವಾ ವಸ್ತುವನ್ನು ನಿರ್ದಿಷ್ಟಪಡಿಸತಕ್ಕದ್ದು, ಮತ್ತು,-

(i) ಸಂದಾಯ ಮಾಡಲು ತಪ್ಪಿದಲ್ಲಿ ಗುರಿಯಾದ ಹೊಣೆಗಾರಿಕೆ; ಮತ್ತು

(ii) ಅಂಥ ಕ್ಲೇಮಿನ ವಿರುದ್ಧ ಇಲ್ಲಿ ಇನ್ನು ಮುಂದೆ ಉಪಬಂಧಿಸಿದಂತೆ ಯಾವ ಕಾಲದೊಳಗೆ ಅಪೀಲನ್ನು ಸಲ್ಲಿಸಬಹುದೋ ಆ ಕಾಲದ ಬಗ್ಗೆ ನೋಟೀಸನ್ನು ಸಹ ಕೊಡತಕ್ಕದ್ದು.

(3) ಯಾವ ಮೊತ್ತಕ್ಕಾಗಿ ಯಾವುದೇ ಬಿಲ್ಲನ್ನು ಹಿಂದೆ ಹೇಳಿದಂತೆ ಸಲ್ಲಿಸಲಾಗಿದೆಯೋ ಆ ಯಾವುದೇ ಮೊತ್ತವನ್ನು ಮುನ್ಸಿಪಾಲಿಟಿ ಕಚೇರಿಯಲ್ಲಿ ಅಥವಾ ಅಂಥ ಸಂದಾಯಗಳನ್ನು ಸ್ವೀಕರಿಸುವುದಕ್ಕಾಗಿ ಆ ಬಗ್ಗೆ ಯಾವುದೇ ನಿಯಮದ ಮೂಲಕ ಅಧಿಕೃತನಾದ ವ್ಯಕ್ತಿಗೆ ಅದನ್ನು ಸಲ್ಲಿಸಿದ ಅಂದಿನಿಂದ ಹದಿನೈದು ದಿನಗಳೊಳಗಾಗಿ ಸಂದಾಯ ಮಾಡದಿದ್ದರೆ ಅಥವಾ ವಾಹನಗಳ ಮೇಲಿನ ತೆರಿಗೆ ಅಥವಾ ನಾಯಿಗಳ ಮೇಲಿನ ತೆರಿಗೆ ಅಥವಾ [1][105ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ವಿಧಿಸತಕ್ಕ ದಂಡವೂ ಸೇರಿದಂತೆ ಸ್ವತ್ತು ತೆರಿಗೆ][1] ಯನ್ನು ಅದು ಬಾಕಿಯಾದ ತರುವಾಯ ಸಂದಾಯ ಮಾಡದಿದ್ದರೆ, ಮುನ್ಸಿಪಲ್ ಕೌನ್ಸಿಲ್ ಅದನ್ನು ಸಂದಾಯ ಮಾಡಲು ಹೊಣೆಗಾರನಾದ ವ್ಯಕ್ತಿಯ ಮೇಲೆ Vನೇ ಅನುಸೂಚಿಯಲ್ಲಿ ವಿವರಿಸಿದ ನಮೂನೆಯಲ್ಲಿ ಅಥವಾ ಅಂಥದೇ ಪರಿಣಾಮವುಳ್ಳ ತಗಾದೆ ನೋಟೀಸನ್ನು ಜಾರಿ ಮಾಡಿಸತಕ್ಕದ್ದು.

1.2001ರ ಅಧಿನಿಯಮ 28ರ ಮೂಲಕ 12.11.2001 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

143. ಜಪ್ತಿ.- (1) 142ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ತಗಾದೆ ನೋಟೀಸನ್ನು ಯಾವ ವ್ಯಕ್ತಿಯ ಮೇಲೆ ಜಾರಿ ಮಾಡಲಾಗಿದೆಯೋ ಆ ವ್ಯಕ್ತಿಯು ಅಂಥ ತಗಾದೆಯ ನೋಟೀಸ್ ಜಾರಿ ಮಾಡಿದಂದಿನಿಂದ ಮೂವತ್ತು ದಿನಗಳೊಳಗಾಗಿ,-

(ಎ) ನೋಟೀಸಿನಲ್ಲಿ ತಗಾದೆ ಮಾಡಿದ ಮೊತ್ತವನ್ನು ಸಂದಾಯ ಮಾಡದಿದ್ದರೆ;

(ಬಿ) ಅದನ್ನು ಏಕೆ ಸಂದಾಯ ಮಾಡಲಾಗುವುದಿಲ್ಲವೆಂದು ಮುನ್ಸಿಪಲ್ ಕೌನ್ಸಿಲ್ ಅಥವಾ ಈ ಬಗ್ಗೆ ಮುನ್ಸಿಪಲ್ ಕೌನ್ಸಿಲ್ ನಿಯಮದ ಮೂಲಕ ನೇಮಕ ಮಾಡಬಹುದಾದಂಥ ಅಧಿಕಾರಿ ಅಥವಾ ಮುನ್ಸಿಪಾಲಿಟಿ ಕಮಿಷನರ್ ಅಥವಾ ಚೀಫ್ ಆಫೀಸರ್ ಯಾರಾದರೂ ಇದ್ದರೆ, ಅವರಿಗೆ, ಮನದಟ್ಟಾಗುವಂತೆ ಕಾರಣವನ್ನು ತೋರಿಸದಿದ್ದರೆ; ಅಥವಾ

(ಸಿ) ತಗಾದೆ ವಿರುದ್ಧ 150ನೇ ಪ್ರಕರಣದ ಉಪಬಂಧಗಳ ಅನುಸಾರವಾಗಿ ಅಪೀಲನ್ನು ಸಲ್ಲಿಸದಿದ್ದರೆ

- ಅವನು ಸಂದಾಯ ಮಾಡಲು ತಪ್ಪಿರುವನೆಂದು ಭಾವಿಸತಕ್ಕದ್ದು ಮತ್ತು ಆ ತರುವಾಯ ಮುನ್ಸಿಪಾಲಿಟಿ ಕಮಿಷನರ್ ಅಥವಾ ಚೀಫ್ ಆಫೀಸರ್ ನು ನಿರ್ಧರಿಸಬಹುದಾದಂತೆ ತೆರಿಗೆ ಮೊಬಲಗಿನ ಶೇಕಡಾ ಇಪ್ಪತ್ತರಷ್ಟು ಮೀರದಂಥ ಮೊತ್ತವನ್ನು ತೆರಿಗೆಯ ಬಾಕಿಯೆಂಬಂತೆ ತೆರಿಗೆಯ ಮೊಬಲಗಿನ ಜೊತೆಗೆ ಅವನಿಂದ ದಂಡದ ರೂಪವಾಗಿ ವಸೂಲಿ ಮಾಡಬಹುದು ಮತ್ತು ತೆರಿಗೆ ಹಾಗೂ ವಸೂಲಿಯ ಎಲ್ಲ ಖರ್ಚುಗಳೊಂದಿಗೆ ದಂಡವನ್ನು XIನೇ ಅನುಸೂಚಿಯಲ್ಲಿ ವಿವರಿಸಿದ ಅಥವಾ ಅಂಥದೇ ಪರಿಣಾಮದ ನಮೂನೆಯಲ್ಲಿ ಮುನ್ಸಿಪಲ್ ಕೌನ್ಸಿಲ್ ಹೊರಡಿಸುವಂತೆ ಮಾಡುವ ವಾರಂಟಿನ ಮೂಲಕ [1][ವಾರೆಂಟು ನೀಡಿದ ದಿನಾಂಕದಿಂದ ಎರಡು ತಿಂಗಳೊಳಗಾಗಿ][1] ತಪ್ಪಿತಸ್ಥನ ಚರಸ್ವತ್ತಿನ ಜಪ್ತಿ ಮಾರಾಟದ ಅಥವಾ ಸ್ಥಿರಸ್ವತ್ತಿನ ಜಪ್ತಿ ಮತ್ತು ಮಾರಾಟದ ಮೂಲಕ ವಸೂಲ್ಮಾಡಬಹುದು: ಪರಂತು, ಸರ್ಕಾರವು ಕ್ಲೇಮು ಮಾಡಿದ ಯಾವುದೇ ಮೊತ್ತದ ವಸೂಲಿಗಾಗಿ ಯಾವುದೇ ಅಂಥ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಮುನ್ನೆಚ್ಚರಿಕೆ ಅಥವಾ ಅನ್ಯಥಾ ಕ್ರಮಗಳನ್ನು ತೆಗೆದುಕೊಂಡಿರುವಲ್ಲಿ, ಅಂಥ ಸ್ವತ್ತಿಗೆ ಸಂಬಂಧಿಸಿದಂತೆ ಈ ಅಧ್ಯಾಯದ ಮೇರೆಗಿನ ಯಾವುವೇ ವ್ಯವಹರಣೆಗಳು ಕೊನೆಗೊಳ್ಳತಕ್ಕದ್ದು.

1.2024ರ ಅಧಿನಿಯಮ 43ರ ಮೂಲಕ ದಿ:10.09.2024 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) ಈ ಪ್ರಕರಣದ ಮೇರೆಗೆ ಹೊರಡಿಸಿದ ಪ್ರತಿಯೊಂದು ವಾರಂಟಿಗೆ ಅದನ್ನು ಹೊರಡಿಸುವಂತೆ ಮಾಡಿದ ಮುನ್ಸಿಪಲ್ ಕಮಿಷನರ್ ಅಥವಾ ಮುನ್ಸಿಪಲ್ ಕೌನ್ಸಿಲ್‌ನ ಚೀಫ್ ಆಫೀಸರ್ ನು ರುಜು ಮಾಡತಕ್ಕದ್ದು.

(3) ಮುನ್ಸಿಪಲ್ ಕೌನ್ಸಿಲ್‌ನ ನಿಯಂತ್ರಣದಲ್ಲಿರುವ ಪ್ರದೇಶದಲ್ಲಿ ಆ ಸ್ವತ್ತು ಇರುವಲ್ಲಿ ವಾರಂಟ್ ನ್ನು ಮುನ್ಸಿಪಲ್ ಕೌನ್ಸಿಲ್‌ನ ಒಬ್ಬ ಅಧಿಕಾರಿಗೆ ಸಂಭೋದಿಸತಕ್ಕದ್ದು. ಈ ಅಧಿನಿಯಮದ ಅಥವಾ [2][ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್‌ಗಳ ಅಧಿನಿಯಮ, 1976][2] ರ ಮೇರೆಗೆ ರಚಿಸಲಾದ ಬೇರೊಂದು [1][ಮುನ್ಸಿಪಲ್ ಏರಿಯಾ][1] ದಲ್ಲಿ ಅಥವಾ ದಂಡು ಪ್ರದೇಶದಲ್ಲಿ ಅಥವಾ ಈ ಅಧಿನಿಯಮದ ಮೇರೆಗೆ ರಚಿತವಾದ [1][ಮುನ್ಸಿಪಲ್ ಏರಿಯಾ][1] ದಂಥ ಸ್ಥಳದಲ್ಲಿ ಸ್ವತ್ತು ಇರುವಲ್ಲಿ ವಾರಂಟ್ ನ್ನು ಸಂದರ್ಭಾನುಸಾರ ಸಂಬಂಧಪಟ್ಟ ನಿಗಮವು ಅಥವಾ ಮುನ್ಸಿಪಲ್ ಕೌನ್ಸಿಲ್‌ನ ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಅಫೀಸರ್ ನಿಗೆ ಅಥವಾ ದಂಡು ಪ್ರದೇಶದ ಕಾರ್ಯನಿರ್ವಾಹಕ ಅಧಿಕಾರಿಗೆ ಅಥವಾ ತಾಲ್ಲೂಕಿನ ತಹಶೀಲ್ದಾರನಿಗೆ ಸಂಭೋಧಿಸತಕ್ಕದ್ದು:

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2.2000ರ ಅಧಿನಿಯಮ 22ರ ಮೂಲಕ 29.11.2000 ದಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಪರಂತು, ಅಂಥ ಮುನ್ಸಿಪಲ್ ಕಮಿಷನರ್, ಮುಖ್ಯಾಧಿಕಾರಿ, ಕಾರ್ಯನಿರ್ವಾಹಕ ಅಧಿಕಾರಿ ಅಥವಾ ತಹಶೀಲ್ದಾರನು ಅಂಥ ವಾರಂಟನ್ನು ಅಧೀನ ಅಧಿಕಾರಿಗೆ ಹಿಂಬರಹ ಮಾಡಬಹುದು.

(4) ಉಪ-ಪ್ರಕರಣ (2)ರ ಮೇರೆಗೆ ಹೊರಡಿಸಲಾದ ವಾರಂಟ್ ನ್ನು ಯಾವ ಅಧಿಕಾರಿಗೆ ಸಂಭೋಧಿಸಲಾಗಿದೆಯೋ ಅಥವಾ ಹಿಂಬರಹ ಮಾಡಲಾಗಿದೆಯೋ ಆ ಯಾರೇ ಅಧಿಕಾರಿಗೆ ಅಭಿಗ್ರಹಿಸಲು ಗುರಿಯಾಗಿರುವಂಥ ಸ್ವತ್ತನ್ನು ಅಂಥ ಕಟ್ಟಡವು ಒಳಗೊಂಡಿದೆಯೆಂದು ನಂಬಲು ಅವನಿಗೆ ಯುಕ್ತ ಆಧಾರಗಳಿದ್ದರೆ, ಮತ್ತು ತನ್ನ ಅಧಿಕಾರ ಮತ್ತು ಉದ್ದೇಶವನ್ನು ತಿಳಿಸಿದ ತರುವಾಯ

ಮತ್ತು ಪ್ರವೇಶಕ್ಕೆ ಕ್ರಮಬದ್ಧವಾಗಿ ತಗಾದೆ ಮಾಡಿಯೂ, ಅವನು ಅನ್ಯಥಾ ಪ್ರವೇಶವನ್ನು ಪಡೆಯಲಾಗದಿದ್ದರೆ ವಾರಂಟ್ ನಲ್ಲಿ ನಿರ್ದೇಶಿಸಿದ ಜಪ್ತಿಯನ್ನು ಮಾಡುವ ದೃಷ್ಟಿಯಿಂದ ಕಟ್ಟಡದ ಯಾವುದೇ ಹೊರ ಅಥವಾ ಒಳ ಬಾಗಿಲು ಅಥವಾ ಕಿಟಕಿಯನ್ನು ಸೂರ್ಯೋದಯ ಮತ್ತು ಸೂರ್ಯಾಸ್ತಮಾನದ ಮಧ್ಯ ಯಾವುದೇ ಕಾಲದಲ್ಲಿ ಒಡೆದು ತೆಗೆಯಲು ಈ ಬಗ್ಗೆ ಅವನನ್ನು ಅಧಿಕೃತಗೊಳಿಸುವ ವಿಶೇಷ ಆದೇಶವನ್ನು ವಾರಂಟ್ ಒಳಗೊಂಡಿದ್ದರೆ, ಒಡೆದು ತೆಗೆಯುವುದು ಕಾನೂನುಸಮ್ಮತವಾಗಿರತಕ್ಕದ್ದು:

ಪರಂತು, ಅಂಥ ಅಧಿಕಾರಿಯು ಮಹಿಳೆಯರು, ಇರುವ ಯಾವುದೇ ಭಾಗವನ್ನು ತನ್ನ ಉದ್ದೇಶದ ಬಗ್ಗೆ ಮೂರು ಗಂಟೆಗಳ ನೋಟೀಸನ್ನು ಕೊಟ್ಟ ಮತ್ತು ಅಂಥ ಮಹಿಳೆಯು ಹಿಂತೆಗೆಯಲು ಅವಕಾಶವನ್ನು ಕೊಟ್ಟ ಹೊರತು ಪ್ರವೇಶಿಸತಕ್ಕದ್ದಲ್ಲ ಅಥವಾ ಬಾಗಿಲನ್ನು ಮುರಿದು ತೆರೆಯತಕ್ಕದ್ದಲ್ಲ.

(5) ಈ ಕೆಳಕಂಡ ಷರತ್ತುಗಳು, ಅಪವಾದಗಳು ಮತ್ತು ವಿನಾಯಿತಿಗಳಿಗೊಳಪಟ್ಟು ವಾರಂಟ್ ನ ಮೂಲಕ ಅಧಿಕೃತನಾದ ಯಾರೇ ಅಂಥ ಅಧಿಕಾರಿಗೆ (1)ನೇ ಉಪ-ಪ್ರಕರಣದ ಮೇರೆಗೆ ಹೊರಡಿಸಿದ ವಾರಂಟ್ ನಲ್ಲಿ ತಪ್ಪಿತನೆಂದು ಹೆಸರಿಸಿದ ವ್ಯಕ್ತಿಯ ಯಾವುದೇ ಚರಸ್ವತ್ತನ್ನು, ಅದು ಎಲ್ಲಿಯೇ ಕಂಡುಬರಲಿ, ಜಪ್ತಿ ಮಾಡಲು ಅಥವಾ ಯಾವುದೇ ಸ್ಥಿರ ಸ್ವತ್ತನ್ನು ಜಪ್ತಿ ಮಾಡಲು ಕಾನೂನು ಸಮ್ಮತವಾಗಿರತಕ್ಕದ್ದು, ಎಂದರೆ:-

(ಎ) ಕೆಳಕಂಡ ಸ್ವತ್ತನ್ನು ಜಪ್ತಿ ಮಾಡತಕ್ಕದ್ದಲ್ಲ,-

(i) ತಪ್ಪಿತನ, ಅವನ ಹೆಂಡತಿ ಮತ್ತು ಮಕ್ಕಳ ಅವಶ್ಯಕ ಧರಿಸುವ ಉಡುಪುಗಳು; ಮತ್ತು ಹಾಸಿಗೆ ಸಾಮಾನುಗಳು ಮತ್ತು ಅವರ ಅಡಿಗೆ ಮಾಡುವ ಮತ್ತು ಊಟ ಮಾಡುವ ಪಾತ್ರೆಗಳು;

(ii) ಕುಶಲ ಕರ್ಮಿಗಳ ಉಪಕರಣಗಳು;

(iii) ಲೆಕ್ಕ ಪುಸ್ತಕಗಳು; ಅಥವಾ

(iv) ತಪ್ಪಿತನು ಕೃಷಿಕನಾಗಿರುವಾಗ ಅವನ ಕೃಷಿ ಉಪಕರಣಗಳು, ಬೀಜ, ಧಾನ್ಯ ಮತ್ತು ತಪ್ಪಿತನು ತನ್ನ ಜೀವನೋಪಾಯವನ್ನು ಮಾಡಲು ಶಕ್ತಗೊಳಿಸಲು ಅವಶ್ಯಕಗೊಳಿಸುವಂಥ ಜಾನುವಾರುಗಳು;

(ಬಿ) ಎಂದರೆ ಜಪ್ತಿ ಮಾಡಲಾದ ಸ್ವತ್ತು ವಾರಂಟ್ ಮೇರೆಗೆ ವಸೂಲೀ ಜಪ್ತಿಯ ಮಿತಿ ಮೀರತಕ್ಕದ್ದಲ್ಲ. ವಸೂಲೀಯವಾದ ಮೊಬಲಗಿನ ಮೌಲ್ಯಕ್ಕೆ ಸಾಧ್ಯವಾದಷ್ಟು ಮಟ್ಟಿಗೆ ಸಮನಾಗಿರತಕ್ಕದ್ದು, ಮತ್ತು (2)ನೇ ಉಪ-ಪ್ರಕರಣದ ಮೂಲಕ ಅಥವಾ ಅದರ ಮೇರೆಗೆ ವಾರಂಟ್ ಗೆ ಸಹಿ ಹಾಕಲು ಅಧಿಕೃತನಾದ ವ್ಯಕ್ತಿಯ ಅಥವಾ ವಾರಂಟ್ ನ್ನು ಯಾರಿಗೆ ಸಂಭೋದಿಸಲಾಗಿದೆಯೋ ಆ ವ್ಯಕ್ತಿಯ ಅಭಿಪ್ರಾಯದಲ್ಲಿ ಯಾವ ವಸ್ತುಗಳನ್ನು ಜಪ್ತಿ ಮಾಡಲಾಗಿದೆಯೋ ಆ ಯಾವುದೇ ವಸ್ತುಗಳನ್ನು ಹಾಗೆ ಜಪ್ತಿ ಮಾಡಕೂಡದಾಗಿತ್ತು ಎಂದಾದರೆ, ಅವುಗಳನ್ನು ತತ್‌ಕ್ಷಣವೇ ಬಿಡುಗಡೆ ಮಾಡತಕ್ಕದ್ದು;

(ಸಿ) ಅಧಿಕಾರಿಯು, ಸ್ವತ್ತನ್ನು ಜಪ್ತಿ ಮಾಡಿದ ಕೂಡಲೇ, ಅದರ ವಿವರಣ ಪಟ್ಟಿಯನ್ನು ತಯಾರಿಸತಕ್ಕದ್ದು ಮತ್ತು ಅವನು ಸಾಗಿಸುವ ಮುಂಚೆ ಜಪ್ತಿ ಮಾಡುವ ಕಾಲದಲ್ಲಿ ಅದರ ಸ್ವಾಧೀನತೆ ಹೊಂದಿದ ವ್ಯಕ್ತಿಗೆ, XII ನೇ ಅನುಸೂಚಿಯಲ್ಲಿ ವಿವರಿಸಿದ ನಮೂನೆಯಲ್ಲಿ ಬರಹದಲ್ಲಿ ನೋಟೀಸನ್ನು ಕೊಡತಕ್ಕದ್ದು;

(ಡಿ) (i) ಸ್ವತ್ತು, ಸ್ಥಿರಸ್ವತ್ತಾಗಿದ್ದಾಗ ತಪ್ಪಿತನು ಸ್ವತ್ತನ್ನು ಯಾವುದೇ ರೀತಿಯಲ್ಲಿ ವರ್ಗಾವಣೆ ಅಥವಾ ಋಣಭಾರ ಹೊರಿಸುವುದನ್ನು ಮತ್ತು ಎಲ್ಲಾ ವ್ಯಕ್ತಿಗಳು ಅಂಥ ವರ್ಗಾವಣೆ ಅಥವಾ ಋಣಭಾರದಿಂದ ಪ್ರಯೋಜನವನ್ನು ತೆಗೆದುಕೊಳ್ಳುವುದನ್ನು ನಿಷೇಧಿಸುವ ಆದೇಶ ಯಾವುದೇ ಮೂಲಕ ಜಪ್ತಿಯನ್ನು ಮಾಡತಕ್ಕದ್ದು;

(ii) ಆದೇಶವನ್ನು ಸ್ವತ್ತಿನ ಮೇಲೆ ಅಥವಾ ಅದಕ್ಕೆ ಹೊಂದಿಕೊಂಡಿರುವ ಯಾವುದೇಸ್ಥಳದಲ್ಲಿ ಡಂಗೂರ ಹೊಡೆಯುವ ಮೂಲಕ ಅಥವಾ ಇತರ ರೂಢಿಗತ ವಿಧಾನದ ಮೂಲಕ ಘೋಷಿಸತಕ್ಕದ್ದು ಮತ್ತು ಆದೇಶದ ಪ್ರತಿಯನ್ನು ಸ್ವತ್ತಿನ ಎದ್ದು ಕಾಣುವ ಭಾಗದಲ್ಲಿ ಮತ್ತು ಮುನ್ಸಿಪಾಲಿಟಿ ಕಚೇರಿಯ ನೋಟೀಸ್ ಬೋರ್ಡಿನ ಮೇಲೆ ಹಾಗೂ ಸ್ವತ್ತು ಭೂಮಿಯಾಗಿದ್ದು ಸರ್ಕಾರಕ್ಕೆ ಕಂದಾಯವನ್ನು ಸಂದಾಯ ಮಾಡುತ್ತಿರುವಲ್ಲಿ ಆ ಭೂಮಿ ಇರುವ ತಾಲ್ಲೂಕಿನ ತಹಶೀಲ್ದಾರನ ಕಛೇರಿಯಲ್ಲಿಯೂ ಸಹ ಅಂಟಿಸತಕ್ಕದ್ದು;

(ಇ) ಜಪ್ತಿ ಮಾಡಿದ ಸ್ವತ್ತಿನ ಅಥವಾ ಅದರಲ್ಲಿನ ಯಾವುದೇ ಹಿತಾಸಕ್ತಿಯ ಯಾವುದೇ ವರ್ಗಾವಣೆ ಅಥವಾ ಅದರ ಮೇಲಿನ ಋಣಭಾರವನ್ನು ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನ ಬರಹದಲ್ಲಿನ ಅನುಮತಿಯಿಲ್ಲದೆ ಮಾಡಿದರೆ, ಅದು, ಜಪ್ತಿ ಮೇರೆಗೆ ಜಾರಿಗೊಳಿಸಬಹುದಾದ ಮುನ್ಸಿಪಲ್ ಕೌನ್ಸಿಲ್‌ನ ಎಲ್ಲಾ ಕ್ಲೇಮುಗಳ ವಿರುದ್ಧ ಅನೂರ್ಜಿತವಾಗತಕ್ಕದ್ದು.

144. ಕರಸ್ಥಗೊಳಿಸಿದ ಅಥವಾ ಜಪ್ತಿ ಮಾಡಿದ ಸರಕುಗಳ ಮತ್ತು ಸ್ವತ್ತಿನ ಮಾರಾಟ.- (1) ಅಭಿಗ್ರಹಣ ಮಾಡಿದ ಸ್ವತ್ತು ತ್ವರಿತವಾಗಿ ಮತ್ತು ನೈಸರ್ಗಿಕ ನಾಶಕ್ಕೆ ಒಳಪಟ್ಟಿದ್ದಾಗ ಅಥವಾ ಅದನ್ನು ಅಭಿರಕ್ಷೆಯಲ್ಲಿಟ್ಟುಕೊಳ್ಳುವ ವೆಚ್ಚವು ವಸೂಲಿ ಮಾಡಬಹುದಾದ ಮೊಬಲಗಿನೊಂದಿಗೆ ಸೇರಿ ಅದರ ಮೌಲ್ಯವನ್ನು ಮೀರುವ ಸಂಭವವಿದ್ದರೆ, ವಾರಂಟ್ ನ್ನು ರುಜು ಮಾಡಿದ ಅಧಿಕಾರಿಯು, ಕರಸ್ಥಗೊಳಿಸಿದಾಗ ಆ ಸ್ವತ್ತು ಯಾರ ಸ್ವಾಧೀನದಲ್ಲಿತ್ತೋ ಆ ವ್ಯಕ್ತಿಗೆ, ಅದನ್ನು ಕೂಡಲೇ ಮಾರಾಟ ಮಾಡಲಾಗುವುದು ಎಂಬ ಬಗ್ಗೆ ನೋಟೀಸ್ ನ್ನು ಕೂಡಲೇ ಕೊಡತಕ್ಕದ್ದು ಮತ್ತು ವಾರಂಟಿನಲ್ಲಿ ನಮೂದಿಸಿದ ಮೊಬಲಗನ್ನು ತತ್‌ಕ್ಷಣವೇ ಸಂದಾಯ ಮಾಡಿದ ಹೊರತು ಬಹಿರಂಗ ಹರಾಜಿನಲ್ಲಿ ಅದನ್ನು ತದನುಸಾರವಾಗಿ ಮಾರಾಟ ಮಾಡತಕ್ಕದ್ದು.

(2) ಉಪ-ಪ್ರಕರಣ (1) ರ ಮೇರೆಗೆ ಕೂಡಲೇ ಅದನ್ನು ಮಾರಾಟ ಮಾಡದಿದ್ದರೆ, ಕರಸ್ಥಗೊಳಿಸಿದ ಸ್ವತ್ತು ಅಥವಾ ಅದರ ಸಾಕಷ್ಟು ಭಾಗ ಅಥವಾ ಜಪ್ತಿ ಮಾಡಲಾದ ಸ್ವತ್ತು ಸ್ಥಿರ ಸ್ವತ್ತಾಗಿದ್ದರೆ, ಅದರ ಸಾಕಷ್ಟು ಭಾಗವನ್ನು, ವಾರಂಟ್ ಗೆ ಸಹಿ ಮಾಡಿದ ವ್ಯಕ್ತಿಯು ಅದನ್ನು ಅಮಾನತ್ತುಗೊಳಿಸಿದ ಅಥವಾ ತಪ್ಪಿತನಿಂದ ಬಾಕಿಯಾಗಿರುವ ಮೊತ್ತವನ್ನು ನೋಟೀಸ್, ವಾರೆಂಟ್ ಮತ್ತು ಕರಸ್ಥ ಅಥವಾ ಜಪ್ತಿ ಅಥವಾ ಸ್ವತ್ತನ್ನು ತಡೆಹಿಡಿದಿರಿಸುವಿಕೆಗೆ ಪ್ರಾಸಂಗಿಕವಾದ ಎಲ್ಲಾ ಖರ್ಚುಗಳ ಸಹಿತವಾಗಿ ಸಂದಾಯ ಮಾಡಿದ ಹೊರತು, ವಾರಂಟ್ ನ್ನು ಜಾರಿ ಮಾಡುವ ಅಧಿಕಾರಿಯು ಜಾರಿ ಮಾಡಿದ ನೋಟೀಸ್ ನಲ್ಲಿ ನಿರ್ದಿಷ್ಟಪಡಿಸಿದ ಕಾಲವು ಮುಕ್ತಾಯವಾದ ಮೇಲೆ ಮುನ್ಸಿಪಲ್ ಕಮಿಷನರ್ ನ ಅಥವಾ ಚೀಫ್ ಆಫೀಸರ್ ನ ಆದೇಶಗಳ ಮೇರೆಗೆ ಬಹಿರಂಗ ಹರಾಜಿನಲ್ಲಿ ಮಾರಾಟ ಮಾಡಬಹುದು ಮತ್ತು ಉತ್ಪತ್ತಿಗಳನ್ನು ಮತ್ತು ಅವಶ್ಯವಾಗತಕ್ಕ ಅದರ ಅಂಥ ಭಾಗವನ್ನು ಮೊದಲನೆಯದಾಗಿ, ಅಂಥ ಸ್ವತ್ತಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಬಾಕಿಯಿರುವ ಯಾವುದೇ ಮೊತ್ತದ ತೀರಿಕೆಗೆ ಮತ್ತು ಎರಡನೆಯದಾಗಿ ಬಾಕಿಯಿರುವ ಮೊತ್ತದ ಮತ್ತು ಹಿಂದೆ ಹೇಳಿದ ಹಾಗೆ ಅಂಥ ಪ್ರಾಸಂಗಿಕ ಖರ್ಚುಗಳನ್ನು ತೀರಿಸುವುದಕ್ಕಾಗಿ ವಿನಿಯೋಗಿಸತಕ್ಕದ್ದು

(3) ಖರ್ಚುಗಳೊಂದಿಗೆ ಬಾಕಿಯಾಗಿರುವ ಮೊತ್ತವನ್ನು ಹಿಂದೆ ಹೇಳಿದಂತೆ ತಪ್ಪಿತನು ಸಂದಾಯ ಮಾಡಿರುವಲ್ಲಿ, ಯಾವುದೇ ಸ್ಥಿರ ಸ್ವತ್ತಿನ ಜಪ್ತಿಯನ್ನು ತೆಗೆದುಹಾಕಲಾಗಿದೆಯೆಂದು ಭಾವಿಸತಕ್ಕದ್ದು. (2)ನೇ ಉಪ-ಪ್ರಕರಣದ ಮೇರೆಗೆ ಚರ ಅಥವಾ ಸ್ಥಿರ ಸ್ವತ್ತಿನ ಮಾರಾಟವನ್ನು 145ನೇ ಪ್ರಕರಣದಲ್ಲಿ ಮತ್ತು ಆ ಬಗ್ಗೆ ರಚಿಸಲಾದ ನಿಯಮಗಳಲ್ಲಿ ಹೇಳಲಾದ ರೀತಿಯಲ್ಲಿ ನಡೆಸತಕ್ಕದ್ದು.

145. ಮಾರಾಟಗಳಿಗೆ ಸಂಬಂಧಿಸಿದಂತೆ ಪ್ರಕ್ರಿಯೆ ಇತ್ಯಾದಿ.- (1) ಈ ಅಧ್ಯಾಯದ ಉಪಬಂಧಗಳ ಮೇರೆಗೆ ಚರಸ್ವತ್ತನ್ನಾಗಲಿ ಅಥವಾ ಸ್ಥಿರ ಸ್ವತ್ತನ್ನಾಗಲಿ ಮಾರಾಟ ಮಾಡಲು ಆದೇಶಿಸಿರುವಾಗ, ಸಂಬಂಧಪಟ್ಟ ಅಧಿಕಾರಿಯು, ಅವನು ಅವಶ್ಯಕವೆಂದು ಭಾವಿಸಬಹುದಾದ ಯಾವುವೇ ಇತರ ವಿವರಗಳೊಂದಿಗೆ ಮಾರಾಟದ ಕಾಲ ಮತ್ತು ಸ್ಥಳವನ್ನು ನಿರ್ದಿಷ್ಟಪಡಿಸಿ ಉದ್ದೇಶಿತ ಮಾರಾಟದ ಬಗ್ಗೆ ಉದ್ಘೋಷಣೆಯನ್ನು ಹೊರಡಿಸತಕ್ಕದ್ದು ಅಂಥ ಉದ್ಘೋಷಣೆಯನ್ನು, ಮುನ್ಸಿಪಲ್ ಕಮೀಷನರ್ ನು ಅಥವಾ ಚೀಫ್ ಆಫೀಸರ್ ನು ನಿರ್ದೇಶಿಸಬಹುದಾದಂಥ ಸ್ಥಳಗಳಲ್ಲಿ ಮತ್ತು ಅಂಥ ಇತರ ರೀತಿಯಲ್ಲಿ ಡಂಗೂರ ಹೊಡೆಯುವ ಮೂಲಕ ಮಾಡತಕ್ಕದ್ದು.

(2) ಸ್ಥಿರ ಸ್ವತ್ತಿನ ಉದ್ದೇಶಿತ ಮಾರಾಟದ ಮತ್ತು ಅದರ ಕಾಲ ಹಾಗೂ ಸ್ಥಳದ ಬಗೆಗಿನ ನೋಟೀಸನ್ನು ಮುನ್ಸಿಪಲ್ ಕಚೇರಿಯ ಸ್ವತ್ತು ಇರುವ ತಾಲ್ಲೂಕಿನ ತಹಶೀಲ್ದಾರರ ಕಚೇರಿಯ ನೋಟೀಸ್ ಬೋರ್ಡಿನ ಮೇಲೆ ನಿಯಮಿಸಬಹುದಾದಂಥ ಇತರ ಸ್ಥಳಗಳಲ್ಲಿ ಅಂಟಿಸತಕ್ಕದ್ದು. ಚರ ಸ್ವತ್ತಿನ ಸಂದರ್ಭದಲ್ಲಿ ಉದ್ದೇಶಿತ ಮಾರಾಟದ ನೋಟೀಸ್ ನ್ನು, ಮುನ್ಸಿಪಾಲಿಟಿ ಕಚೇರಿ ನೋಟೀಸ್ ಬೋರ್ಡಿನ ಮೇಲೆ ಮತ್ತು ನಿಯಮಿಸಬಹುದಾದಂಥ ಇತರ ಸ್ಥಳಗಳಲ್ಲಿ ಅಂಟಿಸತಕ್ಕದ್ದು, ನೋಟೀಸ್ ನ್ನು ನಿಯಮಿಸಬಹುದಾದಂಥ ಇತರ ರೀತಿಯಲ್ಲಿ ಸಹಾ ಪ್ರಕಟಿಸತಕ್ಕದ್ದು.

(3) ಯಾವುದೇ ಮಾರಾಟವನ್ನು, ಸಾರ್ವತ್ರಿಕ ರಜಾ ದಿನದಂದು, ಇಲ್ಲವೇ, (2)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ನೋಟೀಸ್ ಗಳನ್ನು ಪ್ರಕಟಿಸಲಾದಂಥ ಇತ್ತೀಚಿನ

ದಿನಾಂಕದಿಂದ, ಸ್ಥಿರ ಸ್ವತ್ತಿನ ಸಂದರ್ಭದಲ್ಲಿ ಕನಿಷ್ಠಪಕ್ಷ ಮೂವತ್ತು ದಿನಗಳು ಅಥವಾ ಚರ ಸ್ವತ್ತಿನ ಸಂದರ್ಭದಲ್ಲಿ ಏಳು ದಿನಗಳು ಮುಕ್ತಾಯವಾಗುವವರೆಗೆ ಮಾಡತಕ್ಕದ್ದಲ್ಲ.

(4) ಮಾರಾಟ ನಡೆಸುತ್ತಿರುವ ಅಧಿಕಾರಿಗೆ ಸ್ವತ್ತಿನ ಹರಾಜನ್ನು ಕೊನೆಗೊಳಿಸುವ ಮುಂಚೆ ಯಾವುದೇ ಕಾಲದಲ್ಲಿ, ತಪ್ಪಿತನು ಅಥವಾ ಅವನ ಪರವಾಗಿ ಯಾರೇ ವ್ಯಕ್ತಿಯು, ಬಾಕಿಯಿರುವ ಮೊತ್ತ ಮತ್ತು ಎಲ್ಲಾ ಇತರ ಚಾರ್ಜುಗಳನ್ನು ಸಂದಾಯ ಮಾಡಿದರೆ, ಮಾರಾಟವನ್ನು ನಿಲ್ಲಿಸತಕ್ಕದ್ದು.

(5) 144ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಮಾರಾಟ ಮಾಡಲಾದ ಸ್ವತ್ತಲ್ಲದ ಚರ ಸ್ವತ್ತಿನ ಮಾರಾಟಕ್ಕೆ ಸಂಬಂಧಿಸಿದಂತೆ, ಖರೀದಿದಾರನೆಂದು ಘೋಷಿಸಲಾದ ವ್ಯಕ್ತಿಯು, ಅವನ ಸವಾಲಿನ ಮೊಬಲಗಿನ ಶೇಕಡಾ ಇಪ್ಪತ್ತೈದರಷ್ಟು ಮೊಬಲಗನ್ನು ಕೂಡಲೇ ಠೇವಣಿ ಇಡತಕ್ಕದ್ದು; ಮತ್ತು ಅಂಥ ಠೇವಣಿಯನ್ನು ಇಡಲು ತಪ್ಪಿದರೆ, ಸ್ವತ್ತನ್ನು ತತ್‌ಕ್ಷಣವೇ ಪುನಃ ಹರಾಜಿಗೆ ಇಡತಕ್ಕದ್ದು ಮತ್ತು ಮಾರಾಟ ಮಾಡತಕ್ಕದ್ದು. ಖರೀದಿ ಹಣದ ಸಂಪೂರ್ಣ ಮೊಬಲಗನ್ನು, ಮಾರಾಟವನ್ನು ಸ್ಥಿರೀಕರಿಸಲಾಯಿತೆಂದು ಮುನ್ಸಿಪಲ್ ಕಮಿಷನರ್ ನು ಅಥವಾ ಚೀಫ್ ಆಫೀಸರ್ ನು ಅವನಿಗೆ ತಿಳಿಸಿದ ದಿನದ ನಂತರ ಮುಂದಿನ ಕೆಲಸದ ದಿನದಂದು ಖರೀದಿದಾರನು ಸಂದಾಯ ಮಾಡತಕ್ಕದ್ದು. ಖರೀದಿ ಹಣದ ಅಂಥ ಸಂಪೂರ್ಣ ಮೊಬಲಗನ್ನು ಸಂದಾಯ ಮಾಡಿದ ಮೇಲೆ ಖರೀದಿದಾರನಿಗೆ ಅದರ ಬಗ್ಗೆ ರಸೀದಿಯನ್ನು ಕೊಡತಕ್ಕದ್ದು ಮತ್ತು ಮಾರಾಟವು ಎಲ್ಲಾ ವ್ಯಕ್ತಿಗಳ ವಿರುದ್ಧ ನಿರುಪಾಧಿಕವಾಗಿರತಕ್ಕದ್ದು.

(6) ಸ್ಥಿರಸ್ವತ್ತಿನ ಮಾರಾಟಕ್ಕೆ ಸಂಬಂಧಿಸಿದಂತೆ, ಖರೀದಿದಾರನೆಂದು ಘೋಷಿಸಲಾದ ವ್ಯಕ್ತಿಯು, ಅವನ ಸವಾಲಿನ ಶೇಕಡಾ ಇಪ್ಪತ್ತೈದರಷ್ಟು ಮೊಬಲಗನ್ನು ಕೂಡಲೇ, ಠೇವಣಿ ಇಡತಕ್ಕದ್ದು, ಮತ್ತು ಅಂಥ ಠೇವಣಿಯನ್ನು ಇಡಲು ತಪ್ಪಿದರೆ, ಸ್ವತ್ತನ್ನು ತತ್‌ಕ್ಷಣವೇ ಪುನಃ ಹರಾಜಿಗೆ ಇಡತಕ್ಕದ್ದು ಮತ್ತು ಮಾರಾಟ ಮಾಡತಕ್ಕದ್ದು. ಖರೀದಿ ಹಣದ ಪೂರ್ಣ ಮೊಬಲಗನ್ನು ಸ್ವತ್ತು ಮಾರಾಟವಾದ ದಿನದಿಂದ ಹದಿನಾರನೇ ದಿನಕ್ಕೆ ಮುಂಚೆ ಖರೀದಿದಾರನು ಸಂದಾಯ ಮಾಡತಕ್ಕದ್ದು.

(7) ಖರೀದಿ ಹಣದ ಸಂಪೂರ್ಣ ಮೊಬಲಗನ್ನು, (5)ನೇ ಉಪ-ಪ್ರಕರಣದ ಅಥವಾ (6)ನೇ ಉಪ-ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಸಂದಾಯ ಮಾಡಲು ತಪ್ಪಿದರೆ, ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನು ತನ್ನ ವಿವೇಚನಾನುಸಾರ, ಮಾರಾಟದ ವೆಚ್ಚಗಳನ್ನು ಠೇವಣಿಯಿಂದ ಮುರಿದುಕೊಂಡ ತರುವಾಯ ಅದನ್ನು ಸಂಪೂರ್ಣ ಅಥವಾ ಭಾಗಶಃ ಹಣವನ್ನು ಮುನ್ಸಿಪಲ್ ಕೌನ್ಸಿಲ್‌ಗೆ ಮುಟ್ಟುಗೋಲಾಗಿಸತಕ್ಕದ್ದೆಂದು ಹಾಗೂ ಆ ಸ್ವತ್ತನ್ನು ಮರು ಮಾರಾಟ ಮಾಡತಕ್ಕದ್ದು ಎಂದು ನಿರ್ದೇಶಿಸಬಹುದು ಮತ್ತು ಆ ತರುವಾಯ, ನಿರ್ದೇಶಿಸಿದಂತೆ ಠೇವಣಿಯು ಮುಟ್ಟುಗೋಲಾಗತಕ್ಕದ್ದು ಮತ್ತು ತಪ್ಪಿತನಾದ ಖರೀದಿದಾರನು, ಆ ಸ್ವತ್ತಿಗೆ ಅಥವಾ ಯಾವ ಮೊತ್ತಕ್ಕಾಗಿ ಅದನ್ನು ತದನಂತರ ಮಾರಾಟ ಮಾಡಬಹುದೋ ಆ ಮೊತ್ತದ ಯಾವುದೇ ಭಾಗಕ್ಕೆ ಎಲ್ಲಾ ಕ್ಲೇಮನ್ನು ಕಳೆದುಕೊಳ್ಳತಕ್ಕದ್ದು. ಖರೀದಿದಾರನ ಈ ತಪ್ಪಿನ ಕಾರಣದಿಂದ ನಡೆಸಿದ ಮರು ಮಾರಾಟದಿಂದ ಬಂದ ಉತ್ಪತ್ತಿಗಳು, ಹಾಗೆ ತಪ್ಪಿತ ಖರೀದಿದಾರನ ಸವಾಲಿನ ಬೆಲೆಗಿಂತ ಕಡಿಮೆಯಾದರೆ, ವ್ಯತ್ಯಾಸದ ಹಣವು, ಅವನಿಂದ ಮುನ್ಸಿಪಲ್ ಕೌನ್ಸಿಲ್‌ಗೆ ಬರಬೇಕಾದ ಮೊಬಲಗು ಎಂಬಂತೆ, ಮುನ್ಸಿಪಲ್ ಕೌನ್ಸಿಲ್ ಅವನಿಂದ ಈ ಅಧ್ಯಾಯದಲ್ಲಿ ಉಪಬಂಧಿಸಿದ ರೀತಿಯಲ್ಲಿ ವಸೂಲೀಯವಾಗತಕ್ಕದ್ದು.

(8) ಖರೀದಿ ಹಣ ಸಂದಾಯ ಮಾಡಲು ತಪ್ಪಿದಾಗ ಅಥವಾ ಮೊದಲನೆಯ ಮಾರಾಟದ ಮುಂದೂಡಿಕೆಯ ತರುವಾಯದ ಸ್ವತ್ತಿನ ಪ್ರತಿಯೊಂದು ಮರು ಮಾರಾಟವನ್ನು, ತತ್‌ಕ್ಷಣವೇ ಅಂಥ ಮರು ಮಾರಾಟವಾಗುವ ಹೊರತು, ಮೂಲ ಮಾರಾಟಗಳಿಗೆ ಈ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ರೀತಿಯಲ್ಲಿ ಹೊಸ ನೋಟೀಸನ್ನು ಕೊಟ್ಟ ತರುವಾಯ ಮಾಡತಕ್ಕದ್ದು.

(9) ಈ ಪ್ರಕರಣದ ಮೇರೆಗೆ ಮಾರಾಟ ಮಾಡಲಾದ ಯಾವುದೇ ಸ್ಥಿರ ಸ್ವತ್ತಿನಲ್ಲಿ ಯಾವುದೇ ಹಿತಾಸಕ್ತಿಯ ಒಡೆತನವಿರುವ ಅಥವಾ ಅದನ್ನು ಕ್ಲೇಮು ಮಾಡುವ ಯಾರೇ ವ್ಯಕ್ತಿಯು, ಮಾರಾಟ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ; ಯಾವುದೇ ಕಾಲದಲ್ಲಿ ಮುನ್ಸಿಪಲ್ ಕಚೇರಿಯಲ್ಲಿ,-

(i) ಖರೀದಿ ಹಣದ ಶೇಕಡಾ ಹತ್ತರಷ್ಟಕ್ಕೆ ಸಮನಾದ ಮೊತ್ತವನ್ನು; ಮತ್ತು

(ii) ಯಾವ ಮೊತ್ತವು ಬಾಕಿಯಿದೆಯೆಂದು ಸ್ಥಿರ ಸ್ವತ್ತನ್ನು ಮಾರಾಟ ಮಾಡಲಾಗಿದೆಯೋ, ಆ ಬಾಕಿಯಿರುವ ಮೊತ್ತಕ್ಕೆ ಸಮನಾದ ಮೊತ್ತವನ್ನು, ಅದರ ಮೇಲೆ

ವರ್ಷಕ್ಕೆ ಶೇಕಡಾ ಒಂಭತ್ತರಷ್ಟು ಬಡ್ಡಿ ಜೊತೆಗೆ ಮತ್ತು ಜಪ್ತಿ, ವ್ಯವಸ್ಥಾಪನ ಮತ್ತು ಮಾರಾಟದ ವೆಚ್ಚಗಳು ಮತ್ತು ಬಾಕಿ ಮೊತ್ತಕ್ಕೆ ಸಂಬಂಧಿಸಿದಂತೆ ಬಾಕಿಯಿರುವ ಇತರ ವೆಚ್ಚಗಳನ್ನು

- ಠೇವಣಿ ಇಡಬಹುದು.

ಮತ್ತು ಮಾರಾಟವನ್ನು ರದ್ದುಗೊಳಿಸಲು ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನಿಗೆ ಅರ್ಜಿ ಸಲ್ಲಿಸಬಹುದು.

ಅಂಥ ಠೇವಣಿ ಮಾಡಿದ ಮೇಲೆ ಮತ್ತು ಅರ್ಜಿಯನ್ನು ಸಲ್ಲಿಸಿದ ಮೇಲೆ ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನು, ಆದೇಶದ ಮೂಲಕ ಮಾರಾಟವನ್ನು ರದ್ದುಗೊಳಿಸತಕ್ಕದ್ದು ಮತ್ತು ಖರೀದಿದಾರನಿಗೆ, ಅವನು ಠೇವಣಿ ಮಾಡಿದ ಖರೀದಿ ಹಣವನ್ನು, ಅರ್ಜಿದಾರನು ಠೇವಣಿಯಿಟ್ಟ ಶೇಕಡಾ ಹತ್ತರಷ್ಟರ ಜೊತೆಗೆ ಮರು ಸಂದಾಯ ಮಾಡತಕ್ಕದ್ದು:

ಪರಂತು, ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳು ಅಂಥ ಠೇವಣಿ ಮತ್ತು ಅರ್ಜಿಯನ್ನು ಮಾಡಿದರೆ, ಮೊದಲನೆಯ ಠೇವಣಿದಾರನ ಅರ್ಜಿಯನ್ನು ಅಂಗೀಕರಿಸತಕ್ಕದ್ದು:

ಮತ್ತು ಪರಂತು, ಅರ್ಜಿದಾರನು (10)ನೇ ಉಪ-ಪ್ರಕರಣದ ಮೇರೆಗೆ ಸಹ ಅರ್ಜಿದಾರನಾಗಿದ್ದರೆ, ಈ ಉಪ-ಪ್ರಕರಣದ ಮೇರೆಗಿನ ಅವನ ಅರ್ಜಿಯನ್ನು (10)ನೇ ಉಪ-ಪ್ರಕರಣದ ಮೇರೆಗೆ ಅವನು ಹಿಂತೆಗೆದುಕೊಂಡ ಹೊರತು ಪರಿಗಣಿಸತಕ್ಕದ್ದಲ್ಲ.

(10) ಸ್ಥಿರ ಸ್ವತ್ತಿನ ಮಾರಾಟವಾದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಯಾವುದೇ ಕಾಲದಲ್ಲಿ, ಮಾರಾಟವನ್ನು ಪ್ರಕಟಿಸುವುದರಲ್ಲಿ ಅಥವಾ ನಡೆಸುವುದರಲ್ಲಿ ಯಾವುದೇ ಮುಖ್ಯ ಅಕ್ರಮತೆ ಅಥವಾ ತಪ್ಪು ಅಥವಾ ಮೋಸವಾಗಿದೆ ಎಂಬ ಕಾರಣದ ಮೇಲೆ ಅದನ್ನು ರದ್ದುಗೊಳಿಸಲು ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನಿಗೆ ಅರ್ಜಿಯನ್ನು ಮಾಡಿಕೊಳ್ಳಬಹುದು; ಆದರೆ (11)ನೇ ಉಪ-ಪ್ರಕರಣದಲ್ಲಿ ಅನ್ಯಥಾ ಉಪಬಂಧಿಸಿದಂತೆ ಹೊರತು, ಯಾವುದೇ ಮಾರಾಟವನ್ನು ಅವನಿಗೆ ಅದರ ಕಾರಣದಿಂದಾಗಿ ಗಣನೀಯ ಹಾನಿಯುಂಟಾಗಿದೆಯೆಂದು ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನಿಗೆ ಅರ್ಜಿದಾರನು ಮನದಟ್ಟಾಗುವಂತೆ ರುಜುವಾತು ಪಡಿಸಿದ ಹೊರತು, ಯಾವುದೇ ಅಂಥ ಅಕ್ರಮತೆ ಅಥವಾ ತಪ್ಪಿನ ಆಧಾರದ ಮೇಲೆ ರದ್ದುಗೊಳಿಸತಕ್ಕದ್ದಲ್ಲ. ಅರ್ಜಿಯನ್ನು ಪುರಸ್ಕರಿಸಿದರೆ, ಮುನ್ಸಿಪಲ್ ಕಮಿಷನರ್ ನು ಅಥವಾ ಚೀಫ್ ಆಫೀಸರ್ ನು ಮಾರಾಟವನ್ನು ರದ್ದುಗೊಳಿಸತಕ್ಕದ್ದು ಮತ್ತು ಹೊಸ ಮಾರಾಟಕ್ಕೆ ನಿರ್ದೇಶಿಸತಕ್ಕದ್ದು.

(11) ಮಾರಾಟವಾದ ದಿನಾಂಕದಿಂದ ಮೂವತ್ತು ದಿನಗಳು ಮುಕ್ತಾಯವಾದ ಮೇಲೆ, (9)ನೇ ಉಪ-ಪ್ರಕರಣದ ಅಥವಾ (10)ನೇ ಉಪ-ಪ್ರಕರಣದ ಮೇರೆಗೆ ಯಾವುದೇ ಅರ್ಜಿಯನ್ನು ಮಾಡಿರದಿದ್ದರೆ ಅಥವಾ (10)ನೇ ಉಪ-ಪ್ರಕರಣದ ಮೇರೆಗೆ ಮಾಡಿದ ಅರ್ಜಿಯನ್ನು ತಿರಸ್ಕರಿಸಿದರೆ, ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನು ಮಾರಾಟವನ್ನು ಸ್ಥಿರೀಕರಿಸಿ ಆದೇಶವನ್ನು ಮಾಡತಕ್ಕದ್ದು:

ಪರಂತು, ಯಾವುದೇ ಕಾರಣದಿಂದಾಗಿ ನ್ಯಾಯದ ಹಿತದೃಷ್ಟಿಗಳಿಂದ ಮಾರಾಟವನ್ನು ರದ್ದುಗೊಳಿಸತಕ್ಕದ್ದೆಂದು ಮುನ್ಸಿಪಲ್ ಕಮಿಷನರ್ ನು ಅಥವಾ ಚೀಫ್ ಆಫೀಸರ್ ನು ಪರ್ಯಾಲೋಚಿಸಿದರೆ, ಅವನು, ಬರಹದಲ್ಲಿ ದಾಖಲು ಮಾಡಬೇಕಾದ ಕಾರಣಗಳಿಗಾಗಿ ಮತ್ತು ಅವನು ಸೂಕ್ತವೆಂದು ಭಾವಿಸುವಂಥ ಷರತ್ತುಗಳ ಮೇಲೆ ಮಾರಾಟವನ್ನು ರದ್ದುಗೊಳಿಸಬಹುದು.

(12) ಯಾವುದೇ ಸ್ವತ್ತಿನ ಮಾರಾಟವು ಸ್ಥಿರೀಕರಿಸದಿರುವಾಗಲೆಲ್ಲಾ ಅಥವಾ ರದ್ದುಗೊಳಿಸಿದಾಗಲೆಲ್ಲಾ ಖರೀದಿದಾರನು, ಸಂದರ್ಭಾನುಸಾರ ಅವನ ಠೇವಣಿ ಅಥವಾ ಖರೀದಿ ಹಣದ ಮರುಸಂದಾಯಕ್ಕೆ ಹಕ್ಕುಳ್ಳವನಾಗಿರತಕ್ಕದ್ದು.

(13) ಈ ಅಧ್ಯಾಯದ ಮೇರೆಗೆ ಕರಸ್ಥಗೊಳಿಸಿದ ಯಾವುದೇ ಚರಸ್ವತ್ತಿಗೆ ಯಾರೇ ವ್ಯಕ್ತಿಯು, ಯಾವುದೇ ಕ್ಲೇಮನ್ನು ಮಾಡಿದರೆ, ಮುನ್ಸಿಪಲ್ ಕಮಿಷನರ್ ನು ಅಥವಾ ಚೀಫ್ ಆಫೀಸರ್ ನು ಕ್ಷಿಪ್ರ ವಿಚಾರಣೆಯ ನಂತರ ಕ್ಲೇಮನ್ನು ಅಂಗೀಕರಿಸತಕ್ಕದ್ದು ಅಥವಾ ತಿರಸ್ಕರಿಸತಕ್ಕದ್ದು. ಕ್ಲೇಮನ್ನು ಸಂಪೂರ್ಣವಾಗಿ ಅಥವಾಭಾಗಶಃ ಅಂಗೀಕರಿಸಿದರೆ, ಸ್ವತ್ತಿನ ಬಗ್ಗೆ ತದನುಸಾರವಾಗಿ ವ್ಯವಹರಿಸತಕ್ಕದ್ದು. ಕ್ಲೇಮನ್ನು ಹಾಗೆ ಅಂಗೀಕರಿಸಿರುವಷ್ಟರ ಮಟ್ಟಿಗೆ ಹೊರತು, ಸ್ವತ್ತನ್ನು ಮಾರಾಟ ಮಾಡತಕ್ಕದ್ದು ಮತ್ತು ಖರೀದಿದಾರನ ಸ್ವಾಮ್ಯವು ಎಲ್ಲಾ ಉದ್ದೇಶಗಳಿಗಾಗಿ ಮಾನ್ಯವಾಗಿರತಕ್ಕದ್ದು ಮತ್ತು ಉತ್ಪತ್ತಿಗಳು 144ನೇ ಪ್ರಕರಣದಲ್ಲಿ ಉಪಬಂಧಿಸಿದಂತೆ ವಿಲೆಗೆ ಯೋಗ್ಯವಾಗಿರತಕ್ಕದ್ದು.

(14) ಉಪ-ಪ್ರಕರಣ (16)ರ ಮೇರೆಗೆ ಯಾವುದೇ ಸ್ಥಿರ ಸ್ವತ್ತನ್ನು ಮುನ್ಸಿಪಲ್ ಕೌನ್ಸಿಲ್ ತಾನೇ ಖರೀದಿ ಮಾಡಿದಲ್ಲಿ, ಅದು ಮಾರಾಟದ ದಿನಾಂಕದಿಂದ ಒಂದು ವರ್ಷದ ಒಳಗೆ ತಪ್ಪಿತ ವ್ಯಕ್ತಿಯು ಮುನ್ಸಿಪಲ್ ಕೌನ್ಸಿಲ್‌ನ ಸವಾಲಿನ ಮೊಬಲಗನ್ನು ಮತ್ತು ಜಪ್ತಿಯ, ವ್ಯವಸ್ಥಾಪನೆ, ಮಾರಾಟದ ವೆಚ್ಚಗಳು ಮತ್ತು ಇತರ ಖರ್ಚುಗಳನ್ನು, ಅದರ ಮೇಲೆ ವರ್ಷಕ್ಕೆ ಶೇಕಡಾ ಒಂಭತ್ತರಷ್ಟು ಬಡ್ಡಿಯೊಂದಿಗೆ ಸಂದಾಯ ಮಾಡಿದ ಮೇಲೆ ತಪ್ಪಿತನಿಗೆ ಸ್ವತ್ತನ್ನು ಹಿಂತಿರುಗಿ ಕೊಡತಕ್ಕದ್ದು.

(15) ಹಿಂದೆ ಹೇಳಿದಂತೆ ಹರಾಜಿನ ಮೂಲಕ ಸ್ಥಿರಸ್ವತ್ತನ್ನು ಮಾರಾಟ ಮಾಡಿದ ತರುವಾಯ ಮುನ್ಸಿಪಲ್ ಕಮಿಷನರ್ ನು ಅಥವಾ ಚೀಫ್ ಆಫೀಸರ್ ನು, ಖರೀದಿದಾರನೆಂದು ಘೋಷಿತನಾದ ವ್ಯಕ್ತಿಗೆ ಅದರ ಸ್ವಾಧೀನವನ್ನು ನೀಡತಕ್ಕದ್ದು ಮತ್ತು ಆ ಪ್ರಮಾಣ ಪತ್ರವು ತಿಳಿಸುವ ಸ್ವತ್ತನ್ನು ಅವನು ಖರೀದಿ ಮಾಡಿರುವನೆಂಬ ಬಗ್ಗೆ ಒಂದು ಪ್ರಮಾಣ ಪತ್ರವನ್ನು ಅವನಿಗೆ ಕೊಡತಕ್ಕದ್ದು.

(16) ಹರಾಜಿಗೆ ಇಡಲಾದ ಯಾವುದೇ ಸ್ಥಿರಸ್ವತ್ತಿನ ಸಂದರ್ಭದಲ್ಲಿ ಸವಾಲು ಕೂಗುವುದು, ಮುನ್ಸಿಪಲ್ ಕೌನ್ಸಿಲ್‌ಗೆ ಕಾನೂನು ಸಮ್ಮತವಾಗಿರತಕ್ಕದ್ದು: ಪರಂತು, ಅಂಥ ಸವಾಲು ಕೂಗಲು ಡೆಪ್ಯುಟಿ ಕಮಿಷನರ್ ನ ಪೂರ್ವಾನುಮೋದನೆಯನ್ನು ಪಡೆದಿರಬೇಕು.

(17) ಮಾರಾಟದ ಉತ್ಪತ್ತಿಗಳ ಹೆಚ್ಚುವರಿ ಯಾವುದಾದರೂ ಇದ್ದರೆ, ಅದನ್ನು ಸ್ವತ್ತಿನ ಮಾರಾಟದ ತರುವಾಯ ಕೂಡಲೇ ಮುನ್ಸಿಪಲ್ ನಿಧಿಗೆ ಜಮೆ ಮಾಡತಕ್ಕದ್ದು ಮತ್ತು ಅಂಥ ಜಮೆಯ ನೋಟೀಸನ್ನು, ಅದೇ ಸಮಯದಲ್ಲಿ ಒಡೆಯನಿಗೆ ಅಥವಾ ಕರಸ್ಥ ಜಪ್ತಿ ಅಥವಾ ಜಪ್ತಿಯ ಕಾಲದಲ್ಲಿ, ಸ್ವತ್ತಿನ ಸ್ವಾಧೀನತೆ ಹೊಂದಿದ್ದ ವ್ಯಕ್ತಿಗೆ ಕೊಡತಕ್ಕದ್ದು ಮತ್ತು ಅದನ್ನು ನೋಟೀಸಿನ ದಿನಾಂಕದಿಂದ ಮೂರು ವರ್ಷದೊಳಗಾಗಿ ಬರಹದಲ್ಲಿ ಅರ್ಜಿಯನ್ನು ಮಾಡಿಕೊಂಡರೆ, ಅಂಥ ವ್ಯಕ್ತಿಗೆ ಮರು ಸಂದಾಯ ಮಾಡತಕ್ಕದ್ದು. ಅಂಥ ನೋಟೀಸಿನ ದಿನಾಂಕದಿಂದ ಮೂರು ವರ್ಷದೊಳಗಾಗಿ ಕ್ಲೇಮು ಮಾಡದ ಯಾವುದೇ ಮೊತ್ತವು ಮುನ್ಸಿಪಲ್ ಕೌನ್ಸಿಲ್‌ನ ಸ್ವತ್ತಾಗಿರತಕ್ಕದ್ದು.

146. ಜಿಲ್ಲೆಯ ಹೊರಗಡೆ ಮಾರಾಟ.- ವಾರಂಟ್ ನ್ನು [1][ಮುನ್ಸಿಪಲ್ ಏರಿಯಾ][1]ದ ಹೊರಗಡೆಗೆ ಉದ್ದೇಶಿಸಿ ಹೊರಡಿಸಿದ್ದಲ್ಲಿ, ಮುನ್ಸಿಪಲ್ ಕಮಿಷನರ್ ನು ಅಥವಾ ಚೀಫ್ ಆಫೀಸರ್ ನು, ವಾರಂಟ್ ನ್ನು ಸಂಭೋದಿಸಿದ ಅಧಿಕಾರಿಗೆ ಕರಸ್ಥ ಅಥವಾ ಜಪ್ತಿ ಮಾಡಿದ ಸ್ವತ್ತನ್ನು ಮಾರಾಟ ಮಾಡುವಂತೆ ಹಿಂಬರಹದ ಮೂಲಕ ನಿರ್ದೇಶಿಸಬಹುದು; ಅಂಥ ಸಂದರ್ಭದಲ್ಲಿ ಅಂಥ ಅಧಿಕಾರಿಯು, ಸ್ವತ್ತನ್ನು ಮಾರಲು ಮತ್ತು 144 ಮತ್ತು 145ನೇ ಪ್ರಕರಣಗಳ ಉಪಬಂಧಗಳ ಅನುಸಾರವಾಗಿ ಮಾರಾಟಕ್ಕೆ ಪ್ರಾಸಂಗಿಕವಾದ ಎಲ್ಲಾ ವಿಷಯಗಳನ್ನು ಮಾಡಲು ಮತ್ತು 144ನೇ ಪ್ರಕರಣದ (1) ಮತ್ತು (2)ನೇ ಉಪ-ಪ್ರಕರಣಗಳ ಮೇರೆಗೆ, ಅಂಥ ಮಾರಾಟಕ್ಕೆ ಸಂಬಂಧಿಸಿದಂತೆ ವಾರಂಟ್ ನ್ನು ಅಮಾನತ್ತುಗೊಳಿಸುವ ಅಧಿಕಾರವನ್ನು ಹೊರತುಪಡಿಸಿ, ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನ ಅಧಿಕಾರಗಳನ್ನು ಚಲಾಯಿಸುವುದು ಮತ್ತು ಕರ್ತವ್ಯಗಳನ್ನು ನೆರವೇರಿಸುವುದು ಕಾನೂನು ಸಮ್ಮತವಾಗಿರತಕ್ಕದ್ದು. ಅಂಥ ಅಧಿಕಾರಿಯು, ಅವನು ವಸೂಲಿಗಾಗಿ ವಹಿಸಿದ ಎಲ್ಲಾ ಖರ್ಚುಗಳನ್ನು ಮುರಿದುಕೊಂಡ ತರುವಾಯ, ವಾರೆಂಟ್ ಮೇರೆಗೆ ವಸೂಲಿ ಮಾಡಿದ ಮೊಬಲಗನ್ನು ಅದನ್ನು ಹೊರಡಿಸಿದ ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನಿಗೆ ಜಮೆ ಕಟ್ಟತಕ್ಕದ್ದು; ಅವನು 144ನೇ ಪ್ರಕರಣದ ಉಪಬಂಧಗಳ ಅನುಸಾರವಾಗಿ ಅದನ್ನು ವಿಲೆ ಮಾಡತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

147. ಕರಸ್ಥವು ಕಾರ್ಯಸಾಧ್ಯವಲ್ಲದಾಗ ಪ್ರಕ್ರಿಯೆ.- (1) ಈ ಅಧ್ಯಾಯದ ಹಿಂದೆ ಹೇಳಿದ ಉಪಬಂಧಗಳ ಮೇರೆಗೆ ತಪ್ಪಿತನ ಸ್ವತ್ತಿನ ಕರಸ್ಥ ಅಥವಾ ಸಾಕಷ್ಟು ಕರಸ್ವವು ಯಾವುದೇ ಕಾರಣದಿಂದ ಕಾರ್ಯ ಸಾಧ್ಯವಾಗದಿದ್ದರೆ, ಮುನ್ಸಿಪಲ್ ಕೌನ್ಸಿಲ್, ತಪ್ಪಿತನನ್ನು ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ ನ ಮುಂದೆ ಪ್ರಾಸಿಕ್ಯೂಟ್ ಮಾಡಬಹುದು:

ಪರಂತು, ಯಾವುದಕ್ಕೆ ಸಂಬಂಧಿಸಿದಂತೆ ಯಾವುದೇ ತೆರಿಗೆಯು ಸಂಪೂರ್ಣವಾಗಿ ಅಥವಾ ಭಾಗಶಃ ಸಂದಾಯವಾಗದೆ ಉಳಿದಿದೆಯೋ ಆ [1][ಕಟ್ಟಡ ಅಥವಾ ಖಾಲಿಭೂಮಿಯ][1] ಅಧಿಭೋಗದಾರನು, ಸಂಬಂಧಿಸಿದ [1][ಕಟ್ಟಡ ಅಥವಾ ಖಾಲಿಭೂಮಿಯ][1] ಮೇಲೆ ಕಂಡುಬರುವ ಚರಸ್ವತ್ತಿನ ಕರಸ್ಥ ಅಥವಾ ಸಾಕಷ್ಟು ಕರಸ್ವವನ್ನು ಉದ್ದೇಶಪೂರ್ವಕವಾಗಿ ತಡೆಗಟ್ಟಿದ ಹೊರತು ಅವನಿಂದ ವಸೂಲೀಯವಾಗಬಹುದಾದ ಯಾವುದೇ ಮೊತ್ತಕ್ಕೆ ಸಂಬಂಧಪಟ್ಟಂತೆ ಪ್ರಾಸಿಕ್ಯೂಷನ್‌ಗೆ ಗುರಿಯಾಗತಕ್ಕದ್ದಲ್ಲ.

1.2003ರ ಅಧಿನಿಯಮ 31ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಉಪ-ಪ್ರಕರಣ (1)ರ ಮೇರೆಗೆ ಪ್ರಾಸಿಕ್ಯೂಟ್ ಆದ ಪ್ರತಿಯೊಬ್ಬ ವ್ಯಕ್ತಿಯು, ತನ್ನಿಂದ ಬಾಕಿಯಿರುವ ಮೊಬಲಗನ್ನು ಸಂದಾಯ ಮಾಡಲು ಉದ್ದೇಶಪೂರ್ವಕವಾಗಿ ತಪ್ಪಿರುವುದಾಗಿ ಮ್ಯಾಜಿಸ್ಟ್ರೇಟ್ ನಿಗೆ ಮನದಟ್ಟಾಗುವಂತೆ ರುಜುವಾತುಪಡಿಸಿದ ಮೇಲೆ,-

(ಎ) ತೆರಿಗೆ ಮತ್ತು ವಾರಂಟ್ ಫೀಜು ಯಾವುದಾದರೂ ಇದ್ದರೆ; ಮತ್ತು

(ಬಿ) ಕರಸ್ಥಗೊಳಿಸಲಾಗಿದ್ದರೆ, ಕರಸ್ಥ ಫೀಜು ಮತ್ತು ಕರಸ್ಥಗೊಳಿಸಿದ ಸ್ವತ್ತಿನ ಹಿಡಿದಿರಿಸುವಿಕೆ ಮತ್ತು ಮಾರಾಟಕ್ಕೆ ಪ್ರಾಸಂಗಿಕವಾದ ವೆಚ್ಚಗಳು ಯಾವುದಾದರೂ ಇದ್ದರೆ

- ಅವುಗಳ ಬಾಬ್ತು ಅವನು ಬಾಕಿಯಾಗಿರಬಹುದಾದಂಥ ಮೊಬಲಗಿನ ಎರಡರಷ್ಟಕ್ಕೆ ಮೀರದ ಜುಲ್ಮಾನೆಯನ್ನು ಸಂದಾಯ ಮಾಡಲು ಗುರಿಯಾಗತಕ್ಕದ್ದು.

(3) ಉಪ-ಪ್ರಕರಣ (2)ರ ಮೇರೆಗೆ ಯಾರೇ ವ್ಯಕ್ತಿಯು, ಅಪರಾಧದ ಅಪರಾಧಿಯೆಂದು ನಿರ್ಣೀತನಾದಾಗಲೆಲ್ಲಾ, ಮ್ಯಾಜಿಸ್ಟ್ರೇಟ್ ನು, ವಿಧಿಸಬಹುದಾದ ಯಾವುದೇ ಜುಲ್ಮಾನೆಯ ಜೊತೆಗೆ, (2)ನೇ ಉಪ-ಪ್ರಕರಣದ (ಎ) ಮತ್ತು (ಬಿ) ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಶೀರ್ಷಿಕೆಗಳಡಿಯಲ್ಲಿ ಬಾಕಿಯಾಗಿರುವ ಮೊಬಲಗು, ಯಾವುದಾದರೂ ಇದ್ದರೆ, ಅದನ್ನು ಕ್ಷಿಪ್ರವಾಗಿ ವಸೂಲಿ ಮಾಡತಕ್ಕದ್ದು ಮತ್ತು ಮುನ್ಸಿಪಲ್ ಕೌನ್ಸಿಲ್‌ಗೆ ಸಂದಾಯ ಮಾಡಬೇಕು, ಮತ್ತು ತನ್ನ ವಿವೇಚನಾನುಸಾರ ಪ್ರಾಸಿಕ್ಯೂಷನ್ ಖರ್ಚುಗಳೆಂದು ನಿಗದಿಪಡಿಸಬಹುದಾದ ಮೊಬಲಗು ಯಾವುದಾದರೂ ಇದ್ದರೆ, ಅದನ್ನು ಸಹ ಕ್ಷಿಪ್ರವಾಗಿ ವಸೂಲಿ ಮಾಡಬಹುದು, ಮುನ್ಸಿಪಲ್ ಕೌನ್ಸಿಲ್‌ಗೆ ಸಂದಾಯ ಮಾಡಬಹುದು.

148. [1][ಮುನ್ಸಿಪಲ್ ಏರಿಯಾ][1]ವನ್ನು ಬಿಡಲಿರುವ ವ್ಯಕ್ತಿಗಳ ವಿರುದ್ಧ ಕ್ಷಿಪ್ರ ವ್ಯವಹರಣೆಯನ್ನು ತೆಗೆದುಕೊಳ್ಳಬಹುದು.- (1) ಯಾವ ವ್ಯಕ್ತಿಯಿಂದ ಈ ಅಧಿನಿಯಮದ ಮೇರೆಗೆ ವಸೂಲಿ ಮಾಡಬಹುದಾದ ಯಾವುದೇ ಮೊತ್ತವು ಬಾಕಿಯಿದೆಯೋ ಅಥವಾ ಬಾಕಿಯಾಗುವಂತಿದೆಯೋ, ಆ ಯಾರೇ ವ್ಯಕ್ತಿಯು, [1][ಮುನ್ಸಿಪಲ್ ಏರಿಯಾ][1]ವನ್ನು ಬಿಡಲಿದ್ದಾನೆ ಎಂದು ಮುನ್ಸಿಪಲ್ ಕೌನ್ಸಿಲ್‌ಗೆ ನಂಬಲು ಕಾರಣಗಳಿದ್ದರೆ, ಮುನ್ಸಿಪಾಲಿಟಿಗೆ ಬಾಕಿಯಿರುವ ಅಥವಾ ಬಾಕಿಯಾಗಬಹುದಾದ ಮೊತ್ತಕ್ಕಾಗಿ ಬಿಲ್ಲನ್ನು ಅಂಥ ವ್ಯಕ್ತಿಗೆ ಸಲ್ಲಿಸುವಂತೆ ಮಾಡಬಹುದು ಮತ್ತು ಅದನ್ನು ಕೂಡಲೇ ಸಂದಾಯ ಮಾಡುವಂತೆ ತಗಾದೆ ಮಾಡಬಹುದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಅಂಥ ಬಿಲ್ಲನ್ನು ಸಲ್ಲಿಸಿದ ಮೇಲೆ, ಸದರಿ ವ್ಯಕ್ತಿಯು, ಅವನಿಂದ ಬಾಕಿಯಿರುವ ಅಥವಾ ಬಾಕಿಯಾಗಬಹುದಾದ ಮೊತ್ತವನ್ನು ತತ್‌ಕ್ಷಣವೇ ಸಂದಾಯ ಮಾಡದಿದ್ದರೆ, ಮೊಬಲಗನ್ನು ತಪ್ಪಿತನ ಚರ ಸ್ವತ್ತಿನ ಕರಸ್ಥ ಮತ್ತು ಮಾರಾಟದ ಮೂಲಕ ಅಥವಾ ಸ್ಥಿರ ಸ್ವತ್ತಿನ ಜಪ್ತಿ ಮತ್ತು ಮಾರಾಟದ ಮೂಲಕ ಇಲ್ಲಿ ಇನ್ನು ಮುಂದೆ ನಿಯಮಿಸಲಾದ ರೀತಿಯಲ್ಲಿ ವಸೂಲಿ ಮಾಡತಕ್ಕದ್ದು. ಆದರೆ ತಗಾದೆಯ ಯಾವುದೇ ನೋಟೀಸನ್ನು ತಪ್ಪಿತನ ಮೇಲೆ ಜಾರಿ ಮಾಡುವುದು ಅವಶ್ಯಕವಾಗಿರತಕ್ಕದ್ದಲ್ಲ ಮತ್ತು ಮುನ್ಸಿಪಲ್ ಕೌನ್ಸಿಲ್‌ನ ಕರಸ್ಥ ಅಥವಾ ಜಪ್ತಿ ಮತ್ತು ಮಾರಾಟದ ವಾರಂಟ್ ನ್ನು ವಿಳಂಬವಿಲ್ಲದೆ ಹೊರಡಿಸಬಹುದು ಮತ್ತು ಜಾರಿಗೊಳಿಸಬಹುದು.

149. ಫೀಜುಗಳು.- (ಎ) 142ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ಹೊರಡಿಸಿದ ಪ್ರತಿಯೊಂದು ನೋಟೀಸಿಗೆ,-

(ಬಿ) 143ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಹೊರಡಿಸಿದ ಪ್ರತಿಯೊಂದು ವಾರಂಟಿಗೆ; ಮತ್ತು

(ಸಿ) 143ನೇ ಪ್ರಕರಣದ (5)ನೇ ಉಪ-ಪ್ರಕರಣದ ಮೇರೆಗೆ ಮಾಡಲಾದ ಪ್ರತಿಯೊಂದು ಕರಸ್ಥ ಮತ್ತು ಜಪ್ತಿಗೆ-ಫೀಜುಗಳನ್ನು;

- 143ನೇ ಪ್ರಕರಣದ (5)ನೇ ಉಪ-ಪ್ರಕರಣದ ಮೇರೆಗೆ ಅಭಿಗ್ರಹಣ ಮಾಡಿದ ಯಾರೇ ಪಶುಸಂಪತ್ತಿನ ನಿರ್ವಹಣೆ ಖರ್ಚನ್ನು ನಿಯಮಗಳಲ್ಲಿ ಆ ಬಗ್ಗೆ ನಿರ್ದಿಷ್ಟಪಡಿಸಿದ ಅನುಕ್ರಮ ದರಗಳಲ್ಲಿ ವಿಧಿಸತಕ್ಕದ್ದು ಮತ್ತು 144ನೇ ಪ್ರಕರಣದ ಮೇರೆಗೆ ವಸೂಲ್ಮಾಡಬೇಕಾದ ವಸೂಲಿ ಖರ್ಚಿನಲ್ಲಿ ಸೇರಿಸತಕ್ಕದ್ದು.

150. ಮ್ಯಾಜಿಸ್ಟ್ರೇಟ್ ರಿಗೆ ಅಪೀಲು.- 142ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ಅಥವಾ 148ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಜಾರಿ ಮಾಡಿದ ತಗಾದೆಯ ನೋಟೀಸಿನಲ್ಲಿ ಒಳಗೊಂಡ ಯಾವುದೇ ಕ್ಲೇಮಿನ ವಿರುದ್ಧ ಅಪೀಲುಗಳನ್ನು, [1][ಸಂಬಂಧಪಟ್ಟ ಪ್ರದೇಶದ ಮೇಲೆ ಅಧಿಕಾರವ್ಯಾಪ್ತಿ ಹೊಂದಿರುವ ನ್ಯಾಯಿಕ ಮ್ಯಾಜಿಸ್ಟ್ರೇಟ್ ರಿಗೆ][1] ಮಾಡಬಹುದು.

1.1996ರ ಅಧಿನಿಯಮ 34ರ ಮೂಲಕ 16.1.1967 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಆದರೆ ಅಂಥ ಯಾವುದೇ ಅಪೀಲನ್ನು,-

(ಎ) ಯಾವ ನೋಟೀಸಿನ ಜಾರಿ ಬಗ್ಗೆ ದೂರು ಸಲ್ಲಿಸಲಾಗಿದೆಯೋ ಆ ನೋಟೀಸ್ ಜಾರಿಯಾದ ತರುವಾಯ ಒಂದು ತಿಂಗಳೊಳಗಾಗಿ ಅಪೀಲನ್ನು ದಾಖಲ್ಮಾಡಿರುವ ಹೊರತು; ಮತ್ತು

(ಬಿ) ಯಾವ ಕಾರಣಗಳ ಮೇಲೆ ಆ ಕ್ಲೇಮನ್ನು ಪ್ರಶ್ನಿಸಲಾಗಿದೆಯೋ ಆ ಕಾರಣಗಳನ್ನು ತಿಳಿಸಿರುವ ಲಿಖಿತ ಅರ್ಜಿಯನ್ನು:-

[1][(i) ಸ್ವತ್ತು ತೆರಿಗೆಯ ಸಂದರ್ಭದಲ್ಲಿ, 142ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ನೋಟೀಸನ್ನು ನೀಡಿದ ತರುವಾಯದ ಹದಿನೈದು ದಿನಗಳೊಳಗೆ][1] ಚೀಫ್ ಆಫೀಸರ್ ಗೆ ಅಥವಾ ಸಂದರ್ಭಾನುಸಾರ ಮುನ್ಸಿಪಲ್ ಕಮೀಷನರ್ ಗೆ ಅಥವಾ ಅಧಿಕೃತ ಅಧಿಕಾರಿಗೆ ಸಲ್ಲಿಸಿರುವ ಹೊರತು;

1.2001ರ ಅಧಿನಿಯಮ 28ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ii) ಯಾವ ಕ್ಲೇಮಿನ ಬಗ್ಗೆ 142ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ತಗಾದೆ ನೋಟೀಸನ್ನು ಜಾರಿ ಮಾಡಲಾಗಿದೆಯೋ ಆ ಯಾವುದೇ ಇತರ ಕ್ಲೇಮಿನ ಸಂದರ್ಭದಲ್ಲಿ ಅಂಥ ನೋಟೀಸನ್ನು ಜಾರಿ ಮಾಡಿದ ತರುವಾಯ ಮುಂದಿನ ಹದಿನೈದು ದಿನಗಳೊಳಗೆ ಮುನ್ಸಿಲ್ ಕೌನ್ಸಿಲ್‌ಗೆ, ಸಲ್ಲಿಸಿರುವ ಹೊರತು; ಮತ್ತು

(ಸಿ) ಅಪೀಲುದಾರನು [1][ಒಪ್ಪಿಕೊಂಡ][1] ಮೊಬಲಗನ್ನು ಅವನು ಮುನ್ಸಿಪಲ್ ಕಚೇರಿಯಲ್ಲಿ ಠೇವಣಿಯಿರಿಸಿರುವ ಹೊರತು

1.1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

- ವಿಚಾರಣೆ ಮಾಡತಕ್ಕದ್ದಲ್ಲ ಮತ್ತು ನಿರ್ಧರಿಸತಕ್ಕದ್ದಲ್ಲ.

(2) ಯಾವುದೇ ಅಪೀಲಿನ ಮೇಲೆ ಮ್ಯಾಜಿಸ್ಟ್ರೇಟ್ ರ ತೀರ್ಮಾನವು, ಆ ತೀರ್ಮಾನದ ಬಗ್ಗೆ ಯಾರೇ ಪಕ್ಷಕಾರನು ಕೋರಿದಾಗ, ಯಾವ ನ್ಯಾಯಾಲಯಕ್ಕೆ ಸಾಮಾನ್ಯವಾಗಿ ಅಪೀಲು ಮಾಡಲು ಅವಕಾಶವಿದೆಯೋ, ಆ ನ್ಯಾಯಾಲಯದಿಂದ ಪುನರೀಕ್ಷಣೆಗೊಳಪಟ್ಟಿರತಕ್ಕದ್ದು.

(3) ಉಪ-ಪ್ರಕರಣ (2) ರ ಉಪಬಂಧಗಳಿಗೊಳಪಟ್ಟು, ಈ ಪ್ರಕರಣದ ಮೇರೆಗಿನ ಯಾವುದೇ ಅಪೀಲಿನಲ್ಲಿ ಅಥವಾ ಪುನರೀಕ್ಷಣೆಯಲ್ಲಿ ಮ್ಯಾಜಿಸ್ಟ್ರೇಟ್ ರ ತೀರ್ಮಾನವು ಅಂತಿಮವಾದುದಾಗಿರತಕ್ಕದ್ದು ಮತ್ತು ಮುನ್ಸಿಪಲ್ ಕೌನ್ಸಿಲ್ ಅದನ್ನು ಕಾರ್ಯಗತಗೊಳಿಸತಕ್ಕದ್ದು.

(4) ಈ ಅಧಿನಿಯಮದಲ್ಲಿ ಉಪಬಂಧಿಸಿರುವುದನ್ನುಳಿದು, ಈ ಅಧಿನಿಯಮದ ಉಪಬಂಧಗಳ ಮೇರೆಗೆ [1][ಸ್ವತ್ತು ತೆರಿಗೆ ರಿಜಿಸ್ಟರ್][1]ನಲ್ಲಿ ಮಾಡಿರುವ ಯಾವುದೇ ನಮೂದನ್ನು ಮತ್ತು ಈ ಅಧ್ಯಾಯದ ಮೇರೆಗೆ ಯಾರೇ ವ್ಯಕ್ತಿಯು ಕ್ಲೇಮು ಮಾಡಿದ ಮೊತ್ತವನ್ನು, ನ್ಯಾಯಾಲಯದ ಅಥವಾ ಇತರ ಪ್ರಾಧಿಕಾರದ ಮುಂದೆ ಪ್ರಶ್ನಿಸತಕ್ಕದ್ದಲ್ಲ.

1.2003ರ ಅಧಿನಿಯಮ 31ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

151. ತೆರಿಗೆಗಾಗಿ [1][ಖಾಲಿಭೂಮಿ][1] ಕಟ್ಟಡ ಇತ್ಯಾದಿಗಳ ಹೊಣೆಗಾರಿಕೆ.- 110ನೇ ಪ್ರಕರಣದಲ್ಲಿ ಹೇಳಿರುವಂತೆ ಸ್ವತ್ತು ತೆರಿಗೆಯ ರೂಪದಲ್ಲಿ ವಿಧಿಸಿದ ಯಾವುದೇ ತೆರಿಗೆಯಿಂದಾಗಿ ಬಾಕಿಯಿರುವ ಎಲ್ಲಾ ಮೊತ್ತಗಳು, ಅದರ ಮೇಲೆ ಸರ್ಕಾರಕ್ಕೆ ಭೂಕಂದಾಯವೇನಾದರೂ ಬಾಕಿ ಇದ್ದರೆ, ಅದನ್ನು ಮುಂಚಿತವಾಗಿಯೇ ಸಂದಾಯ ಮಾಡುವುದಕ್ಕೊಳಪಟ್ಟು, ಯಾವ ಕಟ್ಟಡಕ್ಕೆ ಅಥವಾ ಭೂಮಿಗೆ ಅಂಥ ತೆರಿಗೆಯನ್ನು ವಿಧಿಸಬಹುದಾಗಿದೆಯೋ ಅಂಥ [1][ಕಟ್ಟಡದ ಅಥವಾ ಖಾಲಿಭೂಮಿಯ][1] ಮೇಲೆ ಮತ್ತು ಅಂಥ [1][ಕಟ್ಟಡದ ಅಥವಾ ಖಾಲಿಭೂಮಿಯ][1] ಒಳಗೆ ಅಥವಾ ಮೇಲೆ ಯಾವುದಾದರೂ ಚರ ಸ್ವತ್ತು ಕಂಡು ಬಂದರೆ ಮತ್ತು ಅಂಥ ತೆರಿಗೆಗೆ ಅಥವಾ ತೆರಿಗೆಗಳಿಗೆ ಹೊಣೆಯಾದ ವ್ಯಕ್ತಿಗೆ ಆ ಚರಸ್ವತ್ತು ಸೇರಿದ್ದರೆ ಅದರ ಮೇಲೆ ಮೊದಲ ಋಣಭಾರವಾಗಿರತಕ್ಕದ್ದು ಮತ್ತು ಅದನ್ನು ಭೂಕಂದಾಯ ಬಾಕಿಗಳೆಂಬಂತೆ ಆ ಮೊತ್ತಗಳು ವಸೂಲೀಯವಾದವುಗಳಾಗಿರತಕ್ಕದ್ದು:

1.2003ರ ಅಧಿನಿಯಮ 31ರ ಮೂಲಕ 19.11.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಪರಂತು, ಯಾವುದೇ ಅಂಥ ತೆರಿಗೆಯ ಯಾವುದೇ ಬಾಕಿಯನ್ನು ಒಡೆಯನಲ್ಲದ ಯಾರೇ ಅಧಿಭೋಗದಾರನಿಂದ ಅದು ಮೂರು ವರ್ಷಗಳಿಗಿಂತ ಹೆಚ್ಚು ಕಾಲ ಅಥವಾ ಅಂಥ

ಅಧಿಭೋಗದಾರನು ಅದರ ಅಧಿಭೋಗದಲ್ಲಿರದ ಅವಧಿಗಾಗಿ ಬಾಕಿಯಾಗಿದ್ದರೆ ವಸೂಲ್ಮಾಡತಕ್ಕದ್ದಲ್ಲ.

152. ಜಪ್ತಿ ಮತ್ತು ಮಾರಾಟದ ಮೂಲಕ ವಸೂಲಿ ಮಾಡುವ ಅಧಿಕಾರದ ಸ್ಥಗಿತ.- ಸರ್ಕಾರವು, ಯಾವುದೇ ಕಾಲದಲ್ಲಿ ಅಧಿಸೂಚನೆಯ ಮೂಲಕ, ಯಾವುದೇ [1][ಮುನ್ಸಿಪಲ್ ಏರಿಯಾ][1]ದಲ್ಲಿ 143ನೇ ಮತ್ತು 144ನೇ ಪ್ರಕರಣಗಳ ಪ್ರವರ್ತನೆಯನ್ನು ಸ್ಥಗಿತಗೊಳಿಸಬಹುದು ಮತ್ತು ಅಧಿಸೂಚನೆಯಲ್ಲಿ ಈ ಬಗ್ಗೆ ನಿಗದಿಪಡಿಸತಕ್ಕಂಥ ದಿನಾಂಕದಿಂದ ಸದರಿ ಪ್ರಕರಣಗಳ ಮೇರೆಗೆ ವಸೂಲ್ಮಾಡಬಹುದಾದ ಯಾವುದೇ ತೆರಿಗೆಯಿಂದಾಗಿ ಬಾಕಿಯಿರುವ ಪ್ರತಿಯೊಂದು ಮೊಬಲಗು, 276ನೇ ಪ್ರಕರಣದ (2)ನೇ ಉಪ-ಪ್ರಕರಣದಲ್ಲಿ, ಅದರಲ್ಲಿ ಉಲ್ಲೇಖಿಸಿರುವ ಜುಲ್ಮಾನೆಗಳ ವಸೂಲಿಗಾಗಿ ಉಪಬಂಧಿಸಿದ ರೀತಿಯಲ್ಲಿ, ಮೊದಲನೇ ದರ್ಜೆ ಮ್ಯಾಜಿಸ್ಟ್ರೇಟ್ ರಿಗೆ ಅರ್ಜಿ ಸಲ್ಲಿಸಿದಾಗ, ವಸೂಲಿ ಮಾಡಬೇಕೇ ಹೊರತು ಮತ್ತು ಅನ್ಯಥಾ ಅಲ್ಲ.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

153. ಮಾಡಿದ ಎಲ್ಲಾ ಸಂದಾಯಗಳಿಗೆ ರಸೀತಿಯನ್ನು ಕೊಡತಕ್ಕದ್ದು.- ಈ ಅಧಿನಿಯಮದ ಮೇರೆಗೆ ಯಾವುದೇ ತೆರಿಗೆಯ ಬಾಬ್ತು ಸಂದಾಯ ಮಾಡಿದ ಎಲ್ಲಾ ಮೊತ್ತಗಳಿಗಾಗಿ, ಮೊಬಲಗನ್ನು ಮತ್ತು ಆ ತೆರಿಗೆಯನ್ನು ಯಾವುದಕ್ಕಾಗಿ ಸಂದಾಯ ಮಾಡಲಾಗಿದೆಯೋ ಅದನ್ನು ನಮೂದಿಸಿ, ಒಂದು ರಸೀತಿಯನ್ನು ಆ ಮೊತ್ತವನ್ನು ಸ್ವೀಕರಿಸುವ ವ್ಯಕ್ತಿಯು ಕೊಡಮಾಡತಕ್ಕದ್ದು.

154. ಭೂಮಿಗೆ ಕೊಡಬೇಕಾದ ಬಾಡಿಗೆಯ ವಸೂಲಿ.- (1) ಬಾಡಿಗೆ ಬಾಬ್ತು ಯಾರೇ ವ್ಯಕ್ತಿಯಿಂದ ಯಾವುದೇ ಮೊತ್ತವು, ಮುನ್ಸಿಪಲ್ ಕೌನ್ಸಿಲ್‌ನಲ್ಲಿ ನಿಹಿತವಾದ ಅಥವಾ ಅದರ ವ್ಯವಸ್ಥಾಪನೆಗಾಗಿ ಮುನ್ಸಿಪಲ್ ಕೌನ್ಸಿಲ್‌ಗೆ ವಹಿಸಿದ ಭೂಮಿಗೆ ಸಂಬಂಧಿಸಿದಂತೆ ಯಾವುದೇ ಮೊತ್ತವು ಬಾಕಿಯಿದ್ದರೆ ಅಂಥ ಬಾಡಿಗೆಯ [1][ಅಥವಾ ಸ್ವತ್ತು ತೆರಿಗೆಯ][1] ಯಾವುದೇ ಬಾಕಿಯನ್ನು ಅದು ಭೂಕಂದಾಯದ ಬಾಕಿಯಾಗಿದ್ದರೆ ಹೇಗೆ ವಸೂಲು ಮಾಡಬಹುದೋ ಹಾಗೆ ವಸೂಲು ಮಾಡಲು ಮುನ್ಸಿಪಲ್ ಕೌನ್ಸಿಲ್, ಡೆಪ್ಯುಟಿ ಕಮಿಷನರ್ ನಿಗೆ ಅರ್ಜಿ ಸಲ್ಲಿಸಬಹುದು.

(2) ಡೆಪ್ಯುಟಿ ಕಮಿಷನರ್ ನು, ಮೊತ್ತವು ಬಾಕಿಯಿದೆಯೆಂದು ಮನದಟ್ಟು ಮಾಡಿಕೊಂಡ ಮೇಲೆ ಅದನ್ನು ಭೂಕಂದಾಯದ ಬಾಕಿಯೆಂಬಂತೆ ವಸೂಲು ಮಾಡಲು ಮುಂದುವರೆಯತಕ್ಕದ್ದು.

[1][(3) ಸ್ವತ್ತು ತೆರಿಗೆಯ ನಿರ್ಧರಣೆಯ ಮೇರೆಗೆ ಅಥವಾ ಪುರಸಭೆಗೆ ಯಾವುದೇ ಹಣಕಾಸು ಉದ್ದೇಶಗಳ ಮೇರೆಗೆ ಸ್ವತ್ತು ತೆರಿಗೆಯ ಬಾಕಿಯನ್ನು ಸಂಗ್ರಹಿಸಲು ವಿಫಲನಾದ ಪುರಸಭೆಯ ಯಾರೇ ಅಧಿಕಾರಿ ಅಥವಾ ಉದ್ಯೋಗಿಯು, ಪ್ರತಿಯೊಂದು ಪ್ರಕರಣಗಳಲ್ಲಿ ಐವತ್ತು ಸಾವಿರ ರೂಪಾಯಿಗಳವರೆಗೆ ಜುಲ್ಮಾನೆಗೆ ಒಳಗಾಗತಕ್ಕದ್ದು ಮತ್ತು ಹದಿನೈದು ದಿವಸಗಳ ಸಾದಾ ಕಾರಾವಾಸದಿಂದಲೂ ಸಹ ದಂಡಿತನಾಗಬಹುದು.][1]

1.2024ರ ಅಧಿನಿಯಮ ಸಂಖ್ಯೆ 43ರ ಮೂಲಕ ದಿ:10.09.2024 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

ಅಧ್ಯಾಯ-VIII
ಮೇಲ್ಪಾಟು ಯೋಜನೆಗಳು ಮತ್ತು ಮೇಲ್ಪಾಟು ಮಂಡಲಿಗಳು

155. ಕಾಮಗಾರಿಗಳನ್ನು ಕೈಗೊಳ್ಳಲು ಮತ್ತು ಮೇಲ್ಪಾಟುಗಳಿಗಾಗಿ ವೆಚ್ಚವನ್ನು ವಹಿಸಲು ಮುನ್ಸಿಪಲ್ ಕೌನ್ಸಿಲ್‌ನ ಅಧಿಕಾರ ಇತ್ಯಾದಿ.- ಮುನ್ಸಿಪಲ್ ಕೌನ್ಸಿಲ್, ಸರ್ಕಾರದ ನಿಯಂತ್ರಣಕ್ಕೊಳಪಟ್ಟು,-

(1) (ಎ) [1][ಮುನ್ಸಿಪಲ್ ಏರಿಯಾ][1] ದೊಳಗಿನ ಪ್ರದೇಶಗಳ ಮೇಲ್ಪಾಟಿಗಾಗಿ ಅಥವಾ ವಿಸ್ತರಣೆಗಾಗಿ ಅಥವಾ ಅವೆರಡಕ್ಕಾಗಿ ವಿವರವಾದ ಯೋಜನೆಗಳನ್ನು (ಇಲ್ಲಿ ಇನ್ನುಮುಂದೆ ಮೇಲ್ಪಾಟು ಯೋಜನೆಯೆಂದು ಉಲ್ಲೇಖಿಸಲಾದ) ರೂಪಿಸಬಹುದು;

(ಬಿ) ಯಾವುದೇ ಅಂಥ ಪ್ರದೇಶದ ಮೇಲ್ಪಾಟು ಅಥವಾ ಅಭಿವೃದ್ಧಿಗಾಗಿ ಮತ್ತು ಕಾಲಕಾಲಕ್ಕೆ ಅವಶ್ಯಕವಾಗಬಹುದಾದಂಥ ಅಭಿವೃದ್ಧಿ ಯೋಜನೆಗಳನ್ನು ರೂಪಿಸಲು ಮತ್ತು ಕಾರ್ಯಗತಗೊಳಿಸಲು ಯಾವುವೇ ಕಾಮಗಾರಿಗಳನ್ನು ಕೈಗೊಳ್ಳಬಹುದು ಮತ್ತು ಯಾವುದೇ ವೆಚ್ಚವನ್ನು ವಹಿಸಬಹುದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ತನ್ನ ಸಾಧನ ಸಂಪತ್ತುಗಳು ಸಾಕಷ್ಟಿವೆಯೆಂದು ಮುನ್ಸಿಪಲ್ ಕೌನ್ಸಿಲ್‌ಗೆ ಮನದಟ್ಟಾದರೆ, ಅದು ತಾನಾಗಿಯೇ ಕಾಲಕಾಲಕ್ಕೆ ಯಾವುದೇ ಹೊಸ ಅಥವಾ ಹೆಚ್ಚಿನ ಮೇಲ್ಪಾಟು ಯೋಜನೆಗಳನ್ನು ಸಹ ಮಾಡಬಹುದು.

(3)ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಒಳಗೊಂಡಿರುವುದಕ್ಕೆ ತದ್ವಿರುದ್ಧವಾದುದು ಏನೇ ಇದ್ದರೂ ಸರ್ಕಾರವು, ಅವಶ್ಯವೆಂದು ಅದು ಭಾವಿಸಿದಾಗಲೆಲ್ಲಾ, ಯಾವುದೇ ಮೇಲ್ಪಾಟು ಯೋಜನೆಯನ್ನು ಅಥವಾ ಕಾಮಗಾರಿಯನ್ನು ಕೈಗೊಳ್ಳಬೇಕೆಂದು ಹಾಗೂ ಆ ಯೋಜನೆ ಅಥವಾ ಕಾಮಗಾರಿಯನ್ನು ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೊಳಪಟ್ಟು ಕಾರ್ಯಗತಗೊಳಿಸಬೇಕೆಂದು ಮುನ್ಸಿಪಲ್ ಕೌನ್ಸಿಲ್ ನ್ನು ಅಗತ್ಯಪಡಿಸಬಹುದು.

(4) ಯಾವುದೇ ಸ್ಥಳಕ್ಕೆ ಸಂಬಂಧಿಸಿದಂತೆ ಈ ಪ್ರಕರಣದ ಮೇರೆಗೆ ಮೇಲ್ಪಾಟು ಯೋಜನೆಯು ಅಗತ್ಯವೆಂದು ಮುನ್ಸಿಪಲ್ ಕೌನ್ಸಿಲ್ ನಿರ್ಣಯವನ್ನು ಅಂಗೀಕರಿಸಿದ ಮೇಲೆ, ಈ ಬಗ್ಗೆ ಮುನ್ಸಿಪಲ್ ಕೌನ್ಸಿಲ್‌ನಿಂದ ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಅಧಿಕೃತನಾದ ಯಾರೇ ವ್ಯಕ್ತಿಯು ಮತ್ತು ಆತನಿಗೆ ನೆರವಾಗುವ ಮುನ್ಸಿಪಲ್ ನೌಕರರು, 1894ರ ಭೂ ಆರ್ಜನಾ ಅಧಿನಿಯಮದ 4ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ಕಾರ್ಯನಿರ್ವಹಿಸಲು ಸರ್ಕಾರದಿಂದ ಕ್ರಮಬದ್ಧವಾಗಿ ಅಧಿಕೃತನಾದ ಅಧಿಕಾರಿಯು ಮತ್ತು ಆ ಮೇರೆಗೆ ಕೆಲಸ ಮಾಡುವುದು ಆತನ ನೌಕರರು ಹಾಗೂ ಕೆಲಸಗಾರರು ಕಾನೂನು ಹೇಗೆ ಸಮ್ಮತವಾಗುತ್ತದೋ, ಆ ಸ್ಥಳದಲ್ಲಿನ ಭೂಮಿಯಲ್ಲಿ ಅಥವಾ ಅದಕ್ಕೆ ಸಂಬಂಧಿಸಿದಂತೆಯೂ ಕೆಲಸ ಮಾಡುವುದು ಕಾನೂನು ಸಮ್ಮತವಾಗಿರತಕ್ಕದ್ದು ಮತ್ತು ಸದರಿ ಅಧಿನಿಯಮದ 5ನೇ ಪ್ರಕರಣದಲ್ಲಿರುವ ಉಪಬಂಧಗಳು ಈ ಮೊದಲು ಹೇಳಿರುವ ಯಾವುದೇ ಕಾರ್ಯಗಳಿಂದ ಉಂಟಾದ ಹಾನಿಗೆ ಸಂಬಂಧಪಟ್ಟಂತೆಯೂ ಸಹ ಅದೇ ರೀತಿ ಅನ್ವಯವಾಗತಕ್ಕದ್ದು.

156. ಮೇಲ್ಪಾಟು ಯೋಜನೆಯಲ್ಲಿ ಒದಗಿಸಬೇಕಾದ ವಿವರಗಳು.- 155ನೇ ಪ್ರಕರಣದ ಮೇರೆಗಿನ ಪ್ರತಿಯೊಂದು ಮೇಲ್ಪಾಟು ಯೋಜನೆಯು,-

(1) ಆ ಯೋಜನೆಯಲ್ಲಿ ಒಳಗೊಂಡಿರುವ ಪ್ರದೇಶದ ಎಲ್ಲೆಗಳ ಒಳಗಡೆ,-

(ಎ) ಮುನ್ಸಿಪಲ್ ಕೌನ್ಸಿಲ್‌ನ ಅಭಿಪ್ರಾಯದಲ್ಲಿ ಯಾವ ಭೂಮಿಯು, ಯೋಜನೆಯನ್ನು ಕಾರ್ಯಗತಗೊಳಿಸುವುದಕ್ಕಾಗಿ ಅಥವಾ ಆ ಯೋಜನೆಯನ್ನು ಕಾರ್ಯಗತಗೊಳಿಸುವುದರಿಂದಾಗಿ ಸಂತ್ರಸ್ತರಾಗುವವರೆಗೆ ಅವಶ್ಯವೋ ಆ ಯಾವುದೇ ಭೂಮಿಯ ಆರ್ಜನೆಗಾಗಿ;

(ಬಿ) ಕಟ್ಟಡಗಳ ನಿರ್ಮಾಣ ಮತ್ತು ಪುನರ್ ನಿರ್ಮಾಣ ಹಾಗೂ ಬೀದಿಗಳ ರಚನೆ ಮತ್ತು ಬದಲಾವಣೆಗಳನ್ನು ಒಳಗೊಂಡಂತೆ ಎಲ್ಲಾ ಅಥವಾ ಯಾವುದೇ ಭೂಮಿಯನ್ನು ಪುನರ್ ರೂಪುರೇಷೆಗೊಳಿಸುವುದಕ್ಕಾಗಿ;

(ಸಿ) ಹಾಗೆ ರಚಿಸಿದ ಅಥವಾ ಮಾರ್ಪಾಟು ಮಾಡಿದ ಬೀದಿಗಳ ಚರಂಡಿ ವ್ಯವಸ್ಥೆಗಾಗಿ

- ಅವಕಾಶ ಕಲ್ಪಿಸಿರತಕ್ಕದ್ದು.

(2) ಹಿಂದೆ ಹೇಳಿದ ಎಲ್ಲೆಗಳ ಒಳಗಡೆ-

(ಎ) ಆ ಸ್ಥಳದಲ್ಲಿ ಉತ್ತಮ ಚರಂಡಿ ನಿರ್ಮಿಸುವುದಕ್ಕಾಗಿ ಯಾವ ಭೂಮಿಯನ್ನು ಎತ್ತರಿಸುವುದು ವಿಹಿತವೆಂದು ಮುನ್ಸಿಪಲ್ ಕೌನ್ಸಿಲ್ ಭಾವಿಸುತ್ತದೋ ಆ ಯಾವುದೇ ಭೂಮಿಯನ್ನು ಎತ್ತರಿಸುವುದಕ್ಕಾಗಿ;

(ಬಿ) ಯೋಜನೆಯಲ್ಲಿ ಒಳಗೊಂಡ ಅದಕ್ಕೆ ಹೊಂದಿಕೊಂಡ ಯಾವುದೇ ಪ್ರದೇಶದ ಅಥವಾ ಯಾವುದೇ ಪ್ರದೇಶದಲ್ಲಿ ಉತ್ತಮ ವಾಯು ಸಂಚಾರಕ್ಕಾಗಿ ತೆರೆದ ಜಾಗಗಳನ್ನು ರಚಿಸುವುದಕ್ಕಾಗಿ;

(ಸಿ) ಅಗತ್ಯವಾಗಿರುವ ಇಡೀ ನೈರ್ಮಲ್ಯ ವ್ಯವಸ್ಥೆಗಾಗಿ ಅಥವಾ ಅದರ ಯಾವುದೇ ಭಾಗಕ್ಕಾಗಿ; ಮತ್ತು

(ಡಿ) ಮಾರುಕಟ್ಟೆಗಳ ಮತ್ತು ಇತರ ಸಾರ್ವಜನಿಕ ಅವಶ್ಯಕತೆಗಳ ಅಥವಾ ಸೌಕರ್ಯಗಳ ಸ್ಥಾಪನೆಗಾಗಿ ಅಥವಾ ನಿರ್ಮಾಣಕ್ಕಾಗಿ

- ಅವಕಾಶ ಕಲ್ಪಿಸಬಹುದು; ಮತ್ತು

(3) ಹಿಂದೆ ಹೇಳಿದಂಥ ಎಲ್ಲೆಗಳ ಒಳಗೆ ಅಥವಾ ಹೊರಗೆ ಯೋಜನೆಯನ್ನು ಜಾರಿಗೊಳಿಸುವಾಗ ಸ್ಥಳಾಂತರಿತವಾಗುವಂಥ ವರ್ಗಗಳ ಎಲ್ಲ ವರ್ಗಗಳನ್ನು ಅಥವಾ ಅವುಗಳ ಭಾಗವನ್ನೊಳಗೊಂಡು, ಬಡ ಹಾಗೂ ಕಾರ್ಮಿಕ ವರ್ಗಗಳಿಗೆ ವಸತಿಗಾಗಿ ಕಟ್ಟಡಗಳ ನಿರ್ಮಾಣಕ್ಕಾಗಿ ಅವಕಾಶ ಕಲ್ಪಿಸಬಹುದು.

157. ಯೋಜನೆಯು ಪೂರ್ಣಗೊಂಡ ಮೇಲೆ ಪ್ರಕ್ರಿಯೆ.- (1) ಯಾವುದೇ ಮೇಲ್ಪಾಟು ಯೋಜನೆಯು ಪೂರ್ಣಗೊಂಡ ಮೇಲೆ ಮುನ್ಸಿಪಲ್ ಕೌನ್ಸಿಲ್, ಯೋಜನೆಯನ್ನು ರೂಪಿಸಿರುವ ಸಂಗತಿಯನ್ನು ಮತ್ತು ಅದರಲ್ಲಿ ಒಳಗೊಂಡಿರುವ ಎಲ್ಲೆಗಳನ್ನು ಮತ್ತು ಯೋಜನೆಯ ವಿವರಗಳನ್ನು ಮತ್ತು ಅದರಲ್ಲಿ ಒಳಗೊಂಡಿರುವ ಪ್ರದೇಶದ ನಕ್ಷೆಯನ್ನು, ಯಾವ ಭೂಮಿಯನ್ನು ಆರ್ಜಿಸಲು ಉದ್ದೇಶಿಸಿಸಲಾಗಿದೆಯೋ ಮತ್ತು ಆ ಯಾವ ಭೂಮಿಗೆ ಸಂಬಂಧಪಟ್ಟಂತೆ ಬೆಟರ್ ಮೆಂಟ್ ಫೀಜನ್ನು ವಿಧಿಸಲು ಉದ್ದೇಶಿಸಲಾಗಿದೆಯೋ ಆ ಭೂಮಿಯನ್ನು ಸ್ಪಷ್ಟವಾಗಿ ನಮೂದಿಸಿರುವ ವಿವರಪಟ್ಟಿಯನ್ನು ಎಲ್ಲ ಯುಕ್ತ ಸಮಯದೊಳಗೆ ಯಾವ ಸ್ಥಳದಲ್ಲಿ ನೋಡಬಹುದಾಗಿದೆಯೋ ಆ ಸ್ಥಳವನ್ನು ಹೆಸರಿಸಿ ಅಧಿಸೂಚನೆಯನ್ನು ತಯಾರಿಸತಕ್ಕದ್ದು; ಮತ್ತು ಸದರಿ ಅಧಿಸೂಚನೆಯ ಪ್ರತಿಯನ್ನು ಸರ್ಕಾರಿ ರಾಜಪತ್ರದಲ್ಲಿ ಮೂರು ನಿರಂತರ ವಾರಗಳ ಅವಧಿಯಲ್ಲಿ ಪ್ರಕಟಿಸುವಂತೆ ಮತ್ತು ಮುನ್ಸಿಪಲ್ ಕಛೇರಿಯ ಮತ್ತು ತಹಶೀಲ್ದಾರರ ಕಛೇರಿಯ ಯಾವುದೇ ಎದ್ದು ಕಾಣುವ ಜಾಗದಲ್ಲಿ ಅಂಟಿಸುವಂತೆ ಮಾಡತಕ್ಕದ್ದು.

(2) ಸರ್ಕಾರಿ ರಾಜಪತ್ರದಲ್ಲಿ ಅಂಥ ಅಧಿಸೂಚನೆ ಪ್ರಕಟವಾದ ದಿನಾಂಕದ ನಂತರದ ಮೂವತ್ತು ದಿನಗಳ ಅವಧಿಯಲ್ಲಿ, ಮುನ್ಸಿಪಲ್ ಕೌನ್ಸಿಲ್‌ನ ತೆರಿಗೆ ನಿರ್ಧಾರಣೆ ಪಟ್ಟಿಯಲ್ಲಿ ಅಥವಾ ಭೂ ಕಂದಾಯದ ರಿಜಿಸ್ಟರಿನಲ್ಲಿ, ಯೋಜನೆಯನ್ನು ಕಾರ್ಯಗತಗೊಳಿಸುವ ಸಲುವಾಗಿ ಯಾವ [1][ಕಟ್ಟಡದ ಅಥವಾ ಖಾಲಿಭೂಮಿ ಯನ್ನು][1] ಆರ್ಜಿಸಲು ಉದ್ದೇಶಿಸಲಾಗಿದೆಯೋ ಅಥವಾ ಆ ಯಾವ ಕಟ್ಟಡಕ್ಕೆ ಅಥವಾ ಖಾಲಿ ಭೂಮಿಗೆ ಸಂಬಂಧಿಸಿದಂತೆ ಮುನ್ಸಿಪಲ್ ಕೌನ್ಸಿಲ್, ಬೆಟರ್ ಮೆಂಟ್ಫೀಜನ್ನು ವಸೂಲು ಮಾಡಲು ಉದ್ದೇಶಿಸಿದೆಯೋ ಆ ಯಾವುದೇ [1][ಕಟ್ಟಡದ ಅಥವಾ ಖಾಲಿಭೂಮಿಯ][1] ಮೇಲೆ ಸ್ವತ್ತು ತೆರಿಗೆಯನ್ನು ಅಥವಾ ಭೂ ಕಂದಾಯದ ನಿರ್ಧರಣೆಯನ್ನು ಸಂದಾಯ ಮಾಡಲು ಮುಖ್ಯವಾಗಿ ಹೊಣೆಗಾರನೆಂದು ಕಂಡುಬರುವ ಹೆಸರಿನ ಪ್ರತಿಯೊಬ್ಬ ವ್ಯಕ್ತಿಗೆ ನೋಟೀಸನ್ನು, ಮುನ್ಸಿಪಲ್ ಕೌನ್ಸಿಲ್ ಮೇಲ್ಪಾಟು ಯೋಜನೆಯನ್ನು ಕಾರ್ಯಗತಗೊಳಿಸುವುದಕ್ಕಾಗಿ ಅಂಥ [1][ಕಟ್ಟಡವನ್ನು ಅಥವಾ ಖಾಲಿಭೂಮಿಯನ್ನು][1] ಆರ್ಜಿಸಲು ಅಥವಾ ಅಂಥ ಬೆಟರ್ ಮೆಂಟ್ಫೀಜನ್ನು ವಸೂಲು ಮಾಡಲು ಉದ್ದೇಶಿಸಿರುವುದೆಂದು ಮತ್ತು ಹಾಗೆ ಆ ನೋಟೀಸ್ ನ್ನು ಯಾರ ಮೇಲೆ ಜಾರಿ ಮಾಡಲಾಗಿದೆಯೋ ಆ ವ್ಯಕ್ತಿಯು ಕಟ್ಟಡದ ಅಥವಾ ಭೂಮಿಯ ಅಂಥ ಆರ್ಜನೆಗೆ ಅಥವಾ ಅಂಥ ಬೆಟರ್ ಮೆಂಟ್ಫೀಜ್ ನ ವಸೂಲಿಗೆ ಆಕ್ಷೇಪಿಸುತ್ತಾನೆಯೇ ಎಂಬ ಬಗ್ಗೆ ಮತ್ತು ಆ ವ್ಯಕ್ತಿಯು ಆಕ್ಷೇಪಿಸಿದರೆ, ಅಂಥ ಆಕ್ಷೇಪಣೆಗೆ ಕಾರಣಗಳನ್ನು ನಮೂದಿಸಿ, ನೋಟೀಸಿನ ಜಾರಿಯ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಉತ್ತರವನ್ನು ಕೊಡುವಂತೆ ಅಗತ್ಯಪಡಿಸಿ ಜಾರಿ ಮಾಡತಕ್ಕದ್ದು.

1.2003ರ ಅಧಿನಿಯಮ 31ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) ಅಂಥ ನೋಟೀಸಿಗೆ ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ಅಥವಾ ಅವರ ಆದೇಶದ ಮೇರೆಗೆ ಸಹಿ ಮಾಡತಕ್ಕದ್ದು ಮತ್ತು 262ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ರೀತಿಯಲ್ಲಿ ಅದನ್ನು ಜಾರಿ ಮಾಡತಕ್ಕದ್ದು.

158. ಆ ನಂತರ ಯೋಜನೆಯನ್ನು ಮಂಜೂರಾತಿಗಾಗಿ ಸರ್ಕಾರಕ್ಕೆ ಕಳುಹಿಸಿಕೊಡುವುದು.- (1) ಯೋಜನೆಗಳ ಪ್ರಕಟಣೆ ಮತ್ತು ನೋಟೀಸ್ ಗಳನ್ನು ಜಾರಿ ಮಾಡುವುದಕ್ಕೆ ಸಂಬಂಧಪಟ್ಟಂತೆ ಹಿಂದೆ ಹೇಳಿದ ಉಪಬಂಧಗಳನ್ನು ಪಾಲಿಸಿದ ಮೇಲೆ ಮುನ್ಸಿಪಲ್ ಕೌನ್ಸಿಲ್, 157ನೇ ಪ್ರಕರಣದ ಮೇರೆಗೆ ಸ್ವೀಕರಿಸಿದ ಯಾವುದೇ ಮನವಿಯನ್ನು ಅಥವಾ ಉತ್ತರವನ್ನು ಪರಿಶೀಲಿಸಿದ ತರುವಾಯ, ಮತ್ತು ಸೂಕ್ತವೆಂದು ತಾನು ಯೋಚಿಸುವಂಥ ಮಾರ್ಪಾಡುಗಳನ್ನು ಯೋಜನೆಯಲ್ಲಿ ಸೇರಿಸಿದ ತರುವಾಯ ಯೋಜನೆಯ ಮಂಜೂರಾತಿಗಾಗಿ ಸರ್ಕಾರಕ್ಕೆ ಅರ್ಜಿ ಸಲ್ಲಿಸತಕ್ಕದ್ದು.

(2) ಮಂಜೂರಾತಿಗಾಗಿ ಸಲ್ಲಿಸುವ ಅರ್ಜಿಯ ಜೊತೆಗೆ, (3)ನೇ ಉಪ-ಪ್ರಕರಣದಲ್ಲಿ ಹೇಳಿರುವ ಸಂದರ್ಭದ ಹೊರತು,-

(ಎ) ಯೋಜನೆಯಲ್ಲಿ ಸೇರಿಸಿರುವ ಯಾವುದೇ ಮಾರ್ಪಾಡಿಗಾಗಿ ಕಾರಣವನ್ನು ಒಳಗೊಂಡು ಅದರ ಪೂರ್ಣ ವಿವರಗಳ ಸಹಿತವಾದ ವರ್ಣನೆ;

(ಬಿ) ಪೂರ್ಣ ನಕ್ಷೆಗಳು ಮತ್ತು ಯೋಜನೆಯನ್ನು ಕಾರ್ಯಗತಗೊಳಿಸಲು ತಗಲುವ ಖರ್ಚಿನ ಅಂದಾಜುಗಳು;

(ಸಿ) ಆರ್ಜಿಸಲು ಪ್ರಸ್ತಾವಿಸಿರುವ ಭೂಮಿಯನ್ನು ನಿರ್ದಿಷ್ಟಪಡಿಸಿರುವ ವಿವರ ಪಟ್ಟಿ;

(ಡಿ) 157ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ಸ್ವೀಕರಿಸಿದ ಯಾವುದೇ ಮನವಿ;

(ಇ) 157ನೇ ಪ್ರಕರಣದ ಮೇರೆಗೆ ಭೂಮಿಗೆ ಸಂಬಂಧಪಟ್ಟಂತೆ ಅಧಿಸೂಚನೆಯ ಪ್ರಕಟಣೆ ದಿನಾಂಕದಂದು ಮುನ್ಸಿಪಲ್ ತೆರಿಗೆ ನಿರ್ಧರಣಾ ಪುಸ್ತಕದಲ್ಲಿ ನಮೂದಿಸಿರುವಂತೆ ತೆರಿಗೆಗೆ ಗುರಿಯಾಗುವ ಮೌಲ್ಯ ಅಥವಾ (ಸಿ) ಖಂಡದ ಮೇರೆಗೆ ವಿವರ ಪಟ್ಟಿಯಲ್ಲಿ ನಿರ್ದಿಷ್ಟಪಡಿಸಿರುವ ಎಲ್ಲಾ ಭೂಮಿಗಳ ತೆರಿಗೆ ನಿರ್ಧರಣೆಯನ್ನು ತೋರಿಸುವ ಅನುಸೂಚಿ; ಮತ್ತು

(ಎಫ್) ನಿಯಮಿಸಹಬಹುದಾದಂಥ ಇತರ ಹೆಚ್ಚಿನ ವಿವರಗಳು,

ಯಾವುದಾದರೂಇದ್ದರೆ, ಅವು

- ಇರತಕ್ಕದ್ದು.

(3) ಕಡು ಬಡವರಿಗೆ ಮತ್ತು ಕಾರ್ಮಿಕ ವರ್ಗಗಳಿಗೆ ವಾಸದ ಮನೆಗಳ ನಿರ್ಮಾಣಕ್ಕಾಗಿ ಯಾವುದೇ ಮೇಲ್ಪಾಟು ಯೋಜನೆಯ ಮೇರೆಗೆ ಯಾವುದೇ ಏರ್ಪಾಡು ಮಾಡಿದಾಗ, ಮುನ್ಸಿಪಲ್ ಕೌನ್ಸಿಲ್ 157ನೇ ಪ್ರಕರಣದ ಉಪಬಂಧಗಳನ್ನು ಪಾಲಿಸಿದ ತರುವಾಯ ಅಂಥ ವಾಸದ ಮನೆಗಳ ನಿರ್ಮಾಣಕ್ಕಾಗಿ ನಕ್ಷೆಗಳ ಮತ್ತು ಅಂದಾಜು ವೆಚ್ಚಗಳ ಮಂಜೂರಾತಿಗಾಗಿ ಅವುಗಳನ್ನು ತತ್‌ಕ್ಷಣ ಸರ್ಕಾರಕ್ಕೆ ಒಪ್ಪಿಸಬಹುದು ಮತ್ತು ಅಂಥ ಮಂಜೂರಾತಿಯನ್ನು ಸ್ವೀಕರಿಸಿದ ನಂತರ, 159ನೇ ಪ್ರಕರಣದ ಉಪಬಂಧಗಳು, ಎಲ್ಲಾ ಅವಶ್ಯಕ ಮಾರ್ಪಾಡುಗಳೊಂದಿಗೆ ಅಂಥ ವಾಸದ ಮನೆಗಳ ನಿರ್ಮಾಣಕ್ಕಾಗಿ ಏರ್ಪಾಡು ಮಾಡಿರುವ ಯೋಜನೆಯ ಭಾಗಕ್ಕೆ ಅಂಥ ಭಾಗವು ಯೋಜನೆಯಾಗಿದ್ದರೆ ಹೇಗೆ ಅನ್ವಯವಾಗುತ್ತಿದ್ದವೋ ಹಾಗೆ ಅನ್ವಯವಾಗತಕ್ಕದ್ದು.

159. ಮಂಜೂರಾತಿಯನ್ನು ಸ್ವೀಕರಿಸಿದ ಮೇಲೆ ಆರ್ಜಿಸಬೇಕಾದ ಭೂಮಿಯ ವಿವರಗಳಿರುವ ಘೋಷಣೆಯ ಪ್ರಕಟಣೆ.- (1) ಸರ್ಕಾರದ ಮಂಜೂರಾತಿಯನ್ನು ಸ್ವೀಕರಿಸಿದ ಮೇಲೆ, ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನು, ಅಂಥ ಮಂಜೂರಾತಿಯ ಸಂಗತಿಯನ್ನು ಮತ್ತು ಈ ಯೋಜನೆಯ ಉದ್ದೇಶಕ್ಕಾಗಿ ಮುನ್ಸಿಪಲ್ ಕೌನ್ಸಿಲ್ ಆರ್ಜಿಸಲು ಪ್ರಸ್ತಾವಿಸಿರುವ ಭೂಮಿಯ ಸಾರ್ವಜನಿಕ ಉದ್ದೇಶಕ್ಕಾಗಿ ಅಗತ್ಯವಾಗಿದೆಯೆಂಬ ಘೋಷಣೆಯನ್ನು ಸರ್ಕಾರವು ಅಧಿಸೂಚಿಸುವ ಸಲುವಾಗಿ ಕಳುಹಿಸಿಕೊಡತಕ್ಕದ್ದು.

(2) ಘೋಷಣೆಯನ್ನು ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು ಮತ್ತು ಆರ್ಜಿಸಲು ಪ್ರಸ್ತಾವಿಸಲಾಗಿದೆಯೋ ಆ ಎಲ್ಲೆಗಳು, ಅದು ಯಾವ ಉದ್ದೇಶಕ್ಕಾಗಿ ಅಗತ್ಯವಿದೆಯೋ ಆ ಉದ್ದೇಶ, ಅದರ ಸರಿಸುಮಾರು ವಿಸ್ತೀರ್ಣ ಹಾಗೂ ಯಾವ ಸ್ಥಳದಲ್ಲಿ ಭೂಮಿಯ ನಕ್ಷೆಯನ್ನು ಪರಿಶೀಲಿಸಬಹುದಾಗಿದೆಯೋ ಆ ಸ್ಥಳ ಇವುಗಳನ್ನು ಆ ಘೋಷಣೆಯಲ್ಲಿ ತಿಳಿಸಿರತಕ್ಕದ್ದು. ಅಂಥ ಘೋಷಣೆಯ ಪ್ರಕಟಣೆಯನ್ನು, 1894ರ ಭೂ ಆರ್ಜನಾ ಅಧಿನಿಯಮದ 6ನೇ ಪ್ರಕರಣದ ಮೇರೆಗಿನ ಘೋಷಣೆಯ ಪ್ರಕಟಣೆ ಎಂದು ಭಾವಿಸತಕ್ಕದ್ದು.

(3) ಭೂಮಿಯು ಸಾರ್ವಜನಿಕ ಉದ್ದೇಶಕ್ಕಾಗಿ ಅಗತ್ಯವಾಗಿದೆ ಎಂಬುದಕ್ಕೆ ಸದರಿ ಘೋಷಣೆಯು ನಿರ್ಣಾಯಕ ಸಾಕ್ಷ್ಯವಾಗಿರತಕ್ಕದ್ದು ಮತ್ತು ಸದರಿ ಘೋಷಣೆಯ ನಂತರ, ಮುನ್ಸಿಪಲ್ ಕೌನ್ಸಿಲ್ ಯೋಜನೆಯನ್ನು ಕಾರ್ಯಗತಗೊಳಿಸಲು ಮುಂದುವರಿಯತಕ್ಕದ್ದು.

(4) 155ನೇ ಪ್ರಕರಣದ (4)ನೇ ಉಪ-ಪ್ರಕರಣದ ಮತ್ತು ಈ ಪ್ರಕರಣದ (2) ನೇ ಮತ್ತು (3)ನೇ ಉಪ-ಪ್ರಕರಣದ ಉಪಬಂಧಗಳಿಗೊಳಪಟ್ಟು, 1894ರ ಭೂ ಆರ್ಜನಾ ಅಧಿನಿಯಮದ ಉಪಬಂಧಗಳು, ಈ ಅಧ್ಯಾಯದ ಮೇರೆಗಿನ ಮೇಲ್ಪಾಟು ಯೋಜನೆಗೆ ಸಂಬಂಧಿಸಿದಂತೆ ಭೂಮಿಯ ಆರ್ಜನೆಯ ಉದ್ದೇಶಗಳಿಗೆ ಅನ್ವಯವಾಗತಕ್ಕದ್ದು; ಮತ್ತು 1894ರ ಭೂ ಆರ್ಜನಾ ಅಧಿನಿಯಮದ 16ನೇ ಪ್ರಕರಣದ ಮೇರೆಗೆ ಭೂಮಿಯು ಸರ್ಕಾರದಲ್ಲಿ ನಿಹಿತವಾದ ತರುವಾಯ, ಡೆಪ್ಯೂಟಿ ಕಮಿಷನರ್ ನು, ಆರ್ಜನೆಯ ಖರ್ಚುಗಳನ್ನು ಸಂದಾಯ ಮಾಡಿದ ತರುವಾಯ ಮತ್ತು ಆರ್ಜನೆಯಿಂದಾಗಿ ವಹಿಸಬಹುದಾದಂಥ ಯಾವುವೇ ಹೆಚ್ಚಿನ ಖರ್ಚುಗಳನ್ನು ಸಂದಾಯ ಮಾಡಲು

ಮುನ್ಸಿಪಲ್ ಕೌನ್ಸಿಲ್ ಒಪ್ಪಿದ ಮೇಲೆ, ಭೂಮಿಯನ್ನು ಮುನ್ಸಿಪಲ್ ಕೌನ್ಸಿಲ್‌ಗೆ ವರ್ಗಾವಣೆ ಮಾಡತಕ್ಕದ್ದು ಮತ್ತು ಆ ಭೂಮಿಯು ಆ ತರುವಾಯ ಸದರಿ ಮುನ್ಸಿಪಲ್ ಕೌನ್ಸಿಲ್‌ನಲ್ಲಿ ನಿಹಿತವಾಗತಕ್ಕದ್ದು.

160. ಬೆಟರ್ ಮೆಂಟ್ ಫೀಜಿನ ಸಂದಾಯ.- (1) ಯಾವುದೇ ಮೇಲ್ಪಾಟು ಯೋಜನೆಯನ್ನು ರೂಪಿಸಿರುವುದರಿಂದ, ಯೋಜನೆಯನ್ನು ಕಾರ್ಯಗತಗೊಳಿಸಲು ಅಗತ್ಯವಿಲ್ಲದಿರುವ ಆದರೆ, ಈ ಯೋಜನೆಯಲ್ಲಿ ಸೇರಿರುವ ಪ್ರದೇಶದಲ್ಲಿನ ಯಾವುದೇ ಭೂಮಿಯ ಮೌಲ್ಯವು ಹೆಚ್ಚುವುದೆಂದು ಮುನ್ಸಿಪಲ್ ಕೌನ್ಸಿಲ್ ಅಭಿಪ್ರಾಯಪಟ್ಟಾಗ ಮುನ್ಸಿಪಲ್ ಕೌನ್ಸಿಲ್ ಯೋಜನೆಯನ್ನು ರೂಪಿಸುವಾಗ; ಭೂಮಿಯ ಒಡೆಯನು ಅಥವಾ ಯೋಜನೆಯ ಜಾರಿಯ ಪರಿಣಾಮವಾಗಿ ಭೂಮಿಯ ಮೌಲ್ಯದ ಹೆಚ್ಚಳ ಆದಾಗ, ಆ ಭೂಮಿಯಲ್ಲಿ ಹಿತಾಸಕ್ತಿಯುಳ್ಳ ಯಾರೇ ವ್ಯಕ್ತಿಯು ಬೆಟರ್ ಮೆಂಟ್ಫೀಜನ್ನು ಸಂದಾಯ ಮಾಡತಕ್ಕದ್ದೆಂದು ಘೋಷಿಸಬಹುದು.

(2) ಮೌಲ್ಯದಲ್ಲಿ ಅಂಥ ಹೆಚ್ಚಳದ ಮೊಬಲಗು, ಯೋಜನೆಯ ಜಾರಿಯು ಪೂರ್ಣಗೊಂಡ ಮೇಲೆ ಕಟ್ಟಡಗಳಿಲ್ಲದ ಭೂಮಿ ಆಗಿದ್ದಿದ್ದರೆ ಹೇಗೆ ಹಾಗೆಯೇ ಭೂಮಿಯ ಮೌಲ್ಯವು, ಯೋಜನೆಯ ಜಾರಿಗೆ ಮುಂಚೆ ಅದೇ ರೀತಿಯಲ್ಲಿ ಅಂದಾಜು ಮಾಡಿದ್ದ ಹಾಗೆಯೇ ಭೂಮಿಯ ಮೌಲ್ಯವನ್ನು ಮೀರುವುದೋ ಹಾಗೆಯೇ ಅಂದಾಜು ಮೊಬಲಗು ಆಗಿರತಕ್ಕದ್ದು ಮತ್ತು ಬೆಟರ್ ಮೆಂಟ್ಫೀಜು ಮೌಲ್ಯದಲ್ಲಿ ಉಂಟಾದ ಅಂಥ ಹೆಚ್ಚಳದ ಮೂರನೇ ಒಂದರಷ್ಟಾಗಿರತಕ್ಕದ್ದು.

161. ಮುನ್ಸಿಪಲ್ ಕೌನ್ಸಿಲ್‌ನಿಂದ ಬೆಟರ್ ಮೆಂಟ್ಫೀಜಿನ ನಿರ್ಧರಣೆ.- (1) ಬೆಟರ್ ಮೆಂಟ್ಫೀಜಿನ ಮೊಬಲಗನ್ನು ನಿರ್ಧರಿಸಲು ಸಾಧ್ಯವಾಗುವಷ್ಟು ಪ್ರಮಾಣದಲ್ಲಿ ಮೇಲ್ಪಾಟು ಯೋಜನೆಯು ಸಾಕಷ್ಟು ಮುಂದುವರಿದಿದೆ ಎಂದು ಮುನ್ಸಿಪಲ್ ಕೌನ್ಸಿಲ್‌ಗೆ ಕಂಡುಬಂದರೆ, ಮುನ್ಸಿಪಲ್ ಕೌನ್ಸಿಲ್, ಈ ಬಗ್ಗೆ ಅಂಗೀಕರಿಸಿದ ನಿರ್ಣಯದ ಮೂಲಕ ಅಂಥ ಫೀಜಿನ ನಿರ್ಧರಣೆಯ ಉದ್ದೇಶಕ್ಕಾಗಿ ಯೋಜನೆಯನ್ನು ಕಾರ್ಯಗತಗೊಳಿಸುವುದು ಮುಕ್ತಾಯವಾಗಿದೆ ಎಂದು ಭಾವಿಸತಕ್ಕದ್ದೆಂದು ಘೋಷಿಸತಕ್ಕದ್ದು ಮತ್ತು ಆ ತರುವಾಯ, 157ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ತೆರಿಗೆ ನಿರ್ಧರಣೆಯನ್ನು ಮಾಡಬೇಕಾಗಿದೆಯೋ ಆ ಭೂಮಿಯ ಸಂಬಂಧಪಟ್ಟಂತೆ ಯಾವ ವ್ಯಕ್ತಿಗೆ ನೋಟೀಸನ್ನು ಜಾರಿ ಮಾಡಲಾಗಿದೆಯೋ ಅಂಥ ಪ್ರತಿಯೊಬ್ಬ ವ್ಯಕ್ತಿಗೆ ಅಥವಾ ಅಂಥ ವ್ಯಕ್ತಿಯ ಹಿತಾಸಕ್ತಿಯ ಉತ್ತರಾಧಿಕಾರಿಗೆ 160ನೇ ಪ್ರಕರಣದ ಮೇರೆಗಿನ ಅಂಥ ಭೂಮಿಗೆ ಸಂದಾಯ ಮಾಡಬೇಕಾದ ಬೆಟರ್ ಮೆಂಟ್ಫೀಜಿನ ಮೊಬಲಗನ್ನು ನಿರ್ಧರಿಸಲು ಮುನ್ಸಿಪಲ್ ಕೌನ್ಸಿಲ್ ಪ್ರಸ್ತಾವಿಸಿದೆಯೆಂದು ಬರಹದಲ್ಲಿ ನೋಟೀಸನ್ನು ಕೊಡತಕ್ಕದ್ದು.

(2) ಮುನ್ಸಿಪಲ್ ಕೌನ್ಸಿಲ್, ಸಂಬಂಧಪಟ್ಟಂಥ ಪ್ರತಿಯೊಬ್ಬ ವ್ಯಕ್ತಿಯು ಸಂದಾಯ ಮಾಡಬೇಕಾದ ಬೆಟರ್ ಮೆಂಟ್ಫೀಜಿನ ಮೊಬಲಗನ್ನು, ಅಂಥ ವ್ಯಕ್ತಿಗೆ ಅಹವಾಲು ಹೇಳಿಕೊಳ್ಳಲು ಅವಕಾಶ ಕೊಟ್ಟ ತರುವಾಯ, ಅಂಥ ವ್ಯಕ್ತಿಯು ಮುನ್ಸಿಪಲ್ ಕೌನ್ಸಿಲ್‌ನಿಂದ ಅಂಥ ನಿರ್ಧರಣೆಯ ಬಗ್ಗೆ ಬರಹದಲ್ಲಿನ ನೋಟೀಸನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳೊಳಗಾಗಿ ನಿರ್ಧರಣೆಯನ್ನು ಅವನು ಒಪ್ಪಿರುವನೋ ಅಥವಾ ಇಲ್ಲವೋ ಎಂಬ ಬಗ್ಗೆ ಬರಹದಲ್ಲಿ ಮುನ್ಸಿಪಲ್ ಕೌನ್ಸಿಲ್‌ಗೆ ತಿಳಿಸತಕ್ಕದ್ದು.

(3) ಮುನ್ಸಿಪಲ್ ಕೌನ್ಸಿಲ್ ಪ್ರಸ್ತಾವಿಸಿದ ನಿರ್ಧರಣೆಯನ್ನು ಉಪ-ಪ್ರಕರಣದ (2) ರಲ್ಲಿ ನಿರ್ದಿಷ್ಟಪಡಿಸಿರುವ ಅವಧಿಯೊಳಗಾಗಿ ಸಂಬಂಧಪಟ್ಟ ವ್ಯಕ್ತಿಯು ಒಪ್ಪಿದಾಗ, ಅಂಥ ನಿರ್ಧರಣೆಯು ಅಂತಿಮವಾದುದಾಗಿರತಕ್ಕದ್ದು.

162. ಮಧ್ಯಸ್ಥಗಾರನಿಂದ ಬೆಟರ್‌ಮೆಂಟ್ ಫೀಜಿನ ನಿರ್ಧಾರ.- (1) ಮುನ್ಸಿಪಲ್ ಕೌನ್ಸಿಲ್‌ನ ನಿರ್ಧರಣೆಯನ್ನು ಸಂಬಂಧಪಟ್ಟ ವ್ಯಕ್ತಿಯು ಒಪ್ಪಿಕೊಳ್ಳದಿದ್ದರೆ ಅಥವಾ 161ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ಅಗತ್ಯಪಡಿಸಿರುವ ಮಾಹಿತಿಯನ್ನು ಅದರಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಮುನ್ಸಿಪಲ್ ಕೌನ್ಸಿಲ್‌ಗೆ ಕೊಡಲು ತಪ್ಪಿದರೆ, ಆ ವಿಷಯವು ಸರ್ಕಾರವು ನೇಮಕ ಮಾಡಿದ ಮಧ್ಯಸ್ಥಗಾರನಿಂದ ನಿರ್ಧಾರಿತವಾಗತಕ್ಕದ್ದು.

(2) ಯಾವ ವ್ಯಕ್ತಿಯು,-

(i) ಕನಿಷ್ಠ ಪಕ್ಷ ಐದು ವರ್ಷಗಳವರೆಗೆ ರಾಜ್ಯದಲ್ಲಿ ನ್ಯಾಯಿಕ ಹುದ್ದೆಯನ್ನು ಧಾರಣ ಮಾಡಿರುವನೋ; ಅಥವಾ

(ii) ಕನಿಷ್ಠ ಪಕ್ಷ ಐದು ವರ್ಷಗಳವರೆಗೆ ಅಡ್ವೋಕೇಟನಾಗಿರುವನೋ

- ಆ ವ್ಯಕ್ತಿಯು ಉಪ-ಪ್ರಕರಣ (1)ರ ಮೇರೆಗೆ ನೇಮಕಗೊಂಡಿರುವ ಮಧ್ಯಸ್ಥಗಾರನಾಗಿರತಕ್ಕದ್ದು.

(3) ಸರ್ಕಾರವು ಸೂಕ್ತವೆಂದು ತಾನು ಭಾವಿಸಿದಂಥ ವಿಚಾರಣೆ ಮಾಡಿದ ನಂತರ (1)ನೇ ಉಪ-ಪ್ರಕರಣದ ಮೇರೆಗೆ ನೇಮಕಗೊಂಡ ಯಾರೇ ಮಧ್ಯಸ್ಥಗಾರನು ಸ್ವತಃ ದುರ್ನಡತೆಯುಳ್ಳವನೆಂದು ಸರ್ಕಾರಕ್ಕೆ ಮನದಟ್ಟಾದರೆ ಸರ್ಕಾರವು ಅವನನ್ನು ತೆಗೆದು ಹಾಕಬಹುದು.

(4) ಅಂಥ ಯಾರೇ ಮಧ್ಯಸ್ಥಗಾರನು ಮೃತನಾದರೆ, ರಾಜೀನಾಮೆ ನೀಡಿದರೆ, ಅನರ್ಹಗೊಂಡರೆ, ಅವನನ್ನು ತೆಗೆದುಹಾಕಿದರೆ ಅಥವಾ ತನ್ನ ಪ್ರಕಾರ್ಯಗಳನ್ನು ನೆರವೇರಿಸದೆ ನಿರ್ಲಕ್ಷಿಸಿದ್ದಾನೆಂದು ಅಥವಾ ತನ್ನ ಪ್ರಕಾರ್ಯಗಳನ್ನು ನೆರವೇರಿಸಲು ಅಸಮರ್ಥನಾಗಿದ್ದಾನೆಂದು, ಸರ್ಕಾರವು ಅಭಿಪ್ರಾಯಪಟ್ಟರೆ ಸರ್ಕಾರವು ತತ್‌ಕ್ಷಣ ಬೇರೊಬ್ಬ ಮಧ್ಯಸ್ಥಗಾರನನ್ನು ನೇಮಿಸತಕ್ಕದ್ದು.

(5) ಮಧ್ಯಸ್ಥಗಾರನು ತನ್ನ ಐತೀರ್ಪನ್ನು ನೀಡಿದಾಗ, ಅದಕ್ಕೆ ಅವನು ಸಹಿ ಮಾಡಿ ಮುನ್ಸಿಪಲ್ ಕೌನ್ಸಿಲ್‌ಗೆ ಕಳುಹಿಸಿಕೊಡತಕ್ಕದ್ದು ಮತ್ತು ಅಂಥ ಐತೀರ್ಪು (6)ನೇ ಉಪ-ಪ್ರಕರಣದ ಉಪಬಂಧಗಳಿಗೊಳಪಟ್ಟು ಅಂತಿಮ ಹಾಗೂ ನಿರ್ಣಾಯಕವಾಗಿರತಕ್ಕದ್ದು ಮತ್ತು ಎಲ್ಲಾ ವ್ಯಕ್ತಿಗಳು ಅದಕ್ಕೆ ಬದ್ಧರಾಗಿರತಕ್ಕದ್ದು.

(6) 164ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ಖರ್ಚುಗಳ ಮೇಲೆ ಯಾವುದಾದರೂ ನಿರ್ಣಯವಾಗಿದ್ದರೆ, ಅದನ್ನೊಳಗೊಂಡ ಐತೀರ್ಪಿನಿಂದ ಬಾಧಿತವಾದ ಯಾವುದೇ ಪಕ್ಷವು, ಅದನ್ನು ತಿಳಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಆ [1][ಮುನ್ಸಿಪಲ್ ಏರಿಯಾ][1]ದ ಮೇಲೆ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಜಿಲ್ಲಾ ನ್ಯಾಯಾಧೀಶರಿಗೆ ಅಪೀಲು ಸಲ್ಲಿಸಬಹುದು ಮತ್ತು ಸದರಿ ಜಿಲ್ಲಾ ನ್ಯಾಯಾಧೀಶರ ಯಾವುದೇ ಆದೇಶವು ಅಥವಾ ತೀರ್ಮಾನವು ಅಂತಿಮ ಹಾಗೂ ನಿರ್ಣಾಯಕವಾಗಿರತಕ್ಕದ್ದು ಮತ್ತು ಎಲ್ಲಾ ವ್ಯಕ್ತಿಗಳು ಅದಕ್ಕೆ ಬದ್ಧರಾಗಿರತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

163. ಮಧ್ಯಸ್ಥಗಾರನ ಫೀಜು.- ಮಧ್ಯಸ್ಥಗಾರನ ಸೇವೆಗಳನ್ನು ಯಾವ ಇಡೀ ಯೋಜನೆಗಾಗಿ ಬಳಸಿಕೊಳ್ಳಲಾಗಿದೆಯೋ ಆ ಇಡೀ ಯೋಜನೆಗೆ ಸಂಬಂಧಪಟ್ಟಂತೆ ಸರ್ಕಾರವು ನಿರ್ಧರಿಸುವಂಥ ಫೀಜನ್ನು ಮುನ್ಸಿಪಲ್ ಕೌನ್ಸಿಲ್ ಆತನಿಗೆ ಸಂದಾಯ ಮಾಡತಕ್ಕದ್ದು.

164. ಮಧ್ಯಸ್ಥಗಾರನ ಅಧಿಕಾರಗಳು ಮತ್ತು ಕರ್ತವ್ಯಗಳು.- (1) ಮಧ್ಯಸ್ಥಗಾರನು ತನ್ನ ವ್ಯವಹರಣೆಗಳ ಬಗ್ಗೆ ನೋಟೀಸ್ ಕೊಡತಕ್ಕದ್ದು ಮತ್ತು ಅವುಗಳನ್ನು ನಿಯಮಿಸದ ರೀತಿಯಲ್ಲಿ ನಡೆಸತಕ್ಕದ್ದು, ಹಾಗೂ ತನ್ನ ಐತೀರ್ಪಿನ ಸಾರಾಂಶವನ್ನು ಬರಹದಲ್ಲಿ ಸಂಬಂಧಪಟ್ಟ ಪಕ್ಷಕ್ಕೆ ತಿಳಿಸತಕ್ಕದ್ದು:

ಪರಂತು, ಅಂಥ ವ್ಯವಹಣೆಗಳ ಪ್ರತಿಯೊಂದು ಪಕ್ಷವು, ಖುದ್ದಾಗಿಯಾಗಲಿ ಅಥವಾ ಅವನಿಂದ ಅಧಿಕೃತನಾದ ಏಜೆಂಟನ ಮೂಲಕವಾಗಲಿ ಮಧ್ಯಸ್ಥಗಾರನ ಮುಂದೆ ಹಾಜರಾಗಲು ಹಕ್ಕುಳ್ಳದ್ದಾಗಿರತಕ್ಕದ್ದು.

(2) ಪ್ರಮಾಣ ಮಾಡಿಸಿ ಸಾಕ್ಷ್ಯವನ್ನು ತೆಗೆದುಕೊಳ್ಳುವ ಮತ್ತು ಸಾಕ್ಷಿದಾರರ ಹಾಜರಾತಿಯನ್ನು ಒತ್ತಾಯಪಡಿಸುವ ಮತ್ತು ದಸ್ತಾವೇಜುಗಳ ಹಾಗೂ ಇತರ ಮುಖ್ಯ ವಸ್ತುಗಳನ್ನು ಹಾಜರುಪಡಿಸಲು ಒತ್ತಾಯಿಸುವ ಉದ್ದೇಶಕ್ಕಾಗಿ 1908ರ ಸಿವಿಲ್ ಪ್ರಕ್ರಿಯಾ ಸಂಹಿತೆಯ (1908ರ ಕೇಂದ್ರ ಅಧಿನಿಯಮ ಸಂಖ್ಯೆ V) ಮೇರೆಗೆ ಸಿವಿಲ್ ನ್ಯಾಯಾಲಯದ ಎಲ್ಲಾ ಅಧಿಕಾರಗಳನ್ನು ಮಧ್ಯಸ್ಥಗಾರನು ಹೊಂದಿರತಕ್ಕದ್ದು.

(3) ಮಧ್ಯಸ್ಥಗಾರನ ಮುಂದೆ ನಡೆಯುವ ಎಲ್ಲಾ ವ್ಯವಹರಣೆಗಳ ಖರ್ಚುಗಳು ಮತ್ತು ಅವುಗಳಿಗೆ ಪ್ರಾಸಂಗಿಕವಾದವುಗಳು ಅವನ ವಿವೇಚನಾನುಸಾರ ಇರತಕ್ಕದ್ದು ಮತ್ತು ಅಂಥ ವೆಚ್ಚಗಳು ಯಾರಿಂದ ಅಥವಾ ಯಾವ ಸ್ವತ್ತಿನಿಂದ ಮತ್ತು ಎಷ್ಟು ಸಂದಾಯವಾಗಬೇಕು ಎಂಬುದನ್ನು ನಿರ್ಧರಿಸಲು ಮತ್ತು ಆ ಉದ್ದೇಶಕ್ಕಾಗಿ ಅವಶ್ಯಕವಾದ ಎಲ್ಲಾ ನಿರ್ದೇಶನಗಳನ್ನು ನೀಡುವುದಕ್ಕಾಗಿ ಮಧ್ಯಸ್ಥಗಾರನು ಪೂರ್ಣ ಅಧಿಕಾರವನ್ನು ಹೊಂದಿರತಕ್ಕದ್ದು.

165. ಬೆಟರ್ ಮೆಂಟ್ ಫೀಜಿನ ಸಂದಾಯಕ್ಕೆ ಹೊಣೆಯಾಗಿರುವ ವ್ಯಕ್ತಿಗಳಿಗೆ ಮುನ್ಸಿಪಲ್ ಕೌನ್ಸಿಲ್‌ನಿಂದ ನೋಟೀಸ್.- ಯೋಜನೆಯಲ್ಲಿ ಒಳಗೊಂಡಿರುವ ಪ್ರದೇಶದಲ್ಲಿರುವ ಭೂಮಿಗೆ ಸಂಬಂಧಪಟ್ಟಂತೆ ಸಂದಾಯವಾಗಬೇಕಾದ ಬೆಟರ್ ಮೆಂಟ್ ಫೀಜಿನ ಮೊಬಲಗನ್ನು ಸಂದರ್ಭಾನುಸಾರ 161ನೇ ಅಥವಾ 162ನೇ ಪ್ರಕರಣದ ಮೇರೆಗೆ ನಿರ್ಧರಿಸಿರುವಾಗ, ಅಂಥ

ಸಂದಾಯವನ್ನು ಯಾವ ದಿನಾಂಕದೊಳಗಾಗಿ ಮಾಡತಕ್ಕದ್ದೆಂಬುದನ್ನು ನಿಗದಿಪಡಿಸಿ, ಆ ದಿನಾಂಕದಂದು ಬಾಕಿ ಉಳಿಯುವ ಯಾವುದೇ ಮೊಬಲಗಿನ ಮೇಲೆ ಶೇಕಡಾ ನಾಲ್ಕರ ದರದಲ್ಲಿ ಬಡ್ಡಿಯನ್ನು ಸಂದಾಯ ಮಾಡತಕ್ಕದ್ದೆಂದು ಬರಹದಲ್ಲಿ ನೋಟೀಸನ್ನು ಅಂಥ ಸಂದಾಯಕ್ಕೆ ಹೊಣೆಯಾಗಿರುವ ಎಲ್ಲಾ ವ್ಯಕ್ತಿಗಳ ಮೇಲೆ ಮುನ್ಸಿಪಲ್ ಕೌನ್ಸಿಲ್ ಜಾರಿ ಮಾಡತಕ್ಕದ್ದು.

166. ಭೂಮಿಯ ಮೇಲಿನ ಋಣಭಾರವೆಂದು ಬೆಟರ್ ಮೆಂಟ್ಫೀಜನ್ನು ಸಂದಾಯ ಮಾಡಲು ಒಪ್ಪಂದ.- ಯಾವುದೇ ಭೂಮಿಗೆ ಸಂಬಂಧಪಟ್ಟಂತೆ ಬೆಟರ್‌ಮೆಂಟ್ ಫೀಜನ್ನು ಸಂದಾಯ ಮಾಡಲು ಹೊಣೆಯಾಗಿರುವ ಯಾರೇ ವ್ಯಕ್ತಿಯು, ಅದನ್ನು ಮುನ್ಸಿಪಲ್ ಕೌನ್ಸಿಲ್‌ಗೆ ಸಂದಾಯ ಮಾಡುವ ಬದಲು, ವರ್ಷಕ್ಕೆ ಶೇಕಡಾ ಆರರ ದರದ ಪ್ರಕಾರ ಬಡ್ಡಿಯನ್ನೊಳಗೊಂಡು ಐದು ವರ್ಷಗಳಿಗೆ ಮೀರದ ಅವಧಿಯಲ್ಲಿ ಸಂದಾಯ ಮಾಡುವುದಕ್ಕೆ ಹಾಗೂ ಅಂಥ ಬಡ್ಡಿಯ ಮೊದಲನೇ ವಾರ್ಷಿಕ ಸಂದಾಯವನ್ನು 165ನೇ ಪ್ರಕರಣದಲ್ಲಿ ಹೇಳಿರುವ ದಿನಾಂಕದಿಂದ ಒಂದು ವರ್ಷದಲ್ಲಿ ಸಂದಾಯ ಮಾಡುವುದಕ್ಕೊಳಪಟ್ಟು ಅಂಥ ಸಂದಾಯವನ್ನು ಭೂಮಿಯಲ್ಲಿ ಅವನ ಹಿತಾಸಕ್ತಿಯ ಮೇಲೆ ಋಣಭಾರವಾಗಿ ಬಾಕಿ ಬಿಡಲು ಮುನ್ಸಿಪಲ್ ಕೌನ್ಸಿಲ್‌ನೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳಬಹುದು.

167. ಬೆಟರ್ ಮೆಂಟ್ ಫೀಜಿನ ಸಂದಾಯ ಪ್ರಥಮ ಋಣಭಾರವಾಗಿರತಕ್ಕದ್ದು.- (1) ಬೆಟರ್ ಮೆಂಟ್ ಫೀಜಿಗೆ ಸಂಬಂಧಪಟ್ಟಂತೆ ಯಾರೇ ವ್ಯಕ್ತಿಯಿಂದ ಬಾಕಿಯಿರುವ ಪ್ರತಿಯೊಂದು ಸಂದಾಯವು ಮತ್ತು 166ನೇ ಪ್ರಕರಣದಲ್ಲಿ ಹೇಳಿರುವ ಪ್ರತಿಯೊಂದು ಋಣಭಾರವು, ಇತರ ಯಾವುದೇ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ ಮತ್ತು ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆಯೇ ಆಗಲಿ ಅಥವಾ ತರುವಾಯವೇ ಆಗಲಿ ಸೃಜಿಸಿದ ಕಾನೂನು ಮಾನ್ಯವಾದ ಅಥವಾ ನ್ಯಾಯ ಸಮ್ಮತವಾದ ಯಾವುದೇ ಅಡಮಾನವು ಅಥವಾ ಇತರ ಋಣಭಾರವು ಅಸ್ತಿತ್ವದಲ್ಲಿದ್ದರೂ ಮತ್ತು ಸರ್ಕಾರಕ್ಕೆ ಬಾಕಿಯಿರುವ ಭೂಕಂದಾಯವನ್ನು ಮುಂಚಿತವಾಗಿಯೇ ಸಂದಾಯ ಮಾಡುವುದಕ್ಕೊಳಪಟ್ಟು, ಅಂಥ ಭೂಮಿಯಲ್ಲಿ ಅಂಥ ವ್ಯಕ್ತಿಯ ಹಿತಾಸಕ್ತಿಯ ಮೇಲೆ ಪ್ರಥಮ ಋಣಭಾರವಾಗಿರತಕ್ಕದ್ದು.

(2) 166ನೇ ಪ್ರಕರಣಕ್ಕನುಸಾರವಾಗಿ ಮಾಡಿಕೊಂಡಿರುವ ಒಪ್ಪಂದದ ಮೇರೆಗೆ ಬಾಕಿಯಿರುವ ಬಡ್ಡಿಯ ಯಾವುದೇ ಕಂತನ್ನು ಅದು ಯಾವ ದಿನಾಂಕದಂದು ಸಂದಾಯ ಮಾಡಬೇಕಾಗುತ್ತದೋ ಆ ದಿನಾಂಕದಂದು ಸಂದಾಯ ಮಾಡದಿದ್ದರೆ, ಸದರಿ ಕಂತಿನ ಜೊತೆಗೆ, ಆ ದಿನಾಂಕದಂದು, ಬೆಟರ್ ಮೆಂಟ್‌ಫೀಜನ್ನು ಸಂದಾಯ ಮಾಡತಕ್ಕದ್ದು.

(3) 166ನೇ ಪ್ರಕರಣಕ್ಕೆ ಅನುಸಾರವಾಗಿ ಮಾಡಿಕೊಂಡ ಒಪ್ಪಂದದ ತರುವಾಯ ಯಾವುದೇ ಕಾಲದಲ್ಲಿ ಯಾರೇ ವ್ಯಕ್ತಿಯು, ಅದರಿಂದ ಸೃಜಿಸಿದ ಋಣಭಾರವನ್ನು, ಅಂಥ ಸಂದಾಯದ ದಿನಾಂಕದವರೆಗೆ ವರ್ಷಕ್ಕೆ ಶೇಕಡಾ ಆರರಂತೆ ಬಡ್ಡಿಯೊಂದಿಗೆ ತೀರಿಸಬಹುದು.

168. ಪ್ರಕರಣಗಳು 161, 162 ಅಥವಾ 166ರಅನುಸಾರವಾಗಿ ಸಂದಾಯವಾಗಬೇಕಾದ ಹಣದ ವಸೂಲಿ.- 161ನೇ ಪ್ರಕರಣದ ಅಥವಾ 162ನೇ ಪ್ರಕರಣದ ಮೇರೆಗೆ ಬೆಟರ್ ಮೆಂಟ್ ಫೀಜಿನ ಸಂಬಂಧದಲ್ಲಿ ಯಾರೇ ವ್ಯಕ್ತಿಯಿಂದ ಅಥವಾ 166ನೇ ಪ್ರಕರಣಕ್ಕನುಸಾರವಾಗಿ ಮಾಡಿಕೊಂಡ ಒಪ್ಪಂದದ ಮೇರೆಗೆ ಯಾರೇ ವ್ಯಕ್ತಿಯಿಂದ ಯಾವುದೇ ಭೂಮಿಗೆ ಸಂಬಂಧಪಟ್ಟಂತೆ ಸಂದಾಯವಾಗಬೇಕಾದ ಎಲ್ಲಾ ಹಣವನ್ನು, ವರ್ಷಕ್ಕೆ ಶೇಕಡಾ ನಾಲ್ಕರ ದರದ ಪ್ರಕಾರ ವಸೂಲಿಯ ದಿನಾಂಕದವರೆಗೆ ಬಾಕಿಯಿರುವ ಬಡ್ಡಿ ಸಹಿತ ಸದರಿ ವ್ಯಕ್ತಿಯಿಂದ ಅಥವಾ ಅಂಥ ಭೂಮಿಯಲ್ಲಿ ಹಿತಾಸಕ್ತಿ ಹೊಂದಿರುವ ಅವನ ಉತ್ತರಾಧಿಕಾರಿಯಿಂದ VIIನೇ ಅಧ್ಯಾಯದಲ್ಲಿ ಹೇಳಿರುವ ರೀತಿಯಲ್ಲಿ ಮುನ್ಸಿಪಲ್ ಕೌನ್ಸಿಲ್‌ನಿಂದ ವಸೂಲೀಯವಾಗತಕ್ಕದ್ದು.

169. ಸಂದಾಯದ ಒಪ್ಪಂದವು ಹೊಸ ಘೋಷಣೆಯ ಮೇರೆಗಿನ ಆರ್ಜನೆಗೆ ಅಡ್ಡಿಯಾಗತಕ್ಕದ್ದಲ್ಲ.- 161ನೇ ಪ್ರಕರಣದ (3)ನೇ ಉಪ-ಪ್ರಕರಣಕ್ಕನುಸಾರವಾಗಿ ಯಾವ ಭೂಮಿಗೆ ಸಂಬಂಧಿಸಿದಂತೆ ಬೆಟರ್ ಮೆಂಟ್ ಫೀಜಿನ ಸಂದಾಯಕ್ಕೆ ಒಪ್ಪಿಕೊಳ್ಳಲಾಗಿದೆಯೋ ಅಥವಾ 162ನೇ ಪ್ರಕರಣದ ಮೇರೆಗೆ ಅದರ ನಿರ್ಧರಣೆಯ ತರುವಾಯ ಸಂದಾಯ ಮಾಡಲಾಗಿದೆಯೋ ಅಥವಾ 166ನೇ ಪ್ರಕರಣದ ಮೇರೆಗೆ ಅಭಿವೃದ್ಧಿ ಫೀಜಿನ ಬಗ್ಗೆ ಒಪ್ಪಂದವನ್ನು ಯಾವ ಭೂಮಿಗೆ ಸಂಬಂಧಪಟ್ಟಂತೆ ಮಾಡಿಕೊಳ್ಳಲಾಗಿದೆಯೋ ಆ ಯಾವುದೇ ಭೂಮಿಯು ಈ ಅಧ್ಯಾಯದ ಯಾವುದೇ ಉದ್ದೇಶಕ್ಕಾಗಿ ತರುವಾಯ ಅಗತ್ಯಬಿದ್ದರೆ, ಆ ಸಂದಾಯ ಮಾಡಿರುವುದು ಅಥವಾ

ಒಪ್ಪಂದವು 1894ರ ಭೂ ಆರ್ಜನಾ ಅಧಿನಿಯಮದ 6ನೇ ಪ್ರಕರಣದ ಮೇರೆಗೆ ಪ್ರಕಟಿಸಿದ ಹೊಸ ಘೋಷಣೆಗನುಸಾರವಾಗಿ ಆ ಭೂಮಿಯ ಆರ್ಜನೆಯನ್ನು ಪ್ರತಿಬಂಧಿಸುವುದೆಂದು ಭಾವಿಸತಕ್ಕದ್ದಲ್ಲ.

170. ಹೊಸ ಬಡಾವಣೆಗಳನ್ನು ಅಥವಾ ಲೇಔಟ್ ಗಳನ್ನು ರೂಪಿಸುವುದು ಅಥವಾ ಹೊಸ ಖಾಸಗಿ ಬೀದಿಗಳನ್ನು ನಿರ್ಮಿಸುವುದು.- (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ತದ್ವಿರುದ್ಧವಾದುದು ಏನೇ ಇದ್ದರೂ, ಯಾರೇ ವ್ಯಕ್ತಿಯು ಮುನ್ಸಿಪಲ್ ಕೌನ್ಸಿಲ್‌ನ ಬರಹದಲ್ಲಿನ ಸ್ಪಷ್ಟ ಮಂಜೂರಾತಿಯಿಲ್ಲದೆ ಮತ್ತು ಮುನ್ಸಿಪಲ್ ಕೌನ್ಸಿಲ್ ನಿರ್ದಿಷ್ಟಪಡಿಸಬಹುದಾದಂಥಷರತ್ತುಗಳಿಗೆ ಅನುಸಾರವಾಗಿ ಅಲ್ಲದೆ ಯಾವುದೇ ಬಡಾವಣೆ ಅಥವಾ ಲೇಔಟನ್ನು ಅದರ ಮೇಲೆ ಕಟ್ಟಡಗಳನ್ನು ಕಟ್ಟುವ ಉದ್ದೇಶಕ್ಕಾಗಿ ರೂಪಿಸತಕ್ಕದ್ದಲ್ಲ ಅಥವಾ ರೂಪಿಸಲು ಪ್ರಯತ್ನಿಸತಕ್ಕದ್ದಲ್ಲ ಅಥವಾ ಯಾವುದೇ ಖಾಸಗಿ ಹೊಸ ಬೀದಿಯನ್ನು ನಿರ್ಮಿಸತಕ್ಕದ್ದಲ್ಲ.

(2) ಬಡಾವಣೆಯನ್ನು ಅಥವಾ ಲೇಔಟನ್ನು ರೂಪಿಸಲು ಅಥವಾ ಹೊಸ ಖಾಸಗಿ ರಸ್ತೆಯನ್ನು ನಿರ್ಮಿಸಲು ಉದ್ದೇಶಿಸಿದ ಯಾರೇ ವ್ಯಕ್ತಿಯು, ಈ ಕೆಳಕಂಡ ವಿವರಗಳನ್ನು ತೋರಿಸುವ ನಕ್ಷೆಗಳು ಮತ್ತು ವಿಭಾಗಗಳ ಸಹಿತ ಬರಹದಲ್ಲಿ ಅರ್ಜಿಯನ್ನು ಮುನ್ಸಿಪಲ್ ಕೌನ್ಸಿಲ್‌ಗೆ ಸಲ್ಲಿಸತಕ್ಕದ್ದು,-

(ಎ) ಪ್ರದೇಶದ ನಿವೇಶನಗಳಲ್ಲಿ, ಬೀದಿಗಳು, ಗಲ್ಲಿ ಅಥವಾ ತೆರೆದ ಸ್ಥಳಗಳ ರೂಪುರೇಷೆ;

(ಬಿ) ಬೀದಿಗಳ ಉದ್ದೇಶಿತ ಮಟ್ಟ, ದಿಕ್ಕು ಮತ್ತು ಅಗಲ;

(ಸಿ) ಬೀದಿ ಪಂಕ್ತಿಕರಣ, ಕಟ್ಟಡದ ಸಾಲು ಮತ್ತು ರಸ್ತೆಗಳಿಗೆ ಹೊಂದಿಕೊಂಡಂತೆ ಪ್ರಸ್ತಾವಿತ ನಿವೇಶನಗಳು;

(ಡಿ) ಬೀದಿಗಳನ್ನು ಮಟ್ಟಗೊಳಿಸಲು, ನೆಲಗಟ್ಟು ಮಾಡಲು, ಜಲ್ಲಿ ಹಾಕಲು, ನೆಲಕ್ಕೆ ಚಪ್ಪಡಿ ಹಾಸಲು, ಮಾರ್ಗ ನಿರ್ಮಿಸಲು, ಗ್ರಾಮಸಾರಚರಂಡಿ, ಚರಂಡಿ ವ್ಯವಸ್ಥೆ, ನಿರ್ಮಲೀಕರಣ, ಮತ್ತು ದೀಪ ವ್ಯವಸ್ಥೆ ಮತ್ತು ಸಾಕಷ್ಟು ಕುಡಿಯುವ ನೀರಿನ ಸರಬರಾಜಿಗಾಗಿ ಮಾಡಬೇಕಾದ ಏರ್ಪಾಡುಗಳು.

(3) ಬೀದಿಗಳ ಮಟ್ಟ ಹಾಗೂ ಅಗಲ ಮತ್ತು ಅವುಗಳಿಗೆ ಹೊಂದಿಕೊಂಡಿರುವ ಕಟ್ಟಡಗಳ ಎತ್ತರಕ್ಕೆ ಸಂಬಂಧಪಟ್ಟಂತೆ ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ಯಾವುದೇ ನಿಯಮಗಳ ಅಥವಾ ಬೈಲಾಗಳ ಉಪಬಂಧಗಳು, (2)ನೇ ಉಪ-ಪ್ರಕರಣದಲ್ಲಿ ಹೇಳಿರುವ ರಸ್ತೆಗಳ ಸಂದರ್ಭದಲ್ಲಿಯೂ ಸಹ ಅನ್ವಯವಾಗತಕ್ಕದ್ದು ಮತ್ತು ಆ ಉಪ-ಪ್ರಕರಣದಲ್ಲಿ ಹೇಳಿರುವ ಎಲ್ಲಾ ವಿವರಗಳು ಮುನ್ಸಿಪಲ್ ಕೌನ್ಸಿಲ್‌ನ ಅನುಮೋದನೆಗೊಳಪಟ್ಟಿರತಕ್ಕದ್ದು.

(4) ಉಪ-ಪ್ರಕರಣ (2) ರ ಮೇರೆಗೆ ಯಾವುದೇ ಅರ್ಜಿಯನ್ನು ಸ್ವೀಕರಿಸಿದ ತರುವಾಯ ಆರು ತಿಂಗಳುಗಳೊಳಗಾಗಿ, ಮುನ್ಸಿಪಲ್ ಕೌನ್ಸಿಲ್, ಸೂಕ್ತವೆಂದು ತಾನು ಯೋಚಿಸುವಂಥ ಷರತ್ತುಗಳ ಮೇಲೆ ಬಡಾವಣೆಯನ್ನು ಅಥವಾ ಲೇಔಟ್ ಗಳನ್ನು ರೂಪಿಸಲು ಅಥವಾ ಬೀದಿಯನ್ನು ನಿರ್ಮಿಸಲು ಮಂಜೂರಾತಿ ನೀಡತಕ್ಕದ್ದು ಇಲ್ಲವೆ ಅದನ್ನು ನಿರಾಕರಿಸತಕ್ಕದ್ದು ಅಥವಾ ಅದಕ್ಕೆ ಸಂಬಂಧಿಸಿದಂತೆ ಇನ್ನಷ್ಟು ಮಾಹಿತಿಯನ್ನು ಕೇಳತಕ್ಕದ್ದು.

(5) ಮುನ್ಸಿಪಲ್ ಕೌನ್ಸಿಲ್, ಅರ್ಜಿಯನ್ನು ಮಂಜೂರು ಮಾಡುವುದಕ್ಕೆ ಮುಂಚೆ ರಸ್ತೆಗಳನ್ನು, ರಸ್ತೆ ಬೀದಿಯ ಚರಂಡಿಗಳನ್ನು, ಅಡಿಗಾಲುವೆಗಳನ್ನು, ಒಳಚರಂಡಿಯನ್ನು ಮತ್ತು ನೀರು ಸರಬರಾಜಿಗೆ ಹಾಗೂ ದೀಪದ ವ್ಯವಸ್ಥೆಗೆ ಮಾಡುವುದಕ್ಕಾಗುವ ವೆಚ್ಚವನ್ನು ಮತ್ತು ಯಾವ ಇತರ ಉದ್ದೇಶಗಳಿಗಾಗಿ ವೆಚ್ಚವನ್ನು ಕೊಡುವಂತೆ ಮುನ್ಸಿಪಲ್ ಕೌನ್ಸಿಲ್ ಅಂಥ ಅರ್ಜಿದಾರನನ್ನು ಕೋರಬಹುದೋ ಆ ವೆಚ್ಚಗಳನ್ನು ಠೇವಣಿ ಇಡುವಂತೆ ಅರ್ಜಿದಾರನನ್ನು ಅಗತ್ಯಪಡಿಸಬಹುದು:

ಪರಂತು, ಅರ್ಜಿದಾರನು, ರಸ್ತೆಗಳ, ಚರಂಡಿಗಳ, ನೀರು ಸರಬರಾಜಿನ ಕೊಳವೆಗಳ ಮತ್ತು ಅವನು ರೂಪಿಸಿದ ಖಾಲಿ ಸ್ಥಳಗಳ ಒಡೆತನವನ್ನು ಮುನ್ಸಿಪಲ್ ಕೌನ್ಸಿಲ್‌ಗೆ, ಅವುಗಳಿಗಾಗಿ ಯಾವುದೇ ನಷ್ಟಪರಿಹಾರವನ್ನು ಕ್ಲೇಮು ಮಾಡದೆ ಶಾಶ್ವತವಾಗಿ ವರ್ಗಾಯಿಸಲು ಸಹ ಒಪ್ಪತಕ್ಕದ್ದು.

(6) ಅಂಥ ಮಂಜೂರಾತಿಯನ್ನು-

(i) ಮುನ್ಸಿಪಲ್ ಕೌನ್ಸಿಲ್‌ನಿಂದ ಉದ್ದೇಶಿತ ಬೀದಿಯು ಮೇಲ್ಪಾಟಿನ ಯಾವುದೇ ಮಾನ್ಯ ಯೋಜನೆಯನ್ನು ಅಥವಾ ಮೇಲ್ಪಾಟಿನ ಅಥವಾ ವಿಸ್ತರಣೆಯ ಇತರ ಯೋಜನೆಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಈಗಾಗಲೇ ಮಾಡಿಕೊಂಡಿರುವ ಅಥವಾ

ಮಾಡಿಕೊಳ್ಳುವ ಸಂಭವವಿದೆಯೆಂದು ಮುನ್ಸಿಪಲ್ ಕೌನ್ಸಿಲ್ ಅಭಿಪ್ರಾಯಪಡುವಂಥ ಯಾವುದೇ ಏರ್ಪಾಡುಗಳೊಂದಿಗೆ ಸರಿಹೊಂದದಿದ್ದರೆ;

(ii) ಪ್ರಸ್ತಾವಿತ ಬೀದಿಯು (3)ನೇ ಉಪ-ಪ್ರಕರಣದಲ್ಲಿ ಹೇಳಿರುವ ಈ ಅಧಿನಿಯಮದ ಅಥವಾ ನಿಯಮಗಳ ಅಥವಾ ಬೈಲಾಗಳ ಉಪಬಂಧಗಳಿಗೆ ಅನುನುಗಣವಾಗಿಲ್ಲದಿದ್ದರೆ;

(iii) ಪ್ರಸ್ತಾವಿತ ಬೀದಿಯನ್ನು ಈಗಾಗಲೇ ತೆರೆದಿರುವ ಬೀದಿಯೊಂದಿಗೆ ಸಂಪರ್ಕಿಸುವ ಹಾಗೆ ವಿನ್ಯಾಸ ಮಾಡಿರದಿದ್ದರೆ;ಅಥವಾ

(iv) ಈಗಿರುವ ಅಥವಾ ಮುನ್ಸಿಪಲ್ ಕೌನ್ಸಿಲ್‌ನ ಪ್ರಸ್ತಾವಿತ ವಿಸ್ತರಣೆ ಅಥವಾ ಮೇಲ್ಪಾಟು ಯೋಜನೆಗಳೊಂದಿಗೆ ಯಾವ ಲೇಔಟನ್ನು ಸರಿಹೊಂದಿಸಲಾಗುವುದಿಲ್ಲವೆಂದು ಮುನ್ಸಿಪಲ್ ಕೌನ್ಸಿಲ್ ಅಭಿಪ್ರಾಯಪಡುವುದೋ ಆ ಲೇಔಟ್‌ಗೆ

- ನಿರಾಕರಿಸಬಹುದು.

(7) ಉಪ-ಪ್ರಕರಣ (4) ರ ಮೇರೆಗೆ ಅರ್ಜಿದಾರನಿಂದ ಇನ್ನಷ್ಟು ಮಾಹಿತಿ ಮುನ್ಸಿಪಲ್ ಕೌನ್ಸಿಲ್‌ಗೆ ಅಗತ್ಯವಿದ್ದರೆ, ಅಂಥ ಮಾಹಿತಿಯನ್ನು ಪಡೆದ ತರುವಾಯ ಮುನ್ಸಿಪಲ್ ಕೌನ್ಸಿಲ್ ಆದೇಶಗಳನ್ನು ಮಾಡುವವರೆಗೆ, ಅವನು ಬಡಾವಣೆಯನ್ನು ಅಥವಾ ಲೇಔಟನ್ನು ರೂಪಿಸಲು ಅಥವಾ ಬೀದಿಯನ್ನು ನಿರ್ಮಿಸಲು ಯಾವುದೇ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದಲ್ಲ.:

ಪರಂತು, ಸದರಿ ಅರ್ಜಿಯ ಬಗ್ಗೆ ಅಂತಿಮವಾಗಿ ವ್ಯವಹರಿಸಲು ತನಗೆ ಸಾಧ್ಯವಾಗುವುದಕ್ಕೆ ಅನುವು ಮಾಡಿಕೊಡಲು ಅವಶ್ಯವೆಂದು ಮುನ್ಸಿಪಲ್ ಕೌನ್ಸಿಲ್ ಪರಿಗಣಿಸಿದಂಥ ಎಲ್ಲಾ ಮಾಹಿತಿಯನ್ನು ಮುನ್ಸಿಪಲ್ ಕೌನ್ಸಿಲ್ ಪಡೆದ ತರುವಾಯ, ಅಂಥ ಆದೇಶಗಳನ್ನು ಹೊರಡಿಸಲು ಯಾವುದೇ ಸಂದರ್ಭದಲ್ಲಿ ಆರು ತಿಂಗಳಿಗಿಂತ ಹೆಚ್ಚಿನ ವಿಳಂಬವಾಗತಕ್ಕದ್ದಲ್ಲ.

(8) ಉಪ-ಪ್ರಕರಣ (2) ರ ಮೇರೆಗಿನ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಅಥವಾ (7)ನೇ ಉಪ-ಪ್ರಕರಣದ ಮೇರೆಗೆ ಕೇಳಿದ್ದ ಎಲ್ಲಾ ಮಾಹಿತಿಯನ್ನು ಸ್ವೀಕರಿಸಿದ ದಿನಾಂಕದಿಂದ ಆರು ತಿಂಗಳೊಳಗಾಗಿ ಅದಕ್ಕೆ ಮಂಜೂರಾತಿಯನ್ನು ಮುನ್ಸಿಪಲ್ ಕೌನ್ಸಿಲ್ ನಿರಾಕರಿಸಿರದಿದ್ದರೆ ಅಂಥ ಮಂಜೂರಾತಿಯನ್ನು ನೀಡಲಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಅರ್ಜಿದಾರನು ಈ ಬಡಾವಣೆಯನ್ನು ಅಥವಾ ಲೇಔಟನ್ನು ರೂಪಿಸಲು ಅಥವಾ ಬೀದಿಯನ್ನು ನಿರ್ಮಿಸಲು ಮುಂದುವರೆಯಬಹುದೇ ಹೊರತು ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳು ಅಥವಾ ಬೈಲಾಗಳ ಉಪಬಂಧಗಳಲ್ಲಿ ಯಾವುದನ್ನಾದರೂ ಉಲ್ಲಂಘಿಸಿ ಅಲ್ಲ.

(9) ಉಪ-ಪ್ರಕರಣ (1) ರ ಉಪಬಂಧಗಳನ್ನು ಉಲ್ಲಂಘಿಸಿ ಯಾವುದೇ ಬಡಾವಣೆಯನ್ನು ಅಥವಾ ಲೇಔಟ್ ನ್ನು ರೂಪಿಸುವ ಅಥವಾ ರೂಪಿಸಲು ಪ್ರಯತ್ನಿಸುವ ಅಥವಾ ಈ ಪ್ರಕರಣದ ಮೇರೆಗೆ ಮುನ್ಸಿಪಲ್ ಕೌನ್ಸಿಲ್‌ನ ಆದೇಶಗಳಿಗೆ ಅನುಗುಣವಾಗಲ್ಲದೆ ಅಥವಾ ಅನ್ಯಥಾ ಯಾವುದೇ ಬೀದಿಯನ್ನು ನಿರ್ಮಿಸುವ ಯಾರೇ ವ್ಯಕ್ತಿಯು, ಒಂದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

171. ಬಡಾವಣೆ, ಲೇಔಟ್ ಅಥವಾ ಬೀದಿಯ ಬದಲಾವಣೆ ಅಥವಾ ನಾಶಪಡಿಸುವಿಕೆ.- (1) 170ನೇ ಪ್ರಕರಣದಲ್ಲಿ ಹೇಳಿರುವಂತಹ ಬಡಾವಣೆಯನ್ನು ಅಥವಾ ಲೇಔಟ್ ನ್ನು ಯಾರೇ ವ್ಯಕ್ತಿ ರೂಪಿಸಿದರೆ ಅಥವಾ ಯಾವುದೇ ರಸ್ತೆಯನ್ನು ನಿರ್ಮಿಸಿದರೆ ಅಥವಾ 170ನೇ ಪ್ರಕರಣದ ಮೇರೆಗೆ ಮುನ್ಸಿಪಲ್ ಕೌನ್ಸಿಲ್‌ನ ಆದೇಶಗಳಿಲ್ಲದೆ ಅಥವಾ ಆದೇಶಗಳಿಗನುಗುಣವಾಗಲ್ಲದೆ ಅನ್ಯಥಾ ಯಾವುದೇ ಕಟ್ಟಡವನ್ನು ನಿರ್ಮಿಸಿದರೆ, ಈ ಅಧಿನಿಯಮದ ಮೇರೆಗೆ ತಪ್ಪಿತಸ್ಥನನ್ನು, ಪ್ರಾಸಿಕ್ಯೂಟ್ ಮಾಡಲಿ ಅಥವಾ ಮಾಡದಿರಲಿ ಮುನ್ಸಿಪಲ್ ಕೌನ್ಸಿಲ್, ನೋಟೀಸಿನ ಮೂಲಕ-

(ಎ) ಅಂಥ ಬಡಾವಣೆಯನ್ನು, ಲೇಔಟನ್ನು ಅಥವಾ ಬೀದಿಯನ್ನು ಮುನ್ಸಿಪಲ್ ಕೌನ್ಸಿಲ್‌ಗೆ ಸಮಾಧಾನಕರವಾಗುವಂತೆ ಏಕೆ ಬದಲಾಯಿಸಬಾರದು ಅಥವಾ ಅಂಥ ಬದಲಾವಣೆಯು ಕಾರ್ಯ ಸಾಧ್ಯವಿಲ್ಲವೆಂದು ಮುನ್ಸಿಪಲ್ ಕೌನ್ಸಿಲ್ ಭಾವಿಸಿದರೆ ಅಂಥ ಬಡಾವಣೆಯನ್ನು, ಲೇಔಟನ್ನು ಅಥವಾ ಬೀದಿಯನ್ನು ಏಕೆ ನಾಶಪಡಿಸಬಾರದು ಎಂಬುದಕ್ಕೆ ಸಾಕಷ್ಟು ಕಾರಣಗಳನ್ನು ತೋರಿಸಲು ಅವನು ರುಜು ಮಾಡಿದ ಬರಹದಲ್ಲಿಯ ಹೇಳಿಕೆಯ ಮೂಲಕ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಂದು ಅಥವಾ ಅದಕ್ಕೆ ಮುಂಚೆ ಮುನ್ಸಿಪಲ್ ಕೌನ್ಸಿಲ್‌ಗೆ ಕಳುಹಿಸತಕ್ಕದ್ದೆಂದು ತಪ್ಪಿತಸ್ಥನನ್ನು ಅಗತ್ಯಪಡಿಸಬಹುದು; ಅಥವಾ

(ಬಿ) ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸಮಯದಲ್ಲಿ ಮತ್ತು ಸ್ಥಳದಲ್ಲಿ ಖುದ್ದಾಗಿ ಅಥವಾ ಅಧಿಕೃತ ಏಜೆಂಟನ ಮೂಲಕ ಮುನ್ಸಿಪಲ್ ಕೌನ್ಸಿಲ್‌ನ ಮುಂದೆ ಹಾಜರಾಗಲು ಮತ್ತು ಹಿಂದೆ ಹೇಳಿದ ಹಾಗೆ ಕಾರಣ ತೋರಿಸಲು ತಪ್ಪಿತಸ್ಥನನ್ನು ಅಗತ್ಯಪಡಿಸಬಹುದು.

(2) ಅಂಥ ನೋಟೀಸನ್ನು ಯಾವ ವ್ಯಕ್ತಿಗೆ ಜಾರಿ ಮಾಡಲಾಗಿದೆಯೋ ಆ ಯಾರೇ ವ್ಯಕ್ತಿಯು, ಅಂಥ ಬಡಾವಣೆಯನ್ನು, ಲೇಔಟ್ ನ್ನು ಅಥವಾ ಬೀದಿಯನ್ನು ಏಕೆ ಹಾಗೆ ಮಾಪಾರ್ಟು ಮಾಡಬಾರದು ಅಥವಾ ನಾಶಪಡಿಸಬಾರದು ಎಂಬುದಕ್ಕೆ ಮುನ್ಸಿಪಲ್ ಕೌನ್ಸಿಲ್‌ಗೆ ಮನದಟ್ಟಾಗುವಂತೆ ಸಾಕಷ್ಟು ಕಾರಣ ತೋರಿಸಲು ತಪ್ಪಿದರೆ, ಮುನ್ಸಿಪಲ್ ಕೌನ್ಸಿಲ್ ಅಂಥ ಬಡಾವಣೆಯನ್ನು, ಲೇಔಟ್‌ನ ಅಥವಾ ಬೀದಿಯ ಮಾಪಾರ್ಟಿಗೆ, ನಾಶಕ್ಕೆ ನಿರ್ದೇಶಿಸುವ ಆದೇಶವನ್ನು ಮುನ್ಸಿಪಲ್ ಕೌನ್ಸಿಲ್ ಹೊರಡಿಸಬಹುದು.

172. ಕಾಮಗಾರಿಯನ್ನು ನಿರ್ವಹಿಸುವಂತೆ ಆದೇಶಿಸಲು ಅಥವಾ ತಪ್ಪಿದರೆ, ಅದನ್ನು ತಾನೇ ಸ್ವತಃ ನೆರವೇರಿಸಲು ಮುನ್ಸಿಪಲ್ ಕೌನ್ಸಿಲ್‌ನ ಅಧಿಕಾರ.- (1) ಮುನ್ಸಿಪಲ್ ಕೌನ್ಸಿಲ್-

(ಎ) 170ನೇ ಪ್ರಕರಣದ ಮೇರೆಗೆ ಅನುಮತಿಗಾಗಿ ಅರ್ಜಿ ಸಲ್ಲಿಸಿರುವ ಯಾರೇ ವ್ಯಕ್ತಿಯು ಮತ್ತುಬಡಾವಣೆಯನ್ನು ಅಥವಾ ಲೇಔಟ್ ನ್ನು ರೂಪಿಸುವುದಕ್ಕೆ ಅಥವಾ ಬೀದಿಯನ್ನು ನಿರ್ಮಿಸುವುದಕ್ಕೆ ಸಂಬಂಧಿಸಿದ ಕಾಮಗಾರಿಗಳನ್ನು ಸ್ವತಃ ನಿರ್ವಹಿಸಬೇಕೆಂದು ಮುನ್ಸಿಪಲ್ ಕೌನ್ಸಿಲ್‌ನಿಂದ ಸ್ಪಷ್ಟವಾಗಿ ಅನುಮತಿ ಪಡೆದಿರುವ ಆ ವ್ಯಕ್ತಿಯು ಅದನ್ನು ನಿರ್ವಹಿಸದಿದ್ದರೆ; ಅಥವಾ

(ಬಿ) ಮುನ್ಸಿಪಲ್ ಕೌನ್ಸಿಲ್‌ಗೆ ಸಮಾಧಾನವಾಗುವಂತೆ ಯಾವುದೇ ಖಾಸಗಿ ಬೀದಿಯನ್ನು ಅಥವಾ ಅದರ ಭಾಗವನ್ನು ಮಟ್ಟ ಮಾಡಿರದಿದ್ದರೆ, ನೆಲಗಟ್ಟು, ಜಲ್ಲಿ ಹಾಕಿರದಿದ್ದರೆ, ಚಪ್ಪಡಿ ಹಾಕಿರದಿದ್ದರೆ, ಮಾರ್ಗ ನಿರ್ಮಿಸಿರದಿದ್ದರೆ, ಒಳಚರಂಡಿ ವ್ಯವಸ್ಥೆ ಮಾಡಿರದಿದ್ದರೆ, ಚರಂಡಿ ವ್ಯವಸ್ಥೆ ಮಾಡಿರದಿದ್ದರೆ, ನಿರ್ಮಲೀಕರಣ ಮಾಡಿರದಿದ್ದರೆ ಅಥವಾ ದೀಪದ ವ್ಯವಸ್ಥೆಯನ್ನು ಮಾಡಿರದಿದ್ದರೆ,

- ನೋಟೀಸಿನ ಮೂಲಕ, ಬಡಾವಣೆಯನ್ನು ಅಥವಾ ಲೇಔಟ್ ನ್ನು ರೂಪಿಸುವ ವ್ಯಕ್ತಿಯನ್ನು ಅಥವಾ ಅಂಥ ಬೀದಿಯ ಅಥವಾ ಭಾಗದ ಒಡೆಯರನ್ನು ಮತ್ತು ಅಂಥ ಬೀದಿ ಅಥವಾ ಭಾಗಕ್ಕೆ ಅಭಿಮುಖವಾಗಿರುವ ಅಥವಾ ಹೊಂದಿಕೊಂಡಿರುವ ಕಟ್ಟಡಗಳ ಮತ್ತು ಭೂಮಿಗಳ ಒಡೆಯರನ್ನು ಭೂಮಿಯ ಒಡೆಯರುಗಳು ಮತ್ತು ಕಟ್ಟಡಗಳ ಒಡೆಯರುಗಳು ಬೇರೆ ಬೇರೆ ಯಾವ ಕಾಮಗಾರಿಯನ್ನು ನಿರ್ವಹಿಸುವುದು ಅವಶ್ಯಕವೆಂದು ಮುನ್ಸಿಪಲ್ ಕೌನ್ಸಿಲ್, ಭೂಮಿಯ ಮತ್ತು ಕಟ್ಟಡದ ಒಡೆಯರಿಬ್ಬರೂ ಸಹ ಅಭಿಪ್ರಾಯಪಡುವರೋ ಆ ಯಾವುದೇ ಕಾಮಗಾರಿಯನ್ನು ಮತ್ತು ಅಂಥ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕಾಲದೊಳಗೆ ಅದನ್ನು ನಿರ್ವಹಿಸಲು ಅಗತ್ಯಪಡಿಸಬಹುದು.

(2) ಉಪ-ಪ್ರಕರಣ (1) ರ ಮೇರೆಗೆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿರುವ ಕಾಲದೊಳಗಾಗಿ ಅಂಥ ಯಾವುದೇ ಕಾಮಗಾರಿಯನ್ನು ನಿರ್ವಹಿಸದಿದ್ದರೆ ಆ ಕಾಮಗಾರಿಯನ್ನು ತಾನೇ ನಿರ್ವಹಿಸುವುದು ಸೂಕ್ತವೆಂದು ಮುನ್ಸಿಪಲ್ ಕೌನ್ಸಿಲ್ ಯೋಚಿಸಿದರೆ, ಅದನ್ನು ಕಾರ್ಯಗತಗೊಳಿಸಬಹುದು, ಅಥವಾ ಕಾರ್ಯಗತಗೊಳಿಸುವಂತೆ ಮಾಡಬಹುದು ಮತ್ತು ವಹಿಸಿದ ವೆಚ್ಚಗಳನ್ನು ಮುನ್ಸಿಪಲ್ ಕೌನ್ಸಿಲ್ ನಿರ್ಧರಿಸಬಹುದಾದಂಥ ಪ್ರಮಾಣಗಳಲ್ಲಿ (1)ನೇ ಉಪ-ಪ್ರಕರಣದಲ್ಲಿ ಹೇಳಿರುವ ವ್ಯಕ್ತಿಗಳು ಅಥವಾ ಒಡೆಯರು ಸಂದಾಯ ಮಾಡತಕ್ಕದ್ದು, ಅಂಥ ವೆಚ್ಚಗಳನ್ನು, ಅವು ಭೂಕಂದಾಯದ ಬಾಕಿಯಾಗಿದ್ದಿದ್ದರೆ ಹೇಗೆ ವಸೂಲಿ ಮಾಡಲಾಗುತ್ತಿತ್ತೋ ಹಾಗೆಯೇ ಸಂಬಂಧಪಟ್ಟ ವ್ಯಕ್ತಿಗಳಿಂದ ವಸೂಲು ಮಾಡಬಹುದು.

173. ಮೇಲ್ಪಾಟು ಮಂಡಲಿಯ ಸ್ಥಾಪನೆ.- (1) ಯಾವುದೇ [1][ಮುನ್ಸಿಪಲ್ ಏರಿಯಾ][1] ದಲ್ಲಿ ಮೇಲ್ಪಾಟು ಯೋಜನೆಗಳನ್ನು ಈ ಅಧ್ಯಾಯದ ಮೇರೆಗೆ ಕೈಗೊಳ್ಳುವ ಮತ್ತು ನಿರ್ವಹಿಸುವ ಉದ್ದೇಶಕ್ಕಾಗಿ, ಸರ್ಕಾರವು ಮುನ್ಸಿಪಲ್ ಕೌನ್ಸಿಲ್‌ನೊಡನೆ ಸಮಾಲೋಚಿಸಿದ ತರುವಾಯ, ಈ ಅಧ್ಯಾಯದ ಉಪಬಂಧಗಳಿಗನುಸಾರವಾಗಿ ಮೇಲ್ಪಾಟು ಮಂಡಲಿಯನ್ನು ಸ್ಥಾಪಿಸಲು ನಿರ್ದೇಶಿಸಬಹುದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) (1)ನೇ ಉಪ-ಪ್ರಕರಣದ ಮೇರೆಗೆ ಮೇಲ್ಪಾಟು ಮಂಡಲಿಯನ್ನು ಸ್ಥಾಪಿಸಬೇಕೆಂದು ಸರ್ಕಾರವು ನಿರ್ದೇಶಿಸಿದಾಗ, ... ಮೇಲ್ಪಾಟು ಮಂಡಲಿ ಎಂದು ಕರೆಯಲಾಗುವ ಈ ಕೆಳಕಂಡ [1][ಏಳು][1] ಸದಸ್ಯರನ್ನೊಳಗೊಂಡ ಮಂಡಲಿಯನ್ನು ರಚಿಸತಕ್ಕದ್ದು:-

1.1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಎ) ಸರ್ಕಾರವು ನೇಮಕ ಮಾಡುವ ಮಂಡಲಿಯ ಅಧ್ಯಕ್ಷ;

[1][(ಬಿ) xxx][1]

1. 1976ರ ಅಧಿನಿಯಮ 83ರ ಮೂಲಕ 8.11.1976 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(ಸಿ) ಮುನ್ಸಿಪಲ್ ಕೌನ್ಸಿಲ್‌ನಲ್ಲಿ ತತ್ಕಾಲದಲ್ಲಿರುವ ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್;

[1][(ಡಿ)ಸಂಬಂಧಪಟ್ಟ ಎಕ್ಸಿಕ್ಯೂಟಿವ್ ಇಂಜಿನಿಯರ್ ಮತ್ತು ಸರ್ಕಾರ ನಿರ್ದಿಷ್ಟಪಡಿಸಿದ ನಗರ ಯೋಜನಾ ನಿರ್ದೇಶಕರಿಂದ ನಾಮನಿರ್ದೇಶಿತ ವ್ಯಕ್ತಿ;][1]

1.1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಇ) ಸರ್ಕಾರವು ನೇಮಕ ಮಾಡುವ [1][ಇಬ್ಬರು][1] ಸದಸ್ಯರು;

1.1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಎಫ್) [1][ಮುನ್ಸಿಪಲ್ ಏರಿಯಾದ][1] ಮುನ್ಸಿಪಲ್ ಕೌನ್ಸಿಲರ್ ಗಳು ನಿಯಮಿಸಿದ ರೀತಿಯಲ್ಲಿ ತಮ್ಮ ಪೈಕಿಯಿಂದ ಚುನಾಯಿಸಬೇಕಾದ ಅಥವಾ ಹಿಂದೆ ಹೇಳಿದಂತೆ ಚುನಾಯಿಸಲು ತಪ್ಪಿದರೆ, ಸರ್ಕಾರವು [1][ಮುನ್ಸಿಪಲ್ ಏರಿಯಾ][1]ದ ಮುನ್ಸಿಪಲ್ ಕೌನ್ಸಿಲರ್ ಗಳಪೈಕಿಯಿಂದ ನೇಮಕ ಮಾಡುವ [2][ಇಬ್ಬರು][2] ಸದಸ್ಯರು.

1. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2.1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ಮೇಲ್ಪಾಟು ಮಂಡಲಿಯ, (15)ನೇ ಉಪ-ಪ್ರಕರಣದ ಮೇರೆಗೆ ಅದನ್ನು ವಿಸರ್ಜಿಸುವವರೆಗೆ, ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಸ್ಥತ್ತನ್ನು ಆರ್ಜಿಸಲು, ಧಾರಣ ಮಾಡಲು ಹಾಗೂ ಅದನ್ನು ವಿಲೆ ಮಾಡಲು ಮತ್ತು ಕರಾರು ಮಾಡಿಕೊಳ್ಳುವ ಅಧಿಕಾರದೊಂದಿಗೆ ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮುದ್ರೆಯನ್ನು ಹೊಂದಿರತಕ್ಕದ್ದು ಮತ್ತು ಸದರಿ ಹೆಸರಿನಿಂದ ದಾವೆ ಹೂಡಬಹುದು ಮತ್ತು ದಾವೆಗೆ ಗುರಿಯಾಗಬಹುದು.

(4) ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ, ಮೇಲ್ಪಾಟು ಮಂಡಲಿಯ ಅಧ್ಯಕ್ಷರ ಮತ್ತು ಸದಸ್ಯರ ಹೆಸರುಗಳನ್ನು ಸರ್ಕಾರೀ ರಾಜಪತ್ರದಲ್ಲಿ ಅಧಿಸೂಚಿಸತಕ್ಕದ್ದು.

(5) ಮೇಲ್ಪಾಟು ಮಂಡಲಿಯ ಅಧ್ಯಕ್ಷರ ಮತ್ತು ಪದನಿಮಿತ್ತ ಸದಸ್ಯರಾಗಿರದ ಇತರ ಸದಸ್ಯರ ಪದಾವಧಿಯು, ಅವರ ಹೆಸರುಗಳನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಮೂರು ವರ್ಷಗಳಾಗಿರತಕ್ಕದ್ದು ಮತ್ತು ಮೂರು ವರ್ಷಗಳ ಸದರಿ ಅವಧಿಯ ಸಮಾಪ್ತಿ ಹಾಗೂ ನಂತರ ಅಧಿಕಾರಕ್ಕೆ ಬರುವ ಮಂಡಲಿಯ ಅಧ್ಯಕ್ಷರ ಮತ್ತು ಇತರ ಸದಸ್ಯರ ಹೆಸರುಗಳು ರಾಜ್ಯಪತ್ರದಲ್ಲಿ ಪ್ರಕಟವಾಗುವ ದಿನಾಂಕದ ನಡುವೆ ಗತಿಸಿಹೋಗುವ ಯಾವುದೇ ಇನ್ನಷ್ಟು ಅವಧಿಯನ್ನು ಒಳಗೊಂಡಿರತಕ್ಕದ್ದು.

(6) ಸದಸ್ಯನ ಮರಣದಿಂದ, ರಾಜೀನಾಮೆಯಿಂದ ಅಥವಾ ಸದಸ್ಯನನ್ನು ತೆಗೆದುಹಾಕುವುದರಿಂದ ಅವನ ಸ್ಥಾನದಲ್ಲಿ ಉಂಟಾಗುವ ಯಾವುದೇ ಆಕಸ್ಮಿಕ ಖಾಲಿ ಸ್ಥಾನವನ್ನು ಆದಷ್ಟು ಬೇಗನೇ ಮಂಡಲಿಯ ಸದಸ್ಯರ ಮೂಲತಃ ಮಾಡುವ ನೇಮಕಗಳಿಗೆ ಮತ್ತು ಆಯ್ಕೆಗಳಿಗೆ ಅನ್ವಯವಾಗುವಂಥ ರೀತಿಯಲ್ಲೇ ಅವೇ ಪ್ರಾಧಿಕಾರಗಳಿಂದ ಮತ್ತು ಸಾಧ್ಯವಾಗಬಹುದಾದಷ್ಟರ ಮಟ್ಟಿಗೆ ಅವೇ ಉಪಬಂಧಗಳಿಗೊಳಪಟ್ಟು ಭರ್ತಿ ಮಾಡತಕ್ಕದ್ದು:

ಪರಂತು, ಹಾಗೆ ಆಯ್ಕೆಗೊಂಡ ಸದಸ್ಯರು, ಅಂಥ ಖಾಲಿ ಸ್ಥಾನವು ಉಂಟಾಗದಿದ್ದರೆ ಆ ಸ್ಥಾನವನ್ನು ತೆರಪು ಮಾಡುವ ಸದಸ್ಯನು ಅದನ್ನು ಯಾವ ಅಪರಾಧವನ್ನು ನೈತಿಕ ಅಧಃಪತನವನ್ನೊಳಗೊಂಡ ಅಪರಾಧವೆಂದು ಧಾರಣ ಮಾಡಿರುತ್ತಿದ್ದನೋ ಆ ಅವಧಿಯವರೆಗೆ ಮಾತ್ರ ಆ ಸ್ಥಾನವನ್ನು ಧಾರಣ ಮಾಡತಕ್ಕದ್ದು.

(7) ಅಧ್ಯಕ್ಷರು ಮತ್ತು ಪದನಿಮಿತ್ತ ಸದಸ್ಯರಲ್ಲದ ಇತರ ಸದಸ್ಯರು ನಿಯಮಿಸಬಹುದಾದಂಥ ಭತ್ಯೆಗಳನ್ನು ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು ಮತ್ತು ಆ ಭತ್ಯೆಗಳನ್ನು ಮೇಲ್ಪಾಟು ಮಂಡಲಿಯ ನಿಧಿಗಳಿಂದ ಸಂದಾಯ ಮಾಡತಕ್ಕದ್ದು.

(8) ಪದನಿಮಿತ್ತ ಸದಸ್ಯನಾಗಿರುವ ವ್ಯಕ್ತಿಯನ್ನು ಹೊರತುಪಡಿಸಿ, ಯಾರೇ ವ್ಯಕ್ತಿಯು,-

(ಎ) ಮಂಡಲಿಯು ಅಥವಾ ಮುನ್ಸಿಪಲ್ ಕೌನ್ಸಿಲ್‌ನ ಅಥವಾ ಸರ್ಕಾರದ ಅಧೀನದಲ್ಲಿ ಯಾವುದೇ ಲಾಭದ ಹುದ್ದೆಯನ್ನು ಧಾರಣ ಮಾಡಿದ್ದರೆ; ಅಥವಾ

(ಬಿ) ಅಸ್ವಸ್ಥ ಚಿತ್ತನಾಗಿದ್ದರೆ ಮತ್ತು ಸಕ್ಷಮ ನ್ಯಾಯಾಲಯದಿಂದ ಹಾಗೆಂದು ಘೋಷಿತನಾಗಿದ್ದರೆ; ಅಥವಾ

(ಸಿ) ಅವಿಮುಕ್ತ ದಿವಾಳಿಯಾಗಿದ್ದರೆ ಅಥವಾ ದಿವಾಳಿಯೆಂದು ನಿರ್ಣೀತನಾಗಲು ಅರ್ಜಿ ಸಲ್ಲಿಸಿದ್ದರೆ; ಅಥವಾ

(ಡಿ) ಯಾವ ಅಪರಾಧವನ್ನು ನೈತಿಕ ಅಧಃಪತನವನ್ನೊಳಗೊಂಡ ಅಪರಾಧವೆಂದು ಸರ್ಕಾರವು ಅಭಿಪ್ರಾಯಪಡುತ್ತದೋ, ಆ ಅಪರಾಧದ ನಿರ್ಣೀತನಾಗಿದ್ದರೆ; ಅಥವಾ

(ಇ) ತಾನಾಗಿಯೇ, ತನ್ನ ಹೆಂಡತಿಯ ಅಥವಾ ಮಗನ ಅಥವಾ ತನ್ನ ಮೇಲೆ ಅವಲಂಬಿತನಾದ ಇತರ ಯಾರೇ ಹತ್ತಿರದ ಬಂಧುವಿನ ಮೂಲಕ ಅಥವಾ ಯಾರೇ ಪಾಲುದಾರನ ಮೂಲಕ ನೇರವಾಗಿ ಅಥವಾ ಪರೋಕ್ಷವಾಗಿ ಮೇಲ್ಪಾಟು ಮಂಡಲಿಯೊಂದಿಗೆ ಮೇಲ್ಪಾಟು ಮಂಡಳಿಯು, ಅಥವಾ ಮೇಲ್ಪಾಟು ಮಂಡಳಿಯು ಮಾಡಿಕೊಂಡಿರುವ ಅಸ್ತಿತ್ವದಲ್ಲಿರುವ ಯಾವುದೇ ಕರಾರಿನಲ್ಲಿ ಯಾವುದೇ ಷೇರು ಅಥವಾ ಆಸಕ್ತಿಯನ್ನು ಹೊಂದಿದ್ದರೆ ಮೇಲ್ಪಾಟು ಮಂಡಳಿಯಲ್ಲಿ ಈ ಮೇಲೆ ಹೇಳಿರುವ ಯಾರಾದರೂ ನಿಯೋಜನೆಯಲ್ಲಿದ್ದರೆ, ಆ ಯಾರಾದರನ್ನು ಮೇಲ್ಪಾಟು ಮಂಡಳಿಯು ನಿಯೋಜನೆ ಮಾಡಿಕೊಂಡಿದ್ದರೆ ಅಥವಾ ಮೇಲ್ಪಾಟು ಮಂಡಲಿಯ ಪರವಾಗಿ ನಿಯೋಜನೆ ಮಾಡಿಕೊಂಡಿದ್ದರೆ; ಅಥವಾ

(ಎಫ್) ಮೇಲ್ಪಾಟು ಮಂಡಳಿಯೊಂದಿಗೆ ಮಾಡಿಕೊಂಡಿರುವ ಅಥವಾ ಯಾವ ನಿಗಮಿತ ನಿಕಾಯದ ಕರಾರಿನಲ್ಲಿ ಮೇಲ್ಪಾಟು ಮಂಡಳಿಯು ಮಾಡಿಕೊಂಡಿರುವ ಅಥವಾ ಮೇಲ್ಪಾಟು ಮಂಡಳಿಯ ಪರವಾಗಿ ಮಾಡಿಕೊಂಡಿರುವ ಅಥವಾ ಕಾರ್ಯದರ್ಶಿಯು ಅಥವಾ ವ್ಯವಸ್ಥಾಪಕನು ಅಥವಾ ಸಂಬಳ ಪಡೆಯುವ ಅಧಿಕಾರಿಯು ಯಾವುದೇ ಷೇರನ್ನು ಅಥವಾ ಹಿತಾಸಕ್ತಿಯನ್ನು ಹೊಂದಿರುವನೋ ಅಥವಾ ಮೇಲೆ ಹೇಳಿರುವ ಯಾರಾದರೂ ಮೇಲ್ಪಾಟು ಮಂಡಳಿಯಲ್ಲಿ ನಿಯೋಜನೆಯಲ್ಲಿದ್ದರೆ, ಮೇಲ್ಪಾಟು ಮಂಡಲಿಯು ನಿಯೋಜನೆ ಮಾಡಿಕೊಂಡಿದ್ದರೆ ಅಥವಾ ಮೇಲ್ಪಾಟು ಮಂಡಲಿಯ ಪರವಾಗಿ ನಿಯೋಜನೆ ಮಾಡಿಕೊಂಡಿದ್ದರೆ ಯಾವುದೇ ನಿಗಮಿತ ನಿಕಾಯದ ಕಾರ್ಯದರ್ಶಿ ಅಥವಾ ವ್ಯವಸ್ಥಾಪಕ ಅಥವಾ ವೇತನ ಪಡೆಯುವ ಇತರ ಅಧಿಕಾರಿಯಾಗಿದ್ದರೆ,

- ಮೇಲ್ಪಾಟು ಮಂಡಲಿಯ ಸದಸ್ಯನಾಗಿ ಆಯ್ಕೆಯಾಗಲು ಅಥವಾ ಸದಸ್ಯನಾಗಿರಲು ಅನರ್ಹಗೊಳ್ಳತಕ್ಕದ್ದು:

ಪರಂತು, ವ್ಯಕ್ತಿಯು, ತಾನು ಕಾಲಕಾಲಕ್ಕೆ ಧಾರಣ ಮಾಡಿದ ಷೇರಿನ ಸ್ವರೂಪ ಮತ್ತುವ್ಯಾಪ್ತಿಯನ್ನು ಸರ್ಕಾರಕ್ಕೆ ತಿಳಿಯಪಡಿಸಿದ್ದರೆ, ಮಂಡಲಿಯೊಂದಿಗೆ ಯಾವ ನಿಗಮಿತ ನಿಕಾಯವು ಕರಾರು ಮಾಡಿಕೊಂಡಿದೆಯೋ ಆ ನಿಗಮಿತ ನಿಕಾಯದಲ್ಲಿ ಅವನು ಷೇರು ಹೊಂದಿದ್ದಾನೆಂಬ ಕಾರಣ ಮಾತ್ರದಿಂದಲೇ (ಇ) ಖಂಡದ ಮೇರೆಗೆ ಅನರ್ಹಗೊಳ್ಳತಕ್ಕದ್ದಲ್ಲ ಅಥವಾ ಮೇಲ್ಪಾಟು ಮಂಡಳಿಯೊಂದಿಗೆ ಮಾಡಿಕೊಂಡಿರುವ, ಮೇಲ್ಪಾಟು ಮಂಡಲಿಯು ಮಾಡಿಕೊಂಡಿರುವ ಅಥವಾ ಮೇಲ್ಪಾಟು ಮಂಡಲಿಯ ಪರವಾಗಿ ಮಾಡಿಕೊಂಡಿರುವ ಅಥವಾ ಅದರ ಪರವಾಗಿ ಯಾವುದೇ ಕರಾರಿನಲ್ಲಿ ಯಾವುದೇ ಷೇರು ಅಥವಾ ಹಿತಾಸಕ್ತಿ ಹೊಂದಿರುವುದಾಗಿ ಅಥವಾ ಮೇಲ್ಪಾಟು ಮಂಡಲಿಯಲ್ಲಿ ನಿಯೋಜನೆಯಲ್ಲಿದ್ದಾನೆಂದು ಅಥವಾ ಮೇಲ್ಪಾಟು ಮಂಡಲಿಯು ನಿಯೋಜನೆ ಮಾಡಿಕೊಂಡಿದೆಯೆಂದು ಅಥವಾ ಮೇಲ್ಪಾಟು ಮಂಡಲಿಯ ಪರವಾಗಿ ನಿಯೋಜನೆ ಮಾಡಲಾಗಿದೆಯೆಂದು ಭಾವಿಸತಕ್ಕದ್ದಲ್ಲ.

(9) ಸರ್ಕಾರವು ಅವಶ್ಯವೆಂದು ಭಾವಿಸುವಂಥ ವಿಚಾರಣೆಯ ತರುವಾಯ ಅಧ್ಯಕ್ಷ ಅಥವಾ ಪದನಿಮಿತ್ತ ಸದಸ್ಯನಲ್ಲದ ಯಾರೇ ಇತರ ಸದಸ್ಯನನ್ನು ಅವನು,-

(ಎ) ಕಾರ್ಯ ನಿರ್ವಹಿಸಲು ನಿರಾಕರಿಸಿದರೆ; ಅಥವಾ

(ಬಿ) ಕಾರ್ಯ ನಿರ್ವಹಿಸಲು ಅಸಮರ್ಥನಾದರೆ; ಅಥವಾ

(ಸಿ) ಮಂಡಲಿಯಲ್ಲಿ ಅವನು ತನ್ನ ಸ್ಥಾನವನ್ನು ಎಷ್ಟರಮಟ್ಟಿಗೆ ದುರುಪಯೋಗಪಡಿಸಿಕೊಂಡಿದ್ದಾನೆಂದರೆ ಮಂಡಲಿಯಲ್ಲಿ ಅವನನ್ನು ಮುಂದುವರಿಸಿದರೆ ಮಂಡಲಿಯ ಹಿತಾಸಕ್ತಿಗೆ ಮಾರಕವಾಗುವಷ್ಟು ದುರುಪಯೋಗಪಡಿಸಿಕೊಂಡಿದ್ದಾನೆಂದು ಸರ್ಕಾರವು ಅಭಿಪ್ರಾಯಪಟ್ಟರೆ; ಅಥವಾ

(ಡಿ) ಸಾಕಷ್ಟು ಕಾರಣಗಳಿಲ್ಲದೆ ಮಂಡಲಿಯ ನಿರಂತರ ಮೂರು ಸಭೆಗಳಿಗೆ ಹಾಜರಾಗಲು ತಪ್ಪಿದ್ದಾನೆಂದು ಸರ್ಕಾರವು ಅಭಿಪ್ರಾಯಪಟ್ಟರೆ; ಅಥವಾ

(ಇ) ಯಾವ [1][ಮುನ್ಸಿಪಲ್ ಏರಿಯಾ][1] ಕ್ಕಾಗಿ ಮೇಲ್ಪಾಟು ಮಂಡಲಿಯನ್ನು ಸ್ಥಾಪಿಸಲಾಗಿದೆಯೋ ಆ ಮುನ್ಸಿಪಲ್ ಏರಿಯಾದ ಎಲ್ಲೆಗಳ ಒಳಗೆ ವಾಸಿಸುವುದು ಕೊನೆಗೊಂಡರೆ; ಅಥವಾ

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಎಫ್) ಅವನ ನೇಮಕಾತಿಯ ತರುವಾಯ (8)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ಅನರ್ಹತೆಗೆ ಗುರಿಯಾಗಿದ್ದಾನೆಂದು ಸರ್ಕಾರವು ಅಭಿಪ್ರಾಯಪಟ್ಟರೆ; ಅಥವಾ

(ಜಿ) ಅವನು ಮೇಲ್ಪಾಟು ಮಂಡಲಿಯಲ್ಲಿ ಮುಂದುವರಿಯಲು ಅನ್ಯಥಾ ಯೋಗ್ಯನಲ್ಲನೆಂದು ಸರ್ಕಾರವು ಅಭಿಪ್ರಾಯಪಟ್ಟರೆ

- ಅವನ ಸ್ಥಾನದಿಂದ ತೆಗೆದುಹಾಕಬಹುದು:

ಪರಂತು, ಸರ್ಕಾರಕ್ಕೆ ತನ್ನ ವಿವರಣೆ ಸಲ್ಲಿಸಲು ಸಂಬಂಧಪಟ್ಟ ಸದಸ್ಯನಿಗೆ ಅವಕಾಶವನ್ನು ಕೊಟ್ಟಿದ್ದ ಹೊರತು, ಈ ಉಪ-ಪ್ರಕರಣದ ಮೇರೆಗೆ ತೆಗೆದುಹಾಕುವಂಥ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(10) ಮೇಲ್ಪಾಟು ಮಂಡಲಿಯು, ಮಂಡಲಿಯ ಕಚೇರಿಯಲ್ಲಿ ಸಭೆ ಸೇರತಕ್ಕದ್ದು ಮತ್ತು ಕಾರ್ಯಕಲಾಪ ನಿರ್ವಹಣೆಗೆ ಸಂಬಂಧಿಸಿದಂತೆ ನಿಯಮಿಸಬಹುದಾದಂಥ ಪ್ರಕ್ರಿಯೆ ನಿಯಮಗಳನ್ನು ಪಾಲಿಸತಕ್ಕದ್ದು.

(11) ಮೇಲ್ಪಾಟು ಮಂಡಲಿಯ ಯಾವುದೇ ಕಾರ್ಯವು, ಮಂಡಲಿಯ ರಚನೆಯಲ್ಲಿನ ಯಾವುದೇ ದೋಷದ ಅಥವಾ ಯಾವುದೇ ಅನರ್ಹತೆಯ ಅಥವಾ ಅವನ ನೇಮಕಾತಿಯಲ್ಲಿ ಅಥವಾ ಚುನಾವಣೆಯಲ್ಲಿ ಯಾವುದೇ ಅಕ್ರಮತೆಯ ಕಾರಣದಿಂದ ಸ್ಥಾನಧಾರಣ ಮಾಡಲು ಅಥವಾ ಅದರಲ್ಲಿ ಮುಂದುವರಿಯಲು ಯಾರೇ ಸದಸ್ಯನು ಹಕ್ಕುಳ್ಳವನಾಗಿರಲಿಲ್ಲ ಎಂಬ ಕಾರಣದ ಮೇಲೆ ಅಥವಾ ಮಂಡಲಿಯ ಯಾರೇ ಸದಸ್ಯನ ಸ್ಥಾನದಲ್ಲಿ ಖಾಲಿ ಆದ ಯಾವುದೇ ಅವಧಿಯಲ್ಲಿ ಅಂಥ ಯಾವುದೇ ಕಾರ್ಯವನ್ನು ಮಾಡಲಾಯಿತೆಂಬ ಕಾರಣದಿಂದ ಅಸಿಂಧುವಾಗಿರುವುದಾಗಿ ಭಾವಿಸತಕ್ಕದ್ದಲ್ಲ.

(12) ಮೇಲ್ಪಾಟು ಮಂಡಲಿಗಾಗಿ ನಿಯಮಿಸಬಹುದಾದಂಥ ಸಿಬ್ಬಂದಿಯನ್ನು [1][ಪೌರಾಡಳಿತ ನಿರ್ದೇಶಕ][1]ರು, [2][ಕರ್ನಾಟಕ ಮುನ್ಸಿಪಲ್ ಆಡಳಿತ ಸೇವೆ][2] ಯ ಸಿಬ್ಬಂದಿ ಪೈಕಿಯಿಂದ ನೇಮಕ ಮಾಡತಕ್ಕದ್ದು. ಮಂಡಲಿಯು ಸರ್ಕಾರದ ಮಂಜೂರಾತಿ ಪಡೆದು ಅವಶ್ಯವೆಂದು ತಾನು ಭಾವಿಸುವಷ್ಟು ಇತರ ಸಿಬ್ಬಂದಿಯನ್ನು ನೇಮಕ ಮಾಡಬಹುದು.

1. 2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 1973ರ ಕರ್ನಾಟಕ ಕಾನೂನು ಆದೇಶದ ಅಡವಳಿಕೆಗಳ ಮೂಲಕ 01.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(13) ಮೇಲ್ಪಾಟು ಮಂಡಲಿಯು, ಈ ಅಧ್ಯಾಯದ ಮೇರೆಗಿನ ಯಾವುದೇ ಉದ್ದೇಶವನ್ನು ಕಾರ್ಯಗತಗೊಳಿಸಲು ಅವಶ್ಯವೆಂದು ಅಥವಾ ವಿಹಿತವೆಂದು ಪರ್ಯಾಲೋಚಿಸಬಹುದಾದಂಥ ಎಲ್ಲ ಕರಾರುಗಳನ್ನು ಮಾಡಿಕೊಳ್ಳಬಹುದು ಹಾಗೂ ನೆರವೇರಿಸಬಹುದು ಮತ್ತು ಅಧ್ಯಕ್ಷನು ಮಂಡಲಿಯ ಪರವಾಗಿ ಮತ್ತು ನಿಯಮಿಸಬಹುದಾದಂಥ ಷರತ್ತುಗಳನ್ನು ಪಾಲಿಸಿದ ತರುವಾಯ ಮತ್ತು ಅಂಥ ರೀತಿಯಲ್ಲಿ ಪ್ರತಿಯೊಂದು ಕರಾರನ್ನು ಮಾಡಿಕೊಳ್ಳತಕ್ಕದ್ದು ಮತ್ತು ಈ ಉಪ-ಪ್ರಕರಣದಲ್ಲಿ ಮತ್ತು ಈ ಬಗ್ಗೆ ರಚಿಸಿದನಿಯಮಗಳಲ್ಲಿ ಉಪಬಂಧಿಸಿದ ರೀತಿಯಲ್ಲಿ ಮಾಡಿಕೊಂಡಿರದ ಕರಾರಿಗೆ ಮಂಡಲಿಯು ಬದ್ಧವಾಗಿರತಕ್ಕದ್ದಲ್ಲ.

(14) ಅಭಿವೃದ್ಧಿ ಯೋಜನೆಗಳನ್ನು ತಯಾರಿಸುವುದು ಮತ್ತು ಅವುಗಳನ್ನು ಕಾರ್ಯಗತಗೊಳಿಸುವುದು ಮತ್ತು [1][ಮುನ್ಸಿಪಲ್ ಏರಿಯಾ][1] ದ ಮೇಲ್ಪಾಟಿನ ಉದ್ದೇಶಗಳಿಗಾಗಿ ಸರ್ಕಾರವು ಕಾಲಕಾಲಕ್ಕೆ ನಿರ್ದೇಶಿಸುವಂಥ ಇತರ ಪ್ರಕಾರ್ಯಗಳನ್ನು ನೆರವೇರಿಸುವುದು ಮೇಲ್ಪಾಟು ಮಂಡಲಿಯ ಕರ್ತವ್ಯವಾಗಿರತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(15) ಸರ್ಕಾರವು ಅವಶ್ಯವೆಂದು ಭಾವಿಸುವಂಥ ಎಲ್ಲ ಅಂಥ ಮೇಲ್ಪಾಟು ಯೋಜನೆಗಳನ್ನು ಮೇಲ್ಪಾಟು ಮಂಡಲಿಯು ಕಾರ್ಯಗತಗೊಳಿಸಿದೆ ಮತ್ತು [1][ಮುನ್ಸಿಪಲ್ ಏರಿಯಾ][1] ದ ಮೇಲ್ಪಾಟಿಗಾಗಿ ಅವಶ್ಯವಾಗಬಹುದಾದ ಇನ್ನಷ್ಟು ಕ್ರಮಗಳನ್ನು ಮುನ್ಸಿಪಲ್ ಕೌನ್ಸಿಲ್ ಅನುಕೂಲಕರವಾಗಿ ಕೈಗೊಳ್ಳಬಹುದು ಎಂದು ಸರ್ಕಾರಕ್ಕೆ ಮನದಟ್ಟಾದಾಗ, ಸರ್ಕಾರವು ಅಧಿಸೂಚನೆಯ ಮೂಲಕ ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸುವ ದಿನಾಂಕದಿಂದ ಮೇಲ್ಪಾಟು ಮಂಡಲಿಯು ವಿಸರ್ಜಿತವಾಗಿದೆಯೆಂದು ಘೋಷಿಸಬಹುದು. ಅಂಥ ಪ್ರತಿಯೊಂದು ಅಧಿಸೂಚನೆಯು ಮಂಡಲಿಯ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಪ್ರಾಪ್ತಿ, ಮಂಡಲಿಯಲ್ಲಿ ನಿಹಿತವಾಗಿರುವ ಸ್ವತ್ತಿನ ವಿಲೆ ಅಥವಾ ನಿರ್ವಹಣೆ, ಅಪೂರ್ಣ ಕಾಮಗಾರಿಗಳನ್ನು ಪೂರ್ಣಗೊಳಿಸಲು ಮತ್ತು ಮಂಡಲಿಯ ವಿಸರ್ಜನೆಗೆ ಹಾಗೂ ಅದರ ವ್ಯವಹಾರಗಳನ್ನು ಸಮಾಪ್ತಗೊಳಿಸುವುದಕ್ಕೆ ಸಂಬಂಧಿಸಿದ ಇತರ ಎಲ್ಲ ವಿಷಯಗಳಿಗೆ ಸಂಬಂಧಪಟ್ಟ ನಿಬಂಧನೆಗಳನ್ನು ಒಳಗೊಂಡಿರತಕ್ಕದ್ದು:

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಪರಂತು, ಮಂಡಲಿಯ ವಿಸರ್ಜನೆಯ ದಿನಾಂಕದಂದು ಅದರಲ್ಲಿ ನಿಹಿತವಾಗಿದ್ದ ಹಾಗೂ ಸದರಿ ಅಧಿಸೂಚನೆಯಲ್ಲಿ ಸ್ಪಷ್ಟವಾಗಿ ಸರ್ಕಾರಕ್ಕೆ ಕಾಯ್ದಿರಿಸಿದ ಎಲ್ಲ ಸ್ಥಿರ ಸ್ವತ್ತುಗಳು ಅನಂತರ ಮುನ್ಸಿಪಲ್ ಕೌನ್ಸಿಲ್‌ನಲ್ಲಿ ನಿಹಿತವಾಗತಕ್ಕದ್ದು.

174. ಮೇಲ್ಪಾಟು ಮಂಡಲಿಯ ಸ್ವತ್ತು, ಹಣಕಾಸು, ಅಧಿಕಾರಗಳು ಇತ್ಯಾದಿ.- (1) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧ್ಯಾಯದ ಉದ್ದೇಶಗಳಿಗಾಗಿ ಹಾಗೂ ಅದು ವಿಧಿಸಬಹುದಾದ ಪರಿಮಿತಿಗಳಿಗೆ ಮತ್ತು ಷರತ್ತುಗಳಿಗೊಳಪಟ್ಟು ಮತ್ತು ಈ ಅಧ್ಯಾಯದ ಉಪಬಂಧಗಳಿಗೊಳಪಟ್ಟು, ಸರ್ಕಾರವು ಕಾಲಕಾಲಕ್ಕೆ, ಸರ್ಕಾರಕ್ಕೆ ಅಥವಾ ಮುನ್ಸಿಪಲ್ ಕೌನ್ಸಿಲ್‌ಗೆ ಸೇರಿದ ಯಾವುದೇ ಸ್ಥಿರ ಸ್ವತ್ತನ್ನು ಮೇಲ್ಪಾಟು ಮಂಡಲಿಗೆ ವರ್ಗಾಯಿಸಬಹುದು ಮತ್ತು ಅದರಲ್ಲಿ ನಿಹಿತಗೊಳಿಸಬಹುದು:

ಪರಂತು, ಸರ್ಕಾರವು ಯಾವುವಾದರೂ ನಿಬಂಧನೆಗಳನ್ನು ನಿರ್ಧರಿಸಿದರೆ, ಅವುಗಳ ಪ್ರಕಾರ ಅಂಥ ಯಾವುದೇ ಸ್ಥಿರ ಸ್ವತ್ತನ್ನು, ಸಂದರ್ಭಾನುಸಾರ ಸರ್ಕಾರವು ಅಥವಾ ಸರ್ಕಾರದಿಂದ ಮುಂಚಿತವಾಗಿಯೇ ಮಂಜೂರಾತಿ ಪಡೆದು ಮುನ್ಸಿಪಲ್ ಕೌನ್ಸಿಲ್ ಯಾವುದೇ ಕಾಲದಲ್ಲಿ ಮರಳಿ ಪಡೆಯಬಹುದು.

(2) ಮೇಲ್ಪಾಟು ಮಂಡಲಿಯು ತನ್ನದೇ ಆದ ನಿಧಿಯನ್ನು ಹೊಂದಿರತಕ್ಕದ್ದು ಮತ್ತು ಎಲ್ಲಾ ಬಾಡಿಗೆಗಳನ್ನು ಲಾಭಗಳನ್ನು ಮತ್ತು ಎಲ್ಲಾ ಭೂಮಿಗಳ, ಕಟ್ಟಡಗಳ ಹಾಗೂ ಮಂಡಲಿಯಲ್ಲಿ ನಿಹಿತವಾಗುವ ಅಥವಾ ಅದು ಆರ್ಜಿಸಿದ ಇತರ ಸ್ವತ್ತಿನ ಮಾರಾಟದ ಎಲ್ಲ ಉತ್ಪತ್ತಿಗಳನ್ನು ಅದಕ್ಕೆ ಜಮೆ ಮಾಡತಕ್ಕದ್ದು ಮತ್ತು ಮಂಡಲಿಯು ಅದರಿಂದ ಎಲ್ಲ ಸಂದಾಯಗಳನ್ನು ಮಾಡತಕ್ಕದ್ದು. ಸದರಿ ನಿಧಿಗೆ,-

(ಎ) ಈ ಅಧ್ಯಾಯದ ಉದ್ದೇಶಗಳಿಗಾಗಿ ಮಂಡಲಿಯ ವಿಲೆಗಾಗಿ ಕಾಲಕಾಲಕ್ಕೆ ಸರ್ಕಾರವು ಒದಗಿಸಬಹುದಾದಂಥ ಮೊತ್ತಗಳನ್ನು;

(ಬಿ) ಮಂಡಲಿಯು ಕೈಗೊಂಡಿರುವ ಮೇಲ್ಪಾಟು ಯೋಜನೆಗಳ ಪರಿಣಾಮವಾಗಿ ಪ್ರಾಪ್ತವಾಗಿರುವ ಅಥವಾ ಪ್ರಾಪ್ತವಾಗುವ ಸಂಭವವಿರುವ ಮುನ್ಸಿಪಾಲಿಟಿ ಸಂಪನ್ಮೂಲಗಳಿಗೆ ನೆರವನ್ನು ಅಥವಾ ಸೇರಿಸುವುದನ್ನು ಸರ್ಕಾರವು ಪರ್ಯಾಲೋಚಿಸಿದ ಮೇಲೆ, ಕಾಲಕಾಲಕ್ಕೆ ಸರ್ಕಾರವು ಮುನ್ಸಿಪಲ್ ನಿಧಿಯಿಂದ ಕೊಡಬೇಕೆಂದು ತಿಳಿಸುವಂಥ ವಂತಿಗೆಗಳನ್ನು; ಮತ್ತು

(ಸಿ) ಈ ಅಧಿನಿಯಮದ ಉಪಬಂಧಗಳ ಮೇರೆಗೆ ಮಂಡಲಿಗೆ ಸಂದಾಯ ಮಾಡಿದ ಅಥವಾ ಮಂಡಲಿಯು ವಸೂಲಿ ಮಾಡಿದ ಬೆಟರ್ ಮೆಂಟ್ ಫೀಜನ್ನು ಅಥವಾ ಬಾಕಿಯಿರುವ ಇತರ ಮೊತ್ತಗಳನ್ನು

- ಸಹ ಜಮೆ ಮಾಡತಕ್ಕದ್ದು.

(3) ಮೇಲ್ಪಾಟು ಮಂಡಲಿಯು, ಪ್ರತಿಯೊಂದು ವರ್ಷದಲ್ಲಿ ಅದು ಮುಂಬರುವ ವರ್ಷದಲ್ಲಿ ಉದ್ದೇಶಿಸಿದಂಥ ಸಂಭವನೀಯ ಸ್ವೀಕೃತಿಗಳು ಮತ್ತು ವೆಚ್ಚವನ್ನು ತೋರಿಸುವ ಬಜೆಟ್ ನ್ನು ತಯಾರಿಸತಕ್ಕದ್ದು ಹಾಗೂ ಬಜೆಟ್ ನ ಒಂದು ಪ್ರತಿಯನ್ನು, ಈ ಸಂಬಂಧದಲ್ಲಿ ಸರ್ಕಾರವು ನಿಗದಿಪಡಿಸಬಹುದಾದಂಥ ದಿನಾಂಕಕ್ಕೆ ಮುಂಚೆ, ಸರ್ಕಾರದ ಅನುಮೋದನೆಗಾಗಿ ಒಪ್ಪಿಸತಕ್ಕದ್ದು. ಮಂಡಲಿಯ ಕರ್ತವ್ಯಗಳನ್ನು ನಿರ್ವಹಿಸಲು ಹಾಗೂ ಕಾರ್ಯಾರ್ಥ ಶಿಲ್ಕಿನ ನಿರ್ವಹಣೆಗಾಗಿ ಸರ್ಕಾರವು ಸಮ್ಮತಿಸಬಹುದಾದಷ್ಟು ಹಣಕಾಸಿನ ವ್ಯವಸ್ಥೆಗೆ ಆ ಬಜೆಟ್ ನಲ್ಲಿವೆ ಎಂದು ಸರ್ಕಾರವು ಅಭಿಪ್ರಾಯಪಡುವಷ್ಟು ಸಮರ್ಪಕ ಅವಕಾಶ ಕಲ್ಪಿಸಿರತಕ್ಕದ್ದು. ಸರ್ಕಾರವು ಸೂಕ್ತವೆಂದು ತಾನು ಭಾವಿಸುವಂಥ ಮಾರ್ಪಾಡುಗಳಿಗೊಳಪಟ್ಟು ಬಜೆಟ್ ನ್ನು ಅನುಮೋದಿಸಬಹುದು.

(4) ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಮೇಲ್ಪಾಟು ಮಂಡಲಿಯು ಅದರ ಆದಾಯ ಮತ್ತು ವೆಚ್ಚಗಳ ಸರಿಯಾದ ಲೆಕ್ಕಪತ್ರಗಳನ್ನು ಇಡತಕ್ಕದ್ದು. ಸರ್ಕಾರವು ನಿರ್ದೇಶಿಸಬಹುದಾದಂಥ ಅಧಿಕಾರಿಗಳಿಂದ ಲೆಕ್ಕಪರಿಶೋಧನೆಗೆ ಅಂಥ ಲೆಕ್ಕಪತ್ರಗಳು ಒಳಪಡತಕ್ಕದ್ದು.

(5) ಮುನ್ಸಿಪಲ್ ಕೌನ್ಸಿಲ್‌ನಲ್ಲಿ ನಿಹಿತವಾಗಿರುವ, ಈಗಿರುವ ಸಾರ್ವಜನಿಕ ರಸ್ತೆಯ ಅಥವಾ ಇತರ ಇಡೀ ಭೂಮಿಯನ್ನು ಅಥವಾ ಅದರ ಯಾವುದೇ ಭಾಗವನ್ನು ಯಾವುದೇ ಮೇಲ್ಪಾಟಿನ ಯೋಜನೆಯ ಮೇರೆಗೆ, ಮೇಲ್ಪಾಟು ಮಂಡಲಿಯು ರೂಪಿಸಬೇಕಾದ, ಮಾರ್ಪಾಟು ಮಾಡಬೇಕಾದ, ಅಗಲಗೊಳಿಸಬೇಕಾದ, ಮಾರ್ಗಪಲ್ಲಟಗೊಳಿಸಬೇಕಾದ, ಎತ್ತರಿಸಬೇಕಾದ, ಪುನಃ ವ್ಯವಸ್ಥೆಗೊಳಿಸಬೇಕಾದ ಅಥವಾ ಪುನರ್ ನಿರ್ಮಿಸಬೇಕಾದ ಬೀದಿಯ ಯಾವುದೇ ಭಾಗದ ನಿವೇಶನದಲ್ಲಿ ಸೇರಿಸಿದಾಗಲೆಲ್ಲಾ, ಅಂಥ ಈಗಿರುವ ಬೀದಿಯ ಅಥವಾ ಸಂದರ್ಭಾನುಸಾರ ಇತರ ಇಡೀ ಭೂಮಿಯು ಅಥವಾ ಅದರ ಭಾಗವು (ಇನ್ನು ಮುಂದೆ ``ಬೇಕಾಗಿರುವ ಭಾಗ'' ಎಂದು ಉಲ್ಲೇಖಿಸಲಾಗಿದೆ). ಆ ಬೀದಿಯ ಭಾಗದಲ್ಲಿ ಮೇಲೆ ಹೇಳಿದಂತೆ ಮಾಡಲು ಮಂಡಲಿಗೆ ಬೇಕಾಗಿದೆ ಎಂದು ಮುನ್ಸಿಪಲ್ ಕೌನ್ಸಿಲ್‌ಗೆ ಮಂಡಲಿಯು ನೋಟೀಸನ್ನು ಕೊಡತಕ್ಕದ್ದು ಮತ್ತು ಆ ತರುವಾಯ ಬೇಕಾಗಿರುವ ಆ ಭಾಗವು (8)ನೇ ಉಪ-ಪ್ರಕರಣದ ಉಪಬಂಧಗಳಿಗೊಳಪಟ್ಟು ಮಂಡಲಿಯಲ್ಲಿ ನಿಹಿತವಾಗತಕ್ಕದ್ದು:

ಪರಂತು, ಈ ಉಪ-ಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ ಯಾವುದೇ ಮುನ್ಸಿಪಲ್ ಚರಂಡಿಯಲ್ಲಿ ಅಥವಾ ಕಾಮಗಾರಿಯಲ್ಲಿ ಅಥವಾ ಅದರ ಮೇಲೆ ಈ ಅಧಿನಿಯಮದ ಮೇರೆಗೆ ಮುನ್ಸಿಪಲ್ ಕೌನ್ಸಿಲ್ ಇರುವ ಹಕ್ಕುಗಳಿಗೆ ಅಥವಾ ಅಧಿಕಾರಗಳಿಗೆ ಬಾಧಕವಾಗುವುದೆಂದು ಭಾವಿಸತಕ್ಕದ್ದಲ್ಲ.

(6) ಯಾವುದೇ [1][ಮುನ್ಸಿಪಲ್ ಏರಿಯಾ][1]ಕ್ಕೆ ಸಂಬಂಧಪಟ್ಟಂತೆ ಮೇಲ್ಪಾಟು ಮಂಡಲಿಯು ಸ್ಥಾಪನೆಯಾದ ಮೇಲೆ, ಮತ್ತು ಅದು ವಿಸರ್ಜಿತವಾಗುವವರೆಗೆ, 155 ರಿಂದ 169ರ ವರೆಗಿನ (ಎರಡೂ ಪ್ರಕರಣಗಳು ಒಳಗೊಂಡಂತೆ) ಪ್ರಕರಣಗಳ ಮೇರೆಗಿನ ಮುನ್ಸಿಪಲ್ ಕೌನ್ಸಿಲ್‌ನ ಎಲ್ಲಾ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಮೇಲ್ಪಾಟು ಮಂಡಲಿಯು ಮತ್ತು ಅದರ ಅಧ್ಯಕ್ಷನು ಚಲಾಯಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು ಮತ್ತು ಸದರಿ ಪ್ರಕರಣಗಳಲ್ಲಿ ಮುನ್ಸಿಪಲ್ ಕೌನ್ಸಿಲ್, ಮುನ್ಸಿಪಲ್ ಕಮಿಷನರ್ ಗೆ ಮತ್ತು ಚೀಫ್ ಆಫೀಸರ್ ಗೆ ಮಾಡಿದ ಉಲ್ಲೇಖಗಳನ್ನು ಮೇಲ್ಪಾಟು ಮಂಡಲಿಗೆ ಮತ್ತು ಅದರ ಅಧ್ಯಕ್ಷರಿಗೆ ಮಾಡಿದ ಉಲ್ಲೇಖಗಳೆಂದು ಓದಿಕೊಳ್ಳತಕ್ಕದ್ದು:

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಪರಂತು, 155ನೇ ಪ್ರಕರಣದ ಮೇರೆಗೆ ಮಂಡಲಿಯು ತಯಾರಿಸಿದ ಪ್ರತಿಯೊಂದು ಯೋಜನೆಯನ್ನು, ಮುನ್ಸಿಪಲ್ ಕೌನ್ಸಿಲ್‌ಗೆ ಕಳುಹಿಸಿಕೊಡತಕ್ಕದ್ದು ಮತ್ತು ಯೋಜನೆಯನ್ನು ಕಳುಹಿಸಿಕೊಟ್ಟ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಮಂಡಲಿಯು ಸ್ವೀಕರಿಸಿದ ಕೌನ್ಸಿಲ್‌ನ ಅಭಿಪ್ರಾಯಗಳನ್ನು, ಮಂಡಲಿಯು ತನ್ನ ಅಭಿಪ್ರಾಯಗಳೊಂದಿಗೆ 158ನೇ ಪ್ರಕರಣದ ಮೇರೆಗೆ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು:

ಮತ್ತು ಪರಂತು, ಮುನ್ಸಿಪಲ್ ಕೌನ್ಸಿಲ್‌ನ ಸಹಮತಿ ಇಲ್ಲದೆ 170ನೇ ಪ್ರಕರಣದ ಮೇರೆಗೆ ಯಾವುದೇ ಬಡಾವಣೆಗೆ ಅಥವಾ ಲೇಔಟ್ ಗೆ ಮಂಡಲಿಯು ಮಂಜೂರಾತಿ ನೀಡತಕ್ಕದ್ದಲ್ಲ ಮತ್ತು ಮಂಡಲಿಯ ಹಾಗೂ ಮುನ್ಸಿಪಲ್ ಕೌನ್ಸಿಲ್‌ನ ನಡುವೆ ಭಿನ್ನಾಭಿಪ್ರಾಯ ಬಂದರೆ ಸರ್ಕಾರದ ನಿರ್ಣಯವು ಅಂತಿಮವಾಗಿರತಕ್ಕದ್ದು.

(7) ಸರ್ಕಾರವು ಅಧಿಸೂಚನೆಯ ಮೂಲಕ,-

(ಎ) ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಮತ್ತು ಅಂಥ ಅವಧಿಗಾಗಿ ಮತ್ತು ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನಿರ್ಬಂಧಗಳಿಗೆ ಹಾಗೂ ಮಾರ್ಪಾಡುಗಳಿಗೊಳಪಟ್ಟು,-

(i)ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಹಾಗೂ ಬೈಲಾಗಳ ಮೇರೆಗೆ ಮುನ್ಸಿಪಲ್ ಕೌನ್ಸಿಲ್‌ನ ಅಥವಾ ಅದರ ಸಮಿತಿಯ ಅಧಿಕಾರಗಳನ್ನು ಹಾಗೂ ಪ್ರಕಾರ್ಯಗಳನ್ನು ಮಂಡಲಿಯು ಚಲಾಯಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು; ಮತ್ತು

(ii) ಈ ಅಧಿನಿಯಮದ ಮೇರೆಗೆ ಮುನ್ಸಿಪಲ್ ಕೌನ್ಸಿಲ್‌ನ ಮುನ್ಸಿಪಲ್ ಕಮಿಷನರ್ ಅಥವಾ ಚೀಫ್‌ಆಫೀಸರ್ ನ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಮಂಡಲಿಯ ಅಧ್ಯಕ್ಷನು ಚಲಾಯಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು

- ಎಂಬುದಾಗಿ ಸಹ ಘೋಷಿಸಬಹುದು:

ಪರಂತು, ಅಂಥ ಘೋಷಣೆಯನ್ನು ಮಾಡುವುದಕ್ಕೂ ಮೊದಲು ಮುನ್ಸಿಪಲ್ ಕೌನ್ಸಿಲ್ ನೊಂದಿಗೆ ಸಮಾಲೋಚಿಸತಕ್ಕದ್ದು.

(ಬಿ) (ಎ) ಖಂಡದ ಮೇರೆಗೆ ಘೋಷಣೆಯನ್ನು ಮಾಡಿದ ಮೇಲೆ, ಈ ಅಧಿನಿಯಮದ ಇತರ ಯಾವುದೇ ಉಪಬಂಧದಲ್ಲಿ ಏನೇ ಒಳಗೊಂಡಿದ್ದರೂ, ಮುನ್ಸಿಪಲ್ ಕೌನ್ಸಿಲ್ ಅಥವಾ ಅದರ ಯಾವುದೇ ಸಮಿತಿ ಅಥವಾ ಮುನ್ಸಿಪಲ್ ಕೌನ್ಸಿಲ್‌ನ ಮುನ್ಸಿಪಲ್ ಕಮಿಷನರ್ ನು ಅಥವಾ ಚೀಫ್ ಆಫೀಸರ್ ನು, ಅಂಥ ಘೋಷಣೆಯ ಮೂಲಕ ಸಂದರ್ಭಾನುಸಾರ ಮಂಡಳಿಗೆ ಅಥವಾ ಮಂಡಲಿಯ ಅಧ್ಯಕ್ಷನಿಗೆ ಪ್ರದತ್ತವಾದ ಅಥವಾ ವಿಧಿಸಿದ ಅಧಿಕಾರಗಳನ್ನು ಅಥವಾ ಪ್ರಕಾರ್ಯಗಳನ್ನು ಚಲಾಯಿಸುವುದು ಅಥವಾ ನಿರ್ವಹಿಸುವುದು ಸಕ್ಷಮವಾಗಿರತಕ್ಕದ್ದಲ್ಲ.

(8) (ಎ) ಸರ್ಕಾರವು ಮೇಲ್ಪಾಟು ಮಂಡಲಿಯಿಂದ ನಿರ್ಮಿತವಾದ ಯಾವುದೇ ಬೀದಿಯನ್ನು ಯಾವುದೇ ಮೇಲ್ಪಾಟು ಯೋಜನೆಗಳ ನಕ್ಷೆಗಳಲ್ಲಿ ತೋರಿಸಿರುವ ರೀತಿಯಲ್ಲಿ ಸರಿಯಾಗಿ ಮಟ್ಟಗೊಳಿಸಲಾಗಿದೆ, ನೆಲಗಟ್ಟು ಮಾಡಲಾಗಿದೆ, ಜಲ್ಲಿ ಹಾಕಲಾಗಿದೆ, ಚಪ್ಪಡಿ ಹಾಸಲಾಗಿದೆ, ಮಾರ್ಗ ನಿರ್ಮಿಸಲಾಗಿದೆ, ಚರಂಡಿ ಹಾಗೂ ಗ್ರಾಮಸಾರ ಚರಂಡಿ ವ್ಯವಸ್ಥೆ ಮಾಡಲಾಗಿದೆ ಮತ್ತು ಮಂಡಲಿಯು ದೀಪ ವ್ಯವಸ್ಥೆಗೆ ಅವಶ್ಯವೆಂದು ಪರಿಗಣಿಸಿದ ಹಾಗೂ ಮಂಡಲಿಯು ಒದಗಿಸಬೇಕಾದಂಥ ದೀಪಗಳನ್ನು, ದೀಪದ ಸ್ತಂಭಗಳನ್ನು ಮತ್ತು ಇತರ ಸಲಕರಣೆಗಳನ್ನು ಒದಗಿಸಲಾಗಿದೆ ಎಂದು ಸರ್ಕಾರಕ್ಕೆ ಮನವರಿಕೆಯಾದರೆ, ಮುನ್ಸಿಪಲ್ ಕೌನ್ಸಿಲ್‌ನೊಂದಿಗೆ ಸಮಾಲೋಚಿಸಿದ ತರುವಾಯ ಸರ್ಕಾರವು, ಅಂಥ ಬೀದಿಯನ್ನು ಸಾರ್ವಜನಿಕ ಬೀದಿ ಎಂದು ಘೋಷಿಸತಕ್ಕದ್ದು ಮತ್ತು ಆ ತರುವಾಯ ಅಂಥ ಬೀದಿಯು ಸಂದರ್ಭಾನುಸಾರ ಮುನ್ಸಿಪಲ್ ಕೌನ್ಸಿಲ್‌ನಲ್ಲಿ ನಿಹಿತವಾಗತಕ್ಕದ್ದು ಅಥವಾ ಪುನರ್ ನಿಹಿತವಾಗತಕ್ಕದ್ದು ಮತ್ತು ಮುನ್ಸಿಪಲ್ ಕೌನ್ಸಿಲ್ ಆ ತರುವಾಯ ಅಂಥ ಬೀದಿಯನ್ನು ನಿರ್ವಹಿಸತಕ್ಕದ್ದು, ಸುಸ್ಥಿತಿಯಲ್ಲಿಡತಕ್ಕದ್ದು, ದೀಪ ಒದಗಿಸತಕ್ಕದ್ದು ಹಾಗೂ ಸ್ವಚ್ಛಗೊಳಿಸತಕ್ಕದ್ದು.

(ಬಿ) [1][ಮುನಿಸಿಪಲ್ ಏರಿಯಾ][1]ದ ಯಾವುದೇ ಭಾಗದಲ್ಲಿ ವಾಯು ಸಂಚಾರಕ್ಕಾಗಿ ಕಾಯ್ದಿರಿಸಿದ ಮತ್ತು ಸುಧಾರಣಾ ಮಂಡಲಿಯು ಕಾರ್ಯಗತಗೊಳಿಸಿದ ಯಾವುದೇ ಮೇಲ್ಪಾಟು ಯೋಜನೆಯ ಭಾಗವಾಗಿ ಒದಗಿಸಲಾದ ಯಾವುದೇ ತೆರದ ಸ್ಥಳವನ್ನು, ಪೂರ್ಣಗೊಂಡನಂತರ, ಮುನ್ಸಿಪಲ್ ಕೌನ್ಸಿಲ್‌ನ ವೆಚ್ಚಗಳಿಂದ ಅದನ್ನು ನಿರ್ವಹಿಸಿಕೊಂಡು ಬರಲು ಮುನ್ಸಿಪಲ್ ಕೌನ್ಸಿಲ್‌ಗೆ ವರ್ಗಾಯಿಸತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(9) ಮೇಲ್ಪಾಟು ಮಂಡಲಿಯ ಮತ್ತು ಮುನ್ಸಿಪಲ್ ಕೌನ್ಸಿಲ್‌ನ ನಡುವೆ ಯಾವುದೇ ವಿಷಯದ ಬಗ್ಗೆ ಉದ್ಭವಿಸುವಂಥ ಯಾವುದೇ ವಿವಾದವನ್ನು ಸರ್ಕಾರವು ನಿರ್ಧರಿಸತಕ್ಕದ್ದು, ಅದರ ತೀರ್ಮಾನವು ಅಂತಿಮವಾಗಿರತಕ್ಕದ್ದು.

ಅಧ್ಯಾಯ-IX
ಅಧಿಕಾರಗಳು ಮತ್ತು ಅಪರಾಧಗಳು
ರಸ್ತೆಗಳಿಗೆ ಸಂಬಂಧಿಸಿದಂತೆ ಅಧಿಕಾರಗಳು

175. ರಸ್ತೆ ಇತ್ಯಾದಿಗಳ ಬಗ್ಗೆ ಅಧಿಕಾರ.- (1) ಹೊಸ ಸಾರ್ವಜನಿಕ ಬೀದಿಗಳನ್ನು ರೂಪಿಸಲು ಹಾಗೂ ನಿರ್ಮಿಸಲು ಮತ್ತು ಅವುಗಳಿಗೆ ಸಹಾಯಕ ಸುರಂಗ ಮಾರ್ಗಗಳನ್ನು ಮತ್ತು ಇತರ ಕಾಮಗಾರಿಗಳನ್ನು ನಿರ್ಮಿಸಲು ಮತ್ತು ಅಂಥ ಯಾವುದೇ ಬೀದಿಗಳನ್ನು ಅಗಲ ಮಾಡಲು, ತೆರೆಯಲು, ವಿಸ್ತರಿಸಲು ಅಥವಾ ಅನ್ಯಥಾ ಮೇಲ್ಪಾಟುಗೊಳಿಸಲು ಮತ್ತು ಅಂಥ ಯಾವುವೇ ಬೀದಿಗಳನ್ನು ತಿರುಗಿಸಲು, ಮಾರ್ಗಪಲ್ಲಟಗೊಳಿಸಲು, ಮುಂದುವರಿಸದಿರಲು ಅಥವಾ ಮುಚ್ಚಲು ಮತ್ತು 72ನೇ ಪ್ರಕರಣದ (1)ನೇ, (2)ನೇ ಮತ್ತು (3)ನೇ ಉಪಪ್ರಕರಣಗಳ ಉಪಬಂಧಗಳಿಗೊಳಪಟ್ಟು, ಯಾವುದೇ ಸಾರ್ವಜನಿಕ ರಸ್ತೆಗಾಗಿ ಅಥವಾ ಈ ಅಧಿನಿಯಮದ ಯಾವುದೇ ಇತರ ಉದ್ದೇಶಕ್ಕಾಗಿ ಅಗತ್ಯವಿಲ್ಲದಿರಬಹುದಾದ, ಮುನ್ಸಿಪಲ್ ಕೌನ್ಸಿಲ್ ಅಂಥ ಬೀದಿಗಳ ಉದ್ದೇಶಗಳಿಗಾಗಿ ಅಲ್ಲಿಯವರೆಗೆ ಉಪಯೋಗಿಸಿದ ಅಥವಾ ಆರ್ಜಿಸಿದಂಥ ಭೂಮಿಯನ್ನು ಬಾಡಿಗೆಗೆ ಕೊಡುವುದು ಅಥವಾ ಮಾರಾಟ ಮಾಡುವುದು ಮುನ್ಸಿಪಲ್ ಕೌನ್ಸಿಲ್‌ಗೆ ಕಾನೂನು ಸಮ್ಮತವಾಗಿರತಕ್ಕದ್ದು:

ಪರಂತು, ಮುನ್ಸಿಪಲ್ ಕೌನ್ಸಿಲ್‌ನಲ್ಲಿ ನಿಹಿತವಾಗುವ ಯಾವುದೇ ಸಾರ್ವಜನಿಕ ಬೀದಿಯನ್ನು, ಮುನ್ಸಿಪಲ್ ಕೌನ್ಸಿಲ್, ಮಾರ್ಗಪಲ್ಲಟಗೊಳಿಸುವ, ಮುಂದುವರಿಸದಿರುವ ಅಥವಾ ಮುಚ್ಚುವ ತನ್ನ ಉದ್ದೇಶವನ್ನು ಪ್ರಕಟಿಸುವುದಕ್ಕೂ ಮುಂಚೆಯೇ ಮತ್ತು ಆಕ್ಷೇಪಣೆಗಳನ್ನು ಕರೆಯುವುದಕ್ಕೂ ಮುಂಚೆಯೇ ಮತ್ತು ಸರ್ಕಾರದ ಅಥವಾ ಸರ್ಕಾರವು ಅಧಿಕೃತಗೊಳಿಸಬಹುದಾದಂಥ ಇತರ ಅಧಿಕಾರಿಯ ಅನುಮೋದನೆಯನ್ನು ಪಡೆಯುವುದಕ್ಕೂ ಮೊದಲು ಮಾರ್ಗಪಲ್ಲಟಗೊಳಿಸತಕ್ಕದ್ದಲ್ಲ, ಮುಂದುವರಿಸದಿರತಕ್ಕದ್ದಲ್ಲ ಅಥವಾ ಮುಚ್ಚತಕ್ಕದ್ದಲ್ಲ. ಸರ್ಕಾರಕ್ಕೆ ಅಥವಾ ಅಂಥ ಇತರ ಅಧಿಕಾರಿಗೆ ಕೌನ್ಸಿಲ್‌ನ ನಿರ್ಣಯದ ಪ್ರತಿಯನ್ನು ಮತ್ತು ಅದರ ಬಗೆಗಿನ ಆಕ್ಷೇಪಣೆಗಳನ್ನು ಕಳುಹಿಸತಕ್ಕದ್ದು.

(2) ಯಾವುದೇ ಸಾರ್ವಜನಿಕ ಬೀದಿಯನ್ನು ಹಾಕುವಾಗ ಅಥವಾ ರಚಿಸುವಾಗ ಅಥವಾ ಮಾರ್ಗಪಲ್ಲಟ ಮಾಡುವಾಗ, ಅಗಲ ಮಾಡುವಾಗ, ತೆರೆಯುವಾಗ, ವಿಸ್ತರಿಸುವಾಗ ಅಥವಾ ಅನ್ಯಥಾ ಮೇಲ್ಪಾಟುಗೊಳಿಸುವಾಗ ಗಾಡಿ ದಾರಿಗೆ ಹಾಗೂ ಕಾಲುದಾರಿಗೆ ಮತ್ತು ಅದರ ಚರಂಡಿಗಳಿಗೆ ಅಗತ್ಯವಾದ ಭೂಮಿಯ ಜೊತೆಗೆ ಮುನ್ಸಿಪಲ್ ಕೌನ್ಸಿಲ್, ಸದರಿ ಭೂಮಿಯನ್ನು ರೂಪಿಸುವ ಸಲುವಾಗಿ ಮನೆಗಳಿಗೆ ಮತ್ತು ಕಟ್ಟಡಗಳಿಗೆ ಅವಶ್ಯವಾದ ಭೂಮಿಯನ್ನು ಖರೀದಿಸಬಹುದು ಮತ್ತು 72ನೇ ಪ್ರಕರಣದ (1)ನೇ, (2)ನೇ ಮತ್ತು (3)ನೇ ಉಪ-ಪ್ರಕರಣಗಳಲ್ಲಿ ಒಳಗೊಂಡಿರುವ ಉಪಬಂಧಕ್ಕೊಳಪಟ್ಟು, ಸೂಕ್ತವೆಂದು ತಾನು ಭಾವಿಸುವಂತೆ, ಅದರ ಮೇಲೆ ನಿರ್ಮಿಸಬೇಕಾದ ಮನೆಗಳ ಅಥವಾ ಕಟ್ಟಡಗಳ ವರ್ಗ ಮತ್ತು ವರ್ಣನೆಯ ಬಗೆಗಿನ ಷರತ್ತುಗಳ ಸಹಿತ ಅಂಥ ಹೆಚ್ಚಿನ ಭೂಮಿಯನ್ನು ಮಾರಾಟ ಮಾಡಬಹುದು ಅಥವಾ ವರ್ಷಗಳ ಅವಧಿಗಾಗಿ ಬಾಡಿಗೆಗೆ ಕೊಡಬಹುದು.

176. ಬೀದಿಗಳನ್ನು ದುರಸ್ತಿಗೊಳಿಸಲು ಮತ್ತು ಅಂಥ ಬೀದಿಗಳು ಸಾರ್ವಜನಿಕವಾದವುಗಳೆಂದು ಘೋಷಿಸಲು ಅಧಿಕಾರ.- (1) ಸಾರ್ವಜನಿಕ ಬೀದಿಯಲ್ಲದ ಯಾವುದೇ ಬೀದಿಯಲ್ಲಿ ಅಥವಾ [1][ಮುನಿಸಿಪಲ್ ಏರಿಯಾ][1] ದೊಳಗೆ ಇರುವ ಅಂಥ ಬೀದಿಯ ಯಾವುದೇ ಭಾಗದಲ್ಲಿ, ಸಾರ್ವಜನಿಕ ಆರೋಗ್ಯ, ಅನುಕೂಲತೆ ಅಥವಾ ಸುರಕ್ಷತೆಗಾಗಿ ಅದನ್ನು ಮಟ್ಟಗೊಳಿಸುವುದು, ನೆಲಗಟ್ಟು ಮಾಡುವುದು, ಜಲ್ಲಿ ಹಾಕುವುದು, ಚಪ್ಪಡಿ ಹಾಸುವುದು, ಮಾರ್ಗ ನಿರ್ಮಿಸುವುದು, ಅದಕ್ಕೆ ಚರಂಡಿ ವ್ಯವಸ್ಥೆ ಮಾಡುವುದು, ದೀಪದ ವ್ಯವಸ್ಥೆ ಮಾಡುವುದು ಅಥವಾ ಸ್ವಚ್ಛಗೊಳಿಸುವುದಕ್ಕೆ ಯಾವುದೇ ಕೆಲಸ ಮಾಡುವುದು ಅವಶ್ಯವಾಗಿದೆಯೆಂದು ಮುನ್ಸಿಪಲ್ ಕೌನ್ಸಿಲ್ ಪರ್ಯಾಲೋಚಿಸಿದರೆ, ಮುನ್ಸಿಪಲ್ ಕೌನ್ಸಿಲ್ ಬರಹದಲ್ಲಿನ ನೋಟಿಸಿನ ಮೂಲಕ ಅಂಥ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕೆಲಸವನ್ನು ಅಂಥ ರೀತಿಯಲ್ಲಿ ಮತ್ತು ಅಂಥ ಕಾಲದೊಳಗೆ ಕಾರ್ಯಗತಗೊಳಿಸಲು ಅಂಥ ಬೀದಿಗೆ ಅಥವಾ ಅದರ ಭಾಗಕ್ಕೆ ಅಭಿಮುಖವಾಗಿರುವ, ಹೊಂದಿಕೊಂಡಿರುವ ಅಥವಾ ಲಗತ್ತಾಗಿರುವ 2[ಖಾಲಿಭೂಮಿಗಳ ಅಥವಾ ಕಟ್ಟಡಗಳ]2 ಸಂಬಂಧಪಟ್ಟ ಒಡೆಯರನ್ನು ಅಗತ್ಯಪಡಿಸಬಹುದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2.2003ರ ಅಧಿನಿಯಮ 31ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಅಂಥ ಕೆಲಸವನ್ನು ಅಂಥ ಒಡೆಯರು ಅಥವಾ ಅಂಥ ಒಡೆಯರ ವೆಚ್ಚದಲ್ಲಿ ಮುನ್ಸಿಪಲ್ ಕೌನ್ಸಿಲ್ 264ನೇ ಪ್ರಕರಣದಲ್ಲಿ ಹೇಳಿರುವಂತೆ, ಕಾರ್ಯಗತಗೊಳಿಸಿದ ತರುವಾಯ, ಅಂಥ ಕೆಲಸವನ್ನು ಮಾಡಲಾಗಿದೆಯೋ ಆ ಬೀದಿ ಅಥವಾ ಅದರ ಭಾಗವು, ಸದರಿ ಒಡೆಯರಲ್ಲಿ

ಬಹುಸಂಖ್ಯಾತರು ಜಂಟಿ ಕೋರಿದಾಗ ಮುನ್ಸಿಪಲ್ ಕೌನ್ಸಿಲ್ ಅಲ್ಲಿ ಸಾರ್ವಜನಿಕ ನೋಟೀಸನ್ನು ಹಾಕಿ ಅದು ಸಾರ್ವಜನಿಕ ಬೀದಿಯಾಗಿರುವುದಾಗಿ ಘೋಷಿಸತಕ್ಕದ್ದು.

(3) ಉಪ-ಪ್ರಕರಣ (1) ರ ಮೇರೆಗಿನ ನೋಟೀಸನ್ನು, ಪಾಲಿಸದಿದ್ದರೆ ಮತ್ತು ಅಂಥ ಕೆಲಸವನ್ನು 264ನೇ ಪ್ರಕರಣದಲ್ಲಿ ಹೇಳಿರುವಂತೆ ಮುನ್ಸಿಪಲ್ ಕೌನ್ಸಿಲ್ ಕಾರ್ಯಗತಗೊಳಿಸಿದ್ದರೆ, ಆ ಬಗ್ಗೆ ವಹಿಸಿದ ವೆಚ್ಚಗಳನ್ನು, ಮುನ್ಸಿಪಲ್ ಕೌನ್ಸಿಲ್, ಅವಶ್ಯವೆಂದು ಅದು ಭಾವಿಸಿದರೆ ಅಂಥ ಯಾವುದೇ [1][ಖಾಲಿಭೂಮಿಗಳ ಅಥವಾ ಕಟ್ಟಡಗಳ][1] ಒಡೆಯರು ಅಥವಾ ಅಧಿಭೋಗದಾರರು ಈಗಾಗಲೇ ಮಾಡಿರುವ ಯಾವುದೇ ಕೆಲಸದ ಪ್ರಮಾಣವನ್ನು ಮತ್ತು ಮೌಲ್ಯವನ್ನು ಗಮನದಲ್ಲಿಟ್ಟುಕೊಂಡು ಸೂಕ್ತವೆಂದು ಅದು ಯೋಚಿಸಬಹುದಾದಂಥ ರೀತಿಯಲ್ಲಿ ಅಂಥ ಒಡೆಯರಿಗೆ ಮುನ್ಸಿಪಲ್ ಕೌನ್ಸಿಲ್ ಹಂಚತಕ್ಕದ್ದು.

1.2003ರ ಅಧಿನಿಯಮ 31ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

177. ಒಡೆಯರ ಆಕ್ಷೇಪಣೆಗಳಿಗೊಳಪಟ್ಟು ಯಾವುದೇ ಬೀದಿಯನ್ನು ಸಾರ್ವಜನಿಕ ಬೀದಿ ಎಂದು ಘೋಷಿಸಲು ಅಧಿಕಾರ.- ಮುನ್ಸಿಪಲ್ ಕೌನ್ಸಿಲ್, ನಿರ್ವಹಿಸಬೇಕಾಗಿಲ್ಲದ ಯಾವುದೇ ಬೀದಿಯಲ್ಲಿ ಅಥವಾ ಬೀದಿಯ ಭಾಗದಲ್ಲಿ, ಸ್ಥಿರವಾದುದೊಂದು ಜಾಗದಲ್ಲಿ ನೋಟೀಸನ್ನು ಪ್ರದರ್ಶಿಸುವ ಮೂಲಕ ಅದು ಸಾರ್ವಜನಿಕ ಬೀದಿಯಾಗಿರುವುದಾಗಿ ಘೋಷಿಸುವ ತನ್ನ ಉದ್ದೇಶದ ತಿಳುವಳಿಕೆಯನ್ನು ಯಾವುದೇ ಸಮಯದಲ್ಲಿ ಕೊಡಬಹುದು ಮತ್ತು ಅಂಥ ನೋಟೀಸ್ ನ್ನು ಹಾಗೆ ಹಾಕಿದ ತರುವಾಯ ಕೂಡಲೇ ಒಂದು ತಿಂಗಳೊಳಗೆ ಅಂಥ ಬೀದಿಯ ಅಥವಾ ಬೀದಿಯ ಅಂಥ ಭಾಗದ ಒಡೆಯನು ಅಥವಾ ಹಲವಾರು ಒಡೆಯರಲ್ಲಿ ಬಹುಸಂಖ್ಯಾತರು, ಮುನ್ಸಿಪಲ್ ಕಚೇರಿಯಲ್ಲಿ ಅದಕ್ಕೆ ಆಕ್ಷೇಪಣೆಗಳನ್ನು ಸಲ್ಲಿಸಿದ ಅಥವಾ ಸಲ್ಲಿಸಿದ್ದ ಹೊರತು ಮುನ್ಸಿಪಲ್ ಕೌನ್ಸಿಲ್ ಅಂಥ ಬೀದಿಯಲ್ಲಿ ಅಥವಾ ಅಂಥ ಭಾಗಗಳಲ್ಲಿ ಹಾಕಿದ ಬರಹದಲ್ಲಿನ ನೋಟೀಸಿನ ಮೂಲಕ, ಅದು ಸಾರ್ವಜನಿಕ ಬೀದಿಯೆಂದು ಘೋಷಿಸಬಹುದು.

178. ಬೀದಿಗಳನ್ನು ತಾತ್ಕಾಲಿಕವಾಗಿ ಮುಚ್ಚುವುದು.- ಮುನ್ಸಿಪಲ್ ಕೌನ್ಸಿಲ್ ಬರಹದಲ್ಲಿ ಆದೇಶದ ಮೂಲಕ ದುರಸ್ತಿಗಾಗಿ ಅಥವಾ ಚರಂಡಿ ವ್ಯವಸ್ಥೆಗೆ, ನೀರು ಸರಬರಾಜು ಅಥವಾ ದೀಪದ ವ್ಯವಸ್ಥೆಗೆ ಅಥವಾ ಈ ಅಧಿನಿಯಮದ ಯಾವುದೇ ಉದ್ದೇಶಕ್ಕೆ ಸಂಬಂಧಿಸಿದಂತೆ ಯಾವುದೇ ಕೆಲಸವನ್ನು ನಿರ್ವಹಿಸಲು ಯಾವುದೇ ಬೀದಿಯನ್ನು ತಾತ್ಕಾಲಿಕವಾಗಿ ಸಂಚಾರಕ್ಕೆ ಮುಚ್ಚಬಹುದು:

ಪರಂತು, ಮುನ್ಸಿಪಲ್ ಕೌನ್ಸಿಲ್, ಮುಗಿಸಬೇಕಾದ ದುರಸ್ತಿಯನ್ನು ಅಥವಾ ಕೆಲಸವನ್ನು ಆದಷ್ಟು ಯುಕ್ತ ವೇಗದಲ್ಲಿ ಮಾಡಿಸತಕ್ಕದ್ದು.

179. ಸಾರ್ವಜನಿಕ ಬೀದಿಯ ನಿಯತ ರೇಖೆ.- (1) ಸರ್ಕಾರದಿಂದ ಮಂಜೂರಾತಿ ಪಡೆದು ಮುನ್ಸಿಪಲ್ ಕೌನ್ಸಿಲ್ [1][ಮುನ್ಸಿಪಲ್ ಏರಿಯಾ][1] ದೊಳಗಿನ ಯಾವುದೇ ಸಾರ್ವಜನಿಕ ಬೀದಿಯ ಒಂದು ಪಕ್ಕದಲ್ಲಿ ಅಥವಾ ಎರಡು ಪಕ್ಕಗಳಲ್ಲಿ ರೇಖೆಯನ್ನು ಗೊತ್ತುಪಡಿಸುವುದು ಕಾನೂನು ಸಮ್ಮತವಾಗಿರತಕ್ಕದ್ದು ಮತ್ತು ಮುನ್ಸಿಪಲ್ ಕೌನ್ಸಿಲ್, ಅದೇ ರೀತಿ ಮಂಜೂರಾತಿ ಪಡೆದು ಕಾಲಕಾಲಕ್ಕೆ, ಹಾಗೆ ಗೊತ್ತುಪಡಿಸಿದ ರೇಖೆಗೆ ಬದಲಾಗಿ ಅಥವಾ ಅದರ ಯಾವುದೇ ಭಾಗಕ್ಕೆ ಹೊಸ ರೇಖೆಯನ್ನು ಗೊತ್ತುಪಡಿಸಬಹುದು:

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಪರಂತು,-

(ಎ) ಸಂದರ್ಭಾನುಸಾರ ಅಂಥ ರೇಖೆಯನ್ನು ಅಥವಾ ಅಂಥ ಹೊಸ ರೇಖೆಯನ್ನು ಗೊತ್ತುಪಡಿಸುವುದಕ್ಕೆ ಕನಿಷ್ಠಪಕ್ಷ ಒಂದು ತಿಂಗಳಿಗೆ ಮೊದಲು ಮುನ್ಸಿಪಲ್ ಕೌನ್ಸಿಲ್ ಅದನ್ನು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚಿಸತಕ್ಕದ್ದು ಮತ್ತು ಅದರ ಬಗ್ಗೆ ಸಾರ್ವಜನಿಕ ನೋಟೀಸನ್ನು ಕೊಡತಕ್ಕದ್ದು ಮತ್ತು ಯಾವ ಬೀದಿ ಅಥವಾ ಬೀದಿಯ ಭಾಗಕ್ಕೆ ಅಂಥ ರೇಖೆಯನ್ನು ಅಥವಾ ಹೊಸ ರೇಖೆಯನ್ನು ಗೊತ್ತುಪಡಿಸಲು ಪ್ರಸ್ತಾವಿಸಲಾಗಿದೆಯೋ, ಆ ಬೀದಿಯ ಅಥವಾ ಬೀದಿಯ ಭಾಗದಲ್ಲಿ ಮುನ್ಸಿಪಲ್ ಕೌನ್ಸಿಲ್‌ನ ವಿಶೇಷ ನೋಟೀಸನ್ನು ಸಹ ಹಾಕತಕ್ಕದ್ದು ಮತ್ತು ಅಂಥ ಪಂಕ್ತೀಕರಣದಿಂದ ಬಾಧಿತರಾದ ಭೂಮಿಗಳ ಒಡೆಯರು ಅಥವಾ ಅಧಿಭೋಗದಾರರಿಗೆ ನೋಟೀಸನ್ನು ಸಹ ಕೊಡತಕ್ಕದ್ದು.

(ಬಿ) ಮುನ್ಸಿಪಲ್ ಕೌನ್ಸಿಲ್ ಅಂಥ ಸಾರ್ವಜನಿಕ ನೋಟೀಸಿನಲ್ಲಿ ಅಥವಾ ವಿಶೇಷ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕಾಲದೊಳಗೆ ಮುನ್ಸಿಪಲ್ ಕೌನ್ಸಿಲ್‌ನ ಕಚೇರಿಯಲ್ಲಿ

ಕೊಟ್ಟ ಅಂಥ ಪ್ರಸ್ತಾವನೆ ಬಗ್ಗೆ ಬರಹದಲ್ಲಿ ಬಂದಯಾವುದೇ ಆಕ್ಷೇಪಣೆಯನ್ನು ಅಥವಾ ಸಲಹೆಯನ್ನು ಮುನ್ಸಿಪಲ್ ಕೌನ್ಸಿಲ್ ಪರ್ಯಾಲೋಚಿಸತಕ್ಕದ್ದು; ಮತ್ತು

(ಸಿ) ಮುನ್ಸಿಪಲ್ ಕೌನ್ಸಿಲ್ ಸದರಿ ರೇಖೆಯೊಳಗೆ ಹಾಗೂ ಸಂಬಂಧಪಟ್ಟ ಬೀದಿಯೊಳಗೆ ಇರುವ ಪ್ರದೇಶದ ನಕ್ಷೆಯನ್ನು ಮತ್ತು ಅದರಲ್ಲಿ ಆವೃತವಾದ ಭೂಮಿಗಳನ್ನು ನಿರ್ದಿಷ್ಟಪಡಿಸುವ ವಿವರಣ ಪಟ್ಟಿಯನ್ನು ತಯಾರಿಸತಕ್ಕದ್ದು, ಅದು ಸಾರ್ವಜನಿಕರ ಪರಿಶೀಲನೆಗೆ ಮುಕ್ತವಾಗಿರತಕ್ಕದ್ದು.

(2) ತಾತ್ಕಾಲಿಕವಾಗಿ ಹಾಗೆ ಗೊತ್ತುಪಡಿಸಿದ ರೇಖೆಯನ್ನು ``ಸಾರ್ವಜನಿಕ ಬೀದಿಯ ನಿಯತ ರೇಖೆ'' ಎಂದು ಕರೆಯತಕ್ಕದ್ದು.

180. ಬೀದಿಗಳ ನಿಯತ ರೇಖೆಯೊಳಗೆ ಕಟ್ಟಡಗಳ ನಿರ್ಮಾಣದ ನಿಯಂತ್ರಣ.- (1) 208ನೇ ಪ್ರಕರಣದ ಉಪಬಂಧಗಳ ಪ್ರಕಾರವಲ್ಲದೆ, 187ನೇ ಪ್ರಕರಣದ ಮೇರೆಗೆ [1][ಮುನಿಸಿಪಲ್ ಕಮಿಷನರ್ ಅಥವಾ ಮುಖ್ಯಾಧಿಕಾರಿಯ][1] ಅನುಮತಿ ಇಲ್ಲದೆ ಯಾರೇ ವ್ಯಕ್ತಿಯು ಸಾರ್ವಜನಿಕ ಬೀದಿಯ ನಿಯತ ರೇಖೆಯ ಒಳಗೆ ಯಾವುದೇ ಕಟ್ಟಡದ ಯಾವುದೇ ಭಾಗವನ್ನು ನಿರ್ಮಿಸತಕ್ಕದ್ದಲ್ಲ ಅಥವಾ ಪುನರ್ ನಿರ್ಮಿಸತಕ್ಕದ್ದಲ್ಲ.

(2) ಸಾರ್ವಜನಿಕ ಬೀದಿಯ ನಿಯತ ರೇಖೆಯ ಒಳಗೆ ಯಾವುದೇ ಪ್ರದೇಶದಲ್ಲಿ ಯಾವುದೇ ಕಟ್ಟಡವನ್ನು ನಿರ್ಮಿಸಲು ಅಥವಾ ಪುನರ್ ನಿರ್ಮಿಸಲು ಮುನ್ಸಿಪಲ್ ಕೌನ್ಸಿಲ್ ಅನುಮತಿಯನ್ನು ನಿರಾಕರಿಸಿದಾಗ ಅಂಥ ಪ್ರದೇಶವನ್ನು ಆ ತರುವಾಯ ಮುನ್ಸಿಪಲ್ ಕೌನ್ಸಿಲ್ ಸ್ವಾಧೀನಪಡಿಸಿಕೊಳ್ಳತಕ್ಕದ್ದು ಮತ್ತು ಅದನ್ನು ಸಾರ್ವಜನಿಕ ಬೀದಿಯ ಭಾಗವೆಂದು ಭಾವಿಸತಕ್ಕದ್ದು.

(3) ವಿವಾದದ ಸಂದರ್ಭದಲ್ಲಿ, 268ನೇ ಪ್ರಕರಣದಲ್ಲಿ ಹೇಳಿರುವ ರೀತಿಯಲ್ಲಿ ಖಚಿತಪಡಿಸಿಕೊಳ್ಳಬೇಕಾದ ಮತ್ತು ನಿರ್ಧರಿಸಬೇಕಾದ ಮೊಬಲಗಿನಷ್ಟು ಪರಿಹಾರವನ್ನು (2)ನೇ ಉಪ-ಪ್ರಕರಣದ ಮೇರೆಗೆ ಮುನ್ಸಿಪಲ್ ಕೌನ್ಸಿಲ್ ಸ್ವಾಧೀನಪಡಿಸಿಕೊಂಡ ಯಾವುದೇ ಭೂಮಿಯ ಒಡೆಯರಿಗೆ, ಸದರಿ ಭೂಮಿಯ ಮೌಲ್ಯಕ್ಕಾಗಿ ಮತ್ತು ಸದರಿ ಉಪ-ಪ್ರಕರಣದ ಮೇರೆಗೆ ಮುನ್ಸಿಪಲ್ ಕೌನ್ಸಿಲ್ ಕೈಗೊಂಡ ಯಾವುದೇ ಕ್ರಮದಿಂದಾಗಿ ಅಥವಾ ಮಾಡಿದ ಆದೇಶದ ಪರಿಣಾಮವಾಗಿ ಅವನಿಗೆ ಉಂಟಾದ ಯಾವುದೇ ನಷ್ಟ, ಹಾನಿ ಅಥವಾ ಅವನು ವಹಿಸಿದ ವೆಚ್ಚಕ್ಕಾಗಿ ಸಹ ಮುನ್ಸಿಪಲ್ ಕೌನ್ಸಿಲ್ ಸಂದಾಯ ಮಾಡತಕ್ಕದ್ದು.

(4) ಉಪ-ಪ್ರಕರಣ (1) ರ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ಆಗಲಿ [1][ಎರಡು ಸಾವಿರ ರೂಪಾಯಿಗಳವರೆಗೆ][1] ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು, ಮತ್ತು ಮುನ್ಸಿಪಲ್ ಕೌನ್ಸಿಲ್,-

(ಎ) ಕಟ್ಟುವುದನ್ನು ನಿಲ್ಲಿಸತಕ್ಕದ್ದು ಎಂದು ನಿರ್ದೇಶಿಸಬಹುದು; ಮತ್ತು

(ಬಿ) ಬರಹದಲ್ಲಿ ನೋಟೀಸಿನ ಮೂಲಕ, ಅವಶ್ಯಕವೆಂದು ಅದು ಭಾವಿಸಬಹುದಾದಂತೆ ಅಂಥ ಕಟ್ಟಡವನ್ನು ಅಥವಾ ಅದರ ಭಾಗವನ್ನು ಮಾರ್ಪಾಟು ಮಾಡಲು ಅಥವಾ ಕೆಡವಲು ಅಗತ್ಯಪಡಿಸಬಹುದು.

1. 2025ರ ಅಧಿನಿಯಮ 64ರ ಮೂಲಕ 12.09.2025 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಕಟ್ಟಡಗಳು ಮೊದಲಾದವುಗಳನ್ನು ಕಟ್ಟುಕಟ್ಟಳೆಗಳಿಗೆ ಒಳಪಡಿಸಲು ಅಧಿಕಾರಗಳು

181. ಕಟ್ಟಡದ ಮುಂಚಾಚಿಕೊಂಡಿರುವ ಭಾಗಗಳನ್ನು ಹಿಂದಕ್ಕೆ ಇರುವಂತೆ ಮಾಡುವುದು.- (1) ಕಟ್ಟಡದ ಯಾವುದೇ ಭಾಗವು, 179ನೇ ಪ್ರಕರಣದ ಮೇರೆಗೆ ಗೊತ್ತುಪಡಿಸಿದಂತೆ ಸಾರ್ವಜನಿಕ ಬೀದಿಯ ನಿಯತ ರೇಖೆಯಾಚೆ ಅದರ ಎರಡೂ ಪಕ್ಕದ ಕಟ್ಟಡದ ಮುಂಭಾಗದಿಂದ ಆಚೆಗೆ ಮುಂಚಾಚಿಕೊಂಡಿದ್ದರೆ ಮುನ್ಸಿಪಲ್ ಕೌನ್ಸಿಲ್,-

(ಎ) ಅದರ ಮುಂಚಾಚಿಕೊಂಡಿರುವ ಭಾಗವು ವರಾಂಡ, ಮೆಟ್ಟಿಲು ಅಥವಾ ಮುಖ್ಯ ಕಟ್ಟಡಕ್ಕೆ ಇತರ ಬಾಹ್ಯ ರಚನೆಯಾಗಿದ್ದರೆ, ಯಾವುದೇ ಕಾಲದಲ್ಲಿ; ಅಥವಾ

(ಬಿ) ಮುಂಚಾಚಿರುವ ಭಾಗವು ಹಿಂದೆ ಹೇಳಿದಂತೆ ಬಾಹ್ಯ ರಚನೆಯಾಗಿರದಿದ್ದರೆ, ಆಗ ಅಂಥ ಕಟ್ಟಡದ ದೊಡ್ಡದಾದ ಭಾಗವನ್ನು ಅಥವಾ ಅಂಥ ಮುಂಚಾಚಿದ ಯಾವುದೇ ಮುಖ್ಯ ಭಾಗವನ್ನು ಕೆಳಗಿಳಿಸಿರುವಾಗ ಅಥವಾ ಸುಟ್ಟು ಹಾಕಿದಾಗ ಅಥವಾ ಬಿದ್ದು ಹೋಗಿರುವಾಗ, ಬರಹದಲ್ಲಿನ ನೋಟೀಸಿನ ಮೂಲಕ, ನಿಯತ ರೇಖೆಯಿಂದಾಚೆ ಅಥವಾ ಅದರ ಎರಡೂ ಪಕ್ಕದಲ್ಲಿ ಹೊಂದಿಕೊಂಡಿರುವ ಕಟ್ಟಡದ ಸದರಿ ಮುಂಭಾಗದಿಂದಾಚೆ ಮುಂಚಾಚಿಕೊಂಡಿರುವ ಭಾಗವನ್ನು ಅಥವಾ ಆ ಭಾಗದ ಯಾವುದೇ ಭಾಗವನ್ನು ತೆಗೆದು

ಹಾಕತಕ್ಕದ್ದೆಂದು ಅಥವಾ ಅಂಥ ಭಾಗವನ್ನು ಪುನರ್ ನಿರ್ಮಿಸುತ್ತಿರುವಾಗ ಅದು ಸದರಿ ನಿಯತ ರೇಖೆಯ ಅಥವಾ ಅಂಥ ಕಟ್ಟಡದ ಮುಂಭಾಗಕ್ಕೆ ಅಥವಾ ಅದರೆಡೆಗೆ ಹಿಂದೆ ಇರುವಂತೆ ಮಾಡತಕ್ಕದ್ದೆಂದು ಅಗತ್ಯಪಡಿಸಬಹುದು. ಮತ್ತು ಹಾಗೆ ಹಿಂದೆ ಸರಿಸಿರುವುದರಿಂದ ಅಥವಾ ತೆಗೆದುಹಾಕಿರುವುದರಿಂದ ಬೀದಿಗೆ ಸೇರಿಸಿದ ಭೂಮಿಯ ಭಾಗವನ್ನು ಆ ತರುವಾಯ ಸಾರ್ವಜನಿಕ ಬೀದಿಯ ಭಾಗವೆಂಬುದಾಗಿ ಭಾವಿಸತಕ್ಕದ್ದು ಮತ್ತು ಅದು ಮುನ್ಸಿಪಲ್ ಕೌನ್ಸಿಲ್‌ನಲ್ಲಿ ನಿಹಿತವಾಗತಕ್ಕದ್ದು.

(2) ಮುನ್ಸಿಪಲ್ ಕೌನ್ಸಿಲ್‌ನಲ್ಲಿ ನಿಹಿತವಾಗಿರದ, ಮುಕ್ತವಾದ ಅಥವಾ ಆವೃತವಾದ ಯಾವುದೇ ಭೂಮಿಯನ್ನು ಸಾರ್ವಜನಿಕ ಬೀದಿಯ ನಿಯತ ರೇಖೆಯ ಒಳಗಿದ್ದರೆ ಮತ್ತು ಜಗಲಿ, ವರಾಂಡ, ಮೆಟ್ಟಿಲು ಅಥವಾ ಇತರ ಬಾಹ್ಯ ರಚನೆಯನ್ನು ಹೊರತುಪಡಿಸಿ ಕಟ್ಟಡವು ವ್ಯಾಪಿಸಿಕೊಂಡಿರದಿದ್ದರೆ, ಮುನ್ಸಿಪಲ್ ಕೌನ್ಸಿಲ್, ತನ್ನ ಉದ್ದೇಶದ ಬಗ್ಗೆ ಸ್ಪಷ್ಟ ಹದಿನೈದು ದಿವಸಗಳಿಗಿಂತ ಕಡಿಮೆಯಿಲ್ಲದ ಬರಹದಲ್ಲಿನ ನೋಟೀಸನ್ನು ಭೂಮಿಯ ಒಡೆಯನಿಗೆ ಕೊಟ್ಟ ತರುವಾಯ ಅಥವಾ ಆ ಭೂಮಿಯು ಸರ್ಕಾರದಲ್ಲಿ ನಿಹಿತವಾಗಿದ್ದರೆ, ಆಗ ಡೆಪ್ಯೂಟಿ ಕಮಿಷನರ್ ರಿಂದ ಬರಹದಲ್ಲಿ ಅನುಮತಿ ಪಡೆದು, ಸದರಿ ಭೂಮಿಯನ್ನು, ಅದರ ಆವೃತಗೋಡೆ, ಮುಳ್ಳುಬೇಲಿ ಅಥವಾ ಬೇಲಿ ಯಾವುವಾದರೂ ಇದ್ದರೆ ಅವುಗಳೊಂದಿಗೆ ಸ್ವಾಧೀನಪಡಿಸಿಕೊಳ್ಳಬಹುದು ಮತ್ತು ಅವಶ್ಯವಾದರೆ ಅದನ್ನು ಬರಿದು ಮಾಡಬಹುದು ಮತ್ತು ಹಾಗೆ ಆರ್ಜಿಸಿದ ಭೂಮಿಯನ್ನು ಆ ತರುವಾಯ ಸಾರ್ವಜನಿಕ ಬೀದಿಯ ಭಾಗವೆಂದು ಭಾವಿಸತಕ್ಕದ್ದು ಮತ್ತು ಅದು ಮುನ್ಸಿಪಲ್ ಕೌನ್ಸಿಲ್‌ನಲ್ಲಿ ನಿಹಿತವಾಗತಕ್ಕದ್ದು.

(3) ವಿವಾದದ ಸಂದರ್ಭದಲ್ಲಿ 268ನೇ ಪ್ರಕರಣದಲ್ಲಿ ಹೇಳಿರುವಂತಹ ರೀತಿಯಲ್ಲಿ ಖಚಿತಪಡಿಸಿಕೊಳ್ಳಬೇಕಾದ ಮತ್ತು ನಿರ್ಧರಿಸಬೇಕಾದ ಮೊಬಲಗಿನ ನಷ್ಟಪರಿಹಾರವನ್ನು (1)ನೇ ಉಪ-ಪ್ರಕರಣದ ಮೇರೆಗೆ ಬೀದಿಗೆ ಸೇರಿಸಿದ ಅಥವಾ (2)ನೇ ಉಪ-ಪ್ರಕರಣದ ಮೇರೆಗೆ ಆರ್ಜಿಸಿದ ಯಾವುದೇ ಭೂಮಿಯ ಒಡೆಯನಿಗೆ, ಸದರಿ ಭೂಮಿಯ ಮೌಲ್ಯಕ್ಕಾಗಿ ಮತ್ತು ಯಾವುದೇ ಕಟ್ಟಡದ ಒಡೆಯನಿಗೆ, ಸದರಿ ಉಪ ಪ್ರಕರಣಗಳಲ್ಲಿ ಎರಡರಲ್ಲಿ ಯಾವುದಾದರೂ ಒಂದರ ಮೇರೆಗೆ ಮುನ್ಸಿಪಲ್ ಕೌನ್ಸಿಲ್ ಕೈಗೊಂಡ ಯಾವುದೇ ಕ್ರಮದ ಪರಿಣಾಮವಾಗಿ ಉಂಟಾದ ಯಾವುದೇ ನಷ್ಟ, ಹಾನಿ ಅಥವಾ ಅವನು ವಹಿಸಿದ ಯಾವುದೇ ವೆಚ್ಚಕ್ಕಾಗಿ ಮುನ್ಸಿಪಲ್ ಕೌನ್ಸಿಲ್ ಸಂದಾಯ ಮಾಡತಕ್ಕದ್ದು:

ಪರಂತು, 213ನೇ ಪ್ರಕರಣವು ಯಾವ ಸಂದರ್ಭಗಳಿಗೆ ಅನ್ವಯವಾಗುತ್ತದೋ ಆ ಸಂದರ್ಭಗಳಲ್ಲಿ ಅಂಥ ಯಾವುದೇ ನಷ್ಟಪರಿಹಾರವನ್ನು ಸಂದಾಯ ಮಾಡತಕ್ಕದ್ದಲ್ಲ.

(4) ನಷ್ಟ ಪರಿಹಾರದ ಮೊಬಲಗನ್ನು ಹಾಗೆ ಖಚಿತಪಡಿಸಿಕೊಂಡು ನಿರ್ಧರಿಸಿರುವಾಗ ಅಥವಾ (1)ನೇ ಉಪ-ಪ್ರಕರಣದ ವ್ಯಾಪ್ತಿಯಲ್ಲಿ ಬರುವ ಪಾಳುಬಿದ್ದಿರುವ ಅಥವಾ ಅಪಾಯಕಾರಿ ಕಟ್ಟಡವನ್ನು 213ನೇ ಪ್ರಕರಣದಲ್ಲಿ ಹೇಳಿರುವಂತೆ ಕೆಡವಿ ಹಾಕಿರುವಾಗ, ಮುನ್ಸಿಪಲ್ ಕೌನ್ಸಿಲ್ ಸಂದಾಯ ಮಾಡಬಹುದಾದ ನಷ್ಟ ಪರಿಹಾರದ ಮೊಬಲಗು ಯಾವುದಾದರೂ ಇದ್ದರೆ, ಅದನ್ನು ಕೊಡಮಾಡಿದ ತರುವಾಯ, ಬೀದಿಗೆ ಹಾಗೆ ಸೇರಿಸಿದ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬಹುದು ಮತ್ತು ಅವಶ್ಯವಿದ್ದರೆ ಅದನ್ನು ಬರಿದು ಮಾಡಬಹುದು.

182. ಬೀದಿಯ ನಿಯತ ರೇಖೆಯನ್ನು ಮುಂದಕ್ಕೆ ಸರಿಸುವುದು.- (1) ಮುನ್ಸಿಪಲ್ ಕೌನ್ಸಿಲ್, ಸೂಕ್ತವೆಂದು ಅದು ಯೋಚಿಸಬಹುದಾದಂಥ ನಿಬಂಧನೆಗಳ ಮೇಲೆ ಅಂಥ ಕಟ್ಟಡವು ಇರುವಂಥ ಯಾವುದೇ ಸಾರ್ವಜನಿಕ ಬೀದಿಯ ರೇಖೆಯನ್ನು ಮೇಲ್ಪಾಟು ಮಾಡುವುದಕ್ಕಾಗಿ, ಯಾವುದೇ ನಿರ್ಮಾಣವನ್ನು ಮುಂದಕ್ಕೆ ಸರಿಸಲು ಅನುಮತಿಸಬಹುದು.

(2) ನಿರ್ಮಾಣವನ್ನು ಮುಂದಕ್ಕೆ ಸರಿಸಲು (1)ನೇ ಪ್ರಕರಣದ ಮೇರೆಗೆ ಯಾವ ವ್ಯಕ್ತಿಗೆ ಅನುಮತಿ ಕೊಡಲಾಗಿದೆಯೋ ಆ ಯಾರೇ ವ್ಯಕ್ತಿಯ ಆವರಣದಲ್ಲಿ ಸೇರಿಕೊಳ್ಳುವ ಭೂಮಿಯು ಮುನ್ಸಿಪಲ್ ಕೌನ್ಸಿಲ್‌ಗೆ ಸೇರಿದ್ದರೆ, ನಿರ್ಮಾಣವನ್ನು ಮುಂದಕ್ಕೆ ಸರಿಸಲು ಮುನ್ಸಿಪಲ್ ಕೌನ್ಸಿಲ್‌ನ ಅನುಮತಿಯು ಸದರಿ ಭೂಮಿಯ ಸದರಿ ಒಡೆಯನಿಗೆ ಹಸ್ತಾಂತರಣವಾಗಿದೆಯೆಂಬುದಕ್ಕೆ ಸಾಕಷ್ಟು ಪುರಾವೆಯಾಗಿರತಕ್ಕದ್ದು ಮತ್ತು ಅಂಥ ಭೂಮಿಗಾಗಿ ಸದರಿ ಒಡೆಯನು ಮುನ್ಸಿಪಲ್ ಕೌನ್ಸಿಲ್‌ಗೆ ಸಂದಾಯ ಮಾಡಬೇಕಾದ ಬೆಲೆ ಕುರಿತ ಮತ್ತು ಹಸ್ತಾಂತರಣದ ಇತರ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಸದರಿ ಅನುಮತಿಯಲ್ಲಿ ನಮೂದಿಸತಕ್ಕದ್ದು.

183. ಬೀದಿಗಳ ಮೂಲೆಯಲ್ಲಿರುವ ಕಟ್ಟಡಗಳು.- (1) ಮುನ್ಸಿಪಲ್ ಕೌನ್ಸಿಲ್ ಎರಡು ಬೀದಿಗಳ ಮೂಲೆಯಲ್ಲಿ ನಿರ್ಮಿಸಲು ಉದ್ದೇಶಿಸಿದ ಯಾವುದೇ ಕಟ್ಟಡವನ್ನು, ತಾನು

ನಿರ್ಧರಿಸಬಹುದಾದಂಥ ಎತ್ತರಕ್ಕೆ ಮತ್ತು ಅಂಥ ವಿಸ್ತಾರಕ್ಕೆ ಅಥವಾ ಅನ್ಯಥಾ ಸಮ ಸ್ಥಿತಿಗೆ ತರಲು ಅಥವಾ ವಾರೆಮಾಡಲು ಅಗತ್ಯಪಡಿಸಬಹುದು ಮತ್ತು ಸಾರ್ವಜನಿಕರ ಅನುಕೂಲಕ್ಕಾಗಿ ಅಥವಾ ಸೌಕರ್ಯಕ್ಕಾಗಿ ಅವಶ್ಯವೆಂದು ಅದು ಪರ್ಯಾಲೋಚಿಸಬಹುದಾದಂಥ ಮೂಲೆಯಲ್ಲಿನ ನಿವೇಶನದ ಅಂಥ ಭಾಗವನ್ನು ಆರ್ಜಿಸಬಹುದು.

(2) ಹಾಗೆ ಆರ್ಜಿಸಿದ ಯಾವುದೇ ಭೂಮಿಗಾಗಿ, ಮುನ್ಸಿಪಲ್ ಕೌನ್ಸಿಲ್ ನಷ್ಟ ಪರಿಹಾರವನ್ನು ಸಂದಾಯ ಮಾಡತಕ್ಕದ್ದು.

(3) ಅಂಥ ಪರಿಹಾರವನ್ನು ನಿರ್ಧರಿಸುವಾಗ ಬೀದಿಯನ್ನು ಮೇಲ್ಪಾಟು ಮಾಡಿದ್ದರಿಂದಾಗಿ ಅದೇ ಆವರಣಕ್ಕೆ ಒದಗಿಬರುವ ಯಾವುದೇ ಪ್ರಯೋಜನಕ್ಕಾಗಿ ಅವಕಾಶ ಮಾಡತಕ್ಕದ್ದು.

184. ಕಟ್ಟಡಗಳ ಚಾವಣಿಗಳನ್ನು ಮತ್ತು ಹೊರಗೋಡೆಗಳನ್ನು ಸುಲಭ ದಹ್ಯ ಸಾಮಗ್ರಿಗಳಿಂದ ಮಾಡಿರತಕ್ಕದ್ದಲ್ಲ.- (1) ಈ ಅಧಿನಿಯಮವು ಜಾರಿಗೆ ಬಂದ ತರುವಾಯ ನಿರ್ಮಿಸಿದ ಅಥವಾ ನವೀಕರಿಸಿದ ಕಟ್ಟಡಗಳ ಹೊರಚಾವಣಿಗಳನ್ನು ಮತ್ತು ಗೋಡೆಗಳನ್ನು [1][ಮುನಿಸಿಪಲ್ ಕಮಿಷನರ್ ಅಥವಾ ಮುಖ್ಯಾಧಿಕಾರಿಯಿಂದ][1] ಬರಹದಲ್ಲಿ ಒಪ್ಪಿಗೆ ಪಡೆದಿದ್ದ ಹೊರತು ಹುಲ್ಲು, ಮರ, ಬಟ್ಟೆ, ತಟ್ಟು, ಎಲೆಗಳು, ಚಾಪೆಗಳು ಅಥವಾ ಇತರ ಸುಲಭ ದಹ್ಯ ಸಾಮಗ್ರಿಗಳಿಂದ ಮಾಡಿರತಕ್ಕದ್ದಲ್ಲ. ಲಿಖಿತ ಸಮ್ಮತಿಯನ್ನು ಪ್ರತ್ಯೇಕ ಸಂದರ್ಭಗಳಲ್ಲಿ ಅಥವಾ ಸಾಮಾನ್ಯವಾಗಿ ಆ ಸಮ್ಮತಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಪ್ರದೇಶಕ್ಕೆ ಸಂಬಂಧಿಸಿದಂತೆ ಕೊಡಬಹುದು.

(2) [1][ಮುನಿಸಿಪಲ್ ಕಮಿಷನರ್ ಅಥವಾ ಮುಖ್ಯಾಧಿಕಾರಿಯು][1] ಯಾವುದೇ ಕಾಲದಲ್ಲಿ ಬರಹದಲ್ಲಿನ ನೋಟೀಸಿನ ಮೂಲಕ ಹಿಂದೆ ಹೇಳಿದಂತೆ ಅಂಥ ಯಾವುದೇ ಸಾಮಗ್ರಿಗಳಿಂದ ಮಾಡಿದ ಹೊರಚಾವಣಿಯನ್ನು ಅಥವಾ ಗೋಡೆಯನ್ನು ಹೊಂದಿರುವಂಥ ಯಾವುದೇ ಕಟ್ಟಡದ ಒಡೆಯನನ್ನು ಅಂಥ ಚಾವಣಿಯನ್ನು ಅಥವಾ ಗೋಡೆಯನ್ನು ಈ ಅಧಿನಿಯಮವು ಜಾರಿಗೆ ಬಂದಂಥ ದಿನಾಂಕಕ್ಕೆ ಮುಂಚೆ ಮಾಡಿರಲಿ ಅಥವಾ ಮಾಡಿರದಿರಲಿ ಮತ್ತು ಅದನ್ನು ಮುನ್ಸಿಪಲ್ ಕೌನ್ಸಿಲ್‌ನ ಸಮ್ಮತಿಯಿಂದ ಮಾಡಿರಲಿ ಅಥವಾ ಇಲ್ಲದೆ ಮಾಡಿರದಿರಲಿ ನೋಟೀಸಿನಲ್ಲಿ ನಿರ್ದಿಷ್ಟಪಡಿಸುವ ಯುಕ್ತ ಕಾಲದೊಳಗೆ ಅಂಥ ಚಾವಣಿಯನ್ನು ಅಥವಾ ಗೋಡೆಯನ್ನು ತೆಗೆದುಹಾಕಲು ಅಗತ್ಯಪಡಿಸಬಹುದು.

(3) ಯಾರೇ ಆಗಲಿ (1)ನೇ ಉಪ-ಪ್ರಕರಣದಲ್ಲಿ ಅಗತ್ಯಪಡಿಸಿರುವಂಥ ಸಮ್ಮತಿಯಿಲ್ಲದೆಯೇ ಹಿಂದೆ ಹೇಳಿದ ಸಾಮಗ್ರಿಗಳಿಂದ ಯಾವುದೇ ಚಾವಣಿಯನ್ನು ಅಥವಾ ಗೋಡೆಯನ್ನು ಮಾಡಿದರೆ ಅಥವಾ ಮಾಡಿಸಿದರೆ ಅಥವಾ (2)ನೇ ಉಪ-ಪ್ರಕರಣದ ಮೇರೆಗೆ ಕೊಟ್ಟ ನೋಟೀಸಿನ ಅಗತ್ಯತೆಗಳನ್ನು ಉಲ್ಲಂಘಿಸಿ, ಅವು ಉಳಿಯಲು ಅವಕಾಶ ಮಾಡಿಕೊಟ್ಟರೆ, ಅವನು ಇಪ್ಪತ್ತೈದು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ಮೊದಲನೆಯ ಅಪರಾಧ ನಿರ್ಣಯದ ದಿನಾಂಕದ ತರುವಾಯ ಅಪರಾಧವು ಮುಂದುವರಿಯುವ ಪ್ರತಿಯೊಂದು ದಿನಕ್ಕೆ ಹತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

1. 2025ರ ಅಧಿನಿಯಮ 64ರ ಮೂಲಕ 12.09.2025 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

185. ಕಟ್ಟಡಗಳ ಮಟ್ಟ.- ಯಾವುದೇ ಕಟ್ಟಡವನ್ನು ಮುನ್ಸಿಪಲ್ ಕೌನ್ಸಿಲ್ ಆಗ ಇದ್ದಂತಹ ಅಥವಾ ಈಗ ಪ್ರಸ್ತಾವಿಸಿರುವ ಯಾವುದೋ ಸಾರ್ವಜನಿಕ ಗ್ರಾಮಸಾರ ಚರಂಡಿಯೊಳಕ್ಕೆ ಅಥವಾ ಯಾವುದೇ ಹಳ್ಳದೊಳಕ್ಕೆ ಅಥವಾ ನದಿಯೊಳಕ್ಕೆ ಅಥವಾ ಸಮುದ್ರಕ್ಕೆ ಅಥವಾ ಯಾವುದೋ ರೊಚ್ಚು ಗುಂಡಿಯೊಳಕ್ಕೆ ಅಥವಾ ಮುನ್ಸಿಪಲ್ ಕೌನ್ಸಿಲ್ ಅನುಮೋದಿಸಬಹುದಾದಂಥ ಇತರ ಸೂಕ್ತ ಸ್ಥಳಕ್ಕೆ ಅದರ ಚರಂಡಿ ನೀರು ಹರಿದು ಹೋಗಲು ಆಸ್ಪದವಾಗುವ ಮಟ್ಟಕ್ಕಿಂತಲೂ ಕಡಿಮೆ ಮಟ್ಟದಲ್ಲಿ ಕಟ್ಟತಕ್ಕದ್ದಲ್ಲ.

186. ಧಾನ್ಯವನ್ನು ಸಂಗ್ರಹಿಸಿ ಇಡುವ ಉಗ್ರಾಣಗಳಲ್ಲಿ ಇಲಿಗಳಿಗೆ ಅಭೇದ್ಯವಾದ ರಚನೆಯ ನಿರ್ಮಾಣ.- ಉಗ್ರಾಣಗಳ ನಿರ್ಮಾಣವನ್ನು ನಿಯಂತ್ರಿಸುವ ಯಾವುದೇ ಕಾನೂನಿನ ಉಪಬಂಧಗಳಿಗೊಳಪಟ್ಟು, ಮುನ್ಸಿಪಲ್ ಕೌನ್ಸಿಲ್, ಧಾನ್ಯಗಳ ಸಂಗ್ರಹಣೆಗಾಗಿ ಉಗ್ರಾಣವಾಗಿ ಬಳಸಿದ ಅಥವಾ ಬಳಸಲು ಉದ್ದೇಶಿಸಿದ ಯಾವುದೇ ಕಟ್ಟಡವನ್ನು ಇಲಿಗಳಿಗೆ ಅಭೇದ್ಯವಾಗಿರುವ ರೀತಿಯಲ್ಲಿ ಸಂರಕ್ಷಿಸತಕ್ಕದ್ದೆಂದು ಅಥವಾ ನಿರ್ಮಿಸತಕ್ಕದ್ದೆಂದು ಅಗತ್ಯಪಡಿಸಬಹುದು ಮತ್ತು ಈ

ಉದ್ದೇಶಕ್ಕಾಗಿ ಅಳವಡಿಸಬೇಕಾದ ನಕ್ಷೆಯನ್ನು ಹಾಗೂ ವಿನ್ಯಾಸವನ್ನು ಮತ್ತು ಅಂಥ ಕಟ್ಟಡಕ್ಕಾಗಿ ಉಪಯೋಗಿಸಬೇಕಾದ ಸಾಮಗ್ರಿಗಳನ್ನು ಗೊತ್ತುಪಡಿಸಬಹುದು.

187. ಹೊಸ ಕಟ್ಟಡಗಳ ಬಗ್ಗೆ ತಿಳಿಸುವುದು.- [1][(1)ಯಾವುದೇ ಕಟ್ಟಡವನ್ನು ನಿರ್ಮಿಸುವ ಅಥವಾ ಈಗಿರುವ ಯಾವುದೇ ಕಟ್ಟಡಕ್ಕೆ ಹೊರಗೆ ಮಾರ್ಪಾಟು ಮಾಡುವ ಅಥವಾ ಅದಕ್ಕೆ ಸೇರಿಸುವ ಅಥವಾ ಯಾವ ಕಟ್ಟಡವನ್ನು ತೆಗೆದುಹಾಕಲು ಅಥವಾ ಯಾವ ಕಟ್ಟಡದ ನಿರ್ಮಾಣವನ್ನು ಹಿಂದಕ್ಕೆ ಸರಿಸಲು ಅಧಿಕಾರ ನೀಡಲಾಗಿದೆಯೋ ಆ ಯಾವುದೇ ಕಟ್ಟಡದ ಯಾವುದೇ ಮುಂಚಾಚಿರುವ ಭಾಗವನ್ನು ಅಥವಾ ಯಾವ ಕಟ್ಟಡದ ನಿರ್ಮಾಣಕ್ಕೆ ಅಥವಾ ಪುನರ್ ನಿರ್ಮಾಣಕ್ಕೆ ಸಂಬಂಧಿಸಿದಂತೆ ಮುನ್ಸಿಪಲ್ ಕೌನ್ಸಿಲ್‌ಗೆ 181ನೇ ಪ್ರಕರಣದ ಮೂಲಕ ಅಧಿಕಾರ ನೀಡಲಾಗಿದೆಯೋ ಆ ಕಟ್ಟಡವನ್ನು ನಿರ್ಮಿಸುವುದಕ್ಕೂ ಮೊದಲು ಅಥವಾ ಪುನರ್ ನಿರ್ಮಿಸುವುದನ್ನು ಪ್ರಾರಂಭಿಸುವುದಕ್ಕೂ ಮೊದಲು, ಹಾಗೆ ನಿರ್ಮಿಸಲು, ಮಾರ್ಪಾಟು ಮಾಡಲು, ಸೇರಿಸಲು ಅಥವಾ ಪುನರ್ ನಿರ್ಮಿಸಲು ಉದ್ದೇಶಿಸುವ ವ್ಯಕ್ತಿಯು, ವೆಬ್ ಪೋರ್ಟಲ್ ಮೂಲಕ ಅರ್ಜಿಯನ್ನು ಸಲ್ಲಿಸತಕ್ಕದ್ದು ಮತ್ತು ಅದೇ ಸಮಯದಲ್ಲಿ ಅಂಥ ಕಟ್ಟಡದ ತಳಪಾಯವನ್ನು ಮತ್ತು ಅತಿ ಕೆಳಗಿನ ನೆಲ ಅಂತಸ್ತಿನ ಮಟ್ಟಗಳನ್ನು, ಮುನ್ಸಿಪಲ್ ಕೌನ್ಸಿಲ್‌ಗೆ ತಿಳಿದಿರುವ ಯಾವುದೇ ಮಟ್ಟವನ್ನು ತಿಳಿಸಿ ಯಾವ ಮಟ್ಟಗಳಲ್ಲಿ ನಿರ್ಮಿಸಲು ಪ್ರಸ್ತಾವಿಸಲಾಗಿದೆಯೋ ಆ ಮಟ್ಟಗಳನ್ನು ತೋರಿಸುವ ನಕ್ಷೆಯನ್ನು, ಮತ್ತು ಪ್ರಸ್ತಾವಿತ ಕಟ್ಟಡದ ಪರಿಮಿತಿಗಳು, ಉದ್ದಗಲ, ವಿನ್ಯಾಸ, ವಾಯು ಸಂಚಾರ, ಸಾಮಗ್ರಿಗಳ ಬಗ್ಗೆ ಬೈಲಾಗಳಲ್ಲಿ ಅಗತ್ಯಪಡಿಸಿದ ಅಥವಾ ಮುನ್ಸಿಪಲ್ ಕೌನ್ಸಿಲ್ ತಗಾದೆ ಮಾಡಿದ ಎಲ್ಲಾ ಮಾಹಿತಿಯನ್ನು ಮತ್ತು ಅದಕ್ಕೆ ಸಂಬಂಧಿಸಿದಂತೆ ಬಳಸಬೇಕಾದ ಚರಂಡಿಗಳು, ಗ್ರಾಮಸಾರ ಚರಂಡಿಗಳು, ಕಕ್ಕಸುಗಳು, ಶೌಚಗೃಹಗಳು ಮತ್ತು ರೊಚ್ಚುಗುಂಡಿಗಳು ಯಾವುದಾದರೂ ಇದ್ದರೆ ಅವುಗಳ ಉದ್ದೇಶಿತ ಸ್ಥಳ ಮತ್ತು ನಿರ್ಮಾಣದ ಬಗ್ಗೆ ಯಾವುದೇ ಈಗಿರುವ ಅಥವಾ ಯೋಜಿತ ಬೀದಿಗಳಿಗೆ ಸಂಬಂಧಪಟ್ಟಂತೆ ಕಟ್ಟಡದ ಸ್ಥಳವನ್ನು ಹಾಗೂ ಕಟ್ಟಡವನ್ನು ಯಾವ ಉದ್ದೇಶಕ್ಕಾಗಿ ಬಳಸಬೇಕಾಗಿದೆಯೋ ಆ ಉದ್ದೇಶದ ಬಗ್ಗೆ ಸರ್ಕಾರವು ಅಧಿಸೂಚಿಸಿದಂಥ ಕಟ್ಟಡಗಳ ಸಂದರ್ಭದಲ್ಲಿ ಲೈಸೆನ್ಸುಳ್ಳ ವೃತ್ತಿಪರರ ಸ್ವ-ಪ್ರಮಾಣೀಕರಣಕ್ಕೆ (self-certification) ಸಂಬಂಧಿಸಿದ ದಸ್ತಾವೇಜಿಗಳನ್ನು ಒಳಗೊಂಡು ಎಲ್ಲ ಮಾಹಿತಿಯನ್ನು ಮುನ್ಸಿಪಲ್ ಕೌನ್ಸಿಲ್‌ಗೆ ಒದಗಿಸತಕ್ಕದ್ದು.][1]

[2][**(1-ಎ). ಕರಗಳು, ನಿರ್ಬಂಧಗಳು ಮತ್ತು ಷರತ್ತುಗಳ ವಿಧಿಸುವಿಕೆ.-** (1) ಮುನ್ಸಿಪಲ್ ಕೌನ್ಸಿಲ್ ನಕ್ಷೆಯನ್ನು ಅನುಮೋದಿಸಲು ಅಥವಾ ಮಂಜೂರು ಮಾಡಲು ಅಥವಾ ಪ್ರಾರಂಭ ಪ್ರಮಾಣಪತ್ರ ಅಥವಾ ಅಧಿಭೋಗ ಪ್ರಮಾಣಪತ್ರವನ್ನು ನೀಡಲು, ಕರ್ನಾಟಕ ಸ್ಟಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34) ರ ಉಪಬಂಧಗಳ ಅಡಿಯಲ್ಲಿ ನೋಂದಣಿ ಮತ್ತು ಮುದ್ರಾಂಕ ಇಲಾಖೆಯು ನಿಗದಿಪಡಿಸಿದ ಮಾರ್ಗಸೂಚಿ ಮೌಲ್ಯದ ಆಧಾರದ ಮೇಲೆ ಅಥವಾ ವಾರ್ಷಿಕ ಹೆಚ್ಚಳದೊಂದಿಗಿನ ಯಾವುದೇ ನಿಗದಿತ ದರಗಳ ಆಧಾರದ ಮೇಲೆ ನಿಯಮಗಳು ಅಥವಾ ಉಪವಿಧಿಗಳಲ್ಲಿ ನಿಯಮಿಸಬಹುದಾದಂಥ ದರಗಳಲ್ಲಿ ಈ ಮುಂದಿನ ಶುಲ್ಕವನ್ನು ವಿಧಿಸಬಹುದು ಮತ್ತು ವಸೂಲು ಮಾಡಬಹುದು, ಎಂದರೆ.-

(i) ಲೈಸೆನ್ಸು ನೀಡಿಕೆಗಾಗಿ ಶುಲ್ಕ;

(ii) ಲೈಸೆನ್ಸು ಮಂಜೂರು ಮಾಡಲಾದ ಕಟ್ಟಡಕ್ಕಾಗಿ ಭದ್ರತಾ ಶುಲ್ಕ;

(iii) ನಿರ್ಮಾಣದ ಸಮಯದಲ್ಲಿ ಸಾರ್ವಜನಿಕ ರಸ್ತೆಗಳ ನಿರ್ವಹಣೆ ಅಥವಾ ಸಾರ್ವಜನಿಕ ಸ್ಥಳಗಳಲ್ಲಿ ನಿರ್ಮಾಣ ಸಾಮಗ್ರಿಗಳ ಶೇಖರಣೆಗಾಗಿ ಶುಲ್ಕ, ಅಂದರೆ ನೆಲ ಬಾಡಿಗೆ;

(iv) ನಿರ್ಮಾಣವು ಮಂಜೂರಾದ ಯೋಜನೆಯ ಅನುಸಾರವಾಗಿರುವುದನ್ನು ಖಚಿತಪಡಿಸಲು ಭದ್ರತಾ ಶುಲ್ಕ;

(v) ಪ್ರಾರಂಭ ಪ್ರಮಾಣಪತ್ರಕ್ಕಾಗಿ ಶುಲ್ಕ;

(vi) ಅಧಿಭೋಗ ಪ್ರಮಾಣಪತ್ರಕ್ಕಾಗಿ ಶುಲ್ಕ;

(vii) ಪ್ರಾಧಿಕಾರದ ಅಗತ್ಯತೆಗಳಿಗೆ ಸಂಬಂಧಿಸಿದಂತೆ ಪಟ್ಟಿ ಮಾಡಲಾದ ವೃತ್ತಿಪರರು ಒದಗಿಸುವ ಸೇವೆಗಳಿಗಾಗಿ ಕಟ್ಟಡಗಳ ಮಾಲೀಕರು ಭರಿಸಬೇಕಾದ ಶುಲ್ಕ.

(viii) ನಿರ್ಮಾಣದ ಪ್ರಾರಂಭದಲ್ಲಿ ಪ್ರಾರಂಭ ಪ್ರಮಾಣ ಪತ್ರವನ್ನು ಪಡೆಯದಿದ್ದಕ್ಕಾಗಿ ಅಧಿಭೋಗ ಪ್ರಮಾಣ ಪತ್ರವನ್ನು ನೀಡುವ ಸಮಯದಲ್ಲಿ ವಿಧಿಸುವ ದಂಡ.

(ix) ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಮಂಜೂರಾದ ನಕ್ಷೆ ಅಥವಾ ವಲಯ ನಿಯಂತ್ರಣ ಮಿತಿಗೆ ಸಂಬಂಧಿಸಿದಂತೆ ನಿರ್ಮಾಣದಲ್ಲಿನ ಉಲ್ಲಂಘನೆ ಅಥವಾ ಮಾರ್ಗ ಪಲ್ಲಟದ ವ್ಯಾಪ್ತಿಯವರೆಗೆ ಕ್ರಮಬದ್ಧಗೊಳಿಸುವುದಕ್ಕಾಗಿ ದಂಡ; ಮತ್ತು

(x) ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಅಥವಾ ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದಂಥ ಇತರ ಶುಲ್ಕ.][2]

1. 2025ರ ಅಧಿನಿಯಮ 64ರ ಮೂಲಕ 12.09.2025 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2025ರ ಅಧಿನಿಯಮ 64ರ ಮೂಲಕ 12.09.2025 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) ಉಪ-ಪ್ರಕರಣ (1)ರಲ್ಲಿ ಹೇಳಿರುವ ಯಾವುದೇ ನಿರ್ಮಾಣವನ್ನು ಅಥವಾ ಪುನರ್ ನಿರ್ಮಾಣವನ್ನು ಈ ಅಧಿನಿಯಮದ ಮೇರೆಗೆ ಆ ಕೆಲಸದ ನಿರ್ವಹಣೆಗಾಗಿ ಅನುಮತಿಯನ್ನು ಕೊಟ್ಟ ಹೊರತು ಮತ್ತು ಅಲ್ಲಿಯವರೆಗೆ ಪ್ರಾರಂಭಿಸತಕ್ಕದ್ದಲ್ಲ.

(3) ಈ ಅಧಿನಿಯಮದಲ್ಲಿ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳಲ್ಲಿ ಮತ್ತು ಬೈಲಾಗಳಲ್ಲಿ ಅನ್ಯಥಾ ಉಪಬಂಧಿಸಿರುವಂತೆ ಹೊರತು ಮುನ್ಸಿಪಲ್ ಕೌನ್ಸಿಲ್,-

(ಎ) ಒದಗಿಸಿರುವ ನಕ್ಷೆಗೆ ಮತ್ತು ಮಾಹಿತಿಗೆ ಅನುಸಾರವಾಗಿ ನಿರ್ಮಿಸಲು, ಮಾರ್ಪಾಟು ಮಾಡಲು, ಸೇರಿಸಲು ಅಥವಾ ಪುನರ್ ನಿರ್ಮಿಸಲು ಅನುಮತಿಯನ್ನು ನೀಡಬಹುದು; ಅಥವಾ

(ಬಿ) ಈ ಅಧಿನಿಯಮಕ್ಕೆ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಹಾಗೂ ಬೈಲಾಗಳಿಗೆ ಅನುಸಾರವಾಗಿ, ಮಟ್ಟ, ಚರಂಡಿ ವ್ಯವಸ್ಥೆ ನೈರ್ಮಲ್ಯ, ವಿನ್ಯಾಸ, ಸಾಮಗ್ರಿಗಳು ಅಥವಾ ಕೊಠಡಿಗಳ, ಬಾಗಿಲುಗಳ, ಕಿಟಕಿಗಳ ಮತ್ತು ವಾಯು ಸಂಚಾರಕ್ಕಾಗಿ ಕಲ್ಪಿಸಿರುವ ಕಿಂಡಿಗಳ ಉದ್ದಗಲಗಳ ಮತ್ತು ಘನ ಅಡಿಗಳ ಅಥವಾ ನಿರ್ಮಿಸಬೇಕಾದ ಮಹಡಿಗಳ ಸಂಖ್ಯೆಯ ಬಗ್ಗೆ ಅಥವಾ ಈಗಿರುವ ಯಾವುದೇ ಕಟ್ಟಡಕ್ಕೆ ಅಥವಾ ಬೀದಿಗೆ ಸಂಬಂಧಪಟ್ಟಂತೆ ಅಥವಾ ಈಗಿರುವ ಅಥವಾ ಪ್ರಸ್ತಾವಿತ ಕಟ್ಟಡ ಸ್ಥಳದ ಬಗ್ಗೆ ಅಥವಾ ಕಟ್ಟಡವನ್ನು ಯಾವ ಉದ್ದೇಶಕ್ಕಾಗಿ ಬಳಸಬೇಕಾಗಿದೆಯೋ ಆ ಉದ್ದೇಶಕ್ಕೆ ಸಂಬಂಧಿಸಿದಂತೆ ಬರಹದಲ್ಲಿ ಷರತ್ತುಗಳನ್ನು ವಿಧಿಸಬಹುದು; ಅಥವಾ

(ಸಿ) ಕಟ್ಟಡದ ಆಯಾಯ ಸ್ಥಳ ಮತ್ತು ಅಂಥ ಯಾವುದೇ ಬೀದಿಗೆ ಸಂಬಂಧಪಟ್ಟ ಎಲ್ಲ ವಿಷಯಗಳನ್ನು ತನಗೆ ಮನವರಿಕೆಯಾಗುವಂತೆ ತೀರ್ಮಾನಿಸಿದ ಹೊರತು ಮತ್ತು ಅಲ್ಲಿಯವರೆಗೆ ಕೆಲಸಗಳನ್ನು ಮುಂದುವರಿಸತಕ್ಕದ್ದಲ್ಲವೆಂದು ನಿರ್ದೇಶಿಸಬಹುದು;ಅಥವಾ

(ಡಿ) ಈ ಮುಂದೆ ಹೇಳಿರುವ ಸನ್ನಿವೇಶ/ ಸಂದರ್ಭಗಳಲ್ಲಿ, ಎಂದರೆ,-

(i) ಕೆಲಸವು ಅಂಥ ಕೆಲಸಕ್ಕಾಗಿ ಇರುವ ನಿವೇಶನದ ಬಳಕೆಯು ಅಥವಾ ನಿವೇಶನ ನಕ್ಷೆಯಲ್ಲಿ, ತಳ (ಕಟ್ಟು) ನಕ್ಷೆ, ಉನ್ನತಿ ನಕ್ಷೆಗಳು, ವಿಭಾಗಗಳುಅಥವಾ ತಪಸೀಲು ಪಟ್ಟಿಗಳಲ್ಲಿ ಒಳಗೊಂಡಿರುವ ಯಾವುದೇ ವಿವರವು ಯಾವುದೇ ಕಾನೂನಿನ ನಿರ್ದಿಷ್ಟ ನಿಬಂಧನೆಯನ್ನು ಅಥವಾ ಯಾವುದೇ ಕಾನೂನಿನ ಮೇರೆಗೆ ಮಾಡಿದ ಯಾವುದೇ ನಿರ್ದಿಷ್ಟ ಆದೇಶವನ್ನು, ನಿಯಮವನ್ನು, ಘೋಷಣೆಯನ್ನು ಅಥವಾ ಬೈಲಾವನ್ನು ಉಲ್ಲಂಘಿಸುವುದಾದರೆ;

(ii) ಅಂಥ ಅನುಮತಿಗಾಗಿ ಸಲ್ಲಿಸಿದ ಅರ್ಜಿಯು ವಿವರಗಳನ್ನು ಒಳಗೊಂಡಿರದಿದ್ದರೆ ಅಥವಾ ನಿಯಮಗಳ ಅಥವಾ ಬೈಲಾಗಳ ಮೇರೆಗೆ ಅಗತ್ಯಪಡಿಸಿದ ರೀತಿಯಲ್ಲಿ ತಯಾರಿಸಿರದಿದ್ದರೆ;

(iii) ಉಪ-ಪ್ರಕರಣ (1) ರಲ್ಲಿ ಹೇಳಿರುವ ಯಾವುದೇ ದಸ್ತಾವೇಜನ್ನು ನಿಯಮಗಳಲ್ಲಿ ಅಥವಾ ಬೈಲಾದಲ್ಲಿ ಅಗತ್ಯಪಡಿಸಿದಂತೆ ರುಜು ಮಾಡಿರದಿದ್ದರೆ;

(iv) ನಿಯಮಗಳ ಅಥವಾ ಬೈಲಾಗಳ ಮೇರೆಗೆ ಮುನ್ಸಿಪಲ್ ಕೌನ್ಸಿಲ್ ಅಗತ್ಯಪಡಿಸಿದ ಯಾವುದೇ ಮಾಹಿತಿಯನ್ನು ಅಥವಾ ದಸ್ತಾವೇಜುಗಳನ್ನು ಕ್ರಮಬದ್ಧವಾಗಿ ಒದಗಿಸಿರದಿದ್ದರೆ;

(v) 170ನೇ ಪ್ರಕರಣದ ಮೂಲಕ ಅಗತ್ಯಪಡಿಸಿದಂತೆ ಬೀದಿಗಳನ್ನು ಅಥವಾ ರಸ್ತೆಗಳನ್ನು ಮಾಡಿರದಿದ್ದರೆ;

(vi) ಪ್ರಸ್ತಾವಿತ ಕಟ್ಟಡದಿಂದ, ಸರ್ಕಾರದ ಅಥವಾ ಮುನ್ಸಿಪಾಲಿಟಿ ಭೂಮಿಯ ಮೇಲೆ ಒತ್ತುವರಿಯಾಗುವುದಿದ್ದರೆ;

(vii) ಅಂಥ ಕಟ್ಟಡದ ನಿವೇಶನವು ಬೀದಿಗೆ ಅಥವಾ ಪ್ರಸ್ತಾವಿತ ಬೀದಿಗೆ ಲಗತ್ತಾಗಿರದಿದ್ದರೆ ಮತ್ತು ಅಂಥ ಯಾವುದೇ ಬೀದಿಯಿಂದ ಅಂಥ ನಿವೇಶನಕ್ಕೆ ಸೇರಿರುವ ಮತ್ತು ಯಾವುದೇ ಭಾಗದಲ್ಲಿ ಹನ್ನೆರಡು ಅಡಿಗಳಿಗಿಂತ ಕಡಿಮೆಯಿಲ್ಲದ ಹಾದಿಯ ಅಥವಾ ಕಾಲು ದಾರಿಯ ಮೂಲಕ ಅಂಥ ಕಟ್ಟಡಕ್ಕೆ ಪ್ರವೇಶಾವಕಾಶವಿರದಿದ್ದರೆ;

(viii) ಹಾಗೆ ಅರ್ಜಿ ಸಲ್ಲಿಸುವ ವ್ಯಕ್ತಿಗೆ, ಸಂಬಂಧಪಟ್ಟ ಭೂಮಿ ಮೇಲೆ ಯಾವ ಹಕ್ಕೂ ಇಲ್ಲದಿದ್ದರೆ ಅಥವಾ ನಿರ್ಮಿಸುವ, ಮಾರ್ಪಾಟು ಮಾಡುವ, ಸೇರಿಸುವ ಅಥವಾ ಪುನರ್ ನಿರ್ಮಿಸುವ ಹಕ್ಕು ಇಲ್ಲದಿದ್ದರೆ;

(ix) ಯಾವ ಭೂಮಿಯ ಮೇಲೆ ಯಾವುದೇ ಕಟ್ಟಡವನ್ನು ನಿರ್ಮಿಸಲು ಪ್ರಸ್ತಾವಿಸಲಾಗಿದೆಯೋ ಆ ಭೂಮಿಯು ಅಥವಾ ಯಾವ ಭೂಮಿಯ ಮೇಲೆ ಇರುವ ಕಟ್ಟಡವನ್ನು ಮಾರ್ಪಾಟು ಮಾಡುವುದಕ್ಕೆ, ಅದಕ್ಕೆ ಸೇರಿಸುವುದಕ್ಕೆ ಅಥವಾ ಮರು ನಿರ್ಮಾಣ ಮಾಡುವುದಕ್ಕೆ ಪ್ರಸ್ತಾವಿಸಲಾಗಿದೆಯೋ ಆ ಯಾವುದೇ ಭೂಮಿಯು ಅಥವಾ ಕಟ್ಟಡವು ಮುನ್ಸಿಪಲ್ ಕೌನ್ಸಿಲ್‌ಗೆ ಅಗತ್ಯವಾಗಿದ್ದರೆ ಮತ್ತು ಅದನ್ನು ಆರ್ಜಿಸಲು ಕ್ರಮವನ್ನು ತೆಗೆದುಕೊಳ್ಳುತ್ತಿದ್ದರೆ:

- ಒದಗಿಸಿದ ನಕ್ಷೆ ಮತ್ತು ಮಾಹಿತಿಗನುಸಾರವಾಗಿ ನಿರ್ಮಿಸಲು, ಬದಲಾಯಿಸಲು, ಸೇರಿಸಲು ಅಥವಾ ಪುನರ್ ನಿರ್ಮಿಸಲು ಅನುಮತಿಯನ್ನು ನಿರಾಕರಿಸಬಹುದು. ಅಂಥ ನಿರಾಕರಣೆಗೆ ಕಾರಣಗಳನ್ನು ಆದೇಶದಲ್ಲಿ ನಿರೂಪಿಸತಕ್ಕದ್ದು:

ಪರಂತು, (ಸಿ) ಖಂಡದ ಮೇರೆಗಿನ ನಿರ್ದೇಶನವು, ಆ ನಿರ್ದೇಶನವನ್ನು ಕೊಟ್ಟ ದಿನಾಂಕದಿಂದ ಒಂದು ವರ್ಷದ ತರುವಾಯ ಜಾರಿಯಲ್ಲಿರತಕ್ಕದ್ದಲ್ಲ.

(4) ಉಪ-ಪ್ರಕರಣ (3) ರ ಮೇರೆಗೆ ಯಾವುದೇ ಆದೇಶಗಳನ್ನು ಹೊರಡಿಸುವುದಕ್ಕೆ ಮುಂಚೆ, ಮುನ್ಸಿಪಲ್ ಕೌನ್ಸಿಲ್ ಅಂಥ ನೋಟೀಸನ್ನು ಸ್ವೀಕರಿಸಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ,-

(ಎ) ಅಂಥ ಆದೇಶದ ದಿನಾಂಕದಿಂದ ಒಂದು ತಿಂಗಳಿಗೆ ಮೀರದಂಥ ಅವಧಿಯವರೆಗೆ ಉದ್ದೇಶಿತ ಕೆಲಸವನ್ನು ಮುಂದುವರಿಸತಕ್ಕದ್ದಲ್ಲವೆಂಬ ತಾತ್ಕಾಲಿಕ ಆದೇಶವನ್ನು ಹೊರಡಿಸಬಹುದು; ಅಥವಾ

(ಬಿ) ಇನ್ನೂ ಹೆಚ್ಚಿನ ವಿವರಗಳನ್ನು ಕೇಳಬಹುದು.

(5) ಉಪ-ಪ್ರಕರಣ (1)ರ ಮೇರೆಗೆ ಕೊಟ್ಟಿರುವ ನೋಟೀಸಿನಲ್ಲಿ ಪ್ರಸ್ತಾವಿಸಿರುವ ಕಟ್ಟಡ ಕಟ್ಟುವುದನ್ನು ಈ ಅಧಿನಿಯಮದ ಅಥವಾ ಅದರ ಮೇರೆಗೆ ತಾತ್ಕಾಲಿಕವಾಗಿ ಜಾರಿಯಲ್ಲಿರುವ ಯಾವುದೇ ನಿಯಮದ ಅಥವಾ ಬೈಲಾದ ಯಾವುದೇ ನಿಬಂಧನೆಗೆ ಅಸಂಗತವಾದಂತೆ, ಅಂಥ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿರಬಹುದಾದಂಥ ರೀತಿಯಲ್ಲಿ ಈ ಕೆಳಕಂಡ ಸಂದರ್ಭಗಳಲ್ಲಿ ಎಂದರೆ:-

(ಎ) ಉಪ-ಪ್ರಕರಣ (1)ರ ಮೇರೆಗೆ ಕೊಟ್ಟಿರುವ ನೋಟೀಸನ್ನು ಸ್ವೀಕರಿಸಲಾದಂದಿನಿಂದ ಒಂದು ತಿಂಗಳೊಳಗಾಗಿ ಮುನ್ಸಿಪಲ್ ಕೌನ್ಸಿಲ್,-

(i) ಉಪ-ಪ್ರಕರಣ (3) ರ ಮೇರೆಗೆ ಯಾವುದೇ ಆದೇಶಗಳನ್ನು ಮಾಡಿದ್ದು ಉದ್ದೇಶಿತ ಕೆಲಸಕ್ಕೆ ಸಂಬಂಧಿಸಿದಂತೆ ಅದರ ಬಗ್ಗೆ ನೋಟೀಸನ್ನು ಜಾರಿ ಮಾಡಿಲ್ಲದಿರುವುದು; ಅಥವಾ

(ii) ಉಪ-ಪ್ರಕರಣ (4) ರ ಮೇರೆಗೆ ಯಾವುದೇ ತಾತ್ಕಾಲಿಕ ಆದೇಶವನ್ನು ಹೊರಡಿಸಿರದಿದ್ದರೆ ಅಥವಾ ಇನ್ನಷ್ಟು ವಿವರಗಳಿಗಾಗಿ ಯಾವುದೇ ತಗಾದೆಯನ್ನು ಮಾಡಿರದಿದ್ದರೆ;

(ಬಿ) ಮುನ್ಸಿಪಲ್ ಕೌನ್ಸಿಲ್ ಅಂಥ ಹೆಚ್ಚಿನ ವಿವರಗಳಿಗಾಗಿ ಅಂಥ ತಗಾದೆಯನ್ನು ಮಾಡಿದ್ದು ಮತ್ತು ಅವುಗಳನ್ನು ಈ ಬಗ್ಗೆ ಜಾರಿಯಲ್ಲಿರುವ ಬೈಲಾಗಳಿಗನುಸಾರವಾಗಿ ಸ್ವೀಕರಿಸಿದ್ದು, ಅಂಥ ವಿವರಗಳನ್ನು ಸ್ವೀಕರಿಸಿದಂದಿನಿಂದ ಒಂದು ತಿಂಗಳೊಳಗಾಗಿ ಯಾವುದೇ ಹೆಚ್ಚಿನ ಆದೇಶಗಳನ್ನು ಹೊರಡಿಸದಿದ್ದರೆ.

(6) ಯಾವ ಉದ್ದೇಶಿತ ಕೆಲಸಕ್ಕೆ ಉಪ-ಪ್ರಕರಣ (1) ರಲ್ಲಿ ಹೇಳಿರುವ ನೋಟೀಸ್ ಅಗತ್ಯವಾಗಿದೆಯೋಆ ಯಾವುದೇ ಉದ್ದೇಶಿತ ಕೆಲಸವನ್ನು ಮುಂದುವರಿಸಲು (3)ನೇ ಉಪ-ಪ್ರಕರಣದ ಅಥವಾ (5)ನೇ ಉಪ-ಪ್ರಕರಣದ ಮೇರೆಗೆ ಹಕ್ಕುಳ್ಳವನಾಗುವ ಯಾರೇ ವ್ಯಕ್ತಿಯು (1)ನೇ ಉಪ-ಪ್ರಕರಣದ ಮೇರೆಗೆ ಹೊಸದಾಗಿ ಅರ್ಜಿಯನ್ನು ಸಲ್ಲಿಸಿದ್ದ ಹೊರತು ಮತ್ತು (3)ನೇ ಉಪ-ಪ್ರಕರಣದ ಮೇರೆಗೆ ಹೊಸದಾಗಿ ಅನುಮತಿಯನ್ನು ಮಂಜೂರು ಮಾಡಿದ್ದ ಹೊರತು ಅಥವಾ (5)ನೇ ಉಪ-ಪ್ರಕರಣದ ಮೇರೆಗೆ ಅನುಮತಿಯು ಮಂಜೂರಾಗಿದೆಯೆಂದು ಭಾವಿಸಿದ್ದ ಹೊರತು ಹಾಗೆ ಅದನ್ನು ಮುಂದುವರಿಸಲು ಅವನು ಮೊದಲಿನ ದಿನಾಂಕದಂದು ಹಕ್ಕುಳ್ಳವನಾಗುವನೋ ಆ ದಿನಾಂಕದಿಂದ ಒಂದು ವರ್ಷದ ಅವಧಿಯ ಮುಕ್ತಾಯದ ತರುವಾಯ ಅಂಥ ಕೆಲಸವನ್ನು ಪ್ರಾರಂಭಿಸತಕ್ಕದ್ದಲ್ಲ.

(7) ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನು ಯಾವುದೇ ಕಟ್ಟಡವನ್ನು ಅದರ ನಿರ್ಮಾಣದ, ಪುನರ್ ನಿರ್ಮಾಣದ, ಅದನ್ನು ಕಟ್ಟುವ ಕಾಲದಲ್ಲಿ ಪರಿಶೀಲಿಸಬಹುದು ಮತ್ತು ಅವರಿಗೆ ಆ ಕೆಲಸವು,-

(ಎ) ಅನುಮೋದಿಸಿರುವ ನಕ್ಷೆಗಳಿಗೆ ಅಥವಾ ತಪಸೀಲು ಪಟ್ಟಿಗಳಿಗನುಸಾರವಾಗಿ ಇರದೆ ಬೇರೆಯದೇ ರೀತಿಯಲ್ಲಿ ಇರುವುದೆಂದು; ಅಥವಾ

(ಬಿ) ಈ ಅಧಿನಿಯಮದ ಅಥವಾ ಈ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ನಿಯಮದ, ಬೈಲಾದ, ಆ ಯಾವುವೇ ಉಪಬಂಧಗಳನ್ನು, ಆದೇಶವನ್ನು ಅಥವಾ ಘೋಷಣೆಯನ್ನು ಉಲ್ಲಂಘಿಸುವುದೆಂದು ಕಂಡುಬಂದರೆ ಅವನು ನೋಟೀಸಿನ ಮೂಲಕ ಕಟ್ಟಡದ ಒಡೆಯನನ್ನು ಅದರಲ್ಲಿ ನಮೂದಿಸಿದ ಅವಧಿಯೊಳಗೆ,-

(i) ಅಂಥ ಮಾರ್ಪಾಟುಗಳನ್ನು ಏಕೆ ಮಾಡಬಾರದು ಎಂಬುದಕ್ಕೆ ಕಾರಣವನ್ನು ತೋರಿಸಲು ಅಥವಾ;

(ii) ಸದರಿ ನಕ್ಷೆಗಳಿಗೆ, ತಪಸೀಲು ಪಟ್ಟಿಗಳಿಗೆ ಅಥವಾ ನಿಬಂಧನೆಗಳಿಗನುಗುಣವಾಗಿ ಕೆಲಸವು ಇರುವಂತೆ ಮಾಡುವ ಉದ್ದೇಶಕ್ಕಾಗಿ ಸದರಿ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಮಾರ್ಪಾಟುಗಳನ್ನು ಮಾಡಲು

- ಅಗತ್ಯಪಡಿಸಬಹುದು.

ಮೇಲೆ ಹೇಳಿರುವಂತೆ ಒಡೆಯನು ಕಾರಣವನ್ನು ತೋರಿಸದಿದ್ದರೆ, ಅವನು ಅಂಥ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಮಾರ್ಪಾಟುಗಳನ್ನು ಮಾಡಲು ಬದ್ಧನಾಗಿರತಕ್ಕದ್ದು. ಮೇಲೆ ಹೇಳಿರುವಂತೆ ಒಡೆಯನು ಕಾರಣ ತೋರಿಸಿದರೆ ಮುನ್ಸಿಪಲ್ ಕಮಿಷನರ್ ರು ಅಥವಾ ಚೀಫ್ ಆಫೀಸರ್ ನು ಆದೇಶದ ಮೂಲಕ ಆ ನೋಟೀಸನ್ನು ರದ್ದುಪಡಿಸತಕ್ಕದ್ದು ಅಥವಾ ಸೂಕ್ತವೆಂದು ತಾನು ಯೋಚಿಸಬಹುದಾದಂಥ ಮಾರ್ಪಾಟುಗಳಿಗೊಳಪಟ್ಟು ಅದನ್ನು ಸ್ಥಿರೀಕರಿಸತಕ್ಕದ್ದು.

(8) ಈ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನು ಮುಂದುವರಿಯುತ್ತಿರುವ ಕೆಲಸವು ಮಾನವ ಜೀವನಕ್ಕೆ ಅಪಾಯಕಾರಿಯೆಂದು ಅವರು ಅಭಿಪ್ರಾಯಪಟ್ಟರೆ ಯಾವುದೇ ಕಾಲದಲ್ಲಿ ಯಾವುದೇ ಕಟ್ಟಡದ ನಿರ್ಮಾಣವನ್ನು, ಪುನರ್ ನಿರ್ಮಾಣವನ್ನು ಅಥವಾ ಕಟ್ಟುವುದನ್ನು ನಿಲ್ಲಿಸಬಹುದು.

(9) (ಎ) ಮುನ್ಸಿಪಲ್ ಕಮಿಷನರ್ ಗೆ ಅಥವಾ ಚೀಫ್ ಆಫೀಸರ್ ನಿಗೆ,-

(i) ಕಟ್ಟಡದ ನಿರ್ಮಾಣವನ್ನು, ಪುನರ್ ನಿರ್ಮಾಣವನ್ನು ಅಥವಾ ಕಟ್ಟುವುದನ್ನು,-

(ಎ) ಮುನ್ಸಿಪಲ್ ಕೌನ್ಸಿಲ್‌ನಿಂದ ಅನುಮತಿಯನ್ನು ಪಡೆಯದೆ ಪ್ರಾರಂಭಿಸಲಾಗಿದೆ ಎಂದು; ಅಥವಾ

(ಬಿ) ಅನುಮತಿಯನ್ನು ಮಂಜೂರು ಮಾಡಲಾಗಿದ್ದು ನಕ್ಷೆಗಳಿಗೆ ಅಥವಾ ವಿವರಗಳಿಗೆ ಅನುಸಾರವಾಗಿಯಲ್ಲದೆ ಬೇರೆ ರೀತಿಯಲ್ಲಿ ಕಾರ್ಯಗತಗೊಳಿಸಲಾಗುತ್ತಿದೆ ಅಥವಾ ಸಂಪೂರ್ಣಗೊಳಿಸಲಾಗಿದೆ ಎಂದು; ಅಥವಾ

(ಸಿ) ಈ ಅಧಿನಿಯಮದ ಅಥವಾ ಈ ಅಧಿನಿಯಮದ ಮೇರೆಗೆ ರಚಿಸಿದ ಯಾವುದೇ ನಿಯಮದ ಅಥವಾ ಬೈಲಾದ ಯಾವುದೇ

ಉಪಬಂಧಗಳ ಅಥವಾ ಈ ಅಧಿನಿಯಮದ ಅಥವಾ ಅಂಥ ನಿಯಮಗಳ ಅಥವಾ ಬೈಲಾಗಳ ಮೇರೆಗೆ ಕಾನೂನುಬದ್ಧವಾಗಿ ಕೊಟ್ಟ ಅಥವಾ ಮಾಡಿದ ಯಾವುದೇ ನಿರ್ದೇಶನವನ್ನು ಕಡ್ಡಾಯ ಕೋರಿಕೆಯನ್ನು ಉಲ್ಲಂಘಿಸಿ ಕಾರ್ಯಗತಗೊಳಿಸಲಾಗುತ್ತಿದ್ದರೆ ಎಂದು ಅಥವಾ ಪೂರ್ಣಗೊಳಿಸಲಾಗಿದೆ ಎಂದು;

(ii) ಉಪ-ಪ್ರಕರಣ (8) ರ ಮೇರೆಗೆ ಕೊಟ್ಟ ಯಾವುದೇ ನೋಟೀಸಿನ ಮೂಲಕ ಅಗತ್ಯಪಡಿಸಿದ ಯಾವುವೇ ಮಾರ್ಪಾಟುಗಳನ್ನು ಕ್ರಮಬದ್ಧವಾಗಿ ಮಾಡಿಲ್ಲ ಎಂದು ಮನದಟ್ಟಾದರೆ ಮಾಡಿದ ಕೆಲಸವನ್ನು ಅಥವಾ ಕಾನೂನು ಬಾಹಿರವಾಗಿ ಇಂತಿಷ್ಟು ಕೆಲಸವನ್ನು ನಿರ್ವಹಿಸಲಾಗಿದೆಯೆಂದು ಅಷ್ಟನ್ನು ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ಅಭಿಪ್ರಾಯಪಡುವರೋ ಕೆಡವಿ ಹಾಕಲು ಅಥವಾ ಮುನ್ಸಿಪಲ್ ಕಮಿಷನರ್‌ನ ಅಥವಾ ಚೀಫ್ ಆಫೀಸರ್ ನ ಅಭಿಪ್ರಾಯದಲ್ಲಿ, ಹಿಂದೆ ಹೇಳಿದಂತೆ ಈ ಅಧಿನಿಯಮಕ್ಕೆ, ನಿಯಮಗಳಿಗೆ, ಬೈಲಾಗಳಿಗೆ, ನಿರ್ದೇಶನಕ್ಕೆ ಅಥವಾ ಕಡ್ಡಾಯವಾಗಿ ಕೋರಿರುವುದಕ್ಕೆ ಅಥವಾ ನಕ್ಷೆಗಳಿಗೆ ಅಥವಾ ವಿವರಗಳಿಗೆ ಅನುಗುಣವಾಗಿ ಆ ಕೆಲಸ ಇರುವಂತೆ ಮಾಡಲು ಅವಶ್ಯವಾಗಬಹುದಾದಂಥ ಮಾರ್ಪಾಟುಗಳನ್ನು ಮಾಡಲು ಒಡೆಯನನ್ನು ಅಥವಾ ಕಟ್ಟುವವನನ್ನು ಅಗತ್ಯಪಡಿಸುವ ತಾತ್ಕಾಲಿಕ ಆದೇಶವನ್ನು ಅವನು ಮಾಡಬಹುದು. ಮತ್ತು ಸದರಿ ಆದೇಶವನ್ನು ಪಾಲಿಸುವವರೆಗೆ ಒಡೆಯನಿಗೆ ಅಥವಾ ಕಟ್ಟುವವನಿಗೆ, ಕಟ್ಟಡ ಕಟ್ಟುವುದನ್ನು ಮುಂದುವರಿಸತಕ್ಕದ್ದಲ್ಲವೆಂದೂ ಸಹ ನಿರ್ದೇಶಿಸಬಹುದು.

(ಬಿ) ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನು (ಎ) ಖಂಡದ ಮೇರೆಗೆ ಮಾಡಿದ ತಾತ್ಕಾಲಿಕ ಆದೇಶದ ಪ್ರತಿಯನ್ನು, ಆದೇಶವನ್ನು ಏಕೆ ಸ್ಥಿರೀಕರಿಸಬಾರದು ಎಂಬುದರ ಬಗ್ಗೆ ನೋಟೀಸನ್ನು, ಆ ನೋಟೀಸಿನಲ್ಲಿ ಆ ಕೆಲಸಕ್ಕೆ ಯಾವ ನಕ್ಷೆಗಳ ಅಥವಾ ಯಾವ ವಿವರಗಳ ಆಧಾರದ ಮೇಲೆ ಅಂಥ ಅನುಮತಿ ನೀಡಲಾಗಿದೆಯೋ ಆ ಸಮಂಜಸ ಕಾಲವನ್ನು ನಿರ್ದಿಷ್ಟಪಡಿಸಿ ಆ ಕಾಲದೊಳಗೆ ಕಾರಣ ತೋರಿಸಲು ಅವನನ್ನು ಅಗತ್ಯಪಡಿಸುವ ಕಟ್ಟಡದ ಒಡೆಯನಿಗೆ ಜಾರಿ ಮಾಡತಕ್ಕದ್ದು.

(ಸಿ) ಒಡೆಯನು ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನಿಗೆ ಮನದಟ್ಟಾಗುವಂತೆ ಕಾರಣ ತೋರಿಸಲು ತಪ್ಪಿದರೆ, ಅವರು ಮಾಡುವುದು ಸೂಕ್ತವೆಂದು ತಾನು ಯೋಚಿಸಬಹುದಾದಂಥ ಯಾವುದೇ ಮಾರ್ಪಾಟಿನೊಂದಿಗೆ ಆದೇಶವನ್ನು ಅವನು ಸ್ಥಿರೀಕರಿಸಬಹುದು ಮತ್ತು ಅಂಥ ಆದೇಶಕ್ಕೆ ಆನಂತರ ಒಡೆಯನು ಬದ್ಧನಾಗಿರತಕ್ಕದ್ದು.

(ಡಿ) ಖಂಡ (ಸಿ) ಯ ಮೇರೆಗೆ ಮಾಡಿದ ಆದೇಶದಲ್ಲಿ ನಮೂದಿಸಿದ ಸಮಂಜಸ ಕಾಲದೊಳಗೆ ಒಡೆಯನು ಅದನ್ನು ಪಾಲಿಸದಿದ್ದರೆ ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನು, ಆ ಆದೇಶವು ಸರಿಯಾಗಿ ಜಾರಿಗೆ ತರುವುದಕ್ಕೆ ಯಾವ ಕ್ರಮಗಳು ಅಥವಾ ಏನನ್ನಾದರೂ ಮಾಡುವುದು ಅವಶ್ಯಕವೆಂದು ಅಭಿಪ್ರಾಯಪಡುವರೋ ಆ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳಬಹುದು ಅಥವಾ ಏನನ್ನಾದರೂ ಮಾಡಬಹುದು.

(ಇ) ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನು (ಡಿ) ಖಂಡದ ಮೇರೆಗೆ ವಹಿಸಿದ ಯಾವುದೇ ಯುಕ್ತ ವೆಚ್ಚಗಳನ್ನು, ಆ ಆದೇಶವನ್ನು ಯಾವ ವ್ಯಕ್ತಿಗೆ ಕಳುಹಿಸಲಾಗಿತ್ತೋ ಆ ವ್ಯಕ್ತಿಯಿಂದ ಈ ಅಧಿನಿಯಮದ ಮೇರೆಗಿನ ಕಟ್ಟಡದ ಮೇಲಿನ ತೆರಿಗೆಯಂತೆ ಅದೇ ರೀತಿಯಲ್ಲಿ ವಸೂಲ್ಮಾಡತಕ್ಕದ್ದು ಮತ್ತು ಕ್ರಮಗಳನ್ನು ತೆಗೆದುಕೊಳ್ಳುವಾಗ, ಸಂಬಂಧಿಸಿದ ಸ್ವತ್ತಿನ ಮೇಲೆ ಕಂಡುಬರುವ ಯಾವುವೇ ಸಾಮಗ್ರಿಗಳನ್ನು ಬಳಸಿಕೊಳ್ಳಬಹುದು. ಮತ್ತು ಅವುಗಳನ್ನು ಮಾರಬಹುದು, ಮಾರಾಟದ ಉತ್ಪತ್ತಿಗಳನ್ನು ವಹಿಸಿದ ವೆಚ್ಚಗಳನ್ನು ಸಂದಾಯ ಮಾಡಲು ವಿನಿಯೋಗಿಸಬಹುದು.

ವಿವರಣೆ:- ಈ ಅಧ್ಯಾಯದಾದ್ಯಂತ ``ಕಟ್ಟಡವನ್ನು ಕಟ್ಟುವುದು'' ಪದಾವಳಿಯು,-

(ಎ) ಯಾವುದೇ ಕಟ್ಟಡದ ಅಥವಾ ಕಾಂಪೌಂಡ್ ಗೋಡೆ ಮತ್ತು ಬೇಲಿ ವರಾಂಡ, ಜೋಡಿಸಿದ ಜಗಲಿ, ಮೇಲುಪಾಯ, ಬಾಗಿಲು ಮೆಟ್ಟಿಲು ಅಥವಾ ಅದೇ ರೀತಿಯವುಗಳೂ ಒಳಗೊಂಡಂತೆ ಕಟ್ಟಡದ ಅವು ಭಾಗವಾಗಿರಲಿ ಅಥವಾ

ಭಾಗವಾಗಿರದಿರಲಿ ಯಾವುದೇ ಗೋಡೆಯಲ್ಲಿ ಯಾವುದೇ ಮುಖ್ಯ ಮಾರ್ಪಾಟು, ವಿಸ್ತರಣೆ ಅಥವಾ ಪುನರ್ ನಿರ್ಮಾಣ;

(ಬಿ) ಮೂಲತಃ ಮಾನವನ ವಸತಿಗಾಗಿ ನಿರ್ಮಿಸಿರದ ಯಾವುದೇ ಕಟ್ಟಡವನ್ನು ವಾಸದ ಮನೆಯಾಗಿ ಪರಿವರ್ತಿಸುವುದು ಅಥವಾ ಮೂಲತಃ ಹಾಗೆ ನಿರ್ಮಿಸಿದ್ದು, ತರುವಾಯ ಯಾವುದೇ ಇತರ ಉದ್ದೇಶಕ್ಕಾಗಿ ಬಳಸಿಕೊಳ್ಳುವುದು;

(ಸಿ) ಮೂಲತಃ ಒಂದೇ ವಾಸದ ಮನೆಯಾಗಿ ಮಾತ್ರ ನಿರ್ಮಿಸಿದ ಕಟ್ಟಡವನ್ನು ಒಂದಕ್ಕಿಂತ ಹೆಚ್ಚು ವಾಸದ ಮನೆಗಳಾಗಿ ಪರಿವರ್ತಿಸುವುದು;

(ಡಿ) ಮಾನವನು ವಾಸಿಸುವ ಎರಡು ಅಥವಾ ಹೆಚ್ಚು ಸ್ಥಳಗಳನ್ನು ಹೆಚ್ಚಿನ ಸಂಖ್ಯೆಯ ಅಂಥ ಸ್ಥಳಗಳಾಗಿ ಪರಿವರ್ತಿಸುವುದು;

(ಇ) ಧಾರ್ಮಿಕ ಪೂಜಾ ಸ್ಥಳವಾಗಿ ಅಥವಾ ಅಂಥ ಉದ್ದೇಶಕ್ಕಾಗಿ ಮೂಲತಃ ನಿರ್ಮಿಸಿರದ ಯಾವುದೇ ಕಟ್ಟಡವನ್ನು ಪವಿತ್ರ ಉದ್ದೇಶಕ್ಕಾಗಿ ಕಟ್ಟಡವಾಗಿ ಪರಿವರ್ತಿಸುವುದು;

(ಎಫ್) ಯಾವುದೇ ಕಟ್ಟಡವನ್ನು ಮಳಿಗೆಯಂತೆ, ಅಂಗಡಿಯಂತೆ, ಉಗ್ರಾಣದಂತೆ ಅಥವಾ ಗೋಡೌನ್‌ನಂತೆ, ಲಾಯದಂತೆ, ಕಾರ್ಖಾನೆಯಂತೆ ಅಥವಾ ಗ್ಯಾರೇಜ್‌ನಂತೆ ಬಳಕೆಗಾಗಿ ಮೂಲತಃ ನಿರ್ಮಿಸಿರದ ಅಥವಾ ಬದಲಾವಣೆಗೆ ಮುಂಚೆ ಹಾಗೆ ಬಳಸಿರದ ಆ ಕಟ್ಟಡವನ್ನು ಹಾಗೆ ಬಳಕೆಗಾಗಿ ಪರಿವರ್ತಿಸುವುದು;

(ಜಿ) ಕಟ್ಟಡದ ಚರಂಡಿ ವ್ಯವಸ್ಥೆಗೆ, ವಾಯು ಸಂಚಾರಕ್ಕೆ ಅಥವಾ ಇತರ ನೈರ್ಮಲ್ಯ ವ್ಯವಸ್ಥೆಗಳಿಗೆ ಅಥವಾ ಅದರ ಸುರಕ್ಷತೆಗೆ ಅಥವಾ ಭದ್ರತೆಗೆ ಬಾಧಕವಾಗುವಂತೆ ಅದರ ಒಳ ವ್ಯವಸ್ಥೆಗಳಲ್ಲಿ ಅಂಥ ಬದಲಾವಣೆ ಮಾಡುವುದು; ಮತ್ತು

(ಹೆಚ್) ಯಾವುದೇ ಕಟ್ಟಡಗಳಿಗೆ ಯಾವುವೇ ಕೊಠಡಿಗಳನ್ನು, ಕಟ್ಟಡಗಳನ್ನು ಅಥವಾ ಇತರೆ ರಚನೆಗಳನ್ನು ಸೇರಿಸುವುದು

- ಇವುಗಳನ್ನು ಒಳಗೊಳ್ಳುತ್ತದೆ ಮತ್ತು ಹಾಗೆ ಬದಲಾಯಿಸಿದ, ವಿಸ್ತರಿಸಿದ, ಪುನರ್ ನಿರ್ಮಿಸಿದ, ಪರಿವರ್ತಿಸಿದ ಅಥವಾ ಸೇರಿಸಿದ ಕಟ್ಟಡವನ್ನು ಈ ಅಧ್ಯಾಯದ ಉದ್ದೇಶಕ್ಕಾಗಿ ಹೊಸ ಕಟ್ಟಡವೆಂದು ಭಾವಿಸತಕ್ಕದ್ದು.

(10) ಉಪ-ಪ್ರಕರಣ (3) ರ (ಡಿ) ಖಂಡದ (ix)ನೇ ಉಪಖಂಡದ ಮೇರೆಗೆ, ಅನುಮತಿಯನ್ನು ನಿರಾಕರಿಸಿದಂಥ ದಿನಾಂಕದಿಂದ ಆರು ತಿಂಗಳ ಅವಧಿಯೊಳಗೆ ಮುನ್ಸಿಪಲ್ ಕೌನ್ಸಿಲ್, ಭೂಮಿಯನ್ನು ಆರ್ಜಿಸದಿದ್ದರೆ ಅಥವಾ ಅಂಥ ಅವಧಿಯೊಳಗೆ, 1894ರ ಭೂ ಆರ್ಜನಾ ಅಧಿನಿಯಮದ ಉಪಬಂಧಗಳ ಮೇರೆಗೆ ಕಡ್ಡಾಯ ಆರ್ಜನೆಗಾಗಿ, ವ್ಯವಹರಣೆಗಳನ್ನು ಪ್ರಾರಂಭಿಸುವುದಕ್ಕಾಗಿ ಡೆಪ್ಯೂಟಿ ಕಮಿಷನರ್‌ಗೆ ಅರ್ಜಿಯನ್ನು ಸಲ್ಲಿಸಿರದಿದ್ದರೆ ಅಥವಾ ಮುನ್ಸಿಪಲ್ ಕೌನ್ಸಿಲ್ ಭೂಮಿಯನ್ನು ಆರ್ಜಿಸುವ ಪ್ರಸ್ತಾಪವನ್ನು ಕೈಬಿಟ್ಟರೆ ಮುನ್ಸಿಪಲ್ ಕಮೀಷನರ್ ಅಥವಾ ಚೀಫ್ ಆಫೀಸರ್ ನು ಸಂಬಂಧಪಟ್ಟ ವ್ಯಕ್ತಿಗೆ, ಕಟ್ಟಲು ಅಥವಾ ಬದಲಾಯಿಸಲು ತಿಳಿಸಿದ್ದ ನಿರಾಕರಣೆಯನ್ನು ಹಿಂತೆಗೆದುಕೊಳ್ಳಲಾಗಿದೆಯೆಂದು ತಿಳಿಸತಕ್ಕದ್ದು ಮತ್ತು ಅರ್ಜಿಯನ್ನು ಗುಣಾವಗುಣಗಳ ಮೇಲೆ ಇನ್ನಷ್ಟು ಪರ್ಯಾಲೋಚಿಸತಕ್ಕದ್ದು.

[1]**[187ಎ. ಕಾನೂನುಬಾಹಿರವಾದ ಕೆಲವು ಕಟ್ಟಡಗಳನ್ನು ಸಕ್ರಮಗೊಳಿಸುವುದು**:- (1) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, 187ನೇ ಪ್ರಕರಣವನ್ನು ಹಾಗೂ ಅದರ ಅಡಿಯಲ್ಲಿ ರಚಿಸಿದ ಯಾವುವೇ ಕಟ್ಟಡದ ಬೈಲಾಗಳನ್ನು ಉಲ್ಲಂಘಿಸಿ, ಯಾವುದೇ ಕಟ್ಟಡದ ನಿರ್ಮಾಣವನ್ನು ಪೂರ್ಣಗೊಳಿಸಿದ್ದರೆ, ಚೀಫ್ ಆಫೀಸರ್ ನು ಈ ಮುಂದಿನ ನಿರ್ಬಂಧಗಳಿಗೆ ಮತ್ತು ನಿಯಮಿಸಬಹುದಾದಂಥ ನಿಯಮಗಳಿಗೊಳಪಟ್ಟು ಮತ್ತು (2)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಮೊಬಲಗನ್ನು ಸಂದಾಯ ಮಾಡಿದ ಮೇಲೆ ಸಂದರ್ಭಾನುಸಾರ ಮುನ್ಸಿಪಲ್ ಕಮಿಷನರ್ ಅಥವಾ ಸಂದರ್ಭಾನುಸಾರ [3][[2][ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಹಾಗೂ ಕೆಲವು ಇತರ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 2013ರ ಪ್ರಾರಂಭದ ದಿನಾಂಕಕ್ಕೆ][2]][3] ಮೊದಲು ನಿರ್ಮಿಸಿದ ಕಟ್ಟಡವನ್ನು ಸಕ್ರಮಗೊಳಿಸಬಹುದು, ಎಂದರೆ,-

(ಎ) ಕಟ್ಟಡವನ್ನು ಪಕ್ಕದ ಸ್ವತ್ತಿಗೆ ತಾಗಿಕೊಂಡಿರುವಂತೆ ಕಟ್ಟಿದ್ದರೆ ಅಥವಾ ಹಿಂದಕ್ಕೆ ಸರಿಸಲು ಕಲ್ಪಿಸಿದ್ದ ಅಂತರದ ಮಿತಿಯು ಬೈಲಾಗಳಲ್ಲಿ ಗೊತ್ತುಪಡಿಸಿದ್ದ ಮಿತಿಗಳಿಗಿಂತ ಕಡಿಮೆ ಇದ್ದಲ್ಲಿ, ನಿವಾಸೇತರ ಕಟ್ಟಡಗಳಾದರೆ ಶೇಕಡಾ ಇಪ್ಪತ್ತೈದರವರೆಗೆ ಮತ್ತು ನಿವಾಸದ ಕಟ್ಟಡಗಳಾದರೆ ಶೇಕಡಾ ಐವತ್ತರವರೆಗೆ ಉಲ್ಲಂಘನೆಯಾಗಿದ್ದರೆ ಅದನ್ನು ಸಕ್ರಮಗೊಳಿಸತಕ್ಕದ್ದು;

(ಬಿ) ತಳ ಮಹಡಿಯಲ್ಲಿ ಏನನ್ನಾದರೂ ನಿರ್ಮಿಸಿದ್ದರೆ ಅಥವಾ ಬೈಲಾವನ್ನು ಉಲ್ಲಂಘಿಸಿ ಬಳಕೆ ಮಾಡಿದ್ದರೆ ಅದನ್ನು ಸಕ್ರಮಗೊಳಿಸತಕ್ಕದ್ದಲ್ಲ;

(ಸಿ) ಕಟ್ಟಡದ ನಿರ್ಮಾಣದಿಂದಾಗಿ ರಸ್ತೆಗೆ ನಿರ್ದಿಷ್ಟಪಡಿಸಿದ ಕಟ್ಟಡ ರೇಖೆಯ ಉಲ್ಲಂಘನೆಯಾದರೆ, ಅಂಥ ಕಟ್ಟಡದ ಮಾಲೀಕನು ಕಟ್ಟಡ ರೇಖೆಯ ಹಾಗೂ ರಸ್ತೆಯ ಅಥವಾ ಪಾದಚಾರಿ ರಸ್ತೆಯ ಅಥವಾ ಅಂಚಿನ ನಡುವಿನ ಜಾಗವನ್ನು, ಸಂಬಂಧಪಟ್ಟ ರಸ್ತೆಯನ್ನು ಅಗಲ ಮಾಡುವ ಉದ್ದೇಶಕ್ಕಾಗಿ ಅವಶ್ಯಕವಾದಾಗ ಉಚಿತವಾಗಿ ಬಿಟ್ಟುಕೊಡುವುದಾಗಿ ಮುಚ್ಚಳಿಕೆಯನ್ನು ಬರೆದುಕೊಟ್ಟ ಹೊರತು ಆ ಕಟ್ಟಡದ ನಿರ್ಮಾಣವನ್ನು ಸಕ್ರಮಗೊಳಿಸತಕ್ಕದ್ದಲ್ಲ;

(ಡಿ) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ, 1961ರ 76ಎಫ್‌ಎಫ್ ಪ್ರಕರಣದ (2) ರಿಂದ (14)ರ ವರೆಗಿನ ಉಪ-ಪ್ರಕರಣಗಳ ಉಪಬಂಧಗಳು ಯಥೋಚಿತ ಬದಲಾವಣೆಗಳೊಂದಿಗೆ ಈ ಪ್ರಕರಣದ ಅಡಿಯಲ್ಲಿ ಕಟ್ಟಡವನ್ನು ಸಕ್ರಮಗೊಳಿಸುವುದಕ್ಕೆ ಅನ್ವಯವಾಗತಕ್ಕದ್ದು ಮತ್ತು ಸಕ್ರಮಗೊಳಿಸುವುದಕ್ಕಾಗಿ ಅರ್ಜಿಯನ್ನು ಸಂದರ್ಭಾನುಸಾರ ಮುನಿಸಿಪಲ್ ಕಮಿಷನರ್ ಗೆ ಅಥವಾ ಚೀಫ್ ಆಫೀಸರ್ ಗೆ ಸಲ್ಲಿಸತಕ್ಕದ್ದು.

(2) ಈ ಪ್ರಕರಣದ ಅಡಿಯಲ್ಲಿ ಯಾವುದೇ ನಿರ್ಮಾಣದ ಸಕ್ರಮೀಕರಣವು, ಗೊತ್ತುಪಡಿಸಿದ ಮೊಬಲಗನ್ನು ಸಂದಾಯ ಮಾಡುವುದಕ್ಕೆ ಒಳಪಟ್ಟಿರತಕ್ಕದ್ದು ಮತ್ತು ಗೊತ್ತುಪಡಿಸಿದ ಮೊಬಲಗು, ಕಟ್ಟಡ ನಿರ್ಮಾಣ ಬೈಲಾಗಳ ಬೇರೆಬೇರೆ ಉಲ್ಲಂಘನೆಗಳಿಗೆ ಬೇರೆ ಬೇರೆಯಾಗಿರತಕ್ಕದ್ದು:

ಪರಂತು, ಹಾಗೆ ನಿರ್ದಿಷ್ಟಪಡಿಸಲಾದ ಮೊಬಲಗು,-

(i) ಮೇಲೆ ಹೇಳಿರುವ ಉಪಬಂಧಗಳನ್ನು ಉಲ್ಲಂಘಿಸಿ ಕಟ್ಟಡದ ಭಾಗವನ್ನು ಕಟ್ಟಿದರೆ, ಅಂಥ ಉಲ್ಲಂಘನೆಯು ಅಂತರದ ಮಿತಿಯ ನಿಬಂಧನೆಗಳ ಮತ್ತು ಅನುಮತಿಸಬಹುದಾದ ನೆಲವಿಸ್ತೀರ್ಣದ ದಾಮಾಷಾ ಪ್ರಮಾಣದ ಶೇಕಡಾ ಇಪ್ಪತ್ತೈದನ್ನು ಮೀರದಿದ್ದರೆ, ಕಟ್ಟಡದ ಆ ಭಾಗಕ್ಕೆ ಕರ್ನಾಟಕ ಸ್ಟಾಂಪ್ ಅಧಿನಿಯಮ, 1957 ಕ್ಕೆ ಮತ್ತು ಅದರ ಅಡಿಯಲ್ಲಿ ರಚಿಸಿದ ನಿಯಮಗಳಿಗೆ ಅನುಸಾರವಾಗಿ ನಿರ್ಧರಿಸಿದ ಮಾರುಕಟ್ಟೆ ಮೌಲ್ಯದ ಶೇಕಡಾ [2][ಆರಕ್ಕಿಂತ][2] ಕಡಿಮೆ ಇರತಕ್ಕದ್ದಲ್ಲ;

(ii) ಮೇಲೆ ಹೇಳಿರುವ ಉಪಬಂಧಗಳನ್ನು ಉಲ್ಲಂಘಿಸಿ ಕಟ್ಟಡದ ಭಾಗವನ್ನು ಕಟ್ಟಿದ್ದರೆ, ಅಂಥ ಉಲ್ಲಂಘನೆಯ ಅಂತರದ ಮಿತಿಯ ನಿಬಂಧನೆಗಳ ಮತ್ತು ಅನುಮತಿಸಬಹುದಾದ ನೆಲ ವಿಸ್ತೀರ್ಣದ ದಾಮಾಷಾ ಪ್ರಮಾಣದ ಶೇಕಡಾ ಇಪ್ಪತ್ತೈದನ್ನು ಮೀರಿದ್ದು, ಶೇಕಡಾ ಐವತ್ತು ಮೀರದಿದ್ದಲ್ಲಿ, ಕರ್ನಾಟಕ ಸ್ಟಾಂಪು ಅಧಿನಿಯಮ, 1957 ಕ್ಕೆ ಮತ್ತು ಅದರ ಅಡಿಯಲ್ಲಿ ರಚಿಸಿದ ನಿಯಮಗಳಿಗೆ ಅನುಸಾರವಾಗಿ ನಿರ್ಧರಿಸಿದ, ಮಾರುಕಟ್ಟೆ ಮೌಲ್ಯದ ಶೇಕಡಾ [2][ಎಂಟಕ್ಕಿಂತ][2] ಕಡಿಮೆ ಇರತಕ್ಕದ್ದಲ್ಲ:

ಪರಂತು, ಮೇಲೆ ಹೇಳಿರುವ ಉಪಬಂಧಗಳನ್ನು ಉಲ್ಲಂಘಿಸಿ ಕಟ್ಟಡದ ಭಾಗವನ್ನು ನಿವಾಸೇತರ ಉದ್ದೇಶಕ್ಕಾಗಿ ಬಳಸುತ್ತಿದ್ದರೆ ಅಥವಾ ಅದಕ್ಕೆಂದು ಉದ್ದೇಶಿಸಿದ್ದರೆ ಆಗ, ಅಂಥ ಭಾಗವನ್ನು ಸಕ್ರಮಗೊಳಿಸಲು ಸಂದಾಯವಾಗತಕ್ಕ ಮೊಬಲಗು ಎಷ್ಟೆಂದರೆ-

(ಎ) ಮೇಲೆ ಹೇಳಿರುವ ಉಪಬಂಧಗಳನ್ನು ಉಲ್ಲಂಘಿಸಿ ಕಟ್ಟಡದ ಭಾಗವನ್ನು ಕಟ್ಟಿದ್ದರೆ, ಅಂಥ ಉಲ್ಲಂಘನೆಯು ಅಂತ ಮಿತಿಯ ನಿಬಂಧನೆಗಳ ಹಾಗೂ ಅನುಮತಿಸಬಹುದಾದ ನೆಲ ವಿಸ್ತೀರ್ಣದ ದಾಮಾಷಾ ಪ್ರಮಾಣದ ಶೇಕಡಾ ಹನ್ನೆರಡೂವರೆಯನ್ನು ಮೀರದಿದ್ದರೆ, ಕಟ್ಟಡದ ಆ ಭಾಗಕ್ಕೆ ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957 ಕ್ಕೆ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೆ

ಅನುಸಾರವಾಗಿ ನಿರ್ಧರಿಸಿದ, ಮಾರುಕಟ್ಟೆ ಮೌಲ್ಯದ ಶೇಕಡಾ [2][ಇಪ್ಪತ್ತರಷ್ಟು][2] ಇರತಕ್ಕದ್ದು.

(ಬಿ) ಮೇಲೆ ಹೇಳಿರುವ ಉಪಬಂಧಗಳನ್ನು ಉಲ್ಲಂಘಿಸಿ ಕಟ್ಟಡದ ಭಾಗವನ್ನು ಕಟ್ಟಿದ್ದರೆ, ಅಂಥ ಉಲ್ಲಂಘನೆಯು ಅಂತ ಮಿತಿಯ ನಿಬಂಧನೆಗಳ ಹಾಗೂ ಅನುಮತಿಸಬಹುದಾದ ನೆಲ ವಿಸ್ತೀರ್ಣದ ದಾಮಾಷಾ ಪ್ರಮಾಣದ ಶೇಕಡಾ ಹನ್ನೆರಡೂವರೆಯನ್ನು ಮೀರಿದ್ದು, ಆದರೆ, ಶೇಕಡಾ ಇಪ್ಪತ್ತೈದನ್ನು ಮೀರದಿದ್ದರೆ, ಕಟ್ಟಡದ ಆ ಭಾಗಕ್ಕೆ ಕರ್ನಾಟಕ ಸ್ವಾಮ್ಯಂಪು ಅಧಿನಿಯಮ, 1957 ಕ್ಕೆ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಅನುಸಾರವಾಗಿ ನಿರ್ಧರಿಸಿದ, ಮಾರುಕಟ್ಟೆ ಮೌಲ್ಯದ ಶೇಕಡಾ [3][ಮೂವತ್ತೈದರಷ್ಟು][3] ಆಗಿರತಕ್ಕದ್ದು.

(3) ಯಾರೇ ವ್ಯಕ್ತಿಯು, ತಾನು ಅದೇ ಉಲ್ಲಂಘನೆಗಾಗಿ ಈ ಅಧಿನಿಯಮದ ಅಡಿಯಲ್ಲಿ ಸಕ್ರಮೀಕರಣ ಫೀಜನ್ನು ಸಂದಾಯ ಮಾಡಿದ್ದರೆ, ಯಾವುದೇ ಇತರ ಕಾನೂನಿನ ಅಡಿಯಲ್ಲಿನಮೇರೆಗೆ ಸಕ್ರಮೀಕರಣಕ್ಕಾಗಿ ದಂಡವನ್ನು ಅಥವಾ ಫೀಜನ್ನು ಸಂದಾಯ ಮಾಡುವುದಕ್ಕೆ ಗುರಿಯಾಗತಕ್ಕದ್ದಲ್ಲ.

(4) ಉಪಪ್ರಕರಣ (1) ರ ಅಡಿಯಲ್ಲಿ ಮಾಡಿದ ಎಲ್ಲಾ ಸಂದಾಯಗಳನ್ನು ಸಂಬಂಧಪಟ್ಟ ಸ್ಥಳೀಯ/ ಯೋಜನಾ ಪ್ರಾಧಿಕಾರಗಳಲ್ಲಿ ಇಡಲಾದ ನಗರ ಪ್ರದೇಶಗಳ ಮೂಲ ಸೌಲಭ್ಯ ಅಭಿವೃದ್ಧಿ ನಿಧಿ ಎಂದು ಕರೆಯಲಾಗುವ ಪ್ರತ್ಯೇಕ ನಿಧಿಗೆ ಜಮೆ ಮಾಡತಕ್ಕದ್ದು ಹಾಗೂ ಅದನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಮೂಲಸೌಲಭ್ಯದ ನಾಗರಿಕ ಸೌಲಭ್ಯಗಳ ಅಭಿವೃದ್ಧಿಗೆ, ವಿದ್ಯುತ್ ದೀಪಗಳು, ಉದ್ಯಾನವನಗಳು, ಕುಡಿಯುವ ನೀರಿನ ಸೌಲಭ್ಯ, ಚರಂಡಿ ವ್ಯವಸ್ಥೆಗೆ ಮತ್ತು ಯಾವುದೇ ಇತರ ಮೂಲಸೌಲಭ್ಯಗಳನ್ನು ಒದಗಿಸಲು ಬಳಸಿಕೊಳ್ಳತಕ್ಕದ್ದು.

2. 2013ರ ಅಧಿನಿಯಮ 57ರ ಮೂಲಕ 27.8.2013 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

3. 2013ರ ಅಧಿನಿಯಮ 67ರ ಮೂಲಕ 19.10.2013 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ ಎಂದು ಭಾವಿಸತಕ್ಕದ್ದು.

187ಬಿ. ಅನಧಿಕೃತ ಮಾರ್ಗಾಂತರಗಳು ಅಥವಾ ನಿರ್ಮಾಣಗಳನ್ನು ತಡೆಯಲು ವಿಫಲನಾದ ಆ ಪ್ರದೇಶದ ಅಧಿಕಾರವ್ಯಾಪ್ತಿಯುಳ್ಳ ಅಧಿಕಾರಿಗೆ ದಂಡ:- ಆಯಾ ಪ್ರದೇಶದ ಮೇಲೆ ಅಧಿಕಾರವ್ಯಾಪ್ತಿಯುಳ್ಳ ಅಧಿಕಾರಿಯು, ತನ್ನ ಅಧಿಕಾರವ್ಯಾಪ್ತಿಯೊಳಗಿನ ಸ್ಥಳದಲ್ಲಿ ಅನಧಿಕೃತ ಮಾರ್ಗಾಂತರವನ್ನು ಅಥವಾ ನಿರ್ಮಾಣವನ್ನು ತಡೆಗಟ್ಟಲು ವಿಫಲನಾಗಿರುವನೆಂದು ರುಜುವಾತದಲ್ಲಿ ಅವನು ನಿಯಮಿಸಬಹುದಾದಂಥ ಶಿಕ್ಷಗೆ ಗುರಿಯಾಗತಕ್ಕದ್ದು.][1]

1. 2007ರ ಅಧಿನಿಯಮ 1ರ ಮೂಲಕ 15.9.2007 ರಿಂದ ಜಾರಿಗೆ ಬರುವಂತೆ ಅಧಿಸೂಚನೆಯ ಮೂಲಕ 187ಎ ಮತ್ತು 187ಬಿ ಪ್ರಕರಣಗಳನ್ನು ಸೇರಿಸಲಾಗಿದೆ. ಅಧಿಸೂಚನೆಯ ಪಾಠವು ಅಧಿನಿಯಮದ ಕೊನೆಯಲ್ಲಿದೆ.

188. ತಪ್ಪು ನಿರೂಪಣೆಯ ನಿಮಿತ್ತ ಕೊಟ್ಟಿರುವ ಮಂಜೂರಾತಿ.- ಯಾವುದೇ ಕಟ್ಟಡಕ್ಕೆ ಅಥವಾ ಕೆಲಸಕ್ಕೆ ಮಂಜೂರಾತಿಯನ್ನು ಕೊಟ್ಟ ತರುವಾಯ, ಯಾವುದೇ ಕಾಲದಲ್ಲಿ 187ನೇ ಪ್ರಕರಣದ ಮೇರೆಗೆ ಕೊಟ್ಟಿರುವ ತಿಳಿವಳಿಕೆಯಲ್ಲಿ ಅಥವಾ ಒದಗಿಸಿದ ಮಾಹಿತಿಯಲ್ಲಿ ಯಾವುದೇ ಮುಖ್ಯ ತಪ್ಪು ನಿರೂಪಣೆಯು ಅಥವಾ ಮೋಸದ ಹೇಳಿಕೆಯು ಇದ್ದ ಪರಿಣಾಮವಾಗಿ ಅಂಥ ಮಂಜೂರಾತಿಯನ್ನು ಕೊಡಲಾಗಿದೆಯೆಂದು ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನಿಗೆ ಮನದಟ್ಟಾದರೆ, ಅವರು ಬರಹದಲ್ಲಿ ಕಾರಣಗಳನ್ನು ದಾಖಲು ಮಾಡಿ, ಬರಹದಲ್ಲಿ ಆದೇಶದ ಮೂಲಕ ಅಂಥ ಮಂಜೂರಾತಿಯನ್ನು ರದ್ದುಪಡಿಸಬಹುದು. ಮತ್ತು ಪ್ರಾರಂಭಿಸಿದ, ನಿರ್ಮಿಸಿದ ಅಥವಾ ಕಟ್ಟಿದ ಯಾವುದೇ ಕಟ್ಟಡವನ್ನು ಅಥವಾ ಮಾಡಿದ ಕೆಲಸವನ್ನು ಅಂಥ ಮಂಜೂರಾತಿ ಇಲ್ಲದೆಯೇ ಪ್ರಾರಂಭಿಸಲಾಗಿದೆ, ನಿರ್ಮಿಸಲಾಗಿದೆ, ಕಟ್ಟಲಾಗಿದೆ ಅಥವಾ ಮಾಡಲಾಗಿದೆ ಎಂದು ಭಾವಿಸತಕ್ಕದ್ದು:

ಪರಂತು, ಅಂಥ ಯಾವುದೇ ಆದೇಶವನ್ನು ಮಾಡುವುದಕ್ಕೂ ಮೊದಲು, ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನು ಅಂಥ ಆದೇಶವನ್ನು ಏಕೆ ಮಾಡಬಾರದು ಎಂಬ ಬಗ್ಗೆ ಕಾರಣವನ್ನು ತೋರಿಸಲು ಬಾಧಿತ ವ್ಯಕ್ತಿಗೆ ಯುಕ್ತ ಅವಕಾಶವನ್ನು ಕೊಡತಕ್ಕದ್ದು.

189. ಕೆಲವು ಪ್ರದೇಶಗಳಲ್ಲಿ ಅನುಮತಿ ಇಲ್ಲದೆ ಕಟ್ಟಡಗಳನ್ನು ಕಟ್ಟುವುದನ್ನು ನಿಷೇಧಿಸಲು ಸರ್ಕಾರದ ಅಧಿಕಾರ.- (1) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ,

ಸರ್ಕಾರವು, ಸಾರ್ವಜನಿಕ ಹಿತದೃಷ್ಟಿಯಿಂದ ಮತ್ತು ಮುನ್ಸಿಪಲ್ ಕೌನ್ಸಿಲ್‌ನೊಡನೆ ಸಮಾಲೋಚಿಸಿದ ತರುವಾಯ, ಈ ಬಗ್ಗೆ ಸರ್ಕಾರವು ಅನುಮತಿಯನ್ನು ಕೊಟ್ಟಿದ್ದ ಹೊರತು, [1][ಮುನ್ಸಿಪಲ್ ಏರಿಯಾ][1]ದಲ್ಲಿ ನಿರ್ದಿಷ್ಟಪಡಿಸಿದ ಪ್ರದೇಶದೊಳಗೆ ಯಾವುದೇ ಕಟ್ಟಡ ಕಟ್ಟುವುದನ್ನು ಅಧಿಸೂಚನೆಯ ಮೂಲಕ ನಿಷೇಧಿಸಬಹುದು:

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಪರಂತು, ಅಂಥ ಅನುಮತಿಯನ್ನು ಅಂಥ ಅಧಿಸೂಚನೆಯ ಪ್ರಕಟಣೆಗೆ ಮುಂಚೆ ಯಾವ ಭೂಮಿಯನ್ನು ಸರ್ಕಾರವು ಅಥವಾ ಮುನ್ಸಿಪಲ್ ಕೌನ್ಸಿಲ್ ಕಟ್ಟಡ ನಿವೇಶನ ಎಂದು ಪ್ರತ್ಯೇಕವಾಗಿರಿಸಲಾಗಿತ್ತೋ ಆ ಭೂಮಿಗೆ ನಿರಾಕರಿಸತಕ್ಕದ್ದಲ್ಲ.

(2) ಉಪ-ಪ್ರಕರಣ (1)ರ ಮೇರೆಗಿನ ಯಾವುದೇ ಅನುಮತಿಯ ಮಂಜೂರಾತಿಯು, ಸರ್ಕಾರವು ಪ್ರತಿಯೊಂದು ಸಂದರ್ಭದಲ್ಲಿ ಅಥವಾ ಸಾಮಾನ್ಯವಾಗಿ ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟಿರಬಹುದು.

(3) ಉಪಪ್ರಕರಣ (1) ರ ಉಪಬಂಧಗಳಿಗೆ ಅಥವಾ (2)ನೇ ಉಪಪ್ರಕರಣದ ಮೇರೆಗೆ ವಿಧಿಸಿರುವ ಷರತ್ತುಗಳಿಗೆ ತದ್ವಿರುದ್ಧವಾಗಿ ಯಾವುದೇ ಕಟ್ಟಡಗಳನ್ನು ಯಾರೇ ಆಗಲಿ ಕಟ್ಟಿದರೆ ಅವನು ಎರಡು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(4) ಸರ್ಕಾರವು (1)ನೇ ಉಪಪ್ರಕರಣದ ಉಪಬಂಧಗಳಿಗೆ ಅಥವಾ (2)ನೇ ಉಪಪ್ರಕರಣದ ಮೇರೆಗೆ ವಿಧಿಸಿರುವ ಷರತ್ತುಗಳಿಗೆ ತದ್ವಿರುದ್ಧವಾಗಿ ಕಟ್ಟಿದ ಯಾವುದೇ ಕಟ್ಟಡವನ್ನು ಕೆಡವಿ ಹಾಕಬಹುದು.

190. ಮುಕ್ತಾಯ ಪ್ರಮಾಣಪತ್ರಗಳನ್ನು ಸ್ವಾಧೀನಪಡಿಸಿಕೊಳ್ಳಲು ಅಥವಾ ಬಳಸಲು ಅನುಮತಿ.- (1) 187ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ವಿವರಿಸಿರುವಂತೆ ಕಟ್ಟಡವನ್ನು ಕಟ್ಟುವ ಅಥವಾ ಕೆಲಸವನ್ನು ನಿರ್ವಹಿಸುವ ಪ್ರತಿಯೊಬ್ಬ ವ್ಯಕ್ತಿಯು ಅಂಥ ಕಟ್ಟಡ ಕಟ್ಟುವುದು ಅಥವಾ ಅಂಥ ಕೆಲಸವನ್ನು ನಿರ್ವಹಿಸುವುದು ಮುಕ್ತಾಯವಾದ ತರುವಾಯ ಒಂದು ತಿಂಗಳೊಳಗಾಗಿ ಅಂಥ ಮುಕ್ತಾಯದ ಬಗ್ಗೆ ಬರಹದಲ್ಲಿ ತಿಳಿವಳಿಕೆಯನ್ನು ಮುನ್ಸಿಪಲ್ ಕಮಿಷನರ್ ನಿಗೆ ಅಥವಾ ಚೀಫ್ ಆಫೀಸರ್ ನಿಗೆ ಅವರ ಕಚೇರಿಗೆ ತಲುಪಿಸತಕ್ಕದ್ದು ಅಥವಾ ಕಳಿಸತಕ್ಕದ್ದು ಅಥವಾ ತಲುಪಿಸಲು ಅಥವಾ ಕಳಿಸಲು ವ್ಯವಸ್ಥೆ ಮಾಡತಕ್ಕದ್ದು ಅಥವಾ ಪ್ರತಿನಿಯೋಜಿಸಲಾದ ಮುನ್ಸಿಪಲ್ ಕೌನ್ಸಿಲ್‌ನ ಅಧಿಕಾರಿಗೆ ಅಂಥ ಕಟ್ಟಡದ ಅಥವಾ ಅಂಥ ಕೆಲಸದ ಪರಿಶೀಲನೆಗಾಗಿ ಎಲ್ಲ ಅವಶ್ಯ ಸೌಲಭ್ಯಗಳನ್ನು ಕೊಡತಕ್ಕದ್ದು:

ಪರಂತು,-

(ಎ) ಅಂಥ ಪರಿಶೀಲನೆಯನ್ನು, ಮುಕ್ತಾಯದ ನೋಟೀಸನ್ನು ಸ್ವೀಕರಿಸಿದ ದಿನಾಂಕದಿಂದ ಏಳು ದಿನಗಳ ಒಳಗಾಗಿ ಪ್ರಾರಂಭಿಸತಕ್ಕದ್ದು; ಮತ್ತು

(ಬಿ) ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನು, ಯಾವ ವ್ಯಕ್ತಿಯಿಂದ ಮುಕ್ತಾಯದ ನೋಟೀಸನ್ನು ಸ್ವೀಕರಿಸಲಾಗಿದೆಯೋ ಮತ್ತು ಅಂಥ ನೋಟೀಸಿನಲ್ಲಿ ಹೇಳಿರುವಂಥ ಅವನ ವಿಳಾಸಕ್ಕೆ ತಲುಪಿಸಲಾಗಿದೆಯೋ ಆ ವ್ಯಕ್ತಿಗೆ ಆ ದಿನಾಂಕದಿಂದ ಒಂದು ತಿಂಗಳು ಮೀರದಂತೆ ಲಿಖಿತದಲ್ಲಿ ಅಥವಾ ಅಂಥ ವಿಳಾಸವು ಇಲ್ಲದಿದ್ದಾಗ, ಅಂಥ ನೋಟೀಸ್ ಯಾವ ಕಟ್ಟಡಕ್ಕೆ ಸಂಬಂಧಪಟ್ಟಿದೆಯೋ ಆ ಕಟ್ಟಡದ ಎದ್ದುಕಾಣುವ ಭಾಗಕ್ಕೆ ಅಂಟಿಸಿದ ತಿಳಿವಳಿಕೆ ಮೂಲಕ,-

(i) ಅಂಥ ಕಟ್ಟಡವನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕಾಗಿ ಅಥವಾ ಅಂಥ ಕೆಲಸದಿಂದ ಏರ್ಪಟ್ಟ ಕಟ್ಟಡವನ್ನು ಅಥವಾ ಅದರ ಭಾಗವನ್ನು ಬಳಸುವುದಕ್ಕಾಗಿ ಅನುಮತಿಯನ್ನು ಕೊಡಬಹುದು; ಅಥವಾ

(ii) ಅಂಥ ಕಟ್ಟಡವನ್ನು ಅಥವಾ ಅಂಥ ಕೆಲಸವನ್ನು ಆಗ ಜಾರಿಯಲ್ಲಿದ್ದ ಈ ಅಧಿನಿಯಮದ ಅಥವಾ ಈ ಅಧಿನಿಯಮದ ಮೇರೆಗೆ ರಚಿಸಿದ ಯಾವುದೇ ನಿಯಮದ ಅಥವಾ ಬೈಲಾದ ಯಾವುದೇ ಉಪಬಂಧವನ್ನು ಅಥವಾ 187ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶವನ್ನು ಉಲ್ಲಂಘಿಸುವ ಹಾಗೆ ಕಟ್ಟಿದ್ದರೆ ಅಥವಾ ಅಂಥ ಕೆಲಸವನ್ನು ನಿರ್ವಹಿಸಿದ್ದರೆ ಅಂಥ ಅನುಮತಿಯನ್ನು ನಿರಾಕರಿಸಬಹುದು ಮತ್ತು ಅಂಥ ನಿರಾಕರಣೆಗೆ ಕಾರಣಗಳನ್ನು 187ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನೋಟೀಸನ್ನು ಕೊಟ್ಟಿರುವ ವ್ಯಕ್ತಿಗೆ ತಿಳಿಸಿ, ಮತ್ತು ಅಂಥ ವ್ಯಕ್ತಿಯನ್ನು ಅಥವಾ

187ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನೋಟೀಸನ್ನು ಕೊಡಲು ಹೊಣೆಯಾಗಿರುವ ವ್ಯಕ್ತಿಯು, ಅಂಥ ನೋಟೀಸ್ ನ್ನು ನೀಡಿದ್ದ ಕಾಲದಲ್ಲಿ ಅಂಥ ಕಟ್ಟಡದ ಅಥವಾ ಕೆಲಸದ ಒಡೆಯನಾಗಿರದಿದ್ದರೆ, ಆಗ ಅಂಥ ಒಡೆಯನನ್ನು, ಆ ಕಾಲದಲ್ಲಿ ಜಾರಿಯಲ್ಲಿದ್ದ ಈ ಅಧಿನಿಯಮ ಅಥವಾ ಈ ಅಧಿನಿಯಮದ ಮೇರೆಗೆ ರಚಿಸಿದ ಯಾವುದೇ ನಿಯಮದ ಅಥವಾ ಬೈಲಾದ ಯಾವುದೇ ಉಪಬಂಧಕ್ಕೆ ಅಥವಾ 187ನೇ ಪ್ರಕರಣದ (3)ನೆಯ ಉಪಪ್ರಕರಣದ ಮೇರೆಗೆ, ಮಾಡಿದ ಯಾವುದೇ ಆದೇಶಕ್ಕೆ ತದ್ವಿರುದ್ಧವಾಗಿರುವುದನ್ನು, ಸರಿಪಡಿಸುವ ಸಲುವಾಗಿ ಅಥವಾ ಏನನ್ನಾದರೂ ಮಾಡಿಸಲು ಅಥವಾ ಅಂಥ ಉಪಬಂಧದಲ್ಲಿ ಅಥವಾ ನಿಯಮ ಅಥವಾ ಬೈಲಾ ಅಥವಾ ಆದೇಶದಲ್ಲಿ ಏನನ್ನಾದರೂ ಮಾಡಲು ಅವನನ್ನು ಅಗತ್ಯಪಡಿಸಲಾಗಿದೆಯೋ ಆದರೆ, ಅದನ್ನು ಮಾಡಲು ಅಗತ್ಯಪಡಿಸಬಹುದು.

(2) ಯಾರೇ ವ್ಯಕ್ತಿಯು,-

(ಎ) (1)ನೇ ಉಪಪ್ರಕರಣದ (ಬಿ) ಪರಂತುಕದಲ್ಲಿ ಉಲ್ಲೇಖಿಸಿದ ಅನುಮತಿಯನ್ನು ಸ್ವೀಕರಿಸುವವರೆಗೆ; ಅಥವಾ

(ಬಿ) ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನು, ಮುಕ್ತಾಯದ ನೋಟೀಸನ್ನು ಸ್ವೀಕರಿಸಿದ ತರುವಾಯ ಒಂದು ತಿಂಗಳಿನವರೆಗೆ, ಸದರಿ ಅನುಮತಿಯ ಬಗ್ಗೆ ತನ್ನ ನಿರಾಕರಣೆಯನ್ನು ಹಿಂದೆ ಹೇಳಿದಂತೆ ತಿಳಿಸಲು ತಪ್ಪುವವರೆಗೆ,

- ಅಂಥ ಯಾವುದೇ ಕೆಲಸದಿಂದ ಏರ್ಪಟ್ಟ ಅಂಥ ಯಾವುದೇ ಕಟ್ಟಡವನ್ನು ಸ್ವಾಧೀನಪಡಿಸಿಕೊಳ್ಳತಕ್ಕದ್ದಲ್ಲ ಅಥವಾ ಸ್ವಾಧೀನಪಡಿಸಿಕೊಳ್ಳಲು ಅನುಮತಿಸತಕ್ಕದ್ದಲ್ಲ ಅಥವಾ ಆ ಕಟ್ಟಡದ ಅದರ ಭಾಗವನ್ನು ಬಳಸತಕ್ಕದ್ದಲ್ಲ ಅಥವಾ ಬಳಸಲು ಅನುಮತಿಸತಕ್ಕದ್ದಲ್ಲ.

[1][(2ಎ) ಅದಿಭೋಗ ಪ್ರಮಾಣ ಪತ್ರವನ್ನು ಪಡೆಯುವುದರಿಂದ ವಿನಾಯಿತಿಸಬೇಕಾದ ಕಟ್ಟಡಗಳ ಪ್ರವರ್ಗವನ್ನು ಸರ್ಕಾರವು ಅಧಿಸೂಚಿಸಬಹುದು.][1]

(3) ಈ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಅಥವಾ ಅದರ ಮೇರೆಗೆ ಮಾಡಿದ ಯಾವುದೇ ಆದೇಶವನ್ನು ಅಥವಾ ಕಡ್ಡಾಯ ಕೋರಿಕೆಯನ್ನು ಪಾಲಿಸಲು ತಪ್ಪುವ ಯಾರೇ ಆಗಲಿ ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಉಲ್ಲಂಘನೆಯು ಮುಂದುವರಿಯುತ್ತಿರುವ ಅಥವಾ ಅನನುಪಾಲನೆಯ ಸಂದರ್ಭದಲ್ಲಿ ಅಂಥ ಮೊದಲನೇ ಉಲ್ಲಂಘನೆಯ ಅಥವಾ ಅನನುಪಾಲನೆಗಾಗಿ ಅಪರಾಧ ನಿರ್ಣಯದ ತರುವಾಯ, ಅಂಥ ಉಲ್ಲಂಘನೆ ಅಥವಾ ಅನನುಪಾಲನೆಯು ಮುಂದುವರಿಯುತ್ತಿರುವಂಥ ಕಾಲದಲ್ಲಿ ಪ್ರತಿಯೊಂದು ದಿವಸಕ್ಕೆ ಹತ್ತು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

1. 2025ರ ಅಧಿನಿಯಮ 64ರ ಮೂಲಕ 12.09.2025 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ

191. ಗುಡಿಸಲುಗಳ ನಿಯಂತ್ರಣ.- ಯಾರೇ ವ್ಯಕ್ತಿಗೆ, ಮುನ್ಸಿಪಲ್ ಕೌನ್ಸಿಲ್‌ಗೆ ಮುಂಚಿತವಾಗಿ ನೋಟೀಸನ್ನು ಕೊಡದೆಯೆ ಮತ್ತು ಅದರ ಅನುಮತಿಯನ್ನು ಪಡೆಯದೆಯೆ ಯಾವುದೇ ಗುಡಿಸಲನ್ನು, ಷೆಡ್ಡನ್ನು ಅಥವಾ ಗುಡಿಸಲುಗಳ ಅಥವಾ ಷೆಡ್ಡುಗಳ ಸಾಲನ್ನು ಅಥವಾ ಬ್ಲಾಕನ್ನು ನಿರ್ಮಿಸಲು ಅಥವಾ ಈ ಅಧಿನಿಯಮವು ಜಾರಿಗೆ ಬಂದಾಗ ಈಗಾಗಲೇ ಅಸ್ತಿತ್ವದಲ್ಲಿರುವ ಯಾವುದೇ ಗುಡಿಸಲುಗಳ ಅಥವಾ ಷೆಡ್ಡುಗಳ ಯಾವುದೇ ಸಾಲಿಗೆ ಅಥವಾ ಬ್ಲಾಕಿಗೆ ಯಾವುದೇ ಗುಡಿಸಲನ್ನು ಅಥವಾ ಷೆಡ್ಡನ್ನು ಸೇರಿಸುವುದು ಕಾನೂನುಬದ್ಧವಾಗಿರತಕ್ಕದ್ದಲ್ಲ ಮತ್ತು ಮುನ್ಸಿಪಲ್ ಕೌನ್ಸಿಲ್ ಅಂಥ ಗುಡಿಸಲುಗಳನ್ನು ಅಥವಾ ಷೆಡ್ಡುಗಳನ್ನು ಗಾಳಿ ಬೆಳಕು ಸಂಚಾರಕ್ಕಾಗಿ ಮತ್ತು ನಿರ್ಮಲೀಕರಣಕ್ಕೆ ಅನುಕೂಲವಾಗಲು ಮತ್ತು ರೊಚ್ಚು ನೀರು ಸರಾಗವಾಗಿ ಹರಿದು ಹೋಗಲು ಆಸ್ಪದ ಕೊಡುವಂಥ ಮಟ್ಟದಲ್ಲಿ, ಪ್ರತಿ ಎರಡು ಸಾಲುಗಳ ಮುಂದೆ ಮತ್ತು ನಡುವೆ ಸರಿಯೆಂದು ಮುನ್ಸಿಪಲ್ ಕೌನ್ಸಿಲ್ ಯೋಚಿಸಬಹುದಾದಷ್ಟು, ಅಗಲದ ಮುಕ್ತ ಮಾರ್ಗ ಅಥವಾ ದಾರಿ ಇದ್ದು ನಿಯಮಿತ ಸಾಲುಗಳಲ್ಲಿ ಇರುವ ಹಾಗೆ ಕಟ್ಟತಕ್ಕದ್ದೆಂದು ಅಗತ್ಯಪಡಿಸಬಹುದು ಮತ್ತು ಅವಶ್ಯವೆಂದು ಅದಕ್ಕೆ ಅಂಥ ಗುಡಿಸಲುಗಳನ್ನು ಅಥವಾ ಷೆಡ್ಡುಗಳನ್ನು ತೋರಬಹುದಾದಷ್ಟು ಸಂಖ್ಯೆಯ ಶೌಚಾಲಯಗಳನ್ನು ಮತ್ತು ರೊಚ್ಚು ನೀರು ಹರಿದು ಹೋಗಲು ಸಾಧನಗಳನ್ನು ಒದಗಿಸಬೇಕೆಂದು ಅಗತ್ಯಪಡಿಸಬಹುದು. ಮುನ್ಸಿಪಲ್ ಕೌನ್ಸಿಲ್‌ಗೆ ಅಂಥ ನೋಟೀಸನ್ನು ಕೊಡದೆಯೆ, ಯಾವುದೇ ಗುಡಿಸಲನ್ನು ಅಥವಾ ಷೆಡ್ಡನ್ನು ಅಥವಾ ಸಾಲನ್ನು ಅಥವಾ ಬ್ಲಾಕನ್ನು ಕಟ್ಟಿದರೆ, ಮುನ್ಸಿಪಲ್ ಕೌನ್ಸಿಲ್ ಅದರ ಒಡೆಯನಿಗೆ ಅಥವಾ ಕಟ್ಟಿದವನಿಗೆ ಅಥವಾ ಕಟ್ಟುತ್ತಿರುವ

ಅಥವಾ ಅದನ್ನು ಕಟ್ಟಿರುವಂಥ ಭೂಮಿಯ ಒಡೆಯನಿಗೆ ಅಥವಾ ಸ್ವಾಧೀನದಾರನಿಗೆ ನೋಟೀಸ್ ನಲ್ಲಿ ನಿರ್ದಿಷ್ಟಪಡಿಸಿದಂಥ ಸಮಂಜಸ ಕಾಲದೊಳಗೆ ಅದನ್ನು ಕೆಡವಲು ಅಥವಾ ತೆಗೆದು ಹಾಕಲು ಅಥವಾ ಸರಿಯಾದವುಗಳೆಂದು ಮುನ್ಸಿಪಲ್ ಕೌನ್ಸಿಲ್ ಯೋಚಿಸಬಹುದಾದಂಥ ನೈರ್ಮಲ್ಯ ಅಂಶಗಳನ್ನು ಗಮನದಲ್ಲಿರಿಸಿ ಅದರಲ್ಲಿ ಅಂಥ ಬದಲಾವಣೆಗಳನ್ನು ಅಥವಾ ಅದಕ್ಕೆ ಸೇರ್ಪಡೆಗಳನ್ನು ಮಾಡಲು ಅವನನ್ನು ಅಗತ್ಯಪಡಿಸಿ, ಬರಹದಲ್ಲಿ ನೋಟೀಸನ್ನು ಕೊಡಬಹುದು.

192. ಗುಡಿಸಲುಗಳಲ್ಲಿ ಸುಧಾರಣೆ ತರುವುದು.- (1) (ಎ) ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ರ ಅಭಿಪ್ರಾಯದಲ್ಲಿ, ವಾಸಗೃಹಗಳಂತೆ ಅಥವಾ ಲಾಯಗಳಂತೆ ಅಥವಾ ಇತರ ಯಾವುದೇ ಉದ್ದೇಶಗಳಿಗೆ ಬಳಸಿದ ಮತ್ತು ಈ ಅಧಿನಿಯಮವು ಜಾರಿಗೆ ಬಂದ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಅಥವಾ ಆ ತರುವಾಯ, ಕಟ್ಟಿದ ಯಾವುವೇ ಗುಡಿಸಲುಗಳಲ್ಲಿ ಅಥವಾ ಷೆಡ್ಡುಗಳಲ್ಲಿ;-

(i) ಗಾಳಿ ಬೆಳಕಿನ ಸಂಚಾರವು ಸಾಕಷ್ಟಿಲ್ಲದಿರುವ ಅಥವಾ ಅಂಥ ಗುಡಿಸಲುಗಳು ಅಥವಾ ಷೆಡ್ಡುಗಳು ಒತ್ತೊತ್ತಾಗಿರುವಂಥ ರೀತಿಯಲ್ಲಿರುವ; ಅಥವಾ

(ii) ಮೇಲ್ಛಾಯ ಇಲ್ಲದಿರುವ ಅಥವಾ ಸಾಕಷ್ಟು ಮೇಲ್ಛಾಯ ಇಲ್ಲದಿರುವ ರೊಚ್ಚು ನೀರು ಸರಾಗವಾಗಿ ಹರಿದು ಹೋಗುವಂತೆ ಅಥವಾ ಚರಂಡಿ ವ್ಯವಸ್ಥೆಯು ಇಲ್ಲದಿರುವ; ಅಥವಾ

(iii) ನಿರ್ಮಲೀಕರಣ ಕಾರ್ಯ ಸಾಧ್ಯವಿಲ್ಲದಿರುವ

- ಕಾರಣದಿಂದಾಗಿ ನೆರೆಹೊರೆಯ ನಿವಾಸಿಗಳಿಗೆ ರೋಗದ ಅಪಾಯ ಸಂಭವವಿದ್ದರೆ, ಅವನು, ಆ ಒಡೆಯನನ್ನು ಅಥವಾ ಅದರ ಸ್ವಾಧೀನದಾರನನ್ನು, ಅಥವಾ ಅಂಥ ಗುಡಿಸಲನ್ನು ಅಥವಾ ಷೆಡ್ಡನ್ನು ಕಟ್ಟಿರುವಂಥ ಭೂಮಿಯ ಒಡೆಯನನ್ನು ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನು ಆ ಉದ್ದೇಶಕ್ಕಾಗಿ ನಿಗದಿಪಡಿಸಬಹುದಾದಂಥ ಸಮಂಜಸ ಕಾಲದೊಳಗೆ, ಅಂಥ ಗುಡಿಸಲನ್ನು ಅಥವಾ ಷೆಡ್ಡನ್ನು ಕೆಡವಲು ಮತ್ತು ತೆಗೆದುಹಾಕಲು ಅಥವಾ ಅಂಥ ಅಪಾಯ ಸಂಭವವನ್ನು ತಪ್ಪಿಸುವುದಕ್ಕಾಗಿ ಅವಶ್ಯವೆಂದು ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನುಭಾವಿಸಬಹುದಾದಂಥ ಕಾರ್ಯಾಚರಣೆಗಳನ್ನು ನಿರ್ವಹಿಸಲು ಅಗತ್ಯಪಡಿಸಿ, ಅಂಥ ಪ್ರತಿಯೊಂದು ಗುಡಿಸಲು ಅಥವಾ ಷೆಡ್ಡಿನ ಯಾವುದೇ ಎದ್ದುಕಾಣುವ ಭಾಗಕ್ಕೆ ನೋಟೀಸನ್ನು ಅಂಟಿಸುವಂತೆ ಮಾಡತಕ್ಕದ್ದು.

(ಬಿ) ಖಂಡ (ಎ) ಮೇರೆಗೆ ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು ಮುನ್ಸಿಪಲ್ ಕೌನ್ಸಿಲ್‌ಗೆ ಅಂಥ ಆದೇಶವನ್ನು ರದ್ದುಪಡಿಸಲು, ತಿದ್ದುಪಡಿ ಮಾಡಲು ಅಥವಾ ಪುನರೀಕ್ಷಿಸಲು ಅರ್ಜಿ ಸಲ್ಲಿಸಬಹುದು ಮತ್ತು ಮುನ್ಸಿಪಲ್ ಕೌನ್ಸಿಲ್ ಅಂಥ ಅರ್ಜಿಯ ಸಲ್ಲಿಕೆಯಾದ ಮೇಲೆ ಆ ಆದೇಶವನ್ನು ರದ್ದುಪಡಿಸಬಹುದು, ತಿದ್ದುಪಡಿ ಮಾಡಬಹುದು ಅಥವಾ ಅನ್ಯಥಾ ಪುನರೀಕ್ಷಿಸಬಹುದು.

(2) ಅಂಥ ಯಾರೇ ಒಡೆಯನು ಅಥವಾ ಸ್ವಾಧೀನದಾರನು ಅಂಥ ಗುಡಿಸಲನ್ನು ಅಥವಾ ಷೆಡ್ಡುಗಳನ್ನು ಕೆಡವಲು ಮತ್ತು ತೆಗೆದುಹಾಕಲು ಅಥವಾ ಗೊತ್ತುಪಡಿಸಿದ ಕಾಲದೊಳಗೆ ಅಂಥ ಕಾರ್ಯಾಚರಣೆಗಳನ್ನು ನಿರ್ವಹಿಸಲು ನಿರಾಕರಿಸಿದ ಅಥವಾ ಉಪೇಕ್ಷಿಸಿದ ಸಂದರ್ಭದಲ್ಲಿ ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನು, ಸದರಿ ಗುಡಿಸಲುಗಳನ್ನು ಅಥವಾ ಷೆಡ್ಡುಗಳನ್ನು ಕೆಡವುವಂತೆ ಅಥವಾ ಅಂಥ ಗುಡಿಸಲುಗಳಿಂದ ಅಥವಾ ಷೆಡ್ಡುಗಳಿಂದ ಅಂಥ ಅಪಾಯವಾಗದಂತೆ ತಡೆಗಟ್ಟಲು ಅವಶ್ಯವೆಂದು ತಾನು ಭಾವಿಸಬಹುದಾದಂಥ ಕಾರ್ಯಾಚರಣೆಯನ್ನು ನೆರವೇರಿಸುವಂತೆ ಮಾಡಬಹುದು.

(3) ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನು ಅಂಥ ಗುಡಿಸಲು ಅಥವಾ ಷೆಡ್ಡುಗಳನ್ನು ಕೆಡವಿ ಹಾಕಿದರೆ, ಅಂಥ ಪ್ರತಿಯೊಂದು ಗುಡಿಸಲಿನ ಅಥವಾ ಷೆಡ್ಡಿನ ಸಾಮಗ್ರಿಗಳನ್ನು ಮಾರಾಟ ಮಾಡಬಹುದಾದರೆ, ಪ್ರತ್ಯೇಕವಾಗಿ ಮಾರಾಟ ಮಾಡಿಸತಕ್ಕದ್ದು ಮತ್ತು ಎಲ್ಲ ವೆಚ್ಚಗಳನ್ನು ಕಳೆದ ತರುವಾಯದ ಉತ್ಪತ್ತಿಗಳನ್ನು ಗುಡಿಸಲಿನ ಅಥವಾ ಷೆಡ್ಡಿನ ಒಡೆಯನಿಗೆ ಸಂದಾಯ ಮಾಡತಕ್ಕದ್ದು ಅಥವಾ ಒಡೆಯನು ಗೊತ್ತಿಲ್ಲದಿದ್ದರೆ ಅಥವಾ ಸ್ವಾಮ್ಯವು ವಿವಾದದಲ್ಲಿದ್ದರೆ, ಅದರಲ್ಲಿ ಹಿತಾಸಕ್ತಿ ಹೊಂದಿದ ವ್ಯಕ್ತಿಯು ಅದರ ಸಂದಾಯಕ್ಕಾಗಿ ಸಕ್ಷಮ ನ್ಯಾಯಾಲಯದ ಆದೇಶವನ್ನು ಪಡೆಯುವವರೆಗೆ, ಮುನ್ಸಿಪಲ್ ಕೌನ್ಸಿಲ್ ಅದನ್ನು ಠೇವಣಿಯಾಗಿ ಇಟ್ಟುಕೊಂಡಿರತಕ್ಕದ್ದು:

ಪರಂತು, ಯಾವ ಭೂಮಿಯ ಮೇಲೆ ಗುಡಿಸಲುಗಳು ಅಥವಾ ಷೆಡ್ಡುಗಳು ಇರುವವೋ ಆ ಭೂಮಿಯು ಪ್ರಥಮತಃ [1][ಮುನ್ಸಿಪಲ್ ಏರಿಯಾ][1] ದ ಭಾಗವಾಗಿದ್ದ ಕಾಲದಲ್ಲಿ ಅಸ್ತಿತ್ವದಲ್ಲಿದ್ದವೋ ಆ ಯಾವುವೇ ಗುಡಿಸಲುಗಳನ್ನು ಅಥವಾ ಷೆಡ್ಡುಗಳನ್ನು ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನ ಆದೇಶದ ಮೂಲಕ ಅಥವಾ ಅವನ ನೋಟೀಸಿಗೆ ಅನುಸಾರವಾಗಿ ಈ ಪ್ರಕರಣದ ಮೇರೆಗೆ ಕೆಡವಿ ಹಾಕಿದರೆ ಅದರ ಒಡೆಯನಿಗೆ ಅಥವಾ ಒಡೆಯರಿಗೆ ನಷ್ಟಪರಿಹಾರವನ್ನು ಕೊಡತಕ್ಕದ್ದು ಮತ್ತು ವಿವಾದವಿದ್ದರೆ, 268ನೇ ಪ್ರಕರಣದಲ್ಲಿ ಹೇಳಿರುವ ರೀತಿಯಲ್ಲಿ ಅದರ ಮೊಬಲಗನ್ನು ಸುನಿಶ್ಚಿತಗೊಳಿಸತಕ್ಕದ್ದು ಮತ್ತು ನಿರ್ಧರಿಸತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಚರಂಡಿ ವ್ಯವಸ್ಥೆ, ನೀರು ಸರಬರಾಜು ಗೃಹಗಳು ಇತ್ಯಾದಿಗಳಿಗೆ ಸಂಬಂಧಿಸಿದಂತೆ ಅಧಿಕಾರ

193. ಚರಂಡಿಗಳು ಇತ್ಯಾದಿಗಳ ಮೇಲೆ ಮುನ್ಸಿಪಾಲಿಟಿಯ ನಿಯಂತ್ರಣ.- (1) [1][ಮುನ್ಸಿಪಲ್ ಏರಿಯಾ][1] ದೊಳಗಿರುವ ಎಲ್ಲ ಗ್ರಾಮಸಾರ ಚರಂಡಿಗಳು, ಶೌಚಾಲಯಗಳು, ಮನೆಯ ಮೋರಿಗಳು ಮತ್ತು ರೊಚ್ಚುಗುಂಡಿಗಳು ಮುನ್ಸಿಪಲ್ ಸಮೀಕ್ಷೆಗೆ ಮತ್ತು ನಿಯಂತ್ರಣಕ್ಕೊಳಪಟ್ಟಿರತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಸಾರ್ವಜನಿಕವಾದುವೇ ಆಗಲಿ ಅಥವಾ ಖಾಸಗಿಯವೇ ಆಗಿರಲಿ ಎಲ್ಲ ಮುಚ್ಚಿರುವ ಗ್ರಾಮಸಾರ ಚರಂಡಿಗಳಿಗೆ ಮತ್ತು ಚರಂಡಿಗಳಿಗೆ, ಎಲ್ಲ ರೊಚ್ಚುಗುಂಡಿಗಳಿಗೆ, ದುರ್ವಾಯು ತಡೆಗೆ, ಸರಿಯಾದ ಅಥವಾ ಇತರ ಮುಚ್ಚಳಗಳನ್ನು ಅಥವಾ ಗಾಳಿ ಬೆಳಕಿನ ಸಂಚಾರದ ಸಾಧನಗಳನ್ನು ಮುನ್ಸಿಪಲ್ ಕೌನ್ಸಿಲ್ ಅಥವಾ ಯಾವ ವ್ಯಕ್ತಿಗೆ ಅವು ಪ್ರತ್ಯೇಕವಾಗಿ ಸೇರಿರುವವೋ ಆ ಇತರ ವ್ಯಕ್ತಿಯು ಒದಗಿಸತಕ್ಕದ್ದು ಮತ್ತು ಮುನ್ಸಿಪಲ್ ಕೌನ್ಸಿಲ್ ಬರಹದಲ್ಲಿ ನೋಟೀಸಿನ ಮೂಲಕ, ಯಾವುದೇ ಅಂಥ ಮುಚ್ಚಿದ ಗ್ರಾಮಸಾರ ಚರಂಡಿಗಳ ಅಥವಾ ರೊಚ್ಚುಗುಂಡಿಯ ಒಡೆಯನನ್ನು ತದನುಸಾರವಾಗಿ ಆ ರೀತಿ ವ್ಯವಸ್ಥೆ ಮಾಡಲು ಕೇಳಬಹುದು.

194. ಚರಂಡಿಗಳನ್ನು ಮಾಡುವುದಕ್ಕಾಗಿ ಅಧಿಕಾರಗಳು.- (1) ಯಾವುದೇ ಚರಂಡಿ ವ್ಯವಸ್ಥೆಯ ಯೋಜನೆಯನ್ನು ಕಾರ್ಯಗತಗೊಳಿಸುವುದಕ್ಕಾಗಿ ಯಾವುದೇ ಚರಂಡಿ, ಗ್ರಾಮಸಾರ ಚರಂಡಿ, ನಳಿಕೆ, ಸುರಂಗಮಾರ್ಗ, ಅಡಿಗಾಲುವೆ, ಕೊಳವೆ ಅಥವಾ ಜಲಮಾರ್ಗವನ್ನು ಯಾವುದೇ ಬೀದಿಗಾಗಿ ಅಥವಾ ಸ್ಥಳಕ್ಕಾಗಿ ರೂಪಿಸಿದ ಅಥವಾ ಅದಕ್ಕಾಗಿ ಉದ್ದೇಶಿಸಿದ ಯಾವುದೇ ಸ್ಥಳದ ಮೂಲಕ ಅಡ್ಡಲಾಗಿ ಅಥವಾ ಕೆಳಗೆ ಅಥವಾ ಯಾವುದೇ ಬೀದಿಯ ಕೆಳಗೆ ಇರಬಹುದಾದಂಥ ಯಾವುದೇ ನೆಲಮನೆಯ ಅಥವಾ ನೆಲಮಾಳಿಗೆಯ ಕೆಳಗೆ ಮತ್ತು [1][ಮುನ್ಸಿಪಲ್ ಏರಿಯಾ][1] ದೊಳಗಿನ ಯಾವುದೇ ಭೂಮಿಯೊಳಕ್ಕೆ, ಭೂಮಿಯ ಮೂಲಕ ಅಥವಾ ಭೂಮಿಯ ಕೆಳಗೆ, ಅದರ ಒಡೆಯ ಅಥವಾ ಸ್ವಾಧೀನದಾರನಿಗೆ ಬರಹದಲ್ಲಿ ಯುಕ್ತ ನೋಟೀಸನ್ನು ಕೊಟ್ಟ ತರುವಾಯ ಹಾಕುವುದು ಮುನ್ಸಿಪಲ್ ಕೌನ್ಸಿಲ್‌ಗೆ ಕಾನೂನು ಸಮ್ಮತವಾಗಿರತಕ್ಕದ್ದು; ಮತ್ತು

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಮುನ್ಸಿಪಲ್ ಕೌನ್ಸಿಲ್ ಅಥವಾ ಅಂಥ ಉದ್ದೇಶಕ್ಕಾಗಿ ಅದು ನೇಮಕ ಮಾಡಿದ ಯಾರೇ ಅಧಿಕಾರಿಯು ಯಾವ ಭೂಮಿಯಲ್ಲಿ ಮುನ್ಸಿಪಲ್ ಕೌನ್ಸಿಲ್‌ಗಳಲ್ಲಿ ನಿಹಿತವಾಗಿರುವ ಯಾವುದೇ ಚರಂಡಿಯನ್ನು ಈಗಾಗಲೇ ಹಾಕಲಾಗಿದೆಯೋ ಆ ಯಾವುದೇ ಭೂಮಿಯ ಮೇಲೆ ಪ್ರವೇಶಿಸಬಹುದು ಅಥವಾ ಆ ಭೂಮಿಯಲ್ಲಿ ಈಗಿರುವ ಚರಂಡಿಯ ಬದಲಾಗಿ, ಯಾವುದೇ ಹೊಸ ಚರಂಡಿಯನ್ನು ಹಾಕಬಹುದು ಅಥವಾ ಮುನ್ಸಿಪಲ್ ಕೌನ್ಸಿಲ್‌ನಲ್ಲಿ ನಿಹಿತವಾಗಿರುವ ಯಾವುದೇ ಚರಂಡಿಯನ್ನು ದುರಸ್ತಿಗೊಳಿಸಬಹುದು ಅಥವಾ ಬದಲಾಯಿಸಬಹುದು.

(3) ಈ ಪ್ರಕರಣದ ಮೇರೆಗೆ ಯಾವುದೇ ಅಧಿಕಾರವನ್ನು ಚಲಾಯಿಸುವಾಗ ಯಾವುದೇ ಅನಗತ್ಯ ಹಾನಿಯನ್ನುಂಟು ಮಾಡತಕ್ಕದ್ದಲ್ಲ. ವಿವಾದದ ಸಂದರ್ಭದಲ್ಲಿ 268ನೇ ಪ್ರಕರಣದಲ್ಲಿ ಹೇಳಿರುವಂತಹ ರೀತಿಯಲ್ಲಿ ಸುನಿಶ್ಚಿತಗೊಳಿಸಿಕೊಳ್ಳಬೇಕಾದ ಮತ್ತು ನಿರ್ಧರಿಸಿಕೊಳ್ಳಬೇಕಾದ ನಷ್ಟಪರಿಹಾರವನ್ನು ಅಂಥ ಅಧಿಕಾರವನ್ನು ಚಲಾಯಿಸಿದ್ದರಿಂದ ಹಾನಿಗೀಡಾದ ಯಾವುದೇ ವ್ಯಕ್ತಿಗೆ ಮುನ್ಸಿಪಲ್ ಕೌನ್ಸಿಲ್ ಸಂದಾಯ ಮಾಡತಕ್ಕದ್ದು.

195. ಮನೆಗಳಿಗೆ ಸಾಕಷ್ಟು ಚರಂಡಿ ವ್ಯವಸ್ಥೆ.- (1) ಯಾವುದೇ [1][ಕಟ್ಟಡಕ್ಕೆ ಅಥವಾ ಖಾಲಿಭೂಮಿಗೆ][1] ಕಡಿಮೆ ಚರಂಡಿ ವ್ಯವಸ್ಥೆ ಇದ್ದರೆ ಅಥವಾ ಮುನ್ಸಿಪಲ್ ಕೌನ್ಸಿಲ್‌ಗೆ

ಸಮಾಧಾನವಾಗುವಂತಹ ಚರಂಡಿ ವ್ಯವಸ್ಥೆಯಿಲ್ಲದಿದ್ದರೆ, ಮುನ್ಸಿಪಲ್ ಕೌನ್ಸಿಲ್ ಬರಹದಲ್ಲಿ ನೋಟೀಸಿನ ಮೂಲಕ,-

(ಎ) ಅಂಥ [1][ಕಟ್ಟಡದ ಅಥವಾ ಖಾಲಿಭೂಮಿ][1]ಯ ಯಾವುದೇ ಭಾಗಕ್ಕೆ ಐವತ್ತು ಅಡಿಗಳೊಳಗೆ ಸೂಕ್ತ ಚರಂಡಿ ಅಥವಾ ಗ್ರಾಮಸಾರ ಚರಂಡಿಯು, ಇದ್ದರೆ ಆ ಯಾವುದೋ ಚರಂಡಿಯೊಳಕ್ಕೆ ಅಥವಾ ಗ್ರಾಮಸಾರ ಚರಂಡಿಯೊಳಕ್ಕೆ; ಅಥವಾ

(ಬಿ) ಅಂಥ ಒಡೆಯನು ಒದಗಿಸಬೇಕಾದ ಮುಚ್ಚಿದ ರೊಚ್ಚುಗುಂಡಿಯೊಳಕ್ಕೆ;

- ಅಂಥ [1][ಕಟ್ಟಡಕ್ಕೆ ಅಥವಾ ಖಾಲಿಭೂಮಿ][1] ಗೆ ಚರಂಡಿ ವ್ಯವಸ್ಥೆಗಾಗಿ ಅವಶ್ಯಕವೆಂದು ಅದು ಯೋಚಿಸುವಂಥ ಗಾತ್ರದ ಮತ್ತು ಅಂಥ ಸಾಮಗ್ರಿಗಳ, ಅಂಥ ಮಟ್ಟದಲ್ಲಿ ಮತ್ತು ಅಂಥ ಇಳಿವುನೊಂದಿಗೆ, ಚರಂಡಿ ಅಥವಾ ನಳಿಕೆಯನ್ನು ಅಂಥ [1][ಕಟ್ಟಡದಿಂದ ಅಥವಾ ಖಾಲಿಭೂಮಿ][1] ಯಿಂದ ನಿರ್ಮಿಸಲು ಅಥವಾ ಹಾಕಲು ಒಡೆಯನನ್ನು ಕೇಳಬಹುದು.

1.2003ರ ಅಧಿನಿಯಮ 31ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಯಾವುದೇ ಕಟ್ಟಡವನ್ನು ಹೊಸದಾಗಿ ನಿರ್ಮಿಸುವುದು ಅಥವಾ ಯಾವುದೇ ಕಟ್ಟಡವನ್ನು ಪುನರ್ನಿರ್ಮಿಸುವುದು ಅಥವಾ ಹೊಸದಾಗಿ ನಿರ್ಮಿಸಿದ ಅಥವಾ ಪುನರ್ನಿರ್ಮಿಸಿದ ಯಾವುದೇ ಕಟ್ಟಡವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವುದು,-

(ಎ) ಅಂಥ ಕಟ್ಟಡದಿಂದ ಸರಾಗವಾಗಿ ರೊಚ್ಚು ನೀರು ಹರಿದು ಹೋಗುವ ಸಲುವಾಗಿ ಅವಶ್ಯವೆಂದು ಮುನ್ಸಿಪಲ್ ಕೌನ್ಸಿಲ್‌ಗೆ ಕಂಡುಬರುವಂಥ ಗಾತ್ರದ, ಸಾಮಗ್ರಿಗಳ ಮತ್ತು ವಿವರಣೆಯ, ಅಂಥ ಮಟ್ಟದಲ್ಲಿ ಮತ್ತು ಅಂಥ ಇಳಿವುನೊಂದಿಗೆ ಚರಂಡಿಯನ್ನು ನಿರ್ಮಿಸಿದ ಹೊರತು ಮತ್ತು ಅಲ್ಲಿಯವರೆಗೆ; ಅಥವಾ

(ಬಿ) ಅಂಥ ಕಟ್ಟಡದಲ್ಲಿ ಮತ್ತು ಅದಕ್ಕೆ ಲಗತ್ತಾದ ಭೂಮಿಯಲ್ಲಿ, ಸದರಿ ಕಟ್ಟಡದಿಂದ ಮತ್ತು ಸದರಿ ಭೂಮಿಯಿಂದ ರೊಚ್ಚು ನೀರು ಹರಿದುಬರುವುದನ್ನು ಸಂಗ್ರಹಿಸುವ ಮತ್ತು ಸ್ವೀಕರಿಸುವ ಮತ್ತು ಅದನ್ನು ಸದರಿ ಕಟ್ಟಡದಾಚೆಗೆ ಮತ್ತು ಭೂಮಿಯಾಚೆಗೆ ಸಾಗಿಸುವ ಮತ್ತು ಸದರಿ ಕಟ್ಟಡದಿಂದ ಹರಿದು ಬರುವ ಚರಂಡಿ ನೀರನ್ನು ಸರಾಗವಾಗಿ ಹೊರಹಾಕುವ ಉದ್ದೇಶಗಳಿಗಾಗಿ ಅವಶ್ಯವೆಂದು ಮುನ್ಸಿಪಲ್ ಕೌನ್ಸಿಲ್‌ಗೆ ತೋರಬಹುದಾದಂಥ ಎಲ್ಲ ಉಪಕರಣಗಳನ್ನು ಮತ್ತು ಜೋಡಣೆಗಳನ್ನು ಮತ್ತು ಅವುಗಳಿಗೆ ಸಂಬಂಧಪಟ್ಟ ಪ್ರತಿಯೊಂದು ಜೋಡಣೆಯನ್ನು ಒದಗಿಸಿದ ಹೊರತು ಮತ್ತು ಅಲ್ಲಿಯವರೆಗೆ

- ಕಾನೂನು ಸಮ್ಮತವಾಗಿರತಕ್ಕದ್ದಲ್ಲ.

(3) ಹಿಂದೆ ಹೇಳಿದಂತೆ ನಿರ್ಮಿಸಬೇಕಾಗಿರುವ ಚರಂಡಿಯನ್ನು, ಮುನ್ಸಿಪಲ್ ಚರಂಡಿಯೊಳಕ್ಕೆ ಅಥವಾ ಅಂಥ ಕಟ್ಟಡದಿಂದ ಐವತ್ತು ಅಡಿಗಳಿಗೆ ಮೀರದ ಅಂತರದಲ್ಲಿರುವ ಚರಂಡಿ ನೀರನ್ನು ವಿಸರ್ಜಿಸಲು ಕಾನೂನು ಸಮ್ಮತವಾಗಿ ಪ್ರತ್ಯೇಕವಾಗಿರಿಸಿದ ಯಾವುದೇ ಸ್ಥಳದೊಳಕ್ಕೆ ಹರಿಸತಕ್ಕದ್ದು; ಆದರೆ ಆ ಅಂತರದೊಳಗೆ ಅಂಥ ಚರಂಡಿ ಅಥವಾ ಸ್ಥಳವು ಇಲ್ಲದಿದ್ದರೆ, ಆಗ ಅಂಥ ರೊಚ್ಚು ನೀರು ಮುನ್ಸಿಪಲ್ ಕೌನ್ಸಿಲ್ ನಿರ್ದೇಶಿಸುವಂಥ ರೊಚ್ಚು ಗುಂಡಿಯೊಳಕ್ಕೆ ಹರಿಸತಕ್ಕದ್ದು.

196. ಮುನ್ಸಿಪಲ್ ಚರಂಡಿಗಳೊಳಕ್ಕೆ ಹರಿಯಬಿಡಲು [1][ಕಟ್ಟಡಗಳ ಅಥವಾ ಖಾಲಿಭೂಮಿ][1]ಯ ಒಡೆಯರ ಮತ್ತು ಅಧಿಭೋಗದಾರರ ಅಧಿಕಾರ.- [2][ಮುನ್ಸಿಪಲ್ ಏರಿಯಾ][2]ದೊಳಗಿನ ಯಾವುದೇ [1][ಕಟ್‌ಟಡ ಅಥವಾ ಖಾಲಿಭೂಮಿ][1]ಯ ಒಡೆಯನು ಅಥವಾ ಅಧಿಭೋಗದಾರನು ತನ್ನ ರೊಚ್ಚು ನೀರನ್ನು ಮುನ್ಸಿಪಲ್ ಕೌನ್ಸಿಲ್‌ನ ಗ್ರಾಮಸಾರ ಚರಂಡಿಯೊಳಕ್ಕೆ ಹರಿಸಲು ಹಕ್ಕುಳ್ಳವನಾಗಿರತಕ್ಕದ್ದು: ಪರಂತು, ಅವನು ಮೊದಲು ಮುನ್ಸಿಪಲ್ ಕೌನ್ಸಿಲ್‌ನಿಂದ ಬರಹದಲ್ಲಿ ಅನುಮತಿಯನ್ನು ಪಡೆಯತಕ್ಕದ್ದು ಮತ್ತು ಮುನ್ಸಿಪಲ್ ಕೌನ್ಸಿಲ್‌ನಲ್ಲಿ ನಿಹಿತವಾಗಿರದ ಚರಂಡಿಗಳು ಮತ್ತು ಹಾಗೆ ನಿಹಿತವಾಗಿರುವಂಥ ಚರಂಡಿಗಳ ನಡುವೆ, ಸಂಪರ್ಕಗಳನ್ನು ಒದಗಿಸಬೇಕಾದಂಥ ವಿಧಾನ ಮತ್ತು ಯಾವ ಅಧೀಕ್ಷಣೆಯ ಬಗ್ಗೆ ಮುನ್ಸಿಪಲ್ ಕೌನ್ಸಿಲ್ ನಿಯಮಿಸಬಹುದಾದಂಥ ಷರತ್ತುಗಳನ್ನು ಅವನು ಪಾಲಿಸತಕ್ಕದ್ದು.

1.2003ರ ಅಧಿನಿಯಮ 31ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

197. ಇತರ ವ್ಯಕ್ತಿಗಳಿಗೆ ಸೇರಿದ ಭೂಮಿಯ ಮೂಲಕ ಅಥವಾ ಚರಂಡಿಯನ್ನು ಹಾಕಲು ಹಕ್ಕು.- (1) ಯಾವುದೇ [1][ಕಟ್ಟಡ ಅಥವಾ ಖಾಲಿಭೂಮಿ][1]ಯ ಅಥವಾ ಅಧಿಭೋಗದಾರನು ಬೇರೆ ಇತರ ವ್ಯಕ್ತಿಗೆ ಸೇರಿದ ಅವನ ಸ್ವಾಧೀನದಲ್ಲಿರುವ ಅಥವಾ ಅವನು ಬಳಸುತ್ತಿರುವ ಭೂಮಿಯ ಮೂಲಕ ನಿರ್ಮಿಸಬೇಕಾದ ಚರಂಡಿಯ ಮೂಲಕ ಅಥವಾ ಚರಂಡಿಯೊಂದಿಗೆ ಸಂಪರ್ಕಿಸಬೇಕಾದ ಯಾವುದೇ ಮುನ್ಸಿಪಲ್ ಚರಂಡಿಯೊಂದಿಗೆ ಅದನ್ನು ಸೇರಿಸಲು ಇಚ್ಛಿಸಿದರೆ, ಅವನು ಆ ಬಗ್ಗೆ ಮುನ್ಸಿಪಲ್ ಕಮೀಷನರ್ ಅಥವಾ ಚೀಫ್ ಆಫೀಸರ್ ನಿಗೆ ಬರಹದಲ್ಲಿ ಅರ್ಜಿಯನ್ನು ಸಲ್ಲಿಸಬಹುದು.

1.2003ರ ಅಧಿನಿಯಮ 31ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಆ ತರುವಾಯ ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನು ಅಂಥ ಇತರ ವ್ಯಕ್ತಿಗೆ ಅಂಥ ಅರ್ಜಿಯ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ತಿಳಿಸಲು ಸಮಂಜಸ ಅವಕಾಶವನ್ನು ಕೊಟ್ಟ ತರುವಾಯ, ಯಾವುದೇ ಆಕ್ಷೇಪಣೆಯನ್ನು ಎತ್ತಿದಿದ್ದರೆ ಅಥವಾ ಎತ್ತಿದಂಥ ಯಾವುದೇ ಆಕ್ಷೇಪಣೆಯು ಅವರ ಅಭಿಪ್ರಾಯದಲ್ಲಿ ಸಾಕಷ್ಟಿರದಿದ್ದರೆ, ಸಂದರ್ಭಾನುಸಾರ, ಸದರಿ ಭೂಮಿಯೊಳಕ್ಕೆ ಆ ಭೂಮಿಯ ಮೂಲಕ, ಅಥವಾ ಅದರ ಕೆಳಗೆ ಅಥವಾ ಸದರಿ ಚರಂಡಿಯೊಳಕ್ಕೆ ಅವನ ಚರಂಡಿಯನ್ನು ಬಾಡಿಗೆ ಅಥವಾ ನಷ್ಟ ಪರಿಹಾರದ ಸಂದಾಯದ ಬಗ್ಗೆ ಮತ್ತು ಸದರಿ ಚರಂಡಿಗಳ ನಿರ್ವಹಣೆ, ದುರಸ್ತು, ನೀರು ಹರಿಸಿ ತೊಳೆಯುವಿಕೆ, ಬರಿದು ಮಾಡುವಿಕೆ ಮತ್ತು ಹರಿಯುವಿಕೆಯ ಬಗ್ಗೆ ಪಕ್ಷಕಾರರು ತಮ್ಮ ತಮ್ಮ ಜವಾಬ್ದಾರಿಗಳ ಬಗ್ಗೆ, ಸಾಕಷ್ಟೆಂದು ಮತ್ತು ನ್ಯಾಯ ಸಮ್ಮತವೆಂದು ತಮಗೆ ತೋರಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಷರತ್ತುಗಳ ಮೇಲೆ ಬರಹದಲ್ಲಿ ಆದೇಶದ ಮೂಲಕ ಅರ್ಜಿದಾರರನ್ನು ಅಧಿಕೃತಗೊಳಿಸಬಹುದು.

(3) ಭೂಮಿಯ ಅಥವಾ ಚರಂಡಿಯ ಒಡೆಯನಿಗೆ, ಅಧಿಭೋಗದಾರನಿಗೆ ಅಥವಾ ಅದನ್ನು ಬಳಸುವವನಿಗೆ ಸದರಿ ಆದೇಶದಲ್ಲಿ ನಿರ್ದಿಷ್ಟಪಡಿಸಿದ ನಷ್ಟ ಪರಿಹಾರ ಅಥವಾ ಬಾಡಿಗೆ ಯಾವುದಾದರೂ ಇದ್ದರೆ ಅದನ್ನು ಕೊಟ್ಟ ತರುವಾಯ ಅಥವಾ ಕೊಡ ಮಾಡಿದ ತರುವಾಯ ಮತ್ತು ಸದರಿ ಆದೇಶದ ಷರತ್ತುಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಅನ್ಯಥಾ ಈಡೇರಿಸಿದ ತರುವಾಯ ಮತ್ತು ಸದರಿ ಒಡೆಯನಿಗೆ, ಅಧಿಭೋಗದಾರನಿಗೆ ಅಥವಾ ಅದನ್ನು ಬಳಸುವವನಿಗೆ ಸೂರ್ಯೋದಯ ಮತ್ತು ಸೂರ್ಯಾಸ್ತದ ನಡುವೆ ಯಾವುದೇ ಕಾಲದಲ್ಲಿ ಸಹಾಯಕರು ಮತ್ತು ಕೆಲಸಗಾರರೊಂದಿಗೆ ಸದರಿ ಆದೇಶದಲ್ಲಿ ನಿರ್ದಿಷ್ಟಪಡಿಸಿದ ಭೂಮಿಯ ಮೇಲೆ ಪ್ರವೇಶಿಸಲು ಬರಹದಲ್ಲಿ ಯುಕ್ತ ನೋಟೀಸನ್ನು ಕೊಟ್ಟ ತರುವಾಯ ಮತ್ತು ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು,-

(ಎ) ಸದರಿ ಆದೇಶದ ಮೂಲಕ ಅಧಿಕೃತಗೊಳಿಸಬಹುದಾದಂತೆ, ಚರಂಡಿಯ ನಿರ್ಮಾಣಕ್ಕಾಗಿ ಅಥವಾ ಸಂಪರ್ಕಕ್ಕಾಗಿ;

(ಬಿ) ಕಾಲಕಾಲಕ್ಕೆ ಅಗತ್ಯವಾಗಬಹುದಾದಂತೆ ಅದರ ನವೀಕರಣಕ್ಕಾಗಿ, ದುರಸ್ತಿಗಾಗಿ ಅಥವಾ ಬದಲಾವಣೆಗಾಗಿ;

(ಸಿ) ಸದರಿ ಚರಂಡಿ ಅಥವಾ ಅದರ ಯಾವುದೇ ಭಾಗದ ನಿರ್ವಹಣೆ, ದುರಸ್ತಿ, ನೀರು ಹರಿಸಿ ತೊಳೆಯುವುದು, ಸ್ವಚ್ಛಪಡಿಸುವುದು ಅಥವಾ ಹರಿಯುವಿಕೆಯ ಬಗ್ಗೆ ಆದೇಶದ ನಿಬಂಧನೆಗಳ ಮೇರೆಗೆ ಅವನಿಗೆ ವಹಿಸಲಾದ ಯಾವುದೇ ಜವಾಬ್ದಾರಿಯನ್ನು ನಿರ್ವಹಿಸುವುದಕ್ಕಾಗಿ

- ಅಗತ್ಯವಾಗಬಹುದಾದಂಥ ಎಲ್ಲ ಕೆಲಸಗಳನ್ನು ಮಾಡಲು, ಅಂಥ ಪ್ರತಿಯೊಂದು ಆದೇಶವು, ಯಾರ ಪರವಾಗಿ ಅದನ್ನು ಮಾಡಲಾಗಿದೆಯೋ ಆ ವ್ಯಕ್ತಿಗೆ ಅಥವಾ ಈ ಉದ್ದೇಶಕ್ಕಾಗಿ ಅವನಿಂದ ನಿಯೋಜಿತನಾದ ಯಾರೇ ಏಜೆಂಟ್‌ಗೆ ಅಥವಾ ಇತರ ವ್ಯಕ್ತಿಗೆ ಸಂಪೂರ್ಣ ಅಧಿಕಾರ ಉಳ್ಳದ್ದಾಗಿರತಕ್ಕದ್ದು.

(4) ಈ ಪ್ರಕರಣದ ಮೇರೆಗೆ ಯಾವುದೇ ಕೆಲಸವನ್ನು ನಿರ್ವಹಿಸುವಾಗ ಹಾನಿಯು ಸಾಧ್ಯವಾದಷ್ಟು ಕಡಿಮೆ ಇರುವಂತೆ ನೋಡಿಕೊಳ್ಳತಕ್ಕದ್ದು ಮತ್ತು ಯಾವ [1][ಕಟ್ಟಡಗಳ ಅಥವಾ ಖಾಲಿಭೂಮಿ][1]ಗಳ ಪ್ರಯೋಜನಕ್ಕಾಗಿ ಆ ಕೆಲಸವನ್ನು ಮಾಡಲಾಗಿದೆಯೋ ಆ ಕಟ್ಟಡಗಳ ಅಥವಾ ಭೂಮಿಗಳ ಒಡೆಯನು ಅಥವಾ ಅಧಿಭೋಗದಾರನು,-

(ಎ) ವಿಳಂಬವು ಸಾಧ್ಯವಾಗುವಷ್ಟು ಕಡಿಮೆಯಾಗುವಂತೆ ಆ ಕೆಲಸಗಳನ್ನು;

- ನಿರ್ವಹಿಸುವಂತೆ ಮಾಡತಕ್ಕದ್ದು.

(ಬಿ) ಸದರಿ ಕೆಲಸಗಳನ್ನು ನಿರ್ವಹಿಸುವ ಉದ್ದೇಶಕ್ಕಾಗಿ ತೆರೆದ, ಮುರಿದ ಅಥವಾ ತೆಗೆದುಹಾಕಿದ ನೆಲದ ಅಥವಾ ಕಟ್ಟಡದ ಅಥವಾ ಇತರ ರಚನೆಯ ಯಾವುದೇ ಭಾಗವನ್ನು ತನ್ನ ಸ್ವಂತ ಖರ್ಚಿನಲ್ಲಿ ಮತ್ತು ವಿಳಂಬವು ಸಾಧ್ಯವಾದಷ್ಟು ಕಡಿಮೆಯಾಗುವಂತೆ ಭರ್ತಿ ಮಾಡತಕ್ಕದ್ದು, ಪುನಃ ಸ್ಥಾಪಿಸತಕ್ಕದ್ದು ಮತ್ತು ಸರಿಪಡಿಸತಕ್ಕದ್ದು.

(ಸಿ) ಸದರಿ ಕೆಲಸದ ನಿರ್ವಹಣೆಯಿಂದಾಗಿ ಹಾನಿಗೆ ಒಳಗಾದ ಯಾರೇ ವ್ಯಕ್ತಿಗೆ ನಷ್ಟ ಪರಿಹಾರವನ್ನು ಸಂದಾಯ ಮಾಡತಕ್ಕದ್ದು.

1.2003ರ ಅಧಿನಿಯಮ 31ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

198. ಚರಂಡಿಯನ್ನು ಒಯ್ಯಲಾಗಿರುವಂಥ ಭೂಮಿಯ ಒಡೆಯನಿಗೆ, ಅದರ ಮೇಲೆ ತರುವಾಯ ಕಟ್ಟುವುದರ ಬಗೆಗಿನ ಇರುವ ಹಕ್ಕುಗಳು.- ಯಾವ ಭೂಮಿಯ ಮೇಲೆ ಕಟ್ಟಡವನ್ನು ಕಟ್ಟಿಲ್ಲದಿದ್ದಾಗ 197ನೇ ಪ್ರಕರಣದ ಮೇರೆಗೆ ಆ ಭೂಮಿಯ ಒಳಗೆ, ಅದರ ಮೂಲಕ ಅಥವಾ ಅದರ ಕೆಳಗೆ ಚರಂಡಿಯನ್ನು ಹಾಕಲಾಗಿದೆಯೋ ಆ ಯಾವುದೇ ಭೂಮಿಯ ಒಡೆಯನು, ತರುವಾಯದ ಯಾವುದೇ ಕಾಲದಲ್ಲಿ ಅದರ ಮೇಲೆ ಕಟ್ಟಡವನ್ನು ನಿರ್ಮಿಸಲು ಇಚ್ಛಿಸಿದರೆ, ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನು ಸ್ಥಾಯೀ ಸಮಿತಿಯ ನಿಯಂತ್ರಣಕ್ಕೊಳಪಟ್ಟು ಅಂಥ ಕಟ್ಟಡದ ನಿರ್ಮಾಣಕ್ಕೆ ಮಂಜೂರಾತಿಯನ್ನು ಕೊಟ್ಟರೆ, ಯಾವ ಕಟ್ಟಡದ ಅಥವಾ ಭೂಮಿಯ ಪ್ರಯೋಜನಕ್ಕಾಗಿ ಅಂಥ ಚರಂಡಿಯನ್ನು ನಿರ್ಮಿಸಲಾಗಿತ್ತೋ ಆ [1][ಕಟ್ಟಡದ ಅಥವಾ ಖಾಲಿಭೂಮಿ][1]ಯ ಒಡೆಯನನ್ನು ಅಥವಾ ಅಧಿಭೋಗದಾರನನ್ನು, ಅದನ್ನು ಮುಚ್ಚಲು, ತೆಗೆದುಹಾಕಲು ಅಥವಾ ಮಾರ್ಗಪಲ್ಲಟಗೊಳಿಸಲು ಮತ್ತು ಉದ್ದೇಶಿತ ಕಟ್ಟಡದ ನಿರ್ಮಾಣಕ್ಕೆ ಅಥವಾ ಸುರಕ್ಷಿತ ಅನುಭೋಗಕ್ಕೆ ಅವಕಾಶ ಮಾಡಿಕೊಡುವ ದೃಷ್ಟಿಯಿಂದ ಅವಶ್ಯವೆಂದು ಅವರು ಭಾವಿಸಬಹುದಾದಂಥ ರೀತಿಯಲ್ಲಿ ಆ ಭೂಮಿಯನ್ನು ಭರ್ತಿ ಮಾಡಲು, ಮೊದಲಿದ್ದ ಸ್ಥಿತಿಗೆ ತರಲು ಮತ್ತು ಸರಿಪಡಿಸಲು ಬರಹದಲ್ಲಿ ನೋಟೀಸಿನ ಮೂಲಕ ಅಗತ್ಯಪಡಿಸಬಹುದು.

1.2003ರ ಅಧಿನಿಯಮ 31ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

199. ಶೌಚಾಲಯಗಳು, ಇತ್ಯಾದಿಗಳ ಬಗ್ಗೆ ವ್ಯವಸ್ಥೆ.- (1) ಯಾವುದೇ [1][ಕಟ್ಟಡದಲ್ಲಿ ಅಥವಾ ಖಾಲಿಭೂಮಿ][1]ಯಲ್ಲಿ ಅಥವಾ ಅದರ ಮೇಲೆ ಯಾವುದೇ ಶೌಚಾಲಯವನ್ನು ಅಥವಾ ರೊಚ್ಚುಗುಂಡಿಯನ್ನು ಅಥವಾ ಹೆಚ್ಚುವರಿ ಶೌಚಗೃಹಗಳನ್ನು ಅಥವಾ ರೊಚ್ಚುಗುಂಡಿಗಳನ್ನು ಒದಗಿಸಬೇಕೆಂದು ಅಥವಾ ಯಾವುದೇ [1][ಕಟ್ಟಡದಿಂದ ಅಥವಾ ಖಾಲಿಭೂಮಿ][1]ಯಿಂದ ಅವುಗಳನ್ನು ಸ್ಥಳಾಂತರಿಸಬೇಕೆಂದು ಅಥವಾ ತೆಗೆದುಹಾಕಬೇಕೆಂದು ಅಥವಾ ಶೌಚಗೃಹ ವ್ಯವಸ್ಥೆಯನ್ನು ಪ್ರಾರಂಭಿಸಲಾಗಿದೆಯೋ ಆ ಯಾವುದೇ [2][ಮುನ್ಸಿಪಲ್ ಏರಿಯಾ][2]ದಲ್ಲಿ, ಯಾವುದೇ [1][ಕಟ್ಟಡ ಅಥವಾ ಖಾಲಿಭೂಮಿ][1]ಯಲ್ಲಿ ಅಥವಾ ಅದರ ಮೇಲೆ ಇರುವ ಕಕ್ಕಸುಗೃಹಗಳಿಗೆ ಬದಲಾಗಿ ಶೌಚಗೃಹಗಳನ್ನು ಒದಗಿಸಬೇಕೆಂದು ಅಥವಾ ಅದರಲ್ಲಿ ಅಥವಾ ಅದರ ಮೇಲೆ ಹೆಚ್ಚುವರಿ ಶೌಚಗೃಹಗಳನ್ನು ಒದಗಿಸತಕ್ಕದ್ದೆಂದು ಮುನ್ಸಿಪಲ್ ಕೌನ್ಸಿಲ್ ಅಭಿಪ್ರಾಯಪಟ್ಟರೆ, ಮುನ್ಸಿಪಲ್ ಕೌನ್ಸಿಲ್ ಬರಹದಲ್ಲಿ ನೋಟೀಸಿನ ಮೂಲಕ ಅಂಥ [1][ಕಟ್ಟಡ ಅಥವಾ ಖಾಲಿಭೂಮಿ][1]ಯ ಒಡೆಯನನ್ನು ಸರಿಯೆಂದು ಮುನ್ಸಿಪಲ್ ಕೌನ್ಸಿಲ್ ಭಾವಿಸಬಹುದಾದಂಥ ಶೌಚಾಲಯಗಳನ್ನು, ರೊಚ್ಚುಗುಂಡಿಗಳನ್ನು ಅಥವಾ ಶೌಚಗೃಹಗಳನ್ನು ಒದಗಿಸಲು ಕೇಳಬಹುದು.

1.2003ರ ಅಧಿನಿಯಮ 31ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಮುನ್ಸಿಪಲ್ ಕೌನ್ಸಿಲ್ ಇಪ್ಪತ್ತಕ್ಕಿಂತಲೂ ಹೆಚ್ಚು ಸಂಖ್ಯೆಯ ಕೆಲಸಗಾರರನ್ನು ಅಥವಾ ಕಾರ್ಮಿಕರನ್ನು ನಿಯೋಜಿಸಿಕೊಳ್ಳುವ ಅಥವಾ ಯಾವುದೇ ಮಾರುಕಟ್ಟೆಯ, ಶಾಲೆಯ ಅಥವಾ ರಂಗಮಂಟಪದ ಅಥವಾ ಸಾರ್ವಜನಿಕರು ಸೇರುವ ಇತರ ಸ್ಥಳದ ಒಡೆತನ ಹೊಂದಿರುವ ಅಥವಾ ಅದನ್ನು ನಿರ್ವಹಿಸುತ್ತಿರುವ ಯಾರೇ ವ್ಯಕ್ತಿಯನ್ನು ಅಥವಾ ವ್ಯಕ್ತಿಗಳನ್ನು, ಮುನ್ಸಿಪಲ್ ಕೌನ್ಸಿಲ್ ನಿರ್ದೇಶಿಸಬಹುದಾದಂಥ ಪಾಯಿಖಾನೆಗಳನ್ನು ಮತ್ತು ಮೂತ್ರಾಲಯಗಳನ್ನು ಒದಗಿಸಲು ಮತ್ತು ಅವುಗಳನ್ನು ಸರಿಯಾದ ಸ್ಥಿತಿಯಲ್ಲಿಟ್ಟುಕೊಳ್ಳಲು ಮತ್ತು ಪ್ರತಿದಿನವೂ ಸ್ವಚ್ಛಗೊಳಿಸುವಂತೆ ಮಾಡಲು ಬರಹದಲ್ಲಿ ನೋಟೀಸಿನ ಮೂಲಕ ಅಗತ್ಯಪಡಿಸಬಹುದು.

(3) ಮುನ್ಸಿಪಲ್ ಕೌನ್ಸಿಲ್ ಶೌಚಗೃಹವು ಅಥವಾ ಮೂತ್ರಾಲಯವು ಇರುವಂಥ ಯಾವುದೇ ಭೂಮಿಯ ಒಡೆಯನನ್ನು ಅಥವಾ ಅಧಿಭೋಗದಾರನನ್ನು ಆ ಭೂಮಿಯಲ್ಲಿ ಸಂಚರಿಸುವ

ವ್ಯಕ್ತಿಗಳ ಅಥವಾ ನೆರೆಹೊರೆಯಲ್ಲಿ ವಾಸಿಸುತ್ತಿರುವ ವ್ಯಕ್ತಿಗಳ ಕಣ್ಣಿಗೆ ಅವುಗಳ ಒಳಗಡೆಯ ಜಾಗವು ಕಾಣದಂತೆ ಸಾಕಷ್ಟು ಚಾವಣಿ ಮತ್ತು ಗೋಡೆ ಅಥವಾ ಬೇಲಿ ಹಾಕಿ ಮರೆ ಮಾಡಲು ಅಥವಾ ಬೀದಿಯ ಕಡೆಗೆ ತೆರೆದಿರುವಂಥ ಮತ್ತು ಹೇಸಿಗೆಯಾಗುವಂತಿದೆಯೆಂದು ಜನರು ಭಾವಿಸುವಂಥ ಯಾವುದೇ ಮೂತ್ರಾಲಯದ ಬಾಗಿಲನ್ನು ಅಥವಾ ನೆಲಬಾಗಿಲನ್ನು ಅದು ನಿರ್ದೇಶಿಸಬಹುದಾದಂತೆ ಬದಲಾಯಿಸಲು ಬರಹದಲ್ಲಿ ನೋಟೀಸಿನ ಮೂಲಕ ಅಗತ್ಯಪಡಿಸಬಹುದು.

200. ಶೌಚಾಲಯಗಳು ಇತ್ಯಾದಿಗಳನ್ನು ಬದಲಾಯಿಸುವ, ದುರಸ್ತಿ ಮಾಡುವ ಮತ್ತು ಸರಿಯಾದ ಸ್ಥಿತಿಯಲ್ಲಿಡುವ ಬಗ್ಗೆ ಖರ್ಚು.- (1) [1][ಮುನ್ಸಿಪಲ್ ಏರಿಯಾ][1] ದೊಳಗಿರುವ ಎಲ್ಲಾ ಗ್ರಾಮಸಾರ ಚರಂಡಿಗಳನ್ನು, ಚರಂಡಿಗಳನ್ನು, ಶೌಚಾಲಯಗಳನ್ನು, ಶೌಚಗೃಹಗಳನ್ನು, ಮನೆ ಬಚ್ಚಲುಗಳನ್ನು ಮತ್ತು ರೊಚ್ಚುಗುಂಡಿಗಳನ್ನು ಮುನ್ಸಿಪಲ್ ಕೌನ್ಸಿಲ್ ನ ಖರ್ಚಿನಲ್ಲಿ ನಿರ್ಮಿಸಿದ್ದ ಹೊರತು, ಅವುಗಳು ಯಾವ ಭೂಮಿಗೆ ಅಥವಾ ಕಟ್ಟಡಗಳಿಗೆ ಸೇರಿವೆಯೋ ಅಥವಾ ಅವುಗಳನ್ನು ಯಾವುದರ ಬಳಕೆಗಾಗಿ ನಿರ್ಮಿಸಲಾಗಿದೆಯೋ ಅಥವಾ ಮುಂದುವರಿಸಲಾಗಿದೆಯೋ ಆ ಭೂಮಿಯ ಅಥವಾ ಕಟ್ಟಡಗಳ ಒಡೆಯರ ಖರ್ಚು ಮತ್ತು ವೆಚ್ಚಗಳಲ್ಲಿ ಮಾರ್ಪಾಟು ಮಾಡತಕ್ಕದ್ದು, ದುರಸ್ತಿ ಮಾಡತಕ್ಕದ್ದು ಮತ್ತು ಸುಸ್ಥಿತಿಯಲ್ಲಿಟ್ಟುಕೊಳ್ಳತಕ್ಕದ್ದು ಮತ್ತು ಮುನ್ಸಿಪಲ್ ಕೌನ್ಸಿಲ್ ಸೂಕ್ತವೆಂದು ಅದು ಯೋಚಿಸುವಂಥ ರೀತಿಯಲ್ಲಿ ಅದನ್ನು ಮಾರ್ಪಾಟು ಮಾಡಲು, ದುರಸ್ತಿ ಮಾಡಲು ಮತ್ತು ಸುಸ್ಥಿತಿಯಲ್ಲಿಟ್ಟು ಕೊಳ್ಳಲು ಅಂಥ ಒಡೆಯನನ್ನು ಬರಹದಲ್ಲಿ ನೋಟೀಸಿನ ಮೂಲಕ ಅಗತ್ಯಪಡಿಸಬಹುದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಮುನ್ಸಿಪಲ್ ಕೌನ್ಸಿಲ್, ಯಾವುದೇ ಶೌಚಾಲಯವನ್ನು ಅಥವಾ ರೊಚ್ಚುಗುಂಡಿಯನ್ನು, ಈ ಅಧಿನಿಯಮವು ಜಾರಿಗೆ ಬರುವುದಕ್ಕೆ ಮುಂಚೆಯಾಗಲಿ ಅಥವಾ ತರುವಾಯವಾಗಲಿ ಕಟ್ಟಲಾಗಿದೆಯೆಂದು, ಅದು ಹೇಸಿಗೆ ಬರಿಸುವಂತಿದೆಯೆಂದು, ಅಥವಾ ನಿರ್ಮಲೀಕರಣದ ಉದ್ದೇಶಕ್ಕಾಗಿ ಪ್ರವೇಶ ಸಾಧ್ಯವಿಲ್ಲದಿರುವ ಹಾಗೆ ಅಥವಾ ಸರಿಯಾಗಿ ಸ್ವಚ್ಛಗೊಳಿಸಲು ಅಥವಾ ಸುಸ್ಥಿತಿಯಲ್ಲಿಟ್ಟುಕೊಳ್ಳಲು ಆಗದ ಹಾಗೆ ಕಟ್ಟಲಾಗಿದೆಯೆಂದು ಮುನ್ಸಿಪಲ್ ಕೌನ್ಸಿಲ್ ಅಭಿಪ್ರಾಯಪಟ್ಟರೆ ಬರಹದಲ್ಲಿ ನೋಟೀಸಿನ ಮೂಲಕ ಕೆಡವಿ ಹಾಕಲು ಅಥವಾ ಮುಚ್ಚಲು ಒಡೆಯನನ್ನು ಅಗತ್ಯಪಡಿಸಬಹುದು.

201. ಈಗಿರುವ ಖಾಸಗಿ ಚರಂಡಿಗಳನ್ನು ಮುಚ್ಚಲು ಅಧಿಕಾರ.-[2][ಮುನ್ಸಿಪಲ್ ಏರಿಯಾ][2] ದೊಳಗಿರುವ ಯಾವುದೇ [1][ಕಟ್ಟಡಕ್ಕೆ ಅಥವಾ ಖಾಲಿಭೂಮಿ][1] ಗೆ ಯಾವುದೇ ರೊಚ್ಚುಗುಂಡಿಯ ಅಥವಾ ಗ್ರಾಮಸಾರ ಚರಂಡಿಯೊಂದಿಗೆ ಸಂಪರ್ಕವುಳ್ಳ ಚರಂಡಿಯು ಇದ್ದಾಗ, ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನು, ಅಂಥ ಚರಂಡಿಯು, ಅಂಥ [1][ಕಟ್ಟಡದ ಅಥವಾ ಖಾಲಿಭೂಮಿ][1]ಯ ರೊಚ್ಚು ನೀರು ಹರಿದು ಹೋಗಲು ಸಾಕಷ್ಟಾಗಿರಬಹುದಾಗಿದ್ದರೂ, ಮತ್ತು ಅದಕ್ಕೆ ಅನ್ಯಥಾ ಇಲ್ಲದಿರಬಹುದಾಗಿದ್ದರೂ, ಅದು ಆ ಸ್ಥಳದ ಸಾಮಾನ್ಯ ಗ್ರಾಮಚರಂಡಿ ವ್ಯವಸ್ಥೆಗೆ ಸರಿಹೊಂದುತ್ತಿಲ್ಲವೆಂದು ಪರ್ಯಾಲೋಚಿಸಿದರೆ, ಸ್ಥಾಯಿ ಸಮಿತಿಯ ನಿಯಂತ್ರಣಕ್ಕೊಳಪಟ್ಟು, ಅವು ಮುನ್ಸಿಪಲ್ ಕೌನ್ಸಿಲ್ ನಲ್ಲಿ ನಿಹಿತವಾದ ಭೂಮಿಯ ಮೇಲೆ ಇರಲಿ ಅಥವಾ ಇಲ್ಲದಿರಲಿ, ಅಂಥ [1][ಕಟ್ಟಡದ ಅಥವಾ ಖಾಲಿಭೂಮಿ][1]ಯ ರೊಚ್ಚು ನೀರು ಸರಾಗವಾಗಿ ಹರಿದು ಹೋಗುವುದಕ್ಕಾಗಿ ಚರಂಡಿ ಅಥವಾ ಚರಂಡಿಗಳನ್ನು ಒದಗಿಸಿದ ಮೇಲೆ ಅಂಥ ಚರಂಡಿ ಮತ್ತು ಅಂಥ ರೊಚ್ಚುಗುಂಡಿ ಅಥವಾ ಗ್ರಾಮಸಾರ ಚರಂಡಿಯನ್ನು ಮುಚ್ಚಬಹುದು ಮತ್ತು ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನು ಹಿಂದೆ ಹೇಳಿದ್ದಕ್ಕೊಳಪಟ್ಟು ಆ ಉದ್ದೇಶಕ್ಕಾಗಿ ಅವಶ್ಯವಾದ ಯಾವುದೇ ಕೆಲಸವನ್ನು ಮಾಡಬಹುದು.

1.2003ರ ಅಧಿನಿಯಮ 31ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

202. ಅನಧಿಕೃತವಾಗಿ ನಿರ್ಮಿಸಿದ, ಪುನರ್ ನಿರ್ಮಿಸಿದ ಅಥವಾ ನಿಲ್ಲಿಸದ ಗ್ರಾಮಸಾರ ಚರಂಡಿಗಳು ಇತ್ಯಾದಿಗಳಿಗೆ ಸಂಬಂಧಿಸಿದಂತೆ ಅಧಿಕಾರ.- ಮುನ್ಸಿಪಲ್ ಕೌನ್ಸಿಲ್, ಮುನ್ಸಿಪಲ್ ಎಲ್ಲೆಗಳೊಳಗೆ ಇರುವ ಯಾವುದೇ ಭೂಮಿಯ ಮೇಲೆ ಯಾವುದೇ ಗ್ರಾಮಸಾರ ಚರಂಡಿಯನ್ನು, ಚರಂಡಿಯನ್ನು, ಶೌಚಾಲಯವನ್ನು, ಮೂತ್ರಾಲಯವನ್ನು, ಶೌಚಗೃಹವನ್ನು, ಮನೆ ಬಚ್ಚಲನ್ನು ಅಥವಾ ರೊಚ್ಚುಗುಂಡಿಯನ್ನು,-

(ಎ) ಅಂಥ ಭೂಮಿಯು [1][ಮುನ್ಸಿಪಲ್ ಏರಿಯಾ][1]ದ ಭಾಗವಾದ ತರುವಾಯ; ಮತ್ತು

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಬಿ) ಮುನ್ಸಿಪಲ್ ಕೌನ್ಸಿಲ್ ನ ಸಮ್ಮತಿಯಿಲ್ಲದೆಯೇ ಅಥವಾ ಅದರ ಆದೇಶಗಳಿಗೆ, ನಿರ್ದೇಶನಗಳಿಗೆ ಅಥವಾ ಸಾಮಾನ್ಯ ನಿಬಂಧನೆಗಳಿಗೆ ಅಥವಾ ಬೈಲಾಗಳಿಗೆ ತದ್ವಿರುದ್ಧವಾಗಿ ಅಥವಾ ಅದನ್ನು ಹಾಗೆ ನಿರ್ಮಿಸಿದ, ಪುನರ್ ನಿರ್ಮಿಸಿದ ಅಥವಾ ನಿಲ್ಲಿಸದ ಕಾಲದಲ್ಲಿ ಜಾರಿಯಲ್ಲಿದ್ದ ಯಾವುದೇ ಶಾಸನದ ಉಪಬಂಧಗಳಿಗೆ ತದ್ವಿರುದ್ಧವಾಗಿ,-

- ನಿರ್ಮಿಸಿದ್ದರೆ, ಪುನರ್ ನಿರ್ಮಿಸಿದ್ದರೆ, ಅಥವಾ ನಿಲ್ಲಿಸಿರದಿದ್ದರೆ, ಸೂಕ್ತವೆಂದು ತಾನು ಭಾವಿಸಬಹುದಾದಂತೆ ಅದನ್ನು ಹಾಗೆ ನಿರ್ಮಿಸಿದ, ಪುನರ್ ನಿರ್ಮಿಸಿದ ಅಥವಾ ನಿಲ್ಲಿಸದಿದ್ದ ವ್ಯಕ್ತಿಯು ಕೆಡವಿಹಾಕತಕ್ಕದ್ದು ಅಥವಾ ಬದಲಾಯಿಸತಕ್ಕದ್ದೆಂದು ಬರಹದಲ್ಲಿ ನೋಟೀಸಿನ ಮೂಲಕ ಅಗತ್ಯಪಡಿಸಬಹುದು. ಮತ್ತು ಯಾವುದೇ ಅಂಥ ಗ್ರಾಮಸಾರ ಚರಂಡಿಯನ್ನು, ಚರಂಡಿಯನ್ನು, ಮೂತ್ರಾಲಯವನ್ನು, ಶೌಚಗೃಹವನ್ನು, ಮನೆ ಬಚ್ಚಲನ್ನು ಅಥವಾ ರೊಚ್ಚುಗುಂಡಿಯನ್ನು ಹಾಗೆ ನಿರ್ಮಿಸುವ, ಪುನರ್ ನಿರ್ಮಿಸುವ ಅಥವಾ ನಿಲ್ಲಿಸದ ಪ್ರತಿಯೊಬ್ಬ ವ್ಯಕ್ತಿಯು, ಅಂಥ ನೋಟೀಸನ್ನು ಸ್ವೀಕರಿಸಿರಲಿ ಅಥವಾ ಇಲ್ಲದಿರಲಿ, ಅಥವಾ ಅದನ್ನು ಪಾಲಿಸಲಿ ಅಥವಾ ಪಾಲಿಸದಿರಲಿ, ಅಂಥ ಅನನುಪಾಲನೆಯ ಕಾರಣದಿಂದಾಗಿ ಅವನು ಗುರಿಯಾಗಬಹುದಾದಂಥ ಯಾವುದೇ ದಂಡನೆಯ ಜೊತೆಗೆ, ಇಪ್ಪತ್ತೈದು ರೂ. ಗಳ ವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

203. ಮುನ್ಸಿಪಲ್ ಚರಂಡಿಗಳು ಇತ್ಯಾದಿ ಮೇಲೆ ಒತ್ತುವರಿ.- (1) ಯಾರೇ ಆಗಲಿ, ಮುನ್ಸಿಪಲ್ ಕೌನ್ಸಿಲ್ ನಿಂದ ಬರಹದಲ್ಲಿ ಅನುಮತಿಯನ್ನು ಮುಂಚಿತವಾಗಿ ಪಡೆಯದೆ ಮುನ್ಸಿಪಲ್ ಕೌನ್ಸಿಲ್ ನಲ್ಲಿ ನಿಹಿತವಾಗಿರುವ ಯಾವುದೇ ಗ್ರಾಮಸಾರ ಚರಂಡಿಯೊಳಗೆ ಅಥವಾ ಚರಂಡಿಯೊಳಗೆ ಅಥವಾ ಅದರಿಂದ ಹೊರಗೆ ಯಾವುದೇ ಚರಂಡಿಯನ್ನು ಮಾಡಿದರೆ ಅಥವಾ ಮಾಡಿಸಿದರೆ ಅವನು ಇಪ್ಪತ್ತೈದು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು, ಮತ್ತು ಮುನ್ಸಿಪಲ್ ಕೌನ್ಸಿಲ್, ಬರಹದಲ್ಲಿ ನೋಟೀಸಿನ ಮೂಲಕ ಅಂಥ ವ್ಯಕ್ತಿಯನ್ನು ಅಂಥ ಚರಂಡಿಯನ್ನು ನೆಲಸಮ ಮಾಡಲು, ಮಾರ್ಪಾಟು ಮಾಡಲು, ಪುನರ್ ರಚಿಸಲು ಅಥವಾ ಸೂಕ್ತವೆಂದು ತಾನು ಪರ್ಯಾಲೋಚಿಸುವಂತೆ ಅದರ ಬಗ್ಗೆ ಅನ್ಯಥಾ ಸರಿಯಾದ ಕ್ರಮ ಕೈಗೊಳ್ಳುವಂತೆ ಅಗತ್ಯಪಡಿಸಬಹುದು.

(2) ಮುನ್ಸಿಪಲ್ ಕೌನ್ಸಿಲ್ ನಿಂದ ಬರಹದಲ್ಲಿ ಸಮ್ಮತಿಯಿಲ್ಲದೆ, ಮುನ್ಸಿಪಲ್ ಕೌನ್ಸಿಲ್ ನಲ್ಲಿ ನಿಹಿತವಾಗಿರುವ ಯಾವುದೇ ಗ್ರಾಮಸಾರ ಚರಂಡಿಯ, ಚರಂಡಿಯ, ಅಡಿಗಾಲುವೆ ಅಥವಾ ಮೋರಿಯ ಮೇಲೆ ಯಾವುದೇ ಕಟ್ಟಡವನ್ನು ಹೊಸದಾಗಿ ನಿರ್ಮಿಸತಕ್ಕದ್ದಲ್ಲ ಅಥವಾ ಪುನರ್ ನಿರ್ಮಿಸತಕ್ಕದ್ದಲ್ಲ, ಮತ್ತು ಮುನ್ಸಿಪಲ್ ಕೌನ್ಸಿಲ್, ಅಂಥ ಕಟ್ಟಡವನ್ನು ನಿರ್ಮಿಸಿದ ಅಥವಾ ಪುನರ್ ನಿರ್ಮಿಸಿರಬಹುದಾದ ವ್ಯಕ್ತಿಯನ್ನು, ಅದನ್ನು ಕೆಡವಲು ಅಥವಾ ಸೂಕ್ತವೆಂದು ತಾನು ಪರ್ಯಾಲೋಚಿಸಬಹುದಾದಂತೆ ಅದರ ಬಗ್ಗೆ ಅನ್ಯಥಾ ಸರಿಯಾದ ಕ್ರಮಕೈಗೊಳ್ಳುವಂತೆ ಬರಹದಲ್ಲಿ ನೋಟೀಸಿನ ಮೂಲಕ ಅಗತ್ಯಪಡಿಸಬಹುದು.

204. ಚರಂಡಿಗಳು ಇತ್ಯಾದಿಗಳ ಪರಿಶೀಲನೆ.- (1) ಮುನ್ಸಿಪಲ್ ಕೌನ್ಸಿಲ್ ಅಥವಾ ಪರಿಶೀಲನೆ ಉದ್ದೇಶಗಳಿಗಾಗಿ ಅದು ನೇಮಕ ಮಾಡಿದ ಯಾರೇ ಅಧಿಕಾರಿಯು, ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಯಾವುದೇ ಗ್ರಾಮಸಾರ ಚರಂಡಿಯನ್ನು, ಚರಂಡಿಯನ್ನು, ಶೌಚಾಲಯವನ್ನು, ಶೌಚಗೃಹವನ್ನು, ಮನೆ ಬಚ್ಚಲನ್ನು ಅಥವಾ ರೊಚ್ಚುಗುಂಡಿಯನ್ನು ಪರಿಶೀಲಿಸಬಹುದು ಮತ್ತು ಆ ಉದ್ದೇಶಕ್ಕಾಗಿ, ಸೂರ್ಯೋದಯದ ಮತ್ತು ಸೂರ್ಯಾಸ್ತದ ನಡುವೆ ಯಾವುದೇ ಕಾಲದಲ್ಲಿ, ಸಹಾಯಕರು ಮತ್ತು ಕೆಲಸಗಾರರೊಂದಿಗೆ ಯಾವುವೇ [1][ಖಾಲಿಭೂಮಿಗಳು ಅಥವಾ ಕಟ್ಟಡಗಳನ್ನು][1] ಪ್ರವೇಶಿಸಬಹುದು ಮತ್ತು ಹಾನಿಯು ಸಾಧ್ಯವಾದಷ್ಟು ಕಡಿಮೆ ಆಗುವಂತೆ ಅವನು ಅಥವಾ ಸೂಕ್ತವೆಂದು ಅದು ಯೋಚಿಸಬಹುದಾದ ಸ್ಥಳದಲ್ಲಿ ನೆಲವನ್ನು ತೆರೆಸಬಹುದು.

1.2003ರ ಅಧಿನಿಯಮ 31ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಅಂಥ ಪರಿಶೀಲನೆಗೆ ಮತ್ತು ನೆಲವನ್ನು ಮುಚ್ಚಿಸುವ ಮತ್ತು ಮೊದಲಿದ್ದಂತೆ ಇರುವ ಹಾಗೆ ಸರಿ ಮಾಡಿಸಿದ್ದಕ್ಕೆ ತಗುಲಿದ ವೆಚ್ಚವನ್ನು ಆ ಗ್ರಾಮಸಾರ ಚರಂಡಿಯು, ಚರಂಡಿಯು, ಶೌಚಾಲಯವು, ಶೌಚಗೃಹವು, ಮನೆ ಬಚ್ಚಲು ಗುಂಡಿಯು ಅಥವಾ ರೊಚ್ಚುಗುಂಡಿಯು ಕೆಟ್ಟ ರೀತಿಯಲ್ಲಿ ಮತ್ತು

ದುಃಸ್ಥಿತಿಯಲ್ಲಿದ್ದ ಹೊರತು ಅಥವಾ ಆ ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಶಾಸನದ ಅಥವಾ ಮುನ್ಸಿಪಲ್ ಕೌನ್ಸಿಲ್ ನ ಯಾವುದೇ ಬೈಲಾದ ನಿಬಂಧನೆಗಳನ್ನು ಉಲ್ಲಂಘಿಸಿ ಕಟ್ಟಿಸಿದ್ದ ಹೊರತು, ಮುನ್ಸಿಪಲ್ ಕೌನ್ಸಿಲ್ ಭರಿಸತಕ್ಕದ್ದು. ಅಂಥ ಸಂದರ್ಭದಲ್ಲಿ ಅಂಥ ಗ್ರಾಮಸಾರ ಚರಂಡಿಯ, ಚರಂಡಿಯ, ಶೌಚಾಲಯದ, ಶೌಚಗೃಹದ, ಮನೆ ಬಚ್ಚಲು ಗುಂಡಿಯ ಅಥವಾ ರೊಚ್ಚುಗುಂಡಿಯ ಒಡೆಯನು ಅಂಥ ವೆಚ್ಚಗಳನ್ನು ಸಂದಾಯ ಮಾಡತಕ್ಕದ್ದು, ಮತ್ತು VIIನೇ ಅಧ್ಯಾಯದ ಮೇರೆಗೆ ವಸೂಲು ಮಾಡಬಹುದಾದ ಯಾವುದೇ ತೆರಿಗೆಯ ಮೊಬಲಗನ್ನು ಕ್ಲೇಮು ಮಾಡಿದರೆ, ಆ ಮೊಬಲಗನ್ನುಯಾವ ರೀತಿಯಲ್ಲಿ ವಸೂಲು ಮಾಡಬಹುದೋ ಅದೇ ರೀತಿಯಲ್ಲಿ ವಸೂಲು ಮಾಡತಕ್ಕದ್ದು.

205. ಮುನ್ಸಿಪಲ್ ಕೌನ್ಸಿಲ್‌ಗಳನ್ನು ಸಂಬಂಧಪಟ್ಟ ವ್ಯಕ್ತಿಗಳಿಗೆ ಅವುಗಳನ್ನು ನಿರ್ವಹಿಸುವ ಆಯ್ಕೆಯ ಅವಕಾಶವನ್ನು ಕೊಡದೆಯೆ ನಿರ್ವಹಿಸಬಹುದು.- (1) ಮುನ್ಸಿಪಲ್ ಕೌನ್ಸಿಲ್ ಸೂಕ್ತವೆಂದು ತಾನು ಯೋಚಿಸಿದರೆ, 193 ರಿಂದ 204ನೇ ಪ್ರಕರಣಗಳ ಉಪಬಂಧಗಳಲ್ಲಿ ಯಾವುದೇ ಉಪಬಂಧವು ಅನ್ವಯವಾಗುವಂಥ ಸ್ವರೂಪದ ಯಾವುದೇ ಕೆಲಸವನ್ನು ತನ್ನದೇ ಆದ ಆದೇಶಗಳ ಮೇರೆಗೆ ಅದನ್ನು ಅನ್ಯಥಾ ಯಾರಿಂದ ಮಾಡಿಸಬೇಕಾಗಿರುತ್ತಿತ್ತೋ ಅದನ್ನು ಮಾಡಲು ಆಯ್ಕೆಯ ಅವಕಾಶವನ್ನು ಮೊದಲು ಕೊಡದೆಯೇ, ತಾನೇ ಮಾಡಿಸಬಹುದು ಅಥವಾ ಇತರ ಏಜೆನ್ಸಿಯ ಮೂಲಕ ಮಾಡಿಸಬಹುದು.

(2) ಹಾಗೆ ಮಾಡಿದ ಯಾವುದೇ ಕೆಲಸದ ವೆಚ್ಚಗಳನ್ನು, ಮುನ್ಸಿಪಲ್ ಕೌನ್ಸಿಲ್ ಸಾಮಾನ್ಯ ಅಥವಾ ವಿಶೇಷ ಆದೇಶದ ಅಥವಾ ನಿರ್ಣಯದ ಮೂಲಕ ಮುನ್ಸಿಪಲ್ ನಿಧಿಯ ವೆಚ್ಚದಲ್ಲಿ ಅಂಥ ಕೆಲಸವನ್ನು ನಿರ್ವಹಿಸಲು ಮಂಜೂರು ಮಾಡಿದ ಹೊರತು ಹಿಂದೆ ಹೇಳಿದ ವ್ಯಕ್ತಿಯು ಸಂದಾಯ ಮಾಡತಕ್ಕದ್ದು.

(3) ಖಾಸಗಿ [1][ಕಟ್ಟಡಗಳ ಅಥವಾ ಖಾಲಿಭೂಮಿ][1]ಗಳ ಚರಂಡಿ ವ್ಯವಸ್ಥೆಗಾಗಿ ಅಥವಾ ಅದರೊಂದಿಗೆ ಸಂಪರ್ಕ ಹೊಂದಿದ ಯಾವುದೇ ಕೊಳವೆಗಳನ್ನು, ಜೋಡಣೆಗಳನ್ನು, ಸಂಪುಟಗಳನ್ನು ಅಥವಾ ಇತರ ಉಪಕರಣಗಳನ್ನು ಮುನ್ಸಿಪಲ್ ಕೌನ್ಸಿಲ್‌ನ ವೆಚ್ಚದಲ್ಲಿ ಸರಬರಾಜು ಮಾಡಿದ್ದರೆ, ನಿರ್ಮಿಸಿದ್ದರೆ, ಅಥವಾ ಕಟ್ಟಿದ್ದರೆ, ಮುನ್ಸಿಪಲ್ ಕೌನ್ಸಿಲ್ ಅದರಲ್ಲಿನ ತನ್ನ ಹಿತಾಸಕ್ತಿಯನ್ನು ಅಂಥ [1][ಕಟ್ಟಡಗಳ ಅಥವಾ ಖಾಲಿಭೂಮಿ][1]ಗಳ ಒಡೆಯನಿಗೆ ವರ್ಗಾಯಿಸಿದ್ದ ಹೊರತು, ಅವುಗಳು ಮುನ್ಸಿಪಾಲಿಟಿಯ ಸ್ವತ್ತಾಗಿರುವುದಾಗಿ ಭಾವಿಸತಕ್ಕದ್ದು.

1.2003ರ ಅಧಿನಿಯಮ 31ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

206. ಪ್ರಧಾನ ನೀರು ಕೊಳವೆ ಇತ್ಯಾದಿಗಳನ್ನು ಹಾಕಲು ಅಧಿಕಾರ.- [1][ಮುನ್ಸಿಪಲ್ ಏರಿಯಾ][1]ಕ್ಕೆ ನೀರು ಸರಬರಾಜು ಮಾಡುವುದಕ್ಕಾಗಿ ನೀರು ಸರಬರಾಜು ಗೃಹಗಳ ನಿರ್ಮಾಣ ಮತ್ತು ನಿರ್ವಹಿಸುವ ಕರ್ತವ್ಯವು ಸರ್ಕಾರದ ಯಾವ ಇಲಾಖೆಯಲ್ಲಿ ಅಥವಾ ಮುನ್ಸಿಪಲ್ ಕೌನ್ಸಿಲ್‌ನಲ್ಲಿ ನಿಹಿತವಾಗಿದೆಯೋ ಸಂದರ್ಭಾನುಸಾರ ಆ ಇಲಾಖೆಗೆ ಅಥವಾ ಮುನ್ಸಿಪಲ್ ಕೌನ್ಸಿಲ್‌ಗೆ ಈ ಮುಂದೆ ಹೇಳಿರುವ ಉಪಬಂಧಗಳ ಮೇರೆಗೆ ಇದ್ದ ಮತ್ತು ಅವುಗಳಿಗೊಳಪಟ್ಟು ಮುನ್ಸಿಪಾಲಿಟಿಯೊಳಗೆ ಅಥವಾ ಹೊರಗೆ ಪ್ರಧಾನ ನೀರು ಕೊಳವೆಗಳನ್ನು, ಕೊಳವೆಗಳನ್ನು ಮತ್ತು ನಳಿಕೆಗಳನ್ನು ಹಾಕುವುದಕ್ಕೆ, ನವೀಕರಿಸುವುದಕ್ಕೆ ಮತ್ತು ದುರಸ್ತಿ ಮಾಡುವುದಕ್ಕೆ [1][ಮುನ್ಸಿಪಲ್ ಏರಿಯಾ][1]ದೊಳಗೆ ಚರಂಡಿಗಳನ್ನು ಒಯ್ಯುವುದಕ್ಕಾಗಿ, ನವೀಕರಿಸುವುದಕ್ಕಾಗಿ ಮತ್ತು ದುರಸ್ತಿ ಮಾಡುವುದಕ್ಕಾಗಿ ಸಹ [1][ಮುನ್ಸಿಪಲ್ ಏರಿಯಾ][1]ದ ವ್ಯಾಪ್ತಿಯೊಳಗಿನ ಅವೇ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಅವೇ ನಿರ್ಬಂಧಗಳಿಗೊಳಪಟ್ಟಿರತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

207. ಲೈಸೆನ್ಸ್ ಪಡೆದ ಕೊಳಾಯಿಗಾರನು ಅಥವಾ ಲೈಸೆನ್ಸ್ ಪಡೆದ ನೀರು ಸರಬರಾಜು ಕಂಟ್ರಾಕ್ಟರ್ ನು ಮಾಡಬೇಕಾದ ಕೆಲಸಗಳು.- (1) ಲೈಸೆನ್ಸ್ ಪಡೆದ ಕೊಳಾಯಿಗಾರ ಅಥವಾ ಲೈಸೆನ್ಸ್ ಪಡೆದ ನೀರು ಸರಬರಾಜು ಕಂಟ್ರಾಕ್ಟರ್ ದಾರರನ್ನು ಹೊರತುಪಡಿಸಿ, ಇತರ ಯಾರೇ ವ್ಯಕ್ತಿಯು, ಚರಂಡಿ ವ್ಯವಸ್ಥೆ ಅಥವಾ ನೀರು ಸರಬರಾಜಿಗೆ ಸಂಬಂಧಿಸಿದ ಯಾವುದೇ ಕೆಲಸವನ್ನು ನಿರ್ವಹಿಸತಕ್ಕದ್ದಲ್ಲ ಮತ್ತು ಯಾರೇ ವ್ಯಕ್ತಿಯು, ಲೈಸೆನ್ಸ್ ಪಡೆದ ಕೊಳಾಯಿಗಾರ ಅಥವಾ ಲೈಸೆನ್ಸ್ ಪಡೆದ ಕಂಟ್ರಾಕ್ಟರ್ ದಾರನ ಮೂಲಕವಲ್ಲದೆ ಯಾವುದೇ ಅಂಥ ಕೆಲಸವನ್ನು ನಿರ್ವಹಿಸಲು ಅನುಮತಿಸತಕ್ಕದ್ದಲ್ಲ:

ಪರಂತು, ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನು ಕೆಲಸವು ಅಲ್ಪಸ್ವರೂಪದ್ದೆಂದು ಅಭಿಪ್ರಾಯಪಟ್ಟರೆ, ಲೈಸೆನ್ಸ್ ಪಡೆದ ಕೊಳಾಯಿಗಾರನನ್ನು ಅಥವಾ ಲೈಸೆನ್ಸ್ ಪಡೆದ ನೀರು ಸರಬರಾಜು ಕಂಟ್ರಾಕ್ಟರ್ ದಾರನನ್ನು ಹೊರತುಪಡಿಸಿ ಇತರ ವ್ಯಕ್ತಿಯು ಅಂಥ ಕೆಲಸವನ್ನು ನಿರ್ವಹಿಸುವುದಕ್ಕೆ ಬರಹದಲ್ಲಿ ಅನುಮತಿಯನ್ನು ಮಂಜೂರು ಮಾಡಬಹುದು.

(2) ಯಾವುದೇ ಕೆಲಸವನ್ನು ನಿರ್ವಹಿಸಲು ಲೈಸೆನ್ಸ್ ಪಡೆದ ಕೊಳಾಯಿಗಾರನನ್ನು ಅಥವಾ ಲೈಸೆನ್ಸ್ ಪಡೆದ ನೀರು ಸರಬರಾಜು ಕಂಟ್ರಾಕ್ಟರ್ ದಾರನನ್ನು ನಿಯೋಜಿಸಿಕೊಳ್ಳುವ ಪ್ರತಿಯೊಬ್ಬ ವ್ಯಕ್ತಿಯು ಹಾಗೆ ಅಗತ್ಯಪಡಿಸಿದಾಗ ಮುನ್ಸಿಪಲ್ ಕಮಿಷನರ್ ನಿಗೆ ಅಥವಾ ಚೀಫ್ ಆಫೀಸರ್ ನಿಗೆ ಅಂಥ ಕೊಳಾಯಿಗಾರನ ಅಥವಾ ಕಂಟ್ರಾಕ್ಟರ್ ನ ಹೆಸರನ್ನು ಒದಗಿಸತಕ್ಕದ್ದು.

(3) ಉಪ-ಪ್ರಕರಣ (1) ರ ಉಪಬಂಧಗಳಿಗೆ ಅನುಸಾರವಾಗಿ ಅಲ್ಲದೆ ಯಾವುದೇ ಕೆಲಸವನ್ನು ನಿರ್ವಹಿಸಿದಾಗ, ಅಂಥ ಕೆಲಸವನ್ನು ಯಾರಿಂದಾಗಿ ನಿರ್ವಹಿಸಲಾಗಿದೆಯೋ ಆ ವ್ಯಕ್ತಿಯನ್ನು ಈ ಅಧಿನಿಯಮದ ಮೇರೆಗೆ ಪ್ರಾಸಿಕ್ಯೂಟ್ ಮಾಡಲು ಕೌನ್ಸಿಲ್ ನ ಹಕ್ಕಿಗೆ ಬಾಧಕವಾಗದಂತೆ ಮುನ್ಸಿಪಲ್ ಕೌನ್ಸಿಲ್ ನಿಂದ ಅಂಥ ಕೆಲಸವು ಕೆಡವಿ ಹಾಕುವುದಕ್ಕೆ ಗುರಿಯಾಗತಕ್ಕದ್ದು.

(4) ಲೈಸೆನ್ಸ್ ಪಡೆದ ಯಾರೇ ಕೊಳಾಯಿಗಾರನು ಅಥವಾ ಲೈಸೆನ್ಸ್ ಪಡೆದ ನೀರು ಸರಬರಾಜು ಕಂಟ್ರಾಕ್ಟರ್ ದಾರನು 324ನೇ ಪ್ರಕರಣದ (1)ನೇ ಉಪಪ್ರಕರಣದ (ಸಿಸಿ) ಖಂಡದ ಮೇರೆಗೆ ರಚಿಸಿದ ಯಾವುದೇ ಅಥವಾ ಅವನ ಲೈಸೆನ್ಸ್ ನ ಷರತ್ತುಗಳನ್ನು ಉಲ್ಲಂಘಿಸಿದರೆ, ಅವನನ್ನು ಈ ಅಧಿನಿಯಮದ ಮೇರೆಗೆ ಪ್ರಾಸಿಕ್ಯೂಟ್ ಮಾಡಿರಲಿ ಅಥವಾ ಮಾಡಿರದಿರಲಿ ಅವನ ಲೈಸೆನ್ಸ್ ನ್ನು ಅಮಾನತ್ತುಗೊಳಿಸಬಹುದು ಅಥವಾ ರದ್ದುಪಡಿಸಬಹುದು.

(5) ಉಪಪ್ರಕರಣ (1) ರ ಅಥವಾ (2) ರ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ಆಗಲಿ ಇಪ್ಪತ್ತೈದು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

ಬಾಹ್ಯ ರಚನೆಗಳು ಇತ್ಯಾದಿಗಳಿಗೆ ಸಂಬಂಧಿಸಿದಂತೆ ಅಧಿಕಾರ

208. ಕೆಲವು ಮುಂಚಾಚುವಿಕೆಗಳಿಗೆ ಅನುಮತಿ ಅಗತ್ಯ.- (1) [2][ಮುನ್ಸಿಪಲ್ ಕಮಿಷನರ್ ಅಥವಾ ಮುಖ್ಯಾಧಿಕಾರಿಯು][2], ಕಟ್ಟಡಗಳ ಒಡೆಯರಿಗೆ ಅಥವಾ ಅಧಿಭೋಗದಾರರಿಗೆ ಸಾರ್ವಜನಿಕ ಬೀದಿಗಳಲ್ಲಿರುವ ಕಟ್ಟಡಗಳ ಯಾವುದೇ ಮೇಲ್ಮಹಡಿಯಿಂದ, [2][ಮುನ್ಸಿಪಲ್ ಕಮಿಷನರ್ ಅಥವಾ ಮುಖ್ಯಾಧಿಕಾರಿಯು][2] ಕಾಲಕಾಲಕ್ಕೆ ಬೈಲಾಗಳಲ್ಲಿ ನಿಗದಿಪಡಿಸಬಹುದಾದಂತೆ ಬೀದಿಯ ಮೇಲ್ಮಟ್ಟದಿಂದ ಅಂಥ ನಿಗದಿತ ಎತ್ತರದಲ್ಲಿ ಮತ್ತು ಮೇಲುಪಾಯದ ಅಥವಾ ತಳಮಟ್ಟದ ಗೋಡೆಯ ರೇಖೆಯ ಆಚೆ ನಾಲ್ಕು ಅಡಿಗಳಿಗೆ ವಿೂರದಷ್ಟು ಮುಂದಕ್ಕೆ ಚಾಚಿರುವಂತೆ ತೆರೆದ ವರಾಂಡಗಳನ್ನು, ಬಾಲ್ಕನಿಗಳನ್ನು ಅಥವಾ ಕೊಠಡಿಗಳನ್ನು ನಿರ್ಮಿಸಲು ಬರಹದಲ್ಲಿ ಅನುಮತಿಯನ್ನು ಕೊಡಬಹುದು ಮತ್ತು ಚಾವಣಿಗಳು, ಸೂರುಗಳು, ಮಳೆ ಹಲಗೆ, ಅಂಗಡಿ ಫಲಕಗಳನ್ನು ಮತ್ತು ಅಂಥವುಗಳನ್ನು ಎಷ್ಟರವರೆಗೆ ಮತ್ತು ಯಾವ ಷರತ್ತುಗಳಿಗೊಳಪಟ್ಟು ಅಂಥ ಬೀದಿಗಳಲ್ಲಿ ಮುಂಚಾಚಲು ಅವಕಾಶ ಕೊಡಬಹುದೆಂಬುದನ್ನು ನಿಯಮಿಸಬಹುದು.

(2) ಅಂಥ ಯಾರೇ ಒಡೆಯನು ಅಥವಾ ಅಧಿಭೋಗದಾರನು ಹಿಂದೆ ಹೇಳಿದಂತೆ ಯಾವುದೇ ಅಂಥ ಮುಂಚಾಚುಗಳನ್ನು ಅಂಥ ಅನುಮತಿಯಿಲ್ಲದೆ ಅಥವಾ ಅಂಥ ಆದೇಶಗಳನ್ನು ಉಲ್ಲಂಘಿಸಿ ನಿರ್ಮಿಸಿದ್ದರೆ, ಇಪ್ಪತ್ತೈದು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು ಮತ್ತು ಯಾವ ಮುಂಚಾಚಿರುವುದಕ್ಕೆ ಸಂಬಂಧಿಸಿದಂತೆ ಈ ಪ್ರಕರಣದ ಮೇರೆಗೆ ಅಪರಾಧಿಯೆಂದು ಅವನು ನಿರ್ಣೀತನಾಗಿದ್ದಾನೆಯೋ, ಹಿಂದೆ ಹೇಳಿದಂತಹ ಆ ಯಾವುದೇ ಮುಂಚಾಚಿರುವುದನ್ನು ತೆಗೆದು ಹಾಕಲು ಅಂಥ ಒಡೆಯನು ಅಥವಾ ಅಧಿಭೋಗದಾರನು ತಪ್ಪಿದರೆ, ಅವನು ಹಾಗೆ ತಪ್ಪಿರುವುದು ಅಥವಾ ಉಪೇಕ್ಷೆಯು ಮುಂದುವರೆಯುವಂಥ ಪ್ರತಿಯೊಂದು ದಿವಸಕ್ಕೆ 5 ರೂಪಾಯಿಗಳವರೆಗೆ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(3) [2][ಮುನ್ಸಿಪಲ್ ಕಮಿಷನರ್ ಅಥವಾ ಮುಖ್ಯಾಧಿಕಾರಿಯು][2], ಅಂಥ ಕಟ್ಟಡದ ನಿವೇಶನವು [1][ಮುನ್ಸಿಪಲ್ ಏರಿಯಾ][1]ದ ಭಾಗವಾಗುವುದಕ್ಕೆ ಮುಂಚೆಯೇ ಆಗಲಿ ಅಥವಾ ಅದಕ್ಕೆ ತರುವಾಯವೇ ಆಗಲಿ ನಿರ್ಮಿಸಿದಂಥ, ಅಂಥ ಕಟ್ಟಡದ ಎದುರಿಗೆ ಅಥವಾ ಮುಂಭಾಗದಲ್ಲಿ ನಿರ್ಮಿಸಲಾದ ಅಥವಾ ಇಡಲಾದ; ಮತ್ತು

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 2025ರ ಅಧಿನಿಯಮ 64ರ ಮೂಲಕ 12.09.2025 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಎ) ಸಾರ್ವಜನಿಕ ಬೀದಿಯ ಸುರಕ್ಷತೆ ಮತ್ತು ಸುಗಮ ಸಂಚಾರಕ್ಕೆ ಅಡ್ಡಿಯಾಗುವ ಹಾಗೆ, ಯಾವುದೇ ಅಂಥ ಬೀದಿಯ ಮೇಲೆ ಬಾಗಿರುವ ಅಥವಾ ಅದರೊಳಗೆ ಮುಂದಕ್ಕೆ ಚಾಚಿರುವ ಅಥವಾ ಯಾವುದೇ ರೀತಿಯಲ್ಲಿ ಮುಂಚಾಚಿರುವಂಥ ಅಥವಾ ಒತ್ತುವರಿಯಾಗಿರುವಂಥ; ಅಥವಾ

(ಬಿ) ಮೇಲ್ಸಾಲುವೆ, ಚರಂಡಿ ಅಥವಾ ಗ್ರಾಮಸಾರ ಚರಂಡಿಗೆ ಅಥವಾ ಅದರ ಸರಿಯಾದ ಕಾರ್ಯ ನಿರ್ವಹಣೆಗೆ ಅಡ್ಡಿಯಾಗುವ ಹಾಗೆ ಅಥವಾ ನಡುವೆ ಬರುವ ಹಾಗೆ ಅಂಥ ಬೀದಿಯಲ್ಲಿರುವ ಅಂಥ ಮುಚ್ಚಿರದ ಮೇಲ್ಸಾಲುವೆಯೊಳಕ್ಕೆ, ಚರಂಡಿಯೊಳಕ್ಕೆ ಅಥವಾ ಗ್ರಾಮಸಾರ ಚರಂಡಿಯೊಳಕ್ಕೆ ಅಥವಾ ಅದರ ಮೇಲೆ ಮುಂಚಾಚುವ ಅಥವಾ ಒತ್ತುವರಿಯಾಗುವ ಹಾಗೆ ಮುಂಚಾಚುವುದನ್ನು, ಒತ್ತುವರಿಯನ್ನು ಅಥವಾ ಅಡ್ಡಿಯನ್ನು ತೆಗೆದು ಹಾಕಲು ಅಥವಾ ಮಾರ್ಪಾಟು ಮಾಡಲು ಯಾವುದೇ ಕಟ್ಟಡದ ಒಡೆಯನನ್ನು ಅಥವಾ ಅಧಿಭೋಗದಾರನನ್ನು ಬರಹದಲ್ಲಿ ನೋಟೀಸಿನ ಮೂಲಕ ಅಗತ್ಯಪಡಿಸಬಹುದು:

ಪರಂತು, ಮುನ್ಸಿಪಲ್ ಕೌನ್ಸಿಲ್ ಅಂಥ ಸ್ಥಳವು [1][ಮುನ್ಸಿಪಲ್ ಏರಿಯಾ][1]ದ ಭಾಗವಾದ ದಿನಾಂಕಕ್ಕೆ ಮುಂಚೆ ಅಥವಾ ಅಂಥ ದಿನಾಂಕದ ತರವಾಯ ಮುನ್ಸಿಪಲ್ ಕೌನ್ಸಿಲ್ ನಿಂದ ಬರಹದಲ್ಲಿ ಅನುಮತಿ ಪಡೆದು ಯಾವುದೇ ಸ್ಥಳದಲ್ಲಿ ಹಾಗೆ ಮುಂಚಾಚಿರುವುದನ್ನು, ಒತ್ತುವರಿಯನ್ನು ಅಥವಾ ಅಡ್ಡಿಯನ್ನು ಮಾಡಿದ್ದರೆ, ಅದನ್ನು ತೆಗೆದುಹಾಕಿರುವುದರಿಂದ ಅಥವಾ ಮಾರ್ಪಾಟು ಮಾಡಿರುವುದರಿಂದ ಹಾನಿಗೀಡಾದ ಪ್ರತಿಯೊಬ್ಬ ವ್ಯಕ್ತಿಗೆ ಸಮಂಜಸ ಪರಿಹಾರವನ್ನು ಕೊಡತಕ್ಕದ್ದು, ಮತ್ತು ಅಂಥ ನಷ್ಟ ಪರಿಹಾರದ ಮೊಬಲಗಿಗೆ ಸಂಬಂಧಿಸಿದಂತೆ ಯಾವುದೇ ವಿವಾದವು ಉದ್ಭವಿಸಿದರೆ, ಹಾನಿಯನ್ನು 268ನೇ ಪ್ರಕರಣದಲ್ಲಿ ಹೇಳಿರುವ ರೀತಿಯಲ್ಲಿ ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ನಿರ್ಧರಿಸತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

209. ಮಳೆ ನೀರಿಗಾಗಿ ಹರಿದೋಣಿಗಳು ಮತ್ತು ಕೊಳವೆಗಳು.- ಮುನ್ಸಿಪಲ್ ಕೌನ್ಸಿಲ್ ಯಾವುದೇ ಬೀದಿಯಲ್ಲಿನ ಪ್ರತಿಯೊಂದು ಕಟ್ಟಡದ ಒಡೆಯನನ್ನು ಅಂಥ ಕಟ್ಟಡದ ಚಾವಣಿಗಳಿಂದ ಮತ್ತು ಇತರ ಭಾಗಗಳಿಂದ ಹರಿದು ಬರುವ ನೀರನ್ನು ಹಿಡಿಯಲು ಮತ್ತು ಒಯ್ಯಲು ಸೂಕ್ತವಾದ ಮತ್ತು ಅದನ್ನು ಹೊರಗೆಡಹಲು ಸರಿಯಾದ ಬಾನೆಗಳನ್ನು ಮತ್ತು ಕೊಳವೆಗಳನ್ನು, ಬೀದಿಯಲ್ಲಿ ಸಂಚರಿಸುವ ವ್ಯಕ್ತಿಯ ಮೇಲೆ ಅದು ಬೀಳದಂತೆ ಅಥವಾ ಬೀದಿಗೆ ಹಾನಿಯನ್ನುಂಟು ಮಾಡದಂತೆ ಸೂಕ್ತವೆಂದು ಅದು ಯೋಚಿಸಬಹುದಾದಂಥ ರೀತಿಯಲ್ಲಿ ಹಾಕಲು ಮತ್ತು ಸುಸ್ಥಿತಿಯಲ್ಲಿಡಲು ಬರಹದಲ್ಲಿ ನೋಟೀಸಿನ ಮೂಲಕ ಅಗತ್ಯಪಡಿಸಬಹುದು.

210. ಮನೆಗಳಿಗೆ ಬ್ರಾಕೆಟ್ ಗಳು, ಇತ್ಯಾದಿಗಳನ್ನು ಜೋಡಿಸುವುದು.- ಮುನ್ಸಿಪಲ್ ಕೌನ್ಸಿಲ್ ಯಾವುದೇ ಕಟ್ಟಡದ ಹೊರಭಾಗದಲ್ಲಿ ಎಣ್ಣೆಯಿಂದ ಅಥವಾ ಅನಿಲದಿಂದ ಬೆಳಗಿಸಬೇಕಾದ ದೀಪಗಳಿಗಾಗಿ, ಅಥವಾ ವಿದ್ಯುಚ್ಛಕ್ತಿಗೆ ಸಂಬಂಧಪಟ್ಟಂತೆ ಜಾರಿಯಲ್ಲಿರುವ ಯಾವುದೇ ಕಾನೂನಿನ ನಿಬಂಧನೆಗಳಿಗೊಳಪಟ್ಟು ವಿದ್ಯುಚ್ಛಕ್ತಿಯಿಂದ ಅಥವಾ ಅನ್ಯಥಾ ಬೆಳಗಿಸಬೇಕಾದ ದೀಪಗಳಿಗಾಗಿ, ಟೆಲಿಗ್ರಾಫ್ ಗಳಿಗೆ ಸಂಬಂಧಪಟ್ಟಂತೆ ಜಾರಿಯಲ್ಲಿರುವ ಟೆಲಿಗ್ರಾಫ್ ತಂತಿಗಳಿಗಾಗಿ ಮತ್ತು ದೂರವಾಣಿ ತಂತಿಗಳಿಗಾಗಿ ಅಥವಾ ಪ್ರಯಾಣ ಸಾಧನದ ಅಥವಾ ಇತರ ಉದ್ದೇಶಗಳಿಗಾಗಿ ವಿದ್ಯುಚ್ಛಕ್ತಿಯ ವಹನಕ್ಕಾಗಿ ಬ್ರಾಕೆಟ್ ಗಳನ್ನು ಅಥವಾ ಗ್ರಾಮಸಾರ ಚರಂಡಿಯಲ್ಲಿ ಮತ್ತು ನೀರು ಸರಬರಾಜು ಗೃಹಗಳಲ್ಲಿ ಸರಿಯಾದ ಗಾಳಿ ಬೆಳಕಿನ ಸಂಚಾರಕ್ಕಾಗಿ ಅವಶ್ಯವೆಂದು ಅದು ಭಾವಿಸಬಹುದಾದಂಥ ಕೊಳವೆಗಳನ್ನು ನಿರ್ಮಿಸಬಹುದು ಅಥವಾ ಜೋಡಿಸಬಹುದು ಮತ್ತು ಅಂಥ ಬ್ರಾಕೆಟ್ ಗಳನ್ನು ಮತ್ತು ಕೊಳವೆಗಳನ್ನು ಸದರಿ ಕಟ್ಟಡದ ಅಧಿಭೋಗದಾರನಿಗೆ ಅಥವಾ ನೆರೆಹೊರೆಯಲ್ಲಿನ ಯಾರೇ ಇತರರಿಗೆ ಅಥವಾ ಸಾರ್ವಜನಿಕರಿಗೆ ಯಾವುದೇ ಅನಾನುಕೂಲತೆ ಅಥವಾ ಉಪದ್ರವ ಉಂಟಾಗದ ಹಾಗೆ ನಿರ್ಮಿಸತಕ್ಕದ್ದು.

211. ಬೀದಿಗಳಿಗೆ ಹೆಸರಿಡುವುದು ಮತ್ತು ಮನೆಗಳಿಗೆ ಸಂಖ್ಯೆ ಕೊಡುವುದು.- (1) ಮುನ್ಸಿಪಲ್ ಕೌನ್ಸಿಲ್, ಕಾಲಕಾಲಕ್ಕೆ, ಪ್ರತಿಯೊಂದು ಬೀದಿಯ ಪ್ರತಿಯೊಂದು ಕೊನೆಯಲ್ಲಿ, ಮೂಲೆಯಲ್ಲಿ ಅಥವಾ ಪ್ರವೇಶದಲ್ಲಿ ಅಥವಾ ಅದರ ಹತ್ತಿರ ಯಾವುದೇ ಕಟ್ಟಡದ ಎದ್ದು ಕಾಣುವ ಭಾಗದ ಮೇಲೆ ಅಂಥ ಬೀದಿಯು ಯಾವ ಹೆಸರಿನಿಂದ ಗೊತ್ತಾಗಬೇಕೋ ಆ ಹೆಸರನ್ನು ಹಾಕಿಸತಕ್ಕದ್ದು ಅಥವಾ ಬಣ್ಣದಲ್ಲಿ ಬರೆಸತಕ್ಕದ್ದು ಮತ್ತು ಕಾಲಕಾಲಕ್ಕೆ ಯಾವುದೇ ಕಟ್ಟಡದ

ಹೊರಭಾಗದಲ್ಲಿ ಅಥವಾ ಬೀದಿಗೆ ಅಭಿಮುಖವಾದ ಅದರ ಆವರಣದ ಪ್ರವೇಶದಲ್ಲಿ ಎದ್ದು ಕಾಣುವ ಸ್ಥಳದಲ್ಲಿ ಸಂಖ್ಯೆಯನ್ನು ಹಾಕಿಸಬಹುದು:

ಪರಂತು, ಸರ್ಕಾರದಿಂದ ಮುಂಚಿತವಾಗಿ ಮಂಜೂರಾತಿ ಪಡೆಯದೆಯೇ ಮುನ್ಸಿಪಲ್ ಕೌನ್ಸಿಲ್ ಯಾವುದೇ ಬೀದಿಗೆ ಹೆಸರಿಡತಕ್ಕದ್ದಲ್ಲ ಅಥವಾ ಪುನಃ ಹೆಸರಿಡತಕ್ಕದ್ದಲ್ಲ.

(2) ಯಾರೇ ವ್ಯಕ್ತಿಯು, ಅಂಥ ಯಾವುದೇ ಹೆಸರನ್ನು ಅಥವಾ ಸಂಖ್ಯೆಯನ್ನು ಅಳಿಸಿ ಹಾಕತಕ್ಕದ್ದಲ್ಲ, ತೆಗೆದುಹಾಕತಕ್ಕದ್ದಲ್ಲ, ವಿರೂಪಗೊಳಿಸತಕ್ಕದ್ದಲ್ಲ ಅಥವಾ ಅದಕ್ಕೆ ಯಾವುದೇ ರೀತಿಯಲ್ಲಿ ಹಾನಿ ಉಂಟು ಮಾಡತಕ್ಕದ್ದಲ್ಲ ಅಥವಾ ಬದಲಾಯಿಸತಕ್ಕದ್ದಲ್ಲ ಅಥವಾ ಮುನ್ಸಿಪಲ್ ಕೌನ್ಸಿಲ್ ನ ಆದೇಶದ ಮೂಲಕ ಹಾಕಿದ ಅಥವಾ ಬಣ್ಣದಲ್ಲಿ ಬರೆಸಿ ಹೆಸರಿಗೆ ಅಥವಾ ಸಂಖ್ಯೆಗೆ ವಿಭಿನ್ನವಾಗಿ ಯಾವುದೇ ಬೇರೆ ಹೆಸರನ್ನು ಅಥವಾ ಸಂಖ್ಯೆಯನ್ನು ಹಾಕತಕ್ಕದ್ದಲ್ಲ ಅಥವಾ ಬಣ್ಣದಲ್ಲಿ ಬರೆಸತಕ್ಕದ್ದಲ್ಲ.

(3) ಯಾರೇ ವ್ಯಕ್ತಿಯು,

(ಎ) ಒಡೆಯನ ಅಥವಾ ಅಧಿಭೋಗದಾರನ ಸಮ್ಮತಿಯಿಲ್ಲದೆಯೇ ಯಾವುದೇ ಭಿತ್ತಿಪತ್ರವನ್ನು, ಪ್ರಕಟಣೆಯನ್ನು, ಪ್ರಕಟಣಾ ಪತ್ರವನ್ನು ಅಥವಾ ಇತರ ಕಾಗದವನ್ನು ಅಥವಾ ಜಾಹೀರಾತಿನ ಸಾಧನಗಳನ್ನು ಯಾವುದೇ ಕಟ್ಟಡದ, ಗೋಡೆಯ, ಫಲಕದ, ಬೇಲಿಯ ಅಥವಾ ಎಲ್ಲೆಯ, ಸ್ತಂಭದ, ದೀಪದ ಕಂಬದ ಅಥವಾ ಅಂಥವುಗಳ ಇದಿರು ಅಥವಾ ಮೇಲೆ ಅಂಟಿಸಿದರೆ; ಅಥವಾ

(ಬಿ) ಹಿಂದೆ ಹೇಳಿದಂಥ ಸಮ್ಮತಿಯಿಲ್ಲದಯೇ ಯಾವುದೇ ಅಂಥ ಕಟ್ಟಡದ, ಗೋಡೆಯ, ಫಲಕದ, ಬೇಲಿಯ, ಅಥವಾ ಎಲ್ಲೆಯ, ಸ್ತಂಭದ, ದೀಪದ ಕಂಬದ ಅಥವಾ ಅಂಥವುಗಳ ಮೇಲೆ ಸುಣ್ಣದಲ್ಲಿ ಅಥವಾ ಬಣ್ಣದಲ್ಲಿ ಅಥವಾ ಇತರ ಯಾವುದೇ ಆದ ರೀತಿಯಲ್ಲಿ ಬರೆದರೆ, ಕೊಳೆ ಮಾಡಿದರೆ, ವಿರೂಪಗೊಳಿಸಿದರೆ ಅಥವಾ ಗುರುತು ಮಾಡಿದರೆ

- ಇಪ್ಪತ್ತೈದುರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

212. ಮುಳ್ಳುಬೇಲಿಗಳು, ಮರಗಳು ಇತ್ಯಾದಿಗಳನ್ನು ತೆಗೆದುಹಾಕುವುದು ಮತ್ತು ಸವರುವುದು.- ಮುನ್ಸಿಪಲ್ ಕೌನ್ಸಿಲ್ ಬರಹದಲ್ಲಿನ ನೋಟೀಸಿನ ಮೂಲಕ ಯಾವುದೇ ಭೂಮಿಯ ಒಡೆಯನನ್ನು ಅಥವಾ ಅಧಿಭೋಗದಾರನನ್ನು ಯಾವುದೇ ಬೀದಿಯ ಅಂಚಿನಲ್ಲಿರುವ ಮುಳ್ಳು ಬೇಲಿಗಳನ್ನು, ಆ ಬೀದಿಯ ಮಟ್ಟದಿಂದ ಸದರಿ ಬೇಲಿಗಳು ನಾಲ್ಕು ಅಡಿ ಎತ್ತರವನ್ನು ಮತ್ತು ನಾಲ್ಕು ಅಡಿ ಅಗಲವನ್ನು ಮೀರದ ಹಾಗೆ ಸವರಲು ಅಥವಾ ಕತ್ತರಿಸಲು ಮತ್ತು ಯಾವುದೇ ಸಾರ್ವಜನಿಕ ಬೀದಿಯ ಮೇಲೆ ಯಾವುದೇ ರೀತಿಯಲ್ಲಿ ಮುಂದೆ ಬಾಗಿರುವ, ಅದಕ್ಕೆ ಅಪಾಯವನ್ನುಂಟು ಮಾಡುವ ಅಥವಾ ಅಡ್ಡಿ ಅಡಚಣೆ ಉಂಟು ಮಾಡುವಂಥ ಅಥವಾ ಮುಂದೆ ಬಾಗುವ, ಅಪಾಯವನ್ನುಂಟು ಮಾಡುವ ಅಥವಾ ಅಡ್ಡಿ ಅಡಚಣೆ ಅಥವಾ ಅದಕ್ಕೆ ಹಾನಿಯನ್ನುಂಟುಮಾಡುವ ಸಂಭವವಿರುವುದೆಂದು ಅದು ಭಾವಿಸಿದರೆ ಅಥವಾ ಯಾವುದೇ ಸಾರ್ವಜನಿಕ ಕೆರೆಯಲ್ಲಿರುವ, ಬಾವಿಯಲ್ಲಿರುವ, ಅಥವಾ ನೀರು ಸರಬರಾಜಿಗಾಗಿ ಇರುವ ಇತರ ವ್ಯವಸ್ಥೆಯಲ್ಲಿರುವ ನೀರನ್ನು ಕಲುಷಿತಗೊಳಿಸುವ ಹಾಗೆ ಅಥವಾ ಕಲುಷಿತಗೊಳಿಸುವ ಸಂಭವವಿರುವ ಹಾಗೆ ಮುಂದೆ ಬಾಗಿರುವಂಥ ಎಲ್ಲ ಮರಗಳನ್ನು ಅಥವಾ ಗಿಡಗೆಂಟೆಗಳನ್ನು ಕಡಿದು ಹಾಕಲು, ಸವರಲು ಅಥವಾ ಕತ್ತರಿಸಲು ಅಗತ್ಯಪಡಿಸಬಹುದು.

ಸಾರ್ವಜನಿಕ ಆರೋಗ್ಯದ ಸುರಕ್ಷತೆಯ ಮತ್ತು ಅನುಕೂಲತೆಯ ಸಂವರ್ಧನೆಗೆ ಅಧಿಕಾರ

213. ಪಾಳುಬಿದ್ದ ಅಥವಾ ಅಪಾಯಕಾರಿಯಾದ ಕಟ್ಟಡಗಳು.- (1) ಯಾವುದೇ ಕಟ್ಟಡವು ಅಥವಾ ಅದಕ್ಕೆ ಅಂಟಿಕೊಂಡಿರುವ ಯಾವುದಾದರೂ ಪಾಳುಬಿದ್ದ ಸ್ಥಿತಿಯಲ್ಲಿದೆಯೆಂದು ಅಥವಾ ಬೀಳುವ ಸಂಭವವಿದೆಯೆಂದು ಅಥವಾ ಅಂಥ ಕಟ್ಟಡದ ಅಥವಾ ಅಂಥ ಕಟ್ಟಡದ ನೆರೆಹೊರೆಯಲ್ಲಿರುವ ಯಾವುದೇ ಇತರ ಕಟ್ಟಡದ ಅಥವಾ ಸ್ಥಳದ ಸ್ವಾಧೀನದಲ್ಲಿರುವ, ಅಲ್ಲಿಗೆ ಹೋಗುವ ಅಥವಾ ಅದರ ಪಕ್ಕದಲ್ಲಿ ಹಾದು ಹೋಗುವ ಯಾರೇ ವ್ಯಕ್ತಿಗೆ ಯಾವುದೇ ಇತರ ರೀತಿಯಲ್ಲಿ ಅಪಾಯಕಾರಿಯಾಗಿದೆಯೆಂದು ಮುನ್ಸಿಪಲ್ ಕೌನ್ಸಿಲ್ ಭಾವಿಸಿದರೆ, ಮುನ್ಸಿಪಲ್ ಕೌನ್ಸಿಲ್, ಅವಶ್ಯವೆಂದು ತನಗೆ ಕಂಡುಬಂದರೆ, ಅಲ್ಲಿ ಹಾದುಹೋಗುವ ಮತ್ತು ಇತರ ವ್ಯಕ್ತಿಗಳ ಸಂರಕ್ಷಣೆಗಾಗಿ ಸರಿಯಾದ ಹಲಗೆತಟ್ಟಿಯನ್ನು ಅಥವಾ ಬೇಲಿಯನ್ನು ಕೂಡಲೇ ಹಾಕಿಸತಕ್ಕದ್ದು,

ಮತ್ತು ಈ ಉಪಪ್ರಕರಣದ ಮೇರೆಗೆ, ಮುನ್ಸಿಪಲ್ ಕೌನ್ಸಿಲ್ ವಹಿಸಿದ ಎಲ್ಲ ವೆಚ್ಚಗಳು ಅಂಥ ಕಟ್ಟಡದ ಒಡೆಯನಿಂದ ಅಥವಾ ಸ್ವಾಧೀನದಾರನಿಂದ ಸಂದಾಯವಾಗತಕ್ಕದ್ದು ಮತ್ತು VIIನೇ ಅಧ್ಯಾಯದ ಮೇರೆಗೆ ಯಾವುದೇ ತೆರಿಗೆಯ ಮೊತ್ತವನ್ನು ಕ್ಲೇಮು ಮಾಡಿದಾಗ ಯಾವ ರೀತಿಯಲ್ಲಿ ವಸೂಲಿ ಮಾಡಲಾಗುವುದೋ ಅದೇ ರೀತಿಯಲ್ಲಿ ಆ ವೆಚ್ಚಗಳನ್ನು ಅದು ವಸೂಲಿ ಮಾಡಬಹುದು.

(2) ಮುನ್ಸಿಪಲ್ ಕೌನ್ಸಿಲ್, ಸಂದರ್ಭ ಪರಿಸ್ಥಿತಿ ಅಗತ್ಯಪಡಿಸಿದರೆ ಅಂಥ ಕಟ್ಟಡವನ್ನು ಅಥವಾ ಅದಕ್ಕೆ ಅಂಟಿಕೊಂಡಿರುವ ವಸ್ತುವನ್ನು ತತ್‌ಕ್ಷಣವೇ ಕೆಡವಲು, ಭದ್ರಪಡಿಸಲು ಅಥವಾ ದುರಸ್ತಿ ಮಾಡಲು ಅಂಥ ಒಡೆಯನನ್ನು ಅಥವಾ ಸ್ವಾಧೀನದಾರನನ್ನು ಅಗತ್ಯಪಡಿಸುವ ಬರಹದಲ್ಲಿನ ನೋಟೀಸನ್ನು ಒಡೆಯನಿಗೆ ಅಥವಾ ಸ್ವಾಧೀನದಾರನಿಗೆ ಸಹ ಕೊಡಿಸತಕ್ಕದ್ದು ಮತ್ತು ಅಂಥ ನೋಟೀಸನ್ನು ಜಾರಿಗೊಳಿಸಿದ ತರುವಾಯ ಮೂರು ದಿವಸಗಳೊಳಗಾಗಿ ಅಂಥ ಒಡೆಯನು ಅಥವಾ ಸ್ವಾಧೀನದಾರನು ಅಂಥ ಕಟ್ಟಡವನ್ನು ಅಥವಾ ವಸ್ತುವನ್ನು ಕೆಡವಲು, ಭದ್ರಪಡಿಸಲು ಅಥವಾ ದುರಸ್ತಿ ಮಾಡಲು ಪ್ರಾರಂಭಿಸದಿದ್ದರೆ ಮತ್ತು ಸಮುಚಿತ ಶ್ರದ್ಧೆಯಿಂದ ಅಂಥ ಕೆಲಸವನ್ನು ಪೂರ್ಣಗೊಳಿಸದಿದ್ದರೆ, ಮುನ್ಸಿಪಲ್ ಕೌನ್ಸಿಲ್ ಅವಶ್ಯವೆಂದು ತಾನು ಯೋಚಿಸಬಹುದಾದಂಥ ಕಟ್ಟಡವನ್ನು ಅಥವಾ ವಸ್ತುವನ್ನು ಪೂರ್ಣವಾಗಿ ಅಥವಾ ಅಷ್ಟರಮಟ್ಟಿಗೆ ಕೆಡವಿಹಾಕುವಂತೆ, ದುರಸ್ತಿ ಮಾಡುವಂತೆ ಅಥವಾ ಅನ್ಯಥಾ ಭದ್ರಪಡಿಸುವಂತೆ ಮಾಡತಕ್ಕದ್ದು:

ಪರಂತು, ಅಪಾಯವು ಸನ್ನಿಹಿತವಾಗಿರದಿದ್ದರೆ, ಮುನ್ಸಿಪಲ್ ಕೌನ್ಸಿಲ್ ಸ್ವತಃ ಹಲಗೆತಟ್ಟಿಯನ್ನು ಅಥವಾ ಬೇಲಿಯನ್ನು ಹಾಕಿಸುವುದರ ಬದಲಾಗಿ ಸರಿಯಾದ ಹಲಗೆ ತಟ್ಟಿ ಅಥವಾ ಬೇಲಿಯನ್ನು ಹಾಕಲು ಒಡೆಯನಿಗೆ ಅಥವಾ ಸ್ವಾಧೀನದಾರನಿಗೆ ಮೊದಲು ಬರಹದಲ್ಲಿ ನೋಟೀಸನ್ನು ಕೊಡುವುದು ಅದರ ವಿವೇಚನೆಗೆ ಸೇರಿದ್ದಾಗಿರತಕ್ಕದ್ದು ಮತ್ತು ಅಂಥ ನೋಟೀಸಿನ ಜಾರಿಯ ದಿನಾಂಕದಿಂದ ಎರಡು ದಿವಸಗಳೊಳಗಾಗಿ, ಸನ್ನಿವೇಶ ಸಂದರ್ಭಗಳಿಗೆ ಅನುಗುಣವಾಗಿ ಮುನ್ಸಿಪಲ್ ಕೌನ್ಸಿಲ್ ಸಾಕಷ್ಟೆಂದು ಪರ್ಯಾಲೋಚಿಸುವಂಥ ಹಲಗೆತಟ್ಟಿಯನ್ನು ಅಥವಾ ಬೇಲಿಯನ್ನು ಆ ಒಡೆಯನು ಅಥವಾ ಸ್ವಾಧೀನದಾರನು ಹಾಕಲು ತಪ್ಪಿದಲ್ಲಿ, ಮುನ್ಸಿಪಲ್ ಕೌನ್ಸಿಲ್ ಅಂಥ ಹಲಗೆತಟ್ಟಿಯನ್ನು ಅಥವಾ ಬೇಲಿಯನ್ನು ಕೂಡಲೇ ಹಾಕಿಸತಕ್ಕದ್ದು ಮತ್ತು ಆ ತರುವಾಯ (1)ನೇ ಮತ್ತು (2)ನೇ ಉಪಪ್ರಕರಣಗಳಲ್ಲಿ ಹೇಳಿರುವಂತೆ ಮುಂದುವರಿಯತಕ್ಕದ್ದು.

[1]**[213ಎ. ಅಪಾಯಕಾರಿ ಮರಗಳ ಬಗ್ಗೆ ಮುನ್ನೆಚ್ಚರಿಕೆ.-** (1) ಯಾವುದೇ ಮರವು ಅಥವಾ ಮರದ ಯಾವುದೇ ಕೊಂಬೆಯು ಅಥವಾ ಯಾವುದೇ ಮರದ ಹಣ್ಣು, ಕಾಯಿ ಕೆಳಗೆ ಬೀಳುವ ಸಂಭವವಿದೆಯೆಂದು, ಅದರಿಂದ ಯಾರೇ ವ್ಯಕ್ತಿಗೆ ಅಥವಾ ಯಾವುದೇ ರಚನೆಗೆ ಅಪಾಯವುಂಟಾಗುವ ಸಂಭವವಿದೆಯೆಂದು ಚೀಫ್ ಆಫೀಸರ್ ಅಥವಾ ಮುನ್ಸಿಪಲ್ ಕಮಿಷನರ್ ನಿಗೆ ಕಂಡುಬಂದರೆ, ಚೀಫ್ ಆಫೀಸರ್ ನು ಅಥವಾ ಮುನ್ಸಿಪಲ್ ಕಮಿಷನರ್ ನು ನೋಟೀಸಿನ ಮೂಲಕ ಸದರಿ ಮರದ ಒಡೆಯನನ್ನು, ಅದರಿಂದ ಉಂಟಾಗುವ ಯಾವುದೇ ಅಪಾಯವನ್ನು ತಡೆಗಟ್ಟಲು, ಸದರಿ ಮರವನ್ನು ಬೀಳದಂತೆ ಸಂರಕ್ಷಿಸಲು, ಸವರಲು ಅಥವಾ ಕತ್ತರಿಸಿ ಹಾಕಲು ಅಗತ್ಯಪಡಿಸಬಹುದು.

(2) ಕೂಡಲೇ ಕ್ರಮ ಕೈಗೊಳ್ಳುವುದು ಅವಶ್ಯವಾದರೆ, ಚೀಫ್ ಆಫೀಸರ್ ಅಥವಾ ಮುನ್ಸಿಪಲ್ ಕಮಿಷನರ್ ನು ಅಂಥ ನೋಟೀಸನ್ನು ಕೊಡುವುದಕ್ಕೆ ಮುಂಚೆ ಅಥವಾ ಅಂಥ ನೋಟೀಸಿನ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಸದರಿ ಮರವನ್ನು ಬೀಳದಂತೆ ತಾನಾಗಿಯೇ ಸುರಕ್ಷಿಸತಕ್ಕದ್ದು, ಸವರಿಸತಕ್ಕದ್ದು ಅಥವಾ ಕತ್ತರಿಸಿ ಹಾಕಿಸತಕ್ಕದ್ದು ಅಥವಾ ಅದರ ಹಣ್ಣನ್ನು ತೆಗೆದುಹಾಕಿಸತಕ್ಕದ್ದು ಅಥವಾ ಯಾವುದೇ ಬೀದಿಯ ಭಾಗಕ್ಕೆ ಬೇಲಿ ಹಾಕಿಸತಕ್ಕದ್ದು ಅಥವಾ ಅಪಾಯವನ್ನು ತಡೆಗಟ್ಟಲು ಯೋಗ್ಯವೆಂದು ತಾನು ಆಲೋಚಿಸುವಂಥ ಇತರ ತಾತ್ಕಾಲಿಕ ಕ್ರಮವನ್ನು ತೆಗೆದುಕೊಳ್ಳತಕ್ಕದ್ದು ಮತ್ತು ಹಾಗೆ ಮಾಡುವುದರ ವೆಚ್ಚವನ್ನು ಆ ಮರದ ಒಡೆಯನಿಂದ, VII ನೇ ಅಧ್ಯಾಯದ ಮೇರೆಗೆ ಯಾವುದೇ ತೆರಿಗೆಯ ಮೊತ್ತವನ್ನು ಕ್ಲೇಮು ಮಾಡಿದಾಗ ಯಾವ ರೀತಿಯಲ್ಲಿ ವಸೂಲಿ ಮಾಡಲಾಗುವುದೋ ಅದೇ ರೀತಿಯಲ್ಲಿ ವಸೂಲಿ ಮಾಡತಕ್ಕದ್ದು.][1]

1.1966ರ ಅಧಿನಿಯಮ 34ರ ಮೂಲಕ 16.1.1967 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

214. ಅಪಾಯಕಾರಿ, ಹರಿಯದೇ ನಿಂತ ಅಥವಾ ಅನೈರ್ಮಲ್ಯ ನೀರು ಸರಬರಾಜು ಮೂಲಗಳ ಬಗೆಗಿನ ಅಧಿಕಾರಗಳು ಮತ್ತು ಕರ್ತವ್ಯಗಳು.- (1) ಮುನ್ಸಿಪಲ್ ಕೌನ್ಸಿಲ್, ಯಾವುದೇ ಕಾಲದಲ್ಲಿ, ಯಾವುದೇ ಬಾವಿಯ, ತೊರೆಯ, ಕಾಲುವೆಯ, ಕೆರೆಯ ಅಥವಾ ನೀರು ಸರಬರಾಜಿನ

ಇತರ ಮೂಲದ ಮೇಲೆ ಅದು ಖಾಸಗಿ ಸ್ವತ್ತಾಗಿರಲಿ ಅಥವಾ ಇಲ್ಲದಿರಲಿ ಅದರ ಒಡೆಯನನ್ನು ಅಥವಾ ಅದರ ಮೇಲೆ ನಿಯಂತ್ರಣ ಹೊಂದಿರುವ ಯಾರೇ ವ್ಯಕ್ತಿಯನ್ನು,-

(ಎ) ತೊರೆಯನ್ನು ಹೊರತುಪಡಿಸಿ ಯಾವುದೇ ಅಂಥ ನೀರು ಸರಬರಾಜು ಮೂಲವನ್ನು ಸುಸ್ಥಿತಿಯಲ್ಲಿಡಲು ಮತ್ತು ನಿರ್ವಹಿಸಲು; ಅಥವಾ

(ಬಿ) ನೋಟೀಸಿನಲ್ಲಿ ನಿರ್ದಿಷ್ಟಪಡಿಸಬೇಕಾದ ಯುಕ್ತ ಕಾಲದೊಳಗಾಗಿ ಹೂಳನ್ನು, ಕಸವನ್ನು ಅಥವಾ ಕೊಳೆಯುತ್ತಿರುವ ಸಸ್ಯಗಳನ್ನು ತೆಗೆದು ಯಾವುದೇ ಅಂಥ ನೀರು ಸರಬರಾಜು ಮೂಲವನ್ನು ಸ್ವಚ್ಛಪಡಿಸಲು; ಅಥವಾ

(ಸಿ) ಮುನ್ಸಿಪಲ್ ಕೌನ್ಸಿಲ್ ನಿಯಮಿಸಬಹುದಾದಂಥ ರೀತಿಯಲ್ಲಿ ಮೇಲ್ಕಂಡ ಚರಂಡಿ ವ್ಯವಸ್ಥೆಯಿಂದ ಕಲುಷಿತವಾಗದಂತೆ ಯಾವುದೇ ಅಂಥ ನೀರು ಸರಬರಾಜು ಮೂಲವನ್ನು ಸಂರಕ್ಷಿಸಲು; ಅಥವಾ

(ಡಿ) ತೊರೆಯು ಸ್ವಾಭಾವಿಕವಾಗಿ ಹರಿಯುವುದನ್ನು ಅದು ಹೊರತುಪಡಿಸಿ ಅಂಥ ಯಾವುದೇ ನೀರು ಸರಬರಾಜು ಮೂಲವನ್ನು, ಸಾಕಷ್ಟು ದುರಸ್ತಿ, ಸಂರಕ್ಷಣೆ ಅಥವಾ ಬೇಲಿಯಿಲ್ಲದೆ ಇರುವುದರಿಂದಾಗಿ ಅಂಥ ನೀರು ಸರಬರಾಜು ಮೂಲವು, ಮುನ್ಸಿಪಲ್ ಕೌನ್ಸಿಲ್ ನ ಅಭಿಪ್ರಾಯದಲ್ಲಿ ಸಾರ್ವಜನಿಕರ ಆರೋಗ್ಯಕ್ಕೆ ಅಥವಾ ಸುರಕ್ಷತೆಗೆ ಅಥವಾ ಅದನ್ನು ಬಳಸಲು ಅಥವಾ ಹಾದು ಹೋಗುವ ಅಥವಾ ಅದರ ಹತ್ತಿರಕ್ಕೆ ಹೋಗುವ ಸಂದರ್ಭವಿರುವ ಯಾರೇ ವ್ಯಕ್ತಿಗೆ ಅಪಾಯಕಾರಿಯಾಗಿದ್ದರೆ, ಮುನ್ಸಿಪಲ್ ಕೌನ್ಸಿಲ್ ಅನುಮೋದಿಸಬಹುದಾದಂಥರೀತಿಯಲ್ಲಿ ಅಂಥ ನೋಟೀಸಿನ ಇಪ್ಪತ್ನಾಲ್ಕು ಗಂಟೆಗಳೊಳಗಾಗಿ ದುರಸ್ತಿ ಮಾಡಲು, ಸಂರಕ್ಷಿಸಲು ಅಥವಾ ಬೇಲಿ ಹಾಕಲು; ಅಥವಾ

(ಇ) ಯಾವ ನೀರು ಸರಬರಾಜಿನ ಅಂಥ ಮೂಲವು ಸ್ವಾಭಾವಿಕವಾಗಿ ಹರಿಯುವ ತೊರೆಯಲ್ಲದೆ, ಕುಡಿಯುವುದಕ್ಕಾಗಿ ಯೋಗ್ಯವಾಗಿಲ್ಲವೆಂದು ಮುನ್ಸಿಪಲ್ ಕೌನ್ಸಿಲ್ ಗೆ ಮನವರಿಕೆಯಾಗುವಂತೆ ರುಜುವಾತುಪಡಿಸಿದರೆ ನೀರು ಸರಬರಾಜಿನ ಅಂಥ ಯಾವುದೇ ಮೂಲವನ್ನು ಬಳಸದಂತೆ ಮತ್ತು ಇತರರು ಬಳಸಲು ಅನುಮತಿಸದಂತೆ;

(ಎಫ್) ಖಂಡ (ಇ) ಯ ಮೇರೆಗೆ ಯಾವುದೇ ಅಂಥ ನೋಟೀಸ್ ಇದ್ದಾಗ್ಯೂ, ಅದರ ಬಳಕೆಯು ಮುಂದುವರಿದರೆ ಮತ್ತು ಅನ್ಯಥಾ ತಡೆಗಟ್ಟಲು ಆಗುವುದಿಲ್ಲವೆಂದು ಮುನ್ಸಿಪಲ್ ಕೌನ್ಸಿಲ್ ಅಭಿಪ್ರಾಯಪಟ್ಟರೆ ಹಿಂದೆ ಹೇಳಿದಂಥ ನೀರು ಸರಬರಾಜಿನ ಮೂಲದ ಬಳಕೆಯನ್ನು ತಡೆಗಟ್ಟಲು ಸಾಕಷ್ಟೆಂದು ಮುನ್ಸಿಪಲ್ ಕೌನ್ಸಿಲ್ ಪರ್ಯಾಲೋಚಿಸುವಂಥ ರೀತಿಯಲ್ಲಿ ತಾತ್ಕಾಲಿಕವಾಗಿಯಾಗಲಿ ಅಥವಾ ಖಾಯಂ ಆಗಿ ಆಗಲಿ ಮುಚ್ಚಲು ಅಥವಾ ಭರ್ತಿ ಮಾಡಲು ಅಥವಾ ಆವೃತಗೊಳಿಸಲು ಅಥವಾ ಬೇಲಿ ನಿರ್ಮಿಸಲು; ಅಥವಾ

(ಜಿ) ನೆರೆಹೊರೆಯ ಆರೋಗ್ಯಕ್ಕೆ ಹಾನಿಕಾರಕವೆಂದು ಅಥವಾ ಅಸಹ್ಯಕರವೆಂದು ಮುನ್ಸಿಪಲ್ ಕೌನ್ಸಿಲ್ ಪರ್ಯಾಲೋಚಿಸುವಂಥ ಯಾವುದೇ ಹರಿಯದೆ ನಿಂತ ನೀರನ್ನು ಅಂಥ ಯಾವುದೇ ನೀರು ಸರಬರಾಜಿನ ಮೂಲದಿಂದ ಅಥವಾ ಯಾವುದೇ ಭೂಮಿಯಿಂದ ಅಥವಾ ಆವರಣದಿಂದ ಅಥವಾ ಅದಕ್ಕೆ ಲಗತ್ತಾದ ಅಥವಾ ಹೊಂದಿಕೊಂಡಿರುವ ತೊಟ್ಟಿಯಿಂದ ಅಥವಾ ಹೊಂಡದಿಂದ ಹರಿದುಹೋಗುವಂತೆ ಮಾಡಲು ಅಥವಾ ಅನ್ಯಥಾ ತೆಗೆದುಹಾಕಲು ಬರಹದಲ್ಲಿ ನೋಟೀಸಿನ ಮೂಲಕ ಅಗತ್ಯಪಡಿಸಬಹುದು.

(2) ಹಿಂದೆ ಹೇಳಿದಂತೆ ನಿಯಂತ್ರಣವನ್ನು ಹೊಂದಿರುವ ಒಡೆಯನು ಅಥವಾ ವ್ಯಕ್ತಿಯು, (1)ನೇ ಉಪಪ್ರಕರಣದ ಉಪಬಂಧಗಳ ಮೂಲಕ ಅಥವಾ ಅದರ ಮೇರೆಗೆ ಅಗತ್ಯಪಡಿಸಿರುವ ಕಾಲದೊಳಗೆ ಯಾವುದೇ ಅಂಥ ಕಡ್ಡಾಯ ಕೋರಿಕೆಯನ್ನು ಪಾಲಿಸಲು ತಪ್ಪಿದರೆ ಅಥವಾ ಉಪೇಕ್ಷಿಸಿದರೆ, ಮುನ್ಸಿಪಲ್ ಕೌನ್ಸಿಲ್ ಅಂಥ ನೋಟೀಸಿನ ಮೂಲಕ ಅಗತ್ಯಪಡಿಸಿದ ಕೆಲಸವನ್ನು ನಿರ್ವಹಿಸಲು ಮುಂದುವರಿಯಬಹುದು ಮತ್ತು ಯಾರೇ ವ್ಯಕ್ತಿಯ ಆರೋಗ್ಯವನ್ನು ಅಥವಾ ಸುರಕ್ಷತೆಯನ್ನು ಸಂರಕ್ಷಿಸಲು ಕೂಡಲೇ ಕ್ರಮ ಕೈಕೊಳ್ಳುವುದು ಅವಶ್ಯವೆಂದು ಮುನ್ಸಿಪಲ್ ಕೌನ್ಸಿಲ್ ಅಭಿಪ್ರಾಯಪಟ್ಟರೆ ಕೂಡಲೇ ಅದನ್ನು ನಿರ್ವಹಿಸಲು ಮುನ್ಸಿಪಲ್ ಕೌನ್ಸಿಲ್ ಮುಂದುವರಿಯತಕ್ಕದ್ದು ಮತ್ತು ಮುನ್ಸಿಪಲ್ ಕೌನ್ಸಿಲ್ ಆ ಬಗ್ಗೆ ವಹಿಸಿದ ಎಲ್ಲ ವೆಚ್ಚಗಳನ್ನು ಅಂಥ ನೀರು ಸರಬರಾಜಿನ ಒಡೆಯನು ಅಥವಾ ಅದರ ಮೇಲೆ ನಿಯಂತ್ರಣ ಹೊಂದಿರುವ ವ್ಯಕ್ತಿಯು ಸಂದಾಯ ಮಾಡತಕ್ಕದ್ದು ಮತ್ತು VIIನೇ ಅಧ್ಯಾಯದ ಮೇರೆಗೆ ವಸೂಲು ಮಾಡಬಹುದಾದ

ಯಾವುದೇ ತೆರಿಗೆಯ ಮೊತ್ತವನ್ನು ಕ್ಲೇಮು ಮಾಡಿದಾಗ ಯಾವ ರೀತಿಯಲ್ಲಿ ವಸೂಲು ಮಾಡಬರುವುದೋ ಅದೇ ರೀತಿಯಲ್ಲಿ ಆ ವೆಚ್ಚಗಳನ್ನು ವಸೂಲಿ ಮಾಡತಕ್ಕದ್ದು:

ಪರಂತು, ಯಾವುದೇ ಬಾವಿ ಅಥವಾ ಖಾಸಗಿ ತೊರೆ ಅಥವಾ ಯಾವುದೇ ಖಾಸಗಿ ಕಾಲುವೆ, ಕೆರೆ ಅಥವಾ ನೀರು ಸರಬರಾಜಿನ ಇತರ ಮೂಲವಾಗಿದ್ದರೆ, ಅದರ ನೀರನ್ನು ಸಾರ್ವಜನಿಕರು ಅಥವಾ ಸಾರ್ವಜನಿಕರ ಯಾವುದೇ ವರ್ಗವು ಹಕ್ಕಿನಂತೆ ಬಳಸುತ್ತಿದ್ದರೆ ಮುನ್ಸಿಪಲ್ ಕೌನ್ಸಿಲ್, ವಹಿಸಿದ ಅಥವಾ ಅಂಥ ಒಡೆಯನು ಅಥವಾ ಅದರ ಮೇಲೆ ನಿಯಂತ್ರಣವನ್ನು ಹೊಂದಿರುವ ವ್ಯಕ್ತಿಯು ಅವಶ್ಯವಾಗಿ ವಹಿಸಿದ ವೆಚ್ಚವನ್ನು ಮುನ್ಸಿಪಲ್ ಕೌನ್ಸಿಲ್ ಮುನ್ಸಿಪಲ್ ನಿಧಿಯಿಂದ ಸಂದಾಯ ಮಾಡತಕ್ಕದ್ದೆಂದು ನಿರ್ದೇಶಿಸಿದರೆ, ಮುನ್ಸಿಪಲ್ ನಿಧಿಯಿಂದ ಸಂದಾಯ ಮಾಡತಕ್ಕದ್ದು.

215. ನೆಲಗಟ್ಟು ಇತ್ಯಾದಿಗಳನ್ನು ಸ್ಥಳ ತಪ್ಪಿಸುವುದು.- (1) ಮುನ್ಸಿಪಲ್ ಕೌನ್ಸಿಲ್ ನ ಅಥವಾ ಇತರ ಕಾನೂನುಸಮ್ಮತ ಪ್ರಾಧಿಕಾರಿಯಿಂದ ಬರಹದಲ್ಲಿ ಸಮ್ಮತಿಯಿಲ್ಲದೆ ಯಾವುದೇ ಸಾರ್ವಜನಿಕ ಬೀದಿಯ ನೆಲಗಟ್ಟನ್ನು, ಮೋರಿಯನ್ನು, ಹಾಸುಗಲ್ಲುಗಳನ್ನು ಅಥವಾ ಇತರ ಸಾಮಗ್ರಿಗಳನ್ನು ಅಥವಾ ಅದರ ಬೇಲಿಗಳನ್ನು, ಗೋಡೆಗಳನ್ನು ಅಥವಾ ಸ್ತಂಭಗಳನ್ನು ಅಥವಾ ಅದರಲ್ಲಿನ ಯಾವುದೇ ಮುನ್ಸಿಪಲ್ ದೀಪವನ್ನು, ದೀಪದ ಕಂಬವನ್ನು, ಬ್ರಾಕೆಟ್‌ನ್ನು, ವಾಟರ್ ಪೋಸ್ಟ್ ನ್ನು, ನೀರ್ಕೊಳವೆಯನ್ನು ಅಥವಾ ಇತರ ಅಂಥ ಮುನ್ಸಿಪಾಲಿಟಿಯ ಸ್ವತ್ತನ್ನು ಸ್ಥಳ ಪಲ್ಲಟ ಮಾಡುವ, ತೆಗೆದುಕೊಳ್ಳುವ ಅಥವಾ ಯಾವುದೇ ಮಾರ್ಪಾಟು ಮಾಡುವ ಯಾರೇ ವ್ಯಕ್ತಿಯು ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ಯಾವುದೇ ಸಾರ್ವಜನಿಕ ಬೀದಿಯ ಅಂಥ ಯಾವುದೇ ನೆಲಗಟ್ಟನ್ನು, ಮೋರಿಯನ್ನು, ಹಾಸುಗಲ್ಲುಗಳನ್ನು ಅಥವಾ ಇತರ ಸಾಮಗ್ರಿಗಳನ್ನು ಅಥವಾ ಬೇಲಿ ಗೋಡೆಗಳನ್ನು, ಸ್ತಂಭಗಳನ್ನು, ಮುನ್ಸಿಪಲ್ ದೀಪಗಳನ್ನು, ದೀಪಕಂಬಗಳನ್ನು, ಬ್ರಾಕೆಟ್ ಗಳನ್ನು, ವಾಟರ್ ಪೋಸ್ಟ್ ನ್ನು, ನೀರ್ಕೊಳವೆಗಳನ್ನು ಅಥವಾ ಇತರ ಮುನ್ಸಿಪಲ್ ಸ್ವತ್ತನ್ನು ಸ್ಥಳ ಪಲ್ಲಟ ಮಾಡಿದ, ತೆಗೆದುಕೊಂಡ ಅಥವಾ ಮಾರ್ಪಾಟು ಮಾಡಿದ ಯಾರೇ ವ್ಯಕ್ತಿಯು ಮುನ್ಸಿಪಲ್ ಕೌನ್ಸಿಲ್ ಗೆ ಸಮಾಧಾನವಾಗುವಂತೆ ಅದನ್ನು ಪುನಃ ಸ್ಥಾಪಿಸಲು ಅಥವಾ ಪೂರ್ವಸ್ಥಿತಿಗೆ ತರಲು, ನೋಟೀಸನ್ನು ಕೊಟ್ಟ ತರುವಾಯ, ಹಾಗೆ ಮಾಡಲು ತಪ್ಪಿದರೆ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಯಾವುದೇ ವೆಚ್ಚವನ್ನು ಸಂದಾಯ ಮಾಡತಕ್ಕದ್ದು ಮತ್ತು ಅಂಥ ವೆಚ್ಚಗಳನ್ನು VII ನೇ ಅಧಿನಿಯಮದ ಮೇರೆಗೆ ವಸೂಲು ಮಾಡಬಹುದಾದ ಯಾವುದೇ ತೆರಿಗೆಯ ಮೊತ್ತವನ್ನು ಕ್ಲೇಮು ಮಾಡಿದಾಗ ಯಾವ ರೀತಿಯಲ್ಲಿ ವಸೂಲು ಮಾಡಲಾಗುವುದೋ ಅದೇ ರೀತಿಯಲ್ಲಿ ವಸೂಲು ಮಾಡತಕ್ಕದ್ದು.

216. ಸಾರ್ವಜನಿಕ ಬೀದಿಗಳ ಮತ್ತು ಬಹಿರಂಗ ಜಾಗಗಳ ಮೇಲೆ ಅಡ್ಡಿ ಅಡಚಣೆಗಳು ಮತ್ತು ಒತ್ತುವರಿಗಳು.- (1) ಯಾವುದೇ ಸ್ಥಳದಲ್ಲಿ ಅದು [1][ಮುನ್ಸಿಪಲ್ ಏರಿಯಾ][1] ಆದ ತರುವಾಯ, ಯಾವುದೇ ಸಾರ್ವಜನಿಕ ಬೀದಿಯಲ್ಲಿ ಚರಂಡಿಗಳ ಮೇಲಿನ ಮೆಟ್ಟಿಲುಗಳನ್ನು ಹೊರತುಪಡಿಸಿ, ಯಾವುದೇ ಗೋಡೆಯನ್ನು ಅಥವಾ ಯಾವುದೇ ಬೇಲಿಯನ್ನು, ಕಂಬಿಯನ್ನು, ಸ್ತಂಭವನ್ನು, ಮಳಿಗೆಯನ್ನು, ವರಾಂಡವನ್ನು, ಜಗಲಿಯನ್ನು, ಮೇಲ್ಛಾಯವನ್ನು, ಮೆಟ್ಟಿಲನ್ನು ಅಥವಾ ಮುಂಚಾಚಿದ ಯಾವುದೇ ರಚನೆಯನ್ನು ಅಥವಾ ವಸ್ತುವನ್ನು ಕಟ್ಟಿರುವ ಅಥವಾ ಸ್ಥಾಪಿಸಿರುವ ಅಥವಾ ಕಟ್ಟುವ ಅಥವಾ ಸ್ಥಾಪಿಸುವ ಅಥವಾ ಅಂಥ ಬೀದಿಯಲ್ಲಿ ಯಾವುದೇ ತೆರೆದ ಚರಂಡಿಯಲ್ಲಿ, ಮೋರಿಯಲ್ಲಿ, ಗ್ರಾಮಸಾರ ಚರಂಡಿಯಲ್ಲಿ ಅಥವಾ ಮೇಲ್ಛಾಲುವೆಯಲ್ಲಿ ಅಥವಾ ಅದರಾಚೆಗೆ ಅಥವಾ ಅದರ ಮೇಲೆ ಯಾವುದೇ ಪಟ್ಟಿಗೆಯನ್ನು, ಬೇಲಿಯನ್ನು, ಪ್ಯಾಕೇಜನ್ನು ಅಥವಾ ಸರಕನ್ನು ಅಥವಾ ಅಂಥ ಬೀದಿಯಲ್ಲಿ ಯಾವುದೇ ಇತರ ವಸ್ತುವನ್ನು ಇಡುವ ಅಥವಾ ಇಡಿಸುವ ಅಥವಾ ಇಟ್ಟರೆ ಆ ಯಾರೇ ವ್ಯಕ್ತಿಯು ಇಪ್ಪತ್ತೈದು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಮುನ್ಸಿಪಲ್ ಕೌನ್ಸಿಲ್, ಅಂಥ ಅಡ್ಡಿ ಅಡಚಣೆಯನ್ನು ಅಥವಾ ಒತ್ತುವರಿಯನ್ನು ತೆಗೆದು ಹಾಕಲು ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಖಾಸಗಿ ಸ್ವತ್ತಾಗಿರದ ಯಾವುದೇ ಬಹಿರಂಗ ಜಾಗದಲ್ಲಿ ಅಂಥ ಬಹಿರಂಗ ಜಾಗವು ಮುನ್ಸಿಪಲ್ ಕೌನ್ಸಿಲ್ ನಲ್ಲಿ ನಿಹಿತವಾಗಿರಲಿ ಅಥವಾ ಇಲ್ಲದಿರಲಿ ಅಂಥದೇ ಸ್ವರೂಪದ ಅನಧಿಕೃತ ಅಡ್ಡಿ ಅಡಚಣೆಯನ್ನು ಅಥವಾ ಒತ್ತುವರಿಯನ್ನು ತೆಗೆದುಹಾಕಲು ಅಂಥದೇ ಅಧಿಕಾರವನ್ನು ಹೊಂದಿರತಕ್ಕದ್ದು: ಪರಂತು, ಆ ಜಾಗವು ಸರ್ಕಾರದಲ್ಲಿ ನಿಹಿತವಾಗಿದ್ದರೆ ಡೆಪ್ಯೂಟಿ ಕಮಿಷನರ್ ರ ಅನುಮತಿಯನ್ನು ಮೊದಲು ಪಡೆದಿರತಕ್ಕದ್ದು ಮತ್ತು

ಹಾಗೆ ತೆಗೆದುಹಾಕಲು ತಗುಲಿದ ವೆಚ್ಚವನ್ನು ಸದರಿ ಅಡ್ಡಿ ಅಡಚಣೆಗೆ ಅಥವಾ ಒತ್ತುವರಿಗೆ ಕಾರಣನಾದ ವ್ಯಕ್ತಿಯು ಸಂದಾಯ ಮಾಡತಕ್ಕದ್ದು ಮತ್ತು ಅಂಥ ವೆಚ್ಚಗಳನ್ನು XII ನೇ ಅಧ್ಯಾಯದ ಮೇರೆಗೆ ವಸೂಲು ಮಾಡಬಹುದಾದ ಯಾವುದೇ ತೆರಿಗೆಯ ಮೊತ್ತವನ್ನು ಕ್ಲೇಮು ಮಾಡಿದಾಗ ಯಾವ ರೀತಿಯಲ್ಲಿ ವಸೂಲು ಮಾಡಲಾಗುವುದೋ ಅದೇ ರೀತಿಯಲ್ಲಿಯೇ ವಸೂಲು ಮಾಡತಕ್ಕದ್ದು.

(3) ಯಾವ ಸ್ವತ್ತು ಖಾಸಗಿ ಸ್ವತ್ತು ಅಲ್ಲವೋ ಆ ಯಾವುದೇ ಬಹಿರಂಗ ಜಾಗದಿಂದ ಮಣ್ಣನ್ನು, ಮರಳನ್ನು ಅಥವಾ ಇತರ ಸಾಮಗ್ರಿಯನ್ನು ತೆಗೆಯಲು ಕ್ರಮಬದ್ಧವಾಗಿ ಅಧಿಕೃತನಾಗಿರದ ಅಥವಾ ಅದರಲ್ಲಿ ಅಥವಾ ಅದರ ಮೇಲೆ ಯಾವುದೇ ಒತ್ತುವರಿ ಮಾಡುವ ಯಾರೇ ಆಗಲಿ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು ಮತ್ತು ಒತ್ತುವರಿಯ ಸಂದರ್ಭದಲ್ಲಿ ಅಂಥ ಅಪರಾಧಕ್ಕಾಗಿ ಮೊದಲ ಬಾರಿಗೆ ಅಪರಾಧ ನಿರ್ಣಯವಾದ ದಿನಾಂಕದ ತರುವಾಯ ಒತ್ತುವರಿ ಮುಂದುವರಿಯುವಂಥ ಪ್ರತಿ ದಿವಸಕ್ಕೆ 10 ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(4) ಈ ಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ ಮುನ್ಸಿಪಲ್ ಕೌನ್ಸಿಲ್ ನ್ನು ಹಬ್ಬಗಳ ಮತ್ತು ಸಮಾರಂಭಗಳ ಸಂದರ್ಭಗಳಲ್ಲಿ ಯಾವುದೇ ಸಾರ್ವಜನಿಕ ಬೀದಿಯ ಯಾವುದೇ ತಾತ್ಕಾಲಿಕ ಸ್ವಾಧೀನವನ್ನು ಅಥವಾ ಅಲ್ಲಿ ಯಾವುದೇ ನಿರ್ಮಾಣಕ್ಕೆ ಅವಕಾಶ ಕೊಡುವುದನ್ನು ಅಥವಾ ಉಪಬೀದಿಗಳಲ್ಲಿ ಅಥವಾ ಜಾಗಗಳಲ್ಲಿ ನಾಲ್ಕು ದಿವಸಗಳಿಗೆ ಹೆಚ್ಚಿಲ್ಲದಂತೆ ಮತ್ತು ಸಾರ್ವಜನಿಕರಿಗೆ ಅಥವಾ ಯಾರೇ ವ್ಯಕ್ತಿಗೆ ಅನಾನುಕೂಲವಾಗದಂತೆ ಉರುವಲನ್ನು ಗುಡ್ಡೆ ಹಾಕುವುದಕ್ಕೆ ಅಥವಾ ಈ ಅಧಿನಿಯಮದ ಮೇರೆಗೆ ರಚಿಸಿದ ಬೈಲಾಗಳಿಗೆ ಅನುಸಾರವಾಗಿ ಯಾವುದೇ ಇತರೆ ಉದ್ದೇಶಕ್ಕಾಗಿ ಯಾವುದೇ ಅಂಥ ಬೀದಿಗಳು ಅಥವಾ ಜಾಗದ ಸ್ವಾಧೀನಕ್ಕೆ ಅಥವಾ ಅದರ ಮೇಲೆ ರಚನೆಯ ತಾತ್ಕಾಲಿಕ ನಿರ್ಮಾಣಕ್ಕೆ ಅವಕಾಶ ನೀಡುವುದನ್ನು ತಡೆಗಟ್ಟತಕ್ಕದ್ದಲ್ಲ.

(5) ಈ ಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ, 208ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಕ್ರಮಬದ್ಧವಾಗಿ ಅಧಿಕೃತಗೊಳಿಸಿದ ಯಾವುದೇ ಮುಂಚಾಚುವಿಕೆಗೆ ಅಥವಾ ಈ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಅನುಮತಿಯನ್ನು ಕೊಟ್ಟಿರುವುದಕ್ಕೆ ಅನ್ವಯವಾಗತಕ್ಕದ್ದಲ್ಲ.

217. ದುರಸ್ತಿ ಇತ್ಯಾದಿಗಳನ್ನು ಮಾಡುವಾಗ ಹಲಗೆ ಬೇಲಿಗಳನ್ನು ಹಾಕತಕ್ಕದ್ದು.- (1) ಯಾವುದೇ ಬೀದಿಯಲ್ಲಿ ಯಾವುದೇ ಕಟ್ಟಡವನ್ನು ಕಟ್ಟಲು ಅಥವಾ ಕೆಡವಲು ಅಥವಾ ಯಾವುದೇ ಕಟ್ಟಡದ ಹೊರಭಾಗವನ್ನು ಬದಲಾಯಿಸಲು ಅಥವಾ ದುರಸ್ತಿ ಮಾಡಲು ಉದ್ದೇಶಿಸಿರುವ ಕೆಲಸವನ್ನು, ಅಡ್ಡಿ ಅಡಚಣೆ, ಅಪಾಯ ಅಥವಾ ಅನಾನುಕೂಲತೆ ಉಂಟುಮಾಡುವ ಅಥವಾ ಉಂಟುಮಾಡಬಹುದಾದ ಸಂಭವವಿರುವಂಥ ಸ್ಥಿತಿಯಲ್ಲಿ ಅಥವಾ ಸನ್ನಿವೇಶಗಳಲ್ಲಿ ಮಾಡಲು ಉದ್ದೇಶಿಸಿರುವ ಪ್ರತಿಯೊಬ್ಬ ವ್ಯಕ್ತಿಯು ಅಂಥ ಕೆಲಸವನ್ನು ಪ್ರಾರಂಭಿಸುವುದಕ್ಕೆ ಮುಂಚೆ;

(ಎ) ಹಾಗೆ ಮಾಡಲು ಮುನ್ಸಿಪಲ್ ಕೌನ್ಸಿಲ್ ನಿಂದ ಬರಹದಲ್ಲಿ ಲೈಸೆನ್ಸ್ ನ್ನು ಮೊದಲು ಪಡೆಯತಕ್ಕದ್ದು; ಮತ್ತು

(ಬಿ) ಅಂಥ ಕೆಲಸಗಳನ್ನು ಯಾವ ಬೀದಿಯಲ್ಲಿ ಕೈಗೊಳ್ಳಲಾಗುತ್ತಿದೆಯೋ ಆ ಬೀದಿಯಿಂದ ಕಟ್ಟಡವನ್ನು ಪ್ರತ್ಯೇಕಿಸಲು ಸಾಕಷ್ಟು ಹಲಗೆ ಬೇಲಿಗಳನ್ನು ಅಥವಾ ಬೇಲಿಗಳನ್ನು ಹಾಕಿಸತಕ್ಕದ್ದು ಮತ್ತು ಸಾರ್ವಜನಿಕರಿಗೆ ಸಾರ್ವಜನಿಕ ಸುರಕ್ಷತೆ ಅಥವಾ ಅನುಕೂಲವಾಗುವುದು ಅಗತ್ಯವೋ ಅಂಥ ಕಾಲದಲ್ಲಿ ಮುನ್ಸಿಪಲ್ ಕೌನ್ಸಿಲ್ ಗೆ ಮನವರಿಕೆಯಾಗುವಂತೆ, ಅಂಥ ಹಲಗೆ ಬೇಲಿಯನ್ನು ಅಥವಾ ಬೇಲಿಯನ್ನು ನಿಂತಿರುವಂತೆ ಮತ್ತು ಸುಸ್ಥಿತಿಯಲ್ಲಿ ನಿರ್ವಹಿಸತಕ್ಕದ್ದು ಮತ್ತು ಅದಕ್ಕೆ ರಾತ್ರಿಯ ವೇಳೆಯಲ್ಲಿ ಸಾಕಷ್ಟು ಬೆಳಕಿನ ವ್ಯವಸ್ಥೆ ಮಾಡಿಸತಕ್ಕದ್ದು ಮತ್ತು ಅದನ್ನು, ಮುನ್ಸಿಪಲ್ ಕೌನ್ಸಿಲ್ ನಿರ್ದೇಶಿಸಿದಾಗ ತೆಗೆದುಹಾಕತಕ್ಕದ್ದು.

(2) ಈ ಪ್ರಕರಣದ ಯಾವುದೇ ಉಪಬಂಧವನ್ನು ಉಲ್ಲಂಘಿಸುವ ಯಾರೇ ಆಗಲಿ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ಮೊದಲ ಬಾರಿಗೆ ಅಪರಾಧ ನಿರ್ಣಯದ ದಿನಾಂಕದ ತರುವಾಯ ಮುಂದುವರಿಯುವಂಥ ಉಲ್ಲಂಘನೆಗೆ ಸಂದರ್ಭಾನುಸಾರ ಪ್ರತಿಯೊಂದು ಹಗಲಿಗೆ ಅಥವಾ ರಾತ್ರಿಗೆ ಹತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

218. ಸಾರ್ವಜನಿಕ ಬೀದಿಯಲ್ಲಿ ಕೆಲಸವನ್ನು ನಿರ್ವಹಿಸುವಾಗ ಸೌಲಭ್ಯಗಳ ವ್ಯವಸ್ಥೆ.- (1) ಮುನ್ಸಿಪಲ್ ಕೌನ್ಸಿಲ್, ಯಾವುದೇ ಸಾರ್ವಜನಿಕ ಬೀದಿಯಲ್ಲಿ ಯಾವುದೇ ಕೆಲಸವನ್ನು ನಿರ್ವಹಿಸುತ್ತಿರುವಾಗ ಸಮಂಜಸವಾಗಿ ಸಾಧ್ಯವಾಗುವಷ್ಟರಮಟ್ಟಿಗೆ,

(ಎ) ಸುಗಮ ಸಂಚಾರಕ್ಕೆ ಅಥವಾ ಸಂಚಾರದ ಮಾರ್ಗಾಂತರಣಕ್ಕೆ;

(ಬಿ) ಅಂಥ ಬೀದಿಯಿಂದ ಆವರಣಕ್ಕೆ ತಲುಪಲು ಸರಿಯಾದ ಪ್ರವೇಶಾವಕಾಶ; ಮತ್ತು

(ಸಿ) ಅಂಥ ಕೆಲಸದ ನಿರ್ವಹಣೆಯಿಂದ ಯಾವುದೇ ಚರಂಡಿ ವ್ಯವಸ್ಥೆ, ನೀರು ಸರಬರಾಜು ಅಥವಾ ಬೆಳಕಿನ ಸಾಧನಗಳಿಗೆ ಅಡ್ಡಿ ಅಡಚಣೆ ಉಂಟಾದರೆ ಬದಲಿ ವ್ಯವಸ್ಥೆಗೆ - ಸಾಕಷ್ಟು ಏರ್ಪಾಟು ಮಾಡತಕ್ಕದ್ದು.

(2) ಮುನ್ಸಿಪಲ್ ಕೌನ್ಸಿಲ್ ಯಾವುವೇ ಬೀದಿಯ, ಗ್ರಾಮಸಾರ ಚರಂಡಿಯ, ಚರಂಡಿಯ ಅಥವಾ ಇತರ ಆವರಣದ ನಿರ್ಮಾಣದ ಕಾಲದಲ್ಲಿ ಅಥವಾ ತನ್ನಲ್ಲಿ ನಿಹಿತವಾದ ಯಾವುದೇ ಬೀದಿಯ, ಗ್ರಾಮಸಾರ ಚರಂಡಿಯ ಅಥವಾ ಚರಂಡಿಯ ಅಥವಾ ಇತರ ಆವರಣದ ದುರಸ್ತಿಯ ಕಾಲದಲ್ಲಿ ಅದಕ್ಕೆ ಹೊಂದಿಕೊಂಡಂತಿರುವ ಕಟ್ಟಡಗಳನ್ನು ಸಂರಕ್ಷಿಸುವ ಮೂಲಕ ಅಪಘಾತದ ವಿರುದ್ಧ ರಕ್ಷಣೆಗಾಗಿ ಸೂಕ್ತ ಮುನ್ನೆಚ್ಚರಿಕೆಯನ್ನು ತೆಗೆದುಕೊಳ್ಳತಕ್ಕದ್ದು ಮತ್ತು ಸರಿಯೆಂದು ತನಗೆ ತೋರುವಂತೆ ಅಂಥ ಕೆಲಸಗಳನ್ನು ನಿರ್ವಹಿಸುವಾಗ, ವಾಹನಗಳ, ಗಾಡಿಗಳ ಅಥವಾ ಇತರ ವಾಹನಗಳ ಅಥವಾ ಜಾನುವಾರುಗಳ ಅಥವಾ ಕುದುರೆಗಳ ಸಂಚಾರವನ್ನು ತಡೆಗಟ್ಟಲು ಯಾವುದೇ ಬೀದಿಗೆ ಅಡ್ಡಲಾಗಿ ಅಥವಾ ಅದರಲ್ಲಿ ಅಂಥ ಸರಕುಗಳನ್ನು, ಸರಪಳಿಗಳನ್ನು, ಸ್ತಂಭಗಳನ್ನು ಸ್ಥಾಪಿಸತಕ್ಕದ್ದು ಮತ್ತು ಮುನ್ಸಿಪಲ್ ಕೌನ್ಸಿಲ್ ಬೀದಿಗಳಲ್ಲಿನ ಯಾವುದೇ ಗ್ರಾಮಸಾರ ಚರಂಡಿ, ಚರಂಡಿ ಅಥವಾ ಇತರ ಕೆಲಸಗಳನ್ನು ಅವುಗಳ ನಿರ್ಮಾಣ ಅಥವಾ ದುರಸ್ತಿ ಮಾಡುವಾಗ ರಾತ್ರಿಯ ಕಾಲದಲ್ಲಿ ಸಾಕಷ್ಟು ಬೆಳಕಿರುವಂತೆ ಮತ್ತು ರಕ್ಷಣೆ ಇರುವಂತೆ ಏರ್ಪಾಟು ಮಾಡಿ ಮಾಡಿಸತಕ್ಕದ್ದು.

(3) ಮುನ್ಸಿಪಲ್ ಕೌನ್ಸಿಲ್‌ನಿಂದ ಅಧಿಕಾರ ಇಲ್ಲದೆ ಅಥವಾ ಅದರ ಸಮ್ಮತಿಯಿಲ್ಲದೆ, ಯಾರೇ ಆಗಲಿ ಸರಳುಗಳನ್ನು, ಸರಪಳಿಗಳನ್ನು ಬಿಚ್ಚುವ ಅಥವಾ ಸ್ತಂಭಗಳನ್ನು ಕೆಳಗಿಳಿಸುವ, ಮಾರ್ಪಾಟು ಮಾಡುವ ಅಥವಾ ತೆಗೆದುಹಾಕುವ ಅಥವಾ ಯಾವುದೇ ಅಂಥ ದೀಪವನ್ನು ತೆಗೆದುಹಾಕುವ ಅಥವಾ ನಂದಿಸುವ ಯಾರೇ ಆಗಲಿ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

219. ಅನುಮತಿಯಿಲ್ಲದೆ ಬೀದಿಯಲ್ಲಿ ಮರಮುಟ್ಟುಗಳನ್ನು ಇಡತಕ್ಕದ್ದಲ್ಲ ಅಥವಾ ರಂಧ್ರ ಮಾಡತಕ್ಕದ್ದಲ್ಲ.- (1) ಯಾರೇ ವ್ಯಕ್ತಿಯು ಮುನ್ಸಿಪಲ್ ಕೌನ್ಸಿಲ್‌ನಿಂದ ಬರಹದಲ್ಲಿ ಅನುಮತಿಯಿಲ್ಲದೆ ಅಥವಾ ಆ ಅನುಮತಿಯಲ್ಲಿ ಗೊತ್ತುಪಡಿಸಬಹುದಾದಂಥ ಷರತ್ತುಗಳಿಗೆ ಅನುಸಾರವಾಗಿ ಹೊರತು, ಯಾವುದೇ ಬೀದಿಯಲ್ಲಿ ರಂಧ್ರವನ್ನು ಮಾಡತಕ್ಕದ್ದಲ್ಲ ಅಥವಾ ಕಟ್ಟಡಕ್ಕಾಗಿ ಬಳಸಿದ ಅಥವಾ ಬಳಸಲು ಉದ್ದೇಶಿಸಿದ ಯಾವುದೇ ಮರಮುಟ್ಟು, ಕಲ್ಲು, ಇಟ್ಟಿಗೆ, ಮಣ್ಣು ಅಥವಾ ಸಾಮಗ್ರಿಯನ್ನು ಅದರ ಮೇಲೆ ನಿಲ್ಲಿಸತಕ್ಕದ್ದಲ್ಲ ಅಥವಾ ಇಡತಕ್ಕದ್ದಲ್ಲ, ಮತ್ತು ಮುನ್ಸಿಪಲ್ ಕೌನ್ಸಿಲ್ ತನ್ನ ವಿವೇಚನಾನುಸಾರ ಅಂಥ ಅನುಮತಿಯನ್ನು ಕೊನೆಗೊಳಿಸತಕ್ಕದ್ದು ಮತ್ತು ಅಂಥ ಅನುಮತಿಯನ್ನು ಯಾರೇ ವ್ಯಕ್ತಿಗೆ ಮಂಜೂರು ಮಾಡಿದಾಗ ಅವನು ತನ್ನ ಸ್ವಂತ ವೆಚ್ಚದಲ್ಲಿ ಮುನ್ಸಿಪಲ್ ಕೌನ್ಸಿಲ್‌ಗೆ ಮನವರಿಕೆಯಾಗುವಂತೆ ಸಾಮಗ್ರಿಗಳನ್ನು ತೆಗೆದುಹಾಕುವವರೆಗೆ ಅಥವಾ ರಂಧ್ರವನ್ನು ಮುಚ್ಚುವವರೆಗೆ ಅಥವಾ ಅನ್ಯಥಾ ಭದ್ರಪಡಿಸುವವರೆಗೆ ಅಂಥ ಸಾಮಗ್ರಿಗಳಿಗೆ ಅಥವಾ ಅಂಥ ರಂಧ್ರಕ್ಕೆ ಸಾಕಷ್ಟು ಬೇಲಿ ಹಾಕಿಸತಕ್ಕದ್ದು ಮತ್ತು ಆವೃತಗೊಳಿಸುವಂತೆ ಮಾಡತಕ್ಕದ್ದು ಮತ್ತು ರಾತ್ರಿ ಕಾಲದಲ್ಲಿ ಅಲ್ಲಿ ಸಾಕಷ್ಟು ಬೆಳಕು ಇರುವಂತೆ ಏರ್ಪಾಟು ಮಾಡತಕ್ಕದ್ದು.

(2) ಉಪಪ್ರಕರಣ (1) ರ ಯಾವುದೇ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ಆಗಲಿ, ಇಪ್ಪತ್ತೈದು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ಮೊದಲ ಬಾರಿಗೆ ಅಪರಾಧ ನಿರ್ಣಯವಾದ ದಿನಾಂಕದ ತರುವಾಯ ಅಂಥ ಉಲ್ಲಂಘನೆ ಮುಂದುವರಿಯುವ ಸಂದರ್ಭಾನುಸಾರ ಪ್ರತಿಯೊಂದು ಹಗಲಿಗೆ ಅಥವಾ ರಾತ್ರಿಗೆ ಹತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

220. ಅಸಾಧಾರಣ ಸಂಚಾರದಿಂದಾಗಿ ಉಂಟಾದ ವೆಚ್ಚಗಳನ್ನು ವಸೂಲ್ಮಾಡಲು ಮುನ್ಸಿಪಲ್ ಕೌನ್ಸಿಲ್ ನ ಅಧಿಕಾರ.- ಸರ್ಕಾರದ ಲೋಕೋಪಯೋಗಿ ಇಲಾಖೆಯ ಎಕ್ಸಿಕ್ಯೂಟೀವ್ ಇಂಜಿನಿಯರ್ ನ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಅಧಿಕಾರಿಯು ನೀಡಿದ ಪ್ರಮಾಣಪತ್ರದಿಂದ,

ನೆರೆಹೊರೆಯಲ್ಲಿರುವ ರಸ್ತೆಗಳ ದುರಸ್ತಿಗೆ ಆಗುವ ಸರಾಸರಿ ವೆಚ್ಚಕ್ಕಿಂತಲೂ, ಬೀದಿಗುಂಟ ಅಧಿಕ ಭಾರವು ಹಾಯುವುದರಿಂದಾಗಿ ಅಥವಾ ಅದರ ಬೀದಿಗುಂಟ ಅಸಾಧಾರಣ ಸಂಚಾರದಿಂದಾಗಿ ಬೀದಿಯನ್ನು ದುರಸ್ತಿ ಮಾಡಲು ಮುನ್ಸಿಪಲ್ ಕೌನ್ಸಿಲ್ ಅಸಾಧಾರಣ ವೆಚ್ಚವನ್ನು ವಹಿಸಿದೆಯೆಂದು ಮುನ್ಸಿಪಲ್ ಕೌನ್ಸಿಲ್‌ಗೆ ಕಂಡುಬಂದರೆ, ಅಂಥ ಭಾರವನ್ನು ಅಥವಾ ಸಂಚಾರವನ್ನು ಯಾವ ವ್ಯಕ್ತಿಯ ಸೂಚನೆ ಮೇರೆಗೆ ಅಥವಾ ಸೂಚನೆ ಪರಿಣಾಮವಾಗಿ ಹಾಯಿಸಲಾಯಿತೋ ಆ ವ್ಯಕ್ತಿಯಿಂದ ಹಿಂದೆ ಹೇಳಿದಂತೆ ಅಂಥ ಭಾರವನ್ನು ಹಾಯಿಸಿದ್ದರಿಂದ ಅಥವಾ ಸಂಚಾರದಿಂದ ಉಂಟಾದ ಹಾನಿ ನಿಮಿತ್ತ ಅಧಿಕಾರವ್ಯಾಪ್ತಿಯುಳ್ಳ ನ್ಯಾಯಾಲಯದಲ್ಲಿ ಅಂಥ ಕೌನ್ಸಿಲ್ ವಹಿಸಿದ ವೆಚ್ಚಗಳ ಮೊಬಲಗಿನ ಬಗ್ಗೆ ಆ ನ್ಯಾಯಾಲಯಕ್ಕೆ ಮನವರಿಕೆಯಾಗುವಂತೆ ರುಜುವಾತುಪಡಿಸಿ ವಸೂಲ್ಮಾಡಬಹುದು:

ಪರಂತು, ಈ ಪ್ರಕರಣದ ಮೇರೆಗೆ ಯಾವ ವ್ಯಕ್ತಿಯಿಂದ ವೆಚ್ಚಗಳನ್ನು ವಸೂಲಿ ಮಾಡಬೇಕಾಗಿದೆಯೋ ಅಥವಾ ವಸೂಲಿ ಮಾಡಬಹುದಾಗಿದೆಯೋ, ಆ ಯಾರೇ ವ್ಯಕ್ತಿಯು ಅಂಥ ಭಾರಕ್ಕೆ ಅಥವಾ ಸಂಚಾರಕ್ಕೆ ಸಂಬಂಧಿಸಿದಂತೆ ರಾಜಿಯ ಮೂಲಕ ಯಾವುದೇ ಮೊಬಲಗನ್ನು ಮುನ್ಸಿಪಲ್ ಕೌನ್ಸಿಲ್ ಗೆ ಸಂದಾಯ ಮಾಡಲು ಮುನ್ಸಿಪಲ್ ಕೌನ್ಸಿಲ್‌ನೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳಬಹುದು ಮತ್ತು ಆ ತರುವಾಯ ಹಾಗೆ ಸಂದಾಯ ಮಾಡುವ ವ್ಯಕ್ತಿಯು, ಈ ಪ್ರಕರಣದ ಮೇರೆಗಿನ ಯಾವುದೇ ವ್ಯವಹರಣೆಗಳಿಗೊಳಪಡತಕ್ಕದ್ದಲ್ಲ.

221. ಅಪಾಯಕಾರಿ ಕಲ್ಲುಗಣಿ ಕೆಲಸ.- ಯಾವುದೇ ಕಲ್ಲುಗಣಿಯನ್ನು ನಡೆಸುವುದು ಅಥವಾ ಯಾವುದೇ ಸ್ಥಳದಲ್ಲಿ ಭೂಮಿಯಿಂದ ಕಲ್ಲು, ಮಣ್ಣು ಅಥವಾ ಇತರ ಸಾಮಗ್ರಿಯನ್ನು ತೆಗೆಯುವುದು ಅದರ ನೆರೆಹೊರೆಯಲ್ಲಿ ಅಥವಾ ಅದಕ್ಕೆ ಕಾನೂನುಸಮ್ಮತ ಪ್ರವೇಶಾವಕಾಶವನ್ನು ಹೊಂದಿರುವ ವ್ಯಕ್ತಿಗಳಿಗೆ ಅಪಾಯಕಾರಿಯೆಂದು ಅಥವಾ ಉಪದ್ರವವುಂಟು ಮಾಡುತ್ತದೆಂದು ಅಥವಾ ಉಂಟುಮಾಡುವ ಸಂಭವವಿದೆಯೆಂದು ಮುನ್ಸಿಪಲ್ ಕೌನ್ಸಿಲ್ ಅಭಿಪ್ರಾಯಪಟ್ಟರೆ, ಮುನ್ಸಿಪಲ್ ಕೌನ್ಸಿಲ್ ಬರಹದಲ್ಲಿ ನೋಟೀಸಿನ ಮೂಲಕ ಸದರಿ ಕಲ್ಲುಗಣಿಯ ಅಥವಾ ಸ್ಥಳದ ಒಡೆಯನನ್ನು ಅಂಥ ಕೆಲಸಕ್ಕೆ ಅಥವಾ ತೆಗೆಯುವುದಕ್ಕೆ ಜವಾಬ್ದಾರನಾದ ವ್ಯಕ್ತಿಯನ್ನು ಅಂಥ ಕಲ್ಲುಗಣಿಯ ಕೆಲಸವನ್ನು ಅಥವಾ ಅಂಥ ಸಾಮಗ್ರಿಯನ್ನು ತೆಗೆಯುವುದನ್ನು ಮುಂದುವರಿಸದಿರಲು ಅಥವಾ ಅನುಮತಿಸದಿರಲು ಅಥವಾ ಅದರಿಂದ ಉಂಟಾಗುವ ಅಥವಾ ಉಂಟಾಗುವ ಸಂಭವವಿರುವ ಅಪಾಯವನ್ನು ತಡೆಗಟ್ಟುವ ಅಥವಾ ಉಪದ್ರವವನ್ನು ಉಪಶಮನಗೊಳಿಸುವ ಉದ್ದೇಶಕ್ಕಾಗಿ ಮುನ್ಸಿಪಲ್ ಕೌನ್ಸಿಲ್ ನಿರ್ದೇಶಿಸುವಂತೆ ಅಂಥ ಕಲ್ಲುಗಣಿಗೆ ಅಥವಾ ಸ್ಥಳಕ್ಕೆ ಸಂಬಂಧಿಸಿದಂತೆ ವ್ಯವಸ್ಥೆಯನ್ನು ಮಾಡಲು ಅಗತ್ಯಪಡಿಸಬಹುದು:

ಪರಂತು, ಅಂಥ ಕಲ್ಲುಗಣಿಯು ಅಥವಾ ಸ್ಥಳವು ಸರ್ಕಾರದಲ್ಲಿ ನಿಹಿತವಾಗಿದ್ದರೆ ಅಥವಾ ಹಿಂದೆ ಹೇಳಿದಂತೆ ಅದರ ಅಂಥ ಕೆಲಸವನ್ನು ಅಥವಾ ಅದರಿಂದ ತೆಗೆಯುವುದನ್ನು ಸರ್ಕಾರದ ಅಥವಾ ಆ ಕಾರ್ಯ ನಿರ್ವಹಿಸುತ್ತಿರುವ ಸರ್ಕಾರದ ಯಾರೇ ಅಧಿಕಾರಿಯ ಅನುಮತಿ ಪ್ರಕಾರ ಅಥವಾ ಅಧಿಕಾರದ ಮೇರೆಗೆ ನಿರ್ವಹಿಸುತ್ತಿರುವ ಯಾರೇ ವ್ಯಕ್ತಿಯು ನಡೆಸುತ್ತಿದ್ದರೆ ಮುನ್ಸಿಪಲ್ ಕೌನ್ಸಿಲ್ ಹಾಗೆ ಮಾಡಲು ಮುನ್ಸಿಪಲ್ ಕೌನ್ಸಿಲ್‌ಗೆ ಡೆಪ್ಯೂಟಿ ಕಮಿಷನರ್ ನು ಸಮ್ಮತಿಸದ ಹೊರತು ಮತ್ತು ಅಲ್ಲಿಯವರೆಗೆ ಅಂಥ ಕ್ರಮವನ್ನು ಕೈಗೊಳ್ಳತಕ್ಕದ್ದಲ್ಲ:

ಮತ್ತು ಪರಂತು, ಈ ಪ್ರಕರಣದಲ್ಲಿ ಹೇಳಿರುವ ಯಾವುದೇ ಸಂದರ್ಭದಲ್ಲಿ ಸನ್ನಿಹಿತ ಅಪಾಯವನ್ನು ತಡೆಗಟ್ಟುವುದಕ್ಕಾಗಿ ಮುನ್ಸಿಪಲ್ ಕೌನ್ಸಿಲ್ ಅವಶ್ಯವೆಂದು ಅದಕ್ಕೆ ಕಂಡುಬಂದರೆ ಅಂಥ ಕಲ್ಲುಗಣಿಯ ಅಥವಾ ಸ್ಥಳದ ಹತ್ತಿರ ಪ್ರಯಾಣಿಕರ ಸಂರಕ್ಷಣೆಗಾಗಿ ಸರಿಯಾದ ಹಲಗೆ ಬೇಲಿಯನ್ನು ಅಥವಾ ಬೇಲಿಯನ್ನು ಕೂಡಲೇ ಹಾಕಿಸತಕ್ಕದ್ದು ಮತ್ತು ಈ ಪ್ರಕರಣದ ಮೇರೆಗೆ ಕ್ರಮವನ್ನು ಕೈಗೊಳ್ಳುವಾಗ, ಮುನ್ಸಿಪಲ್ ಕೌನ್ಸಿಲ್ ವಹಿಸಿದ ಯಾವುದೇ ವೆಚ್ಚವನ್ನು ಹಿಂದೆ ಹೇಳಿದಂಥ ಒಡೆಯನು ಅಥವಾ ಇತರ ವ್ಯಕ್ತಿಯು ಸಂದಾಯ ಮಾಡತಕ್ಕದ್ದು. VIIನೇ ಅಧ್ಯಾಯದ ಮೇರೆಗೆ ಯಾವುದೇ ತೆರಿಗೆಯ ಮೊತ್ತವನ್ನು ಕ್ಲೇಮು ಮಾಡಿದಾಗ ವಸೂಲಿ ಯಾವ ರೀತಿಯಲ್ಲಿ ಮಾಡಬಹುದೋ ಅದೇ ರೀತಿಯಲ್ಲಿ ವಸೂಲಿ ಮಾಡತಕ್ಕದ್ದು.

222. ನಾಯಿಗಳ ಬಗ್ಗೆ ಮುನ್ನೇರ್ಪಾಡು.- (1) ಯಾವುದೇ ನಾಯಿ, ಬೀದಿಗಳಲ್ಲಿರುವಾಗ ಮತ್ತು ಯಾರೇ ವ್ಯಕ್ತಿಯು ಅದನ್ನು ಕರೆದೊಯ್ಯದಿರುವಾಗ ಅದು ಯಾರನ್ನಾದರೂ ಕಚ್ಚದಂತೆ ತಡೆಗಟ್ಟಲು, ಅದು ಸರಾಗವಾಗಿ ಉಸಿರಾಡಲು ಮತ್ತು ಕುಡಿಯಲು ಅವಕಾಶವಿರುವ ರೀತಿಯಲ್ಲಿ

ಅದರ ಬಾಯಿಗೆ ಕುಕ್ಕೆ ಹಾಕುವಂತೆ ಯಾವ ರೀತಿಯಲ್ಲಿ ಮಾಡಬಹುದೋ ಆ ರೀತಿಯಲ್ಲಿ ಮುನ್ಸಿಪಲ್ ಕೌನ್ಸಿಲ್ ಸಾರ್ವಜನಿಕ ನೋಟೀಸಿನ ಮೂಲಕ, ಅಗತ್ಯಪಡಿಸಬಹುದು.

(2) ಉಪ-ಪ್ರಕರಣ (3) ರಲ್ಲಿ ಹೇಳಿರುವುದಕ್ಕೊಳಪಟ್ಟು ಮುನ್ಸಿಪಲ್ ಕೌನ್ಸಿಲ್, ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಬಾಯಿಗೆ ಕುಕ್ಕೆ ಇಲ್ಲದೇ ಅಲೆದಾಡುತ್ತಿರುವ ಯಾವುದೇ ನಾಯಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬಹುದು ಮತ್ತು ಅದರ ಒಡೆಯನು ಅದನ್ನು ಕ್ಲೇಮು ಮಾಡುವ, ಅದಕ್ಕೆ ಸರಿಯಾದ ಕುಕ್ಕೆಯನ್ನು ಒದಗಿಸುವ, ಮತ್ತು ಅದನ್ನು ತಡೆಹಿಡಿದಿಟ್ಟುಕೊಳ್ಳುವ ಬಗೆಗಿನ ಎಲ್ಲ ವೆಚ್ಚಗಳನ್ನು ಸಂದಾಯ ಮಾಡುವವರೆಗೆ ಅಂಥ ನಾಯಿಯನ್ನು ತಡೆಹಿಡಿದಿಟ್ಟುಕೊಳ್ಳಬಹುದು ಅಥವಾ ಅದನ್ನು ನಾಶಪಡಿಸುವಂತೆ ಮಾಡಬಹುದು.

(3) ಉಪ-ಪ್ರಕರಣ (2) ರ ಮೇರೆಗೆ ತಡೆಹಿಡಿದಿಟ್ಟುಕೊಂಡಿರುವ ನಾಯಿಯ ಒಡೆಯನ ಹೆಸರು ಮತ್ತು ವಿಳಾಸ ಕುತ್ತಿಗೆಗೆ ಕಟ್ಟಿರುವ ಕೊರಳ ಪಟ್ಟಿಯ ಮೇಲೆ ಇದ್ದರೆ, ಅಂಥ ನಾಯಿಯನ್ನು ಹಾಗೆ ತಡೆ ಹಿಡಿದಿಟ್ಟುಕೊಂಡಿರುವ ಸಂಗತಿಯನ್ನು ಮತ್ತು ಆ ನಾಯಿಯನ್ನು ಅದು ತಮ್ಮದೆಂದು ಯಾರೂ ಸ್ಪಷ್ಟ ಮೂರು ದಿವಸಗಳವರೆಗೆ ಕ್ಲೇಮು ಮಾಡಿಲ್ಲವೆಂದು ಮತ್ತು ಆ ಬಗ್ಗೆ ತಿಳಿಸುವ ಪತ್ರವನ್ನು ಸದರಿ ವಿಳಾಸಕ್ಕೆ ಕಳುಹಿಸುವವರೆಗೆ ಅಂಥ ನಾಯಿಯನ್ನು ನಾಶಪಡಿಸತಕ್ಕದ್ದಲ್ಲ:

ಪರಂತು, ಹುಚ್ಚು ಹಿಡಿದಿರುವುದಾಗಿ ಕಂಡುಬಂದಂಥ ಯಾವುದೇ ನಾಯಿಯನ್ನು ಯಾವುದೇ ಕಾಲದಲ್ಲಿ ನಾಶಪಡಿಸಬಹುದು.

(4) ಕ್ಲೇಮು ಮಾಡಿಲ್ಲದ ಯಾವುದೇ ನಾಯಿಯನ್ನು ಮತ್ತು ಯಾವುದೇ ನಾಯಿಯನ್ನು ಒಡೆಯನಿದ್ದೂ, ತಡೆ ಹಿಡಿದಿಟ್ಟುಕೊಂಡಿರುವುದಕ್ಕೆ ತಗುಲಿದ ವೆಚ್ಚಗಳನ್ನು ಅವನು ಸಂದಾಯ ಮಾಡಲು ನಿರಾಕರಿಸಿದರೆ ಮೂರು ಸ್ಪಷ್ಟ ದಿವಸಗಳ ಸದರಿ ಅವಧಿಗೆ ತಡೆಹಿಡಿದಿಟ್ಟುಕೊಂಡಿದ್ದಾದ ಮೇಲೆ ತರುವಾಯ ಆ ನಾಯಿಯನ್ನು ಮಾರಾಟ ಮಾಡಬಹುದು ಅಥವಾ ನಾಶಪಡಿಸಬಹುದು.

(5) ಈ ಪ್ರಕರಣದ ಮೇರೆಗೆ ಮುನ್ಸಿಪಲ್ ಕೌನ್ಸಿಲ್ ವಹಿಸಿದ ಎಲ್ಲ ವೆಚ್ಚಗಳನ್ನು ಯಾವ ನಾಯಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆಯೋ ಅಥವಾ ತಡೆಹಿಡಿದಿಟ್ಟುಕೊಳ್ಳಲಾಗಿತ್ತೋ ಆ ಯಾವುದೇ ನಾಯಿಯ ಒಡೆಯನಿಂದ VII ನೇ ಅಧ್ಯಾಯದಲ್ಲಿ ಹೇಳಿರುವ ರೀತಿಯಲ್ಲಿ ವಸೂಲು ಮಾಡಿಕೊಳ್ಳಬಹುದು.

(6) ಈ ಪ್ರಕರಣದ ಮೇರೆಗೆ ನಾಶಪಡಿಸಿದ ಯಾವುದೇ ನಾಯಿಗೆ ಸಂಬಂಧಿಸಿದಂತೆ ಯಾವುದೇ ಹಾನಿಪರಿಹಾರವನ್ನು ಸಂದಾಯ ಮಾಡತಕ್ಕದ್ದಲ್ಲ.

223. ಹಂದಿಗಳನ್ನು ಸಾಕುವ ಬಗ್ಗೆ ನಿಬಂಧನೆ.- (1) [1][ಮುನ್ಸಿಪಲ್ ಏರಿಯಾ][1]ದ ಎಲ್ಲೆಗಳ ಒಳಗೆ ಹಂದಿಗಳನ್ನು ಸಾಕುವುದರಿಂದ ಸಾರ್ವಜನಿಕರಿಗೆ ಉಪದ್ರವ ಅಥವಾ ಕಿರುಕುಳ ಉಂಟಾಗುತ್ತದೆಂದು ಯಾವುದೇ ಕಾಲದಲ್ಲಿ ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನಿಗೆ ಕಂಡುಬಂದರೆ ಮುನ್ಸಿಪಲ್ ಕಮೀಷನರ್ ಅಥವಾ ಚೀಫ್ ಆಫೀಸರ್ ನು ಸಾರ್ವಜನಿಕ ನೋಟೀಸಿನ ಮೂಲಕ ಬರಹದಲ್ಲಿ ಅವರ ಅನುಮತಿಯಿಲ್ಲದೆ ಅಥವಾ ಅಂಥ ಅನುಮತಿಯ ನಿಬಂಧನೆಗಳಿಗೆ ಅನುಸಾರವಾಗಿ ಹೊರತು ಅನ್ಯಥಾ [1][ಮುನ್ಸಿಪಲ್ ಏರಿಯಾ][1]ದ ಯಾವುದೇ ಭಾಗದಲ್ಲಿ ಯಾವುವೇ ಹಂದಿಗಳನ್ನು ಸಾಕತಕ್ಕದ್ದಲ್ಲವೆಂದು ನಿರ್ದೇಶಿಸಬಹುದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಅಂಥ ನಿರ್ದೇಶನದ ತರುವಾಯ, ಹಿಂದೆ ಹೇಳಿದಂತೆ ಅಗತ್ಯಪಡಿಸಿದ ಅನುಮತಿಯಿಲ್ಲದೆ ಅಥವಾ ಅನುಮತಿಯ ನಿಬಂಧನೆಗಳಿಗೆ ಅನುಸಾರವಾಗಿ ಹೊರತು ಅನ್ಯಥಾ ಮುನ್ಸಿಪಾಲಿಟಿಯ ಎಲ್ಲೆಗಳ ಒಳಗೆ ಯಾವುದೇ ಸ್ಥಳದಲ್ಲಿ ಯಾವುವೇ ಹಂದಿಗಳನ್ನು ಸಾಕುವ ಯಾರೇ ಆಗಲಿ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(3) ಅಲೆದಾಡುತ್ತಿರುವುದಾಗಿ ಕಂಡುಬಂದ ಯಾವುವೇ ಹಂದಿಗಳನ್ನು ತತ್‌ಕ್ಷಣವೇ ನಾಶಪಡಿಸಬಹುದು ಮತ್ತು ಅವುಗಳ ಹೆಣಗಳನ್ನು ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನು ನಿರ್ದೇಶಿಸುವ ಪ್ರಕಾರವೇ ವಿಲೆ ಮಾಡಬಹುದು. ಹಾಗೆ ನಾಶಪಡಿಸಿದ ಯಾವುದೇ ಹಂದಿಗಳ ಬಗ್ಗೆ ನಷ್ಟಪರಿಹಾರಕ್ಕಾಗಿ ಯಾವುದೇ ಕ್ಲೇಮು ಇರತಕ್ಕದ್ದಲ್ಲ.

ಉಪದ್ರವವನ್ನು ತಡೆಗಟ್ಟಲು ಅಧಿಕಾರಗಳು

224. ಧೂಳು ಇತ್ಯಾದಿಗಳನ್ನು ತಂದು ಹಾಕುವುದು.- (1) ಮುನ್ಸಿಪಲ್ ಕೌನ್ಸಿಲ್ ಗೊತ್ತುಪಡಿಸುವಂತಹ ಸ್ಥಳದಲ್ಲಿ, ರೀತಿಯಲ್ಲಿ ಮತ್ತು ಅಂಥ ಕಾಲಗಳಲ್ಲಿ ಹೊರತುಪಡಿಸಿ,

ಯಾವುದೇ ಬೀದಿಯಲ್ಲಿ ಅಥವಾ ಬೀದಿಯ ಕೆಳಗಿನ ಯಾವುದೇ ಕಮಾನಿನಲ್ಲಿ ಅಥವಾ ಬೀದಿಯ ಬದಿಯ ಯಾವುದೇ ಚರಂಡಿಯಲ್ಲಿ ಅಥವಾ ಯಾವುದೇ ಬಹಿರಂಗ ಜಾಗದ ಮೇಲೆ ಅಥವಾ ಯಾವುದೇ ನದಿಯ ಜಲಮಾರ್ಗದ ಅಥವಾ ನಾಲೆಯ ದಂಡೆಯ ಮೇಲೆ ಉಪದ್ರವಕಾರಿಯಾಗಿರುವ ಅಥವಾ ಉಪದ್ರವಕಾರಿಯಾಗಬಹುದಾದ ಯಾವುದೇ ಧೂಳನ್ನು, ಕೊಳೆಯನ್ನು, ಸಗಣಿಯನ್ನು ಅಥವಾ ಬೂದಿಯನ್ನು ಅಥವಾ ತೋಟದ ಅಡುಗೆಮನೆಯ ಅಥವಾ ಲಾಯದ ಕಸಕಡ್ಡಿಯನ್ನು ಅಥವಾ ಯಾವುದೇ ಬಗೆಯ ಹೊಲಸನ್ನು ಅಥವಾ ಯಾವುದೇ ಪ್ರಾಣಿಯ ಹೊಲಸು ವಸ್ತುವನ್ನು ಅಥವಾ ಯಾವುದೇ ಒಡೆದ ಗಾಜನ್ನು ಅಥವಾ ಮಣ್ಣಿನ ಪಾತ್ರೆಯ ಚೂರನ್ನು ಅಥವಾ ಇತರ ಕಸಕುಪ್ಪೆಯನ್ನು ಅಥವಾ ಇತರ ವಸ್ತುವನ್ನು ತಂದು ಹಾಕುವ ಅಥವಾ ಕುಟುಂಬದ ಅಥವಾ ಮನೆಯ ಯಾರೇ ಸದಸ್ಯನು ತಂದು ಹಾಕುವಂತೆ ಮಾಡುವ ಅಥವಾ ತಂದು ಹಾಕಲು ಆಸ್ಪದ ಕೊಡುವ ಯಾರೇ ಆಗಲಿ ಮತ್ತು ಹಿಂದೆ ಹೇಳಿದಂತೆ ಯಾವುದೇ ಅಂಥ ಸ್ಥಳದಲ್ಲಿ ಉಪದ್ರವ ಉಂಟು ಮಾಡುವ ಅಥವಾ ತನ್ನ ಕುಟುಂಬದ ಯಾರೇ ಸದಸ್ಯನು ಹಾಗೆ ಮಾಡಲು ಆಸ್ಪದ ಕೊಡುವ ಯಾರೇ ಆಗಲಿ ಇಪ್ಪತ್ತೈದು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ಮೇಲೆ ವಿವರಿಸಿರುವಂತಹ ಯಾವುದೇ ವಸ್ತುವನ್ನು ಎಸೆಯುವ ಅಥವಾ ಹಾಕುವ ಅಥವಾ ತನ್ನ ಕುಟುಂಬದ ಅಥವಾ ಮನೆಯ ಯಾರೇ ವ್ಯಕ್ತಿಯು ಎಸೆಯುವಂತೆ ಅಥವಾ ಹಾಕುವಂತೆ ಮಾಡುವ, ಮಾಡಲು ಆಸ್ಪದ ಮಾಡಿಕೊಡುವ ಅಥವಾ ಮುನ್ಸಿಪಲ್ ಕೌನ್ಸಿಲ್ ನ ಅನುಮತಿ ಇಲ್ಲದೇ ಯಾವುದೇ ಮಲವನ್ನು ಯಾವುದೇ ಗ್ರಾಮಸಾರ ಚರಂಡಿ, ಅಡಿಗಾಲುವೆ, ಸುರಂಗ, ಮೋರಿ ಅಥವಾ ಜಲಮಾರ್ಗದೊಳಕ್ಕೆ ಎಸೆಯುವ ಅಥವಾ ಚರಂಡಿಗೆ ಹಾಕುವ ಅಥವಾ ಅವನ ಕುಟುಂಬದ ಅಥವಾ ಅವನ ಮನೆಯ ಯಾರೇ ವ್ಯಕ್ತಿಯು ಎಸೆಯುವಂತೆ ಅಥವಾ ಹಾಕುವಂತೆ ಮಾಡುವ ಅಥವಾ ಮಾಡಲು ಆಸ್ಪದ ಕೊಡುವ ಯಾರೇ ಆಗಲಿ ಮತ್ತು ಅಂಥ ಯಾವುದೇ ಚರಂಡಿ ಅಡಿಗಾಲುವೆ ಸುರಂಗ ಮಾರ್ಗ, ಅಥವಾ ಜಲಮಾರ್ಗದಲ್ಲಿ ಅಥವಾ ಅದನ್ನು ಕಲುಷಿತಗೊಳಿಸುವ ಹಾಗೆ ಅದಕ್ಕೆ ಅತೀ ಸಮೀಪದಲ್ಲಿ ಹೇಸಿಕೆಯನ್ನು ಮಾಡುವ ಅಥವಾ ಅವನ ಕುಟುಂಬದ ಯಾರೇ ವ್ಯಕ್ತಿಯು ಹೇಸಿಕೆಯನ್ನು ಮಾಡಲು ಆಸ್ಪದ ಮಾಡಿಕೊಡುವ ಯಾರೇ ಆಗಲಿ ಇಪ್ಪತ್ತೈದು ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

225. ಗ್ರಾಮಸಾರ ಇತ್ಯಾದಿಯನ್ನು ಹೊರಬಿಡುವುದು, ಇತ್ಯಾದಿ.- ತನ್ನ ನಿಯಂತ್ರಣದಲ್ಲಿರುವ ಯಾವುದೇ [1][ಕಟ್ಟಡದಿಂದ ಅಥವಾ ಖಾಲಿಭೂಮಿ][1]ಯಿಂದ ಮುನ್ಸಿಪಲ್ ಕೌನ್ಸಿಲ್ ನಿಂದ ಬರಹದಲ್ಲಿ ಅನುಮತಿಯಿಲ್ಲದೆ ಯಾವುದೇ ಬಚ್ಚಲುಗುಂಡಿಯ ಅಥವಾ ಗ್ರಾಮಸಾರ ಚರಂಡಿಯ ನೀರನ್ನು ಅಥವಾ ಅಸಹ್ಯಕರವಾಗಿರುವ ಅಥವಾ ಅಸಹ್ಯಕರವಾಗಬಹುದಾದ ಸಂಭವವಿರುವಂಥ ಯಾವುದೇ ಇತರ ದ್ರವವನ್ನು ಅಥವಾ ಇತರ ವಸ್ತುವನ್ನು ಯಾವುದೇ ಬೀದಿಯಲ್ಲಿ ಅಥವಾ ಬಹಿರಂಗ ಜಾಗದಲ್ಲಿ ಹರಿಯುವಂತೆ, ಬಸಿದುಹೋಗುವಂತೆ, ಎಸೆಯುವಂತೆ ಅಥವಾ ಮೇಲೆ ಹಾಕಲು ಅಥವಾ ಯಾವುದೇ ಹೊರಗೋಡೆಯ ಮೂಲಕ ತೊಯ್ದುಹೋಗುವಂತೆ ಅಥವಾ ಯಾವುದೇ ಬೀದಿಯಲ್ಲಿ, ಬೀದಿಯ ಮೇಲೆ ಚರಂಡಿಯೊಳಕ್ಕೆ ಯಾವುದೇ ಗ್ರಾಮಸಾರ ಚರಂಡಿಯಿಂದ ಅಥವಾ ಶೌಚಾಲಯದಿಂದ ಯಾವುದೇ ಅಸಹ್ಯಕರವಾದ ವಸ್ತುವನ್ನು ಹರಿಯುವಂತೆ, ಬಸಿಯುವಂತೆ ಅಥವಾ ಎಸೆಯುವಂತೆ ಮಾಡುವ ಅಥವಾ ಅವಕಾಶ ಕೊಡುವ ಅಥವಾ ಅಂಥ ಅನುಮತಿಯಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ಷರತ್ತನ್ನು ಪಾಲಿಸಲು ತಪ್ಪುವ ಯಾರೇ ಆಗಲಿ ಇಪ್ಪತ್ತೈದು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

1.2003ರ ಅಧಿನಿಯಮ 31ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

226. ಹೊಲಸು ಇತ್ಯಾದಿಯನ್ನು ತೆಗೆದುಹಾಕದೇ ಇರುವುದು.- ಸಗಣಿಯನ್ನು, ಮೂಳೆಗಳನ್ನು, ಬೂದಿಯನ್ನು, ಮಲವನ್ನು, ಹೊಲಸನ್ನು ಅಥವಾ ಯಾವುದೇ ಹಾನಿಕಾರಕ ಅಥವಾ ಅಸಹ್ಯಕಾರಿ ವಸ್ತುವನ್ನು ಇಪ್ಪತ್ನಾಲ್ಕು ಗಂಟೆಗಳಿಗಿಂತ ಹೆಚ್ಚಾಗಿ ಯಾವುದೇ ಧಾರಕದಲ್ಲಿ ಹೊರತು ಅನ್ಯಥಾ [1][ಕಟ್ಟಡದಲ್ಲಿ ಅಥವಾ ಖಾಲಿಭೂಮಿ][1] ಯಲ್ಲಿ ಅಥವಾ ಅದರ ಮೇಲೆ ಇಡುವ ಅಥವಾ ಇಟ್ಟುಕೊಳ್ಳಲು ಅವಕಾಶ ಕೊಡುವ ಅಥವಾ ಅಂಥ ಧಾರಕವನ್ನು ಹೊಲಸು ಅಥವಾ ಹಾನಿಕಾರಕ ಸ್ಥಿತಿಯಲ್ಲಿಡಲು ಆಸ್ಪದಕೊಡುವ ಅಥವಾ ಅಂಥ ಧಾರಕದಿಂದ ಹೊಲಸನ್ನು ತೆಗೆದುಹಾಕಲು ಮತ್ತು ಅದನ್ನು ಸ್ವಚ್ಛಗೊಳಿಸಲು ಮತ್ತು ಶುದ್ಧಗೊಳಿಸಲು ಸೂಕ್ತಸಾಧನಗಳನ್ನು ಮತ್ತು ಅದನ್ನು

ಸ್ವಚ್ಛಗೊಳಿಸಿ, ಬಳಸಲು ನಿರ್ಲಕ್ಷಿಸುವ ಅಥವಾ ಅಂಥ [1][ಕಟ್ಟಡದಲ್ಲಿ ಅಥವಾ ಖಾಲಿಭೂಮಿ][1]ಯಲ್ಲಿ ಅಥವಾ ಅದರ ಮೇಲೆ ಉಪದ್ರವವುಂಟು ಮಾಡುವ ರೀತಿಯಲ್ಲಿ ಯಾವುದೇ ಪ್ರಾಣಿಯನ್ನು ಸಾಕಲು ಅಥವಾ ಸಾಕಲು ಅವಕಾಶ ಮಾಡಿಕೊಡುವ ಯಾವುದೇ [1][ಕಟ್ಟಡದ ಅಥವಾ ಖಾಲಿಭೂಮಿ][1]ಯ ಒಡೆಯನಾಗಿರುವ ಅಥವಾ ಅಧಿಭೋಗದಾರನಾಗಿರುವ ಯಾರೇ ಆಗಲಿ ಅವನು ಇಪ್ಪತ್ತೈದು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಮತ್ತು ಮೊದಲ ಬಾರಿಗೆ ಅಪರಾಧವು ನಿರ್ಣಯವಾದ ದಿನಾಂಕದ ತರುವಾಯ ಮುಂದುವರೆಯುವಂಥ ಪ್ರತಿಯೊಂದು ದಿವಸಕ್ಕೂ ಅಂಥ ಅಪರಾಧಿಯು ಐದು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

1.2003ರ ಅಧಿನಿಯಮ 31ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

227. ಮಲವನ್ನು ತೆಗೆದುಹಾಕುವುದು.- (1) ಯಾವುದೇ ಮಲವನ್ನು ಅಥವಾ ಇತರ ಅಸಹ್ಯಕರ ವಸ್ತುವನ್ನು ಯಾವ ವೇಳೆಗಳಲ್ಲಿ ಮಾತ್ರವೇ ತೆಗೆದುಹಾಕುವುದು ಕಾನೂನು ಸಮ್ಮತವೋ ಆ ವೇಳೆಗಳನ್ನು ಮುನ್ಸಿಪಲ್ ಕೌನ್ಸಿಲ್ ಕಾಲಕಾಲಕ್ಕೆ ನಿಗದಿಪಡಿಸಬಹುದು.

(2) ಯಾರೇ ಆಗಲಿ,-

(ಎ) ಮುನ್ಸಿಪಲ್ ಕೌನ್ಸಿಲ್ ಅಂಥ ವೇಳೆಗಳನ್ನು ಗೊತ್ತುಪಡಿಸಿರುವಾಗ ಮತ್ತು ಡಂಗೂರ ಸಾರುವುದರ ಮೂಲಕ ಅದರ ಸಾರ್ವಜನಿಕ ನೋಟೀಸನ್ನು ಪ್ರಕಟಪಡಿಸಿರುವಾಗ ಹಾಗೆ ನಿಗದಿಪಡಿಸಿದ ವೇಳೆಗಳಲ್ಲಿ ಹೊರತು ಯಾವುದೇ ಬೀದಿಯಗುಂಟ ಇರುವ ಅಂಥ ಯಾವುದೇ ಅಸಹ್ಯಕರ ವಸ್ತುವನ್ನು ಯಾವುದೇ ಕಾಲದಲ್ಲಿ ತೆಗೆದುಹಾಕಿದರೆ ಅಥವಾ ತೆಗೆದುಹಾಕಿಸಿದರೆ; ಅಥವಾ

(ಬಿ) ಮುನ್ಸಿಪಲ್ ಕೌನ್ಸಿಲ್ ಅಂಥ ವೇಳೆಗಳನ್ನು ನಿಗದಿಪಡಿಸಿರಲಿ ಅಥವಾ ಪಡಿಸದೇ ಇರಲಿ ಯಾವುದೇ ಕಾಲದಲ್ಲಿ;

(i) ಇಟ್ಟಿರುವುದು ಸೋರಿ ಹೋಗುವುದನ್ನು ತಡೆಗಟ್ಟುವುದಕ್ಕಾಗಿ ಮತ್ತು ಅದರಿಂದ ಹೊರಡುವ ದುರ್ಗಂಧವನ್ನು ತಡೆಗಟ್ಟುವುದಕ್ಕಾಗಿ ಸರಿಯಾದ ಮುಚ್ಚಳ ಇರದ ಆ ಯಾವುದೇ ಗಾಡಿಯನ್ನು, ವಾಹನವನ್ನು, ತೊಟ್ಟಿಯನ್ನು ಅಥವಾ ಧಾರಕವನ್ನು ಯಾವುದೇ ಅಂಥ ಉದ್ದೇಶಕ್ಕಾಗಿ ಬಳಸಿದರೆ; ಅಥವಾ

(ii) ಯಾವುದೇ ಅಂಥ ಅಸಹ್ಯಕರ ವಸ್ತುವನ್ನು ತೆಗೆದು ಹಾಕುವಾಗ ನಿರ್ಲಕ್ಷತೆಯಿಂದ ತುಳುಕಿದರೆ ಅಥವಾ ಚೆಲ್ಲಿದರೆ; ಅಥವಾ

(iii) ಯಾವುದೇ ಅಂಥ ಅಸಹ್ಯಕರ ವಸ್ತುವನ್ನು ತುಳುಕಿಸಿದ ಅಥವಾ ಚೆಲ್ಲಿದಂಥ ಪ್ರತಿಯೊಂದು ಸ್ಥಳವನ್ನು ಎಚ್ಚರಿಕೆಯಿಂದ ಗುಡಿಸದಿದ್ದರೆ ಅಥವಾ ಸ್ವಚ್ಛಗೊಳಿಸದಿದ್ದರೆ; ಅಥವಾ

(iv) ಅಂಥ ಅಸಹ್ಯಕರ ವಸ್ತುವನ್ನು ಒಳಗೊಂಡಿರುವ ಯಾವುದೇ ಧಾರಕವನ್ನು ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಇಟ್ಟರೆ ಅಥವಾ ಕೆಳಗಿಳಿಸಿದರೆ; ಅಥವಾ

(v) ಹಿಂದೆ ಹೇಳಿದಂತೆ ಯಾವುದೇ ಅಂಥ ಉದ್ದೇಶಕ್ಕಾಗಿ ಬಳಸಿದ ಯಾವುದೇ ಗಾಡಿಯನ್ನು, ವಾಹನವನ್ನು, ತೊಟ್ಟಿಯನ್ನು ಅಥವಾ ಧಾರಕವನ್ನು ಸಾರ್ವಜನಿಕ ನೋಟೀಸಿನ ಮೂಲಕ ಮುನ್ಸಿಪಲ್ ಕೌನ್ಸಿಲ್ ಆ ಉದ್ದೇಶಕ್ಕಾಗಿ ಕಾಲಕಾಲಕ್ಕೆ ಗೊತ್ತುಪಡಿಸಬಹುದಾದಂಥಹುದೇ ಬೇರೆ ಯಾವುದೇ ಬೀದಿಯ ಅಥವಾ ಯಾವುದೇ ಮಾರ್ಗದಲ್ಲಿ ಹೋಗುವಂತೆ ಮಾಡಿದರೆ ಅಥವಾ ತೆಗೆದುಕೊಂಡು ಹೋಗುವಂತೆ ಮಾಡಿದರೆ,

- ಇಪ್ಪತ್ತೈದು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

228. ಹೊಲಸು ಕಟ್ಟಡಗಳು, ಇತ್ಯಾದಿ.- (1) ಯಾವುದೇ [1][ಕಟ್ಟಡವು ಅಥವಾ ಖಾಲಿಭೂಮಿಯು][1] ವಾಸ ಯೋಗ್ಯವಾದುದಾಗಿರಲಿ ಅಥವಾ ಅನ್ಯಥಾ ಇರಲಿ ಆ ಯಾವುದೇ [1][ಕಟ್ಟಡದ ಅಥವಾ ಖಾಲಿಭೂಮಿ][1]ಯ ಒಡೆಯನು ಅಥವಾ ಅಧಿಭೋಗದಾರನಾಗಿರುವ ಯಾರೇ ಆಗಲಿ ಅದನ್ನು ಹೊಲಸು ಮತ್ತು ಅನಾರೋಗ್ಯ ಸ್ಥಿತಿಯಲ್ಲಿಡಲು ಆಸ್ಪದ ಮಾಡಿಕೊಟ್ಟಿದ್ದರೆ ಅಥವಾ ನೆರೆಹೊರೆಯಲ್ಲಿ ವಾಸಿಸುವ ವ್ಯಕ್ತಿಗಳಿಗೆ ಅದು ಉಪದ್ರವಕಾರಿಯಾಗಿದೆಯೆಂದು ಅಥವಾ ಪಾಪಾಸುಕಳ್ಳಿ ಅಥವಾ ಗಬ್ಬು ನಾತದ ಮತ್ತು ಹಾನಿಕಾರಕ ಸಸ್ಯಗಳು ನಿಬಿಡವಾಗಿ ಬೆಳೆಯಲು ಆಸ್ಪದ ಮಾಡಿಕೊಡಲಾಗಿದೆಯೆಂದು ಮುನ್ಸಿಪಲ್ ಕೌನ್ಸಿಲ್ ಅಭಿಪ್ರಾಯಪಟ್ಟರೆ ಮತ್ತು ಅದನ್ನು ಸ್ವಚ್ಛಗೊಳಿಸಲು, ಬರಿದು ಮಾಡಲು ಅಥವಾ ಅನ್ಯಥಾ ಅದನ್ನು ಸರಿಯಾದ ಸ್ಥಿತಿಯಲ್ಲಿ ಇಡಲು ಮುನ್ಸಿಪಲ್ ಕೌನ್ಸಿಲ್ ನಿಂದ ಬರಹದಲ್ಲಿ ನೋಟೀಸ್ ತಲುಪಿದ ತರುವಾಯವೂ ಯುಕ್ತ ಕಾಲದೊಳಗೆ ಅಂಥ ನೋಟೀಸಿನಲ್ಲಿ ಹೇಳಿರುವುದನ್ನು ಪಾಲಿಸದೇ ಇರುವ ಯಾರೇ ಆಗಲಿ ಇಪ್ಪತ್ತೈದು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ಮೊದಲ ಬಾರಿಗೆ ಅಪರಾಧ ನಿರ್ಣಯವಾದ ದಿನಾಂಕದ ತರುವಾಯ ಸದರಿ ನೋಟೀಸನ್ನು ಪಾಲಿಸಲು ತಪ್ಪುವುದು ಮುಂದುವರೆಯುವಂಥ ಪ್ರತಿಯೊಂದು ದಿವಸಕ್ಕೆ ಐದು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ಆ ಕಟ್ಟಡದ ಸ್ಥಿತಿಯು ಮನುಷ್ಯನ ವಾಸಕ್ಕೆ ಯೋಗ್ಯವಾದುದಾಗಿಲ್ಲವೆಂದು, ಮುನ್ಸಿಪಲ್ ಕೌನ್ಸಿಲ್ ಅಭಿಪ್ರಾಯಪಟ್ಟರೆ ಅದನ್ನು ಯೋಗ್ಯಗೊಳಿಸುವವರೆಗೆ ಆ ಉದ್ದೇಶಕ್ಕಾಗಿ ಅದರ ಬಳಕೆಯನ್ನು ಬರಹದಲ್ಲಿ ನೋಟೀಸಿನ ಮೂಲಕ ನಿಷೇಧಿಸಬಹುದು.

1. 2003ರ ಅಧಿನಿಯಮ 31ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

229. ತ್ಯಜಿಸಿದ ಮತ್ತು ಅಸಹ್ಯವಾದ ಕಟ್ಟಡಗಳು.- ಯಾವುದೇ ಕಟ್ಟಡವು, ಶಿಥಿಲತೆ, ನಿರ್ಲಕ್ಷತೆ, ತ್ಯಜನ, ದುರುಪಯೋಗ ಅಥವಾ ಒಡೆತನದ ವಿವಾದ ಅಥವಾ ಅದು ವಾಸಯೋಗ್ಯವಿಲ್ಲದೆ ಉಳಿದ ಕಾರಣದಿಂದಾಗಿ ಮತ್ತು ಅದರಿಂದಾಗಿ,-

(ಎ) ಸೋಮಾರಿಗಳಿಗೆ ಮತ್ತು ಉಪದ್ರವಕಾರಿ ವ್ಯಕ್ತಿಗಳಿಗೆ ಅಥವಾ ಯಾವುದೇ ಕಂಡುಬರುವ ಜೀವನೋಪಾಯವಿಲ್ಲದ ವ್ಯಕ್ತಿಗಳಿಗೆ ಅಥವಾ ತಮ್ಮ ಬಗೆಗೆ ತೃಪ್ತಿಕರವಾದ ವಿವರವನ್ನು ಕೊಡಲಾಗದಂಥವರಿಗೆ ಆಶ್ರಯಸ್ಥಳವಾಗಿದ್ದರೆ; ಅಥವಾ

(ಬಿ) ಯಾವುದೇ ಅನೈರ್ಮಲ್ಯ ಅಥವಾ ಅನೈತಿಕ ಉದ್ದೇಶಕ್ಕಾಗಿ ಬಳಸುವಂಥದ್ದಾಗಿದ್ದರೆ; ಅಥವಾ

(ಸಿ) ಹಾವುಗಳು, ಇಲಿಗಳು ಅಥವಾ ಇತರ ಅಪಾಯಕಾರಿ ಅಥವಾ ಅಸಹ್ಯಕರ ಪ್ರಾಣಿಗಳಿಗೆ ಆಶ್ರಯ ನೀಡಿದ್ದು ಅಂಥ ಕಟ್ಟಡದ ನೆರೆಹೊರೆಯವರಿಗೆ ಅಥವಾ ಅಲ್ಲಿ ಓಡಾಡುವ ವ್ಯಕ್ತಿಗಳಿಗೆ ಉಪದ್ರವಕಾರಿ, ಅಥವಾ ಅಸೌಕರ್ಯ, ಅನಾನುಕೂಲತೆ ಅಥವಾ ಕಿರುಕುಳವನ್ನುಂಟು ಮಾಡುವ ಹಾಗೆ ಅನಾರೋಗ್ಯಕರ ಅಥವಾ ವಿಕಾರವಾಗಿರುವುದೆಂಬ ಆಕ್ಷೇಪಣೆಗೆ ಒಳಗಾಗಿದ್ದರೆ ಮುನ್ಸಿಪಲ್ ಕೌನ್ಸಿಲ್, ಈ ಅಧಿನಿಯಮದ ಯಾವುದೇ ಇತರ ಉಪಬಂಧದ ಮೇರೆಗೆ ಅಂಥ ಆಕ್ಷೇಪಣೆಯನ್ನು ಅನ್ಯಥಾ ನಿವಾರಿಸಲು ಆಗುವುದಿಲ್ಲವೆಂದು ಅದು ಪರ್ಯಾಲೋಚಿಸಿದರೆ, ಅಂಥ ಕಟ್ಟಡದ ಒಡೆಯನೆಂದು ಕ್ಲೇಮು ಮಾಡುವ ಯಾರೇ ವ್ಯಕ್ತಿಯು ಗೊತ್ತಿದ್ದರೆ, ಅಥವಾ [1][ಮುನ್ಸಿಪಲ್ ಏರಿಯಾ][1]ದೊಳಗೆ ಅವನು ವಾಸವಾಗಿದ್ದರೆ, ಅಂಥ ವ್ಯಕ್ತಿಗೆ ಬರಹದಲ್ಲಿನ ನೋಟೀಸಿನ ಮೂಲಕ ಅಂಥ ವ್ಯಕ್ತಿಯನ್ನು ಅಥವಾ ಇತರ ಯಾವುದೇ ಸಂದರ್ಭದಲ್ಲಿ, ಕಟ್ಟಡದ ಬಾಗಿಲಿನ ಮೇಲೆ ಅಥವಾ ಅದರ ಯಾವುದೇ ಇತರ ಎದ್ದುಕಾಣುವ ಜಾಗದ ಮೇಲೆ ಅಂಟಿಸಿದ ಬರಹದಲ್ಲಿನ ನೋಟೀಸಿನ ಮೂಲಕ ಅಂಥ ಕಟ್ಟಡದಲ್ಲಿ ಹಿತಾಸಕ್ತಿಯನ್ನು ಹೊಂದಿರುವುದಾಗಿ ಕ್ಲೇಮು ಮಾಡುವ ಎಲ್ಲಾ ವ್ಯಕ್ತಿಗಳನ್ನು, ಅಂಥ ನೋಟೀಸಿನ ದಿನಾಂಕದಿಂದ ಏಳು ದಿವಸಗಳಿಗೆ ಕಡಿಮೆಯಿಲ್ಲದಂತೆ

ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾಂಥ ಅವಧಿಯಲ್ಲಿ ಅಂಥ ಕಟ್ಟಡವನ್ನು ಕೆಡವಿ ಹಾಕುವಂತೆ ಮತ್ತು ಅದರ ಸಾಮಗ್ರಿಗಳನ್ನು ತೆಗೆದುಹಾಕುವಂತೆ ಅಗತ್ಯಪಡಿಸಬಹುದು, ಮತ್ತು ಅಂಥ ಅಗತ್ಯತೆಯನ್ನು ಪಾಲಿಸದೆ ಇರುವ ಸಂದರ್ಭದಲ್ಲಿ, ಮುನ್ಸಿಪಲ್ ಕೌನ್ಸಿಲ್, ಹಿಂದೆ ಹೇಳಿದಂತೆ ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾದ ಮೇಲೆ, ತತ್‌ಕ್ಷಣವೇ ಕಟ್ಟಡವನ್ನು ಕೆಡವಿ ಹಾಕಿಸಬಹುದು ಮತ್ತು ಆ ಸಾಮಗ್ರಿಗಳನ್ನು ತೆಗೆದುಹಾಕಿಸಬಹುದು ಮತ್ತು ಅಂಥ ಸಾಮಗ್ರಿಗಳನ್ನು ಮಾರಾಟ ಮಾಡಬಹುದು ಮತ್ತು ಹಾಗೆ ಮಾಡುವಾಗ ಅದು ವಹಿಸಿದ ಯಾವುವೇ ವೆಚ್ಚಗಳನ್ನು ಭರಿಸಿಕೊಳ್ಳಲು ಉತ್ಪತ್ತಿಗಳನ್ನು ವಿನಿಯೋಗಿಸಬಹುದು, ಮತ್ತು ಉತ್ಪತ್ತಿಗಳಿಂದ ಭರಿಸಿಕೊಳ್ಳಲಾಗದಂಥ ಎಲ್ಲ ವೆಚ್ಚಗಳನ್ನು, VIIನೇ ಅಧ್ಯಾಯದ ಮೇರೆಗೆ ಯಾವುದೇ ತೆರಿಗೆಯ ಮೊತ್ತವನ್ನು ಕ್ಲೇಮು ಮಾಡಿದಾಗ ಯಾವ ರೀತಿಯಲ್ಲಿ ವಸೂಲು ಮಾಡಲಾಗುವುದೋ ಆ ರೀತಿಯಲ್ಲಿ ವಸೂಲು ಮಾಡತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

230. ಮನುಷ್ಯ ವಾಸಕ್ಕೆ ಯೋಗ್ಯವಲ್ಲದ ಕಟ್ಟಡಗಳು ಅಥವಾ ಕಟ್ಟಡಗಳಲ್ಲಿನ ಕೊಠಡಿಗಳು.- (1) ವಾಸದ ಮನೆಗಾಗಿ ಉದ್ದೇಶಿಸಿರುವ ಅಥವಾ ಬಳಸಿದ ಯಾವುದೇ ಕಟ್ಟಡವು ಅಥವಾ ಕಟ್ಟಡದಲ್ಲಿನ ಯಾವುದೇ ಕೊಠಡಿಯು ಮನುಷ್ಯ ವಾಸಕ್ಕೆ ಯೋಗ್ಯವಲ್ಲವೆಂದು ಯಾವುದೇ ಕಾರಣಕ್ಕಾಗಿ ಮುನ್ಸಿಪಲ್ ಕೌನ್ಸಿಲ್ ಗೆ ಕಂಡುಬಂದರೆ, ಮುನ್ಸಿಪಲ್ ಕೌನ್ಸಿಲ್ ಅಂಥ ಕಾರಣವನ್ನು ತಿಳಿಸುವ ಮತ್ತು ಇನ್ನು ಮುಂದೆ ಸಂದರ್ಭಾನುಸಾರ ಆ ಕಟ್ಟಡದ ಅಥವಾ ಕೊಠಡಿಯ ಬಳಕೆಯನ್ನು ನಿಷೇಧಿಸುವ ತನ್ನ ಉದ್ದೇಶವನ್ನು ಸೂಚಿಸುವ ನೋಟೀಸನ್ನು ಬರಹದಲ್ಲಿ ಅಂಥ ಕಟ್ಟಡದ ಒಡೆಯನಿಗೆ ಅಥವಾ ಅಧಿಭೋಗದಾರನಿಗೆ ಕೊಡತಕ್ಕದ್ದು ಮತ್ತು ಅಂಥ ನೋಟೀಸನ್ನು ಸ್ವೀಕರಿಸಿದ ತರುವಾಯ ಮೂವತ್ತು ದಿವಸಗಳೊಳಗಾಗಿ ಅದಕ್ಕೆ ಯಾವುದೇ ಆಕ್ಷೇಪಣೆಯನ್ನು ಬರಹದಲ್ಲಿ ತಿಳಿಸುವಂತೆ ಆ ಒಡೆಯನಿಗೆ ಅಥವಾ ಅಧಿಭೋಗದಾರನಿಗೆ ಅಂಥ ನೋಟೀಸಿನಲ್ಲಿ ಕರೆಕೊಡತಕ್ಕದ್ದು; ಮತ್ತು ಹಿಂದೆ ಹೇಳಿದಂತೆ ಅಂಥ ಅವಧಿಯೊಳಗಾಗಿ ಅಂಥ ಒಡೆಯನು ಅಥವಾ ಅಧಿಭೋಗದಾರನು ಯಾವುದೇ ಆಕ್ಷೇಪಣೆಯನ್ನು ಎತ್ತದಿದ್ದರೆ, ಅಥವಾ ಅಂಥ ಅವಧಿಯೊಳಗಾಗಿ ಅಂಥ ಒಡೆಯನು ಅಥವಾ ಅಧಿಭೋಗದಾರನು ಎತ್ತಿದಂಥ ಯಾವುದೇ ಆಕ್ಷೇಪಣೆಯು ಅಸಿಂಧು ಅಥವಾ ಸಾಕಷ್ಟಿಲ್ಲವೆಂದು ಸ್ಥಾಯೀ ಸಮಿತಿಗೆ ಕಂಡುಬಂದರೆ ಮುನ್ಸಿಪಲ್ ಕೌನ್ಸಿಲ್ ಬರಹದಲ್ಲಿ ಆದೇಶದ ಮೂಲಕ ಅಂಥ ಕಟ್ಟಡವನ್ನು ಅಥವಾ ಕೊಠಡಿಯನ್ನು ವಾಸದ ಮನೆಯಾಗಿ ಇನ್ನು ಮುಂದೆ ಬಳಸುವುದನ್ನು ನಿಷೇಧಿಸಬಹುದು.

(2) ಹಿಂದೆ ಹೇಳಿದಂತೆ ಯಾವುದೇ ಅಂಥ ನಿಷೇಧವನ್ನು ಮಾಡಿರುವಾಗ ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನು ಅಂಥ ನಿಷೇಧದ ನೋಟೀಸನ್ನು ಸಂದರ್ಭಾನುಸಾರ ಬಾಗಿಲಿನ ಮೇಲೆ ಅಥವಾ ಅಂಥ ಕಟ್ಟಡದ ಅಥವಾ ಕೊಠಡಿಯ ಎದ್ದು ಕಾಣುವ ಭಾಗದ ಮೇಲೆ ಅಂಟಿಸುವಂತೆ ಮತ್ತು ಅದರ ಮೇಲೆ ``U.H.H'' ಎಂಬ ಅಕ್ಷರಗಳನ್ನು ಬಣ್ಣದಲ್ಲಿ ಬರೆಸತಕ್ಕದ್ದು ಮತ್ತು ಅಂಥ ಕಟ್ಟಡದ ಅಥವಾ ಕೊಠಡಿಯ ಯಾರೇ ಒಡೆಯನು ಅಥವಾ ಅಧಿಭೋಗದಾರನು, ಸಂದರ್ಭಾನುಸಾರ ಕಟ್ಟಡವನ್ನು ಅಥವಾ ಕೊಠಡಿಯನ್ನು ಮನುಷ್ಯ ವಾಸಕ್ಕಾಗಿ ಯೋಗ್ಯಗೊಳಿಸಲಾಗಿದೆ ಎಂದು ಬರಹದಲ್ಲಿ ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನು ಪ್ರಮಾಣೀಕರಿಸುವವರೆಗೆ, ಮನುಷ್ಯ ವಾಸಕ್ಕಾಗಿ ಅದನ್ನು ಬಳಸತಕ್ಕದ್ದಲ್ಲ ಅಥವಾ ಬಳಸಲು ಅವಕಾಶ ಮಾಡಿಕೊಡತಕ್ಕದ್ದಲ್ಲ.

(3) ಅಷ್ಟೇ ಅಲ್ಲದೆ, ಮುನ್ಸಿಪಲ್ ಕೌನ್ಸಿಲ್, ತನ್ನ ವಿವೇಚನಾನುಸಾರ ಒಡೆಯನಿಗೆ ಅಥವಾ ಅಧಿಭೋಗದಾರನಿಗೆ ನೋಟೀಸನ್ನು ಹೊರಡಿಸಿ ಆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಮೂವತ್ತು ದಿನಗಳಿಗೆ ಕಡಿಮೆಯಿಲ್ಲದ ಕಾಲದಲ್ಲಿ ಆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಮೇಲ್ಪಾಟು ಕೆಲಸಗಳನ್ನು ನಿರ್ವಹಿಸಲು ಅವನನ್ನು ಅಗತ್ಯಪಡಿಸಿ ಮತ್ತು ತನ್ನ ಅಭಿಪ್ರಾಯದಲ್ಲಿ ಆ ನೋಟೀಸಿನಲ್ಲಿ ಹೇಳಿರುವ ಆ ಕೆಲಸಗಳಿಂದ ಆ ಕಟ್ಟಡವು ಮನುಷ್ಯನ ವಾಸಕ್ಕಾಗಿ ಯೋಗ್ಯವಾದುದಾಗುತ್ತದೆಂದು ಹೇಳಿರುವ ಆ ನೋಟೀಸನ್ನು, ಜಾರಿ ಮಾಡಬಹುದು. ಒಡೆಯನಿಗೆ ಈ ಪ್ರಕರಣದ ಮೇರೆಗೆ ನೋಟೀಸನ್ನು ಜಾರಿ ಮಾಡುವುದರ ಜೊತೆಗೆ ಮುನ್ಸಿಪಲ್ ಕೌನ್ಸಿಲ್, ಆ

ಕಟ್ಟಡದಲ್ಲಿ ಬಾಡಿಗೆದಾರನಾಗಿ, ಅಡಮಾನದಾರನಾಗಿ ಅಥವಾ ಅನ್ಯಥಾ ಹಿತಾಸಕ್ತಿಯನ್ನು ಹೊಂದಿರುವ ಯಾರೇ ಇತರ ವ್ಯಕ್ತಿಗೆ ಆ ನೋಟೀಸಿನ ಪ್ರತಿಯನ್ನು ಜಾರಿ ಮಾಡಬಹುದು.

(4) ಕಟ್ಟಡವನ್ನು ಸೂಕ್ತ ವೆಚ್ಚದಲ್ಲಿ ಮನುಷ್ಯನ ವಾಸಕ್ಕೆ ಯೋಗ್ಯಗೊಳಿಸಬಹುದೇ ಎಂಬುದನ್ನು ನಿರ್ಧರಿಸುವಾಗ ಅದನ್ನು ಹಾಗೆ ಯೋಗ್ಯಗೊಳಿಸಲು ಅವಶ್ಯವಾದ ಕೆಲಸದ ಅಂದಾಜು ಖರ್ಚಿಗೆ ಮತ್ತು ಕೆಲಸಗಳನ್ನು ಪೂರ್ಣಗೊಳಿಸಿದಾಗ ಕಟ್ಟಡದ ಮೌಲ್ಯ ಇಂತಿಷ್ಟಾಗುತ್ತದೆಂದು ತಾನು ಮಾಡಿದ್ದ ಅಂದಾಜು ಮೌಲ್ಯಕ್ಕೆ ಗಮನ ಕೊಡತಕ್ಕದ್ದು.

231. ಮನುಷ್ಯ ವಾಸಕ್ಕೆ ಯೋಗ್ಯವಲ್ಲದ ಕಟ್ಟಡಗಳನ್ನು ಕೆಡವಿಹಾಕುವುದಕ್ಕೆ ಆದೇಶ ನೀಡಲು ನಗರ ಮುನ್ಸಿಪಲ್ ಕೌನ್ಸಿಲ್‌ಗಳ ಅಧಿಕಾರ.- (1) ನಗರ ಮುನ್ಸಿಪಲ್ ಕೌನ್ಸಿಲ್ ಗೆ, ತನ್ನಲ್ಲಿರುವ ಯಾವುದೇ ಮಾಹಿತಿಯ ಪ್ರಕಾರ ಯಾವುದೇ ಕಟ್ಟಡವು ಮನುಷ್ಯನ ವಾಸಕ್ಕೆ ಯೋಗ್ಯವಲ್ಲವೆಂದು ಮತ್ತು ಅದನ್ನು ಯುಕ್ತ ವೆಚ್ಚದಲ್ಲಿ ಯೋಗ್ಯವನ್ನಾಗಿಸಲು ಸಾಧ್ಯವಿಲ್ಲವೆಂದು ಮನದಟ್ಟಾಗಿದ್ದರೆ, ಕಟ್ಟಡದ ಒಡೆಯನಿಗೆ ಮತ್ತು ಆ ಕಟ್ಟಡದ ಬಾಡಿಗೆದಾರನಿಗೆ, ಅಡಮಾನದಾರನಿಗೆ ಅಥವಾ ಅನ್ಯಥಾ ಹಿತಾಸಕ್ತಿಯನ್ನು ಹೊಂದಿರುವ ಇತರ ವ್ಯಕ್ತಿಗೆ ನೋಟೀಸನ್ನು ಆ ಕಟ್ಟಡವನ್ನು ಕೆಡವಿಹಾಕುವ ಆದೇಶವನ್ನು ಏಕೆ ಮಾಡಕೂಡದೆಂಬುದಕ್ಕೆ ಆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕಾಲದೊಳಗೆ ಕಾರಣವನ್ನು ತೋರಿಸಲು ಜಾರಿ ಮಾಡತಕ್ಕದ್ದು.

(2) ಉಪಪ್ರಕರಣ (1) ರ ಮೇರೆಗೆ ಯಾವ ವ್ಯಕ್ತಿಗೆ ನೋಟೀಸನ್ನು ಜಾರಿ ಮಾಡಲಾಗಿದೆಯೋ, ಆ ಯಾರೇ ವ್ಯಕ್ತಿಯು, ಅದಕ್ಕನುಸಾರವಾಗಿ ಮುನ್ಸಿಪಲ್ ಕೌನ್ಸಿಲ್ ನ ಮುಂದೆ ಹಾಜರಾಗಿ ಮತ್ತು ಮುನ್ಸಿಪಲ್ ಕೌನ್ಸಿಲ್ ನಿರ್ದಿಷ್ಟಪಡಿಸಿರುವ ಅವಧಿಯೊಳಗಾಗಿ, ಮನುಷ್ಯ ವಾಸಕ್ಕೆ ಆ ಕಟ್ಟಡವನ್ನು ಯೋಗ್ಯವಾದುದನ್ನಾಗಿ ಮಾಡುವಂತಹ ಮೇಲ್ಪಾಟು ಕೆಲಸವನ್ನು ನಿರ್ವಹಿಸಲು ಅಂಥ ವ್ಯಕ್ತಿಯು ಅದಕ್ಕೆ ವಾಗ್ದಾನ ಮಾಡಿದ್ದಾನೆಂದು ಮುನ್ಸಿಪಲ್ ಕೌನ್ಸಿಲ್ ಅಭಿಪ್ರಾಯಪಟ್ಟರೆ ಅಥವಾ ಆ ಉದ್ದೇಶಕ್ಕಾಗಿ ಅದನ್ನು ಯೋಗ್ಯವಾದುದನ್ನಾಗಿ ಮಾಡಲಾಗಿದೆಯೆಂದು ಮುನ್ಸಿಪಲ್ ಕೌನ್ಸಿಲ್ ಮನದಟ್ಟು ಮಾಡಿಕೊಂಡು, ಆ ವಾಗ್ದಾನವನ್ನು ರದ್ದುಗೊಳಿಸುವವರೆಗೆ ಮನುಷ್ಯನ ವಾಸಕ್ಕಾಗಿ ಆ ಕಟ್ಟಡವನ್ನು ಬಳಸುವುದಿಲ್ಲವೆಂದು ವಾಗ್ದಾನವನ್ನು ಮಾಡಿದರೆ ಆ ಕಟ್ಟಡವನ್ನು ಕೆಡವಿಹಾಕುವ ಆದೇಶವನ್ನು ಮುನ್ಸಿಪಲ್ ಕೌನ್ಸಿಲ್ ಮಾಡತಕ್ಕದ್ದಲ್ಲ.

(3) ಉಪಪ್ರಕರಣ (2) ರಲ್ಲಿ ಹೇಳಿರುವಂತೆ ಯಾವುದೇ ಅಂಥ ವಾಗ್ದಾನವನ್ನು ಮಾಡಿಲ್ಲದಿದ್ದರೆ ಅಥವಾ ಯಾವುದೇ ಅಂಥ ವಾಗ್ದಾನವನ್ನು ಮಾಡಿದ್ದು ಆ ವಾಗ್ದಾನಕ್ಕೆ ಸಂಬಂಧಿಸಿದಂತೆ ಯಾವುದೇ ಮೇಲ್ಪಾಟು ಕೆಲಸವನ್ನು ನಿರ್ದಿಷ್ಟಪಡಿಸಿದ ಅವಧಿಯೊಳಗೆ ಕಾರ್ಯಗತಗೊಳಿಸದಿದ್ದರೆ ಅಥವಾ ವಾಗ್ದಾನದ ನಿಬಂಧನೆಗಳನ್ನು ಉಲ್ಲಂಘಿಸಿ ಯಾವುದೇ ಕಾಲದಲ್ಲಿ ಕಟ್ಟಡವನ್ನು ಬಳಸಿದರೆ, ಮುನ್ಸಿಪಲ್ ಕೌನ್ಸಿಲ್ ತತ್‌ಕ್ಷಣವೇ ಆದೇಶವನ್ನು ಹೊರಡಿಸಿ ಎಂದರೆ ಆ ಆದೇಶದ ದಿನಾಂಕದಿಂದ ಮೂವತ್ತು ದಿವಸಗಳಿಗೆ ಕಡಿಮೆಯಿಲ್ಲದಂತೆ ಆ ಆದೇಶದಲ್ಲಿ ನಿರ್ದಿಷ್ಟಪಡಿಸುವ ಅವಧಿಯೊಳಗಾಗಿ ಆ ಕಟ್ಟಡವನ್ನು ಖಾಲಿ ಮಾಡತಕ್ಕದ್ದೆಂದು ಮತ್ತು ಆ ಅವಧಿಯು ಮುಕ್ತಾಯಗೊಂಡ ತರುವಾಯ ಆರು ವಾರಗಳೊಳಗಾಗಿ ಅದನ್ನು ಕೆಡವಿಹಾಕತಕ್ಕದ್ದೆಂದು ಅಗತ್ಯಪಡಿಸಿ ಕೆಡವಿಹಾಕುವ ಆದೇಶವನ್ನು ತತ್‌ಕ್ಷಣವೇ ನೀಡತಕ್ಕದ್ದು.

(4) 230ನೇ ಪ್ರಕರಣದ ಮತ್ತು ಈ ಪ್ರಕರಣದ ಉದ್ದೇಶಗಳಿಗಾಗಿ ಕಟ್ಟಡವು ಮನುಷ್ಯ ವಾಸಕ್ಕೆ ಯೋಗ್ಯವಾಗಿಲ್ಲವೇ ಎಂಬುದನ್ನು ನಿರ್ಧರಿಸುವಾಗ, ಈ ಕೆಳಕಂಡವುಗಳಿಗೆ ಸಂಬಂಧಿಸಿದಂತೆ ಆ ಕಟ್ಟಡದ ಸ್ಥಿತಿಗತಿಯನ್ನು ಗಮನದಲ್ಲಿಡತಕ್ಕದ್ದು, ಎಂದರೆ,-

(ಎ) ದುರಸ್ತಿ;

(ಬಿ) ಸ್ಥಿರತೆ;

(ಸಿ) ತೇವ ಇಲ್ಲದಿರುವುದು;

(ಡಿ) ಸ್ವಾಭಾವಿಕ ಬೆಳಕು ಮತ್ತು ಗಾಳಿ;

(ಇ) ನೀರು ಸರಬರಾಜು;

(ಎಫ್) ಚರಂಡಿ ವ್ಯವಸ್ಥೆ ಮತ್ತು ನೈರ್ಮಲ್ಯ ಅನುಕೂಲತೆಗಳು;

(ಜಿ) ಆಹಾರದ ದಾಸ್ತಾನು, ತಯಾರಿಕೆ ಮತ್ತು ಅಡುಗೆ ಬಗ್ಗೆ ಮತ್ತು ಕಸ, ಹೊಲಸು ಮತ್ತು ಇತರ ಕಲುಷಿತ ವಸ್ತುವಿನ ವಿಲೆಗಾಗಿ ಇರುವ ಸೌಲಭ್ಯಗಳು;

ಮತ್ತು ಆ ಕಟ್ಟಡವು, ಆ ಸ್ಥಿತಿಯಲ್ಲಿ ಅಧಿಭೋಗಕ್ಕಾಗಿ ಯುಕ್ತವಾಗಿ ಯೋಗ್ಯವಾದುದಾಗಿಲ್ಲವೆಂದು, ಮೇಲೆ ಹೇಳಿರುವವುಗಳಲ್ಲಿ ಒಂದು ಅಥವಾ ಹೆಚ್ಚು ಬಾಬುಗಳಲ್ಲಿ

ಅದು ದೋಷಯುಕ್ತವಾಗಿರುವಷ್ಟರಮಟ್ಟಿಗೆ ಮಾತ್ರವೇ ಹಿಂದೆ ಹೇಳಿದಂತೆ ಯೋಗ್ಯವಾದುದಾಗಿಲ್ಲವೆಂದು ಭಾವಿಸತಕ್ಕದ್ದು.

(5) 230ನೇ ಪ್ರಕರಣದ ಮತ್ತು ಈ ಪ್ರಕರಣದ ಉದ್ದೇಶಗಳಿಗಾಗಿ ಕಟ್ಟಡಕ್ಕೆ ಸಂಬಂಧಿಸಿದಂತೆ ``ಮೇಲ್ಪಾಟು ಕೆಲಸ''ವು ಈ ಕೆಳಕಂಡ ಯಾವುದೇ ಒಂದು ಅಥವಾ ಹೆಚ್ಚು ಕೆಲಸಗಳನ್ನು ಒಳಗೊಳ್ಳುತ್ತದೆ ಎಂದರೆ:-

(ಎ) ಅಗತ್ಯ ದುರಸ್ತಿಗಳು;

(ಬಿ) ರಚನೆಗೆ ಸಂಬಂಧಿಸಿದಂತೆ ಬದಲಾವಣೆಗಳು;

(ಸಿ) ದೀಪದ ಸ್ಥಳ ಮತ್ತು ನೀರಿನ ನಲ್ಲಿಗಳ ವ್ಯವಸ್ಥೆ;

(ಡಿ) ತೆರೆದ ಅಥವಾ ಮುಚ್ಚಿರುವ ಚರಂಡಿಗಳ ನಿರ್ಮಾಣ;

(ಇ) ಶೌಚಾಲಯಗಳು ಮತ್ತು ಮೂತ್ರಾಲಯಗಳ ವ್ಯವಸ್ಥೆ;

(ಎಫ್) ಹೆಚ್ಚುವರಿ ಅಥವಾ ಸುಧಾರಿತ ಜೋಡಣೆ ಮತ್ತು ಹೊಂದಾವಣೆಗಳ ವ್ಯವಸ್ಥೆ;

(ಜಿ) ಅಂಗಳವನ್ನು ಅಗೆಯುವುದು ಅಥವಾ ನೆಲಗಟ್ಟು ಮಾಡುವುದು;

(ಹೆಚ್) ಕಸ, ಹೊಲಸು ಮತ್ತು ಇತರ ಕಲುಷಿತ ಮತ್ತು ಅಸಹ್ಯಕರ ವಸ್ತುವನ್ನು ತೆಗೆದುಹಾಕುವುದು;

(ಐ) ಮೇಲೆ ನಿರ್ದಿಷ್ಟಪಡಿಸಿದ ಯಾವುದೇ ಕೆಲಸವನ್ನು ನಿರ್ವಹಿಸುವುದಕ್ಕಾಗಿ ಅವಶ್ಯವೆಂದು ಮುನ್ಸಿಪಲ್ ಕೌನ್ಸಿಲ್ ಅಭಿಪ್ರಾಯಪಡುವಂಥ ಯಾವುದೇ ಕಟ್ಟಡವನ್ನು ಅಥವಾ ಅದರ ಭಾಗವನ್ನು ಕೆಡವಿಹಾಕುವುದನ್ನು ಒಳಗೊಂಡಂತೆ ಯಾವುದೇ ಇತರ ಕೆಲಸ.

232. ಕಟ್ಟಡಗಳನ್ನು ಪ್ರವೇಶಿಸಲು ಮತ್ತು ಪರಿಶೀಲಿಸಲು ಇತ್ಯಾದಿಗಳ ಬಗ್ಗೆ ಅಧಿಕಾರ.- ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನು ಈ ಬಗ್ಗೆ ಮುನ್ಸಿಪಲ್ ಕೌನ್ಸಿಲ್ ನಿಂದ ಅಧಿಕೃತಗೊಂಡ ಯಾರೇ ಇತರ ಅಧಿಕಾರಿಗೆ, ಇಲ್ಲಿ ಇನ್ನು ಮುಂದೆ ಹೇಳಿರುವಂತಹ ನೋಟೀಸನ್ನು ಕೊಟ್ಟ ಮೇಲೆ, ಸೂರ್ಯೋದಯ ಮತ್ತು ಸೂರ್ಯಾಸ್ತದ ನಡುವೆ ಯಾವುದೇ ಕಾಲದಲ್ಲಿ ಎಲ್ಲ ಕಟ್ಟಡಗಳನ್ನು ಮತ್ತು ಭೂಮಿಗಳನ್ನು ಪ್ರವೇಶಿಸಲು ಮತ್ತು ಪರಿಶೀಲಿಸಲು ಮತ್ತು ನೈರ್ಮಲ್ಯದ ಕಾರಣಗಳಿಗಾಗಿ ಒಳಗೆ ಅಥವಾ ಹೊರಗೆ ಎಲ್ಲ ಅಥವಾ ಅದರ ಯಾವುದೇ ಭಾಗಕ್ಕೆ ತತ್‌ಕ್ಷಣವೇ ಸುಣ್ಣ ಬಳಿಸಲು ಅಥವಾ ಅನ್ಯಥಾ ಸ್ವಚ್ಛಗೊಳಿಸಲು ಬರಹದಲ್ಲಿ ನೋಟೀಸಿನ ಮೂಲಕ ನಿರ್ದೇಶಿಸುವುದು ಕಾನೂನು ಸಮ್ಮತವಾಗಿರತಕ್ಕದ್ದು.

233. ಸ್ನಾನ ಸೌಲಭ್ಯಗಳ ವ್ಯವಸ್ಥೆ.- (1) ಮುನ್ಸಿಪಲ್ ಕೌನ್ಸಿಲ್, ಸ್ನಾನ ಸ್ಥಳಗಳಾಗಿ ಉಪಯೋಗಿಸುವ ಉದ್ದೇಶಕ್ಕಾಗಿ ಸಾಕಷ್ಟು ಸಾರ್ವಜನಿಕ ಸ್ಥಳಗಳನ್ನು ಪ್ರತ್ಯೇಕವಾಗಿ ಇಡಬಹುದು ಮತ್ತು ಸ್ನಾನ ಮಾಡಲು ನಿವಾಸಿಗಳಿಗಾಗಿ ಸಾಕಷ್ಟು ಸಂಖ್ಯೆಯ ಅನುಕೂಲಕರವಾದ ತೊಟ್ಟಿಗಳನ್ನು ಅಥವಾ ನೀರಿನ ಹರವುಗಳನ್ನು ಒದಗಿಸಬಹುದು ಅಥವಾ ಪ್ರತ್ಯೇಕವಾಗಿ ಇಡಬಹುದು ಮತ್ತು ಪ್ರಾಣಿಗಳನ್ನು ಅಥವಾ ಬಟ್ಟೆಗಳನ್ನು ತೊಳೆಯುವುದಕ್ಕಾಗಿ ಮತ್ತು ನಿವಾಸಿಗಳ ಆರೋಗ್ಯ, ಸ್ವಚ್ಛತೆ ಮತ್ತು ಸೌಕರ್ಯಕ್ಕಾಗಿ ತೊಟ್ಟಿಗಳನ್ನು ಅಥವಾ ಜಲಾಶಯಗಳು ಅಥವಾ ನೀರಿನ ಹರವುಗಳನ್ನು ಪ್ರತ್ಯೇಕವಾಗಿ ಇಡಬಹುದು ಮತ್ತು ಈ ಪ್ರಕರಣದಲ್ಲಿ ನಮೂದಿಸಿದ ಯಾವುದೇ ಉದ್ದೇಶಕ್ಕಾಗಿ [1][ಮುನ್ಸಿಪಲ್ ಏರಿಯಾ][1]ದೊಳಗೆ ಯಾವುದೇ ಅಥವಾ ಎಲ್ಲ ಇತರ ಸಾರ್ವಜನಿಕ ಸ್ಥಳಗಳ ಬಳಕೆಯನ್ನು ನಿಷೇಧಿಸಬಹುದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಈ ಪ್ರಕರಣದ ಮೇರೆಗೆ ತತ್ಕಾಲದಲ್ಲಿ ಜಾರಿಯಲ್ಲಿರುವ ಮತ್ತು ಮುನ್ಸಿಪಲ್ ಕೌನ್ಸಿಲ್ ಮಾಡಿದ ಎಲ್ಲ ಆದೇಶಗಳ ಮತ್ತು ನೋಟೀಸ್ ಗಳ ಪ್ರತಿಗಳನ್ನು ಮುನ್ಸಿಪಲ್ ಕಚೇರಿಯಲ್ಲಿ ಇಟ್ಟಿರತಕ್ಕದ್ದು ಮತ್ತು ಅವು ಎಲ್ಲಾ ಯುಕ್ತ ಕಾಲಗಳಲ್ಲಿ ಸಾರ್ವಜನಿಕರ ಪರಿಶೀಲನೆಗಾಗಿ ಮುಕ್ತವಾಗಿರತಕ್ಕದ್ದು.

234. ನೀರನ್ನು ಮಲಿನಗೊಳಿಸುವುದು.- 233ನೇ ಪ್ರಕರಣದ ಅಥವಾ ಯಾವುದೇ ಬೈಲಾ ಮೇರೆಗೆ ಮುನ್ಸಿಪಲ್ ಕೌನ್ಸಿಲ್ ನ ಯಾವುದೇ ಆದೇಶವನ್ನು ಉಲ್ಲಂಘಿಸಿ, ಮುನ್ಸಿಪಲ್ ಕೌನ್ಸಿಲ್ ಗೆ ಸೇರಿದ ಯಾವುದೇ ತೊರೆ, ಕೊಳ, ಕೆರೆ, ಹೊಂಡ, ಬಾವಿ, ತೊಟ್ಟಿ, ಕೊಳವೆ ಮತ್ತು ಮೇಲ್ಸಾಲುವೆಯಲ್ಲಿ ಸ್ನಾನ ಮಾಡುವ ಅಥವಾ ಅದರಲ್ಲಿ ಯಾವುದೇ ಪ್ರಾಣಿಯನ್ನು ಅಥವಾ ಯಾವುದೇ ವಸ್ತುವನ್ನು ತೊಳೆಯುವ ಅಥವಾ ತೊಳೆಸುವ ಅಥವಾ ಅದರಲ್ಲಿ ಯಾವುದೇ ಪ್ರಾಣಿಯನ್ನು ಅಥವಾ ಯಾವುದನ್ನೇ ಆಗಲಿ ಎಸೆಯುವ, ಹಾಕುವ ಅಥವಾ ಬಿಸಾಡುವ ಅಥವಾ ಪ್ರವೇಶಿಸುವಂತೆ ಮಾಡುವ

ಅಥವಾ ಉಪದ್ರವಕಾರಿಯಾದ ಅಥವಾ ಆಗಬಹುದಾದ ಏನನ್ನಾದರೂ ಅದರೊಳಗೆ ಹರಿಯುವಂತೆ, ಬಸಿಯುವಂತೆ ಅಥವಾ ತರುವಂತೆ ಮಾಡುವ ಅಥವಾ ಮಾಡಲು ಅವಕಾಶ ಮಾಡಿಕೊಡುವ ಅಥವಾ ಅಲ್ಲಿನ ಯಾವುದೇ ನೀರು ಅದರಿಂದಾಗಿ ಯಾವುದೇ ಪ್ರಮಾಣದಲ್ಲಿ ಮಲಿನಗೊಳ್ಳುವಂತೆ ಅಥವಾ ಕೆಟ್ಟು ಹೋಗುವಂತೆ ಎಂಥದನ್ನಾದರೂ ಮಾಡುವ ಯಾರೇ ಆಗಲಿ ಮತ್ತು ಮುನ್ಸಿಪಲ್ ಕೌನ್ಸಿಲ್ ನ ಅನುಮತಿಯಿಲ್ಲದೆ [1][ಮುನ್ಸಿಪಲ್ ಏರಿಯಾ][1]ದೊಳಗೆ ಅಥವಾ ಎಲ್ಲೆಯಲ್ಲಿ ಯಾವುದೇ ಕೆರೆ, ತೊರೆ ಅಥವಾ ಹಳ್ಳದಲ್ಲಿ ಅಂಥ ಕೆರೆ, ತೊರೆ ಅಥವಾ ಹಳ್ಳದ ನೀರನ್ನು ಅಸಹ್ಯಕಾರಿಯನ್ನಾಗಿಸುವ ಅಥವಾ ಉಪದ್ರವಕಾರಿಯನ್ನಾಗಿಸುವ ಸಂಭವವಿರುವ ಯಾವುದೇ ಪ್ರಾಣಿ, ತರಕಾರಿ ಅಥವಾ ಖನಿಜ ವಸ್ತುವನ್ನು ತೊಳೆಯುವ ಯಾರೇ ಆಗಲಿ ಐವತ್ತು ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

235. ಅಗಸರು ಬಟ್ಟೆ ಒಗೆಯುವುದನ್ನು ನಿಯಂತ್ರಿಸುವುದು.- (1) ಮುನ್ಸಿಪಲ್ ಕೌನ್ಸಿಲ್, ಸಾರ್ವಜನಿಕ ನೋಟೀಸಿನ ಮೂಲಕ ಅಗಸರು ಬಟ್ಟೆ ಒಗೆಯುವ ಉದ್ದೇಶಕ್ಕಾಗಿ ಅದು ಗೊತ್ತುಮಾಡತಕ್ಕಂಥ ಸ್ಥಳಗಳನ್ನು ಹೊರತುಪಡಿಸಿ, ಅಗಸರು ಅವರ ವೃತ್ತಿಯ ಸಲುವಾಗಿ ಬೇರೆ ಕಡೆ ಬಟ್ಟೆಗಳನ್ನು ಒಗೆಯುವುದನ್ನು ನಿಷೇಧಿಸಬಹುದು; ಮತ್ತು ಅಂಥ ಯಾವುದೇ ನಿಷೇಧವನ್ನು ಮಾಡಿರುವಾಗ ವೃತ್ತಿಯಿಂದ ಅಗಸನಾಗಿರುವ ಯಾರೇ ವ್ಯಕ್ತಿಯು ತನಗಾಗಿ ಅಥವಾ ಅಂಥ ಸ್ಥಳದ ಒಡೆಯನಿಗಾಗಿ ಅಥವಾ ಅಧಿಭೋಗದಾರನಿಗಾಗಿ ಹೊರತು ಸ್ಥಾಯಿ ಸಮಿತಿಯು ಈ ಉದ್ದೇಶಕ್ಕಾಗಿ ಗೊತ್ತುಪಡಿಸಿರದ ಯಾವುದೇ ಸ್ಥಳದಲ್ಲಿ ಬಟ್ಟೆಗಳನ್ನು ಒಗೆಯತಕ್ಕದ್ದಲ್ಲ.

(2) ಮುನ್ಸಿಪಲ್ ಕೌನ್ಸಿಲ್, ಅಗಸರಿಗೆ ಅವರು ತಮ್ಮ ವೃತ್ತಿಯನ್ನು ನಡೆಸುವುದಕ್ಕಾಗಿ ಯೋಗ್ಯ ಸ್ಥಳಗಳನ್ನು ಒದಗಿಸತಕ್ಕದ್ದು ಮತ್ತು ಸರ್ಕಾರದಿಂದ ಅನುಮೋದನೆ ಪಡೆದು ಕಾಲಕಾಲಕ್ಕೆ ಅದು ನಿರ್ಧರಿಸಬಹುದಾದಂಥ ಯಾವುದೇ ಅಂಥ ಸ್ಥಳದ ಬಳಕೆಗಾಗಿ ಅಂಥ ಫೀಜುಗಳನ್ನು ಸಂದಾಯ ಮಾಡುವಂತೆ ಅಗತ್ಯಪಡಿಸಬಹುದು.

(3) ಮುನ್ಸಿಪಲ್ ಕೌನ್ಸಿಲ್ (1)ನೇ ಉಪಪ್ರಕರಣದ ಮೇರೆಗೆ ಯಾವುದೇ ಸಾರ್ವಜನಿಕ ನೋಟೀಸನ್ನು ಹೊರಡಿಸುವುದಕ್ಕೂ ಮೊದಲು, (2)ನೇ ಉಪಪ್ರಕರಣದ ಮೇರೆಗೆ ಒದಗಿಸಲು ಉದ್ದೇಶಿಸಿದ ಒಗೆಯುವ ಸ್ಥಳಗಳ ಪಟ್ಟಿಯನ್ನು, ಆ ಪಟ್ಟಿಯನ್ನು ಯಾವ ದಿನಾಂಕದಂದು ಅಥವಾ ಆ ತರುವಾಯ ಪರಿಶೀಲನೆಗೆ ತೆಗೆದುಕೊಳ್ಳಲಾಗುವುದೋ ಆ ದಿನಾಂಕವನ್ನು ನಿರ್ದಿಷ್ಟಪಡಿಸಿರುವ ನೋಟೀಸಿನ ಸಹಿತ, ಅದರಿಂದ ಬಾಧಿತರಾಗುವ ಸಂಭವವಿರುವ ವ್ಯಕ್ತಿಗಳ ಮಾಹಿತಿಗಾಗಿ, ಯಾವ ರೀತಿಯಲ್ಲಿ ಆ ನೋಟೀಸನ್ನು ಪ್ರಕಟಿಸಿದರೆ ಸಾಕಾಗುತ್ತದೆಂದು ಮುನ್ಸಿಪಲ್ ಕೌನ್ಸಿಲ್ ಅಭಿಪ್ರಾಯಪಡುವುದೋ ಆ ರೀತಿಯಲ್ಲಿ ಪ್ರಕಟಿಸತಕ್ಕದ್ದು; ಮತ್ತು ಸದರಿ ಸ್ಥಳಗಳನ್ನು ಅಂತಿಮವಾಗಿ ನಿಗದಿಪಡಿಸುವುದಕ್ಕೂ ಮುಂಚೆ, ಹಾಗೆ ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ಮುಂಚೆ ಯಾರೇ ವ್ಯಕ್ತಿಯು ಅದಕ್ಕೆ ಸಂಬಂಧಿಸಿದಂತೆ ಬರಹದಲ್ಲಿ ಸಲ್ಲಿಸಬಹುದಾದಂಥ ಯಾವುದೇ ಆಕ್ಷೇಪಣೆಯನ್ನು ಅಥವಾ ಸಲಹೆಯನ್ನು ಸ್ವೀಕರಿಸತಕ್ಕದ್ದು ಮತ್ತು ಪರ್ಯಾಲೋಚಿಸತಕ್ಕದ್ದು.

236. ಬಾವಿಗಳು ಇತ್ಯಾದಿಗಳಿಂದ ಆಗುವ ಉಪದ್ರವಗಳ ಉಪಶಮನ.- (1) ಮುನ್ಸಿಪಲ್ ಕೌನ್ಸಿಲ್ ನ ಅಭಿಪ್ರಾಯದಲ್ಲಿ,-

(ಎ) ಯಾವುದೇ ಹೊಂಡ, ಹಳ್ಳ, ತೋಡುಕುಳಿ, ಕುಳಿ, ಅಗೆತ, ಕೆರೆ, ಬಾವಿ, ಕೊಳ, ಮೋರಿ, ನೀರು ಹರಿವಿನ ಮಾರ್ಗ ಅಥವಾ ಯಾವುದೇ ನಿಂತ ನೀರು;

(ಬಿ) ಕಟ್ಟಡದ ಒಳಗಾಗಲಿ ಅಥವಾ ಹೊರಗೆ ಆಗಲಿ ನೀರಿನ ಸಲುವಾಗಿರುವ ಯಾವುದೇ ತೊಟ್ಟಿ ಅಥವಾ ಇತರ ಧಾರಕವು; ಅಥವಾ

(ಸಿ) ಯಾವ ಭೂಮಿಯ ಮೇಲೆ ನೀರು ಸಂಗ್ರಹವಾಗುವುದೋ ಮತ್ತು ಆ ಯಾವ ಭೂಮಿಯು ವಾಸದ ಮನೆಯಾಗಿ ಉಪಯೋಗಿಸುವ ಯಾವುದೇ ಕಟ್ಟಡದಿಂದ ಒಂದು ನೂರು ಗಜಗಳ ಅಂತರದೊಳಗೆ ಇರುವುದೋ ಆ ಯಾವುದೇ ಭೂಮಿಯು ಸೊಳ್ಳೆಗಳ ಉತ್ಪತ್ತಿ ಸ್ಥಾನವಾಗಿದ್ದರೆ ಅಥವಾ ಉತ್ಪತ್ತಿ ಸ್ಥಾನವಾಗುವ ಸಂಭವವಿದ್ದರೆ ಅಥವಾ ಇತರ ಯಾವುದೇ ರೀತಿಯಲ್ಲಿ ಉಪದ್ರವಕಾರಿಯಾದರೆ,

- ಮುನ್ಸಿಪಲ್ ಕೌನ್ಸಿಲ್ ಬರಹದಲ್ಲಿ ನೋಟೀಸಿನ ಮೂಲಕ ಅದರ ಒಡೆಯನನ್ನು ಮುನ್ಸಿಪಲ್ ಕೌನ್ಸಿಲ್ ಗೊತ್ತುಪಡಿಸುವಂತಹ ರೀತಿಯಲ್ಲಿ ಮತ್ತು ಅಂಥ ಸಾಮಗ್ರಿಗಳಿಂದ ಅದನ್ನು

ಭರ್ತಿ ಮಾಡಲು, ಮುಚ್ಚಿಬಿಡಲು ಅಥವಾ ಹರಿಸಿಬಿಡಲು ಅಥವಾ ಮುನ್ಸಿಪಲ್ ಕೌನ್ಸಿಲ್ ಗೊತ್ತುಪಡಿಸುವಂತಹ ರೀತಿಯಲ್ಲಿ, ಉಪದ್ರವವನ್ನು ನಿವಾರಿಸುವುದಕ್ಕಾಗಿ ಅಥವಾ ಉಪಶಮನಗೊಳಿಸುವುದಕ್ಕಾಗಿ ಅಂಥ ವ್ಯವಸ್ಥೆಯನ್ನು ಮಾಡಲು ಅಗತ್ಯಪಡಿಸಬಹುದು.

(2) (ಎ) ಮುನ್ಸಿಪಲ್ ಕೌನ್ಸಿಲ್ ನಿಂದ ಬರಹದಲ್ಲಿ ಮುಂಚಿತವಾಗಿ ಅನುಮತಿ ಪಡೆಯದೆಯೇ ಯಾವುದೇ ಹೊಸ ಕೆರೆಯನ್ನು ಅಥವಾ ಕೊಳವನ್ನು ತೋಡತಕ್ಕದ್ದಲ್ಲ ಅಥವಾ ನಿರ್ಮಿಸತಕ್ಕದ್ದಲ್ಲ;

(ಬಿ) ಯಾವುದೇ ಅಂಥ ಕೆಲಸವನ್ನು ಹಾಗೆ ಅನುಮತಿಯಿಲ್ಲದೆ ಪ್ರಾರಂಭಿಸಿದರೆ ಅಥವಾ ಪೂರ್ಣಗೊಳಿಸಿದರೆ ಮುನ್ಸಿಪಲ್ ಕೌನ್ಸಿಲ್,-

(i) ಅಂಥ ಕೆಲಸವನ್ನು ಮಾಡಿರುವ ಒಡೆಯನನ್ನು ಅಥವಾ ಇತರ ವ್ಯಕ್ತಿಯನ್ನು ಮುನ್ಸಿಪಲ್ ಕೌನ್ಸಿಲ್ ಗೊತ್ತುಪಡಿಸುವಂತಹ ರೀತಿಯಲ್ಲಿ ಅದನ್ನು ಭರ್ತಿ ಮಾಡಲು ಅಥವಾ ಕೆಡವಿ ಹಾಕಲು ಬರಹದಲ್ಲಿ ನೋಟೀಸಿನ ಮೂಲಕ ಅಗತ್ಯಪಡಿಸಬಹುದು;

(ii) ಅಂಥ ಕೆಲಸವನ್ನು ಉಳಿಸಿಕೊಳ್ಳಲು ಬರಹದಲ್ಲಿ ಅನುಮತಿಯನ್ನು ಕೊಡಬಹುದು, ಆದರೆ ಅಂಥ ಅನುಮತಿಯಲ್ಲಿ ಈ ಉಪಪ್ರಕರಣದ (ಎ) ಖಂಡದಲ್ಲಿ ಹೇಳಿರುವುದನ್ನು ಉಲ್ಲಂಘಿಸಿದುದಕ್ಕಾಗಿ ಅಂಥ ಒಡೆಯನ ವಿರುದ್ಧ ವ್ಯವಹರಣೆಗಳನ್ನು ಕೈಗೊಳ್ಳದಂತೆ ವಿನಾಯಿತಿ ಇರತಕ್ಕದ್ದಲ್ಲ.

237. ಕೆಲವು ಬಗೆಯ ಸಾಗುವಳಿಯ ನಿಯಂತ್ರಣ ಅಥವಾ ನಿಷೇಧ.- ಮುನ್ಸಿಪಲ್ ಕೌನ್ಸಿಲ್ [1][ಮುನ್ಸಿಪಲ್ ಏರಿಯಾ][1]ದ ಎಲ್ಲೆಗಳ ಒಳಗೆ ಯಾವುದೇ ಸ್ಥಳದಲ್ಲಿ ಯಾವುದೇ ಬಗೆಯ ಬೆಳೆಯ ಸಾಗುವಳಿಯು ಅಥವಾ ಯಾವುದೇ ಬಗೆಯ ಗೊಬ್ಬರದ ಬಳಕೆಯು ಅಥವಾ ಭೂಮಿಯ ನೀರಾವರಿಯು ಸಾರ್ವಜನಿಕ ಆರೋಗ್ಯಕ್ಕೆ ಹಾನಿಕರವಾಗಿದೆಯೆಂದು ಸಾರ್ವಜನಿಕ ಆರೋಗ್ಯ ನಿರ್ದೇಶಕರು, ಆರೋಗ್ಯಾಧಿಕಾರಿಯು ಅಥವಾ ಸ್ಥಳೀಯ ವೈದ್ಯಾಧಿಕಾರಿಯು ವರದಿ ಮಾಡಿದಾಗ, ಹಾಗೆ ವರದಿ ಮಾಡಲಾದ ಸಾಗುವಳಿಯನ್ನು, ಗೊಬ್ಬರದ ಬಳಕೆಯನ್ನು ಅಥವಾ ನೀರಾವರಿಯನ್ನು ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ಸಾರ್ವಜನಿಕ ನೋಟೀಸಿನ ಮೂಲಕ ನಿಯಂತ್ರಿಸಬಹುದು ಅಥವಾ ಹಾನಿಕರವೆಂದು ನಿಷೇಧಿಸಬಹುದು:

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಪರಂತು, ಅಂಥ ಸಾಗುವಳಿಯನ್ನು ಅಥವಾ ನೀರಾವರಿಯನ್ನು ಅಂಥ ಸಾರ್ವಜನಿಕ ನೋಟೀಸಿನ ದಿನಾಂಕದ ಹಿಂದಿನ ಐದು ವರ್ಷಗಳ ಅವಧಿಯಲ್ಲಿ ವಾಡಿಕೆಯಂತೆ ಬೇಸಾಯ ನಡೆಯುತ್ತಿರುವಾಗ ಸಾಗುವಳಿಯು ಅಥವಾ ನೀರಾವರಿಯು ನಿರಂತರವಾಗಿ ಮುಂದುವರಿದಿದ್ದಾಗ ಸಂಪೂರ್ಣ ನಿಷೇಧದಿಂದ ಅವರಿಗೆ ಉಂಟಾದ ಯಾವುದೇ ಹಾನಿಗಾಗಿ ಹಿತಾಸಕ್ತಿಯುಳ್ಳ ಎಲ್ಲಾ ವ್ಯಕ್ತಿಗಳಿಗೆ ಮುನ್ಸಿಪಲ್ ನಿಧಿಯಿಂದ ನಷ್ಟ ಪರಿಹಾರವನ್ನು ಸಂದಾಯ ಮಾಡತಕ್ಕದ್ದು.

238. ಅಸಹ್ಯಕರ ಗೊಬ್ಬರ ಇತ್ಯಾದಿಯ ಬಳಕೆ.- ಮುನ್ಸಿಪಲ್ ಕೌನ್ಸಿಲ್ ನಿಂದ ಬರಹದಲ್ಲಿ ಅನುಮತಿಯಿಂದಲ್ಲದೆ, ಮತ್ತು ಅಂಥ ಅನುಮತಿಯಲ್ಲಿ ಯಾವುದಾದರೂ ರೀತಿಯನ್ನು ವಿಧಿಸಿದ್ದರೆ ಆ ರೀತಿಯಲ್ಲಿ ಅಸಹ್ಯಕರ ವಾಸನೆಯನ್ನು ಹೊರಸೂಸುವ ಮಲವನ್ನು ಅಥವಾ ಇತರ ಗೊಬ್ಬರವನ್ನು ಅಥವಾ ವಸ್ತುವನ್ನು ದಾಸ್ತಾನು ಮಾಡುವ ಅಥವಾ ಬಳಸುವ ಯಾರೇ ಆಗಲಿ ಇಪ್ಪತ್ತೈದು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

239. ಜಾನುವಾರುಗಳನ್ನು ಕಟ್ಟಿಹಾಕುವುದು ಇತ್ಯಾದಿ.- ಯಾವುದೇ ಸಾರ್ವಜನಿಕ ಬೀದಿಯಲ್ಲಿ ಅಥವಾ ಸ್ಥಳದಲ್ಲಿ ಯಾರೇ ಆಗಲಿ ಸಾರ್ವಜನಿಕ ಸಂಚಾರಕ್ಕೆ ಅಡ್ಡಿಯಾಗುವ ಅಥವಾ ಅಪಾಯವಾಗುವ ಹಾಗೆ ಜಾನುವಾರುಗಳನ್ನು ಅಥವಾ ಇತರ ಪ್ರಾಣಿಗಳನ್ನು ಕಟ್ಟಿಹಾಕಿದರೆ ಅಥವಾ ಮನೆಯ ಯಾರೇ ವ್ಯಕ್ತಿಯಿಂದ ಅವುಗಳನ್ನು ಕಟ್ಟಿಹಾಕಿಸಿದರೆ ಅಥವಾ ಅದಕ್ಕೆ ಅವಕಾಶ ಕೊಟ್ಟರೆ ಅಥವಾ ಉಪದ್ರವವನ್ನುಂಟು ಮಾಡಿದರೆ ಅಥವಾ ಅಂಥ ಪ್ರಾಣಿಗಳು ರಕ್ಷಕನಿಲ್ಲದೆ ಅಲೆದಾಡುವಂತೆ ಮಾಡಿದರೆ ಅಥವಾ ಅದಕ್ಕೆ ಅವಕಾಶ ಕೊಟ್ಟರೆ ಅವನು ಅಥವಾ ಆ ಯಾರೇ ವ್ಯಕ್ತಿಯು ಇಪ್ಪತ್ತೈದು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

240. ಪ್ರಾಣಿಗಳಿಗೆ ಹೊಲಸನ್ನು ತಿನ್ನಿಸುವುದು.- ಹೈನುಗಾರಿಕೆಯ ಉದ್ದೇಶಗಳಿಗಾಗಿ ಇಟ್ಟಿರುವಂಥ ಅಥವಾ ಮಾನವ ಆಹಾರಕ್ಕಾಗಿ ಉದ್ದೇಶಿಸಲಾದಂಥ ಯಾವುದೇ ಪ್ರಾಣಿಗೆ ಅಮೇಧ್ಯ ಸ್ವಭಾವದ ಪದಾರ್ಥವನ್ನು, ಲಾಯದ ಕಸವನ್ನು, ಹೊಲಸನ್ನು ಅಥವಾ ಇತರ ಅಸಹ್ಯಕರ

ಪದಾರ್ಥವನ್ನು ತಿನ್ನಿಸುವ ಅಥವಾ ಅಂಥ ಪದಾರ್ಥವನ್ನು ಅಂಥ ಪ್ರಾಣಿಗೆ ತಿನ್ನಲು ಅಥವಾ ತಿನ್ನಿಸಲು ಅವಕಾಶ ಕೊಡುವ ಯಾರೇ ಆಗಲಿ, ಐವತ್ತು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

241. ಹೊಗೆಯ ಬಳಕೆ.- (1) [1][ಮುನ್ಸಿಪಲ್ ಏರಿಯಾ][1] ದ ಎಲ್ಲೆಗಳ ಒಳಗೆ, ಯಾವುದೇ ವೃತ್ತಿಯಲ್ಲಿ ಅಥವಾ ಯಾವುದೇ ಕೆಲಸಗಳಲ್ಲಿ ಎಂಥದೇ ತಯಾರಿಕೆಯ ಉದ್ದೇಶಕ್ಕಾಗಿ ಬಳಸಿದ ಕಟ್ಟಡಗಳಲ್ಲಿ, ಅದರಲ್ಲಿ ಹಬೆ ಯಂತ್ರವನ್ನು ಬಳಸಿರಲಿ ಅಥವಾ ತೊಡಗಿಸಿರಲಿ ಅಥವಾ ಬಳಸಿರದಿರಲಿ ಅಥವಾ ತೊಡಗಿಸಿರದಿರಲಿ, ತೊಡಗಿಸಿದ ಅಥವಾ ತೊಡಗಿಸಬೇಕಾದ ಪ್ರತಿಯೊಂದು ಕುಲುಮೆಯನ್ನು, ಅಂಥ ಕುಲುಮೆಯಿಂದ ಹೊಮ್ಮುವ ಹೊಗೆಯನ್ನು ಕಾರ್ಯಸಾಧ್ಯವಾಗಬಹುದಾದಷ್ಟರಮಟ್ಟಿಗೆ ಹೀರಿಕೊಳ್ಳುವ, ಬತ್ತಿಸುವ ಅಥವಾ ತಗ್ಗಿಸುವ ಹಾಗೆ ಎಲ್ಲ ಸಂದರ್ಭಗಳಲ್ಲಿ ನಿರ್ಮಿಸತಕ್ಕದ್ದು, ಸೇರಿಸತಕ್ಕದ್ದು ಅಥವಾ ಮಾರ್ಪಾಟು ಮಾಡತಕ್ಕದ್ದೆಂದು ಸಾರ್ವಜನಿಕ ನೋಟೀಸಿನ ಮೂಲಕ ನಿರ್ದೇಶಿಸುವುದು ಮುನ್ಸಿಪಲ್ ಕೌನ್ಸಿಲ್ ಗೆ ಕಾನೂನುಸಮ್ಮತವಾಗಿರತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಅಂಥ ನಿರ್ದೇಶನದ ತರುವಾಯ ಯಾರೇ ವ್ಯಕ್ತಿಯು ಹಾಗೆ ನಿರ್ಮಿಸದ, ಸೇರಿಸದ ಅಥವಾ ಮಾರ್ಪಾಟು ಮಾಡದ ಅಂಥ ಕುಲುಮೆಯನ್ನು ಬಳಸಿದರೆ ಅಥವಾ ಬಳಸಲು ಅವಕಾಶ ಕೊಟ್ಟರೆ ಅಥವಾ ಅದರಿಂದ ಹೊಮ್ಮುವ ಹೊಗೆಯನ್ನು ಕಾರ್ಯಸಾಧ್ಯವಾಗುವಷ್ಟರಮಟ್ಟಿಗೆ ಪರಿಣಾಮಕಾರಿಯಾಗಿ ಹೀರಿಕೊಳ್ಳದ ಅಥವಾ ಬತ್ತಿಸದ ಅಂಥ ಯಾವುದೇ ಕುಲುಮೆಯನ್ನು ನಿರ್ಲಕ್ಷ್ಯದಿಂದ ಬಳಸಿದರೆ ಅಥವಾ ಬಳಸಲು ಅವಕಾಶ ನೀಡಿದರೆ ಸದರಿ ಕೆಲಸಗಳ ಅಥವಾ ಕಟ್ಟಡಗಳ ಒಡೆಯನಾದ ಅಥವಾ ಅಧಿಭೋಗದಾರನಾದ ಅಥವಾ ಅಂಥ ಒಡೆಯನಿಂದ ಅಥವಾ ಅಧಿಭೋಗದಾರನಿಂದ ಅದರ ನಿರ್ವಹಣೆಗಾಗಿ ನಿಯೋಜಿತನಾದ ಏಜೆಂಟ್‌ನಾದ ಅಥವಾ ಇತರ ವ್ಯಕ್ತಿಯಾಗಿರುವ ಹಾಗೆ ಅಪರಾಧ ಮಾಡುವ ಪ್ರತಿಯೊಬ್ಬ ವ್ಯಕ್ತಿಯು, ಐವತ್ತು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ತರುವಾಯದ ಯಾವುದೇ ಅಪರಾಧ ನಿರ್ಣಯವಾದ ಮೇಲೆ ಐದುನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು:

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ ಸಂಚಾರದ ಉದ್ದೇಶಕ್ಕಾಗಿ ಯಾವುದೇ ರೈಲ್ವೆ ಅಥವಾ ರಸ್ತೆಗಳ ದುರಸ್ತಿಗಾಗಿ ಬಳಸಿದ ಸ್ವಯಂಚಾಲಿತ ಇಂಜಿನ್‌ಗಳಿಗೆ ಅನ್ವಯವಾಗುವುದೆಂದು ಗ್ರಹಿಸತಕ್ಕದ್ದಲ್ಲ.

242. ಉಪದ್ರವದ ನಿಷೇಧ.-

(ಎ) ಯಾವುದೇ ಸಾರ್ವಜನಿಕ ರಸ್ತೆಯಲ್ಲಿ ಅಥವಾ ಸಾರ್ವಜನಿಕ ಸ್ಥಳದಲ್ಲಿ,-

(i) ತನ್ನ ದೇಹಬಾಧೆಯನ್ನು ತೀರಿಸಿಕೊಳ್ಳುವ; ಅಥವಾ

(ii) ಭಿಕ್ಷೆಗಾಗಿ ಅಲೆದಾಡುವ ಅಥವಾ ಪೀಡಿಸಿ ಬೇಡುವ; ಅಥವಾ

(iii) ದಾನವನ್ನು ಉತ್ತೇಜಿಸುವ ಉದ್ದೇಶದಿಂದ ಯಾವುದೇ ಅಂಗವಿಕಾರ ಅಥವಾ ರೋಗ ಅಥವಾ ಅಸಹ್ಯಕರ ಹುಣ್ಣು ಅಥವಾ ಗಾಯವನ್ನು ತೆರೆದಿಡುವ ಅಥವಾ ಪ್ರದರ್ಶಿಸುವ;

(iv) ಸಾರ್ವಜನಿಕರಿಗೆ ಕಣ್ಣಿಗೆ ಕಾಣುವಂತೆ ಮಾಂಸವನ್ನು ಕೊಂಡೊಯ್ಯುವ; ಅಥವಾ

(v) ಸರಿಯಾದ ಅಧಿಕಾರವಿಲ್ಲದೆ ಪ್ರಾಣಿಯನ್ನು ತಡೆಯುವ ಅಥವಾ ಗಾಡಿಗಳನ್ನು ಕೂಡಿಹಾಕುವ; ಅಥವಾ

(vi) ಸರಿಯಾದ ಅಧಿಕಾರವಿಲ್ಲದೆ ಯಾವುದೇ ಕಟ್ಟಡ, ಸ್ಮಾರಕ, ಸ್ತಂಭ, ಗೋಡೆ, ಬೇಲಿ, ಮರ ಅಥವಾ ಇತರ ವಸ್ತುವಿನ ಮೇಲೆ ಯಾವುದೇ ಪ್ರಕಟಪತ್ರ, ನೋಟೀಸ್, ಅಥವಾ ಇತರ ಕಾಗದ ಪತ್ರವನ್ನು ಅಂಟಿಸುವ; ಅಥವಾ

(vii) ಸರಿಯಾದ ಅಧಿಕಾರವಿಲ್ಲದೆ ಯಾವುದೇ ಕಟ್ಟಡ, ಸ್ಮಾರಕ, ಸ್ತಂಭ, ಗೋಡೆ, ಚಾವಣಿ, ಮರ ಅಥವಾ ಇತರ ವಸ್ತುವನ್ನು ವಿರೂಪಗೊಳಿಸುವ ಅಥವಾ ಅದರ ಮೇಲೆ ಬರೆಯುವ ಅಥವಾ ಅನ್ಯಥಾ ಗುರುತು ಮಾಡುವ; ಅಥವಾ

(viii) ಸರಿಯಾದ ಅಧಿಕಾರವಿಲ್ಲದೆ ಈ ಅಧಿನಿಯಮದ ಮೇರೆಗೆ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಅಥವಾ ಬೈಲಾಗಳ ಮೇರೆಗೆ ಹಾಕಿರುವ ಅಥವಾ ಪ್ರದರ್ಶಿಸಿರುವ ಯಾವುದೇ ನೋಟೀಸನ್ನು ಅಥವಾ ಇತರ ಕಾಗದ ಪತ್ರವನ್ನು ತೆಗೆಯುವ, ನಾಶಪಡಿಸುವ, ವಿರೂಪಗೊಳಿಸುವ ಅಥವಾ ಅನ್ಯಥಾ ತೊಡೆದುಹಾಕುವ; ಅಥವಾ

(ಬಿ) ಯಾವುದೇ ಸಮಾಧಿಯನ್ನು ನಿರ್ಮಿಸುವ ಅಥವಾ ಯಾವುದೇ ಹೆಣವನ್ನು ಸುಡುವ ಅಥವಾ ಹೂಳುವ ಉದ್ದೇಶಕ್ಕಾಗಿ ಪ್ರತ್ಯೇಕವಾಗಿರಿಸದ ಯಾವುದೇ ಸ್ಥಳದಲ್ಲಿ ಯಾವುದೇ ಸಮಾಧಿಯನ್ನು ನಿರ್ಮಿಸುವ ಅಥವಾ ಯಾವುದೇ ಹೆಣವನ್ನು ಸುಡುವ ಅಥವಾ ಹೂಳುವ; ಅಥವಾ

(ಸಿ) ಸಾರ್ವಜನಿಕ ಅಥವಾ ವಿಶೇಷ ನೋಟೀಸಿನ ಮೂಲಕ ಮುನ್ಸಿಪಲ್ ಕೌನ್ಸಿಲ್ ನಿಷೇಧಿಸಿರುವಂಥ ಯಾವುದೇ ಕಾಲದಲ್ಲಿ ಅಥವಾ ಸ್ಥಳದಲ್ಲಿ ಯಾವುದೇ ನಗಾರಿಯನ್ನು ಅಥವಾ ಟಾಮ್‌ಟಾಮನ್ನು ಹೊಡೆಯುವ ಅಥವಾ ಕಹಳೆ ಅಥವಾ ತುತ್ತೂರಿ ಊದುವ ಅಥವಾ ಯಾವುದೇ pಪಾತ್ರೆಯನ್ನು ಬಡಿಯುವ ಅಥವಾ ಯಾವುದೇ ಬ್ಯಾಂಡ್‌ನ್ನು ಅಥವಾ ಇತರ ವಾದ್ಯವನ್ನು ಬಾರಿಸುವ ಅಥವಾ ಯಾವುದೇ ಸಂಗೀತವನ್ನು ನುಡಿಸುವ; ಅಥವಾ

(ಡಿ) ಸರಿಯಾದ ಅಧಿಕಾರವಿಲ್ಲದೆ, ಹಾಡುವ, ಅರಚುವ ಅಥವಾ ಕೂಗುವ ಮೂಲಕ ಅಥವಾ ಮನುಷ್ಯರ ಧ್ವನಿಯನ್ನು ವಿಸ್ತರಿಸಲು ಅಥವಾ ಯಥಾವತ್ತಾಗಿ ಬಿತ್ತರಿಸಲು ಮೆಗಾಫೋನ್ ಅಥವಾ ಧ್ವನಿವರ್ಧಕಗಳಂಥ ಯಾವುದೇ ಉಪಕರಣವನ್ನು ಉಪಯೋಗಿಸುವ ಮೂಲಕ ಸಾರ್ವಜನಿಕ ಶಾಂತಿ ಅಥವಾ ಸುವ್ಯವಸ್ಥೆಯನ್ನು ಭಂಗಪಡಿಸುವ; ಅಥವಾ

(ಇ) ಯಾರೇ ವ್ಯಕ್ತಿಗೆ ಕ್ಷತಿ, ಅಪಾಯ, ಗಾಬರಿ ಅಥವಾ ಕಿರುಕುಳವನ್ನುಂಟುಮಾಡುವ ಹಾಗೆ ಯಾವುದೇ ಪ್ರಾಣಿಯನ್ನು ಬಿಟ್ಟುಬಿಡುವ ಅಥವಾ ಯಾವುದೇ ಪ್ರಾಣಿಯನ್ನು ನಿರ್ಲಕ್ಷ್ಯದಿಂದ ಹಾಗೆ ಮಾಡಲು ಅವಕಾಶ ಮಾಡಿಕೊಡುವ; ಅಥವಾ

(ಎಫ್) ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನಿಂದ ಬರಹದಲ್ಲಿ ಅನುಮತಿ ಇಲ್ಲದೆ ಮತ್ತು ಅವರು ಅಧಿಕೃತಗೊಳಿಸಬಹುದಾದಂಥ ರೀತಿಯಲ್ಲಿ, ಮಲ, ಸಗಣಿ, ಗೊಬ್ಬರ, ಕಸ ಅಥವಾ ಅಸಹ್ಯಕರ ವಾಸನೆಯನ್ನು ಹೊರಸೂಸುವ ಇತರ ಯಾವುದೇ ವಸ್ತುವನ್ನು ಶೇಖರಿಸುವ ಅಥವಾ ಉಪಯೋಗಿಸುವ; ಅಥವಾ

(ಜಿ) ಆ ಉದ್ದೇಶಕ್ಕಾಗಿ ಉದ್ದೇಶಿಸಿಲ್ಲದ ಯಾವುದೇ ಸ್ಥಳವನ್ನು ಶೌಚಾಲಯದಂತೆ ಬಳಸುವ ಅಥವಾ ಬಳಸಲು ಅನುಮತಿಸುವ,

- ಯಾರೇ ಆಗಲಿ ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

ಮಾರುಕಟ್ಟೆಗಳು, ಸರಕುಗಳ ಮಾರಾಟ ಇತ್ಯಾದಿಗಳ ನಿಯಂತ್ರಣ

243. ಮಾರುಕಟ್ಟೆಗಳು, ಕಸಾಯಿಖಾನೆಗಳು ಮತ್ತು ಕೆಲವು ವ್ಯವಹಾರಗಳಿಗೆ ಲೈಸೆನ್ಸ್‌ಗಳನ್ನು ಕೊಡುವುದು.- (1) ಅಂಥ ಲೈಸೆನ್ಸ್ ಗಳನ್ನು ಮಂಜೂರು ಮಾಡಬಹುದಾದಂಥ ಮುನ್ಸಿಪಲ್ ಕೌನ್ಸಿಲ್‌ನಿಂದ ಪಡೆದ ಲೈಸೆನ್ಸ್‌ಗಳ ಷರತ್ತುಗಳ ಮೇರೆಗಲ್ಲದೆ ಮತ್ತು ಅದಕ್ಕನುಸಾರವಾಗಲ್ಲದೆ, 324ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದ (i), (ii), (iii) (iv) ಮತ್ತು (v)ನೇ ಉಪಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಉದ್ದೇಶಕ್ಕಾಗಿ ಮುನ್ಸಿಪಲ್ ಕೌನ್ಸಿಲ್ ಗೆ ಸೇರಿರದ ಅಥವಾ ಅದರಲ್ಲಿ ನಿಹಿತವಾಗಿರದ ಯಾವುದೇ ಸ್ಥಳವನ್ನು ಬಳಸತಕ್ಕದ್ದಲ್ಲವೆಂದು ನಿರ್ದೇಶಿಸುವುದು ಮುನ್ಸಿಪಲ್ ಕೌನ್ಸಿಲ್ ಗೆ ಕಾನೂನು ಸಮ್ಮತವಾಗಿರತಕ್ಕದ್ದು ಮತ್ತು ಲೈಸೆನ್ಸ್ ನ ಯಾವುದೇ ಷರತ್ತನ್ನು ಉಲ್ಲಂಘಿಸಿದರೆ ಅಥವಾ ಯಾವುದೇ ಬೈಲಾದ ಅಥವಾ ಈ ಅಧಿನಿಯಮದ ಯಾವುವೇ ಉಪಬಂಧಗಳನ್ನು ಉಲ್ಲಂಘಿಸಿದರೆ ಈ ಅಧಿನಿಯಮದ ಮೇರೆಗೆ ಲೈಸೆನ್ಸ್‌ದಾರನನ್ನು ಪ್ರಾಸಿಕ್ಯೂಟ್ ಮಾಡಿರಲಿ ಅಥವಾ ಮಾಡಿಲ್ಲದಿರಲಿ ಅಂಥ ಲೈಸೆನ್ಸ್‌ನ್ನು ಅಮಾನತ್ತುಗೊಳಿಸಬಹುದು, ತಡೆಹಿಡಿಯಬಹುದು ಅಥವಾ ಹಿಂದಕ್ಕೆ ಪಡೆಯಬಹುದು.

(2) ನಿರ್ದೇಶನಕ್ಕೆ ತದ್ವಿರುದ್ಧವಾಗಿ ಅಥವಾ (1)ನೇ ಉಪಪ್ರಕರಣವು ಅಗತ್ಯಪಡಿಸಿದ ಲೈಸೆನ್ಸ್ ನ್ನು ಪಡೆಯದೆ ಅಥವಾ ಲೈಸೆನ್ಸಿನ ಯಾವುದೇ ಷರತ್ತನ್ನು ಉಲ್ಲಂಘಿಸಿ ಅಥವಾ ಅದರ ಅಮಾನತ್ತಿನ ಅವಧಿಯಲ್ಲಿ ಯಾವುದೇ ಸ್ಥಳವನ್ನು ಬಳಸುವ ಅಥವಾ ಬಳಸಲು ಅನುಮತಿಸುವ ಯಾರೇ ಆಗಲಿ ಇಪ್ಪತ್ತೈದು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(3) ಉಪಪ್ರಕರಣ (2) ರ ಮೇರೆಗೆ ಯಾವುದೇ ಸ್ಥಳಕ್ಕೆ ಸಂಬಂಧಿಸಿದಂತೆ, ಅಪರಾಧ ನಿರ್ಣಯವು ಚಾಲ್ತಿಯಲ್ಲಿರುವಾಗ, ಮ್ಯಾಜಿಸ್ಟ್ರೇಟ್ ನು ಮುನ್ಸಿಪಲ್ ಕೌನ್ಸಿಲ್‌ಗೆ ಅರ್ಜಿ ಸಲ್ಲಿಸಿದಾಗ, ಆದರೆ ಅನ್ಯಥಾ ಅಲ್ಲದೆ, ಅಂಥ ಸ್ಥಳವನ್ನು ಮುಚ್ಚುವಂತೆ ಆದೇಶಿಸಬಹುದು ಮತ್ತು ಆ ತರುವಾಯ ಅಂಥ ಸ್ಥಳವನ್ನು ಹಾಗೆ ಬಳಸುವುದನ್ನು ತಡೆಯಲು ಜನರನ್ನು ನೇಮಿಸತಕ್ಕದ್ದು ಅಥವಾ ಇತರ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು; ಮತ್ತು ಆ ಸ್ಥಳವನ್ನು ಮುಚ್ಚತಕ್ಕದ್ದೆಂದು ಹಾಗೆ ಆದೇಶಿಸಿದ ತರುವಾಯ ಅದನ್ನು ಹಾಗೆ ಬಳಸುವ ಅಥವಾ ಬಳಸಲು ಅನುಮತಿಸುವ ಪ್ರತಿಯೊಬ್ಬ ವ್ಯಕ್ತಿಯು ಮುಚ್ಚತಕ್ಕದ್ದೆಂದು ಹಾಗೆ ಆದೇಶಿಸಿದ ತರುವಾಯವೂ ಆ ಸ್ಥಳವನ್ನು ಅವನು ಹಾಗೆ ಬಳಸುವುದನ್ನು ಮುಂದುವರಿಸುವ ಅಥವಾ ಅದರ ಬಳಕೆಗೆ ಅನುಮತಿಸುವಂಥ ಅವಧಿಯ ಪ್ರತಿಯೊಂದು ದಿನಕ್ಕೆ ಐದು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

244. ಮಾರುಕಟ್ಟೆಗಳನ್ನು ಮತ್ತು ಕಸಾಯಿಖಾನೆಗಳನ್ನು ತೆರೆಯುವುದು, ಮುಚ್ಚುವುದು ಮತ್ತು ಬಾಡಿಗೆಗೆ ಕೊಡುವುದು.- (1) ಮುನ್ಸಿಪಲ್ ಕೌನ್ಸಿಲ್ ಕಾಲಕಾಲಕ್ಕೆ ಯಾವುದೇ ಸಾರ್ವಜನಿಕ ಮಾರುಕಟ್ಟೆಯನ್ನು ಅಥವಾ ಕಸಾಯಿಖಾನೆಯನ್ನು ತೆರೆಯಬಹುದು ಅಥವಾ ಮುಚ್ಚಬಹುದು, ಯಾವುದೇ ಅಂಥ ಮಾರುಕಟ್ಟೆಯನ್ನು ಅಥವಾ ಕಸಾಯಿಖಾನೆಯನ್ನು ಯಾರೇ ವ್ಯಕ್ತಿಯು ಬಳಸುವುದಕ್ಕಾಗಿ ಅಂಗಡಿ ಸುಂಕವನ್ನಾಗಲಿ ಅಥವಾ ಇತರ ಬಾಡಿಗೆಯನ್ನು ಅಥವಾ ಫೀಜುಗಳನ್ನು ಸಹ ಪಡೆಯಬಹುದು ಅಥವಾ ಅಂಥ ಯಾವುದೇ ಮಾರುಕಟ್ಟೆಯಲ್ಲಿ ಅಥವಾ ಕಸಾಯಿಖಾನೆಯಲ್ಲಿ ಅಂಥ ಯಾವುದೇ ಅಂಗಡಿಯನ್ನು ಅಥವಾ ಸ್ಥಳವನ್ನು ಅನುಭೋಗಿಸುವ ಅಥವಾ ಅನ್ಯಥಾ ಬಳಸುವ ವಿಶೇಷಾಧಿಕಾರವನ್ನು ಕಾಲಕಾಲಕ್ಕೆ ಬಹಿರಂಗ ಹರಾಜಿನ ಮೂಲಕ ಅಥವಾ ಅನ್ಯಥಾ ಮಾರಬಹುದು ಮತ್ತು ಬಳಕೆಯ ಉದ್ದೇಶಗಳಿಗಾಗಿ ಯಾವುದೇ ಕಸಾಯಿಖಾನೆಯಲ್ಲಿ ವಧಿಸಿದ ಯಾವುದೇ ಪ್ರಾಣಿಯ ಮೇಲೆ ಫೀಜನ್ನು ವಿಧಿಸಬಹುದು.

(2) ಮುನ್ಸಿಪಲ್ ಕೌನ್ಸಿಲ್ ನಿಂದ ಅನುಮತಿ ಅಥವಾ ಲೈಸೆನ್ಸ್ ಪಡೆಯದೆ ಸದರಿ ಮಾರುಕಟ್ಟೆಗಳಲ್ಲಿ ಯಾವುವೇ ವಸ್ತುಗಳನ್ನು ಮಾರಾಟ ಮಾಡುವ ಅಥವಾ ಮಾರಾಟಕ್ಕಾಗಿ ಇಡುವ ಅಥವಾ ಸದರಿ ಕಸಾಯಿಖಾನೆಗಳನ್ನು ಬಳಸುವ ಯಾರೇ ವ್ಯಕ್ತಿಯು, ಇಪ್ಪತ್ತೈದು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(3) ಉಪ-ಪ್ರಕರಣ (1)ರ ಮೇರೆಗೆ ವಿಧಿಸಬಹುದಾದಂಥ ಯಾವುದೇ ಬಾಡಿಗೆ ಅಥವಾ ಫೀಜಿನ ಸಂಗ್ರಹಣೆಯನ್ನು ಪ್ರಕಟಣೆ ಮಾಡುವುದು ಅಥವಾ ಖಾಸಗೀ ಕರಾರಿನ ಮೂಲಕ ಒಂದು ಬಾರಿಗೆ ಒಂದು ವರ್ಷಕ್ಕೆ ಮೀರಿದ ಅವಧಿಗಾಗಿ ಬಾಡಿಗೆಗೆ ಕೊಡುವುದು ಮುನ್ಸಿಪಲ್ ಕೌನ್ಸಿಲ್ ಗೆ ಕಾನೂನುಸಮ್ಮತವಾಗಿರತಕ್ಕದ್ದು.

(4) ಈ ಬಗ್ಗೆ ಮುನ್ಸಿಪಲ್ ಕೌನ್ಸಿಲ್ ನಿಂದ ವಿಶೇಷವಾಗಿ ಶಕ್ತಗೊಳಿಸಿದ ಯಾರೇ ಅಧಿಕಾರಿಗೆ, ಯಾವುದೇ ಮಾರುಕಟ್ಟೆಯಲ್ಲಿ ಯಾವುದೇ ಅಂಗಡಿಯನ್ನು ಅಥವಾ ಸ್ಥಳವನ್ನು ಯಾರೇ ವ್ಯಕ್ತಿಯು ಅನಧಿಕೃತವಾಗಿ ಅನುಭೋಗಿಸುತ್ತಿರುವನೆಂದು ಅಥವಾ ಅಂಗಡಿಯನ್ನು ಅಥವಾ ಸ್ಥಳವನ್ನು ಅನುಭೋಗಿಸುವ ಅಧಿಕಾರವು ಕೊನೆಗೊಂಡ ತರುವಾಯವೂ ಅನುಭೋಗಿಸುವುದನ್ನು ಮುಂದುವರಿಸಿರುವುದು ಮನದಟ್ಟಾದರೆ, ಅವರು, ಮುನ್ಸಿಪಲ್ ಕೌನ್ಸಿಲ್ ನಿಂದ ಮುಂಚಿತವಾಗಿಯೇ ಮಂಜೂರಾತಿ ಪಡೆದು ಆ ಅಂಗಡಿಯನ್ನು ಅಥವಾ ಸ್ಥಳವನ್ನು, ಕಡ್ಡಾಯ ಕೋರಿಕೆಯಲ್ಲಿ ನಮೂದಿಸಬಹುದಾದಂಥ ಅವಧಿಯೊಳಗೆ ಖಾಲಿ ಮಾಡಲು ಅಂಥ ವ್ಯಕ್ತಿಯನ್ನು ಅಗತ್ಯಪಡಿಸಬಹುದು, ಅಂಥ ವ್ಯಕ್ತಿಯು ಆ ಕೋರಿಕೆಯನ್ನು ಪಾಲಿಸಲು ತಪ್ಪಿದರೆ ಅಂಥ ವ್ಯಕ್ತಿಯನ್ನು ಈ ಅಧಿನಿಯಮದ ಮೇರೆಗೆ ವಿಧಿಸಬಹುದಾದಂಥ ಯಾವುದೇ ದಂಡನೆಯ ಜೊತೆಗೆ ಆ ಅಂಗಡಿಯಿಂದ ಅಥವಾ ಸ್ಥಳದಿಂದ ಕ್ಷಿಪ್ರವಾಗಿ ಹೊರ ಹಾಕಬಹುದು.

[**245.** ಗಲಭೆಕೋರರು ಮುಂತಾದವರನ್ನು ಮಾರುಕಟ್ಟೆಗಳಿಂದ ಹೊರದೂಡಲು ಅಧಿಕಾರ**.-** ಮಾರುಕಟ್ಟೆಯಲ್ಲಿ ಯಾವುದೇ ವಸ್ತುವನ್ನು ಮಾರುವ ಅಥವಾ ಮಾರಾಟಕ್ಕೆ ತೆರೆದಿಟ್ಟಿರುವ ಅಥವಾ ಅದರಲ್ಲಿ ಮಾರಾಟಕ್ಕಾಗಿ ಇಟ್ಟಿರುವ ಯಾವುದೇ ವಸ್ತುವನ್ನು ಕೊಂಡಿರದೇ ಅದನ್ನು ಮುಟ್ಟಿ ನೋಡುವ, ಯಾವುದೇ ಅಪಾಯಕಾರಿ ಅಥವಾ ಅಂಟುರೋಗದಿಂದ ನರಳುತ್ತಿರುವ, ಯಾರೇ ವ್ಯಕ್ತಿಯು ಮಾರುಕಟ್ಟೆಗೆ ಪ್ರವೇಶಿಸುವುದನ್ನು, ಮಾರುಕಟ್ಟೆಯ ಪ್ರಭಾರದಲ್ಲಿರುವ ವ್ಯಕ್ತಿಯು ತಡೆಯತಕ್ಕದ್ದು ಮತ್ತು ಅಲ್ಲಿಂದ ಅವನನ್ನು ಹೊರದೂಡತಕ್ಕದ್ದು; ಮತ್ತು ಅಲ್ಲಿ ಗಲಭೆ ಎಬ್ಬಿಸುವ ಯಾರೇ ವ್ಯಕ್ತಿಯನ್ನು ಅಲ್ಲಿಂದ ಹೊರದೂಡಬಹುದು.]

1.2021ರ ಅಧಿನಿಯಮ 16ರ ಮೂಲಕ ದಿನಾಂಕ. 31.03.2021ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.ಹಿಂದಿನ ಪಠ್ಯ.-

245.ಕುಷ್ಠ ರೋಗಿಗಳು ಮತ್ತು ಗಲಭೆಕೋರರು ಮುಂತಾದವರನ್ನು ಮಾರುಕಟ್ಟೆಗಳಿಂದ ಹೊರದೂಡಲು ಅಧಿಕಾರ.- ಮಾರುಕಟ್ಟೆಯ ಪ್ರಭಾರದಲ್ಲಿರುವ ವ್ಯಕ್ತಿಯು ವ್ರಣಗಳು ಪ್ರಾರಂಭವಾಗಿರುವ ಕುಷ್ಠರೋಗದಿಂದ ಅಥವಾ ಯಾವುದೇ ಅಪಾಯಕಾರಿ ರೋಗದಿಂದ ನರಳುತ್ತಿದ್ದು ಅದರಲ್ಲಿ ಯಾವುದೇ ವಸ್ತುವನ್ನು ಮಾರುವ ಅಥವಾ ಮಾರಾಟಕ್ಕೆ ಇಟ್ಟಿರುವ ಅಥವಾ ಅದರಲ್ಲಿ ಮಾರಾಟಕ್ಕಾಗಿ ಯಾವುದೇ ವಸ್ತುವನ್ನು ಕೊಳ್ಳದೆ ಕೇವಲ ಅದನ್ನು ಮುಟ್ಟಿ ನೋಡುವ ಯಾರೇ ವ್ಯಕ್ತಿಯು ಮಾರುಕಟ್ಟೆಗೆ ಪ್ರವೇಶಿಸುವುದನ್ನು ತಡೆಯತಕ್ಕದ್ದು ಮತ್ತು ಅಲ್ಲಿಂದ ಅವನನ್ನು ಹೊರದೂಡತಕ್ಕದ್ದು; ಮತ್ತು ಅಲ್ಲಿ ಗಲಭೆ ಎಬ್ಬಿಸುವ ಯಾರೇ ವ್ಯಕ್ತಿಯನ್ನು ಅಲ್ಲಿಂದ ಹೊರದೂಡಬಹುದು.

246. ಮುನ್ಸಿಪಲ್ ಎಲ್ಲೆಗಳಿಂದ ಹೊರಗಡೆ ಕಸಾಯಿಖಾನೆಗಳು ಇತ್ಯಾದಿ.- ಡೆಪ್ಯೂಟಿ ಕಮಿಷನರ್ ನಿಂದ ಮಂಜೂರಾತಿ ಪಡೆದು [1][ಮುನ್ಸಿಪಲ್ ಏರಿಯಾ][1]ದ ಎಲ್ಲೆಗಳಿಂದ ಹೊರಗಡೆ ಪ್ರಾಣಿಗಳ ಹೆಣಗಳ ವಿಲೆಗಾಗಿ ಕಸಾಯಿ ಖಾನೆಗಳನ್ನು ಅಥವಾ ಸ್ಥಳಗಳನ್ನು ಸ್ಥಾಪಿಸುವುದು ಮುನ್ಸಿಪಲ್ ಕೌನ್ಸಿಲ್ ಗೆ ಕಾನೂನು ಬದ್ಧವಾಗಿರತಕ್ಕದ್ದು ಮತ್ತು ಮುನ್ಸಿಪಲ್ ಎಲ್ಲೆಗಳ ಒಳಗೆ ಇರುವ ಅಂಥ ಸ್ಥಳಗಳಿಗೆ ಸಂಬಂಧಪಡುವ ಈ ಅಧಿನಿಯಮದ ಮತ್ತು ಅದರಡಿಯಲ್ಲಿ ಜಾರಿಯಲ್ಲಿರುವ ಬೈಲಾಗಳ ಎಲ್ಲ ನಿಬಂಧನೆಗಳು ಅಂಥ ಸ್ಥಳಗಳು, ಮುನ್ಸಿಪಲ್ ಎಲ್ಲೆಗಳ ಒಳಗೆ ಇದ್ದಿದ್ದರೆ ಹೇಗೆ ಸಂಪೂರ್ಣವಾಗಿ ಜಾರಿಯಲ್ಲಿರುತ್ತಿದ್ದವೋ ಹಾಗೆಯೇ ಅಲ್ಲಿಯು ಸಂಪೂರ್ಣವಾಗಿ ಜಾರಿಯಲ್ಲಿರತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

247. ಅನಾರೋಗ್ಯಕರ ಆಹಾರ ವಸ್ತುಗಳು ಮತ್ತು ಪಾನೀಯ.- (1) ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ಅಥವಾ ಈ ಬಗ್ಗೆ ಮುನ್ಸಿಪಲ್ ಕೌನ್ಸಿಲ್ ನಿಂದ ಅಧಿಕೃತನಾದ ಯಾರೇ ವ್ಯಕ್ತಿಯು ಯಾವುದೇ ಸೂಕ್ತ ಸಮಯದಲ್ಲಿ ಆಹಾರ ವಸ್ತುಗಳ ಮತ್ತು ಪಾನೀಯದ ದಾಸ್ತಾನು ಅಥವಾ ಮಾರಾಟಕ್ಕಾಗಿ ಬಳಸಿದ ಅಥವಾ ಪ್ರಾಣಿಗಳ ವಧೆಗಾಗಿ ಬಳಸಿದ ಯಾವುದೇ ಮಾರುಕಟ್ಟೆ, ಕಟ್ಟಡ, ಅಂಗಡಿ, ಮಳಿಗೆ ಅಥವಾ ಸ್ಥಳಕ್ಕೆ ಪ್ರವೇಶಿಸಬಹುದು ಮತ್ತು ಪರಿಶೀಲಿಸಬಹುದು ಮತ್ತು ಅಲ್ಲಿ ಇಟ್ಟಿರಬಹುದಾದ ಯಾವುದೇ ಆಹಾರ ವಸ್ತುವನ್ನು ಅಥವಾ ಪಾನೀಯವನ್ನು ಅಥವಾ ಯಾವುದೇ ಪ್ರಾಣಿಯನ್ನು ಪರೀಕ್ಷಿಸಬಹುದು ಮತ್ತು ಅಲ್ಲಿನ ಯಾವುದೇ ಆಹಾರ ವಸ್ತುವು ಅಥವಾ ಪಾನೀಯವು ಅಥವಾ ಯಾವುದೇ ಪ್ರಾಣಿಯು ಮಾನವನ ಬಳಕೆಗಾಗಿ ಉದ್ದೇಶಿಸಲಾಗಿದೆ ಎಂದು ಮತ್ತು ಅದಕ್ಕೆ ಯೋಗ್ಯವಾದುದಾಗಿಲ್ಲವೆಂದು ಕಂಡುಬಂದರೆ, ಅವನು ಅದನ್ನು ವಶಕ್ಕೆ ತೆಗೆದುಕೊಳ್ಳಬಹುದು.

(2) ಅಂಥ ವಸ್ತುವಿನ ಅಥವಾ ಪ್ರಾಣಿಗಳ ಒಡೆಯನು ಅಥವಾ ಅವು ಯಾರ ಸ್ವಾಧೀನದಲ್ಲಿ ಕಂಡು ಬರುವುದೋ ಆ ವ್ಯಕ್ತಿಯು ಅದಕ್ಕೆ ಒಪ್ಪಿದರೆ ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ಅಥವಾ ಅಧಿಕೃತ ವ್ಯಕ್ತಿಯು ಅದನ್ನು ನಾಶಪಡಿಸಬಹುದು ಅಥವಾ ಅದನ್ನು ಮಾರಾಟಕ್ಕಾಗಿ ಇಡುವುದನ್ನು ಅಥವಾ ಮನುಷ್ಯನ ಬಳಕೆಗಾಗಿ ಬಳಸುವುದನ್ನು ತಡೆಗಟ್ಟುವ ಹಾಗೆ ವಿಲೆ ಮಾಡಬಹುದು.

(3) ಅಂಥ ವಸ್ತುವು ಕೆಟ್ಟು ಹೋಗುವ ಸ್ವರೂಪದ್ದಾಗಿದ್ದರೆ ಅದನ್ನು ಸ್ವಾಧೀನದಲ್ಲಿ ಇಟ್ಟುಕೊಂಡಿರುವ ವ್ಯಕ್ತಿಯ ಸಮ್ಮತಿ ಇಲ್ಲದೆಯೇ (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಅದನ್ನು ವಿಲೇ ಮಾಡಬಹುದು.

(4) ಸರಿಯಾದ ಮತ್ತು ಆರೋಗ್ಯಕರವಾದ ರಕ್ಷಣೆ ಇಲ್ಲದೆ ಯಾವುದೇ ಆಹಾರ ವಸ್ತುವನ್ನು ಅಥವಾ ಪಾನೀಯವನ್ನು ಮಾರಾಟಕ್ಕಾಗಿ ಇಡತಕ್ಕದ್ದಲ್ಲ.

(5) ಉಪಪ್ರಕರಣ (2) ಮತ್ತು (3) ರ ಅಡಿಯಲ್ಲಿ ಬರದಿರುವ ಸಂದರ್ಭಗಳಲ್ಲಿ ಹಿಂದೆ ಹೇಳಿದಂತೆ ವಶಕ್ಕೆ ತೆಗೆದುಕೊಂಡ ವಸ್ತುವನ್ನು ಅಥವಾ ಪ್ರಾಣಿಯನ್ನು ತತ್‌ಕ್ಷಣ ತೆಗೆಯತಕ್ಕದ್ದು ಮತ್ತು (6)ನೇ ಉಪಪ್ರಕರಣದ ಮೇರೆಗೆ ಆದೇಶಗಳಿಗಾಗಿ ಅದನ್ನು ಮೊದಲನೇ ವರ್ಗದ ಮ್ಯಾಜಿಸ್ಟ್ರೇಟ್ ನ ಮುಂದೆ ಇಡತಕ್ಕದ್ದು.

(6) ಉಪಪ್ರಕರಣ (5)ರ ಮೇರೆಗೆ ಯಾವುದೇ ಪ್ರಾಣಿಯನ್ನು ಅಥವಾ ವಸ್ತುವನ್ನು ಮ್ಯಾಜಿಸ್ಟ್ರೇಟ್ ನ ಮುಂದೆ ತಂದರೆ, ಮ್ಯಾಜಿಸ್ಟ್ರೇಟ್ ನು, ಮನುಷ್ಯರ ಬಳಕೆಗಾಗಿ ಆ ವಸ್ತುವನ್ನು ಅಥವಾ ಪ್ರಾಣಿಯನ್ನು ಉದ್ದೇಶಿಸಲಾಗಿದೆ ಎಂದು, ಆದರೆ ಅದು ಬಳಕೆಗೆ ಯೋಗ್ಯವಾದುದಾಗಿಲ್ಲ ಎಂದು ರುಜುವಾತುಪಡಿಸಿದ ಮೇಲೆ, ಆ ವಸ್ತುವನ್ನು ಅಥವಾ ಪ್ರಾಣಿಯನ್ನು ನಾಶಪಡಿಸಬೇಕೆಂದು ಅಥವಾ ಅದನ್ನು ಮಾರಾಟಕ್ಕಾಗಿ ಇಡುವುದನ್ನು ಅಥವಾ ಮನುಷ್ಯನ ಬಳಕೆಗಾಗಿ ಬಳಸುವುದನ್ನು

ತಡೆಗಟ್ಟುವ ಸಲುವಾಗಿ ಸೂಕ್ತವೆಂದು ತಾನು ಯೋಚಿಸಬಹುದಾದಂತೆ ವ್ಯವಹರಿಸಬೇಕೆಂದು ಆದೇಶಿಸಬಹುದು ಮತ್ತು ಅಂಥ ವಸ್ತುವಿನ ಅಥವಾ ಪ್ರಾಣಿಯ ಒಡೆಯನು ಅಥವಾ ಅದನ್ನು ಸ್ವಾಧೀನದಲ್ಲಿಟ್ಟುಕೊಂಡಿರುವ ವ್ಯಕ್ತಿಯು ಒಂದು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದೆಂದು ನಿರ್ದೇಶಿಸಬಹುದು:

ಪರಂತು, ಅದರ ಸ್ವರೂಪದ ತಿಳಿವಳಿಕೆ ಇಲ್ಲದೆ ಯಾವುದೇ ವಸ್ತುವನ್ನು ಅಥವಾ ಪ್ರಾಣಿಯನ್ನು ಅದರ ವಾಹಕನಾಗಿ ಅಥವಾ ಸರಕು ರಕ್ಷಕನಾಗಿ ಸ್ವಾಧೀನದಲ್ಲಿಟ್ಟು ಕೊಂಡಿರುವ ವ್ಯಕ್ತಿಯು ಈ ಪ್ರಕರಣದ ಮೇರೆಗಿನ ಜುಲ್ಮಾನೆಗೆ ಗುರಿಯಾಗತಕ್ಕದ್ದಲ್ಲ:

ಮತ್ತು ಪರಂತು, ಈ ಉಪಪ್ರಕರಣದಲ್ಲಿ ಹೇಳಿರುವ ಯಾವುದೇ ಆಹಾರ ವಸ್ತುವು ಅಥವಾ ಪಾನೀಯವು ಆರೋಗ್ಯಕ್ಕೆ ಹಾನಿಕಾರಕವಲ್ಲದ ಯಾವುದೇ ಪದಾರ್ಥವನ್ನು ಅದಕ್ಕೆ ಸೇರಿಸಲಾಗಿದೆಯೆಂಬ ಒಂದೇ ಕಾರಣದಿಂದ ಅದನ್ನು ಏನಂಥ ಹೇಳಲಾಗಿದೆಯೋ ಅದು ಅದಲ್ಲವೆಂದು ಕಂಡುಬಂದರೆ, ಆಗ ಅಂಥ ವಸ್ತುವಿನ ಒಡೆಯನು ಅಥವಾ ಅದು ಯಾರ ಸ್ವಾಧೀನದಲ್ಲಿ ಇದೆಯೋ ಆ ವ್ಯಕ್ತಿಯು,-

(ಎ) ಅಂಥ ವಸ್ತುವನ್ನು ಆಹಾರ ವಸ್ತುವಿಗೆ ಅಥವಾ ಪಾನೀಯಕ್ಕೆ ಸೇರಿಸಲಾಗಿದೆ, ಏಕೆಂದರೆ ಅದನ್ನು ವಾಣಿಜ್ಯ ವಸ್ತುವಾಗಿ ಸಾಗಣೆ ಅಥವಾ ಬಳಕೆಗಾಗಿ ಯುಕ್ತ ಸ್ಥಿತಿಯಲ್ಲಿ ಅದನ್ನು ಉತ್ಪಾದಿಸುವುದಕ್ಕಾಗಿ ಅಥವಾ ತಯಾರಿಕೆಗಾಗಿ ಅದು ಅಗತ್ಯವಾಗಿದೆ ಎಂದು ಮತ್ತು ಮೋಸದಿಂದ ಆಹಾರದ ಮತ್ತು ಪಾನೀಯದ ಗಾತ್ರ, ತೂಕ ಅಥವಾ ಅಳತೆಯನ್ನು ಹೆಚ್ಚಿಸಲು ಅಥವಾ ಅದರ ಕೀಳು ಗುಣಮಟ್ಟವನ್ನು ಬಚ್ಚಿಡಲು ಅಲ್ಲವೆಂದು; ಅಥವಾ

(ಬಿ) ಅಂಥ ಆಹಾರ ವಸ್ತುವಿನ ಅಥವಾ ಪಾನೀಯದ ಉತ್ಪತ್ತಿ ತಯಾರಿಕೆ ಅಥವಾ ಸಾಗಣೆ ಪ್ರಕ್ರಿಯೆಯಲ್ಲಿ ಹೊರಗಿನ ವಸ್ತುವು ಅನಿವಾರ್ಯವಾಗಿ ಅದರೊಂದಿಗೆ ಮಿಶ್ರವಾಗಿದೆಯೆಂದು; ಅಥವಾ

(ಸಿ) ಸ್ಪಷ್ಟವಾಗಿ ಮತ್ತು ಸ್ಪುಟವಾಗಿ ಸದರಿ ಆಹಾರ ವಸ್ತುವಿನ ಅಥವಾ ಪಾನೀಯದ ಮೇಲೆ ಅಥವಾ ಅದರೊಂದಿಗೆ ಬರೆದ ಅಥವಾ ಮುದ್ರಿಸಿದ ಗುರುತು ಚೀಟಿಯ ಮೂಲಕ ಅಥವಾ ಬಹಿರಂಗ ವರ್ಣನೆಯ ಇತರ ಸಾಧನದ ಮೂಲಕ ಅಂಥ ವಸ್ತುವನ್ನು ಹಾಗೆ ಸೇರಿಸಲಾಗಿದೆ ಎಂದು ತಾನು ಸಾಕಷ್ಟು ತಿಳಿವಳಿಕೆಯನ್ನು ಕೊಟ್ಟಿರುವನೆಂದು; ಅಥವಾ

(ಡಿ) (i) ಸದರಿ ವಸ್ತುವು ನಿಶ್ಚಿತ ಸ್ವರೂಪದ್ದು, ಸಾರವುಳ್ಳದ್ದು ಮತ್ತು ಗುಣದ್ದು ಆಗಿತ್ತೆಂದು ಬರಹದಲ್ಲಿ ಇದ್ದ ಭರವಸೆಯಿಂದಾಗಿ ಸದರಿ ವಸ್ತುವನ್ನು ತಾನು ಖರೀದಿಸಿದ್ದೇನೆಂದು;

(ii) ಹಿಂದೆ ಹೇಳಿದಂತೆ ಅಂಥ ಸ್ವರೂಪವನ್ನು, ಸಾರವನ್ನು ಮತ್ತು ಗುಣವನ್ನು ಹೊಂದಿಲ್ಲವೆಂದು ತಾನು ನಂಬಲು ಯಾವುದೇ ಕಾರಣವಿರಲಿಲ್ಲವೆಂದು; ಮತ್ತು

(iii) ಬರಹದಲ್ಲಿ ಇದ್ದ ಭರವಸೆಯಲ್ಲಿ ನಿರ್ದಿಷ್ಟಪಡಿಸಿದ ಸ್ವರೂಪ, ಸಾರ ಅಥವಾ ಗುಣ ಹೊಂದಿರುವ ವಸ್ತುವಾಗಲ್ಲದೆ ಅನ್ಯಥಾ ತಾನು ಇಟ್ಟಿರಲಿಲ್ಲ, ಹೊತ್ತುಕೊಂಡು ಮಾರಾಟ ಮಾಡಿಲ್ಲ ಅಥವಾ ಮಾರಾಟಕ್ಕಾಗಿ ತಂದಿಲ್ಲ ಮತ್ತು ಅದು ತಾನು ಖರೀದಿಸಿದಾಗ ಇದ್ದಂಥ ಸ್ಥಿತಿಯಲ್ಲಿಯೇ ಅದು ಇತ್ತೆಂದು,-

ಅಂಥ ಒಡೆಯನು ಅಥವಾ ವ್ಯಕ್ತಿಯು ಮ್ಯಾಜಿಸ್ಟ್ರೇಟ್ ನಿಗೆ ಮನದಟ್ಟಾಗುವಂತೆ ರುಜುವಾತುಪಡಿಸಿದರೆ ಆ ವಸ್ತುವಿನ ಒಡೆಯನು ಅಥವಾ ಅದನ್ನು ಸ್ವಾಧೀನದಲ್ಲಿ ಇಟ್ಟುಕೊಂಡಿರುವುದಾಗಿ ಕಂಡುಬಂದ ವ್ಯಕ್ತಿಯು ಯಾವುದೇ ಅಪರಾಧವನ್ನು ಮಾಡಿರುವನೆಂಬುದಾಗಿ ಭಾವಿಸತಕ್ಕದ್ದಲ್ಲ.

(7) ಯಾವುದೇ ಮಳಿಗೆಯನ್ನು ಅಥವಾ ನಿರ್ದಿಷ್ಟ ಸ್ಥಳವನ್ನು ಬೆಣ್ಣೆ ಅಥವಾ ತುಪ್ಪದ ಮಾರಾಟಕ್ಕಾಗಿ ಪ್ರತ್ಯೇಕವಾಗಿಡಲು ಮುನ್ಸಿಪಲ್ ಕೌನ್ಸಿಲ್ ಗೆ ಅವಕಾಶವಿರುತ್ತದೆ ಮತ್ತು ಅಂಥ ಮಳಿಗೆಯಲ್ಲಿ ಅಥವಾ ನಿರ್ದಿಷ್ಟ ಸ್ಥಳದಲ್ಲಿ ಇತರ ಯಾವುದೇ ವಸ್ತುವಿನಿಂದ ಕಲಬೆರಕೆಗೊಂಡ ಬೆಣ್ಣೆಯನ್ನು ಅಥವಾ ತುಪ್ಪವನ್ನು ಮಾರಾಟ ಮಾಡತಕ್ಕದ್ದಲ್ಲ ಅಥವಾ ಮಾರಾಟಕ್ಕಾಗಿ ಇಡತಕ್ಕದ್ದಲ್ಲ.

(8) ಹಾಗೆ ಪ್ರತ್ಯೇಕವಾಗಿ ಇಟ್ಟ ಯಾವುದೇ ಮಳಿಗೆಯಲ್ಲಿ ಅಥವಾ ಸ್ಥಳದಲ್ಲಿ ಕಲಬೆರಕೆಯಾದ ಬೆಣ್ಣೆಯನ್ನು ಅಥವಾ ತುಪ್ಪವನ್ನು ಮಾರಾಟ ಮಾಡುವ ಅಥವಾ ಮಾರಾಟಕ್ಕಾಗಿ ಇಡುವ ಯಾರೇ ಆಗಲಿ ಒಂದು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು ಮತ್ತು ಮ್ಯಾಜಿಸ್ಟ್ರೇಟ್ ನು ಅಂಥ ತುಪ್ಪವನ್ನು ನಾಶಪಡಿಸುವಂತೆ ಅಥವಾ ಅಂಥ ಮಳಿಗೆಯಲ್ಲಿ ಅಥವಾ ಸ್ಥಳದಲ್ಲಿ ಅದನ್ನು ಮಾರಾಟಕ್ಕೆ ಇಡುವುದನ್ನು ತಡೆಯುವ ಸಲುವಾಗಿ ವಿಲೆ ಮಾಡಿಸಬಹುದು.

(9) ಈ ಪ್ರಕರಣದ ಮೇರೆಗಿನ ಎಲ್ಲಾ ಪ್ರಾಸಿಕ್ಯೂಷನ್‌ಗಳಲ್ಲಿ ಮ್ಯಾಜಿಸ್ಟ್ರೇಟ್ ನು ಅಂಥ ವ್ಯಕ್ತಿಯು ಯಾವ ದಿನಾಂಕದಂದು ಅಪರಾಧ ಮಾಡಿರುವನೆಂದು ಆಪಾದಿಸಲಾಗಿದೆಯೋ ಆ ದಿನಾಂಕದಿಂದ ಸಮಂಜಸ ಕಾಲದೊಳಗೆ ಸಮನ್ಸ್‌ಗಾಗಿ ಅರ್ಜಿಯನ್ನು ಹಾಕಿಕೊಂಡಿದ್ದ ಹೊರತು ಈ ಪ್ರಕರಣದ ಉಪಬಂಧಗಳಿಗೆ ವಿರುದ್ಧವಾಗಿ ಯಾವುದೇ ಅಪರಾಧ ಮಾಡಿದ್ದಾನೆಂದು ಆರೋಪಿತನಾಗಿರುವ ವ್ಯಕ್ತಿಯ ಹಾಜರಾತಿಗಾಗಿ ಸಮನ್ಸ್ ಹೊರಡಿಸಲು ನಿರಾಕರಿಸತಕ್ಕದ್ದು.

ಅಪಾಯಕಾರಿ ರೋಗಗಳನ್ನು ತಡೆಗಟ್ಟುವುದು

248. ಸೋಂಕು ರೋಗಗಳನ್ನು ತಡೆಗಟ್ಟುವುದು.- (1) ಪ್ರತಿಯೊಂದು ಮುನ್ಸಿಪಲ್ ಕೌನ್ಸಿಲ್ ಈ ಬಗ್ಗೆ ಯಾವುವಾದರೂ ನಿಯಮಿಸಬಹುದಾದರೆ ಅಂಥ ಪರಿಮಿತಿಗಳನ್ನು, ನಿರ್ಬಂಧಗಳನ್ನು ಮತ್ತು ಷರತ್ತುಗಳಿಗೊಳಪಟ್ಟು (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಎಲ್ಲಾ ಅಥವಾ ಯಾವುದೇ ಅಧಿಕಾರಗಳನ್ನು, ಅಪಾಯಕಾರಿ ರೋಗಗಳನ್ನು ತಡೆಗಟ್ಟುವ ಸಲುವಾಗಿ ಚಲಾಯಿಸಬಹುದು.

(2) ಹಿಂದೆ ಹೇಳಿದ ಉಪಪ್ರಕರಣದ ಮೇರೆಗೆ ಚಲಾಯಿಸಬಹುದಾದಂಥ ಅಧಿಕಾರಗಳು ಯಾವುವೆಂದರೆ:-

(ಎ) ಯಾವ ಪ್ರತಿಯೊಬ್ಬ ವೈದ್ಯಕೀಯ ವೃತ್ತಿಗಾರನಿಗೆ ಆಸ್ಪತ್ರೆಯಲ್ಲದ ಯಾವುದೇ ವಾಸಸ್ಥಳದಲ್ಲಿ ತನ್ನ ವೃತ್ತಿಯಲ್ಲಿ ನಿರತನಾಗಿರುವಾಗ ತನ್ನ ಬಳಿಗೆ ಬಂದ ಯಾರೇ ವ್ಯಕ್ತಿಯು ಸಾಂಕ್ರಾಮಿಕ ರೋಗವೆಂದು ಯುಕ್ತವಾಗಿ ಶಂಕಿಸಬಹುದಾದಂಥ ಯಾವುದೇ ಕಾಯಿಲೆಯಿಂದ ನರಳುತ್ತಿರುವುದಾಗಿ ತಿಳಿದುಬಂದಿದೆಯೋ ಅಥವಾ ಆತನಿಗೆ ಹಾಗೆ ನಂಬಲು ಕಾರಣವಿದೆಯೋ ಆ ಪ್ರತಿಯೊಬ್ಬ ವೈದ್ಯಕೀಯ ವೃತ್ತಿಗಾರನು ಅಥವಾ ಯಾವುದೇ ಕಾರ್ಖಾನೆಯ ಅಥವಾ ಶೈಕ್ಷಣಿಕ ಸಂಸ್ಥೆಯ ಯಾವ ಮ್ಯಾನೇಜರ್ ನು ಅಥವಾ ಮನೆಯ ಮುಖ್ಯಸ್ಥನು ತನ್ನ ನಿರ್ವಹಣೆಯಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಯಾವುದೇ ವಾಸಸ್ಥಳದಲ್ಲಿ ವಾಸಿಸುವ ಯಾರೇ ವ್ಯಕ್ತಿಯು ಸಾಂಕ್ರಾಮಿಕ ರೋಗವೆಂದು ಸಮಂಜಸವಾಗಿ ಊಹಿಸಬಹುದಾದಂಥ ಯಾವುದೇ ಕಾಯಿಲೆಯಿಂದ ನರಳುತ್ತಿರುವನೆಂದು ತಿಳಿದಿರುವನೋ ಅಥವಾ ನಂಬಲು ಕಾರಣವನ್ನು ಹೊಂದಿರುವನೋ ಆ ಪ್ರತಿಯೊಬ್ಬ ಮ್ಯಾನೇಜರ್ ನು ಅಥವಾ ಮನೆಯ ಮುಖ್ಯಸ್ಥನು ಅದರ ಬಗ್ಗೆ ಮಾಹಿತಿಯನ್ನು ಸಾಧ್ಯವಾದಷ್ಟು ವಿಳಂಬ ಮಾಡದೆ ಮುನ್ಸಿಪಲ್ ಕೌನ್ಸಿಲ್ ಆ ಬಗ್ಗೆ ನಾಮನಿರ್ದೇಶಿಸಬಹುದಾದಂಥ ವ್ಯಕ್ತಿಗೆ ಕೊಡತಕ್ಕದ್ದೆಂದು ವಿಶೇಷ ಅಥವಾ ಸಾಮಾನ್ಯ ಅನ್ವಯವುಳ್ಳಂಥ ಆದೇಶಗಳ ಮೂಲಕ ಅಧಿಕಾರ;

(ಬಿ) ಯಾವ ಸ್ಥಳದಲ್ಲಿ ಯಾವುದೇ ಸಾಂಕ್ರಾಮಿಕ ರೋಗದ ಬಗ್ಗೆ ವರದಿ ಮಾಡಲಾಗಿದೆಯೋ ಅಥವಾ ಸಾಂಕ್ರಾಮಿಕ ರೋಗವು ಇರುವುದಾಗಿ ಶಂಕಿಸಲಾಗಿದೆಯೋ ಆ ಯಾವುದೇ ಸ್ಥಳದ ಪರಿಶೀಲನೆಯನ್ನು ನಡೆಸಲು ಮುನ್ಸಿಪಲ್ ಕೌನ್ಸಿಲ್ ಗೆ ಕಂಡು ಬಂದರೆ, ನೋಟೀಸ್ ಕೊಡದೆಯೇ ಅಥವಾ ನಿರ್ದೇಶಿತ ಅಥವಾ ಪ್ರಾಧಿಕೃತ ವ್ಯಕ್ತಿಗೆ ಸಮಂಜಸವೆಂದು ತೋರುವಂಥ ನೋಟೀಸನ್ನು ಕೊಟ್ಟು ಮತ್ತು ಅಂಥ ಸ್ಥಳದ ಆಚೆಗೆ ರೋಗವು ಹರಡದಂತೆ ತಡೆಗಟ್ಟಲು ಕ್ರಮಗಳನ್ನು ಕೈಗೊಳ್ಳಲು ನಿರ್ದೇಶಿಸುವ ಅಥವಾ ಅಧಿಕೃತಗೊಳಿಸುವ ಅಧಿಕಾರ;

(ಸಿ) ಯಾವುದೇ ಬಾವಿಯಿಂದ, ಕೆರೆಯಿಂದ ಅಥವಾ ಇತರ ಸ್ಥಳದಿಂದ ಕುಡಿಯುವ ಉದ್ದೇಶಕ್ಕಾಗಿ ನೀರನ್ನು ತೆಗೆಯುವುದರಿಂದ ರೋಗವು ಹರಡುವ ಸಂಭವವಿದೆಯೆಂದು ಅಥವಾ ಹರಡಲು ಕಾರಣವಾಗುತ್ತದೆಂದು ಮುನ್ಸಿಪಲ್ ಕೌನ್ಸಿಲ್‌ಗೆ ಕಂಡು ಬಂದರೆ ವೈದ್ಯಾಧಿಕಾರಿಯ ಸಲಹೆಯ ಮೇರೆಗೆ ಅಲ್ಲಿಂದ ನೀರನ್ನು ತೆಗೆಯುವುದನ್ನು ನಿಷೇಧಿಸುವ ಅಧಿಕಾರ;

(ಡಿ) ಮುನ್ಸಿಪಲ್ ಕೌನ್ಸಿಲ್ ನ ಆರೋಗ್ಯಾಧಿಕಾರಿಯಿಂದ ಅಥವಾ ಈ ಬಗ್ಗೆ ಮುನ್ಸಿಪಲ್ ಕೌನ್ಸಿಲ್‌ನಿಂದ ಅಧಿಕೃತನಾದ ಕ್ರಮಬದ್ಧವಾಗಿ ಅರ್ಹತೆ ಪಡೆದ ಯಾರೇ ಮೆಡಿಕಲ್ ಪ್ರಾಕ್ಟೀಷನರ್ ನು ರುಜು ಮಾಡಿದ ಪ್ರಮಾಣಪತ್ರ ನೀಡಿದಾಗ, ಸರಿಯಾದ ವಸತಿ ಸೌಕರ್ಯ ಇಲ್ಲದ ಅಥವಾ ಸ್ಥಳವಕಾಶವಿಲ್ಲದ ಅಥವಾ ಒಂದಕ್ಕಿಂತ ಹೆಚ್ಚು ಕುಟುಂಬಗಳ ಸ್ವಾಧೀನದಲ್ಲಿರುವ ಕೊಠಡಿಯಲ್ಲಿ ಅಥವಾ ಕೊಠಡಿಗಳ ಸಮುಚ್ಚಯದಲ್ಲಿ ಇರುವ ಅಥವಾ ಅವನು ಇರುವನೋ ಆ ಸ್ಥಳದ ನೆರೆಹೊರೆಯವರಿಗೆ ಅಪಾಯಕಾರಿಯಾಗಬಹುದಾಗಿದೆಯೋ ಆ ಸ್ಥಳದಲ್ಲಿ ಇರುವ ಮತ್ತು ಸೋಂಕುರೋಗದಿಂದ ನರಳುತ್ತಿರುವವನನ್ನು ವೈದ್ಯಕೀಯ ಚಿಕಿತ್ಸೆಗಾಗಿ ಸೇರಿಸಿಕೊಳ್ಳುವಂಥ ಯಾವುದೇ ಆಸ್ಪತ್ರೆಗೆ ಅಥವಾ ಸ್ಥಳಕ್ಕೆ ಸ್ಥಳಾಂತರಿಸುವ ಸಲುವಾಗಿ, ಅಥವಾ ಸ್ಥಳಾಂತರಿಸುವಂತೆ ಮಾಡುವ ಸಲುವಾಗಿ ನಿರ್ದೇಶಿಸಲು ಮತ್ತು ಹಾಗೆ ಸ್ಥಳಾಂತರಿತ ವ್ಯಕ್ತಿಯು ಮುನ್ಸಿಪಲ್ ಕೌನ್ಸಿಲ್ ನ ಅನುಮತಿಯಿಲ್ಲದೆಯೇ ಅಂಥ ಆಸ್ಪತ್ರೆಯನ್ನು ಅಥವಾ ಸ್ಥಳವನ್ನು ಬಿಡುವುದನ್ನು ನಿಷೇಧಿಸಲು ಅಧಿಕಾರ;

(ಇ) ಯಾವುದೇ ಕಟ್ಟಡದ ಅಥವಾ ಕಟ್ಟಡದ ಭಾಗದ ಒಡೆಯನನ್ನು ಅಥವಾ `ಅಧಿಭೋಗದಾರನನ್ನು ಅಥವಾ ಅದರಲ್ಲಿರುವ ಯಾವುದೇ ವಸ್ತುವಿನ ಒಡೆತನವನ್ನು ಅಥವಾ ಸುಪರ್ದನ್ನು ಹೊಂದಿರುವ ವ್ಯಕ್ತಿಯನ್ನು ಬರಹದಲ್ಲಿ ನೋಟೀಸಿನ ಮೂಲಕ ಅಥವಾ ಕಟ್ಟಡವನ್ನು ಅಥವಾ ಅದರ ಭಾಗವನ್ನು ಅಥವಾ ವಸ್ತುವನ್ನು ಅವನ ಸ್ವಂತ ಖರ್ಚಿನಿಂದ ಅಥವಾ ಬಡತನದ ಸಂದರ್ಭದಲ್ಲಿ ಅಥವಾ ವಿಷಯದ ಸಂದರ್ಭ ಸನ್ನಿವೇಶಗಳಲ್ಲಿ ಮುನ್ಸಿಪಲ್ ಕೌನ್ಸಿಲ್ ಯುಕ್ತವೆಂದು ಪರ್ಯಾಲೋಚಿಸುವಂಥ ಇತರ ಕಾರಣಕ್ಕಾಗಿ ಮುನ್ಸಿಪಲ್ ಕೌನ್ಸಿಲ್ ನ ವೆಚ್ಚದಲ್ಲಿ, ಸ್ವಚ್ಛಗೊಳಿಸಲು ಅಥವಾ ಸೋಂಕು ನಿವಾರಿಸಲು ಅಧಿಕಾರ;

(ಎಫ್) ಸೋಂಕು ನಿವಾರಿಸುವುದಕ್ಕಾಗಿ ಅಥವಾ ಒಗೆಯುವುದಕ್ಕಾಗಿ, ಯಾವುದೇ ಸೋಂಕು ರೋಗದಿಂದ ಸೋಂಕಿಗೆ ಗುರಿಯಾಗಿರುವ ಹಾಸಿಗೆ ಹೊದಿಕೆಗಳನ್ನು ಅಥವಾ ಇತರ ವಸ್ತುಗಳ ಸಾಧನಗಳನ್ನು ಒದಗಿಸಲು ಮತ್ತು ಸ್ಥಳಗಳನ್ನು ಗೊತ್ತುಪಡಿಸಲು ಮತ್ತು ಅವುಗಳನ್ನು ನಾಶಪಡಿಸುವಂತೆ ನಿರ್ದೇಶಿಸಲು ಅಧಿಕಾರ;

(ಜಿ) (i) ಯಾವುದೇ ಸೋಂಕು ರೋಗದಿಂದ ನರಳುತ್ತಿರುವ ವ್ಯಕ್ತಿಗಳನ್ನು ಉಚಿತವಾಗಿ ಸಾಗಿಸುವುದಕ್ಕಾಗಿ ಸೂಕ್ತ ವಾಹನವನ್ನು ಒದಗಿಸಲು ಮತ್ತು ಇಟ್ಟುಕೊಂಡಿರಲು; ಮತ್ತು

(ii) ಅಂಥ ವ್ಯವಸ್ಥೆಯನ್ನು ಮಾಡಿದಾಗ, ಅಂಥ ವ್ಯಕ್ತಿಗಳನ್ನು ಎಲ್ಲಾ ಅಥವಾ ಯಾವುದೇ ಸಾರ್ವಜನಿಕ ವಾಹನಗಳಲ್ಲಿ ಸಾಗಿಸುವುದನ್ನು ನಿಷೇಧಿಸಲು ಅಧಿಕಾರ; ಮತ್ತು

(iii) ಅಂಥ ಯಾರೇ ವ್ಯಕ್ತಿಯನ್ನು ಸಾಗಿಸುವುದಕ್ಕಾಗಿ ಯಾವುದೇ ಕಾಲದಲ್ಲಿ ಬಳಸಬಹುದಾದ ಯಾವುವೇ ವಾಹನಗಳಲ್ಲಿರುವ ಸೋಂಕನ್ನು ಕೂಡಲೇ ನಿವಾರಿಸತಕ್ಕದ್ದೆಂದು ನಿರ್ದೇಶಿಸಲು ಅಧಿಕಾರ;

(ಹೆಚ್) (i) ಯಾವುದೇ ಸೋಂಕು ರೋಗದಿಂದ ನರಳುತ್ತಿರುವ ಯಾರೇ ವ್ಯಕ್ತಿಯು, ಸದರಿ ರೋಗವು ಹರಡುವುದರ ವಿರುದ್ಧ ಸರಿಯಾದ ಮುನ್ನೆಚ್ಚರಿಕೆಗಳಿಲ್ಲದೆ ಯಾವುದೇ ಬೀದಿಯಲ್ಲಿ ಅಥವಾ ಯಾವುದೇ ಶಾಲೆಯಲ್ಲಿ ಅಥವಾ ಕಾರ್ಖಾನೆಯಲ್ಲಿ ಅಥವಾ ಯಾವುದೇ ತಂಗುಮನೆ, ಧರ್ಮಶಾಲೆ, ರಂಗಮಂದಿರ, ಮಾರುಕಟ್ಟೆ ಅಥವಾ ಸಾರ್ವಜನಿಕರು ಸೇರುವ ಇತರ ಸ್ಥಳದಲ್ಲಿ ಬುದ್ಧಿಪೂರ್ವಕವಾಗಿ ತಾನಾಗಿಯೇ ಪ್ರದರ್ಶಿಸಿಕೊಳ್ಳುವುದನ್ನು ನಿಷೇಧಿಸಲು ಅಧಿಕಾರ; ಅಥವಾ

(ii) ಹಾಗೆ ನರಳುತ್ತಿರುವ ಯಾರೇ ವ್ಯಕ್ತಿಯ ಸುಪರ್ದನ್ನು ಹೊಂದಿರುವ ಯಾರೇ ವ್ಯಕ್ತಿಯು, ಅಂಥ ನರಳುವವನನ್ನು ಹಾಗೆ ಪ್ರದರ್ಶಿಸುವುದನ್ನು ನಿಷೇಧಿಸಲು ಅಧಿಕಾರ;

(ಐ) ಯಾವುದೇ ಸೋಂಕು ರೋಗದಿಂದ ಉಂಟಾಗುವ ಯಾವುದೇ ಬಗೆಯ ಎಂಥದೇ ಸೋಂಕಿಗೆ ಗುರಿಯಾಗಿದ್ದೇನೆಂದು ನಿಷೇಧಿತ ವ್ಯಕ್ತಿಯು ತಿಳಿದಿರುವ ಅಥವಾ ನಂಬಲು ಕಾರಣವಿರುವಂಥ ಯಾವುದೇ ವಸ್ತುವನ್ನು, ಸೋಂಕು ನಿವಾರಣೆ ಉದ್ದೇಶಕ್ಕಾಗಿ ಹೊರತು

ಯಾರೇ ವ್ಯಕ್ತಿಯು ಬೇರೊಂದೆಡೆ ಸ್ಥಳಾಂತರಿಸುವುದನ್ನು ಅಥವಾ ಬೇರೊಬ್ಬ ವ್ಯಕ್ತಿಗೆ ವರ್ಗಾಯಿಸುವುದನ್ನು ನಿಷೇಧಿಸಲು ಅಧಿಕಾರ;

(ಜೆ) ಸೋಂಕು ರೋಗದಿಂದ ನರಳುತ್ತಿರುವ ವ್ಯಕ್ತಿಯು ಇರುವಂಥ ಅಥವಾ ನರಳುತ್ತಿರುವನೆಂದು ನಂಬಲು ಕಾರಣವಿರುವಂಥ ವ್ಯಕ್ತಿಯು ಇರುವಂಥ ಯಾವುದೇ ಹೋಟೆಲು, ತಂಗುಮನೆ, ಧರ್ಮಶಾಲೆ, ಛತ್ರ ಅಥವಾ ಮುಸಾಫಿರ್‌ಖಾನಾದಲ್ಲಿ ಹಾಗೆ ಬಾಡಿಗೆಗೆ ಕೊಡಲು ಅಥವಾ ಸ್ಥಳಾವಕಾಶವನ್ನು ಒದಗಿಸಲು ಇಚ್ಛಿಸುವ ವ್ಯಕ್ತಿಯು ಸೋಂಕು ಉಳಿದು ಬಿಡುವ ಸಂಭವವಿರುವ ಕಟ್ಟಡದಲ್ಲಿ ಅಥವಾ ಅದರ ಭಾಗದಲ್ಲಿ ಮತ್ತು ಅದರಲ್ಲಿ ಇರುವ ಯಾವುದೇ ವಸ್ತುವನ್ನು ಮುನ್ಸಿಪಲ್ ಕೌನ್ಸಿಲ್ ಅಥವಾ ಈ ಬಗ್ಗೆ ಮುನ್ಸಿಪಲ್ ಕೌನ್ಸಿಲ್ ನೇಮಕ ಮಾಡುವಂಥ ಅಧಿಕಾರಿಗೆ ಮನದಟ್ಟಾಗುವಂತೆ ಸೋಂಕನ್ನು ನಿವಾರಿಸಿದ ಹೊರತು ಮತ್ತು ಅಲ್ಲಿಯವರೆಗೆ ಸ್ಥಳವನ್ನು ಬಾಡಿಗೆಗೆ ಕೊಡುವುದನ್ನು ಅಥವಾ ಒದಗಿಸುವುದನ್ನು ನಿಷೇಧಿಸಲು ಅಧಿಕಾರ;

(ಕೆ) ಸೋಂಕು ರೋಗದಿಂದ ವ್ಯಕ್ತಿಗಳು ನರಳುತ್ತಿರುವುದಾಗಿ ನಂಬಲು ಕಾರಣವಿರುವಂಥ ಯಾವುದೇ ಅನೈರ್ಮಲ್ಯಕರ ಗುಡಿಸಲುಗಳನ್ನು ಅಥವಾ ಷೆಡ್ ಗಳನ್ನು ಪ್ರತಿಯೊಂದು ಸಂದರ್ಭದಲ್ಲಿ ಎರಡನೇ ದರ್ಜೆಯ ಅಧಿಕಾರಿಗಳಿಗೆ ಕಡಿಮೆಯಲ್ಲದ ದರ್ಜೆಯ ಅಧಿಕಾರಗಳನ್ನು ಚಲಾಯಿಸುವ ಮ್ಯಾಜಿಸ್ಟ್ರೇಟ್ ನಿಂದ ಮುಂಚಿತವಾಗಿಯೇ ಅನುಮತಿ ಪಡೆದು ಕೆಡವಿ ಹಾಕಲು ಅಧಿಕಾರ.

(3) ಮುನ್ಸಿಪಲ್ ಕೌನ್ಸಿಲ್ ತನ್ನ ವಿವೇಚನೆಯಲ್ಲಿ, ಈ ಪ್ರಕರಣದ ಮೇರೆಗೆ ಯಾವುದೇ ಸ್ವತ್ತಿನ ನಾಶದ ಮೂಲಕ ಉಂಟಾದ ಗಣನೀಯ ನಷ್ಟಕ್ಕೆ ಈಡಾಗಿರುವ ಯಾರೇ ವ್ಯಕ್ತಿಗೆ ನಷ್ಟ ಪರಿಹಾರವನ್ನು ಕೊಡಬಹುದು, ಆದರೆ ಮುನ್ಸಿಪಲ್ ಕೌನ್ಸಿಲ್ ಅವಕಾಶ ಮಾಡಿಕೊಟ್ಟಂತೆ ಹೊರತು, ಅದರಲ್ಲಿ ನಿರ್ದಿಷ್ಟಪಡಿಸಿದ ಅಧಿಕಾರಗಳ ಯಾವುದೇ ಚಲಾವಣೆಯಿಂದ ಉಂಟಾದ ಯಾವುದೇ ನಷ್ಟಕ್ಕಾಗಿ ಅಥವಾ ಹಾನಿಗಾಗಿ ನಷ್ಟ ಪರಿಹಾರಕ್ಕಾಗಿ ಯಾವುದೇ ಕ್ಲೇಮು ಇರತಕ್ಕದ್ದಲ್ಲ.

(4) [1][ಮುನ್ಸಿಪಲ್ ಏರಿಯಾ][1]ದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವಂಥ ಮತ್ತು ಈ ಪ್ರಕರಣದ ಮೂಲಕ ಅಂಥ ಮುನ್ಸಿಪಲ್ ಕೌನ್ಸಿಲ್ ಗೆ ಪ್ರದತ್ತವಾದ ಯಾವುದೇ ಅಧಿಕಾರವನ್ನು ಚಲಾಯಿಸಿ ಮುನ್ಸಿಪಲ್ ಕೌನ್ಸಿಲ್ ಮಾಡಿದಂಥ ಯಾವುದೇ ಆದೇಶವನ್ನು ಉಲ್ಲಂಘಿಸುವ ಅಥವಾ ಅಂಥ ಯಾವುದೇ ಆದೇಶವನ್ನು ಕಾರ್ಯಗತಗೊಳಿಸುವಾಗ ಅಥವಾ ಚಲಾಯಿಸುವಾಗ ಮುನ್ಸಿಪಲ್ ಕೌನ್ಸಿಲ್ ನ ಯಾರೇ ಅಧಿಕಾರಿಗೆ ಅಥವಾ ಮುನ್ಸಿಪಲ್ ಕೌನ್ಸಿಲ್ ನ ಅಧಿಕಾರದ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಇತರ ವ್ಯಕ್ತಿಗೆ ಅಡ್ಡಪಡಿಸುವ ಯಾರೇ ವ್ಯಕ್ತಿಯು, ಎರಡು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

249. ಸೋಂಕು ರೋಗ ತಲೆದೋರುವ ಸೂಚನೆ ಕಂಡು ಬಂದಾಗ ಅಥವಾ ವಾಸ್ತವಿಕವಾಗಿ ಅದು ತಲೆದೋರಿದಾಗ ಮುನ್ಸಿಪಲ್ ಕೌನ್ಸಿಲ್ ನ ಕರ್ತವ್ಯಗಳು.- (1) ಯಾವುದೇ ಸೋಂಕು ರೋಗವು [1][ಮುನ್ಸಿಪಲ್ ಏರಿಯಾ][1]ದ ಅಥವಾ ಅದರ ಯಾವುದೇ ಭಾಗಕ್ಕೆ ಯಾವುದೇ ಕಾಲದಲ್ಲಿ ತಲೆದೋರುವ ಸೂಚನೆ ಕಂಡುಬಂದಾಗ ಅಥವಾ ತಲೆದೋರಿದ ಸಂದರ್ಭದಲ್ಲಿ, ಮುನ್ಸಿಪಲ್ ಕೌನ್ಸಿಲ್, ಅಂಥ ತಲೆದೋರುವುದನ್ನು ತಡೆಗಟ್ಟುವ, ಎದುರಿಸುವ, ಶಮನಗೊಳಿಸುವ ಅಥವಾ ದಮನಗೊಳಿಸುವ ಉದ್ದೇಶಕ್ಕಾಗಿ ಅವಶ್ಯವೆಂದು ಅದು ಭಾವಿಸುವಂಥ ಎಲ್ಲಾ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಹಿಂದೆ ಹೇಳಿದಂಥ ಸಂದರ್ಭದಲ್ಲಿ, ವಿಶೇಷ ಅಧಿಸೂಚನೆಯ ಮೂಲಕ ಸರ್ಕಾರವು ಅಂಥ [1][ಮುನ್ಸಿಪಲ್ ಏರಿಯಾ][1]ದಲ್ಲಿ ಸೋಂಕುರೋಗವು ತಲೆದೋರುವ ಸೂಚನೆ ಕಂಡು ಬಂದಿದೆ ಅಥವಾ ಅದು ತಲೆದೋರಿದೆ ಎಂದು ಘೋಷಿಸಿ, ಈ ಮುಂದಿನ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಎಲ್ಲಾ ಅಥವಾ ಯಾವುದೇ ಅಧಿಕಾರವನ್ನು ಮುನ್ಸಿಪಲ್ ಕೌನ್ಸಿಲ್ ಗೆ ಪ್ರದಾನ ಮಾಡಬಹುದು ಮತ್ತು ಅಂಥ ಮುನ್ಸಿಪಲ್ ಕೌನ್ಸಿಲ್, ಸರ್ಕಾರವು ಅದೇ ಅಧಿಸೂಚನೆಯಲ್ಲಿ ಅಥವಾ ತರುವಾಯದ ಯಾವುದೇ ಅಧಿಸೂಚನೆಯಲ್ಲಿ ಯಾವುವಾದರೂ ಗೊತ್ತುಪಡಿಸುವುದಾದರೆ ಪರಿಮಿತಿಗಳನ್ನು,

ನಿರ್ಬಂಧಗಳನ್ನು ಮತ್ತು ಷರತ್ತುಗಳನ್ನು ಅವುಗಳಿಗೊಳಪಟ್ಟು, ತನಗೆ ಹಾಗೆ ಪ್ರದತ್ತವಾದಂಥ ಪ್ರತಿಯೊಂದು ಅಧಿಕಾರವನ್ನು, ಅದನ್ನು ಅಂತಹುದೇ ಅಧಿಸೂಚನೆಯ ಮೂಲಕ ಹಿಂತೆಗೆದುಕೊಳ್ಳುವವರೆಗೆ ಚಲಾಯಿಸತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) ಹಿಂದಿನ ಉಪಪ್ರಕರಣದ ಮೇರೆಗೆ ಪ್ರದಾನ ಮಾಡಬಹುದಾದಂಥ ಎಲ್ಲಾ ಅಥವಾ ಯಾವುದೇ ಅಧಿಕಾರಗಳು ಯಾವುವೆಂದರೆ,-

(ಎ) ಈ ಮುಂದಿನ ಯಾವುವಾದರೂ ಎಂದರೆ,-

(i) ಪ್ರತಿಯೊಂದು ವಿಷಯದಲ್ಲಿ, ಎರಡನೇ ದರ್ಜೆ ಅಧಿಕಾರಿಗಳಿಗೆ ಕಡಿಮೆಯಿಲ್ಲದ ದರ್ಜೆಯ ಅಧಿಕಾರವನ್ನು ಚಲಾಯಿಸುವ ಮ್ಯಾಜಿಸ್ಟ್ರೇಟ್ ನ ಅನುಮತಿಯನ್ನು ಮೊದಲು ಪಡೆದುಕೊಳ್ಳಬೇಕೆಂಬ;

(ii) ಯಾವ ವ್ಯಕ್ತಿಗಳಿಗೆ ಆದೇಶವು ಸಂಬಂಧಪಡುತ್ತದೋ ಆ ಎಲ್ಲ ವ್ಯಕ್ತಿಗಳಿಗೆ ಸ್ಥಳಾವಕಾಶವು ಲಭ್ಯವಿದೆಯೆಂಬ ಅಥವಾ ಬೇರೆ ಕಡೆ ಸ್ಥಳಾವಕಾಶವನ್ನು ಒದಗಿಸತಕ್ಕದ್ದೆಂಬ ಷರತ್ತುಗಳಿಗೊಳಪಟ್ಟು ಕಟ್ಟಡದಲ್ಲಿ ವಾಡಿಕೆಯಂತೆ ಅಥವಾ ತಾತ್ಕಾಲಿಕವಾಗಿ ವಾಸಿಸುತ್ತಿರುವ ವ್ಯಕ್ತಿಯು ಅಥವಾ ವ್ಯಕ್ತಿಗಳು ವಾಸದ ಮನೆಯೆಂದು ಬಳಸಿದ ಸೋಂಕು ತಗುಲಿದ ಕಟ್ಟಡವನ್ನು ಅಥವಾ ಅದರ ಯಾವುದೇ ಭಾಗವನ್ನು ಅಥವಾ ಅಂಥ ಕಟ್ಟಡಕ್ಕೆ ಹೊಂದಿಕೊಂಡಿರುವ ಹಾಗೆ ಬಳಸಿದ ಯಾವುದೇ ಕಟ್ಟಡವನ್ನು ಖಾಲಿ ಮಾಡುವಂತೆ ಆದೇಶಿಸಲು ಅಧಿಕಾರ;

(ಬಿ) [1][ಮುನ್ಸಿಪಲ್ ಏರಿಯಾ][1]ದ ಹೊರಗಿನ ಸ್ಥಳಗಳಿಂದ ಬರುವ ಅಥವಾ ಸೋಂಕು ತಗುಲಿದ ಯಾವುದೇ ಕಟ್ಟಡದಲ್ಲಿ ಅಥವಾ ಸೋಂಕು ತಗುಲಿದ ಯಾವುದೇ ಕಟ್ಟಡಕ್ಕೆ ಹೊಂದಿಕೊಂಡಿರುವ ಕಟ್ಟಡದಲ್ಲಿ ವಾಸಿಸುತ್ತಿರುವ ವ್ಯಕ್ತಿಗಳು ವೈದ್ಯಾಧಿಕಾರಿಯಿಂದ ಪರೀಕ್ಷಿಸಿಕೊಳ್ಳಬೇಕೆಂದು ಮತ್ತು ಅವಶ್ಯವಿದ್ದರೆ ಆ ವ್ಯಕ್ತಿಗಳಿಗೆ ಸೇರಿದ ಬಟ್ಟೆ-ಬರೆಯಲ್ಲಿರುವ, ಹಾಸಿಗೆ ಹೊದಿಕೆಯಲ್ಲಿ ಅಥವಾ ಇತರ ಶಂಕಿತ ವಸ್ತುಗಳಲ್ಲಿರುವ ಸೋಂಕನ್ನು ನಿವಾರಿಸಬೇಕೆಂದು ನಿರ್ದೇಶಿಸಲು ಮತ್ತು ಅಂಥ ಯಾರೇ ವ್ಯಕ್ತಿಯು ತನ್ನ ವಿಳಾಸವನ್ನು ಕೊಡತಕ್ಕದ್ದೆಂದು ಮತ್ತು ಹತ್ತು ದಿವಸಗಳಿಗೆ ಮೀರದಂಥ ಅವಧಿಗಾಗಿ ನಿರ್ದಿಷ್ಟಪಡಿಸಬಹುದಾದಂಥ ಕಾಲದಲ್ಲಿ ಮತ್ತು ಸ್ಥಳಗಳಲ್ಲಿ ವೈದ್ಯಕೀಯ ಪರೀಕ್ಷೆಗಾಗಿ ಪ್ರತಿನಿತ್ಯವೂ ಸ್ವತಃ ಹಾಜರಾಗಬೇಕೆಂದು ನಿರ್ದೇಶಿಸಲು ಅಧಿಕಾರ;

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಸಿ) ಸಾರ್ವಜನಿಕವಾದ ಅಥವಾ ಖಾಸಗಿಯಾದ ಯಾವುದೇ ಸ್ಥಳದಲ್ಲಿ ಅಥವಾ ಯಾವುವೇ ಸನ್ನಿವೇಶಗಳಲ್ಲಿ ಅಥವಾ ಯಾವುದೇ ಉದ್ದೇಶಕ್ಕಾಗಿ ಐವತ್ತನ್ನು ಮೀರುವ ಯಾವುದೇ ಸಂಖ್ಯೆಯ ವ್ಯಕ್ತಿಗಳನ್ನೊಳಗೊಂಡ ಸಮೂಹಗಳು ಅಥವಾ ಜಿಲ್ಲಾ ವೈದ್ಯಾಧಿಕಾರಿಯು ಅಥವಾ ಜಿಲ್ಲೆಯ ಇತರ ಹಿರಿಯ ವೈದ್ಯಕೀಯ ಅಥವಾ ಆರೋಗ್ಯಾಧಿಕಾರಿಯು ಅಥವಾ ಈ ಬಗ್ಗೆ ಸರ್ಕಾರದಿಂದ ನೇಮಕಗೊಂಡ ಇತರ ವೈದ್ಯಕೀಯ ಅಥವಾ ಆರೋಗ್ಯಾಧಿಕಾರಿಯು ಬರಹದಲ್ಲಿ ಅಭಿಪ್ರಾಯವನ್ನು ದಾಖಲ್ಮಾಡಿ ಅಂಥ ಸ್ಥಳದಲ್ಲಿ ಅಂಥ ಸನ್ನಿವೇಶಗಳಲ್ಲಿ ಅಥವಾ ಅಂಥ ಉದ್ದೇಶಕ್ಕಾಗಿ ಅಂಥ ಸಮೂಹಗಳು ರೋಗವನ್ನು ಹರಡುವ ಸಾಧನಗಳಾಗುವ ಸಂಭವವಿದ್ದರೆ ಅಥವಾ ರೋಗವನ್ನು ಹೆಚ್ಚು ಉಲ್ಬಣಗೊಳಿಸುವುದಾಗಿದ್ದರೆ ಸಾರ್ವತ್ರಿಕವಾಗಿ ಅಥವಾ ಯಾವುದೇ ವ್ಯಕ್ತಿಗತ ಸಂದರ್ಭದಲ್ಲಿ ವಿಶೇಷ ಆದೇಶದ ಮೂಲಕ ನಿಷೇಧಿಸಲು ಅಧಿಕಾರ.

(4) ಮುನ್ಸಿಪಲ್ ಕೌನ್ಸಿಲ್, ಈ ಪ್ರಕರಣದ ಮೇರೆಗೆ ಯಾವುದೇ ಸ್ವತ್ತಿನ ನಾಶದಿಂದ ಗಣನೀಯ ನಷ್ಟಕ್ಕೆ ಈಡಾಗಿರುವ ಯಾರೇ ವ್ಯಕ್ತಿಗೆ ಅದರ ವಿವೇಚನೆ ಪ್ರಕಾರ ನಷ್ಟಪರಿಹಾರವನ್ನು ಕೊಡಬಹುದು; ಆದರೆ ಮುನ್ಸಿಪಲ್ ಕೌನ್ಸಿಲ್ ಅವಕಾಶ ಮಾಡಿಕೊಟ್ಟ ಹೊರತು, ಅದರಲ್ಲಿ ನಿರ್ದಿಷ್ಟಪಡಿಸಿದ ಅಧಿಕಾರಗಳ ಯಾವುದೇ ಚಲಾಯಿಸುವಿಕೆಯಿಂದ ಉಂಟಾದ ಯಾವುದೇ ನಷ್ಟಕ್ಕಾಗಿ ಅಥವಾ ಹಾನಿಗಾಗಿ ನಷ್ಟ ಪರಿಹಾರಕ್ಕಾಗಿ ಯಾವುದೇ ಕ್ಲೇಮು ಇರತಕ್ಕದ್ದಲ್ಲ.

(5) ಉಪಪ್ರಕರಣ (2)ರ ಮೇರೆಗೆ ಹಿಂದೆ ಹೇಳಿದಂತೆ ಅಂಥ ಘೋಷಣೆಯು ತತ್ಕಾಲದಲ್ಲಿ ಜಾರಿಯಲ್ಲಿರುವಂಥ ಯಾವುದೇ [1][ಮುನ್ಸಿಪಲ್ ಏರಿಯಾ][1] ದಲ್ಲಿ, ಯಾರೇ ವ್ಯಕ್ತಿಯು,-

(ಎ) ಅಂಥ [1][ಮುನ್ಸಿಪಲ್ ಏರಿಯಾ][1] ದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಮತ್ತು 248ನೇ ಪ್ರಕರಣದ ಮೂಲಕ ಅಥವಾ ಈ ಪ್ರಕರಣದ ಮೇರೆಗೆ ಮುನ್ಸಿಪಲ್ ಕೌನ್ಸಿಲ್ ಗೆ ಪ್ರದತ್ತವಾದ ಯಾವುದೇ ಅಧಿಕಾರವನ್ನು ಚಲಾಯಿಸಿ ಅದು ಮಾಡಿದ ಯಾವುದೇ ಆದೇಶವನ್ನು ತಿಳಿದೂ ತಿಳಿದೂ ಉಲ್ಲಂಘಿಸಿದರೆ;

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಬಿ) ಅಂಥ ಯಾವುದೇ ಆದೇಶವನ್ನು ಕಾರ್ಯಗತಗೊಳಿಸುವಾಗ ಅಥವಾ ಜಾರಿಗೊಳಿಸುವಾಗ ಮುನ್ಸಿಪಲ್ ಕೌನ್ಸಿಲ್ ನ ಯಾರೇ ಅಧಿಕಾರಿಗೆ ಅಥವಾ ಮುನ್ಸಿಪಲ್ ಕೌನ್ಸಿಲ್‌ನ ಅಧಿಕಾರದ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಇತರ ವ್ಯಕ್ತಿಗೆ ಅಡ್ಡಿಪಡಿಸಿದರೆ;

- ಅಂಥ ವ್ಯಕ್ತಿಯು ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

250. ಅಧಿಕಾರಗಳ ಮತ್ತು ಆದೇಶಗಳ ಹಿಂತೆಗೆದುಕೊಳ್ಳುವಿಕೆ ಮತ್ತು ಮಾರ್ಪಾಟು.- (1) ಸರ್ಕಾರವು, ಅಧಿಸೂಚನೆಯ ಮೂಲಕ ಯಾವುದೇ ಕಾಲದಲ್ಲಿ,-

(ಎ) 248ನೇ ಮತ್ತು 249ನೇ ಪ್ರಕರಣದ ಮೂಲಕ ಅಥವಾ ಅವುಗಳ ಮೇರೆಗೆ ಪ್ರದತ್ತವಾದ ಯಾವುದೇ ಅಧಿಕಾರವನ್ನು ಹಿಂದಕ್ಕೆ ತೆಗೆದುಕೊಳ್ಳಬಹುದು;

(ಬಿ) ಅಂಥ ಯಾವುದೇ ಅಧಿಕಾರಕ್ಕೆ ಸಂಬಂಧಿಸಿದಂತೆ ಗೊತ್ತುಪಡಿಸಿದ ಯಾವುದೇ ಪರಿಮಿತಿಯನ್ನು, ನಿರ್ಬಂಧವನ್ನು ಅಥವಾ ಷರತ್ತನ್ನು ರದ್ದುಪಡಿಸಬಹುದು ಅಥವಾ ಮಾರ್ಪಾಟು ಮಾಡಬಹುದು; ಅಥವಾ

(ಸಿ) ಅಂಥ ಯಾವುದೇ ಅಧಿಕಾರವನ್ನು ಚಲಾಯಿಸುವಾಗ ಮುನ್ಸಿಪಲ್ ಕೌನ್ಸಿಲ್ ಮಾಡಿದ ಯಾವುದೇ ಆದೇಶವನ್ನು ರದ್ದುಪಡಿಸಬಹುದು.

(2) ಹಿಂದೆ ಹೇಳಿದಂತೆ ಅಂಥ ಯಾವುದೇ ಅಧಿಕಾರವನ್ನು ಚಲಾಯಿಸುವಾಗ ಮುನ್ಸಿಪಲ್ ಕೌನ್ಸಿಲ್ ಮಾಡಿದ ಪ್ರತಿಯೊಂದು ಆದೇಶವು ಅಂಥ ಅಧಿಕಾರವನ್ನು ಹಿಂತೆಗೆದುಕೊಂಡ ಮೇಲೆ [1][ಮುನ್ಸಿಪಲ್ ಏರಿಯಾ][1] ದಲ್ಲಿ ಜಾರಿಯಲ್ಲಿರುವುದು ನಿಂತುಹೋಗತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

251. ಕುದುರೆಗಳ, ನಾಯಿಗಳ, ಜಾನುವಾರುಗಳ, ಕುರಿಗಳ ಅಥವಾ ಮೇಕೆಗಳ ರೋಗಗಳಿಗೆ ಸಂಬಂಧಿಸಿದಂತೆ ಮುನ್ಸಿಪಲ್ ಕೌನ್ಸಿಲಿನ ಕರ್ತವ್ಯಗಳು.- ಯಾವುದೇ [1][ಮುನ್ಸಿಪಲ್ ಏರಿಯಾ][1] ದಲ್ಲಿ ಕುದುರೆಗಳು, ನಾಯಿಗಳು, ಜಾನುವಾರುಗಳು, ಕುರಿಗಳು ಅಥವಾ ಮೇಕೆಗಳಲ್ಲಿ ಯಾವುದೇ ಸೋಂಕು ರೋಗ ತಲೆದೋರಿದರೆ ಅಥವಾ ಅಂಥ ಯಾವುದೇ ರೋಗವು ತಲೆದೋರುವ ಸಂಭವವಿರುವುದು ಕಂಡುಬಂದರೆ ಮುನ್ಸಿಪಲ್ ಕೌನ್ಸಿಲ್, ರೋಗವನ್ನು ಅಥವಾ ಅದು ತಲೆದೋರುವುದನ್ನು ಅಥವಾ ಪ್ರಾರಂಭವಾಗುವುದನ್ನು ತಡೆಗಟ್ಟುವ, ಎದುರಿಸುವ, ಶಮನ ಮಾಡುವ ಅಥವಾ ದಮನ ಮಾಡುವ ಉದ್ದೇಶಕ್ಕಾಗಿ ಅವಶ್ಯಕವೆಂದು ಅದು ಭಾವಿಸುವಂಥ ಎಲ್ಲಾ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

252. ಕಟ್ಟಡಗಳ ಒಳಭಾಗದಲ್ಲಿ ಜನನಿಬಿಡತೆಯನ್ನು ಕಡಿಮೆ ಮಾಡಲು ವ್ಯವಹರಣೆಗಳು.- (1) ಆ ಕಟ್ಟಡದ ಒಳಭಾಗವೂ ಆ ಕಟ್ಟಡದ ಅಥವಾ ಯಾವುದೇ ನೆರೆಹೊರೆಯ ಕಟ್ಟಡದ ನಿವಾಸಿಗಳ ಆರೋಗ್ಯಕ್ಕೆ ಅಪಾಯಕರ ಅಥವಾ ಹಾನಿಕಾರಕವಾಗುವ ಹಾಗೆ ಅಥವಾ ಆಗುವ ಸಂಭವವಿರುವ ಹಾಗೆ ಜನನಿಬಿಡವಾಗಿದೆಯೆಂದು ಪರ್ಯಾಲೋಚಿಸಿದಾಗಲೆಲ್ಲಾ, ಮುನ್ಸಿಪಲ್ ಕೌನ್ಸಿಲ್, ಅಂಥ ಜನನಿಬಿಡತೆಯನ್ನು ತಡೆಗಟ್ಟಲು ಆದೇಶವನ್ನು ಪಡೆದುಕೊಳ್ಳುವ ಉದ್ದೇಶಕ್ಕಾಗಿ ಮೊದಲನೇ ದರ್ಜೆಯ ಮ್ಯಾಜಿಸ್ಟ್ರೇಟ್ ನ ಮುಂದೆ ವ್ಯವಹರಣೆಗಳನ್ನು ಹೂಡಿಸಬಹುದು.

(2) ಅಂಥ ಮ್ಯಾಜಿಸ್ಟ್ರೇಟ್ ನು, ಯಾವ ಜನನಿಬಿಡತೆ ಬಗ್ಗೆ ದೂರು ನೀಡಲಾಗಿದೆಯೋ ಆ ಜನನಿಬಿಡತೆಯಿಂದ ರೋಗವನ್ನುಂಟು ಮಾಡುವ ಅಥವಾ ಅಪಾಯವನ್ನುಂಟು ಮಾಡುವ ಅಥವಾ ರೋಗದ ಅಪಾಯ ಉಂಟು ಮಾಡುವ ಸಂಭವವಿದೆಯೆಂದು ತನ್ನ ಅಭಿಪ್ರಾಯವನ್ನು ಹೇಳಿರುವ ವೈದ್ಯಾಧಿಕಾರಿಯು ಅಥವಾ ಆರೋಗ್ಯಾಧಿಕಾರಿಯು ಪ್ರಮಾಣಪತ್ರವನ್ನು ಹಾಜರುಪಡಿಸಿದಾಗ ಮತ್ತು

ಮತ್ತಷ್ಟು ವಿಚಾರಣೆ ಮಾಡುವುದು ಅವಶ್ಯವೆಂದು ಅಂಥ ಮ್ಯಾಜಿಸ್ಟ್ರೇಟ್ ನಿಗೆ, ಕಂಡುಬರಬಹುದಾದಾಗ ಮತ್ತಷ್ಟು ವಿಚಾರಣೆಯನ್ನೇನಾದರೂ ಮಾಡಿದ್ದರೆ, ಅವಶ್ಯವೆಂದು ಭಾವಿಸುವಷ್ಟರಮಟ್ಟಿಗೆ, ಸದರಿ ಕಟ್ಟಡದಲ್ಲಿ ವಸತಿ ಪಡೆದವರ, ಬಾಡಿಗೆದಾರರ ಅಥವಾ ಇತರ ನಿವಾಸಿಗಳ ಸಂಖ್ಯೆಯನ್ನು ಅದರ ತರುವಾಯ ಆರು ವಾರಗಳನ್ನು ಮೀರದ ಅಥವಾ ಹತ್ತು ದಿನಗಳಿಗೆ ಕಡಿಮೆಯಿಲ್ಲದ ಸಮಂಜಸ ಕಾಲದೊಳಗೆ ಕಡಿಮೆ ಮಾಡಲು ಕಟ್ಟಡದ ಒಡೆಯನನ್ನು ಅಗತ್ಯಪಡಿಸಬಹುದು ಅಥವಾ ಅವನು ನ್ಯಾಯಸಮ್ಮತ ಮತ್ತು ಸರಿಯೆಂದು ಭಾವಿಸಬಹುದಾದಂಥ ಯಾವುದೇ ಇತರ ಆದೇಶವನ್ನು ಮಾಡಬಹುದು.

(3) ಸದರಿ ಕಟ್ಟಡವನ್ನು ಒಳಬಾಡಿಗೆಗೆ ಕೊಟ್ಟಿದ್ದರೆ, ವಸತಿ ಪಡೆದವರ, ಬಾಡಿಗೆದಾರರ ಅಥವಾ ಅದರ ಇತರ ವಾಸ್ತವಿಕ ನಿವಾಸಿಗಳ ಯಜಮಾನನನ್ನು, ಈ ಉಪಪ್ರಕರಣದ ಉದ್ದೇಶಕ್ಕಾಗಿ ಆ ಕಟ್ಟಡದ ಒಡೆಯನೆಂದು ಭಾವಿಸತಕ್ಕದ್ದು.

(4) ಉಪಪ್ರಕರಣ (2) ರ ಮೇರೆಗೆ ಯಾವ ಒಡೆಯನಿಗೆ ಕಡ್ಡಾಯ ಕೋರಿಕೆಯನ್ನು ಕೊಡಲಾಗಿದೆಯೋ ಆ ಯಾರೇ ಒಡೆಯನು, ಅದರಲ್ಲಿ ನಿರ್ದಿಷ್ಟಪಡಿಸಿರುವ ಷರತ್ತುಗಳನ್ನು ಈಡೇರಿಸಲು ಅವಶ್ಯವಾಗಬಹುದಾದಂತೆ ಸದರಿ ಕಟ್ಟಡದಲ್ಲಿ ವಸತಿ ಪಡೆದವರಿಗೆ, ಬಾಡಿಗೆದಾರರಿಗೆ ಅಥವಾ ಇತರ ವಾಸ್ತವಿಕ ನಿವಾಸಿಗಳಿಗೆ ತತ್‌ಕ್ಷಣವೇ ಅಂಥ ಕಡ್ಡಾಯ ಕೋರಿಕೆಯಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಸದರಿ ಕಟ್ಟಡವನ್ನು ಖಾಲಿ ಮಾಡಲು ಬರಹದಲ್ಲಿ ನೋಟೀಸನ್ನು ಕೊಡುವುದು ಅವನ ಕರ್ತವ್ಯವಾಗಿರತಕ್ಕದ್ದು ಮತ್ತು ಅಂಥ ನೋಟೀಸನ್ನು ಸ್ವೀಕರಿಸುವಂಥ ಅಂಥ ಯಾರೇ ವಸತಿ ಪಡೆದವರು, ಬಾಡಿಗೆದಾರರು, ನಿವಾಸಿಗಳು, ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ ಅದನ್ನು ಪಾಲಿಸಲು ಬದ್ಧರಾಗಿರತಕ್ಕದ್ದು.

(5) ಉಪಪ್ರಕರಣ (2) ರ ಮೇರೆಗೆ ಹೊರಡಿಸಿದ ಯಾವುದೇ ಕೋರಿಕೆಯಲ್ಲಿ ನಿರ್ದಿಷ್ಟಪಡಿಸಿರುವ ದಿನಾಂಕದ ತರುವಾಯ ಅಂಥ ಕಡ್ಡಾಯ ಕೋರಿಕೆಯನ್ನು ಉಲ್ಲಂಘಿಸಿ ಯಾವುದೇ ಕಟ್ಟಡವು ಜನನಿಬಿಡವಾಗುವುದಕ್ಕೆ ಆಸ್ಪದ ಕೊಡುವ ಯಾರೇ ಒಡೆಯನು ಮತ್ತು (4)ನೇ ಉಪಪ್ರಕರಣದ ಮೇರೆಗೆ ತನಗೆ ಕೊಟ್ಟ ನೋಟೀಸಿಗನುಸಾರವಾಗಿ ಅಂಥ ಯಾವುದೇ ಕಟ್ಟಡವನ್ನು ಖಾಲಿ ಮಾಡಲು ತಪ್ಪುವ ಯಾರೇ ವ್ಯಕ್ತಿಯು, ಹಾಗೆ ಜನನಿಬಿಡವಾಗಿರುವುದು ಅಥವಾ ಅಂಥ ಖಾಲಿ ಮಾಡಲು ತಪ್ಪುವುದು ಮುಂದುವರಿಯುವಂಥ ಅವಧಿಯಲ್ಲಿ ಅಂಥ ಕಡ್ಡಾಯ ಕೋರಿಕೆಯಲ್ಲಿ ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ತರುವಾಯದ ಪ್ರತಿಯೊಂದು ದಿವಸಕ್ಕೆ ಹತ್ತು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

253. ಸರ್ಕಾರವು ಅಧಿಸೂಚಿಸಿದ ಜನನಿಬಿಡತೆ ಪ್ರದೇಶಗಳಿಗೆ ಸಂಬಂಧಿಸಿದಂತೆ ಸರ್ಕಾರವು ಪ್ರದಾನ ಮಾಡಬಹುದಾದಂಥ ವಿಶೇಷ ಅಧಿಕಾರಗಳು.- (1) ಈ ಕೆಳಕಂಡ ಯಾವುದೇ ನ್ಯೂನತೆಗಳಿಂದಾಗಿ, ಎಂದರೆ,-

(ಎ) ಅಲ್ಲಿ ಈಗಾಗಲೇ ಅಸ್ತಿತ್ವದಲ್ಲಿರುವ ಅಥವಾ ಉದ್ದೇಶಿತ ಕಟ್ಟಡಗಳ ಅಥವಾ ಕಟ್ಟಡಗಳ ಅಥವಾ ಕಟ್ಟಡಗಳ ಬ್ಲಾಕ್‌ಗಳು ಯಾವ ರೀತಿಯಲ್ಲಿ ಒಟ್ಟಾಗಿ ಜನನಿಬಿಡವಾಗಿರುವವೋ ಅಥವಾ ಆಗುವ ಸಂಭವವಿರುವುದೋ ಆ ರೀತಿಯಿಂದಾಗಿ; ಅಥವಾ

(ಬಿ) ಈಗಾಗಲೇ ಅಸ್ತಿತ್ವದಲ್ಲಿರುವ ಅಥವಾ ಉದ್ದೇಶಿತ ಯಾವುದೇ ಕಟ್ಟಡಗಳನ್ನು ಅಥವಾ ಕಟ್ಟಡಗಳ ಬ್ಲಾಕ್ ಗಳನ್ನು ಸ್ವಚ್ಛಗೊಳಿಸುವುದು ಅಸಾಧ್ಯವಾಗಿರುವುದರಿಂದಾಗಿ; ಅಥವಾ

(ಸಿ) ಹಿಂದೆ ಹೇಳಿದಂತೆ ಅಂಥ ಯಾವುವೇ ಕಟ್ಟಡಗಳಲ್ಲಿ ಅಥವಾ ಬ್ಲಾಕ್ ಗಳಲ್ಲಿ ಅಥವಾ ಪ್ರದೇಶದಲ್ಲಿ ರೊಚ್ಚು ನೀರು ಅಥವಾ ನಿರ್ಮಲೀಕರಣಕ್ಕಾಗಿ ಅದರಲ್ಲಿ ರೊಚ್ಚು ನೀರು ಅಥವಾ ನಿರ್ಮಲೀಕರಣದ ಅಭಾವದಿಂದಾಗಿ ಅಥವಾ ಸುಗಮವಾಗಿ ಹರಿದು ಹೋಗುವುದಕ್ಕಾಗಿ ಚರಂಡಿ ವ್ಯವಸ್ಥೆ ಮಾಡಲು ತೊಂದರೆ ಇರುವುದರಿಂದಾಗಿ; ಅಥವಾ

(ಡಿ) ಬೀದಿಗಳ ಅಥವಾ ಕಟ್ಟಡಗಳ ಅಥವಾ ಕಟ್ಟಡಗಳ ಸಮೂಹಗಳು ಇಕ್ಕಟ್ಟಾಗಿರುವುದರಿಂದಾಗಿ, ಒತ್ತೊತ್ತಾಗಿರುವುದರಿಂದಾಗಿ, ದುರ್ವ್ಯವಸ್ಥೆ ಅಥವಾ ದುಸ್ಥಿತಿಯಲ್ಲಿರುವುದರಿಂದಾಗಿ,

- ಯಾವುದೇ ಪ್ರದೇಶದಲ್ಲಿನ ಯಾರೇ ಅಧಿಭೋಗದಾರನಿಗೆ ಆಗಲಿ ಅಥವಾ ಅದರ ನೆರೆಹೊರೆಯಲ್ಲಿನ ಯಾರೇ ನಿವಾಸಿಗಳಿಗೆ ಆಗಲಿ ರೋಗದ ಅಪಾಯ ಉಂಟಾಗಿದೆಯೆಂದು ಅಥವಾ ಉಂಟಾಗುವ ಸಂಭವವಿದೆಯೆಂದು ಸರ್ಕಾರವು ಅಭಿಪ್ರಾಯಪಟ್ಟರೆ, ಸರ್ಕಾರವು ಅಧಿಸೂಚನೆಯ ಮೂಲಕ ಅಂಥ ಪ್ರದೇಶವು ಯಾವ ಮುನ್ಸಿಪಲ್ ಕೌನ್ಸಿಲ್ ಗೊಳಪಟ್ಟಿದೆಯೋ ಆ ಮುನ್ಸಿಪಲ್

ಕೌನ್ಸಿಲ್ ಗೆ (2)ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಎಲ್ಲಾ ಅಥವಾ ಯಾವುದೇ ಅಧಿಕಾರವನ್ನು ಪ್ರದಾನ ಮಾಡಬಹುದು, ಮತ್ತು ಈ ಬಗ್ಗೆ ಯಾವುದಾದರೂ ಪರಿಮಿತಿಗಳನ್ನು, ನಿರ್ಬಂಧಗಳನ್ನು ಮಾರ್ಪಾಟುಗಳನ್ನು, ಷರತ್ತುಗಳನ್ನು ಅಥವಾ ವಿನಿಯಮಗಳನ್ನೇನಾದರೂ ಗೊತ್ತುಪಡಿಸಿದ್ದರೆ ಅವುಗಳಿಗೊಳಪಟ್ಟು, ಆ ಪ್ರದೇಶದೊಳಗೆ ಹಾಗೆ ಪ್ರದತ್ತವಾದ ಎಲ್ಲಾ ಅಧಿಕಾರಗಳನ್ನು, ಸರ್ಕಾರದ ತರುವಾಯದ ಅಧಿಸೂಚನೆಯ ಮೂಲಕ ಆ ಅಧಿಕಾರಗಳನ್ನು ಹಿಂತೆಗೆದುಕೊಂಡ ಹೊರತು ಮತ್ತು ಅಲ್ಲಿಯವರೆಗೆ ಚಲಾಯಿಸಬಹುದು.

(2) ಉಪಪ್ರಕರಣ (1) ರ ಮೇರೆಗೆ ಮುನ್ಸಿಪಲ್ ಕೌನ್ಸಿಲ್ ಗೆ ಪ್ರದಾನ ಮಾಡಬಹುದಾದಂಥ ಎಲ್ಲ ಅಥವಾ ಯಾವುದೇ ಅಧಿಕಾರವು ಯಾವುವೆಂದರೆ:-

(ಎ) ಈಗಾಗಲೇ ಅಸ್ತಿತ್ವದಲ್ಲಿರುವ ಅಥವಾ ನಿರ್ಮಾಣವಾಗುತ್ತಿರುವ ಯಾವುದೇ ಕಟ್ಟಡವು ಅಥವಾ ಬ್ಲಾಕ್ (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ನ್ಯೂನತೆಯ ಕಾರಣದಿಂದಾಗಿ ಹಿಂದೆ ಹೇಳಿದಂತೆ ಅಂಥ ಅಪಾಯಕ್ಕೆ ಆಸ್ಪದ ಮಾಡಿಕೊಟ್ಟಿದೆ ಅಥವಾ ಅದಕ್ಕೆ ಆಸ್ಪದ ಮಾಡಿಕೊಡುವ ಸಂಭವವಿದೆಯೆಂದು ಮುನ್ಸಿಪಲ್ ಕೌನ್ಸಿಲ್ ಅಭಿಪ್ರಾಯಪಟ್ಟರೆ, ಅಂಥ ಕಟ್ಟಡದ ಅಥವಾ ಬ್ಲಾಕ್ ನ ಯಾವುದೇ ಎದ್ದು ಕಾಣುವಂಥ ಜಾಗದಲ್ಲಿ ಅಂಟಿಸಬೇಕಾದ ನೋಟೀಸನ್ನು ಎಂದರೆ, ಮುನ್ಸಿಪಲ್ ಕೌನ್ಸಿಲ್ ಸರಿಯೆಂದು ಭಾವಿಸಿದರೆ ಅವುಗಳ ಒಡೆಯರಿಗೆ ಅಥವಾ ಅಂಥ ಕಟ್ಟಡವನ್ನು ಅಥವಾ ಬ್ಲಾಕನ್ನು ನಿರ್ಮಿಸಿರುವ ಅಥವಾ ಯಾವ ಭೂಮಿಯಲ್ಲಿ ಕಟ್ಟಡವನ್ನು ಅಥವಾ ಬ್ಲಾಕನ್ನು ನಿರ್ಮಿಸಲಾಗುತ್ತಿದೆಯೋ ಆ ಭೂಮಿಯ ಒಡೆಯರಿಗೆ ಬರಹದಲ್ಲಿ ನೋಟೀಸಿನ ಮೂಲಕ ಅದರಲ್ಲಿ ಹೇಳಿರುವ ವ್ಯಕ್ತಿಗಳು, ನೋಟೀಸಿನಲ್ಲಿ ನಿರ್ದಿಷ್ಟಪಡಿಸಿರುವ ಸಮಂಜಸ ಅವಧಿಯೊಳಗಾಗಿ ಸದರಿ ಕಟ್ಟಡವನ್ನು ಅಥವಾ ಬ್ಲಾಕನ್ನು ಕೆಡವಿ ಹಾಕುವಂತೆ ಅಥವಾ ತೆಗೆದುಹಾಕುವಂತೆ ಅಥವಾ ಅಂಥ ರೋಗದ ಎಲ್ಲ ಅಂಥ ಅಪಾಯವನ್ನು ತಡೆಗಟ್ಟಲು ಅವಶ್ಯವೆಂದು ಮುನ್ಸಿಪಲ್ ಕೌನ್ಸಿಲ್ ಭಾವಿಸುವಂಥ ಕೆಲಸಗಳನ್ನು ನಿರ್ವಹಿಸಲು ಅಥವಾ ಅದಕ್ಕೆ ಸಂಬಂಧಿಸಿದಂಥ ಕ್ರಮವನ್ನು ಕೈಗೊಳ್ಳಲು ಅಗತ್ಯಪಡಿಸಲು ಅಧಿಕಾರ;

(ಬಿ) ಸದರಿ ನೋಟೀಸಿನಲ್ಲಿ ಹೇಳಿರುವ ವ್ಯಕ್ತಿಗಳು ಅದರಲ್ಲಿ ನಿರ್ದಿಷ್ಟಪಡಿಸಿರುವ ಕಾಲದಲ್ಲಿ ಹಾಗೆ ಮಾಡಲು ನಿರ್ಲಕ್ಷಿಸಿದರೆ ಮುನ್ಸಿಪಲ್ ಅಥವಾ ಇತರ ಏಜೆನ್ಸಿಯು ಸದರಿ ಕಟ್ಟಡವನ್ನು ಅಥವಾ ಬ್ಲಾಕನ್ನು ಕೆಡವಿ ಹಾಕಲು ಅಥವಾ ತೆಗೆದುಹಾಕಲು ಅಥವಾ ಅಂಥ ಕೆಲಸಗಳನ್ನು ನಿರ್ವಹಿಸಲು ಅಥವಾ ಅಂಥ ಕ್ರಮವನ್ನು ತೆಗೆದುಕೊಳ್ಳಲು ಅಧಿಕಾರ;

(ಸಿ) ಸರ್ಕಾರವು ಯಾವ ಅಧಿಕಾರಿಗೆ ಅಪೀಲನ್ನು ಸಲ್ಲಿಸಬಹುದೆಂದು ಸರ್ಕಾರವು ಅಧಿಕಾರ ಕೊಡುವುದೋ ಮತ್ತು ಯಾವ ಆ ಅಧಿಕಾರಿಯ ತೀರ್ಮಾನವು ನಿರ್ಣಾಯಕವಾಗಿರತಕ್ಕದ್ದೋ ಆ ಅಧಿಕಾರಿಗೆ ಅಪೀಲು ಮಾಡಿ ಕೊಳ್ಳುವ ಹಕ್ಕಿಗೊಳಪಟ್ಟು,-

(i) ಖಂಡ (ಎ) ಯಲ್ಲಿ ನಿರ್ದಿಷ್ಟಪಡಿಸಿದ ಅಧಿಕಾರವನ್ನು ಚಲಾಯಿಸಿ ಪೂರ್ಣವಾಗಿ ಅಥವಾ ಭಾಗಶಃ ಕೆಡವಿ ಹಾಕಿದಂಥ ಯಾವುದೇ ಕಟ್ಟಡದ ನಿವೇಶನದ ಮೇಲೆ;

(ii) ಹಿಂದೆ ಹೇಳಿದಂತೆ, ಅಂಥ ಅಪಾಯವನ್ನು ತಡೆಗಟ್ಟಲು ಅಂಥ ನಿವೇಶನದ ಅಥವಾ ಜಾಗದ ಮೇಲೆ ಅಂಥ ಜಾಗವು ಖಾಸಗಿ ಸ್ವತ್ತಾಗಿರಬಹುದು ಅಥವಾ ಅಲ್ಲದಿರಬಹುದು ಮತ್ತು ಆವೃತವಾಗಿರಬಹುದು ಅಥವಾ ಆವೃತವಾಗಿರದಿರಬಹುದು ಕಟ್ಟತಕ್ಕದ್ದಲ್ಲವೆಂದು ಮುನ್ಸಿಪಲ್ ಕೌನ್ಸಿಲ್ ಪರ್ಯಾಲೋಚಿಸಿದರೆ, ಕಟ್ಟಡವು ಆವರಿಸಿರದ ಯಾವುದೇ ಜಾಗದ ಮೇಲೆ; ಮತ್ತು

(ಎ) ಅಂಥ ನಿವೇಶನವನ್ನು ಅಥವಾ ಜಾಗವನ್ನು ಆರ್ಜಿಸುವುದೇ ಆಗಲಿ; ಅಥವಾ

(ಬಿ) ಒಡೆಯ ಅಥವಾ ಅಧಿಭೋಗದಾರನು ಉಪಯೋಗಿಸಬಹುದಾದ ಅಥವಾ ಅದರ ಉಪಯೋಗವನ್ನು ಮಾಡಲು ಅನುಮತಿಸುವುದಕ್ಕೆ ಸಂಬಂಧಿಸಿದಂತೆ ಅವಶ್ಯವೆಂದು ಭಾವಿಸಬಹುದಾದಂಥ ಷರತ್ತುಗಳನ್ನು ನಿಯಮಿಸಲು,

- ಯಾವುದೇ ಕಟ್ಟಡದ ನಿರ್ಮಾಣವನ್ನು ಅಥವಾ ನಿರ್ದಿಷ್ಟಪಡಿಸಬಹುದಾದಂಥ ಉದ್ದಗಲಗಳನ್ನು ಮೀರದ ಯಾವುದೇ ಕಟ್ಟಡವನ್ನು ನಿರ್ಮಿಸಲು, ಅಂಥ ಯಾವುದೇ

ನಿವೇಶನದ ಅಥವಾ ಜಾಗದ ಒಡೆಯನಿಗೆ ಅಥವಾ ಅಧಿಭೋಗದಾರನಿಗೆ ಬರಹದಲ್ಲಿ ನೋಟೀಸಿನ ಮೂಲಕ ಮತ್ತು 262ನೇ ಪ್ರಕರಣದ, (6)ನೇ ಉಪಪ್ರಕರಣದಲ್ಲಿ ಹೇಳಿರುವ ರೀತಿಯಲ್ಲಿ ಪ್ರಕಟಿಸಿದ ಸಾರ್ವತ್ರಿಕ ನೋಟೀಸಿನ ಮೂಲಕ ನಿಷೇಧಿಸಲು ಅಧಿಕಾರ:

ಪರಂತು, ನಷ್ಟ ಪರಿಹಾರದ ಪ್ರತಿಯೊಂದು ವಿಷಯದಲ್ಲಿ ಅಂಥ ನಿಷೇಧದಿಂದ ಯಾರ ಹಕ್ಕುಗಳು ಬಾಧಿತವಾಗಿವೆಯೋ ಆ ಯಾರೇ ವ್ಯಕ್ತಿಗೆ ನಷ್ಟ ಪರಿಹಾರದ ಮೊಬಲಗು ವಿವಾದದಲ್ಲಿದ್ದರೆ, ಅದನ್ನು 268ನೇ ಪ್ರಕರಣದಲ್ಲಿ ಹೇಳಿರುವ ರೀತಿಯಲ್ಲಿ ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ನಿರ್ಧರಿಸತಕ್ಕದ್ದು.

(3) ಉಪಪ್ರಕರಣ (2) ರ ಮೇರೆಗಿನ ಯಾವುದೇ ನೋಟೀಸಿಗೆ ಅನುಸಾರವಾಗಿ ಯಾವುದೇ ಕಟ್ಟಡವನ್ನು ಕೆಡವಿ ಹಾಕಿದಾಗ, ಮುನ್ಸಿಪಲ್ ಕೌನ್ಸಿಲ್, ಅದನ್ನು ಈ ಅಧಿನಿಯಮದ ಅಥವಾ ಅದರ ಮೇರೆಗೆ ಜಾರಿಯಲ್ಲಿರುವ ಬೈಲಾದ ಯಾವುದೇ ಉಪಬಂಧಕ್ಕೆ ತದ್ವಿರುದ್ಧವಾಗಿ ಅದನ್ನು ನಿರ್ಮಿಸಲಾಗಿದ್ದ ಹೊರತು, ಅದರಿಂದ ಹಾನಿಗೆ ಒಳಗಾಗಿರಬಹುದಾದಂಥ ಒಡೆಯನಿಗೆ ಅಥವಾ ಅಧಿಭೋಗದಾರನಿಗೆ ಸಮಂಜಸ ನಷ್ಟಪರಿಹಾರವನ್ನು ಸಂದಾಯ ಮಾಡತಕ್ಕದ್ದು. ಮೊಬಲಗಿನ ಬಗ್ಗೆ ವಿವಾದವಿದ್ದ ಸಂದರ್ಭದಲ್ಲಿ ಅದನ್ನು 268ನೇ ಪ್ರಕರಣದಲ್ಲಿ ಹೇಳಿರುವ ರೀತಿಯಲ್ಲಿ ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ನಿರ್ಧರಿಸತಕ್ಕದ್ದು.

254. ಪೂಜಾ ಸ್ಥಳದಲ್ಲಿ ಸಮಾಧಿ ಅಥವಾ ಗೋರಿ ನಿರ್ಮಾಣಕ್ಕೆ ನಿಷೇಧ.- (1) ಯಾವುದೇ ಸಾರ್ವಜನಿಕ ಪೂಜಾಸ್ಥಳದ ಗೋಡೆಗಳೊಳಗೆ ಅಥವಾ ಅದರ ಕೆಳಭಾಗದಲ್ಲಿ ಯಾರೇ ವ್ಯಕ್ತಿಯು ಗುಮ್ಮಟ ಅಥವಾ ಗೋರಿಯನ್ನು ನಿರ್ಮಿಸತಕ್ಕದ್ದಲ್ಲ ಅಥವಾ ಯಾವುದೇ ಶವವನ್ನು ಹೂಳಿಸತಕ್ಕದ್ದಲ್ಲ:

ಪರಂತು, ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನು, ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೊಳಪಟ್ಟು ಯಾವುದೇ ಸಾರ್ವಜನಿಕ ಪೂಜಾ ಸ್ಥಳದ ಆವರಣದೊಳಗೆ ಅಥವಾ ಅದರ ಕೆಳಭಾಗದಲ್ಲಿ ಗುಮ್ಮಟವನ್ನು ಅಥವಾ ಗೋರಿಯನ್ನು ನಿರ್ಮಿಸಲು ಮತ್ತು ಅಂಥ ಗುಮ್ಮಟದಲ್ಲಿ ಅಥವಾ ಗೋರಿಯಲ್ಲಿ ಅಥವಾ ಅಸ್ತಿತ್ವದಲ್ಲಿರುವ ಗುಮ್ಮಟದಲ್ಲಿ ಅಥವಾ ಗೋರಿಯಲ್ಲಿ ಪೂಜಾರಿಗಳನ್ನು, ಸನ್ಯಾಸಿಗಳನ್ನು ಅಥವಾ ಧರ್ಮಗುರುಗಳನ್ನು ಹೂಳುವುದಕ್ಕೆ ಅನುಮತಿ ಕೊಡಬಹುದು.

(2) ಉಪಪ್ರಕರಣ (1) ರ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

255. ಸತ್ತವರ ವಿಲೆಗಾಗಿ ಬಳಸುತ್ತಿರುವ ಸ್ಥಳಗಳನ್ನು ಮುಚ್ಚುವುದು.- (1) ಮುನ್ಸಿಪಲ್ ಕೌನ್ಸಿಲ್, ಸತ್ತವರ ವಿಲೆಗಾಗಿ ಬಳಸುವ ಯಾವುದೇ ಸ್ಥಳವು ಆರೋಗ್ಯಕ್ಕೆ ಹಾನಿಕಾರಕವಾಗುವ ಹಾಗಿರುವ ಅಥವಾ ಹಾನಿಕಾರಕವಾಗುವ ಸಂಭವವುಳ್ಳಂಥ ಸ್ಥಿತಿಯಲ್ಲಿದೆ ಎಂದು ಅಭಿಪ್ರಾಯಪಟ್ಟರೆ ಅದು, ಆ ಕಾರಣಗಳ ಸಹಿತ ತನ್ನ ಅಭಿಪ್ರಾಯವನ್ನು ಸರ್ಕಾರಕ್ಕೆ ಒಪ್ಪಿಸಬಹುದು ಮತ್ತು ಸರ್ಕಾರವು ತರುವಾಯ ಯಾವುದೇ ಹೆಚ್ಚಿನ ವಿಚಾರಣೆಯನ್ನು ಮಾಡಿಸುವುದು ಸೂಕ್ತವೆಂದು ಭಾವಿಸುವಂಥ ಹೆಚ್ಚಿನ ವಿಚಾರಣೆಯನ್ನು ಮಾಡಿಸಿದ ತರುವಾಯ ಅಧಿಸೂಚನೆಯ ಮೂಲಕ, ಆ ಅಧಿಸೂಚನೆಯಲ್ಲಿ ಆ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಅಂಥ ಸ್ಥಳವನ್ನು ಹಾಗೆ ಬಳಸುವುದನ್ನು ನಿಲ್ಲಿಸತಕ್ಕದ್ದೆಂದು ನಿರ್ದೇಶಿಸಬಹುದು.

(2) ಅಧಿಸೂಚನೆಯ ಒಂದು ಪ್ರತಿಯನ್ನು ನೆರೆಹೊರೆಯ ಜನರ ಭಾಷೆಯಲ್ಲಿ ಅದರ ಭಾಷಾಂತರದೊಂದಿಗೆ ಸರ್ಕಾರೀ ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು ಮತ್ತು ಮುನ್ಸಿಪಲ್ ಆಫೀಸ್‌ನಲ್ಲಿ ಮತ್ತು ಅದು ಸಂಬಂಧಪಡುವಂಥ ಒಂದು ಅಥವಾ ಹೆಚ್ಚು ಎದ್ದು ಕಾಣುವ ಸ್ಥಳಗಳಲ್ಲಿ ಅಥವಾ ಆ ಸ್ಥಳದ ಹತ್ತಿರ ಹಾಕಿಸತಕ್ಕದ್ದು.

(3) ಅದನ್ನು ಮುಚ್ಚಲು ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದ ತರುವಾಯ ಯಾವುದೇ ಅಂಥ ಸ್ಥಳದಲ್ಲಿ ಯಾವುದೇ ಶವವನ್ನು ಹೂಳುವ ಅಥವಾ ಅನ್ಯಥಾ ವಿಲೆ ಮಾಡುವಯಾರೇ ವ್ಯಕ್ತಿಯು ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

ಕೆಲವು ವ್ಯಾಪಾರಗಳು ಮತ್ತು ಉದ್ಯೋಗಗಳಿಂದ ಉಂಟಾಗುವ ಉಪದ್ರವಗಳು

256. ಲೈಸೆನ್ಸ್ ಪಡೆಯದೆ ಕೆಲವು ಉದ್ದೇಶಗಳಿಗಾಗಿ ಆವರಣವನ್ನು ಬಳಸತಕ್ಕದ್ದಲ್ಲ.:-

[3][(1)ಬೈಲಾಗಳಲ್ಲಿ ನಿರ್ದಿಷ್ಟಪಡಿಸಿದಂತೆ ಅಥವಾ ಸರ್ಕಾರವು ಅಧಿಸೂಚಿಸಿದಂತೆ

ಮುನ್ಸಿಪಲ್ ಕಮಿಷನರ್ ಅಥವಾ ಮುಖ್ಯಾಧಿಕಾರಿಯು ಈ ಕುರಿತು ಮಂಜೂರು ಮಾಡಿದ ಲೈಸೆನ್ಸಿನ ನಿಬಂಧನೆಗಳನ್ನು ಅನುಸರಿಸದೆ ಅಥವಾ ಅನ್ಯಥಾ ಯಾವುದೇ ಉದ್ದೇಶಗಳಿಗಾಗಿ ಯಾವುದೇ ಆವರಣಗಳನ್ನು ಯಾರೇ ವ್ಯಕ್ತಿಯು ಬಳಸತಕ್ಕದ್ದಲ್ಲ ಅಥವಾ ಬಳಸಲು ಅನುಮತಿಸತಕ್ಕದ್ದಲ್ಲ:

ಪರಂತು, ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಅಭಿವೃದ್ಧಿ ಅಧಿನಿಯಮ, 2006 (2006ರ ಕೇಂದ್ರ ಅಧಿನಿಯಮ 27)ರಡಿಯಲ್ಲಿ ಸಂಬಂಧಪಟ್ಟ ಜಿಲ್ಲಾ ಕೈಗಾರಿಕಾ ಕೇಂದ್ರದಲ್ಲಿ ನೋಂದಾಯಿಸಿರುವ ಎಲ್ಲಾ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮಗಳು ಮತ್ತು ಕೈಗಾರಿಕಾ ಸಹಾಯ ಸಚಿವಾಲಯ, ಕೈಗಾರಿಕಾ ನೀತಿ ಮತ್ತು ಪ್ರಚಾರ ಇಲಾಖೆ, ಭಾರತ ಸರ್ಕಾರ ಇದರೊಂದಿಗೆ ಕೈಗಾರಿಕಾ ಉದ್ಯಮಿಗಳ ಜ್ಞಾಪಕ ಪತ್ರ ಅಥವಾ ಕೈಗಾರಿಕಾ ಲೈಸೆನ್ಸನ್ನು ದಾಖಲಿಸಿರುವ ದೊಡ್ಡ ಕೈಗಾರಿಕೆಗಳಿಗೆ ವ್ಯಾಪಾರ ಲೈಸೆನ್ಸನ್ನು ಪಡೆಯುವುದರಿಂದ ವಿನಾಯಿತಿ ನೀಡಲಾಗುತ್ತದೆ.][3]

(2) ಸರ್ಕಾರವು, [1][ಮುನ್ಸಿಪಲ್ ಏರಿಯಾ][1] ದ ಎಲ್ಲೆಗಳ ಎರಡು ಮೈಲಿಗಳ ಅಂತರದೊಳಗೆ ಇರುವ ಯಾವುದೇ ಆವರಣವನ್ನು ಸಂಬಂಧಪಟ್ಟ [1][ಮುನ್ಸಿಪಲ್ ಏರಿಯಾ][1] ದ ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನಿಂದ ಲೈಸೆನ್ಸ್ ಪಡೆಯದೆ ಮತ್ತು ಅಂಥ ಲೈಸೆನ್ಸ್ ನಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳಿಗನುಸಾರವಾಗಲ್ಲದೆ [3][ಬೈಲಾಗಳಲ್ಲಿ ನಿರ್ದಿಷ್ಟಪಡಿಸಿದಂತೆ ಅಥವಾ ಸರ್ಕಾರವು ಅಧಿಸೂಚಿಸಿದಂತೆ][3] ಯಾವುದೇ ಒಂದು ಅಥವಾ ಹೆಚ್ಚಿನ ಉದ್ದೇಶಗಳಿಗಾಗಿ ಬಳಸತಕ್ಕದ್ದಲ್ಲವೆಂದು ಅಧಿಸೂಚನೆಯ ಮೂಲಕ ನಿರ್ದೇಶಿಸಬಹುದು ಮತ್ತು (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ [1][ಮುನ್ಸಿಪಲ್ ಏರಿಯಾ][1] ದೊಳಗಿನ ಯಾವುದೇ ಆವರಣಕ್ಕೆ ಅನ್ವಯವಾಗುವ ಈ ಅಧಿನಿಯಮವು ಮತ್ತು ಅದರ ಮೇರೆಗಿನ ನಿಯಮಗಳು ಹಾಗೂ ಬೈಲಾಗಳ ಉಪಬಂಧಗಳು [1][ಮುನ್ಸಿಪಲ್ ಏರಿಯಾ][1] ದ ಹೊರಗಿರುವ ಆವರಣಕ್ಕೂ ಅನ್ವಯವಾಗತಕ್ಕದ್ದು:

ಪರಂತು, ಅಂಥ ಯಾವುದೇ ಅಧಿಸೂಚನೆಯು ಸರ್ಕಾರೀ ರಾಜಪತ್ರದಲ್ಲಿ ಅದನ್ನು ಪ್ರಕಟಿಸಿದ ದಿನಾಂಕದಿಂದ ಮೂವತ್ತು ದಿವಸಗಳು ಮುಕ್ತಾಯವಾಗುವವರೆಗೆ, ಜಾರಿಗೆ ಬರತಕ್ಕದ್ದಲ್ಲ.

(3) ಗಿರಣಿಗಳಿಗಾಗಿ ಅಥವಾ ಕಬ್ಬಿಣ ಇಡುವ ಅಂಗಳಗಳಾಗಿ ಅಥವಾ ಅಂಥದೇ ಉದ್ದೇಶಗಳಿಗಾಗಿ, ಆವರಣಗಳನ್ನು ಬಳಸುವುದಕ್ಕಾಗಿ ಈ ಪ್ರಕರಣದ ಮೇರೆಗೆ ಮಂಜೂರು ಮಾಡಿದ ಲೈಸೆನ್ಸ್ ನ ನಿಬಂಧನೆಗಳನ್ನು ಗೊತ್ತುಪಡಿಸುವಾಗ, ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನು, ಸಮಂಜಸವೆಂದು ಅವರು ಭಾವಿಸಿದರೆ, ಲೈಸೆನ್ಸ್ ಪಡೆದವನನ್ನು ಭಾರ ಹೇರುವ ಮತ್ತು ಭಾರ ಇಳಿಸುವ ಉದ್ದೇಶಗಳಿಗಾಗಿ ವಾಹನಗಳಿಗೆ ಆವರಣದೊಳಗೆ ಜಾಗವನ್ನು ಅಥವಾ ದಾರಿಯನ್ನು ಒದಗಿಸಲು ಅಗತ್ಯಪಡಿಸಬಹುದು.

(4) ಮುನ್ಸಿಪಲ್ ಕೌನ್ಸಿಲ್ [3][ಬೈಲಾಗಳಲ್ಲಿ ನಿರ್ದಿಷ್ಟಪಡಿಸಿದಂತೆ ಅಥವಾ ಸರ್ಕಾರವು ಅಧಿಸೂಚಿಸಿದಂತೆ][3] ಲೈಸೆನ್ಸನ್ನು ನೀಡಿರುವ ಆವರಣಗಳಿಗೆ ಸಂಬಂಧಿಸಿದಂತೆ, ಸಂದಾಯ ಮಾಡಬೇಕಾದ ಫೀಜುಗಳ ಪ್ರಮಾಣವನ್ನು ನಿಗದಿಪಡಿಸತಕ್ಕದ್ದು:

[4][XXX][4]

(5) [1][ಮುನ್ಸಿಪಲ್ ಏರಿಯಾ][1] ದ ಎಲ್ಲೆಗಳ ಹೊರಗಿರುವ ಯಾವುದೇ ಸ್ಥಳವನ್ನು ಬಳಸಿಕೊಳ್ಳುವುದಕ್ಕಾಗಿ ಈ ಪ್ರಕರಣದ ಮೇರೆಗೆ ಲೈಸೆನ್ಸನ್ನು ಕೊಟ್ಟಿದ್ದರೆ ಮುನ್ಸಿಪಲ್ ಕೌನ್ಸಿಲ್, ಅಂಥ ಸ್ಥಳವು ಯಾವ ಸ್ಥಳೀಯ ಪ್ರಾಧಿಕಾರದ ಎಲ್ಲೆಗಳ ಒಳಗಿದೆಯೋ ಆ ಸ್ಥಳೀಯ ಪ್ರಾಧಿಕಾರಕ್ಕೆ, ಅಂಥ ಲೈಸೆನ್ಸಿನ ಮಂಜೂರಾತಿಗಾಗಿ ಅಥವಾ ನವೀಕರಣಕ್ಕಾಗಿ ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ಧರಿಸಬಹುದಾದಂಥ ಫೀಜಿನ ಪ್ರಮಾಣವನ್ನು ಮುನ್ಸಿಪಲ್ ಕೌನ್ಸಿಲ್ ಸ್ವೀಕರಿಸಿದ್ದರೆ ಆ ಫೀಜನ್ನು ಸಂದಾಯ ಮಾಡತಕ್ಕದ್ದು.

[3][(6) ಉಪ-ಪ್ರಕರಣ (1), ಅಥವಾ (2) ಅಥವಾ (3)ರ ಅಥವಾ 324ನೇ ಪ್ರಕರಣದ ಉಪ-ಪ್ರಕರಣ (1)ರಡಿ ರಚಿಸಲಾದ ಯಾವುದೇ ಬೈಲಾದ ಉಪಬಂಧಗಳನ್ನು ಉಲ್ಲಂಘಿಸಿ ಯಾವುದೇ ಆವರಣಗಳನ್ನು ಬಳಸಿದ ಯಾರಾದರೂ ದಂಡದೊಂದಿಗೆ ದಂಡಿತನಾಗತಕ್ಕದ್ದು.][3]

(7) [3][ಉಪ-ಪ್ರಕರಣ (1)ರಲ್ಲಿ][3] ಹೇಳಿರುವ ಯಾವುದೇ ಉದ್ದೇಶಕ್ಕಾಗಿ ಉಪಯೋಗಿಸಿದ ಯಾವುದೇ ಆವರಣಕ್ಕೆ ಸಂಬಂಧಿಸಿದಂತೆ, ಈ ಪ್ರಕರಣದ ಮೇರೆಗೆ ಆದ ಅಪರಾಧ ನಿರ್ಣಯದ ತರುವಾಯ ಮ್ಯಾಜಿಸ್ಟ್ರೇಟ್ ನು, ಮುನ್ಸಿಪಲ್ ಕೌನ್ಸಿಲ್ ಅರ್ಜಿ ಸಲ್ಲಿಸಿದ ಮೇಲೆ, ಆದರೆ ಅನ್ಯಥಾ ಅಲ್ಲ, ಅಂಥ ಆವರಣವನ್ನು ಮುಚ್ಚಬೇಕೆಂದು ಆದೇಶಿಸತಕ್ಕದ್ದು ಮತ್ತು ಆ ತರುವಾಯ (1)ನೇ

ಉಪಪ್ರಕರಣದ (ಎ) ಅಥವಾ (ಬಿ) ಖಂಡದಲ್ಲಿ ಹೇಳಿರುವ ಯಾವುದೇ ಉದ್ದೇಶಕ್ಕಾಗಿ ಅಂಥ ಆವರಣಗಳನ್ನು ಉಪಯೋಗಿಸಿಕೊಳ್ಳುವುದನ್ನು ತಡೆಗಟ್ಟಲು ವ್ಯಕ್ತಿಗಳನ್ನು ನೇಮಕ ಮಾಡತಕ್ಕದ್ದು ಅಥವಾ ಇತರ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

1. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 2015ರ ಅಧಿನಿಯಮ 42ರ ಮೂಲಕ 23.12.2015 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

3. 2025ರ ಅಧಿನಿಯಮ 64ರ ಮೂಲಕ 12.09.2025 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

4. 2025ರ ಅಧಿನಿಯಮ 64ರ ಮೂಲಕ 12.09.2025 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

257. 256ನೇ ಪ್ರಕರಣದಲ್ಲಿ ಹೇಳಿರುವ ಉದ್ದೇಶಗಳಿಗಾಗಿ ವಿಶಿಷ್ಟ ಪ್ರದೇಶಗಳಲ್ಲಿರುವ ಆವರಣದ ಉಪಯೋಗವನ್ನು ತಡೆಗಟ್ಟಲು ಮುನ್ಸಿಪಲ್ ಕಮಿಷನರ್ ರ ಅಥವಾ ಚೀಫ್ ಆಫೀಸರ್ ರ ಅಧಿಕಾರ.-(1) ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನು, ಸಾರ್ವಜನಿಕ ನೋಟೀಸನ್ನು ಎಂದರೆ, ಆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ಪ್ರದೇಶದಲ್ಲಿ ಅಂಥ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ, 256ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಹೇಳಿರುವ ಯಾವುವೇ ಉದ್ದೇಶಕ್ಕಾಗಿ ಯಾವುದೇ ಆವರಣವನ್ನು ಯಾವ ವ್ಯಕ್ತಿಯು ಉಪಯೋಗಿಸತಕ್ಕದ್ದಲ್ಲವೆಂದು ಘೋಷಿಸುವ ತನ್ನ ಉದ್ದೇಶದ ಬಗ್ಗೆ ಸಾರ್ವಜನಿಕ ನೋಟೀಸನ್ನು ಕೊಡಬಹುದು.

(2) ನೋಟೀಸ್ ಪ್ರಕಟವಾದ ಒಂದು ತಿಂಗಳ ಅವಧಿಯ ತರುವಾಯ, ಅಂಥ ಯಾವುವೇ ಘೋಷಣೆಗಳ ಬಗ್ಗೆ ಯಾವುವೇ ಆಕ್ಷೇಪಣೆಗಳನ್ನು ಸ್ವೀಕರಿಸತಕ್ಕದ್ದಲ್ಲ.

(3) ಮುನ್ಸಿಪಲ್ ಕಮಿಷನರ್ ನು ಅಥವಾ ಚೀಫ್ ಆಫೀಸರ್ ನು ಸದರಿ ಅವಧಿಯೊಳಗೆ ಸ್ವೀಕರಿಸಿದ ಎಲ್ಲಾ ಆಕ್ಷೇಪಣೆಗಳನ್ನು ಪರ್ಯಾಲೋಚಿಸುವ ಕಾಲದಲ್ಲಿ, ನೋಟೀಸಿನಿಂದ ಬಾಧಿತನಾದ ಯಾರೇ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು, ಅವಕಾಶವನ್ನು ಕೊಟ್ಟು, ಪರ್ಯಾಲೋಚಿಸತಕ್ಕದ್ದು ಮತ್ತು ಆ ತರುವಾಯ ಸೂಕ್ತವೆಂದು ಭಾವಿಸಿದ ಯಾವುದಾದರೂ ಮಾರ್ಪಾಟುಗಳು ಇದ್ದರೆ, ಅವುಗಳ ಸಹಿತ, ಆದರೆ ಅದರ ಅನ್ವಯವನ್ನು ವಿಸ್ತರಿಸದಿರುವ ಹಾಗೆ (1)ನೇ ಉಪಪ್ರಕರಣದ ಮೇರೆಗೆ ಪ್ರಕಟಿಸಿದ ನೋಟೀಸಿಗನುಸಾರವಾಗಿ ಘೋಷಣೆಯನ್ನು ಮಾಡಬಹುದು.

(4) ಅಂಥ ಪ್ರತಿಯೊಂದು ಘೋಷಣೆಯನ್ನು ಗೊತ್ತುಪಡಿಸಬಹುದಾದಂಥ ರೀತಿಯಲ್ಲಿ ಪ್ರಕಟಿಸತಕ್ಕದ್ದು ಮತ್ತು ಅದು, ಅದರ ಪ್ರಕಟಣೆಯ ದಿನಾಂಕದಿಂದ ಪರಿಣಾಮಕಾರಿಯಾಗಿರತಕ್ಕದ್ದು.

(5) ಯಾರೇ ವ್ಯಕ್ತಿಯು, (4)ನೇ ಉಪಪ್ರಕರಣದ ಮೇರೆಗೆ ಪ್ರಕಟಿಸಿದ ಯಾವುದೇ ಘೋಷಣೆಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಪ್ರದೇಶದಲ್ಲಿ, 256ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಹೇಳಿರುವ ಮತ್ತು ಆ ಘೋಷಣೆಯಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ಉದ್ದೇಶಕ್ಕಾಗಿ ಯಾವುದೇ ಆವರಣವನ್ನು ಬಳಸತಕ್ಕದ್ದಲ್ಲ ಮತ್ತು ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನು ಅಂಥ ಯಾವುದೇ ಆವರಣದ ಬಳಕೆಯನ್ನು ಅವಶ್ಯವೆಂದು ಅವರು ಪರ್ಯಾಲೋಚಿಸುವಂಥ ಸಾಧನಗಳ ಮೂಲಕ ನಿಲ್ಲಿಸಲು ಅಧಿಕಾರ ಹೊಂದಿರತಕ್ಕದ್ದು.

(6) ಉಪ-ಪ್ರಕರಣ (4) ರ ಮೇರೆಗೆ ಪ್ರಕಟಿಸಿರುವ ಯಾವುದೇ ಘೋಷಣೆಗೆ ತದ್ವಿರುದ್ಧವಾಗಿ 256ನೇ ಪ್ರಕರಣದ 1ನೇ ಉಪ-ಪ್ರಕರಣದಲ್ಲಿ ಹೇಳಿರುವ ಯಾವುದೇ ಉದ್ದೇಶಕ್ಕಾಗಿ ಯಾವುದೇ ಆವರಣವನ್ನು ಬಳಸುವ ಯಾರೇ ಆಗಲಿ ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

258. ಔದ್ಯಮಿಕ ಉದ್ದೇಶಗಳಿಗೆ ಬಳಸುವುದಕ್ಕಾಗಿ ಪ್ರದೇಶಗಳನ್ನು ಪ್ರತ್ಯೇಕವಾಗಿರಿಸುವುದು.- (1) ಮುನ್ಸಿಪಲ್ ಕೌನ್ಸಿಲ್ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಪ್ರದೇಶವನ್ನು ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಔದ್ಯಮಿಕ ಉದ್ದೇಶಗಳಿಗಾಗಿ ಮಾತ್ರ ಬಳಸತಕ್ಕದ್ದೆಂದು ಘೋಷಿಸುವ ತನ್ನ ಉದ್ದೇಶದ ಬಗ್ಗೆ ಸಾರ್ವಜನಿಕ ನೋಟೀಸನ್ನು ಕೊಡಬಹುದು.

(2) ನೋಟೀಸಿನ ಪ್ರಕಟಣೆಯಿಂದ ಒಂದು ತಿಂಗಳ ಅವಧಿಯ ತರುವಾಯ ಯಾವುದೇ ಅಂಥ ಘೋಷಣೆಗಳಿಗೆ ಯಾವುವೇ ಆಕ್ಷೇಪಣೆಗಳನ್ನು ಸ್ವೀಕರಿಸತಕ್ಕದ್ದಲ್ಲ.

(3) ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನು ಸದರಿ ಅವಧಿಯೊಳಗೆ ಸ್ವೀಕರಿಸಿದ ಎಲ್ಲಾ ಆಕ್ಷೇಪಣೆಗಳನ್ನು ಪರ್ಯಾಲೋಚಿಸುವ ಕಾಲದಲ್ಲಿ, ನೋಟೀಸಿನಿಂದ ಬಾಧಿತನಾದ ಯಾರೇ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ಕೊಟ್ಟು ಪರ್ಯಾಲೋಚಿಸತಕ್ಕದ್ದು ಮತ್ತು ಆ ತರುವಾಯ ಸೂಕ್ತವೆಂದು ಅವರು ಭಾವಿಸಿದ ಯಾವುದಾದರೂ ಮಾರ್ಪಾಟುಗಳು ಇದ್ದರೆ, ಅವುಗಳ ಸಹಿತ ಆದರೆ ಅದರ ಅನ್ವಯವನ್ನು ವಿಸ್ತರಿಸದಿರುವ ಹಾಗೆ (1)ನೇ ಉಪ-ಪ್ರಕರಣದ ಮೇರೆಗೆ ಪ್ರಕಟಿಸಿದ ನೋಟೀಸಿಗನುಸಾರವಾಗಿ ಘೋಷಣೆಯನ್ನು ಮಾಡಬಹುದು.

(4) ಅಂಥ ಪ್ರತಿಯೊಂದು ಘೋಷಣೆಯನ್ನು ಗೊತ್ತುಪಡಿಸಬಹುದಾದಂಥ ರೀತಿಯಲ್ಲಿ ಪ್ರಕಟಿಸತಕ್ಕದ್ದು ಮತ್ತು ಅದು ಅದರ ಪ್ರಕಟಣೆಯ ದಿನಾಂಕದಿಂದ ಪರಿಣಾಮಕಾರಿಯಾಗಿರತಕ್ಕದ್ದು.

(5) ಯಾರೇ ವ್ಯಕ್ತಿಯು (4)ನೇ ಉಪ-ಪ್ರಕರಣದ ಮೇರೆಗೆ ಪ್ರಕಟಿಸಿದ ಯಾವುದೇ ಘೋಷಣೆಯಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ಪ್ರದೇಶದಲ್ಲಿ ಅಂಥ ಘೋಷಣೆಯಲ್ಲಿ ನಿರ್ದಿಷ್ಟಪಡಿಸಿರುವ ಉದ್ದೇಶಗಳನ್ನು ಹೊರತುಪಡಿಸಿ ಇತರ ಯಾವುದೇ ಉದ್ದೇಶಕ್ಕಾಗಿ ಯಾವುದೇ ಸ್ಥಳವನ್ನು ಬಳಸತಕ್ಕದ್ದಲ್ಲ ಮತ್ತು ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನು ಅವಶ್ಯವೆಂದು ಅವರು ಪರ್ಯಾಲೋಚಿಸುವಂಥ ಸಾಧನಗಳ ಮೂಲಕ ಅಂಥ ಉಪಯೋಗವನ್ನು ನಿಲ್ಲಿಸಲು ಅಧಿಕಾರವನ್ನು ಹೊಂದಿರತಕ್ಕದ್ದು.

(6) ಉಪ-ಪ್ರಕರಣ (4) ರ ಮೇರೆಗೆ ಪ್ರಕಟಿಸಿದ ಯಾವುದೇ ಘೋಷಣೆಗೆ ತದ್ವಿರುದ್ಧವಾಗಿ ಯಾವುದೇ ಅಂಥ ಪ್ರದೇಶದಲ್ಲಿರುವ ಯಾವುದೇ ಸ್ಥಳವನ್ನು ಬಳಸುವ ಯಾರೇ ಆಗಲಿ ಐದುನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

259. ಜನನಿಬಿಡವಾದ ಸ್ಥಳಗಳಲ್ಲಿನ ಕಾರ್ಖಾನೆಗಳು.- (1) ಯಾವುದೇ [1][ಮುನ್ಸಿಪಲ್ ಏರಿಯಾ][1] ದಲ್ಲಿ ಯಾರೇ ವ್ಯಕ್ತಿಯು ಮುನ್ಸಿಪಲ್ ಕೌನ್ಸಿಲ್‌ನಿಂದ ಬರಹದಲ್ಲಿ ಮುಂಚಿತವಾಗಿಯೇ ಅನುಮತಿ ಪಡೆಯದೆಯೇ 1948ರ ಕಾರ್ಖಾನೆಗಳ ಅಧಿನಿಯಮ (1948ರ ಕೇಂದ್ರ ಅಧಿನಿಯಮ ಸಂಖ್ಯೆ XIII)ದಲ್ಲಿ ಪರಿಭಾಷಿಸಿರುವಂತೆ ಯಾವುದೇ ಕಾರ್ಖಾನೆಯನ್ನು ಯಾವುದೇ ಆವರಣದಲ್ಲಿ ಸ್ಥಾಪಿಸತಕ್ಕದ್ದಲ್ಲ.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಉದ್ದೇಶಿತ ಸ್ಥಳದಲ್ಲಿ ಅಂಥ ಕಾರ್ಖಾನೆಯನ್ನು ಸ್ಥಾಪನೆ ಮಾಡಿದರೆ ಅದರ ನೆರೆಹೊರೆಯ ಜನಸಾಂದ್ರತೆಯ ಕಾರಣದಿಂದಾಗಿ ಅಥವಾ ನೆರೆಹೊರೆಯ ನಿವಾಸಿಗಳಿಗೆ ಅದು ಉಪದ್ರವಕಾರಿಯಾಗುವುದೆಂದು ಅಥವಾ ಈ ಬಗ್ಗೆ ರಚಿಸಿದ ಯಾವುದೇ ಬೈಲಾದ ನಿಬಂಧನೆಗಳನ್ನು ಯಾವುದೇ ಇತರ ರೀತಿಯಲ್ಲಿ ಉಲ್ಲಂಘಿಸುವುದೆಂದು ಮುನ್ಸಿಪಲ್ ಕೌನ್ಸಿಲ್ ಅಭಿಪ್ರಾಯಪಟ್ಟರೆ ಅಂಥ ಅನುಮತಿಯನ್ನು ಕೊಡಲು ನಿರಾಕರಿಸಬಹುದು.

(3) ಮೇಲೆ ಹೇಳಿದಂತೆ ಯಾವುದೇ ಕಾರ್ಖಾನೆಯನ್ನು ಯಾವುದೇ ಆವರಣದಲ್ಲಿ ಅಂಥ ಅನುಮತಿಯಿಲ್ಲದೆ ಅಥವಾ ಅದನ್ನು ನಿರಾಕರಿಸಿದ ತರುವಾಯ ಅಥವಾ ಈ ಬಗ್ಗೆ ರಚಿಸಿದ ಯಾವುದೇ ಬೈಲಾದ ನಿಬಂಧನೆಗಳನ್ನು ಉಲ್ಲಂಘಿಸಿ ಸ್ಥಾಪಿಸುವ ಯಾರೇ ಆಗಲಿ ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ಮೊದಲ ಅಪರಾಧದ ನಿರ್ಣಯದ ದಿನಾಂಕದ ತರುವಾಯ ಅಂಥ ಸ್ಥಾಪನೆ ಅಥವಾ ಉಲ್ಲಂಘನೆಯು ಮುಂದುವರಿಯುತ್ತಿರುವ ಪ್ರತಿಯೊಂದು ದಿವಸಕ್ಕೆ ಐವತ್ತು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

260. ಕೆಲಸಗಾರರನ್ನು ಕರೆಯಲು ಅಥವಾ ಕಳುಹಿಸಲು ಸೈರನ್ ಅಥವಾ ಶಿಳ್ಳೆಯ ಬಳಕೆ:- (1) ಯಾವುದೇ [1][ಮುನ್ಸಿಪಲ್ ಏರಿಯಾ][1] ದಲ್ಲಿ ಯಾರೇ ವ್ಯಕ್ತಿಯು ಯಾವುದೇ ಕಾರ್ಖಾನೆಯಲ್ಲಿ ಅಥವಾ ಯಾವುದೇ ಇತರ ಸ್ಥಳದಲ್ಲಿ ಮುನ್ಸಿಪಲ್ ಕೌನ್ಸಿಲಿನಿಂದ ಪಡೆದ ಲೈಸೆನ್ಸ್ ನ ಷರತ್ತುಗಳ ಮೇರೆಗೆ ಮತ್ತು ಅವುಗಳಿಗೆ ಅನುಸಾರವಾಗಲ್ಲದೆ, ಕೆಲಸಗಾರರನ್ನು ಅಥವಾ ನಿಯೋಜಿತ ವ್ಯಕ್ತಿಗಳನ್ನು ಕರೆಯುವ ಅಥವಾ ಕಳುಹಿಸುವ ಉದ್ದೇಶಕ್ಕಾಗಿ ಅವು ಯಾಂತ್ರಿಕ ಸಾಧನದ ಅಥವಾ ವಿದ್ಯುಚ್ಛಕ್ತಿ ಮೂಲಕ ನಡೆಸಿದ ಯಾವುದೇ ಶಿಳ್ಳೆಯನ್ನು ಅಥವಾ ತುತ್ತೂರಿಯನ್ನು ಬಳಸತಕ್ಕದಲ್ಲ ಅಥವಾ ಪ್ರಯೋಗಿಸತಕ್ಕದ್ದಲ್ಲ.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಮುನ್ಸಿಪಲ್ ಕೌನ್ಸಿಲ್ ಅಂಥ ಲೈಸೆನ್ಸನ್ನು ಸೂಕ್ತವೆಂದು ಅದು ಭಾವಿಸಬಹುದಾದಂಥ ಷರತ್ತುಗಳಿಗೊಳಪಟ್ಟು ಮಂಜೂರು ಮಾಡಬಹುದು.

(3) ಹಿಂದೆ ಹೇಳಿದಂತೆ ಯಾವುದೇ ಅಂಥ ಶಿಳ್ಳೆ ಅಥವಾ ತುತ್ತೂರಿಯನ್ನು ಅಂಥ ಲೈಸೆನ್ಸನ್ನು ಪಡೆಯದೆ ಅಥವಾ ಅದರ ಯಾವುದೇ ಷರತ್ತಿನ ಉಲ್ಲಂಘನೆಯಲ್ಲಿ ಅಥವಾ ಅದನ್ನು ಹಿಂತೆಗೆದುಕೊಂಡ ತರುವಾಯ ಉಪಯೋಗಿಸುವ ಅಥವಾ ಪ್ರಯೋಗಿಸುವ ಯಾರೇ ಆಗಲಿ ಐವತ್ತು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

ಸಾಮಾನ್ಯ ದಂಡನೆ, ನೋಟೀಸ್ ಗಳ ಜಾರಿ ಮತ್ತು ಸಂಕೀರ್ಣ ಉಪಬಂಧಗಳು

261. ಅಗ್ನಿಶಾಮಕದಳದವರಿಗೆ ಪೊಲೀಸ್ ಅಧಿಕಾರಿಗಳಿಂದ ಮತ್ತು ಮುನ್ಸಿಪಲ್ ಅಧಿಕಾರಿಗಳಿಂದ ನೆರವು.- (1) ಅಗ್ನಿಶಾಮಕ ದಳಕ್ಕೆ ಅದು ತನ್ನ ಕರ್ತವ್ಯಗಳನ್ನು ನಿರ್ವಹಿಸುವಾಗ ನೆರವು ನೀಡುವುದು ಎಲ್ಲಾ ಪೊಲೀಸ್ ಅಧಿಕಾರಿಗಳ ಮತ್ತು ಎಲ್ಲಾ ಮುನ್ಸಿಪಲ್ ಅಧಿಕಾರಿಗಳ ಮತ್ತು ನೌಕರರ ಕರ್ತವ್ಯವಾಗಿರತಕ್ಕದ್ದು. ಅಂಥ ಅಧಿಕಾರಿಗಳು ಮತ್ತು ನೌಕರರು ಯಾವ ಬೀದಿಯಲ್ಲಿ ಅಥವಾ ಅದರ ಹತ್ತಿರ ಬೆಂಕಿಯು ಉರಿಯುತ್ತಿದೆಯೋ ಆ ಯಾವುದೇ ಬೀದಿಯನ್ನು ಮುಚ್ಚಬಹುದು ಮತ್ತು ಅಗ್ನಿಶಾಮಕ ದಳದ ಕಾರ್ಯಾಚರಣೆ ಆಗುತ್ತಿರುವಾಗ ಯಾರೇ ವ್ಯಕ್ತಿಗಳು ಇರುವುದರಿಂದಾಗಿ ಅಡ್ಡಿಯಾಗುತ್ತಿದ್ದರೆ ಆ ಯಾರೇ ವ್ಯಕ್ತಿಗಳನ್ನು ಸ್ಥಳಾಂತರಿಸಬಹುದು.

(2) ಯಾವುದೇ ಸಾರ್ವಜನಿಕ ಬೀದಿಯಲ್ಲಿರುವ ಅಥವಾ ಇತರ ಸಾರ್ವಜನಿಕ ಸ್ಥಳದಲ್ಲಿರುವ ಯಾವುದೇ ಕಟ್ಟಡದ ಮೇಲೆ ಅಥವಾ ಹತ್ತಿರ ಯಾರೇ ವ್ಯಕ್ತಿಯು, ಬೆಂಕಿಯ ಅಪಾಯವನ್ನುಂಟುಮಾಡುವಂಥ ರೀತಿಯಲ್ಲಿ ತೆರೆದ ದೀಪವನ್ನು ಇಡತಕ್ಕದ್ದಲ್ಲ:

ಪರಂತು, ಈ ಪ್ರಕರಣದಲ್ಲಿರುವುದಾವುದೂ ಹಬ್ಬ ಅಥವಾ ಸಾರ್ವಜನಿಕ ಅಥವಾ ಖಾಸಗಿ ಮನೋರಂಜನೆಯ ಸಂದರ್ಭದಲ್ಲಿ ದೀಪಾಲಂಕಾರದ ಉದ್ದೇಶಕ್ಕಾಗಿ ದೀಪಗಳನ್ನು ಬಳಸುವುದನ್ನು ನಿಷೇಧಿಸುವುದೆಂದು ಭಾವಿಸತಕ್ಕದ್ದಲ್ಲ.

262. ನೋಟೀಸ್ ಗಳ ಜಾರಿ ಇತ್ಯಾದಿ.- (1) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುವೇ ನಿಯಮ ಅಥವಾ ಬೈಲಾದ ಮೂಲಕ ಮುನ್ಸಿಪಲ್ ಕೌನ್ಸಿಲ್ ಅಥವಾ ಅದರ ಪರವಾಗಿ ಅಥವಾ ಮುನ್ಸಿಪಲ್ ಕಮಿಷನರ್ ನು ಅಥವಾ ಚೀಫ್ ಆಫೀಸರ್ ನು ಅಥವಾ ಯಾರೇ ಇತರ ಮುನ್ಸಿಪಲ್ ಅಧಿಕಾರಿಯು ಯಾರೇ ವ್ಯಕ್ತಿಗೆ ಜಾರಿಗೊಳಿಸಬೇಕೆಂದು ಅಗತ್ಯಪಡಿಸಿದ ಅಥವಾ ಅಧಿಕೃತಗೊಳಿಸಿದ ಪ್ರತಿಯೊಂದು ನೋಟೀಸನ್ನು, ಬಿಲ್ಲನ್ನು, ಸಮನ್‌ಗಳನ್ನು, ಆದೇಶವನ್ನು, ಕಡ್ಡಾಯ ಕೋರಿಕೆಯನ್ನು ಅಥವಾ ಇತರ ದಸ್ತಾವೇಜನ್ನು, ಈ ಅಧಿನಿಯಮದಲ್ಲಿ ಅಥವಾ ಅಂಥ ನಿಯಮದಲ್ಲಿ ಅಥವಾ ಬೈಲಾದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನುಳಿದು,-

(ಎ) ಕಂಪನಿಗೆ ಜಾರಿಗೊಳಿಸಬೇಕಾಗಿದ್ದರೆ, ಆ ದಸ್ತಾವೇಜನ್ನು ಕಂಪನಿಯ ನೋಂದಾಯಿತ ಕಚೇರಿಯಲ್ಲಿರುವ ಅಥವಾ ಅದರ ಮುಖ್ಯ ಕಛೇರಿಯಲ್ಲಿರುವ ಅಥವಾ ವ್ಯವಹಾರದ ಸ್ಥಳದಲ್ಲಿರುವ ಕಾರ್ಯದರ್ಶಿಯ ವಿಳಾಸಕ್ಕೆ ಕಳುಹಿಸಬೇಕಾಗಿದ್ದರೆ;

(i) ನೋಂದಾಯಿತ ಅಂಚೆಯ ಮೂಲಕ ಕಳುಹಿಸಿದ್ದರೆ; ಅಥವಾ

(ii) ಆ ಕಂಪನಿಯ ನೋಂದಾಯಿತ ಕಚೇರಿಯಲ್ಲಿ ಅಥವಾ ಮುಖ್ಯ ಕಚೇರಿಯಲ್ಲಿ ಅಥವಾ ವ್ಯವಹಾರದ ಸ್ಥಳದಲ್ಲಿ ತಲುಪಿಸಿದ್ದರೆ;

(ಬಿ) ಪಾಲುಗಾರಿಕೆ ಫರ್ಮ್‌ಗೆ ಜಾರಿಗೊಳಿಸಬೇಕಾಗಿದ್ದರೆ ಆ ದಸ್ತಾವೇಜನ್ನು, ಅದರ ವ್ಯವಹಾರವು ಯಾವ ಹೆಸರಿನಿಂದ ಅಥವಾ ಅಂಕಿತನಾಮದಿಂದ ನಡೆಯುತ್ತಿದೆಯೋ ಆ ಹೆಸರಿನಿಂದ ಅಥವಾ ಅಂಕಿತನಾಮದಿಂದ ಅದನ್ನು ಗುರುತಿಸಿ, ಅದರ ವ್ಯವಹಾರದ ಮುಖ್ಯ ಸ್ಥಳದಲ್ಲಿರುವ ಪಾಲುಗಾರಿಕೆ ಫರ್ಮ್‌ನ ವಿಳಾಸಕ್ಕೆ ಕಳುಹಿಸಬೇಕಾಗಿದ್ದರೆ; ಮತ್ತು

(i) ನೋಂದಾಯಿತ ಅಂಚೆಯ ಮೂಲಕ ಕಳಿಸಿದ್ದರೆ; ಅಥವಾ

(ii) ಸದರಿ ವ್ಯವಹಾರದ ಸ್ಥಳದಲ್ಲಿ ತಲುಪಿಸಿದ್ದರೆ;

(ಸಿ) ಪಬ್ಲಿಕ್ ನಿಕಾಯಕ್ಕೆ ಅಥವಾ ನಿಗಮಕ್ಕೆ, ಸಂಘಕ್ಕೆ ಅಥವಾ ಇತರ ನಿಕಾಯಕ್ಕೆ ಜಾರಿಗೊಳಿಸಬೇಕಾಗಿದ್ದರೆ, ಆ ದಸ್ತಾವೇಜನ್ನು ಅದರ ಪ್ರಧಾನ ಕಚೇರಿಯ ವಿಳಾಸಕ್ಕೆ ಕಳುಹಿಸಬೇಕಾಗಿದ್ದು, ಆ ನಿಕಾಯದ, ನಿಗಮದ ಅಥವಾ ಸಂಘದ ಕಾರ್ಯದರ್ಶಿಯ, ಖಜಾಂಚಿಯ ಅಥವಾ ಇತರ ಮುಖ್ಯಾಧಿಕಾರಿಯ ಅದರ ಪ್ರಮುಖ ಕಚೇರಿಯಲ್ಲಿ ಸಂಭೋದಿಸಲಾಗಿದ್ದರೆ; ಮತ್ತು

(i) ನೋಂದಾಯಿತ ಅಂಚೆಯ ಮೂಲಕ ಕಳಿಸಿದ್ದರೆ; ಅಥವಾ

(ii) ಆ ಕಛೇರಿಯಲ್ಲಿ ತಲುಪಿಸಿದ್ದರೆ;

(ಡಿ) ಇತರ ಯಾವುದೇ ಸಂದರ್ಭದಲ್ಲಿ ಯಾವ ವ್ಯಕ್ತಿಗೆ ಜಾರಿಗೊಳಿಸಬೇಕಾಗಿತ್ತೋ ಆ ವ್ಯಕ್ತಿಯ ವಿಳಾಸಕ್ಕೆ ದಸ್ತಾವೇಜನ್ನು ಕಳುಹಿಸಬೇಕಾಗಿದ್ದರೆ; ಮತ್ತು

(i) ಅವನಿಗೆ ಕೊಟ್ಟಿದ್ದರೆ ಅಥವಾ ಕೊಡಮಾಡಿದ್ದರೆ; ಅಥವಾ

(ii) ಅಂಥ ವ್ಯಕ್ತಿಯು ಸಿಗದಿದ್ದರೆ ಕೊನೆಯದಾಗಿ ಗೊತ್ತಿದ್ದ ಅವನ ನಿವಾಸವು ಅಥವಾ ವ್ಯವಹಾರ ಸ್ಥಳವು [1][ಮುನ್ಸಿಪಲ್ ಏರಿಯಾ][1] ದೊಳಗಿದ್ದರೆ ಅದರ ಯಾವುದೇ ಎದ್ದುಕಾಣುವ ಭಾಗದ ಮೇಲೆ ಅಂಟಿಸಿದರೆ ಅಥವಾ ಅವನ ಕುಟುಂಬದ ಯಾರೇ ವಯಸ್ಕ ವ್ಯಕ್ತಿಗೆ ಕೊಟ್ಟಿದ್ದರೆ ಅಥವಾ ಕೊಡ ಮಾಡಿದ್ದರೆ ಅಥವಾ ಅದು ಸಂಬಂಧಪಡುವ [2][ಖಾಲಿಭೂಮಿ ಅಥವಾ ಕಟ್ಟಡವು][2] ಯಾವುದಾದರೂ ಇದ್ದರೆ ಅದರ ಯಾವುದೇ ಎದ್ದುಕಾಣಿಸುವ ಭಾಗದ ಮೇಲೆ ಅಂಟಿಸಿದ್ದರೆ; ಅಥವಾ

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2.2003ರ ಅಧಿನಿಯಮ 31ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(iii) ಆ ವ್ಯಕ್ತಿಗೆ ನೋಂದಾಯಿತ ಅಂಚೆಯ ಮೂಲಕ ಕಳುಹಿಸಿದ್ದರೆ

- ಅದನ್ನು ಕ್ರಮಬದ್ಧವಾಗಿ ಜಾರಿಗೊಳಿಸಲಾಗಿದೆಯೆಂದು ಭಾವಿಸತಕ್ಕದ್ದು.

(2) ಯಾವುದೇ [1][ಖಾಲಿಭೂಮಿಯ ಅಥವಾ ಕಟ್ಟಡದ][1] ಒಡೆಯನಿಗೆ ಅಥವಾ ಅಧಿಭೋಗದಾರನಿಗೆ ಜಾರಿ ಮಾಡಬೇಕೆಂದು ಅಗತ್ಯಪಡಿಸಿದ ಅಥವಾ ಅಧಿಕೃತಗೊಳಿಸಿದಂಥ ಯಾವುದೇ ದಸ್ತಾವೇಜನ್ನು (ಆ [1][ಖಾಲಿಭೂಮಿಯ ಅಥವಾ ಕಟ್ಟಡ][1]ವನ್ನು ಹೆಸರಿಸಿ) ಸಂದರ್ಭಾನುಸಾರ, ಆ [1][ಖಾಲಿಭೂಮಿಯ ಅಥವಾ ಕಟ್ಟಡದ][1] ಒಡೆಯನೆಂದು ಅಥವಾ ಅಧಿಭೋಗದಾರನೆಂದು ಹೆಚ್ಚಿನ ಹೆಸರು ಇಲ್ಲದೆ ಅಥವಾ ವಿವರಣೆಯಿಲ್ಲದೆ ವಿಳಾಸಕ್ಕೆ ಕಳುಹಿಸಬಹುದು,-

(ಎ) ಆ ವಿಳಾಸಕ್ಕೆ ಕಳುಹಿಸಬೇಕಾಗಿದ್ದ ದಸ್ತಾವೇಜನ್ನು (1)ನೇ ಉಪ-ಪ್ರಕರಣದ (ಡಿ) ಖಂಡಕ್ಕೆ ಅನುಸಾರವಾಗಿ ಕಳುಹಿಸಿದ್ದರೆ ಅಥವಾ ತಲುಪಿಸಿದ್ದರೆ; ಅಥವಾ

(ಬಿ) ಆ ದಸ್ತಾವೇಜನ್ನು ಅಥವಾ ಅದರ ಪ್ರತಿಯನ್ನು ಆ [1][ಖಾಲಿಭೂಮಿಯ ಅಥವಾ ಕಟ್ಟಡ][1]ದಲ್ಲಿನ ಯಾರೇ ವ್ಯಕ್ತಿಗೆ ತಲುಪಿಸಿದ್ದರೆ ಅಥವಾ ಯಾರಿಗೆ ಅದನ್ನು ತಲುಪಿಸಬೇಕಾಗಿತ್ತೋ ಆ ವ್ಯಕ್ತಿಯು [1][ಖಾಲಿಭೂಮಿಯಲ್ಲಿ ಅಥವಾ ಕಟ್ಟಡ][1]ದಲ್ಲಿ ಇಲ್ಲದಿದ್ದರೆ ಆ [1][ಖಾಲಿಭೂಮಿಯ ಅಥವಾ ಕಟ್ಟಡ][1]ದ ಯಾವುದೇ ಎದ್ದು ಕಾಣುವ ಭಾಗದಲ್ಲಿ ಅಂಟಿಸಿದರೆ,-

- ಅದನ್ನು ಕ್ರಮಬದ್ಧವಾಗಿ ಜಾರಿ ಮಾಡಲಾಗಿದೆಯೆಂದು ಭಾವಿಸತಕ್ಕದ್ದು.

1.2003ರ ಅಧಿನಿಯಮ 31ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) ಈ ಪ್ರಕರಣಕ್ಕೆ ಅನುಸಾರವಾಗಿ ದಸ್ತಾವೇಜನ್ನು ಪಾಲುಗಾರಿಕೆ ಫರ್ಮ್‌ಗೆ ಜಾರಿ ಮಾಡಿದ್ದರೆ ದಸ್ತಾವೇಜನ್ನು ಪ್ರತಿಯೊಬ್ಬ ಪಾಲುದಾರನಿಗೆ ಜಾರಿ ಮಾಡಲಾಗಿದೆಯೆಂದು ಭಾವಿಸತಕ್ಕದ್ದು.

(4) ದಸ್ತಾವೇಜನ್ನು ಯಾರಿಗೆ ಜಾರಿ ಮಾಡಬೇಕಾಗಿದೆಯೋ ಆ ವ್ಯಕ್ತಿಯು ಅಪ್ರಾಪ್ತ ವಯಸ್ಕನಿದ್ದರೆ ಅವನ ಪಾಲಕನಿಗೆ ಅಥವಾ ಅವನ ಕುಟುಂಬದ ಯಾರೇ ವಯಸ್ಕ ವ್ಯಕ್ತಿಗೆ ಜಾರಿ ಮಾಡಿದ್ದರೆ ಅದನ್ನು ಅಪ್ರಾಪ್ತ ವಯಸ್ಕನಿಗೆ ಮಾಡಿದ ಜಾರಿಯೆಂದು ಭಾವಿಸತಕ್ಕದ್ದು.

(5) ಈ ಪ್ರಕರಣದ ಅರ್ಥವ್ಯಾಪ್ತಿಯಲ್ಲಿ ಸೇವಕನು ಕುಟುಂಬದವನಾಗುವುದಿಲ್ಲ ಮತ್ತು ಈ ಪ್ರಕರಣದಲ್ಲಿರುವುದಾವುದೂ ನ್ಯಾಯಾಲಯದಿಂದ ಈ ಅಧಿನಿಯಮದ ಮೇರೆಗೆ ಹೊರಡಿಸಿದ ಯಾವುದೇ ಸಮನ್ನಿಗೆ ಅನ್ವಯವಾಗತಕ್ಕದ್ದಲ್ಲ.

(6) ಯಾವ ನೋಟೀಸನ್ನು ಈ ಅಧಿನಿಯಮವು ಮುನ್ಸಿಪಲ್ ಕೌನ್ಸಿಲ್ ನ ಸಾರ್ವಜನಿಕ ನೋಟೀಸ್ ನಂತೆ ಅಥವಾ ಸಾಮಾನ್ಯವಾಗಿ ಕೊಡಬೇಕೆಂದು ಅಥವಾ ಜಾರಿ ಮಾಡಬೇಕೆಂದು ಅಗತ್ಯಪಡಿಸಿದೆಯೋ ಅಥವಾ ಮುನ್ಸಿಪಲ್ ಕೌನ್ಸಿಲ್‌ಗೆ ಅಧಿಕಾರ ಕೊಡಲಾಗಿದೆಯೋ ಅಥವಾ ಅದರಲ್ಲಿ ನಿರ್ದಿಷ್ಟಪಡಿಸಿರುವ ವ್ಯಕ್ತಿಗಳಿಗೆ ನೋಟೀಸ್ ನ್ನು ಕೊಡಬೇಕೆಂದು ಉಪಬಂಧಗಳಲ್ಲಿ ಸ್ಪಷ್ಟವಾಗಿ ಅಗತ್ಯಪಡಿಸಿಲ್ಲವೋ ಅಥವಾ ಆ ಪ್ರತಿಯೊಂದು ನೋಟೀಸನ್ನು, ಅದರ ಪ್ರತಿಯನ್ನು ಅಂಥ ಅವಧಿಯಲ್ಲಿ ಮುನ್ಸಿಪಲ್ ಆಫೀಸ್ ನ ಅಂಥ ಎದ್ದುಕಾಣುವ ಭಾಗದಲ್ಲಿ ಮತ್ತು ಅಂಥ ಇತರ ಸಾರ್ವಜನಿಕ ಕಟ್ಟಡಗಳಲ್ಲಿ ಅಥವಾ ಸ್ಥಳಗಳಲ್ಲಿ ಹಾಕಿದ್ದರೆ ಅಥವಾ ಅಂಥ ಸ್ಥಳೀಯ ವೃತ್ತಪತ್ರಿಕೆಗಳಲ್ಲಿ ಅಥವಾ ಮುನ್ಸಿಪಲ್ ಕೌನ್ಸಿಲ್ ಬೈಲಾಗಳಲ್ಲಿ ಈ ಬಗ್ಗೆ ಗೊತ್ತುಪಡಿಸಬಹುದಾದಂಥ ಇತರ ರೀತಿಯಲ್ಲಿ ಪ್ರಕಟಿಸಿದ್ದರೆ ಸಮರ್ಪಕವಾಗಿ ಕೊಡಲಾಗಿದೆ ಅಥವಾ ಜಾರಿ ಮಾಡಲಾಗಿದೆಯೆಂದು ಭಾವಿಸತಕ್ಕದ್ದು.

(7) ನಮೂನೆಯಲ್ಲಿನ ದೋಷಕ್ಕಾಗಿ ಯಾವುದೇ ನೋಟೀಸ್ ಅಥವಾ ಬಿಲ್ ಅಸಿಂಧುವಾಗತಕ್ಕದ್ದಲ್ಲ.

(8) ಈ ಅಧ್ಯಾಯದ ಮೇರೆಗಿನ ಯಾವುದೇ ನೋಟೀಸ್ ಯಾವುದೇ ಕೆಲಸವನ್ನು ಮಾಡಬೇಕೆಂದು ಅಗತ್ಯಪಡಿಸಿದಾಗ ಅದನ್ನು ಮಾಡಲು ಈ ಅಧಿನಿಯಮದ ಮೇರೆಗೆ ಯಾವುದೇ ಕಾಲವನ್ನು ಗೊತ್ತುಪಡಿಸಿಲ್ಲದಿದ್ದರೆ ಅದನ್ನು ಮಾಡುವುದಕ್ಕಾಗಿ ಆ ನೋಟೀಸ್ ಸಮಂಜಸ ಕಾಲವನ್ನು ನಿಗದಿಪಡಿಸತಕ್ಕದ್ದು.

(9) ನೋಟೀಸಿನಲ್ಲಿನ ನಿಬಂಧನೆಗಳನ್ನು ಪಾಲಿಸದಿರುವ ಸಂದರ್ಭದಲ್ಲಿ ಮಾಡಬೇಕೆಂದು ಅದರಲ್ಲಿ ಅಗತ್ಯಪಡಿಸಿದ ಕಾರ್ಯವನ್ನು ಪೂರ್ಣಗೊಳಿಸುವುದಕ್ಕೆ ಅವಶ್ಯವಾಗಬಹುದಾದಂಥ ಕಾರ್ಯವನ್ನು ಅಥವಾ ಅಂಥ ಕ್ರಮಗಳನ್ನು ಕೈಗೊಳ್ಳುವುದು ಮುನ್ಸಿಪಲ್ ಕೌನ್ಸಿಲ್ ಗೆ ಕಾನೂನುಬದ್ಧವಾಗಿರತಕ್ಕದ್ದು ಮತ್ತು ಮುನ್ಸಿಪಲ್ ಕೌನ್ಸಿಲ್ ಅದರ ಬಗ್ಗೆ ವಹಿಸಿದ ಎಲ್ಲ ವೆಚ್ಚಗಳನ್ನು ಯಾರಿಗೆ ನೋಟೀಸ್ ನ್ನು ಜಾರಿ ಮಾಡಲಾಗಿತ್ತೋ ಆ ವ್ಯಕ್ತಿಯು ಅಥವಾ ವ್ಯಕ್ತಿಗಳು ಸಂದಾಯ ಮಾಡತಕ್ಕದ್ದು ಮತ್ತು 269ನೇ ಪ್ರಕರಣದಲ್ಲಿ ಹೇಳಿರುವ ರೀತಿಯಲ್ಲಿ ವಸೂಲಿಯಾಗತಕ್ಕದ್ದು.

[1][**262ಎ. ಅನಧಿಕೃತ ಭೂಸ್ವಾಧೀನತೆಗೆ ನಿಷೇಧ.-** (1) ಯಾವ ಭೂಮಿಯನ್ನು ಬಳಸಲು ಅಥವಾ ಸ್ವಾಧೀನಪಡಿಸಿಕೊಳ್ಳಲು ತನಗೆ ಹಕ್ಕಿಲ್ಲವೋ ಅಥವಾ ಹಕ್ಕುಳ್ಳವನಾಗಿರುವುದು ಕೊನೆಗೊಂಡಿರುವುದೋ ಆ ನಗರ ಮುನ್ಸಿಪಲ್ ಕೌನ್ಸಿಲ್‌ಗೆ ಸೇರಿರುವ ಆ ಭೂಮಿಯನ್ನು ಅನಧಿಕೃತವಾಗಿ ಪ್ರವೇಶಿಸುವ ಮತ್ತು ಅದನ್ನು ಬಳಸುವ ಅಥವಾ ಸ್ವಾಧೀನಪಡಿಸಿಕೊಳ್ಳುವ ಯಾರೇ ವ್ಯಕ್ತಿಯು ಅಪರಾಧ ನಿರ್ಣಯವಾದ ಮೇಲೆ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರವಾಸದಿಂದ ಮತ್ತು ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) 1984ರ ಕರ್ನಾಟಕ ನಗರ ಪಾಲಿಕೆಗಳ ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ) ಅಧಿನಿಯಮವು, ಪ್ರಾರಂಭವಾಗುವುದಕ್ಕೆ ಮುಂಚೆಯಾಗಲಿ ಅಥವಾ ತರುವಾಯವಾಗಲೀ ಯಾರೇ ವ್ಯಕ್ತಿಯು ಯಾವ ಭೂಮಿಯ ಬಳಕೆಗೆ ಅಥವಾ ಸ್ವಾಧೀನಕ್ಕೆ ತಾನು ಹಕ್ಕುಳ್ಳವನಾಗುವುದಿಲ್ಲವೋ ಅಥವಾ ಹಕ್ಕುಳ್ಳವನಾಗಿರುವುದು ಕೊನೆಗೊಂಡಿರುವುದೋ ಆ ನಗರ ಮುನ್ಸಿಪಲ್ ಕೌನ್ಸಿಲ್‌ಗೆ ಸೇರಿದ ಆ ಯಾವುದೇ ಭೂಮಿಯನ್ನು ಅನಧಿಕೃತವಾಗಿ ಸ್ವಾಧೀನ ಮಾಡಿಕೊಂಡಿದ್ದರೂ, ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರ ಹೊರಹಾಕುವಿಕೆ) ಅಧಿನಿಯಮ, 1974 (1974ರ ಕರ್ನಾಟಕ ಅಧಿನಿಯಮ 32)ರ 5ನೇ ಪ್ರಕರಣದ (1)ನೇ ಉಪ-ಪ್ರಕರಣದ ಆದೇಶಕ್ಕೆ ಅನುಸಾರವಾಗಿ ಅಂಥ ಭೂಮಿಯನ್ನು ಖಾಲಿ ಮಾಡಲು ತಪ್ಪಿದರೆ, ಅಪರಾಧ ನಿರ್ಣಯವಾದ ಮೇಲೆ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಮೊದಲನೇ ಅಪರಾಧ ನಿರ್ಣಯದ ದಿನಾಂಕದ ತರುವಾಯ ಸ್ವಾಧೀನವು ಮುಂದುವರಿಯುವ ಅಪರಾಧಕ್ಕಾಗಿ ಪ್ರತಿಯೊಂದು ದಿವಸಕ್ಕೆ ಭೂಮಿಯ ಪ್ರತಿ ಎಕರೆಗೆ ಅಥವಾ ಅದರ ಭಾಗಕ್ಕೆ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(3) ಉಪ-ಪ್ರಕರಣ (1) ರ ಅಥವಾ ಉಪ-ಪ್ರಕರಣ (2) ರ ಮೇರೆಗೆ ದಂಡನೀಯವಾದ ಅಪರಾಧ ಮಾಡಲು ಇತರ ಯಾರೇ ವ್ಯಕ್ತಿಗೆ ಉದ್ದೇಶಪೂರ್ವಕವಾಗಿ ನೆರವು ನೀಡಿದರೆ ಅಥವಾ ದುಷ್ಪ್ರೇರಣೆ ಮಾಡಿದರೆ ಅವನು ಅಪರಾಧ ನಿರ್ಣಯವಾದ ಮೇಲೆ ಅಂಥ ಅಪರಾಧಕ್ಕಾಗಿ ಸದರಿ ಉಪ-ಪ್ರಕರಣಗಳ ಮೇರೆಗೆ ಉಪಬಂಧಿಸಿರುವಂಥವೇ ದಂಡನೆಯಿಂದ ದಂಡಿತನಾಗತಕ್ಕದ್ದು.][1]

1. 1984ರ ಅಧಿನಿಯಮ 34ರ ಮೂಲಕ 26.6.1984 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

263. ಸಾಮಾನ್ಯ ದಂಡನೆ.- ಯಾವ ಪ್ರಕರಣಕ್ಕೆ ಈ ಅಧಿನಿಯಮದ ಅಥವಾ ಅದರ ಮೇರೆಗಿನ ಯಾವುದೇ ನಿಯಮದಲ್ಲಿ ಅಥವಾ ಬೈಲಾದಲ್ಲಿ ಸ್ಪಷ್ಟವಾಗಿ ದಂಡನೆಯನ್ನು ಕಲ್ಪಿಸಿಲ್ಲವೋ ಆ ಯಾವುದೇ ಪ್ರಕರಣದಲ್ಲಿ ಈ ಅಧಿನಿಯಮದ ಯಾವುದೇ ಉಪಬಂಧದ ಅಥವಾ ಆ ಮೇರೆಗಿನ ಯಾವುದೇ ನಿಯಮದ ಅಥವಾ ಬೈಲಾದ ಮೇರೆಗೆ ಹೊರಡಿಸಿದ ಯಾವುದೇ ನೋಟೀಸನ್ನು, ಆದೇಶವನ್ನು ಅಥವಾ ಕಡ್ಡಾಯ ಕೋರಿಕೆಯನ್ನು ಪಾಲಿಸಲು ತಪ್ಪುವ ಅಥವಾ ಈ ಅಧಿನಿಯಮದ ಅಥವಾ ಅದರ ಮೇರೆಗಿನ ನಿಯಮದ ಅಥವಾ ಬೈಲಾದ ಯಾವುದೇ ಉಪಬಂಧವನ್ನು ಅನ್ಯಥಾ

ಉಲ್ಲಂಘಿಸುವ ಯಾರೇ ಆಗಲಿ ಒಂದು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ತಪ್ಪುವುದು ಅಥವಾ ಉಲ್ಲಂಘನೆಯು ಮುಂದುವರಿದ ಸಂದರ್ಭದಲ್ಲಿ ಮೊದಲ ಬಾರಿಗೆ ಅಪರಾಧ ನಿರ್ಣಯದ ತರುವಾಯ ಅವನು ತಪ್ಪುವುದನ್ನು ಅಥವಾ ಉಲ್ಲಂಘನೆಯನ್ನು ಮುಂದುವರಿಸಿದ ಅವಧಿಯಲ್ಲಿ ಪ್ರತಿದಿವಸಕ್ಕೆ ಹತ್ತು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

264. ಒಡೆಯನು ಅಥವಾ ಅಧಿಭೋಗದಾರನು ಕೆಲಸವನ್ನು ನಿರ್ವಹಿಸಲು ತಪ್ಪಿದರೆ ಮುನ್ಸಿಪಲ್ ಕೌನ್ಸಿಲ್ ಕೆಲಸವನ್ನು ನಿರ್ವಹಿಸಬಹುದು ಮತ್ತು ವೆಚ್ಚವನ್ನು ವಸೂಲು ಮಾಡಬಹುದು.- ಈ ಅಧಿನಿಯಮದ ಉಪಬಂಧಗಳ ಮೇರೆಗೆ ಯಾವುದೇ [1][ಕಟ್ಟಡದ ಅಥವಾ ಖಾಲಿಭೂಮಿ][1] ಯ ಒಡೆಯನನ್ನು ಅಥವಾ ಅಧಿಭೋಗದಾರನನ್ನು ಯಾವುದೇ ಕೆಲಸವನ್ನು ನಿರ್ವಹಿಸಬೇಕೆಂದು ಅಗತ್ಯಪಡಿಸಿದಾಗಲೆಲ್ಲಾ ಅಂಥ ಕೆಲಸವನ್ನು ನಿರ್ವಹಿಸಲು ತಪ್ಪಿದರೆ ಮುನ್ಸಿಪಲ್ ಕೌನ್ಸಿಲ್, ಹಾಗೆ ತಪ್ಪಿದಕ್ಕೆ ಯಾವುದೇ ದಂಡನೆಯನ್ನು ಕಲ್ಪಿಸಿರಲಿ ಅಥವಾ ಕಲ್ಪಿಸಿರದಿರಲಿ ಅಂಥ ಕೆಲಸವನ್ನು ಮಾಡಿಸಬಹುದು ಮತ್ತು ಅಂಥ ಕೆಲಸವನ್ನು ಮಾಡಿಸಿದ್ದಕ್ಕಾಗಿ ವಹಿಸಿದ ವೆಚ್ಚಗಳನ್ನು ಅಧಿನಿಯಮದಲ್ಲಿ ಅನ್ಯಥಾ ಸ್ಪಷ್ಟವಾಗಿ ಉಪಬಂಧಿಸಿದ್ದ ಹೊರತು ಅಂಥ ಕೆಲಸವನ್ನು ಯಾರು ನಿರ್ವಹಿಸಬೇಕಾಗಿತ್ತೋ ಆ ವ್ಯಕ್ತಿಯು ಮುನ್ಸಿಪಲ್ ಕೌನ್ಸಿಲ್‌ಗೆ ಸಂದಾಯ ಮಾಡತಕ್ಕದ್ದು ಮತ್ತು ಸಮಂಜಸವೆಂದು ಮುನ್ಸಿಪಲ್ ಕೌನ್ಸಿಲ್ ಯೋಚಿಸುವಂಥ ಒಂದೇ ಮೊತ್ತದಲ್ಲಾಗಲಿ ಅಥವಾ ಕಂತುಗಳಲ್ಲಾಗಲಿ VIIನೇ ಅಧ್ಯಾಯದ ಮೇರೆಗೆ ವಸೂಲಿ ಮಾಡಬಹುದಾದ ಯಾವುದೇ ತೆರಿಗೆಯ ಮೊತ್ತವನ್ನು ಕ್ಲೇಮು ಮಾಡಿದಾಗ ಯಾವ ರೀತಿಯಲ್ಲಿ ವಸೂಲು ಮಾಡಲಾಗುವುದೋ ಅದೇ ರೀತಿಯಲ್ಲಿ ವಸೂಲಿಯಾಗತಕ್ಕದ್ದು:

1.2003ರ ಅಧಿನಿಯಮ 31ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಪರಂತು,-

(ಎ) ಯಾವುದೇ ಮುನ್ಸಿಪಲ್ ಕೌನ್ಸಿಲ್ ಯಾವುದೇ ಚರಂಡಿ ವ್ಯವಸ್ಥೆ ಯೋಜನೆ ಅಥವಾ ನೀರು ಸರಬರಾಜು ಗೃಹದ ಯೋಜನೆಯನ್ನು ಪ್ರಾರಂಭಿಸಿದಾಗಲೆಲ್ಲಾ 195ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಥವಾ ಈ ಅಧಿನಿಯಮದ ಯಾವುದೇ ಇತರ ಉಪಬಂಧದ ಮೇರೆಗೆ ಅದರ ಅಧಿಕಾರಗಳಿಗೆ ಬಾಧಕವಾಗದಂತೆ ಯಾವುದೇ [1][ಕಟ್ಟಡದ ಅಥವಾ ಖಾಲಿಭೂಮಿ][1]ಯ ಒಡೆಯನೊಂದಿಗೆ ಚರಂಡಿ ವ್ಯವಸ್ಥೆ ಅಥವಾ ಅದರ ನೀರು ಸಂಪರ್ಕವನ್ನು ಯಾವ ರೀತಿಯಲ್ಲಿ ಮಾಡತಕ್ಕದ್ದೆಂಬ ಬಗ್ಗೆ ಮತ್ತು ಮುನ್ಸಿಪಲ್ ಕೌನ್ಸಿಲ್ ಹಣಕಾಸಿನ ಅಥವಾ ಇತರ ನೆರವನ್ನೇನಾದರೂ ಒದಗಿಸುವುದಾದರೆ ಅವುಗಳ ಬಗ್ಗೆ ವಿಶೇಷ ಒಪ್ಪಂದವನ್ನು ಮಾಡಿಕೊಳ್ಳುವುದು ಕಾನೂನುಬದ್ಧವಾಗಿರತಕ್ಕದ್ದು ಮತ್ತು ಸಂದಾಯ ಮಾಡುವುದಾಗಿ ಒಡೆಯನು ಒಪ್ಪಿಕೊಂಡ ಯಾವುದೇ ಮೊತ್ತವನ್ನು ಅಂಥ ಒಪ್ಪಂದದ ನಿಬಂಧನೆಗಳಿಗನುಸಾರ ಮತ್ತು ಸಂದಾಯ ಮಾಡಲು ತಪ್ಪಿದರೆ (2)ನೇ ಮತ್ತು (3)ನೇ ಉಪ-ಪ್ರಕರಣಗಳಲ್ಲಿ ವಿವರಿಸಿದಂಥ ರೀತಿಯಲ್ಲಿ ವಸೂಲ್ಮಾಡತಕ್ಕದ್ದು;

1.2003ರ ಅಧಿನಿಯಮ 31ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಬಿ) 176ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಅಥವಾ 193ನೇ, 195ನೇ, 199ನೇ ಅಥವಾ 200ನೇ ಪ್ರಕರಣದ ಮೇರೆಗೆ ಆದೇಶವನ್ನು ಮಾಡಿರುವಾಗ ಅಥವಾ 196ನೇ ಪ್ರಕರಣದ ಮೇರೆಗೆ ಅನುಮತಿಯನ್ನು ಕೊಟ್ಟಿರುವಾಗ ಅಥವಾ ಈ ಉಪಪ್ರಕರಣದ (ಎ) ಪರಂತುಕದ ಮೇರೆಗೆ ಒಪ್ಪಂದವನ್ನು ಮಾಡಿಕೊಂಡಿರುವಾಗ ಮುನ್ಸಿಪಲ್ ಕೌನ್ಸಿಲ್ ಈ ಅಧಿನಿಯಮದ ಮೇರೆಗಿನ ಯಾವುದೇ ಇತರ ಅಧಿಕಾರಗಳಿಗೆ ಬಾಧಕವಾಗದಂತೆ, ಸೂಕ್ತವೆಂದು ಅದು ಭಾವಿಸಿದರೆ ಹಿಂದೆ ಹೇಳಿದಂತೆ ವಹಿಸಿದ ಯಾವುವೇ ವೆಚ್ಚಗಳನ್ನು ಮೇಲ್ಪಾಟು ವೆಚ್ಚಗಳೆಂದು ಮುನ್ಸಿಪಲ್ ಕೌನ್ಸಿಲ್ ಘೋಷಿಸಬಹುದು ಮತ್ತು ಆ ಮೇಲ್ಪಾಟು ವೆಚ್ಚಗಳು ಆ ಆವರಣದ ಅಥವಾ ಭೂಮಿಯ ಮೇಲೆ ಋಣಭಾರವಾಗಿರತಕ್ಕದ್ದು ಮತ್ತು ಅವುಗಳನ್ನು ವರ್ಷಕ್ಕೆ ಶೇಕಡಾ ಆರರ ದರದಲ್ಲಿ ಬಡ್ಡಿ ಸಹಿತ ಮುನ್ಸಿಪಲ್ ಕೌನ್ಸಿಲ್ ನಿರ್ಧರಿಸಬಹುದಾದಂಥ ಕಂತುಗಳಲ್ಲಿ ಸಂಗ್ರಹಿಸತಕ್ಕದ್ದು ಮತ್ತು (2) ಮತ್ತು (3)ನೇ ಉಪ-ಪ್ರಕರಣಗಳಲ್ಲಿ ವಿವರಿಸಿದಂಥ ರೀತಿಯಲ್ಲಿ ಅವು ವಸೂಲಿಯಾಗತಕ್ಕದ್ದು.

(2) ತಪ್ಪಿದವನು [1][ಕಟ್ಟಡ ಅಥವಾ ಖಾಲಿಭೂಮಿ][1]ಯ ಒಡೆಯನಾಗಿದ್ದರೆ, ಮುನ್ಸಿಪಲ್ ಕೌನ್ಸಿಲ್ ಅಂಥ ಒಡೆಯನ ವಿರುದ್ಧ ದಾವೆಯನ್ನು ಹೂಡಿರಲಿ ಅಥವಾ ವ್ಯವಹರಣೆಯನ್ನು

ಕೈಗೊಳ್ಳದಿರಲಿ (3)ನೇ ಉಪ-ಪ್ರಕರಣದ ಉಪಬಂಧಗಳಿಗೊಳಪಟ್ಟು ಹೆಚ್ಚಿನ ಪರಿಹಾರೋಪಾಯದ ರೂಪದಲ್ಲಿ ತತ್ಕಾಲದಲ್ಲಿ ಒಡೆಯನಾಗಿರುವವನು ಸಂದಾಯ ಮಾಡಬೇಕಾದ ಎಲ್ಲ ವೆಚ್ಚಗಳನ್ನು ಅಥವಾ ವೆಚ್ಚಗಳ ಯಾವುದೇ ಭಾಗದ ಸಂದಾಯ ಮಾಡುವಂತೆ ಅಂಥ ಒಡೆಯನ ಅಧೀನದಲ್ಲಿ [1][ಕಟ್ಟಡವನ್ನು ಅಥವಾ ಖಾಲಿಭೂಮಿ][1]ಯನ್ನು ಆಗ ಅಥವಾ ಆ ತರುವಾಯ ಯಾವುದೇ ಕಾಲದಲ್ಲಿ ಸ್ವಾಧೀನದಲ್ಲಿಟ್ಟುಕೊಳ್ಳುವ ವ್ಯಕ್ತಿಯನ್ನು ಅಗತ್ಯಪಡಿಸಬಹುದು ಮತ್ತು ತಗಾದೆ ಮಾಡಿದಾಗ ಅಂಥ ಅಧಿಭೋಗದಾರನು ಅದರ ಸಂದಾಯವನ್ನು ಮಾಡಲು ತಪ್ಪಿದರೆ ಅಂಥ ಅಧಿಭೋಗದಾರನಿಂದ ಅದನ್ನು ವಸೂಲು ಮಾಡಬಹುದು ಮತ್ತು ಹಾಗೆ ವಸೂಲು ಮಾಡಬಹುದಾದ ಪ್ರತಿಯೊಂದು ಮೊಬಲಗನ್ನು VII ನೇ ಅಧ್ಯಾಯದ ಮೇರೆಗೆ ಯಾವುದೇ ತೆರಿಗೆಯ ಮೊತ್ತವನ್ನು ಕ್ಲೇಮು ಮಾಡಿದಾಗ ಯಾವ ರೀತಿಯಲ್ಲಿ ವಸೂಲು ಮಾಡಲಾಗುವುದೋ ಅದೇ ರೀತಿಯಲ್ಲಿ ವಸೂಲು ಮಾಡತಕ್ಕದ್ದು. ಅಂಥ ಪ್ರತಿಯೊಬ್ಬ ಸ್ವಾಧೀನದಾರನು ಅವನ ಯಜಮಾನನಿಗೆ ಸಂದಾಯ ಮಾಡಬೇಕಾದ ಬಾಡಿಗೆಯಿಂದ, ಅಂಥ ಯಾವುವೇ ವೆಚ್ಚಕ್ಕೆ ಸಂಬಂಧಿಸಿದಂತೆ ಅಂಥ ಅನುಭೋಗದಾರನು ಎಷ್ಟು ಮೊತ್ತವನ್ನು ಸಂದಾಯ ಮಾಡಿದ್ದಾನೋ ಅಥವಾ ಅವನು ಎಷ್ಟು ಮೊತ್ತವನ್ನು ವಸೂಲ್ಮಾಡಿರುವನೋ ಅಷ್ಟನ್ನು ಮುರಿದುಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು.

1.2003ರ ಅಧಿನಿಯಮ 31ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) ಯಾವುದೇ [1][ಕಟ್ಟಡ ಅಥವಾ ಖಾಲಿಭೂಮಿ][1]ಯ ಯಾರೇ ಸ್ವಾಧೀನದಾರನು ಅದರ ಒಡೆಯನ ಮೇಲೆ ಈ ಅಧಿನಿಯಮವು ವಿಧಿಸಿದ ಯಾವುವೇ ವೆಚ್ಚಗಳಿಗೆ ಸಂಬಂಧಿಸಿದಂತೆ ಅವನಿಗೆ ಮಾಡಿದ ತಗಾದೆಯ ಕಾಲದಲ್ಲಿ ಯಾವ [1][ಕಟ್ಟಡಕ್ಕೆ ಅಥವಾ ಖಾಲಿಭೂಮಿ][1]ಗೆ ಸಂಬಂಧಿಸಿದಂತೆ ಅಂಥ ವೆಚ್ಚಗಳು ಸಂದಾಯವಾಗಬೇಕಾಗಿದೆಯೋ, ಆ ಯಾವುದೇ ಕಟ್ಟಡದ ಅಥವಾ ಭೂಮಿಯ ಸ್ವಾಧೀನದಾರನಿಂದ ಯಾವ ಬಾಡಿಗೆಯು ಬಾಕಿಯಿದೆಯೋ ಅಥವಾ ಹಾಗೆ ತಗಾದೆ ಮಾಡಿದ ಮತ್ತು ತನ್ನ ಯಜಮಾನನಿಗೆ ಅದನ್ನು ಸಂದಾಯ ಮಾಡದಿರಲು ಕೊಟ್ಟ ನೋಟೀಸಿನ ತರುವಾಯ, ಯಾವುದೇ ಕಾಲದಲ್ಲಿ ಒದಗಿ ಬಂದಂಥ ಮತ್ತು ಅಂಥ ಸ್ವಾಧೀನದಾರನು ಸಂದಾಯ ಮಾಡಬೇಕಾದಂಥ ಬಾಡಿಗೆಯ ಮೊಬಲಗಿಗಿಂತ ಹೆಚ್ಚಿನ ಹಣವನ್ನು, ತನ್ನ ಬಾಡಿಗೆಯ ಮೊಬಲಗನ್ನು ಮತ್ತು ಅಂಥ ಬಾಡಿಗೆಯನ್ನು ಯಾರಿಗೆ ಸಂದಾಯ ಮಾಡಬೇಕಾಗಿದೆಯೋ ಆ ವ್ಯಕ್ತಿಯ ಹೆಸರನ್ನು ಮತ್ತು ವಿಳಾಸವನ್ನು ನಿಜವಾಗಿಯೂ ಬಹಿರಂಗಪಡಿಸಲು, ಮುನ್ಸಿಪಲ್ ಕೌನ್ಸಿಲ್ ಆ ಉದ್ದೇಶಕ್ಕಾಗಿ ಅವನಿಗೆ ಅರ್ಜಿ ಮಾಡಿಕೊಂಡಿದ್ದಾಗಲೂ ಅವನು ನಿರ್ಲಕ್ಷಿಸಿದ್ದ ಅಥವಾ ನಿರಾಕರಿಸಿದ ಹೊರತು ಸಂದಾಯ ಮಾಡಲು ಗುರಿಯಾಗತಕ್ಕದ್ದಲ್ಲ. ಆದರೆ ಯಾವುದೇ ಸ್ವಾಧೀನದಾರನಿಂದ ತಗಾದೆ ಮಾಡಿದ ಮೊತ್ತವು ಅಂಥ ತಗಾದೆಯ ಕಾಲದಲ್ಲಿ ಅವನಿಂದ ಬಾಕಿ ಆಗಿದ್ದಂಥ ಅಥವಾ ಅಂದಿನಿಂದ ಒದಗಿಬಂದಂಥ ಬಾಡಿಗೆಗಿಂತ ಹೆಚ್ಚಾಗಿದೆ ಎಂದು ರುಜುವಾತುಪಡಿಸುವ ಭಾರವು ಅಂಥ ಸ್ವಾಧೀನದಾರನ ಮೇಲೆ ಇರತಕ್ಕದ್ದು:

ಪರಂತು, ಇದರಲ್ಲಿ ಒಳಗೊಂಡಿರುವುದು ಯಾವುದೂ, ಹಿಂದೆ ಹೇಳಿದಂಥ ಯಾವುದೇ ಕೆಲಸಗಳ ವೆಚ್ಚದ ಸಂದಾಯಕ್ಕೆ ಸಂಬಂಧಿಸಿದಂತೆ, ಯಾರೇ ಅಂಥ ಸ್ವಾಧೀನದಾರ ಮತ್ತು ಒಡೆಯನ ನಡುವೆ ಮಾಡಿಕೊಂಡ ಯಾವುದೇ ವಿಶೇಷ ಕರಾರನ್ನು ಬಾಧಿಸುವುದಾಗಿ ತಿಳಿಯತಕ್ಕದ್ದಲ್ಲ.

1.2003ರ ಅಧಿನಿಯಮ 31ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

265. ಒಡೆಯನು ಕೆಲಸ ಮಾಡಿಸಲು ತಪ್ಪಿದಲ್ಲಿ ಸ್ವಾಧೀನದಾರನು ಕೆಲಸವನ್ನು ಮಾಡಿಸಬಹುದು ಮತ್ತು ತಾನು ಕೊಡುವ ಬಾಡಿಗೆಯಿಂದ ವೆಚ್ಚಗಳನ್ನು ಮುರಿದುಕೊಳ್ಳಬಹುದು.- ಮುನ್ಸಿಪಲ್ ಕೌನ್ಸಿಲ್, ಒಡೆಯನೇ ನಿರ್ವಹಿಸಬೇಕೆಂದು ಅಗತ್ಯಪಡಿಸಿದ ಯಾವುದೇ ಕೆಲಸದ ನಿರ್ವಹಣೆ ಮಾಡದೇ ಅದೇ [1][ಕಟ್ಟಡದ ಅಥವಾ ಖಾಲಿಭೂಮಿ][1]ಯ ಒಡೆಯನು ತಪ್ಪಿದಾಗಲೆಲ್ಲಾ ಅಂಥ [1][ಕಟ್ಟಡದ ಅಥವಾ ಖಾಲಿಭೂಮಿ][1]ಯ ಸ್ವಾಧೀನದಾರನು ಮುನ್ಸಿಪಲ್ ಕೌನ್ಸಿಲ್‌ನಿಂದ ಅನುಮೋದನೆ ಪಡೆದು ಅಂಥ ಕೆಲಸವನ್ನು ಮಾಡಿಸಬಹುದು ಮತ್ತು ಅದರ ವೆಚ್ಚವನ್ನು ಒಡೆಯನು ಅವನಿಗೆ ಸಂದಾಯ ಮಾಡತಕ್ಕದ್ದು ಮತ್ತು ಆ ಮೊಬಲಗನ್ನು ಅಂಥ ಒಡೆಯನಿಗೆ ಅವನು ಕಾಲಕಾಲಕ್ಕೆ ಕೊಡಬೇಕಾಗುವ ಬಾಡಿಗೆಯಿಂದ ಮುರಿದುಕೊಳ್ಳತಕ್ಕದ್ದು.

1.2003ರ ಅಧಿನಿಯಮ 31ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

266. ಅಧಿನಿಯಮದ ಜಾರಿಯನ್ನು ಯಾರೇ ಸ್ವಾಧೀನದಾರನು ವಿರೋಧಿಸಿದರೆ ವ್ಯವಹರಣೆಗಳು.- ಯಾವುದೇ [1][ಕಟ್ಟಡದ ಅಥವಾ ಖಾಲಿಭೂಮಿ][1]ಯ ಸ್ವಾಧೀನದಾರನು ಅದರ ಒಡೆಯನನ್ನು ಅಂಥ [1][ಕಟ್ಟಡಕ್ಕೆ ಅಥವಾ ಖಾಲಿಭೂಮಿ][1]ಗೆ ಸಂಬಂಧಪಟ್ಟಂತೆ ಈ ಅಧಿನಿಯಮದ

ಯಾವುದೇ ಉಪಬಂಧಗಳನ್ನು, ಅಂಥ ಸ್ವಾಧೀನದಾರನಿಗೆ ಒಡೆಯನು ಆ ಉಪಬಂಧಗಳನ್ನು ಜಾರಿಗೆ ತರುವ ತನ್ನ ಉದ್ದೇಶದ ನೋಟೀಸ್ ನ್ನು ಕೊಟ್ಟ ತರುವಾಯವೂ ಜಾರಿಗೆ ತರುವುದನ್ನು ತಡೆಗಟ್ಟಿದರೆ, ಯಾರೇ ಮ್ಯಾಜಿಸ್ಟ್ರೇಟ್ ನು ಅದು ರುಜುವಾತಾಗಿರುವುದನ್ನು ಕಂಡುಕೊಂಡ ಮೇಲೆ ಮತ್ತು ಒಡೆಯನು ಅರ್ಜಿ ಸಲ್ಲಿಸಿದಾಗ ಅಂಥ [1][ಕಟ್ಟಡ ಅಥವಾ ಖಾಲಿಭೂಮಿ][1]ಗೆ ಸಂಬಂಧಿಸಿದಂತೆ ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವುದಕ್ಕಾಗಿ ಅವಶ್ಯವಾಗಬಹುದಾದಂಥ ಎಲ್ಲ ಕೆಲಸಗಳನ್ನು ಮಾಡಿಸುವ ಸಲುವಾಗಿ ಒಡೆಯನಿಗೆ ಅವಕಾಶ ಮಾಡಿಕೊಡಲು ಅಂಥ ಸ್ವಾಧೀನದಾರರನ್ನು ಅಗತ್ಯಪಡಿಸುವ ಬರಹದಲ್ಲಿನ ಆದೇಶವನ್ನು ಮಾಡಬಹುದು ಮತ್ತು ಸೂಕ್ತವೆಂದು ಅವನು ಭಾವಿಸಿದರೆ ಅಂಥ ಅರ್ಜಿಗೆ ಅಥವಾ ಆದೇಶಕ್ಕೆ ಸಂಬಂಧಿಸಿದ ಖರ್ಚುಗಳನ್ನು ಒಡೆಯನಿಗೆ ಸಂದಾಯ ಮಾಡಲು ಸ್ವಾಧೀನದಾರನಿಗೆ ಆದೇಶ ಮಾಡಬಹುದು ಮತ್ತು ಆದೇಶದ ದಿನಾಂಕದಿಂದ ಎಂಟು ದಿವಸಗಳ ಮುಕ್ತಾಯದ ತರುವಾಯ ಅಂಥ ಆ ಸ್ವಾಧೀನದಾರನು ಅಂಥ ಕೆಲಸವನ್ನು ಮಾಡಿಸಲು ಅಂಥ ಒಡೆಯನಿಗೆ ಅವಕಾಶ ಕೊಡಲು ನಿರಾಕರಿಸುವುದನ್ನು ಮುಂದುವರಿಸಿದರೆ ಅಂಥ ಸ್ವಾಧೀನದಾರನು ಅವನು ಹಾಗೆ ನಿರಾಕರಿಸಲು ಮುಂದುವರಿಸುವಂಥ ಕಾಲದಲ್ಲಿ ಪ್ರತಿಯೊಂದು ದಿವಸಕ್ಕೆ ಐವತ್ತು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು ಮತ್ತು ಅಂಥ ಪ್ರತಿಯೊಬ್ಬ ಒಡೆಯನು ಅಂಥ ನಿರಾಕರಣೆಯು ಮುಂದುವರಿಯುತ್ತಿರುವ ಅವಧಿಯಲ್ಲಿ ಅಂಥ ಕೆಲಸಗಳನ್ನು ಮಾಡಿಸಲು ಅವನು ತಪ್ಪಿದ್ದರಿಂದಾಗಿ ಅವನು ಅನ್ಯಥಾ ಗುರಿಯಾಗಿರಬಹುದಾಗಿದ್ದಂಥ ಯಾವುದೇ ದಂಡನೆಗಳಿಗೆ ಒಳಗಾಗದಂತೆ ವಿಮುಕ್ತನಾಗತಕ್ಕದ್ದು.

1.2003ರ ಅಧಿನಿಯಮ 31ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

267. ಈ ಅಧಿನಿಯಮದ ಉದ್ದೇಶಗಳಿಗಾಗಿ ಪ್ರವೇಶ.- ಈ ಅಧಿನಿಯಮದ ಯಾವುದೇ ಉದ್ದೇಶಕ್ಕಾಗಿ ಮುನ್ಸಿಪಲ್ ಕಮಿಷನರ್, ಚೀಫ್ ಆಫೀಸರ್ ಅಥವಾ ಪ್ರವೇಶಿಸುವ ಉದ್ದೇಶಕ್ಕಾಗಿ ಮುನ್ಸಿಪಲ್ ಕೌನ್ಸಿಲ್ ನಿಂದ ಅಧಿಕೃತನಾದ ಯಾರೇ ಅಧಿಕಾರಿಯು ಯಾವುದೇ [1][ಕಟ್ಟಡದ ಅಥವಾ ಖಾಲಿಭೂಮಿ][1]ಯೊಳಗೆ ಅಥವಾ ಅದರ ಮೇಲೆ ಸೂರ್ಯೋದಯ ಮತ್ತು ಸೂರ್ಯಾಸ್ತಗಳ ನಡುವೆ ಅವನು ಅವಶ್ಯವೆಂದು ಭಾವಿಸುವಂಥ ನೆರವಿನೊಡನೆ ಪ್ರವೇಶಿಸುವುದು ಕಾನೂನು ಸಮ್ಮತವಾಗಿರತಕ್ಕದ್ದು:

ಪರಂತು, ಇಲ್ಲಿ ಅನ್ಯಥಾ ಉಪಬಂಧಿಸಿದ್ದ ಹೊರತು ಆ ಕಾಲದಲ್ಲಿ ಸ್ವಾಧೀನದಲ್ಲಿರಬಹುದಾಗಿದ್ದಂಥ ಯಾವುದೇ [1][ಕಟ್ಟಡ ಅಥವಾ ಖಾಲಿಭೂಮಿ][1]ಯನ್ನು ಅದರ ಸ್ವಾಧೀನದಾರನ ಅನುಮತಿಯಿಂದಲ್ಲದೆ ಸದರಿ ಸ್ವಾಧೀನದಾರನಿಗೆ ಅದರ ಬಗ್ಗೆ ಬರಹದಲ್ಲಿ ನೋಟೀಸನ್ನು ಕೊಟ್ಟಿರಬಹುದಾದ ಇಪ್ಪತ್ತಾಲ್ಕು ಗಂಟೆಯೊಳಗೆ ಪ್ರವೇಶಿಸತಕ್ಕದ್ದಲ್ಲ:

1. 2003ರ ಅಧಿನಿಯಮ 31ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಮತ್ತು ಪರಂತು, ಮನುಷ್ಯ ವಾಸಕ್ಕೆಂದು ಬಳಸಿದ ಕಟ್ಟಡಗಳ ಸಂದರ್ಭದಲ್ಲಿ ಸ್ವಾಧೀನದಾರರ ಸಾಮಾಜಿಕ ಮತ್ತು ಧಾರ್ಮಿಕ ರೂಢಿಗಳಿಗೆ ಯುಕ್ತ ಗಮನವನ್ನು ಕೊಡತಕ್ಕದ್ದು ಮತ್ತು ಮಹಿಳೆಯರ ವಾಸ್ತವಿಕ ಸ್ವಾಧೀನದಲ್ಲಿರುವ ಯಾವುದೇ ಕೊಠಡಿಯನ್ನು ಅವಳು ಅಲ್ಲಿಂದ ಹೊರ ಹೋಗಲು ಅವಳು ಸ್ವತಂತ್ರಳೆಂದು ಅವಳಿಗೆ ತಿಳಿಸಿ ಮತ್ತು ಅಲ್ಲಿಂದ ಹೊರ ಹೋಗಲು ಅವಳಿಗೆ ಎಲ್ಲ ಯುಕ್ತ ಸೌಲಭ್ಯವನ್ನು ಕೊಡುವವರೆಗೆ ಪ್ರವೇಶಿಸತಕ್ಕದ್ದಲ್ಲ.

268. ಕೆಲವು ಪ್ರಕರಣಗಳಲ್ಲಿ ಪರಿಹಾರದ ನಿರ್ಧರಣೆ.- (1) 257ನೇ ಪ್ರಕರಣದಲ್ಲಿ ಉಪಬಂಧಿಸಿರುವುದನ್ನುಳಿದು ಸಂದಾಯ ಮಾಡಬೇಕೆಂದು ಈ ಅಧಿನಿಯಮದ ಮೂಲಕ ನಿರ್ದೇಶಿಸಲಾದಂಥ ಯಾವುದೇ ನಷ್ಟ ಪರಿಹಾರದ ಅಥವಾ ಹಾನಿ ಪರಿಹಾರದ ಮೊಬಲಗಿಗೆ ಮತ್ತು ಅವಶ್ಯವಿದ್ದರೆ ಅಂಥ ಮೊಬಲಗಿಗೆ ಸಂಬಂಧಿಸಿದಂತೆ ಒಪ್ಪಂದಕ್ಕೆ ಬಂದಿಲ್ಲದಿದ್ದರೆ ಹಂಚುವುದಕ್ಕೆ ಸಂದಾಯ ಮಾಡಬೇಕಾದ ಮೊಬಲಗನ್ನು ಅಥವಾ ಅದನ್ನು ಹಂಚುವುದನ್ನು [1][ಟೌನ್ ಮುನ್ಸಿಪಲ್ ಏರಿಯಾ][1] ಗಳ ಸಂದರ್ಭದಲ್ಲಿ ಆ [1][ಮುನ್ಸಿಪಲ್ ಏರಿಯಾ][1] ವು ಇರುವಂಥ ತಾಲ್ಲೂಕಿನ ಪ್ರಭಾರದಲ್ಲಿನ ಅಸಿಸ್ಟೆಂಟ್ ಕಮಿಷನರ್ ಮತ್ತು ಆ ಅಧಿಕಾರಿಯಿಲ್ಲದಿದ್ದರೆ ಡೆಪ್ಯುಟಿ ಕಮಿಷನರ್ ನು ಮತ್ತು [1][ಸಿಟಿ ಮುನ್ಸಿಪಲ್ ಏರಿಯಾ][1] ಗಳ ಸಂದರ್ಭದಲ್ಲಿ ಡೆಪ್ಯುಟಿ ಕಮಿಷನರ್ ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ನಿರ್ಧರಿಸತಕ್ಕದ್ದು:

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಪರಂತು, ಈ ಉಪ-ಪ್ರಕರಣದಲ್ಲಿರುವುದಾವುದೂ ಇದರಿಂದ ಬಾಧಿತನಾದ ವ್ಯಕ್ತಿಯು ಸಕ್ಷಮ ಅಧಿಕಾರವ್ಯಾಪ್ತಿ ಹೊಂದಿರುವ ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರವನ್ನು ಕೋರಲು ಅಡ್ಡಿ ಮಾಡತಕ್ಕದ್ದಲ್ಲ.

(2) ಯಾವುದೇ ಭೂಮಿಗೆ ಅಥವಾ ಕಟ್ಟಡಕ್ಕೆ ಸಂಬಂಧಿಸಿದಂತೆ, ನಷ್ಟಪರಿಹಾರವನ್ನು ಕ್ಲೇಮು ಮಾಡಿರುವ ಯಾವುದೇ ಸಂದರ್ಭದಲ್ಲಿ ಸಂದಾಯವಾಗಬೇಕಾದ ನಷ್ಟ ಪರಿಹಾರವನ್ನು ಜಿಲ್ಲಾ ನ್ಯಾಯಾಲಯವು ನಿರ್ಧರಿಸತಕ್ಕದ್ದು ಮತ್ತು ನ್ಯಾಯಾಲಯದ ನಿರ್ಧರಣೆಗಾಗಿ ಒಪ್ಪಿಸಿದ ವಿಷಯಗಳಲ್ಲಿನ ವ್ಯವಹರಣೆಗಳಿಗಾಗಿ 1894ರ ಭೂ ಆರ್ಜನಾ ಅಧಿನಿಯಮದಲ್ಲಿ ಹೇಳಿರುವ ಪ್ರಕ್ರಿಯೆಯನ್ನು ಸಾಧ್ಯವಾಗಬಹುದಾದಷ್ಟುಮಟ್ಟಿಗೆ ಅನುಸರಿಸತಕ್ಕದ್ದು:

ಪರಂತು,-

(ಎ) ಒಪ್ಪಿಸುವುದಕ್ಕಾಗಿ ಡೆಪ್ಯುಟಿ ಕಮಿಷನರ್ ನಿಗೆ ಯಾವುದೇ ಅರ್ಜಿಯನ್ನು ಹಾಕಿಕೊಳ್ಳುವುದು ಅವಶ್ಯವಿರತಕ್ಕದ್ದಲ್ಲ; ಮತ್ತು

(ಬಿ) ನ್ಯಾಯಾಲಯವು ಸೂಕ್ತವೆಂದು ಅದು ಯೋಚಿಸುವ ಯಾವುದೇ ರೀತಿಯಲ್ಲಿ ಎಲ್ಲ ವ್ಯವಹರಣೆಗಳ ಖರ್ಚುಗಳನ್ನು ಕೊಡಲು ಮತ್ತು ಹಂಚಲು ಅಧಿಕಾರವನ್ನು ಹೊಂದಿರತಕ್ಕದ್ದು.

(3) ಯಾವುದೇ [1][ಖಾಲಿಭೂಮಿಗೆ ಅಥವಾ ಕಟ್ಟಡ][1] ಕ್ಕೆ ಸಂಬಂಧಿಸಿದಂತೆ ನಷ್ಟ ಪರಿಹಾರವನ್ನು ಕ್ಲೇಮು ಮಾಡಿರುವ ಯಾವುದೇ ಪ್ರಕರಣದಲ್ಲಿ ಜಿಲ್ಲಾ ನ್ಯಾಯಾಲಯವು ಮಾಡಿದ ಐತೀರ್ಪಿನ ತರುವಾಯ ಜಿಲ್ಲಾ ನ್ಯಾಯಾಲಯವು ನಿರ್ಧರಿಸಿದ ನಷ್ಟಪರಿಹಾರವನ್ನು ಅಂಥ ಸಂದಾಯ ಮಾಡಬೇಕಾದ ಪಕ್ಷಕಾರನಿಗೆ ಸಂದಾಯ ಮಾಡಿದ ತರುವಾಯ ಆ [1][ಖಾಲಿಭೂಮಿಯನ್ನು ಅಥವಾ ಕಟ್ಟಡ][1] ವನ್ನು ಮುನ್ಸಿಪಲ್ ಕೌನ್ಸಿಲ್ ಸ್ವಾಧೀನಕ್ಕೆ ತೆಗೆದುಕೊಳ್ಳಬಹುದು. ಅಂಥ ಪಕ್ಷಕಾರನು ಅಂಥ ನಷ್ಟಪರಿಹಾರವನ್ನು ಅಂಗೀಕರಿಸಲು ನಿರಾಕರಿಸಿದರೆ ಅಥವಾ ನಷ್ಟಪರಿಹಾರದ ಸ್ವಾಮ್ಯದ ಬಗ್ಗೆ ಅಥವಾ ಅದರ ಹಂಚಿಕೆಯ ಬಗ್ಗೆ ಯಾವುದೇ ವಿವಾದವಿದ್ದರೆ ಮುನ್ಸಿಪಲ್ ಕೌನ್ಸಿಲ್, ಜಿಲ್ಲಾ ನ್ಯಾಯಾಲಯದಲ್ಲಿ ನಷ್ಟ ಪರಿಹಾರದ ಮೊಬಲಗನ್ನು ಠೇವಣಿಯಿಡತಕ್ಕದ್ದು.

1.2003ರ ಅಧಿನಿಯಮ 31ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

269. ಖರ್ಚುಗಳನ್ನು ಅಥವಾ ವೆಚ್ಚಗಳನ್ನು ನಿರ್ಧರಿಸುವ ಮತ್ತು ವಸೂಲ್ಮಾಡುವ ಬಗೆ.- ಈ ಅಧ್ಯಾಯದ ಮೇರೆಗೆ ಯಾರೇ ವ್ಯಕ್ತಿಯು ಸಂದಾಯ ಮಾಡಬೇಕೆಂದು ನಿರ್ದೇಶಿಸಲಾಗಿದ್ದಂಥ ಯಾವುದೇ ಖರ್ಚು ಅಥವಾ ವೆಚ್ಚಗಳ ಬಗ್ಗೆ ವಿವಾದವು ಉದ್ಭವಿಸಿದರೆ, ಆ ಮೊಬಲಗು ಮತ್ತು ಅವಶ್ಯವಿದ್ದರೆ ಅದರ ಹಂಚಿಕೆಯನ್ನು ಈ ಅಧಿನಿಯಮದಲ್ಲಿ ಅನ್ಯಥಾ ಸ್ಪಷ್ಟವಾಗಿ ಉಪಬಂಧಿಸಿದ್ದ ಹೊರತು ಮುನ್ಸಿಪಲ್ ಕೌನ್ಸಿಲ್ ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ನಿರ್ಧರಿಸತಕ್ಕದ್ದು ಮತ್ತು ಅದನ್ನು VIIನೇ ಅಧ್ಯಾಯದ ಮೇರೆಗೆ ಯಾವುದೇ ತೆರಿಗೆಯ ಮೊತ್ತವನ್ನು ಕ್ಲೇಮು ಮಾಡಿದಾಗ ಯಾವ ರೀತಿಯಲ್ಲಿ ವಸೂಲಿ ಮಾಡಬಹುದೋ ಅದೇ ರೀತಿಯಲ್ಲಿ ಮಾಡತಕ್ಕದ್ದು.

270. ಮುನ್ಸಿಪಲ್ ಚುನಾವಣೆಗಳಿಗಾಗಿ ಆವರಣಗಳು, ವಾಹನಗಳು ಇತ್ಯಾದಿಗಳನ್ನು ಕಡ್ಡಾಯವಾಗಿ ಕೋರುವುದು.- (1) ಮುನ್ಸಿಪಲ್ ಕಮಿಷನರ್ ಅಥವಾ ಮುನ್ಸಿಪಲ್ ಕೌನ್ಸಿಲ್‌ನ ಚೀಫ್ ಆಫೀಸರ್ ನು ಚುನಾವಣೆಗೆ ಸಂಬಂಧಿಸಿದಂತೆ ಕೋರಿಕೆ ಮಾಡಿಕೊಂಡಾಗ ಅಥವಾ ಅದರ ಅಥವಾ ತನ್ನ ಸ್ವಂತ ಇಚ್ಛೆಯಂತೆ ಸರ್ಕಾರಕ್ಕೆ ಅಥವಾ ಸರ್ಕಾರದಿಂದ ಅಧಿಕೃತನಾದ ಅಧಿಕಾರಿಗೆ (ಇಲ್ಲಿ ಇನ್ನುಮುಂದೆ ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯೆಂದು ಉಲ್ಲೇಖಿಸಲಾಗಿದೆ) ಈ ಅಧಿನಿಯಮದ ಮೇರೆಗಿನ ಚುನಾವಣೆಗೆ ಸಂಬಂಧಿಸಿದಂತೆ,-

(ಎ) ಮತಗಟ್ಟೆಗಾಗಿ ಬಳಸುವ ಅಥವಾ ಮತದಾನದ ತರುವಾಯ ಮತಪೆಟ್ಟಿಗೆ ದಾಸ್ತಾನು ಮಾಡುವ ಉದ್ದೇಶಕ್ಕಾಗಿ ಯಾವುವೇ ಆವರಣಗಳು ಅಗತ್ಯವಾಗಿದೆ ಅಥವಾ ಅಗತ್ಯವಾಗುವ ಸಂಭವವಿದೆಯೆಂದು; ಅಥವಾ

(ಬಿ) ಯಾವುದೇ ಮತಗಟ್ಟೆಗೆ ಅಥವಾ ಅದರಿಂದ ಮತಪೆಟ್ಟಿಗೆಗಳನ್ನು ಸಾಗಿಸುವ ಅಥವಾ ಅಂಥ ಚುನಾವಣೆ ನಡೆಯುವ ಕಾಲದಲ್ಲಿ ಸುವ್ಯವಸ್ಥೆಯನ್ನು ಕಾಪಾಡುವುದಕ್ಕಾಗಿ ಪೊಲೀಸ್ ದಳದವರುಗಳನ್ನು ಒಯ್ಯುವ ಅಥವಾ ಅಂಥ ಚುನಾವಣೆಗೆ ಸಂಬಂಧಿಸಿದಂತೆ ಯಾವುದೇ ಕರ್ತವ್ಯವನ್ನು ನೆರವೇರಿಸುವುದಕ್ಕಾಗಿ ಯಾರೇ ಅಧಿಕಾರಿಯನ್ನು ಅಥವಾ ಇತರ ವ್ಯಕ್ತಿಯನ್ನು ಒಯ್ಯುವ ಉದ್ದೇಶಕ್ಕಾಗಿ ಯಾವುದೇ ವಾಹನ, ನೌಕೆ ಅಥವಾ ಪ್ರಾಣಿಯು ಅಗತ್ಯವಾಗಿದೆ ಅಥವಾ

ಅಗತ್ಯವಾಗುವ ಸಂಭವವಿದೆಯೆಂದು ಕಂಡುಬಂದರೆ ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು ಸಂದರ್ಭಾನುಸಾರ ಅಂಥ ಆವರಣಗಳನ್ನು ಅಂಥ ವಾಹನವನ್ನು, ದೋಣಿಯನ್ನು ಅಥವಾ ಪ್ರಾಣಿಯನ್ನು ಬರಹದಲ್ಲಿ ಆದೇಶದ ಮೇರೆಗೆ ಕಡ್ಡಾಯವಾಗಿ ಕೋರಬಹುದು ಮತ್ತು ಆ ಕಡ್ಡಾಯ ಕೋರಿಕೆಗೆ ಸಂಬಂಧಪಟ್ಟಂತೆ ಅವಶ್ಯ ಅಥವಾ ವಿಹಿತವೆಂದು ಅದಕ್ಕೆ ಕಂಡುಬರಬಹುದಾದಂಥ ಇನ್ನೂ ಹೆಚ್ಚಿನ ಆದೇಶಗಳನ್ನು ಮಾಡಬಹುದು:

ಪರಂತು, ಅಭ್ಯರ್ಥಿಯ ಚುನಾವಣೆಗೆ ಸಂಬಂಧಿಸಿದ ಯಾವುದೇ ಉದ್ದೇಶಕ್ಕಾಗಿ ಅಂಥ ಅಭ್ಯರ್ಥಿಯು ಅಥವಾ ಅವನ ಏಜೆಂಟ್ ನು ಕಾನೂನುಸಮ್ಮತವಾಗಿ ಬಳಸುತ್ತಿರುವಂಥ ಯಾವುದೇ ವಾಹನವನ್ನು, ದೋಣಿಯನ್ನು ಅಥವಾ ಪ್ರಾಣಿಯನ್ನು ಅಂಥ ಚುನಾವಣೆಯಲ್ಲಿ ಮತದಾನವು ಮುಗಿಯುವವರೆಗೆ ಈ ಉಪ-ಪ್ರಕರಣದ ಮೇರೆಗೆ ಕಡ್ಡಾಯವಾಗಿ ಕೋರತಕ್ಕದ್ದಲ್ಲ.

(2) ಸ್ಥತ್ತಿನ ಸ್ವಾಧೀನದಲ್ಲಿರುವ ಒಡೆಯನೆಂಬುದಾಗಿ ಅಥವಾ ವ್ಯಕ್ತಿಯೆಂಬುದಾಗಿ ಕಡ್ಡಾಯ ಕೋರಿಕೆಯನ್ನು ಮಾಡುವ ಪ್ರಾಧಿಕಾರಿಯು ಭಾವಿಸುವ ವ್ಯಕ್ತಿಗೆ ಕಡ್ಡಾಯ ಕೋರಿಕೆಯನ್ನು ಬರಹದಲ್ಲಿ ಆದೇಶದ ಮೂಲಕ ಮಾಡತಕ್ಕದ್ದು ಮತ್ತು ಅಂಥ ಆದೇಶವನ್ನು ಅದನ್ನು ಅಂತಹ ವ್ಯಕ್ತಿಗೆ 252ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಜಾರಿ ಮಾಡತಕ್ಕದ್ದು.

(3) ಉಪ-ಪ್ರಕರಣ (1) ರ ಮೇರೆಗೆ ಯಾವುದೇ ಸ್ಥತ್ತನ್ನು ಕಡ್ಡಾಯವಾಗಿ ಕೋರಿದಾಗಲೆಲ್ಲಾ ಅಂಥ ಕಡ್ಡಾಯ ಕೋರಿಕೆಯ ಅವಧಿಯನ್ನು ಆ ಉಪ-ಪ್ರಕರಣದಲ್ಲಿ ನಮೂದಿಸಿದ ಯಾವುದೇ ಉದ್ದೇಶಕ್ಕಾಗಿ ಅಂಥ ಸ್ಥತ್ತು ಅಗತ್ಯವಾಗಿರುವಂಥ ಆ ಅವಧಿಗೂ ಮೀರಿ ವಿಸ್ತರಿಸತಕ್ಕದ್ದಲ್ಲ.

ವಿವರಣೆ:- ಈ ಪ್ರಕರಣದ ಉದ್ದೇಶಕ್ಕಾಗಿ `ಆವರಣಗಳು' ಎಂದರೆ ಯಾವುದೇ ಭೂಮಿ, ಕಟ್ಟಡ ಅಥವಾ ಕಟ್ಟಡದ ಭಾಗ ಮತ್ತು ಗುಡಿಸಲು, ಷೆಡ್ ಅಥವಾ ಇತರ ರಚನೆಗಳ ಅಥವಾ ಅದರ ಯಾವುದೇ ಭಾಗವು ಒಳಗೊಳ್ಳುತ್ತದೆ.

271. ನಷ್ಟಪರಿಹಾರದ ಸಂದಾಯ.- ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು 270ನೇ ಪ್ರಕರಣಕ್ಕೆ ಅನುಸಾರವಾಗಿ ಯಾವುದೇ ಆವರಣವನ್ನು ಕಡ್ಡಾಯವಾಗಿ ಕೋರಿದಾಗಲೆಲ್ಲಾ ಮುನ್ಸಿಪಲ್ ಕೌನ್ಸಿಲ್ ಹಿತಾಸಕ್ತಿಯುಳ್ಳ ವ್ಯಕ್ತಿಗೆ ಈ ಕೆಳಕಂಡವುಗಳನ್ನು, ಎಂದರೆ:-

(i) ಆ ಆವರಣಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ಬಾಡಿಗೆಯನ್ನು ಅಥವಾ ಯಾವುದೇ ಬಾಡಿಗೆಯನ್ನು ಸಂದಾಯ ಮಾಡದಿದ್ದರೆ ಆ ಸ್ಥಳದಲ್ಲಿ ಅಂಥದೇ ಆವರಣಕ್ಕೆ ಸಂದಾಯ ಮಾಡಬೇಕಾದ ಬಾಡಿಗೆಯನ್ನು;

(ii) ಆವರಣವನ್ನು ಕಡ್ಡಾಯವಾಗಿ ಕೋರಿದ ಪರಿಣಾಮವಾಗಿ ಹಿತಾಸಕ್ತಿಯುಳ್ಳ ವ್ಯಕ್ತಿಯು ತನ್ನ ನಿವಾಸವನ್ನು ಅಥವಾ ವ್ಯವಹಾರದ ಸ್ಥಳವನ್ನು ಬದಲಾಯಿಸಲೇಬೇಕಾದಾಗ ಅಂಥ ಬದಲಾವಣೆಗೆ ಪ್ರಾಸಂಗಿಕವಾಗಿ ಯಾವುದಾದರೂ ಸಮಂಜಸ ವೆಚ್ಚಗಳಾಗಿದ್ದರೆ ಅವುಗಳನ್ನು

- ಪರ್ಯಾಲೋಚನೆಗೆ ತೆಗೆದುಕೊಂಡು ನಿರ್ಧರಿಸಬೇಕಾದ ಮೊಬಲಗಿನ ನಷ್ಟ ಪರಿಹಾರವನ್ನು ಸಂದಾಯ ಮಾಡತಕ್ಕದ್ದು:

ಪರಂತು, ಹಿತಾಸಕ್ತನಾದ ಯಾರೇ ವ್ಯಕ್ತಿಯು ಹಾಗೆ ನಿರ್ಧರಿಸಿದ ನಷ್ಟಪರಿಹಾರದ ಮೊಬಲಗಿನಿಂದ ಬಾಧಿತನಾಗಿದ್ದರೆ, ಅವನು ಮಧ್ಯಸ್ಥಗಾರನಿಗೆ ವಿಷಯವನ್ನು ಒಪ್ಪಿಸುವುದಕ್ಕಾಗಿ ಸರ್ಕಾರವು ರಚಿಸಿದ ನಿಯಮಗಳಲ್ಲಿ ಗೊತ್ತುಪಡಿಸಿದ ಕಾಲದೊಳಗೆ ಅರ್ಜಿಯನ್ನು ಕಡ್ಡಾಯವಾಗಿ ಕೋರುವ ಅಧಿಕಾರಿಗೆ ಹಾಕಿಕೊಂಡಿದ್ದರೆ, ಸಂದಾಯ ಮಾಡಬೇಕಾದ ನಷ್ಟಪರಿಹಾರದ ಮೊಬಲಗು ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು ಈ ಬಗ್ಗೆ ನೇಮಕ ಮಾಡಿದ ಮಧ್ಯಸ್ಥಗಾರನು ನಿರ್ಧರಿಸಬಹುದಾದಂತೆ ಇರತಕ್ಕದ್ದು:

ಮತ್ತು ಪರಂತು, ನಷ್ಟ ಪರಿಹಾರವನ್ನು ಸ್ವೀಕರಿಸಲು ಸ್ವಾಮ್ಯದ ಬಗ್ಗೆ ಅಥವಾ ನಷ್ಟ ಪರಿಹಾರದ ಮೊಬಲಗಿನ ಹಂಚಿಕೆಯ ಬಗ್ಗೆ ಯಾವುದೇ ವಿವಾದವಿದ್ದರೆ ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು ಈ ಬಗ್ಗೆ ನೇಮಕ ಮಾಡಿದ ಮಧ್ಯಸ್ಥಗಾರನಿಗೆ ಅದನ್ನು ನಿರ್ಧರಿಸುವುದಕ್ಕಾಗಿ ಒಪ್ಪಿಸತಕ್ಕದ್ದು ಮತ್ತು ಅಂಥ ಮಧ್ಯಸ್ಥಗಾರನ ತೀರ್ಮಾನಕ್ಕನುಸಾರ ಅದನ್ನು ನಿರ್ಧರಿಸತಕ್ಕದ್ದು.

ವಿವರಣೆ:- ಈ ಉಪ-ಪ್ರಕರಣದಲ್ಲಿ `ಹಿತಾಸಕ್ತಿಯುಳ್ಳ ವ್ಯಕ್ತಿ' ಎಂದರೆ ಕಡ್ಡಾಯ ಕೋರಿಕೆಗೂ ನಿಕಟವಾಗಿ ಮುಂಚೆಯೇ 270ನೇ ಪ್ರಕರಣದ ಮೇರೆಗೆ ಕಡ್ಡಾಯವಾಗಿ ಕೋರಲಾದ ಆವರಣದ ವಾಸ್ತವ ಸ್ವಾಧೀನದಲ್ಲಿದ್ದ ವ್ಯಕ್ತಿ ಅಥವಾ ಯಾರೇ ವ್ಯಕ್ತಿಯು ಅಂಥ ವಾಸ್ತವ ಸ್ವಾಧೀನದಲ್ಲಿ ಇಲ್ಲದಿದ್ದರೆ ಅಂಥ ಆವರಣಗಳ ಒಡೆಯ.

(2) 270ನೇ ಪ್ರಕರಣಕ್ಕೆ ಅನುಸಾರವಾಗಿ ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು ಯಾವುದೇ ವಾಹನವನ್ನು, ದೋಣಿಯನ್ನು ಅಥವಾ ಪ್ರಾಣಿಯನ್ನು ಕಡ್ಡಾಯವಾಗಿ ಕೋರಿದಾಗಲೆಲ್ಲಾ ಮುನ್ಸಿಪಲ್ ಕೌನ್ಸಿಲ್ ಅಂಥ ವಾಹನದ, ದೋಣಿಯ ಅಥವಾ ಪ್ರಾಣಿಯ ಬಾಡಿಗೆಗಾಗಿ ಆ ಸ್ಥಳದಲ್ಲಿ ಸಲುವಳಿಯಲ್ಲಿರುವ ಹಾಸಲು ಅಥವಾ ಧಾರಣೆಗಳ ಆಧಾರದ ಮೇಲೆ ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು ನಿರ್ಧರಿಸಬೇಕಾದ ನಷ್ಟಪರಿಹಾರದ ಮೊಬಲಗನ್ನು ಅದರ ಒಡೆಯನಿಗೆ ಸಂದಾಯ ಮಾಡತಕ್ಕದ್ದು:

ಪರಂತು, ಹಾಗೆ ನಿರ್ಧರಿಸಲಾದ ನಷ್ಟ ಪರಿಹಾರದ ಮೊಬಲಗಿನಿಂದ ಅಂಥ ವಾಹನದ, ದೋಣಿಯ ಅಥವಾ ಪ್ರಾಣಿಯ ಒಡೆಯನು ಬಾಧಿತನಾಗಿದ್ದರೆ ಮತ್ತು ಮಧ್ಯಸ್ಥಗಾರನಿಗೆ ವಿಷಯವನ್ನು ಒಪ್ಪಿಸುವುದಕ್ಕಾಗಿ ಸರ್ಕಾರವು ರಚಿಸಿದ ನಿಯಮಗಳಲ್ಲಿ ಗೊತ್ತುಪಡಿಸಿದ ಕಾಲದೊಳಗೆ ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಗೆ ಅರ್ಜಿಯನ್ನು ಹಾಕಿಕೊಂಡರೆ ಸಂದಾಯ ಮಾಡಬೇಕಾದ ನಷ್ಟ ಪರಿಹಾರದ ಮೊಬಲಗು, ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು ಈ ಬಗ್ಗೆ ನೇಮಕ ಮಾಡಿದ ಮಧ್ಯಸ್ಥಗಾರನು ನಿರ್ಧರಿಸಬಹುದಾದಂತೆ ಇರತಕ್ಕದ್ದು:

ಮತ್ತೂ ಪರಂತು, ಕಡ್ಡಾಯ ಕೋರಿಕೆಯ ನಿಕಟಪೂರ್ವದಲ್ಲಿ ಕಂತು ಖರೀದಿ ಒಪ್ಪಂದದಿಂದಾಗಿ ವಾಹನವು ಅಥವಾ ದೋಣಿಯು ಒಡೆಯನಲ್ಲದ ಇತರ ವ್ಯಕ್ತಿಯ ಸ್ವಾಧೀನದಲ್ಲಿದ್ದರೆ ಕಡ್ಡಾಯ ಕೋರಿಕೆಗೆ ಸಂಬಂಧಿಸಿದಂತೆ, ಸಂದಾಯ ಮಾಡಬೇಕಾದ ಒಟ್ಟು ಪರಿಹಾರವೆಂದು ಈ ಉಪಪ್ರಕರಣದ ಮೇರೆಗೆ ನಿರ್ಧರಿಸಿದ ಮೊಬಲಗನ್ನು ಆ ವ್ಯಕ್ತಿಗೆ ಮತ್ತು ಒಡೆಯನಿಗೆ ಅವರು ಒಪ್ಪಬಹುದಾದಂಥ ರೀತಿಯಲ್ಲಿ ಮತ್ತು ಪರಸ್ಪರ ಒಪ್ಪಿಗೆ ಆಗದಿದ್ದಲ್ಲಿ ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು ನೇಮಕ ಮಾಡಿದ ಮಧ್ಯಸ್ಥಗಾರನು ಈ ಬಗ್ಗೆ ತೀರ್ಮಾನಿಸಬಹುದಾದಂಥ ರೀತಿಯಲ್ಲಿ ಹಂಚತಕ್ಕದ್ದು.

272. ಮಾಹಿತಿಯನ್ನು ಪಡೆಯಲು ಅಧಿಕಾರ.- ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು, 270ನೇ ಪ್ರಕರಣದ ಮೇರೆಗೆ ಯಾವುದೇ ಸ್ವತ್ತನ್ನು ಕಡ್ಡಾಯವಾಗಿ ಕೋರುವ ಅಥವಾ 271ನೇ ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ನಷ್ಟಪರಿಹಾರವನ್ನು ನಿರ್ಧರಿಸುವ ದೃಷ್ಟಿಯಿಂದ ಆದೇಶದ ಮೂಲಕ ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾಂಥ ಪ್ರಾಧಿಕಾರಿಗೆ, ನಿರ್ದಿಷ್ಟಪಡಿಸಬಹುದಾದಂಥ ಸ್ವತ್ತಿಗೆ ಸಂಬಂಧಪಟ್ಟಂತೆ ತನ್ನಲ್ಲಿರುವ ಅಂಥ ಮಾಹಿತಿಯನ್ನು ಒದಗಿಸಲು ಯಾರೇ ವ್ಯಕ್ತಿಯನ್ನು ಅಗತ್ಯಪಡಿಸಬಹುದು.

273. ಕಡ್ಡಾಯವಾಗಿ ಕೋರಿದ್ದ ಆವರಣದಿಂದ ಹೊರಹಾಕುವುದು.- (1) 270ನೇ ಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶವನ್ನು ಉಲ್ಲಂಘಿಸಿ, ಕಡ್ಡಾಯವಾಗಿ ಕೋರಿದ್ದ ಯಾವುದೇ ಆವರಣದ ಸ್ವಾಧೀನದಲ್ಲಿ ಮುಂದುವರಿಯುವ ಯಾರೇ ವ್ಯಕ್ತಿಯನ್ನು ಈ ಬಗ್ಗೆ ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯಿಂದ ಅಧಿಕಾರ ಪಡೆದ ಯಾರೇ ಅಧಿಕಾರಿಯು ಆ ಆವರಣದಿಂದ ಕ್ಷಿಪ್ರವಾಗಿ ಹೊರಹಾಕಬಹುದು.

(2) ಹಾಗೆ ಅಧಿಕಾರ ಪಡೆದಿರುವ ಯಾರೇ ಅಧಿಕಾರಿಯು, ಸಾರ್ವಜನಿಕವಾಗಿ ಕಾಣಿಸಿಕೊಳ್ಳದ ಮಹಿಳೆಯರಿಗೆ ಹೊರ ಹೋಗಲು ಸೂಕ್ತ ಎಚ್ಚರಿಕೆ ಮತ್ತು ಸೌಲಭ್ಯವನ್ನು ಕೊಟ್ಟ ತರುವಾಯ, ಯಾವುದೇ ಬೀಗವನ್ನು ಅಥವಾ ಅಗಳಿಯನ್ನು ತೆಗೆದುಹಾಕಬಹುದು ಮತ್ತು ತೆರೆಯಬಹುದು ಅಥವಾ ಯಾವುದೇ ಬಾಗಿಲನ್ನು ಅಥವಾ ಕಟ್ಟಡವನ್ನು ಒಡೆಯಬಹುದು ಅಥವಾ ಹೊರಹಾಕುವುದು ಸುಗಮವಾಗಲು ಅವಶ್ಯವಾದ ಯಾವುದೇ ಇತರ ಕಾರ್ಯವನ್ನು ಮಾಡಬಹುದು.

274. ಕಡ್ಡಾಯವಾಗಿ ಕೋರಿಕೊಂಡಿದ್ದ ಆವರಣಗಳ ಬಿಡುಗಡೆ:- (1) 270ನೇ ಪ್ರಕರಣದ ಮೇರೆಗೆ ಕಡ್ಡಾಯವಾಗಿ ಕೋರಿಕೊಂಡಿದ್ದ ಯಾವುದೇ ಆವರಣವನ್ನು ಬಿಡುಗಡೆ ಮಾಡಬೇಕಾದಾಗ ಆವರಣಗಳನ್ನು ಕಡ್ಡಾಯವಾಗಿ ಕೋರಿದ್ದ ಕಾಲದಲ್ಲಿ ಯಾವ ವ್ಯಕ್ತಿಯ ಸ್ವಾಧೀನದಿಂದ ಅವುಗಳನ್ನು ತೆಗೆದುಕೊಳ್ಳಲಾಯಿತೋ ಆ ವ್ಯಕ್ತಿಗೆ ಅಥವಾ ಅಂಥ ಯಾರೇ ವ್ಯಕ್ತಿಯು ಇಲ್ಲದಿದ್ದರೆ, ಅಂಥ ಆವರಣಗಳ ಒಡೆಯನೆಂದು ಕಡ್ಡಾಯವಾಗಿ ಕೋರಿದ್ದ ಪ್ರಾಧಿಕಾರಿಯು ಭಾವಿಸುವಂಥ ವ್ಯಕ್ತಿಗೆ, ಅವುಗಳ ಸ್ವಾಧೀನವನ್ನು ಕೊಡತಕ್ಕದ್ದು ಮತ್ತು ಹಾಗೆ ಸ್ವಾಧೀನವನ್ನು ಕೊಟ್ಟಿರುವುದನ್ನು ಎಲ್ಲ ಹೊಣೆಗಾರಿಕೆಗಳಿಂದ ಕಡ್ಡಾಯವಾಗಿ ಕೋರಿದ್ದ ಪ್ರಾಧಿಕಾರಿಯಿಂದ ಸಂಪೂರ್ಣವಾಗಿ ವಿಮುಕ್ತಿ ಎಂದು ಭಾವಿಸತಕ್ಕದ್ದು. ಆದರೆ ಆವರಣಗಳ ಸ್ವಾಧೀನವನ್ನು ಹಾಗೆ ಯಾವ ವ್ಯಕ್ತಿಗೆ ಕೊಡಲಾಗಿದೆಯೋ ಆ ವ್ಯಕ್ತಿಯ ವಿರುದ್ಧ ಯಾವ ಆವರಣಗಳಿಗೆ ಸಂಬಂಧಿಸಿದಂತೆ ಯಾರೇ ಇತರ ವ್ಯಕ್ತಿಯು, ಕಾನೂನಿನ ಯುಕ್ತ ಪ್ರಕ್ರಿಯೆಯ ಮೂಲಕ ಜಾರಿಗೊಳಿಸಲು

ಹಕ್ಕುಳ್ಳವನಾಗಿರಬಹುದೋ ಆ ಆವರಣಗಳಿಗೆ ಸಂಬಂಧಿಸಿದಂತೆ ಯಾವುದೇ ಹಕ್ಕುಗಳಿಗೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

(2) 270ನೇ ಪ್ರಕರಣದ ಮೇರೆಗೆ ಕಡ್ಡಾಯವಾಗಿ ಕೋರಿದ್ದ ಯಾವುವೇ ಆವರಣಗಳ ಸ್ವಾಧೀನವನ್ನು (1)ನೇ ಉಪಪ್ರಕರಣದ ಮೇರೆಗೆ ಯಾವ ವ್ಯಕ್ತಿಗೆ ಕೊಡಬೇಕಾಗಿದೆಯೋ ಆ ವ್ಯಕ್ತಿಯು ಕಂಡುಕೊಳ್ಳಲಾಗದಿದ್ದರೆ, ಅಥವಾ ಎಲ್ಲಿದ್ದಾನೆಂಬುದನ್ನು ಸುಲಭವಾಗಿ ಖಚಿತಪಡಿಸಿಕೊಳ್ಳಲಾಗದಿದ್ದರೆ ಅಥವಾ ತಲುಪಿಸಿರುವುದನ್ನು ಅವನ ಪರವಾಗಿ ತೆಗೆದುಕೊಳ್ಳಲು ಯಾರೇ ಏಜೆಂಟ್ ಇರದಿದ್ದರೆ ಅಥವಾ ಅಧಿಕಾರವುಳ್ಳ ಯಾರೇ ಇತರ ವ್ಯಕ್ತಿ ಇರದಿದ್ದರೆ, ಕಡ್ಡಾಯವಾಗಿ ಕೋರಿದ್ದ ಪ್ರಾಧಿಕಾರಿಯು, ಅಂಥ ಆವರಣಗಳನ್ನು ಕಡ್ಡಾಯ ಕೋರಿಕೆಯಿಂದ ಬಿಡುಗಡೆ ಮಾಡಲಾಗಿದೆಯೆಂದು ಘೋಷಿಸುವ ನೋಟೀಸನ್ನು ಅಂಥ ಆವರಣಗಳ ಯಾವುದೇ ಎದ್ದು ಕಾಣುವ ಭಾಗದ ಮೇಲೆ ಅಂಟಿಸುವಂತೆ ಮಾಡತಕ್ಕದ್ದು ಮತ್ತು ಆ ನೋಟೀಸ್ ನ್ನು ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು.

(3) ಉಪಪ್ರಕರಣ (2) ರಲ್ಲಿ ಉಲ್ಲೇಖಿಸಿದ ನೋಟೀಸ್ ನ್ನು ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಿದಾಗ, ಅಂಥ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಆವರಣಗಳು, ಅಂಥ ಪ್ರಕಟಣೆಯ ದಿನಾಂಕದಂದು ಮತ್ತು ಅಂದಿನಿಂದ ಕಡ್ಡಾಯ ಕೋರಿಕೆಗೆ ಒಳಪಟ್ಟಿರುವುದು ಕೊನೆಗೊಳ್ಳತಕ್ಕದ್ದು ಮತ್ತು ಅದರ ಸ್ವಾಧೀನಕ್ಕೆ ಹಕ್ಕುಳ್ಳ ವ್ಯಕ್ತಿಯ ವಶಕ್ಕೆ ಒಪ್ಪಿಸಲಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಕಡ್ಡಾಯವಾಗಿ ಕೋರಿದ್ದ ಪ್ರಾಧಿಕಾರಿಯು ಅಥವಾ ಮುನ್ಸಿಪಲ್ ಕೌನ್ಸಿಲ್ ಸದರಿ ದಿನಾಂಕದ ತರುವಾಯ ಯಾವುದೇ ಅವಧಿಗೆ ಅಂಥ ಆವರಣಗಳಿಗೆ ಸಂಬಂಧಿಸಿದಂತೆ ಯಾವುದೇ ನಷ್ಟ ಪರಿಹಾರಕ್ಕೆ ಅಥವಾ ಇತರ ಕ್ಲೇಮಿಗೆ ಗುರಿಯಾಗತಕ್ಕದ್ದಲ್ಲ.

275. ಕಡ್ಡಾಯ ಕೋರಿಕೆಯ ಬಗ್ಗೆ ಯಾವುದೇ ಆದೇಶದ ಉಲ್ಲಂಘನೆಗಾಗಿ ದಂಡನೆ.- ಯಾರೇ ವ್ಯಕ್ತಿಯು, 270ನೇ ಪ್ರಕರಣದ ಅಥವಾ 272ನೇ ಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶವನ್ನು ಉಲ್ಲಂಘಿಸಿದರೆ, ಅವನು ಒಂದು ವರ್ಷಕ್ಕೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

ಅಧ್ಯಾಯ - X

ಪ್ರಾಸಿಕ್ಯೂಷನ್‌ಗಳು, ದಾವೆಗಳು ಮತ್ತು ಪೊಲೀಸರ ಅಧಿಕಾರಗಳು

276. ಮುನ್ಸಿಪಲ್ ಕೌನ್ಸಿಲ್ ಪ್ರಾಸಿಕ್ಯೂಟ್ ಮಾಡಬಹುದು.- (1) ಮುನ್ಸಿಪಲ್ ಕೌನ್ಸಿಲ್ ಎಂಥದೇ ಸಾರ್ವಜನಿಕ ಉಪದ್ರವಕ್ಕಾಗಿ ಪ್ರಾಸಿಕ್ಯೂಷನ್ ಹೂಡಲು ನಿರ್ದೇಶಿಸಬಹುದು ಮತ್ತು ಯಾವುದೇ ದಂಡಗಳನ್ನು ವಸೂಲು ಮಾಡಲು ಮತ್ತು ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮಗಳ ಅಥವಾ ಬೈಲಾದ ಉಪಬಂಧಗಳ ವಿರುದ್ಧವಾಗಿ ಅಪರಾಧವನ್ನು ಮಾಡುವ ಯಾರೇ ವ್ಯಕ್ತಿಯ ಶಿಕ್ಷೆಗಾಗಿ ಕೈಗೊಳ್ಳಬೇಕಾದ ವ್ಯವಹರಣೆಗಳಿಗೆ ಆದೇಶಿಸಬಹುದು ಮತ್ತು ಅಂಥ ಪ್ರಾಸಿಕ್ಯೂಷನ್‌ಗಳ ಅಥವಾ ಇತರ ವ್ಯವಹರಣೆಗಳ ವೆಚ್ಚಗಳನ್ನು ಮುನ್ಸಿಪಲ್ ನಿಧಿಯಿಂದ ಸಂದಾಯ ಮಾಡಬೇಕೆಂದು ಆದೇಶಿಸಬಹುದು:

ಪರಂತು, ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮದ ಅಥವಾ ಬೈಲಾದ ಮೇರೆಗಿನ ಅಪರಾಧಕ್ಕಾಗಿ ಯಾವುದೇ ಪ್ರಾಸಿಕ್ಯೂಷನ್ ನನ್ನು ಅಂಥ ಅಪರಾಧವನ್ನು ಮಾಡಿದ ದಿನಾಂಕದ ತರುವಾಯ ಅಥವಾ ಅಂಥ ಅಪರಾಧ ಮಾಡಿರುವುದನ್ನು ಅಥವಾ ಅದು ಇರುವುದನ್ನು ಮೊದಲ ಬಾರಿಗೆ ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನ ಗಮನಕ್ಕೆ ತಂದಂಥ ದಿನಾಂಕದ ತರುವಾಯ ಆರು ತಿಂಗಳೊಳಗಾಗಿ ಹೊರತು ಹೂಡತಕ್ಕದ್ದಲ್ಲ.

(2) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿರುವ ಯಾವುದೇ ನಿಯಮದ ಅಥವಾ ಬೈಲಾದ ಮೇರೆಗಿನ ಯಾವುದೇ ಪ್ರಾಸಿಕ್ಯೂಷನ್ ನನ್ನು, ಈ ಅಧಿನಿಯಮದಲ್ಲಿ ಅಥವಾ ಅದರ ಮೇರೆಗೆ ರಚಿಸಿರುವ ಯಾವುದೇ ನಿಯಮದಲ್ಲಿ ಅಥವಾ ಬೈಲಾದಲ್ಲಿ ಅನ್ಯಥಾ ಉಪಬಂಧಿಸಿ, ಯಾರೇ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ ನ ಮುಂದೆ ಹೂಡಬಹುದು. ಈ ಅಧಿನಿಯಮದ ಮೇರೆಗೆ ಯಾವುದೇ ನಿಯಮದ ಅಥವಾ ಬೈಲಾದ ಮೇರೆಗೆ ವಿಧಿಸಿದ ಪ್ರತಿಯೊಂದು ಜುಲ್ಮಾನೆಯನ್ನು ಅಥವಾ ದಂಡವನ್ನು ಮತ್ತು ಈ ಅಧಿನಿಯಮದಲ್ಲಿ ಯಾವ ನಷ್ಟ ಪರಿಹಾರಕ್ಕೆ ಅಥವಾ ಇತರ ವೆಚ್ಚಗಳಿಗೆ ಅನ್ಯಥಾ ಯಾವುದೇ ವಿಶೇಷ ಉಪಬಂಧವನ್ನು ಮಾಡಿಲ್ಲವೋ ಅಂಥ ನಷ್ಟ ಪರಿಹಾರದ ಅಥವಾ ಇತರ ವೆಚ್ಚಗಳ ವಸೂಲಾತಿಯ ಬಗೆಗಿನ ಎಲ್ಲ ಕ್ಲೇಮುಗಳ ಹಣವನ್ನು ಯಾವ ವ್ಯಕ್ತಿಯಿಂದ ಕ್ಲೇಮು ಮಾಡಬಹುದಾಗಿದೆಯೋ ಆ ವ್ಯಕ್ತಿಯು ಯಾವ ಮ್ಯಾಜಿಸ್ಟ್ರೇಟ್‌ನ ಅಧಿಕಾರವ್ಯಾಪ್ತಿಯ ಎಲ್ಲೆಗಳ

ಒಳಗೆ ಇರುವನೋ ಆ ಮ್ಯಾಜಿಸ್ಟ್ರೇಟ್‌ನಿಗೆ ಅರ್ಜಿ ಸಲ್ಲಿಸಿ, ಅಂತಹ ಎಲ್ಲೆಗಳೊಳಗಿರುವ ಯಾವುದೇ ಚರಸ್ವತ್ತಿನ ಜಪ್ತಿ ಮತ್ತು ಮಾರಾಟದ ಮೂಲಕ ವಸೂಲ್ಮಾಡಬಹುದು.

(3) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಅಥವಾ ಬೈಲಾದ ಮೇರೆಗೆ ಮ್ಯಾಜಿಸ್ಟ್ರೇಟ್ ನು ವಿಧಿಸಿದ, ನಿರ್ಧರಿಸಿದ ಅಥವಾ ವಸೂಲು ಮಾಡಬಹುದಾದ ಯಾವುದೇ ಜುಲ್ಮಾನೆಯನ್ನು, ಖರ್ಚುಗಳನ್ನು, ತೆರಿಗೆಯನ್ನು ಅಥವಾ ಇತರ ಹಣದ ಮೊತ್ತವನ್ನು ಸಂದಾಯ ಮಾಡದಿದ್ದರೆ ಮ್ಯಾಜಿಸ್ಟ್ರೇಟ್ ನು, ಭಾರತ ದಂಡ ಸಂಹಿತೆಯ 64ನೇ ಮತ್ತು 70ನೇ ಪ್ರಕರಣಗಳಲ್ಲಿ (ಎರಡೂ ಸೇರಿದಂತೆ) ವಿಧಿಸಿದ ಎಲ್ಲಾ ನಿರ್ಬಂಧಗಳಿಗೆ, ಮಿತಿಗಳಿಗೆ ಮತ್ತು ಷರತ್ತುಗಳಿಗೊಳಪಟ್ಟು, ಸಂದಾಯ ಮಾಡಲು ತಪ್ಪಿದರೆ, ಅಪರಾಧಿಯನ್ನು ಕಾರಾವಾಸದಲ್ಲಿಡುವಂತೆ ಆದೇಶಿಸಬಹುದು.

(4) ಈ ಅಧಿನಿಯಮದ ಅಥವಾ ಅದರೆ ಮೇರೆಗೆ ರಚಿಸಿದ ಯಾವುದೇ ನಿಯಮದ ಅಥವಾ ಬೈಲಾದ ಮೇರೆಗೆ, ಮ್ಯಾಜಿಸ್ಟ್ರೇಟ್ ರು ವಿಧಿಸಿದ, ನಿರ್ಧರಿಸಿದ ಅಥವಾ ವಸೂಲು ಮಾಡಬಹುದಾದ ಯಾವುದೇ ಜುಲ್ಮಾನೆಯನ್ನು, ಖರ್ಚುಗಳನ್ನು, ತೆರಿಗೆಯನ್ನು ಅಥವಾ ಮೊತ್ತವನ್ನು ಅಂಥ ಮ್ಯಾಜಿಸ್ಟ್ರೇಟ್ ರು 1898ರ ದಂಡ ಪ್ರಕ್ರಿಯಾ ಸಂಹಿತೆಯ ಮೇರೆಗೆ (1898ರ ಕೇಂದ್ರ ಅಧಿನಿಯಮV) ವಿಧಿಸಿದ ಜುಲ್ಮಾನೆಯಾಗಿದ್ದಿದ್ದರೆ ಹೇಗೆ ವಸೂಲಿ ಮಾಡಬಹುದಾಗಿತ್ತೋ ಹಾಗೆಯೇ ವಸೂಲು ಮಾಡತಕ್ಕದ್ದು ಮತ್ತು ಅದನ್ನು ವಸೂಲು ಮಾಡಿದ ಮೇಲೆ ಮುನ್ಸಿಪಲ್ ಕೌನ್ಸಿಲ್ ಗೆ ಸಂದಾಯ ಮಾಡತಕ್ಕದ್ದು.

277. ಅಪರಾಧಗಳನ್ನು ರಾಜಿ ಮಾಡಿಕೊಳ್ಳಲು ಅಧಿಕಾರ.- (1) ಮುನ್ಸಿಪಲ್ ಕೌನ್ಸಿಲ್-

(ಎ) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಅಥವಾ ಬೈಲಾದ ಮೇರೆಗೆ ಯಾರೇ ವ್ಯಕ್ತಿಯು ದಂಡನೀಯವಾದ ಅಪರಾಧವನ್ನು ಮಾಡಿದ್ದಾನೆಂದು ಮುನ್ಸಿಪಲ್ ಕೌನ್ಸಿಲ್ ಅಭಿಪ್ರಾಯಪಟ್ಟರೆ ಆ ಯಾರೇ ವ್ಯಕ್ತಿಯೊಂದಿಗೆ ರಾಜಿ ಮಾಡಿಕೊಳ್ಳಬಹುದು ಮತ್ತು ಹಾಗೆ ರಾಜಿ ಮಾಡಿಕೊಂಡಾದ ಮೇಲೆ ಅಂಥ ಅಪರಾಧಕ್ಕೆ ಸಂಬಂಧಿಸಿದಂತೆ ಅಂಥ ವ್ಯಕ್ತಿಯ ವಿರುದ್ಧ ಯಾವುವೇ ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ;

(ಬಿ) ಡೆಪ್ಯುಟಿ ಕಮಿಷನರ್ ನಿಂದ ಮಂಜೂರಾತಿ ಪಡೆದು ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಅಥವಾ ಬೈಲಾದ ಮೇರೆಗೆ ಹೂಡಿದ ಪ್ರಾಸಿಕ್ಯೂಷನ್‌ಗಳನ್ನು ಹಿಂತೆಗೆದು ಕೊಳ್ಳಬಹುದು; ಮತ್ತು

(ಸಿ) ರಾಜಿ ಮಾಡಿಕೊಳ್ಳಬಹುದಾದಂಥವುಗಳೆಂದು ಸರ್ಕಾರವು ರಚಿಸಿದ ನಿಯಮಗಳಲ್ಲಿ ಘೋಷಿಸಿದಂಥ ಈ ಅಧಿನಿಯಮದ ವಿರುದ್ಧ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಅಥವಾ ಬೈಲಾದ ವಿರುದ್ಧದ ಯಾವುದೇ ಅಪರಾಧವನ್ನು ರಾಜಿ ಮಾಡಿಕೊಳ್ಳಬಹುದು:

ಪರಂತು, ಸರ್ಕಾರವು ಈ ಪ್ರಕರಣದ ಮೇರೆಗೆ ಅಪರಾಧಗಳನ್ನು ರಾಜಿಮಾಡಿಕೊಳ್ಳಲು ಯಾವ ವ್ಯಕ್ತಿಗಳಿಗೆ ಅಧಿಕಾರ ಕೊಡುವುದೋ ಆ ವ್ಯಕ್ತಿಗಳ ವ್ಯವಹರಣೆಯನ್ನು ನಿಯಂತ್ರಿಸಲು ನಿಯಮಗಳನ್ನ ರಚಿಸಬಹುದು:

ಮತ್ತು ಪರಂತು, ಮುನ್ಸಿಪಲ್ ಕೌನ್ಸಿಲ್ ಅಥವಾ ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ಇವರುಗಳು ಹೊರಡಿಸಿದ ಅಥವಾ ಇವರ ಪರವಾಗಿ ಹೊರಡಿಸಿದ ನೋಟೀಸನ್ನು, ಆದೇಶವನ್ನು ಅಥವಾ ಕಡ್ಡಾಯ ಕೋರಿಕೆಯನ್ನು ಸಾಧ್ಯವಿರುವಷ್ಟರಮಟ್ಟಿಗೆ ಅದನ್ನು ಪಾಲಿಸಿದ್ದ ಹೊರತು ಮತ್ತು ಪಾಲಿಸಿದ್ದ ತನಕ ಹೊರತು, ಅದನ್ನು ಪಾಲಿಸಲು ತಪ್ಪುವ ಮೂಲಕ ಮಾಡಿದಂಥ ಯಾವುದೇ ಅಪರಾಧವನ್ನು ರಾಜಿಮಾಡಿಕೊಳ್ಳತಕ್ಕದ್ದಲ್ಲ.

(2) ಅಪರಾಧವನ್ನು ರಾಜಿಮಾಡಿಕೊಂಡಿದ್ದರೆ ಅಪರಾಧಿಯನ್ನು ಬಿಡುಗಡೆ ಮಾಡತಕ್ಕದ್ದು ಮತ್ತು ಹಾಗೆ ರಾಜಿ ಮಾಡಿಕೊಂಡ ಅಪರಾಧಕ್ಕೆ ಸಂಬಂಧಿಸಿದಂತೆ ಅವನ ವಿರುದ್ಧ ಯಾವುವೇ ಹೆಚ್ಚಿನ ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

278. ಜಪ್ತಿ ಇತ್ಯಾದಿಗಾಗಿ ಕಾಲಪರಿಮಿತಿ.- ಈ ಅಧಿನಿಯಮದ ಮೇರೆಗೆ, ಮುನ್ಸಿಪಲ್ ಕೌನ್ಸಿಲ್ ಗೆ ಬಾಕಿಯಾಗುವ ಯಾವುದೇ ಮೊತ್ತಕ್ಕೆ ಸಂಬಂಧಿಸಿದಂತೆ ಯಾವುದೇ ಜಪ್ತಿಯನ್ನು ಅಥವಾ ಪ್ರಾಸಿಕ್ಯೂಷನ್ ನನ್ನು, ಅಂಥ ಮೊತ್ತಕ್ಕೆ ಸಂಬಂಧಿಸಿದಂತೆ ಸಂದರ್ಭಾನುಸಾರ ಅಂಥ ಜಪ್ತಿಯನ್ನು ಮಾಡಿರಬಹುದಾದಂಥ ಅಂಥ ಪ್ರಾಸಿಕ್ಯೂಷನ್ ನನ್ನು ಮೊದಲ ಬಾರಿಗೆ ಪ್ರಾರಂಭಿಸಬಹುದಾದಂಥ ದಿನಾಂಕದಿಂದ ಮೂರು ವರ್ಷಗಳ ಅವಧಿಯು ಮುಕ್ತಾಯವಾದ ತರುವಾಯ ಮಾಡತಕ್ಕದ್ದಲ್ಲ ಅಥವಾ ಪ್ರಾರಂಭಿಸತಕ್ಕದ್ದಲ್ಲ.

279. ನಮೂನೆಯಲ್ಲಿ ದೋಷವಿದ್ದಾಗ್ಯೂ ಜಫ್ತಿಯು ಕಾನೂನು ಸಮ್ಮತವಾದುದಾಗಿರುತ್ತದೆ.- ಈ ಅಧಿನಿಯಮದ ಬಲದಿಂದಾಗಿ ಮಾಡಿದ ಯಾವುದೇ ಜಫ್ತಿಯನ್ನು ಕಾನೂನುಬಾಹಿರವೆಂದು ಭಾವಿಸತಕ್ಕದ್ದಲ್ಲ, ಅಥವಾ ಅದಕ್ಕೆ ಸಂಬಂಧಪಟ್ಟ ಯಾವುದೇ ಸಮನುಗಳಲ್ಲಿ, ಅಪರಾಧ ನಿರ್ಣಯದಲ್ಲಿ ಅಥವಾ ಜಫ್ತಿಯ ವಾರೆಂಟ್‌ನಲ್ಲಿ ಅಥವಾ ಇತರ ವ್ಯವಹರಣೆಗಳಲ್ಲಿ ಯಾವುದೇ ದೋಷ ಇರುವುದರಿಂದಾಗಿ ಅಥವಾ ನಮೂನೆ ಇಲ್ಲದಿರುವುದರಿಂದಾಗಿ ಯಾರೇ ಪಕ್ಷಕಾರನನ್ನು ಅತಿಕ್ರಮ ಪ್ರವೇಶಕಾರನೆಂದು ಭಾವಿಸತಕ್ಕದ್ದಲ್ಲ ಅಥವಾ ಅಂಥ ಪಕ್ಷಕಾರನು ತರುವಾಯ ಮಾಡಿದ ಯಾವುದೇ ಕ್ರಮದೋಷದ ಕಾರಣದಿಂದ, ಪ್ರಾರಂಭದಿದಂದಲೇ ಅವನನ್ನು ಅತಿಕ್ರಮ ಪ್ರವೇಶಕಾರನೆಂದು ಭಾವಿಸತಕ್ಕದ್ದಲ್ಲ. ಆದರೆ, ಅಂಥ ಕ್ರಮದೋಷದಿಂದ ಬಾಧಿತರಾದ ಎಲ್ಲ ವ್ಯಕ್ತಿಗಳು, ಸಕ್ಷಮ ಅಧಿಕಾರವ್ಯಾಪ್ತಿಯುಳ್ಳ ಯಾವುದೇ ನ್ಯಾಯಾಲಯದಲ್ಲಿ ವಿಶೇಷ ಹಾನಿ ಪರಿಹಾರಕ್ಕಾಗಿ ಪೂರ್ಣ ಪರಿಹಾರವನ್ನು ಪಡೆಯಬಹುದು.

280. ಮುನ್ಸಿಪಲ್ ಸ್ವತ್ತಿಗೆ ಆದ ಹಾನಿಯನ್ನು ತುಂಬಿಕೊಡುವ ಬಗೆ.- ಯಾವುದೇ ಕಾರ್ಯದ ನಿರ್ಲಕ್ಷತೆಯ ಅಥವಾ ತಪ್ಪಿನ ಕಾರಣದಿಂದಾಗಿ, ಈ ಅಧಿನಿಯಮವು ಅಥವಾ ಈ ಅಧಿನಿಯಮದ ಮೇರೆಗೆ ವಿಧಿಸಿದ ಯಾವುದೇ ದಂಡನೆಗೆ ಯಾರೇ ವ್ಯಕ್ತಿಯು ಗುರಿಯಾಗಿರುವುದಾದರೆ, ಅಂಥ ವ್ಯಕ್ತಿಯು ಮುನ್ಸಿಪಲ್ ಕೌನ್ಸಿಲ್ ನ ಸ್ವತ್ತಿಗೆ ಯಾವುದೇ ಹಾನಿಯನ್ನು ಮಾಡಿರುವುದಾದರೆ, ಅವನು ಅಂಥ ಹಾನಿಯನ್ನು ತುಂಬಿಕೊಡಲು ಮತ್ತು ಅಂಥ ದಂಡವನ್ನು ಸಂದಾಯ ಮಾಡಲು ಗುರಿಯಾಗತಕ್ಕದ್ದು ಮತ್ತು ಹಾನಿಪರಿಹಾರದ ಮೊಬಲಗನ್ನು ಅದರ ಬಗ್ಗೆ ವಿವಾದವಿದ್ದ ಸಂದರ್ಭದಲ್ಲಿ ಅಂಥ ದಂಡನೆಗೆ ಗುರಿಯಾಗಿರುವ ವ್ಯಕ್ತಿಯನ್ನು ಅಪರಾಧಿಯೆಂದು ನಿರ್ಣಯಿಸಿದ ಮ್ಯಾಜಿಸ್ಟ್ರೇಟ್ ನು ನಿರ್ಧರಿಸತಕ್ಕದ್ದು ಮತ್ತು ತಗಾದೆ ಮಾಡಿದ್ದಾಗಲೂ ಅಂಥ ಹಾನಿಪರಿಹಾರವನ್ನು ಸಂದಾಯ ಮಾಡದಿದ್ದರೆ, ಅದನ್ನು ಜಫ್ತಿ ಮೂಲಕ ಸಂಗ್ರಹಿಸತಕ್ಕದ್ದು ಮತ್ತು ಅಂಥ ಮ್ಯಾಜಿಸ್ಟ್ರೇಟ್ ನು ತದನುಸಾರ ವಾರಂಟನ್ನು ಹೊರಡಿಸತಕ್ಕದ್ದು.

281. ದಾವೆಯ ಮೂಲಕ ಪರ್ಯಾಯ ಪ್ರಕ್ರಿಯೆ.- ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅನುಮತಿಸಿದ ವಸೂಲಿಯ ಯಾವುದೇ ಪ್ರಕ್ರಿಯೆಗೆ ಬದಲಾಗಿ ಅಥವಾ ಅಂಥ ಪ್ರಕ್ರಿಯೆಯಿಂದ VIIನೇ ಅಧ್ಯಾಯದ ಉಪಬಂಧಗಳ ಮೇರೆಗೆ ವಸೂಲಿ ಮಾಡಬಹುದಾದ ಯಾವುದೇ ಮೊಬಲಗಿನ ಇಡೀ ಹಣವನ್ನು ಅಥವಾ ಹಣದ ಯಾವುದೇ ಭಾಗವನ್ನು ಅಥವಾ ಈ ಅಧಿನಿಯಮದ ಮೇರೆಗೆ ಸಂದಾಯ ಮಾಡಬೇಕಾದ ಯಾವುದೇ ನಷ್ಟಪರಿಹಾರವನ್ನು, ವೆಚ್ಚಗಳನ್ನು, ಖರ್ಚುಗಳನ್ನು ಅಥವಾ ಹಾನಿಪರಿಹಾರವನ್ನು ಪಡೆದುಕೊಳ್ಳಲು ತಪ್ಪಿದ ಸಂದರ್ಭದಲ್ಲಿ, ಮುನ್ಸಿಪಲ್ ಕೌನ್ಸಿಲ್ ಗೆ, ಅದನ್ನು ಸಂದಾಯ ಮಾಡಲು ಗುರಿಯಾಗಿರುವ ವ್ಯಕ್ತಿಯ ಮೇಲೆ ಸಕ್ಷಮ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ನ್ಯಾಯಾಲಯದಲ್ಲಿ ದಾವೆ ಹೂಡುವುದು ಕಾನೂನುಸಮ್ಮತವಾಗಿರತಕ್ಕದ್ದು.

282. ರಾಜಿ ಮಾಡಿಕೊಳ್ಳುವ ಅಧಿಕಾರ ಇತ್ಯಾದಿ.- (1) ಮುನ್ಸಿಪಲ್ ಕೌನ್ಸಿಲ್, ತಾನು ಹೂಡಿದ ಅಥವಾ ತನ್ನ ವಿರುದ್ಧ ಹೂಡಿದ ಯಾವುದೇ ದಾವೆಗೆ ಸಂಬಂಧಿಸಿದಂತೆ ಅಥವಾ ಈ ಅಧಿನಿಯಮದ ಮೇರೆಗೆ ಅದು ಮಾಡಿಕೊಂಡ ಯಾವುದೇ ಕರಾರಿನಿಂದ ಉದ್ಭವಿಸುವ ಯಾವುದೇ ಕ್ಲೇಮಿಗೆ ಅಥವಾ ತಗಾದೆಗೆ ಸಂಬಂಧಿಸಿದಂತೆ, ಸಮರ್ಪಕವೆಂದು ಅದು ಭಾವಿಸುವ ಹಣದ ಅಥವಾ ಇತರ ನಷ್ಟಪರಿಹಾರಕ್ಕಾಗಿ ಒಡಂಬಡಿಕೆ ಅಥವಾ ರಾಜಿ ಮಾಡಿಕೊಳ್ಳಬಹುದು:

ಪರಂತು, ಯಾವುದೇ ಕರಾರನ್ನು ಮಾಡಿಕೊಳ್ಳಲು ಈ ಅಧಿನಿಯಮದ ಅನ್ವಯ ಯಾವುದೇ ಮಂಜೂರಾತಿಯ ಅಗತ್ಯವಿದ್ದರೆ, ಅಂಥ ಕರಾರಿನಿಂದ ಉದ್ಭವಿಸುವ ಯಾವುದೇ ಕ್ಲೇಮಿನ ಅಥವಾ ತಗಾದೆಯ ಬಗ್ಗೆ ಒಡಂಬಡಿಕೆ ಅಥವಾ ರಾಜಿ ಮಾಡಿಕೊಳ್ಳುವುದಕ್ಕೂ ಅದೇ ಬಗೆಯ ಮಂಜೂರಾತಿಯನ್ನು ಪಡೆದುಕೊಳ್ಳತಕ್ಕದ್ದು.

(2) ಮುನ್ಸಿಪಲ್ ಕೌನ್ಸಿಲ್ ಈ ಅಧಿನಿಯಮದ ಮೇರೆಗೆ ತನ್ನಲ್ಲಿ, ತನ್ನ ಅಧಿಕಾರಗಳಲ್ಲಿ ಮತ್ತು ನೌಕರರಲ್ಲಿ ನಿಹಿತವಾಗಿರುವ ಯಾವುದೇ ಅಧಿಕಾರವನ್ನು ಚಲಾಯಿಸುವ ಕಾರಣದಿಂದಾಗಿ ಯಾವುದೇ ಹಾನಿಗೆ ಒಳಗಾಗುವ ಯಾರೇ ವ್ಯಕ್ತಿಗೆ ಮುನ್ಸಿಪಲ್ ನಿಧಿಯಿಂದ ನಷ್ಟಪರಿಹಾರವನ್ನು ಕೊಡಬಹುದು.

(3) ಮುನ್ಸಿಪಲ್ ಕೌನ್ಸಿಲ್ ನ ಪರವಾಗಿ ನಡೆಸಿದ ಅಥವಾ ಪ್ರತಿವಾದ ಮಂಡಿಸಿದ ಯಾವುವೇ ಸಿವಿಲ್ ವ್ಯವಹರಣೆಗಳ ವೆಚ್ಚಗಳನ್ನು ಮುನ್ಸಿಪಲ್ ನಿಧಿಯಿಂದ ಸಂದಾಯ ಮಾಡತಕ್ಕದ್ದು.

283. ಸದ್ಭಾವನೆಯಿಂದ ಮಾಡಿದ ಕಾರ್ಯಗಳಿಗಾಗಿ [1][ಮುನ್ಸಿಪಲ್ ಏರಿಯಾ][1], ಅದರ ಅಧಿಕಾರಿಗಳು, ನೌಕರರು ಇತ್ಯಾದಿ ವಿರುದ್ಧ ದಾವೆಗಳ ಪ್ರತಿಷೇಧ.- ಈ ಅಧಿನಿಯಮದ

ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ಯಾವುವೇ ಮುನ್ಸಿಪಲ್ ಕೌನ್ಸಿಲ್ ವಿರುದ್ಧ ಅಥವಾ ಈ ಅಧಿನಿಯಮದ ಮೇರೆಗೆ ರಚಿಸಿದ ಯಾವುದೇ ಸಮಿತಿಯ ವಿರುದ್ಧ ಅಥವಾ ಮುನ್ಸಿಪಲ್ ಕೌನ್ಸಿಲ್ ನ ಯಾರೇ ಅಧಿಕಾರಿಯ ಅಥವಾ ನೌಕರರ ವಿರುದ್ಧ ಅಥವಾ ಯಾವುದೇ ಅಂಥ ಮುನ್ಸಿಪಲ್ ಕೌನ್ಸಿಲ್‌ನ ಸಮಿತಿಯ, ಅಧಿಕಾರಿಯ, ನೌಕರನ ಅಥವಾ ಮ್ಯಾಜಿಸ್ಟ್ರೇಟ್‌ನ ನಿರ್ದೇಶನಗಳ ಮೇರೆಗೆ ಮತ್ತು ಅದಕ್ಕನುಸಾರವಾಗಿ ಕಾರ್ಯ ನಿರ್ವಹಿಸುವ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆಯನ್ನು ಹೂಡತಕ್ಕದ್ದಲ್ಲ.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

284. ದಾವೆಗಳಿಗಾಗಿ ಪೂರ್ವಭಾವಿ ನೋಟೀಸ್ ನೀಡಿಕೆ.- (1) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮವನ್ನು ಅಥವಾ ಬೈಲಾವನ್ನು ಅನುಸರಿಸಿ ಮಾಡಿದ ಅಥವಾ ಮಾಡಿರುವುದಾಗಿ ತಾತ್ಪರ್ಯವಾಗುವ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ಯಾವುದೇ ಮುನ್ಸಿಪಲ್ ಕೌನ್ಸಿಲ್‌ನ ಅಧಿಕಾರಿಯು, ನೌಕರ ಅಥವಾ ಅಂಥ ಮುನ್ಸಿಪಲ್ ಅಧಿಕಾರಿಯ ಅಥವಾ ನೌಕರನ ಆದೇಶ ಅಥವಾ ನಿರ್ದೇಶನದ ಮೇರೆಗೆ ಕಾರ್ಯನಿರ್ವಹಿಸುವ ಯಾರೇ ವ್ಯಕ್ತಿಯ ವಿರುದ್ಧ ವ್ಯಾಜ್ಯ ಕಾರಣವನ್ನು ಕೋರಿದ ಪರಿಹಾರದ ಸ್ವರೂಪವನ್ನು ಕ್ಲೇಮು ಮಾಡಿದ ನಷ್ಟ ಪರಿಹಾರದ ಮೊಬಲಗನ್ನು, ಉದ್ದೇಶಿತ ವಾದಿಯ ಹೆಸರನ್ನು ಮತ್ತು ಸ್ಥಳವನ್ನು ಮತ್ತು ಅವನು ಕ್ಲೇಮು ಮಾಡುವಂಥ ಪರಿಹಾರವನ್ನು ನಿರೂಪಿಸಿ ಬರಹದಲ್ಲಿ ನೋಟೀಸ್ ನ್ನು ಮುನ್ಸಿಪಲ್ ಕೌನ್ಸಿಲ್ ನ ಸಂದರ್ಭದಲ್ಲಿ, ಅದೇ ಕಚೇರಿಯಲ್ಲಿ ತಲುಪಿಸಿದ ಅಥವಾ ಕೊಟ್ಟ ಮತ್ತು ಅಂಥ ಅಧಿಕಾರಿ, ನೌಕರ ಅಥವಾ ವ್ಯಕ್ತಿಯ ಸಂದರ್ಭದಲ್ಲಿ ಅವನಿಗೆ ತಲುಪಿಸಿದ ಅಥವಾ ಅವನ ಕಚೇರಿಯಲ್ಲಿ ಅಥವಾ ವಾಸಸ್ಥಳದಲ್ಲಿ ಕೊಟ್ಟ ತರುವಾಯದ ಮುಂದಿನ ಅರವತ್ತು ದಿವಸಗಳು ಮುಕ್ತಾಯವಾಗುವವರೆಗೆ ಮತ್ತು ಅಂಥ ನೋಟೀಸನ್ನು ಹಾಗೆ ತಲುಪಿಸಲಾಗಿದೆ ಅಥವಾ ಕೊಡಲಾಗಿದೆ ಎಂಬ ನಿರೂಪಣೆಯನ್ನು ವಾದಪತ್ರವು ಒಳಗೊಂಡಿರುವ ಹೊರತು ಯಾವುದೇ ದಾವೆಯನ್ನು ಹೂಡತಕ್ಕದ್ದಲ್ಲ.

(2) ಈ ಪ್ರಕರಣದಲ್ಲಿರುವುದಾವುದೂ, ಯಾವ ದಾವೆಯಲ್ಲಿ ನಿರ್ಬಂಧಕಾಜ್ಞೆಯ ಪರಿಹಾರವನ್ನು ಮಾತ್ರ ಕ್ಲೇಮು ಮಾಡಲಾಗಿದೆಯೋ ಆ ಪರಿಹಾರವನ್ನು ಮಾತ್ರ ನಿರ್ಬಂಧಕಾಜ್ಞೆಯಲ್ಲಿ ನೀಡಲಾಗಿದೆಯೋ ಅದರ ಉದ್ದೇಶವು ನೋಟೀಸನ್ನು ಕೊಟ್ಟರೆ ಅಥವಾ ದಾವೆ ಹೂಡುವುದನ್ನು ಮುಂದೂಡಿದರೆ ವಿಫಲವಾಗುತ್ತದೋ ಆ ಯಾವುದೇ ದಾವೆಗೆ ಅನ್ವಯವಾಗುತ್ತದೆಂದು ಭಾವಿಸತಕ್ಕದ್ದಲ್ಲ.

285. ಪೊಲೀಸ್ ಅಧಿಕಾರಿಗಳ ಅಧಿಕಾರ ಮತ್ತು ಕರ್ತವ್ಯಗಳು.- (1) ಈ ಅಧಿನಿಯಮದ ಅಥವಾ ಅದರ ಮೇರೆಗಿನ ಯಾವುದೇ ನಿಯಮ ಅಥವಾ ಬೈಲಾದ ಯಾವುದೇ ಉಪಬಂಧದ ವಿರುದ್ಧ ತನ್ನ ಕಣ್ಣೆದುರಿನಲ್ಲೇ ಯಾವುದೇ ಅಪರಾಧವನ್ನು ಮಾಡುವ ಯಾರೇ ವ್ಯಕ್ತಿಯನ್ನು, ಅಂಥ ವ್ಯಕ್ತಿಯ ಹೆಸರು ಮತ್ತು ವಿಳಾಸವು ಯಾರೇ ಪೊಲೀಸ್ ಅಧಿಕಾರಿಗೆ ತಿಳಿದಿರದಿದ್ದರೆ ಮತ್ತು ತಗಾದೆ ಮಾಡಿದ ಮೇಲೆಯೂ ಅಂಥ ವ್ಯಕ್ತಿಯು ತನ್ನ ಹೆಸರನ್ನು ಮತ್ತು ವಿಳಾಸವನ್ನು ಆ ಪೊಲೀಸ್ ಅಧಿಕಾರಿಗೆ ಕೊಡಲು ನಿರಾಕರಿಸಿದರೆ ಅಥವಾ ಆ ವ್ಯಕ್ತಿಯು ಕೊಡುವ ಹೆಸರು ಮತ್ತು ವಿಳಾಸವು ಸುಳ್ಳೆಂದು ಆ ಪೊಲೀಸ್ ಅಧಿಕಾರಿಯು ನಂಬಲು ಕಾರಣವಿದ್ದರೆ ಆ ವ್ಯಕ್ತಿಯನ್ನು ಆ ಯಾರೇ ಪೊಲೀಸ್ ಅಧಿಕಾರಿಯು ದಸ್ತಗಿರಿ ಮಾಡಬಹುದು.

(2) ಹಾಗೆ ದಸ್ತಗಿರಿಯಾದ ಯಾರೇ ವ್ಯಕ್ತಿಯನ್ನು, ಅವನ ನಿಜವಾದ ಹೆಸರನ್ನು ಮತ್ತು ವಿಳಾಸಗಳನ್ನು ಖಚಿತಪಡಿಸಿಕೊಂಡ ತರುವಾಯ ಅಥವಾ ಅತಿ ಹತ್ತಿರದಲ್ಲಿರುವ ಮ್ಯಾಜಿಸ್ಟ್ರೇಟ್ ನ ಆದೇಶವಿಲ್ಲದೆ ಅಂಥ ಮ್ಯಾಜಿಸ್ಟ್ರೇಟ್ ನ ನ್ಯಾಯಾಲಯಕ್ಕೆ ದಸ್ತಗಿರಿ ಮಾಡಿದ ಸ್ಥಳದಿಂದ ಪ್ರಯಾಣಕ್ಕೆ ಅವಶ್ಯವಾದ ಕಾಲವನ್ನು ಹೊರತುಪಡಿಸಿ ಅವನ ದಸ್ತಗಿರಿಯಾದ ಕಾಲದಿಂದ ಇಪ್ಪತ್ತುನಾಲ್ಕು ಗಂಟೆಗಳಿಗಿಂತ ಹೆಚ್ಚಾದ ಅವಧಿಗೆ ಸುಪರ್ದಿನಲ್ಲಿ ತಡೆಹಿಡಿದಿಟ್ಟಿರತಕ್ಕದ್ದಲ್ಲ.

(3) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಅಥವಾ ಬೈಲಾದ ಉಪಬಂಧಗಳ ವಿರುದ್ಧವಾಗಿ ಮಾಡಿರುವ ಅಥವಾ ಮಾಡಲು ಪ್ರಯತ್ನಿಸದ ಯಾವುದೇ ಅಪರಾಧದ ತಕ್ಷಣದ ಮಾಹಿತಿಯನ್ನು ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ಅಥವಾ ಇತರ ಸಮುಚಿತ ಮುನ್ಸಿಪಲ್ ಪ್ರಾಧಿಕಾರಿಗೆ ಕೊಡುವುದು ಮತ್ತು ಎಲ್ಲ ಮುನ್ಸಿಪಲ್ ಅಧಿಕಾರಿಗಳು

ಮತ್ತು ನೌಕರರು ಅವರ ಎಲ್ಲ ಕಾನೂನುಸಮ್ಮತ ಅಧಿಕಾರವನ್ನು ಚಲಾಯಿಸುವಾಗ ನೆರವಾಗುವುದು ಎಲ್ಲ ಪೊಲೀಸ್ ಅಧಿಕಾರಿಗಳ ಕರ್ತವ್ಯಗಳಾಗಿರತಕ್ಕದ್ದು.

ಅಧ್ಯಾಯ-XI
ಮುನ್ಸಿಪಲ್ ಲೆಕ್ಕಪತ್ರಗಳು ಮತ್ತು ಆಡಳಿತ ವರದಿಗಳು

286. ಬಜೆಟ್‌ನಲ್ಲಿ ಸೇರಿಸಿರದ ವೆಚ್ಚಕ್ಕೆ ನಿಷೇಧ.- ಇಲ್ಲಿ ಇನ್ನು ಮುಂದೆ ಹೇಳಿರುವಂತೆ ಹೊರತು, ಬಜೆಟ್ ಅನುದಾನದಲ್ಲಿ ಅದರ ವೆಚ್ಚಕ್ಕೆ ಅವಕಾಶ ಕಲ್ಪಿಸಿದ್ದ ಹೊರತು ಮುನ್ಸಿಪಲ್ ನಿಧಿಯಿಂದ ಯಾವುದೇ ಮೊತ್ತವನ್ನು ಸಂದಾಯ ಮಾಡತಕ್ಕದ್ದಲ್ಲ:

ಪರಂತು, ಕೆಳಕಂಡ ಬಾಬುಗಳಿಗೆ ಈ ನಿಷೇಧ ಅನ್ವಯವಾಗತಕ್ಕದ್ದಲ್ಲ ಅಂದರೆ:-

(ಎ) ಈ ಅಧಿನಿಯಮದಲ್ಲಿ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳಲ್ಲಿ ಯಾವ ತೆರಿಗೆಗಳ ಮರುಪಾವತಿಗೆ ಮತ್ತು ಇತರೆ ಹಣಗಳ ಮರು ಪಾವತಿಗೆ ಮುನ್ಸಿಪಲ್ ಕೌನ್ಸಿಲ್ ಅಧಿಕಾರ ಕೊಡಲಾಗಿದೆಯೋ ಆ ತೆರಿಗೆಗಳ ಮರುಪಾವತಿ ಮತ್ತು ಇತರ ಹಣಗಳ ಮರುಪಾವತಿ;

(ಬಿ) ಕಂಟ್ರಾಕ್ಟರ್ ಗಳಿಗೆ ಅಥವಾ ಇತರ ವ್ಯಕ್ತಿಗಳಿಗೆ ಸೇರಿದ, ಠೇವಣಿಯಲ್ಲಿಟ್ಟಿರುವ ಹಣವನ್ನು ಮತ್ತು ತಪ್ಪಿನಿಂದ ಮುನ್ಸಿಪಲ್ ನಿಧಿಗೆ ಸಂಗ್ರಹಿಸಿದ ಅಥವಾ ಜಮೆ ಮಾಡಿದ ಹಣದ ಮರುಸಂದಾಯಗಳು;

(ಸಿ) ಯಾವ ಮೊತ್ತಗಳನ್ನು ನಷ್ಟ ಪರಿಹಾರದ ರೂಪದಲ್ಲಿ ಸಂದಾಯ ಮಾಡಲು ಈ ಅಧಿನಿಯಮದ ಮೂಲಕ ಮುನ್ಸಿಪಲ್ ಕೌನ್ಸಿಲ್ ನ್ನು ಅಗತ್ಯಪಡಿಸಲಾಗಿದೆಯೋ ಅಥವಾ ಅಧಿಕಾರ ಕೊಡಲಾಗಿದೆಯೋ ಆ ಮೊತ್ತಗಳು;

(ಡಿ) ಈ ಕೆಳಕಂಡಂತೆ ವಿವರಿಸಿರುವ ಮೊತ್ತ ಎಂದರೆ,-

(i) ಡೆಪ್ಯುಟಿ ಕಮಿಷನರ್, ಅಥವಾ ಸರ್ಕಾರದ ಅಥವಾ [1][ಪೌರಾಡಳಿತ ನಿರ್ದೇಶಕ][1] ರ ಆದೇಶದ ಮೂಲಕ 307ನೇ, 317ನೇ ಪ್ರಕರಣಗಳ ಮೇರೆಗೆ ಮತ್ತು ಸರ್ಕಾರದ ಆದೇಶದ ಮೂಲಕ 310, 366 ಮತ್ತು 367ನೇ ಪ್ರಕರಣಗಳ ಮೇರೆಗೆ;

1. 2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ii) ಸಿವಿಲ್ ನ್ಯಾಯಾಲಯವು ಮುನ್ಸಿಪಲ್ ಕೌನ್ಸಿಲ್ ನ ವಿರುದ್ಧ ಮಾಡಿದ ಡಿಕ್ರಿಯ ಅಥವಾ ಆದೇಶದ ಮೇರೆಗೆ; ಮತ್ತು

(iii) ಯಾವುದೇ ದಾವೆಯಲ್ಲಿ ಅಥವಾ ಇತರ ಕಾನೂನು ವ್ಯವಹರಣೆಗಳಲ್ಲಿ ಅಥವಾ ಕ್ಲೇಮಿನ ಬಗ್ಗೆ ರಾಜಿ ಮಾಡಿಕೊಂಡಾಗ

- ಸಂದಾಯ ಮಾಡಬಹುದಾದ ಪ್ರತಿಯೊಂದು ಮೊತ್ತ;

(ಇ) 88ನೇ ಪ್ರಕರಣದ (ಎ) ಖಂಡದಿಂದ ಮತ್ತು 246ನೇ, 249ನೇ ಮತ್ತು 251ನೇ ಪ್ರಕರಣಗಳಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸುವಾಗ ವಹಿಸಿದ್ದ ವೆಚ್ಚಗಳು; ಮತ್ತು

(ಎಫ್) ಮುನ್ಸಿಪಲ್ ಕೌನ್ಸಿಲ್ ನ ಪರವಾಗಿ ಅಥವಾ ಮುನ್ಸಿಪಲ್ ಕೌನ್ಸಿಲ್ ಗಳ ಮತ್ತು ಯಾವುದೇ ಇತರ ಸ್ಥಳೀಯ ಪ್ರಾಧಿಕಾರದ ಅಥವಾ ಪ್ರಾಧಿಕಾರಗಳ ಪರವಾಗಿ ಸರ್ಕಾರವು ನಡೆಸುತ್ತಿರುವ ನೀರು ಸರಬರಾಜಿನ ಔಷಧಾಲಯಗಳ, ಶಾಲೆಗಳ ಮತ್ತು ಇತರ ಸಂಸ್ಥೆಗಳ ನಿರ್ವಹಣೆಗಾಗಿ ಸರ್ಕಾರಕ್ಕೆ ಮುನ್ಸಿಪಲ್ ಕೌನ್ಸಿಲ್ ನಿಂದ ಸಂದಾಯವಾಗಬೇಕಾದ ಎಲ್ಲಾ ವಂತಿಗೆಗಳು.

287. ಲೆಕ್ಕಪತ್ರಗಳ ಮಂಡನೆ.- (1) [1][ಚೀಫ್ ಆಫೀಸರ್ ಅಥವಾ ಮುನ್ಸಿಪಲ್ ಕಮಿಷನರ್, ಪ್ರತಿವರ್ಷ ಜನವರಿಯ 15ನೇ ದಿನದಂದು ಅಥವಾ ಅದಕ್ಕೂ ಮುಂಚಿತವಾಗಿ, ಮುಂದೆ ಬರುವ ಏಪ್ರಿಲ್ ಮೊದಲ ದಿನದಂದು ಪ್ರಾರಂಭವಾಗುವ ಮುಂಬರುವ ವರ್ಷಕ್ಕಾಗಿ ಮುನ್ಸಿಪಲ್ ಕೌನ್ಸಿಲ್ ನ ಆದಾಯ ಮತ್ತು ವೆಚ್ಚದ ವಿವರವಾದ ಅಂದಾಜುಗಳನ್ನೊಳಗೊಂಡ ಬಜೆಟ್ ನ್ನು, ಮುಂದೆ ಬರುವ ಮಾರ್ಚ್ ಮೂವತ್ತೊಂದನೇ ದಿನದಂದು ಮುಕ್ತಾಯವಾಗುವ ಸರ್ಕಾರಿ ವರ್ಷಕ್ಕಾಗಿ ವಾಸ್ತವಿಕ ಲೆಕ್ಕಪತ್ರ ಮತ್ತು ನಿರೀಕ್ಷಿತ ಜಮೆಗಳ ಮತ್ತು ವೆಚ್ಚಗಳ ಸಂಪೂರ್ಣ ಲೆಕ್ಕದೊಂದಿಗೆ ತಯಾರಿಸಿ ಮುನ್ಸಿಪಲ್ ಕೌನ್ಸಿಲ್ ಗೆ ಒಪ್ಪಿಸತಕ್ಕದ್ದು.][1]

1. 1996ರ ಅಧಿನಿಯಮ 34ರ ಮೂಲಕ 16.1.1967 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಮುನ್ಸಿಪಲ್ ಕೌನ್ಸಿಲ್, ಆ ತರುವಾಯ ಮುಂದೆ ಬರುವ ಏಪ್ರಿಲ್ ಮೊದಲನೇ ದಿನದಂದು ಪ್ರಾರಂಭವಾಗುವ ವರ್ಷದ ಬಜೆಟ್‌ನಲ್ಲಿ ಒಳಗೊಂಡಿರುವ ವಿನಿಯೋಗಗಳ ಬಗ್ಗೆ ಮತ್ತು ಆದಾಯ ಸಂವರ್ಧನೆ ವಿಧಾನಗಳ ಬಗ್ಗೆ ತೀರ್ಮಾನಿಸತಕ್ಕದ್ದು. ಮುನ್ಸಿಪಲ್ ಕೌನ್ಸಿಲ್ ಹಾಗೆ ಅಂಗೀಕರಿಸಿದ ಬಜೆಟ್‌ನ್ನು ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಅದರ ಪ್ರತಿಯನ್ನು ಏಕಕಾಲದಲ್ಲಿ [1][ಪೌರಾಡಳಿತ ನಿರ್ದೇಶಕರಿಗೆ][1] ಹಾಗೂ [2][ಟೌನ್ ಮುನ್ಸಿಪಲ್ ಏರಿಯಾ][2]ಗಳ ಸಂಬಂಧದಲ್ಲಿ, ಜಿಲ್ಲೆಯ ಡೆಪ್ಯುಟಿ ಕಮಿಷನರ್ ಗೂ ಸಹ ಮಾಹಿತಿಗಾಗಿ ಕಳುಹಿಸತಕ್ಕದ್ದು.

1. 2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ·

(3) ಅಂಥ ಬಜೆಟ್ ಅಂದಾಜಿನಲ್ಲಿ, ಮುನ್ಸಿಪಲ್ ಕೌನ್ಸಿಲ್ ಇತರ ವಿಷಯಗಳ ಜೊತೆಗೆ,-

(ಎ) ಈ ಅಧಿನಿಯಮದ ಅಥವಾ ಯಾವುದೇ ಇತರ ಕಾನೂನಿನ ಮೂಲಕ ಮುನ್ಸಿಪಲ್ ಕೌನ್ಸಿಲ್ ನ ಮೇಲೆ ವಿಧಿಸಿರುವ ಹಲವಾರು ಕರ್ತವ್ಯಗಳನ್ನು ಈಡೇರಿಸುವುದಕ್ಕಾಗಿ ಅಗತ್ಯಪಡಿಸಬಹುದಾದಂಥ ಸೇವೆಗಾಗಿ ಸಾಕಷ್ಟು ಮತ್ತು ಸೂಕ್ತ ವ್ಯವಸ್ಥೆಗಳನ್ನು ಮಾಡತಕ್ಕದ್ದು;

(ಬಿ) ಮುನ್ಸಿಪಲ್ ಕೌನ್ಸಿಲ್ ಮಾಡಿದ ಸಾಲಗಳಿಗೆ ಸಂಬಂಧಿಸಿದಂತೆ, ಅದು ಹೊಣೆಯಾಗಬಹುದಾದ ಅಸಲು ಮತ್ತು ಬಡ್ಡಿಯ ಎಲ್ಲಾ ಕಂತುಗಳು, ಅವು ಬಾಕಿಯಾದಂತೆಲ್ಲಾ ಸಂದಾಯಕ್ಕಾಗಿ ವ್ಯವಸ್ಥೆ ಮಾಡತಕ್ಕದ್ದು;

(ಸಿ) 366ನೇ, 367ನೇ ಪ್ರಕರಣಗಳ ಮೇರೆಗೆ ಸರ್ಕಾರಕ್ಕೆ ಸಂದಾಯವಾಗಬೇಕಾದ ಎಲ್ಲ ಮೊತ್ತಗಳ ಮತ್ತು ಮುನ್ಸಿಪಲ್ ಕೌನ್ಸಿಲ್ ಮತ್ತು ಯಾವುದೇ ಇತರ ಸ್ಥಳೀಯ ಪ್ರಾಧಿಕಾರ ಅಥವಾ ಪ್ರಾಧಿಕಾರಗಳ ಪರವಾಗಿ ಸರ್ಕಾರವು ನಡೆಸಿದ ನೀರು ಸರಬರಾಜಿನ, ಔಷಧಾಲಯಗಳ, ಶಾಲೆಗಳ ಮತ್ತು ಇತರ ಸಂಸ್ಥೆಗಳ ಅಥವಾ ಸೇವೆಗಳ ನಿರ್ವಹಣೆಗಾಗಿ ಎಲ್ಲಾ ವಂತಿಗೆಗಳ ಸಂದಾಯಕ್ಕಾಗಿ ವ್ಯವಸ್ಥೆ ಮಾಡತಕ್ಕದ್ದು; ಮತ್ತು

(ಡಿ) ಸದರಿ ವರ್ಷದ ಕೊನೆಯಲ್ಲಿ ಮೂರು ತಿಂಗಳ ಅವಧಿಗಾಗಿ ಸಿಬ್ಬಂದಿ ಖರ್ಚುಗಳನ್ನು ಭರಿಸಲು ಬೇಕಾಗಬಹುದಾದಂಥ ಮೊತ್ತಕ್ಕಿಂತ ಕಡಿಮೆಯಿಲ್ಲದ ಶಿಲ್ಕಿಗಾಗಿ ಅವಕಾಶ ಕಲ್ಪಿಸಿರತಕ್ಕದ್ದು.

(4) ಹಾಗೆ ಒಪ್ಪಿಸಿದ ಬಜೆಟ್‌ನಲ್ಲಿ, (3)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ವಿಷಯಗಳಿಗಾಗಿ ಸಾಕಷ್ಟು ವ್ಯವಸ್ಥೆ ಮಾಡಲು ಆಗದಿದ್ದರೆ, ಸರ್ಕಾರವು ಅಂಥ ವ್ಯವಸ್ಥೆಯನ್ನು ಮಾಡುವುದನ್ನು ಸುನಿಶ್ಚಿತಪಡಿಸಿಕೊಳ್ಳುವ ಹಾಗೆ ಬಜೆಟ್ ನ ಯಾವುದೇ ಭಾಗವನ್ನು ಮಾರ್ಪಾಟು ಮಾಡಬಹುದು.

(5) ಸರ್ಕಾರವು ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಯಾವುದೇ ಉಪಬಂಧದ ಅನುಪಾಲನೆ ಆಗಿರುವುದನ್ನು ಸುನಿಶ್ಚಿತಗೊಳಿಸುವ ಹಾಗೆ ಬಜೆಟ್ ನ್ನು ಅಥವಾ ಅದರ ಯಾವುವೇ ಭಾಗವನ್ನು ಸಹ ಮಾರ್ಪಾಟು ಮಾಡಬಹುದು:

ಪರಂತು, ಸಿಟಿ ಮುನ್ಸಿಪಲ್ ಕೌನ್ಸಿಲ್ ನ ಸಂಬಂಧದಲ್ಲಿ ಸ್ಥಾಯೀ ಸಮಿತಿಯು ಅಥವಾ ಈ ಅಧಿನಿಯಮದ ಮೇರೆಗೆ ನೇಮಕಗೊಂಡ ಯಾವುದೇ ಇತರ ಸಮಿತಿಯು, ಈ ಪ್ರಕರಣದ ಮೇರೆಗೆ ಮಂಜೂರು ಮಾಡಿರುವ ಬಜೆಟ್‌ನ ವ್ಯಾಪ್ತಿಯಲ್ಲಿ ಒಂದೇ ಪ್ರಧಾನ ಶೀರ್ಷಿಕೆಯ ಅಡಿಯಲ್ಲಿ ಮತ್ತು ಅದೇ ಸಮಿತಿಯ ನಿಯಂತ್ರಣದಲ್ಲಿರುವ ಒಂದು ಉಪಶೀರ್ಷಿಕೆಯಿಂದ ಇನ್ನೊಂದಕ್ಕೆ ಅಥವಾ ಒಂದು ಚಿಕ್ಕ ಶೀರ್ಷಿಕೆಯಿಂದ ಇನ್ನೊಂದು ಚಿಕ್ಕ ಶೀರ್ಷಿಕೆಗೆ ಐದುನೂರು ರೂಪಾಯಿಗಳಿಗೆ ಮೀರದಂತೆ ಮರು ವಿನಿಯೋಗಕ್ಕೆ ಮಂಜೂರು ಮಾಡಬಹುದು. ಅಂಥ ಮರು ವಿನಿಯೋಗದ ಒಂದು ವಿವರಣಪಟ್ಟಿಯನ್ನು ಪ್ರತಿ ತ್ರೈಮಾಸಿಕ ಸಾಮಾನ್ಯ ಸಭೆಯಲ್ಲಿ ಮುನ್ಸಿಪಲ್ ಕೌನ್ಸಿಲ್ ಗೆ ಒಪ್ಪಿಸತಕ್ಕದ್ದು.

288. ಬಜೆಟ್‌ನ ಪರಿಷ್ಕರಣೆ.-ಸರ್ಕಾರಿ ವರ್ಷದಲ್ಲಿ ಮುನ್ಸಿಪಲ್ ಕೌನ್ಸಿಲ್ ಗೆ, ಅದರ ಜಮೆಗಳ ಬಗ್ಗೆ ಅಥವಾ ಅದು ಕೈಗೊಳ್ಳುವ ವಿವಿಧ ಸೇವೆಗಳ ಮೇಲೆ ವೆಚ್ಚ ಮಾಡಬೇಕಾದ ಮೊಬಲಗುಗಳನ್ನು ಹಂಚಿಕೆ ಮಾಡುವುದರ ಬಗ್ಗೆ ಬಜೆಟ್‌ನಲ್ಲಿ ತೋರಿಸಿರುವ ಅಂಕಿಗಳನ್ನು ಮಾರ್ಪಾಟುಗೊಳಿಸುವುದು ಅವಶ್ಯವೆಂದು ಕಂಡುಬಂದರೆ, ಅದು ಹಾಗೆ ಮಾಡಬಹುದು:

ಪರಂತು ಸರ್ಕಾರದ ಅನುಮೋದನೆ ಇಲ್ಲದೆ,-

(ಎ) 287ನೇ ಪ್ರಕರಣದ (3)ನೇ ಉಪಪ್ರಕರಣದ (ಬಿ) ಮತ್ತು (ಸಿ) ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಹಲವಾರು ಬಾಬುಗಳಿಗೆ ಹಂಚಲಾದ ಮೊಬಲಗುಗಳಲ್ಲಿ ಯಾವುದೇ ಕಡಿತವನ್ನು ಮಾಡತಕ್ಕದ್ದಲ್ಲ; ಮತ್ತು

(ಬಿ) 287ನೇ ಪ್ರಕರಣದ (3)ನೇ ಉಪಪ್ರಕರಣದ (ಡಿ) ಖಂಡದ ಮೇರೆಗೆ ನಿಗದಿಪಡಿಸಿದ ಮೊತ್ತಕ್ಕಿಂತ ಕೊನೆಯ ಶಿಲ್ಕನ್ನು ಕಡಿಮೆ ಮಾಡತಕ್ಕದ್ದಲ್ಲ.

289. ಲೆಕ್ಕಪತ್ರಗಳ ನಿರ್ವಹಣೆ ಮತ್ತು ವೆಚ್ಚದ ಮೇಲೆ ನಿರ್ಬಂಧಗಳು.- (1) ಮುನ್ಸಿಪಲ್ ನಿಧಿಯ ಆದಾಯ ಮತ್ತು ವೆಚ್ಚದ ಲೆಕ್ಕಪತ್ರಗಳನ್ನು ಮತ್ತು ಮುನ್ಸಿಪಲ್ ನಿಧಿಗೆ ಅಂಗೀಕರಿಸಿದ ಜಮೆಗಳ ಮತ್ತು ಮುನ್ಸಿಪಲ್ ನಿಧಿಯಿಂದ ಸಂದಾಯ ಮಾಡಿರುವ ಬಗ್ಗೆ ಗೊತ್ತುಪಡಿಸಿದ ನಿಯಮಗಳಿಗನುಸಾರವಾಗಿ ಇಡತಕ್ಕದ್ದು.

(2) ಈ ಅಧಿನಿಯಮದಲ್ಲಿ ಸ್ಪಷ್ಟವಾಗಿ ಅನ್ಯಥಾ ಉಪಬಂಧಿಸಿದ್ದ ಹೊರತು, ಮುನ್ಸಿಪಲ್ ನಿಧಿಯಿಂದ ಮಾಡಿರುವ ವೆಚ್ಚವನ್ನು ಈ ಬಗ್ಗೆ ಗೊತ್ತುಪಡಿಸಿರುವ ನಿಯಮಗಳಲ್ಲಿ ವಿಧಿಸಿದ ನಿರ್ಬಂಧಗಳಿಗೆ, ಷರತ್ತುಗಳಿಗೆ ಮತ್ತು ಪರಿಮಿತಿಗಳಿಗೊಳಪಟ್ಟು ವಹಿಸತಕ್ಕದ್ದು.

(3) ಮುನ್ಸಿಪಲ್ ಕೌನ್ಸಿಲ್ ಏಪ್ರಿಲ್‌ನಲ್ಲಿ ನಡೆಯುವ ಸಾಮಾನ್ಯ ಸಭೆಯಲ್ಲಿ ಅಥವಾ ಕಳೆದ ಸರ್ಕಾರಿ ವರ್ಷದ ಲೆಕ್ಕಪತ್ರಗಳ ಲೆಕ್ಕ ಪರಿಶೋಧನೆಯಾದ ತರುವಾಯ, ಅಂಥ ಲೆಕ್ಕ ಪರಿಶೋಧನೆಯು ಸಾಮಾನ್ಯ ಸಭೆಗಿಂತ ಮುಂಚೆ ನಡೆಯದಿದ್ದರೆ, ಕಳೆದ ಸರ್ಕಾರಿ ವರ್ಷದ ಲೆಕ್ಕಪತ್ರಗಳನ್ನು ಅಂಗೀಕರಿಸತಕ್ಕದ್ದು.

290. ಲೆಕ್ಕಪತ್ರಗಳ ಲೆಕ್ಕಪರಿಶೋಧನೆ.- (1) ಮುನ್ಸಿಪಲ್ ಲೆಕ್ಕಪತ್ರಗಳು ಕಾಲಕಾಲಕ್ಕೆ ಮತ್ತು ಕನಿಷ್ಠಪಕ್ಷ ಪ್ರತಿ ವರ್ಷದಲ್ಲಿ ಒಂದು ಬಾರಿ ಸರ್ಕಾರದಿಂದ ನೇಮಕಗೊಂಡ ಲೆಕ್ಕಪರಿಶೋಧಕನಿಂದ ಪರಿಶೋಧನೆಯಾಗತಕ್ಕದ್ದು ಮತ್ತು ಮುನ್ಸಿಪಲ್ ಕೌನ್ಸಿಲ್ ನ ನಿಯಮಗಳಲ್ಲಿ ಗೊತ್ತುಪಡಿಸಬಹುದಾದಂತಹದ್ದು ಯಾವುದಾದರೂ ಇದ್ದರೆ, ಆ ಇತರ ಏಜೆನ್ಸಿಯ ಮೂಲಕ ಲೆಕ್ಕಪರಿಶೋಧನೆಯನ್ನು ಮಾಡಿಸತಕ್ಕದ್ದು;

[1][ಪರಂತು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿಗೊಳಪಟ್ಟು, ರಾಜ್ಯದಲ್ಲಿರುವ [2][ಎಲ್ಲಾ ಸಿಟಿ ಮುನ್ಸಿಪಲ್ ಕೌನ್ಸಿಲ್‌ಗಳು, ಟೌನ್ ಮುನ್ಸಿಪಲ್ ಕೌನ್ಸಿಲ್‌ಗಳು ಮತ್ತು ಪಟ್ಟಣ ಪಂಚಾಯಿತಿಗಳ ವರ್ಷವೊಂದರ ಲೆಕ್ಕಪರಿಶೋಧನೆಯು][2] ಭಾರತದ ನಿಯಂತ್ರಕರು ಮತ್ತು ಲೆಕ್ಕಪರಿಶೋಧಕರು ಪೂರಕ ಲೆಕ್ಕಪರಿಶೋಧನೆ ಮಾಡಿ ಮತ್ತು ವಾರ್ಷಿಕ ತಾಂತ್ರಿಕ ಹಾಗೂ ಪರಿಶೀಲನಾ ವರದಿ ಸಲ್ಲಿಸಿ ನೀಡುವ ತಾಂತ್ರಿಕ ಮಾರ್ಗದರ್ಶನಕ್ಕೆ ಮತ್ತು ಮೇಲ್ವಿಚಾರಣೆಗೊಳಪಟ್ಟಿರತಕ್ಕದ್ದು.][1]

1. 2011ರ ಅಧಿನಿಯಮ 24ರ ಮೂಲಕ 10.6.2011 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 2012ರ ಅಧಿನಿಯಮ 20ರ ಮೂಲಕ 14.03.2012 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಲೆಕ್ಕಪರಿಶೋಧಕರಿಗೆ ಅಥವಾ ಲೆಕ್ಕಪರಿಶೋಧಕರುಗಳಿಗೆ ಅವರ ಸ್ಥಾನ ಬಲದಿಂದಾಗಿ ಮುನ್ಸಿಪಲ್ ಕೌನ್ಸಿಲ್ ನ ಎಲ್ಲಾ ಲೆಕ್ಕಪತ್ರಗಳನ್ನು ಮತ್ತು ಇತರೆ ದಾಖಲೆಗಳನ್ನು ನೋಡಲು ಅವಕಾಶವಿರತಕ್ಕದ್ದು.

(3) ಲೆಕ್ಕಪರಿಶೋಧನಾ ಕಾರ್ಯಕ್ಕಾಗಿ ಪರಸ್ಪರ ಒಪ್ಪಿಕೊಳ್ಳಬಹುದಾದಂಥ ವೆಚ್ಚಗಳನ್ನು ಮತ್ತು ಸರ್ಕಾರಿ ಲೆಕ್ಕಪರಿಶೋಧಕನ ಸಂದರ್ಭದಲ್ಲಿ, ಸರ್ಕಾರವು ನಿಗದಿಪಡಿಸಬಹುದಾದಂಥ ವೆಚ್ಚಗಳನ್ನು ಮುನ್ಸಿಪಲ್ ಕೌನ್ಸಿಲ್ ಮುನ್ಸಿಪಲ್ ನಿಧಿಯಿಂದ ಸಂದಾಯ ಮಾಡತಕ್ಕದ್ದು.

291. ದಸ್ತಾವೇಜುಗಳನ್ನು ಹಾಜರುಪಡಿಸುವಂತೆ ಮತ್ತು ಸಂಬಂಧಪಟ್ಟ ವ್ಯಕ್ತಿಗಳು ಹಾಜರಾಗಬೇಕೆಂದು ಅಗತ್ಯಪಡಿಸಲು ಲೆಕ್ಕಪರಿಶೋಧಕನ ಅಧಿಕಾರ ಇತ್ಯಾದಿ.- (1) 290ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸರ್ಕಾರದಿಂದ ನೇಮಕಗೊಂಡ ಲೆಕ್ಕಪರಿಶೋಧಕನು,-

(ಎ) ಲೆಕ್ಕಪತ್ರಗಳಿಗೆ ಸಂಬಂಧಿಸಿದಂತೆ ಸೂಕ್ತವೆಂದು ತಾನು ಯೋಚಿಸುವಂಥ ಓಚರ್ ಗಳನ್ನು, ವಿವರಣೆಗಳನ್ನು, ವಿವರಪಟ್ಟಿಕೆಗಳನ್ನು, ಪತ್ರವ್ಯವಹಾರಗಳನ್ನು, ಟಿಪ್ಪಣಿಗಳನ್ನು ಅಥವಾ ಇತರ ದಸ್ತಾವೇಜುಗಳನ್ನು ಹಾಜರುಪಡಿಸಲು ಬರಹದಲ್ಲಿ ಅಗತ್ಯಪಡಿಸಬಹುದು;

(ಬಿ) ಮುನ್ಸಿಪಲ್ ಕೌನ್ಸಿಲ್ ನ ಅಂಥ ಓಚರ್ ಗಳ, ವಿವರಣೆಗಳ, ವಿವರ ಪಟ್ಟಿಕೆಗಳ, ಪತ್ರವ್ಯವಹಾರದ, ಟಿಪ್ಪಣಿಗಳ ಅಥವಾ ಇತರ ಯಾವುವೇ ದಸ್ತಾವೇಜುಗಳ ಅಥವಾ ಯಾವುದೇ

ಸ್ವತ್ತಿನ ಬಗ್ಗೆ ಜವಾಬ್ದಾರನಾಗಿರುವ ಅಥವಾ ಅವುಗಳನ್ನು ತನ್ನ ಸುಪರ್ದಿನಲ್ಲಿ ಇಟ್ಟುಕೊಂಡಿರುವ ಅಥವಾ ಅವುಗಳ ಮೇಲೆ ನಿಯಂತ್ರಣ ಹೊಂದಿರುವ ಮುನ್ಸಿಪಲ್ ಕೌನ್ಸಿಲ್ ನ ಯಾರೇ ಸಂಬಳ ಪಡೆಯುವ ನೌಕರನನ್ನು ಅಥವಾ ಮುನ್ಸಿಪಲ್ ಕೌನ್ಸಿಲ್ ನ ಅಥವಾ ಅದರ ಅಧೀನದಲ್ಲಿ ತಾನಾಗಲಿ ಅಥವಾ ತನ್ನ ಪಾಲುದಾರನ ಮೂಲಕವಾಗಿಯಾಗಲಿ ಯಾವುದೇ ಕರಾರಿನಲ್ಲಿ ಯಾವುದೇ ಷೇರನ್ನು ಅಥವಾ ಹಿತಾಸಕ್ತಿಯನ್ನು ಹೊಂದಿರುವ ಯಾರೇ ವ್ಯಕಿಯನ್ನು ಮುನ್ಸಿಪಲ್ ಕಚೇರಿಯಲ್ಲಿ ತನ್ನ ಮುಂದೆ ಖುದ್ದಾಗಿ ಹಾಜರಾಗಿ ಯಾವುದೇ ಪ್ರಶ್ನೆಗೆ ಉತ್ತರಿಸಲು ಬರಹದಲ್ಲಿ ಅಗತ್ಯಪಡಿಸಬಹುದು; ಮತ್ತು

(ಸಿ) ಮುನ್ಸಿಪಲ್ ಕೌನ್ಸಿಲ್ ನ ಅಧ್ಯಕ್ಷರಿಂದ ಅಥವಾ ಇತರ ಗೌರವ ಅಧಿಕಾರಿಯಿಂದ ಅಥವಾ ಸದಸ್ಯರಿಂದ ಬರಹದಲ್ಲಿ ವಿವರಣೆಯು ಅಗತ್ಯವಿರುವ ಸಂದರ್ಭದಲ್ಲಿ ಅಂಥ ವ್ಯಕ್ತಿಯನ್ನು, ತನ್ನನ್ನು ಮುನ್ಸಿಪಲ್ ಆಫೀಸ್ ನಲ್ಲಿ ಭೇಟಿಯಾಗಲು ಆಹ್ವಾನಿಸಬಹುದು ಮತ್ತು ಅವರ ವಿವರಣೆಯು ಅಗತ್ಯವಿರುವಂಥ ಅಂಶವನ್ನು ಬರಹದಲ್ಲಿ ನಿರ್ದಿಷ್ಟಪಡಿಸತಕ್ಕದ್ದು.

(2) ಲೆಕ್ಕಪರಿಶೋಧಕನು (1)ನೇ ಉಪಪ್ರಕರಣದ ಮೇರೆಗೆ ಮಾಡಿದ ಯಾವುದೇ ಕಡ್ಡಾಯ ಕೋರಿಕೆಯಲ್ಲಿ ಅಥವಾ ಆಹ್ವಾನದಲ್ಲಿ ಸದರಿ ಕಡ್ಡಾಯ ಕೋರಿಕೆಯನ್ನು ಅಥವಾ ಆಹ್ವಾನವನ್ನು ಪಾಲಿಸಲು ಮೂರು ದಿನಗಳಿಗೆ ಕಡಿಮೆ ಇಲ್ಲದ ಸಮಂಜಸ ಅವಧಿಯನ್ನು ನಿಗದಿಪಡಿಸಬಹುದು.

(3) ಲೆಕ್ಕಪರಿಶೋಧಕನು ಮುನ್ಸಿಪಲ್ ಕೌನ್ಸಿಲ್ ಗೆ ಲೆಕ್ಕ ಪರಿಶೋಧನೆಯನ್ನು ಪ್ರಾರಂಭಿಸಲು ತಾನು ಉದ್ದೇಶಪಡುವಂಥ ದಿನಾಂಕದ ಬಗ್ಗೆ ಬರಹದಲ್ಲಿ ನೋಟೀಸನ್ನು ಎರಡು ವಾರಕ್ಕೆ ಕಡಿಮೆಯಿಲ್ಲದ ಹಾಗೆ ಕೊಡತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ ಲೆಕ್ಕಪರಿಶೋಧಕನು, ಬರಹದಲ್ಲಿ ವಿಶೇಷ ಕಾರಣಗಳನ್ನು ದಾಖಲು ಮಾಡಿ ಎರಡು ವಾರಗಳಿಗಿಂತ ಕಡಿಮೆ ನೋಟೀಸನ್ನು ಕೊಡಬಹುದು ಅಥವಾ ನೋಟೀಸನ್ನು ಕೊಡದೆಯೇ [1][ಪೌರಾಡಳಿತ ನಿರ್ದೇಶಕ][1] ರು ಕೊಟ್ಟ ಅಧಿಕಾರದಂತೆ ವಿಶೇಷ ಅಥವಾ ವಿವರವಾದ ಲೆಕ್ಕ ಪರಿಶೋಧನೆಯನ್ನು ಪ್ರಾರಂಭಿಸಬಹುದು.

1. 2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

292. ಪ್ರಕರಣ 291ರ ಮೇರೆಗೆ ಕಡ್ಡಾಯ ಕೋರಿಕೆಯ ಉಲ್ಲಂಘನೆಗಾಗಿ ದಂಡ.- (1) ಯಾರೇ ವ್ಯಕ್ತಿಯು, 291ನೇ ಪ್ರಕರಣದ (1)ನೇ ಉಪಪ್ರಕರಣದ (ಎ), (ಬಿ) ಅಥವಾ (ಸಿ) ಖಂಡದ ಮೇರೆಗೆ ಅವನಿಗೆ ಕಾನೂನು ಬದ್ಧವಾಗಿ ಮಾಡಿಕೊಂಡಿದ್ದ ಯಾವುದೇ ಕಡ್ಡಾಯ ಕೋರಿಕೆಯನ್ನು ಪಾಲಿಸಲು ಬುದ್ಧಿಪೂರ್ವಕವಾಗಿ ನಿರ್ಲಕ್ಷಿಸಿದರೆ ಅಥವಾ ನಿರಾಕರಿಸಿದರೆ ಅವನು ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು:

ಪರಂತು, ಈ ಪ್ರಕರಣದ ಮೇರೆಗೆ ಯಾವುದೇ ವ್ಯವಹರಣೆಗಳನ್ನು [1][ಪೌರಾಡಳಿತ ನಿರ್ದೇಶಕ][1] ರಿಂದ ಬರಹದಲ್ಲಿ ಮಂಜೂರಾತಿಯ ಹೊರತು ಹೂಡತಕ್ಕದ್ದಲ್ಲ:

ಮತ್ತು ಪರಂತು, ಅಂಥ ಮಂಜೂರಾತಿಯನ್ನು ಕೊಡುವುದಕ್ಕೆ ಮುಂಚೆ, [1][ಪೌರಾಡಳಿತ ನಿರ್ದೇಶಕ][1]ನು ಯಾರ ಮೇಲೆ ವ್ಯವಹರಣೆಗಳನ್ನು ಹೂಡಬೇಕಾಗಿದೆಯೋ, ಆ ವ್ಯಕ್ತಿಯನ್ನು ಮಂಜೂರಾತಿಯನ್ನು ಏಕೆ ಕೊಡಬಾರದೆಂಬುದಕ್ಕೆ ಕಾರಣ ತೋರಿಸಲು ಕೋರತಕ್ಕದ್ದು.

1. 2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

293. ಸರ್ಕಾರವು ನಿರ್ದೇಶಿಸಬಹುದಾದಂತೆ ಕೆಲವು ಅಧಿಕಾರಿಗಳಿಗೆ ಮತ್ತು ನಿಕಾಯಗಳಿಗೆ ಲೆಕ್ಕಪರಿಶೋಧನಾ ವರದಿಯನ್ನು ಕಳಿಸತಕ್ಕದ್ದು.- ಲೆಕ್ಕಪರಿಶೋಧನೆಯು ಮುಕ್ತಾಯವಾದ ತರುವಾಯ ಸಾಧ್ಯವಾದಷ್ಟು ಬೇಗನೆ ಆದರೆ, ಆ ತರುವಾಯ ಮೂರು ತಿಂಗಳಿಗೆ ಮೀರದೆ, ಲೆಕ್ಕಪರಿಶೋಧಕನು ಪರಿಶೋಧಿಸಿದ ಮತ್ತು ಪರೀಕ್ಷಿಸಿದ ಲೆಕ್ಕಪತ್ರಗಳ ಮೇಲೆ ವರದಿಯನ್ನು ತಯಾರಿಸತಕ್ಕದ್ದು ಮತ್ತು ಅಂಥ ವರದಿಯನ್ನು ಸಂಬಂಧಿಸಿದ ಮುನ್ಸಿಪಲ್ ಕೌನ್ಸಿಲ್ ಗೆ ಮತ್ತು [1][ಪೌರಾಡಳಿತ ನಿರ್ದೇಶಕ][1]ನಿಗೆ ಮತ್ತು ರಾಜ್ಯ ಲೆಕ್ಕಪತ್ರಗಳ ಇಲಾಖೆಯ ಕಂಟ್ರೋಲರ್ ಗೆ ಕಳುಹಿಸತಕ್ಕದ್ದು.

1. 2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

294. ಲೆಕ್ಕಪರಿಶೋಧನಾ ವರದಿಯು ಒಳಗೊಂಡಿರಬೇಕಾದ ಅಂಶಗಳು.- ಲೆಕ್ಕಪರಿಶೋಧಕನು, ತನ್ನ ವರದಿಯಲ್ಲಿ,-

(ಎ) ಕಾನೂನಿಗೆ ತದ್ವಿರುದ್ಧವಾಗಿರುವುದಾಗಿ ಅವನಿಗೆ ಕಂಡುಬರುವಂಥ ಪ್ರತಿಯೊಂದು ಸಂದಾಯವನ್ನು;

(ಬಿ) ಯಾರೇ ವ್ಯಕ್ತಿಯ ಅತೀವ ನಿರ್ಲಕ್ಷತೆಯಿಂದ ಅಥವಾ ದುರ್ವರ್ತನೆಯಿಂದ ಉಂಟಾಗಿರಬಹುದೆಂದು ತೋರುವಂಥ ಯಾವುದೇ ಕೊರತೆ ಮೊತ್ತದ ಅಥವಾ ನಷ್ಟದ ಮೊಬಲಗನ್ನು;

(ಸಿ) ಯಾರೇ ವ್ಯಕ್ತಿಯು ಸ್ವೀಕರಿಸಲೇಬೇಕಾದ ಅಂದರೆ ಲೆಕ್ಕಕ್ಕೆ ತೆಗೆದುಕೊಳ್ಳದೆ ಇರುವ ಯಾವುದೇ ಮೊತ್ತದ ಮೊಬಲಗನ್ನು; ಮತ್ತು

(ಡಿ) ಮೇಲಿನ (ಎ), (ಬಿ) ಮತ್ತು (ಸಿ) ಖಂಡಗಳಲ್ಲಿ ನಮೂದಿಸಿರುವುದನ್ನು ಹೊರತುಪಡಿಸಿ ಲೆಕ್ಕಪತ್ರಗಳಲ್ಲಿ ಅವರು ಗಮನಿಸಬಹುದಾದ ಯಾವುದೇ ಮುಖ್ಯ ಅನುಚಿತತೆಯು ಅಥವಾ ಅಕ್ರಮತೆಯ ಬಗ್ಗೆ

- ವಿವರಣೆಯನ್ನು ಸೇರಿತಕ್ಕದ್ದು.

295. ಮುನ್ಸಿಪಲ್ ಕೌನ್ಸಿಲ್ ದೋಷವನ್ನು ಪರಿಹರಿಸಿಕೊಳ್ಳತಕ್ಕದ್ದು: 293ನೇ ಪ್ರಕರಣದ ಮೇರೆಗೆ ಲೆಕ್ಕಪರಿಶೋಧಕನ ವರದಿಯ ತರುವಾಯ ಅನುಸರಿಸಬೇಕಾದ ಪ್ರಕ್ರಿಯೆ.- (1) 293ನೇ ಪ್ರಕರಣದ ಮೇರೆಗೆ ವರದಿಯನ್ನು ಸ್ವೀಕರಿಸಿದ ಮೇಲೆ, ಮುನ್ಸಿಪಲ್ ಕಮಿಷನರ್ ನು ಅಥವಾ ಚೀಫ್ ಆಫೀಸರ್ ನು, ವರದಿಯಲ್ಲಿ ತೋರಿಸಬಹುದಾದಂಥ ಯಾವುವೇ ದೋಷಗಳನ್ನು ಅಥವಾ ಕ್ರಮ ದೋಷಗಳನ್ನು ಪರಿಹರಿಸಿಕೊಳ್ಳತಕ್ಕದ್ದು ಮತ್ತು ಆ ವರದಿಯನ್ನು ಸ್ವೀಕರಿಸಿದ ಎರಡು ತಿಂಗಳೊಳಗೆ ಅದರ ಮೇಲೆ ಕೈಗೊಂಡ ಅಥವಾ ಅದರ ಮೇಲೆ ಕೈಗೊಳ್ಳಬೇಕೆಂದು ಉದ್ದೇಶಿಸಿದ ಕ್ರಮದ ವಿವರಪತ್ರ ಹಾಗೂ ಅದರ ಬಗೆಗಿನ ವಿವರಣೆಯೊಂದಿಗೆ ಆ ವರದಿಯನ್ನು ಮುನ್ಸಿಪಲ್ ಕೌನ್ಸಿಲ್ ನ ಸಭೆಯ ಮುಂದಿಡತಕ್ಕದ್ದು. ಅವನು, ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗಾಗಿ, ವರದಿಯಲ್ಲಿ ಯಾವುವಾದರೂ ದೋಷಗಳನ್ನು ಅಥವಾ ಕ್ರಮದೋಷಗಳನ್ನು ತೋರಿಸಿದ್ದರೆ, ಅವುಗಳನ್ನು ಅವನು ಪರಿಹರಿಸಿಕೊಂಡಿರುವ ಬಗೆಗಿನ ಬಗ್ಗೆ ರಾಜ್ಯ ಲೆಕ್ಕಪತ್ರಗಳ ಇಲಾಖೆಯು ಕಂಟ್ರೋಲರ್ ನಿಗೂ ಸಹ ತಿಳಿಸತಕ್ಕದ್ದು ಅಥವಾ ಸದರಿ ಅವಧಿಯೊಳಗೆ ಆ ದೋಷಗಳ ಅಥವಾ ಕ್ರಮದೋಷಗಳ ಬಗ್ಗೆ ಹೆಚ್ಚಿನ ವಿವರಣೆಯನ್ನು ಮುನ್ಸಿಪಲ್ ಕೌನ್ಸಿಲ್ ಕೊಡಲು ಇಚ್ಛಿಸಿದರೆ, ರಾಜ್ಯ ಲೆಕ್ಕಪತ್ರಗಳ ಇಲಾಖೆಯ ಕಂಟ್ರೋಲರ್ ನಿಗೆ ವಿವರಣೆಯನ್ನು ಒದಗಿಸತಕ್ಕದ್ದು.

(2) ಅಂಥ ತಿಳಿವಳಿಕೆಯನ್ನು ಅಥವಾ ವಿವರಣೆಯನ್ನು ಸ್ವೀಕರಿಸಿದ ಮೇಲೆ, ರಾಜ್ಯ ಲೆಕ್ಕಪತ್ರಗಳ ಇಲಾಖೆಯ ಕಂಟ್ರೋಲರ್ ನು, ವರದಿಯಲ್ಲಿ ಚರ್ಚಿಸಿದ ಎಲ್ಲಾ ಅಥವಾ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ,-

(ಎ) ಮುನ್ಸಿಪಲ್ ಕಮಿಷನರ್ ನು ಅಥವಾ ಚೀಫ್ ಆಫೀಸರ್ ನು ಕೊಟ್ಟ ತಿಳಿವಳಿಕೆಯನ್ನು ಅಥವಾ ವಿವರಣೆಯನ್ನು ಅಂಗೀಕರಿಸಬಹುದು ಮತ್ತು ಆಕ್ಷೇಪಣೆಯನ್ನು ಹಿಂದಕ್ಕೆ ತೆಗೆದುಕೊಳ್ಳಬಹುದು; ಅಥವಾ

(ಬಿ) ಆ ವಿಷಯವನ್ನು ಮುಂದಿನ ಲೆಕ್ಕಪರಿಶೋಧನೆಯಲ್ಲಿ ಅಥವಾ ಯಾವುದೇ ಮುಂಚಿನ ದಿನದಂದು ಮರು ತನಿಖೆ ಮಾಡಬೇಕೆಂದು ನಿರ್ದೇಶಿಸಬಹುದು; ಅಥವಾ

(ಸಿ) ವರದಿಯಲ್ಲಿ ತೋರಿಸಿದ ದೋಷಗಳು ಅಥವಾ ಕ್ರಮದೋಷಗಳು ಅಥವಾ ಅವುಗಳಲ್ಲಿ ಯಾವುದನ್ನೇ ಆದರೂ ತೆಗೆದುಹಾಕಿಲ್ಲ ಅಥವಾ ಪರಿಹರಿಸಿಲ್ಲವೆಂದು ತೀರ್ಮಾನಿಸಬಹುದು.

(3) ಮುನ್ಸಿಪಲ್ ಕಮಿಷನರ್ ನು ಅಥವಾ ಚೀಫ್ ಆಫೀಸರ್ ನು ಕಳುಹಿಸಿದ (1)ನೇ ಉಪಪ್ರಕರಣದಲ್ಲಿ ಹೇಳಿರುವ ತಿಳಿವಳಿಕೆಯನ್ನು ಅಥವಾ ವಿವರಣೆಯನ್ನು ರಾಜ್ಯ ಲೆಕ್ಕಪತ್ರಗಳ ಇಲಾಖೆಯ ಕಂಟ್ರೋಲರ್ ನು ಸ್ವೀಕರಿಸಿದ ದಿನಾಂಕದಿಂದ ಒಂದು ತಿಂಗಳೊಳಗೆ ಅಥವಾ ಸದರಿ ಉಪಪ್ರಕರಣದಲ್ಲಿ ಹೇಳಿದ ಮೂರು ತಿಂಗಳುಗಳ ಅವಧಿಯು ಮುಕ್ತಾಯವಾದ ಮೇಲೆ ಅಂಥ ತಿಳಿವಳಿಕೆಯನ್ನು ಅಥವಾ ವಿವರಣೆಯನ್ನು ಕೊಡಲು ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನು ತಪ್ಪುವ ಸಂದರ್ಭದಲ್ಲಿ, [1][ಪೌರಾಡಳಿತ ನಿರ್ದೇಶಕ][1] ನಿಗೆ ರಾಜ್ಯ ಲೆಕ್ಕಪತ್ರಗಳ ಇಲಾಖೆಯ ಕಂಟ್ರೋಲರ್‌ನು ತನ್ನ ತೀರ್ಮಾನದ ವರದಿಯನ್ನು ಕಳುಹಿಸತಕ್ಕದ್ದು ಮತ್ತು ಅಂಥ ವರದಿಯ ಒಂದು ಪ್ರತಿಯನ್ನು ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನಿಗೆ ಕಳುಹಿಸತಕ್ಕದ್ದು. ರಾಜ್ಯ ಲೆಕ್ಕಪತ್ರಗಳ ಇಲಾಖೆಯ ಕಂಟ್ರೋಲರ್ ನು, ಯಾವುವೇ ದೋಷಗಳನ್ನು ಅಥವಾ ಕ್ರಮದೋಷಗಳನ್ನು ತೆಗೆದುಹಾಕಿಲ್ಲವೆಂದು ಅಥವಾ ಪರಿಹರಿಸಿಲ್ಲವೆಂದು ತೀರ್ಮಾನಿಸಿದ್ದರೆ,

ಅವರು ಅಭಿಪ್ರಾಯಪಟ್ಟರೆ ಎಂಬ ಬಗ್ಗೆ ದೋಷಗಳು ಅಥವಾ ಕ್ರಮದೋಷಗಳನ್ನು ಸರಿಪಡಿಸಿಕೊಳ್ಳಬಹುದು ಎಂಬ ಮತ್ತು ಸರಿಪಡಿಸಿಕೊಳ್ಳಬಹುದಾದರೆ ಯಾವ ವಿಧಾನದಿಂದ ಎಂಬ ಬಗ್ಗೆ ಮತ್ತು ಸಕ್ರಮಗೊಳಿಸಲಾಗದಿದ್ದರೆ ಅವುಗಳನ್ನು ಮನ್ನಾ ಮಾಡಬಹುದೇ ಎಂಬ ಬಗ್ಗೆ ಮತ್ತು ಮನ್ನಾ ಮಾಡುವುದಾದರೆ ಯಾವ ಪ್ರಾಧಿಕಾರಿಯಿಂದ ಎಂಬ ಬಗ್ಗೆ ಎಲ್ಲವನ್ನೂ ವರದಿಯಲ್ಲಿ ಹೇಳಬಹುದು. ದೋಷಗಳಿಗೆ ಅಥವಾ ಕ್ರಮದೋಷಗಳಿಗೆ ಯಾವ ಮೊಬಲಗುಗಳು ಸಂಬಂಧಪಟ್ಟಿವೆಯೋ ಆ ಮೊಬಲಗುಗಳನ್ನು ಅಭಿಪ್ರಾಯಪಟ್ಟರೆ ಅಧಿಭಾರವಾಗಿ ಅಥವಾ ಋಣಭಾರವಾಗಿ ಹೊರಿಸಬಹುದು ಎಂಬ ಬಗ್ಗೆ ಅದನ್ನೂ ಸಹ ಹೇಳತಕ್ಕದ್ದು.

1. 2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(4) ಆಯಾಯ ಮುನ್ಸಿಪಲ್ ಕೌನ್ಸಿಲ್, ತನ್ನ ಮುಂದಿನ ಆಡಳಿತ ವರದಿಯಲ್ಲಿ, (2)ನೇ ಉಪ-ಪ್ರಕರಣದ (ಸಿ) ಖಂಡದ ವ್ಯಾಪ್ತಿಗೊಳಪಡುವ ದೋಷಗಳ ಮತ್ತು ಕ್ರಮದೋಷಗಳ ಬಗ್ಗೆ 293ನೇ ಪ್ರಕರಣದ ಮೇರೆಗಿನ ವರದಿಯಲ್ಲಿ ಹೇಳಿರುವಂತಹ ಭಾಗಗಳು, (1)ನೇ ಉಪ-ಪ್ರಕರಣದ ಮೇರೆಗೆ ಅವುಗಳ ಬಗ್ಗೆ ವಿವರಣೆಯನ್ನೇನಾದರೂ ಕೊಟ್ಟಿದ್ದರೆ, ಅದರ ಸಹಿತ ಮತ್ತು (3)ನೇ ಉಪಪ್ರಕರಣದ ಮೇರೆಗೆ ಅವುಗಳ ಬಗ್ಗೆ ರಾಜ್ಯ ಲೆಕ್ಕ ಪತ್ರಗಳ ಇಲಾಖೆಯ ಕಂಟ್ರೋಲರ್ ರ ಅಂತಿಮ ವರದಿ ಒಳಗೊಂಡಿರತಕ್ಕದ್ದು.ಅಂಥ ದೋಷಗಳು ಮತ್ತು ಕ್ರಮದೋಷಗಳು ಮತ್ತು ವಿವರಣೆಯನ್ನೊಳಗೊಂಡಿರುವ ಅಂಥ ವರದಿಯು, ಅವುಗಳನ್ನು ಸ್ವೀಕರಿಸಿದ ದಿನಾಂಕದಿಂದ ಒಂದು ತಿಂಗಳ ಅವಧಿಯವರೆಗೆ ಮುನ್ಸಿಪಲ್ ಕೌನ್ಸಿಲ್ ನ ಕಚೇರಿಯಲ್ಲಿ ಸಾರ್ವಜನಿಕರ ಪರಿಶೀಲನೆಗಾಗಿ ಮುಕ್ತವಾಗಿರತಕ್ಕದ್ದು.

(5) ಈ ಪ್ರಕರಣದಲ್ಲಿರುವುದಾವುದೂ, ಯಾವುದೇ ರಾಜ್ಯ ಲೆಕ್ಕಪತ್ರಗಳ ಇಲಾಖೆಯ ಕಂಟ್ರೋಲರ್ ನು ಯಾವುದೇ ಕಾಲದಲ್ಲಿ ಯಾವ ಸಂಗತಿಯು ಕ್ರಿಮಿನಲ್ ದುರ್ವಿನಿಯೋಗ ಅಥವಾ ಮೋಸ ಆಗಿದೆಯೆಂದು ಭಾವಿಸುವುದಕ್ಕೆ ಆಧಾರ ಒದಗಿಸುವುದೆಂದು ತನಗೆ ಕಂಡು ಬರುತ್ತದೆಯೋ ಆ ಸಂಗತಿಯನ್ನು ಅಥವಾ ಆ ಸಂಗತಿಗೆ, ವಿಶೇಷ ಗಮನ ಅಥವಾ ತಕ್ಷಣ ತನಿಖೆ ಅವಶ್ಯಕವೆಂದು ಅಭಿಪ್ರಾಯಪಡುವನೋ ಆ ಯಾವುದೇ ಮಾಹಿತಿಯನ್ನು [1][ಪೌರಾಡಳಿತ ನಿರ್ದೇಶಕ][1]ನು ಅವಶ್ಯವೆಂದು ಪರಿಗಣಿಸಬಹುದಾದಂಥ ಕ್ರಮಕ್ಕಾಗಿ, [1][ಪೌರಾಡಳಿತ ನಿರ್ದೇಶಕ][1]ನಗಮನಕ್ಕೆ ತರುವುದನ್ನು ಅಡ್ಡಿಪಡಿಸತಕ್ಕದ್ದಲ್ಲ.

1. 2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[2][1][(6) ರಾಜ್ಯ ಲೆಕ್ಕಪತ್ರಗಳ ಇಲಾಖೆಯ ಕಂಟ್ರೋಲರ್ ನು, ಎಲ್ಲಾ ಸಿಟಿ ಮುನ್ಸಿಪಲ್ ಕೌನ್ಸಿಲ್‌ಗಳಿಗೆ, ಟೌನ್ ಮುನ್ಸಿಪಲ್ ಕೌನ್ಸಿಲ್‌ಗೆ ಹಾಗೂ ಪಟ್ಟಣ ಪಂಚಾಯಿತಿಗಳಿಗೆ ಸಂಬಂಧಿಸಿದ ಸಂಚಿತ ವಾರ್ಷಿಕ ಲೆಕ್ಕಪರಿಶೋಧನಾ ವರದಿಯನ್ನು, ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸುವುದಕ್ಕಾಗಿ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(7) ಭಾರತದ ಕಂಟ್ರೋಲರ್ ಹಾಗೂ ಮಹಾಲೆಕ್ಕಪರಿಶೋಧಕರು, 290ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ವಾರ್ಷಿಕ ತಾಂತ್ರಿಕ ಮತ್ತು ಪರಿಶೀಲನಾ ವರದಿಯನ್ನು ರಾಜ್ಯ ವಿಧಾನ ಮಂಡಲದ ಎರಡು ಸದನಗಳ ಮುಂದೆ ಮಂಡಿಸುವುದಕ್ಕಾಗಿ ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.][1]][2]

1. 2011ರ ಅಧಿನಿಯಮ 24ರ ಮೂಲಕ 10.6.2011 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 2012ರ ಅಧಿನಿಯಮ 20ರ ಮೂಲಕ 14.03.2012 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

296. ಅತೀವ ನಿರ್ಲಕ್ಷ್ಯತೆಯಿಂದ ಅಥವಾ ದುರ್ವರ್ತನೆಯಿಂದ ಉಂಟಾದ ಕಾನೂನುಬಾಹಿರ ಸಂದಾಯ ಅಥವಾ ನಷ್ಟಕ್ಕೆ [1][ಪೌರಾಡಳಿತ ನಿರ್ದೇಶಕ][1]ನು ಅಧಿಭಾರ ಅಥವಾ ಹೊಣೆ ಹೊರಿಸತಕ್ಕದ್ದು.- (1) [1][ಪೌರಾಡಳಿತ ನಿರ್ದೇಶಕ][1]ನು, ರಾಜ್ಯಲೆಕ್ಕಪತ್ರಗಳ ಇಲಾಖೆಯ ಕಂಟ್ರೋಲರ್ ನ ಶಿಫಾರಸ್ಸನ್ನು ಪರ್ಯಾಲೋಚಿಸಿದ ತರುವಾಯ ಮತ್ತು ಸಂಬಂಧಪಟ್ಟ ವ್ಯಕ್ತಿಯ ವಿವರಣೆಯನ್ನು ಪಡೆದುಕೊಂಡ ಅಥವಾ ತಾನು ಅವಶ್ಯವೆಂದು ಪರ್ಯಾಲೋಚಿಸಬಹುದಾದಂಥ ಹೆಚ್ಚಿನ ವಿಚಾರಣೆಯನ್ನು ಮಾಡಿದ ತರುವಾಯ, ಕಾನೂನಿಗೆ ತದ್ವಿರುದ್ಧವಾಗಿದೆಯೆಂದು ತನಗೆ ಕಂಡುಬರುವ ಯಾವುದೇ ಬಾಬನ್ನು ತಿರಸ್ಕರಿಸಬಹುದು ಮತ್ತು ಕಾನೂನುಬಾಹಿರ ಸಂದಾಯ ಮಾಡುವ ಅಥವಾ ಹಾಗೆ ಮಾಡುವುದನ್ನು ಅಧಿಕೃತಗೊಳಿಸುವ ವ್ಯಕ್ತಿಯ ಮೇಲೆ ಅದನ್ನು ಅಧಿಭಾರವಾಗಿ ಹೊರಿಸಬಹುದು, ಮತ್ತು ಆ ವ್ಯಕ್ತಿಯ ನಿರ್ಲಕ್ಷತೆಯಿಂದ ಅಥವಾ ದುರ್ನಡತೆಯಿಂದ ಉಂಟಾದ ಯಾವುದೇ ನ್ಯೂನತೆ ಅಥವಾ ನಷ್ಟದ ಮೊಬಲಗನ್ನು

ಅಥವಾ ಆ ವ್ಯಕ್ತಿಯು ಲೆಕ್ಕಕ್ಕೆ ತರಬೇಕಾಗಿದ್ದ ಆದರೆ ತಂದಿರದ ಅವನು ಸ್ವೀಕರಿಸಿದ ಮೊತ್ತಕ್ಕೆ, ಅದಕ್ಕೆ ಜವಾಬ್ದಾರನಾದ ಯಾರೇ ವ್ಯಕ್ತಿಯ ಮೇಲೆ ಹೊಣೆ ಹೊರಿಸಬಹುದು, ಮತ್ತು ಅಂಥ ಪ್ರತಿಯೊಂದು ಪ್ರಕರಣದಲ್ಲಿ, ಅಂಥ ವ್ಯಕ್ತಿಯು ಕೊಡಬೇಕಾದ ಮೊಬಲಗನ್ನು ಪ್ರಮಾಣೀಕರಿಸತಕ್ಕದ್ದು.

1. 2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) [1][ಪೌರಾಡಳಿತ ನಿರ್ದೇಶಕ][1] ನು, ಪ್ರತಿಯೊಂದು ಅಧಿಭಾರಕ್ಕೆ ಅಥವಾ ಚಾರ್ಜ್‌ಗೆ ಸಂಬಂಧಿಸಿದಂತೆ, ತನ್ನ ತೀರ್ಮಾನದ ಕಾರಣಗಳನ್ನು ಬರಹದಲ್ಲಿ ತಿಳಿಸತಕ್ಕದ್ದು ಮತ್ತು ಯಾರ ವಿರುದ್ಧವಾಗಿ ಅದನ್ನು ಮಾಡಲಾಗಿದೆಯೋ ಆ ವ್ಯಕ್ತಿಗೆ ಅದರ ಪ್ರತಿಯನ್ನು ನೋಂದಾಯಿತ ಅಂಚೆಯ ಮೂಲಕ ಕಳುಹಿಸತಕ್ಕದ್ದು.

1. 2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) ಉಪಪ್ರಕರಣ (2) ರ ಮೇರೆಗೆ [1][ಪೌರಾಡಳಿತ ನಿರ್ದೇಶಕನ][1] ತೀರ್ಮಾನದ ಪ್ರತಿಯನ್ನು ಯಾರಿಗೆ ಕಳಿಸಲಾಗಿದೆಯೋ ಆ ವ್ಯಕ್ತಿಯು, ಅದನ್ನು ತೆಗೆದುಕೊಳ್ಳಲು ನಿರಾಕರಿಸಿದರೆ, ಅವನು ಅದನ್ನು ನಿರಾಕರಿಸಿದಂಥ ದಿನದಂದು ಅದನ್ನು ಕ್ರಮಬದ್ಧವಾಗಿ ಸ್ವೀಕರಿಸಿರುವುದಾಗಿ ಭಾವಿಸತಕ್ಕದ್ದು.

1. 2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

297. ಅಧಿಭಾರಗಳನ್ನು ಮತ್ತು ಚಾರ್ಜ್‌ಗಳನ್ನು ವಸೂಲಿ ಮಾಡುವ ಬಗೆ.- (1) 296ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಯಾರೇ ವ್ಯಕ್ತಿಯಿಂದ ಬಾಕಿಯಿರುವುದಾಗಿ [1][ಪೌರಾಡಳಿತ ನಿರ್ದೇಶಕನು][1] ಪ್ರಮಾಣೀಕರಿಸಿದ ಪ್ರತಿಯೊಂದು ಮೊತ್ತವನ್ನು, [1][ಪೌರಾಡಳಿತ ನಿರ್ದೇಶಕನ][1] ತೀರ್ಮಾನವನ್ನು ಅವನು ಸ್ವೀಕರಿಸಿದಂದಿನಿಂದ ಒಂದು ತಿಂಗಳೊಳಗಾಗಿ, 298ನೇ ಪ್ರಕರಣದಲ್ಲಿ ಉಪಬಂಧಿಸಿರುವಂತೆ ಅಂಥ ವ್ಯಕ್ತಿಯು ನ್ಯಾಯಾಲಯ ಅಥವಾ ಸರ್ಕಾರಕ್ಕೆ ಆ ಕಾಲದೊಳಗೆ ಅರ್ಜಿ ಸಲ್ಲಿಸಿದ್ದ ಹೊರತು ಸಂಬಂಧಪಟ್ಟ ಮುನ್ಸಿಪಲ್ ಕೌನ್ಸಿಲ್ ನ ನಿಧಿಗಳನ್ನು ಇಟ್ಟುಕೊಂಡಿರುವಂಥ ಖಜಾನೆಗೆ ಅಥವಾ ಬ್ಯಾಂಕಿಗೆ, ಅಂಥ ವ್ಯಕ್ತಿಯು ಸಂದಾಯ ಮಾಡತಕ್ಕದ್ದು.

1. 2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಸದರಿ ಮೊತ್ತವನ್ನು ಕ್ರಮಬದ್ಧವಾಗಿ ಸಂದಾಯ ಮಾಡದಿದ್ದರೆ, 298ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಪಬಂಧಿಸಿರುವಂತೆ [1][ಪೌರಾಡಳಿತ ನಿರ್ದೇಶಕನ][1] ತೀರ್ಮಾನದ ವಿರುದ್ಧ ನ್ಯಾಯಾಲಯಕ್ಕೆ ಅಥವಾ ಸರ್ಕಾರಕ್ಕೆ ಅರ್ಜಿಯನ್ನು ಸಲ್ಲಿಸಿದ್ದರೆ, ನ್ಯಾಯಾಲಯ ಅಥವಾ ಸರ್ಕಾರವು ಬಾಕಿಯಾಗಿರುವುದಾಗಿ ಘೋಷಿಸತಕ್ಕಂಥ ಮೊತ್ತವು ನ್ಯಾಯಾಲಯಕ್ಕೆ ಡೆಪ್ಯುಟಿ ಕಮಿಷನರ್ ನು ಸಲ್ಲಿಸಿದ ಅರ್ಜಿಯ ಮೇಲೆ, ಡೆಪ್ಯುಟಿ ಕಮೀಷನರ್ ನ ಪರವಾಗಿ ನ್ಯಾಯಾಲಯವು ಡಿಕ್ರಿ ಮಾಡಿದ ಮೊಬಲಗಿನಂತಹುದೇ ರೀತಿಯಲ್ಲಿ ವಸೂಲೀಯವಾಗಿರತಕ್ಕದ್ದು.

1. 2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

298. ಅಧಿಭಾರ ಅಥವಾ ಚಾರ್ಜ್ ಆದೇಶದ ವಿರುದ್ಧ ಅರ್ಜಿ.- (1) 296ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ [1][ಪೌರಾಡಳಿತ ನಿರ್ದೇಶಕ][1] ನು ಮಾಡಿದ, ಅಧಿಭಾರದ ಅಥವಾ ಚಾರ್ಜ್‌ದ ಯಾವುದೇ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, [1][ಪೌರಾಡಳಿತ ನಿರ್ದೇಶಕ][1] ನ ತೀರ್ಮಾನವನ್ನು ಅವನು ಸ್ವೀಕರಿಸಿದಂದಿನಿಂದ ಒಂದು ತಿಂಗಳೊಳಗೆ,-

1. 2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಎ) ಅಂಥ ಆದೇಶವನ್ನು ತಳ್ಳಿಹಾಕುವಂತೆ ಕೋರಿ ಜಿಲ್ಲಾ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಬಹುದು ಮತ್ತು ನ್ಯಾಯಾಲಯವು ಅವಶ್ಯವೆಂದು ತಾನು ಭಾವಿಸುವಂಥ ಸಾಕ್ಷ್ಯವನ್ನು ತೆಗೆದುಕೊಂಡಲ್ಲಿ, ತರುವಾಯ ಅಂಥ ಅಧಿಭಾರ ಅಥವಾ ಚಾರ್ಜ್‌ನ್ನು ಸ್ಥಿರೀಕರಿಸಬಹುದು, ಮಾರ್ಪಾಟು ಮಾಡಬಹುದು ಅಥವಾ ಮಾಫಿ ಮಾಡಬಹುದು ಮತ್ತು ಚಾರ್ಜ್‌ಗಳ ಬಗ್ಗೆ ಆ ಸಂದರ್ಭಗಳಲ್ಲಿ ತಾನು ಸರಿಯೆಂದು ಭಾವಿಸುವಂಥ ಆದೇಶಗಳನ್ನು ಮಾಡಬಹುದು; ಅಥವಾ

(ಬಿ) ಅಂಥ ಅರ್ಜಿಗೆ ಬದಲಾಗಿ ಸರ್ಕಾರಕ್ಕೆ ಅರ್ಜಿಯನ್ನು ಸಲ್ಲಿಸಬಹುದು. ಅದು ಅದರ ಮೇಲೆ ತಾನು ಸೂಕ್ತವೆಂದು ಭಾವಿಸುವಂಥ ಆದೇಶಗಳನ್ನು ಮಾಡತಕ್ಕದ್ದು.

(2) ಅರ್ಜಿಯ ವಿಲೆಯು೦ ಇತ್ಯರ್ಥದಲ್ಲಿರುವಾಗ ಪ್ರಮಾಣಪತ್ರದ ಬಗೆಗಿನ ಎಲ್ಲ ವ್ಯವಹರಣೆಗಳನ್ನು, ತಡೆ ಆದೇಶವನ್ನು ಹೊರಡಿಸುವುದಕ್ಕಾಗಿ ಜಿಲ್ಲಾ ನ್ಯಾಯಾಲಯಕ್ಕೆ ಅಥವಾ

ಸರ್ಕಾರಕ್ಕೆ ಮನವರಿಕೆಯಾಗುವಂತೆ, ಬಾಧಿತನಾದ ವ್ಯಕ್ತಿಯು, ಆ ಪ್ರಕರಣವು ಮೇಲು ನೋಟಕ್ಕೆ ಸಮರ್ಥನೆ ಇರುವ ಪ್ರಕರಣವೆಂದು ತೋರಿಸಿ ಕೊಟ್ಟರೆ, ತಡೆಹಿಡಿಯತಕ್ಕದ್ದು.

299. ಲೆಕ್ಕಪರಿಶೋಧಕರ ಕಡ್ಡಾಯ ಕೋರಿಕೆಗೆ ಸಂಬಂಧಿಸಿದಂತೆ ವೆಚ್ಚಗಳನ್ನು ಮುನ್ಸಿಪಲ್ ನಿಧಿಯಿಂದ ಸಂದಾಯ ಮಾಡತಕ್ಕದ್ದು.- 291ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಲೆಕ್ಕಪರಿಶೋಧಕನ ಯಾವುದೇ ಕಡ್ಡಾಯ ಕೋರಿಕೆಯನ್ನು ಪಾಲಿಸುವಲ್ಲಿ ಮುನ್ಸಿಪಲ್ ಕೌನ್ಸಿಲ್‌ವಹಿಸಿದ ಎಲ್ಲಾ ವೆಚ್ಚಗಳನ್ನು ಮುನ್ಸಿಪಲ್ ನಿಧಿಯಿಂದ ಸಂದಾಯ ಮಾಡತಕ್ಕದ್ದು.

300. ಸರ್ಕಾರಕ್ಕೆ ಲೆಕ್ಕಪತ್ರಗಳನ್ನು ರವಾನಿಸುವುದು.- ಮುನ್ಸಿಪಲ್ ಕೌನ್ಸಿಲ್, ವಾರ್ಷಿಕ ಲೆಕ್ಕಪತ್ರಗಳನ್ನು ಅಂತಿಮವಾಗಿ ಅಂಗೀಕರಿಸಿದ ಕೂಡಲೇ, ಅದರ ಒಂದು ಪ್ರತಿಯನ್ನು ಅಥವಾ ಈ ಬಗ್ಗೆ ನಿಯಮಿಸಿದ ನಮೂನೆಯಲ್ಲಿ ಲೆಕ್ಕವನ್ನು ಸರ್ಕಾರಕ್ಕೆ ಅಥವಾ ಅದರಿಂದ ಈ ಬಗ್ಗೆ ವಿಧ್ಯುಕ್ತವಾಗಿ ಪ್ರಾಧಿಕೃತನಾದ ಯಾರೇ ಅಧಿಕಾರಿಗೆ ರವಾನಿಸತಕ್ಕದ್ದು ಮತ್ತು ಸಂಬಂಧಪಟ್ಟಂಥ ವಿವರಗಳನ್ನು ಮತ್ತು ಓಚರ್ ಗಳನ್ನು, ಸರ್ಕಾರವು ಅಥವಾ ಅಂಥ ಅಧಿಕಾರಿಯು ಕಾಲಕಾಲಕ್ಕೆ ನಿರ್ದೇಶಿಸುವಂತೆ ಒದಗಿಸತಕ್ಕದ್ದು.

301. ಲೆಕ್ಕಪತ್ರಗಳ ಪ್ರಕಟಣೆ.- ಸ್ವೀಕೃತಿಗಳ ಮತ್ತು ವೆಚ್ಚದ ತ್ರೈಮಾಸಿಕ ಮತ್ತು ವಾರ್ಷಿಕ ಲೆಕ್ಕಪತ್ರಗಳು ಹಾಗೂ ಮಂಜೂರಾದಾಗಿನ ಬಜೆಟ್ ಅಂದಾಜುಗಳು, ಸಾರ್ವಜನಿಕ ಪರಿಶೀಲನೆಗೆ ಮುಕ್ತವಾಗಿರತಕ್ಕದ್ದು. ಅವುಗಳನ್ನು ಈ ಬಗ್ಗೆ ನಿಯಮಿಸಬಹುದಾದಂಥ ರೀತಿಯಲ್ಲಿ ಪ್ರಕಟಿಸತಕ್ಕದ್ದು.

302. ವಾರ್ಷಿಕ ಆಡಳಿತ ವರದಿ.- (1) ಪ್ರತಿವರ್ಷ ಏಪ್ರಿಲ್ ತಿಂಗಳ ಮೊದಲನೇ ದಿನಾಂಕದ ತರುವಾಯ, ಆದಷ್ಟು ಬೇಗನೇ ಮತ್ತು ಸರ್ಕಾರದಿಂದ ನಿಗದಿಪಡಿಸಬಹುದಾದಂಥ ದಿನಾಂಕವನ್ನು ಮೀರದಂತೆ ಸರ್ಕಾರವು ನಿರ್ದೇಶಿಸುವಂಥ ನಮೂನೆಯಲ್ಲಿ ಮತ್ತು ಅಂಥ ವಿವರಗಳೊಂದಿಗೆ, ಹಿಂದಿನ ಸರ್ಕಾರಿ ವರ್ಷದ ಆಡಳಿತ ವರದಿಯನ್ನು, ಟೌನ್ ಮುನ್ಸಿಪಲ್ ಕೌನ್ಸಿಲ್, ಇದು [1][ಪೌರಾಡಳಿತ ಉಪ-ನಿರ್ದೇಶಕ][1]ನಿಗೆ ಮತ್ತು ಸಿಟಿ ಮುನ್ಸಿಪಲ್ ಕೌನ್ಸಿಲ್, ಇದು [1][ಪೌರಾಡಳಿತ ನಿರ್ದೇಶಕ][1]ನಿಗೆ ಹಾಗೂ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

1. 2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನು, ವರದಿಯನ್ನು ತಯಾರಿಸತಕ್ಕದ್ದು ಮತ್ತು ಅದನ್ನು ಪರ್ಯಾಲೋಚನೆಗಾಗಿ ಮುನ್ಸಿಪಲ್ ಕೌನ್ಸಿಲ್ ನ ಮುಂದೆ ಇಡತಕ್ಕದ್ದು ಮತ್ತು ಅದನ್ನು ಅದರ ಮೇಲಿನ ಮುನ್ಸಿಪಲ್ ಕೌನ್ಸಿಲ್ ನ ನಿರ್ಣಯದೊಂದಿಗೆ (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂತೆ ಡೆಪ್ಯುಟಿ ಕಮಿಷನರ್ ಗೆ, [1][ಪೌರಾಡಳಿತ ನಿರ್ದೇಶಕ][1] ನಿಗೆ ಮತ್ತು ಸರ್ಕಾರಕ್ಕೆ ಕಳುಹಿಸತಕ್ಕದ್ದು.

1. 2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) ವರದಿಯನ್ನು ಮುನ್ಸಿಪಲ್ ಕೌನ್ಸಿಲ್ ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಪ್ರಕಟಿಸಬಹುದು.

[1][**302ಎ. ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸುವುದು.-** (1) ಪ್ರತಿಯೊಂದು ಮುನ್ಸಿಪಲ್ ಕೌನ್ಸಿಲ್, ಪ್ರತಿವರ್ಷವೂ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ 310ನೇ ಪ್ರಕರಣದ ಅಡಿಯಲ್ಲಿ ರಚಿಸಿದ ಜಿಲ್ಲಾ ಯೋಜನಾ ಸಮಿತಿಗೆ ಅಥವಾ ಸಂದರ್ಭಾನುಸಾರವಾಗಿ, ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976ರ 503ಬಿ ಪ್ರಕರಣದ ಮೇರೆಗೆ ರಚಿಸಿದ ಮಹಾನಗರ ಯೋಜನಾ ಸಮಿತಿಗೆ ಸಲ್ಲಿಸತಕ್ಕದ್ದು.

302ಬಿ. ಹಣಕಾಸು ಆಯೋಗ.- (1) ಕರ್ನಾಟಕ ಪಂಚಾಯತ್ ರಾಜ್, 1993ರ 267ನೇ ಪ್ರಕರಣದ ಮೇರೆಗೆ ರಚಿಸಿದ ಹಣಕಾಸು ಆಯೋಗವು, ಮುನ್ಸಿಪಲ್ ಕೌನ್ಸಿಲ್‌ಗಳ ಹಾಗೂ ಪಟ್ಟಣ ಪಂಚಾಯಿತಿಗಳ ಹಣಕಾಸು ಪರಿಸ್ಥಿತಿಗಳನ್ನು ಸಹ ಪರಾಮರ್ಶಿಸತಕ್ಕದ್ದು ಮತ್ತು

(ಎ) ಈ ಮುಂದಿನವುಗಳಿಗೆ ಸಂಬಂಧಪಡುವ ಎಂದರೆ,-

(i) ರಾಜ್ಯ ಮತ್ತು ಮುನ್ಸಿಪಲ್ ಕೌನ್ಸಿಲ್ ಹಾಗೂ ಪಂಚಾಯಿತಿಗಳ ನಡುವೆ ಹಂಚಬಹುದಾದಂಥ ರಾಜ್ಯಸರ್ಕಾರವು ವಿಧಿಸಬಹುದಾದ ತೆರಿಗೆಗಳು, ಫೀಜುಗಳು, ದಾರಿ ಸುಂಕಗಳು ಮತ್ತು ಫೀಜುಗಳ ನಿವ್ವಳ ಉತ್ಪತ್ತಿಗಳನ್ನು ಅವುಗಳಿಗೆ ವಿತರಣೆ ಮಾಡಲು ಮತ್ತು ಅಂಥ ಉತ್ಪತ್ತಿಗಳಲ್ಲಿ ಆಯಾ ಮುನ್ಸಿಪಲ್ ಕೌನ್ಸಿಲ್‌ಗಳು

ಹಾಗೂ ಪಟ್ಟಣ ಪಂಚಾಯಿತಿಗಳು ಹೊಂದಿರುವ ಪಾಲುಗಳನ್ನು ಅವುಗಳಿಗೆ ವಿತರಣೆ ಮಾಡುವ ಬಗ್ಗೆ;

(ii) ಮುನ್ಸಿಪಲ್ ಕೌನ್ಸಿಲ್‌ಗಳಿಗೆ ಮತ್ತು ಪಟ್ಟಣ ಪಂಚಾಯಿತಿಗಳಿಗೆ ಹಸ್ತಾಂತರಿಸಬಹುದಾದ ಅಥವಾ ಅವು ವಿನಿಯೋಗಿಸಬಹುದಾದ ತೆರಿಗೆಗಳನ್ನು, ಸುಂಕಗಳನ್ನು, ದಾರಿ ಸುಂಕವನ್ನು (ಟೋಲ್), ಫೀಜುಗಳನ್ನು ನಿರ್ಧರಿಸುವ ಬಗ್ಗೆ;

(iii) ರಾಜ್ಯದ ಸಂಚಿತ ನಿಧಿಯಿಂದ ಮುನ್ಸಿಪಲ್ ಕೌನ್ಸಿಲ್‌ಗಳಿಗೆ ಮತ್ತು ಪಟ್ಟಣ ಪಂಚಾಯಿತಿಗಳಿಗೆ ಸಹಾಯಾನುದಾನ ನೀಡುವ ಬಗ್ಗೆ;

(ಬಿ) ಮುನ್ಸಿಪಲ್ ಕೌನ್ಸಿಲ್‌ಗಳ ಮತ್ತು ಪಟ್ಟಣ ಪಂಚಾಯಿತಿಗಳ ಹಣಕಾಸು ಪರಿಸ್ಥಿತಿಯನ್ನು ಸುಧಾರಿಸಲು ಅವಶ್ಯಕವಾದ ಕ್ರಮಗಳ ಬಗ್ಗೆ;

(ಸಿ) ಮುನ್ಸಿಪಲ್ ಕೌನ್ಸಿಲ್‌ಗಳ ಹಾಗೂ ಪಟ್ಟಣ ಪಂಚಾಯಿತಿಗಳ ಸುಭದ್ರ ಹಣಕಾಸು ಸ್ಥಿತಿಯ ಹಿತಾಸಕ್ತಿಯಿಂದ ರಾಜ್ಯಪಾಲರು ಹಣಕಾಸು ಆಯೋಗಕ್ಕೆ ಉಲ್ಲೇಖಿಸಿರುವ ಯಾವುದೇ ಇತರ ವಿಷಯದ ಬಗ್ಗೆ;

- ತತ್ವಗಳನ್ನು ರಾಜ್ಯಪಾಲರಿಗೆ ಶಿಫಾರಸು ಮಾಡತಕ್ಕದ್ದು.

(2) ರಾಜ್ಯಪಾಲರು ಈ ಪ್ರಕರಣದ ಮೇರೆಗೆ ಆಯೋಗವು ಮಾಡಿದ ಪ್ರತಿಯೊಂದು ಶಿಫಾರಸ್ಸನ್ನು ಅದರ ಮೇಲೆ ತೆಗೆದುಕೊಳ್ಳಲಾದ ಕ್ರಮವನ್ನು ಕುರಿತು ವಿವರಣಾತ್ಮಕ ಜ್ಞಾಪನಪತ್ರದೊಂದಿಗೆ ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದಿಡುವಂತೆ ಮಾಡತಕ್ಕದ್ದು.][1]

1. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ 302ಎ ಮತ್ತು 302ಬಿ ಪ್ರಕರಣಗಳನ್ನು ಸೇರಿಸಲಾಗಿದೆ.

ಅಧ್ಯಾಯ-XII
ನಿಯಂತ್ರಣ

303. ಮುಖ್ಯ ನಿಯಂತ್ರಣ ಪ್ರಾಧಿಕಾರಿ.-[1][ಪೌರಾಡಳಿತ ನಿರ್ದೇಶಕ][1] ನು ಸರ್ಕಾರದ ನಿಯಂತ್ರಣ ಮತ್ತು ಆದೇಶಗಳಿಗೊಳಪಟ್ಟು ಈ ಅಧಿನಿಯಮದ ಆಡಳಿತಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳಿಗೆ ಸಂಬಂಧಿಸಿದಂತೆ, ಮುಖ್ಯ ನಿಯಂತ್ರಣ ಪ್ರಾಧಿಕಾರಿಯಾಗಿರತಕ್ಕದ್ದು ಮತ್ತು ಆ ಉದ್ದೇಶಕ್ಕಾಗಿ ಆ ಬಗ್ಗೆ ಅವಶ್ಯವಾದ ಎಲ್ಲ ಅಧಿಕಾರಗಳನ್ನು ಚಲಾಯಿಸಬಹುದು.

1. 2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

304. ಪರಿವೀಕ್ಷಣೆ ಮತ್ತು ಮೇಲ್ವಿಚಾರಣೆಯ ಅಧಿಕಾರ.- [1][ಪೌರಾಡಳಿತ ನಿರ್ದೇಶಕ][1] ನು, ಡೆಪ್ಯುಟಿ ಕಮಿಷನರ್ ನು, ಅಥವಾ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಸರ್ಕಾರವು ಅಧಿಕೃತಗೊಳಿಸಿದ ಯಾರೇ ಸರ್ಕಾರಿ ಅಧಿಕಾರಿಯು,-

(ಎ) ಯಾವುದೇ ಮುನ್ಸಿಪಲ್ ಕೌನ್ಸಿಲ್ ಅಥವಾ ಅದರ ನಿಯಂತ್ರಣ ಅಥವಾ ಅದರ ಆಡಳಿತಕ್ಕೊಳಪಟ್ಟಿರುವ ಯಾವುದೇ ಸಂಸ್ಥೆಯ ಸ್ವಾಧೀನದಲ್ಲಿರುವ ಯಾವುದೇ ಸ್ಥಿರ ಸ್ವತ್ತಿಗೆ ಅಥವಾ ಅದರ ಅಧೀನದಲ್ಲಿ ಅಥವಾ ಅದರ ನಿರ್ದೇಶನದಲ್ಲಿ ನಡೆಯುತ್ತಿರುವ ಯಾವುದೇ ಕಾಮಗಾರಿಗೆ ಸಂಬಂಧಿಸಿದಂತೆ ಅಲ್ಲಿ ಪ್ರವೇಶಿಸಲು ಮತ್ತು ಪರಿಶೀಲಿಸಲು ಅಥವಾ ಪ್ರವೇಶಿಸುವಂತೆ ಮತ್ತು ಪರಿಶೀಲಿಸುವಂತೆ ಮಾಡಲು;

(ಬಿ) ಯಾವುದೇ ಮುನ್ಸಿಪಲ್ ಕೌನ್ಸಿಲ್ ಅಥವಾ ಯಾವುದೇ ಸಮಿತಿಯ 'ನಡೆವಳಿಗಳಿಂದ ಯಾವುದೇ ಉದ್ಧೃತಿಯನ್ನು ಅಥವಾ ಮುನ್ಸಿಪಲ್ ಕೌನ್ಸಿಲ್ ನ ಸ್ವಾಧೀನದಲ್ಲಿ ಅಥವಾ ಅದರ ನಿಯಂತ್ರಣದಲ್ಲಿರುವ ಯಾವುದೇ ಪುಸ್ತಕ ಅಥವಾ ದಸ್ತಾವೇಜನ್ನು ಒದಗಿಸುವಂತೆ ಅಂಥ ಮುನ್ಸಿಪಲ್ ಕೌನ್ಸಿಲ್ ನ್ನು ಅಗತ್ಯಪಡಿಸಲು, ಹಾಗೂ ಅವನು ಸೂಕ್ತವೆಂದು ಯೋಚಿಸಬಹುದಾದಂಥ ಯಾವುದೇ ವಿವರಪಟ್ಟಿಕೆ, ಹೇಳಿಕೆ, ಲೆಕ್ಕ ಅಥವಾ ವರದಿಗಳನ್ನು ಕೇಳಲು;

(ಸಿ) 291ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಲೆಕ್ಕಪರಿಶೋಧಕನು ಅಗತ್ಯಪಡಿಸತಕ್ಕಂಥ ಯಾವುದೇ ಮಾಹಿತಿಯನ್ನು ಅಥವಾ ವಿವರಣೆಯನ್ನು ಅಗತ್ಯಪಡಿಸಲು;

(ಡಿ) ಅಂಥ ಮುನ್ಸಿಪಲ್ ಕೌನ್ಸಿಲ್ ಮಾಡಬೇಕೆಂದಿರುವ ಅಥವಾ ಮಾಡಲಾಗುತ್ತಿರುವ ಕಾರ್ಯದಲ್ಲಿಯಾವುದೇ ಆಕ್ಷೇಪಣೆ ಇದೆಯೆಂದು ಅವನಿಗೆ ಕಂಡುಬರುವ ಯಾವುದನ್ನೇ ಮಾಡಬೇಕಾಗಿದೆ ಎಂದು ಅಥವಾ ಅವನು ಒದಗಿಸಲು ಶಕ್ತನಾಗಿರುವ ಮತ್ತು ಮುನ್ಸಿಪಲ್ ಕೌನ್ಸಿಲ್ ಯಾವುದನ್ನಾದರೂ ಮಾಡಬೇಕೆಂದು ಅಗತ್ಯಪಡಿಸುವುದಕ್ಕಾಗಿ ಅವನಿಗೆ ಕಂಡುಬರುವ ಯಾವುದೇ

ಮಾಹಿತಿಯನ್ನು, ಪರಿಗಣನೆಗೆ ತೆಗೆದುಕೊಳ್ಳಲು, ಮತ್ತು ಅದನ್ನು ಮಾಡುವುದರಿಂದ ವಿಮುಖವಾಗದಿರುವುದಕ್ಕಾಗಿ ಅಥವಾ ಮಾಡದೆ ಇರುವುದಕ್ಕಾಗಿ, ಕಾರಣಗಳನ್ನು ನಿರೂಪಿಸಿ ಸೂಕ್ತ ಕಾಲದೊಳಗೆ ಅವನಿಗೆ ಬರಹದಲ್ಲಿ ಉತ್ತರಿಸಲು ಮುನ್ಸಿಪಲ್ ಕೌನ್ಸಿಲ್ ನ್ನು ಅಗತ್ಯಪಡಿಸಲು
- ಅಧಿಕಾರವನ್ನು ಹೊಂದಿರತಕ್ಕದ್ದು.

305. ಮುನ್ಸಿಪಲ್ ಕೌನ್ಸಿಲ್ ನ ಕಚೇರಿಯನ್ನು ಪರಿಶೀಲಿಸಲು ಅಧಿಕಾರ.- (1) [1][ಪೌರಾಡಳಿತ ನಿರ್ದೇಶಕ][1] ನು, ಡೆಪ್ಯುಟಿ ಕಮಿಷನರ್ ನು ಅಥವಾ ಈ ಬಗ್ಗೆ ಸರ್ಕಾರವು ಅಧಿಕೃತಗೊಳಿಸಿದ ಯಾರೇ ಅಧಿಕಾರಿಯು, ಯಾವುದೇ ಮುನ್ಸಿಪಲ್ ಕೌನ್ಸಿಲ್ ನ ಕಚೇರಿಯನ್ನು ಪರಿಶೀಲಿಸಲು ಮತ್ತು ಅಂಥ ಯಾವುದೇ ಮುನ್ಸಿಪಲ್ ಕೌನ್ಸಿಲ್ ನ ಯಾವುದೇ ಮಾಹಿತಿಯನ್ನು ಅಥವಾ ದಾಖಲೆಗಳನ್ನು ಕೇಳಲು ಅಧಿಕಾರವನ್ನು ಹೊಂದಿರತಕ್ಕದ್ದು.

1. 2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಉಪಪ್ರಕರಣ (1)ರ ಮೇರೆಗೆ ಪ್ರಾಧಿಕೃತನಾದ ಅಧಿಕಾರಿಯು, ಮುನ್ಸಿಪಲ್ ಕೌನ್ಸಿಲ್ ನ ಅಥವಾ ಅದರ ಕಾರ್ಯಕಾರಿಯ ಯಾವುದೇ ಆದೇಶವು ಅಥವಾ ನಡೆವಳಿಯು ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿಗೆ ಅಥವಾ ಆದೇಶಗಳಿಗೆ ವಿರುದ್ಧವಾಗಿದೆಯೆಂದು ಅವನಿಗೆ ಮನದಟ್ಟಾದರೆ, ಸರ್ಕಾರದ ಆದೇಶಗಳಿಗಾಗಿ ದಾಖಲೆಗಳನ್ನು ಒಪ್ಪಿಸತಕ್ಕದ್ದು.

306. ಮುನ್ಸಿಪಲ್ ಕೌನ್ಸಿಲ್‌ಗಳ ಆದೇಶಗಳು ಇತ್ಯಾದಿಗಳ ಜಾರಿಯನ್ನು ಅಮಾನತ್ತುಗೊಳಿಸಲು ಡೆಪ್ಯುಟಿ ಕಮಿಷನರ್ ನ ಅಧಿಕಾರ.- (1) ಡೆಪ್ಯುಟಿ ಕಮಿಷನರ್ ನು ಟೌನ್ ಮುನ್ಸಿಪಲ್ ಕೌನ್ಸಿಲ್ ನ ಯಾವುದೇ ಆದೇಶ ಅಥವಾ ನಿರ್ಣಯದ ಜಾರಿಯು ಅಥವಾ ಟೌನ್ ಮುನ್ಸಿಪಲ್ ಕೌನ್ಸಿಲ್ ಅಥವಾ ಅದರ ಪರವಾಗಿ ಮಾಡಬೇಕೆಂದಿರುವ ಅಥವಾ ಮಾಡಲಾಗುತ್ತಿರುವಂಥ ಯಾವುದನ್ನಾದರೂ ಮಾಡುವುದು ಕಾನೂನುಬಾಹಿರವೆಂದು ಅಥವಾ ಸಾರ್ವಜನಿಕರಿಗೆ ಹಾನಿ ಅಥವಾ ಕಿರುಕುಳವನ್ನುಂಟು ಮಾಡುತ್ತಿದೆ ಎಂದು ಅಥವಾ ಉಂಟುಮಾಡುವ ಸಂಭವವಿದೆ ಎಂದು ಅಥವಾ ಶಾಂತಿ ಭಂಗವನ್ನು ಉಂಟು ಮಾಡುವುದೆಂದು ಅಭಿಪ್ರಾಯಪಟ್ಟರೆ, ಅವನು, ಸಹಿ ಮಾಡಿದ ಲಿಖಿತ ಆದೇಶದ ಮೂಲಕ, ಅದರ ಜಾರಿಯನ್ನು ಅಮಾನತ್ತುಗೊಳಿಸಬಹುದು ಅಥವಾ ಅದನ್ನು ಮಾಡುವುದನ್ನು ನಿಷೇಧಿಸಬಹುದು.

(2) ಈ ಪ್ರಕರಣದ ಮೇರೆಗೆ ಡೆಪ್ಯುಟಿ ಕಮಿಷನರ್ ನು ಯಾವುದೇ ಆದೇಶವನ್ನು ಮಾಡಿದಾಗ, ಅವನು ಆದೇಶದ ಪ್ರತಿಯನ್ನು, ಅದನ್ನು ಮಾಡುವುದಕ್ಕಾಗಿ ಇದ್ದ ಕಾರಣಗಳೊಂದಿಗೆ ವಿವರಣೆಯನ್ನು ಸರ್ಕಾರಕ್ಕೆ ಮತ್ತು [1][ಪೌರಾಡಳಿತ ನಿರ್ದೇಶಕ][1] ನಿಗೆ ಮತ್ತು ಅದರಿಂದ ಬಾಧಿತವಾದ ಮುನ್ಸಿಪಲ್ ಕೌನ್ಸಿಲ್ ಗೆ ತಕ್ಷಣವೇ ಕಳುಹಿಸತಕ್ಕದ್ದು; ಆ ಆದೇಶವನ್ನು ರದ್ದುಗೊಳಿಸುವುದು ಅಥವಾ ಮಾರ್ಪಾಟಿನೊಂದಿಗೆ ಅಥವಾ ಮಾರ್ಪಾಟು ಇಲ್ಲದೆ ಖಾಯಂ ಆಗಿ ಅಥವಾ ಸೂಕ್ತವೆಂದು ತಾನು ಭಾವಿಸಬಹುದಾದಂಥ ಅವಧಿಯವರೆಗೆ ಜಾರಿಯಲ್ಲಿ ಮುಂದುವರಿಯತಕ್ಕದ್ದೆಂದು ನಿರ್ದೇಶಿಸುವುದು ಸರ್ಕಾರದ ವಿವೇಚನೆಯಲ್ಲಿರತಕ್ಕದ್ದು:

ಪರಂತು, ಈ ಪ್ರಕರಣದ ಮೇರೆಗೆ ಮಾಡಿದ ಡೆಪ್ಯುಟಿ ಕಮಿಷನರ್ ನ ಯಾವುದೇ ಆದೇಶವನ್ನು, ಮುನ್ಸಿಪಲ್ ಕೌನ್ಸಿಲ್ ಗೆ, ಸದರಿ ಆದೇಶದ ವಿರುದ್ಧ ಕಾರಣವನ್ನು ತೋರಿಸಲು ಯುಕ್ತ ಅವಕಾಶವನ್ನು ಕೊಡದೇ ಸರ್ಕಾರವು ಸ್ಥಿರೀಕರಿಸತಕ್ಕದ್ದಲ್ಲ, ಪುನರೀಕ್ಷಿಸತಕ್ಕದ್ದಲ್ಲ ಅಥವಾ ಮಾರ್ಪಾಟು ಮಾಡತಕ್ಕದ್ದಲ್ಲ.

1. 2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

307. ಕೆಲವು ಸಂದರ್ಭಗಳಲ್ಲಿ ಕಾಮಗಾರಿಯ ನಿರ್ವಹಣೆ.- (1) ಡೆಪ್ಯುಟಿ ಕಮಿಷನರ್ ನು, ಟೌನ್ ಮುನ್ಸಿಪಲ್ ಕೌನ್ಸಿಲ್ ನಿರ್ವಹಿಸಲು ಅಥವಾ ಮಾಡಲು ಅಧಿಕಾರ ಹೊಂದಿರುವ, ಮತ್ತು ಅದರ ತಕ್ಷಣ ಜಾರಿ ನಿರ್ವಹಿಸುವುದು ಅಥವಾ ಮಾಡುವುದು ಸಾರ್ವಜನಿಕರ ಹಿತದೃಷ್ಟಿಯಿಂದ ಅವಶ್ಯವಿರುವುದೆಂದು ಅವನು ಅಭಿಪ್ರಾಯಪಟ್ಟರೆ ಯಾವುದೇ ಕಾಮಗಾರಿಯನ್ನು ನಿರ್ವಹಿಸಲು ಅಥವಾ ಯಾವುವೇ ಕಾರ್ಯವನ್ನು ಮಾಡಲು, ವ್ಯವಸ್ಥೆ ಮಾಡಬಹುದು ಮತ್ತು ಆ ಕಾಮಗಾರಿಯನ್ನು ನಿರ್ವಹಿಸುವ ವೆಚ್ಚಗಳನ್ನು ಅಥವಾ ಕಾರ್ಯವನ್ನು ನಿರ್ವಹಿಸಲು ಅಥವಾ ಮಾಡಲು ನೇಮಕಗೊಂಡ ವ್ಯಕ್ತಿಗೆ ಯುಕ್ತ ಪರಿಶ್ರಮಧನದೊಂದಿಗೆ, ಆ ಕಾರ್ಯವನ್ನು ಮಾಡುವ ವೆಚ್ಚಗಳನ್ನು, ಟೌನ್ ಮುನ್ಸಿಪಲ್ ಕೌನ್ಸಿಲ್ ತಕ್ಷಣವೇ ಸಂದಾಯ ಮಾಡತಕ್ಕದ್ದೆಂದು ನಿರ್ದೇಶಿಸಬಹುದು.

(2) ವೆಚ್ಚವನ್ನು ಮತ್ತು ಪರಿಶ್ರಮಧನವನ್ನು ಹಾಗೆ ಸಂದಾಯ ಮಾಡದಿದ್ದರೆ ಡೆಪ್ಯುಟಿ ಕಮಿಷನರ್ ನು, ಮುನ್ಸಿಪಲ್ ಕೌನ್ಸಿಲ್ ನ ಪರವಾಗಿ ಯಾವುವೇ ಹಣಗಳ ಅಭಿರಕ್ಷೆಯನ್ನು ತತ್ಕಾಲದಲ್ಲಿ ಹೊಂದಿರುವ ಯಾರೇ ವ್ಯಕ್ತಿಗೆ ಅವನಲ್ಲಿರಬಹುದಾದ ಅಥವಾ ಕಾಲಕಾಲಕ್ಕೆ ಸ್ವೀಕರಿಸಬಹುದಾದ ಹಣಗಳಿಂದ, ಅಂಥ ವೆಚ್ಚವನ್ನು ಮತ್ತು ಪರಿಶ್ರಮಧನವನ್ನು ಸಂದಾಯ ಮಾಡಲು ನಿರ್ದೇಶಿಸುವ ಆದೇಶವನ್ನು ಮಾಡಬಹುದು ಮತ್ತು ಅಂಥ ವ್ಯಕ್ತಿಯು, ಅಂಥ ಆದೇಶವನ್ನು ಪಾಲಿಸಲು ಬದ್ಧನಾಗಿರತಕ್ಕದ್ದು.

(3) ಪ್ರಕರಣ 306 ರ ಉಪಪ್ರಕರಣ (2) ರ ಉಪಬಂಧಗಳು ಸಾಧ್ಯವಾದಷ್ಟುಮಟ್ಟಿಗೆ ಈ ಪ್ರಕರಣದ ಮೇರೆಗಿನ ಯಾವುದೇ ಆದೇಶಕ್ಕೆ ಅನ್ವಯವಾಗತಕ್ಕದ್ದು.

308. ನಷ್ಟ, ಪೋಲು ಅಥವಾ ದುರ್ವಿನಿಯೋಗಕ್ಕಾಗಿ ಕೌನ್ಸಿಲರ್ ಗಳ ಹೊಣೆ.- (1) ಟೌನ್ ಮುನ್ಸಿಪಲ್ ಕೌನ್ಸಿಲ್ ನ ಪ್ರತಿಯೊಬ್ಬ ಕೌನ್ಸಿಲರ್ ನು ಅವನು ಸಹಭಾಗಿಯಾಗಿರುವ ಅಥವಾ ಕೌನ್ಸಿಲರ್ ಆಗಿ ತನ್ನ ಕರ್ತವ್ಯದಲ್ಲಿ ಅವನ ದುರ್ವರ್ತನೆ ಅಥವಾ ಅತೀವ ನಿರ್ಲಕ್ಷತೆಯಿಂದುಂಟಾದ ಅಥವಾ ಅದಕ್ಕೆ ಅವಕಾಶ ಮಾಡಿಕೊಟ್ಟಿದ್ದರಿಂದಾಗಿ ಮುನ್ಸಿಪಲ್ ಕೌನ್ಸಿಲ್ ನ ಯಾವುದೇ ಹಣದ ಅಥವಾ ಇತರ ಸ್ವತ್ತಿನ ನಷ್ಟ, ಪೋಲು ಅಥವಾ ದುರ್ವಿನಿಯೋಗಕ್ಕೆ ವೈಯಕ್ತಿಕವಾಗಿ ಹೊಣೆಗಾರನಾಗತಕ್ಕದ್ದು.

(2) ಸಂಬಂಧಪಟ್ಟ ಕೌನ್ಸಿಲರ್ ಮತ್ತು ಕೌನ್ಸಿಲರ್ ಗಳಿಗೆ, ಅದನ್ನು ವಿರೋಧಿಸಿ ಕಾರಣ ತೋರಿಸಲು ಅವಕಾಶವನ್ನು ಕೊಟ್ಟ ತರುವಾಯ, ಡೆಪ್ಯುಟಿ ಕಮಿಷನರ್ ನು, ಮುನ್ಸಿಪಲ್ ಕೌನ್ಸಿಲ್ ನ ಯಾವುದೇ ಹಣ ಅಥವಾ ಇತರ ಸ್ವತ್ತಿನ ನಷ್ಟ, ಪೋಲು ಅಥವಾ ದುರ್ವಿನಿಯೋಗವು ಅವನ ಅಥವಾ ಅವರ ದುರ್ವರ್ತನೆ ಅಥವಾ ಅತೀವ ನಿರ್ಲಕ್ಷ್ಯದ ನೇರ ಪರಿಣಾಮದಿಂದುಂಟಾದುದೆಂದು ಮನವರಿಕೆಯಾದರೆ, ಡೆಪ್ಯುಟಿ ಕಮಿಷನರ್ ನು ಲಿಖಿತ ಆದೇಶದ ಮೂಲಕ ಅಂಥ ಕೌನ್ಸಿಲರ್ ಗಳನ್ನು, ಅಂಥ ನಷ್ಟ, ಪೋಲು ಅಥವಾ ದುರ್ವಿನಿಯೋಗವನ್ನು ತುಂಬಿಕೊಡಲು ಅಗತ್ಯವಾದ ಮೊಬಲಗನ್ನು, ನಿಗದಿಪಡಿಸಿದ ದಿನಾಂಕಕ್ಕೆ ಮುಂಚೆ ಮುನ್ಸಿಪಲ್ ಕೌನ್ಸಿಲ್ ಗೆ ಸಂದಾಯ ಮಾಡಲು ನಿರ್ದೇಶಿಸತಕ್ಕದ್ದು.

(3) ಮೊಬಲಗನ್ನು ಹಾಗೆ ಸಂದಾಯ ಮಾಡದಿದ್ದರೆ, ಡೆಪ್ಯುಟಿ ಕಮಿಷನರ್ ನು ಅದನ್ನು ಭೂಕಂದಾಯದ ಬಾಕಿಯಂತೆ ವಸೂಲಿ ಮಾಡತಕ್ಕದ್ದು ಮತ್ತು ಅದನ್ನು ಮುನ್ಸಿಪಲ್ ನಿಧಿಗೆ ಜಮೆ ಮಾಡತಕ್ಕದ್ದು.

(4) ಉಪಪ್ರಕರಣ (2) ರ ಮೇರೆಗಿನ ಡೆಪ್ಯುಟಿ ಕಮಿಷನರ್ ತೀರ್ಮಾನದ ಮೇಲೆ ಸರ್ಕಾರಕ್ಕೆ ಅಪೀಲು ಸಲ್ಲಿಸತಕ್ಕದ್ದು.

309. ಸಿಟಿ ಮುನ್ಸಿಪಲ್ ಕೌನ್ಸಿಲ್‌ಗಳಿಗೆ ಸಂಬಂಧಿಸಿದಂತೆ [1][ಪೌರಾಡಳಿತ ನಿರ್ದೇಶಕ][1]ನ ಅಧಿಕಾರ.- ಸಿಟಿ ಮುನ್ಸಿಪಲ್ ಕೌನ್ಸಿಲ್ ಗಳಿಗೆ ಸಂಬಂಧಿಸಿದಂತೆ 306, 307, 308ನೇ ಪ್ರಕರಣಗಳ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಕಮಿಷನರ್ ನು ಚಲಾಯಿಸತಕ್ಕದ್ದು ಮತ್ತು ಸದರಿ ಪ್ರಕರಣಗಳ ಉಪಬಂಧಗಳು, ಯಥೋಚಿತ ಬದಲಾವಣೆಗಳೊಂದಿಗೆ, ಅಂಥ ಸಿಟಿ ಮುನ್ಸಿಪಲ್ ಕೌನ್ಸಿಲ್ ಗಳಿಗೆ ಮತ್ತು ಅವುಗಳ ಕೌನ್ಸಿಲರ್ ಗಳಿಗೆ ಅನ್ವಯವಾಗತಕ್ಕದ್ದು.

1. 2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

310. ಮುನ್ಸಿಪಲ್ ವಿಷಯಗಳಲ್ಲಿ ಸರ್ಕಾರಿ ವಿಚಾರಣೆ.- (1) ಸರ್ಕಾರವು, ಈ ಬಗ್ಗೆ ಅದು ನೇಮಕ ಮಾಡಿದ ಯಾರೇ ಅಧಿಕಾರಿಯ ಮೂಲಕ,-

(i) ಯಾವುದೇ [1][ಮುನ್ಸಿಪಲ್ ಏರಿಯಾ][1]ದ ಮುನ್ಸಿಪಲ್ ಆಡಳಿತಕ್ಕೆ ಸಂಬಂಧಿಸಿದ ಯಾವುವೇ ವಿಷಯಗಳು; ಅಥವಾ

1. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ii) ಯಾರೇ ಮುನ್ಸಿಪಲ್ ಪ್ರಾಧಿಕಾರಿಯ, ಅಧಿಕಾರಿಯ ಅಥವಾ ನೌಕರನ ಯಾವುದೇ ಕಾರ್ಯ ಅಥವಾ ನಡತೆ; ಅಥವಾ

(iii) ಈ ಅಧಿನಿಯಮದ ಮೇರೆಗೆ ಸರ್ಕಾರದ ಮಂಜೂರಾತಿ, ಅನುಮೋದನೆ ಅಥವಾ ಸಮ್ಮತಿಯು ಅಗತ್ಯವಿರುವಂಥ ಯಾವುದೇ ವಿಷಯಗಳ ಬಗ್ಗೆ,-

- ವಿಚಾರಣೆ ನಡೆಸಬೇಕೆಂದು ಆದೇಶಿಸಬಹುದು.

(2) ಅಂಥ ವಿಚಾರಣೆಯನ್ನು ನಡೆಸುವ ಅಧಿಕಾರಿಯು, ಅಂಥ ಉದ್ದೇಶಕ್ಕಾಗಿ, ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ 1908ರ ಸಿವಿಲ್ ಪ್ರಕ್ರಿಯಾ ಸಂಹಿತೆಯ ಮೇರೆಗೆ ನ್ಯಾಯಾಲಯದಲ್ಲಿ ನಿಹಿತವಾಗಿರುವಂಥ ಅಧಿಕಾರಗಳನ್ನು ಹೊಂದಿರತಕ್ಕದ್ದು,-

(ಎ) ಬಹಿರಂಗಪಡಿಸುವುದು ಮತ್ತು ಪರಿಶೀಲನೆ;

(ಬಿ) ಸಾಕ್ಷಿಗಳ ಹಾಜರಾತಿಯನ್ನು ಒತ್ತಾಯಪಡಿಸುವುದು ಮತ್ತು ಅವರ ವೆಚ್ಚಗಳನ್ನು ಠೇವಣಿ ಇಡಲು ಅಗತ್ಯಪಡಿಸುವುದು;

(ಸಿ) ದಸ್ತಾವೇಜುಗಳನ್ನು ಹಾಜರುಪಡಿಸಲು ಒತ್ತಾಯಿಸುವುದು;

(ಡಿ) ಪ್ರಮಾಣ ಮಾಡಿಸಿ ಸಾಕ್ಷಿಗಳನ್ನು ವಿಚಾರಣೆ ಮಾಡುವುದು;

(ಇ) ಮುದ್ದತ್ತುಗಳನ್ನು ಕೊಡುವುದು;

(ಎಫ್) ಅಫಿಡಾವಿಟ್ ಮೇಲೆ ತೆಗೆದುಕೊಂಡ ಸಾಕ್ಷ್ಯವನ್ನು ಸ್ವೀಕರಿಸುವುದು; ಮತ್ತು

(ಜಿ) ಸಾಕ್ಷಿಗಳ ವಿಚಾರಣೆಗಳಿಗಾಗಿ ಕಮಿಷನ್‌ಗಳನ್ನು ಹೊರಡಿಸುವುದು;

ಮತ್ತು ಯಾವ ವ್ಯಕ್ತಿಯ ಸಾಕ್ಷ್ಯವು ಅವನಿಗೆ ಮುಖ್ಯವೆಂದು ತೋರುವುದೋ ಆ ವ್ಯಕ್ತಿಯನ್ನು ತಾನಾಗಿಯೇ ಸಮನು ಮಾಡಬಹುದು ಮತ್ತು ವಿಚಾರಣೆ ಮಾಡಬಹುದು ಮತ್ತು 1898ನೇ ದಂಡ ಪ್ರಕ್ರಿಯಾ ಸಂಹಿತೆಯ 480 ಮತ್ತು 482ನೇ ಪ್ರಕರಣಗಳ ಅಥವಾ ಅರ್ಥವ್ಯಾಪ್ತಿಯೊಳಗೆ ಆತನನ್ನು ಸಿವಿಲ್ ನ್ಯಾಯಾಲಯವೆಂದು ಭಾವಿಸತಕ್ಕದ್ದು.

ವಿವರಣೆ:- ಸಾಕ್ಷಿಗಳ ಹಾಜರಾತಿಯನ್ನು ಒತ್ತಾಯಪಡಿಸುವ ಉದ್ದೇಶಕ್ಕಾಗಿ, ಅಂಥ ಅಧಿಕಾರಿಯ ಅಧಿಕಾರವ್ಯಾಪ್ತಿಯ ಸ್ಥಳೀಯ ಪರಿಮಿತಿಗಳು [1][ಕರ್ನಾಟಕ ರಾಜ್ಯ][1]ದ ಪರಿಮಿತಿಗಳಾಗಿರತಕ್ಕದ್ದು.

1. ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶ, 1973ರ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(3) ಸಾಕ್ಷ್ಯವನ್ನು ಕೊಡಲು ಹಾಜರಾಗುವಲ್ಲಿ ಯಾರೇ ವ್ಯಕ್ತಿಯು ವಹಿಸಿದ ಯುಕ್ತ ವೆಚ್ಚಗಳನ್ನು ಆ ವಿಚಾರಣೆಯನ್ನು ನಡೆಸುತ್ತಿರುವ ಅಧಿಕಾರಿಯು ಅಂಥ ವ್ಯಕ್ತಿಗೆ ಮಂಜೂರು ಮಾಡಬಹುದು ಮತ್ತು ಅವುಗಳನ್ನು ಖರ್ಚುಗಳ ಭಾಗವೆಂದು ಭಾವಿಸತಕ್ಕದ್ದು.

(4) ಖರ್ಚುಗಳು ಸರ್ಕಾರದ ವಿವೇಚನೆಯಲ್ಲಿರತಕ್ಕದ್ದು ಮತ್ತು ಸರ್ಕಾರವು, ಅಂಥ ಖರ್ಚುಗಳನ್ನು ಯಾರು ಮತ್ತು ಯಾರಿಗೆ ಮತ್ತು ಎಷ್ಟರಮಟ್ಟಿಗೆ ಸಂದಾಯ ಮಾಡಬೇಕೆಂಬುದನ್ನು ನಿರ್ಧರಿಸಲು ಮತ್ತು ಖರ್ಚುಗಳ ಮೇಲೆ ವರ್ಷಕ್ಕೆ ಶೇಕಡಾ ಆರಕ್ಕೆ ಮೀರದ ದರದಲ್ಲಿ ಬಡ್ಡಿಯನ್ನು ಕೊಡಲು ಪೂರ್ಣಾಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಅಂಥ ಖರ್ಚುಗಳು ಮತ್ತು ಬಡ್ಡಿಯನ್ನು ಭೂ ಕಂದಾಯದ ಬಾಕಿಯಂತೆ ಸಂಗ್ರಹಿಸತಕ್ಕದ್ದು.

(5) ಉಪಪ್ರಕರಣ (1) ರ ಮೇರೆಗೆ ನೇಮಕಗೊಂಡ ಅಧಿಕಾರಿಯು ಮಾಡಿದ ವಿಚಾರಣೆಯ ವರದಿಯನ್ನು ಪರ್ಯಾಲೋಚಿಸಿದ ತರುವಾಯ, ಸರ್ಕಾರವು, ತಾನು ಅವಶ್ಯವೆಂದು ಪರಿಗಣಿಸುವಂಥ ನಿರ್ದೇಶನಗಳನ್ನು ಕೊಡಬಹುದು ಅಥವಾ ಅಂಥ ಆದೇಶಗಳನ್ನು ಮಾಡಬಹುದು ಮತ್ತು ಮುನ್ಸಿಪಲ್ ಕೌನ್ಸಿಲ್ ಗೆ ಅಂಥ ನಿರ್ದೇಶನವನ್ನು ಕೊಟ್ಟಿರುವಲ್ಲಿ, ಮುನ್ಸಿಪಲ್ ಕೌನ್ಸಿಲ್ ಅಂಥ ನಿರ್ದೇಶನವನ್ನು ಪಾಲಿಸತಕ್ಕದ್ದು.

(6) ಸರ್ಕಾರವು, ಈ ಅಧಿನಿಯಮದ ಯಾವುದೇ ಉಪಬಂಧದ ಮೇರೆಗೆ, ಸರ್ಕಾರಕ್ಕೆ ಅಧೀನನಾಗಿರುವ ಯಾರೇ ಅಧಿಕಾರಿಯು (5)ನೇ ಉಪಪ್ರಕರಣದ ಮೇರೆಗೆ ಕೊಡಬಹುದಾದಂಥ ಯಾವುದೇ ನಿರ್ದೇಶನವನ್ನು ನೀಡುವುದು ಅಥವಾ ಮಾಡಬಹುದಾದಂಥ ಯಾವುದೇ ಆದೇಶವನ್ನು ಮಾಡುವುದು ಕಾನೂನುಸಮ್ಮತವಾಗಿರತಕ್ಕದ್ದು.

311. ಸಿಬ್ಬಂದಿಯ ನಿಯೋಜನೆಯಲ್ಲಿ ದುಂದುವೆಚ್ಚವನ್ನು ತಡೆಗಟ್ಟಲು [1][ಪೌರಾಡಳಿತ ನಿರ್ದೇಶಕ][1] ನ ಅಧಿಕಾರ.-[1][ಪೌರಾಡಳಿತ ನಿರ್ದೇಶಕ][1] ನು, ಅಧಿಕಾರಿಗಳೆಂದು ಅಥವಾ ನೌಕರರೆಂದು, ಮುನ್ಸಿಪಲ್ ಕೌನ್ಸಿಲ್ ನಿಯೋಜಿಸಿದ ಅಥವಾ ಮುನ್ಸಿಪಲ್ ಕೌನ್ಸಿಲ್ನಿಯೋಜಿಸಲು ಉದ್ದೇಶಿಸಿದ, ವ್ಯಕ್ತಿಗಳ ಸಂಖ್ಯೆಯು ಅಥವಾ ಆ ವ್ಯಕ್ತಿಗಳಿಗೆ ಅಥವಾ ಯಾರೇ ವಿಶಿಷ್ಟ ವ್ಯಕ್ತಿಗೆ ಮುನ್ಸಿಪಲ್ ಕೌನ್ಸಿಲ್ ಗೊತ್ತುಪಡಿಸಿದ ಪರಿಶ್ರಮಧನವು, ಹೆಚ್ಚಾಗಿದೆ ಎಂದು ಅಭಿಪ್ರಾಯಪಟ್ಟರೆ, ಮುನ್ಸಿಪಲ್ ಕೌನ್ಸಿಲ್, [1][ಪೌರಾಡಳಿತ ನಿರ್ದೇಶಕ][1]ನ ಕೋರಿಕೆಯ ಮೇಲೆ, ಸದರಿ ವ್ಯಕ್ತಿಗಳ ಸಂಖ್ಯೆಯನ್ನು ಅಥವಾ ಸದರಿ ವ್ಯಕ್ತಿ ಅಥವಾ ವ್ಯಕ್ತಿಗಳ ಪರಿಶ್ರಮಧನವನ್ನು ಕಡಿಮೆ ಮಾಡತಕ್ಕದ್ದು:

ಪರಂತು, ಅಂಥ ಯಾವುದೇ ಕೋರಿಕೆಯ ವಿರುದ್ಧ ಮುನ್ಸಿಪಲ್ ಕೌನ್ಸಿಲ್, ಸರ್ಕಾರಕ್ಕೆ ಅಪೀಲು ಮಾಡಿಕೊಳ್ಳಬಹುದು, ಅದರ ಮೇಲಿನ ಅದರ ತೀರ್ಮಾನವು ನಿರ್ಣಾಯಕವಾಗಿರತಕ್ಕದ್ದು.

1.2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

312. ಸರ್ಕಾರವು, ಆರೋಗ್ಯ ಅಧಿಕಾರಿಯನ್ನು ನೇಮಕ ಮಾಡಲು ಯಾವುದೇ ಮುನ್ಸಿಪಲ್ ಕೌನ್ಸಿಲ್ ನ್ನು ಅಗತ್ಯಪಡಿಸಬಹುದು.- (1) ಸರ್ಕಾರಕ್ಕೆ,-

(i) ಆರೋಗ್ಯಾಧಿಕಾರಿಯ ನೇಮಕ ಮಾಡುವುದು ಯಾವುದೇ ಕಾಲದಲ್ಲಿ ಅವಶ್ಯವೆಂದು ಅದು ಅಭಿಪ್ರಾಯಪಟ್ಟರೆ, ಯಾವುದೇ ಮುನ್ಸಿಪಲ್ ಕೌನ್ಸಿಲ್ ನೇಮಕ ಮಾಡುವುದನ್ನು ಅಗತ್ಯಪಡಿಸುವುದು;

(ii) ಯಾವುದೇ ಅಂಥ ಮುನ್ಸಿಪಲ್ ಕೌನ್ಸಿಲ್ ಅದಕ್ಕಾಗಿ ಆಯ್ಕೆ ಮಾಡಿದ ಅಥವಾ ಅದಕ್ಕೆ ನೇಮಕ ಮಾಡಿದ ಯಾರೇ ವ್ಯಕ್ತಿಯ ನೇಮಕ ಅಥವಾ ಅಂಥ ಯಾವುದೇ ಪದದಲ್ಲಿ ಯಾರೇ ವ್ಯಕ್ತಿಯ ಮುಂದುವರಿಕೆಯನ್ನು, ನಿಷೇಧಿಸುವ ಆದೇಶವನ್ನು ಮಾಡುವುದು ಮತ್ತು ಅಂಥ ಯಾರೇ ವ್ಯಕ್ತಿಯ ಅಂಥ ಪದಾವಧಿಯು, ಅವನ ಸೇವಾ ಷರತ್ತುಗಳಿಗೆ ಸಂಬಂಧಪಟ್ಟ ಯಾವುದೇ ಕರಾರು ಅಥವಾ ಯಾವುದೇ ಉಪಬಂಧ ಇದ್ದಾಗ್ಯೂ ನಿಂತುಹೋಗತಕ್ಕದ್ದು ಮತ್ತು ಮುನ್ಸಿಪಲ್ ಕೌನ್ಸಿಲ್ ಗೆ ಅಂಥ ಆದೇಶವನ್ನು ತಿಳಿಸಿದ ದಿನಾಂಕದಿಂದ ಮತ್ತು ಅಂದಿನಿಂದ ಕೊನೆಗೊಳ್ಳತಕ್ಕದ್ದು;

(iii) ಚೀಫ್ ಆಫೀಸರ್ ಅಥವಾ ಮುನ್ಸಿಪಲ್ ಕಮಿಷನರ್ ಆಗಿ ನೇಮಕಗೊಂಡ ಯಾರೇ ವ್ಯಕ್ತಿಗೆXIVನೇ ಅಧ್ಯಾಯದ ಮೂಲಕ ಅವನಿಗೆ ಪ್ರದತ್ತವಾಗಿರುವಂಥ ಅಧಿಕಾರಗಳ ಜೊತೆಗೆ, ಈ ಅಧಿನಿಯಮದ ಮೇರೆಗೆ ಅಥವಾ ಆ ಕಾಲದಲ್ಲಿ ಜಾರಿಯಲ್ಲಿರುವ ಯಾವುವೇ ನಿಯಮಗಳು ಅಥವಾ ಬೈಲಾಗಳ ಮೇರೆಗೆ, ಅವನಿಗೆ ಕಾನೂನುಸಮ್ಮತವಾಗಿ ಪ್ರತ್ಯಾಯೋಜಿಸಬಹುದಾದಂಥ ಎಲ್ಲ ಅಥವಾ ಯಾವುವೇ ಅಧಿಕಾರಗಳನ್ನು, ಅಂಥ ಯಾವುದೇ ಮುನ್ಸಿಪಲ್ ಕೌನ್ಸಿಲ್ ನಿಹಿತಗೊಳಿಸುವಂತೆ ಅಗತ್ಯಪಡಿಸುವುದು ಕಾನೂನುಸಮ್ಮತವಾಗಿರತಕ್ಕದ್ದು.

(2) ಉಪಪ್ರಕರಣ (1) ರ (i) ನೇ ಮತ್ತು (iii)ನೇ ಖಂಡಗಳ ಮೇರೆಗೆ ಮುನ್ಸಿಪಲ್ ಕೌನ್ಸಿಲ್ ಗೆ ಕೊಟ್ಟ ಯಾವುದೇ ಕಡ್ಡಾಯ ಕೋರಿಕೆಯನ್ನು ಈ ಬಗ್ಗೆ ಸರ್ಕಾರವು ಪ್ರತಿಯೊಂದು ಪ್ರಕರಣದಲ್ಲಿ, ನಿರ್ದಿಷ್ಟಪಡಿಸಬಹುದಾದಂಥ ಕಾಲದೊಳಗೆ ಪಾಲಿಸತಕ್ಕದ್ದು.

313. ಮುನ್ಸಿಪಲ್ ಕೌನ್ಸಿಲ್ ತನ್ನ ಕರ್ತವ್ಯಗಳ ನೆರವೇರಿಕೆಯಲ್ಲಿ ತಪ್ಪಿದಲ್ಲಿ ವ್ಯವಸ್ಥೆ ಮಾಡಲು ಸರ್ಕಾರದ ಅಧಿಕಾರ.- (1) ಮುನ್ಸಿಪಲ್ ಕೌನ್ಸಿಲ್, ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಮೇರೆಗೆ ಅದಕ್ಕೆ ವಿಧಿಸಲಾದ ಯಾವುದೇ ಕರ್ತವ್ಯವನ್ನು ನೆರವೇರಿಸುವಲ್ಲಿ ತಪ್ಪಿದೆಯೆಂದು, ದೂರಿನ ಮೇಲಾಗಲಿ ಅಥವಾ ಅನ್ಯಥಾ ಸರ್ಕಾರಕ್ಕೆ ತಿಳಿದು ಬಂದಾಗ, ಆಪಾದಿಸಲಾಗಿರುವ ತಪ್ಪಿತದ ಬಗ್ಗೆ ಆ ಮುನ್ಸಿಪಲ್ ಕೌನ್ಸಿಲ್ ತಪ್ಪು ಮಾಡಿದೆಯೆಂದು ಕ್ರಮಬದ್ಧ ವಿಚಾರಣೆಯ ತರುವಾಯ ಸರ್ಕಾರಕ್ಕೆ ಮನದಟ್ಟಾದರೆ, ಅದು ಆ ಕರ್ತವ್ಯವನ್ನು ನೆರವೇರಿಸುವುದಕ್ಕಾಗಿ ಅವಧಿಯನ್ನು ನಿಗದಿಪಡಿಸಬಹುದು.

(2) ಹಾಗೆ ನಿಗದಿಪಡಿಸಿದ ಅವಧಿಯೊಳಗೆ ಕರ್ತವ್ಯವನ್ನು ನೆರವೇರಿಸದಿದ್ದರೆ, ಸರ್ಕಾರವು ಅದನ್ನು ನೆರವೇರಿಸುವುದಕ್ಕಾಗಿ ಯಾರೇ ವ್ಯಕ್ತಿಯನ್ನು ನೇಮಕ ಮಾಡಬಹುದು ಮತ್ತು ಅದನ್ನು ನೆರವೇರಿಸುವುದರ ವೆಚ್ಚಗಳನ್ನು, ಅದನ್ನು ನೆರವೇರಿಸಲು ನೇಮಕಗೊಂಡ ವ್ಯಕ್ತಿಗೆ, ಯುಕ್ತ ಪರಿಶ್ರಮಧನದೊಂದಿಗೆ ಮುನ್ಸಿಪಲ್ ಕೌನ್ಸಿಲ್ ತಕ್ಷಣ ಸಂದಾಯ ಮಾಡತಕ್ಕದ್ದೆಂದು ನಿರ್ದೇಶಿಸಬಹುದು.

(3) ಆ ವೆಚ್ಚಗಳನ್ನು ಮತ್ತು ಪರಿಶ್ರಮಧನವನ್ನು ಹಾಗೆ ಸಂದಾಯ ಮಾಡಿರದಿದ್ದರೆ ಸರ್ಕಾರವು, ಮುನ್ಸಿಪಲ್ ಕೌನ್ಸಿಲ್ ನ ಪರವಾಗಿ ಯಾವುವೇ ಹಣಗಳನ್ನು ತತ್ಕಾಲದಲ್ಲಿ ಅಭಿರಕ್ಷೆಯಲ್ಲಿ ಹೊಂದಿರುವ ಯಾರೇ ವ್ಯಕ್ತಿಯು ತನ್ನಲ್ಲಿರಬಹುದಾದಂಥ ಅಥವಾ ಕಾಲಕಾಲಕ್ಕೆ ಅವನು ಸ್ವೀಕರಿಸಬಹುದಾದಂಥ ಹಣಗಳಿಂದ ಅಂಥ ವೆಚ್ಚಗಳನ್ನು ಮತ್ತು ಪರಿಶ್ರಮಧನವನ್ನು ಸಂದಾಯ ಮಾಡಲು ನಿರ್ದೇಶಿಸಿ, ಆದೇಶವನ್ನು ಮಾಡಬಹುದು ಮತ್ತು ಅಂಥ ವ್ಯಕ್ತಿಯು ಅಂಥ ಆದೇಶವನ್ನು ಪಾಲಿಸಲು ಬದ್ಧನಾಗಿರತಕ್ಕದ್ದು.

314. ಮುನ್ಸಿಪಲ್ ನಿಧಿಯ ಅಭಿರಕ್ಷೆಯನ್ನು ಹೊಂದಿರುವ ವ್ಯಕ್ತಿಗೆ ಸರ್ಕಾರದ ಬಾಕಿಗಳನ್ನು ಸಂದಾಯ ಮಾಡುವಂತೆ ನಿರ್ದೇಶಿಸಲು ಸರ್ಕಾರದ ಅಧಿಕಾರ.- ಮುನ್ಸಿಪಲ್ ಕೌನ್ಸಿಲ್, ಸರ್ಕಾರಕ್ಕೆ ಬಾಕಿಯಾಗಿರುವ ಯಾವುದೇ ಮೊಬಲಗನ್ನು ಸಂದಾಯ ಮಾಡಲು ತಪ್ಪಿದರೆ, ಅದು, ಮುನ್ಸಿಪಲ್ ನಿಧಿಯ ಅಭಿರಕ್ಷೆಯನ್ನು ಹೊಂದಿರುವ ವ್ಯಕ್ತಿಗೆ, ಅಂಥ ನಿಧಿಯ ಮೇಲೆ ಇರುವ ಯಾವುದೇ ಇತರ ಋಣಭಾರಕ್ಕಿಂತ ಆದ್ಯತೆ ಕೊಟ್ಟು, ಸಂದಾಯ ಮಾಡುವಂತೆ ನಿರ್ದೇಶಿಸಿ ಆದೇಶವನ್ನು ಮಾಡಬಹುದು ಮತ್ತು ಅಂಥ ವ್ಯಕ್ತಿಯು, ಮುನ್ಸಿಪಲ್ ಕೌನ್ಸಿಲ್ ನ ಜಮೆಯಲ್ಲಿರುವ ನಿಧಿಗಳಷ್ಟರಮಟ್ಟಿಗೆ ಅಂಥ ಆದೇಶವನ್ನು ಪಾಲಿಸಲು ಬದ್ಧನಾಗಿರತಕ್ಕದ್ದು.

315. ಕೆಲವು ಸಂದರ್ಭಗಳಲ್ಲಿ ಆಡಳಿತಗಾರನನ್ನು ನೇಮಿಸಲು ಅಧಿಕಾರ.- (1) ಯಾವಾಗ,-

(ಎ) ಮುನ್ಸಿಪಲ್ ಕೌನ್ಸಿಲ್ ಗೆ ಈ ಅಧಿನಿಯಮದ ಮೇರೆಗೆ ಯಾವ ಸಾರ್ವತ್ರಿಕ ಚುನಾವಣೆ ನಡೆಯಬೇಕಾಗಿತ್ತೋ ಆಗ ಆ ಚುನಾವಣೆಯನ್ನು ಅಥವಾ ಅದರಿಂದ ಉಂಟಾಗುವ ಯಾವುವೇ ನಡೆವಳಿಗಳನ್ನು, ಸಕ್ಷಮ ನ್ಯಾಯಾಲಯದ ಅಥವಾ ಪ್ರಾಧಿಕಾರವು ಆದೇಶದ ಮೂಲಕ ತಡೆಹಿಡಿದಾಗಲೆಲ್ಲಾ; ಅಥವಾ

(ಬಿ) ಮುನ್ಸಿಪಲ್ ಕೌನ್ಸಿಲ್ ನ ಎಲ್ಲ ಕೌನ್ಸಿಲರ್ ಗಳ ಅಥವಾ ಕೌನ್ಸಿಲರ್ ಗಳ ಒಟ್ಟು ಸಂಖ್ಯೆಯ ಮೂರನೇ ಎರಡಕ್ಕಿಂತ ಹೆಚ್ಚಿನ ಕೌನ್ಸಿಲರ್ ಗಳ ಚುನಾವಣೆಯನ್ನು, ಸಕ್ಷಮ ನ್ಯಾಯಾಲಯವು ಅಥವಾ ಪ್ರಾಧಿಕಾರವು ಶೂನ್ಯವೆಂಬುದಾಗಿ ಘೋಷಿಸಿದಾಗಲೆಲ್ಲಾ; ಅಥವಾ

[1][(ಸಿ) xxx][1]

1. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(ಡಿ) ಮುನ್ಸಿಪಲ್ ಕೌನ್ಸಿಲ್ ನ ಎಲ್ಲ ಕೌನ್ಸಿಲರ್ ಗಳು ಅಥವಾ ಕೌನ್ಸಿಲರ್ ಗಳ ಒಟ್ಟು ಸಂಖ್ಯೆಯ ಮೂರನೇ ಎರಡಕ್ಕಿಂತ ಹೆಚ್ಚು ಕೌನ್ಸಿಲರ್ ಗಳು ರಾಜಿನಾಮೆ ನೀಡಿರುವಾಗಲೆಲ್ಲಾ, [1][ಆದಾಗ್ಯೂ ಅಂಥ ನೇಮಕಾತಿಯ ಪೂರ್ಣ ಅವಧಿಯು ಆರು ತಿಂಗಳುಗಳನ್ನು ಮೀರತಕ್ಕದ್ದಲ್ಲ;][1]

1. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

- ರಾಜ್ಯ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಗಾಗಿ ಆಡಳಿತಗಾರನನ್ನು ನೇಮಿಸತಕ್ಕದ್ದು ಮತ್ತು ಅಂತಹದೇ ಅಧಿಸೂಚನೆಯ ಮೂಲಕ ಅಂಥ ನೇಮಕಾತಿಯ ಅವಧಿಯನ್ನು [1][ಉತ್ತರಾನ್ವಯವಾಗಿಯಾಗಲಿ ಅಥವಾ ಪೂರ್ವಾನ್ವಯವಾಗಿಯಾಗಲಿ][1] ಮೊಟಕುಗೊಳಿಸಬಹುದು ಮತ್ತು ವಿಸ್ತರಿಸಬಹುದು.

1.1966ರ ಅಧಿನಿಯಮ 34ರ ಮೂಲಕ 1.4.1965 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) ಈ ಅಧಿನಿಯಮದಲ್ಲಿ ಏನೇ ಅಡಕವಾಗಿದ್ದಾಗ್ಯೂ, (1)ನೇ ಉಪಪ್ರಕರಣದ ಮೇರೆಗೆ ಆಡಳಿತಗಾರನ ನೇಮಕದ ತರುವಾಯ, ನೇಮಕದ ಅವಧಿಯಲ್ಲಿ, ಸದರಿ ಮುನ್ಸಿಪಲ್ ಕೌನ್ಸಿಲ್ ಮತ್ತು ಅದರ ಸಮಿತಿಗಳು, ಮತ್ತು ಈ ಅಧಿನಿಯಮದ ಉಪಬಂಧಗಳನ್ನು ಅಥವಾ ಇತರ ಯಾವುದೇ ಕಾನೂನನ್ನು ಜಾರಿಗೊಳಿಸಲು ಜವಾಬ್ದಾರಿ ಹೊತ್ತುಕೊಂಡ [1][ಅಧ್ಯಕ್ಷ ಅಥವಾ ಉಪಾಧ್ಯಕ್ಷನು][1] ಈ ಅಧಿನಿಯಮದ ಅಥವಾ ಇತರ ಯಾವುದೇ ಕಾನೂನಿನ ಮೂಲಕ ಅಥವಾ ಮೇರೆಗೆ ಅವರಿಗೆ ಪ್ರದತ್ತವಾಗಿರುವ ಅಥವಾ ವಿಧಿಸಿದ ಯಾವುವೇ ಅಧಿಕಾರಗಳನ್ನು ಚಲಾಯಿಸುವುದು ಮತ್ತು ಯಾವುವೇ ಕರ್ತವ್ಯಗಳನ್ನು ಅಥವಾ ಪ್ರಕಾರ್ಯಗಳನ್ನು ನೆರವೇರಿಸುವುದು ಮತ್ತು ನಿರ್ವಹಿಸುವುದು ನಿಂತು ಹೋಗತಕ್ಕದ್ದು ಮತ್ತು ಆಡಳಿತಗಾರನು ಅಂಥ ಎಲ್ಲಾ ಅಧಿಕಾರಗಳನ್ನು ಚಲಾಯಿಸತಕ್ಕದ್ದು. ಮತ್ತು ಎಲ್ಲಾ ಅಂಥ ಕರ್ತವ್ಯಗಳನ್ನು ಮತ್ತು ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

1. 1966ರ ಅಧಿನಿಯಮ 34ರ ಮೂಲಕ 16.1.1967 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) ರಾಜ್ಯ ಸರ್ಕಾರವು, ಅದು ಸೂಕ್ತವೆಂದು ಭಾವಿಸಿದರೆ, (1)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ಆಡಳಿತಗಾರನಿಗೆ, ಈ ಅಧಿನಿಯಮದ ಅಥವಾ ಇತರ ಯಾವುದೇ ಕಾನೂನಿನ ಮೇರೆಗೆ ಅವನಿಗೆ ಪ್ರದತ್ತವಾದ ಅಥವಾ ವಿಧಿಸಿದ ಅಧಿಕಾರಗಳನ್ನು ಚಲಾಯಿಸುವಲ್ಲಿ ಮತ್ತು ಕರ್ತವ್ಯಗಳನ್ನು ಮತ್ತು ಪ್ರಕಾರ್ಯಗಳನ್ನು ನೆರವೇರಿಸುವಲ್ಲಿ ಮತ್ತು ನಿರ್ವಹಿಸುವಲ್ಲಿ ಸಲಹೆ

ನೀಡಲು ಮತ್ತು ಸಹಾಯ ಮಾಡಲು ಸಲಹಾ ಪರಿಷತ್ತನ್ನು ನೇಮಿಸಬಹುದು. ಸಲಹಾ ಪರಿಷತ್ತಿನ ಸದಸ್ಯರು, ರಾಜ್ಯ ಸರ್ಕಾರದ ಇಷ್ಟಪರ್ಯಂತ ಪದಧಾರಣ ಮಾಡತಕ್ಕದ್ದು.

316. ಕೆಲವು ಸಂದರ್ಭಗಳಲ್ಲಿ ಮುನ್ಸಿಪಲ್ ಕೌನ್ಸಿಲ್ ನ್ನು [1][ವಿಘಟಿಸಲು][1] ಸರ್ಕಾರದ ಅಧಿಕಾರ.- ಮುನ್ಸಿಪಲ್ ಕೌನ್ಸಿಲ್, ಈ ಅಧಿನಿಯಮದ ಅಥವಾ ಅದರ ಮೇರೆಗೆ ಅಥವಾ ಇತರ ಯಾವುದೇ ಕಾನೂನಿನ ಮೂಲಕ ಅಥವಾ ಮೇರೆಗೆ ಅದರ ಮೇಲೆ ವಿಧಿಸಿದ ಅಥವಾ ಅದು ಕೈಗೊಂಡ ಕರ್ತವ್ಯಗಳನ್ನು ನೆರವೇರಿಸಲು ಸಕ್ಷಮವಾಗಿಲ್ಲವೆಂದು ಅಥವಾ ನಿರಂತರವಾಗಿ ತಪ್ಪು ಮಾಡುತ್ತಿದೆ ಎಂದು ಅಥವಾ ಈ ಅಧಿನಿಯಮದ ಉಪಬಂಧಗಳ ಅಥವಾ ಇತರ ಯಾವುದೇ ಕಾನೂನಿನ ಮೇರೆಗಿನ ಅಧಿಕಾರಗಳನ್ನು ಮೀರಿದೆ ಎಂದು ಅಥವಾ ದುರುಪಯೋಗ ಮಾಡಿದೆ ಎಂದು ಅಥವಾ ಅದಕ್ಕೆ ಕೊಟ್ಟ ನಿರ್ದೇಶನಗಳನ್ನು ಜಾರಿಗೊಳಿಸಲು ನಿರಾಕರಿಸಿದೆ ಎಂದು, [2][ಅಥವಾ [3][ಮುನ್ಸಿಪಲ್ ಕೌನ್ಸಿಲ್][3] ಹಾನಿಕಾರಕ ರೀತಿಯಲ್ಲಿ ಪ್ರಕಾರ್ಯ ನಿರ್ವಹಿಸುತ್ತಿದೆ ಎಂದು][2] ಸರ್ಕಾರವು ಅಭಿಪ್ರಾಯಪಟ್ಟರೆ, ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅದಕ್ಕಾಗಿ ಕಾರಣಗಳ ವಿವರಣೆ ಸಹಿತ ಆದೇಶವನ್ನು ಪ್ರಕಟಿಸಿ, ಆ ಮುನ್ಸಿಪಲ್ ಕೌನ್ಸಿಲ್ ಅಸಮರ್ಥವಾಗಿದೆ ಎಂದು ಅಥವಾ ತಪ್ಪುತ್ತಿದೆ ಎಂಬುದಾಗಿ ಅಥವಾ ಸಂದರ್ಭಾನುಸಾರ ಅದು ತನ್ನ ಅಧಿಕಾರಗಳನ್ನು ಮೀರಿದೆ ಅಥವಾ ದುರುಪಯೋಗಪಡಿಸಿಕೊಂಡಿದೆಯೆಂದು ಘೋಷಿಸಬಹುದು ಮತ್ತು ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಒಂದು ವರ್ಷಕ್ಕೆ ಮೀರದ ಅವಧಿಗೆ [1][ಅದನ್ನು ವಿಘಟಿಸ][1]ಬಹುದು:

1. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

3. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಲಾಗಿದೆ.

ಪರಂತು, ಮೇಲೆ ಹೇಳಿದಂತೆ [1][ವಿಘಟನೆ][1]ಯ ಆದೇಶವನ್ನು ಮಾಡುವುದಕ್ಕೆ ಮುಂಚೆ, ಅಂಥ ಆದೇಶವನ್ನು ಏಕೆ ಮಾಡಕೂಡದು ಎಂಬುದಕ್ಕೆ ಕಾರಣ ತೋರಿಸಲು ಮುನ್ಸಿಪಲ್ ಕೌನ್ಸಿಲ್ ಗೆ ಯುಕ್ತ ಅವಕಾಶವನ್ನು ಕೊಡತಕ್ಕದ್ದು:

1. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][ಪರಂತುಕಗಳು xxx][1]

1. 1.6.1994 ರಿಂದ ಜಾರಿಗೆ ಬರುವಂತೆ, 1976ರ ಅಧಿನಿಯಮ 83ರ ಮೂಲಕ ಸೇರಿಸಲಾಗಿದೆ ಮತ್ತು 1994ರ ಅಧಿನಿಯಮ 36ರ ಮೂಲಕ ಬಿಟ್ಟುಬಿಡಲಾಗಿದೆ.

(2) ಉಪಪ್ರಕರಣ (1) ರ ಮೇರೆಗಿನ ಆದೇಶದ ಮೂಲಕ ಮುನ್ಸಿಪಲ್ ಕೌನ್ಸಿಲ್ ನ್ನು [1][ವಿಘಟಿಸಿದಾಗ][1] ಈ ಕೆಳಕಂಡ ಪರಿಣಾಮಗಳು ಉಂಟಾಗತಕ್ಕದ್ದು:-

1. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(i) ಮುನ್ಸಿಪಲ್ ಕೌನ್ಸಿಲ್ ನ ಎಲ್ಲ ಕೌನ್ಸಿಲರ್ ಗಳು, [1][(3)ನೇ ಉಪಪ್ರಕರಣದ ಪ್ರಕಾರ][1] ಚುನಾವಣೆಗಾಗಿ ಇರುವ ಅವರ ಅರ್ಹತೆಗೆ ಬಾಧಕವಾಗದಂತೆ, ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಂದು ಹಾಗೆ ಕೌನ್ಸಿಲರ್ ಗಳಾಗಿರುವ, ತಮ್ಮ ಪದವನ್ನು ಖಾಲಿ ಮಾಡತಕ್ಕದ್ದು;

1. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ii) ಮುನ್ಸಿಪಲ್ ಕೌನ್ಸಿಲ್ ನ [1][ವಿಘಟನೆ][1]ಯ ಅವಧಿಯಲ್ಲಿ, ಈ ಅಧಿನಿಯಮ ಅಥವಾ ಯಾವುದೇ ಇತರ ಕಾನೂನಿನ ಮೂಲಕ ಅಥವಾ ಅವುಗಳ ಮೇರೆಗೆ ಮುನ್ಸಿಪಲ್ ಕೌನ್ಸಿಲ್ ಗೆ ಪ್ರದಾನ ಮಾಡಿದ ಮತ್ತು ವಿಧಿಸಿದ ಎಲ್ಲಾ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು, ಸರ್ಕಾರವು ಈ ಬಗ್ಗೆ ಕಾಲಕಾಲಕ್ಕೆ ನೇಮಿಸಬಹುದಾದಂಥ ಅಧಿಕಾರಿಯು ಚಲಾಯಿಸತಕ್ಕದ್ದು ಮತ್ತು ನೆರವೇರಿಸತಕ್ಕದ್ದು; ಮತ್ತು

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(iii) ಮುನ್ಸಿಪಲ್ ಕೌನ್ಸಿಲ್ ನಲ್ಲಿ ನಿಹಿತವಾದ ಎಲ್ಲಾ ಸ್ವತ್ತುಗಳು, ಅದನ್ನು ಪುನರ್ ರಚಿಸುವವರೆಗೆ ಸರ್ಕಾರದಲ್ಲಿ ನಿಹಿತವಾಗತಕ್ಕದ್ದು.

[1][(3) ಮುನ್ಸಿಪಲ್ ಕೌನ್ಸಿಲ್ ನ ವಿಘಟನೆಯಾದಾಗ, ಅಂಥ ವಿಘಟನೆಯಾದ ದಿನಾಂಕದಿಂದ ಆರು ತಿಂಗಳುಗಳು ಮುಕ್ತಾಯವಾಗುವುದಕ್ಕೆ ಮುಂಚೆ ಈ ಅಧಿನಿಯಮದ ಅಡಿಯಲ್ಲಿ ಉಪಬಂಧಿಸಲಾಗಿರುವ ರೀತಿಯಲ್ಲಿ, ಅದನ್ನು ಪುನರ್ ರಚಿಸತಕ್ಕದ್ದು:

ಪರಂತು, ಮುನ್ಸಿಪಲ್ ಕೌನ್ಸಿಲ್ ಮುಂದುವರಿದಿದ್ದರೆ ಉಳಿಯಬಹುದಾಗಿದ್ದ ಅವಧಿಯು ಆರು ತಿಂಗಳಿಗಿಂತಲೂ ಕಡಿಮೆಯಾಗಿದ್ದಲ್ಲಿ, ಅಂಥ ಅವಧಿಗೆ ಮುನ್ಸಿಪಲ್ ಕೌನ್ಸಿಲ್‌ನ್ನು ರಚಿಸುವುದಕ್ಕಾಗಿ ಈ ಪ್ರಕರಣದ ಅಡಿಯಲ್ಲಿ ಯಾವುದೇ ಚುನಾವಣೆಯನ್ನು ನಡೆಸುವುದು ಅವಶ್ಯಕವಾಗತಕ್ಕದ್ದಲ್ಲ.

(4) ಮುನ್ಸಿಪಲ್ ಕೌನ್ಸಿಲ್ ನ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆಯೇ ವಿಘಟವಾದ ಮೇಲೆ ರಚಿತವಾದ ಮುನ್ಸಿಪಲ್ ಕೌನ್ಸಿಲ್, ವಿಘಟಿತ ಮುನ್ಸಿಪಲ್ ಕೌನ್ಸಿಲ್‌ನ್ನು, ವಿಘಟನೆ ಮಾಡದಿದ್ದರೆ ಅದು ಮುಂದುವರಿಯುತ್ತಿದ್ದಂಥ ಉಳಿದ ಅವಧಿಯವರೆಗೆ ಮಾತ್ರ ಮುಂದುವರೆಯತಕ್ಕದ್ದು.][1]

1. 1994ರ ಅಧಿನಿಯಮ 36ರ ಮೂಲಕ 01.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(5) ಉಪ-ಪ್ರಕರಣ (1) ರ ಮೇರೆಗಿನ ಮುನ್ಸಿಪಲ್ ಕೌನ್ಸಿಲ್ ನ [1][ವಿಘಟನೆ][1]ಯ ಆದೇಶವನ್ನು [2][xxx][2] ಅದಕ್ಕಾಗಿನ ಕಾರಣಗಳ ವಿವರಣೆಯೊಂದಿಗೆ, ಅದನ್ನು ಮಾಡಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಇಡತಕ್ಕದ್ದು.

1. 1994ರ ಅಧಿನಿಯಮ 36ರ ಮೂಲಕ 01.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 1994ರ ಅಧಿನಿಯಮ 36ರ ಮೂಲಕ 01.6.1994 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

317. ಮುನ್ಸಿಪಲ್ ಕೌನ್ಸಿಲ್‌ಗಳ ನಡುವಣ ವಿವಾದಗಳು.- (1) ಯಾವ ವಿಷಯದ ವಿವಾದದ ತೀರ್ಮಾನಕ್ಕಾಗಿ ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿಲ್ಲವೋ ಆ ಯಾವುದೇ ವಿವಾದವು, ಈ ಅಧಿನಿಯಮದ ಅಥವಾ ಇತರ ಯಾವುದೇ ಅಧಿನಿಯಮದ ಉಪಬಂಧಗಳ ಮೇರೆಗೆ ಉದ್ಭವಿಸುವ ಯಾವುವೇ ವಿಷಯಗಳ ಬಗ್ಗೆ ಮುನ್ಸಿಪಲ್ ಕೌನ್ಸಿಲ್ ಮತ್ತು ಒಂದು ಅಥವಾ ಹೆಚ್ಚು ಇತರ ಮುನ್ಸಿಪಲ್ ನಿಕಾಯಗಳ ನಡುವೆ ಉದ್ಭವಿಸಿದ್ದರೆ, ಮತ್ತು ಆ ವಿವಾದವು ಸೌಹಾರ್ದಯುತವಾಗಿ ಇತ್ಯರ್ಥವಾಗದಿದ್ದರೆ,-

(ಎ) ಡೆಪ್ಯುಟಿ ಕಮಿಷನರ್ ನು, ವಿವಾದವು ಅದೇ ಜಿಲ್ಲೆಯಲ್ಲಿ ಎರಡು ಅಥವಾ ಹೆಚ್ಚು ಮುನ್ಸಿಪಲ್ ಕೌನ್ಸಿಲ್‌ಗಳ ಅಥವಾ ಅದೇ ಜಿಲ್ಲೆಯಲ್ಲಿನ ಟೌನ್ ಮುನ್ಸಿಪಲ್ ಕೌನ್ಸಿಲ್ ಮತ್ತು [1][ಪಟ್ಟಣ ಪಂಚಾಯತಿ][1]ಯ ನಡುವೆ ಇದ್ದರೆ ವಿವಾದದ ಸಂಜ್ಞೇಯತೆ ತೆಗೆದುಕೊಳ್ಳಬಹುದು ಮತ್ತು ತಾನೇ ಅದನ್ನು ತೀರ್ಮಾನಿಸಬಹುದು;

1. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಬಿ) ಯಾವುದೇ ನಗರ ಪಾಲಿಕೆಯು, ವಿವಾದಕ್ಕೆ ಪಕ್ಷಕಾರವಾಗಿದ್ದಾಗ ಹೊರತು, ಅದೇ ಕಂದಾಯ ವಿಭಾಗಗಳಲ್ಲಿ ಇತರ ಎಲ್ಲಾ ಪ್ರಕರಣಗಳನ್ನು [1][ಪೌರಾಡಳಿತ ನಿರ್ದೇಶಕ][1]ನು ಆ ವಿವಾದದ ಸಂಜ್ಞೇಯತೆ ತೆಗೆದುಕೊಳ್ಳಬಹುದು ಮತ್ತು ಅದನ್ನು ತೀರ್ಮಾನಿಸಬಹುದು; ಮತ್ತು

1. 2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಸಿ) ನಗರ ಪಾಲಿಕೆಯು, ಆ ವಿವಾದಕ್ಕೆ ಪಕ್ಷಕಾರವಾಗಿದ್ದರೆ ಅಥವಾ ವಿವಾದವು ಎರಡು ಅಥವಾ ಹೆಚ್ಚು ಕಂದಾಯ ವಿಭಾಗಗಳಲ್ಲಿನ ಮುನ್ಸಿಪಲ್ ನಿಕಾಯಗಳ ನಡುವೆ ಇದ್ದರೆ, ಸರ್ಕಾರವು ಆ ವಿವಾದವನ್ನು ತೀರ್ಮಾನಿಸಬಹುದು.

(2) ಉಪಪ್ರಕರಣ (1) ರ (ಬಿ) ಖಂಡದ ಮೇರೆಗಿನ ಡೆಪ್ಯೂಟಿ [1][ಪೌರಾಡಳಿತ ನಿರ್ದೇಶಕ][1]ನ ಆದೇಶದ ಮೇಲೆ ಕಮಿಷನರ್ ನಿಗೆ ಮತ್ತು (1)ನೇ ಉಪಪ್ರಕರಣದ (ಬಿ) ಖಂಡದ ಮೇರೆಗಿನ [1][ಪೌರಾಡಳಿತ ನಿರ್ದೇಶಕ][1]ನ ಆದೇಶದ ಮೇಲೆ, ಸರ್ಕಾರಕ್ಕೆ ಅಪೀಲು ಇರತಕ್ಕದ್ದು.

1. 2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) ಉಪ-ಪ್ರಕರಣ (1) ರಲ್ಲಿ ಉಲ್ಲೇಖಿಸಿದ ಯಾವುದೇ ವಿವಾದಕ್ಕೆ ಸಂಬಂಧಿಸಿದಂತೆ ಸಿವಿಲ್ ನ್ಯಾಯಾಲಯವು ಯಾವುದೇ ದಾವೆಯನ್ನು ಪುರಸ್ಕರಿಸತಕ್ಕದ್ದಲ್ಲ.

318. ಮುನ್ಸಿಪಲ್ ಕೌನ್ಸಿಲ್ ನ ಪರವಾಗಿ ಅಥವಾ ಅದು ತಪ್ಪಿದಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳ ಅಧಿಕಾರ ಮತ್ತು ಮುನ್ಸಿಪಲ್ ನಿಧಿಯ ಹೊಣೆ.- [1][ಪೌರಾಡಳಿತ ನಿರ್ದೇಶಕ][1]ನು ಅಥವಾ ಸರ್ಕಾರದ ಯಾರೇ ಅಧಿಕಾರಿಯು ಅಥವಾ ಅವನಿಂದ ನೇಮಕಗೊಂಡ ಯಾರೇ ವ್ಯಕ್ತಿಯು ಅಥವಾ ಸರ್ಕಾರವು, ಈ ಅಧಿನಿಯಮದ ಮೇರೆಗೆ ಮುನ್ಸಿಪಲ್ ಕೌನ್ಸಿಲ್ ನ ಪರವಾಗಿ ಅಥವಾ ಅದು ತಪ್ಪಿದಲ್ಲಿ ಕಾನೂನುಸಮ್ಮತ ಕ್ರಮವನ್ನು ಕೈಗೊಂಡಾಗ, ಈ ಉದ್ದೇಶಕ್ಕಾಗಿ ಅವಶ್ಯವಿರುವಂಥ ಕರಾರುಗಳನ್ನು ಮಾಡಿಕೊಳ್ಳಲು, ಅವನು ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಯಾರ ಅಧಿಕಾರಗಳನ್ನು ಅವನು ಚಲಾಯಿಸುತ್ತಿರುವನೋ, ಆ ಮುನ್ಸಿಪಲ್ ಪ್ರಾಧಿಕಾರದ ಹಾಗೆ ಈ ಅಧಿನಿಯಮದ ಮೇರೆಗೆ ಅಂಥದೇ ರಕ್ಷಣೆಗೆ ಹಕ್ಕುಳ್ಳವನಾಗಿರತಕ್ಕದ್ದು, ಮತ್ತು ಅಂಥ ಮುನ್ಸಿಪಲ್ ಪ್ರಾಧಿಕಾರವು ಅಂಥ ಅಧಿಕಾರಗಳನ್ನು ಚಲಾಯಿಸಿ ಕ್ರಮ ಕೈಗೊಂಡಿದ್ದರಿಂದಾಗಿ ಎಷ್ಟರಮಟ್ಟಿಗೆ ಯಾರೇ ವ್ಯಕ್ತಿಯು ಹಾನಿ ಅನುಭವಿಸುತ್ತಿದ್ದನೋ ಅಷ್ಟರ ಮಟ್ಟಿಗೆ ಮುನ್ಸಿಪಲ್ ನಿಧಿಯಿಂದ ವಸೂಲ್ಮಾಡತಕ್ಕದ್ದು.

1. 2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

319. ಮುನ್ಸಿಪಲ್ ಕೌನ್ಸಿಲ್‌ಗಳ ಬೈಲಾಗಳನ್ನು ರದ್ದುಗೊಳಿಸಲು ಅಥವಾ ಮಾರ್ಪಾಟು ಮಾಡಲು ಸರ್ಕಾರದ ಅಧಿಕಾರ.- (1) ಸರ್ಕಾರವು, ಅಧಿಸೂಚನೆ ಮೂಲಕ, ಯಾವುದೇ ಕಾಲದಲ್ಲಿ ಯಾವುದೇ ಮುನ್ಸಿಪಲ್ ಕೌನ್ಸಿಲ್ ರಚಿಸಿದ ಯಾವುದೇ ಬೈಲಾವನ್ನು ಪೂರ್ಣವಾಗಿ ಅಥವಾ ಭಾಗಶಃ ನಿರಶನಗೊಳಿಸಬಹುದು ಅಥವಾ ಮಾರ್ಪಾಟು ಮಾಡಬಹುದು:

ಪರಂತು, ಈ ಉಪಪ್ರಕರಣದ ಮೇರೆಗೆ ಯಾವುದೇ ಕ್ರಮವನ್ನು ಕೈಕೊಳ್ಳುವ ಮುಂಚೆ, ಸರ್ಕಾರವು ಉದ್ದೇಶಿಸಿದ ಅಧಿಸೂಚನೆಯ ಕರಡನ್ನು ಪ್ರಕಟಿಸತಕ್ಕದ್ದು ಮತ್ತು ಅದನ್ನು ಮುನ್ಸಿಪಲ್ ಕೌನ್ಸಿಲ್ ಗೆ ತಿಳಿಸತಕ್ಕದ್ದು, ಪ್ರಸ್ತಾವನೆಯ ವಿರುದ್ಧ ಕಾರಣವನ್ನು ತೋರಿಸಲು ಮುನ್ಸಿಪಲ್ ಕೌನ್ಸಿಲ್ ಗೆ ಹಾಗೂ ಸಾರ್ವಜನಿಕರಿಗೆ ಯುಕ್ತ ಅವಧಿಯನ್ನು ನಿಗದಿಪಡಿಸತಕ್ಕದ್ದು ಮತ್ತು ಮುನ್ಸಿಪಲ್ ಕೌನ್ಸಿಲ್ ನ ಹಾಗೂ ಸಾರ್ವಜನಿಕ ವಿವರಣೆಗಳು ಮತ್ತು ಆಕ್ಷೇಪಣೆಗಳು ಯಾವುವಾದರೂ ಇದ್ದರೆ, ಅವುಗಳನ್ನು ಪರಿಗಣಿಸತಕ್ಕದ್ದು.

(2) ಯಾವುದೇ ಬೈಲಾದ ನಿರಸನ ಅಥವಾ ಮಾರ್ಪಾಟು ಜಾರಿಗೆ ಬರುವ ಯಾವುದೇ ದಿನಾಂಕವನ್ನು ಅದರಲ್ಲಿ ನಿರ್ದಿಷ್ಟಪಡಿಸಿರದಿದ್ದರೆ, ಸರ್ಕಾರಿ ರಾಜಪತ್ರದಲ್ಲಿ, ಅಧಿಸೂಚನೆಯ ಪ್ರಕಟಣೆಯ ದಿನಾಂಕದಿಂದ ಪರಿಣಾಮಕಾರಿಯಾಗತಕ್ಕದ್ದು, ಮತ್ತು ಅಂಥ ದಿನಾಂಕಕ್ಕೆ ಮುಂಚೆ ಮಾಡಿದ, ಯಾವುದೇ ಕೃತ್ಯ ಬಿಟ್ಟು ಬಿಟ್ಟು ಅಥವಾ ಗುರಿಯಾದ ಯಾವುದೇ ಕಾರ್ಯಕ್ಕೆ ಬಾಧಿಸತಕ್ಕದ್ದಲ್ಲ.

320. ಅಧಿಕಾರಿಗಳನ್ನು ವರ್ಗಾವಣೆ ಮಾಡಲು ಅಧಿಕಾರಗಳು.- (1) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಸರ್ಕಾರವು, ಮುನ್ಸಿಪಲ್ ಕೌನ್ಸಿಲ್ ನ ಯಾರೇ ಅಧಿಕಾರಿಯನ್ನು ಅಥವಾ ನೌಕರನನ್ನು, ಯಾವುದೇ ಇತರ ಮುನ್ಸಿಪಲ್ ಕೌನ್ಸಿಲ್ ನ ಅಥವಾ ಇತರ ಯಾವುದೇ ಸ್ಥಳೀಯ ಪ್ರಾಧಿಕಾರದ ಅಥವಾ ಸರ್ಕಾರವು ಯಾವುದೇ ಇಲಾಖೆಯ ಸೇವೆಗೆ ವರ್ಗಾಯಿಸಲು ಅಧಿಕಾರವನ್ನು ಹೊಂದಿರತಕ್ಕದ್ದು.

(2) ಸರ್ಕಾರವು (1)ನೇ ಉಪಪ್ರಕರಣದ ಮೇರೆಗೆ ಮಾಡಿದ ವರ್ಗಾವಣೆಗಳನ್ನು ಪರಿಣಾಮಗೊಳಿಸುವ ಉದ್ದೇಶಕ್ಕಾಗಿ, ಅವಶ್ಯವೆಂದು ಅದು ಭಾವಿಸುವಂಥ ಸಾಮಾನ್ಯ ಅಥವಾ ವಿಶೇಷ ನಿರ್ದೇಶನಗಳನ್ನು ಹೊರಡಿಸಲು ಅಧಿಕಾರ ಹೊಂದಿರತಕ್ಕದ್ದು ಮತ್ತು ಅಂಥ ನಿರ್ದೇಶನಗಳನ್ನು ಮುನ್ಸಿಪಲ್ ಕೌನ್ಸಿಲ್ ಮತ್ತು ಸಂಬಂಧಪಟ್ಟ ಮುನ್ಸಿಪಲ್ ಪ್ರಾಧಿಕಾರವು ಪಾಲಿಸತಕ್ಕದ್ದು.

321. ಸರ್ಕಾರದಿಂದ ಅಧಿಕಾರಗಳ ಪ್ರತ್ಯಾಯೋಜನೆಗಳು.- (1) ಸರ್ಕಾರವು, ಅಧಿಸೂಚನೆ ಮೂಲಕ ನಿಯಮಗಳನ್ನು ರಚಿಸುವ ಅಧಿಕಾರವನ್ನು ಹೊರತುಪಡಿಸಿ, [2][xxx][2] ಈ ಅಧಿನಿಯಮದ ಮೇರೆಗಿನ ಅದರ ಅಧಿಕಾರಗಳನ್ನು [1][ಪೌರಾಡಳಿತ ನಿರ್ದೇಶಕನಿಗೆ, ಡೆಪ್ಯುಟಿ ಕಮಿಷನರ್ ನಿಗೆ, ಸಹಾಯಕ ಆಯುಕ್ತನಿಗೆ ಅಥವಾ ತಹಶೀಲ್ದಾರ್ ನಿಗೆ][1], ಪ್ರತ್ಯಾಯೋಜಿಸಬಹುದು.

1. 2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 1986ರ ಅಧಿನಿಯಮ 33ರ ಮೂಲಕ 6.6.1986 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(2) ಈ ಅಧಿನಿಯಮದ ಮೇರೆಗೆ [1][ಪೌರಾಡಳಿತ ನಿರ್ದೇಶಕ][1] ನಿಗೆ ಪ್ರದಾನ ಮಾಡಿದ ಯಾವುದೇ ಅಧಿಕಾರವನ್ನು, ಸರ್ಕಾರವು ಅಧಿಸೂಚನೆ ಮೂಲಕ ಡೆಪ್ಯೂಟಿ ಕಮಿಷನರ್ ನಿಗೆ ಪ್ರತ್ಯಾಯೋಜಿಸಬಹುದು.

1. 2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(2ಎ) ಸರ್ಕಾರವು ಅಧಿಸೂಚನೆಯ ಮೂಲಕ ನಿಯಮಗಳ ರಚನಾಧಿಕಾರವನ್ನು ಹೊರತುಪಡಿಸಿ, ಈ ಅಧಿನಿಯಮದ ಅಡಿಯಲ್ಲಿ ಯಾರೇ ಅಧಿಕಾರಿಗೆ ಪ್ರದತ್ತವಾದ ತನ್ನ ಅಧಿಕಾರಗಳನ್ನು ಅಥವಾ ಅಧಿಕಾರವನ್ನು ಯಾರೇ ಇತರ ಅಧಿಕಾರಿಗೆ ಪ್ರತ್ಯಾಯೋಜಿಸಬಹುದು.][1]

1. 2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(3) [1][ಉಪ-ಪ್ರಕರಣ (1), (2) ಅಥವಾ (2ಎ)][1] ಮೇರೆಗಿನ ಪ್ರತಿಯೊಂದು ಪ್ರತ್ಯಾಯೋಜನೆಯು, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನಿರ್ಬಂಧಗಳಿಗೆ ಮತ್ತು ಷರತ್ತುಗಳಿಗೊಳಪಟ್ಟಿರತಕ್ಕದ್ದು.

1.2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

322. ಪುನರೀಕ್ಷಣೆ.- (1) [2][ಪೌರಾಡಳಿತ ನಿರ್ದೇಶಕ][2]ನು, ಈ ಅಧಿನಿಯಮದ ಮೇರೆಗಿನ [3][ತೆರಿಗೆ ನಿರ್ಧರಣೆ ಮತ್ತು ತೆರಿಗೆ ನಿರ್ಧರಣೆಯ ಪುನರೀಕ್ಷಣೆ ಆದೇಶಗಳೂ ಒಳಗೊಂಡಂತೆ][3] ಯಾರೇ ಅಧೀನ ಅಧಿಕಾರಿಯ ಯಾವುವೇ ನಡೆವಳಿಗಳ ದಾಖಲೆಯನ್ನು [1][ಕೇಳಬಹುದು][1] ಮತ್ತು ಪರೀಕ್ಷಿಸಬಹುದು ಮತ್ತು [1][ತಾನು][1] ಸೂಕ್ತವೆಂದು ಭಾವಿಸಬಹುದಾದಂಥ ವಿಚಾರಣೆಯನ್ನು ಮಾಡಿದ ತರುವಾಯ, ಅಧೀನ ಅಧಿಕಾರಿಯ ಆದೇಶವು ಕಾನೂನಿಗೆ ವಿರುದ್ಧವಾದುದು ಮತ್ತು ನ್ಯಾಯ ವೈಫಲ್ಯತೆಯನ್ನು ಉಂಟು ಮಾಡಿದೆಯೆಂದು ಮನದಟ್ಟಾದರೆ, [1][ತಾನು][1], ಆ ಬಗ್ಗೆ ನ್ಯಾಯೋಚಿತವೆಂದು ಭಾವಿಸುವಂಥ ಆದೇಶಗಳನ್ನು ಮಾಡಬಹುದು.

1. 1986ರ ಅಧಿನಿಯಮ 33ರ ಮೂಲಕ 6.6.1986 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

3. 1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(2) ಉಪಪ್ರಕರಣ (1)ರಲ್ಲಿ ಏನೇ ಇದ್ಯಾಗ್ಯೂ [2][[3][ಪೌರಾಡಳಿತ ನಿರ್ದೇಶಕ][3]ನು][2], ಅಪೀಲು ಪ್ರಾಧಿಕಾರದ ವ್ಯವಹರಣೆಗಳನ್ನು ಒಳಗೊಂಡಂತೆ ಮುನ್ಸಿಪಲ್ ಕೌನ್ಸಿಲ್ ನ ಯಾವುವೇ ನಡೆವಳಿಗಳ ದಾಖಲೆಗಳನ್ನು ತರಿಸಿಕೊಳ್ಳಬಹುದು ಮತ್ತು ಪರೀಕ್ಷಿಸಬಹುದು ಮತ್ತು ಅಂಥ ನಡೆವಳಿಗಳಲ್ಲಿನ ಯಾವುದೇ ಆದೇಶವು ಕಾನೂನಿಗೆ ವಿರುದ್ಧವಾಗಿದೆ ಅಥವಾ [3][ಮುನ್ಸಿಪಲ್ ಏರಿಯಾ][3] ದ ಹಿತಾಸಕ್ತಿಗಳಿಗೆ ಬಾಧಕವನ್ನುಂಟುಮಾಡುತ್ತದೆ ಎಂದು ಮನದಟ್ಟಾದರೆ, ಅದು ನ್ಯಾಯೋಚಿತವೆಂದು [2][ಭಾವಿಸುವಂಥ][2] ಆದೇಶಗಳನ್ನು ಮಾಡಬಹುದು.][1]

1. 1976ರ ಅಧಿನಿಯಮ 83ರ ಮೂಲಕ (2)ನೇ ಉಪಪ್ರಕರಣವನ್ನು 8.12.1976 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 1986ರ ಅಧಿನಿಯಮ 33ರ ಮೂಲಕ 6.6.1986 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

3. 2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(3)][1] ಉಪಪ್ರಕರಣ [2][(1)ರ ಮತ್ತು (2)ರ][2] ಮೇರೆಗಿನ ಯಾವುದೇ ಆದೇಶವನ್ನು, ಅದರಿಂದ ಬಾಧಿತನಾದ ಯಾರೇ ಪಕ್ಷಕಾರನಿಗೆ ಅವನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ಕೊಟ್ಟಿದ್ದ ಹೊರತು ಮಾಡತಕ್ಕದ್ದಲ್ಲ.

1. 1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಪುನಃರಂಕಿಸಲಾಗಿದೆ.

2. 1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಅಧ್ಯಾಯ-XIII
ನಿಯಮಗಳು ಮತ್ತು ಬೈಲಾಗಳು

323. ಸರ್ಕಾರದಿಂದ ನಿಯಮಗಳ ರಚನೆ.- (1) ಸರ್ಕಾರವು, ಅಧಿಸೂಚನೆ ಮೂಲಕ [1][ಮತ್ತು ಪೂರ್ವ ಪ್ರಕಟಣೆಯ ತರುವಾಯ,][1] ಈ ಅಧಿನಿಯಮದ ಎಲ್ಲಾ ಅಥವಾ ಯಾವುವೇ

ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು ಮತ್ತು ಯಾವ ನಡೆವಳಿಗಳಿಗಾಗಿ ನಮೂನೆಯನ್ನು ನಿಯಮಿಸತಕ್ಕದ್ದೆಂದು, ಅದು ಪರಿಗಣಿಸುವುದೋ ಆ ಯಾವುವೇ ನಡೆವಳಿಗಳಿಗೆ ನಮೂನೆಗಳನ್ನು ಅಂಥ ನಿಯಮಗಳ ಮೂಲಕ ನಿಯಮಿಸಬಹುದು.

1. 1983ರ ಅಧಿನಿಯಮ 12ರ ಮೂಲಕ 24.2.1983 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ ಮತ್ತು 1983ರ ಅಧಿನಿಯಮ 12ರ ಮೂಲಕ 1.3.1983 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ;

(ಎ) ವ್ಯವಹಾರ ನಡೆಸುವುದನ್ನು ನಿಯಂತ್ರಿಸುವ ಮತ್ತು ಯಾವುವೇ ಅಧಿಕಾರಗಳ ಅಥವಾ ಕರ್ತವ್ಯಗಳ ಪ್ರತ್ಯಾಯೋಜನೆ ಮತ್ತು ಮುನ್ಸಿಪಲ್ ಕೌನ್ಸಿಲ್ ನ ಸಮಿತಿಗಳ ನೇಮಕ ಮತ್ತು ರಚನೆಯ ಬಗ್ಗೆ;

(ಬಿ) (i) ಅಧ್ಯಕ್ಷರ, ಉಪಾಧ್ಯಕ್ಷರ ಯಾವುದೇ ಸಮಿತಿಯ ಅಧ್ಯಕ್ಷರ ಅಥವಾ ಮುನ್ಸಿಪಲ್ ಕಮಿಷನರ್ ನ ಮತ್ತು ಚೀಫ್ ಆಫೀಸರ್ ನ ಕಾರ್ಯನಿರ್ವಾಹಕ ಪ್ರಕಾರ್ಯಗಳನ್ನು ನಿರ್ಧರಿಸುವುದು ಮತ್ತು ಅಂಥ ವ್ಯಕ್ತಿಗಳಿಗೆ ಮುನ್ಸಿಪಲ್ ಕೌನ್ಸಿಲ್ ನ ಯಾವುದೇ ಅಧಿಕಾರ ಅಥವಾ ಕರ್ತವ್ಯಗಳನ್ನು ಪ್ರತ್ಯಾಯೋಜಿಸುವ ಬಗ್ಗೆ;

(ii) ಮುನ್ಸಿಪಲ್ ಕೌನ್ಸಿಲ್ ನಿಯೋಜಿಸಬೇಕಾದ ಅಧಿಕಾರಿಗಳ ಮತ್ತು ನೌಕರರ, ಸಿಬ್ಬಂದಿಯನ್ನು ಅವರ ಅನುಕ್ರಮ ಪದನಾಮಗಳನ್ನು ಮತ್ತು ಕರ್ತವ್ಯಗಳನ್ನು ಮತ್ತು 70ನೇ ಪ್ರಕರಣದ ಮೇರೆಗೆ ಅವರಿಗೆ ಪ್ರತ್ಯಾಯೋಜಿಸಬೇಕಾದ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ನಿರ್ಧರಿಸುವ ಬಗ್ಗೆ;

(ಸಿ) ಮುನ್ಸಿಪಲ್ ಕೌನ್ಸಿಲ್ ನ ಆಡಳಿತಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳಲ್ಲಿ ಅದರ ಅಧಿಕಾರಿಗಳ ಮತ್ತು ನೌಕರರ ಮಾರ್ಗದರ್ಶನದ ಬಗ್ಗೆ;

(ಡಿ) ಯಾರಿಂದ ಭದ್ರತೆಯನ್ನು ಅಗತ್ಯಪಡಿಸುವುದು ಯುಕ್ತವೆಂದು ಭಾವಿಸಬಹುದೋ, ಆ ಯಾರೇ ಅಧಿಕಾರಿಯು ಅಥವಾ ನೌಕರನು ಒದಗಿಸಬೇಕಾದ ಭದ್ರತೆಯ ಮೊಬಲಗು ಮತ್ತು ಸ್ವರೂಪದ ಬಗ್ಗೆ;

(ಇ) [1][ಮುನ್ಸಿಪಲ್ ಏರಿಯಾ][1]ದಲ್ಲಿ ತೆರಿಗೆಗಳನ್ನು ನಿರ್ಧರಿಸುವುದು, ವಿಧಿಸುವುದು ಮತ್ತು ಸಂಗ್ರಹಿಸುವುದು, ವಿನಾಯಿತಿಯನ್ನು ಕೊಡಬಹುದಾದ ಸಂದರ್ಭಗಳು, ಯಾವ ಷರತ್ತುಗಳ ಮೇಲೆ ಮತ್ತು ಎಷ್ಟರ ಮಟ್ಟಿಗೆ ಮಾಫಿಗಳನ್ನು ಮಂಜೂರು ಮಾಡುವುದು, ಮತ್ತು ಅಂಥ ತೆರಿಗೆಗಳಿಗೆ ಸಂಬಂಧಿಸಿದಂತೆ, ಮರುಪಾವತಿಗಳನ್ನು ಮಾಡಬೇಕಾದ ಮತ್ತು ಸಂದಾಯ ಮಾಡಬೇಕಾದಂಥ ವ್ಯವಸ್ಥೆ, 139ನೇ ಪ್ರಕರಣದ ಮೇರೆಗೆ ಯಾವುದೇ ತೆರಿಗೆಯ ಬದಲಾಗಿ ನಿಗದಿಪಡಿಸಬೇಕಾದ ಚಾರ್ಜ್ಗಳು ಅಥವಾ ಸಂದಾಯಗಳ ಮಿತಿಗಳು, ಯಾವುದೇ ತೆರಿಗೆಗೆ ಬಾಕಿಯಿರುವ ಸಂದಾಯಗಳಿಗಾಗಿ ತಗಾದೆ ನೋಟೀಸ್ ಗಳಿಗಾಗಿ ಮತ್ತು ಜಪ್ತಿ ವಾರೆಂಟ್ ಗಳನ್ನು ಹೊರಡಿಸಲು ಮತ್ತು ಜಾರಿಗೊಳಿಸುವುದಕ್ಕಾಗಿನ ಫೀಜುಗಳು; ಮತ್ತು ಹಿಡಿದು ಇಟ್ಟುಕೊಂಡಿರುವ ಯಾವುವೇ ಜಾನುವಾರುಗಳ ನಿರ್ವಹಣೆಗೆ ವಿಧಿಸತಕ್ಕ ದರಗಳು; ಮತ್ತು ಅಂಥ ತೆರಿಗೆಗಳು, ವೆಚ್ಚಗಳು, ಸಂದಾಯಗಳು; ಫೀಜುಗಳ ಅಥವಾ ದರಗಳನ್ನು ಯಾವ ಕಾಲದಲ್ಲಿ ಮತ್ತು ಯಾವ ವಿಧಾನದಲ್ಲಿ ವಿಧಿಸತಕ್ಕದ್ದು ಅಥವಾ ಸಂಗ್ರಹಿಸತಕ್ಕದ್ದು ಮತ್ತು ಸಂದಾಯವಾಗತಕ್ಕದ್ದು ಮತ್ತು ಅವುಗಳ ಸಂದಾಯವನ್ನು ಸ್ವೀಕರಿಸಲು ಅಧಿಕೃತರಾದ ವ್ಯಕ್ತಿಗಳು ಮತ್ತು 144ನೇ ಪ್ರಕರಣದ ಮೇರೆಗೆ ಚರ ಮತ್ತು ಸ್ಥಿರ ಸ್ವತ್ತಿನ ಹರಾಜನ್ನು ನಡೆಸತಕ್ಕ ರೀತಿಯನ್ನು ನಿಯಮಿಸುವ ಬಗ್ಗೆ;

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಎಫ್) ಯಾವುದೇ ತೆರಿಗೆಯ ಸಂಬಂಧದಲ್ಲಿ ಅಥವಾ ಯಾವುದೇ ತೆರಿಗೆಯನ್ನು ವಸೂಲ್ಮಾಡುವುದಕ್ಕಾಗಿನ ವೆಚ್ಚಗಳಿಗಾಗಿ ಅಥವಾ ಮತ್ತು ವಸೂಲೀಯವಲ್ಲವೆಂದು ತೆಗೆದುಹಾಕಬಹುದಾದ ಇತರ ಯಾವುದೇ ಲೆಕ್ಕ, ಮತ್ತು ಯಾವ ಷರತ್ತುಗಳಿಗೊಳಪಟ್ಟು ಜಪ್ತಿಗಾಗಿ ಫೀಜನ್ನು ವಿಧಿಸಬಹುದೋ ಯಾವುದೇ ಫೀಜಿನ ಪೂರ್ಣ ಅಥವಾ ಯಾವುದೇ ಭಾಗವನ್ನು ಮಾಫಿ ಮಾಡಹುದಾದಂಥ ಷರತ್ತುಗಳನ್ನು ನಿಯಮಿಸುವ ಬಗ್ಗೆ;

(ಜಿ) ಅಧಿಕಾರಿಗಳು ಮತ್ತು ನೌಕರರ ನೌಕರಿಭರ್ತಿ ಮತ್ತು ಸೇವಾ ಷರತ್ತುಗಳನ್ನು ವಿನಿಯಮಿಸುವುದು ಮತ್ತು ಅಂಥ ಅಧಿಕಾರಿಗಳು ಮತ್ತು ನೌಕರರು ಅಥವಾ ಅವರಲ್ಲಿ ಯಾರಾದರೂ ನಿವೃತ್ತರಾದಾಗ ಅಥವಾ ಅವರ ಕರ್ತವ್ಯದ ನಿರ್ವಹಣೆಯಲ್ಲಿದ್ದಾಗ, ಅಸಮರ್ಥರಾದಾಗ, ಪಿಂಚಣಿ, ಉಪದಾನಗಳು ಅಥವಾ ಅನುಕಂಪ ಭತ್ಯೆಗಳನ್ನು ಯಾವ ಷರತ್ತುಗಳಿಗೊಳಪಟ್ಟು ಸ್ವೀಕರಿಸತಕ್ಕದ್ದೋ ಆ ಷರತ್ತುಗಳನ್ನು ಮತ್ತು ಅಂಥ ಪಿಂಚಣಿ, ಉಪದಾನಗಳು, ಅಥವಾ ಅನುಕಂಪ ಭತ್ಯೆಗಳ ಮೊಬಲಗನ್ನು, ನಿರ್ಧರಿಸುವುದು, ಮತ್ತು ಯಾರೇ ಅಧಿಕಾರಿಗಳು ಅಥವಾ ನೌಕರರು, ಮರಣ ಹೊಂದಿದಾಗ, ಜೀವಂತವಾಗಿ ಉಳಿದಿರುವ ಸಂಬಂಧಿಗಳಿಗೆ ಯಾವುವೇ ಉಪದಾನಗಳು ಅಥವಾ ಅನುಕಂಪ ಭತ್ಯೆಗಳನ್ನು ಯಾವ ಷರತ್ತುಗಳ ಮೇರೆಗೆ ಸಂದಾಯ ಮಾಡಬಹುದೋ ಆ ಷರತ್ತುಗಳನ್ನು ನಿಯಮಿಸುವ ಬಗ್ಗೆ;

(ಹೆಚ್) ಯಾವ ಷರತ್ತುಗಳ ಮೇರೆಗೆ ತೆರಿಗೆದಾರರು, ಸರ್ಕಾರಿ ಲೆಕ್ಕ ಪರಿಶೋಧಕನ ಮುಂದೆ ಹಾಜರಾಗಬಹುದೋ, ಪುಸ್ತಕ ಮತ್ತು ಓಚರ್ ಗಳನ್ನು ಪರಿಶೀಲಿಸಬಹುದೋ ಮತ್ತು ಲೆಕ್ಕದಲ್ಲಿ ನಮೂದಿಸಿದ ಅಥವಾ ಅದರಿಂದ ಬಿಟ್ಟುಬಿಟ್ಟ ಬಾಬುಗಳ ಬಗ್ಗೆ ಆಕ್ಷೇಪಣೆ ಎತ್ತಬಹುದೋ, ಆ ಷರತ್ತುಗಳ ಬಗ್ಗೆ;

(ಐ) ಲೆಕ್ಕಪರಿಶೋಧಕರ ಅಧಿಕಾರಗಳು ಮತ್ತು ಕರ್ತವ್ಯಗಳು ಮತ್ತು ಲೆಕ್ಕ ಪರಿಶೋಧನೆಯನ್ನು ನಡೆಸುವುದಕ್ಕೆ ಅವರು ಅನುಸರಿಸಬೇಕಾದ ಪ್ರಕ್ರಿಯೆ ಮತ್ತು ಅಂಥ ಲೆಕ್ಕಪರಿಶೋಧನೆಯನ್ನು ನಡೆಸಬಹುದಾದಂಥ ಕಾಲಗಳ ಬಗ್ಗೆ;

(ಜೆ) ಮುನ್ಸಿಪಲ್ ನಿಧಿಯಿಂದ ಭಾಗಶಃ ಅಥವಾ ಪೂರ್ಣವಾಗಿ ನಿರ್ವಹಿಸಬೇಕಾದ ಕಾಮಗಾರಿಗಳಿಗಾಗಿ ನಕ್ಷೆ ಮತ್ತು ಅಂದಾಜುಗಳನ್ನು ತಯಾರಿಸುವುದು ಮತ್ತು ಯಾವ ಪ್ರಾಧಿಕಾರಿಯು ಮತ್ತು ಯಾವ ಷರತ್ತುಗಳಿಗೊಳಪಟ್ಟು, ಕಾಮಗಾರಿಗಳ ಅಂಥ ನಕ್ಷೆಗಳನ್ನು ಮತ್ತು ಅಂದಾಜುಗಳನ್ನು ಮಂಜೂರು ಮಾಡಬಹುದೋ ಆ ಪ್ರಾಧಿಕಾರಿ ಮತ್ತು ಆ ಷರತ್ತುಗಳ ಬಗ್ಗೆ;

(ಕೆ) ಈ ಅಧಿನಿಯಮದ ಮೂಲಕ ಅನ್ಯಥಾ ಅವಕಾಶ ಕಲ್ಪಿಸಿರದ ಯಾವುದೇ ಸಂಸ್ಥೆಯ ಆಡಳಿತವನ್ನು ಮುನ್ಸಿಪಲ್ ಕೌನ್ಸಿಲ್ ಗಳಿಗೆ ವರ್ಗಾವಣೆ ಮಾಡುವ ಬಗ್ಗೆ;

(ಎಲ್) ಮುನ್ಸಿಪಲ್ ಕೌನ್ಸಿಲ್ ಮತ್ತು ಸರ್ಕಾರದ ಅಥವಾ ಸರ್ಕಾರದ ಅಧಿಕಾರಿಗಳ ನಡುವಣ ಪತ್ರವ್ಯವಹಾರವು, ಯಾವ ಮಧ್ಯವರ್ತಿ ಕಚೇರಿಗಳ ಮೂಲಕ ನಡೆಯಬೇಕೋ ಆ ಮಧ್ಯವರ್ತಿ ಕಚೇರಿಗಳು ಯಾವುವಾದರೂ ಇದ್ದರೆ, ಅವುಗಳ ಬಗ್ಗೆ;

(ಎಂ) ಮುನ್ಸಿಪಲ್ ನಿಧಿಯಿಂದ ವೆಚ್ಚವನ್ನು ಭರಿಸುವುದಕ್ಕೆ ಮತ್ತು ಮುನ್ಸಿಪಲ್ ನಿಧಿಯಿಂದ ಸಂದಾಯಗಳ ವಿಧಾನದ ಬಗ್ಗೆ;

(ಎನ್) ಮುನ್ಸಿಪಲ್ ತೆರಿಗೆಗಳ ಬಾಕಿಗಳ ಮೇಲೆ ಬಡ್ಡಿಯನ್ನು ವಿಧಿಸುವ ಬಗ್ಗೆ;

(ಒ) ವಿವರಪಟ್ಟಿಕೆಗಳು, ವಿವರಣಪತ್ರಗಳು ಮತ್ತು ವರದಿಗಳನ್ನು ಒಪ್ಪಿಸುವುದು ಮತ್ತು ಜಮೆ ಮತ್ತು ವಾರ್ಷಿಕ ಅಂದಾಜುಗಳ ಮತ್ತು ಆಡಳಿತ ವರದಿಗಳನ್ನು ತಯಾರಿಸುವುದು, ಒಪ್ಪಿಸುವುದು ಮತ್ತು ಮಂಜೂರಾತಿಗಳ ಬಗ್ಗೆ;

(ಪಿ) ಈ ಅಧಿನಿಯಮದ ಮೇರೆಗೆ, ಲೈಸೆನ್ಸ್‌ಗಳ ಮತ್ತು ಅನುಮತಿಗಳ ಮಂಜೂರಾತಿಗೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನು ವಿನಿಯಮಿಸುವ ಬಗ್ಗೆ; ಮತ್ತು

(ಕ್ಯೂ) ಈ ಅಧಿನಿಯಮದಲ್ಲಿ ಯಾವುದೇ ಉಪಬಂಧವಿಲ್ಲದಿರುವ ಅಥವಾ ಸಾಕಷ್ಟು ಉಪಬಂಧವಿಲ್ಲದಿರುವಂಥ, (ಅಪೀಲು ಪ್ರಾಧಿಕಾರಗಳನ್ನು ನಿಯಮಿಸುವುದು, ಅಪೀಲುಗಳು ಅಥವಾ ಪುನರೀಕ್ಷಣ ಅರ್ಜಿಗಳನ್ನು ಯಾವ ಅವಧಿಯೊಳಗೆ ದಾಖಲ್ಮಾಡಬೇಕೋ ಆ ಅವಧಿಗಳು ಅಥವಾ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ಫೀಜುಗಳು ಅಥವಾ ವೆಚ್ಚಗಳನ್ನು ಇವುಗಳನ್ನು ನಿಯಮಿಸುವುದನ್ನೊಳಗೊಂಡರೆ,) ಯಾವುವೇ ಇತರ ವಿಷಯಗಳು ಮತ್ತು ಸರ್ಕಾರದ ಅಭಿಪ್ರಾಯದಲ್ಲಿ ಈ ಅಧಿನಿಯಮದ ಉದ್ದೇಶಗಳನ್ನು ಜಾರಿಗೊಳಿಸುವುದಕ್ಕೆ ಅವಕಾಶ ಕಲ್ಪಿಸುವುದು ಅವಶ್ಯಕವೆಂದು ಸರ್ಕಾರವು ಅಭಿಪ್ರಾಯಪಡುವ ಯಾವುದೇ ಇತರ ವಿಷಯಗಳ ಬಗ್ಗೆ ನಿಯಮಗಳನ್ನು ರಚಿಸಬಹುದು.

(3) ಈ ಪ್ರಕರಣದ ಮೇರೆಗೆ ನಿಯಮವನ್ನು ರಚಿಸುವಾಗ ಅವುಗಳನ್ನು ಉಲ್ಲಂಘನೆಯ ತಪ್ಪಿತಸ್ಥನಾಗಿರುವ ವ್ಯಕ್ತಿಯು, ಐದು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಉಲ್ಲಂಘನೆಯು ಮುಂದುವರಿಯುತ್ತಿದ್ದರೆ, ಮೊದಲ ಅಪರಾಧ ನಿರ್ಣಯದ ತರುವಾಯ, ಉಲ್ಲಂಘನೆಯು ಮುಂದುವರಿಯುತ್ತಿರುವಂಥ ಪ್ರತಿಯೊಂದು ದಿವಸಕ್ಕೆ ಇಪ್ಪತ್ತೈದು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದೆಂದು ಸರ್ಕಾರವು ಉಪಬಂಧ ಕಲ್ಪಿಸಬಹುದು.

(4) ನಿಯಮವು, ಎಲ್ಲಾ [1][ಮುನ್ಸಿಪಲ್ ಏರಿಯಾ][1] ಗಳಿಗೆ ಅಥವಾ ಅದರ ಪ್ರವರ್ತನೆಯಿಂದ ಸ್ಪಷ್ಟವಾಗಿ ವಿನಾಯಿತಿಗೊಳಿಸಿಲ್ಲದ ಎಲ್ಲಾ [1][ಮುನ್ಸಿಪಲ್ ಏರಿಯಾ][1] ಗಳಿಗೆ ಸಾಮಾನ್ಯವಾಗಿರಬಹುದು ಅಥವಾ ಸರ್ಕಾರವು ನಿರ್ದೇಶಿಸಬಹುದಾದಂತೆ ಯಾವುದೇ ಒಂದು ಅಥವಾ ಹೆಚ್ಚು ಮುನ್ಸಿಪಾಲಿಟಿಗಳಿಗೆ ಪೂರ್ಣವಾಗಿ ಅಥವಾ ಭಾಗಕ್ಕೆ ವಿಶೇಷವಾಗಿರಬಹುದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(5)ಈ ಅಧಿನಿಯಮದ ಮೇರೆಗಿನ ನಿಯಮವನ್ನು ಪೂರ್ವಾನ್ವಯವಾಗಿ ಪರಿಣಾಮಕಾರಿಯಾಗುವಂತೆ ರಚಿಸಬಹುದು ಮತ್ತು ಅಂಥ ನಿಯಮವನ್ನು ರಚಿಸಿದಾಗ, ನಿಯಮವನ್ನು ರಚನೆಗಾಗಿ ಇದ್ದ ಕಾರಣಗಳನ್ನು, ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಇಡಬೇಕಾದ ವಿವರಣ ಪತ್ರದಲ್ಲಿ ನಿರ್ದಿಷ್ಟಪಡಿಸತಕ್ಕದ್ದು, (6)ನೇ ಉಪಪ್ರಕರಣದ ಮೇರೆಗೆ ಮಾಡಿದ ಯಾವುದೇ ಮಾರ್ಪಾಟಿಗೊಳಪಟ್ಟು, ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವು ಈ ಅಧಿನಿಯಮದಲ್ಲಿ ಅಧಿನಿಯಮಿತವಾಗಿದ್ದರೆ ಹೇಗೆ ಪರಿಣಾಮವುಳ್ಳದ್ದಾಗಿರುತ್ತಿತ್ತೋ ಹಾಗೆ ಪರಿಣಾಮವುಳ್ಳದ್ದಾಗಿರತಕ್ಕದ್ದು.

(6) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೇ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಹಾಗೆ ಇಡಲಾದ ಅಧಿವೇಶನವು ಅಥವಾ ಅದರ ನಿಕಟೋತ್ತರದ ಅಧಿವೇಶನಗಳ ಮುಕ್ತಾಯಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸಕೂಡದೆಂದು ಎರಡು ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಈ ಮೊದಲು ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

324. ಬೈಲಾಗಳ ರಚನಾಧಿಕಾರ.- (1) ಈ ಅಧಿನಿಯಮಕ್ಕೆ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೊಳಪಟ್ಟು ಪ್ರತಿಯೊಂದು ಮುನ್ಸಿಪಲ್ ಕೌನ್ಸಿಲ್, ಕಾಲಕಾಲಕ್ಕೆ,-

(ಎ) ಮಾರುಕಟ್ಟೆಗಳ, ವಸ್ತುಗಳ ಮಾರಾಟಕ್ಕಾಗಿ ಉಪಯೋಗಿಸುವ ಎಲ್ಲಾ ಸಾರ್ವಜನಿಕ ಸ್ಥಳಗಳ ಮತ್ತು ಕಸಾಯಿಖಾನೆಗಳ ಮತ್ತು ಮಾರಾಟ ಅಥವಾ ಬಾಡಿಗೆಗಾಗಿ ಇರುವಂಥ ಪ್ರಾಣಿಗಳಿಂದ ಅಥವಾ ಅವುಗಳಿಗಾಗಿ ಅಥವಾ ಅವುಗಳ ಉತ್ಪನ್ನಗಳನ್ನು ಮಾರಾಟ ಮಾಡಲು ಉಪಯೋಗಿಸಿದ ಎಲ್ಲ ಸ್ಥಳಗಳ ನಿಯಂತ್ರಣ ಮತ್ತು ಪರಿಶೀಲನೆಗಾಗಿ ಮತ್ತು ಅವುಗಳಲ್ಲಿನ ವ್ಯವಹಾರವು ಸರಿಯಾಗಿ ಮತ್ತು ಸ್ವಚ್ಛವಾಗಿ ನಡೆಯುವುದಕ್ಕಾಗಿ, ಮುನ್ಸಿಪಲ್ ಮಾರುಕಟ್ಟೆಗಳಲ್ಲಿ ಅಥವಾ ಇತರ ನಿರ್ದಿಷ್ಟಪಡಿಸಿದ ಸ್ಥಳಗಳಲ್ಲಿ, ಹಣ್ಣುಗಳು, ಹೂವು ಮತ್ತು ತರಕಾರಿಗಳು ಅಥವಾ ಮಾಂಸ, ಮೀನು, ಮೊಟ್ಟೆಗಳು ಮತ್ತು ಪ್ರಾಣಿಗಳ ಮಾರಾಟವನ್ನು ನಿಯಂತ್ರಿಸುವುದಕ್ಕಾಗಿ, ಮತ್ತು ಮುನ್ಸಿಪಲ್ ಕೌನ್ಸಿಲ್ ಗೆ ಸೇರಿದಂಥ ಅವುಗಳಲ್ಲಿ ಯಾವುದೊಂದರ ಉಪಯೋಗಕ್ಕಾಗಿ ಬಾಡಿಗೆಗಳನ್ನು ನಿಗದಿಪಡಿಸುವುದಕ್ಕಾಗಿ ಮತ್ತು ವಿಧಿಸಬೇಕಾದ ಇತರ ವೆಚ್ಚಗಳಿಗಾಗಿ;

(ಬಿ) ಮುನ್ಸಿಪಲ್ ಕೌನ್ಸಿಲ್ ಗೆ ಸೇರಿಲ್ಲದ ಯಾವುದೇ ಸ್ಥಳವನ್ನು, ಅವುಗಳನ್ನು ಯಾವ ಷರತ್ತಿನ ಮೇಲೆ ಮತ್ತು ಯಾವ ಸಂದರ್ಭಗಳಲ್ಲಿ ಮತ್ತು ಯಾವ ಪ್ರದೇಶಗಳಿಗೆ ಅಥವಾ ಬಡಾವಣೆಗಳಿಗೆ ಸಂಬಂಧಿಸಿದಂತೆ ಲೈಸೆನ್ಸ್‌ನ್ನು ಮಂಜೂರು ಮಾಡಬಹುದೋ,

ನಿರಾಕರಿಸಬಹುದೋ, ಅಮಾನತ್ತುಗೊಳಿಸಬಹುದೋ ಅಥವಾ ವಾಪಸು ತೆಗೆದುಕೊಳ್ಳಬಹುದೋ ಆ ಷರತ್ತುಗಳನ್ನು ಅಥವಾ ಅದಕ್ಕೆ ಒಳಪಟ್ಟು ಮತ್ತು ಆ ಸಂದರ್ಭಗಳನ್ನು ನಿಯಮಿಸುವುದಕ್ಕಾಗಿ ಎಂದರೆ:-

(i) ಕಸಾಯಿಖಾನೆಯಾಗಿ;

(ii)ಮನುಷ್ಯನ ಆಹಾರಕ್ಕಾಗಿ ಅಥವಾ ಪಾನೀಯಕ್ಕಾಗಿ ಉದ್ದೇಶಿಸಿದ ಯಾವುದೇವಸ್ತು ಅಥವಾ ಪದಾರ್ಥದ, ಅಂಥ ಆಹಾರವನ್ನು ಅಥವಾ ಪಾನೀಯವನ್ನು ಅಂಥ ಸ್ಥಳದಲ್ಲಿ ಬಳಸುವುದಕ್ಕಾಗಿಯೇ ಇರಲಿ ಅಥವಾ ಇಲ್ಲದಿರಲಿ, ವ್ಯಾಪಾರದ ಉದ್ದೇಶಕ್ಕಾಗಿ ತಯಾರಿಸುವುದಕ್ಕಾಗಿ, ಸಿದ್ಧಪಡಿಸುವುದಕ್ಕಾಗಿ, ದಾಸ್ತಾನು ಮಾಡುವುದಕ್ಕಾಗಿ, ಮಾರಾಟ ಮಾಡುವುದಕ್ಕಾಗಿ ಅಥವಾ ಸರಬರಾಜಿಗಾಗಿ;

(iii) ಮನುಷ್ಯನ ಆಹಾರಕ್ಕಾಗಿ ಉದ್ದೇಶಿಸಿದ, ಪ್ರಾಣಿಗಳು ಮತ್ತು ಪಕ್ಷಿಗಳು ಅಥವಾ ಮಾಂಸ, ಮೀನು ಅಥವಾ ಮೊಟ್ಟೆಗಳ ಮಾರಾಟಕ್ಕಾಗಿ ಮಾರುಕಟ್ಟೆಯಾಗಿ ಅಥವಾ ಅಂಗಡಿಯಾಗಿ ಅಥವಾ ಹಣ್ಣುಗಳು ಅಥವಾ ತರಕಾರಿಗಳ ಮಾರಾಟಕ್ಕಾಗಿ ಮಾರುಕಟ್ಟೆಯಾಗಿ;

(iv) ಪ್ರಕರಣ 256 ರಲ್ಲಿ ನಮೂದಿಸಿರುವ ಯಾವುದೇ ಉದ್ದೇಶಕ್ಕಾಗಿ;

(v) ಡೈರಿ, ಭೋಜನ ಗೃಹ ಅಥವಾ ವಸತಿಗೃಹ ಅಥವಾ (ಸಾರ್ವಜನಿಕ ಅಥವಾ ಮನ್ನಣೆ ಪಡೆದ ನಿಯಂತ್ರಣದಲ್ಲಿರುವ ವಿದ್ಯಾರ್ಥಿಗಳ ಹಾಸ್ಟೆಲ್‌ಗಳನ್ನು ಹೊರತುಪಡಿಸಿ) ಅಂಥದೇ ಉದ್ದೇಶಕ್ಕಾಗಿ;

(vi)ಯಾವ ಉದ್ದೇಶಕ್ಕಾಗಿ ಲೈಸೆನ್ಸ್ ಪಡೆಯುವುದನ್ನು ನಿಯಮಿಸಲಾಗಿದೆಯೋ ಅಥವಾ ನಿಯೋಜಿಸಬಹುದಾಗಿದೆಯೋ ಆ ಯಾವುದೇ ಇತರ ಉದ್ದೇಶಕ್ಕಾಗಿ;

- ಮೇಲೆ ಹೇಳಿದಂತೆ ಉಪಯೋಗಿಸಿದ ಯಾವುದೇ ಸ್ಥಳದಲ್ಲಿ, ಅದರಲ್ಲಿ ಸ್ವಚ್ಛತೆಯನ್ನು ಸುನಿಶ್ಚಿತಪಡಿಸಿಕೊಳ್ಳುವುದಕ್ಕಾಗಿ ಅಥವಾ ಅದರಿಂದ ಉಂಟಾಗುವ ಅಥವಾ ಉಂಟಾಗುವ ಸಂಭವವಿರುವ ಯಾವುದೇ ಹಾನಿಕಾರಕ, ಅಸಹ್ಯಕರ, ಅಥವಾ ಅಪಾಯಕರ ಪರಿಣಾಮವನ್ನು ಕಡಿಮೆ ಮಾಡುವುದಕ್ಕಾಗಿ ಅಲ್ಲಿ ನಡೆಯುವ, ವ್ಯವಹಾರಗಳ ಪರಿಶೀಲನೆ ಮತ್ತು ನಿಯಂತ್ರಣಕ್ಕಾಗಿ ಉಪಬಂಧ ಕಲ್ಪಿಸಲು;

(ಸಿ) ಕಾರ್ಖಾನೆಗಳಲ್ಲಿ ಅಥವಾ ಇತರ ಸ್ಥಳಗಳಲ್ಲಿ ಕೆಲಸಗಾರರನ್ನು ಅಥವಾ ನಿಯೋಜಿತರಾದ ವ್ಯಕ್ತಿಗಳನ್ನು ಕರೆಸುವ ಅಥವಾ ಅವರು ಹೊರ ಹೋಗುವ ಉದ್ದೇಶಕ್ಕಾಗಿ, ಆವಿಯಿಂದ ಅಥವಾ ಯಾಂತ್ರಿಕ ಸಾಧನಗಳಿಂದ ಅಥವಾ ವಿದ್ಯುಚ್ಛಕ್ತಿಯಿಂದ ಕಾರ್ಯನಿರ್ವಹಿಸುವ ಸೀಟಿಗಳ ಮತ್ತು ತುತ್ತೂರಿಗಳ ಬಳಕೆಗಾಗಿ, ಯಾವ ಷರತ್ತುಗಳ ಮೇಲೆ ಅಥವಾ ಅವುಗಳಿಗೊಳಪಟ್ಟು, ಮತ್ತು ಯಾವ ಸಂದರ್ಭಗಳಲ್ಲಿ ಮತ್ತು ಯಾವ ಪ್ರದೇಶಗಳಿಗೆ ಅಥವಾ ಸ್ಥಳಗಳಿಗೆ ಸಂಬಂಧಿಸಿದಂತೆ, ಲೈಸೆನ್ಸ್ ಗಳನ್ನು ಮಂಜೂರು ಮಾಡಬಹುದೋ, ನಿರಾಕರಿಸಬಹುದೋ, ಅಮಾನತ್ತುಗೊಳಿಸಬಹುದೋ ಅಥವಾ ಹಿಂತೆಗೆದುಕೊಳ್ಳಬಹುದೋ, ಆ ಷರತ್ತುಗಳನ್ನು ಮತ್ತು ಸಂದರ್ಭಗಳನ್ನು ಮತ್ತು ಪ್ರದೇಶಗಳನ್ನು ಅಥವಾ ಸ್ಥಳಗಳನ್ನು ನಿಯಮಿಸಲು;

(ಡಿ) ಕುದುರೆಗಳ, ಒಂಟೆಗಳ, ಜಾನುವಾರುಗಳ, ಕತ್ತೆಗಳ, ಹಂದಿಗಳ, ಕುರಿಗಳ ಅಥವಾ ಮೇಕೆಗಳ, ಅವುಗಳ ಸಂಖ್ಯೆಯನ್ನು ಮತ್ತು ಸಾರ್ವಜನಿಕ ಆರೋಗ್ಯಕ್ಕೆ ಉಂಟಾಗಬಹುದಾದ ಅಪಾಯವನ್ನು ತಡೆಗಟ್ಟಲು, ಅವಶ್ಯವಾಗಬಹುದಾದಂತೆ, ಆ ಉದ್ದೇಶಕ್ಕಾಗಿ ಉಪಯೋಗಿಸಬೇಕಾದ ಸ್ಥಳಗಳ ಬಗ್ಗೆ ಅಂಥ ಬೈಲಾಗಳಲ್ಲಿ ನಿಯಮಿಸಿದಂಥ ನಿಬಂಧನೆಗಳಿಗೆ ಅನುಸಾರವಾಗಿ ಅಲ್ಲದೆ ಅನ್ಯಥಾ ಲಾಯದಲ್ಲಿ ಕಟ್ಟುವುದನ್ನು ಅಥವಾ ಹಿಂಡುಗಟ್ಟುವುದನ್ನು ನಿಷೇಧಿಸಲು;

(ಇ) ಯಾವ ಷರತ್ತುಗಳಿಗೊಳಪಟ್ಟು, ಮಿಠಾಯಿ, ಹಾಲು, ಬೆಣ್ಣೆ, ಅಥವಾ ಹಾಲಿನ ಇತರ ಉತ್ಪನ್ನವನ್ನು ಮಾರಾಟ ಮಾಡಬಹುದೋ ಮತ್ತು ಯಾವ ಷರತ್ತುಗಳಿಗೊಳಪಟ್ಟು, ಮಿಠಾಯಿ, ಹಾಲು, ಬೆಣ್ಣೆ ಅಥವಾ ಇತರ ಹಾಲಿನ ಉತ್ಪನ್ನ ವ್ಯವಹಾರ ಮಾಡುವ ವ್ಯಾಪಾರಿಯು, ಅಥವಾ ಆಮದು ಮಾಡುವವನು ಅಥವಾ ಮಾರಾಟ ಮಾಡುವವನು,

ವ್ಯಾಪಾರ ಅಥವಾ ವ್ಯವಹಾರವನ್ನು ನಡೆಸುವುದಕ್ಕಾಗಿ ಅಥವಾ ಹಾಲು ಕೊಡುವ ಜಾನುವಾರುಗಳನ್ನು ಕೊಟ್ಟಿಗೆಯಲ್ಲಿ ಕಟ್ಟಲು, ಯಾವುದೇ ಸ್ಥಳದ ಉಪಯೋಗಕ್ಕಾಗಿ ಅಥವಾ ವ್ಯಾಪಾರದ ಉದ್ದೇಶಗಳಿಗಾಗಿ, ಹಾಲಿನ ದಾಸ್ತಾನಿಗಾಗಿ ಅಥವಾ ಮಾರಾಟಕ್ಕಾಗಿ, ಅಥವಾ ಬೆಣ್ಣೆ ಅಥವಾ ಇತರ ಹಾಲಿನ ಉತ್ಪನ್ನಗಳನ್ನು ತಯಾರಿಸುವುದಕ್ಕಾಗಿ, ದಾಸ್ತಾನು ಮಾಡುವುದಕ್ಕಾಗಿ ಅಥವಾ ಮಾರಾಟ ಮಾಡುವುದಕ್ಕಾಗಿ, ಲೈಸೆನ್ಸ್ ಗಳನ್ನು ಮಂಜೂರು ಮಾಡಬಹುದೋ, ನಿರಾಕರಿಸಬಹುದೋ, ಅಮಾನತ್ತುಗೊಳಿಸಬಹುದೋ ಅಥವಾ ಹಿಂತೆಗೆದುಕೊಳ್ಳಬಹುದೋ, ಆ ಯಾವುವೇ ಷರತ್ತುಗಳನ್ನು ನಿಯಮಿಸಲು;

(ಎಫ್) (i) ಹಾಲು ಕೊಡುವ ಜಾನುವಾರುಗಳ ತಪಾಸಣೆಗಾಗಿ, ಮತ್ತು ಡೈರಿ ಇಟ್ಟಿರುವವರ ಅಥವಾ ಹಾಲು ಮಾರಾಟಗಾರರ ವೃತ್ತಿಯನ್ನು ಅವಲಂಬಿಸಿರುವ ವ್ಯಕ್ತಿಗಳ ಅಧಿಭೋಗದಲ್ಲಿರುವ ಡೈರಿಗಳು ಮತ್ತು ದನದ ಕೊಟ್ಟಿಗೆಗಳ ನಿರ್ಮಾಣ, ಉದ್ದಗಲಗಳು, ಗಾಳಿ ಸಂಚಾರ ವ್ಯವಸ್ಥೆ, ದೀಪದ ವ್ಯವಸ್ಥೆ, ಸ್ವಚ್ಛತೆ, ಚರಂಡಿ ವ್ಯವಸ್ಥೆ ಮತ್ತು ನೀರು ಸರಬರಾಜನ್ನು ನಿಯಮಿಸುವುದು ಮತ್ತು ನಿಯಂತ್ರಿಸುವುದು;

(ii) ಹಾಲು ಮಾರುವವರು ಅಥವಾ ಬೆಣ್ಣೆ ಮಾಡುವವರು, ಹಾಲಿನ ದಾಸ್ತಾನುಗಳ, ಹಾಲಿನ ಅಂಗಡಿಗಳ ಮತ್ತು ಹಾಲು ಅಥವಾ ಬೆಣ್ಣೆಗಾಗಿ ಉಪಯೋಗಿಸಿದ ಪಾತ್ರೆಗಳ ಸ್ವಚ್ಛತೆ ಮಾಡಿರುವುದನ್ನು ಸುನಿಶ್ಚಿತಪಡಿಸಿಕೊಳ್ಳುವುದಕ್ಕಾಗಿ;

(ಜಿ) ಜನನ ಮತ್ತು ಮರಣಗಳ ನೋಂದಣಿಗಾಗಿ ಮತ್ತು [1][ಮುನ್ಸಿಪಲ್ ಏರಿಯಾ][1] ದಲ್ಲಿ ಅಂಕಿ-ಅಂಶಗಳನ್ನು ಪಡೆಯುವುದಕ್ಕಾಗಿ ಮತ್ತು ಅಂಥ ನೋಂದಣಿಯನ್ನು ಅಥವಾ ಅಂಕಿ ಸಂಖ್ಯೆಗಳನ್ನು ಪರಿಣಾಮಕಾರಿಯನ್ನಾಗಿ ಮಾಡಲು ಅವಶ್ಯವಿರಬಹುದಾದಂಥ ಮಾಹಿತಿ ಒದಗಿಸುವುದನ್ನು ಒತ್ತಾಯಪಡಿಸುವುದಕ್ಕಾಗಿ;

1. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಹೆಚ್) ಮೃತ ದೇಹಗಳ ವಿಲೆಯನ್ನು ನಿಯಂತ್ರಿಸುವುದು ಮತ್ತು ಮೃತ ದೇಹಗಳ ವಿಲೆಗಾಗಿ ಅಂಥ ಸ್ಥಳಗಳನ್ನು ಉಪಯೋಗಿಸಲು, ಹಕ್ಕುಳ್ಳ ಜನಸಮುದಾಯ ಅಥವಾ ಜನಸಮುದಾಯದ ಪಂಗಡದ ಧಾರ್ಮಿಕ ಆಚರಣೆಗಳಿಗೆ ಸೂಕ್ತ ಗಮನಕೊಟ್ಟು, ಮೃತ ದೇಹಗಳ ವಿಲೆಗಾಗಿನ ಎಲ್ಲ ಸ್ಥಳಗಳನ್ನು ಸುಸ್ಥಿತಿಯಲ್ಲಿ ಮತ್ತು ಸುರಕ್ಷಿತ ನೈರ್ಮಲ್ಯ ಸ್ಥಿತಿಯಲ್ಲಿ ನಿರ್ವಹಿಸುವುದು;

(ಐ) ಅಪಾಯಕಾರಿ ರೋಗದ ಯಾವುದೇ ಪ್ರಕರಣಗಳ ಬಗ್ಗೆ ಮಾಹಿತಿ ಒದಗಿಸುವುದನ್ನು ಒತ್ತಾಯಪಡಿಸುವುದಕ್ಕಾಗಿ ಮತ್ತು 248, 249 ಮತ್ತು 251ನೇ ಪ್ರಕರಣಗಳ ಉಪಬಂಧಗಳನ್ನು ಕಾರ್ಯಗತ ಮಾಡುವುದಕ್ಕಾಗಿ;

(ಜೆ) ಮುನ್ಸಿಪಲ್ ಏರಿಯಾದಲ್ಲಿ ವಿಧಿಸಲಾದ ಯಾವುದೇ ತೆರಿಗೆಗೆ ಸಂಬಂಧಿಸಿದಂತೆ [1][ಮುನ್ಸಿಪಲ್ ಏರಿಯಾ][1] ದ ನಿವಾಸಿಗಳು ತಮ್ಮ ತಮ್ಮ ಹೊಣೆಗಾರಿಕೆಯನ್ನು ಖಚಿತಪಡಿಸಿಕೊಳ್ಳಲು ಅವಶ್ಯವಾಗಬಹುದಾದಂಥ ಮಾಹಿತಿ ಒದಗಿಸುವುದನ್ನು ಒತ್ತಾಯಪಡಿಸುವುದಕ್ಕಾಗಿ;

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(ಕೆ) xxx][1]

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(ಎಲ್) ಜಾಹೀರಾತುಗಳ ನಿಯಂತ್ರಣ ಮತ್ತು ಅವುಗಳ ಪ್ರದರ್ಶನಕ್ಕಾಗಿ;

[1][(ಎಂ) xxx][1]

1.1979ರ ಅಧಿನಿಯಮ 21ರ ಮೂಲಕ 13.3.1979 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(ಎನ್) [1][ಮುನ್ಸಿಪಲ್ ಏರಿಯಾ][1] ದ ಪರಿಮಿತಿಗಳೊಳಗಾಗಲಿ ಅಥವಾ ಹೊರಗಾಗಲಿ, ನೀರು ಸರಬರಾಜಿನ ಮೂಲಗಳು ಮತ್ತು ಸಾಧನಗಳಿಗೆ ಮತ್ತು ನೀರಿನ ವಿತರಣೆಗಾಗಿನ ಉಪಕರಣಗಳನ್ನು ಸಂರಕ್ಷಿಸುವುದಕ್ಕಾಗಿ ಮತ್ತು ಹಾನಿಯನ್ನು ತಡೆಗಟ್ಟುವುದಕ್ಕಾಗಿ ಮತ್ತು ನೀರಿನ ಸರಬರಾಜು ಮತ್ತು ಬಳಕೆಗೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನೂ ನಿಯಂತ್ರಿಸುವುದಕ್ಕಾಗಿ, ಮತ್ತು ನೀರು ಬಿಡುವುದಕ್ಕಾಗಿ ಅಥವಾ ನಿಲ್ಲಿಸುವುದಕ್ಕಾಗಿ ಮತ್ತು ನೀರು ಪೋಲಾಗುವುದನ್ನು ತಡೆಗಟ್ಟುವುದಕ್ಕಾಗಿ ಮತ್ತು ಮುನ್ಸಿಪಲ್ ಕೌನ್ಸಿಲ್ ನ ಸ್ವತ್ತಾಗಿರಲಿ ಅಥವಾ ಆಗಿಲ್ಲದಿರಲಿ, ಮುನ್ಸಿಪಲ್ ನೀರು ಸರಬರಾಜು ಗೃಹಗಳ ಮತ್ತು

ಅವುಗಳಿಗೆ ಸಂಬಂಧಿಸಿದ ಕೊಳವೆಗಳು ಮತ್ತು ಜೋಡಣೆಗಳ ನಿರ್ಮಾಣ, ನಿರ್ವಹಣೆ ಮತ್ತು ನಿಯಂತ್ರಣಕ್ಕಾಗಿ;-

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ವಿವರಣೆ:- ಈ ಖಂಡದ ಉದ್ದೇಶಗಳಿಗಾಗಿ ``ನೀರು ಸರಬರಾಜಿನ ಮೂಲಗಳು ಮತ್ತು ಸಾಧನಗಳು'' ಎಂಬುದರಲ್ಲಿ ಸಾರ್ವಜನಿಕರು ಉಪಯೋಗಿಸುವಂಥ ಖಾಸಗಿ ಬಾವಿಗಳೂ ಒಳಗೊಳ್ಳತಕ್ಕದ್ದು.

(ಒ) ವಸತಿ ಗೃಹಗಳ ಅಧಿಭೋಗದಲ್ಲಿರುವ ವ್ಯಕ್ತಿಗಳಿಗೆ ಸಾಕಷ್ಟು ಶುದ್ಧ ನೀರಿನ ಸರಬರಾಜನ್ನು ಸುನಿಶ್ಚಿತಪಡಿಸಿಕೊಳ್ಳುವುದಕ್ಕಾಗಿ;

(ಪಿ) ಮುನ್ಸಿಪಲ್ ಪರಿಮಿತಿಗಳೊಳಗೆ ಸಾರ್ವಜನಿಕ ಸ್ನಾನಗೃಹ ಮತ್ತು ಬಟ್ಟೆ ಒಗೆಯುವ ಸ್ಥಳಗಳನ್ನು ನಿಯಂತ್ರಿಸುವುದಕ್ಕಾಗಿ;

(ಕ್ಯೂ) ನೈರ್ಮಲ್ಯ ಮತ್ತು ನಿರ್ಮಲೀಕರಣವನ್ನು ನಿಯಂತ್ರಿಸುವುದಕ್ಕಾಗಿ;

(ಆರ್) 91ನೇ ಪ್ರಕರಣದ (ಡಿ) ಖಂಡದ ಮೇರೆಗೆ ಬಡವರಿಗಾಗಿ ಉದ್ದೇಶಿಸಿದ ಗೃಹಗಳ ನಿರ್ಮಾಣ, ಉಪಯೋಗ ಮತ್ತು ವಿಲೆಗಾಗಿನ ಷರತ್ತುಗಳನ್ನು ನಿಯಂತ್ರಿಸುವುದಕ್ಕಾಗಿ;

(ಎಸ್) ಸತ್ತ ಪ್ರಾಣಿಗಳ ಶವಗಳನ್ನು ವಿಲೆ ಮಾಡುವುದನ್ನು ನಿಯಂತ್ರಿಸುವುದಕ್ಕಾಗಿ;

(ಟಿ) ಯಾವ ಷರತ್ತುಗಳ ಮೇಲೆ ಸಾರ್ವಜನಿಕ ಬೀದಿಗಳ ಮೇಲಿನ ತಾತ್ಕಾಲಿಕ ರಚನೆಗಳ ತಾತ್ಕಾಲಿಕ ಸ್ವಾಧೀನಕ್ಕಾಗಿ ಅಥವಾ ಸಾರ್ವಜನಿಕ ಬೀದಿಗಳ ಮೇಲೆ ಮುಂಚಾಚುವಿಕೆಗಳಿಗಾಗಿ ಅನುಮತಿಯನ್ನು ಕೊಡಬಹುದೋ, ಆ ಷರತ್ತುಗಳನ್ನೂ ನಿಯಂತ್ರಿಸುವುದಕ್ಕಾಗಿ ಮತ್ತು ಸ್ಥಿರತೆಯನ್ನು ಸುನಿಶ್ಚಿತಗೊಳಿಸಿಕೊಳ್ಳುವುದಕ್ಕಾಗಿ ಮತ್ತು ಬೆಂಕಿಯನ್ನು ತಡೆಗಟ್ಟುವ ಉದ್ದೇಶಕ್ಕಾಗಿ ಮತ್ತು ಆರೋಗ್ಯದ ಉದ್ದೇಶಗಳಿಗಾಗಿ ಹೊಸ ಕಟ್ಟಡಗಳ ರಚನೆ ಮತ್ತು ಮೇಲ್ಪಾಯಗಳ ಉದ್ದಗಲಗಳು, ಗೋಡೆಗಳು, ಅಡಿಪಾಯಗಳು, ಮಹಡಿಗಳು, ಚಾವಣಿಗಳು, ಮತ್ತು ಹೊಗೆ ಕೊಳವೆಗಳನ್ನು ನಿಯಂತ್ರಿಸುವುದಕ್ಕಾಗಿ;

(ಯು) ಧಾನ್ಯದ ಅಂಗಡಿ ಅಥವಾ ಧಾನ್ಯದ ಸ್ಟೋರ್ ಗಳಿಗಾಗಿ, ಕಟ್ಟಡಗಳ ನಿರ್ಮಾಣ ಅಥವಾ ಉಪಯೋಗವನ್ನು ನಿಯಂತ್ರಿಸುವುದಕ್ಕಾಗಿ ಮತ್ತು ಕಟ್ಟಡಗಳ ನಿರ್ಮಾಣಕ್ಕಾಗಿ ನಿವೇಶನಗಳ ಉಪಯೋಗವನ್ನು ನಿಯಂತ್ರಿಸುವುದಕ್ಕಾಗಿ ಮತ್ತು ವಾಸದ ಉದ್ದೇಶಗಳಿಗಾಗಿ ಉದ್ದೇಶಿಸಿದ ಸ್ಥಳಗಳಲ್ಲಿ ಅಂಗಡಿಗಳು, ಮಾರುಕಟ್ಟೆ ಸ್ಥಳಗಳು, ಕಾರ್ಖಾನೆಗಳು, ಸಾರ್ವಜನಿಕರು ಸೇರುವ ಸ್ಥಳಗಳು, ಅಥವಾ ಯಾವುದೇ ಅದೇ ಬಗೆಯ ಉದ್ದೇಶಕ್ಕಾಗಿ ಕಟ್ಟಡಗಳ ನಿರ್ಮಾಣ ಅಥವಾ ಉಪಯೋಗವನ್ನು ನಿಯಂತ್ರಿಸುವುದಕ್ಕಾಗಿ;

(ವಿ) ಬೀದಿಗಳ ವಿನ್ಯಾಸ ಮತ್ತು ಅವುಗಳ ಸ್ಥಳ ನಿವೇಶನಕ್ಕಾಗಿ ಸಾಕಷ್ಟು ವ್ಯವಸ್ಥೆಯನ್ನು ಮಾಡಿರದ ಕಟ್ಟಡಗಳ ನಿರ್ಮಾಣವನ್ನು ತಡೆಗಟ್ಟುವುದಕ್ಕಾಗಿ;

(ಡಬ್ಲ್ಯೂ) ಒಳಗಾಗಲಿ, ಹೊರಗಾಗಲಿ ಸಾಕಷ್ಟು ಖಾಲಿ ಜಾಗ ಇರುವಂತೆ ಮತ್ತು ಬಾಗಿಲುಗಳು ಮತ್ತು ಕಿಟಕಿಗಳು ಇರುವಂತೆ ಮತ್ತು ಗಾಳಿಯ ಮುಕ್ತ ಸಂಚಾರಕ್ಕೆ ಅವಕಾಶ ಮಾಡಿಕೊಡುವ ಇತರ ಸಾಧನಗಳನ್ನು ವ್ಯವಸ್ಥೆ ಮಾಡಿ ಮತ್ತು ನಿರ್ವಹಿಸಿ ಕಟ್ಟಡಗಳಲ್ಲಿ ಸಾಕಷ್ಟು ವಾಯು ಸಂಚಾರ ಇರುವುದನ್ನು ಖಾತ್ರಿಪಡಿಸಿಕೊಳ್ಳುವುದಕ್ಕಾಗಿ;

(ಎಕ್ಸ್) ಎರಡು ಅಥವಾ ಹೆಚ್ಚು ಪ್ರತ್ಯೇಕ ವಾಸಗೃಹಗಳಿಗಾಗಿ ವಿಭಾಗಿಸಲಾದ ಕಟ್ಟಡದ ಒಡೆಯನನ್ನು ಅಂಥ ಯಾವುದೇ ಕಟ್ಟಡದ ಅಥವಾ ಅದರಲ್ಲಿನ ಮೆಟ್ಟಿಲುಗಳು ದಾರಿ ಅಥವಾ ಖಾಸಗಿ ಅಂಗಳಕ್ಕೆ ಅಥವಾ ಅದರಲ್ಲಿನ ಶೌಚಾಲಯಗಳು ಅಥವಾ ಮೂತ್ರಾಲಯಗಳು ಅಥವಾ ಬಟ್ಟೆ ಒಗೆಯುವ ಸ್ಥಳಗಳ ಹತ್ತಿರ ಅಥವಾ ಅದಕ್ಕೆ ಹೋಗುವ ಜಾಗಗಳಿಗೆ ರಾತ್ರಿ ವೇಳೆಯಲ್ಲಿ ಸಾಕಷ್ಟು ದೀಪದ ವ್ಯವಸ್ಥೆಯನ್ನು ಮತ್ತು ಅಂಥ ದೀಪಗಳನ್ನು ಆರಿಸುವುದಕ್ಕೆ ವ್ಯವಸ್ಥೆ ಮಾಡಲು ಅಗತ್ಯಪಡಿಸುವುದಕ್ಕಾಗಿ;

(ವೈ) ಈ ಅಧಿನಿಯಮದಲ್ಲಿ, ನಿರ್ದಿಷ್ಟವಾಗಿ ಉಪಬಂಧಿಸಿರದ ಇತರೆ ಯಾವುದೇ ವಿಷಯದ ಬಗ್ಗೆ ಮುನ್ಸಿಪಲ್ ಕೌನ್ಸಿಲ್ ನ ಸ್ವತ್ತಾಗಿರಲಿ ಅಥವಾ ಆಗಿಲ್ಲದಿರಲಿ ಮತ್ತು ಚರಂಡಿಗಳು, ಗ್ರಾಮಸಾರ ಚರಂಡಿಗಳು, ವಾಯು ಸಂಚಾರ ಕೊಳವೆಗಂಬಗಳು, ಸಗಣಿ ಮತ್ತು ಗೊಬ್ಬರಗಳಿಗಾಗಿ, ತೊಟ್ಟಿಗಳು, ರೊಚ್ಚುಗುಂಡಿಗಳು, ಪಾಯಿಖಾನೆಗಳು, ಶೌಚಾಲಯಗಳು, ಮೂತ್ರಾಲಯಗಳು ಮತ್ತು ಪ್ರತಿಯೊಂದು ಬಗೆಯ ಚರಂಡಿ ವ್ಯವಸ್ಥೆ ಅಥವಾ ಗ್ರಾಮಸಾರ ಚರಂಡಿ ಕಾಮಗಾರಿಗಳ ನಿರ್ಮಾಣ, ನಿರ್ವಹಣೆ, ನಿಯಂತ್ರಣವನ್ನು ನಿಯಂತ್ರಿಸುವುದಕ್ಕಾಗಿ;

(ಜಡ್) 170ನೇ ಮತ್ತು 187ನೇ ಪ್ರಕರಣಗಳ ಮೇರೆಗೆ [1][ಮುನ್ಸಿಪಲ್ ಕಮಿಷನರ್ ಅಥವಾ ಮುಖ್ಯಾಧಿಕಾರಿಯು][1] ಗೆ ಅಗತ್ಯವಾಗುವ ಮತ್ತು ಮಾಹಿತಿ ಮತ್ತು ನಕ್ಷೆಯನ್ನು ನಿರ್ಧರಿಸುವುದು;

1. 2025ರ ಅಧಿನಿಯಮ 64ರ ಮೂಲಕ 12.09.2025 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಎಎ) 1960ರ [1][ಕರ್ನಾಟಕ][1] ಸಂಚಾರ ನಿಯಂತ್ರಣ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಸಾರ್ವಜನಿಕರಿಗೆ ಉಂಟಾಗಬಹುದಾದ ಅಪಾಯ, ಅಡಚಣೆ ಅಥವಾ ಅನಾನುಕೂಲತೆಯನ್ನು ತಡೆಗಟ್ಟುವುದಕ್ಕಾಗಿ ಅಂಥ ಬೀದಿಯ ಅಥವಾ ಬೀದಿಯ ಭಾಗದ ಎರಡೂ ಕೊನೆಗಳಲ್ಲಿ ಸ್ತಂಭಗಳನ್ನು ನಿಲ್ಲಿಸಿ ಯಾವುದೇ ಅಂಥ ನಿರ್ದಿಷ್ಟ ಬೀದಿಯಲ್ಲಿ ವಾಹನ ಸಂಚಾರವನ್ನು ನಿಷೇಧಿಸುವುದು; ನಡುರಸ್ತೆಗೆ ಅಥವಾ ಅದರ ಮೇಲಿನ ರಚನೆಗೆ, ಹಾನಿಯನ್ನುಂಟುಮಾಡುವ ಸಂಭವವಿದೆಯೆಂದು ಭಾವಿಸಬಹುದಾದಂಥ, ಆಕಾರ, ರಚನೆ, ಭಾರ ಅಥವಾ ಗಾತ್ರ ಅಥವಾ ಅಂಥ ಯಂತ್ರಸಾಮಗ್ರಿ ಅಥವಾ ಇತರ ಅತಿ ದೊಡ್ಡ ವಸ್ತುಗಳನ್ನು ಹೇರಿದ ಯಾವುದೇ ವಾಹನಗಳ ಓಡಾಟವನ್ನು ಅಂಥ ಬೈಲಾಗಳಲ್ಲಿ ಸಾಮಾನ್ಯವಾಗಿ ನಿಯಮಿಸಬಹುದಾದಂಥ, ಕಾಲಕ್ಕೆ ಮತ್ತು ಅದಕ್ಕಾಗಿನ ಫೀಜುಗಳ ಸಂದಾಯದ ಬಗ್ಗೆ, ನಿಬಂಧನೆಗಳ ಮೇಲೆ ಪ್ರತಿಯೊಂದು ಪ್ರಕರಣದಲ್ಲಿ ಮಂಜೂರು ಮಾಡಬೇಕಾದ ವಿಶೇಷ ಲೈಸೆನ್ಸ್ ಗಳಲ್ಲಿ ನಿಯಮಿಸಬಹುದಾದಂತೆ, ಕಾಲ, ಭಾರ ಎಳೆಯುವ ಅಥವಾ ಚಲನೆಯ ವಿಧಾನ, ನಡುರಸ್ತೆಯ ಸಂರಕ್ಷಣೆಗಾಗಿ ಉಪಕರಣಗಳ ಉಪಯೋಗ, ದೀಪಗಳ ಮತ್ತು ಸಹಾಯಕರ ಸಂಖ್ಯೆ ಮತ್ತು ಇತರ ಸಾಮಾನ್ಯ ಮುನ್ನೆಚ್ಚರಿಕೆಗಳ ಬಗೆಗಿನ ಅಂಥ ಷರತ್ತುಗಳ ಮೇರೆಗೆ ಹೊರತು, ನಿಷೇಧಿಸುವುದಕ್ಕಾಗಿ:

1. ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶ 1973ರ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

ಪರಂತು, ಯಾವುದೇ ನಿರ್ದಿಷ್ಟ ಬೀದಿ ಅಥವಾ ಬೀದಿಯ ಭಾಗಕ್ಕೆ ಮಾತ್ರ ಸಂಬಂಧಪಟ್ಟ ಯಾವುದೇ ಅಂಥ ಬೈಲಾವು, ಅಂಥ ನಿಷೇಧದ ಬಗೆಗಿನ ನೋಟೀಸ್‌ಗಳನ್ನು ಅಂಥ ಬೀದಿ ಅಥವಾ ರಸ್ತೆಯ ಭಾಗದ ಎರಡೂ ಕೊನೆಗಳಲ್ಲಿ ಅಥವಾ ಅವುಗಳ ಹತ್ತಿರ ಎದ್ದುಕಾಣುವ ಸ್ಥಳಗಳಲ್ಲಿ ಮುನ್ಸಿಪಲ್ ಕೌನ್ಸಿಲ್ ಅಂಟಿಸಿದ್ದ ಹೊರತು, ಮತ್ತು ಅಲ್ಲಿಯವರೆಗೆ, ಅದು ಜಾರಿಯಲ್ಲಿರುವುದಾಗಿ ಭಾವಿಸತಕ್ಕದ್ದಲ್ಲ;

(ಬಿಬಿ) ಮುನ್ಸಿಪಲ್ ಕೌನ್ಸಿಲ್ ನಲ್ಲಿ ನಿಹಿತವಾದ ಅಥವಾ ಅದರ ನಿಯಂತ್ರಣದಲ್ಲಿರುವ ಸಾರ್ವಜನಿಕ ಉದ್ಯಾನಗಳನ್ನು, ತೋಟಗಳನ್ನು ಮತ್ತು ಖಾಲಿ ಜಾಗಗಳನ್ನು ಹಾನಿಯಿಂದ ಅಥವಾ ದುರುಪಯೋಗದಿಂದ ರಕ್ಷಣೆ ಮಾಡುವುದು, ಅವುಗಳ ಮೇಲ್ವಿಚಾರಣೆಯನ್ನು ಮತ್ತು ಸಾರ್ವಜನಿಕರು ಅವುಗಳನ್ನು ಉಪಯೋಗಿಸಬಹುದಾದಂಥ ರೀತಿಯನ್ನು, ನಿಯಂತ್ರಿಸುವುದಕ್ಕಾಗಿ ಮತ್ತು ಅವುಗಳಲ್ಲಿ ವ್ಯಕ್ತಿಗಳು ಸರಿಯಾಗಿ ವರ್ತಿಸುವಂತೆ ವ್ಯವಸ್ಥೆ ಮಾಡುವುದಕ್ಕಾಗಿ;

(ಸಿಸಿ) ಮೋಜಿಣಿದಾರರ, ಅಥವಾ [1][ಅನುಮೋದಿತ ಯೋಜನೆಗಳ ಉಪಬಂಧಗಳ ಪ್ರಕಾರ ಮತ್ತು ಸ್ಥಳೀಯ ಪ್ರಾಧಿಕಾರಕ್ಕೆ ವರದಿ ಮಾಡಲು ಮತ್ತು ಸರ್ಕಾರವು ನಿಯಮಿಸಿದಂತೆ ಕೆಲವು ಕಟ್ಟಡಗಳ ಕಟ್ಟಡ ನಕ್ಷೆಗಳನ್ನು ಮಂಜೂರು ಮಾಡಲು ಮತ್ತು ಅವರ ಪಾತ್ರಗಳು, ಜವಾಬ್ದಾರಿಗಳು ಮತ್ತು ಉಲ್ಲಂಘನೆಯ ಪ್ರಕರಣಗಳಲ್ಲಿ ಅನ್ವಯವಾಗುವ ದಂಡದ ನಿಬಂಧನೆಗಳನ್ನು ಸ್ಪಷ್ಟವಾಗಿ ಪರಿಭಾಷಿಸಲು, ನಿರ್ಮಾಣದ ಮೊದಲು, ನಿರ್ಮಾಣದ ಸಮಯದಲ್ಲಿ ಮತ್ತು ನಂತರ ಕಟ್ಟಡ ಸ್ಥಳಗಳನ್ನು ಪರಿಶೀಲಿಸಲು ಮತ್ತು ಮಾಡಿದ ನಿರ್ಮಾಣಗಳನ್ನು ಪ್ರಮಾಣೀಕರಿಸಲು ವಿವಿಧ ವೃತ್ತಿಪರರನ್ನು ತಮ್ಮ ಸೇವೆಗಳನ್ನು ಪಡೆಯಲು ಪಟ್ಟಿ ಮಾಡುವುದನ್ನು ಒಳಗೊಂಡಂತೆ][1] ಅಗತ್ಯಪಡಿಸಿದ ನಕ್ಷೆಗಳನ್ನು ತಯಾರು ಮಾಡಬೇಕಾದಂಥ ವ್ಯಕ್ತಿಗಳ ಅಥವಾ ಕೊಳಾಯಿಗಾರರ ಅರ್ಹತೆಗಳನ್ನು ನಿಯಮಿಸುವುದಕ್ಕಾಗಿ; ಮೋಜಿಣಿದಾರರಾಗಿ, ಅಥವಾ ಕೊಳಾಯಿಗಾರರಾಗಿ, ಅಥವಾ ನೀರು ಸರಬರಾಜು ಮಾಡುವ ಕಂಟ್ರಾಕ್ಟರ್ ಗಳಾಗಬೇಕಾದ ವ್ಯಕ್ತಿಗಳಿಗೆ ಲೈಸೆನ್ಸ್ ನ್ನು ಕೊಡುವುದು ಮತ್ತು ಅಂಥ ಲೈಸೆನ್ಸ್ ಗಳಿಗಾಗಿ ವಿಧಿಸಬೇಕಾದ ಫೀಜುಗಳನ್ನು ನಿಗದಿಪಡಿಸುವುದಕ್ಕಾಗಿ ಮತ್ತು ಅಂಥ ಲೈಸೆನ್ಸ್ ಗಳ ಉಪಬಂಧಗಳನ್ನು ಮಾರ್ಪಾಟು ಮಾಡಲು ಅಥವಾ ರದ್ದಿಯಾತಿಗಾಗಿ ಮತ್ತು ಲೈಸೆನ್ಸ್ ಪಡೆದ ಕೊಳಾಯಿಗಾರರು ಅಥವಾ ನೀರು ಸರಬರಾಜು

ಮಾಡುವ ಕಂಟ್ರಾಕ್ಟರ್ ಗಳಿಂದಲ್ಲದೆ ಬೇರೆಯವರು ನೀರು ಅಥವಾ ಚರಂಡಿ ವ್ಯವಸ್ಥೆ ಕೊಳವೆಗಳನ್ನು, ಗೃಹ ಸಂಪರ್ಕಗಳಿಗೆ ಸಂಬಂಧಿಸಿದಂತೆ ಮಾಡಬೇಕಾದ ಯಾವುವೇ ಬದಲಾವಣೆಗಳನ್ನು ಅಥವಾ ದುರಸ್ತಿಗಳನ್ನು ಅಥವಾ ಜೋಡಣೆಗಳನ್ನು ನಿರ್ವಹಿಸುವುದಕ್ಕಾಗಿ ಮತ್ತು ಮಾಡುವುದನ್ನು ನಿಷೇಧಿಸುವುದು; ಲೈಸೆನ್ಸ್ ಪಡೆದ ಕೊಳಾಯಿಗಾರರು ಅಥವಾ ಲೈಸೆನ್ಸ್ ಪಡೆದ ನೀರು ಸರಬರಾಜು ಕಂಟ್ರಾಕ್ಟರ್ ಗಳ ಮೇಲೆ ಸಾಕಷ್ಟು ನಿಯಂತ್ರಣವನ್ನು ಚಲಾಯಿಸುವುದಕ್ಕೆ ಉಪಬಂಧಿಸುವುದಕ್ಕಾಗಿ; ಅವರು ಮಾಡಿದ ಎಲ್ಲಾ ಕಾಮಗಾರಿಗಳನ್ನು ಪರಿಶೀಲಿಸುವುದು ಮತ್ತು ಲೈಸೆನ್ಸ್ ಪಡೆದ ಕೊಳಾಯಿಗಾರರು ಅಥವಾ ಲೈಸೆನ್ಸ್ ಪಡೆದ ನೀರು ಸರಬರಾಜು ಮಾಡುವ ಕಂಟ್ರಾಕ್ಟರ್ ದಾರರು ಮಾಡಿದ ಕೆಲಸದ ಗುಣಮಟ್ಟ, ಉಪಯೋಗಿಸಿದ ಸಾಮಗ್ರಿ, ಕೆಲಸದ ನಿರ್ವಹಣೆಯಲ್ಲಿನ ವಿಳಂಬ, ಮತ್ತು ಮಾಡಿದ ವೆಚ್ಚಗಳು, ಇವುಗಳ ಬಗ್ಗೆ ಮನೆಗಳ ಒಡೆಯರು ಅಥವಾ ಸ್ವಾಧೀನದಾರರು ಮಾಡಿದ ದೂರುಗಳನ್ನು ವಿಚಾರಿಸುವುದಕ್ಕಾಗಿ ಮತ್ತು ವಿಲೆ ಮಾಡುವುದಕ್ಕಾಗಿ;

1. 2025ರ ಅಧಿನಿಯಮ 64ರ ಮೂಲಕ 12.09.2025 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಡಿಡಿ) ಯಾವುದೇ ಸ್ಥಳಗಳಲ್ಲಿ ಅಥವಾ 1948ರ ಕಾರ್ಖಾನೆಗಳ ಅಧಿನಿಯಮದಲ್ಲಿ ಪರಿಭಾಷಿಸಲಾದಂತೆ, ಯಾವುದೇ ಕಾರ್ಖಾನೆಯ ಸ್ಥಾಪನೆಗಾಗಿ ಲೈಸೆನ್ಸ್ ಗಳನ್ನು ಯಾವ ಷರತ್ತುಗಳ ಮೇಲೆ ಅಥವಾ ಯಾವ ಷರತ್ತುಗಳಿಗೊಳಪಟ್ಟು ಮತ್ತು ಯಾವ ಸಂದರ್ಭಗಳಲ್ಲಿ ಯಾವ ಪ್ರದೇಶಗಳು ಮತ್ತು ಸ್ಥಳಗಳಿಗೆ ಸಂಬಂಧಿಸಿದಂತೆ ಮಂಜೂರು ಮಾಡಬಹುದೋ, ನಿರಾಕರಿಸಬಹುದೋ, ಅಮಾನತ್ತುಗೊಳಿಸಬಹುದೋ ಅಥವಾ ಹಿಂತೆಗೆದುಕೊಳ್ಳಬಹುದೋ, ಆ ಯಾವುವೇ ಷರತ್ತುಗಳನ್ನು, ಸಂದರ್ಭಗಳನ್ನು, ಪ್ರದೇಶಗಳನ್ನು ಅಥವಾ ಸ್ಥಳಗಳನ್ನು ನಿಯಮಿಸುವುದಕ್ಕಾಗಿ;

(ಇಇ) ಯಾವ ಷರತ್ತುಗಳ ಮೇಲೆ ಅಥವಾ ಅವುಗಳಿಗೊಳಪಟ್ಟು, [1][ಕರ್ನಾಟಕ][1] ಸಾರ್ವಜನಿಕ ವಾಹನಗಳ ಅಧಿನಿಯಮ, 1961 ರ ಮೇರೆಗೆ ಮಂಜೂರು ಮಾಡಲಾದ ಲೈಸೆನ್ಸ್ ಗಳಿಗೆ ಸಂಬಂಧಿಸಿದಂತೆ, ಬಾಡಿಗೆಗಾಗಿ ನಡೆಸುತ್ತಿರುವವುಗಳನ್ನು ಹೊರತುಪಡಿಸಿ, ಇತರ ಕೈಬಂಡಿ ಅಥವಾ ಕೈಗಾಡಿಗಳನ್ನು ಉಪಯೋಗಿಸುವುದಕ್ಕೆ ಲೈಸೆನ್ಸ್ ನ್ನು ಮಂಜೂರು ಮಾಡಬಹುದೋ, ನಿರಾಕರಿಸಬಹುದೋ, ಅಮಾನತ್ತುಗೊಳಿಸಬಹುದೋ ಅಥವಾ ಹಿಂತೆಗೆದುಕೊಳ್ಳಬಹುದೋ ಆ ಷರತ್ತುಗಳನ್ನು ವಿನಿಯಮಿಸುವುದಕ್ಕಾಗಿ ಮತ್ತು ಈ ಪ್ರಕರಣದ ಮೇರೆಗೆ ರಚಿಸಿದ ಬೈಲಾಗಳಿಗೆ ಅನುಸಾರವಾಗಿ ಕ್ರಮಬದ್ಧವಾಗಿ ಲೈಸೆನ್ಸ್ ಪಡೆಯದ ಕೈಬಂಡಿ ಅಥವಾ ಕೈಗಾಡಿಯನ್ನು ವಶಕ್ಕೆ ತೆಗೆದುಕೊಳ್ಳುವುದಕ್ಕೆ ಮತ್ತು ತಡೆಹಿಡಿದಿಟ್ಟುಕೊಳ್ಳುವುದಕ್ಕೆ ಉಪಬಂಧ ಕಲ್ಪಿಸುವುದಕ್ಕಾಗಿ;

1. ಕರ್ನಾಟಕ ಕಾನೂನು ಅಳವಡಿಕೆಗಳ ಆದೇಶ, 1973ರ ಮೂಲಕ 01.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(ಎಫ್ಎಫ್) ಯಾವ ಷರತ್ತುಗಳ ಮೇಲೆ ಅಥವಾ ಅವುಗಳಿಗೊಳಪಟ್ಟು ಯಾವುದೇ ಭೂಮಿ, ಕಟ್ಟಡ ಅಥವಾ ರಚನೆಯ ಮೇಲ್ಭಾಗದಲ್ಲಿ ಅಥವಾ ಯಾವುದೇ ವಾಹನದ ಮೇಲೆ ಅಥವಾ ಒಳಗೆ ಈ ಅಧಿನಿಯಮದ ಮೇರೆಗೆ ತೆರಿಗೆಗೆ ಗುರಿಯಾಗುವ ಯಾವುದೇ ಜಾಹೀರಾತನ್ನು ನಿಲ್ಲಿಸಲು, ಪ್ರದರ್ಶಿಸಲು, ಜೋಡಿಸಲು ಅಥವಾ ಉಳಿಸಿಕೊಳ್ಳಲು ಅಥವಾ ಇತರ ಯಾವುದೇ ರೀತಿಯಲ್ಲಿ ಪ್ರದರ್ಶಿಸುವುದಕ್ಕಾಗಿ ಅನುಮತಿಯನ್ನು ಕೊಡಬಹುದೋ, ನವೀಕರಿಸಬಹುದೋ, ನಿರಾಕರಿಸಬಹುದೋ, ಅಮಾನತ್ತುಗೊಳಿಸಬಹುದೋ ಅಥವಾ ಹಿಂತೆಗೆದುಕೊಳ್ಳಬಹುದೋ ಆ ಷರತ್ತುಗಳನ್ನು ನಿಯಮಿಸುವುದಕ್ಕಾಗಿ;

(ಜಿಜಿ) ಮುನ್ಸಿಪಲ್ ಕೌನ್ಸಿಲ್ ನೀಡಿದ್ದ ಲೈಸೆನ್ಸುಗಳ ಅಥವಾ ಅನುಮತಿಗಳಿಗಾಗಿ ಅಥವಾ ದಾಖಲೆಗಳ ಪರಿಶೀಲನೆಗಾಗಿ ಅಥವಾ ದಸ್ತಾವೇಜುಗಳ ಪ್ರತಿಗಳನ್ನು ಅಥವಾ ಲೈಸೆನ್ಸ್ ಅಥವಾ ಪರ್ಮಿಟ್ಗಳ ದ್ವಿಪ್ರತಿಗಳನ್ನು ಕೊಡುವುದಕ್ಕೆ ವಿಧಿಸಬೇಕಾದ ಫೀಜುಗಳಿಗಾಗಿ;

(ಹೆಚ್ಹೆಚ್) ಮುನ್ಸಿಪಲ್ ಆಡಳಿತಕ್ಕೆ ಸಾಮಾನ್ಯವಾಗಿ ಸಂಬಂಧಪಟ್ಟ ಎಲ್ಲಾ ವಿಷಯಗಳ ವಿನಿಯಮಕ್ಕಾಗಿ; ಬೈಲಾಗಳನ್ನು ರಚಿಸಬಹುದು, ಬದಲಾಯಿಸಬಹುದು ಅಥವಾ ರದ್ದುಗೊಳಿಸಬಹುದು.

(2) ಉಪಪ್ರಕರಣ (1) ರ ಮೇರೆಗೆ ಮುನ್ಸಿಪಲ್ ಕೌನ್ಸಿಲ್ ಯಾವುದೇ ಬೈಲಾವನ್ನು ರಚಿಸುವಾಗ ಅವುಗಳನ್ನು ಉಲ್ಲಂಘಿಸಿದರೆ,

(ಎ) ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಗೆ;

(ಬಿ) ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆ ಮತ್ತು ಉಲ್ಲಂಘನೆಯು ಮುಂದುವರಿಯುತ್ತಿದ್ದ ಸಂದರ್ಭದಲ್ಲಿ ಅಂಥ ಮೊದಲ ಉಲ್ಲಂಘನೆಯ ಅಪರಾಧ ನಿರ್ಣಯದ ತರುವಾಯ ಅಂಥ ಉಲ್ಲಂಘನೆಯು ಮುಂದುವರಿಯುವಂಥ ಅವಧಿಯ ಪ್ರತಿಯೊಂದು ದಿವಸಕ್ಕೆ ಹದಿನೈದು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಹೆಚ್ಚಿನ ಜುಲ್ಮಾನೆಗೆ; ಅಥವಾ

(ಸಿ) ಬೈಲಾವನ್ನು ಉಲ್ಲಂಘಿಸುತ್ತಿರುವ ಅಂಥ ವ್ಯಕ್ತಿಯು ಅಂಥ ಉಲ್ಲಂಘನೆಯನ್ನು ಮುಂದುವರಿಸದಂತೆ ಮುನ್ಸಿಪಲ್ ಕೌನ್ಸಿಲ್‌ನಿಂದ ಅಥವಾ ಈ ಬಗ್ಗೆ ಕ್ರಮಬದ್ಧವಾಗಿ ಅಧಿಕೃತನಾದ ಮುನ್ಸಿಪಲ್ ಅಧಿಕಾರಿಯಿಂದ, ಅಗತ್ಯಪಡಿಸುವ ನೋಟೀಸ್ ನ್ನು ಅವನು ಸ್ವೀಕರಿಸಿದ ತರುವಾಯ; ಉಲ್ಲಂಘನೆಯು ಮುಂದುವರಿಯುತ್ತಿರುವಂಥ ಅವಧಿಯ ಪ್ರತಿಯೊಂದು ದಿವಸಕ್ಕೆ ಹತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾಂಥ ಜುಲ್ಮಾನೆಗೆ

- ಗುರಿಯಾಗತಕ್ಕದ್ದೆಂದು ಉಪಬಂಧಿಸಬಹುದು.

(3) ಅಂಥ ಯಾವುದೇ ಬೈಲಾದಲ್ಲಿ, ಅದನ್ನು ಉಲ್ಲಂಘಿಸುವ ವ್ಯಕ್ತಿಯು, ಅಂಥ ಉಲ್ಲಂಘನೆಯಿಂದ ಉಂಟು ಮಾಡಿದ ಕೆಡಕು ಯಾವುದಾದರೂ ಇದ್ದರೆ, ಅದನ್ನು ಅವರಿಗೆ ಸಾಧ್ಯವಾಗುವಷ್ಟರಮಟ್ಟಿಗೆ ಪರಿಹರಿಸಲು ಅಗತ್ಯಪಡಿಸತಕ್ಕದ್ದೆಂದು ಸಹ ಉಪಬಂಧಿಸಬಹುದು.

(4) ಪ್ರತಿಯೊಂದು ಮುನ್ಸಿಪಲ್ ಕೌನ್ಸಿಲ್, ಈ ಪ್ರಕರಣದ ಮೇರೆಗೆ ಯಾವುದೇ ಬೈಲಾವನ್ನು ರಚಿಸುವುದಕ್ಕೆ ಮುಂಚೆ, ಅದರಿಂದ ಬಾಧಿತರಾಗುವ ಸಂಭವವಿರುವ ವ್ಯಕ್ತಿಗಳ ಮಾಹಿತಿಗಾಗಿ, ಉದ್ದೇಶಿತ ಬೈಲಾದ ಕರಡನ್ನು ಯಾವ ದಿನಾಂಕದಂದು, ಆ ತರುವಾಯ ಪರ್ಯಾಲೋಚನೆಗೆ ತೆಗೆದುಕೊಳ್ಳಲಾಗುವುದೋ ಆ ದಿನಾಂಕವನ್ನು, ಅಂಥ ದಿನಾಂಕವು ಉದ್ದೇಶಿತ ಬೈಲಾದ ಕರಡಿನ ಪ್ರಕಟಣೆಯ ದಿನಾಂಕದಿಂದ ಮೂವತ್ತು ದಿವಸಗಳಿಗಿಂತ ಮುಂಚಿನದಾಗಿರದಂಥ, ನಿರ್ದಿಷ್ಟಪಡಿಸುವ ನೋಟೀಸಿನೊಂದಿಗೆ, ನಿಯಮಿಸಬಹುದಾದಂಥ ರೀತಿಯಲ್ಲಿ ಪ್ರಕಟಿಸತಕ್ಕದ್ದು ಮತ್ತು ಬೈಲಾವನ್ನು ರಚಿಸುವುದಕ್ಕೆ ಮುಂಚೆ, ಯಾರೇ ವ್ಯಕ್ತಿಯನ್ನು, ಲಿಖಿತದಲ್ಲಿ ಆ ಕರಡಿನ ಬಗ್ಗೆ ಕೊಡಬಹುದಾದಂಥ ಯಾವುದೇ ಆಕ್ಷೇಪಣೆ ಅಥವಾ ಸಲಹೆಯನ್ನು ಸ್ವೀಕರಿಸತಕ್ಕದ್ದು ಮತ್ತು ಪರ್ಯಾಲೋಚಿಸತಕ್ಕದ್ದು.

(5) ಈ ಪ್ರಕರಣದ ಮೇರೆಗೆ ಮುನ್ಸಿಪಲ್ ಕೌನ್ಸಿಲ್ ರಚಿಸಿದ ಪ್ರತಿಯೊಂದು ಬೈಲಾದ, ಸರ್ಕಾರವು ಅನುಮೋದಿಸುವವರೆಗೆ ಪರಿಣಾಮಕಾರಿಯಾಗತಕ್ಕದ್ದಲ್ಲ; ಮತ್ತು ಅಂಥ ಪ್ರತಿಯೊಂದು ಬೈಲಾವನ್ನು, ಹಾಗೂ (4)ನೇ ಉಪಪ್ರಕರಣದ ಮೇರೆಗೆ ಪ್ರಕಟಿಸಿದ ನೋಟೀಸಿನ ಮತ್ತು ಕರಡು ಬೈಲಾದ ಬಗ್ಗೆ ಸ್ವೀಕರಿಸಿದ ಪ್ರತಿಯೊಂದು ಆಕ್ಷೇಪಣೆಯ ಅಥವಾ ಸಲಹೆಯ ಪ್ರತಿಯೊಂದಿಗೆ ಸರ್ಕಾರಕ್ಕೆ ಒಪ್ಪಿಸತಕ್ಕದ್ದು.

(6) ಸರ್ಕಾರವು, ಬೈಲಾವನ್ನು ಅನುಮೋದಿಸುವಲ್ಲಿ, ಅವಶ್ಯವೆಂದು ತನಗೆ ತೋರುವಂಥ ಯಾವುದೇ ಬದಲಾವಣೆಯನ್ನು ಅದರಲ್ಲಿ ಮಾಡಬಹುದು.

(7) ಸರ್ಕಾರವು, ಅನುಮೋದಿಸಿದಂತೆ ಪ್ರತಿಯೊಂದು ಬೈಲಾವನ್ನು ನಿಯಮಿಸಿದ ರೀತಿಯಲ್ಲಿ ಪ್ರಕಟಿಸತಕ್ಕದ್ದು ಮತ್ತು ಮುನ್ಸಿಪಲ್ ಕೌನ್ಸಿಲ್ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಮತ್ತು ಯಾವುದೇ ದಿನಾಂಕವನ್ನು ನಿರ್ದಿಷ್ಟಪಡಿಸದಿರುವಲ್ಲಿ ಅಂಥ ಪ್ರಕಟಣೆಯ ದಿನಾಂಕದಿಂದ, ಅದು ಜಾರಿಗೆ ಬರತಕ್ಕದ್ದು.

325. ಮಾದರಿ ಬೈಲಾಗಳನ್ನು ರಚಿಸಲು ಸರ್ಕಾರದ ಅಧಿಕಾರ ಮತ್ತು ಮುನ್ಸಿಪಲ್ ಕೌನ್ಸಿಲ್‌ಗಳು ಅಂಥ ಬೈಲಾಗಳನ್ನು ಅಂಗೀಕರಿಸುವುದು.- (1) 324ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರವು, ಒಂದು ತಿಂಗಳಿಗೆ ಕಡಿಮೆ ಇಲ್ಲದಂತೆ ಕರಡಿನ ಪೂರ್ವ ಪ್ರಕಟಣೆ ತರುವಾಯ, ಮಾದರಿ ಬೈಲಾಗಳನ್ನು ರಚಿಸಬಹುದೆಂದು ಮತ್ತು ಅಂಥ ಬೈಲಾಗಳು, [1][ಮುನ್ಸಿಪಲ್ ಏರಿಯಾ][1]ಗಳ ವಿವಿಧ ವರ್ಗಗಳಿಗೆ ಬೇರೆ ಬೇರೆಯಾಗಿರಬಹುದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಮುನ್ಸಿಪಲ್ ಕೌನ್ಸಿಲ್ ನಿರ್ಣಯದ ಮೂಲಕ, ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಮಾದರಿ ಬೈಲಾಗಳನ್ನು ಮತ್ತು ಅಂಥ ಬೈಲಾಗಳು, ನಿಯಮಿಸಿದ ರೀತಿಯಲ್ಲಿ ಪ್ರಕಟಿಸಿದ ನೋಟೀಸಿನಲ್ಲಿ ಮುನ್ಸಿಪಲ್ ಕೌನ್ಸಿಲ್ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಅಂಥ [1][ಮುನ್ಸಿಪಲ್ ಏರಿಯಾ][1] ದಲ್ಲಿ ಜಾರಿಗೆ ಬರತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) ಮುನ್ಸಿಪಲ್ ಕೌನ್ಸಿಲ್, ಯಾವುವೇ ಮಾಪರ್ಾಟುಗಳಿಗೊಳಪಟ್ಟು ಯಾವುದೇ ವಿಷಯಕ್ಕೆ ಸಂಬಂಧಿಸಿದ ಮಾದರಿ ಬೈಲಾಗಳು, 324ನೇ ಪ್ರಕರಣದ (4), (5) ಮತ್ತು (6)ನೇ ಉಪಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿದ, ಮುನ್ಸಿಪಲ್ ಕೌನ್ಸಿಲ್ ರಚಿಸಲು ಉದ್ದೇಶಿಸಿದ ಬೈಲಾಗಳ ಮಾಪರ್ಾಟುಗಳಾಗಿದ್ದರೆ ಹೇಗೆ ಅಂಗೀಕರಿಸಲು ಉದ್ದೇಶಿಸಲಾಗುತ್ತಿತ್ತೋ ಹಾಗೆ ಅನುಸರಿಸತಕ್ಕದ್ದು. ಸರ್ಕಾರವು ಅನುಮೋದಿಸಿದ ಮಾಪರ್ಾಟುಗಳನ್ನು, ನಿಯಮಿಸಿದ ರೀತಿಯಲ್ಲಿ ಪ್ರಕಟಿಸತಕ್ಕದ್ದು ಮತ್ತು ಆ ಮಾದರಿ ಬೈಲಾಗಳು ಅಂಥ ಮಾಪರ್ಾಟುಗಳಿಗೊಳಪಟ್ಟು ಮುನ್ಸಿಪಲ್ ಕೌನ್ಸಿಲ್ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಮತ್ತು ದಿನಾಂಕವನ್ನು ನಿರ್ದಿಷ್ಟಪಡಿಸಿಲ್ಲದಿದ್ದರೆ ಅಂಥ ಪ್ರಕಟಣೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

(4) (ಎ) ಸರ್ಕಾರವು, ಯಾವುದೇ ಆದೇಶದ ಮೂಲಕ ಯಾವುದೇ ವಿಷಯಕ್ಕೆ ಸಂಬಂಧಿಸಿದ ಮಾದರಿ ಬೈಲಾಗಳನ್ನು ಅಂಗೀಕರಿಸುವಂತೆ ಯಾವುದೇ ಮುನ್ಸಿಪಲ್ ಕೌನ್ಸಿಲ್ ಗೆ ನೀಡಬಹುದಾದ ನಿರ್ದೇಶನವನ್ನು ಮುನ್ಸಿಪಲ್ ಕೌನ್ಸಿಲ್, ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳಿಗೆ ಕಡಿಮೆಯಿಲ್ಲದಂಥ ಅವಧಿಯ ಒಳಗೆ ಅಂಗೀಕರಿಸುವಂತೆ ನಿರ್ದೇಶಿಸಬಹುದು; ಮತ್ತು

(ಬಿ) ಮಾಪರ್ಾಟುಗಳೊಡನೆ ಅಥವಾ ಮಾಪರ್ಾಟುಗಳಿಲ್ಲದೆ ಮಾದರಿ ಬೈಲಾಗಳ ಅಂಗೀಕಾರಕ್ಕಾಗಿ ಯಾವುದೇ ಕ್ರಮವನ್ನು ಕೈಗೊಳ್ಳಲು ಮುನ್ಸಿಪಲ್ ಕೌನ್ಸಿಲ್ ತಪ್ಪಿದರೆ, ಸರ್ಕಾರವು ಅಧಿಸೂಚನೆಯ ಮೂಲಕ ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ, ಸದರಿ [1][ಮುನ್ಸಿಪಲ್ ಏರಿಯಾ][1] ದಲ್ಲಿ ಜಾರಿಯಲ್ಲಿ, ಸದರಿ ಮಾದರಿ ಬೈಲಾಗಳು ಬರತಕ್ಕದ್ದೆಂದು ಘೋಷಿಸಬಹುದು ಮತ್ತು ಅಂಥ ಬೈಲಾಗಳು, ತದನುಸಾರವಾಗಿ ಜಾರಿಯಲ್ಲಿ ಬರತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(5) ಪ್ರಕರಣ 324ರಲ್ಲಿ ಏನೇ ಒಳಗೊಂಡಿದ್ದಾಗ್ಯೂ ಈ ಪ್ರಕರಣದ ಉಪಬಂಧಗಳು ಪರಿಣಾಮಕಾರಿಯಾಗಿರತಕ್ಕದ್ದು.

326. ನಿಯಮಗಳು ಮತ್ತು ಬೈಲಾಗಳನ್ನೂ ಮುದ್ರಿಸತಕ್ಕದ್ದು ಮತ್ತು ಮಾರಾಟ ಮಾಡತಕ್ಕದ್ದು.- (1) ತತ್ಕಾಲದಲ್ಲಿ ಜಾರಿಯಲ್ಲಿರುವ ನಿಯಮಗಳ ಮತ್ತು ಬೈಲಾಗಳ ಪ್ರತಿಯನ್ನು ಮುನ್ಸಿಪಲ್ ಕಚೇರಿಯಲ್ಲಿ ಇಡತಕ್ಕದ್ದು ಮತ್ತು [1][ಮುನ್ಸಿಪಲ್ ಏರಿಯಾ][1] ದ ಯಾರೇ ನಿವಾಸಿಯು ಕಚೇರಿ ವೇಳೆಗಳಲ್ಲಿ ವೆಚ್ಚವಿಲ್ಲದೆ ಪರಿಶೀಲಿಸಲು ಮುಕ್ತವಾಗಿರತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಅಂಥ ಎಲ್ಲಾ ನಿಯಮಗಳ ಮತ್ತು ಬೈಲಾಗಳ ಪ್ರತಿಗಳನ್ನು ಮುನ್ಸಿಪಲ್ ಕಚೇರಿಯಲ್ಲಿ ಇಡತಕ್ಕದ್ದು ಮತ್ತು ಖರೀದಿದಾರನ ಇಚ್ಛಾನುಸಾರ, ಬಿಡಿ ಪ್ರತಿಯನ್ನು ಆಗಲಿ ಅಥವಾ ಸಗಟು ಪ್ರತಿಗಳನ್ನು ಅಸಲು ಬೆಲೆಗೆ ಸಾರ್ವಜನಿಕರಿಗೆ ಮಾರಾಟ ಮಾಡತಕ್ಕದ್ದು.

ಅಧ್ಯಾಯ - XIV

ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ಮತ್ತು ಇತರ ಮುನ್ಸಿಪಲ್ ಅಧಿಕಾರಿಗಳ ನೇಮಕ ಮತ್ತು ಅಧಿಕಾರಗಳು

327. ಚೀಫ್ ಆಫೀಸರ್ ನ ನೇಮಕ.- (1) ಪ್ರತಿಯೊಂದು ಮುನ್ಸಿಪಲ್ ಕೌನ್ಸಿಲ್ ಒಬ್ಬ ಚೀಫ್ ಆಫೀಸರ್ ನನ್ನು ಹೊಂದಿರತಕ್ಕದ್ದು. ಅವನನ್ನು [2][ಕರ್ನಾಟಕ ಮುನ್ಸಿಪಲ್ ಆಡಳಿತ ಸೇವೆ][2]ಯ ಚೀಫ್ ಆಫೀಸರ್ ಗಳ ಕೇಡರಿನಲ್ಲಿಯ ವ್ಯಕ್ತಿಗಳ ಪೈಕಿ, [1][ಪೌರಾಡಳಿತ ನಿರ್ದೇಶಕ][1] ನು ನೇಮಕ ಮಾಡತಕ್ಕದ್ದು.

1. 2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸತಕ್ಕದ್ದು.

2. ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶ, 1973ರ ಮೂಲಕ 01.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(2) [1][ಮುನ್ಸಿಪಲ್ ಏರಿಯಾ][1] ದ ಚೀಫ್ ಆಫೀಸರ್ ನು, ಕೌನ್ಸಿಲರ್ ಗಳ ಒಟ್ಟು ಸಂಖ್ಯೆಯ ನಾಲ್ಕನೇ ಮೂರು ಭಾಗಕ್ಕಿಂತ ಕಡಿಮೆ ಇಲ್ಲದ ಬಹುಮತದಿಂದ ಸಾಮಾನ್ಯ ಸಭೆಯಲ್ಲಿ ಮುನ್ಸಿಪಲ್ ಕೌನ್ಸಿಲ್ ಅಂಗೀಕರಿಸಿದ ನಿರ್ಣಯದ ಮೂಲಕ, ಆ ಪದದಿಂದ, ವರ್ಗಾವಣೆಗೆ ಒಳಪಟ್ಟವನಾಗಿರತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) ಮುನ್ಸಿಪಲ್ ಕೌನ್ಸಿಲ್, ಅಧಿಕಾರ-ದುರುಪಯೋಗದ, ದುರ್ನಡತೆಯ ಅಥವಾ ಕರ್ತವ್ಯದ ನಿರ್ಲಕ್ಷತೆಗಾಗಿ ಚೀಫ್ ಆಫೀಸರ್ ನ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳುವಂತೆ ಶಿಫಾರಸು ಮಾಡಬಹುದು.

(4) ಚೀಫ್ ಆಫೀಸರ್ ನನ್ನು ನೇಮಿಸಿರುವಾಗ, ಮುನ್ಸಿಪಲ್ ಕೌನ್ಸಿಲ್ ನಿಯೋಜಿಸಿದ್ದ ಎಲ್ಲಾ ಇತರ ಅಧಿಕಾರಿಗಳು ಮತ್ತು ನೌಕರರು, ಕಾಲಕಾಲಕ್ಕೆ ಸರ್ಕಾರದ ಆದೇಶದ ಮೂಲಕ ಹೊರತುಪಡಿಸಿದಂಥವರನ್ನುಳಿದು, ಅವನಿಗೆ ಅಧೀನನಾಗಿರತಕ್ಕದ್ದು.

328. ಆರೋಗ್ಯ ಅಧಿಕಾರಿಯ ನೇಮಕಾತಿ.- (1) ಮುನ್ಸಿಪಲ್ ಕೌನ್ಸಿಲ್ ತಾತ್ಕಾಲಿಕವಾಗಿಯಾಗಲಿ ಅಥವಾ ಖಾಯಂ ಆಗಿಯೇ ಆಗಲಿ, ಒಬ್ಬರು ಅಥವಾ ಹೆಚ್ಚು ಆರೋಗ್ಯಾಧಿಕಾರಿಗಳನ್ನು ನೇಮಕ ಮಾಡಬಹುದು ಮತ್ತು ಸರ್ಕಾರವು ಈ ಬಗ್ಗೆ ಆದೇಶದ ಮೂಲಕ ಅಗತ್ಯಪಡಿಸಿದಾಗ, ಅದರಲ್ಲಿ ನಿಗದಿಪಡಿಸಬಹುದಾದಂಥ ಕಾಲದೊಳಗೆ, ಹಾಗೆ ಮಾಡತಕ್ಕದ್ದು. ಆ ಅಧಿಕಾರಿಗಳು ಸಾರ್ವಜನಿಕ ಆರೋಗ್ಯ ಇಲಾಖೆಯ ಅಧಿಕಾರಿಗಳಾಗಿರತಕ್ಕದ್ದು.

(2) ಅಂಥ ಯಾರೇ ಅಧಿಕಾರಿಯ, ಸರ್ಕಾರದ ಪೂರ್ವ ಮಂಜೂರಾತಿಯ ಹೊರತು, ಕೌನ್ಸಿಲರ್ ಗಳ ಒಟ್ಟು ಸಂಖ್ಯೆಯ ಮೂರನೇ-ಎರಡು ಭಾಗಕ್ಕಿಂತ ಕಡಿಮೆ ಇಲ್ಲದ ಮತಗಳ ಮೂಲಕವಲ್ಲದೆ, ಪದದಿಂದ ವರ್ಗಾವಣೆಗೆ ಒಳಪಡತಕ್ಕವನಾಗಿರತಕ್ಕದ್ದಲ್ಲ.

(3) ಮುನ್ಸಿಪಲ್ ಕೌನ್ಸಿಲ್, ಆರೋಗ್ಯಾಧಿಕಾರಿಯ ವಿರುದ್ಧ ಅಧಿಕಾರಗಳ ದುರುಪಯೋಗ, ದುರ್ನಡತೆ ಅಥವಾ ಕರ್ತವ್ಯ ನಿರ್ಲಕ್ಷತೆಗಾಗಿ, ಶಿಸ್ತಿನ ಕ್ರಮವನ್ನು ಕೈಗೊಳ್ಳುವಂತೆ ಶಿಫಾರಸು ಮಾಡಬಹುದು.

329. ಚೀಫ್ ಆಫೀಸರ್ ನ ಕರ್ತವ್ಯಗಳು:- ಚೀಫ್ ಆಫೀಸರ್ ನು,-

(ಎ) [1][ಮುನ್ಸಿಪಲ್ ಕೌನ್ಸಿಲ್ ನ ನಿಯಂತ್ರಣಕ್ಕೊಳಪಟ್ಟು,][1] ಈ ಅಧಿನಿಯಮದ ಮೂಲಕ ಅವನಿಗೆ ನಿರ್ದಿಷ್ಟವಾಗಿ ವಿಧಿಸಿದ ಅಥವಾ ಪ್ರದಾನ ಮಾಡಿದ ಅಥವಾ ಅದರ ಮೇರೆಗೆ ಅವನಿಗೆ ಪ್ರತ್ಯಾಯೋಜಿಸಿದ, [1][ಎಲ್ಲಾ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.][1] ಮತ್ತು ಎಲ್ಲ ಅಧಿಕಾರಗಳನ್ನು ಚಲಾಯಿಸತಕ್ಕದ್ದು;

1.1966ರ ಅಧಿನಿಯಮ 34ರ ಮೂಲಕ 16.1.1967 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಬಿ) ಲೆಕ್ಕಪರಿಶೋಧಕನು ತೋರಿಸಿದ ಯಾವುದೇ ಅಕ್ರಮವನ್ನು ಮುನ್ಸಿಪಲ್ ಕೌನ್ಸಿಲ್ ನ ಅಥವಾ ಸಂದರ್ಭಾನುಸಾರ ಮುನ್ಸಿಪಲ್ ಕೌನ್ಸಿಲ್ ನ ಸ್ಥಾಯಿ ಸಮಿತಿಯ ಆದೇಶಗಳಿಗೊಳಪಟ್ಟು ನಿವಾರಿಸಲು ತ್ವರಿತ ಕ್ರಮಗಳನ್ನು ಕೈಗೊಳ್ಳತಕ್ಕದ್ದು;

(ಸಿ) ಮೋಸದ, ಅಪರಾಧಿತ ದುರ್ವಿನಿಯೋಗದ, ಮುನ್ಸಿಪಲ್ ನ ಹಣದ ಮತ್ತು ಸ್ವತ್ತಿನ ಕಳ್ಳತನದ ಅಥವಾ ನಷ್ಟದ ಎಲ್ಲಾ ಪ್ರಕರಣಗಳನ್ನು ಅಧ್ಯಕ್ಷನಿಗೆ, ಸ್ಥಾಯೀ ಸಮಿತಿಗೆ ಮತ್ತು ಮುನ್ಸಿಪಲ್ ಕೌನ್ಸಿಲ್ ಗೆ ವರದಿ ಮಾಡತಕ್ಕದ್ದು;

(ಡಿ) ಮುನ್ಸಿಪಲ್ ಕೌನ್ಸಿಲ್ ಅಥವಾ ಸ್ಥಾಯಿ ಸಮಿತಿಯು, ಕೋರಿದ ಯಾವುವೇ ರಿಟರ್ನ್ಗಳನ್ನು ವಿವರಣ ಪಟ್ಟಿಗಳನ್ನು (ತಃಖ್ತೆಗಳನ್ನು), ಅಂದಾಜುಗಳನ್ನು, ಅಂಕಿ ಅಂಶಗಳನ್ನು, ಲೆಕ್ಕ ಪತ್ರಗಳನ್ನು ಅಥವಾ ವರದಿಯನ್ನು ಅಥವಾ ತನ್ನ ಪ್ರಭಾರದಲ್ಲಿರುವ ಯಾವುದೇ ದಸ್ತಾವೇಜಿನ ಪ್ರತಿಯನ್ನು ಒದಗಿಸತಕ್ಕದ್ದು ಮತ್ತು ಅವುಗಳ ಮೇಲೆ ಮುನ್ಸಿಪಲ್ ಕೌನ್ಸಿಲ್ ಅಥವಾ ಸ್ಥಾಯಿ ಸಮಿತಿಯು, ಮಾಡಿದ ಯಾವುವೇ ಆದೇಶಗಳನ್ನು ಪಾಲಿಸತಕ್ಕದ್ದು; ಮತ್ತು

(ಇ) ಈ ಬಗ್ಗೆ ನಿಯಮಿಸಲಾದ ನಿಯಮಗಳಿಗೊಳಪಟ್ಟು, ಆಡಳಿತ ಕಾರ್ಯನಿರ್ವಾಹಕ ವಿಷಯಗಳಲ್ಲಿ ಮತ್ತು ಮುನ್ಸಿಪಲ್ ಕೌನ್ಸಿಲ್ ನ ಲೆಕ್ಕ-ಪತ್ರಗಳಿಗೆ ಮತ್ತು ದಾಖಲೆಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ, ಮುನ್ಸಿಪಲ್ ಕೌನ್ಸಿಲ್ ನ ಎಲ್ಲಾ ಅಧಿಕಾರಿಗಳ ಮತ್ತು ನೌಕರರ ಕಾರ್ಯಗಳ ಮತ್ತು ನಡೆವಳಿಗಳ ಮೇಲೆ ಮೇಲ್ವಿಚಾರಣೆ ಮತ್ತು ನಿಯಂತ್ರಣವನ್ನು ಚಲಾಯಿಸತಕ್ಕದ್ದು ಮತ್ತು ಚೀಫ್ ಆಫೀಸರ್ ನಿಗೆ ಅಧೀನರಾಗಿರುವ

ಅಧಿಕಾರಿಗಳಿಗೆ ಮತ್ತು ನೌಕರರುಗಳಿಗೆ, ಮತ್ತು ಅವರ ವೇತನ, ವಿಶೇಷಾಧಿಕಾರಗಳು ಮತ್ತು ಭತ್ಯೆಗಳಿಗೆ ಸಂಬಂಧಪಟ್ಟ ಎಲ್ಲಾ ಪ್ರಶ್ನೆಗಳನ್ನು ವಿಲೇ ಮಾಡತಕ್ಕದ್ದು.

330. ಚೀಫ್ ಆಫೀಸರ್ ಗಳ ಅಧಿಕಾರಗಳು.-[1][ಮುನ್ಸಿಪಲ್ ಕೌನ್ಸಿಲ್ ನ ನಿಯಂತ್ರಣಕ್ಕೊಳಪಟ್ಟು ಚೀಫ್ ಆಫೀಸರ್ ನು][1] ಇಲ್ಲಿ ಇನ್ನು ಮುಂದೆ ನಿರ್ದಿಷ್ಟಪಡಿಸಿದ ಅಧಿಕಾರಗಳನ್ನು ಮತ್ತು ಈ ಅಧಿನಿಯಮದ ಉಪಬಂಧಗಳ ಮೇರೆಗೆ ಮುನ್ಸಿಪಲ್ ಕೌನ್ಸಿಲ್ ಪ್ರತ್ಯಾಯೋಜಿಸಬಹುದಾದಂಥ ಇತರೆ [1][ಅಧಿಕಾರಗಳನ್ನು ಚಲಾಯಿಸತಕ್ಕದ್ದು.][1]

1.1996ರ ಅಧಿನಿಯಮ 34ರ ಮೂಲಕ 16.01.1967 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಎ) ಈ ಅಧಿನಿಯಮದ ಮತ್ತು ಅದರ ಮೇರೆಗೆ ತತ್‌ಕಾಲದಲ್ಲಿ ಜಾರಿಯಲ್ಲಿರುವ ನಿಯಮಗಳ ಮತ್ತು ಬೈಲಾಗಳ ಉಪಬಂಧಗಳಿಗೊಳಪಟ್ಟು, ಈ ಅಧಿನಿಯಮದ ಮೇರೆಗೆ ಮುನ್ಸಿಪಲ್ ಕೌನ್ಸಿಲ್ ಮಂಜೂರು ಮಾಡಬಹುದಾದ ಅಥವಾ ಕೊಡಬಹುದಾದ ಅಥವಾ ಹೊರಡಿಸಬಹುದಾದಂಥ ಎಲ್ಲ ಲೈಸೆನ್ಸ್ ಗಳನ್ನು ಮತ್ತು ಅನುಮತಿಗಳಿಗೆ ತಾನು ಸಹಿ ಮಾಡಿ, ಮಂಜೂರು ಮಾಡಲು, ನೀಡಲು ಅಥವಾ ಹೊರಡಿಸಲು ಅವನು ಅಧಿಕಾರವನ್ನು ಹೊಂದಿರತಕ್ಕದ್ದು;

(ಬಿ) ಹಿಂದೆ ಹೇಳಿದ ಉಪಬಂಧಗಳಿಗೊಳಪಟ್ಟು, ಹಿಂದೆ ಹೇಳಿದಂತೆ ಯಾವ ಸಂದರ್ಭದಲ್ಲಿ ಲೈಸೆನ್ಸ್ ನ್ನು ಮಂಜೂರು ಮಾಡಲು ಅಥವಾ ನೀಡಲು ಅವನಿಗೆ ಅಧಿಕಾರ ನೀಡಲಾಗಿದೆಯೋ ಅಥವಾ ಹಿಂದೆ ಹೇಳಿದ ಉಪಬಂಧಗಳ ಮೇರೆಗೆ ಮುನ್ಸಿಪಲ್ ಕೌನ್ಸಿಲ್, ಅಂಥ ಲೈಸೆನ್ಸ್ ಅಮಾನತ್ತುಗೊಳಿಸಬಹುದೋ, ತಡೆಹಿಡಿಯಬಹುದೋ, ಅಥವಾ ಹಿಂತೆಗೆದುಕೊಳ್ಳಬಹುದೋ, ಆ ಯಾವುದೇ ಸಂದರ್ಭದಲ್ಲಿ, ಅವನು ಯಾವುದೇ ಲೈಸೆನ್ಸ್‌ನ್ನು ಅಮಾನತ್ತುಗೊಳಿಸಬಹುದು, ತಡೆಹಿಡಿಯಬಹುದು ಅಥವಾ ಹಿಂತೆಗೆದುಕೊಳ್ಳಬಹುದು;

(ಸಿ) ಹಿಂದೆ ಹೇಳಿದ ಅಧಿಕಾರಗಳ ಮೇರೆಗೆ ಅವನು ಮಂಜೂರು ಮಾಡಿದ ಅಥವಾ ನೀಡಿದ ಲೈಸೆನ್ಸ್ ಗಳಿಗಾಗಿ ಮತ್ತು ಅನುಮತಿಗಳಿಗಾಗಿ ಸಂದಾಯ ಮಾಡಬೇಕಾದ ಎಲ್ಲ ನಿಧಿಗಳನ್ನು ಸ್ವೀಕರಿಸತಕ್ಕದ್ದು ಮತ್ತು ವಸೂಲ್ಮಾಡತಕ್ಕದ್ದು ಮತ್ತು ಮುನ್ಸಿಪಲ್ ನಿಧಿಗೆ ಜಮೆ ಮಾಡತಕ್ಕದ್ದು;

(ಡಿ) ಅವನು, ಮುನ್ಸಿಪಲ್ ಕೌನ್ಸಿಲ್ ನ ನಿಯಂತ್ರಣಕ್ಕೆ ಮತ್ತು 72ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು,-

(i) ಐದುನೂರು ರೂಪಾಯಿಗಳಿಗೆ ಮೀರಿದ ವೆಚ್ಚವನ್ನು ಒಳಗೊಂಡಿರದಂಥ ಕರಾರುಗಳನ್ನು ಮುನ್ಸಿಪಲ್ ಕೌನ್ಸಿಲ್ ಪರವಾಗಿ ಮಾಡಿಕೊಳ್ಳಬಹುದು; ಮತ್ತು

(ii) ಮುನ್ಸಿಪಲ್ ಕೌನ್ಸಿಲ್ ನ ಪರವಾಗಿ ಮತ್ತು ಸಾರ್ವಜನಿಕ ನೋಟೀಸಿನ ಮೂಲಕ ಯಾವುದೇ ಅನುಮೋದಿತ ಕಾಮಗಾರಿಯ ನಿರ್ವಹಣೆಗಾಗಿ ಅಥವಾ ಮುನ್ಸಿಪಲ್ ಕೌನ್ಸಿಲ್ ಗೆ ಅಗತ್ಯವಾದ ಯಾವುವೇ ಸಾಮಗ್ರಿಗಳು ಅಥವಾ ಸರಕುಗಳ ಸರಬರಾಜಿಗಾಗಿ ಟೆಂಡರುಗಳನ್ನು ಕರೆಯಬಹುದು:

ಪರಂತು, ಒಂದು ನೂರು ರೂಪಾಯಿಗಳಿಗೆ ಮೀರಿದ ವೆಚ್ಚವನ್ನು ಒಳಗೊಂಡ, ಚೀಫ್ ಆಫೀಸರ್ ನು ಮಾಡಿಕೊಂಡ ಪ್ರತಿಯೊಂದು ಕರಾರನ್ನು, ಅದನ್ನು ಮಾಡಿಕೊಂಡ ತರುವಾಯ ಹದಿನೈದು ದಿವಸಗಳೊಳಗಾಗಿ, ಅವನು ಮುನ್ಸಿಪಲ್ ಕೌನ್ಸಿಲ್ ಗೆ ವರದಿ ಮಾಡತಕ್ಕದ್ದು.

(ಇ) ಅವನು,-

[1][111 ಮತ್ತು 112ನೇ ಪ್ರಕರಣ][1] 212ನೇ ಪ್ರಕರಣ

1.1966ರ ಅಧಿನಿಯಮ 34ರ ಮೂಲಕ 16.1.1967 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

1[xxx]1 213ನೇ ಪ್ರಕರಣ

1.1979ರ ಅಧಿನಿಯಮ 21ರ ಮೂಲಕ 31.3.1979 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

128ನೇ ಪ್ರಕರಣ 214ನೇ ಪ್ರಕರಣ

1[xxx]1 215ನೇ ಪ್ರಕರಣ

1.1979ರ ಅಧಿನಿಯಮ 21ರ ಮೂಲಕ 31.3.1979 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

132ನೇ ಪ್ರಕರಣ 2ನೇ ಉಪಪ್ರಕರಣದ ಪರಂತುಕ 216ನೇ ಪ್ರಕರಣ

133ನೇ ಪ್ರಕರಣ 217ನೇ ಪ್ರಕರಣ

138ನೇ ಪ್ರಕರಣ (1), (2) ಮತ್ತು (3)ನೇ ಉಪಪ್ರಕರಣಗಳು 218ನೇ ಪ್ರಕರಣ
142ನೇ ಪ್ರಕರಣ 219ನೇ ಪ್ರಕರಣ
143ನೇ ಪ್ರಕರಣ 221ನೇ ಪ್ರಕರಣ
144ನೇ ಪ್ರಕರಣ 222ನೇ ಪ್ರಕರಣ
148ನೇ ಪ್ರಕರಣ 224ನೇ ಪ್ರಕರಣ
150ನೇ ಪ್ರಕರಣದ 3ನೇ ಉಪಪ್ರಕರಣ 225ನೇಪ್ರಕರಣ
178ನೇ ಪ್ರಕರಣ 227ನೇ ಪ್ರಕರಣ
184ನೇ ಪ್ರಕರಣ 228ನೇ ಪ್ರಕರಣದ (1)ನೇ ಉಪಪ್ರಕರಣ
186ನೇ ಪ್ರಕರಣ 230ನೇ ಪ್ರಕರಣ
187ನೇ ಪ್ರಕರಣ 234ನೇ ಪ್ರಕರಣ
191ನೇ ಪ್ರಕರಣ 235ನೇ ಪ್ರಕರಣ
193ನೇ ಪ್ರಕರಣ 236ನೇ ಪ್ರಕರಣ
196ನೇ ಪ್ರಕರಣ 238ನೇ ಪ್ರಕರಣ
203ನೇ ಪ್ರಕರಣದ (1)ನೇ ಉಪಪ್ರಕರಣ 243ನೇ ಪ್ರಕರಣದ (3)ನೇ ಉಪಪ್ರಕರಣ
204ನೇ ಪ್ರಕರಣ 247ನೇ ಪ್ರಕರಣ
209ನೇ ಪ್ರಕರಣ 248ನೇ ಪ್ರಕರಣದ (1) ಮತ್ತು (2)ನೇ ಉಪಪ್ರಕರಣಗಳು
210ನೇ ಪ್ರಕರಣ 251ನೇ ಪ್ರಕರಣ
211ನೇ ಪ್ರಕರಣದ (3)ನೇ ಉಪಪ್ರಕರಣ 262ನೇ ಪ್ರಕರಣ ಮತ್ತು 276ನೇ ಪ್ರಕರಣ

-ಇವುಗಳಲ್ಲಿ, ಒಳಗೊಂಡಿರುವ ಯಾವುವೇ ಉಪಬಂಧಗಳ ಮೇರೆಗೆ ಲಿಖಿತ ನೋಟೀಸಿನ ಮೂಲಕ ಅಂಥ ಕಡ್ಡಾಯ ಕೋರಿಕೆಗಳನ್ನು ಮಾಡಬಹುದು, ಅಂಥ ಲಿಖಿತದಲ್ಲಿ ಸಮ್ಮತಿಯನ್ನು ಅಥವಾ ಅನುಮತಿಯನ್ನು ನೀಡಬಹುದು. ಅಂಥ ಆದೇಶಗಳನ್ನು ಮತ್ತು ನಿಷೇಧಾಜ್ಞೆಗಳನ್ನು ಹೊರಡಿಸಬಹುದು. ಮುನ್ಸಿಪಲ್ ಕೌನ್ಸಿಲ್ ಮಾಡಬಹುದಾದ, ನೀಡಬಹುದಾದ, ಹೊರಡಿಸಬಹುದಾದ ಅಥವಾ ಚಲಾಯಿಸಬಹುದಾದಂಥ ಎಲ್ಲ ಅಧಿಕಾರಗಳನ್ನು ಚಲಾಯಿಸಬಹುದು:

ಪರಂತು, ಕೆಳಕಂಡ ಪ್ರಕರಣಗಳ ಉಪಬಂಧಗಳ ವಿರುದ್ಧ, ಅಪರಾಧ ಎಸಗುವ ಯಾರೇ ವ್ಯಕ್ತಿಯನ್ನು ಶಿಕ್ಷಿಸುವುದಕ್ಕಾಗಿ ಹೂಡಬೇಕಾದ ಪ್ರಾಸಿಕ್ಯೂಷನ್ ನನ್ನು ನಿರ್ದೇಶಿಸಲು ಅಥವಾ ವ್ಯವಹರಣೆಗಳಿಗೆ ಆದೇಶಿಸಲು 276ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರವನ್ನು ಡೆಪ್ಯುಟಿ ಕಮಿಷನರ್ ನ ಪೂರ್ವಾನುಮೋದನೆಯನ್ನು ಪಡೆದ ಹೊರತು ಚೀಫ್ ಆಫೀಸರ್ ನು ಚಲಾಯಿಸತಕ್ಕದ್ದಲ್ಲ:-

78ನೇ ಪ್ರಕರಣ ಮತ್ತು 241ನೇ ಪ್ರಕರಣ

331. ಮುನ್ಸಿಪಲ್ ಕಮಿಷನರ್ ನ ನೇಮಕ.- (1) ಪ್ರಕರಣ 327ರಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಸರ್ಕಾರವು ಯಾವುದೇ [1][ಸಿಟಿ ಮುನ್ಸಿಪಲ್ ಏರಿಯಾ][1]ಕ್ಕೆ ಮುನ್ಸಿಪಲ್ ಕಮಿಷನರ್ ನನ್ನು ನೇಮಕ ಮಾಡಬಹುದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಮುನ್ಸಿಪಲ್ ಕಮಿಷನರ್ ನ್ನು ನೇಮಕ ಮಾಡಿದ ಮೇಲೆ ಚೀಫ್ ಆಫೀಸರ್ ನ ನೇಮಕವು ಯಾವುದಾದರೂ ಇದ್ದರೆ, ಅದು ತಕ್ಷಣ ಕೊನೆಗೊಳ್ಳತಕ್ಕದ್ದು.

(3) ಸರ್ಕಾರವು ಯಾವುದೇ ಸಮಯದಲ್ಲಿ, ಯಾವ [1][ಮುನ್ಸಿಪಲ್ ಏರಿಯಾ][1]ಕ್ಕೆ ಮುನ್ಸಿಪಲ್ ಕಮಿಷನರ್ ನ್ನು ನೇಮಕ ಮಾಡಿದೆಯೋ, ಆ ಯಾವುದೇ [1][ಮುನ್ಸಿಪಲ್ ಏರಿಯಾ][1]ಕ್ಕೆ ಅಂಥ ನೇಮಕವನ್ನು ಮುಂದುವರಿಸದಿರಬಹುದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

332. ಪದದಿಂದ ತೆಗೆದುಹಾಕುವುದು.- (1) ಮುನ್ಸಿಪಲ್ ಕಮಿಷನರ್ ನು, ತನ್ನ ಪದದ ಕರ್ತವ್ಯಗಳನ್ನು ನೆರವೇರಿಸುವಲ್ಲಿ ಅಸಮರ್ಥನಾಗಿದ್ದಾನೆಂದು ಅಥವಾ ಅವನನ್ನು ತೆಗೆದುಹಾಕುವುದು ವಿಹಿತವಾಗಿಸುವಂಥ ಯಾವುದೇ ದುರ್ವರ್ತನೆ ಅಥವಾ ನಿರ್ಲಕ್ಷತೆಯ

ತಪ್ಪಿತಸ್ಥನಾಗಿರುವನೆಂದು ಸರ್ಕಾರಕ್ಕೆ ಕಂಡುಬಂದರೆ, ಸರ್ಕಾರವು ಯಾವುದೇ ಸಮಯದಲ್ಲಿ ಆತನನ್ನು ಆ ಪದದಿಂದ ತೆಗೆದುಹಾಕಬಹುದು.

(2) [1][ಮುನ್ಸಿಪಲ್ ಏರಿಯಾ][1]ದ ಕಮಿಷನರ್ ನನ್ನು ವರ್ಗಾವಣೆ ಮಾಡುವ ಉದ್ದೇಶಕ್ಕಾಗಿ, ಕರೆಯಲಾಗಿರುವ ಮುನ್ಸಿಪಲ್ ಕೌನ್ಸಿಲ್ ನ ವಿಶೇಷ ಮಹಾ ಸಭೆಯಲ್ಲಿಯ ಕೌನ್ಸಿಲರ್ ಗಳ ಒಟ್ಟು ಸಂಖ್ಯೆಯ ನಾಲ್ಕನೇ ಮೂರು ಭಾಗಕ್ಕೆ ಕಡಿಮೆಯಿಲ್ಲದಷ್ಟು ಸದಸ್ಯರು ಅಂಥ ವರ್ಗಾವಣೆಯ ಪರ ಮತ ನೀಡಿದರೆ, ಅವನನ್ನು ಆ ಪದದಿಂದ ಸರ್ಕಾರವು ವರ್ಗಾವಣೆ ಮಾಡತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

333. ಮುನ್ಸಿಪಲ್ ಕಮಿಷನರ್‌ನ ಸಂಬಳ.- ಮುನ್ಸಿಪಲ್ ಕಮಿಷನರ್ ನು [1][ಮುನ್ಸಿಪಲ್ ಏರಿಯಾ][1] ದ ಸಂಪನ್ಮೂಲಗಳಿಗೆ ಯುಕ್ತ ಗಮನ ಕೊಟ್ಟು, ಸರ್ಕಾರವು ಕಾಲಕಾಲಕ್ಕೆ ನಿರ್ಧರಿಸಬಹುದಾದಂಥ, ಮುನ್ಸಿಪಲ್ ಕೌನ್ಸಿಲ್ ಪೂರ್ಣವಾಗಿ ಅಥವಾ ಮುನ್ಸಿಪಲ್ ಕೌನ್ಸಿಲ್ ಭಾಗಶಃ ಅಥವಾ ಭಾಗಶಃ ಸರ್ಕಾರವು ಸಂದಾಯ ಮಾಡಬೇಕಾದಂಥ ಮಾಸಿಕ ಸಂಬಳವನ್ನು ಸ್ವೀಕರಿಸತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

334. ಇತರೆ ವ್ಯವಹಾರಗಳಲ್ಲಿ ತೊಡಗುವುದನ್ನು ನಿಷೇಧಿಸುವುದು.- ಮುನ್ಸಿಪಲ್ ಕಮಿಷನರ್ ನು ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರೆ ಯಾವುದೇ ಅಧಿನಿಯಮಿತಿಯಲ್ಲಿ ನಿಯಮಿಸಿದಂತೆ, ತನ್ನ ಪದದ ಕರ್ತವ್ಯಗಳಿಗೆ, ತನ್ನ ಸಂಪೂರ್ಣ ಸಮಯವನ್ನು ವಿನಿಯೋಗಿಸತಕ್ಕದ್ದು ಮತ್ತು ಗಮನ ನೀಡತಕ್ಕದ್ದು ಮತ್ತು ಯಾವುದೇ ಇತರ ವೃತ್ತಿ, ವ್ಯಾಪಾರ ಅಥವಾ ವ್ಯವಹಾರದಲ್ಲಿ ತೊಡಗತಕ್ಕದ್ದಲ್ಲ:

ಪರಂತು, ಮುನ್ಸಿಪಲ್ ಕಮಿಷನರ್ ನಾಗಿ ತನ್ನ ಕರ್ತವ್ಯಗಳಿಗೆ ಬಾಧಕವಾಗದಂಥ ಹೆಚ್ಚಿನ ಕೆಲಸವನ್ನು ಅವನು ನೆರವೇರಿಸುವನೆಂದು ಸರ್ಕಾರವು ಅಭಿಪ್ರಾಯಪಟ್ಟರೆ ಸ್ಥಳೀಯ ಪ್ರಾಮುಖ್ಯತೆಯ ಅಥವಾ ಹಿತಾಸಕ್ತಿಯ ಯಾವುದೇ ಇತರೆ ಕೆಲಸವನ್ನು ಅವನಿಗೆ ವಹಿಸಬಹುದು.

335. ಅನುಪಸ್ಥಿತಿಗಾಗಿ ಅನುಮತಿ.- (1) ಸರ್ಕಾರವು, ಕಾಲಕಾಲಕ್ಕೆ, ಮುನ್ಸಿಪಲ್ ಕೌನ್ಸಿಲ್ ನೊಡನೆ ಸಮಾಲೋಚಿಸಿ, ಮುನ್ಸಿಪಲ್ ಕೌನ್ಸಿಲ್ ತಾನು ಸೂಕ್ತವೆಂದು ಭಾವಿಸುವಂಥ ಅನುಪಸ್ಥಿತಿಗಾಗಿ ಅನುಮತಿಯನ್ನು ಮಂಜೂರು ಮಾಡಬಹುದು.

(2) ಮುನ್ಸಿಪಲ್ ಕಮಿಷನರ್ ಗೆ ಅನುಪಸ್ಥಿತಿಗಾಗಿ ಅನುಮತಿ ನೀಡಿರುವಲ್ಲಿ, ಅವನಿಗೆ ಸಂದಾಯ ಮಾಡಬೇಕಾದ ಭತ್ಯೆಗಳನ್ನು, ಸರ್ಕಾರದಿಂದ ಸಂಬಳ ಪಡೆಯುವ ಅಂಥ ವರ್ಗದ ನೌಕರರಿಗೆ ನೀಡಲಾಗುವ ರಜಾ ಭತ್ಯೆಗಳಿಗೆ ಸಂಬಂಧಪಟ್ಟಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ನಿಯಮಗಳ ಮೂಲಕ ನಿಯಂತ್ರಿಸತಕ್ಕದ್ದು.

(3) ಮುನ್ಸಿಪಲ್ ಕಮಿಷನರ್ ನಿಗೆ ಅನುಪಸ್ಥಿತಿಗಾಗಿ ಅನುಮತಿ ನೀಡಿರುವ ಅವಧಿಯಲ್ಲಿ ಅಥವಾ ಅವನ ಪದವು ತಾತ್ಕಾಲಿಕವಾಗಿ ಖಾಲಿಯಾಗಿರುವ ಅವಧಿಯಲ್ಲಿ, ಸರ್ಕಾರವು ಮುನ್ಸಿಪಲ್ ಕಮಿಷನರ್ ನಾಗಿ ಕಾರ್ಯ ನಿರ್ವಹಿಸಲು ಸೂಕ್ತ ವ್ಯಕ್ತಿಯನ್ನು ನೇಮಕ ಮಾಡಬಹುದು. ಹಾಗೆ ನೇಮಕಗೊಂಡ ಪ್ರತಿಯೊಬ್ಬ ವ್ಯಕ್ತಿಯು, ಮುನ್ಸಿಪಲ್ ಕಮಿಷನರ್ ನಿಗೆ, ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಅಧಿನಿಯಮಿತಿಯ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ವಿಧಿಸಿದ ಕರ್ತವ್ಯವನ್ನು ನೆರವೇರಿಸತಕ್ಕದ್ದು ಮತ್ತು ಸದರಿ ಅಧಿಕಾರಿಯು ಬದ್ಧನಾಗಿರಬಹುದಾದಂಥ ಹೊಣೆಗಾರಿಕೆಗಳಿಗೆ, ನಿರ್ಬಂಧಗಳಿಗೆ ಮತ್ತು ಷರತ್ತುಗಳಿಗೊಳಪಟ್ಟಿರತಕ್ಕದ್ದು.

336. ಮುನ್ಸಿಪಲ್ ಕಮಿಷನರ್ ನ ನಿವೃತ್ತಿ ವೇತನ ಮತ್ತು ರಜಾಭತ್ಯೆಗಳಿಗಾಗಿ ಮುನ್ಸಿಪಲ್ ಕೌನ್ಸಿಲ್ ನಿಂದ ವಂತಿಗೆ.- ಸರ್ಕಾರವು ಮುನ್ಸಿಪಲ್ ಕಮಿಷನರ್ ನನ್ನು ನೇಮಿಸಿದಾಗ ಸರ್ಕಾರವು ತನ್ನ ಹೊಣೆಗಾರಿಕೆಯಿಂದ ಸಂಪೂರ್ಣವಾಗಿ ಅಥವಾ ಭಾಗಶಃ ವಿಶೇಷವಾಗಿ ವಿನಾಯಿತಿಗೊಳಿಸಿದ್ದ ಹೊರತು, ನಿಯಮಿಸಿದ ನಿಯಮಗಳ ಮೂಲಕ ಅಗತ್ಯಪಡಿಸಿದಷ್ಟರಮಟ್ಟಿಗೆ ಅವನ ನಿವೃತ್ತಿ ವೇತನ ಮತ್ತು ರಜಾ ಭತ್ಯೆಗಳಿಗೆ ವಂತಿಗೆಯನ್ನು ಮುನ್ಸಿಪಲ್ ಕೌನ್ಸಿಲ್, ನೀಡತಕ್ಕದ್ದು.

337. ವಿವರಪಟ್ಟಿಕೆಗಳು, ವರದಿಗಳು ಅಥವಾ ದಸ್ತಾವೇಜುಗಳನ್ನು ಹಾಜರುಪಡಿಸುವುದನ್ನು ಅಗತ್ಯಪಡಿಸಲು ಮುನ್ಸಿಪಲ್ ಕೌನ್ಸಿಲ್ ನ ಅಧಿಕಾರ.- (1) ಮುನ್ಸಿಪಲ್ ಕೌನ್ಸಿಲ್,-

(ಎ) ಈ ಅಧಿನಿಯಮದ ಆಡಳಿತ ಅಥವಾ [1][ಮುನ್ಸಿಪಲ್ ಏರಿಯಾ][1] ದ ಮನ್ಸಿಪಲ್ ಆಡಳಿತಕ್ಕೆ ಸಂಬಂಧಿಸಿದ ಯಾವುದೇ ವಿಷಯದ ಬಗೆಗಿನ ಯಾವುದೇ ರಿಟರ್ನ್‌ನನ್ನು, ತಃಖ್ತೆಯನ್ನು, ಅಂದಾಜುಗಳನ್ನು, ಅಂಕಿ ಅಂಶಗಳನ್ನು ಅಥವಾ ಇತರ ಮಾಹಿತಿಯನ್ನು;

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಬಿ) ಅಂಥ ಯಾವುದೇ ವಿಷಯದ ಬಗ್ಗೆ ವರದಿಯನ್ನು; ಮತ್ತು

(ಸಿ) ಅವನ ಪ್ರಭಾರದಲ್ಲಿರುವ ಯಾವುದೇ ದಸ್ತಾವೇಜಿನ ಪ್ರತಿಯನ್ನು

- ಇವುಗಳನ್ನು ಅದಕ್ಕೆ ಒದಗಿಸಬೇಕೆಂದು ಮುನ್ಸಿಪಲ್ ಕಮಿಷನರ್ ನನ್ನು ಅಗತ್ಯಪಡಿಸಬಹುದು:

ಪರಂತು, ಮುನ್ಸಿಪಲ್ ಕೌನ್ಸಿಲ್ ನ ಸಭೆಯನ್ನು ಕರೆಯುವವರೆಗೆ, ವಿಳಂಬಕ್ಕೆ ಅವಕಾಶವಿಲ್ಲದಂತೆ ತುರ್ತು ಪ್ರಕರಣಗಳಲ್ಲಿ ಅಧ್ಯಕ್ಷನು, ಮೇಲೆ ಉಲ್ಲೇಖಿಸಿದ ಮಾಹಿತಿಯನ್ನು, ವಿವರಪಟ್ಟಿಕೆಯನ್ನು, ಅಂಕಿ ಅಂಶಗಳನ್ನು, ಅಂದಾಜುಗಳನ್ನು ಅಥವಾ ಇತರ ಮಾಹಿತಿಯನ್ನು ಕೇಳಬಹುದು.

(2) ಮುನ್ಸಿಪಲ್ ಕಮಿಷನರ್ ನು, ಅಂಥ ಪ್ರತಿಯೊಂದು ಕಡ್ಡಾಯ ಕೋರಿಕೆಯನ್ನು ಅನುಚಿತ ವಿಳಂಬವಿಲ್ಲದೆ ಪಾಲಿಸತಕ್ಕದ್ದು.

338. ಮುನ್ಸಿಪಲ್ ಕಮಿಷನರ್ ಗಳ ಅಧಿಕಾರಗಳು ಮತ್ತು ಅವುಗಳ ಮಿತಿಗಳು.- ಮುನ್ಸಿಪಲ್ ಕಮಿಷನರ್ ನು ಈ ಅಧಿನಿಯಮದ ಉಪಬಂಧಗಳ ಮೂಲಕ ಅವನಿಗೆ ನಿರ್ದಿಷ್ಟವಾಗಿ ಪ್ರದತ್ತವಾದ ಅಧಿಕಾರಗಳನ್ನು ಮತ್ತು ಇಲ್ಲಿ ಇನ್ನು ಮುಂದೆ ನಿರ್ದಿಷ್ಟಪಡಿಸಿದ ಅಧಿಕಾರಗಳನ್ನು ಹಾಗೂ ಈ ಅಧಿನಿಯಮದ ಉಪಬಂಧಗಳ ಮೇರೆಗೆ ಮುನ್ಸಿಪಲ್ ಕೌನ್ಸಿಲ್ ಅವನಿಗೆ ಪ್ರತ್ಯಾಯೋಜಿಸಬಹುದಾದಂಥ ಇತರ ಕಾರ್ಯನಿರ್ವಾಹಕ ಅಧಿಕಾರಗಳನ್ನು ಚಲಾಯಿಸತಕ್ಕದ್ದು,-

(1) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಮತ್ತು ಈ ಅಧಿನಿಯಮದಲ್ಲಿ ಅನ್ಯಥಾ ಸ್ಪಷ್ಟವಾಗಿ ಉಪಬಂಧಿಸಿರುವುದನ್ನುಳಿದು ಅವನು 43ನೇ ಪ್ರಕರಣದ (1)ನೇ ಉಪಪ್ರಕರಣ (ಬಿ), (ಡಿ) ಮತ್ತು (ಇ) ಖಂಡಗಳ [1][ಅಥವಾ (2)ನೇ ಉಪಪ್ರಕರಣದ][1] ಮೇರೆಗೆ ಅಧ್ಯಕ್ಷನ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು ಮತ್ತು ಅಧಿಕಾರಗಳನ್ನು ಚಲಾಯಿಸತಕ್ಕದ್ದು;

1.1966ರ ಅಧಿನಿಯಮ 34ರ ಮೂಲಕ 16.1.1967 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಈ ಅಧಿನಿಯಮದ ಉಪಬಂಧಗಳ ಮೂಲಕ ಚೀಫ್ ಆಫೀಸರ್ ನಿಗೆ ನಿರ್ದಿಷ್ಟವಾಗಿ ಪ್ರದತ್ತವಾದ ಎಲ್ಲ ಅಧಿಕಾರಗಳನ್ನು ಅವನು ಚಲಾಯಿಸತಕ್ಕದ್ದು;

(3) ಈ ಕೆಳಕಂಡ ಪ್ರಕರಣಗಳಲ್ಲಿ ಅಥವಾ ಉಪಪ್ರಕರಣಗಳಲ್ಲಿ ಒಳಗೊಂಡಿರುವ ಯಾವುವೇ ಉಪಬಂಧಗಳ ಮೇರೆಗೆ ಮುನ್ಸಿಪಲ್ ಕೌನ್ಸಿಲ್ ಮಾಡಬಹುದಾದ, ಕೊಡಬಹುದಾದ, ಹೊರಡಿಸಬಹುದಾದ, ಚಲಾಯಿಸಬಹುದಾದ ಮತ್ತು ನೆರವೇರಿಸಬಹುದಾದ ಅಂಥ, ಕಡ್ಡಾಯ ಕೋರಿಕೆಯನ್ನು ಲಿಖಿತ ನೋಟೀಸಿನ ಮೂಲಕ ಮಾಡಬಹುದು, ಲಿಖಿತ ಸಮ್ಮತಿಯನ್ನು ಅಥವಾ ಅನುಮತಿಯನ್ನು ಕೊಡಬಹುದು, ಅಂಥ ಆದೇಶಗಳನ್ನು ಮತ್ತು ನಿಷೇಧಗಳನ್ನು ಹೊರಡಿಸಬಹುದು, ಅಂಥ ಎಲ್ಲ ಅಧಿಕಾರಗಳನ್ನು ಚಲಾಯಿಸಬಹುದು ಮತ್ತು ಅಂಥ ಎಲ್ಲ ಕರ್ತವ್ಯಗಳನ್ನು ನೆರವೇರಿಸಬಹುದು, ಎಂದರೆ:-

ಪರಂತು,-

(ಎ) 139ನೇ ಪ್ರಕರಣದ, 182ನೇ ಪ್ರಕರಣದ, 203ನೇ ಪ್ರಕರಣದ (1)ನೇ ಉಪಪ್ರಕರಣ, 208ನೇ ಪ್ರಕರಣ, 216ನೇ ಪ್ರಕರಣದ (1)ನೇ ಉಪಪ್ರಕರಣ ಮತ್ತು ಬಾವಿಯ ಸಂದರ್ಭದಲ್ಲಿ 236ನೇ ಪ್ರಕರಣದಲ್ಲಿ ಒಳಗೊಂಡ ಉಪಬಂಧಗಳ ಮೂಲಕ ಅಥವಾ ಮೇರೆಗೆ ಮುನ್ಸಿಪಲ್ ಕೌನ್ಸಿಲ್ ಗೆ ಪ್ರದತ್ತವಾದ ಅಧಿಕಾರಗಳನ್ನು ಮುನ್ಸಿಪಲ್ ಕೌನ್ಸಿಲ್‌ನ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೊಳಪಟ್ಟು ಅಲ್ಲದೆ ಅಥವಾ ಅಂಥ ಆದೇಶಗಳು ಇಲ್ಲದಿರುವಲ್ಲಿ ಮುನ್ಸಿಪಲ್ ಕೌನ್ಸಿಲ್ ಗೆ ಪೂರ್ವಾನುಮೋದನೆಯಿಂದಲ್ಲದೆ ಮುನ್ಸಿಪಲ್ ಕಮಿಷನರ್ ನು ಚಲಾಯಿಸತಕ್ಕದ್ದಲ್ಲ;

(ಬಿ) ಈ ಅಧಿನಿಯಮದ ಯಾವುವೇ ಉಪಬಂಧಗಳ ಮೂಲಕ ಅಥವಾ ಅದರ ಮೇರೆಗೆ (i) ಬೈಲಾಗಳನ್ನು ರಚಿಸಲು ಮತ್ತು (ii) ಅಧ್ಯಕ್ಷನನ್ನು ಅಥವಾ ಉಪಾಧ್ಯಕ್ಷನನ್ನು ಅಥವಾ ಸಮಿತಿ ಅಥವಾ ಕೌನ್ಸಿಲರ್ ನನ್ನು ಯಾವುದೇ ಕಾರ್ಯವನ್ನು ಮಾಡಲು

ಅಧಿಕೃತಗೊಳಿಸಲು ಮುನ್ಸಿಪಲ್ ಕೌನ್ಸಿಲ್ ಗೆ ಪ್ರದತ್ತವಾದ ಅಧಿಕಾರಗಳನ್ನು ಮುನ್ಸಿಪಲ್ ಕಮಿಷನರ್ ಚಲಾಯಿಸತಕ್ಕದ್ದಲ್ಲ; ಮತ್ತು

(ಸಿ) ಮುನ್ಸಿಪಲ್ ಕೌನ್ಸಿಲ್ ನಲ್ಲಿ ನಿಹಿತವಾದ ಅಥವಾ ಅದಕ್ಕೆ ಸೇರಿದ ಅಥವಾ ಅನ್ಯಥಾ ಅದು ಧಾರಣ ಮಾಡಿದ ಸ್ಥತ್ತು ಚರಸ್ವತ್ತಾಗಿರಲಿ ಅಥವಾ ಸ್ಥಿರಸ್ವತ್ತಾಗಿರಲಿ, ಮುನ್ಸಿಪಲ್ ಕಮಿಷನರ್‌ನಲ್ಲಿ ನಿಹಿತವಾಗಿರುವುದಾಗಿ ಅಥವಾ ಅವನಿಗೆ ಸೇರಿರುವುದಾಗಿ ಅಥವಾ ಅವನು ಅನ್ಯಥಾ ಧಾರಣ ಮಾಡಿರುವುದಾಗಿ ಭಾವಿಸತಕ್ಕದ್ದಲ್ಲ.

339. ಮುನ್ಸಿಪಲ್ ಕಮಿಷನರ್ ನು ಅಥವಾ ಚೀಫ್ ಆಫೀಸರ್ ನು ಇತರ ಅಧಿಕಾರಗಳನ್ನು ಚಲಾಯಿಸಲು ಅಧಿಕೃತನಾಗಿರುವುದಾಗಿ ಭಾವಿಸತಕ್ಕದ್ದು.- ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಬೈಲಾದ ಮೇರೆಗೆ ಅಥವಾ ಇತರ ಯಾವುದೇ ಕಾನೂನಿನ ಮೇರೆಗೆ, ಯಾವುದೇ ಅಧಿಕಾರವನ್ನು ಚಲಾಯಿಸಲು ಅಥವಾ ಯಾವುದೇ ಪ್ರಕಾರ್ಯವನ್ನು ನೆರವೇರಿಸಲು ಮುನ್ಸಿಪಲ್ ಕೌನ್ಸಿಲ್ ಯಾರೇ ಅಧಿಕಾರಿಯನ್ನು ಅಧಿಕೃತಗೊಳಿಸಿದಾಗಲೆಲ್ಲಾ ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನನ್ನು ಸಹ ಅಂಥ ಅಧಿಕಾರವನ್ನು ಚಲಾಯಿಸಲು ಅಥವಾ ಅಂಥ ಪ್ರಕಾರ್ಯವನ್ನು ನೆರವೇರಿಸಲು ಅಧಿಕೃತಗೊಳಿಸುವುದಾಗಿ ಭಾವಿಸತಕ್ಕದ್ದು.

340. ಮುನ್ಸಿಪಲ್ ಕೌನ್ಸಿಲ್ ಇತ್ಯಾದಿಗಳ ಸಭೆಗಳಿಗೆ ಹಾಜರಾಗಲು ಮುನ್ಸಿಪಲ್ ಕಮಿಷನರ್ ನ ಮತ್ತು ಚೀಫ್ ಆಫೀಸರ್ ನ ಹಕ್ಕು.- ಮುನ್ಸಿಪಲ್ ಕಮಿಷನರ್ ನು ಮತ್ತು ಚೀಫ್ ಆಫೀಸರ್ ನು ಮುನ್ಸಿಪಲ್ ಕೌನ್ಸಿಲ್ ನ ಮತ್ತು ಕೌನ್ಸಿಲ್ ನ ಯಾವುದೇ ಸಮಿತಿಯ ಸಭೆಗಳಿಗೆ ಹಾಜರಾಗಲು ಮತ್ತು ಚರ್ಚೆಯಲ್ಲಿ ಭಾಗವಹಿಸಲು ಹಕ್ಕನ್ನು ಹೊಂದಿರತಕ್ಕದ್ದು. ಆದರೆ ಯಾವುದೇ ನಿರ್ಣಯವನ್ನು ಮಂಡಿಸಲು ಅಥವಾ ಮತವನ್ನು ನೀಡಲು ಹಕ್ಕನ್ನು ಹೊಂದಿರತಕ್ಕದ್ದಲ್ಲ.

341. ಮುನ್ಸಿಪಲ್ ಕಮಿಷನರ್ ನು ಅಥವಾ ಚೀಫ್ ಆಫೀಸರನು ನೀಡಿದ ಕಾನೂನುಸಮ್ಮತ ನಿರ್ದೇಶನವನ್ನು ಉಲ್ಲಂಘಿಸುವ ವ್ಯಕ್ತಿಗೆ ದಂಡನೆ.- ಯಾವುದೇ ವಿಷಯದಲ್ಲಿ ಮುನ್ಸಿಪಲ್ ಕಮಿಷನರ್ ನು ಅಥವಾ ಚೀಫ್ ಆಫೀಸರ್ ನು ನೀಡಿದ ಕಾನೂನುಸಮ್ಮತ ನಿರ್ದೇಶನವನ್ನು ಯಾರು ಉಲ್ಲಂಘಿಸುವರೋ ಅಥವಾ ಪಾಲಿಸಲು ತಪ್ಪುವರೋ ಆ ವ್ಯಕ್ತಿಯು, ಅದೇ ವಿಷಯದಲ್ಲಿ ಮುನ್ಸಿಪಲ್ ಕೌನ್ಸಿಲ್ ನೀಡಿದ ಕಾನೂನುಸಮ್ಮತ ನಿರ್ದೇಶನವನ್ನು ಉಲ್ಲಂಘಿಸಿದ್ದರೆ ಅಥವಾ ಪಾಲಿಸಲು ತಪ್ಪಿದ್ದರೆ ಯಾವ ರೀತಿಯಲ್ಲಿ ದಂಡಿತನಾಗುತ್ತಿದ್ದನೋ ಅದೇ ರೀತಿಯಲ್ಲಿ ದಂಡಿತನಾಗತಕ್ಕದ್ದು.

342. ನೇಮಕ ಮಾಡಲು, ರಜಾ ಮಂಜೂರು ಮಾಡಲು, ಶಿಕ್ಷಿಸಲು ಮತ್ತು ಕೆಲಸದಿಂದ ವಜಾ ಮಾಡಲು ಮುನ್ಸಿಪಲ್ ಕಮಿಷನರ್ ನ ಅಥವಾ ಚೀಫ್ ಆಫೀಸರ್ ನ ಅಧಿಕಾರಗಳು.- (1) ಮುನ್ಸಿಪಲ್ ಕಮಿಷನರ್ ನು ಅಥವಾ ಚೀಫ್ ಆಫೀಸರ್ ನು, ಮುನ್ಸಿಪಲ್ ಕೌನ್ಸಿಲ್ ಅವನಿಗೆ ಈ ಬಗ್ಗೆ,-

(ಎ)ತತ್ಕಾಲದಲ್ಲಿ ಜಾರಿಯಲ್ಲಿರುವ ನಿಯಮಗಳಿಗೊಳಪಟ್ಟು [1][ನಿಯಮಿಸಬಹುದಾದಂಥ ಮೊಬಲಗನ್ನು][1]ಮೀರದ ಮಾಸಿಕ ಸಂಬಳವುಳ್ಳ ಮುನ್ಸಿಪಲ್ ಕೌನ್ಸಿಲ್ ನ ಅಧೀನದ ಯಾವುದೇ ಹುದ್ದೆಗೆ ಸಕ್ಷಮನಾಗಿರುವ ವ್ಯಕ್ತಿಯನ್ನು ನೇಮಕ ಮಾಡಲು;

1.1982ರ ಅಧಿನಿಯಮ 28ರ ಮೂಲಕ 10.8.1982 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಬಿ) ತತ್ಕಾಲದಲ್ಲಿ ಜಾರಿಯಲ್ಲಿರುವ ನಿಯಮಗಳಿಗೊಳಪಟ್ಟು, ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನು ನೇಮಕಮಾಡಲು ಅಧಿಕಾರ ಹೊಂದಿದಂಥ ಯಾವುದೇ ಹುದ್ದೆಯ ಧಾರಕನಿಗೆ ಗೈರುಹಾಜರಿ, ರಜೆಯನ್ನು ಮಂಜೂರು ಮಾಡಲು ಮತ್ತು ಅಂಥ ಗೈರು ಹಾಜರಾತಿ ಅವಧಿಯಲ್ಲಿ ಅಂಥ ಧಾರಕನ ಕಾರ್ಯನಿರ್ವಹಿಸಲು ಸಕ್ಷಮ ವ್ಯಕ್ತಿಯನ್ನು ನೇಮಿಸಲು; ಮತ್ತು

(ಸಿ) ಮುನ್ಸಿಪಲ್ ಕಮಿಷನರ್ ನು ಅಥವಾ ಚೀಫ್ ಆಫೀಸರ್ ನು ನೇಮಕ ಮಾಡಲು ಅಧಿಕಾರ ಹೊಂದಿರುವಂಥ ಯಾವುದೇ ಹುದ್ದೆಯ ಧಾರಕನಿಗೆ ಜುಲ್ಮಾನೆ ವಿಧಿಸಲು, ಇಳಿಸಲು, ಅಮಾನತ್ತಿನಲ್ಲಿರಿಸಲು ಅಥವಾ ವಜಾ ಮಾಡಲು ಅಥವಾ ಇತರ ಯಾವುದೇ ದಂಡನೆಯನ್ನು ವಿಧಿಸಲು,

- ಮುನ್ಸಿಪಲ್ ಕೌನ್ಸಿಲ್ ನ ಮಂಜೂರಾತಿಯಿಲ್ಲದೆ ಪ್ರತ್ಯಾಯೋಜಿಸಬಹುದಾದಂಥ ಹಾಗೂ ಸ್ವತಂತ್ರವಾಗಿ ಅಂಥ ಅಧಿಕಾರಗಳನ್ನು ಹೊಂದಿರತಕ್ಕದ್ದು.

(2) ಈ ಅಧಿನಿಯಮದ ಉಪಬಂಧಗಳ ಮೇರೆಗೆ ಮುನ್ಸಿಪಲ್ ಕಮಿಷನರ್ ನನ್ನು ನೇಮಕ ಮಾಡಿರುವಾಗ ಮುನ್ಸಿಪಲ್ ಕೌನ್ಸಿಲ್ ನಿಯೋಜಿಸಿದ ಇತರ ಎಲ್ಲ ಅಧಿಕಾರಿಗಳು ಮತ್ತ ನೌಕರರು ಅವನಿಗೆ ಅಧೀನರಾಗಿರತಕ್ಕದ್ದು.

343. [1][ಅಪೀಲಿಗೊಳಪಟ್ಟ]1 ಆದೇಶಗಳು.- [2][(1)]2 ಈ ಕೆಳಕಂಡ ಯಾವುದೇ ಉಪಬಂಧಗಳ ಮೇರೆಗೆ,

(i) 181ನೇ ಪ್ರಕರಣದ (1)ನೇ ಮತ್ತು (2)ನೇ ಉಪಪ್ರಕರಣಗಳ; (ii) 187ನೇ ಪ್ರಕರಣದ (9)ನೇ ಉಪಪ್ರಕರಣದ (ಸಿ) ಖಂಡದ, (iii) 194ನೇ ಪ್ರಕರಣದ (1)ನೇ ಉಪಪ್ರಕರಣದ, (iv) 197ನೇ ಪ್ರಕರಣದ (2)ನೇ ಉಪಪ್ರಕರಣದ, (v)228ನೇ ಪ್ರಕರಣದ (2)ನೇ ಉಪಪ್ರಕರಣದ, (vi) 230ನೇ ಪ್ರಕರಣದ, (vii) 256ನೇ ಪ್ರಕರಣದ, (viii) 259ನೇ ಪ್ರಕರಣದ, (ix) 264ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದ, (x) 269ನೇ ಪ್ರಕರಣದ, (xi) ವಜಾ ಆದೇಶಕ್ಕೆ ಸಂಬಂಧಿಸಿದಂತೆ 342ನೇ ಪ್ರಕರಣದ (1)ನೇ ಉಪಪ್ರಕರಣದ (ಸಿ) ಖಂಡದ ಮೇರೆಗೆ,

1. 1966ರ ಅಧಿನಿಯಮ 34ರ ಮೂಲಕ 16.1.1967 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 1966ರ ಅಧಿನಿಯಮ 34ರ ಮೂಲಕ 16.1.1967 ರಿಂದ ಜಾರಿಗೆ ಬರುವಂತೆ ಮರು ಅಂಕಿಸಲಾಗಿದೆ.

ಮುನ್ಸಿಪಲ್ ಕಮಿಷನರ್ ನು ಹೊರಡಿಸಿದ ಆದೇಶದ ಅಥವಾ ಮಾಡಿದ ಯಾವುದೇ ಕಾರ್ಯದ ಸಂದರ್ಭದಲ್ಲಿ ಹೊರತು, ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಮೇರೆಗೆ, ಅವನಿಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, [3][xxx]3 ಅವನು ಹೊರಡಿಸಿದ ಯಾವುದೇ ಆದೇಶಕ್ಕೆ ಅಥವಾ ಮಾಡಿದ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ಮುನ್ಸಿಪಲ್ ಕೌನ್ಸಿಲ್ ಗೆ ಅಪೀಲನ್ನು ಸಲ್ಲಿಸತಕ್ಕದ್ದಲ್ಲ:-

3.1966ರ ಅಧಿನಿಯಮ 34ರ ಮೂಲಕ 16.1.1967 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][(2) ಉಪಪ್ರಕರಣ (1)ರ ಮೇರೆಗೆ ಮುನ್ಸಿಪಲ್ ಕೌನ್ಸಿಲ್ ಗೆ ಅಪೀಲು ಸಲ್ಲಿಸದಿರುವಂಥ, ಮುನ್ಸಿಪಲ್ ಕಮಿಷನರ್ ನು ಮಾಡಿದ ಯಾವುದೇ ಆದೇಶಕ್ಕೆ ಅಥವಾ ಮಾಡಿದ ಕಾರ್ಯಕ್ಕೆ ಸಂಬಂಧಿಸಿದಂತೆ ಈ ಬಗ್ಗೆ ರಾಜ್ಯ ಸರ್ಕಾರವು ನಿಯಮಗಳ ಮೂಲಕ ನಿಯಮಿಸಬಹುದಾದಂಥ ಅಧಿಕಾರಿಗೆ ಅಪೀಲು ಸಲ್ಲಿಸತಕ್ಕದ್ದು.][1]

1.1966ರ ಅಧಿನಿಯಮ 34ರ ಮೂಲಕ 16.1.1967 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

344. ಮುನ್ಸಿಪಲ್ ಕಮಿಷನರ್ ನ ಅಧಿಕಾರಗಳ ಪ್ರತ್ಯಾಯೋಜನೆ.- (1) ಮುನ್ಸಿಪಲ್ ಕೌನ್ಸಿಲ್ ನ ಮಂಜೂರಾತಿ ಪಡೆದು, ಮುನ್ಸಿಪಲ್ ಕಮಿಷನರ್ ನು ಲಿಖಿತದಲ್ಲಿ, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಈ ಕೆಳಕಂಡ ಎಂದರೆ 256, 276 ಮತ್ತು 342ನೇ ಪ್ರಕರಣಗಳ ಮೇರೆಗೆ ಅವನಿಗೆ ಪ್ರದತ್ತವಾದ ಅಥವಾ ವಿಧಿಸಿದ ಅಥವಾ ಅವನಲ್ಲಿ ನಿಹಿತವಾದಂಥ ಅಧಿಕಾರಗಳನ್ನು ಹೊರತುಪಡಿಸಿ, ಈ ಅಧಿನಿಯಮದ ಮೇರೆಗೆ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಬೈಲಾದ ಮೇರೆಗೆ ಮುನ್ಸಿಪಲ್ ಕಮಿಷನರ್ ನ ಯಾವುದೇ ಅಧಿಕಾರ, ಕರ್ತವ್ಯ ಅಥವಾ ಪ್ರಕಾರ್ಯಗಳನ್ನು ಯಾರೇ ಮುನ್ಸಿಪಲ್ ಅಧಿಕಾರಿ ಅಥವಾ ನೌಕರನಿಗೆ ಪ್ರತ್ಯಾಯೋಜಿಸಬಹುದು.

(2) ಉಪಪ್ರಕರಣ (1)ರ ಮೇರೆಗೆ ಯಾರೇ ಮುನ್ಸಿಪಲ್ ಅಧಿಕಾರಿಗೆ ಅಥವಾ ನೌಕರನಿಗೆ ಪ್ರತ್ಯಾಯೋಜಿಸಲಾದ ಯಾವುವೇ ಅಧಿಕಾರಗಳನ್ನು, ಕರ್ತವ್ಯಗಳನ್ನು ಅಥವಾ ಪ್ರಕಾರ್ಯಗಳನ್ನು ಅವನು ಚಲಾಯಿಸುವುದು ಅಥವಾ ನಿರ್ವಹಿಸುವುದು, ಸದರಿ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ ಮತ್ತು ಮಿತಿಗಳು ಯಾವುವಾದರೂ ಇದ್ದರೆ ಅವುಗಳಿಗೆ ಮತ್ತು ಮುನ್ಸಿಪಲ್ ಕಮಿಷನರ್ ನ ನಿಯಂತ್ರಣ ಮತ್ತು ಪುನರೀಕ್ಷಣೆಗೂ ಸಹ ಒಳಪಟ್ಟಿರತಕ್ಕದ್ದು.

345. ಮುನ್ಸಿಪಲ್ ಕೌನ್ಸಿಲ್ ನ ಪರವಾಗಿ ಕರಾರುಗಳನ್ನು ಮಾಡಿಕೊಳ್ಳಲು ಅಧಿಕಾರ.- ಮುನ್ಸಿಪಲ್ ಕಮಿಷನರ್ ನನ್ನು ನೇಮಕ ಮಾಡಿರುವಂಥ ಯಾವುದೇ [1][ಮುನ್ಸಿಪಲ್ ಏರಿಯಾ]1 ದಲ್ಲಿ, 72ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಈ ಅಧಿನಿಯಮದ ಅಡಿಯಲ್ಲಿ ಅಥವಾ ಅದರ ಯಾವುದೇ ಉದ್ದೇಶಗಳಿಗಾಗಿ ಕರಾರುಗಳನ್ನು ಮಾಡಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಉಪಬಂಧಗಳು ಪರಿಣಾಮಕಾರಿಯಾಗಿರತಕ್ಕದ್ದು, ಎಂದರೆ:-

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಎ) ಮುನ್ಸಿಪಲ್ ಕಮಿಷನರ್ ನು ಮುನ್ಸಿಪಲ್ ಕೌನ್ಸಿಲ್ ನ ಪರವಾಗಿ ಅಂಥ ಪ್ರತಿಯೊಂದು ಕರಾರನ್ನು ಮಾಡಿಕೊಳ್ಳತಕ್ಕದ್ದು;

(ಬಿ) ಮುನ್ಸಿಪಲ್‌ನ ಇತರ ಯಾವುದೇ ಪ್ರಾಧಿಕಾರದ ಅನುಮೋದನೆ ಅಥವಾ ಮಂಜೂರಾತಿ ಇಲ್ಲದೆ, ಈ ಅಧಿನಿಯಮದ ಮೂಲಕ ಮುನ್ಸಿಪಲ್ ಕಮಿಷನರ್ ನು ಕಾರ್ಯಗತಗೊಳಿಸಲು ಅಧಿಕಾರ ಹೊಂದಿಲ್ಲದಂಥ ಯಾವುದೇ ಉದ್ದೇಶಕ್ಕಾಗಿ ಯಾವುದೇ ಅಂಥ ಕರಾರನ್ನು ಮಾಡಿಕೊಳ್ಳುವುದಕ್ಕೆ ಮೊದಲು ಅಂಥ ಅನುಮೋದನೆಯನ್ನು ಅಥವಾ ಮಂಜೂರಾತಿಯನ್ನು ಕ್ರಮಬದ್ಧವಾಗಿ ಕೊಡುವವರೆಗೆ ಅಥವಾ ಕೊಟ್ಟಿದ್ದ ಹೊರತು, ಅವನು ಕರಾರು ಮಾಡಿಕೊಳ್ಳತಕ್ಕದ್ದಲ್ಲ;

(ಸಿ) ಮುನ್ಸಿಪಲ್ ಕಮಿಷನರ್ ನು ಮುನ್ಸಿಪಲ್ ಕೌನ್ಸಿಲ್ ನ ಅನುಮೋದನೆ ಅಥವಾ ಮಂಜೂರಾತಿ ಪಡೆದ ಹೊರತು ಸ್ಥಿರಾಸ್ತಿಯ ಖರೀದಿ, ಮಾರಾಟ, ಬಾಡಿಗೆ, ಅಡಮಾನ ಅಥವಾ ಇತರ ವರ್ಗಾವಣೆಗಾಗಿ ಯಾವುದೇ ಕರಾರನ್ನು ಮಾಡಿಕೊಳ್ಳತಕ್ಕದ್ದಲ್ಲ;

(ಡಿ) ಮುನ್ಸಿಪಲ್ ಕೌನ್ಸಿಲ್‌ನ ಅನುಮೋದನೆ ಅಥವಾ ಮಂಜೂರಾತಿಯನ್ನು ಪಡೆದ ಹೊರತು ಮುನ್ಸಿಪಲ್ ಕಮಿಷನರ್ ನು ಎರಡು ಸಾವಿರ ರೂಪಾಯಿಗಳಿಗೆ ಮೀರಿದ ವೆಚ್ಚವನ್ನೊಳಗೊಳ್ಳುವಂಥ ಯಾವುದೇ ಕರಾರನ್ನು ಮಾಡಿಕೊಳ್ಳತಕ್ಕದ್ದಲ್ಲ;

(ಇ) ಇನ್ನೂರೈವತ್ತು ರೂಪಾಯಿಗಳಿಗೂ ಮೀರುವ ವೆಚ್ಚವನ್ನೊಳಗೊಂಡ ಹಾಗೂ ಮುನ್ಸಿಪಲ್ ಕಮಿಷನರ್ ನು ಮಾಡಿಕೊಂಡ ಪ್ರತಿಯೊಂದು ಕರಾರನ್ನು ಅದನ್ನು ಮಾಡಿಕೊಂಡ ತರುವಾಯದ ಹದಿನೈದು ದಿನಗಳೊಳಗಾಗಿ ಅವನು ಮುನ್ಸಿಪಲ್ ಕೌನ್ಸಿಲ್ ಗೆ ವರದಿ ಮಾಡತಕ್ಕದ್ದು; ಮತ್ತು

(ಎಫ್) ಈ ಪ್ರಕರಣದಲ್ಲಿ ಹಿಂದೆ ಹೇಳಿದ ಉಪಬಂಧಗಳು, ಮೂಲ ಕರಾರಿಗೆ ಅನ್ವಯವಾಗುವ ಹಾಗೆಯೇ ಒಂದು ಕರಾರಿನ ಪ್ರತಿಯೊಂದು ಬದಲಾವಣೆಗೆ ಅಥವಾ ನಿರ್ವಹಿಸಿ ಮುಗಿಸುವುದಕ್ಕೆ ಅನ್ವಯವಾಗತಕ್ಕದ್ದು.

346. ಕರಾರುಗಳನ್ನು ಮಾಡಿಕೊಳ್ಳುವ ವಿಧಾನ.- (1) ಪ್ರಕರಣ 72 ರ ಉಪಪ್ರಕರಣ (7) ಮತ್ತು (8) ರಲ್ಲಿ ಏನೇ ಒಳಗೊಂಡಿದ್ದಾಗ್ಯೂ ಮುನ್ಸಿಪಲ್ ಕೌನ್ಸಿಲ್ ನ ಪರವಾಗಿ ಮುನ್ಸಿಪಲ್ ಕಮಿಷನರ್ ನು ಅಥವಾ ಚೀಫ್ ಆಫೀಸರ್ ನು ಮಾಡಿಕೊಂಡ ಪ್ರತಿಯೊಂದು ಕರಾರನ್ನು, ಆ ಕರಾರನ್ನು ತನ್ನ ಪರವಾಗಿಯೇ ಮಾಡಿಕೊಂಡಿದ್ದರೆ, ಯಾವ ರೀತಿಯಲ್ಲಿ ಅಂಥ ಮುನ್ಸಿಪಲ್ ಕಮಿಷನರ್ ನನ್ನು ಅಥವಾ ಚೀಫ್ ಆಫೀಸರ್ ನನ್ನು ಬದ್ಧಗೊಳಿಸಲಾಗುತ್ತಿತ್ತೋ ಆ ರೀತಿಯಲ್ಲಿ ಮತ್ತು ಅಂಥ ಸ್ವರೂಪದಲ್ಲಿ ಮಾಡಿಕೊಳ್ಳತಕ್ಕದ್ದು ಮತ್ತು ಅಂಥದೇ ರೀತಿಯಲ್ಲಿ ಮತ್ತು ಸ್ವರೂಪದಲ್ಲಿ ಬದಲಾವಣೆ ಮಾಡಬಹುದು ಅಥವಾ ನಿರ್ವಹಿಸಿ ಮುಗಿಸಬಹುದು:

ಪರಂತು,

(ಎ) ಯಾವುದೇ ಅಂಥ ಕರಾರನ್ನು ಮುನ್ಸಿಪಲ್ ಕೌನ್ಸಿಲ್ ಮಾಡಿಕೊಂಡರೆ ಅದಕ್ಕೆ ಮೊಹರು ಹಾಕಬೇಕಾಗುವುದು, ಅದನ್ನು ಮುನ್ಸಿಪಲ್ ಕೌನ್ಸಿಲ್ ನ ಸಾಮಾನ್ಯ ಮೊಹರು ಹಾಕಿ ಸೀಲ್ ಮಾಡತಕ್ಕದ್ದು;

(ಬಿ) ಐದು ನೂರು ರೂಪಾಯಿಗಳನ್ನು ಮೀರುವ ವೆಚ್ಚವನ್ನೊಳಗೊಳ್ಳುವಂಥ ಯಾವುದೇ ಕಾಮಗಾರಿಯ ನಿರ್ವಹಣೆ ಅಥವಾ ಯಾವುದೇ ಸಾಮಗ್ರಿ ಅಥವಾ ಸರಕುಗಳ ಸರಬರಾಜುಗಾಗಿನ ಪ್ರತಿಯೊಂದು ಕರಾರು ಲಿಖಿತದಲ್ಲಿರತಕ್ಕದ್ದು ಮತ್ತು ಅದಕ್ಕೆ ಮುನ್ಸಿಪಲ್ ಕೌನ್ಸಿಲ್ ನ ಸಾಮಾನ್ಯ ಮೊಹರನ್ನು ಹಾಕಿ ಸೀಲ್ ಮಾಡಿರತಕ್ಕದ್ದು ಮತ್ತು ಸಂದರ್ಭಾನುಸಾರ ನಿರ್ವಹಿಸಬೇಕಾದ ಕಾಮಗಾರಿ ಅಥವಾ ಸರಬರಾಜು ಮಾಡಬೇಕಾದ ಸಾಮಗ್ರಿಗಳನ್ನು ಅಥವಾ ಸರಕುಗಳನ್ನು ಸ್ಪಷ್ಟಪಡಿಸತಕ್ಕದ್ದು. ಅಂಥ ಕಾಮಗಾರಿ ಸಾಮಗ್ರಿಗಳು ಅಥವಾ ಸರಕುಗಳಿಗೆ ಸಂದಾಯ ಮಾಡಬೇಕಾದ ಬೆಲೆಯನ್ನು ಮತ್ತು ಕಾಮಗಾರಿಯ ಕರಾರಿನ ಸಂದರ್ಭದಲ್ಲಿ ಅದನ್ನು ಅಥವಾ ಅದರ ನಿರ್ದಿಷ್ಟ ಭಾಗಗಳನ್ನು ಮುಗಿಸತಕ್ಕಂಥ ಕಾಲ ಅಥವಾ ಕಾಲಗಳನ್ನು ನಿರ್ದಿಷ್ಟಪಡಿಸತಕ್ಕದ್ದು.

(2) ಮುನ್ಸಿಪಲ್ ಕೌನ್ಸಿಲ್ ನ ಸಾಮಾನ್ಯ ಮೊಹರನ್ನು ಸ್ಥಾಯಿ ಸಮಿತಿಯ ಇಬ್ಬರು ಸದಸ್ಯರ ಸಮಕ್ಷಮದಲ್ಲಿ ಹೊರತು, ಯಾವುದೇ ಕರಾರಿಗೆ ಅಥವಾ ಲಿಖಿತಕ್ಕೆ ಹಾಕತಕ್ಕದ್ದಲ್ಲ, ಆ ಸದಸ್ಯರು ತಮ್ಮ ಸಮಕ್ಷಮದಲ್ಲಿ ಅದನ್ನು ಮೊಹರು ಮಾಡಲಾಗಿದೆ ಎಂಬುದಕ್ಕೆ ಸಂಕೇತವಾಗಿ, ಕರಾರಿಗೆ

ಅಥವಾ ಲಿಖಿತಕ್ಕೆ ತಮ್ಮ ರುಜು ಹಾಕತಕ್ಕದ್ದು. ಸದರಿ ಸದಸ್ಯರ ರುಜು, ಅಂಥ ಯಾವುದೇ ಕರಾರು ಅಥವಾ ಲಿಖಿತವನ್ನು ಬರೆದುಕೊಟ್ಟಿರುವುದಕ್ಕೆ ಯಾರೇ ಸಾಕ್ಷಿಗಳ ರುಜುಗಳಿಂದ ಭಿನ್ನವಾಗಿರತಕ್ಕದ್ದು.

(3) ಈ ಪ್ರಕರಣದಲ್ಲಿ ಉಪಬಂಧಿಸಿದ ರೀತಿಯಲ್ಲಿ ಬರೆದುಕೊಟ್ಟಿರದ ಯಾವುದೇ ಕರಾರು ಮುನ್ಸಿಪಲ್ ಕೌನ್ಸಿಲ್ ನ್ನು ಬದ್ಧಗೊಳಿಸತಕ್ಕದ್ದಲ್ಲ.

347. ಐದುನೂರು ರೂಪಾಯಿಗಳಿಗೆ ಮೀರುವ ವೆಚ್ಚವನ್ನೊಳಗೊಳ್ಳುವ ಕರಾರುಗಳಿಗೆ ಟೆಂಡರುಗಳನ್ನು ಕರೆಯತಕ್ಕದ್ದು.- (1) ಉಪಪ್ರಕರಣ (3) ರಲ್ಲಿ ಅನ್ಯಥಾ ಉಪಬಂಧಿಸಿದಂತೆ ಹೊರತು, ಮುನ್ಸಿಪಲ್ ಕಮಿಷನರ್ ನು, ಐದು ನೂರು ರೂಪಾಯಿಗಳಿಗೂ ಮೀರುವ ವೆಚ್ಚವನ್ನು ಒಳಗೊಳ್ಳುವಂಥ ಯಾವುದೇ ಕಾಮಗಾರಿಯ ನಿರ್ವಹಣೆಗಾಗಿ ಅಥವಾ ಸಾಮಗ್ರಿ ಅಥವಾ ಸರಕುಗಳ ಸರಬರಾಜಿಗಾಗಿ, ಯಾವುದೇ ಕರಾರನ್ನು ಮಾಡಿಕೊಳ್ಳುವುದಕ್ಕೆ ಕನಿಷ್ಠ ಪಕ್ಷ ಏಳು ದಿವಸಗಳಿಗೆ ಮುಂಚೆ, ಅಂಥ ಕರಾರಿಗಾಗಿ ಟೆಂಡರ್ ಗಳನ್ನು ಕರೆದು ಸ್ಥಳೀಯ ವೃತ್ತ ಪತ್ರಿಕೆಗಳಲ್ಲಿ ಜಾಹೀರಾತು ನೀಡಿ ನೋಟೀಸನ್ನು ಕೊಡತಕ್ಕದ್ದು.

(2) ಅಂಥ ನೋಟೀಸಿಗೆ ಅನುಸಾರವಾಗಿ ಕೊಡಬಹುದಾದಂಥ ಯಾವುದೇ ಟೆಂಡರ್ ನ್ನು ಸ್ವೀಕರಿಸಲು ಮುನ್ಸಿಪಲ್ ಕಮಿಷನರ್ ನು ಬದ್ಧನಾಗಿರತಕ್ಕದ್ದಲ್ಲ; ಆದರೆ 345ನೇ ಪ್ರಕರಣದ (ಡಿ) ಖಂಡದ ಉಪಬಂಧಗಳಿಗೊಳಪಟ್ಟು, ಹಾಗೆ ಬಂದಿರುವ ಯಾವುದೇ ಟೆಂಡರ್ ನ್ನು ಎಲ್ಲಾ ಸಂದರ್ಭಗಳಲ್ಲಿ ಪರ್ಯಾಲೋಚಿಸಿದ ಮೇಲೆ ಅವನಿಗೆ ಅತ್ಯಂತ ಅನುಕೂಲಕರವೆಂದು ಕಂಡುಬರುವಂಥ ಟೆಂಡರ್ ನ್ನು ಸ್ವೀಕರಿಸಬಹುದು ಅಥವಾ ಅವನಿಗೆ ಸಲ್ಲಿಸಿದ ಎಲ್ಲಾ ಟೆಂಡರ್ ಗಳನ್ನು ತಿರಸ್ಕರಿಸಬಹುದು.

(3) ಮುನ್ಸಿಪಲ್ ಕೌನ್ಸಿಲ್, 72ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು ಕೌನ್ಸಿಲ್ ನ ನಡೆವಳಿಗಳಲ್ಲಿ ಕಾರಣಗಳನ್ನು ದಾಖಲು ಮಾಡಿ, ಇಲ್ಲಿ ಉಪಬಂಧಿಸಿದ ಟೆಂಡರ್ ಗಳನ್ನು ಕರೆಯದೆ ಅಥವಾ ಅವುಗಳನ್ನು ಕರೆದ ತರುವಾಯ ಅವನು ಸ್ವೀಕರಿಸಬಹುದಾದಂಥ ಯಾವುದೇ ಟೆಂಡರ್ ನ್ನು ಅಂಗೀಕರಿಸದೆ, ಕರಾರನ್ನು ಮಾಡಿಕೊಳ್ಳಲು ಮುನ್ಸಿಪಲ್ ಕಮಿಷನರ್ ನನ್ನು ಅಧಿಕೃತಗೊಳಿಸಬಹುದು.

348. ಕರಾರನ್ನು ನೆರವೇರಿಸುವುದಕ್ಕಾಗಿ ಭದ್ರತೆಯನ್ನು ಯಾವಾಗ ತೆಗೆದುಕೊಳ್ಳತಕ್ಕದ್ದು.- ಮುನ್ಸಿಪಲ್ ಕಮಿಷನರ್ ನು, 345ನೇ ಪ್ರಕರಣದ ಮೇರೆಗೆ, ಅವನು ಮಾಡಿಕೊಳ್ಳುವಂಥ ಪ್ರತಿಯೊಂದು ಕರಾರಿನ ಸೂಕ್ತ ನೆರವೇರಿಕೆಗಾಗಿ ಭದ್ರತೆಯನ್ನು ಅಗತ್ಯಪಡಿಸತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ಅವನು ಮಾಡಿಕೊಳ್ಳುವಂಥ ಯಾವುದೇ ಇತರ ಕರಾರಿನ ಸೂಕ್ತ ನೆರವೇರಿಕೆಗಾಗಿ ತನ್ನ ವಿವೇಚನೆಯಂತೆ ಭದ್ರತೆಯನ್ನು ಅಗತ್ಯಪಡಿಸಬಹುದು.

[1][ಅಧ್ಯಾಯ-XV

1. 1994ರ ಅಧಿನಿಯಮ 38ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಪಟ್ಟಣ ಪಂಚಾಯಿತಿ

349. ಪರಿವರ್ತನೀಯ ಪ್ರದೇಶವನ್ನು ನಿರ್ದಿಷ್ಟಪಡಿಸುವುದು.- ರಾಜ್ಯಪಾಲರು, 3ನೇ ಪ್ರಕರಣದ (1)ನೇ ಉಪ-ಪ್ರಕರಣದ (ಎ), (ಬಿ), (ಸಿ), (ಡಿ), (ಇ) ಮತ್ತು (ಎಫ್) ಖಂಡಗಳಲ್ಲಿ ನಮೂದಿಸಿರುವ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು 9ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು ಅಧಿಸೂಚನೆಯ ಮೂಲಕ ಯಾವುದೇ ಪ್ರದೇಶವನ್ನು ಪರಿವರ್ತನೀಯ ಪ್ರದೇಶವೆಂದು ನಿರ್ದಿಷ್ಟಪಡಿಸತಕ್ಕದ್ದು:

ಪರಂತು, ಯಾವುದೇ ಅಂಥ ಪ್ರದೇಶವನ್ನು,-

(ಎ) ಹತ್ತು ಸಾವಿರಕ್ಕಿಂತ ಕಡಿಮೆಯಲ್ಲದ, ಆದರೆ ಇಪ್ಪತ್ತು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆಯನ್ನು ಒಳಗೊಂಡಿರುವಂಥ ಪ್ರದೇಶವಾಗಿದ್ದ ಹೊರತು;

(ಬಿ) ಜನಸಂಖ್ಯಾ ಸಾಂದ್ರತೆಯು, ಒಂದು ಚದರ ಕಿಲೋಮೀಟರ್ ಗೆ ನಾಲ್ಕುನೂರು ನಿವಾಸಿಗಳಿಗೆ ಕಡಿಮೆಯಲ್ಲದಂಥ ಪ್ರದೇಶವಾಗಿದ್ದ ಹೊರತು;

(ಸಿ) ಕೃಷಿಯೇತರ ಚಟುವಟಿಕೆಗಳಲ್ಲಿರುವ ಉದ್ಯೋಗದ ಶೇಕಡಾ ಪ್ರಮಾಣವು ಒಟ್ಟು ಉದ್ಯೋಗದ ಶೇಕಡಾವಾರು ಪ್ರಮಾಣದ ಐವತ್ತಕ್ಕಿಂತ ಕಡಿಮೆಯಲ್ಲದ ಪ್ರದೇಶವಾಗಿದ್ದ ಹೊರತು,

- ಅದನ್ನು ಪರಿವರ್ತಿನೀಯ ಪ್ರದೇಶವೆಂದು ನಿರ್ದಿಷ್ಟಪಡಿಸತಕ್ಕದ್ದಲ್ಲ:

ಮತ್ತು ಪರಂತು, ಹತ್ತುಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಅಂಥ ಪ್ರದೇಶಗಳಲ್ಲಿ ತಾಲ್ಲೂಕು ಕೇಂದ್ರ ಕಚೇರಿಯು ಇದ್ದರೆ, ಅಂಥ ಪ್ರದೇಶವನ್ನು ಪರಿವರ್ತನೀಯ ಪ್ರದೇಶವೆಂದು ರಾಜ್ಯಪಾಲರು, ನಿರ್ದಿಷ್ಟಪಡಿಸತಕ್ಕದ್ದು.

350. ಮುನ್ಸಿಪಲ್ ಏರಿಯಾ.- 349ನೇ ಪ್ರಕರಣದ ಅಡಿಯಲ್ಲಿ ಯಾವುದೇ ಪ್ರದೇಶವನ್ನು ಪರಿವರ್ತನೀಯ ಪ್ರದೇಶವೆಂಬುದಾಗಿ ನಿರ್ದಿಷ್ಟಪಡಿಸಿದ್ದಲ್ಲಿ, ಅಂಥ ಪ್ರದೇಶವನ್ನು ಮುನ್ಸಿಪಲ್ ಏರಿಯಾವೆಂದು ಭಾವಿಸತಕ್ಕದ್ದು.

351. ಪರಿವರ್ತನೀಯ ಪ್ರದೇಶಕ್ಕಾಗಿ ಪಟ್ಟಣ ಪಂಚಾಯಿತಿಯ ರಚನೆ.- (1) ಪ್ರಕರಣ 350ರ ಮೇರೆಗೆ ಮುನ್ಸಿಪಲ್ ಏರಿಯಾವೆಂಬುದಾಗಿ ಭಾವಿಸಿರುವಂಥ ಪರಿವರ್ತನೀಯ ಪ್ರದೇಶಕ್ಕೆ ಪಟ್ಟಣ ಪಂಚಾಯಿತಿಯನ್ನು ರಚಿಸತಕ್ಕದ್ದು.

(2) ಪ್ರತಿಯೊಂದು ಪಟ್ಟಣ ಪಂಚಾಯಿತಿಯು "------- ಪಟ್ಟಣ ಪಂಚಾಯಿತಿ" ಎಂಬ ಹೆಸರಿನ ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಸ್ವತ್ತನ್ನು ಆರ್ಜಿಸುವ, ಹೊಂದಿರುವ ಮತ್ತು ವಿಲೆ ಮಾಡುವ ಹಾಗೂ ಕರಾರು ಮಾಡಿಕೊಳ್ಳುವ ಅಧಿಕಾರದೊಂದಿಗೆ ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮೊಹರನ್ನು ಹೊಂದಿರತಕ್ಕದ್ದು ಮತ್ತು ಸದರಿ ಹೆಸರಿನಿಂದ ದಾವೆ ಹೂಡಬಹುದು ಮತ್ತು ದಾವೆಗೆ ಗುರಿಯಾಗಬಹುದು.

352. ಪಟ್ಟಣ ಪಂಚಾಯಿತಿಗೆ ಚುನಾವಣೆ.-

[1][(1) ಒಂದು ಪಟ್ಟಣ ಪಂಚಾಯಿತಿಯು,-

(ಎ) ಸರ್ಕಾರವು, ಅಧಿಸೂಚನೆಯ ಮೂಲಕ ನಿರ್ಧರಿಸಬಹುದಾದ ಹನ್ನೊಂದಕ್ಕಿಂತ ಕಡಿಮೆಯಲ್ಲದ ಮತ್ತು ಇಪ್ಪತ್ತಕ್ಕೆ ಹೆಚ್ಚಿಗೆಯಲ್ಲದ ಕೌನ್ಸಿಲರ್ ಗಳನ್ನು;

(ಬಿ) ಪರಿವರ್ತನೀಯ ಪ್ರದೇಶದ ನಿವಾಸಿಗಳಿಂದ ಸರ್ಕಾರವು ನಾಮನಿರ್ದೇಶಿಸಿದ ಮೂರಕ್ಕಿಂತ ಹೆಚ್ಚಿರದ ವ್ಯಕ್ತಿಗಳನ್ನು ಅಂದರೆ,-

(i) ಮುನ್ಸಿಪಲ್ ಆಡಳಿತದಲ್ಲಿ ಅಥವಾ ಆರೋಗ್ಯ, ಪಟ್ಟಣ ಯೋಜನೆ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ವಿಶೇಷ ಜ್ಞಾನವನ್ನು ಹಾಗೂ ಅನುಭವವನ್ನು ಪಡೆದಿರುವ ವ್ಯಕ್ತಿಗಳನ್ನು; ಅಥವಾ

(ii) ಸಾಮಾಜಿಕ ಕಾರ್ಯಕರ್ತರುಗಳನ್ನು.

(ಸಿ) ಪರಿವರ್ತನೀಯ ಪ್ರದೇಶದೊಳಗೆ ಯಾರ ಚುನಾವಣಾ ಕ್ಷೇತ್ರಗಳು ಇರುವುದೋ, ಆ ಪರಿವರ್ತನೀಯ ಪ್ರದೇಶದ ಒಂದು ಭಾಗವನ್ನು ಅಥವಾ ಇಡೀ

ಮತಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ಲೋಕಸಭಾ ಸದಸ್ಯರುಗಳನ್ನು ಹಾಗೂ ರಾಜ್ಯ ವಿಧಾನಸಭೆಯ ಸದಸ್ಯರುಗಳನ್ನು, ಮತ್ತು

(ಡಿ) ಪರಿವರ್ತನೀಯ ಪ್ರದೇಶದಲ್ಲಿ ಮತದಾರರಾಗಿ ನೋಂದಾಯಿತರಾದ ರಾಜ್ಯಸಭಾ ಸದಸ್ಯರನ್ನು ಹಾಗೂ ರಾಜ್ಯ ವಿಧಾನಪರಿಷತ್ತಿನ ಸದಸ್ಯರುಗಳನ್ನು

- ಒಳಗೊಂಡಿರತಕ್ಕದ್ದು:

ಪರಂತು, ಖಂಡ (ಬಿ) ಯಲ್ಲಿ ಉಲ್ಲೇಖಿಸಿದ ವ್ಯಕ್ತಿಗಳು, ಪಟ್ಟಣ ಪಂಚಾಯಿತಿಯ ಸಭೆಗಳಲ್ಲಿ ಮತ ನೀಡುವ ಹಕ್ಕನ್ನು ಹೊಂದಿರತಕ್ಕದ್ದಲ್ಲ.][1]

1.2003ರ ಅಧಿನಿಯಮ 23ರ ಮೂಲಕ 10.11.2003ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಚುನಾವಣೆಗಳ ಉದ್ದೇಶಕ್ಕಾಗಿ, ಸರ್ಕಾರವು ಅಧಿಸೂಚನೆಯ ಮೂಲಕ, ಪರಿವರ್ತನೀಯ ಪ್ರದೇಶವನ್ನು (1)ನೇ ಉಪ-ಪ್ರಕರಣದ ಮೇರೆಗೆ ನಿರ್ಧರಿಸಲ್ಪಟ್ಟ ಕೌನ್ಸಿಲರ್ ಗಳ ಸಂಖ್ಯೆಯಷ್ಟೇ ವಾರ್ಡ್‌ಗಳೆಂದು ಕರೆಯಲಾಗುವ ಹಲವಾರು ಚುನಾವಣಾ ಕ್ಷೇತ್ರಗಳನ್ನಾಗಿ ವಿಭಾಗಿಸತಕ್ಕದ್ದು ಹಾಗೂ ಪ್ರತಿಯೊಂದು ವಾರ್ಡ್ ಚುನಾವಣಾ ಕ್ಷೇತ್ರವಾಗಿರತಕ್ಕದ್ದು.

(3) ಪ್ರತಿಯೊಂದು ವಾರ್ಡಿಗೆ ಒಬ್ಬ ಕೌನ್ಸಿಲರ್ ನ್ನು ಚುನಾಯಿಸತಕ್ಕದ್ದು.

(4) ಪಟ್ಟಣ ಪಂಚಾಯಿತಿಗಳಲ್ಲಿ,-

(ಎ) ಅನುಸೂಚಿತ ಜಾತಿಗಳಿಗಾಗಿ; ಮತ್ತು

(ಬಿ) ಅನುಸೂಚಿತ ಪಂಗಡಗಳಿಗಾಗಿ

- ಸ್ಥಾನಗಳನ್ನು ಮೀಸಲಿಡತಕ್ಕದ್ದು

ಮತ್ತು ಪರಿವರ್ತನೀಯ ಪ್ರದೇಶದಲ್ಲಿರುವ ಒಟ್ಟು ಜನಸಂಖ್ಯೆಯಲ್ಲಿ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡಗಳ ಜನಸಂಖ್ಯೆಯು ಯಾವ ಅನುಪಾತದಲ್ಲಿದೆಯೋ ಹಾಗೆ ಮೀಸಲಿಡಲಾದ ಸ್ಥಾನಗಳ ಸಂಖ್ಯೆಯು ಪರಿವರ್ತನೀಯ ಪ್ರದೇಶದಲ್ಲಿ ನೇರ ಚುನಾವಣೆಯ ಮೂಲಕ ಭರ್ತಿಮಾಡಬೇಕಾಗಿರುವ ಒಟ್ಟು ಸಂಖ್ಯೆಯ ಸ್ಥಾನಗಳಿಗೆ ಸರಿಸುಮಾರು ಅದೇ ಅನುಪಾತದಲ್ಲಿರತಕ್ಕದ್ದು:

[1][ಪರಂತು, ಪ್ರತಿ ಪಟ್ಟಣ ಪಂಚಾಯಿತಿಯಲ್ಲಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗಾಗಿ ಕನಿಷ್ಠ ಒಂದೊಂದು ಸ್ಥಾನವನ್ನು ಮೀಸಲಿರಿಸತಕ್ಕದ್ದು:

ಮತ್ತು ಪರಂತು, ಅನುಸೂಚಿತ ಜಾತಿಗಳಿಗೆ ಸೇರಿದ ವ್ಯಕ್ತಿಯು ಲಭ್ಯವಿಲ್ಲದಿರುವಲ್ಲಿ, ಆ ಪ್ರವರ್ಗಕ್ಕೆ ಮೀಸಲಿಸಿರಿದ ಸ್ಥಾನವನ್ನು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಂದಲೂ ಹಾಗೂ ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಯು ಲಭ್ಯವಿಲ್ಲದಿರುವಲ್ಲಿ ಆ ಪ್ರವರ್ಗಕ್ಕೆ ಮೀಸಲಿರಿಸಿದ ಸ್ಥಾನವನ್ನು ಅನುಸೂಚಿತ ಜಾತಿಗಳಿಗೆ ಸೇರಿದ ವ್ಯಕ್ತಿಗಳಿಂದಲೂ ಭರ್ತಿ ಮಾಡತಕ್ಕದ್ದು.][1`]

1. 2003ರ ಅಧಿನಿಯಮ 23ರ ಮೂಲಕ 10.11.2003 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(5) ಪಟ್ಟಣ ಪಂಚಾಯಿತಿಯಲ್ಲಿ ನೇರ ಚುನಾವಣೆಯ ಮೂಲಕ ಭರ್ತಿ ಮಾಡಬೇಕಾಗಿರುವ ಒಟ್ಟು ಸ್ಥಾನಗಳ ಸಂಖ್ಯೆಯಲ್ಲಿ ಸರಿಸುಮಾರು ಮೂರನೇ ಒಂದರಷ್ಟು ಸಂಖ್ಯೆಯ ಸ್ಥಾನಗಳನ್ನು ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಗಾಗಿ ಮೀಸಲಿರಿಸತಕ್ಕದ್ದು:

[1][ಪರಂತು, ಈ ಉಪ-ಪ್ರಕರಣದ ಅಡಿಯಲ್ಲಿ ಮೀಸಲಿರಿಸಿದ ಸ್ಥಾನಗಳ ಪೈಕಿ, ಅಂಥ ಸ್ಥಾನಗಳ ಒಟ್ಟು ಸಂಖ್ಯೆಯಲ್ಲಿನ ಶೇಕಡಾ ಎಂಭತ್ತರಷ್ಟು ಸ್ಥಾನಗಳನ್ನು "ಎ" ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳಿಗೆ ಮೀಸಲಿರಿಸತಕ್ಕದ್ದು ಮತ್ತು ಉಳಿದ ಶೇಕಡಾ ಇಪ್ಪತ್ತರಷ್ಟು ಸ್ಥಾನಗಳನ್ನು "ಬಿ" ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳಿಗೆ ಮೀಸಲಿರಿಸತಕ್ಕದ್ದು:][1]

ಮತ್ತು ಪರಂತು, "ಎ" ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳು ಲಭ್ಯವಿಲ್ಲದಿರುವಲ್ಲಿ ಆ ಪ್ರವರ್ಗಕ್ಕೆ ಮೀಸಲಿರಿಸಿದ ಸ್ಥಾನಗಳನ್ನು "ಬಿ" ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳಿಂದ ಭರ್ತಿಮಾಡಿಕೊಳ್ಳತಕ್ಕದ್ದು. ಹಾಗೆಯೇ "ಬಿ" ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳು ಲಭ್ಯವಿಲ್ಲದಿರುವಲ್ಲಿ ಆ ಪ್ರವರ್ಗಕ್ಕೆ ಮೀಸಲಿರಿಸಿದ ಸ್ಥಾನಗಳನ್ನು "ಎ" ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳಿಂದ ಭರ್ತಿ ಮಾಡಿಕೊಳ್ಳತಕ್ಕದ್ದು.][1]

[2][ಅಲ್ಲದೆ, ಈ ಉಪ-ಪ್ರಕರಣದ ಮೇರೆಗೆ ಹಿಂದುಳಿದ ವರ್ಗಗಳಿಗಾಗಿ ಮೀಸಲಿರಿಸಿದ ಸ್ಥಾನಗಳನ್ನು (4)ನೇ ಉಪ-ಪ್ರಕರಣದ ಮೇರೆಗೆ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗಾಗಿ ಹಾಗೂ ಈ ಉಪ-ಪ್ರಕರಣದ ಮೇರೆಗೆ ಹಿಂದುಳಿದ ವರ್ಗಗಳಿಗಾಗಿ ಮೀಸಲಿರಿಸಿದ

ಸ್ಥಾನಗಳ ಒಟ್ಟು ಸಂಖ್ಯೆಯು ಪಟ್ಟಣ ಪಂಚಾಯಿತಿಯಲ್ಲಿನ ಸ್ಥಾನಗಳ ಒಟ್ಟು ಸಂಖ್ಯೆಯ ಶೇಕಡಾ ಐವತ್ತನ್ನು ಮೀರಿರತಕ್ಕದ್ದಲ್ಲವೆಂದು ನಿರ್ಧರಿಸತಕ್ಕದ್ದು.][2]

1. 1995ರ ಅಧಿನಿಯಮ 24ರ ಮೂಲಕ 26.9.1995 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 2012ರ ಅಧಿನಿಯಮ 32ರ ಮೂಲಕ 30.8.2012 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(6) ಪಟ್ಟಣ ಪಂಚಾಯಿತಿಯಲ್ಲಿ ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು ಮತ್ತು ಹಿಂದುಳಿದ ವರ್ಗಗಳಿಗೆ ಸೇರಿರುವ ವ್ಯಕ್ತಿಗಳ ಪ್ರತಿಯೊಂದು ಪ್ರವರ್ಗಕ್ಕಾಗಿ [1][ಮೀಸಲಿಟ್ಟಿರುವ ಸ್ಥಾನಗಳ ಪೈಕಿ ಮತ್ತು ನೇರ ಚುನಾವಣೆಯ ಮೂಲಕ ಭರ್ತಿ ಮಾಡಬೇಕಾಗಿರುವ ಮೀಸಲಿಟ್ಟಿರದ ಸ್ಥಾನಗಳ ಪೈಕಿ [1][ಶೇಕಡಾ ಐವತ್ತಕ್ಕಿಂತ ಹೆಚ್ಚಿರದ ಸ್ಥಾನಗಳನ್ನು,][1] ಮಹಿಳೆಯರಿಗಾಗಿ ಮೀಸಲಿರಿಸತಕ್ಕದ್ದು:

ಪರಂತು (4), (5) ಮತ್ತು (6)ನೇ ಉಪ-ಪ್ರಕರಣಗಳ ಅಡಿಯಲ್ಲಿ ಮೀಸಲಿರಿಸಿದ ಸ್ಥಾನಗಳನ್ನು ಪರಿವರ್ತನೀಯ ಪ್ರದೇಶದಲ್ಲಿನ ಬೇರೆಬೇರೆ ವಾರ್ಡ್ ಗಳಿಗೆ ಸರದಿಯ ಪ್ರಕಾರ ಹಂಚಿಕೆ ಮಾಡತಕ್ಕದ್ದು.

1. 2012ರ ಅಧಿನಿಯಮ 32ರ ಮೂಲಕ 30.8.2012 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(7) ಈ ಅಧಿನಿಯಮದಲ್ಲಿ ಉಪಬಂಧಿಸಲಾಗಿರುವ ರೀತಿಯಲ್ಲಿ ಕೌನ್ಸಿಲರ್ ಗಳನ್ನು ಚುನಾಯಿಸತಕ್ಕದ್ದು.

(8) ಉಪ-ಪ್ರಕರಣ (4), (5) ಮತ್ತು (6) ರಲ್ಲಿರುವುದು ಯಾವುದೂ, ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು, ಹಿಂದುಳಿದ ವರ್ಗಗಳ ಸದಸ್ಯರಿಗಾಗಿ ಅಥವಾ ಮಹಿಳೆಯರಿಗಾಗಿ ಮೀಸಲಿರಿಸಿಲ್ಲದ ಸ್ಥಾನಗಳಿಗೆ ಚುನಾವಣೆಗೆ ನಿಲ್ಲಲು ತಡೆಯುಂಟುಮಾಡುತ್ತದೆಯೆಂದು ಭಾವಿಸತಕ್ಕದ್ದಲ್ಲ.

(9) ಈ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಯಾವುದೇ ಪಟ್ಟಣ ಪಂಚಾಯಿತಿಯ ಕೌನ್ಸಿಲರ್ ಗಳ ಒಟ್ಟು ಸಂಖ್ಯೆಯಲ್ಲಿ ಮೂರನೇ ಎರಡರಷ್ಟು ಸಂಖ್ಯೆಯ ಕೌನ್ಸಿಲರ್ ಗಳನ್ನು ಚುನಾಯಿಸಿದಲ್ಲಿ, ಈ ಅಧಿನಿಯಮದ ಅಡಿಯಲ್ಲಿ ಕ್ರಮಬದ್ಧವಾಗಿ ಪಟ್ಟಣ ಪಂಚಾಯಿತಿಯನ್ನು ರಚಿಸಲಾಗಿದೆ ಎಂದು ಭಾವಿಸತಕ್ಕದ್ದು.

353. ಈ ಅಧಿನಿಯಮದ ಉಪಬಂಧಗಳನ್ನು ಪರಿವರ್ತಿನೀಯ ಪ್ರದೇಶಗಳಿಗೆ ವಿಸ್ತರಿಸಲು ಅಧಿಕಾರ.- ಸರ್ಕಾರವು, ಈ ಅಧ್ಯಾಯದ ಉಪಬಂಧಗಳನ್ನು ಜಾರಿಗೊಳಿಸುವ ಸಲುವಾಗಿ ಸರ್ಕಾರವು ಅವಶ್ಯವೆಂದು ಪರಿಗಣಿಸಬಹುದಾದ ಅಂಥ ನಿರ್ಬಂಧಗಳಿಗೆ ಅಥವಾ ಮಾರ್ಪಾಟುಗಳಿಗೊಳಪಟ್ಟು,-

(ಎ) ಮುನ್ಸಿಪಲ್ ಕೌನ್ಸಿಲ್‌ನ ಪರಿಮಿತಿಗಳೊಳಗಿರುವ ಪ್ರದೇಶಕ್ಕೆ ಅನ್ವಯವಾಗುವ, ಈ ಅಧಿನಿಯಮದ ಯಾವುದೇ ಪ್ರಕರಣದ ಯಾವುದೇ ಉಪಬಂಧಗಳು ಅಥವಾ ಯಾವುದೇ ಪ್ರಕರಣದ ಭಾಗವನ್ನು;

(ಬಿ) ಮುನ್ಸಿಪಲ್ ಕೌನ್ಸಿಲ್‌ನ ಪರಿಮಿತಿಗಳೊಳಗಿರುವಂಥ ಪ್ರದೇಶದಲ್ಲಿ ಜಾರಿಯಲ್ಲಿರುವ ಯಾವುದೇ ನಿಯಮ ಅಥವಾ ಬೈಲಾವನ್ನು

- ಅಧಿಸೂಚನೆಯ ಮೂಲಕ ಪರಿವರ್ತನಾ ಪ್ರದೇಶಕ್ಕೆ ಅನ್ವಯಿಸಬಹುದು.

354. ಪರಿವರ್ತನಾ ಪ್ರದೇಶಕ್ಕೆ ಈ ಅಧಿನಿಯಮವನ್ನು ಅನ್ವಯಿಸುವುದರ ಪರಿಣಾಮ.- (1) ಈ ಅಧಿನಿಯಮದ ಯಾವುದೇ ಉಪಬಂಧ ಅಥವಾ ಯಾವುದೇ ನಿಯಮ ಅಥವಾ ಬೈಲಾವನ್ನು ಮಾರ್ಪಾಟಿನೊಂದಿಗೆ ಅಥವಾ ಮಾರ್ಪಾಟು ಮಾಡದೆ, ಪರಿವರ್ತನಾ ಪ್ರದೇಶಕ್ಕೆ ಅನ್ವಯಿಸಿದ್ದಲ್ಲಿ, ಭಿನ್ನವಾದ ಉದ್ದೇಶವಿದ್ದ ಹೊರತು, ಅಧಿನಿಯಮದ ಅಂಥ ಉಪಬಂಧಗಳು ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳು ಅಥವಾ ಬೈಲಾಗಳು, ಪರಿವರ್ತನಾ ಪ್ರದೇಶವು, ಮುನ್ಸಿಪಲ್ ಕೌನ್ಸಿಲ್ ನ ಅಧಿಕಾರವ್ಯಾಪ್ತಿಯೊಳಗಿರುವ ಮುನ್ಸಿಪಲ್ ಪ್ರದೇಶವಾಗಿದ್ದರೆ ಹಾಗೂ ಮುನ್ಸಿಪಲ್ ಕೌನ್ಸಿಲ್ ನ ಅಧಿಕಾರಗಳು ಮತ್ತು ಕರ್ತವ್ಯಗಳು ಪಟ್ಟಣ ಪಂಚಾಯಿತಿಯಲ್ಲಿ ನಿಹಿತಗೊಂಡಿದ್ದರೆ ಹೇಗೆ ಅನ್ವಯವಾಗುತ್ತಿದ್ದವೋ ಹಾಗೆಯೇ ಆ ಪರಿವರ್ತನಾ ಪ್ರದೇಶಕ್ಕೆ ಅನ್ವಯವಾಗತಕ್ಕದ್ದು.

(2) ಪ್ರಕರಣ 353ರ ಅಡಿಯಲ್ಲಿ ಅನ್ವಯಿಸಲಾದಂತೆ ಈ ಅಧಿನಿಯಮದ ಯಾವುವೇ ಉಪಬಂಧಗಳ ಮೇರೆಗೆ ಪರಿವರ್ತನಾ ಪ್ರದೇಶದಲ್ಲಿ ಪಟ್ಟಣ ಪಂಚಾಯಿತಿಯು ಯಾವುದೇ

ತೆರಿಗೆಯನ್ನು ವಿಧಿಸಿದಲ್ಲಿ, ಅಂಥ ತೆರಿಗೆಯ ಉತ್ಪತ್ತಿಯನ್ನು, ಮುನ್ಸಿಪಲ್ ಕೌನ್ಸಿಲ್ ಮುನ್ಸಿಪಲ್ ನಿಧಿಯನ್ನು ಹೇಗೆ ವೆಚ್ಚ ಮಾಡಬಹುದಾಗಿದ್ದಿತೋ ಅದೇ ರೀತಿಯಲ್ಲಿ ಮತ್ತು ಯಾವ ಉದ್ದೇಶಕ್ಕಾಗಿ ವೆಚ್ಚ ಮಾಡಬಹುದಾಗಿತ್ತೋ, ಅದೇ ಉದ್ದೇಶಕ್ಕಾಗಿ ವೆಚ್ಚ ಮಾಡತಕ್ಕದ್ದು.

355. ಪರಿವರ್ತನಾ ಪ್ರದೇಶದೊಳಗೆ, ಪಂಚಾಯಿತಿ ಪ್ರದೇಶವನ್ನು ವಿಲೀನಗೊಳಿಸುವುದರ ಪರಿಣಾಮ.- ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ಅಡಿಯಲ್ಲಿ ಒಂದು ಅಥವಾ ಹೆಚ್ಚು ಕಂದಾಯ ಗ್ರಾಮಗಳನ್ನು ಒಳಗೊಂಡ ಯಾವ ಸ್ಥಳೀಯ ಪ್ರದೇಶಕ್ಕೆ ಸಂಬಂಧಿಸಿದಂತೆ ಒಂದು ಗ್ರಾಮಪಂಚಾಯಿತಿಯನ್ನು ರಚಿಸಲಾಗಿದೆಯೋ ಆ ಯಾವುದೇ ಸ್ಥಳೀಯ ಪ್ರದೇಶವನ್ನು, 4ನೇ ಪ್ರಕರಣದ ಉಪಬಂಧಗಳಿಗೆ ಸಂಬಂಧಿಸಿದಂತೆ ಹೊರಡಿಸಲಾದ ಅಧಿಸೂಚನೆಯ ಮೂಲಕ, ಪರಿವರ್ತನಾ ಪ್ರದೇಶದೊಳಗೆ ಸೇರಿಸತಕ್ಕದ್ದು ಮತ್ತು ಈ ಅಧಿನಿಯಮದಲ್ಲಿ ಅಥವಾ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದಲ್ಲಿ, ಏನೇ ಒಳಗೊಂಡಿದ್ದರೂ, ಆದರೆ ಈ ಅಧಿನಿಯಮದ 4ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು ಅಂಥ ಪ್ರದೇಶವನ್ನು ಯಾವ ದಿನಾಂಕದಂದು ಪರಿವರ್ತನಾ ಪ್ರದೇಶದೊಳಗೆ ಸೇರಿಸಲಾಗಿದೆಯೋ, ಆ ದಿನಾಂಕದಿಂದ ಜಾರಿಗೆ ಬರುವಂತೆ ಈ ಕೆಳಕಂಡ ಪರಿಣಾಮಗಳು ಉಂಟಾಗತಕ್ಕದ್ದು, ಎಂದರೆ:-

(ಎ) ಗ್ರಾಮ ಪಂಚಾಯಿತಿಯು ಅಸ್ತಿತ್ವದಲ್ಲಿರುವುದು ನಿಂತುಹೋಗತಕ್ಕದ್ದು ಮತ್ತು ಅಂಥ ಪ್ರದೇಶವು ಯಾವ ಜಿಲ್ಲಾ ಪಂಚಾಯಿತಿಯ ಅಥವಾ ತಾಲ್ಲೂಕು ಪಂಚಾಯಿತಿಯ ಅಧಿಕಾರವ್ಯಾಪ್ತಿಯೊಳಗೆ ಇದೆಯೋ, ಆ ಜಿಲ್ಲಾ ಪಂಚಾಯಿತಿಯು ಅಥವಾ ತಾಲ್ಲೂಕು ಪಂಚಾಯಿತಿಯು ಅಂಥ ಪ್ರದೇಶದ ಮೇಲೆ ಅಧಿಕಾರವ್ಯಾಪ್ತಿಯನ್ನು ಹೊಂದಿರುವುದು ನಿಂತುಹೋಗತಕ್ಕದ್ದು.

(ಬಿ) ಗ್ರಾಮ ಪಂಚಾಯಿತಿಯ ನಿಧಿಯಲ್ಲಿ ವೆಚ್ಚ ಮಾಡದೆ ಉಳಿದಿರುವ ಶಿಲ್ಕು ಮತ್ತು ಗ್ರಾಮ ಪಂಚಾಯಿತಿಗೆ ಸೇರಿದ ಸ್ವತ್ತು (ದರಗಳ, ತೆರಿಗೆಗಳ ಮತ್ತು ಫೀಜ್ ಗಳ ಬಾಕಿಗಳೂ ಸೇರಿದಂತೆ) ಮತ್ತು ಅಂಥ ಅಧಿಸೂಚನೆಗೆ ಮುಂಚೆ ಪಂಚಾಯಿತಿಯಲ್ಲಿ ನಿಹಿತವಾಗಿದ್ದ ಎಲ್ಲ ಹಕ್ಕುಗಳು ಮತ್ತು ಅಧಿಕಾರಗಳು, ಅವುಗಳಿಗೆ ಸಂಬಂಧಿಸಿದಂತೆ ಎಲ್ಲ ಋಣಭಾರಗಳಿಗೆ ಮತ್ತು ಹೊಣೆಗಾರಿಕೆಗಳಿಗೆ ಪರಿವರ್ತನಾ ಪ್ರದೇಶದ ಪಟ್ಟಣ ಪಂಚಾಯಿತಿಯಲ್ಲಿ ನಿಹಿತವಾಗತಕ್ಕದ್ದು.

(ಸಿ) ಸದರಿ ಸ್ಥಳೀಯ ಪ್ರದೇಶಕ್ಕೆ ಸಂಬಂಧಪಟ್ಟಂತೆ, ಸದರಿ ದಿನಾಂಕದ ನಿಕಟಪೂರ್ವದಲ್ಲಿ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ, 1993 ರ ಮೇರೆಗೆ ಮಾಡಿದ, ಹೊರಡಿಸಿದ, ವಿಧಿಸಿದ ಅಥವಾ ಮಂಜೂರು ಮಾಡಿದ ಯಾವುದೇ ನೇಮಕ, ಅಧಿಸೂಚನೆ, ನೋಟೀಸ್, ತೆರಿಗೆ, ಆದೇಶ, ಯೋಜನೆ, ಲೈಸೆನ್ಸ್, ಅನುಮತಿ, ನಿಯಮ, ಬೈಲಾ ಅಥವಾ ನಮೂನೆಯು ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ಮಾಡಿದ, ಹೊರಡಿಸಿದ, ವಿಧಿಸಿದ ಅಥವಾ ಮಂಜೂರು ಮಾಡಿದ, ಯಾವುದೇ ನೇಮಕ, ಅಧಿಸೂಚನೆ, ನೋಟೀಸ್, ತೆರಿಗೆ, ಆದೇಶ, ಯೋಜನೆ, ಲೈಸೆನ್ಸ್, ಅನುಮತಿ, ನಿಯಮ, ಬೈಲಾ ಅಥವಾ ನಮೂನೆ ಮೂಲಕ, ಅದನ್ನು ರದ್ದುಗೊಳಿಸುವವರೆಗೆ ಅಥವಾ ಮಾರ್ಪಾಟು ಮಾಡುವವರೆಗೆ, ಈ ಅಧಿನಿಯಮದ ಮೇರೆಗೆ ಮಾಡಲಾಗಿದೆ, ಹೊರಡಿಸಲಾಗಿದೆ, ವಿಧಿಸಲಾಗಿದೆ ಅಥವಾ ಮಂಜೂರು ಮಾಡಲಾಗಿದೆ ಎಂದು ಭಾವಿಸತಕ್ಕದ್ದು.

(ಡಿ) ಸದರಿ ದಿನಾಂಕದ ನಿಕಟಪೂರ್ವದಲ್ಲಿ ಸದರಿ ಸ್ಥಳೀಯ ಪ್ರದೇಶಕ್ಕೆ ಸಂಬಂಧಪಟ್ಟಂತೆ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ, 1993ರ ಮೇರೆಗೆ ಮಾಡಿದ ಅಥವಾ ಅಧಿಪ್ರಮಾಣಿಸಿದ ಎಲ್ಲ ಬಜೆಟ್ ಅಂದಾಜುಗಳು, ನಿರ್ಧರಣೆಗಳು, ನಿರ್ಧರಣಾ ಪಟ್ಟಿಗಳು, ಮೌಲ್ಯಮಾಪನಗಳು ಅಥವಾ ಅಳತೆಗಳನ್ನು ಈ ಅಧಿನಿಯಮದ ಮೇರೆಗೆ ಮಾಡಲಾಗಿದೆ ಅಥವಾ ಅಧಿಪ್ರಮಾಣೀಕರಿಸಲಾಗಿದೆಯೆಂದು ಭಾವಿಸತಕ್ಕದ್ದು.

(ಇ) ಸದರಿ ದಿನಾಂಕದ ನಿಕಟಪೂರ್ವದಲ್ಲಿ ಗ್ರಾಮಪಂಚಾಯಿತಿಯು ಅಥವಾ ಅದರ ಪರವಾಗಿ ವಹಿಸಿದ ಮತ್ತು ಸದರಿ ದಿನಾಂಕದಂದು ಚಾಲ್ತಿಯಲ್ಲಿದ್ದ ಎಲ್ಲ ಋಣಗಳನ್ನು ಮತ್ತು ಬಾಧ್ಯತೆಗಳನ್ನು ಮತ್ತು ಸದರಿ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಪಂಚಾಯಿತಿಯು ಅಥವಾ ಅದರ ಪರವಾಗಿ ಮಾಡಿಕೊಂಡ ಮತ್ತು ಸದರಿ ದಿನಾಂಕದಂದು ಚಾಲ್ತಿಯಲ್ಲಿದ್ದ ಎಲ್ಲ ಕರಾರುಗಳನ್ನು ಈ ಅಧಿನಿಯಮದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು

ಚಲಾಯಿಸಿ ಪಟ್ಟಣ ಪಂಚಾಯಿತಿಯು ವಹಿಸಿದೆ ಎಂದು ಮತ್ತು ಮಾಡಿಕೊಂಡಿದೆ ಎಂದು ಭಾವಿಸತಕ್ಕದ್ದು.

(ಎಫ್) ಸದರಿ ದಿನಾಂಕದ ನಿಕಟಪೂರ್ವದಲ್ಲಿ ಗ್ರಾಮ ಪಂಚಾಯಿತಿಯಲ್ಲಿ ನಿಯೋಜಿತರಾಗಿದ್ದ ಎಲ್ಲ ಅಧಿಕಾರಿಗಳು ಮತ್ತು ನೌಕರರು, ಈ ಅಧಿನಿಯಮದ ಮೇರೆಗೆ ಪಟ್ಟಣ ಪಂಚಾಯಿತಿಯ ಅಧಿಕಾರಿಗಳು ಮತ್ತು ನೌಕರರು ಆಗತಕ್ಕದ್ದು ಮತ್ತು ಈ ಅಧಿನಿಯಮದ ಉಪಬಂಧಕ್ಕೆ ಅನುಸಾರವಾಗಿ ಬೇರೆ ಏರ್ಪಾಟನ್ನು ಮಾಡುವವರೆಗೆ, ಸದರಿ ದಿನಾಂಕದ ನಿಕಟಪೂರ್ವದಲ್ಲಿ ಅವರು ಯಾವ ಸಂಬಳಕ್ಕೆ ಮತ್ತು ಭತ್ಯೆಗಳಿಗೆ ಹಕ್ಕುಳ್ಳವರಾಗಿದ್ದರೋ, ಆ ಸಂಬಳವನ್ನು ಮತ್ತು ಭತ್ಯೆಗಳನ್ನು ಪಡೆಯತಕ್ಕದ್ದು ಮತ್ತು ಯಾವ ಸೇವಾ ಷರತ್ತುಗಳಿಗೆ ಅವರು ಒಳಪಟ್ಟಿದ್ದರೋ ಆ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು:

ಪರಂತು, ಪಟ್ಟಣ ಪಂಚಾಯಿತಿಯು ಅಧೀನದಲ್ಲಿ ಇರುವ ಸೇವಾ ಅಗತ್ಯತೆಗಳಿಗೆ, ಯಾವ ಅಧಿಕಾರಿಯ ಅಥವಾ ನೌಕರನ ಸೇವೆಯು ಅವಶ್ಯವಿಲ್ಲವೆಂದು ಅಥವಾ ಸೂಕ್ತವಾಗಿಲ್ಲವೆಂದು ಪಟ್ಟಣ ಪಂಚಾಯಿತಿಯು ಅಭಿಪ್ರಾಯಪಡುವುದೋ ಅಂಥ ಯಾರೇ ಅಧಿಕಾರಿಗೆ ಅಥವಾ ನೌಕರನಿಗೆ, ಅವನ ನಿಯೋಜನೆಯ ನಿಬಂಧನೆಗಳ ಪ್ರಕಾರ ನೀಡಬೇಕಾದಂಥ ನೋಟೀಸ್ ನ್ನು, ಆತನಿಗೆ ಕೊಟ್ಟ ತರುವಾಯ, ಸರ್ಕಾರದ ಪೂರ್ವ ಮಂಜೂರಾತಿಗೊಳಪಟ್ಟು, ಆ ಯಾರೇ ಅಧಿಕಾರಿಯ ಅಥವಾ ನೌಕರನ ಸೇವೆಯನ್ನು ಬಿಟ್ಟುಬಿಡಲಾಗಿದೆಯೋ ಆ ಪ್ರತಿಯೊಬ್ಬ ಅಧಿಕಾರಿಯು ಅಥವಾ ನೌಕರನು, ಅವನು ಯಾವ ಗ್ರಾಮ ಪಂಚಾಯಿತಿಯಲ್ಲಿ ನಿಯೋಜಿತನಾಗಿದ್ದನೋ ಆ ಗ್ರಾಮ ಪಂಚಾಯಿತಿಯು ಅಸ್ತಿತ್ವದಲ್ಲಿರುವುದು ನಿಂತುಹೋಗದಿದ್ದರೆ ಅವನನ್ನು ಸೇವೆಯಿಂದ ಅಸಿಂಧುಗೊಳಿಸಿದಾಗ, ಅವನು ಸ್ವೀಕರಿಸಲು ಅಥವಾ ಪಡೆಯಲು ಅವನು ಹೇಗೆ ಹಕ್ಕುಳ್ಳವನಾಗಬಹುದಾಗಿತ್ತೊ ಹಾಗೆ ರಜೆ, ನಿವೃತ್ತಿ ವೇತನ, ಭವಿಷ್ಯನಿಧಿ ಮತ್ತು ಉಪದಾನಕ್ಕೆ ಹಾಗೆ ಹಕ್ಕುಳ್ಳವನಾಗಿರತಕ್ಕದ್ದು.

(ಜಿ) ಸದರಿ ದಿನಾಂಕದಂದು ಗ್ರಾಮ ಪಂಚಾಯಿತಿಯ ಮುಂದೆ ಇತ್ಯರ್ಥದಲ್ಲಿದ್ದ ಎಲ್ಲ ವ್ಯವಹರಣೆಗಳು ಪಟ್ಟಣ ಪಂಚಾಯಿತಿಗೆ ವರ್ಗಾವಣೆಯಾಗಿವೆ ಎಂದು ಭಾವಿಸತಕ್ಕದ್ದು ಮತ್ತು ಅವುಗಳನ್ನು ಪಟ್ಟಣ ಪಂಚಾಯಿತಿಯಲ್ಲಿ ಮುಂದುವರಿಸತಕ್ಕದ್ದು.

(ಹೆಚ್) ಯಾವುದೇ ಪ್ರಾಧಿಕಾರದ ಮುಂದೆ ಇತ್ಯರ್ಥದಲ್ಲಿರುವ ಎಲ್ಲ ಅಪೀಲುಗಳನ್ನು, ಕಾರ್ಯಸಾಧ್ಯಾಗಬಹುದಾದಷ್ಟರ ಮಟ್ಟಿಗೆ ಅವುಗಳನ್ನು ದಾಖಲು ಮಾಡಿದಾಗ, ಸದರಿ ಸ್ಥಳೀಯ ಪ್ರದೇಶವು ಪರಿವರ್ತನಾ ಪ್ರದೇಶದಲ್ಲಿ ಒಳಗೊಂಡಿದ್ದರೆ ಹೇಗೆ ವಿಲೆ ಆಗುತ್ತಿತ್ತೋ ಹಾಗೆ ವಿಲೆ ಮಾಡತಕ್ಕದ್ದು.

(ಐ) ಸದರಿ ದಿನಾಂಕದಂದು ಇತ್ಯರ್ಥದಲ್ಲಿದ್ದ ಗ್ರಾಮ ಪಂಚಾಯಿತಿಯು ಅಥವಾ ಅದರ ಪರವಾಗಿ ಹೂಡಿದ್ದ ಎಲ್ಲಾ ಪ್ರಾಸಿಕ್ಯೂಷನ್‌ಗಳನ್ನು ಮತ್ತು ಗ್ರಾಮ ಪಂಚಾಯಿತಿಯು ಅಥವಾ ಗ್ರಾಮ ಪಂಚಾಯಿತಿಯ ಯಾರೇ ಅಧಿಕಾರಿಯ ವಿರುದ್ಧ ಹೂಡಿದ್ದ ಎಲ್ಲ ದಾವೆಗಳನ್ನು ಅಥವಾ ಇತರ ಕಾನೂನು ವ್ಯವಹರಣೆಗಳನ್ನು, ಅಂಥ ಪ್ರಾಸಿಕ್ಯೂಷನ್‌ಗಳನ್ನು, ದಾವೆಗಳನ್ನು ಅಥವಾ ವ್ಯವಹರಣೆಗಳನ್ನು ಹೂಡಿದಾಗ ಸದರಿ ಸ್ಥಳೀಯ ಪ್ರದೇಶವು ಪರಿವರ್ತನಾ ಪ್ರದೇಶದಲ್ಲಿ ಒಳಗೊಂಡಿದ್ದರೆ ಹೇಗೆ ಪಟ್ಟಣ ಪಂಚಾಯಿತಿಯು ಮುಂದುವರೆಸುತ್ತಿತ್ತೊ ಅಥವಾ ಅವರ ವಿರುದ್ಧ ಮುಂದುವರಿಸಲಾಗುತ್ತಿತ್ತೋ ಹಾಗೆ ಮುಂದುವರಿಯತಕ್ಕದ್ದು.

(ಜೆ) ಪಟ್ಟಣ ಪಂಚಾಯಿತಿಯಲ್ಲಿ ನಿಹಿತವಾಗಿರುವ, ದರಗಳ, ತೆರಿಗೆಗಳ ಮತ್ತು ಫೀಜುಗಳ ಎಲ್ಲ ಬಾಕಿಗಳು, ಈ ಅಧಿನಿಯಮದ ಮೇರೆಗೆ ಅಂಥ ದರಗಳನ್ನು ಮತ್ತು ಫೀಜುಗಳನ್ನು ವಿಧಿಸಲಾಗದಿದ್ದಾಗ್ಯೂ ಈ ಅಧಿನಿಯಮದ ಮೇರೆಗೆ ವಸೂಲಿ ಮಾಡಬಹುದಾದ ತೆರಿಗೆಯ ರೀತಿಯಲ್ಲಿಯೇ ವಸೂಲಿ ಮಾಡುವಂಥವುಗಳು ಆಗಿರತಕ್ಕದ್ದು.

(ಕೆ) ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಪಟ್ಟಣ ಪಂಚಾಯಿತಿಯು ಪುನಾರಚನೆಯಾಗುವವರೆಗೆ, ಈ ಅಧಿನಿಯಮದಲ್ಲಿ ಒಳಗೊಂಡಿರುವುದಕ್ಕೆ ವಿರುದ್ಧವಾಗಿ ಏನೇ ಇದ್ದರೂ ಪರಿವರ್ತನಾ ಪ್ರದೇಶದಲ್ಲಿ ಸೇರಿರುವ ಸ್ಥಳೀಯ ಪ್ರದೇಶದಲ್ಲಿ ಸಾಮಾನ್ಯವಾಗಿ ವಾಸಮಾಡುವಂಥ, ಸರ್ಕಾರವು ನಾಮನಿರ್ದೇಶನ ಮಾಡಬಹುದಾದ ಅಂಥ ಸಂಖ್ಯೆಯ [1][ವ್ಯಕ್ತಿಗಳು][1] ಪಟ್ಟಣ ಪಂಚಾಯಿತಿಯ ಹೆಚ್ಚುವರಿ ಕೌನ್ಸಿಲರ್ ಗಳಾಗಿರತಕ್ಕದ್ದು.

1. 2000ದ ಅಧಿನಿಯಮ 22ರ ಮೂಲಕ 29.11.2000 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

355ಎ. ಪಂಚಾಯಿತಿ ಪ್ರದೇಶದ ಭಾಗವನ್ನು ಪರಿವರ್ತನಾ ಪ್ರದೇಶದೊಳಗೆ ವಿಲೀನಗೊಳಿಸುವುದರ ಪರಿಣಾಮ.- ಪಂಚಾಯಿತಿ ಪ್ರದೇಶದ ಪರಿಮಿತಿಯೊಳಗಿರುವ ಸ್ಥಳೀಯ ಪ್ರದೇಶದ ಯಾವುದೇ ಭಾಗವನ್ನು, ಪರಿವರ್ತನಾ ಪ್ರದೇಶದಲ್ಲಿ ಸೇರಿಸತಕ್ಕದ್ದು ಮತ್ತು ಹಾಗೆ ಸೇರಿಸಿದಾಗ ಈ ಅಧಿನಿಯಮದಲ್ಲಿ ಅಥವಾ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರಲ್ಲಿ ಏನೇ ಒಳಗೊಂಡಿದ್ದರೂ, ಆದರೆ ಈ ಅಧಿನಿಯಮದ 4ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ಅಂಥ ಪ್ರದೇಶವನ್ನು ಪರಿವರ್ತನಾ ಪ್ರದೇಶದಲ್ಲಿ ಸೇರಿಸಿದ ದಿನಾಂಕದಿಂದ ಜಾರಿಗೆ ಬರುವಂತೆ, ಈ ಕೆಳಕಂಡ ಪರಿಣಾಮಗಳು ಉಂಟಾಗತಕ್ಕದ್ದು, ಎಂದರೆ:-

(ಎ) ಸರ್ಕಾರವು ಲಿಖಿತ ಆದೇಶದ ಮೂಲಕ ನಿರ್ದೇಶಿಸಬಹುದಾದಷ್ಟು, ಗ್ರಾಮ ಪಂಚಾಯಿತಿ ನಿಧಿಗಳು ಮತ್ತು ಗ್ರಾಮ ಪಂಚಾಯತಿಯಲ್ಲಿ ನಿಹಿತವಾಗಿರುವ ಇತರ ಸ್ವತ್ತುಗಳು, ಪಟ್ಟಣ ಪಂಚಾಯಿತಿ ನಿಧಿಗೆ ವರ್ಗಾವಣೆಯಾಗತಕ್ಕದ್ದು;

(ಬಿ) ಪರಿವರ್ತನಾ ಪ್ರದೇಶದಲ್ಲಿ ಸೇರಿಸಲಾದ ಪ್ರದೇಶದ ಭಾಗದಲ್ಲಿ ಉದ್ಭವಿಸುವ ಅಥವಾ ಅದಕ್ಕೆ ಸಂಬಂಧಪಟ್ಟ, ಸಿವಿಲ್ ಮತ್ತು ಕ್ರಿಮಿನಲ್ ವ್ಯವಹರಣೆಗಳಿಗೆ, ಕರಾರುಗಳಿಗೆ ಮತ್ತು ಇತರ ವಿಷಯಗಳಿಗೆ ಅಥವಾ ಕಾರ್ಯಗಳಿಗೆ (ತೆರಿಗೆಗಳು, ಫೀಜುಗಳು ಮತ್ತು ಉಪಕರ ಬಾಕಿಗಳೂ ಸೇರಿದಂತೆ) ಸಂಬಂಧಿಸಿದಂತೆ, ಗ್ರಾಮ ಪಂಚಾಯಿತಿಯ ಹಕ್ಕುಗಳು ಮತ್ತು ಹೊಣೆಗಾರಿಕೆಗಳು, ಪಟ್ಟಣ ಪಂಚಾಯಿತಿಯಲ್ಲಿ ನಿಹಿತವಾಗತಕ್ಕದ್ದು ಮತ್ತು ಅಂಥ ಹಕ್ಕುಗಳನ್ನು ಮತ್ತು ಹೊಣೆಗಾರಿಕೆಗಳನ್ನು ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ, ಬೈಲಾಗಳ ಮತ್ತು ಆದೇಶಗಳ ಮೇರೆಗೆ ಪಟ್ಟಣ ಪಂಚಾಯಿತಿಯು ಅಥವಾ ಅದರ ವಿರುದ್ಧವಾಗಿ ಜಾರಿಗೊಳಿಸಬಹುದು;

(ಸಿ) ಸರ್ಕಾರವು, ಆದೇಶದ ಮೂಲಕ ನಿರ್ದೇಶಿಸಬಹುದಾದಂತೆ, ಗ್ರಾಮ ಪಂಚಾಯಿತಿಯ ಅಂಥ ಅಧಿಕಾರಿಗಳನ್ನು ಮತ್ತು ನೌಕರರನ್ನು ಪಟ್ಟಣ ಪಂಚಾಯಿತಿಗೆ ವರ್ಗಾಯಿಸತಕ್ಕದ್ದು.

355ಬಿ. ಪಂಚಾಯಿತಿ ಪ್ರದೇಶವನ್ನು ಪರಿವರ್ತನಾ ಪ್ರದೇಶದೊಳಗೆ ವಿಲೀನಗೊಳಿಸುವುದರ ಪರಿಣಾಮ.-349ನೇ ಪ್ರಕರಣಕ್ಕೊಳಪಟ್ಟು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ 14)ರ ಮೇರೆಗೆ ಯಾವುದೇ ಪಂಚಾಯಿತಿ ಪ್ರದೇಶವನ್ನು, ರಾಜ್ಯಪಾಲರು ಅಧಿಸೂಚನೆಯ ಮೂಲಕ, ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಲಾಗಿರುವ ದಿನಾಂಕದಿಂದ ಜಾರಿಗೆ ಬರುವಂತೆ, ಈ ಅಧಿನಿಯಮದ 349ನೇ ಪ್ರಕರಣದ ಮೇರೆಗೆ ರಚಿಸಿದ ಪರಿವರ್ತನೀಯ ಪ್ರದೇಶವೆಂದು ಘೋಷಿಸಬಹುದು.

(2) ಅಂಥ ಪಂಚಾಯಿತಿ ಪ್ರದೇಶಕ್ಕೆ ಅನ್ವಯವಾಗುವ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ಉಪಬಂಧಗಳು, ಘೋಷಣೆಯಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ (1)ನೇ ಉಪ-ಪ್ರಕರಣದ ಮೇರೆಗೆ ಪರಿವರ್ತನಾ ಪ್ರದೇಶವೆಂದು ಘೋಷಿಸಿದ ಯಾವುದೇ ಸ್ಥಳೀಯ ಪ್ರದೇಶಕ್ಕೆ ಅನ್ವಯವಾಗತಕ್ಕದ್ದಲ್ಲ:

ಪರಂತು, (1)ನೇ ಉಪ-ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಅನ್ವಯವಾಗುವಂತೆ ಜಾರಿಯಲ್ಲಿದ್ದ ಅಂಥ ಪಂಚಾಯಿತಿ ಪ್ರದೇಶಕ್ಕೆ ಸಂಬಂಧಿಸಿದಂತೆ ಸದರಿ ಅಧಿನಿಯಮದ ಮೇರೆಗೆ ಮಾಡಿದ ಅಥವಾ ಹೊರಡಿಸಿದ ಅಥವಾ ವಿಧಿಸಿದ ಯಾವುದೇ ನೇಮಕ, ಅಧಿಸೂಚನೆ, ನೋಟೀಸ್, ತೆರಿಗೆ, ಆದೇಶ, ಯೋಜನೆ, ಲೈಸೆನ್ಸ್, ಅನುಮತಿ, ನಿಯಮ, ಬೈಲಾ ಅಥವಾ ನಮೂನೆಯು ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ಮಾಡಿದ ಅಥವಾ ಹೊರಡಿಸಿದ ಅಥವಾ ವಿಧಿಸಿದ ಯಾವುದೇ ನೇಮಕ, ಅಧಿಸೂಚನೆ, ನೋಟೀಸ್, ತೆರಿಗೆ, ಆದೇಶ, ಯೋಜನೆ, ಲೈಸೆನ್ಸ್, ಅನುಮತಿ, ನಿಯಮ, ಬೈಲಾ ಅಥವಾ ನಮೂನೆಯ ಮೂಲಕ ಅವುಗಳನ್ನು ರದ್ದುಪಡಿಸಿದ ಹೊರತು ಮತ್ತು ರದ್ದುಪಡಿಸುವವರೆಗೆ ಅವುಗಳನ್ನು ಈ ಅಧಿನಿಯಮದ ಮೇರೆಗೆ ಮಾಡಲಾಗಿದೆ ಅಥವಾ ಹೊರಡಿಸಲಾಗಿದೆ ಅಥವಾ ವಿಧಿಸಲಾಗಿದೆ ಎಂದು ಭಾವಿಸತಕ್ಕದ್ದು.

(3) ಉಪ-ಪ್ರಕರಣ (1) ರ ಮೇರೆಗೆ ಯಾವುದೇ ಪ್ರದೇಶವನ್ನು ಪರಿವರ್ತನೀಯ ಪ್ರದೇಶವೆಂದು ಘೋಷಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಈ ಕೆಳಕಂಡ ಪರಿಣಾಮಗಳು ಉಂಟಾಗತಕ್ಕದ್ದು, ಎಂದರೆ:-

(ಎ) ಸದರಿ ಪ್ರದೇಶಕ್ಕೆ ಸಂಬಂಧಿಸಿದಂತೆ ಸದರಿ ಘೋಷಣೆಯ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ಮೇರೆಗೆ ಗ್ರಾಮ

ಪಂಚಾಯಿತಿಯಾಗಿ ಕಾರ್ಯನಿರ್ವಹಿಸುತ್ತಿರುವ ನಿಕಾಯವು,ಈ ಅಧಿನಿಯಮದ ಉಪಬಂಧಗಳ ಮೇರೆಗೆ ಅಂಥ ನಿಕಾಯಕ ಅಧಿಕಾರವ್ಯಾಪ್ತಿಯೊಗಿನ ಪ್ರದೇಶಕ್ಕಾಗಿ, ಪಟ್ಟಣ ಪಂಚಾಯಿತಿಯನ್ನು ಕ್ರಮಬದ್ಧವಾಗಿ ರಚಿಸುವವರೆಗೆ, ಸದರಿ ಪ್ರದೇಶಕ್ಕೆ ಸಂಬಂಧಿಸಿದಂತೆ ಪಟ್ಟಣ ಪಂಚಾಯತಿಗೆ ಈ ಅಧಿನಿಯಮದ ಉಪಬಂಧಗಳ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ಮತ್ತು ಕರ್ತವ್ಯಗಳನ್ನು ನೆರವೇರಿಸಲು ಸಕ್ಷಮ ನಿಕಾಯವಾಗತಕ್ಕದ್ದು:

(ಬಿ) ಸದರಿ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಪಟ್ಟಣ ಪಂಚಾಯಿತಿಯ ಸದಸ್ಯರಾಗಿ ಪದಧಾರಣ ಮಾಡಿರುವ ಕೌನ್ಸಿಲರ್ ಗಳು ಪಟ್ಟಣ ಪಂಚಾಯಿತಿಯ ಕೌನ್ಸಿಲರ್ ಗಳಾಗಿರತಕ್ಕದ್ದು;

(ಸಿ) ಸದರಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಪಟ್ಟಣ ಪಂಚಾಯಿತಿಯ ಅಧ್ಯಕ್ಷರಾಗತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ಅಧ್ಯಕ್ಷರ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು ಮತ್ತು ಸದರಿ ಗ್ರಾಮ ಪಂಚಾಯಿತಿಯ ಉಪಾಧ್ಯಕ್ಷರು ಈ ಅಧಿನಿಯಮದ ಮೇರೆಗೆ ಸದರಿ ಪಟ್ಟಣ ಪಂಚಾಯಿತಿಯ ಉಪಾಧ್ಯಕ್ಷರಾಗತಕ್ಕದ್ದು;

(ಡಿ) ಗ್ರಾಮ ಪಂಚಾಯಿತಿಯ ಅಧಿಕಾರಗಳನ್ನು ಚಲಾಯಿಸಲು ಮತ್ತು ಕರ್ತವ್ಯಗಳನ್ನು ನೆರವೇರಿಸಲು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ 8ನೇ ಪ್ರಕರಣದ ಅಥವಾ 268ನೇ ಪ್ರಕರಣದ ಉಪಬಂಧಗಳ ಮೇರೆಗೆ ಒಬ್ಬ ಆಡಳಿತಗಾರನನ್ನಾಗಲಿ ಅಥವಾ ಅಧಿಕಾರಿಯನ್ನಾಗಲಿ ನೇಮಕ ಮಾಡಿರುವಲ್ಲಿ ಆಗ ಅಂಥ ಆಡಳಿತಗಾರನನ್ನು ಅಥವಾ ಅಧಿಕಾರಿಯನ್ನು 315ನೇ ಪ್ರಕರಣದ ಮೇರೆಗೆ ನೇಮಕಗೊಂಡ ಆಡಳಿತಗಾರನೆಂದು ಭಾವಿಸತಕ್ಕದ್ದು;

(ಇ) ಗ್ರಾಮ ಪಂಚಾಯಿತಿಯ ನಿಧಿಯಲ್ಲಿ ವೆಚ್ಚ ಮಾಡದೆ ಉಳಿದಿರುವ ಶಿಲ್ಕು ಮತ್ತು ಸದರಿ ಗ್ರಾಮ ಪಂಚಾಯಿತಿಗೆ ಸೇರಿದ ಸ್ವತ್ತು (ದರಗಳ, ತೆರಿಗೆಗಳ ಮತ್ತು ಶುಲ್ಕಗಳ ಬಾಕಿಯೂ ಸೇರಿದಂತೆ) ಮತ್ತು ಅಂಥ ಘೋಷಣೆಗೆ ಮುಂಚೆ ಗ್ರಾಮ ಪಂಚಾಯಿತಿಯಲ್ಲಿ ನಿಹಿತವಾಗಿದ್ದ ಎಲ್ಲ ಹಕ್ಕುಗಳು ಮತ್ತು ಅಧಿಕಾರಗಳು, ಅವುಗಳಿಗೆ ಸಂಬಂಧಿಸಿದ ಎಲ್ಲ ಋಣಭಾರಗಳು ಮತ್ತು ಹೊಣೆಗಾರಿಕೆಗಳಿಗೆ ಒಳಪಟ್ಟು ಪಟ್ಟಣ ಪಂಚಾಯಿತಿಯಲ್ಲಿ ನಿಹಿತವಾಗತಕ್ಕದ್ದು;

(ಎಫ್) ಅಂಥ ಗ್ರಾಮ ಪಂಚಾಯಿತಿಗೆ ಸಂಬಂಧಿಸಿದಂತೆ ಇತರ ಯಾವುದೇ ಕಾನೂನಿನ ಮೇರೆಗೆ ಮಾಡಿದ ಅಥವಾ ಹೊರಡಿಸಿದ ಅಥವಾ ವಿಧಿಸಿದ, ಯಾವುದೇ ನೇಮಕ, ಅಧಿಸೂಚನೆ, ನೋಟೀಸ್, ತೆರಿಗೆ, ಆದೇಶ, ಯೋಜನೆ, ಲೈಸೆನ್ಸ್, ಅನುಮತಿ, ನಿಯಮ, ಬೈಲಾ ಅಥವಾ ನಮೂನೆಯು ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ಮಾಡಿದ ಅಥವಾ ಹೊರಡಿಸಿದ ಅಥವಾ ವಿಧಿಸಿದ ಯಾವುದೇ ನೇಮಕ, ಅಧಿಸೂಚನೆ, ನೋಟೀಸ್, ತೆರಿಗೆ, ಆದೇಶ, ಯೋಜನೆ, ಲೈಸೆನ್ಸ್, ಅನುಮತಿ, ನಿಯಮ, ಬೈಲಾ ಅಥವಾ ನಮೂನೆಯ ಮೂಲಕ ಅವುಗಳನ್ನು ರದ್ದುಪಡಿಸಿದ ಹೊರತು ಅಥವಾ ರದ್ದುಪಡಿಸುವವರೆಗೆ ಅವುಗಳನ್ನು, ಈ ಅಧಿನಿಯಮದ ಮೇರೆಗೆ ಮಾಡಲಾಗಿದೆ ಅಥವಾ ಹೊರಡಿಸಲಾಗಿದೆ ಅಥವಾ ವಿಧಿಸಲಾಗಿದೆ ಎಂದು ಭಾವಿಸತಕ್ಕದ್ದು;

(ಜಿ) ಸದರಿ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ಮೇರೆಗೆ ಮಾಡಿದ ಅಥವಾ ಅಧಿಪ್ರಮಾಣೀಕರಿಸಿದ ಎಲ್ಲ ಬಜೆಟ್ ಅಂದಾಜುಗಳು, ನಿರ್ಧರಣಾ ಪಟ್ಟಿಗಳು, ಮೌಲ್ಯಮಾಪನ ಅಥವಾ ಅಳತೆಗಳನ್ನು ಈ ಅಧಿನಿಯಮದ ಮೇರೆಗೆ ಮಾಡಲಾಗಿದೆ ಅಥವಾ ಅಧಿಪ್ರಮಾಣೀಕರಿಸಲಾಗಿದೆ ಎಂದು ಭಾವಿಸತಕ್ಕದ್ದು;

(ಹೆಚ್) ಸದರಿ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಗ್ರಾಮಪಂಚಾಯಿತಿಯು ಅಥವಾ ಅದರ ಪರವಾಗಿ ವಹಿಸಿದ ಮತ್ತು ಸದರಿ ದಿನಾಂಕದಂದು ಚಾಲ್ತಿಯಲ್ಲಿದ್ದ ಎಲ್ಲ ಋಣಗಳನ್ನು ಮತ್ತು ಬಾಧ್ಯತೆಗಳನ್ನು ಮತ್ತು ಸದರಿ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಗ್ರಾಮಪಂಚಾಯಿತಿಯು ಅಥವಾ ಅದರ ಪರವಾಗಿ ಮಾಡಿಕೊಂಡ ಮತ್ತು ಸದರಿ ದಿನಾಂಕದಂದು ಚಾಲ್ತಿಯಲ್ಲಿದ್ದ ಎಲ್ಲಾ ಕರಾರುಗಳನ್ನು, ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಪಟ್ಟಣ ಪಂಚಾಯಿತಿಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ

ಪಟ್ಟಣ ಪಂಚಾಯಿತಿಯು ವಹಿಸಿದೆ ಎಂದು ಮತ್ತು ಮಾಡಿಕೊಂಡಿದೆ ಎಂದು ಭಾವಿಸತಕ್ಕದ್ದು;

(ಐ) ಸದರಿ ಘೋಷಣೆಗೆ ಮುಂಚೆ ಗ್ರಾಮ ಪಂಚಾಯಿತಿಯ ಮುಂದೆ ಇತ್ಯರ್ಥದಲ್ಲಿದ್ದ ಎಲ್ಲಾ ವ್ಯವಹರಣೆಗಳನ್ನು ಪಟ್ಟಣ ಪಂಚಾಯಿತಿಯು ಮುಂದುವರಿಸತಕ್ಕದ್ದು;

(ಜೆ) ಯಾವುದೇ ಪ್ರಾಧಿಕಾರದ ಮುಂದೆ ಇತ್ಯರ್ಥದಲ್ಲಿದ್ದ ಎಲ್ಲಾ ಅಪೀಲುಗಳನ್ನು ಕಾರ್ಯಸಾಧ್ಯವಾದಷ್ಟರಮಟ್ಟಿಗೆ, ಅವುಗಳನ್ನು ದಾಖಲು ಮಾಡಿದಾಗ, ಸದರಿ ಪ್ರದೇಶವು ಪಟ್ಟಣ ಪಂಚಾಯಿತಿಯಲ್ಲಿ ಒಳಗೊಂಡಿದ್ದಿದ್ದರೆ ಹೇಗೆ ವಿಲೆ ಮಾಡಲಾಗುತ್ತಿತ್ತೊ ಹಾಗೆ ವಿಲೆ ಮಾಡತಕ್ಕದ್ದು;

(ಕೆ) ಸದರಿ ದಿನಾಂಕದಂದು ಇತ್ಯರ್ಥದಲ್ಲಿದ್ದ, ಗ್ರಾಮ ಪಂಚಾಯಿತಿಯು ಅಥವಾ ಅದರ ಪರವಾಗಿ ಹೂಡಿದ್ದ ಎಲ್ಲಾ ಪ್ರಾಸಿಕ್ಯೂಷನ್‌ಗಳನ್ನು ಮತ್ತು ಗ್ರಾಮ ಪಂಚಾಯಿತಿ ಅಥವಾ ಅದರ ವಿರುದ್ಧ ಅಥವಾ ಗ್ರಾಮ ಪಂಚಾಯಿತಿಯ ಯಾರೇ ಅಧಿಕಾರಿಯು ಅಥವಾ ಅವರ ವಿರುದ್ಧ ಹೂಡಿದ್ದ ಎಲ್ಲಾ ದಾವೆಗಳನ್ನು ಅಥವಾ ಇತರ ಕಾನೂನು ವ್ಯವಹರಣೆಗಳನ್ನು, ಅಂಥ ಪ್ರಾಸಿಕ್ಯೂಷನ್‌ಗಳನ್ನು, ದಾವೆಗಳನ್ನು ಅಥವಾ ವ್ಯವಹರಣೆಗಳನ್ನು ಹೂಡಿದಾಗ ಅಂಥ ಪ್ರದೇಶವು ಪರಿವರ್ತನಾ ಪ್ರದೇಶದಲ್ಲಿ ಒಳಗೊಂಡಿದ್ದರೆ ಹೇಗೆ ಪಟ್ಟಣ ಪಂಚಾಯಿತಿಯು ಮುಂದುವರೆಸತಕ್ಕದ್ದೋ ಅಥವಾ ಅದರ ವಿರುದ್ಧ ಮುಂದುವರಿಸತಕ್ಕದ್ದೋ ಹಾಗೆ ಮುಂದುವರಿಸತಕ್ಕದ್ದು;

(ಎಲ್) ಸದರಿ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಗ್ರಾಮ ಪಂಚಾಯಿತಿಯಲ್ಲಿ ನಿಯೋಜಿತರಾಗಿದ್ದ ಎಲ್ಲ ಅಧಿಕಾರಿಗಳು ಮತ್ತು ನೌಕರರು ಈ ಅಧಿನಿಯಮದ ಮೇರೆಗೆ ಪಟ್ಟಣ ಪಂಚಾಯಿತಿಯ ಅಧಿಕಾರಿಗಳು ಮತ್ತು ನೌಕರರು ಆಗತಕ್ಕದ್ದು ಮತ್ತು ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಬೇರೆ ಏರ್ಪಾಟು ಮಾಡುವವರೆಗೆ, ಅಂಥ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಅವರು ಯಾವ ಸಂಬಳಗಳನ್ನು ಮತ್ತು ಭತ್ಯೆಗಳನ್ನು ಪಡೆಯುತ್ತಿದ್ದರೋ, ಆ ಸಂಬಳವನ್ನು ಮತ್ತು ಭತ್ಯೆಗಳನ್ನು ಪಡೆಯತಕ್ಕದ್ದು ಮತ್ತು ಯಾವ ಸೇವಾ ಷರತ್ತುಗಳಿಗೆ ಅವರು ಒಳಪಟ್ಟಿದ್ದರೋ ಆ ಸೇವಾ ಷರತ್ತುಗಳಿಗೆ ಒಳಪಡತಕ್ಕದ್ದು:

ಪರಂತು, ಪಟ್ಟಣ ಪಂಚಾಯಿತಿಯ ಅಧೀನದಲ್ಲಿ ಇರುವ ಸೇವಾ ಅಗತ್ಯತೆಗಳಿಗೆ, ಯಾವ ಅಧಿಕಾರಿಯ ಅಥವಾ ನೌಕರನ ಸೇವೆಯು ಅವಶ್ಯವಿಲ್ಲವೆಂದು ಅಥವಾ ಸೂಕ್ತವಾಗಿಲ್ಲವೆಂದು ಪಟ್ಟಣ ಪಂಚಾಯಿತಿಯು ಅಭಿಪ್ರಾಯಪಡುವುದೋ ಆ ಯಾರೇ ಅಧಿಕಾರಿಗೆ ಅಥವಾ ನೌಕರನಿಗೆ, ಅವನ ನಿಯೋಜನೆಯ ನಿಬಂಧನೆಗಳ ಪ್ರಕಾರ ನೀಡಬೇಕಾದಂಥ ನೋಟೀಸ್ ನ್ನು ಅವನಿಗೆ ಕೊಟ್ಟ ತರುವಾಯ, ಸರ್ಕಾರದ ಪೂರ್ವ ಮಂಜೂರಾತಿಗೊಳಪಟ್ಟು, ಆ ಯಾರೇ ಅಧಿಕಾರಿಯ ಅಥವಾ ನೌಕರನ ಸೇವೆಯನ್ನು ಮುಂದುವರಿಸದಿರುವುದು ಪಟ್ಟಣ ಪಂಚಾಯಿತಿಗೆ ಸಕ್ಷಮವಾದುದಾಗಿರತಕ್ಕದ್ದು ಮತ್ತು ಯಾವ ಅಧಿಕಾರಿಯ ಅಥವಾ ನೌಕರನ ಸೇವೆಯನ್ನು ಬೇಡವೆಂದು ಬಿಟ್ಟುಬಿಡಲಾಗಿದೆಯೋ ಆ ಪ್ರತಿಯೊಬ್ಬ ಅಧಿಕಾರಿಯು ಅಥವಾ ನೌಕರನು, ಅವನು ಯಾವ ಪಟ್ಟಣ ಪಂಚಾಯಿತಿಯಲ್ಲಿ ನಿಯೋಜಿತನಾಗಿದ್ದನೋ ಆ ಪಟ್ಟಣ ಪಂಚಾಯಿತಿಯು ಅಸ್ತಿತ್ವದಲ್ಲಿರುವುದು ನಿಂತುಹೋಗಿದ್ದರೆ ಅಸಮರ್ಥತೆಯ ಕಾರಣದಿಂದ ಅವನನ್ನು ಸೇವೆಯಿಂದ ತೆಗೆದುಹಾಕಿದಾಗ, ತೆಗೆದುಕೊಳ್ಳಲು ಅಥವಾ ಪಡೆಯಲು ಹೇಗೆ ಹಕ್ಕುಳ್ಳವನಾಗಬಹುದಾಗಿತ್ತೋ ಹಾಗೆ ರಜೆ, ನಿವೃತ್ತಿ ವೇತನ, ಭವಿಷ್ಯನಿಧಿ ಮತ್ತು ಉಪದಾನಕ್ಕೆ ಹಕ್ಕುಳ್ಳವನಾಗಿರತಕ್ಕದ್ದು.

(4) ಉಪ-ಪ್ರಕರಣ (1)ರಲ್ಲಿ ಉಲ್ಲೇಖಿಸಿದ ಘೋಷಣೆಯ ದಿನಾಂಕದಿಂದ ಆರು ತಿಂಗಳುಗಳ ಅವಧಿಯೊಳಗೆ ಈ ಅಧಿನಿಯಮದ ಮೇರೆಗೆ ಪರಿವರ್ತನಾ ಪ್ರದೇಶಕ್ಕಾಗಿ ಪಟ್ಟಣ ಪಂಚಾಯಿತಿಯನ್ನು ಕ್ರಮಬದ್ಧವಾಗಿ ರಚಿಸತಕ್ಕದ್ದು ಮತ್ತು ಹಾಗೆ ರಚಿತವಾದ ಪಟ್ಟಣ ಪಂಚಾಯಿತಿಯ ಮೊದಲ ಸಭೆಯ ದಿನಾಂಕದಿಂದ ಪಟ್ಟಣ ಪಂಚಾಯಿತಿಯ ಅಧಿಕಾರಗಳನ್ನು ಚಲಾಯಿಸುತ್ತಿರುವ ಮತ್ತು ಕರ್ತವ್ಯಗಳನ್ನು ನೆರವೇರಿಸುತ್ತಿರುವ ನಿಕಾಯವು ವಿಸರ್ಜನೆಗೊಳ್ಳತಕ್ಕದ್ದು.

(5) ಉಪ-ಪ್ರಕರಣ (1)ರ ಮೇರೆಗೆ ಪರಿವರ್ತನಾ ಪ್ರದೇಶ ಎಂದು ಘೋಷಿಸಲಾದ ಗ್ರಾಮ ಪಂಚಾಯಿತಿಯ ಸ್ವತ್ತುಗಳು, ಹಕ್ಕುಗಳು ಮತ್ತು ಹೊಣೆಗಾರಿಕೆಗಳು, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಘೋಷಣೆಯ ದಿನಾಂಕದಿಂದ ಜಾರಿಗೆ ಬರುವಂತೆ ಸದರಿ ಪರಿವರ್ತನಾ ಪ್ರದೇಶದ ಗ್ರಾಮ ಪಂಚಾಯಿತಿಯಲ್ಲಿ ನಿಹಿತವಾಗತಕ್ಕದ್ದು.

355ಸಿ. ಪರಿವರ್ತನೀಯ ಪ್ರದೇಶದ ಭಾಗವನ್ನು ಚಿಕ್ಕ ನಗರ ಪ್ರದೇಶದೊಳಗೆ ವಿಲೀನಗೊಳಿಸುವುದರ ಪರಿಣಾಮ.- ಪರಿವರ್ತನಾ ಪ್ರದೇಶದಲ್ಲಿ ಒಳಗೊಂಡಿರುವ ಸ್ಥಳೀಯ ಪ್ರದೇಶದ ಯಾವುದೇ ಭಾಗವನ್ನು ಚಿಕ್ಕ ನಗರ ಪ್ರದೇಶದಲ್ಲಿ ಸೇರಿಸತಕ್ಕದ್ದು ಮತ್ತು ಹಾಗೆ ಸೇರಿಸಿದ ಅಂಥ ಪ್ರದೇಶವನ್ನು ಚಿಕ್ಕ ನಗರ ಪ್ರದೇಶದಲ್ಲಿ ಸೇರಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಈ ಕೆಳಕಂಡ ಪರಿಣಾಮಗಳು ಉಂಟಾಗತಕ್ಕದ್ದು, ಎಂದರೆ:-

(ಎ) ಸರ್ಕಾರವು ಲಿಖಿತ ಆದೇಶದ ಮೂಲಕ ನಿರ್ದೇಶಿಸಬಹುದಾದಷ್ಟು, ಪಟ್ಟಣ ಪಂಚಾಯಿತಿಯಲ್ಲಿ ನಿಹಿತವಾಗಿರುವ ನಿಧಿಗಳು ಮತ್ತು ಇತರ ಸ್ವತ್ತುಗಳು ಮುನ್ಸಿಪಲ್ ನಿಧಿಗೆ ವರ್ಗಾವಣೆಗೊಳ್ಳತಕ್ಕದ್ದು;

(ಬಿ) ಚಿಕ್ಕ ನಗರ ಪ್ರದೇಶದಲ್ಲಿ ಸೇರಿಸಿದ ಪ್ರದೇಶದ ಭಾಗದಲ್ಲಿ ಉದ್ಭವಿಸುವ ಅಥವಾ ಅದಕ್ಕೆ ಸಂಬಂಧಪಟ್ಟ ಸಿವಿಲ್ ಮತ್ತು ಕ್ರಿಮಿನಲ್ ವ್ಯವಹರಣೆಗಳಿಗೆ, ಕರಾರುಗಳಿಗೆ ಮತ್ತು ಇತರ ವಿಷಯಗಳಿಗೆ ಅಥವಾ ಕಾರ್ಯಗಳಿಗೆ (ತೆರಿಗೆಗಳ, ಫೀಜುಗಳ ಮತ್ತು ಉಪಕರಗಳ ಬಾಕಿಗಳೂ ಸೇರಿದಂತೆ) ಸಂಬಂಧಿಸಿದಂತೆ ಪಟ್ಟಣ ಪಂಚಾಯಿತಿಯ ಹಕ್ಕುಗಳು ಮತ್ತು ಹೊಣೆಗಾರಿಕೆಗಳು ಮುನ್ಸಿಪಲ್ ಕೌನ್ಸಿಲ್‌ನಲ್ಲಿ ನಿಹಿತವಾಗತಕ್ಕದ್ದು ಮತ್ತು ಅಂಥ ಹಕ್ಕುಗಳನ್ನು ಮತ್ತು ಹೊಣೆಗಾರಿಕೆಗಳನ್ನು ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಅಥವಾ ಬೈಲಾಗಳ ಮತ್ತು ಆದೇಶಗಳ ಮೇರೆಗೆ ಮುನ್ಸಿಪಲ್ ಕೌನ್ಸಿಲ್ ಜಾರಿಗೊಳಿಸಬಹುದು ಅಥವಾ ಅದರ ವಿರುದ್ಧ ಜಾರಿಗೊಳಿಸಬಹುದು;

(ಸಿ) ಸರ್ಕಾರವು ಆದೇಶದ ಮೂಲಕ ನಿರ್ದೇಶಿಸಬಹುದಾದಂಥ ಪಟ್ಟಣ ಪಂಚಾಯಿತಿಯ ಅಧಿಕಾರಿಗಳನ್ನು ಮತ್ತು ನೌಕರರನ್ನು ಮುನ್ಸಿಪಲ್ ಕೌನ್ಸಿಲ್‌ಗೆ ವರ್ಗಾಯಿಸತಕ್ಕದ್ದು ಮತ್ತು ಹಾಗೆ ವರ್ಗಾಯಿಸಿದ ಅಧಿಕಾರಿಗಳು ಮತ್ತು ನೌಕರರು ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಬೇರೆ ಏರ್ಪಾಟು ಮಾಡುವವರೆಗೆ, ಅಂಥ ವರ್ಗಾವಣೆಗೆ ನಿಕಟಪೂರ್ವದಲ್ಲಿ ಅವರು ಹಕ್ಕುಳ್ಳವರಾಗಿದ್ದ ಮತ್ತು ಸಂಬಳವನ್ನು ಮತ್ತು ಭತ್ಯೆಗಳನ್ನು ಪಡೆಯತಕ್ಕದ್ದು ಮತ್ತು ಯಾವ ಸೇವಾ ಷರತ್ತುಗಳಿಗೆ ಅವರು ಒಳಪಟ್ಟಿದ್ದರೋ ಆ ಸೇವಾ ಷರತ್ತುಗಳಿಗೊಳಪಡತಕ್ಕದ್ದು.

355ಡಿ. ಪರಿವರ್ತನಾ ಪ್ರದೇಶವನ್ನು ಚಿಕ್ಕ ನಗರ ಪ್ರದೇಶದೊಳಗೆ ವಿಲೀನಗೊಳಿಸುವುದರ ಪರಿಣಾಮ.- ಪರಿವರ್ತನಾ ಪ್ರದೇಶದಲ್ಲಿ ಒಳಗೊಂಡಿರುವ ಯಾವುದೇ ಸ್ಥಳೀಯ ಪ್ರದೇಶವನ್ನು 4ನೇ ಪ್ರಕರಣದ (1)ನೇ ಉಪಕ್ರಕರಣದ ಬಲದಿಂದಾಗಿ ಚಿಕ್ಕ ನಗರ ಪ್ರದೇಶಕ್ಕೆ ಸೇರಿಸತಕ್ಕದ್ದು ಮತ್ತು ಹಾಗೆ ಸೇರಿಸಿದಾಗ ಈ ಅಧಿನಿಯಮದಲ್ಲಿ ಅಥವಾ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, 4ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು ಹಾಗೆ ಸೇರಿಸಿದ ಅಂಥ ಪ್ರದೇಶವನ್ನು ಚಿಕ್ಕ ನಗರ ಪ್ರದೇಶದಲ್ಲಿ ಸೇರಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಈ ಕೆಳಕಂಡ ಪರಿಣಾಮಗಳು ಉಂಟಾಗತಕ್ಕದ್ದು, ಎಂದರೆ:-

(ಎ) ಅಂಥ ಸ್ಥಳೀಯ ಪ್ರದೇಶದ ಪಟ್ಟಣ ಪಂಚಾಯಿತಿಯು ಅಸ್ತಿತ್ವದಲ್ಲಿರುವುದು ನಿಂತುಹೋಗತಕ್ಕದ್ದು;

(ಬಿ) ಪಟ್ಟಣ ಪಂಚಾಯಿತಿ ನಿಧಿಯಲ್ಲಿ ವೆಚ್ಚ ಮಾಡದೆ ಉಳಿದಿರುವ ಶಿಲ್ಕು ಪಟ್ಟಣ ಪಂಚಾಯಿತಿಗೆ ಸೇರಿದ ಸ್ವತ್ತು (ದರಗಳ, ತೆರಿಗೆಗಳ ಮತ್ತು ಫೀಜುಗಳ ಬಾಕಿಗಳೂ ಸೇರಿದಂತೆ) ಮತ್ತು ಅಂಥ ಅಧಿಸೂಚನೆಗೆ ಮುಂಚೆ ಪಟ್ಟಣ ಪಂಚಾಯಿತಿಯಲ್ಲಿ ನಿಹಿತವಾಗಿದ್ದ ಎಲ್ಲ ಹಕ್ಕುಗಳು ಮತ್ತು ಅಧಿಕಾರಗಳು, ಅವುಗಳಿಗೆ ಸಂಬಂಧಿಸಿದ ಎಲ್ಲ ಋಣಭಾರಗಳಿಗೆ ಮತ್ತು ಹೊಣೆಗಾರಿಕೆಗಳಿಗೊಳಪಟ್ಟು ಅಂಥ ಚಿಕ್ಕ ನಗರ ಪ್ರದೇಶದ ಮುನ್ಸಿಪಲ್ ಕೌನ್ಸಿಲ್‌ನಲ್ಲಿ (ಇದರಲ್ಲಿ ಇನ್ನು ಮುಂದೆ ಮುನ್ಸಿಪಲ್ ಕೌನ್ಸಿಲ್ ಎಂದು ಉಲ್ಲೇಖಿಸಲಾಗಿದೆ) ನಿಹಿತವಾಗತಕ್ಕದ್ದು;

(ಸಿ) ಸದರಿ ಪಟ್ಟಣ ಪಂಚಾಯಿತಿಗೆ ಸಂಬಂಧಿಸಿದಂತೆ ಸದರಿ ದಿನಾಂಕದ ನಿಕಟಪೂರ್ವದಲ್ಲಿ ಯಾವುದೇ ಕಾನೂನಿನ ಅಥವಾ ನಿಯಮದ ಮೇರೆಗೆ ಮಾಡಿದ, ಹೊರಡಿಸಿದ, ವಿಧಿಸಿದ ಅಥವಾ ಮಂಜೂರು ಮಾಡಿದ ಯಾವುದೇ ನೇಮಕ, ಅಧಿಸೂಚನೆ, ನೋಟೀಸ್, ತೆರಿಗೆ, ಆದೇಶ, ಯೋಜನೆ, ಲೈಸೆನ್ಸ್, ಅನುಮತಿ, ನಿಯಮ, ಬೈಲಾ ಅಥವಾ

ನಮೂನೆಯು ಜಾರಿಯಲ್ಲಿರುವುದು ಮುಂದುವರೆಯತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ಮಾಡಿದ, ಹೊರಡಿಸಿದ, ವಿಧಿಸಿದ ಅಥವಾ ಮಂಜೂರು ಮಾಡಿದ ಯಾವುದೇ ನೇಮಕ, ಅಧಿಸೂಚನೆ, ನೋಟೀಸ್, ತೆರಿಗೆ, ಆದೇಶ, ಯೋಜನೆ, ಲೈಸೆನ್ಸ್, ಅನುಮತಿ, ನಿಯಮ, ಬೈಲಾದ ಅಥವಾ ನಮೂನೆಯ ಮೂಲಕ ಅದನ್ನು ರದ್ದುಗೊಳಿಸುವವರೆಗೆ ಅಥವಾ ಮಾರ್ಪಾಟು ಮಾಡುವವರೆಗೆ, ಈ ಅಧಿನಿಯಮದ ಮೇರೆಗೆ ಮಾಡಲಾಗಿದೆ, ಹೊರಡಿಸಲಾಗಿದೆ, ವಿಧಿಸಲಾಗಿದೆ ಅಥವಾ ಮಂಜೂರು ಮಾಡಲಾಗಿದೆ ಎಂದು ಭಾವಿಸತಕ್ಕದ್ದು;

(ಡಿ) ಸದರಿ ಪಟ್ಟಣ ಪಂಚಾಯಿತಿಗೆ ಸಂಬಂಧಿಸಿದಂತೆ, ಸದರಿ ದಿನಾಂಕದ ನಿಕಟಪೂರ್ವದಲ್ಲಿ ಯಾವುದೇ ಕಾನೂನಿನ ಅಥವಾ ನಿಯಮದ ಮೇರೆಗೆ ಮಾಡಿದ ಅಥವಾ ಅಧಿಪ್ರಮಾಣೀಕರಿಸಿದ ಎಲ್ಲ ಬಜೆಟ್ ಅಂದಾಜುಗಳನ್ನು, ನಿರ್ಧರಣೆಗಳನ್ನು, ನಿರ್ಧರಣಾ ಪಟ್ಟಿಗಳನ್ನು, ಮೌಲ್ಯಮಾಪನಗಳನ್ನು ಅಥವಾ ಅಳತೆಗಳನ್ನು ಈ ಅಧಿನಿಯಮದ ಮೇರೆಗೆ ಮಾಡಲಾಗಿದೆ ಅಥವಾ ಅಧಿಪ್ರಮಾಣೀಕರಿಸಲಾಗಿದೆಯೆಂದು ಭಾವಿಸತಕ್ಕದ್ದು;

(ಇ) ಸದರಿ ದಿನಾಂಕದ ನಿಕಟಪೂರ್ವದಲ್ಲಿ ಸ್ಥಳೀಯ ಪ್ರಾಧಿಕಾರವು ಅಥವಾ ಅದರ ಪರವಾಗಿ ವಹಿಸಿದ ಮತ್ತು ಸದರಿ ದಿನಾಂಕದಂದು ಚಾಲ್ತಿಯಲ್ಲಿದ್ದ ಎಲ್ಲ ಋಣಗಳನ್ನು ಮತ್ತು ಬಾಧ್ಯತೆಗಳನ್ನು ಮತ್ತು ಸದರಿ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಪಟ್ಟಣ ಪಂಚಾಯಿತಿಯು ಅಥವಾ ಅದರ ಪರವಾಗಿ ಮಾಡಿಕೊಂಡ ಮತ್ತು ಸದರಿ ದಿನಾಂಕದಂದು ಚಾಲ್ತಿಯಲ್ಲಿದ್ದ ಎಲ್ಲ ಕರಾರುಗಳನ್ನು, ಈ ಅಧಿನಿಯಮದ ಮೂಲಕ ಮುನ್ಸಿಪಲ್ ಕೌನ್ಸಿಲ್‌ಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮುನ್ಸಿಪಲ್ ಕೌನ್ಸಿಲ್ ವಹಿಸಿಕೊಂಡಿದೆ ಎಂದು ಮತ್ತು ಮಾಡಿಕೊಂಡಿದೆ ಎಂದು ಭಾವಿಸತಕ್ಕದ್ದು;

(ಎಫ್) ಸದರಿ ದಿನಾಂಕದ ನಿಕಟಪೂರ್ವದಲ್ಲಿ ಪಟ್ಟಣ ಪಂಚಾಯಿತಿಯಲ್ಲಿ ನಿಯೋಜಿತರಾಗಿದ್ದ ಎಲ್ಲ ಅಧಿಕಾರಿಗಳು ಮತ್ತು ನೌಕರರು, ಈ ಅಧಿನಿಯಮದ ಮೇರೆಗೆ ಮುನ್ಸಿಪಲ್ ಕೌನ್ಸಿಲ್‌ನ ಅಧಿಕಾರಿಗಳು ಮತ್ತು ನೌಕರರು ಆಗತಕ್ಕದ್ದು ಮತ್ತು ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಬೇರೆ ಏರ್ಪಾಟನ್ನು ಮಾಡುವವರೆಗೆ ಸದರಿ ದಿನಾಂಕದ ನಿಕಟಪೂರ್ವದಲ್ಲಿ ಅವರು ಯಾವ ಸಂಬಳಕ್ಕೆ ಮತ್ತು ಭತ್ಯೆಗಳಿಗೆ ಹಕ್ಕುಳ್ಳವರಾಗಿದ್ದರೋ ಆ ಸಂಬಳವನ್ನು ಮತ್ತು ಭತ್ಯೆಗಳನ್ನು ಪಡೆಯತಕ್ಕದ್ದು ಮತ್ತು ಯಾವ ಸೇವಾ ಷರತ್ತುಗಳಿಗೆ ಅವರು ಒಳಪಟ್ಟಿದ್ದರೋ ಆ ಸೇವಾ ಷರತ್ತುಗಳಿಗೊಳಪಟ್ಟಿರತಕ್ಕದ್ದು:

ಪರಂತು, ಮುನ್ಸಿಪಲ್ ಕೌನ್ಸಿಲ್‌ನ ಅಧೀನದಲ್ಲಿ ಇರುವ ಸೇವಾ ಅಗತ್ಯತೆಗಳಿಗೆ, ಯಾವ ಅಧಿಕಾರಿಯ ಅಥವಾ ನೌಕರನ ಸೇವೆಯು ಅವಶ್ಯವಿಲ್ಲವೆಂದು ಅಥವಾ ಸೂಕ್ತವಾಗಿಲ್ಲವೆಂದು ಮುನ್ಸಿಪಲ್ ಕೌನ್ಸಿಲ್ ಅಭಿಪ್ರಾಯಪಡುವುದೋ ಆ ಯಾರೇ ಅಧಿಕಾರಿಗೆ ಅಥವಾ ನೌಕರನಿಗೆ ಅವನ ನಿಯೋಜನೆಯ ನಿಬಂಧನೆಗಳ ಪ್ರಕಾರ ನೀಡಬೇಕಾದ ಅಂಥ ನೋಟೀಸ್ ನ್ನು ಆತನಿಗೆ ಕೊಟ್ಟ ತರುವಾಯ, ಸರ್ಕಾರದ ಪೂರ್ವ ಮಂಜೂರಾತಿಗೊಳಪಟ್ಟು ಆ ಯಾರೇ ಅಧಿಕಾರಿಯ ಅಥವಾ ನೌಕರನ ಸೇವೆಗಳನ್ನು ಮುಂದುವರಿಸದಿರುವುದು ಮುನ್ಸಿಪಲ್ ಕೌನ್ಸಿಲ್‌ಗೆ ಸಕ್ಷಮವಾದುದಾಗಿರತಕ್ಕದ್ದು ಮತ್ತು ಯಾವ ಅಧಿಕಾರಿಯ ಅಥವಾ ನೌಕರನ ಸೇವೆಯನ್ನು ಬಿಟ್ಟುಬಿಡಲಾಗಿದೆಯೋ, ಆ ಪ್ರತಿಯೊಬ್ಬ ಅಧಿಕಾರಿಯು ಅಥವಾ ನೌಕರನು, ಅವನು ಯಾವ ಪಟ್ಟಣ ಪಂಚಾಯಿತಿಯಲ್ಲಿ ನಿಯೋಜಿತನಾಗಿದ್ದನೋ, ಆ ಪಟ್ಟಣ ಪಂಚಾಯಿತಿಯು ಅಸ್ತಿತ್ವದಲ್ಲಿರುವುದು ನಿಂತುಹೋಗದಿದ್ದರೆ ಸೇವೆಯಿಂದ ಅಸಿಂಧುಗೊಳಿಸಿದಾಗ ತೆಗೆದುಕೊಳ್ಳಲು ಅಥವಾ ಪಡೆಯಲು ಅವನು ಹೇಗೆ ಹಕ್ಕುಳ್ಳವನಾಗಬಹುದಾಗಿತ್ತೊ ಹಾಗೆ ರಜೆ, ನಿವೃತ್ತಿ ವೇತನ, ಭವಿಷ್ಯನಿಧಿ ಮತ್ತು ಉಪದಾನಕ್ಕೆ ಹಕ್ಕುಳ್ಳವನಾಗಿರತಕ್ಕದ್ದು;

(ಜಿ) ಸದರಿ ದಿನಾಂಕದಂದು ಪಟ್ಟಣ ಪಂಚಾಯಿತಿಯ ಮುಂದೆ ಇತ್ಯರ್ಥದಲ್ಲಿರುವ ಎಲ್ಲ ವ್ಯವಹರಣೆಗಳು ಮುನ್ಸಿಪಲ್ ಕೌನ್ಸಿಲ್‌ಗೆ ವರ್ಗಾವಣೆಯಾಗಿವೆ ಎಂದು ಭಾವಿಸತಕ್ಕದ್ದು ಮತ್ತು ಅವುಗಳನ್ನು ಮುನ್ಸಿಪಲ್ ಕೌನ್ಸಿಲ್‌ನಲ್ಲಿ ಮುಂದುವರಿಸತಕ್ಕದ್ದು;

(ಹೆಚ್) ಯಾವುದೇ ಪ್ರಾಧಿಕಾರದ ಮುಂದೆ ಇತ್ಯರ್ಥದಲ್ಲಿರುವ ಎಲ್ಲ ಅಪೀಲುಗಳನ್ನು, ಕಾರ್ಯಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಅವುಗಳನ್ನು ದಾಖಲು ಮಾಡಿದಾಗ, ಸದರಿ ಸ್ಥಳೀಯ ಪ್ರದೇಶವು ಚಿಕ್ಕ ನಗರ ಪ್ರದೇಶದಲ್ಲಿ ಒಳಗೊಂಡಿದ್ದಿದ್ದರೆ ಹೇಗೆ ವಿಲೆ ಮಾಡಲಾಗುತ್ತಿತ್ತೊ ಹಾಗೆ ವಿಲೆ ಮಾಡತಕ್ಕದ್ದು;

(ಐ) ಸದರಿ ದಿನಾಂಕದಂದು ಇತ್ಯರ್ಥದಲ್ಲಿದ್ದ ಪಟ್ಟಣ ಪಂಚಾಯಿತಿಯು ಅಥವಾ ಅದರ ಪರವಾಗಿ ಹೂಡಿದ್ದ, ಎಲ್ಲಾ ಪ್ರಾಸಿಕ್ಯೂಷನ್‌ಗಳನ್ನು ಮತ್ತು ಪಟ್ಟಣ ಪಂಚಾಯಿತಿಯು ಅಥವಾ ಅದರ ವಿರುದ್ಧ ಅಥವಾ ಪಟ್ಟಣ ಪಂಚಾಯಿತಿಯ ಯಾರೇ ಅಧಿಕಾರಿಯು ಅಥವಾ ಅವರ ವಿರುದ್ಧ ಹೂಡಿದ್ದ ಎಲ್ಲ ದಾವೆಗಳನ್ನು ಅಥವಾ ಇತರ ಕಾನೂನು ವ್ಯವಹರಣೆಗಳನ್ನು, ಅಂಥ ಪ್ರಾಸಿಕ್ಯೂಷನ್‌ಗಳನ್ನು, ದಾವೆಗಳನ್ನು ಅಥವಾ ವ್ಯವಹರಣೆಗಳನ್ನು ಹೂಡಿದಾಗ ಸದರಿ ಪಟ್ಟಣ ಪಂಚಾಯಿತಿಯು ಚಿಕ್ಕ ನಗರ ಪ್ರದೇಶದಲ್ಲಿ ಒಳಗೊಂಡಿದ್ದರೆ ಹೇಗೆ ಮುನ್ಸಿಪಲ್ಕೌನ್ಸಿಲ್ ಮುಂದುವರೆಸುತ್ತಿತ್ತೋ ಅಥವಾ ಅದರ ವಿರುದ್ಧ ಮುಂದುವರಿಸಲಾಗುತ್ತಿತ್ತೊ ಹಾಗೆಯೇ ಮುಂದುವರಿಸತಕ್ಕದ್ದು;

(ಜೆ) ಮುನ್ಸಿಪಲ್ ಕೌನ್ಸಿಲ್‌ನಲ್ಲಿ ನಿಹಿತವಾಗಿರುವ ದರಗಳ, ತೆರಿಗೆಗಳ ಮತ್ತು ಫೀಜುಗಳ ಎಲ್ಲ ಬಾಕಿಗಳು, ಈ ಅಧಿನಿಯಮದ ಮೇರೆಗೆ ಅಂಥ ದರಗಳನ್ನು ಮತ್ತು ಫೀಜುಗಳನ್ನು ವಿಧಿಸಲಾಗದಿದ್ದಾಗ್ಯೂ ಈ ಅಧಿನಿಯಮದ ಮೇರೆಗೆ ವಸೂಲು ಮಾಡಬಹುದಾದ ತೆರಿಗೆಯ ರೀತಿಯಲ್ಲಿಯೇ ವಸೂಲು ಮಾಡುವಂಥವುಗಳು ಆಗಿರತಕ್ಕದ್ದು;

(ಕೆ) ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಮುನ್ಸಿಪಲ್ ಕೌನ್ಸಿಲ್ ಪುನರ್ ರಚನೆಯಾಗುವವರೆಗೆ, ಈ ಅಧಿನಿಯಮದಲ್ಲಿ ತದ್ವಿರುದ್ಧವಾದುದು ಏನೇ ಒಳಗೊಂಡಿದ್ದರೂ, ಚಿಕ್ಕ ನಗರ ಪ್ರದೇಶದಲ್ಲಿ ಸೇರಿಸಿದ ಸದರಿ ಪಟ್ಟಣ ಪಂಚಾಯಿತಿ ಪ್ರದೇಶದ ಸಾಮಾನ್ಯ ನಿವಾಸಿಯಾಗಿರುವ, ಸರ್ಕಾರದಿಂದ ನಾಮನಿರ್ದೇಶಿತರಾಗಿರತಕ್ಕ, ನಿಯಮಿಸಬಹುದಾದಷ್ಟು ಸಂಖ್ಯೆಯ ವ್ಯಕ್ತಿಗಳು ಮುನ್ಸಿಪಲ್ ಕೌನ್ಸಿಲ್‌ನ ಹೆಚ್ಚುವರಿ (ಅಡಿಷನಲ್) ಕೌನ್ಸಿಲರ್ ಗಳಾಗಿರತಕ್ಕದ್ದು.

355ಇ. ಪರಿವರ್ತನಾ ಪ್ರದೇಶವನ್ನು ಚಿಕ್ಕ ನಗರ ಪ್ರದೇಶದೊಳಗೆ ವಿಲೀನಗೊಳಿಸುವುದರ ಪರಿಣಾಮ.- (1) ಪ್ರಕರಣ 3ರ ಉಪಬಂಧಗಳಿಗೊಳಪಟ್ಟು, ಯಾವುದೇ ಪರಿವರ್ತನಾ ಪ್ರದೇಶವನ್ನು ರಾಜ್ಯಪಾಲರು, ಅಧಿಸೂಚನೆಯ ಮೂಲಕ ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಲಾಗುವ ದಿನಾಂಕದಿಂದ ಜಾರಿಗೆ ಬರುವಂತೆ ಈ ಅಧಿನಿಯಮದ 3ನೇ ಪ್ರಕರಣದ ಮೇರೆಗೆ ರಚಿಸಿದ ಚಿಕ್ಕ ನಗರ ಪ್ರದೇಶವೆಂದು ಘೋಷಿಸಬಹುದು.

(2) ಅಂಥ ಪರಿವರ್ತನಾ ಪ್ರದೇಶಕ್ಕೆ ಅನ್ವಯವಾಗುವ ಈ ಅಧಿನಿಯಮದ ಉಪಬಂಧಗಳು, ಘೋಷಣೆಯಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ (1)ನೇ ಉಪಪ್ರಕರಣದ ಮೇರೆಗೆ ಚಿಕ್ಕ ನಗರ ಪ್ರದೇಶವೆಂದು ಘೋಷಿಸಿದ ಯಾವುದೇ ಸ್ಥಳೀಯ ಪ್ರದೇಶಕ್ಕೆ ಅನ್ವಯವಾಗತಕ್ಕದ್ದಲ್ಲ:

ಪರಂತು, (1)ನೇ ಉಪ-ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಅನ್ವಯವಾಗುವಂತೆ ಅಂಥ ಪಟ್ಟಣ ಪಂಚಾಯಿತಿಯ ಸಂಬಂಧದಲ್ಲಿ ಜಾರಿಯಲ್ಲಿದ್ದ ಈ ಅಧಿನಿಯಮದ ಮೇರೆಗೆ ಮಾಡಿದ ಅಥವಾ ಹೊರಡಿಸಿದ ಅಥವಾ ವಿಧಿಸಿದ, ಯಾವುದೇ ನೇಮಕ, ಅಧಿಸೂಚನೆ, ನೋಟೀಸ್, ತೆರಿಗೆ, ಆದೇಶ, ಯೋಜನೆ, ಲೈಸೆನ್ಸ್, ಅನುಮತಿ, ನಿಯಮ, ಬೈಲಾ ಅಥವಾ ನಮೂನೆಯು ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ಮುನ್ಸಿಪಲ್ ಕೌನ್ಸಿಲ್‌ಗೆ ಸಂಬಂಧಿಸಿದಂತೆ ಮಾಡಿದ ಅಥವಾ ಹೊರಡಿಸಿದ ಅಥವಾ ವಿಧಿಸಿದ ಯಾವುದೇ ನೇಮಕ, ಅಧಿಸೂಚನೆ, ನೋಟೀಸ್, ತೆರಿಗೆ, ಆದೇಶ, ಯೋಜನೆ, ಲೈಸೆನ್ಸ್, ಅನುಮತಿ, ನಿಯಮ, ಬೈಲಾ ಅಥವಾ ನಮೂನೆಯ ಮೂಲಕ ಅವುಗಳನ್ನು ರದ್ದುಪಡಿಸಿದ ಹೊರತು ಮತ್ತು ರದ್ದುಪಡಿಸುವವರೆಗೆ ಅವುಗಳನ್ನು ಈ ಅಧಿನಿಯಮದ ಮೇರೆಗೆ ಮಾಡಲಾಗಿದೆ, ಹೊರಡಿಸಲಾಗಿದೆ ಅಥವಾ ವಿಧಿಸಲಾಗಿದೆ ಎಂದು ಭಾವಿಸತಕ್ಕದ್ದು.

(3) ಉಪಪ್ರಕರಣ (1)ರ ಮೇರೆಗೆ ಯಾವುದೇ ಪ್ರದೇಶವನ್ನು ಚಿಕ್ಕ ನಗರ ಪ್ರದೇಶವೆಂದು ಘೋಷಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಈ ಕೆಳಕಂಡ ಪರಿಣಾಮಗಳು ಉಂಟಾಗತಕ್ಕದ್ದು, ಎಂದರೆ:-

(ಎ) ಸದರಿ ಪ್ರದೇಶಕ್ಕೆ ಸಂಬಂಧಿಸಿದಂತೆ ಸದರಿ ಘೋಷಣೆಯ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಈ ಅಧಿನಿಯಮದ ಮೇರೆಗೆ ಪಟ್ಟಣ ಪಂಚಾಯಿತಿಯಾಗಿ ಕಾರ್ಯನಿರ್ವಹಿಸುತ್ತಿರುವ ನಿಕಾಯವು, ಈ ಅಧಿನಿಯಮದ ಉಪಬಂಧಗಳ ಮೇರೆಗೆ ಅಂಥ ನಿಕಾಯದ ಅಧಿಕಾರವ್ಯಾಪ್ತಿಯೊಳಗಿನ ಪ್ರದೇಶಕ್ಕಾಗಿ ಮುನ್ಸಿಪಲ್ ಕೌನ್ಸಿಲ್‌ನ್ನು ಕ್ರಮಬದ್ಧವಾಗಿ ರಚಿಸುವವರೆಗೆ, ಸದರಿ ಪ್ರದೇಶಕ್ಕೆ ಸಂಬಂಧಿಸಿದಂತೆ ಮುನ್ಸಿಪಲ್ ಕೌನ್ಸಿಲ್‌ಗೆ ಈ ಅಧಿನಿಯಮದ ಉಪಬಂಧಗಳ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ಮತ್ತು ಕರ್ತವ್ಯಗಳನ್ನು ನೆರವೇರಿಸಲು ಸಕ್ಷಮ ನಿಕಾಯವಾಗತಕ್ಕದ್ದು;

(ಬಿ) ಸದರಿ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಪಟ್ಟಣ ಪಂಚಾಯಿತಿಯಲ್ಲಿ ಕೌನ್ಸಿಲರ್ ಗಳಾಗಿ ಪದಧಾರಣ ಮಾಡಿರುವ ಕೌನ್ಸಿಲರ್ ಗಳು, ಮುನ್ಸಿಪಲ್ ಕೌನ್ಸಿಲ್‌ನ ಕೌನ್ಸಿಲರ್ ಗಳಾಗತಕ್ಕದ್ದು;

(ಸಿ) ಸದರಿ ಪಟ್ಟಣ ಪಂಚಾಯಿತಿಯ ಅಧ್ಯಕ್ಷರು, ಮುನ್ಸಿಪಲ್ ಕೌನ್ಸಿಲ್‌ನ ಅಧ್ಯಕ್ಷರಾಗತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ಅಧ್ಯಕ್ಷರ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು ಮತ್ತು ಸದರಿ ಪಟ್ಟಣ ಪಂಚಾಯಿತಿಯ ಉಪಾಧ್ಯಕ್ಷರು ಈ ಅಧಿನಿಯಮದ ಮೇರೆಗೆ ಸದರಿ ಮುನ್ಸಿಪಲ್ ಕೌನ್ಸಿಲ್‌ನ ಉಪಾಧ್ಯಕ್ಷರಾಗತಕ್ಕದ್ದು;

(ಡಿ) ಪಟ್ಟಣ ಪಂಚಾಯಿತಿಯ ಅಧಿಕಾರಗಳನ್ನು ಚಲಾಯಿಸಲು ಮತ್ತು ಕರ್ತವ್ಯಗಳನ್ನು ನೆರವೇರಿಸಲು 315ನೇ ಪ್ರಕರಣದ ಅಥವಾ 316ನೇ ಪ್ರಕರಣದ ಉಪಬಂಧಗಳ ಮೇರೆಗೆ ಒಬ್ಬ ಆಡಳಿತಗಾರನನ್ನಾಗಲಿ ಅಥವಾ ಅಧಿಕಾರಿಯನ್ನಾಗಲಿ ನೇಮಕಮಾಡಿರುವಲ್ಲಿ ಆಗ ಅಂಥ ಆಡಳಿತಗಾರನನ್ನು ಅಥವಾ ಅಧಿಕಾರಿಯನ್ನು ಮುನ್ಸಿಪಲ್ ಕೌನ್ಸಿಲ್‌ಗೆ ಸಂಬಂಧಿಸಿದಂತೆ ನೇಮಕಗೊಂಡ ಆಡಳಿತಗಾರನೆಂದು ಭಾವಿಸತಕ್ಕದ್ದು;

(ಇ) ಪಟ್ಟಣ ಪಂಚಾಯಿತಿ ನಿಧಿಯಲ್ಲಿ ವೆಚ್ಚ ಮಾಡದೆ ಉಳಿದಿರುವ ಶಿಲ್ಕು ಮತ್ತು ಸದರಿ ಪಟ್ಟಣ ಪಂಚಾಯಿತಿಗೆ ಸೇರಿದ ಸ್ವತ್ತು (ದರಗಳ, ತೆರಿಗೆಗಳ ಮತ್ತು ಶುಲ್ಕಗಳ ಬಾಕಿಯೂ ಸೇರಿದಂತೆ) ಮತ್ತು ಅಂಥ ಘೋಷಣೆಗೆ ಮುಂಚೆ ಪಟ್ಟಣ ಪಂಚಾಯಿತಿಯಲ್ಲಿ ನಿಹಿತವಾಗಿದ್ದ ಎಲ್ಲ ಹಕ್ಕುಗಳು ಮತ್ತು ಅಧಿಕಾರಗಳು, ಅವುಗಳಿಗೆ ಸಂಬಂಧಿಸಿದ ಎಲ್ಲ ಋಣಭಾರಗಳು ಮತ್ತು ಹೊಣೆಗಾರಿಕೆಗಳಿಗೊಳಪಟ್ಟು, ಮುನ್ಸಿಪಲ್ ಕೌನ್ಸಿಲ್‌ನ ನಿಧಿಯಾಗಿ ಮುನ್ಸಿಪಲ್ ಕೌನ್ಸಿಲ್‌ನಲ್ಲಿ ನಿಹಿತವಾಗತಕ್ಕದ್ದು;

(ಎಫ್) ಅಂಥ ಪಟ್ಟಣ ಪಂಚಾಯಿತಿಗೆ ಸಂಬಂಧಿಸಿದಂತೆ ಈ ಅಧಿನಿಯಮದ ಮೇರೆಗೆ ಮಾಡಿದ ಅಥವಾ ಹೊರಡಿಸಿದ ಅಥವಾ ವಿಧಿಸಿದ ಯಾವುದೇ ನೇಮಕ, ಅಧಿಸೂಚನೆ, ನೋಟೀಸ್, ತೆರಿಗೆ, ಆದೇಶ, ಯೋಜನೆ, ಲೈಸೆನ್ಸ್, ಅನುಮತಿ, ನಿಯಮ, ಬೈಲಾ ಅಥವಾ ನಮೂನೆಯು ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ಮಾಡಿದ ಅಥವಾ ಹೊರಡಿಸಿದ ಅಥವಾ ವಿಧಿಸಿದ ಯಾವುದೇ ನೇಮಕ, ಅಧಿಸೂಚನೆ, ನೋಟೀಸ್, ತೆರಿಗೆ, ಆದೇಶ, ಯೋಜನೆ, ಲೈಸೆನ್ಸ್, ಅನುಮತಿ, ನಿಯಮ, ಬೈಲಾ ಅಥವಾ ನಮೂನೆಯ ಮೂಲಕ ಮುನ್ಸಿಪಲ್ ಕೌನ್ಸಿಲ್‌ಗೆ ಸಂಬಂಧಿಸಿದಂತೆ ಅವುಗಳನ್ನು ರದ್ದುಪಡಿಸಿದ ಹೊರತು ಅಥವಾ ರದ್ದುಪಡಿಸುವವರೆಗೆ ಅವುಗಳನ್ನು, ಈ ಅಧಿನಿಯಮದ ಮೇರೆಗೆ ಮಾಡಲಾಗಿದೆ ಅಥವಾ ಹೊರಡಿಸಲಾಗಿದೆ ಅಥವಾ ವಿಧಿಸಲಾಗಿದೆ ಎಂದು ಭಾವಿಸತಕ್ಕದ್ದು;

(ಜಿ) ಸದರಿ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಈ ಅಧಿನಿಯಮದ ಮೇರೆಗೆ ಪಟ್ಟಣ ಪಂಚಾಯಿತಿಯ ಸಂಬಂಧದಲ್ಲಿ ಮಾಡಿದ ಅಥವಾ ಅಧಿಪ್ರಮಾಣೀಕರಿಸಿದ ಎಲ್ಲ ಬಜೆಟ್ ಅಂದಾಜುಗಳನ್ನು, ನಿರ್ಧರಣಾ ಪಟ್ಟಿಗಳನ್ನು, ಮೌಲ್ಯಮಾಪನವನ್ನು ಅಥವಾ ಅಳತೆಗಳನ್ನು ಈ ಅಧಿನಿಯಮದ ಮೇರೆಗೆ ಪಟ್ಟಣ ಪಂಚಾಯಿತಿಯ ಸಂಬಂಧದಲ್ಲಿ ಮಾಡಲಾಗಿದೆ ಅಥವಾ ಅಧಿಪ್ರಮಾಣೀಕರಿಸಲಾಗಿದೆ ಎಂದು ಭಾವಿಸತಕ್ಕದ್ದು;

(ಹೆಚ್) ಸದರಿ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಪಟ್ಟಣ ಪಂಚಾಯಿತಿಯಿಂದ ಅಥವಾ ಅದರ ಪರವಾಗಿ ವಹಿಸಿದ ಮತ್ತು ಸದರಿ ದಿನಾಂಕದಂದು ಚಾಲ್ತಿಯಲ್ಲಿದ್ದ ಎಲ್ಲಾ ಋಣಗಳನ್ನು ಮತ್ತು ಬಾಧ್ಯತೆಗಳನ್ನು ಮತ್ತು ಸದರಿ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಪಟ್ಟಣ

ಪಂಚಾಯಿತಿಯಿಂದ ಅಥವಾ ಅದರ ಪರವಾಗಿ ಮಾಡಿಕೊಂಡ ಮತ್ತು ಸದರಿ ದಿನಾಂಕದಂದು ಚಾಲ್ತಿಯಲ್ಲಿದ್ದ ಎಲ್ಲಾ ಕರಾರುಗಳನ್ನು, ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಮುನ್ಸಿಪಲ್ ಕೌನ್ಸಿಲ್‌ಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮುನ್ಸಿಪಲ್ ಕೌನ್ಸಿಲ್ ವಹಿಸಿದೆ ಮತ್ತು ಮಾಡಿಕೊಂಡಿದೆ ಎಂದು ಭಾವಿಸತಕ್ಕದ್ದು;

(ಐ) ಸದರಿ ಘೋಷಣೆಗೆ ಮುಂಚೆ ಪಟ್ಟಣ ಪಂಚಾಯಿತಿಯ ಮುಂದೆ ಇತ್ಯರ್ಥದಲ್ಲಿದ್ದ ಎಲ್ಲಾ ವ್ಯವಹರಣೆಗಳನ್ನು ಮುನ್ಸಿಪಲ್ ಕೌನ್ಸಿಲ್ ಮುಂದುವರಿಸತಕ್ಕದ್ದು;

(ಜೆ) ಯಾವುದೇ ಪ್ರಾಧಿಕಾರದ ಮುಂದೆ ಇತ್ಯರ್ಥದಲ್ಲಿದ್ದ ಎಲ್ಲಾ ಅಪೀಲುಗಳನ್ನು ಕಾರ್ಯ ಸಾಧ್ಯವಾಗುವಷ್ಟುಮಟ್ಟಿಗೆ, ಅವುಗಳನ್ನು ದಾಖಲು ಮಾಡಿದಾಗ ಸದರಿ ಪ್ರದೇಶವು ಚಿಕ್ಕ ನಗರ ಪ್ರದೇಶದಲ್ಲಿ ಒಳಗೊಂಡಿದ್ದಿದ್ದರೆ ಹೇಗೆ ವಿಲೆ ಮಾಡಲಾಗುತ್ತಿತ್ತೋ ಹಾಗೆ ವಿಲೆ ಮಾಡತಕ್ಕದ್ದು;

(ಕೆ) ಸದರಿ ದಿನಾಂಕದಂದು ಇತ್ಯರ್ಥದಲ್ಲಿದ್ದ, ಪಟ್ಟಣ ಪಂಚಾಯಿತಿಯು ಅಥವಾ ಅದರ ಪರವಾಗಿ, ಹೂಡಿದ್ದ ಎಲ್ಲಾ ಪ್ರಾಸಿಕ್ಯೂಷನ್‌ಗಳನ್ನು ಮತ್ತು ಪಟ್ಟಣ ಪಂಚಾಯಿತಿ ಅಥವಾ ಅದರ ವಿರುದ್ಧ ಅಥವಾ ಪಟ್ಟಣ ಪಂಚಾಯಿತಿಯ ಯಾರೇ ಅಧಿಕಾರಿಯು ಅಥವಾ ಅವರ ವಿರುದ್ಧ, ಹೂಡಿದ್ದ ಎಲ್ಲಾ ದಾವೆಗಳನ್ನು ಅಥವಾ ಇತರ ಕಾನೂನು ವ್ಯವಹರಣೆಗಳನ್ನು, ಅಂಥ ಪ್ರಾಸಿಕ್ಯೂಷನ್‌ಗಳನ್ನು, ದಾವೆಗಳನ್ನು ಅಥವಾ ವ್ಯವಹರಣೆಗಳನ್ನು ಹೂಡಿದಾಗ ಅಂಥ ಪ್ರದೇಶವು ಮುನ್ಸಿಪಲ್ ಕೌನ್ಸಿಲ್‌ನಲ್ಲಿ ಒಳಗೊಂಡಿದ್ದಿದ್ದರೆ ಹೇಗೆ ಮುನ್ಸಿಪಲ್ ಕೌನ್ಸಿಲ್ ಮುಂದುವರೆಸುತ್ತಿತ್ತೋ ಅಥವಾ ಅದರ ವಿರುದ್ಧ ಮುಂದುವರಿಸಲಾಗುತ್ತಿತ್ತೊ ಹಾಗೆ ಮುಂದುವರಿಸತಕ್ಕದ್ದು;

(ಎಲ್) ಸದರಿ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಪಟ್ಟಣ ಪಂಚಾಯಿತಿಯಲ್ಲಿ ನಿಯೋಜಿತರಾಗಿದ್ದ ಎಲ್ಲ ಅಧಿಕಾರಿಗಳು ಮತ್ತು ನೌಕರರು ಮುನ್ಸಿಪಲ್ ಕೌನ್ಸಿಲ್‌ನ ಅಧಿಕಾರಿಗಳು ಮತ್ತು ನೌಕರರು ಆಗತಕ್ಕದ್ದು ಮತ್ತು ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಬೇರೆ ಏರ್ಪಾಟು ಮಾಡುವವರೆಗೆ ಅಂಥ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಅವರು ಯಾವ ಸಂಬಳವನ್ನು ಮತ್ತು ಭತ್ಯೆಗಳನ್ನು ಪಡೆಯುತ್ತಿದ್ದರೋ ಆ ಸಂಬಳವನ್ನು ಮತ್ತು ಭತ್ಯೆಗಳನ್ನು ಪಡೆಯತಕ್ಕದ್ದು ಮತ್ತು ಯಾವ ಸೇವಾ ಷರತ್ತುಗಳಿಗೆ ಅವರು ಒಳಪಟ್ಟಿದ್ದರೋ ಆ ಸೇವಾ ಷರತ್ತುಗಳಿಗೊಳಪಡತಕ್ಕದ್ದು:

ಪರಂತು, ಮುನ್ಸಿಪಲ್ ಕೌನ್ಸಿಲ್‌ನ ಅಧೀನದಲ್ಲಿ ಇರುವ ಸೇವಾ ಅಗತ್ಯತೆಗಳಿಗೆ ಯಾವ ಅಧಿಕಾರಿಯ ಅಥವಾ ನೌಕರನ ಸೇವೆಯು ಅವಶ್ಯವಿಲ್ಲವೆಂದು ಅಥವಾ ಸೂಕ್ತವಾಗಿಲ್ಲವೆಂದು ಮುನ್ಸಿಪಲ್ ಕೌನ್ಸಿಲ್ ಅಭಿಪ್ರಾಯಪಡುವುದೋ ಆ ಯಾರೇ ಅಧಿಕಾರಿಗೆ ಅಥವಾ ನೌಕರನಿಗೆ ಅವನ ನಿಯೋಜನೆಯ ನಿಬಂಧನೆಗಳ ಪ್ರಕಾರ ನೀಡಬೇಕಾದ ಅಂಥ ನೋಟೀಸ್ ನ್ನು ಕೊಟ್ಟ ತರುವಾಯ, ಸರ್ಕಾರದ ಪೂರ್ವ ಮಂಜೂರಾತಿಗೊಳಪಟ್ಟು, ಆ ಯಾರೇ ಅಧಿಕಾರಿಯ ಅಥವಾ ನೌಕರನ ಸೇವೆಯನ್ನು ಮುಂದುವರಿಸದಿರುವುದು ಮುನ್ಸಿಪಲ್ ಕೌನ್ಸಿಲ್‌ಗೆ ಸಕ್ಷಮವಾದುದಾಗಿರತಕ್ಕದ್ದು ಮತ್ತು ಯಾವ ಅಧಿಕಾರಿಯ ಅಥವಾ ನೌಕರನ ಸೇವೆಯನ್ನು ಬೇಡವೆಂದು ಬಿಟ್ಟುಬಿಡಲಾಗಿದೆಯೋ ಆ ಪ್ರತಿಯೊಬ್ಬ ಅಧಿಕಾರಿಯು ಅಥವಾ ನೌಕರನು, ಅವನು ಯಾವ ಪಟ್ಟಣ ಪಂಚಾಯಿತಿಯಲ್ಲಿ ನಿಯೋಜಿತನಾಗಿದ್ದನೋ ಆ ಪಟ್ಟಣ ಪಂಚಾಯಿತಿಯು ಅಸ್ತಿತ್ವದಲ್ಲಿರುವುದು ನಿಂತುಹೋಗದಿದ್ದರೆ ಅಸಮರ್ಥತೆಯ ಕಾರಣದಿಂದ ಅವನನ್ನು ಸೇವೆಯಿಂದ ತೆಗೆದುಹಾಕಿದಾಗ, ತೆಗೆದುಕೊಳ್ಳಲು ಅಥವಾ ಪಡೆಯಲು ಹೇಗೆ ಹಕ್ಕುಳ್ಳವನಾಗಬಹುದಾಗಿತ್ತೋ ಹಾಗೆ ರಜೆ, ನಿವೃತ್ತಿ ವೇತನ, ಭವಿಷ್ಯನಿಧಿ ಮತ್ತು ಉಪದಾನಕ್ಕೆ ಹಕ್ಕುಳ್ಳವನಾಗಿರತಕ್ಕದ್ದು.

(4) ಉಪ-ಪ್ರಕರಣ (1)ರಲ್ಲಿ ಉಲ್ಲೇಖಿಸಿದ ಘೋಷಣೆಯ ದಿನಾಂಕದಿಂದ ಆರು ತಿಂಗಳುಗಳ ಅವಧಿಯೊಳಗೆ ಈ ಅಧಿನಿಯಮದ ಮೇರೆಗೆ ಚಿಕ್ಕ ನಗರ ಪ್ರದೇಶಕ್ಕಾಗಿ, ಮುನ್ಸಿಪಲ್ ಕೌನ್ಸಿಲ್ ಅನ್ನು ಕ್ರಮಬದ್ಧವಾಗಿ ರಚಿಸತಕ್ಕದ್ದು ಮತ್ತು ಹಾಗೆ ರಚಿತವಾದ ಮುನ್ಸಿಪಲ್ ಕೌನ್ಸಿಲ್‌ನ ಮೊದಲ ಸಭೆಯ ದಿನಾಂಕದಿಂದ ಮುನ್ಸಿಪಲ್ ಕೌನ್ಸಿಲ್‌ನ ಅಧಿಕಾರಗಳನ್ನು ಚಲಾಯಿಸುತ್ತಿರುವ ಮತ್ತು ಕರ್ತವ್ಯಗಳನ್ನು ನೆರವೇರಿಸುತ್ತಿರುವ ನಿಕಾಯವು ವಿಸರ್ಜನೆಗೊಳ್ಳತಕ್ಕದ್ದು.

(5) ಉಪ-ಪ್ರಕರಣ (1)ರ ಮೇರೆಗೆ ಚಿಕ್ಕ ನಗರ ಪ್ರದೇಶ ಎಂದು ಘೋಷಿಸಿರುವ ಪಟ್ಟಣ ಪಂಚಾಯಿತಿ ಅಥವಾ ಪರಿವರ್ತನಾ ಪ್ರದೇಶದ ಸ್ವತ್ತುಗಳು, ಹಕ್ಕುಗಳು ಮತ್ತು ಹೊಣೆಗಾರಿಕೆಗಳು ನಿರ್ದಿಷ್ಟಪಡಿಸಿ, ಅಂಥ ಅಧಿಸೂಚನೆಯ ದಿನಾಂಕದಿಂದ ಜಾರಿಗೆ ಬರುವಂತೆ ಸದರಿ ಚಿಕ್ಕ ನಗರ ಪ್ರದೇಶದ ಮುನ್ಸಿಪಲ್ ಕೌನ್ಸಿಲ್‌ನಲ್ಲಿ ನಿಹಿತವಾಗತಕ್ಕದ್ದು.][1]

ಅಧ್ಯಾಯ-XVI

[1][ಪಂಚಾಯಿತಿ ಪ್ರದೇಶವನ್ನು ಚಿಕ್ಕನಗರ ಪ್ರದೇಶ][1] ವಾಗಿ ಪರಿವರ್ತಿಸುವ ಬಗ್ಗೆ, ಹಾಗೂ [1][ಚಿಕ್ಕ ನಗರ ಪ್ರದೇಶಗಳನ್ನು][1] ವಿಲೀನಗೊಳಿಸುವುದರ ಮತ್ತು ವಿಭಾಗಿಸುವುದರ ಬಗ್ಗೆ ಉಪಬಂಧಗಳು, ಇತ್ಯಾದಿ

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

356. ಅರ್ಥವಿವರಣೆ.- ಈ ಅಧಿನಿಯಮದ ಉದ್ದೇಶಗಳಿಗಾಗಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ)"ಮುನ್ಸಿಪಲ್ ಕೌನ್ಸಿಲ್" ಎಂಬ ಪದಾವಳಿಯು, 315 ಮತ್ತು 316ನೇ ಪ್ರಕರಣಗಳ ಮೇರೆಗೆ ಮುನ್ಸಿಪಲ್ ಕೌನ್ಸಿಲರ್ ಅಧಿಕಾರಗಳನ್ನು ಚಲಾಯಿಸಲು ಮತ್ತು ಪ್ರಕಾರ್ಯಗಳನ್ನು ನೆರವೇರಿಸಲು ನೇಮಕಗೊಂಡ ಆಡಳಿತಗಾರ ಅಥವಾ ಅಧಿಕಾರಿಯನ್ನು ಒಳಗೊಳ್ಳುತ್ತದೆ;

[1][(ಬಿ) "ಗ್ರಾಮ ಪಂಚಾಯತಿ"ಯು 1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದ 8, 117, 118 ಮತ್ತು 258ನೇ ಪ್ರಕರಣಗಳ ಮೇರೆಗೆ ಗ್ರಾಮ ಪಂಚಾಯಿತಿಯ ಅಧಿಕಾರಗಳನ್ನು ಚಲಾಯಿಸಲು ಮತ್ತು ಅದರ ಕಾರ್ಯಗಳನ್ನು ನೆರವೇರಿಸಲು ನೇಮಕಗೊಂಡ ವ್ಯಕ್ತಿ ಅಥವಾ ವ್ಯಕ್ತಿಗಳನ್ನು ಒಳಗೊಳ್ಳುತ್ತದೆ][1].

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

357. [1][ಪಂಚಾಯಿತಿ ಪ್ರದೇಶವನ್ನು ಚಿಕ್ಕನಗರ ಪ್ರದೇಶ][1]ವನ್ನಾಗಿ ಪರಿವರ್ತಿಸುವುದರ ಪರಿಣಾಮ.- ಯಾವುದೇ ಸ್ಥಳೀಯ ಪ್ರದೇಶವು [1][1993ರ ಪಂಚಾಯತ್ ರಾಜ್ ಅಧಿನಿಯಮದ 4ನೇ ಪ್ರಕರಣದ ಮೇರೆಗಿನ ಅಧಿಸೂಚನೆಯಿಂದಾಗಿ ಪಂಚಾಯತ್ ಪ್ರದೇಶವಾಗಿರುವುದು][1] ನಿಂತುಹೋದಾಗ ಮತ್ತು ಅದನ್ನು ಈ ಅಧಿನಿಯಮದ 3ನೇ ಪ್ರಕರಣದ ಮೇರೆಗೆ [1][ಚಿಕ್ಕನಗರ ಪ್ರದೇಶವೆಂದು][1] (ಇಲ್ಲಿ ಇನ್ನು ಮುಂದೆ ಈ ಪ್ರಕರಣದಲ್ಲಿ [1][ಚಿಕ್ಕನಗರ ಪ್ರದೇಶ][1] ವೆಂದು ಉಲ್ಲೇಖಿಸಲಾದ) ಘೋಷಿಸಿದಾಗ ಅಂಥ ಸ್ಥಳೀಯ ಪ್ರದೇಶವನ್ನು [1][ಚಿಕ್ಕನಗರ ಪ್ರದೇಶ][1] ವೆಂದು ಘೋಷಿಸಿದಂಥ ದಿನದಿಂದ (ಇಲ್ಲಿ ಇನ್ನು ಮುಂದೆ ಈ ಪ್ರಕರಣದಲ್ಲಿ ಸದರಿ ದಿನಾಂಕದಂದು ಉಲ್ಲೇಖಿಸಲಾದ) ಪರಿಣಾಮಕಾರಿಯಾಗುವಂತೆ, ಈ ಕೆಳಕಂಡ ಪರಿಣಾಮಗಳು ಉಂಟಾಗತಕ್ಕದ್ದು, ಎಂದರೆ:-

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಎ) [2][ಅಂಥ ಸ್ಥಳೀಯ ಪ್ರದೇಶದ [1][ಗ್ರಾಮ ಪಂಚಾಯಿತಿ][1]ಯ][2] (ಇಲ್ಲಿ ಇನ್ನು ಮುಂದೆ ಪಂಚಾಯಿತಿ ಎಂದು ಉಲ್ಲೇಖಿಸಲಾದ) ಅಸ್ತಿತ್ವದಲ್ಲಿರುವುದು ಅಥವಾ ಕಾರ್ಯನಿರ್ವಹಿಸುವುದು ನಿಂತುಹೋಗತಕ್ಕದ್ದು;

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2.1986ರ ಅಧಿನಿಯಮ 33ರ ಮೂಲಕ 7.10.1986 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಬಿ) [1][ಚಿಕ್ಕ ನಗರ ಪ್ರದೇಶ][1]ದ, [1][ಗ್ರಾಮ ಪಂಚಾಯಿತಿ][1]ಯ ಸದಸ್ಯರಾಗಿ ಪದವನ್ನು ತೆರವು ಮಾಡುವ ವ್ಯಕ್ತಿಗಳನ್ನೊಳಗೊಂಡ ಮಧ್ಯಮಕಾಲಿಕ ಕೌನ್ಸಿಲ್‌ನ್ನು ರಚಿಸತಕ್ಕದ್ದು ಮತ್ತು ಆ [1][ಗಾಮ ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ][1]ರನ್ನು ಮಧ್ಯಕಾಲೀನ ಮುನ್ಸಿಪಲ್ ಕೌನ್ಸಿಲ್ ನ್ನು ಅನುಕ್ರಮವಾಗಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷನೆಂಬುದಾಗಿ ಭಾವಿಸತಕ್ಕದ್ದು;

1. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಸಿ) ಸಂದರ್ಭಾನುಸಾರ, ಪಂಚಾಯಿತಿಯಲ್ಲಿ [1][ಅಥವಾ 1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದ 268ನೇ ಪ್ರಕರಣದ ಮೇರೆಗೆ ಗ್ರಾಮ ಪಂಚಾಯಿತಿಯನ್ನು

ರದ್ದುಗೊಳಿಸಿದ ಅವಧಿಯಲ್ಲಿ, ಸರ್ಕಾರದಲ್ಲಿ][1] ಅಂಥ ಅಧಿಸೂಚನೆಗೆ ಮುಂಚೆ ನಿಹಿತವಾದಂಥ [1][ಗ್ರಾಮ ಪಂಚಾಯಿತಿ ನಿಧಿಯಲ್ಲಿ][1] ವೆಚ್ಚ ಮಾಡದೆ ಉಳಿದಿರುವ ಶಿಲ್ಕು ಮತ್ತು ಪಂಚಾಯಿತಿಗೆ ಸೇರಿದ ಸ್ವತ್ತು (ದರಗಳು, ತೆರಿಗೆಗಳು ಹಾಗೂ ಫೀಜುಗಳ ಬಾಕಿಗಳನ್ನೊಳಗೊಂಡು) ಮತ್ತು ಎಲ್ಲಾ ಹಕ್ಕುಗಳು ಹಾಗೂ ಅಧಿಕಾರಗಳು, ಅವುಗಳಿಗೆ ಸಂಬಂಧಿಸಿದ ಎಲ್ಲಾ ಋಣಭಾರಗಳು ಹಾಗೂ ಹೊಣೆಗಾರಿಕೆಗಳಿಗೊಳಪಟ್ಟು 11ನೇ ಪ್ರಕರಣದ ಉಪಬಂಧಗಳ ಅನುಸಾರ ಹೊಸ ಮುನ್ಸಿಪಲ್ ಕೌನ್ಸಿಲ್ ನ್ನು ರಚಿಸುವವರೆಗೆ ಮಧ್ಯಕಾಲೀನ ಮುನ್ಸಿಪಲ್ ಕೌನ್ಸಿಲ್ ನಲ್ಲಿ, ಮುನ್ಸಿಪಲ್ ನಿಧಿಯಾಗಿ ನಿಹಿತವಾಗತಕ್ಕದ್ದು;

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಡಿ) ಅಂಥ ಸ್ಥಳೀಯ ಪ್ರದೇಶಕ್ಕೆ ಸಂಬಂಧಿಸಿದಂತೆ ಸದರಿ ದಿನಾಂಕದ ನಿಕಟ ಪೂರ್ವದಲ್ಲಿ [1][ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993][1]ರ ಮೇರೆಗೆ ಮಾಡಿದ, ಹೊರಡಿಸಿದ, ವಿಧಿಸಿದ ಅಥವಾ ಮಂಜೂರು ಮಾಡಿದ ಯಾವುದೇ ನೇಮಕ, ಅಧಿಸೂಚನೆ, ನೋಟೀಸ್, ತೆರಿಗೆ, ಆದೇಶ, ಯೋಜನೆ, ಲೈಸೆನ್ಸ್, ಅನುಮತಿ, ನಿಯಮ, ಬೈಲಾ ಅಥವಾ ನಮೂನೆಯು ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು ಮತ್ತು [1][ಚಿಕ್ಕನಗರ ಪ್ರದೇಶಕ್ಕೆ][1] ಸಂಬಂಧಿಸಿದಂತೆ ಈ ಅಧಿನಿಯಮದ ಮೇರೆಗೆ ಮಾಡಿದ, ಹೊರಡಿಸಿದ, ವಿಧಿಸಿದ, ಅಥವಾ ಮಂಜೂರು ಮಾಡಿದ ಯಾವುದೇ ನೇಮಕ, ಅಧಿಸೂಚನೆ, ನೋಟೀಸ್, ತೆರಿಗೆ, ಆದೇಶ, ಯೋಜನೆ, ಲೈಸೆನ್ಸ್,, ಅನುಮತಿ, ನಿಯಮ ಬೈಲಾದ ಮೂಲಕ ರದ್ದುಪಡಿಸುವ ಅಥವಾ ಮಾರ್ಪಾಟು ಮಾಡುವವರೆಗೆ, ಮಾಡಲಾಗಿದೆ, ಹೊರಡಿಸಲಾಗಿದೆ, ವಿಧಿಸಲಾಗಿದೆ ಅಥವಾ ಮಂಜೂರು ಮಾಡಲಾಗಿದೆಯೆಂದು ಭಾವಿಸತಕ್ಕದ್ದು;

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಇ) ಅಂಥ ಸ್ಥಳೀಯ ಪ್ರದೇಶಕ್ಕೆ ಸಂಬಂಧಿಸಿದಂತೆ ಸದರಿ ದಿನಾಂಕದ ನಿಕಟಪೂರ್ವದಲ್ಲಿ [1][ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993][1]ರ ಮೇರೆಗೆ ಮಾಡಿದ ಅಥವಾ ಅಧಿಪ್ರಮಾಣಗೊಳಿಸಿದ ಎಲ್ಲಾ ಬಜೆಟ್ ಅಂದಾಜುಗಳನ್ನು, ತೆರಿಗೆ ನಿರ್ಧಾರಣೆಗಳನ್ನು, ತೆರಿಗೆ ನಿರ್ಧಾರಣಾ ಪಟ್ಟಿಗಳನ್ನು, ಮೌಲ್ಯಮಾಪನಗಳನ್ನು ಅಥವಾ ಅಳತೆಗಳನ್ನು ಈ ಅಧಿನಿಯಮದ ಮೇರೆಗೆ ಮಾಡಲಾಗಿದೆ ಅಥವಾ ಅಧಿಪ್ರಮಾಣೀಕರಿಸಲಾಗಿದೆ ಎಂದು ಭಾವಿಸತಕ್ಕದ್ದು;

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಎಫ್) ಸದರಿ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಮತ್ತು ಸದರಿ ದಿನಾಂಕದಂದು ಇರುವ, ಪಂಚಾಯಿತಿಯಿಂದ ಅಥವಾ ಅದರ ಪರವಾಗಿ ವಹಿಸಿದ ಎಲ್ಲಾ ಋಣಗಳು ಮತ್ತು ಹೊಣೆಗಳು ಮತ್ತು ಎಲ್ಲಾ ಕರಾರುಗಳು ಈ ಅಧಿನಿಯಮದ ಮೇರೆಗೆ ಅದಕ್ಕೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮುನ್ಸಿಪಲ್ ಕೌನ್ಸಿಲ್ವಹಿಸಿಕೊಂಡಿದೆ ಅಥವಾ ಮಾಡಿದೆ ಎಂದು ಭಾವಿಸತಕ್ಕದ್ದು;

(ಜಿ) ಸದರಿ ದಿನಾಂಕದ ನಿಕಟಪೂರ್ವದಲ್ಲಿ ಪಂಚಾಯಿತಿಯ ನಿಯೋಜನೆಯಲ್ಲಿರುವ ಎಲ್ಲಾ ಅಧಿಕಾರಿಗಳು ಮತ್ತು ನೌಕರರು ಈ ಅಧಿನಿಯಮದ ಮೇರೆಗೆ, ಮುನ್ಸಿಪಲ್ ಕೌನ್ಸಿಲ್‌ನ ಅಧಿಕಾರಿಗಳು ಮತ್ತು ನೌಕರರಾಗಿರತಕ್ಕದ್ದು ಮತ್ತು ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಇತರ ಬೇರೆ ವ್ಯವಸ್ಥೆಯನ್ನು ಮಾಡುವವರೆಗೆ, ಅಂಥ ದಿನಾಂಕದಂದು ಅವರು ಹಕ್ಕುಳ್ಳವರಾಗಿದ್ದಂಥ ಸಂಬಳಗಳನ್ನು ಮತ್ತು ಭತ್ಯೆಗಳನ್ನು ಪಡೆಯತಕ್ಕದ್ದು ಮತ್ತು ಅವರು ಒಳಪಟ್ಟಿದ್ದಂಥ ಸೇವಾ ಷರತ್ತುಗಳಿಗೊಳಪಟ್ಟಿರತಕ್ಕದ್ದು:

ಪರಂತು, [1][ಪೌರಾಡಳಿತ ನಿರ್ದೇಶಕರ][1] ಪೂರ್ವಮಂಜೂರಾತಿಗೊಳಪಟ್ಟು, ಮುನ್ಸಿಪಲ್ ಕೌನ್ಸಿಲ್ ಗೆ ತನ್ನ ಅಭಿಪ್ರಾಯದಲ್ಲಿ ಮುನ್ಸಿಪಲ್ ಸೇವೆಯ ಅಗತ್ಯತೆಗಳಿಗೆ ಅವಶ್ಯವಿಲ್ಲದ ಅಥವಾ ಯೋಗ್ಯನಲ್ಲದ ಯಾರೇ ಅಧಿಕಾರಿ ಅಥವಾ ನೌಕರನ ಸೇವೆಗಳನ್ನು, ಅವನ ನಿಯೋಜನೆಯ ನಿಬಂಧನೆಗಳ ಪ್ರಕಾರ ನೀಡಬೇಕಾದ ಅಂಥ ನೋಟೀಸ್ ನ್ನು ಅಂಥ ಅಧಿಕಾರಿ ಅಥವಾ ನೌಕರನಿಗೆ ಕೊಟ್ಟ ತರುವಾಯ ಮುಂದುವರಿಸದಿರುವುದು ಸಕ್ಷಮವಾಗಿರತಕ್ಕದ್ದು ಮತ್ತು ಯಾರ ಸೇವೆಗಳನ್ನು ಮುಂದುವರಿಸಿಲ್ಲವೋ ಆ ಪ್ರತಿಯೊಂದು ಅಧಿಕಾರಿ ಅಥವಾ ನೌಕರನು, ಯಾವ ಪಂಚಾಯಿತಿಯ ನಿಯೋಜನೆಯಲ್ಲಿ ಇದ್ದನೋ ಆ ಪಂಚಾಯಿತಿಯು ಅಸ್ತಿತ್ವದಲ್ಲಿರುವುದು ನಿಂತು ಹೋಗದಿದ್ದರೆ ಸೇವಾ ಅಸಮರ್ಥತೆಯ

ಕಾರಣದಿಂದ ಅವನು ಪಡೆಯಲು ಅಥವಾ ಸ್ವೀಕರಿಸಲು ಹೇಗೆ ಹಕ್ಕುಳ್ಳವನಾಗಿರುತ್ತಿದ್ದನೋ ಹಾಗೆ ರಜೆ, ನಿವೃತ್ತಿ ವೇತನ, ಭವಿಷ್ಯನಿಧಿ ಮತ್ತು ಉಪದಾನಕ್ಕೆ ಹಕ್ಕುಳ್ಳವನಾಗಿರತಕ್ಕದ್ದು;

1.2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಹೆಚ್) ಅಂಥ ದಿನಾಂಕದಂದು ಪಂಚಾಯಿತಿಯ ಮುಂದೆ ಇತ್ಯರ್ಥದಲ್ಲಿರುವ ಎಲ್ಲಾ ವ್ಯವಹಣೆಗಳನ್ನು ಮುನ್ಸಿಪಲ್ ಕೌನ್ಸಿಲ್ ಗೆ ವರ್ಗಾಯಿಸಿರುವುದಾಗಿ ಭಾವಿಸತಕ್ಕದ್ದು ಮತ್ತು ಮುಂದುವರಿಸತಕ್ಕದ್ದು;

(ಐ) ಯಾರೇ ಪ್ರಾಧಿಕಾರಿಯ ಮುಂದೆ ಇತ್ಯರ್ಥದಲ್ಲಿರುವ ಎಲ್ಲಾ ಅಪೀಲುಗಳನ್ನು ಕಾರ್ಯಸಾಧ್ಯವಾದಷ್ಟುಮಟ್ಟಿಗೆ ಅವುಗಳನ್ನು ದಾಖಲು ಮಾಡಿದಾಗ [1][ಚಿಕ್ಕನಗರ ಪ್ರದೇಶ][1]ದಲ್ಲಿ ಅಂಥ ಸ್ಥಳೀಯ ಪ್ರದೇಶವನ್ನು ಸೇರಿಸಲಾಗಿದ್ದರೆ ಹೇಗೆ ವಿಲೆ ಮಾಡಲಾಗುತ್ತಿತ್ತೋ ಹಾಗೆ ವಿಲೆ ಮಾಡತಕ್ಕದ್ದು; ಮತ್ತು

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಜೆ) ಸದರಿ ದಿನಾಂಕದಂದು ಇತ್ಯರ್ಥದಲ್ಲಿರುವ, ಪಂಚಾಯಿತಿಯು ಹೂಡಿದ ಅಥವಾ ಪಂಚಾಯಿತಿಯ ಪರವಾಗಿ ಹೂಡಲಾದ, ಎಲ್ಲಾ ಪ್ರಾಸಿಕ್ಯೂಷನ್ ನನ್ನು ಮತ್ತು ಪಂಚಾಯಿತಿಯು ಅಥವಾ ಪಂಚಾಯಿತಿಯ ವಿರುದ್ಧ ಅಥವಾ ಆ ಪಂಚಾಯಿತಿಯ ಯಾರೇ ಅಧಿಕಾರಿಯು ಅಥವಾ ಅವನ ವಿರುದ್ಧ ಹೂಡಿದ ಎಲ್ಲಾ ದಾವೆಗಳನ್ನು ಅಥವಾ ಕಾನೂನು ವ್ಯವಹರಣೆಗಳನ್ನು, ಅಂಥ ಪ್ರಾಸಿಕ್ಯೂಷನ್‌ಗಳನ್ನು, ದಾವೆಗಳನ್ನು ಅಥವಾ ವ್ಯವಹರಣೆಗಳನ್ನು ಹೂಡಿದ್ದಾಗ, 1[ಚಿಕ್ಕನಗರ ಪ್ರದೇಶ]1 ದಲ್ಲಿ ಅಂಥ ಸ್ಥಳೀಯ ಪ್ರದೇಶವನ್ನು ಸೇರಿಸದಿದ್ದರೆ ಹೇಗೆ ಮುನ್ಸಿಪಲ್ ಕೌನ್ಸಿಲ್ ಮುಂದುವರಿಸುತ್ತಿತ್ತೊ ಅಥವಾ ಅದರ ವಿರುದ್ಧ ಮುಂದುವರಿಸಲಾಗುತ್ತಿತ್ತೊ ಹಾಗೆ ಮುಂದುವರಿಸತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

358. ಮಧ್ಯಕಾಲೀನ ಮುನ್ಸಿಪಲ್ ಕೌನ್ಸಿಲ್‌ನ ಸದಸ್ಯರುಗಳ ಪದಾವಧಿ ಮತ್ತು ಅವರ ಇತರ ಅಧಿಕಾರಗಳು.- (1) ಸರ್ಕಾರವು, ಮಧ್ಯಕಾಲೀನ ಮುನ್ಸಿಪಲ್ ಕೌನ್ಸಿಲ್ ನ್ನು ರಚಿಸಿದ ದಿನಾಂಕದಿಂದ [1][ಆರು ತಿಂಗಳಿಗೆ][1] ಮೀರದ ಅವಧಿಯೊಳಗೆ, ಹೊಸ ಮುನ್ಸಿಪಲ್ ಕೌನ್ಸಿಲ್ ನ ಕೌನ್ಸಿಲರ್ ಗಳ ಸಂಖ್ಯೆಯನ್ನು ಮತ್ತು ಅದಕ್ಕಾಗಿ ಚುನಾವಣೆಗಳನ್ನು ನಡೆಸುವ ಉದ್ದೇಶಕ್ಕಾಗಿ 11ನೇ ಪ್ರಕರಣಕ್ಕನುಸಾರವಾಗಿ ಕ್ರಮವನ್ನು ಕೈಗೊಳ್ಳತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಮಧ್ಯಕಾಲೀನ ಮುನ್ಸಿಪಲ್ ಕೌನ್ಸಿಲ್ ಕೌನ್ಸಿಲರ್ ಗಳು ಹೊಸ ಮುನ್ಸಿಪಲ್ ಕೌನ್ಸಿಲ್ ನ ಮೊದಲ ಸಭೆಯ ದಿನಾಂಕದ ನಿಕಟಪೂರ್ವದ ದಿನಾಂಕದವರೆಗೆ ಪದಧಾರಣೆ ಮಾಡತಕ್ಕದ್ದು.

(3) ಮಧ್ಯಕಾಲೀನ ಮುನ್ಸಿಪಲ್ ಕೌನ್ಸಿಲ್‌ನ ಪದದಲ್ಲಿನ ಯಾವುದೇ ಖಾಲಿ ಹುದ್ದೆಯನ್ನು ಅನುಕೂಲಕರವಾಗಬಹುದಾದಷ್ಟು ಬೇಗ, ಸರ್ಕಾರವು ನೇಮಕಾತಿ ಮೂಲಕ ಭರ್ತಿ ಮಾಡತಕ್ಕದ್ದು.

(4) ಮಧ್ಯಕಾಲೀನ ಮುನ್ಸಿಪಲ್ ಕೌನ್ಸಿಲ್ ನಲ್ಲಿ ನಿಹಿತವಾಗಿರುವ ದರಗಳ, ತೆರಿಗೆಗಳ ಮತ್ತು ಫೀಜುಗಳ, ಎಲ್ಲಾ ಬಾಕಿಗಳು, ಈ ಅಧಿನಿಯಮದ ಮೇರೆಗೆ ಅಂಥ ದರಗಳನ್ನು ಮತ್ತು ಫೀಜುಗಳನ್ನು ವಿಧಿಸಲಾಗದಿದ್ದಾಗ್ಯೂ VII ನೇ ಅಧ್ಯಾಯದ ಮೇರೆಗೆ ತೆರಿಗೆಯನ್ನು ವಸೂಲು ಮಾಡಬಹುದಾದಂಥ ರೀತಿಯಲ್ಲಿಯೇ ವಸೂಲ್ಮಾಡಬಹುದಾದಂಥವು ಆಗಿರತಕ್ಕದ್ದು.

(5) ಇತರ ವಿಷಯಗಳ ಬಗ್ಗೆ, ಈ ಅಧಿನಿಯಮದ ಉಪಬಂಧಗಳು ಮಧ್ಯಕಾಲೀನ ಮುನ್ಸಿಪಲ್ ಕೌನ್ಸಿಲ್ ಮತ್ತು ಅದರ ಕೌನ್ಸಿಲರ್ ಗಳಿಗೆ ಯಥೋಚಿತ ವ್ಯತ್ಯಾಸಗಳೊಡನೆ ಅನ್ವಯವಾಗತಕ್ಕದ್ದು.

359. [1][ಪಂಚಾಯಿತಿ ಪ್ರದೇಶವನ್ನು ಚಿಕ್ಕ ನಗರ ಪ್ರದೇಶದಲ್ಲಿ][1] ವಿಲೀನಗೊಳಿಸುವುದರ ಪರಿಣಾಮ.- (1) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದಾಗ್ಯೂ, [1][ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993][1] (ಇಲ್ಲಿ ಇನ್ನು ಮುಂದೆ ಈ ಪ್ರಕರಣದಲ್ಲಿ ಸದರಿ ಸ್ಥಳೀಯ ಪ್ರದೇಶವೆಂದು ಉಲ್ಲೇಖಿಸಲಾಗಿದೆ)[1][4ನೇ ಪ್ರಕರಣದ ಮೇರೆಗಿನ ಅಧಿಸೂಚನೆ][1]ಯಿಂದಾಗಿ ಯಾವುದೇ ಸ್ಥಳೀಯ ಪ್ರದೇಶವು ಪಂಚಾಯತ್ ಪ್ರದೇಶವಾಗಿರುವುದು ನಿಂತುಹೋದರೆ ಮತ್ತು [1][ಚಿಕ್ಕನಗರ ಪ್ರದೇಶ][1]ದಲ್ಲಿ ವಿಲೀನಗೊಂಡರೆ ಕೆಳಕಂಡ ಪರಿಣಾಮಗಳು ಉಂಟಾಗತಕ್ಕದ್ದು, ಎಂದರೆ:-

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಎ) [1][ಗ್ರಾಮ ಪಂಚಾಯಿತಿ ನಿಧಿಯ][1] ಮತ್ತು ಸದರಿ ಸ್ಥಳೀಯ ಪ್ರದೇಶದ [2][ಗ್ರಾಮ ಪಂಚಾಯಿತಿಗೆ ಸೇರಿದ][2] ಪಂಚಾಯಿತಿಗೆ (ಇಲ್ಲಿ ಇನ್ನು ಮುಂದೆ ಪಂಚಾಯಿತಿಯೆಂದು ಉಲ್ಲೇಖಿಸಲಾಗಿದೆ) ಸೇರಿದ ಸ್ಥತ್ತಿನ (ದರಗಳ, ತೆರಿಗೆಗಳ ಮತ್ತು ಫೀಜುಗಳ ಬಾಕಿಗಳನ್ನೊಳಗೊಂಡು) ವೆಚ್ಚ ಮಾಡದೆ ಉಳಿದಿರುವ ಶಿಲ್ಕು, ಮತ್ತು ಅಂಥ ಅಧಿಸೂಚನೆಗೆ ಮುಂಚೆ ಪಂಚಾಯಿತಿಯಲ್ಲಿ ನಿಹಿತವಾಗಿ ಎಲ್ಲಾ ಹಕ್ಕುಗಳು ಮತ್ತು ಅಧಿಕಾರಗಳು ಅವುಗಳಿಗೆ ಸಂಬಂಧಿಸುವ ಋಣಭಾರಗಳಿಗೆ ಮತ್ತು ಹೊಣೆಗಾರಿಕೆಗಳಿಗೊಳಪಟ್ಟು ಅಂಥ [1][ಚಿಕ್ಕನಗರ ಪ್ರದೇಶದ][1] ಮುನ್ಸಿಪಲ್ ಕೌನ್ಸಿಲ್‌ನಲ್ಲಿ ಮುನ್ಸಿಪಲ್ ನಿಧಿಯಾಗಿ (ಇನ್ನು ಮುಂದೆ ಮುನ್ಸಿಪಲ್ ಕೌನ್ಸಿಲ್ ಎಂದು ಉಲ್ಲೇಖಿಸಲಾಗಿದೆ) ನಿಹಿತವಾಗತಕ್ಕದ್ದು;

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2.1986ರ ಅಧಿನಿಯಮ 33ರ ಮೂಲಕ 7.10.1986 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಬಿ) ಸದರಿ ಸ್ಥಳೀಯ ಪ್ರದೇಶಕ್ಕೆ ಸಂಬಂಧಿಸಿದಂತೆ ಸದರಿ ದಿನಾಂಕದ ನಿಕಟ ಪೂರ್ವದಲ್ಲಿ [1][ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993][1]ರ ಮೇರೆಗೆ ಮಾಡಿದ, ಹೊರಡಿಸಿದ, ವಿಧಿಸಿದ, ಅಥವಾ ಮಂಜೂರು ಮಾಡಿದ ಯಾವುದೇ ನೇಮಕ, ಅಧಿಸೂಚನೆ, ನೋಟೀಸ್, ತೆರಿಗೆ, ಆದೇಶ, ಯೋಜನೆ, ಲೈಸೆನ್ಸ್,, ಅನುಮತಿ, ನಿಯಮ, ಬೈಲಾ ಅಥವಾ ನಮೂನೆಯು ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು ಮತ್ತು ಆ ಮುನ್ಸಿಪಲ್‌ಗೆ ಸಂಬಂಧಿಸಿದಂತೆ ಅಧಿನಿಯಮದ ಮೇರೆಗೆ ಮಾಡಿದ, ಹೊರಡಿಸಿದ, ವಿಧಿಸಿದ, ಅಥವಾ ಮಂಜೂರು ಮಾಡಿದ, ನೇಮಕ, ಅಧಿಸೂಚನೆ, ನೋಟೀಸ್, ತೆರಿಗೆ, ಆದೇಶ, ಯೋಜನೆ, ಲೈಸೆನ್ಸ್, ಅನುಮತಿ, ನಿಯಮ, ಬೈಲಾ ಅಥವಾ ನಮೂನೆಯ ಮೂಲಕ ರದ್ದುಪಡಿಸುವ ಅಥವಾ ಮಾರ್ಪಾಟು ಮಾಡುವವರೆಗೆ ಮಾಡಲಾಗಿದೆ, ಹೊರಡಿಸಲಾಗಿದೆ, ವಿಧಿಸಲಾಗಿದೆ ಅಥವಾ ಮಂಜೂರು ಮಾಡಲಾಗಿದೆ ಎಂದು ಭಾವಿಸತಕ್ಕದ್ದು;

1. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಸಿ) ಅಂಥ ಸ್ಥಳೀಯ ಪ್ರದೇಶಕ್ಕೆ ಸಂಬಂಧಿಸಿದಂತೆ ಸದರಿ ದಿನಾಂಕಕ್ಕೆ ನಿಕಟ ಪೂರ್ವದಲ್ಲಿ [1][ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993][1]ರ ಮೇರೆಗೆ ಮಾಡಿದ ಅಥವಾ ಅಧಿಪ್ರಮಾಣೀಕರಿಸಿದ ಎಲ್ಲಾ ಬಜೆಟ್ ಅಂದಾಜುಗಳು, ತೆರಿಗೆ ನಿರ್ಧರಣೆಗಳು, ತೆರಿಗೆ ನಿರ್ಧಾರಣಾ ಪಟ್ಟಿಗಳು, ಮೌಲ್ಯಮಾಪನಗಳು ಅಥವಾ ಅಳತೆಗಳನ್ನು ಈ ಅಧಿನಿಯಮದ ಮೇರೆಗೆ ಮಾಡಲಾಗಿದೆ ಅಥವಾ ಅಧಿಪ್ರಮಾಣೀಕರಿಸಲಾಗಿದೆ ಎಂದು ಭಾವಿಸತಕ್ಕದ್ದು;

1. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಡಿ) ಸದರಿ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಮತ್ತು ಸದರಿ ದಿನಾಂಕದಂದು ಇರುವ ಪಂಚಾಯಿತಿಯು ವಹಿಸಿದ ಅಥವಾ ಅದರ ಪರವಾಗಿ ವಹಿಸಿದ, ಎಲ್ಲಾ ಋಣಗಳು ಮತ್ತು ಹೊಣೆಗಳು ಮತ್ತು ಮಾಡಿಕೊಂಡ ಎಲ್ಲಾ ಕರಾರುಗಳು, ಈ ಅಧಿನಿಯಮದ ಮೇರೆಗೆ ಅದಕ್ಕೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಮುನ್ಸಿಪಲ್ ಕೌನ್ಸಿಲ್ ವಹಿಸಿದೆ ಅಥವಾ ಮಾಡಿದೆ ಎಂದು ಭಾವಿಸತಕ್ಕದ್ದು;

(ಇ) ಸದರಿ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಪಂಚಾಯಿತಿಯ ನಿಯೋಜನೆಯಲ್ಲಿರುವ ಎಲ್ಲಾ ಅಧಿಕಾರಿಗಳು ಮತ್ತು ನೌಕರರು ಈ ಅಧಿನಿಯಮದ ಮೇರೆಗೆ ಮುನ್ಸಿಪಲ್ ಕೌನ್ಸಿಲ್‌ನ ಅಧಿಕಾರಿಗಳಾಗಿರತಕ್ಕದ್ದು ಮತ್ತು ನೌಕರರಾಗಿರತಕ್ಕದ್ದು ಮತ್ತು ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಬೇರೆ ವ್ಯವಸ್ಥೆಯನ್ನು ಮಾಡುವವರೆಗೆ, ಅಂಥ ದಿನಾಂಕದಂದು ಅವರು ಹಕ್ಕುಳ್ಳವರಾಗಿದ್ದಂಥ ಸಂಬಳಗಳನ್ನು ಮತ್ತು ಭತ್ಯೆಗಳನ್ನು ಪಡೆಯತಕ್ಕದ್ದು ಮತ್ತು ಅವರು ಒಳಪಟ್ಟಿದ್ದಂಥ ಸೇವಾ ಷರತ್ತುಗಳಿಗೊಳಪಟ್ಟಿರತಕ್ಕದ್ದು:

ಪರಂತು, ಸರ್ಕಾರದ ಪೂರ್ವಮಂಜೂರಾತಿಗೊಳಪಟ್ಟು, ಮುನ್ಸಿಪಲ್ ನ ಕೌನ್ಸಿಲ್, ಯಾರು ಮುನ್ಸಿಪಲ್ ಸೇವಾ ಅಗತ್ಯಗಳಿಗೆ ಅವಶ್ಯವಿಲ್ಲವೆಂದು ಅಥವಾ ಯೋಗ್ಯನಲ್ಲನೆಂದು ಅಭಿಪ್ರಾಯಪಡುತ್ತದೋ ಆ ಯಾರೇ ಅಧಿಕಾರಿಯ ಅಥವಾ ನೌಕರನ ಸೇವೆಗಳನ್ನು ಅವನ ನಿಯೋಜನೆಯ ನಿಬಂಧನೆಗಳ ಪ್ರಕಾರ ನೀಡಬೇಕಾದ ಅಂಥ ನೋಟೀಸ್ ನ್ನು ಅಂಥ ಅಧಿಕಾರಿಗೆ ಅಥವಾ ನೌಕರನಿಗೆ ಕೊಟ್ಟ ತರುವಾಯ, ಮುಂದುವರಿಸದೆ ಇರುವುದಕ್ಕೆ ಸಕ್ಷಮವಾಗಿರತಕ್ಕದ್ದು ಮತ್ತು ಯಾರ ಸೇವೆಗಳನ್ನು ಬಿಟ್ಟುಬಿಡಲಾಗಿದೆಯೋ, ಆ

ಪ್ರತಿಯೊಂದು ಅಧಿಕಾರಿಯು ಮತ್ತು ನೌಕರನು ಯಾವ ಪಂಚಾಯಿತಿ ನಿಧಿ ಯೋಜನೆಯಲ್ಲಿ ಇದ್ದನೋ ಆ ಪಂಚಾಯಿತಿಯು ಅಸ್ತಿತ್ವದಲ್ಲಿರುವುದು ನಿಂತುಹೋಗಿರದಿದ್ದರೆ ಸೇವಾ ಅಸಮರ್ಥತೆಯ ಕಾರಣದಿಂದ ಪಡೆಯಲು ಅಥವಾ ಸ್ವೀಕರಿಸಲು, ಹೇಗೆ ಹಕ್ಕುಳ್ಳವನಾಗಿರುತ್ತಿದ್ದನೋ ಹಾಗೆ ರಜೆ, ನಿವೃತ್ತಿ ವೇತನ, ಭವಿಷ್ಯನಿಧಿ ಮತ್ತು ಉಪದಾನಕ್ಕೆ ಹಕ್ಕುಳ್ಳವನಾಗಿರತಕ್ಕದ್ದು;

(ಎಫ್) ಸದರಿ ದಿನಾಂಕದಂದು ಪಂಚಾಯಿತಿಯ ಮುಂದೆ ಇತ್ಯರ್ಥದಲ್ಲಿರುವ ಎಲ್ಲ ವ್ಯವಹರಣೆಗಳನ್ನು ಮುನ್ಸಿಪಲ್ ಕೌನ್ಸಿಲ್ ಗೆ ವರ್ಗಾಯಿಸಿರುವುದಾಗಿ ಭಾವಿಸತಕ್ಕದ್ದು ಮತ್ತು ಅವುಗಳನ್ನು ಮುಂದುವರಿಸತಕ್ಕದ್ದು;

(ಜಿ) ಯಾರೇ ಪ್ರಾಧಿಕಾರಿಯ ಮುಂದೆ ಇತ್ಯರ್ಥದಲ್ಲಿರುವ ಎಲ್ಲ ಅಪೀಲುಗಳನ್ನು ಕಾರ್ಯಸಾಧ್ಯವಾದಷ್ಟುಮಟ್ಟಿಗೆ, ಅವುಗಳನ್ನು ದಾಖಲು ಮಾಡಿದಾಗ, [1][ಚಿಕ್ಕನಗರ ಪ್ರದೇಶ][1] ದಲ್ಲಿ ಸದರಿ ಸ್ಥಳೀಯ ಪ್ರದೇಶವನ್ನು ಸೇರಿಸಲಾಗಿದ್ದಿದ್ದರೆ ಹೇಗೆ ವಿಲೆ ಮಾಡಲಾಗುತ್ತಿತ್ತೋ ಹಾಗೆ ವಿಲೆ ಮಾಡತಕ್ಕದ್ದು.

1. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಹೆಚ್) ಸದರಿ ದಿನಾಂಕದಂದು ಪಂಚಾಯಿತಿಯು ಹೂಡಿದ ಅಥವಾ ಪಂಚಾಯಿತಿ ಪರವಾಗಿ ಹೂಡಲಾದ ಎಲ್ಲಾ ಪ್ರಾಸಿಕ್ಯೂಷನ್‌ಗಳು ಮತ್ತು ಪಂಚಾಯಿತಿಯು ಹೂಡಿದ ಅಥವಾ ಪಂಚಾಯಿತಿಯ ವಿರುದ್ಧ ಅಥವಾ ಆ ಪಂಚಾಯಿತಿಯ ಯಾರೇ ಅಧಿಕಾರಿಯಿಂದ ಅಥವಾ ಅವನ ವಿರುದ್ಧ ಹೂಡಲಾದ ಎಲ್ಲಾ ದಾವೆಗಳನ್ನು ಅಥವಾ ಇತರ ಕಾನೂನು ವ್ಯವಹರಣೆಗಳನ್ನು, ಅಂಥ ಪ್ರಾಸಿಕ್ಯೂಷನ್‌ಗಳನ್ನು, ದಾವೆಗಳನ್ನು, ಅಥವಾ ವ್ಯವಹರಣೆಗಳನ್ನು ಹೂಡಿದ್ದಾಗ, [1][ಚಿಕ್ಕ ನಗರ ಪ್ರದೇಶ][1]ದಲ್ಲಿ ಸದರಿ ಸ್ಥಳೀಯ ಪ್ರದೇಶವನ್ನು ಸೇರಿಸಿದ್ದರೆ ಹೇಗೆ ಮುನ್ಸಿಪಲ್ ಕೌನ್ಸಿಲ್ ಮುಂದುವರಿಸುತ್ತಿತ್ತೊ ಅಥವಾ ಅದರ ವಿರುದ್ಧ ಮುಂದುವರಿಸಲಾಗುತ್ತಿತ್ತೋ ಹಾಗೆ ಮುಂದುವರಿಸತಕ್ಕದ್ದು;

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಐ) ಮುನ್ಸಿಪಲ್ ಕೌನ್ಸಿಲ್ ನಲ್ಲಿ ನಿಹಿತವಾಗಿರುವ ಎಲ್ಲಾ ದರಗಳ, ತೆರಿಗೆಗಳ ಮತ್ತು ಫೀಜುಗಳ ಎಲ್ಲಾ ಬಾಕಿಗಳು ಈ ಅಧಿನಿಯಮದ ಮೇರೆಗೆ ಅಂಥ ದರಗಳನ್ನು, ತೆರಿಗೆಗಳನ್ನು, ಫೀಜುಗಳನ್ನು ವಿಧಿಸಲಾಗದಿದ್ದಾಗ್ಯೂ ಅಧ್ಯಾಯ VIIರ ಮೇರೆಗೆ ತೆರಿಗೆ ವಸೂಲ್ಮಾಡಬಹುದಾದಂಥ ತೆರಿಗೆಯಂತೆ ಅದೇ ರೀತಿಯಲ್ಲಿ ವಸೂಲ್ಮಾಡತಕ್ಕದ್ದು; ಮತ್ತು

(ಜೆ) ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಮುನ್ಸಿಪಲ್ ಕೌನ್ಸಿಲ್ ನ್ನು ಪುನರ್ ರಚಿಸುವವರೆಗೆ, ಈ ಅಧಿನಿಯಮದಲ್ಲಿ ತದ್ವಿರುದ್ಧವಾದುದು ಏನೇ ಒಳಗೊಂಡಿದ್ದಾಗ್ಯೂ, ಸರ್ಕಾರವು ನಾಮನಿರ್ದೇಶನ ಮಾಡಿದ [1][ಚಿಕ್ಕನಗರ ಪ್ರದೇಶ][1] ದಲ್ಲಿ ವಿಲೀನಗೊಂಡಿರುವ ಸ್ಥಳೀಯ ಪ್ರದೇಶದಲ್ಲಿ ಸಾಮಾನ್ಯ ನಿವಾಸಿಯಾಗಿರುವ ಒಬ್ಬ ವ್ಯಕ್ತಿಯು, ಮುನ್ಸಿಪಲ್ ಕೌನ್ಸಿಲ್ ನ ಅಡಿಷನಲ್ ಕೌನ್ಸಿಲ್ ಆಗಿರತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

360. [1][ಪಂಚಾಯಿತಿ ಪ್ರದೇಶದ ಭಾಗವನ್ನು ಚಿಕ್ಕನಗರ ಪ್ರದೇಶ][1]ದಲ್ಲಿ ವಿಲೀನಗೊಳಿಸುವುದರ ಪರಿಣಾಮ.- ಗ್ರಾಮ ಪಂಚಾಯಿತಿಯ ಪರಿಮಿತಿಯೊಳಗಿನ ಪ್ರದೇಶದ ಯಾವುದೇ ಭಾಗವನ್ನು [1][ಚಿಕ್ಕನಗರ ಪ್ರದೇಶ][1] ದಲ್ಲಿ ಸೇರಿಸಿದರೆ, ಈ ಅಧಿನಿಯಮದಲ್ಲಿ ಅಥವಾ [1][ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993][1]ರಲ್ಲಿ ಏನೇ ಒಳಗೊಂಡಿದ್ದಾಗ್ಯೂ ಈ ಅಧಿನಿಯಮದ IVನೇ ಪ್ರಕರಣದ 3ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು ಕೆಳಕಂಡ ಪರಿಣಾಮಗಳು ಉಂಟಾಗತಕ್ಕದ್ದು, ಎಂದರೆ:-

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಎ) [1][ಗ್ರಾಮ ಪಂಚಾಯಿತಿಯಲ್ಲಿ ನಿಹಿತವಾಗಿರುವ ಗ್ರಾಮ ಪಂಚಾಯಿತಿ ನಿಧಿ ಮತ್ತು ಇತರ ಸ್ವತ್ತು][1] ಡೆಪ್ಯುಟಿ ಕಮಿಷನರನು, ಲಿಖಿತ ಆದೇಶದ ಮೂಲಕ ನಿರ್ದೇಶಿಸುವಷ್ಟರಮಟ್ಟಿಗೆ ಮುನ್ಸಿಪಲ್ ನಿಧಿಗೆ ವರ್ಗಾಯಿತವಾಗತಕ್ಕದ್ದು;

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಬಿ) [1][ಚಿಕ್ಕನಗರ ಪ್ರದೇಶ][1] ದಲ್ಲಿ ಸೇರಿರುವ ಪ್ರದೇಶದ ಯಾವುದೇ ಭಾಗದಲ್ಲಿ ಉದ್ಭವಿಸುವ ಅಥವಾ ಅದಕ್ಕೆ ಸಂಬಂಧಿಸಿದ ಸಿವಿಲ್ ಮತ್ತು ಕ್ರಿಮಿನಲ್ ವ್ಯವಹರಣೆಗಳು, ಕರಾರುಗಳು ಮತ್ತು ಇತರ ವಿಷಯಗಳಿಗೆ ಅಥವಾ ವಸ್ತುಗಳಿಗೆ (ತೆರಿಗೆಗಳು, ಫೀಜುಗಳು ಮತ್ತು ಉಪಕರಗಳು ಒಳಗೊಂಡಂತೆ) ಸಂಬಂಧಿಸಿದಂತೆ [1][ಗ್ರಾಮ ಪಂಚಾಯಿತಿ][1] ಯ ಹಕ್ಕುಗಳು ಮತ್ತು ಹೊಣೆಗಳು ಮುನ್ಸಿಪಲ್ ಕೌನ್ಸಿಲ್ ನಲ್ಲಿ ನಿಹಿತವಾಗತಕ್ಕದ್ದು ಮತ್ತು ಅಂಥ ಹಕ್ಕುಗಳನ್ನು ಮತ್ತು ಹೊಣೆಗಳನ್ನು ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ, ಬೈಲಾಗಳ ಮೇರೆಗೆ ಮುನ್ಸಿಪಲ್ ಕೌನ್ಸಿಲ್ ಜಾರಿಗೊಳಿಸಬಹುದು ಅಥವಾ ಅದರ ವಿರುದ್ಧ ಜಾರಿಗೊಳಿಸಬಹುದು;

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಸಿ) ಸರ್ಕಾರವು ಆದೇಶದ ಮೂಲಕ ನಿರ್ದೇಶಿಸಬಹುದಾದಂಥ [1][ಗ್ರಾಮ ಪಂಚಾಯಿತಿ][1] ಯ ಅಧಿಕಾರಿಗಳನ್ನು ಮತ್ತು ನೌಕರರನ್ನು ಮುನ್ಸಿಪಲ್ ಕೌನ್ಸಿಲಿಗೆ ವರ್ಗಾಯಿಸತಕ್ಕದ್ದು;

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಡಿ) ಸೇರಿಸಿದ ಪ್ರದೇಶವು, ಒಂದು ಸಾವಿರಕ್ಕಿಂತ ಕಡಿಮೆ ಇಲ್ಲದಷ್ಟು ಜನರು ವಾಸಿಸುವ ಪ್ರದೇಶವಾಗಿದ್ದರೆ, ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಮುನ್ಸಿಪಲ್ ಕೌನ್ಸಿಲ್ ನ್ನು ಪುನರ್ ರಚಿಸುವವರೆಗೆ, ಸರ್ಕಾರವು ನಾಮನಿರ್ದೇಶಿಸಿದ ಹಾಗೂ ಅಂಥ ಪ್ರದೇಶದ ಸಾಮಾನ್ಯ ನಿವಾಸಿಯಾಗಿರುವ ವ್ಯಕ್ತಿಯು, ಮುನ್ಸಿಪಲ್ ಕೌನ್ಸಿಲ್ ನ ಅಡಿಷನಲ್ ಕೌನ್ಸಿಲರ್ ನಾಗಿರತಕ್ಕದ್ದು.

361. [1][ಟೌನ್, ಮುನ್ಸಿಪಲ್ ಏರಿಯಾಗಳನ್ನು ಸಿಟಿ ಮುನ್ಸಿಪಲ್ ಪ್ರದೇಶ][1]ಗಳನ್ನಾಗಿ ಪರಿವರ್ತಿಸುವುದು.- (1) ಪ್ರಕರಣ 3 ರ (1)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು [1][ರಾಜ್ಯಪಾಲರು][1] ಯಾವುದೇ ಕಾಲದಲ್ಲಿ ಸಂಬಂಧಪಟ್ಟ ಮುನ್ಸಿಪಲ್ ಕೌನ್ಸಿಲ್ ನೊಂದಿಗೆ ಸಮಾಲೋಚಿಸಿದ ತರುವಾಯ ಮತ್ತು ಆಕ್ಷೇಪಣೆಗಳು ಯಾವುದಾದರೂ ಇದ್ದರೆ ಅವುಗಳನ್ನು ಪರ್ಯಾಲೋಚಿಸಿದ ತರುವಾಯ, ಯಾವುದೇ ಟೌನ್ [1][ಮುನ್ಸಿಪಲ್ ಏರಿಯಾ][1] ವನ್ನು [2][xxx][2] ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬೇಕಾದ ದಿನಾಂಕದಿಂದ ಜಾರಿಗೆ ಬರುವಂತೆ ಈ ಅಧಿನಿಯಮದ ಮೇರೆಗೆ ರಚಿಸಿದ [1][ಮುನ್ಸಿಪಲ್ ಏರಿಯಾ][1] ವಾಗಿರತಕ್ಕದ್ದೆಂದು ಅಧಿಸೂಚನೆ ಮೂಲಕ ಘೋಷಿಸಬಹುದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2.1966ರ ಅಧಿನಿಯಮ 34ರ ಮೂಲಕ 16.1.1967 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(2) ಟೌನ್[1][ಮುನ್ಸಿಪಲ್ ಏರಿಯಾ][1]ಗಳಿಗೆ ಸಂಬಂಧಿಸಿದ ಈ ಅಧಿನಿಯಮದ ಉಪಬಂಧಗಳು, ಘೋಷಣೆಯಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ (1)ನೇ ಉಪಪ್ರಕರಣದ ಮೇರೆಗೆ [1][ಸಿಟಿ ಮುನ್ಸಿಪಲ್ ಏರಿಯಾ][1] ವೆಂದು ಘೋಷಿಸಿದ [1][ಮುನ್ಸಿಪಲ್ ಏರಿಯಾ][1]ಕ್ಕೆ ಅನ್ವಯವಾಗತಕ್ಕದ್ದಲ್ಲ.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) ಸಿಟಿ[1][ಮುನ್ಸಿಪಲ್ ಏರಿಯಾ]1ವೆಂದು ಘೋಷಿಸಿದ [1][ಮುನ್ಸಿಪಲ್ ಏರಿಯಾ][1]ಕ್ಕೆ ಸಂಬಂಧಿಸಿದಂತೆ ಮಾಡಿದ, ಹೊರಡಿಸಿದ ಅಥವಾ ವಿಧಿಸಿದ ಯಾವುದೇ ನೇಮಕ, ಅಧಿಸೂಚನೆ, ನೋಟೀಸ್, ತೆರಿಗೆ, ಆದೇಶ, ಯೋಜನೆ, ಲೈಸೆನ್ಸ್, ಅನುಮತಿ, ನಿಯಮ, ಬೈಲಾ ಅಥವಾ ನಮೂನೆಯು ಮತ್ತು ಅಂಥ [1][ಮುನ್ಸಿಪಲ್ ಏರಿಯಾ][1]ಕ್ಕೆ ಸಂಬಂಧಿಸಿದಂತೆ ಇತರ ಯಾವುದೇ ಕಾನೂನಿನ ಮೇರೆಗೆ ಮಾಡಿದ ಅಥವಾ ಹೊರಡಿಸಿದ ಯಾವುದೇ ನೇಮಕ, ಅಧಿಸೂಚನೆ, ಆದೇಶ, ಯೋಜನೆ, ನಿಯಮ, ಬೈಲಾ ಅಥವಾ ನಮೂನೆಯು, ಜಾರಿಯಲ್ಲಿ ಮುಂದುವರಿಯತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ಮಾಡಿದ ಅಥವಾ ಹೊರಡಿಸಿದ ಅಥವಾ ವಿಧಿಸಿದ ಯಾವುದೇ ನೇಮಕ, ಅಧಿಸೂಚನೆ, ನೋಟೀಸ್, ತೆರಿಗೆ, ಆದೇಶ, ಯೋಜನೆ, ಲೈಸೆನ್ಸ್, ಅನುಮತಿ, ನಿಯಮ, ಬೈಲಾದ ಅಥವಾ ನಮೂನೆಯ ಮೂಲಕ ರದ್ದಾಗುವ ಹೊರತು ಮತ್ತು ಅಲ್ಲಿಯವರೆಗೆ ಈ ಅಧಿನಿಯಮದ ಉಪಬಂಧಗಳ ಮೇರೆಗೆ ಮಾಡಲಾಗಿದೆ ಅಥವಾ ವಿಧಿಸಲಾಗಿದೆ ಎಂದು ಭಾವಿಸತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(4) ಯಾವುದೇ ಟೌನ್ [1][ಮುನ್ಸಿಪಲ್ ಏರಿಯಾ]1ವನ್ನು ಸಿಟಿ1[ಮುನ್ಸಿಪಲ್ ಏರಿಯಾ]1ವಾಗಿ ರಚಿಸುವುದಕ್ಕೆ ಮುಂಚೆ 9ನೇ ಪ್ರಕರಣದಲ್ಲಿ ನಿಯಮಿಸಿದ ಪ್ರಕ್ರಿಯೆಯನ್ನು ಆದಷ್ಟು ಮಟ್ಟಿಗೆ ಅನುಸರಿಸತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(5) ಉಪಪ್ರಕರಣ (1) ರ ಮೇರೆಗೆ ಸಿಟಿ [1][ಮುನ್ಸಿಪಲ್ ಏರಿಯಾ]1 ವೆಂದು ಘೋಷಿತವಾದ [1][ಮುನ್ಸಿಪಲ್ ಏರಿಯಾ]1ವು ಮುನ್ಸಿಪಲ್ ಕೌನ್ಸಿಲ್ ನ ಸ್ವತ್ತುಗಳು, ಹಕ್ಕುಗಳು ಮತ್ತು ಹೊಣೆಗಳು, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಸದರಿ [1][ಮುನ್ಸಿಪಲ್ ಏರಿಯಾ]1ದ ಮುನ್ಸಿಪಲ್ ಕೌನ್ಸಿಲ್ ನಲ್ಲಿ ನಿಹಿತವಾಗತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

362. ಸಿಟಿ1[ಮುನ್ಸಿಪಲ್ ಏರಿಯಾಗಳನ್ನು ಟೌನ್ ಮುನ್ಸಿಪಲ್ ಏರಿಯಾ]1ಗಳನ್ನಾಗಿ ಪರಿವರ್ತಿಸುವುದು.- (1) [1][ರಾಜ್ಯಪಾಲ]1ರು ಯಾವುದೇ ಕಾಲದಲ್ಲಿ ಸಂಬಂಧಪಟ್ಟ ಮುನ್ಸಿಪಲ್ ಕೌನ್ಸಿಲ್ ನೊಡನೆ ಸಮಾಲೋಚಿಸಿದ ತರುವಾಯ ಮತ್ತು ಆಕ್ಷೇಪಣೆಗಳು ಯಾವುದಾದರೂ ಇದ್ದರೆ ಅವುಗಳನ್ನು ಪರಿಶೀಲಿಸಿದ ತರುವಾಯ, ಯಾವುದೇ ಸಿಟಿ1[ಮುನ್ಸಿಪಲ್ ಏರಿಯಾ]1 ವನ್ನು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ದಿನಾಂಕದಿಂದ ಜಾರಿಗೆ ಬರುವಂತೆ ಈ ಅಧಿನಿಯಮದ ಮೇರೆಗೆ ರಚಿತವಾದ ಟೌನ್1[ಮುನ್ಸಿಪಲ್ ಏರಿಯಾ]1ವಾಗಿರತಕ್ಕದ್ದೆಂದು ಅಧಿಸೂಚನೆಯ ಮೂಲಕ ಘೋಷಿಸಬಹುದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಸಿಟಿ1[ಮುನ್ಸಿಪಲ್ ಏರಿಯಾ]1ಗಳಿಗೆ ಸಂಬಂಧಿಸಿದ ಈ ಅಧಿನಿಯಮದ ಉಪಬಂಧಗಳು ಘೋಷಣೆಯಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ (1)ನೇ ಉಪಪ್ರಕರಣದ ಮೇರೆಗೆ ಟೌನ್1[ಮುನ್ಸಿಪಲ್ ಏರಿಯಾ] ವೆಂದು ಘೋಷಿಸಿದ [ಮುನ್ಸಿಪಲ್ ಏರಿಯಾ] ಕ್ಕೆ ಅನ್ವಯಿಸತಕ್ಕದ್ದಲ್ಲ.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) ಟೌನ್ [1][ಮುನ್ಸಿಪಲ್ ಏರಿಯಾ]1ವೆಂದು ಘೋಷಿಸಿದ [1][ಮುನ್ಸಿಪಲ್ ಏರಿಯಾ]1ಕ್ಕೆ ಸಂಬಂಧಿಸಿದಂತೆ ಹೊರಡಿಸಿದ ಅಥವಾ ವಿಧಿಸಿದ ಯಾವುದೇ ನೇಮಕ, ಅಧಿಸೂಚನೆ, ನೋಟೀಸ್, ತೆರಿಗೆ, ಆದೇಶ, ಯೋಜನೆ, ಲೈಸೆನ್ಸ್, ಅನುಮತಿ, ನಿಯಮ, ಬೈಲಾ ಅಥವಾ ನಮೂನೆಯು ಮತ್ತು ಅಂಥ ಟೌನ್ [1][ಮುನ್ಸಿಪಲ್ ಏರಿಯಾ]1ಕ್ಕೆ ಸಂಬಂಧಿಸಿದಂತೆ ಇತರ ಯಾವುದೇ ಕಾನೂನು ಮೇರೆಗೆ ಮಾಡಿದ ಅಥವಾ ಹೊರಡಿಸಿದ ಯಾವುದೇ ನೇಮಕ, ಅಧಿಸೂಚನೆ, ಆದೇಶ, ಯೋಜನೆ, ನಿಯಮ, ಬೈಲಾ ಅಥವಾ ನಮೂನೆಯು ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ಮಾಡಿದ ಅಥವಾ ಹೊರಡಿಸಿದ ಅಥವಾ ವಿಧಿಸಿದ ಯಾವುದೇ ನೇಮಕ, ಅಧಿಸೂಚನೆ, ನೋಟೀಸ್, ತೆರಿಗೆ, ಆದೇಶ, ಯೋಜನೆ, ಲೈಸೆನ್ಸ್, ಅನುಮತಿ, ನಿಯಮ, ಬೈಲಾü ಅಥವಾ ನಮೂನೆಯ ಮೂಲಕ ರದ್ದಾಗುವ ಹೊರತು ಮತ್ತು ಅಲ್ಲಿಯವರೆಗೆ ಈ ಅಧಿನಿಯಮದ ಉಪಬಂಧಗಳ ಮೇರೆಗೆ ಮಾಡಲಾಗಿದೆ, ಹೊರಡಿಸಲಾಗಿದೆ ಅಥವಾ ವಿಧಿಸಲಾಗಿದೆ ಎಂದು ಭಾವಿಸತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(4) ಯಾವುದೇ ಸಿಟಿ1[ಮುನ್ಸಿಪಲ್ ಏರಿಯಾ]1ವನ್ನು ಟೌನ್ [1][ಮುನ್ಸಿಪಲ್ ಏರಿಯಾ]1ವಾಗಿ ರಚಿಸುವುದಕ್ಕೆ ಮುಂಚೆ, 9ನೇ ಪ್ರಕರಣದಲ್ಲಿ ನಿಯಮಿಸಿದ ಪ್ರಕ್ರಿಯೆಯನ್ನು ಆದಷ್ಟುಮಟ್ಟಿಗೆ ಅನುಸರಿಸತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(5) ಉಪಪ್ರಕರಣ (1) ರ ಮೇರೆಗೆ ಟೌನ್1[ಮುನ್ಸಿಪಲ್ ಏರಿಯಾ]1ವೆಂದು ಘೋಷಿಸಿದ [1][ಮುನ್ಸಿಪಲ್ ಏರಿಯಾ]1ದ ಮುನ್ಸಿಪಲ್ ಕೌನ್ಸಿಲ್ ನ ಸ್ವತ್ತುಗಳು, ಹಕ್ಕುಗಳು ಮತ್ತು

ಹೊಣೆಗಾರಿಕೆಗಳು, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಸದರಿ [1][ಮುನ್ಸಿಪಲ್ ಏರಿಯಾ][1]ದಲ್ಲಿ ನಿಹಿತವಾಗತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

363. [1][ಹೊಂದಿಕೊಂಡಿರುವ ಎರಡು ಚಿಕ್ಕನಗರ ಪ್ರದೇಶಗಳನ್ನು][1] ವಿಲೀನಗೊಳಿಸುವುದು.- (1) ಸರ್ಕಾರವು ಯಾವುದೇ ಕಾಲದಲ್ಲಿ ಸಂಬಂಧಪಟ್ಟ ಮುನ್ಸಿಪಲ್ ಕೌನ್ಸಿಲ್‌ಗಳೊಂದಿಗೆ ಸಮಾಲೋಚಿಸಿದ, ಮತ್ತು ಆಕ್ಷೇಪಣೆಗಳು ಯಾವುದಾದರೂ ಇದ್ದರೆ ಅವುಗಳನ್ನು ಪರ್ಯಾಲೋಚಿಸಿದ ತರುವಾಯ, ಅಧಿಸೂಚನೆ ಮೂಲಕ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬೇಕಾದ ದಿನಾಂಕದಿಂದ ಮತ್ತು ಆ ಹೆಸರಿನಿಂದ ಜಾರಿಗೆ ಬರುವಂತೆ [1][ಅಕ್ಕಪಕ್ಕದಲ್ಲಿರುವ ಎರಡು ಚಿಕ್ಕನಗರ ಪ್ರದೇಶ][1]ಗಳನ್ನು ವಿಲೀನಗೊಂಡಿವೆಯೆಂದು ಘೋಷಿಸಬಹುದು ಮತ್ತು ಈ ಅಧಿನಿಯಮದ ಮೇರೆಗೆ ರಚಿಸಿದ, ಒಂದೇ [1][ಚಿಕ್ಕನಗರ ಪ್ರದೇಶ][1] ವೆಂದು ಅದನ್ನು ಭಾವಿಸತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) [1][ವಿಲೀನಗೊಳಿಸಲಾದ ಚಿಕ್ಕನಗರ ಪ್ರದೇಶ][1]ಗಳ ಸಂಬಂಧದಲ್ಲಿ ಮಾಡಿದ, ಹೊರಡಿಸಿದ ಅಥವಾ ವಿಧಿಸಿದ ಯಾವುದೇ ನೇಮಕ, ಅಧಿಸೂಚನೆ, ನೋಟೀಸ್, ತೆರಿಗೆ, ಆದೇಶ, ಯೋಜನೆ, ಲೈಸೆನ್ಸ್, ಅನುಮತಿ, ನಿಯಮ, ಬೈಲಾ ಅಥವಾ ನಮೂನೆಯು ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು ಮತ್ತು (1)ನೇ ಉಪಪ್ರಕರಣದ ಮೇರೆಗಿನ ಘೋಷಣೆಯ ಮೂಲಕ ರಚಿಸಿದ [1][ಮುನ್ಸಿಪಲ್ ಏರಿಯಾ][1]ದ ಸಂಬಂಧದಲ್ಲಿ ಮಾಡಲಾಗಿದೆ, ಹೊರಡಿಸಲಾಗಿದೆ ಅಥವಾ ವಿಧಿಸಲಾಗಿದೆ ಎಂದು ಭಾವಿಸತಕ್ಕದ್ದು:

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಪರಂತು, [1][ರಾಜ್ಯಪಾಲರು][1] ಅಧಿಸೂಚನೆಯ ಮೂಲಕ (1)ನೇ ಉಪಪ್ರಕರಣದ ಮೇರೆಗಿನ ಘೋಷಣೆಯಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಿಂದ ಮೇಲೆ ಹೇಳಿದ ಅಂಥ ನೇಮಕಗಳು, ಅಧಿಸೂಚನೆಗಳು, ನೋಟೀಸ್‌ಗಳು, ತೆರಿಗೆಗಳು, ಆದೇಶಗಳು, ಯೋಜನೆಗಳು, ನಿಯಮಗಳು, ಬೈಲಾ ಮತ್ತು ನಮೂನೆಗಳು ಮಾತ್ರ ಅಂಥ ಘೋಷಣೆಯ ಮೂಲಕ ರಚಿತವಾದ [1][ಮುನ್ಸಿಪಲ್ ಏರಿಯಾ][1]ಕ್ಕೆ ಅನ್ವಯವಾಗತಕ್ಕದ್ದು ಮತ್ತು ಹಿಂದೆ ಹೇಳಿದ ಸದರಿ ನೇಮಕಗಳು, ನೋಟೀಸ್‌ಗಳು, ಅಧಿಸೂಚನೆಗಳು, ಆದೇಶಗಳು, ತೆರಿಗೆಗಳು, ಯೋಜನೆಗಳು, ನಿಯಮಗಳು, ಬೈಲಾಗಳು ಮತ್ತು ನಮೂನೆಗಳು ಮಾತ್ರ ಅಂಥ ಘೋಷಣೆಯ ಮೂಲಕ ರಚಿತವಾದ [1][ಮುನ್ಸಿಪಲ್ ಏರಿಯಾ][1]ಕ್ಕೆ ಅನ್ವಯಿಸತಕ್ಕದ್ದೆಂದು ಮತ್ತು ಸದರಿ ನೇಮಕಗಳು, ಅಧಿಸೂಚನೆಗಳು, ನೋಟೀಸ್‌ಗಳು, ತೆರಿಗೆಗಳು, ಆದೇಶಗಳು, ಯೋಜನೆಗಳು, ನಿಯಮಗಳು, ಬೈಲಾಗಳು ಮತ್ತು ನಮೂನೆಗಳು ಆ ತರುವಾಯ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದೆಂದು ನಿರ್ದೇಶಿಸಬಹುದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) ಉಪಪ್ರಕರಣ (1)ರ ಮೇರೆಗೆ [1][ವಿಲೀನಗೊಳಿಸಿದ ಚಿಕ್ಕನಗರ ಪ್ರದೇಶಗಳ][1] ಮತ್ತು ಘೋಷಿಸಿದ ಮುನ್ಸಿಪಲ್ ಕೌನ್ಸಿಲ್‌ಗಳ ಸ್ವತ್ತುಗಳು, ಹಕ್ಕುಗಳು ಮತ್ತು ಹೊಣೆಗಾರಿಕೆಗಳು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಸದರಿ ಒಂದೇ [1][ಚಿಕ್ಕನಗರ ಪ್ರದೇಶ][1] ದ ಮುನ್ಸಿಪಲ್ ಕೌನ್ಸಿಲ್ ನಲ್ಲಿ ನಿಹಿತವಾಗತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(4) ಈ ಅಧಿನಿಯಮದಲ್ಲಿ ತದ್ವಿರುದ್ಧವಾಗಿ ಏನೇ ಅಡಕವಾಗಿದ್ದಾಗ್ಯೂ,-

(ಎ) ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಮುನ್ಸಿಪಲ್ ಕೌನ್ಸಿಲ್‌ನ ಪುನರ್‌ರಚನೆಯಾಗುವವರೆಗೆ,-

(i) ವಿಲೀನಗೊಂಡ ಮುನ್ಸಿಪಲ್ ಕೌನ್ಸಿಲ್, ವಿಲೀನಗೊಂಡ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಪದಧಾರಣ ಮಾಡಿದ್ದ, ಎರಡು ಮುನ್ಸಿಪಲ್ ಕೌನ್ಸಿಲ್‌ಗಳ ಕೌನ್ಸಿಲರ್ ಗಳನ್ನು ಒಳಗೊಂಡಿರತಕ್ಕದ್ದು;

(ii) ವಿಲೀನಗೊಂಡ ದಿನಾಂಕದ ನಿಕಟಪೂರ್ವದಲ್ಲಿ, ಆ ಎರಡು ಮುನ್ಸಿಪಲ್ ಕೌನ್ಸಿಲ್‌ಗಳ ಅಧ್ಯಕ್ಷರ ಮತ್ತು ಉಪಾಧ್ಯಕ್ಷ ಹುದ್ದೆಗಳನ್ನು ಧಾರಣ ಮಾಡಿದ್ದ ವ್ಯಕ್ತಿಗಳ ಪೈಕಿಯಿಂದ ಸರ್ಕಾರವು ಕ್ರಮವಾಗಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರೆಂದು ನಾಮನಿರ್ದೇಶನ ಮಾಡಿದ್ದ ಇಬ್ಬರು ವ್ಯಕ್ತಿಗಳನ್ನು (ಬಿ) ಖಂಡದ (1)ನೇ ಉಪಖಂಡದ ಮೇರೆಗೆ ಚುನಾವಣೆ ನಡೆಸುವವರೆಗೆ, ವಿಲೀನಗೊಂಡ ಮುನ್ಸಿಪಲ್ ಕೌನ್ಸಿಲ್‌ನ ಅಧ್ಯಕ್ಷ ಮತ್ತು ಉಪಾಧ್ಯಕ್ಷನಾಗಿರತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ಸಂದರ್ಭಾನುಸಾರ ಮುನ್ಸಿಪಲ್ ಕೌನ್ಸಿಲ್ ನ ಅಧ್ಯಕ್ಷ, ಉಪಾಧ್ಯಕ್ಷ ಅಥವಾ ಕೌನ್ಸಿಲರ್ ಗಳ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಎಲ್ಲ ಕರ್ತವ್ಯಗಳಿಗೆ ಮತ್ತು ಹೊಣೆಗಾರಿಕೆಗಳಿಗೆ ಒಳಪಟ್ಟಿರತಕ್ಕದ್ದು.

(ಬಿ) ಖಂಡ (ಎ)ಯ ಮೇರೆಗೆ ರಚಿತವಾದ ಮುನ್ಸಿಪಲ್ ಕೌನ್ಸಿಲ್ ವಿಲೀನಗೊಂಡ ದಿನಾಂಕದ ತರುವಾಯ ತರುವಾಯದ ತನ್ನ ಮೊದಲ ಸಭೆಯಲ್ಲಿ,-

(i) ತನ್ನ ಸದಸ್ಯರ ಪೈಕಿ ಒಬ್ಬರನ್ನು ಅಧ್ಯಕ್ಷನನ್ನಾಗಿ ಮತ್ತು ಅಧ್ಯಕ್ಷನ ಹೊರತಾಗಿ ಇತರ ಯಾರೇ ಒಬ್ಬರು ಸದಸ್ಯನನ್ನು ಉಪಾಧ್ಯಕ್ಷನನ್ನಾಗಿ ಚುನಾಯಿಸತಕ್ಕದ್ದು;

(ii) 63ನೇ ಪ್ರಕರಣದ ಮೇರೆಗೆ ಸಮಿತಿಗಳ ಸದಸ್ಯರುಗಳನ್ನು ಚುನಾಯಿಸತಕ್ಕದ್ದು.

(ಸಿ) ಖಂಡಗಳು (ಎ) ಮತ್ತು (ಬಿ) ಯಲ್ಲಿ ಉಲ್ಲೇಖಿಸಿದ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಕೌನ್ಸಿಲರ್ ಗಳ ಪದಾವಧಿಯು 16, 40, 41 ಮತ್ತು 42ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು ಸರ್ಕಾರವು ಅಧಿಸೂಚನೆpಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕಗಳಂದು ಕೊನೆಗೊಳ್ಳತಕ್ಕದ್ದು.

(ಡಿ) ಸರ್ಕಾರವು,-

(i) (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ನಿಯಮಗಳು, ಬೈಲಾಗಳು, ಅಧಿಸೂಚನೆಗಳು ಮತ್ತು ಆದೇಶಗಳನ್ನು ವಿಲೀನಗೊಂಡ [1][ಮುನ್ಸಿಪಲ್ ಏರಿಯಾ][1] ಕ್ಕೆ ಅನ್ವಯಿಸುವುದಕ್ಕೆ ಸಂಬಂಧಿಸಿದಂತೆ ಅವುಗಳನ್ನು ಅಳವಡಿಸಿಕೊಳ್ಳುವಾಗ ಮತ್ತು ಮಾರ್ಪಾಟು ಮಾಡುವಾಗ ಅವುಗಳಿಂದ ಬಿಟ್ಟು ಬಿಡುವುದಕ್ಕಾಗಿ, ಅವುಗಳಿಗೆ ಸೇರಿಸುವುದಕ್ಕಾಗಿ;pp

1. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ii) ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ, ಅದರ ಪುನರ್ ರಚನೆಯಾಗುವವರೆಗೆ ವಿಲೀನಗೊಂಡ ಮುನ್ಸಿಪಲ್ ಕೌನ್ಸಿಲ್ ನ ಕಾರ್ಯನಿರ್ವಹಣೆಗೆ ಸಂಬಂಧಪಟ್ಟಂತೆ ಉದ್ಭವಿಸುವ ತೊಂದರೆಗಳನ್ನು ನಿವಾರಿಸುವುದಕ್ಕಾಗಿ

- ಅವಶ್ಯವೆಂದು ಮತ್ತು ವಿಹಿತವೆಂದು ಅದಕ್ಕೆ ಕಂಡುಬರುವ ಉಪಬಂಧಗಳನ್ನು ಅಧಿಸೂಚನೆ ಮೂಲಕ ರಚಿಸಬಹುದು.

[1][363ಎ. xxx][1]

1. 1986ರ ಅಧಿನಿಯಮ 83ರ ಮೂಲಕ 7.10.1986ರಿಂದ ಜಾರಿಗೆ ಬರುವಂತೆ ಹಾಗೂ 1986ರ ಅಧಿನಿಯಮ 33ರ 7.10.1986 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

364. ತೊಂದರೆಗಳ ನಿವಾರಣೆ.- ಈ ಅಧ್ಯಾಯದ ಪೂರ್ವೋಕ್ತ ಪ್ರಕರಣಗಳ ಉಪಬಂಧಗಳನ್ನು ಜಾರಿಗೆ ತರುವಲ್ಲಿ ಯಾವುವೇ ತೊಂದರೆಗಳು ಉದ್ಭವಿಸಿದರೆ, ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಆದೇಶವನ್ನು ಪ್ರಕಟಿಸಿ ತೊಂದರೆಯನ್ನು ನಿವಾರಿಸಲು, ಸಂದರ್ಭವು ಅಗತ್ಯಪಡಿಸಬಹುದಾದಂತೆ ತನಗೆ ಅಗತ್ಯವೆಂದು ಕಂಡುಬರುವ ಯಾವುದನ್ನಾದರೂ ಮಾಡಬಹುದು.

[1][ಅಧ್ಯಾಯ-XVI-ಎ

1. 2003ರ ಅಧಿನಿಯಮ 24ರ ಮೂಲಕ 21.8.2003 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

364(ಎ). ಕೈಗಾರಿಕಾ ಪಟ್ಟಣ ಪ್ರದೇಶದ ವಿಶಿಷ್ಟ ವಿವರಣೆಗಳು.- ರಾಜ್ಯಪಾಲರು, ಈ ಮುಂದಿನ ಒಂದು ಅಥವಾ ಹೆಚ್ಚಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು,-

(ಎ) ಪ್ರದೇಶದ ವಿಸ್ತೀರ್ಣ ಹಾಗೂ ಯಾವುದೇ ಪ್ರದೇಶದಲ್ಲಿ ಕೈಗಾರಿಕಾ ಕಾರ್ಯಸಂಸ್ಥೆಗಳು ಒದಗಿಸಿರುವ ಅಥವಾ ಒದಗಿಸಲು ಉದ್ದೇಶಿಸಿವೆ ಎಂದು ಭಾವಿಸಲಾದ ಮುನ್ಸಿಪಲ್ ಸೌಕರ್ಯಗಳು;

(ಬಿ) ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಅಧಿನಿಯಮ, 1966 ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ಸರ್ಕಾರವು ಅಥವಾ ಸರ್ಕಾರದ ಯಾವುದೇ ಇತರ ಏಜೆನ್ಸಿಯು ಸ್ಥಾಪಿಸಿರುವ ಸಾರ್ವಜನಿಕ ಮೂಲ ಸೌಕರ್ಯ;

(ಸಿ) ಆ ಪ್ರದೇಶದಲ್ಲಿ ಸಾರ್ವಜನಿಕ ಮೂಲ ಸೌಕರ್ಯಗಳನ್ನು ಒದಗಿಸುವ ಕೈಗಾರಿಕೆ ಮತ್ತು ವಸತಿ ಕಟ್ಟಡಗಳು ಅಥವಾ ಇತರ ಕಟ್ಟಡಗಳು;

(ಡಿ) ಸ್ಥಳೀಯ ಸಂಸ್ಥೆಗಳನ್ನು ಮತ್ತು ಮುನ್ಸಿಪಲ್ ಸೌಕರ್ಯಗಳನ್ನು ಒದಗಿಸಿರುವುದಕ್ಕಾಗಿ ತೆರಿಗೆ ಮತ್ತು ತೆರಿಗೇತರ ಮೂಲಗಳಿಂದ ಆ ಪ್ರದೇಶದಲ್ಲಿ ಸೃಜನೆಯಾಗಿರುವ ಆದಾಯ

- ಇಂಥ ಪ್ರದೇಶಗಳನ್ನು ಕೈಗಾರಿಕಾ ಪಟ್ಟಣ ಪ್ರದೇಶವೆಂದು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದು.

(2) ಉಪ-ಪ್ರಕರಣ (1) ರ ಅಡಿಯಲ್ಲಿ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯು, ಅದು ಯಾವ ಪ್ರದೇಶಕ್ಕೆ ಸಂಬಂಧಿಸಿದೆಯೋ ಆ ಪ್ರದೇಶದ ಪರಿಮಿತಿಗಳನ್ನು ನಿರ್ಧರಿಸತಕ್ಕದ್ದು:

ಪರಂತು, ಯಾವುದೇ ಅಂಥ ಅಧಿಸೂಚನೆಯನ್ನು,-

(i) ಸಂಬಂಧಪಟ್ಟ ಯಾವುದೇ ಸ್ಥಳೀಯ ಪ್ರಾಧಿಕಾರ ಇದ್ದಲ್ಲಿ, ಅದರೊಂದಿಗೆ ಯಾವುದಾದರೂ ಸಂಸ್ಥೆಯು ಸಮಾಲೋಚಿಸಿದ್ದ ಹೊರತು; ಮತ್ತು

(ii) ಅದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ ಅದರ ಕರಡನ್ನು ರಾಜಪತ್ರದಲ್ಲಿ ಪ್ರಕಟಿಸಿ, ಪ್ರಕಟಣೆಯ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ, ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿದ್ದ ಹೊರತು

- ಹೊರಡಿಸತಕ್ಕದ್ದಲ್ಲ.

364(ಬಿ). ಕೈಗಾರಿಕಾ ಪಟ್ಟಣ ಪ್ರದೇಶ ಪ್ರಾಧಿಕಾರದ ರಚನೆ.- (1) ಪ್ರತಿಯೊಂದು ಕೈಗಾರಿಕಾ ಪ್ರದೇಶದಲ್ಲೂ ಒಂದು ಕೈಗಾರಿಕಾ ಪ್ರದೇಶ ಪ್ರಾಧಿಕಾರವು ಇರತಕ್ಕದ್ದು. ಅಂಥ ಪ್ರತಿಯೊಂದು ಪ್ರಾಧಿಕಾರವು"---ಕೈಗಾರಿಕಾ ಪ್ರದೇಶ ಪ್ರಾಧಿಕಾರ" ಎಂಬ ಹೆಸರಿನ ಒಂದು ನಿಕಾಯ ನಿಗಮವಾಗಿರತಕ್ಕದ್ದು ಹಾಗೂ ಸ್ವತ್ತನ್ನು ಸ್ವಾಧೀನಪಡಿಸಿಕೊಳ್ಳಲು, ಹೊಂದಲು ಮತ್ತು ವಿಲೆ ಮಾಡುವ ಅಧಿಕಾರದೊಂದಿಗೆ ನಿರಂತರ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮೊಹರನ್ನು ಹೊಂದಿರತಕ್ಕದ್ದು ಮತ್ತು ಕರಾರುಗಳನ್ನು ಮಾಡಿಕೊಳ್ಳಲು ಮತ್ತು ಆ ಹೆಸರಿನ ಮೂಲಕ ದಾವೆ ಹೂಡಬಹುದು ಮತ್ತು ದಾವೆಗೆ ಒಳಗಾಗಬಹುದು.

(2) ಕೈಗಾರಿಕಾ ಪ್ರದೇಶ ಪ್ರಾಧಿಕಾರವು ಈ ಮುಂದಿನ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:-

(ಎ) ಖಂಡ (ಬಿ)ಯಲ್ಲಿ ಉಲ್ಲೇಖಿಸಿರುವ ಸದಸ್ಯರ ಪೈಕಿಯಿಂದ, ನಿರ್ದಿಷ್ಟಪಡಿಸಿದ ರೀತಿಯಲ್ಲಿ ಚುನಾಯಿತನಾದ ಒಬ್ಬರು ಅಧ್ಯಕ್ಷರು;

(ಬಿ) ಕೈಗಾರಿಕಾ ಪಟ್ಟಣ ಪ್ರದೇಶವು ಒಂದಕ್ಕಿಂತ ಹೆಚ್ಚು ಕಾರ್ಯಸಂಸ್ಥೆಗಳನ್ನು ಒಳಗೊಂಡಿದ್ದ ಸಂದರ್ಭದಲ್ಲಿ ಕೈಗಾರಿಕಾ ಕಾರ್ಯಸಂಸ್ಥೆಯ ಮಾಲೀಕರ ಪೈಕಿ ಚುನಾಯಿತರಾದ ಐದು ಜನ ಸದಸ್ಯರುಗಳನ್ನು ಮತ್ತು ಕೈಗಾರಿಕಾ ಪಟ್ಟಣ ಪ್ರದೇಶವು ಒಂದೇ ಕೈಗಾರಿಕಾ ಕಾರ್ಯಸಂಸ್ಥೆಯನ್ನು ಒಳಗೊಂಡಿದ್ದ ಸಂದರ್ಭದಲ್ಲಿ ಮೂವರು ಸದಸ್ಯರನ್ನು ಒಳಗೊಂಡಿರತಕ್ಕದ್ದು:

ಪರಂತು, ಈ ಖಂಡದ ಮೇರೆಗೆ ಮೊದಲ ಕೈಗಾರಿಕಾ ಪ್ರದೇಶ ಪ್ರಾಧಿಕಾರದ ಸದಸ್ಯರುಗಳನ್ನು ಸರ್ಕಾರವು ನಾಮನಿರ್ದೇಶಿಸತಕ್ಕದ್ದು.

(ಸಿ) ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆಯಿಂದ ಒಬ್ಬ ಪ್ರತಿನಿಧಿಯನ್ನು ಸರ್ಕಾರವು ನಾಮನಿರ್ದೇಶಿಸತಕ್ಕದ್ದು;

(ಡಿ) ನಗರಾಭಿವೃದ್ಧಿ ಇಲಾಖೆಯಿಂದ ಒಬ್ಬ ಪ್ರತಿನಿಧಿಯನ್ನು ಸರ್ಕಾರವು ನಾಮನಿರ್ದೇಶಿಸತಕ್ಕದ್ದು;

(ಇ) ಸಹಾಯಕ ನಿರ್ದೇಶಕರ ಶ್ರೇಣಿಗೆ ಕಡಿಮೆಯಲ್ಲದ ಒಬ್ಬ ಅಧಿಕಾರಿಯನ್ನು ಪಟ್ಟಣ ಯೋಜನಾ ಇಲಾಖೆಯಿಂದ ಸರ್ಕಾರವು ನಾಮನಿರ್ದೇಶಿಸತಕ್ಕದ್ದು;

(ಎಫ್) ಕೈಗಾರಿಕಾ ಪಟ್ಟಣ ಪ್ರದೇಶದ ನಿವಾಸಿಗಳ ಪೈಕಿ ಪೌರಾಡಳಿತ, ನಗರ-ನಿರ್ವಹಣೆ ಅಥವಾ ಪಟ್ಟಣ ಯೋಜನೆಯಲ್ಲಿ ವಿಶೇಷ ಜ್ಞಾನವನ್ನು ಮತ್ತು ಅನುಭವವನ್ನು ಹೊಂದಿರುವ ಒಬ್ಬ ವ್ಯಕ್ತಿಯನ್ನು ಸರ್ಕಾರವು ನಾಮನಿರ್ದೇಶಿಸತಕ್ಕದ್ದು;

(3) ಖಂಡ (ಸಿ), (ಡಿ) ಮತ್ತು (ಇ) ಯಲ್ಲಿ ಉಲ್ಲೇಖಿಸಲಾಗಿರುವ ಸದಸ್ಯರು, ಅಧ್ಯಕ್ಷರ ಚುನಾವಣೆಯಲ್ಲಿ ಮತದಾನದ ಹಕ್ಕನ್ನು ಹೊಂದಿರತಕ್ಕದ್ದಲ್ಲ.

364(ಸಿ). ಅಧ್ಯಕ್ಷರ ಹಾಗೂ ಸದಸ್ಯರುಗಳ ಪದಾವಧಿ.- (1) ಅನ್ಯಥಾ ಉಪಬಂಧಿಸಿರುವುದನ್ನುಳಿದು ಅಧ್ಯಕ್ಷರ ಹಾಗೂ ಚುನಾಯಿತ ಸದಸ್ಯರುಗಳ ಪದಾವಧಿಯು ಮೂರು ವರ್ಷಗಳಾಗಿರತಕ್ಕದ್ದು.

(2) ಅನ್ಯಥಾ ಉಪಬಂಧಿಸಿರುವುದನ್ನುಳಿದು ನಾಮನಿರ್ದೇಶಿತ ಸದಸ್ಯರುಗಳ ಪದಾವಧಿಯು, ಸರ್ಕಾರದ ಇಚ್ಛೆಗೊಳಪಟ್ಟು ಮೂರು ವರ್ಷಗಳಾಗಿರತಕ್ಕದ್ದು.

364(ಡಿ). ಕೈಗಾರಿಕಾ ಪಟ್ಟಣ ಪ್ರದೇಶ ಪ್ರಾಧಿಕಾರದ ವ್ಯವಹಾರ ನಿರ್ವಹಣೆ.- (1) ಕೈಗಾರಿಕಾ ಪ್ರದೇಶ ಪ್ರಾಧಿಕಾರವು, ಸಾಮಾನ್ಯವಾಗಿ ಅದರ ಕಾರ್ಯನಿರ್ವಹಣೆಗಾಗಿ ತಿಂಗಳಿಗೆ ಕನಿಷ್ಠ ಒಂದು ಸಭೆಯನ್ನು ನಡೆಸತಕ್ಕದ್ದು.

(2) ಪ್ರಾಧಿಕಾರದ ಸಭೆಯಲ್ಲಿನ ಕೋರಂ ಗಾಗಿ ಐದು ಜನರಿರತಕ್ಕದ್ದು.

(3) ಅಂಥ ಸಭೆಯಲ್ಲಿ ಯಾವುದೇ ಕಾರ್ಯನಿರ್ವಹಣೆಗೆ ಸಂಬಂಧಿಸಿದ ನಿರ್ಧಾರಗಳನ್ನು ಸರಳ ಬಹುಮತದಿಂದ ಕೈಗೊಳ್ಳತಕ್ಕದ್ದು.

(4) ಪ್ರಾಧಿಕಾರದ ಯಾವುದೇ ಕ್ರಮವನ್ನು ಅಥವಾ ವ್ಯವಹರಣೆಯನ್ನು ಪ್ರಾಧಿಕಾರದಲ್ಲಿ ಯಾವುದೇ ಖಾಲಿ ಸ್ಥಾನವಿರುವ ಅಥವಾ ಪ್ರಾಧಿಕಾರದ ರಚನೆಯಲ್ಲಿ ದೋಷವಿರುವ ಅಥವಾ ಯಾರೇ ಸದಸ್ಯರ ನಾಮನಿರ್ದೇಶನದಲ್ಲಿ ಯಾವುದೇ ದೋಷ ಇರುವ ಅಥವಾ ವಿಷಯದ ಗುಣಾವಗುಣಗಳಿಗೆ ಬಾಧಕವಾಗದ ಪ್ರಾಧಿಕಾರದ ಪ್ರಕ್ರಿಯೆಯಲ್ಲಿನ ಯಾವುದೇ ಕ್ರಮದೋಷ ಇರುವ ಕಾರಣಮಾತ್ರದಿಂದಲೇ ಪ್ರಶ್ನಿಸತಕ್ಕದ್ದಲ್ಲ ಅಥವಾ ಅಮಾನ್ಯವಾಗತಕ್ಕದ್ದಲ್ಲ.

364(ಇ). ದಾಖಲೆಗಳ ಅಧಿಪ್ರಮಾಣೀಕರಣ.- ಕೈಗಾರಿಕಾ ಪಟ್ಟಣ ಪ್ರದೇಶದ ಪ್ರಾಧಿಕಾರದ ಎಲ್ಲ ದಾಖಲೆಗಳನ್ನು ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಯ ಅಥವಾ ಆ ಬಗ್ಗೆ ಪ್ರಾಧಿಕಾರದ ಯಾರೇ ಇತರ ಅಧಿಕೃತ ಅಧಿಕಾರಿಯು ಸಹಿ ಮಾಡಿ ಅಧಿಪ್ರಮಾಣೀಕರಿಸತಕ್ಕದ್ದು.

364(ಎಫ್). ಕೈಗಾರಿಕಾ ಪಟ್ಟಣ ಪ್ರದೇಶ ಪ್ರಾಧಿಕಾರದ ಪ್ರಕಾರ್ಯಗಳು ಮತ್ತು ಕರ್ತವ್ಯಗಳು.- ಇದು, ಕೈಗಾರಿಕಾ ಪಟ್ಟಣ ಪ್ರದೇಶದ ವ್ಯಾಪ್ತಿಯಲ್ಲಿ, ಈ ಮುಂದಿನ ಪ್ರತಿಯೊಂದು ವಿಷಯಗಳ ಬಗ್ಗೆ ಕಾನೂನುಸಮ್ಮತವಾಗಿ ಬಳಸಬಹುದಾದ ಮತ್ತು ಕೈಗೊಳ್ಳಬಹುದಾದ ಯಾವುದೇ ಸಾಧನಗಳ ಅಥವಾ ಸಂಪನ್ಮೂಲಗಳ ಮೂಲಕ ಸಾಕಷ್ಟು ಉಪಬಂಧ ಕಲ್ಪಿಸಲು ಪ್ರಾಧಿಕಾರದ ಮೇಲೆ ಅಧಿಕಾರವನ್ನು ಹೊಂದಿರತಕ್ಕದ್ದು, ಎಂದರೆ:-

(1) ಕಟ್ಟಡಗಳನ್ನು ಸಕ್ರಮಗೊಳಿಸುವುದು ಮತ್ತು ನಿರ್ಮಿಸುವುದು;

(2) ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ಯೋಜನೆಯನ್ನು ರೂಪಿಸುವುದು;

(3) ರಸ್ತೆಗಳು ಮತ್ತು ಸೇತುವೆಗಳನ್ನು ನಿರ್ಮಿಸುವುದು;

(4) ಗೃಹಕೃತ್ಯ, ಕೈಗಾರಿಕೆ ಹಾಗೂ ವಾಣಿಜ್ಯ ಉದ್ದೇಶಗಳಿಗಾಗಿ ನೀರು ಸರಬರಾಜು ಮಾಡುವುದು;

(5) ಸಾರ್ವಜನಿಕ, ಆರೋಗ್ಯ, ನೈರ್ಮಲ್ಯ, ನಿರ್ಮಲೀಕರಣ ಮತ್ತು ಘನತ್ಯಾಜ್ಯ ನಿರ್ವಹಣೆ ಮತ್ತು ಅಗ್ನಿಶಾಮಕ ಸೇವೆಗಳು;

(6) ನಗರ – ಅರಣ್ಯ ಬೆಳೆಸುವುದು, ವಿಜ್ಞಾನ, ಪರಿಸರ ಸಂರಕ್ಷಣೆ ಮತ್ತು ಜೀವಪರಿಸರ ಅಂಶಗಳ ಸಂವರ್ಧನೆ;

(7) ವಿಕಲಚೇತನರು ಹಾಗೂ ಬುದ್ಧಿಮಾಂದ್ಯರನ್ನು ಒಳಗೊಂಡಂತೆ, ಸಮಾಜದ ದುರ್ಬಲ ವರ್ಗಗಳ ಹಿತಾಸಕ್ತಿಯನ್ನು ಕಾಪಾಡುವುದು ಮತ್ತು ಕೊಳಗೇರಿಗಳನ್ನು ಸುಧಾರಿಸುವುದು;

(8) ಉದ್ಯಾನವನಗಳು, ತೋಟ ಮತ್ತು ಆಟದ ಮೈದಾನಗಳಂಥ ನಗರ ಸೌಕರ್ಯಗಳಿಗಾಗಿ ಹಾಗೂ ಸೌಲಭ್ಯಗಳಿಗಾಗಿ ಉಪಬಂಧ ಕಲ್ಪಿಸುವುದು;

(9) ಸ್ಮಶಾನಗಳು ಮತ್ತು ವಿದ್ಯುತ್ ಚಿತಾಗಾರಗಳ ಸುಧಾರಣೆ;

(10) ರಸ್ತೆ ದೀಪಗಳು, ವಾಹನಗಳ ನಿಲುಗಡೆಗಾಗಿ ಕಾದಿರಿಸಿರುವ ನಿವೇಶನಗಳು, ಬಸ್ ನಿಲ್ದಾಣಗಳನ್ನು ಒಳಗೊಂಡಿರುವ ಸಾರ್ವಜನಿಕ ಸೌಕರ್ಯಗಳನ್ನು ಹಾಗೂ ಸಾರ್ವಜನಿಕ ಅನುಕೂಲತೆಗಳನ್ನು ಒದಗಿಸಿಕೊಡುವುದು;

(11) ಕಸಾಯಿಖಾನೆಗಳು ಹಾಗೂ ಚರ್ಮ ಹದ ಮಾಡುವ ಕಾರ್ಖಾನೆಗಳನ್ನು ನಿಯಂತ್ರಿಸುವುದು;

(12) ನಿಯಮಿಸಬಹುದಾದಂಥ ಯಾವುದೇ ಇತರ ವಿಷಯ.

364(ಜಿ). ಕೈಗಾರಿಕಾ ಪಟ್ಟಣ ಪ್ರದೇಶ ಪ್ರಾಧಿಕಾರದ ಅಧಿಕಾರಗಳು.- ಕೈಗಾರಿಕಾ ಪಟ್ಟಣ ಪ್ರದೇಶ ಪ್ರಾಧಿಕಾರವು, 364(ಎಫ್) ಪ್ರಕರಣದ ಮೇರೆಗೆ ಅದರ ಪ್ರಕಾರ್ಯಗಳನ್ನು ಕಾರ್ಯಗತಗೊಳಿಸಲು, 175 ರಿಂದ 275ರ ವರೆಗಿನ ಎರಡೂ ಪ್ರಕರಣಗಳು ಒಳಗೊಂಡಂತೆ ಆ ಪ್ರಕರಣಗಳ ಮೇರೆಗೆ ಮುನ್ಸಿಪಲ್ ಕೌನ್ಸಿಲ್‌ನಲ್ಲಿ ನಿಹಿತಗೊಂಡಿರುವ ಅಂಥ ಎಲ್ಲ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

(2) ಕೈಗಾರಿಕಾ ಪಟ್ಟಣ ಪ್ರದೇಶ ಪ್ರಾಧಿಕಾರವು, ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಸೂಕ್ತವೆಂದು ಭಾವಿಸಬಹುದಾದ, 364(ಪಿ) ಪ್ರಕರಣದ ಮೇರೆಗಿನ ಅಧಿಕಾರಗಳನ್ನು ಹೊರತುಪಡಿಸಿ, ಅದರ ಅಧಿಕಾರಗಳನ್ನು ಆದೇಶದ ಮೂಲಕ ಪ್ರತ್ಯಾಯೋಜಿಸತಕ್ಕದ್ದು.

364(ಹೆಚ್). ಈ ಅಧಿನಿಯಮದ ಉಪಬಂಧಗಳನ್ನು ಕೈಗಾರಿಕಾ ಪಟ್ಟಣ ಪ್ರದೇಶ ಪ್ರಾಧಿಕಾರಕ್ಕೆ ವಿಸ್ತರಿಸುವುದಕ್ಕೆ ಅಧಿಕಾರ.- (1) ಸರ್ಕಾರವು, ಈ ಅಧಿನಿಯಮದ ಉಪಬಂಧಗಳನ್ನು,-

(ಎ) ಮುನ್ಸಿಪಲ್ ಕೌನ್ಸಿಲ್‌ನ ಪರಿಮಿತಿಯಲ್ಲಿರುವ ಪ್ರದೇಶಕ್ಕೆ ಅನ್ವಯವಾಗುವ ಈ ಅಧಿನಿಯಮದ ಅಥವಾ ಯಾವುದೇ ಪ್ರಕರಣದ ಭಾಗದ ಯಾವುದೇ ಉಪಬಂಧಗಳನ್ನು;

(ಬಿ) ಮುನ್ಸಿಪಲ್ ಕೌನ್ಸಿಲ್‌ನ ಪರಿಮಿತಿಯಲ್ಲಿರುವ ಯಾವುದೇ ಪ್ರದೇಶದಲ್ಲಿ ಜಾರಿಯಲ್ಲಿರುವ ಯಾವುದೇ ನಿಯಮ ಅಥವಾ ಬೈಲಾವನ್ನು

-ಜಾರಿಗೊಳಿಸುವುದಕ್ಕಾಗಿ ಅವಶ್ಯಕವೆಂದು ಸರ್ಕಾರವು ಪರಿಗಣಿಸಬಹುದಾದಂಥ ಷರತ್ತುಗಳು ಹಾಗೂ ಮಾರ್ಪಾಟುಗಳಿಗೊಳಪಟ್ಟು, ಅಧಿಸೂಚನೆಯ ಮೂಲಕ ಕೈಗಾರಿಕಾ ಪಟ್ಟಣ ಪ್ರದೇಶಕ್ಕೆ ಅನ್ವಯಿಸಬಹುದು.

(2) ಈ ಅಧಿನಿಯಮದ ಅಥವಾ ಯಾವುದೇ ನಿಯಮ ಅಥವಾ ಬೈಲಾದ ಯಾವುದೇ ಉಪಬಂಧವನ್ನು ಯಾವುದೇ ಕೈಗಾರಿಕಾ ಪಟ್ಟಣ ಪ್ರದೇಶಕ್ಕೆ ಮಾರ್ಪಾಟು ಸಹಿತವಾಗಿ ಅಥವಾ ಮಾರ್ಪಾಟು ಇಲ್ಲದೇ ಅನ್ವಯಿಸಿದಾಗ, ಅಧಿನಿಯಮದ ಅಥವಾ ಅದರ ಮೇರೆಗಿನ ನಿಯಮಗಳ ಅಥವಾ ಬೈಲಾಗಳ ಅಂಥ ಉಪಬಂಧಗಳು, ಕೈಗಾರಿಕಾ ಪ್ರದೇಶವು, ಮುನ್ಸಿಪಲ್ ಕೌನ್ಸಿಲ್‌ನ ವ್ಯಾಪ್ತಿಯೊಳಗಿನ, ಮುನ್ಸಿಪಲ್ ಪ್ರದೇಶವಾಗಿದ್ದರೆ ಮತ್ತು ಮುನ್ಸಿಪಲ್ ಕೌನ್ಸಿಲ್‌ನ ಅಧಿಕಾರಗಳು ಮತ್ತು ಕರ್ತವ್ಯಗಳು ಕೈಗಾರಿಕಾ ಪ್ರದೇಶ ಪ್ರಾಧಿಕಾರದಲ್ಲಿ ನಿಹಿತವಾಗಿದ್ದರೆ ಹೇಗೆ ಅನ್ವಯವಾಗುತ್ತಿದ್ದವೋ ಹಾಗೆ ಬೇರೆ ಉದ್ದೇಶ ಕಂಡು ಬಂದ ಹೊರತು ಜಾರಿಗೊಳ್ಳತಕ್ಕದ್ದು.

364(ಐ). ಕೈಗಾರಿಕಾ ಪಟ್ಟಣ ಪ್ರದೇಶದ ನಿಧಿಗಳು, ಬಜೆಟ್ ಹಾಗೂ ಲೆಕ್ಕಪತ್ರಗಳು.- (1) ಪ್ರಾಧಿಕಾರವು ತನ್ನದೇ ಆದ ನಿಧಿಗಳನ್ನು ಹೊಂದಿರತಕ್ಕದ್ದು ಹಾಗೂ ಅದನ್ನು ನಿರ್ವಹಿಸತಕ್ಕದ್ದು ಮತ್ತು ಅದಕ್ಕೆ ಜಮೆಯಾಗಬಹುದಾದ,-

(ಎ) ಅನುದಾನಗಳ, ಸಾಲಗಳ, ಮುಂಗಡಗಳ ಅಥವಾ ಇತರ ರೀತಿಯ ಮೂಲಕ ಸರ್ಕಾರದಿಂದ ಪ್ರಾಧಿಕಾರವು ಸ್ವೀಕರಿಸಿರುವ ಎಲ್ಲಾ ಹಣವನ್ನು ಅಥವಾ ಇತರ ಮೂಲಗಳಿಂದ ಸಾಲವಾಗಿ ಪಡೆದ ಹಣವನ್ನು;

(ಬಿ) ಈ ಅಧಿನಿಯಮದ ಮೇರೆಗೆ ಅಥವಾ ಕೈಗಾರಿಕಾ ಪಟ್ಟಣ ಪ್ರದೇಶಕ್ಕೆ ಅನ್ವಯವಾಗುವ ಯಾವುದೇ ಕಾನೂನಿನ ಉಪಬಂಧಗಳ ಮೇರೆಗೆ ಪ್ರಾಧಿಕಾರದಿಂದ ಪಡೆದ ಎಲ್ಲಾ ತೆರಿಗೆಗಳನ್ನು, ಲೆವಿಗಳನ್ನು, ಸುಂಕಗಳನ್ನು, ಶುಲ್ಕಗಳನ್ನು, ಬಾಡಿಗೆಯನ್ನು, ಲಾಭಗಳನ್ನು, ಖರ್ಚುಗಳನ್ನು ಮತ್ತು ವೆಚ್ಚಗಳನ್ನು;

(ಸಿ) ಭೂಮಿ, ಕಟ್ಟಡಗಳು ಹಾಗೂ ಚರ ಆಸ್ತಿಗಳ ವಿಲೆಯಿಂದ ಮತ್ತು ಇತರ ವ್ಯವಹಾರಗಳಿಂದ ಪ್ರಾಧಿಕಾರದಿಂದ ಸ್ವೀಕರಿಸಿದ ಎಲ್ಲಾ ಹಣವನ್ನು,

- ಹೊಂದಿರತಕ್ಕದ್ದು.

(2) ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಪ್ರಾಧಿಕಾರದ ಅಧಿಕಾರಗಳನ್ನು ಚಲಾಯಿಸುವುದಕ್ಕೆ ಹಾಗೂ ಅದಕ್ಕೆ ವಿಧಿಸಿದ ಕರ್ತವ್ಯಗಳನ್ನು ಪಾಲಿಸುವುದಕ್ಕೆ ಸಂಬಂಧಿಸಿದಂತೆ ಪ್ರಾಧಿಕಾರದ ವೆಚ್ಚಗಳನ್ನು ಭರಿಸಲು ನಿಧಿಯನ್ನು ವಿನಿಯೋಗಿಸತಕ್ಕದ್ದು.

(3) ಪ್ರಾಧಿಕಾರವು, ಮುಂಬರುವ ಹಣಕಾಸು ವರ್ಷಕ್ಕಾಗಿ, ಪ್ರತಿ ವರ್ಷದ ಜನವರಿ ತಿಂಗಳಿನ ಮೂವತ್ತೊಂದನೇ ದಿನಾಂಕಕ್ಕೆ ಮುಂಚಿತವಾಗಿ ಪ್ರಾಧಿಕಾರದ ಆದಾಯ ಮತ್ತು ವೆಚ್ಚದ ವಿವರವಾದ ಅಂದಾಜುಗಳನ್ನು ಒಳಗೊಂಡಿರುವ ಬಜೆಟ್ಟನ್ನು ಸಿದ್ಧಪಡಿಸತಕ್ಕದ್ದು ಹಾಗೂ ಅದನ್ನು ಸರ್ಕಾರದ ಅನುಮೋದನೆಗಾಗಿ ಒಪ್ಪಿಸತಕ್ಕದ್ದು.

(4) ಪ್ರಾಧಿಕಾರವು, ಸರಿಯಾದ ಲೆಕ್ಕಪತ್ರಗಳನ್ನು ಹಾಗೂ ಇತರ ಸಂಬಂಧಪಟ್ಟ ದಾಖಲೆಗಳನ್ನು ನಿರ್ವಹಿಸತಕ್ಕದ್ದು ಮತ್ತು ನಿಯಮಿಸಬಹುದಾದಂಥ ನಮೂನೆಯಲ್ಲಿ ಲೆಕ್ಕಪತ್ರಗಳ ವಾರ್ಷಿಕ ತಃಖ್ತೆಯನ್ನು ಸಿದ್ಧಪಡಿಸತಕ್ಕದ್ದು.

(5) ಪ್ರಾಧಿಕಾರದ ಲೆಕ್ಕಪತ್ರಗಳನ್ನು ಪ್ರತಿವರ್ಷವೂ ರಾಜ್ಯ ಲೆಕ್ಕಪತ್ರಗಳ ಇಲಾಖೆಯಿಂದ ಅಥವಾ 290ನೇ ಪ್ರಕರಣದ ಮೇರೆಗೆ ಸರ್ಕಾರದಿಂದ ನಿಯೋಜಿಸಿದ ಏಜೆನ್ಸಿಯಿಂದ ಲೆಕ್ಕಪರಿಶೋಧನೆ ಮಾಡಿಸತಕ್ಕದ್ದು. 391 ನೇ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಕೈಗಾರಿಕಾ ಪಟ್ಟಣ ಪ್ರದೇಶ ಪ್ರಾಧಿಕಾರಕ್ಕೆ ಅನ್ವಯವಾಗತಕ್ಕದ್ದು.

364(ಜೆ). ಸ್ವತ್ತು ತೆರಿಗೆಯ ವಿಧಿಸುವಿಕೆ ಮತ್ತು ಸಂಗ್ರಹಣೆ.- (1) ನಿಯಮಿಸಬಹುದಾದಂಥ ರಿಯಾಯಿತಿಗಳಿಗೊಳಪಟ್ಟು, ಕೈಗಾರಿಕಾ ಪಟ್ಟಣ ಪ್ರದೇಶ ಪ್ರಾಧಿಕಾರವು, ಕೈಗಾರಿಕಾ ಪ್ರದೇಶಗಳ ವ್ಯಾಪ್ತಿಯಲ್ಲಿರುವ ಎಲ್ಲಾ ಕಟ್ಟಡಗಳ ಮೇಲೆ ಹಾಗೂ ಭೂಮಿಗಳ ಮೇಲೆ ಆಸ್ತಿ ತೆರಿಗೆಯನ್ನು ವಿಧಿಸತಕ್ಕದ್ದು. ಕಟ್ಟಡಗಳು ಹಾಗೂ ಭೂಮಿಯ ಮೇಲಿನ ಆಸ್ತಿ ತೆರಿಗೆಯನ್ನು ವಿಧಿಸುವುದಕ್ಕಾಗಿ ಹಾಗೂ ಸಂಗ್ರಹಿಸುವುದಕ್ಕಾಗಿ 94 ರಿಂದ 115 ನೇ ಪ್ರಕರಣಗಳ ಉಪಬಂಧಗಳನ್ನು ಯಥೋಚಿತ ಬದಲಾವಣೆಗಳೊಂದಿಗೆ ಕೈಗಾರಿಕಾ ಪಟ್ಟಣ ಪ್ರದೇಶಕ್ಕೆ ಅನ್ವಯಿಸತಕ್ಕದ್ದು.

(2) ಕೈಗಾರಿಕಾ ಪಟ್ಟಣ ಪ್ರದೇಶ ಪ್ರಾಧಿಕಾರವು ಸಂಗ್ರಹಿಸಿರುವ ಆಸ್ತಿ ತೆರಿಗೆಯಲ್ಲಿ ಶೇಕಡಾ ಮೂವತ್ತರಷ್ಟನ್ನು ಯಾವ ಕೈಗಾರಿಕಾ ಪಟ್ಟಣ ಪ್ರದೇಶದಿಂದ ಪ್ರತ್ಯೇಕಿಸಲಾಗಿದೆಯೋ ಆ ಪ್ರದೇಶದ ಸ್ಥಳೀಯ ಪ್ರಾಧಿಕಾರಕ್ಕೆ ಕಳಹಿಸತಕ್ಕದ್ದು.

364(ಕೆ). ಅಧಿಕಾರಿಗಳ ಹಾಗೂ ಸಿಬ್ಬಂದಿ ವರ್ಗದ ನೇಮಕದ ಅಧಿಕಾರ, ಸೇವಾ ಷರತ್ತುಗಳು.- (1) ಕೈಗಾರಿಕಾ ಪಟ್ಟಣ ಪ್ರದೇಶ ಪ್ರಾಧಿಕಾರವು, ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾಂಥ ಅರ್ಹತೆಯನ್ನು ಪಡೆದಿರುವ ಯಾರೇ ವ್ಯಕ್ತಿಯನ್ನು, ಕೈಗಾರಿಕಾ ಪಟ್ಟಣ ಪ್ರದೇಶ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಯಾಗಿ ನೇಮಿಸಿಕೊಳ್ಳತಕ್ಕದ್ದು.

(2) ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ ಸಂದಾಯ ಮಾಡತಕ್ಕ ಪರಿಶ್ರಮಧನವನ್ನು ಒಳಗೊಂಡಂತೆ ಅವರ ಸೇವಾ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಕಾಲಕಾಲಕ್ಕೆ ಪ್ರಾಧಿಕಾರವು ನಿರ್ಧರಿಸತಕ್ಕದ್ದು.

(3) ಕೈಗಾರಿಕಾ ಪಟ್ಟಣ ಪ್ರದೇಶ ಪ್ರಾಧಿಕಾರವು, ತನ್ನ ಪ್ರಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಸಾಧ್ಯವಾದಷ್ಟು ಸಂಖ್ಯೆಯ ಅಧಿಕಾರಿಗಳನ್ನು ಮತ್ತು ನೌಕರರನ್ನು, ಸರ್ಕಾರದ ಅನುಮೋದನೆಯೊಂದಿಗೆ ನೇಮಕ ಮಾಡಿಕೊಳ್ಳಬಹುದು ಮತ್ತು ವಿನಿಯಮಗಳ ಮೂಲಕ ನೇಮಕಾತಿಯ ವಿಧಾನ ಹಾಗೂ ಸೇವಾ ಷರತ್ತುಗಳನ್ನು ನಿರ್ಧರಿಸಬಹುದು. ಪ್ರಾಧಿಕಾರದ ಅಧಿಕಾರಿಗಳು ಮತ್ತು ಇತರ ನೌಕರರು ತಮ್ಮ ಸಂಬಳಗಳನ್ನು ಮತ್ತು ಭತ್ಯೆಗಳನ್ನು ಪ್ರಾಧಿಕಾರದ ನಿಧಿಯಿಂದ ಪಡೆಯತಕ್ಕದ್ದು.

364(ಎಲ್). ವಿವರಪಟ್ಟಿಕೆಗಳು.- ಕೈಗಾರಿಕಾ ಪಟ್ಟಣ ಪ್ರದೇಶ ಪ್ರಾಧಿಕಾರವು ನಿಯಮಿಸಬಹುದಾದಂಥ ವರದಿಗಳು, ವಿವರಪಟ್ಟಿಕೆಗಳು ಮತ್ತು ಇತರ ಮಾಹಿತಿಯನ್ನು ಸರ್ಕಾರಕ್ಕೆ ಒದಗಿಸತಕ್ಕದ್ದು. ಸರ್ಕಾರವು ಅಥವಾ ಸರ್ಕಾರವು ಅಧಿಕೃತಗೊಳಿಸಿದ ಯಾರೇ ಅಧಿಕಾರಿಯು, ಆ ಬಗ್ಗೆ ಅವಶ್ಯಕವೆಂದು ಪರಿಗಣಿಸಬಹುದಾದ ವರದಿಗಳು, ವಿವರಪಟ್ಟಿಕೆಗಳು ಮತ್ತು ಇತರ ಮಾಹಿತಿಯನ್ನು ಪ್ರಾಧಿಕಾರದಿಂದ ತರಿಸಿಕೊಳ್ಳಬಹುದು.

364(ಎಂ). ಪ್ರಾಧಿಕಾರಕ್ಕೆ ನಿರ್ದೇಶನಗಳನ್ನು ನೀಡಲು ಅಧಿಕಾರ.- ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ, ಅವಶ್ಯಕವೆಂದು ಅಥವಾ

ಸಮಯೋಚಿತವಾದವುಗಳೆಂದು ಅದು ಅಭಿಪ್ರಾಯಪಡುವ ನಿರ್ದೇಶನಗಳನ್ನು ಪ್ರಾಧಿಕಾರಕ್ಕೆ ನೀಡತಕ್ಕದ್ದು ಮತ್ತು ಇಂಥ ನಿರ್ದೇಶನಗಳನ್ನು ಪಾಲಿಸುವುದು ಪ್ರಾಧಿಕಾರದ ಕರ್ತವ್ಯವಾಗಿರತಕ್ಕದ್ದು.

364(ಎನ್). ಆಡಳಿತಗಾರರನ್ನು ನೇಮಕ ಮಾಡಲು ಅಧಿಕಾರ.- (1) ಕೈಗಾರಿಕಾ ಪಟ್ಟಣ ಪ್ರದೇಶ ಪ್ರಾಧಿಕಾರವು ಸರಿಯಾಗಿ ಅಥವಾ ತೃಪ್ತಿಕರವಾಗಿ ತನ್ನ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಅಥವಾ ಅದರ ಪ್ರಕಾರ್ಯಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಅಸಮರ್ಥಗೊಂಡಿದೆ ಎಂದು ಅಥವಾ ವಿಫಲಗೊಂಡಿದೆ ಎಂದು ಸರ್ಕಾರವು ಅಭಿಪ್ರಾಯಪಟ್ಟಲ್ಲಿ ಸರ್ಕಾರವು, ಅಧಿಕೃತ ರಾಜ್ಯಪತ್ರದಲ್ಲಿ ಲಿಖಿತದಲ್ಲಿ ಪ್ರಕಟಿಸಿದ ಆದೇಶದ ಮೂಲಕ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶ ನೀಡಿದ ನಂತರ, ಆದೇಶದಲ್ಲಿ ನಿಯಮಿಸಬಹುದಾದ ಆರು ತಿಂಗಳಿಗೆ ಮೀರದ ಅವಧಿಗಾಗಿ, ಕೈಗಾರಿಕಾ ಪಟ್ಟಣ ಪ್ರದೇಶ ಪ್ರಾಧಿಕಾರದ ಆಡಳಿತಗಾರನನ್ನಾಗಿ, ಸರ್ಕಾರದ ಅಧಿಕಾರಿಯನ್ನು ನೇಮಕ ಮಾಡಬಹುದು.

(2) ಉಪ-ಪ್ರಕರಣ (1) ರ ಮೇರೆಗೆ ಆಡಳಿತಗಾರನಾಗಿ ನೇಮಕಗೊಂಡ ವ್ಯಕ್ತಿಯು, ಅಂಥ ನೇಮಕಕ್ಕೆ ಮುಂಚೆ, ಯಾವುದೇ ಕೈಗಾರಿಕಾ ಪಟ್ಟಣ ಪ್ರದೇಶ ಪ್ರಾಧಿಕಾರದ ಅಧ್ಯಕ್ಷನಾಗಿ ಅಥವಾ ಸದಸ್ಯನಾಗಿ ಆಯ್ಕೆಗೊಂಡಿದ್ದರೆ ಅಥವಾ ನಾಮನಿರ್ದೇಶಿತನಾಗಿದ್ದರೆ, ಕೈಗಾರಿಕಾ ಪಟ್ಟಣ ಪ್ರದೇಶ ಪ್ರಾಧಿಕಾರದ ಅಧ್ಯಕ್ಷ ಅಥವಾ ಸದಸ್ಯನಾಗಿರುವುದು ನಿಂತು ಹೋಗತಕ್ಕದ್ದು ಮತ್ತು ಕೈಗಾರಿಕಾ ಪಟ್ಟಣ ಪ್ರದೇಶ ಪ್ರಾಧಿಕಾರದ ಎಲ್ಲಾ ಅಧಿಕಾರಗಳನ್ನು ಹಾಗೂ ಕರ್ತವ್ಯಗಳನ್ನು ಆಡಳಿತಗಾರನು ಚಲಾಯಿಸತಕ್ಕದ್ದು ಹಾಗೂ ನಿರ್ವಹಿಸತಕ್ಕದ್ದು.

(3) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಆಡಳಿತಗಾರನು ಈ ಅಧಿನಿಯಮದ ಉದ್ದೇಶಕ್ಕಾಗಿ ಕೈಗಾರಿಕಾ ಪಟ್ಟಣ ಪ್ರದೇಶ ಪ್ರಾಧಿಕಾರವನ್ನು ಕ್ರಮಬದ್ಧವಾಗಿ ರಚಿಸಲಾಗಿದೆ ಎಂದು ಭಾವಿಸತಕ್ಕದ್ದು.

(4) ಆಡಳಿತಗಾರನು ಕೈಗಾರಿಕಾ ಪಟ್ಟಣ ಪ್ರದೇಶ ಪ್ರಾಧಿಕಾರಕ್ಕೆ ನೇಮಕಗೊಂಡಾಗ, ಆಡಳಿತಗಾರನ ಪದಾವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಈ ಅಧಿನಿಯಮದ ಮೂಲಕ ಉಪಬಂಧಿಸಿದ ರೀತಿಯಲ್ಲಿ ಪ್ರಾಧಿಕಾರವನ್ನು ಪುನಾರಚಿಸತಕ್ಕದ್ದು.

364(ಒ). ಪಂಚಾಯತಿ ಪ್ರದೇಶದ ಅಥವಾ ಪರಿವರ್ತನೀಯ ಪ್ರದೇಶದ ಅಥವಾ ಚಿಕ್ಕನಗರ ಪ್ರದೇಶದ ಅಥವಾ ದೊಡ್ಡ ನಗರ ಪ್ರದೇಶದ ಭಾಗವನ್ನು ಕೈಗಾರಿಕಾ ಪಟ್ಟಣ ಪ್ರದೇಶದಲ್ಲಿ ವಿಲೀನಗೊಳಿಸುವುದರ ಪರಿಣಾಮ.- (1) ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1963ರ ಮೇರೆಗೆ ರಚಿತವಾದ ಪಂಚಾಯಿತಿ ಪ್ರದೇಶದಲ್ಲಿ ಅಥವಾ ಕರ್ನಾಟಕ ಮುನ್ಸಿಪಾಲಿಟಿ ಅಧಿನಿಯಮ, 1964ರ ಮೇರೆಗೆ ರಚಿತವಾದ ಚಿಕ್ಕನಗರ ಪ್ರದೇಶದಲ್ಲಿ ಅಥವಾ ಪರಿವರ್ತನೀಯ ಪ್ರದೇಶದಲ್ಲಿ ಅಥವಾ ಕರ್ನಾಟಕ ನಗರಪಾಲಿಕೆ ಅಧಿನಿಯಮ, 1976ರ ಮೇರೆಗೆ ರಚಿತವಾದ ದೊಡ್ಡ ನಗರ ಪ್ರದೇಶದಲ್ಲಿ ಒಳಗೊಂಡಿರುವ ಸ್ಥಳೀಯ ಪ್ರದೇಶದ ಯಾವುದೇ ಭಾಗವು ಕೈಗಾರಿಕಾ ಪಟ್ಟಣ ಪ್ರದೇಶದಲ್ಲಿ ಸೇರಿಸಿದ್ದರೆ, ಈ ಕೆಳಕಂಡ ಪರಿಣಾಮಗಳು ಉಂಟಾಗತಕ್ಕದ್ದು, ಎಂದರೆ:-

(ಎ) ಗ್ರಾಮ ಪಂಚಾಯಿತಿಯು ಅಥವಾ ಮುನ್ಸಿಪಲ್ ಕೌನ್ಸಿಲ್ ಅಥವಾ ಪಟ್ಟಣ ಪಂಚಾಯಿತಿಯು ಅಥವಾ ನಿಗಮವು (ಇಲ್ಲಿ ಇನ್ನು ಮುಂದೆ ಸ್ಥಳೀಯ ಪ್ರಾಧಿಕಾರ ಎಂದು ಉಲ್ಲೇಖಿಸಲಾಗಿದೆ) ಯಾವ ಪ್ರದೇಶದ ಅಧಿಕಾರವ್ಯಾಪ್ತಿಯೊಳಗೆ ಇದೆಯೋ, ಅಂಥ ಪ್ರದೇಶದ ಮೇಲೆ ಅಧಿಕಾರವ್ಯಾಪ್ತಿಯನ್ನು ಹೊಂದಿರುವುದು ನಿಂತು ಹೋಗತಕ್ಕದ್ದು;

(ಬಿ) ಕೈಗಾರಿಕಾ ಪಟ್ಟಣ ಪ್ರದೇಶ ಪ್ರಾಧಿಕಾರದ ರಚನೆಯ ದಿನಾಂಕದ ನಿಕಟಪೂರ್ವದಲ್ಲಿ ಹೊಂದಿರುವಂಥ ಅಂಥ ಪ್ರದೇಶದಿಂದ ಚುನಾಯಿತರಾದ ಗ್ರಾಮ ಪಂಚಾಯಿತಿಯ ಸದಸ್ಯರುಗಳಾಗಿ ಅಥವಾ ಮುನ್ಸಿಪಲ್ ಕೌನ್ಸಿಲ್ ಅಥವಾ ಪಟ್ಟಣ ಪಂಚಾಯಿತಿಯ ಅಥವಾ ನಿಗಮದ ಕೌನ್ಸಿಲರ್ ಗಳಾಗಿ ಪದಧಾರಣ ಮಾಡಿರುವುದು ಅಥವಾ ಸಂದರ್ಭಾನುಸಾರ ಕೌನ್ಸಿಲರ್ ಗಳಾಗಿರುವುದು ನಿಂತು ಹೋಗತಕ್ಕದ್ದು ಮತ್ತು ಸರ್ಕಾರವು, ಕೈಗಾರಿಕಾ ಪಟ್ಟಣ ಪ್ರದೇಶ ಪ್ರಾಧಿಕಾರದ ಘೋಷಣೆಗೂ ಮುಂಚೆ ಅಸ್ತಿತ್ವದಲ್ಲಿದ್ದ ನಗರ ಸ್ಥಳೀಯ ನಿಕಾಯದ ಕೌನ್ಸಿಲರ್ ಗಳಾಗಿ ಅಥವಾ ಗ್ರಾಮ ಪಂಚಾಯಿತಿಯ ಸದಸ್ಯರುಗಳಾಗಿ, ಅವರು ಹೊಂದಿದ್ದ ತಮ್ಮ ಪದಾವಧಿಯಲ್ಲಿ

ಬಾಕಿ ಉಳಿದಿರುವ ಅವಧಿಯವರೆಗೆ ಅವರನ್ನು ಹೆಚ್ಚುವರಿ ಸದಸ್ಯರುಗಳಿಗಾಗಿ ಕೈಗಾರಿಕಾ ಪ್ರದೇಶ ಪ್ರಾಧಿಕಾರಕ್ಕೆ ನಾಮನಿರ್ದೇಶನ ಮಾಡಬಹುದು;

(ಸಿ) ಸ್ಥಳೀಯ ಪ್ರಾಧಿಕಾರದಲ್ಲಿ ನಿಹಿತವಾಗಿರುವ ಚರಾಸ್ತಿಯನ್ನು ಸರ್ಕಾರವು ಲಿಖಿತ ಆದೇಶದ ಮೂಲಕ ನಿರ್ದೇಶಿಸಬಹುದಾದಂತೆ ಕೈಗಾರಿಕಾ ಪಟ್ಟಣ ಪ್ರದೇಶ ಪ್ರಾಧಿಕಾರಕ್ಕೆ ವರ್ಗವಣೆ ಮಾಡತಕ್ಕದ್ದು;

(ಡಿ) ಕೈಗಾರಿಕಾ ಪಟ್ಟಣ ಪ್ರದೇಶದಲ್ಲಿ ಸೇರಿಸಿದ ಅಂಥ ಪ್ರದೇಶದಲ್ಲಿ ಉದ್ಭವಿಸುವ ಅಥವಾ ಅದಕ್ಕೆ ಸಂಬಂಧಪಟ್ಟ ಸಿವಿಲ್ ಮತ್ತು ಕ್ರಿಮಿನಲ್ ವ್ಯವಹರಣೆಗಳಿಗೆ, ಕರಾರುಗಳಿಗೆ ಮತ್ತು ಇತರ ವಿಷಯಗಳಿಗೆ (ತೆರಿಗೆ, ಶುಲ್ಕಗಳು ಹಾಗೂ ಉಪಕರ ಬಾಕಿಗಳೂ ಸೇರಿದಂತೆ) ಸಂಬಂಧಿಸಿದಂತೆ ಸ್ಥಳೀಯ ಪ್ರಾಧಿಕಾರದ ಹಕ್ಕುಗಳು ಮತ್ತು ಹೊಣೆಗಾರಿಕೆಗಳು ಕೈಗಾರಿಕಾ ಪಟ್ಟಣ ಪ್ರದೇಶ ಪ್ರಾಧಿಕಾರದಲ್ಲಿ ನಿಹಿತವಾಗತಕ್ಕದ್ದು ಮತ್ತು ಅಂಥ ಹಕ್ಕುಗಳನ್ನು ಮತ್ತು ಹೊಣೆಗಾರಿಕೆಗಳನ್ನು, ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಅಥವಾ ಬೈಲಾಗಳ ಮತ್ತು ಆದೇಶದ ಮೇರೆಗೆ ಕೈಗಾರಿಕಾ ಪಟ್ಟಣ ಪ್ರದೇಶ ಪ್ರಾಧಿಕಾರವು ಜಾರಿಗೊಳಿಸಬಹುದು ಅಥವಾ ಅದರ ವಿರುದ್ಧ ಜಾರಿಗೊಳಿಸಬಹುದು.

364(ಪಿ). ವಿನಿಯಮಗಳು.- (1) ಕೈಗಾರಿಕಾ ಪಟ್ಟಣ ಪ್ರದೇಶ ಪ್ರಾಧಿಕಾರವು, ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ಪ್ರಾಧಿಕಾರದ ವ್ಯವಹಾರಗಳ ನಿರ್ವಹಣೆಗಾಗಿ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಉಪಬಂಧಗಳಿಗೆ ಅಸಂಗತವಾಗಿರದ ವಿನಿಯಮಗಳನ್ನು ರಚಿಸತಕ್ಕದ್ದು.

(2) ನಿರ್ದಿಷ್ಟವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ವಿನಿಯಮಗಳು ಈ ಮುಂದಿನ ಎಲ್ಲಾ ಅಥವಾ ಯಾವುದೇ ವಿಷಯಗಳಿಗಾಗಿ ಉಪಬಂಧ ಕಲ್ಪಿಸತಕ್ಕದ್ದು, ಎಂದರೆ:-

(ಎ) ಪ್ರಾಧಿಕಾರದ ಸಭೆಗಳನ್ನು ಕರೆಯುವುದು ಮತ್ತು ನಡೆಸುವುದು. ಅಂಥ ಸಭೆಗಳು, ಸೇರಬೇಕಾದ ಸಮಯ ಹಾಗೂ ಸ್ಥಳ ಮತ್ತು ಅಂಥ ಸಭೆಗಳಲ್ಲಿ ನಡೆಸಬೇಕಾದ ಕಾರ್ಯಕಲಾಪಗಳು;

(ಬಿ) ಮುಖ್ಯ ಕಾರ್ಯನಿರ್ವಹಣಾಧಿಕಾರಿಯ ಅಧಿಕಾರಗಳು ಹಾಗೂ ಕರ್ತವ್ಯಗಳು;

(ಸಿ) ಪ್ರಾಧಿಕಾರವು ನಿರ್ವಹಿಸಬೇಕಾಗಿರುವ ರಿಜಿಸ್ಟರ್ ಗಳ ನಿರ್ವಹಣೆ;

(ಡಿ) ಪ್ರಾಧಿಕಾರದ ಆಸ್ತಿಗಳ ನಿರ್ವಹಣೆ;

(ಇ) ಅದರ ಪ್ರಕಾರ್ಯಗಳ ನಿರ್ವಹಣೆಗಾಗಿ ವಿಧಿಸಬೇಕಾದ ಶುಲ್ಕಗಳು;

(ಎಫ್) ಪ್ರಾಧಿಕಾರದ ಅಧಿಕಾರಗಳು ಹಾಗೂ ನೌಕರರ ನೇಮಕ ಹಾಗೂ ಸೇವಾ ಷರತ್ತುಗಳ ವಿಧಾನ; ಮತ್ತು

(ಜಿ) ವಿನಿಯಮಗಳ ಮೂಲಕ ಒದಗಿಸಬಹುದಾದ ಅಥವಾ ಒದಗಿಸಬೇಕಾದ ಅಗತ್ಯವಾದ ಇತರ ವಿಷಯಗಳು.

364(ಕ್ಯೂ). ತೊಂದರೆಗಳ ನಿವಾರಣೆ.- ಈ ಅಧ್ಯಾಯದ ಉಪಬಂಧಗಳನ್ನು ಜಾರಿಗೆ ತರುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಸರ್ಕಾರವು, ತೊಂದರೆಗಳನ್ನು ನಿವಾರಿಸುವುದಕ್ಕೆ ಅವಶ್ಯಕವೆಂದು ಅಥವಾ ಸಮಯೋಚಿತವೆಂದು ಕಂಡುಬರುವ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಂಥ ಉಪಬಂಧಗಳನ್ನು ಆದೇಶದ ಮೂಲಕ ರಚಿಸಬಹುದು.][1]

ಅಧ್ಯಾಯ-XVII
ಸಂಕೀರ್ಣಗಳು

365. [1][ಕರ್ನಾಟಕ ಪೌರಾಡಳಿತ ಸೇವೆ][1].- (1) ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಸರ್ಕಾರವು, ನಿರ್ದಿಷ್ಟಪಡಿಸಬಹುದಾದಂಥ ಪ್ರತಿಯೊಂದು ಸ್ಥಳೀಯ ಪ್ರಾಧಿಕಾರದ ಅಧೀನದ ಅಂಥ ಹುದ್ದೆಗಳನ್ನು [1][ಕರ್ನಾಟಕ ಪೌರಾಡಳಿತ ಸೇವೆಗೆ][1] ಸೇರಿದ ಅಧಿಕಾರಿಗಳ ನೇಮಕದ ಮೂಲಕ ಭರ್ತಿ ಮಾಡತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಆದೇಶದ ಅಳವಡಿಕೆಗಳ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(2) (ಎ) ಸರ್ಕಾರವು ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ (1)ನೇ ಉಪಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ಹುದ್ದೆಗಳನ್ನು, ಹೊಂದಿರುವ ಸ್ಥಳೀಯ ಪ್ರಾಧಿಕಾರಗಳ ಅಧಿಕಾರಿಗಳು ಸರ್ಕಾರದ ಅಧಿಕಾರಿಗಳಾಗತಕ್ಕದ್ದು ಮತ್ತು ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದ ಮೇರೆಗೆ ಅವರು ಪದಧಾರಣ ಮಾಡಬಹುದಾಗಿದ್ದಂಥ ಅದೇ ಅವಧಿಯವರೆಗೆ, ಅದೇ ಸಂಭಾವನೆ ಮೇಲೆ ಮತ್ತು ಅವೇ ಸೇವಾ ನಿಬಂಧನೆಗಳ ಮತ್ತು ಷರತ್ತುಗಳ ಮೇಲೆ ಮತ್ತು ನಿವೃತ್ತಿ ವೇತನ, ಉಪದಾನ, ಭವಿಷ್ಯ ನಿಧಿ ಮತ್ತು ಅಂಥ ಇತರ ವಿಷಯಗಳಿಗೆ ಸಂಬಂಧಿಸಿದಂತೆ ಅವೇ ಹಕ್ಕುಗಳು ಮತ್ತು ವಿಶೇಷಾಧಿಕಾರಗಳೊಂದಿಗೆ ಪದಧಾರಣ ಮಾಡತಕ್ಕದ್ದು, ಮತ್ತು [1][ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978ರ ಮೇರೆಗೆ][1] ರಚಿಸಿದ ನಿಯಮಗಳು ಅಥವಾ ಇತರ ಉಪಬಂಧಗಳ ಮೂಲಕ, ಅವರ ಸಂಭಾವನೆ, ನಿವೃತ್ತಿ ವೇತನ, ಭವಿಷ್ಯ ನಿಧಿ, ಮತ್ತು ಉಪದಾನಗಳ ವಿಶೇಷಾಧಿಕಾರಗಳು, ಒಳಗೊಂಡು ಸೇವಾ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಬದಲಾಯಿಸುವವರೆಗೆ, ಹಾಗೆ ಮುಂದುವರಿಯತಕ್ಕದ್ದು ಮತ್ತು ಅಂಥ ಯಾವುದೇ ಬದಲಾವಣೆಯು, ಯಾವುದೇ ಕರಾರಿನಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನಲ್ಲಿ ಏನೇ ಒಳಗೊಂಡಿದ್ದಾಗ್ಯೂ ಪರಿಣಾಮಕಾರಿಯಾಗತಕ್ಕದ್ದು.

1.1990ರ ಅಧಿನಿಯಮ 14ರ ಮೂಲಕ 2.4.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಬಿ) 1947ರ ಔದ್ಯಮಿಕ ವಿವಾದಗಳ ಅಧಿನಿಯಮ (1947ರ ಕೇಂದ್ರ ಅಧಿನಿಯಮ IV) ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದಾಗ್ಯೂ (ಎ) ಖಂಡದ ಬಲದಿಂದ, ಸ್ಥಳೀಯ ಪ್ರಾಧಿಕಾರದ ಯಾರೇ ಅಧಿಕಾರಿಯ ಸೇವೆಗಳ ವರ್ಗಾವಣೆಯು, ಈ ಅಧಿನಿಯಮ ಅಥವಾ ಇತರ ಕಾನೂನಿನ ಮೇರೆಗೆ ಯಾರೇ ಅಂಥ ಅಧಿಕಾರಿಯನ್ನು ಯಾವುದೇ ನಷ್ಟ ಪರಿಹಾರಕ್ಕೆ ಹಕ್ಕುಳ್ಳವನನ್ನಾಗಿಸತಕ್ಕದ್ದಲ್ಲ ಮತ್ತು ಅಂಥ ಯಾವುದೇ ಕ್ಲೇಮನ್ನು ಯಾವುದೇ ನ್ಯಾಯಾಲಯವು, ನ್ಯಾಯಾಧಿಕರಣವು ಅಥವಾ ಇತರ ಪ್ರಾಧಿಕಾರವು ಪುರಸ್ಕರಿಸತಕ್ಕದ್ದಲ್ಲ.

(3) ಮುನ್ಸಿಪಲ್ ಕೌನ್ಸಿಲ್, ಅವಶ್ಯವೆಂದು ಅದು ಭಾವಿಸಿದರೆ ಮುನ್ಸಿಪಲ್ ಕೌನ್ಸಿಲ್ ನ ಸದಸ್ಯರುಗಳ ಮೂರನೇ ಎರಡರಷ್ಟು ಸದಸ್ಯರು ಅಂಗೀಕರಿಸಿದ ನಿರ್ಣಯದ ಮೂಲಕ ಸದರಿ ಸೇವೆಗೆ ಸೇರಿದ ಯಾರೇ ಅಧಿಕಾರಿಯ ವಿರುದ್ಧ ಅವನ ಯಾವುದೇ ದುರ್ವರ್ತನೆಯ ಬಗ್ಗೆ ಅವಶ್ಯವಾಗಬಹುದಾದಂಥ ಶಿಸ್ತಿನ ಕ್ರಮವನ್ನು ಕೈಗೊಳ್ಳಲು ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದು.

ವಿವರಣೆ:- ಈ ಪ್ರಕರಣದ ಮತ್ತು 367ನೇ ಪ್ರಕರಣದ ಉದ್ದೇಶಗಳಿಗಾಗಿ ``ಸ್ಥಳೀಯ ಪ್ರಾಧಿಕಾರ'' ಎಂದರೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ರಚಿತಗೊಂಡ ನಗರ ಪಾಲಿಕೆ, ಮುನ್ಸಿಪಲ್ ಕೌನ್ಸಿಲ್, ಅಧಿಸೂಚಿತ ಪ್ರದೇಶ ಸಮಿತಿ, ನೈರ್ಮಲ್ಯ ಮಂಡಲಿ, ನಗರ ಮೇಲ್ಪಾಟು ಮಂಡಲಿ, ಪಟ್ಟಣ ಮೇಲ್ಪಾಟು ಮಂಡಲಿ ಅಥವಾ ಯೋಜನಾ ಪ್ರಾಧಿಕಾರ.

366. ಲೋಕೋಪಯೋಗಿ ಕಾಮಗಾರಿಗಳ ನಿರ್ವಹಣೆಗಾಗಿ ಏಜೆನ್ಸಿ.- (1) ಸರ್ಕಾರವು ಮುನ್ಸಿಪಲ್ ಕೌನ್ಸಿಲ್ ನೊಡನೆ ಸಮಾಲೋಚಿಸಿದ ತರುವಾಯ, ಅಂಥ ಲೋಕೋಪಯೋಗಿ ಕಾಮಗಾರಿಗಳಿಗೆ ಬೇಕಾದ ವೃತ್ತಿ ನೈಪುಣ್ಯತೆ ಮುನ್ಸಿಪಲ್ ಕೌನ್ಸಿಲ್ ನ ನಿರ್ವಹಣೆಯಲ್ಲಿ ಇಲ್ಲದಿರಬಹುದಾದೆಂದು ಸರ್ಕಾರವು ಅಭಿಪ್ರಾಯಪಟ್ಟಲ್ಲಿ ಸರ್ಕಾರದಿಂದ ಅಥವಾ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಏಜೆನ್ಸಿಯಿಂದ ಅಂಥ ಕಾಮಗಾರಿಗಳನ್ನು ಕಾರ್ಯಗತಗೊಳಿಸತಕ್ಕದ್ದೆಂದು ನಿರ್ದೇಶಿಸಬಹುದು.

(2) ಮುನ್ಸಿಪಲ್ ಕೌನ್ಸಿಲ್ ನ ಇತರ ಎಲ್ಲಾ ಕಾಮಗಾರಿಗಳನ್ನು ಈ ಬಗ್ಗೆ ನಿಯಮಿಸಿದ ನಿಯಮಗಳಿಗೊಳಪಟ್ಟು ಮುನ್ಸಿಪಲ್ ಕೌನ್ಸಿಲ್ ಸೂಕ್ತವೆಂದು ಭಾವಿಸುವಂಥ ಏಜೆನ್ಸಿಯ ಮತ್ತು ಅಂಥ ಮೇಲ್ವಿಚಾರಣೆಗೆ ಒಳಪಟ್ಟು ನಿರ್ವಹಿಸತಕ್ಕದ್ದು.

(3) ಮುನ್ಸಿಪಲ್ ಕೌನ್ಸಿಲ್ ಗಾಗಿ ಸರ್ಕಾರವು, ಅಥವಾ ಸರ್ಕಾರದ ಆದೇಶಗಳ ಮೇರೆಗೆ ಇತರ ಯಾವುದೇ ಏಜೆನ್ಸಿಯು ಯಾವುದೇ ಕಾಮಗಾರಿಯನ್ನು ನಿರ್ವಹಿಸಿದಾಗ, ಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸಬಹುದಾದಂಥ ದರದಲ್ಲಿ ಮೇಲ್ವಿಚಾರಣೆಗಾಗಿ ಮತ್ತು ಉಪಕರಣಗಳು ಮತ್ತು ಸ್ಥಾವರಕ್ಕಾಗಿನ ವೆಚ್ಚಗಳೊಂದಿಗೆ, ಕಾಮಗಾರಿಗಾಗಿ ವಹಿಸಿದ ವೆಚ್ಚವನ್ನು, ಸರ್ಕಾರವು ಮನ್ನಾ ಮಾಡಿದ್ದ ಹೊರತು, ಮುನ್ಸಿಪಲ್ ಕೌನ್ಸಿಲ್ ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದು.

(4) ಸರ್ಕಾರವು, ಯಾವುದೇ [1][ಮುನ್ಸಿಪಲ್ ಏರಿಯಾ][1]ಕ್ಕೆ ಸಂಬಂಧಿಸಿದಂತೆ, ಸಾರ್ವಜನಿಕ ಜಲಾಶಯಗಳು, ಕೆರೆಗಳು, ತೊಟ್ಟಿಗಳು, ಕಾರಂಜಿಗಳು, ಬಾವಿಗಳು, ಪಂಪ್‌ಗಳು, ಕೊಳವೆಗಳು, ನಲ್ಲಿಗಳು, ನಾಲೆಗಳು, ಅಡಿಗಾಲುವೆಗಳು ಮತ್ತು ಇತರ ಕಾಮಗಾರಿಗಳಂಥ, ನೀರು ಸರಬರಾಜು ಸ್ಥಾವರಗಳನ್ನು ನಿರ್ವಹಿಸುವ ಕೆಲಸವನ್ನು ಕೈಗೊಂಡಾಗ, ಈ ಬಗ್ಗೆ ಸರ್ಕಾರವು ವಹಿಸಿದ ವೆಚ್ಚವನ್ನು ಮುನ್ಸಿಪಲ್ ಕೌನ್ಸಿಲ್ ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದು, ಮತ್ತು ಸರ್ಕಾರವು ನಿರ್ಧರಿಸಬಹುದಾದ ಕಾಲದಲ್ಲಿ ಯಾವುದೇ ವರ್ಷಕ್ಕಾಗಿನ ಅಂದಾಜು ಮಾಡಿದ ವೆಚ್ಚದ ಅಂಥ ಭಾಗವನ್ನು ಮುಂಗಡವಾಗಿ ಠೇವಣಿ ಇಡಲು ಸರ್ಕಾರವು, ಮುನ್ಸಿಪಲ್ ಕೌನ್ಸಿಲ್ ನ್ನು ಅಗತ್ಯಪಡಿಸಬಹುದು.

1. 1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(5) ಉಪಪ್ರಕರಣ (3)ರ ಅಥವಾ ಉಪಪ್ರಕರಣ (4) ರ ಮೇರೆಗೆ ಸರ್ಕಾರಕ್ಕೆ ಸಂದಾಯ ಮಾಡಬೇಕಾದ ಮೊಬಲಗನ್ನು, ಸೂಕ್ತ ಕಾಲದೊಳಗೆ ಸಂದಾಯ ಮಾಡದಿದ್ದರೆ, ಸರ್ಕಾರವು ಮುನ್ಸಿಪಲ್ ನಿಧಿಯ ಅಭಿರಕ್ಷೆಯನ್ನು ಹೊಂದಿರುವ ಯಾರೇ ವ್ಯಕ್ತಿಯನ್ನು, ಅಂಥ ನಿಧಿಯ ಮೇಲೆ ಯಾವುದೇ ಋಣಭಾರಕ್ಕಿಂತ ಮೊದಲ ಆದ್ಯತೆ ಮೇಲೆ ಆ ಮೊಬಲಗನ್ನು ಸಂದಾಯ ಮಾಡಬೇಕೆಂದು ನಿರ್ದೇಶಿಸುವ ಆದೇಶವನ್ನು ಮಾಡಬಹುದು ಮತ್ತು ಅಂಥ ವ್ಯಕ್ತಿಯು ಮುನ್ಸಿಪಲ್ ಕೌನ್ಸಿಲ್‌ನಲ್ಲಿ ಜಮೆಯಾಗಿರುವ ನಿಧಿಗಳಿಂದ ಸಂದಾಯ ಮಾಡಲು ಅವಕಾಶ ಇರುವಷ್ಟರ ಮಟ್ಟಿಗೆ, ಅಂಥ ಆದೇಶವನ್ನು ಪಾಲಿಸಲು ಬದ್ಧನಾಗಿರತಕ್ಕದ್ದು.

[1][367. ಕರ್ನಾಟಕ ಪೌರಾಡಳಿತ ಸೇವೆಗಳಿಗಾಗಿನಮೊತ್ತವನ್ನು ತುಂಬಿಕೊಡುವುದು.- (1) ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಅಡಕವಾಗಿದ್ದಾಗ್ಯೂ, ಪ್ರತಿಯೊಂದು ಸ್ಥಳೀಯ ಪ್ರಾಧಿಕಾರವು, ತನ್ನ ಆದಾಯದ ಶೇಕಡಾ ನಾಲ್ಕನೇ ಒಂದರಷ್ಟನ್ನು ರಾಜ್ಯದ ಸಂಚಿತ ನಿಧಿಗೆ, ಸರ್ಕಾರವು ಆದೇಶದ ಮೂಲಕ ನಿರ್ಧರಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಕಾಲಗಳಲ್ಲಿ, ಕರ್ನಾಟಕ ಪೌರಾಡಳಿತ ಸೇವೆಯ ಅಧಿಕಾರಿಗಳಿಗೆ ಸಂದಾಯ ಮಾಡತಕ್ಕ ಸಂಬಳಗಳು, ಭತ್ಯೆಗಳು, ನಿವೃತ್ತಿ ವೇತನಗಳು, ಭವಿಷ್ಯನಿಧಿ, ಉಪದಾನಗಳು ಮತ್ತು ಇತರ ಅವಶ್ಯ ವೆಚ್ಚಗಳಿಗಾಗಿನ ವೆಚ್ಚವನ್ನು ಭರಿಸಲು ಮುಂಗಡವಾಗಿ ವಂತಿಗೆ ನೀಡತಕ್ಕದ್ದು:

ಪರಂತು, ಅಂಥ ವಂತಿಗೆಯು ಇತ್ಯರ್ಥದಲ್ಲಿರುವಾಗ, ಪೌರಾಡಳಿತ ಸೇವೆಗಳಿಗಾಗಿನ ವೆಚ್ಚವನ್ನು ರಾಜ್ಯದ ಸಂಚಿತ ನಿಧಿಯಿಂದ ಭರಿಸತಕ್ಕದ್ದು.

(2) ಉಪಪ್ರಕರಣ (1) ರ ಮೇರೆಗೆ ಸಂದಾಯ ಮಾಡಲು ಅಗತ್ಯಪಡಿಸಿದ ಮೊಬಲಗನ್ನು ಸಂದಾಯ ಮಾಡಲು ತಪ್ಪಿದರೆ, ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದ ನಿಧಿಗಳ ಅಭಿರಕ್ಷೆ ಹೊಂದಿರುವ ಅಧಿಕಾರಿಯನ್ನು ಅಂಥ ನಿಧಿಗಳ ಶಿಲ್ಕುಗಳಿಂದ ಸಾಧ್ಯವಿರುವಷ್ಟು ಅಂಥ ಮೊಬಲಗು ಅಥವಾ ಅದರ ಅಷ್ಟು ಭಾಗವನ್ನು ಸಂದಾಯ ಮಾಡುವಂತೆ ಡೆಪ್ಯುಟಿ ಕಮಿಷನರ್ ನು ನಿರ್ದೇಶಿಸಬಹುದು.][1]

1. 1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

368. ಅನರ್ಹಗೊಂಡಿದ್ದಾಗ ಮುನ್ಸಿಪಲ್ ಕೌನ್ಸಿಲ್ ನ ಕೌನ್ಸಿಲರ್ ನಾಗಿ, ಅಧ್ಯಕ್ಷನಾಗಿ ಅಥವಾ ಉಪಾಧ್ಯಕ್ಷನಾಗಿ ಕಾರ್ಯನಿರ್ವಹಿಸುವುದಕ್ಕಾಗಿ ದಂಡನೆ.- (1) ಯಾರೇ ವ್ಯಕ್ತಿಯು, ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ, ಮುನ್ಸಿಪಲ್ ಕೌನ್ಸಿಲ್ ನ ಕೌನ್ಸಿಲರ್ ನಾಗಿ ಪದಧಾರಣ ಮಾಡಲು ಹಕ್ಕುಳ್ಳವನಾಗಿಲ್ಲ ಅಥವಾ ಹಕ್ಕುಳ್ಳವನಾಗಿರುವುದು ನಿಂತುಹೋಗಿದೆಯೆಂದು ತಿಳಿದೂ ಹಾಗೆಂದು ಕಾರ್ಯನಿರ್ವಹಿಸಿದರೆ, ಅವನು ಸದಸ್ಯನಾಗಿ ಉಪವೇಶನದಲ್ಲಿ ಉಪಸ್ಥಿತನಿರುವ ಮತ್ತು ಸದಸ್ಯನಾಗಿ ಮತ ನೀಡಿದಂಥ ಪ್ರತಿಯೊಂದು ದಿವಸಕ್ಕೆ 50 ರೂಪಾಯಿಗಳ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ಯಾರೇ ವ್ಯಕ್ತಿಯು, ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ಪರಿಷತ್ತಿನ, ಮುನ್ಸಿಪಲ್ ಕೌನ್ಸಿಲ್‌ನ ಅಧ್ಯಕ್ಷನಾಗಿ ಅಥವಾ ಉಪಾಧ್ಯಕ್ಷನಾಗಿ ಪದಧಾರಣ ಮಾಡಲು ಅಥವಾ ಅಂಥ ಪ್ರಕಾರ್ಯಗಳನ್ನು ಚಲಾಯಿಸಲು ತನಗೆ ಹಕ್ಕಿಲ್ಲವೆಂದು ಅಥವಾ ಹಕ್ಕುಳ್ಳವನಾಗಿರುವುದು ನಿಂತುಹೋಗಿದೆ ಎಂದು ತಿಳಿದು ಹಾಗೆಂದು ಕಾರ್ಯನಿರ್ವಹಿಸಿದರೆ ಅವನು

ಹಾಗೆ ಕಾರ್ಯವನ್ನು ಅಥವಾ ಪ್ರಕಾರ್ಯಗಳನ್ನು ನಿರ್ವಹಿಸುವಂಥ ಪ್ರತಿಯೊಂದು ದಿವಸಕ್ಕೆ 200 ರೂಪಾಯಿಗಳ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(3) ಮುನ್ಸಿಪಲ್ ಕೌನ್ಸಿಲ್‌ನ ಅಧ್ಯಕ್ಷನಾಗಿದ್ದು ಅಥವಾ ಉಪಾಧ್ಯಕ್ಷನಾಗಿದ್ದು, ತನ್ನ ಸ್ವಾಧೀನದಲ್ಲಿಟ್ಟುಕೊಂಡಿರುವ ಅಥವಾ ಸ್ವಾಧೀನಕ್ಕೆ ಬಂದಿರುವಂಥ ಮುನ್ಸಿಪಲ್ ಕೌನ್ಸಿಲ್ ನಲ್ಲಿ ನಿಹಿತವಾಗಿರುವ ಅಥವಾ ಅದಕ್ಕೆ ಸೇರಿದ ಯಾವುವೇ ದಸ್ತಾವೇಜುಗಳನ್ನು, ಯಾವುದೇ ಹಣವನ್ನು ಅಥವಾ ಇತರ ಸ್ವತ್ತುಗಳನ್ನು,-

(ಎ) ಆತನು ಅಧ್ಯಕ್ಷನಾಗಿರುವ ಅಥವಾ ಉಪಾಧ್ಯಕ್ಷನಾಗಿರುವ ಪದಾವಧಿಯು ಮುಗಿದ ಕೂಡಲೆ ಪ್ರತಿಯೊಂದು ಸಂದರ್ಭದಲ್ಲಿಯೂ; ಮತ್ತು

(ಬಿ) ಉಪಾಧ್ಯಕ್ಷನಾಗಿರುವ ವ್ಯಕ್ತಿಯ ಸಂದರ್ಭದಲ್ಲಿ, ಸಂದರ್ಭಾನುಸಾರ ಅಧ್ಯಕ್ಷನು ತಗಾದೆ ಮಾಡಿದಾಗ,

- ಆಯಾ ಪದದ ತನ್ನ ಉತ್ತರಾಧಿಕಾರಿಗೆ ಅಥವಾ ನಿಯಮಿಸಿದ ಇತರ ಪ್ರಾಧಿಕಾರಿಗೆ ಒಪ್ಪಿಸಿ ಕೊಡಲು ತಪ್ಪಿದರೆ ಸಹ, ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

369. ಹಿತಾಸಕ್ತಿಯುಳ್ಳ ಸದಸ್ಯರು ಮತ ನೀಡಿದ್ದಕ್ಕಾಗಿ ದಂಡನೆ.- ಯಾರೇ ವ್ಯಕ್ತಿಯು, 55ನೇ ಪ್ರಕರಣದ (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ, ಮುನ್ಸಿಪಲ್ ಕೌನ್ಸಿಲಿನ ಅಥವಾ ಅದರ ಯಾವುದೇ ಸಮಿತಿಯ ಸಭೆಯಲ್ಲಿ ಮತ ಚಲಾಯಿಸಿದರೆ ಅವನು 500 ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

370. ಅಧಿಕಾರಿಯು ಅಥವಾ ನೌಕರನು ಕರಾರಿನಲ್ಲಿ ಹಿತಾಸಕ್ತಿ ಹೊಂದಿರುವುದಕ್ಕಾಗಿ ದಂಡನೆ.- 77ನೇ ಪ್ರಕರಣದ ಮೇರೆಗಿನ ಯಾವುದೇ ಕ್ರಮಕ್ಕೆ ಬಾಧಕವಾಗದಂತೆ, ಮುನ್ಸಿಪಲ್ ಕೌನ್ಸಿಲ್ ಅಥವಾ ಮುನ್ಸಿಪಲ್ ಕೌನ್ಸಿಲ್ ನ ಪರವಾಗಿ ಮಾಡಿಕೊಂಡ ಯಾವುದೇ ಕರಾರಿನಲ್ಲಿ, ಯಾರೇ ಅಧಿಕಾರಿಯು ಅಥವಾ ನೌಕರನು ಸ್ವತಃ ತಾನಾಗಲಿ ಅಥವಾ ಪಾಲುದಾರನ, ನಿಯೋಜಕನ ಅಥವಾ ನೌಕರನ ಮೂಲಕವಾಗಿ ಆಗಲಿ ತಿಳಿದೂ ತಿಳಿದು ಪ್ರತ್ಯಕ್ಷವಾಗಿಯೇ ಆಗಲಿ ಅಥವಾ ಪರೋಕ್ಷವಾಗಿಯೇ ಆಗಲಿ ಯಾವುದೇ ವೈಯಕ್ತಿಕ ಪಾಲು ಅಥವಾ ಹಿತಾಸಕ್ತಿಯನ್ನು ಹೊಂದಿದ್ದರೆ, ಅವನು ಭಾರತ ದಂಡ ಸಂಹಿತೆಯ 168ನೇ ಪ್ರಕರಣದ ಮೇರೆಗೆ ಅಪರಾಧ ಮಾಡಿರುವುದಾಗಿ ಭಾವಿಸತಕ್ಕದ್ದು:

ಪರಂತು, ಯಾರೇ ವ್ಯಕ್ತಿಯು, ಯಾವುದೇ ಕಂಪನಿಯಲ್ಲಿ ಷೇರುದಾರನಾಗಿರುವ ಅಥವಾ ಸದಸ್ಯನಾಗಿರುವ ಕಾರಣದಿಂದ, ಅವನು ಅಂಥ ಕಂಪನಿಯ ನಿರ್ದೇಶಕನಾಗಿದ್ದ ಹೊರತು ಅಂಥ ಕಂಪನಿ ಮತ್ತು ಮುನ್ಸಿಪಲ್ ಕೌನ್ಸಿಲ್ ನಡುವೆ ಯಾವುದೇ ಕರಾರಿನಲ್ಲಿ ಹಿತಾಸಕ್ತಿಯುಳ್ಳವನಾಗಿರುವನೆಂದು ತಿಳಿಯತಕ್ಕದ್ದಲ್ಲ.

371. ಬಿಡ್ ಮಾಡುವುದಕ್ಕೆ ನಿಷೇಧ.- (1) ಈ ಅಧಿನಿಯಮದ ಮೇರೆಗೆ ಸ್ಥಿರ ಅಥವಾ ಚರ ಸ್ವತ್ತು ಮಾರಾಟಕ್ಕೆ ಸಂಬಂಧಿಸಿದಂತೆ ಯಾವುದೇ ಕರ್ತವ್ಯವನ್ನು ನಿರ್ವಹಿಸಬೇಕಾಗಿರುವ ಮುನ್ಸಿಪಲ್ ಕೌನ್ಸಿಲ್‌ನ ಯಾರೇ ನೌಕರನು ಅಥವಾ ಯಾರೇ ಅಧಿಕಾರಿಯು ಅಂಥ ಮಾರಾಟದಲ್ಲಿ ಮಾರಾಟ ಮಾಡಿದ ಯಾವುದೇ ಸ್ವತ್ತಿನ ಸಂಬಂಧದಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಬಿಡ್ ಮಾಡತಕ್ಕದ್ದಲ್ಲ ಅಥವಾ ಅದರಲ್ಲಿ ಹಿತಾಸಕ್ತಿಯನ್ನು ಹೊಂದಿರತಕ್ಕದ್ದಲ್ಲ.

(2) ಉಪಪ್ರಕರಣ (1)ರ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು, 500 ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು ಮತ್ತು ಸೇವೆಯಿಂದ ವಜಾಗೊಳ್ಳುವುದಕ್ಕೆ ಸಹ ಗುರಿಯಾಗತಕ್ಕದ್ದು.

372. ಕಂಪನಿಗಳಿಂದ ಅಪರಾಧಗಳು.- (1) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಮಾಡುವ ವ್ಯಕ್ತಿಯು ಕಂಪನಿಯಾಗಿದ್ದರೆ, ಆ ಕಂಪನಿಯನ್ನು ಮತ್ತು ಆ ಅಪರಾಧವು ನಡೆದ ಕಾಲದಲ್ಲಿ ಆ ಕಂಪನಿಯ ವ್ಯವಹಾರಗಳನ್ನು ನಡೆಸುವುದಕ್ಕಾಗಿ ಅದರ ಆಡಳಿತವನ್ನು ಹೊಂದಿದ್ದ ಮತ್ತು ಅದಕ್ಕೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು, ಆ ಅಪರಾಧದ ಬಗ್ಗೆ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿರುವುದಾವುದೂ ಆ ಅಪರಾಧವು ತನಗೆ ತಿಳಿಯದೆಯೆ ನಡೆಯಿತೆಂದು ಅಥವಾ ಅಂಥ ಅಪರಾಧವು ನಡೆಯುವುದನ್ನು ತಡೆಯಲು ಯುಕ್ತವಾದ ಎಲ್ಲ

ಜಾಗರೂಕತೆಯನ್ನು ವಹಿಸಿದ್ದನೆಂದು ಯಾರೇ ವ್ಯಕ್ತಿಯು ರುಜುವಾತುಪಡಿಸಿದರೆ, ಅವನನ್ನು ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಈ ಅಧಿನಿಯಮದ ಮೇರೆಗಿನ ಅಪರಾಧವು ಒಂದು ಕಂಪನಿಯಿಂದ ನಡೆದಿದ್ದಲ್ಲಿ ಮತ್ತು ಕಂಪನಿಯ ಯಾರೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಇಲ್ಲವೇ ಪರೋಕ್ಷ ಸಮ್ಮತಿಯಿಂದ ಆ ಅಪರಾಧವು ನಡೆಯಿತೆಂದು ರುಜುವಾತಾದಲ್ಲಿ ಅಥವಾ ಅದು ಅವನ ಯಾವುದೇ ನಿರ್ಲಕ್ಷತೆಯ ಕಾರಣದಿಂದ ಸಂಭವಿಸಿತೆಂದು ಹೇಳಬಹುದಾಗಿರುವಲ್ಲಿ, ಅಂಥ ನಿರ್ದೇಶಕನು, ವ್ಯವಸ್ಥಾಪಕನು, ಕಾರ್ಯದರ್ಶಿ ಅಥವಾ ಅಂಥ ಇತರ ಯಾರೇ ಅಧಿಕಾರಿಯು ಸಹ ಆ ಅಪರಾಧದ ಬಗ್ಗೆ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅವನು ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು.

ವಿವರಣೆ:- ಈ ಪ್ರಕರಣದ ಉದ್ದೇಶಕ್ಕಾಗಿ,-

(ಎ) ಕಂಪನಿ ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಫರ್ಮನ್ನು ಒಳಗೊಳ್ಳುತ್ತದೆ;

(ಬಿ) ಒಂದು ಫರ್ಮಿನ ಸಂಬಂಧದಲ್ಲಿ ``ನಿರ್ದೇಶಕ'' ಎಂದರೆ, ಫರ್ಮಿನ ಪಾಲುದಾರ.

[1][**372ಎ. ಧ್ವಜದ ಅಧಿಕೃತ ಪ್ರದರ್ಶನ.-** (1) ಯಾರೇ ವ್ಯಕ್ತಿಯು, ಸಿಟಿ ಮುನ್ಸಿಪಲ್ ಕೌನ್ಸಿಲ್‌ಗಳ, ಟೌನ್ ಮುನ್ಸಿಪಲ್ ಕೌನ್ಸಿಲ್‌ಗಳ, ನೈರ್ಮಲ್ಯ ಮಂಡಳಿಗಳ ಅಥವಾ ಅಧಿಸೂಚಿತ ಪ್ರದೇಶ ಸಮಿತಿಗಳ ಕಚೇರಿಗಳ ಮೇಲೆ ರಾಷ್ಟ್ರಧ್ವಜ ಅಥವಾ ಸರ್ಕಾರದಿಂದ ಅನುಮೋದಿಸಿರುವ ಧ್ವಜವಲ್ಲದೆ ಇತರೆ ಯಾವುದೇ ಧ್ವಜವನ್ನು ಹಾರಿಸತಕ್ಕದ್ದಲ್ಲ.

(2) ಉಪ-ಪ್ರಕರಣ (1) ನ್ನು ಉಲ್ಲಂಘಿಸುವ ಯಾರೇ ಆಗಲಿ, ಮೂರು ತಿಂಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆ ಅಥವಾ ಇವೆರಡರಿಂದ ಮತ್ತು ಉಲ್ಲಂಘನೆಯು ಮುಂದುವರೆದ ಸಂದರ್ಭದಲ್ಲಿ, ಉಲ್ಲಂಘನೆಯು ಮುಂದುವರೆದ ಪ್ರತಿಯೊಂದು ದಿನಕ್ಕೆ ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು][1].

1.1991ರ ಅಧಿನಿಯಮ 22ರ ಮೂಲಕ 29.4.1991 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

373. ನೋಟೀಸ್ ಇತ್ಯಾದಿಗಳ ಮೇಲೆ ಸಹಿ ಇರುವ ಮುದ್ರೆ ಒತ್ತುವುದು.- ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಬೈಲಾದ ಮೂಲಕ, ಮುನ್ಸಿಪಲ್ ಕಮಿಷನರ್ ನ ಅಥವಾ ಚೀಫ್ ಆಫೀಸರ್ ನ ಅಥವಾ ಯಾರೇ ಮುನ್ಸಿಪಲ್ ಅಧಿಕಾರಿಯ ಸಹಿ ಇರಬೇಕೆಂದು ಅಗತ್ಯಪಡಿಸಿರುವಂಥ ಪ್ರತಿಯೊಂದು ಲೈಸೆನ್ಸ್, ಲಿಖಿತ ಅನುಮತಿ, ನೋಟೀಸ್, ಬಿಲ್ಲು, ಸಮನುಗಳು ಅಥವಾ ಇತರ ದಸ್ತಾವೇಜುಗಳ ಮೇಲೆ ಸಂದರ್ಭಾನುಸಾರ ಅದು ಅಂಥ [1][ಪೌರಾಡಳಿತ ನಿರ್ದೇಶಕ][1]ರ ಅಥವಾ ಚೀಫ್ ಆಫೀಸರ್ ನ ಸಹಿ ಇರುವ ಮುದ್ರೆಯ ಪಡಿಯಚ್ಚನ್ನು ಅದಕ್ಕೆ ಹಾಕಿದ್ದರೆ, ಅದಕ್ಕೆ ಕ್ರಮಬದ್ಧವಾಗಿ ಸಹಿ ಮಾಡಲಾಗಿದೆಯೆಂದು ಭಾವಿಸತಕ್ಕದ್ದು:

ಪರಂತು, ಈ ಪ್ರಕರಣದಲ್ಲಿರುವುದಾವುದೂ, ಮುನ್ಸಿಪಲ್ ನಿಧಿಯ ಮೇಲೆ ಬರೆದ ಚೆಕ್ ಗೆ ಅಥವಾ ಮುನ್ಸಿಪಲ್ ಕೌನ್ಸಿಲ್ ನ ಪರವಾಗಿ ಬರೆದುಕೊಟ್ಟ ಕರಾರಿಗೆ ಅನ್ವಯವಾಗುತ್ತದೆಂದು ಭಾವಿಸತಕ್ಕದ್ದಲ್ಲ.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

374. ಲೈಸೆನ್ಸುಗಳು ಇತ್ಯಾದಿಗಳ ಸಂಬಂಧದಲ್ಲಿ ಉಪಬಂಧಗಳು.- (1) ಈ ಅಧಿನಿಯಮದಲ್ಲಿ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಬೈಲಾದಲ್ಲಿ ಯಾವುದೇ ಉದ್ದೇಶಕ್ಕಾಗಿ ಲೈಸೆನ್ಸ್ ನ್ನು ಅಥವಾ ಲಿಖಿತ ಅನುಮತಿಯನ್ನು ಕೊಡಬಹುದೆಂದು ಉಪಬಂಧಿಸಿದಾಗಲೆಲ್ಲಾ, ಅಂಥ ಅಥವಾ ಲಿಖಿತ ಅನುಮತಿಗಾಗಿ ಮುನ್ಸಿಪಲ್ ಕಮಿಷನರ್ ನು ಅಥವಾ ಚೀಫ್ ಆಫೀಸರ್ ನು ಅಥವಾ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳು ಮತ್ತು ಬೈಲಾಗಳ ಮೇರೆಗೆ ಅದನ್ನು ಮಂಜೂರ್ಮಾಡಲು ಅಧಿಕೃತಗೊಳಿಸಿದ ಮುಖ್ಯಾಧಿಕಾರಿಯು ಅಥವಾ ಅಧಿಕಾರಿಯು ಅಥವಾ ಈ ಬಗ್ಗೆ ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನು ಅಥವಾ ಅಂಥ ಅಧಿಕಾರಿಯು ಅಧಿಕೃತಗೊಳಿಸಿದ ಯಾರೇ ಅಧಿಕಾರಿಯು ಮಂಜೂರ್ಮಾಡತಕ್ಕದ್ದು. ಈ ಅಧಿನಿಯಮದ ಮೇರೆಗಿನ ಯಾವುವೇ ಇತರ ಉಪಬಂಧಗಳು ಅಥವಾ

ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಬೈಲಾದ ಉಪಬಂಧದ ಮೇರೆಗೆ ನಿರ್ದಿಷ್ಟಪಡಿಸಲು ಅಗತ್ಯಪಡಿಸಿರುವ ಯಾವುದೇ ಇತರ ವಿಷಯದ ಜೊತೆಗೆ,-

(ಎ) ಅದನ್ನು ಮಂಜೂರು ಮಾಡಿದ ದಿನಾಂಕ;

(ಬಿ) ಅದನ್ನು ನೀಡಿದ ಉದ್ದೇಶ ಮತ್ತು ಅದರ ಅವಧಿ (ಯಾವುದಾದರೂ ಇದ್ದರೆ);

(ಸಿ) ಯಾವ ನಿರ್ಬಂಧಗಳಿಗೆ ಅಥವಾ ಷರತ್ತುಗಳಿಗೊಳಪಟ್ಟು ಅದನ್ನು ಕೊಡಲಾಗಿದೆಯೋ ಆ ನಿರ್ಬಂಧಗಳು ಅಥವಾ ಷರತ್ತುಗಳು, ಯಾವುದಾದರೂ ಇದ್ದರೆ;

(ಡಿ) ಅದನ್ನು ಯಾರಿಗೆ ಕೊಡಲಾಗಿದೆಯೋ ಆ ವ್ಯಕ್ತಿಯ ಹೆಸರು ಮತ್ತು ವಿಳಾಸ; ಮತ್ತು

(ಇ) ಲೈಸೆನ್ಸ್ ಗಾಗಿ ಅಥವಾ ಲಿಖಿತ ಅನುಮತಿಗಾಗಿ ಸಂದಾಯ ಮಾಡಿದ ಫೀಜು ಯಾವುದಾದರೂ ಇದ್ದರೆ,

- ಇವುಗಳನ್ನು ನಿರ್ದಿಷ್ಟಪಡಿಸತಕ್ಕದ್ದು.

(2) ಈ ಅಧಿನಿಯಮದಲ್ಲಿ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಬೈಲಾದಲ್ಲಿ ಅನ್ಯಥಾ ಉಪಬಂಧಿಸಿರುವುದರ ಹೊರತು, ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಅಥವಾ ಬೈಲಾದ ಮೇರೆಗೆ ಕೊಟ್ಟ ಯಾವುದೇ ಲೈಸೆನ್ಸ್ ಅಥವಾ ಲಿಖಿತ ಅನುಮತಿಯನ್ನು ಯಾವುದೇ ಕಾಲದಲ್ಲಿ ಮುನ್ಸಿಪಲ್ ಕಮಿಷನರ್ ನು ಅಥವಾ ಚೀಫ್ ಆಫೀಸರ್ ನು ಅಥವಾ ಅದನ್ನು ನೀಡಿದ ಅಧಿಕಾರಿಯು, ಅದನ್ನು ಪಡೆದುಕೊಂಡವನು, ಸುಳ್ಳು ನಿರೂಪಣೆಯ ಅಥವಾ ಮೋಸದ ಮೂಲಕ ಅದನ್ನು ಪಡೆದುಕೊಂಡಿದ್ದಾನೆಂದು ಅಥವಾ ಅದನ್ನು ಪಡೆದುಕೊಂಡವನು, ಅದರ ಯಾವುದೇ ನಿರ್ಬಂಧಗಳನ್ನು ಅಥವಾ ಷರತ್ತುಗಳನ್ನು ಉಲ್ಲಂಘಿಸಿದ್ದಾನೆ ಅಥವಾ ತಪ್ಪಿಸಿದ್ದಾನೆ ಎಂದು ಮನವರಿಕೆಯಾದರೆ ಅಥವಾ ಅದನ್ನು ಪಡೆದವನು, ಲೈಸೆನ್ಸ್ ನ್ನು ಅಥವಾ ಅನುಮತಿಯನ್ನು ಕೊಡಲಾದಂಥ, ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ಬೈಲಾದ ಯಾವುದೇ ಉಪಬಂಧದ ಉಲ್ಲಂಘನೆಗಾಗಿ ಅಪರಾಧ ನಿರ್ಣೀತನಾದರೆ ಅಮಾನತ್ತುಗೊಳಿಸಬಹುದು ಅಥವಾ ರದ್ದುಗೊಳಿಸಬಹುದು:

ಪರಂತು,-

(ಎ) ಅಮಾನತ್ತು ಅಥವಾ ರದ್ದಿಯಾತಿಯ ಯಾವುದೇ ಆದೇಶವನ್ನು ಮಾಡುವುದಕ್ಕೆ ಮುಂಚೆ ಲೈಸೆನ್ಸ್ ಅಥವಾ ಲಿಖಿತ ಅನುಮತಿಯನ್ನು ಪಡೆದವನಿಗೆ, ಅದನ್ನು ಏಕೆ ಅಮಾನತ್ತುಗೊಳಿಸಬಾರದು ಅಥವಾ ರದ್ದುಗೊಳಿಸಬಾರದು ಎಂಬುದಕ್ಕೆ ಕಾರಣ ತೋರಿಸಲು ಸೂಕ್ತ ಅವಕಾಶವನ್ನು ಕೊಡತಕ್ಕದ್ದು;

(ಬಿ) ಅಂಥ ಪ್ರತಿಯೊಂದು ಆದೇಶವು, ಆ ಲೈಸೆನ್ಸ್ ನ್ನು ಅಥವಾ ಲಿಖಿತ ಅನುಮತಿಯನ್ನು ಅಮಾನತ್ತುಗೊಳಿಸುವುದರ ಅಥವಾ ರದ್ದುಪಡಿಸುವುದಕ್ಕಾಗಿ ಇರುವ ಕಾರಣಗಳ ಸಂಕ್ಷಿಪ್ತ ವಿವರಣೆಯನ್ನು ಒಳಗೊಂಡಿರತಕ್ಕದ್ದು.

(3) ಅಂಥ ಯಾವುದೇ ಲೈಸೆನ್ಸ್ ಅಥವಾ ಲಿಖಿತ ಅನುಮತಿಯನ್ನು ಅಮಾನತ್ತುಗೊಳಿಸಿದಾಗ ಅಥವಾ ರದ್ದುಗೊಳಿಸಿದಾಗ ಅಥವಾ ಅದನ್ನು ಯಾವ ಅವಧಿಗಾಗಿ ಕೊಡಲಾಗಿತ್ತೊ, ಆ ಅವಧಿಯು ಮುಕ್ತಾಯವಾದಾಗ ಅದನ್ನು ಪಡೆದುಕೊಂಡವನು, ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಅಥವಾ ಬೈಲಾದ ಎಲ್ಲಾ ಉದ್ದೇಶಗಳಿಗಾಗಿ, ಆಲೈಸೆನ್ಸ್ ನ್ನು ಅಥವಾ ಲಿಖಿತ ಅನುಮತಿಯನ್ನು ಅಮಾನತ್ತುಗೊಳಿಸುವ ಅಥವಾ ರದ್ದುಪಡಿಸುವ ಆದೇಶವನ್ನು ರದ್ದುಪಡಿಸುವುದು ಅಥವಾ ಆ ಲೈಸೆನ್ಸ್ ನ್ನು ಅಥವಾ ಲಿಖಿತ ಅನುಮತಿಯನ್ನು ನವೀಕರಿಸುವ ಅಂಥ ಕಾಲದವರೆಗೆ ಲೈಸೆನ್ಸ್ ನ್ನು ಅಥವಾ ಲಿಖಿತ ಅನುಮತಿಯನ್ನು ಪಡೆದಿಲ್ಲವೆಂದು ಭಾವಿಸತಕ್ಕದ್ದು.

(4) ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಬೈಲಾದ ಮೇರೆಗೆ ಕೊಡಲಾದ ಯಾವುದೇ ಲೈಸೆನ್ಸ್ ನ್ನುಅಥವಾ ಲಿಖಿತ ಅನುಮತಿಯನ್ನು ಪಡೆದುಕೊಂಡ ಪ್ರತಿಯೊಬ್ಬನು, ಅಂಥ ಲೈಸೆನ್ಸ್ ಅಥವಾ ಲಿಖಿತ ಅನುಮತಿಯು ಜಾರಿಯಲ್ಲಿರುವಾಗ ಎಲ್ಲ ಯುಕ್ತ ಕಾಲದಲ್ಲಿ ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನು ಅಥವಾ ಅದನ್ನು ಕೊಟ್ಟ ಅಧಿಕಾರಿಯು, ಅಂಥ ಲೈಸೆನ್ಸ್ ನ್ನು ಅಥವಾ ಲಿಖಿತ ಅನುಮತಿಯನ್ನು ಹಾಜರುಪಡಿಸತಕ್ಕದ್ದೆಂದು ಅಗತ್ಯಪಡಿಸಿದರೆ ಹಾಗೆ ಮಾಡತಕ್ಕದ್ದು.

375. ಮುನ್ಸಿಪಲ್ ಸೇವೆಯಲ್ಲಿ ನಿಯೋಜಿತರಾದ ಸ್ವೀಪರ್ ಗಳು (ಕಸಗುಡಿಸುವವರು) ಮತ್ತು ವ್ಯಕ್ತಿಗಳ ಕೆಲವು ಇತರ ವರ್ಗಗಳ ಸೇವಾ ಷರತ್ತುಗಳು.- (1) ಮುನ್ಸಿಪಲ್ ಕೌನ್ಸಿಲ್‌ನಿಂದ ನಿಯೋಜಿತನಾದ ಸ್ವೀಪರ್ ನಾಗಿರುವ ಯಾರೇ ವ್ಯಕ್ತಿಯು, ಹಾಗೆ ಮಾಡಲು ಅವನನ್ನು ಅಧಿಕೃತಗೊಳಿಸುವ ಕರಾರು ಇಲ್ಲದಿರುವಲ್ಲಿ ಮತ್ತು ಯುಕ್ತ ಕಾರಣವಿಲ್ಲದೆ, ಮುನ್ಸಿಪಲ್ ಕಮಿಷನರ್ ನಿಗೆ ಅಥವಾ ಚೀಫ್ ಆಫೀಸರ್ ನಿಗೆ, ಒಂದು ತಿಂಗಳಿನ ನೋಟೀಸ್ ನ್ನು ಕೊಡದೆ ತನ್ನ ಕೆಲಸಕ್ಕೆ ರಾಜೀನಾಮೆಯನ್ನು ಕೊಡತಕ್ಕದ್ದಲ್ಲ ಅಥವಾ ತನ್ನ ಕರ್ತವ್ಯದಿಂದ ಗೈರುಹಾಜರಿಯಾಗತಕ್ಕದ್ದಲ್ಲ ಅಥವಾ ತನ್ನ ಕರ್ತವ್ಯಗಳನ್ನು ನಿರ್ಲಕ್ಷಿಸತಕ್ಕದ್ದಲ್ಲ ಅಥವಾ ಯುಕ್ತ ಕಾರಣವಿಲ್ಲದೆ ಅವುಗಳನ್ನು ನೆರವೇರಿಸಲು ನಿರಾಕರಿಸತಕ್ಕದ್ದಲ್ಲ.

(2) ಮುನ್ಸಿಪಲ್ ಕೌನ್ಸಿಲ್ ಸರ್ಕಾರದ ಪೂರ್ವ ಮಂಜೂರಾತಿ ಪಡೆದು ನಿರ್ಣಯದಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಂದು ಅಥವಾ ಅಂದಿನಿಂದ, ಸಾರ್ವಜನಿಕ ಆರೋಗ್ಯ ಅಥವಾ ಸುರಕ್ಷತೆಗೆ ನಿಕಟ ಸಂಬಂಧವುಳ್ಳ ಪ್ರಕಾರ್ಯಗಳನ್ನು ಹೊಂದಿರುವ ಮುನ್ಸಿಪಲ್ ಕೌನ್ಸಿಲ್ ನಿಯೋಜಿಸಿದ ವ್ಯಕ್ತಿಗಳ ಯಾವುದೇ ನಿರ್ದಿಷ್ಟ ವರ್ಗಕ್ಕೆ ಈ ಪ್ರಕರಣದ ಉಪಬಂಧಗಳು ಅನ್ವಯವಾಗತಕ್ಕದ್ದೆಂದು ನಿರ್ದೇಶಿಸಬಹುದು.

376. ದಸ್ತಾವೇಜನ್ನು ಅಥವಾ ನಮೂದನ್ನು ಸಾಕ್ಷ್ಯವಾಗಿ ಅಂಗೀಕರಿಸುವುದು.- (1) ಯಾವುದೇ ರಸೀದಿ, ಅರ್ಜಿ, ನಕಾಶೆ, ನೋಟೀಸ್, ಆದೇಶ ಅಥವಾ ಮುನ್ಸಿಪಲ್ ಕೌನ್ಸಿಲ್‌ನ ಇತರ ದಸ್ತಾವೇಜಿನಲ್ಲಿಯ ಅಥವಾ ರಿಜಿಸ್ಟರ್ ನಲ್ಲಿಯ ಯಾವುದೇ ನಮೂದಿನ ನಕಲನ್ನು ಮುನ್ಸಿಪಲ್ ಕಮಿಷನರ್ ನು ಅಥವಾ ಚೀಫ್ ಆಫೀಸರ್ ನು ಕ್ರಮಬದ್ಧವಾಗಿ ಪ್ರಮಾಣೀಕರಿಸಿದ್ದರೆ ಆ ದಸ್ತಾವೇಜು ಅಥವಾ ನಮೂದು ಅಸ್ತಿತ್ವದಲ್ಲಿ ಇರುವುದರ ಬಗ್ಗೆ ಸಾಕ್ಷ್ಯವಾಗಿ ಅಂಗೀಕಾರಾರ್ಹವಾಗತಕ್ಕದ್ದು ಮತ್ತು ಅವುಗಳಲ್ಲಿ ದಾಖಲಿಸಿರುವ ವಿಷಯದ ಮತ್ತು ವ್ಯವಹಾರಗಳ ಬಗ್ಗೆ ಅಂಥ ಸಾಕ್ಷ್ಯವಾಗಿ ಅಂಥ ವಿಷಯಗಳನ್ನು ಮತ್ತು ವ್ಯವಹಾರಗಳನ್ನು ರುಜುವಾತುಪಡಿಸಲು ಆ ಮೂಲ ದಸ್ತಾವೇಜನ್ನು ಅಥವಾ ನಮೂದನ್ನು ಹಾಜರುಪಡಿಸಿದ್ದರೆ, ಅಂಗೀಕಾರಾರ್ಹವಾಗಬಹುದಾದಷ್ಟರ ಮಟ್ಟಿಗೆ ಪ್ರತಿಯೊಂದು ಪ್ರಕರಣದಲ್ಲಿ ಅಂಗೀಕೃತವಾಗತಕ್ಕದ್ದು.

(2) ಯಾರೇ ಮುನ್ಸಿಪಲ್ ಅಧಿಕಾರಿಯನ್ನು ಅಥವಾ ಇತರ ನಿಯೋಜಿತನನ್ನು, ಮುನ್ಸಿಪಲ್ ಕೌನ್ಸಿಲ್ ಪಕ್ಷಕಾರನಾಗಿಲ್ಲದ ಅಂಥ ಯಾವುದೇ ಕಾನೂನು ವ್ಯವಹರಣೆಯಲ್ಲಿ ಯಾವುದರ ಒಳಾಂಶಗಳು (1)ನೇ ಉಪಪ್ರಕರಣದ ಮೇರೆಗೆ ಪ್ರಮಾಣೀಕೃತ ನಕಲಿನ ಮೂಲಕ ರುಜುವಾತುಪಡಿಸಬಹುದೋ, ಆ ಯಾವುದೇ ರಿಜಿಸ್ಟರನ್ನು ಅಥವಾ ದಸ್ತಾವೇಜುಗಳನ್ನು ಹಾಜರುಪಡಿಸಲು ಅಥವಾ ವಿಶೇಷ ಕಾರಣಕ್ಕಾಗಿ ನ್ಯಾಯಾಲಯವು ಆದೇಶದ ಮೂಲಕವಲ್ಲದೆ ಅದರಲ್ಲಿ ದಾಖಲು ಮಾಡಿದ ಯಾವುದೇ ವಿಷಯವನ್ನು ಅಥವಾ ವ್ಯವಹಾರವನ್ನು ರುಜುವಾತುಪಡಿಸಲು ಸಾಕ್ಷಿದಾರನಾಗಿ ಹಾಜರಾಗಲು ಅಗತ್ಯಪಡಿಸತಕ್ಕದ್ದಲ್ಲ.

377. ಲೈಸೆನ್ಸ್ ನೀಡಿಕೆಯ ಮತ್ತು ಇತರ ಉಪಬಂಧಗಳು ಸರ್ಕಾರಕ್ಕೆ ಅನ್ವಯವಾಗತಕ್ಕದ್ದಲ್ಲ.- (1) ಈ ಅಧಿನಿಯಮದಲ್ಲಿ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದಲ್ಲಿ ಅಥವಾ ಬೈಲಾದಲ್ಲಿ ಇರುವುದು ಯಾವುದು ಕೇಂದ್ರ ಅಥವಾ ರಾಜ್ಯ ಸರ್ಕಾರದ ಸ್ವಾಧೀನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಯಾವುದೇ ಸ್ಥಳಕ್ಕೆ ಸಂಬಂಧಿಸಿದಂತೆ ಅಥವಾ ಕೇಂದ್ರ ಅಥವಾ ರಾಜ್ಯ ಸರ್ಕಾರದ ಯಾವುದೇ ಸ್ವತ್ತಿಗೆ ಸಂಬಂಧಿಸಿದಂತೆ, ಈ ಅಧಿನಿಯಮದ ಅಥವಾ ಯಾವುದೇ ಬೈಲಾದ ಮೇರೆಗೆ ಯಾವುದೇ ಲೈಸೆನ್ಸ್ ನ್ನು ಪಡೆಯಲು ಅಥವಾ ಯಾವುದೇ ಅನುಮತಿಯನ್ನು ತೆಗೆದುಕೊಳ್ಳಲು ಅಗತ್ಯಪಡಿಸುವುದೆಂದು ಅರ್ಥೈಸತಕ್ಕದ್ದಲ್ಲ.

(2) ಭಾರತ ಸಂವಿಧಾನದ 285ನೇ ಅನುಚ್ಛೇದದ ಮೇರೆಗೆ ಒಕ್ಕೂಟದ ಯಾವುದೇ ಸ್ವತ್ತಿನ ಮೇಲೆ ಯಾವುದೇ ತೆರಿಗೆಯ ವಿಧಿಸುವಿಕೆ ಅಥವಾ ತೆರಿಗೆಯ ವಿಧಿಸುವಿಕೆ ಮುಂದುವರಿಕೆಯನ್ನು ಅನುಮತಿಸಬಹುದಾದಷ್ಟರಮಟ್ಟಿಗೆ ಹೊರತು ಒಕ್ಕೂಟದ ಸ್ವತ್ತಿಗೆ ಈ ಅಧಿನಿಯಮದ ಮೇರೆಗೆ ವಿಧಿಸಿದ ಯಾವುದೇ ತೆರಿಗೆಯಿಂದ ವಿನಾಯಿತಿ ಇರತಕ್ಕದ್ದು.

378. ಬಸ್ ಸ್ಟಾಪ್‌ಗಳಿಗೆ ಪ್ರಯಾಣಿಕರ ಶೆಲ್ಟರ್‌ಗಳಿಗೆ ಲೈಸೆನ್ಸ್ ನೀಡಿಕೆಯ ಉಪಬಂಧಗಳು ಅನ್ವಯವಾಗತಕ್ಕದ್ದಲ್ಲ, ಇತ್ಯಾದಿ.- ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದಾಗ್ಯೂ,-

(1) [1][ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ]ಕ್ಕೆ ಮುನ್ಸಿಪಲ್ ಕೌನ್ಸಿಲ್ ನಲ್ಲಿ ನಿಹಿತವಾಗಿರುವ ಯಾವುದೇ ರಸ್ತೆಯ ಅಥವಾ ಭೂಮಿಯ ಮೇಲೆ ಬಸ್ಸುಗಳು ನಿಲ್ಲುವ ಸ್ಥಳಗಳನ್ನು ತೋರಿಸುವ

ಸ್ತಂಭಗಳನ್ನು ನಿರ್ಮಿಸುವುದಕ್ಕಾಗಿ ಅಥವಾ ಸ್ಥಾಪಿಸುವುದಕ್ಕಾಗಿ ಅಥವಾ ಪ್ರಯಾಣಿಕರ ಆಶ್ರಯಗಳು, ಟಿಕೇಟ್ ಬೂತ್‌ಗಳು ಮತ್ತು ಬಸ್ ನಿಲ್ದಾಣಗಳನ್ನು ಸ್ಥಾಪಿಸುವುದಕ್ಕಾಗಿ ಅಥವಾ ನಿರ್ಮಿಸುವುದಕ್ಕಾಗಿ ಯಾವುದೇ ಲೈಸೆನ್ಸ್ ಅಥವಾ ಅನುಮತಿಯು ಅವಶ್ಯವಿರತಕ್ಕದ್ದಲ್ಲ:

1. 1973ರ ಕರ್ನಾಟಕ ಕಾನೂನುಗಳ ಆದೇಶ ಅಳವಡಿಕೆಗಳ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

ಪರಂತು, ಈ ಪ್ರಕರಣದ ಮೇರೆಗೆ ಯಾವುದೇ ಪ್ರಯಾಣಿಕರ ಶೆಲ್ಟರ್, ಟಿಕೇಟ್ ಬೂತ್‌ಗಳು ಅಥವಾ ಬಸ್ ನಿಲ್ದಾಣವನ್ನು ಸರ್ಕಾರದ ಪೂರ್ವ ಮಂಜೂರಾತಿ ಇಲ್ಲದೆ ಸ್ಥಾಪಿಸತಕ್ಕದ್ದಲ್ಲ ಅಥವಾ ನಿರ್ಮಿಸತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಸ್ಥಾಪಿಸಿದ ಅಥವಾ ನಿರ್ಮಿಸಿದ ಪ್ರಯಾಣಿಕರ ಶೆಲ್ಟರ್ ಗಳಿಗೆ, ಟಿಕೇಟು ಬೂತ್‌ಗಳಿಗೆ ಮತ್ತು ಬಸ್ ನಿಲ್ದಾಣಗಳಿಗೆ ಸಂಬಂಧಿಸಿದಂತೆ [1][ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ][1]ವು, ಮತ್ತು ಮುನ್ಸಿಪಲ್ ಕೌನ್ಸಿಲ್ ಈ ಇಬ್ಬರೂ ಪಕ್ಷಕಾರರು ಒಪ್ಪಿಕೊಳ್ಳಬಹುದಾದಂಥ ವಾರ್ಷಿಕ ಭೂ ಬಾಡಿಗೆಯನ್ನು ಸಂದಾಯ ಮಾಡಲು ಮತ್ತು ಅಂಥ ಯಾವುದೇ ಒಪ್ಪಂದ ಇಲ್ಲದಿರುವಲ್ಲಿ ಸರ್ಕಾರವು ನಿರ್ಧರಿಸಬಹುದಾದಂಥ ವಾರ್ಷಿಕ ಭೂ ಬಾಡಿಗೆಯನ್ನು ಸಂದಾಯ ಮಾಡಲು ಹೊಣೆಯಾಗಿರತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಆದೇಶ ಅಳವಡಿಕೆಗಳ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

[1][379. ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ವಿನಿಯಮನ) ಅಧಿನಿಯಮ, 1966ರ ಉಪಬಂಧಗಳು ಬಾಧಕವಾಗತಕ್ಕದ್ದಲ್ಲ.- 243ನೇ, 244ನೇ, 256ನೇ ಮತ್ತು 324ನೇ ಪ್ರಕರಣಗಳ ಉಪಬಂಧಗಳು, ಮಾರುಕಟ್ಟೆಗಳಿಗೆ ಮತ್ತು ಇತರ ಸ್ಥಳಗಳಿಗೆ ಸಂಬಂಧಪಡುವಷ್ಟರಮಟ್ಟಿಗೆ 1939ರ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆಗಳ (ವಿನಿಯಮನ) ಅಧಿನಿಯಮ, 1966ರ ಮೇರೆಗೆ ಘೋಷಿಸಿದ ಯಾವುದೇ ಮಾರುಕಟ್ಟೆಗೆ ಅನ್ವಯವಾಗತಕ್ಕದ್ದಲ್ಲ ಮತ್ತು ಇತರ ಯಾವುದೇ ಮಾರುಕಟ್ಟೆಗೆ ಸಂಬಂಧಿಸಿದಂತೆ ಈ ಅಧಿನಿಯಮದ ಉಪಬಂಧಗಳು 1966ರ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆಗಳ ಅಧಿನಿಯಮದ ಕಾನೂನಿನ ಜೊತೆಗೆ ಮತ್ತು ಅದನ್ನು ನ್ಯೂನತೆಗೊಳಿಸದಂತೆ, ಇರತಕ್ಕದ್ದು.][1]

1.1986ರ ಅಧಿನಿಯಮ 33ರ ಮೂಲಕ 7.10.1986 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

380. ಮೇಲ್ಪಾಟು ಅಧಿನಿಯಮಗಳ ಉಪಬಂಧಗಳಿಗೆ ಬಾಧಕವಾಗತಕ್ಕದ್ದಲ್ಲ.- ಈ ಅಧಿನಿಯಮದ VIIIನೇ ಅಧ್ಯಾಯದ ಉಪಬಂಧಗಳು ತತ್ಕಾಲದಲ್ಲಿ ಜಾರಿಯಲ್ಲಿರುವ 1903ರ ಮೈಸೂರು ನಗರ ಮೇಲ್ಪಾಟು ಅಧಿನಿಯಮವು, (1903ರ ಮೈಸೂರು ಅಧಿನಿಯಮ 3) ಅನ್ವಯವಾಗುವಂಥ ಪ್ರದೇಶಕ್ಕೆ ಮತ್ತು ಯಾವುದೇ ಇತರ ಅಂಥದೇ ಕಾನೂನಿನ ಮೇರೆಗೆ ಮೇಲ್ಪಾಟು ಮಂಡಲಿಯನ್ನು ರಚಿಸಿರುವಂಥ ಯಾವುದೇ ಇತರ ಮುನ್ಸಿಪಲ್ ಏರಿಯಾಕ್ಕೆ ಅನ್ವಯವಾಗತಕ್ಕದ್ದಲ್ಲ.

381. ಮಧ್ಯಕಾಲೀನ ಉಪಬಂಧಗಳು.- (1) ಈ ಅಧಿನಿಯಮದಲ್ಲಿ ಅಥವಾ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದಾಗ್ಯೂ 382ನೇ ಪ್ರಕರಣದ ಮೂಲಕ ನಿರಸನಗೊಳಿಸಿದ ಈ ಅಧಿನಿಯಮಿತಿಗಳ ಮೇರೆಗೆ ರಚಿಸಿದ ಮತ್ತು ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ನಿಕಟಪೂರ್ವದಲ್ಲಿ, ಪಂಚಾಯಿತಿಗಳೆಂದು, ಟೌನ್ ಮುನ್ಸಿಪಲ್ ಕೌನ್ಸಿಲ್‌ಗಳೆಂದು ಅಥವಾ ಸಿಟಿ ಮುನ್ಸಿಪಲ್ ಕೌನ್ಸಿಲ್‌ಗಳೆಂದು ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದೇಶಿಸಬಹುದಾದ ಅಂಥ ಕೆಲಸ ಮಾಡುತ್ತಿರುವ ಯಾವುದೇ ಹೆಸರಿನಿಂದ ಕರೆಯಲಾದ ಅಂಥ ಮುನ್ಸಿಪಲ್ ನಿಕಾಯಗಳು, ಈ ಅಧಿನಿಯಮವು ಪ್ರಾರಂಭವಾಗುವ ದಿನಾಂಕದಿಂದ ಗ್ರಾಮ ಪಂಚಾಯಿತಿಗಳಿಗೆ ಸಂದರ್ಭಾನುಸಾರ 1959ರ [1][ಕರ್ನಾಟಕ][1] ಗ್ರಾಮ ಪಂಚಾಯಿತಿಗಳು ಮತ್ತು ಸ್ಥಳೀಯ ಮಂಡಳಿಗಳ ಅಧಿನಿಯಮದ ಮೂಲಕ ಅಥವಾ ಟೌನ್ ಮುನ್ಸಿಪಲ್ ಕೌನ್ಸಿಲ್‌ಗಳಿಗೆ ಮತ್ತು ಸಿಟಿ ಮುನ್ಸಿಪಲ್ ಕೌನ್ಸಿಲ್‌ಗಳಿಗೆ ಈ ಅಧಿನಿಯಮದ ಮೂಲಕ, ಪ್ರದಾನ ಮಾಡಿದ ಅಧಿಕಾರಗಳನ್ನು ಚಲಾಯಿಸಲು ಮತ್ತು ಕರ್ತವ್ಯಗಳನ್ನು ನೆರವೇರಿಸಲು ಸಂದರ್ಭಾನುಸಾರ 1959ರ [1][ಕರ್ನಾಟಕ][1] ಗ್ರಾಮ ಪಂಚಾಯಿತಿಗಳು ಮತ್ತು ಸ್ಥಳೀಯ ಮಂಡಲಿಗಳ ಅಧಿನಿಯಮದ ಉಪಬಂಧಗಳು ಈ ಅಧಿನಿಯಮದ ಉಪಬಂಧಗಳ ಮೇರೆಗೆ ಪಂಚಾಯಿತಿಗಳು ಅಥವಾ ಟೌನ್ ಮುನ್ಸಿಪಲ್ ಕೌನ್ಸಿಲ್‌ಗಳನ್ನು ಅಥವಾ ಸಿಟಿ ಮುನ್ಸಿಪಲ್ ಕೌನ್ಸಿಲ್‌ಗಳನ್ನು ಕ್ರಮಬದ್ಧವಾಗಿ ನಡೆಸುವವರೆಗೆ ಸಕ್ಷಮವಾದ ನಿಕಾಯಗಳಾಗಿರತಕ್ಕದ್ದು:

1. 1973ರ ಕರ್ನಾಟಕ ಕಾನೂನುಗಳ ಆದೇಶ ಅಳವಡಿಕೆಗಳ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

ಪರಂತು, ಯಾವುದೇ ಮುನ್ಸಿಪಲ್ ನಿಕಾಯವನ್ನು,-

(i) ಅಂಥ ಮುನ್ಸಿಪಲ್ ನಿಕಾಯದ ಅಧಿಕಾರವ್ಯಾಪ್ತಿಯಲ್ಲಿನ ಪ್ರದೇಶದ ಜನಸಂಖ್ಯೆಯ ಹಿಂದಿನ ಕೊನೆಯ ಜನಗಣತಿಯಲ್ಲಿ ನಿರ್ಧರಿಸಿದಂತೆ ಹತ್ತು ಸಾವಿರಕ್ಕಿಂತ ಕಡಿಮೆ ಇದ್ದ ಹೊರತು, ಪಂಚಾಯಿತಿ ಎಂಬುದಾಗಿ;

(ii) ಅಂಥ ಮುನ್ಸಿಪಲ್ ನಿಕಾಯದ ಅಧಿಕಾರವ್ಯಾಪ್ತಿಯಲ್ಲಿನ ಪ್ರದೇಶದ ಜನಸಂಖ್ಯೆಯ ಹಿಂದಿನ ಕೊನೆಯ ಜನಗಣತಿಯಲ್ಲಿ ನಿರ್ಧರಿಸಿದಂತೆ ಐವತ್ತು ಸಾವಿರಕ್ಕಿಂತ ಕಡಿಮೆ ಇದ್ದ ಹೊರತು ಟೌನ್ ಮುನ್ಸಿಪಲ್ ಕೌನ್ಸಿಲ್ ಎಂಬುದಾಗಿ;

(iii) ಅಂಥ ಮುನ್ಸಿಪಲ್ ನಿಕಾಯದ ಅಧಿಕಾರವ್ಯಾಪ್ತಿಯಲ್ಲಿನ ಪ್ರದೇಶದ ಜನಸಂಖ್ಯೆಯು ಹಿಂದಿನ ಕೊನೆಯ ಜನಗಣತಿಯಲ್ಲಿ ನಿರ್ಧರಿಸಿದಂತೆ ಐವತ್ತು ಸಾವಿರಕ್ಕೂ ಮೀರಿದ್ದ ಹೊರತು, ಸಿಟಿ ಮುನ್ಸಿಪಲ್ ಕೌನ್ಸಿಲ್ ಎಂಬುದಾಗಿ

- ನಿರ್ದೇಶಿಸತಕ್ಕದ್ದಲ್ಲ.

ವಿವರಣೆ:- ಈ ಪ್ರಕರಣದಲ್ಲಿ, ಮುನ್ಸಿಪಲ್ ನಿಕಾಯ ಎಂಬುದರಲ್ಲಿ ಅಧಿಸೂಚಿತ ಪ್ರದೇಶ ಸಮಿತಿ, ಪಟ್ಟಣ ಮಂಡಲಿ, ನೈರ್ಮಲ್ಯ ಮಂಡಲಿ ಅಥವಾ ಯಾವುದೇ ಕಾನೂನಿನ ಮೇರೆಗೆ ರಚಿತವಾದ ಅಂಥಹದೇ ಇತರ ನಿಕಾಯವನ್ನು ಒಳಗೊಳ್ಳುತ್ತದೆ.

(2) 382ನೇ ಪ್ರಕರಣದ ಉಪಬಂಧಗಳಿಗೆ ಮತ್ತು 383ನೇ ಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶಕ್ಕೊಳಪಟ್ಟು,-

(ಎ) ಮುನ್ಸಿಪಲ್ ಕೌನ್ಸಿಲ್‌ನ್ನು ಪಂಚಾಯಿತಿಯಾಗಿ ಪರಿವರ್ತಿಸುವುದಕ್ಕೆ ಸಂಬಂಧಪಟ್ಟಂತೆ 1959ರ [1][ಕರ್ನಾಟಕ][1] ಗ್ರಾಮ ಪಂಚಾಯಿತಿಗಳು ಮತ್ತು ಸ್ಥಳೀಯ ಮಂಡಲಿಗಳ ಅಧಿನಿಯಮದ ಉಪಬಂಧಗಳು (1)ನೇ ಉಪಪ್ರಕರಣದ ಮೇರೆಗೆ ಪಂಚಾಯಿತಿ ಎಂಬುದಾಗಿ ನಿರ್ದೇಶಿಸಲಾದ ಮುನ್ಸಿಪಲ್ ನಿಕಾಯವನ್ನು, ಸದರಿ ಉಪಬಂಧಗಳ ಮೇರೆಗೆ ಪಂಚಾಯಿತಿಯಾಗಿ ಪರಿವರ್ತಿಸಿದ್ದರೆ ಹೇಗೆ ಅನ್ವಯವಾಗುತ್ತಿದ್ದವೋ ಹಾಗೆ ಅನ್ವಯವಾಗತಕ್ಕದ್ದು; ಮತ್ತು

1. 1973ರ ಕರ್ನಾಟಕ ಕಾನೂನುಗಳ ಆದೇಶ ಅಳವಡಿಕೆಗಳ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(ಬಿ) ಈ ಅಧಿನಿಯಮದ 362ನೇ ಪ್ರಕರಣ ಅಥವಾ 361ನೇ ಪ್ರಕರಣದ ಉಪಬಂಧಗಳು, ಸಂದರ್ಭಾನುಸಾರ ಟೌನ್ ಮುನ್ಸಿಪಲ್ ಕೌನ್ಸಿಲ್ ಅಥವಾ ಸಿಟಿ ಮುನ್ಸಿಪಲ್ ಕೌನ್ಸಿಲ್ ಎಂದು ನಿರ್ದೇಶಿಸಲಾದ ಮುನ್ಸಿಪಲ್ ನಿಕಾಯವನ್ನು, ಸಂದರ್ಭಾನುಸಾರ ಟೌನ್ ಮುನ್ಸಿಪಲ್ ಕೌನ್ಸಿಲ್ ಅಥವಾ ಸಿಟಿ ಮುನ್ಸಿಪಲ್ ಕೌನ್ಸಿಲ್ ಆಗಿ ಪರಿವರ್ತಿಸಿದ್ದರೆ ಹೇಗೆ ಅನ್ವಯವಾಗುತ್ತಿದ್ದವೋ ಹಾಗೆ ಅನ್ವಯವಾಗತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ ಹೊರಡಿಸಿದ ಯಾವುದೇ ಅಧಿಸೂಚನೆಗೊಳಪಟ್ಟು, ಸದರಿ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಪ್ರತಿಯೊಂದು ಮುನ್ಸಿಪಲ್ ನಿಕಾಯವನ್ನು ಅದು,-

(i) ಸಿಟಿ ಮುನ್ಸಿಪಲ್ ಕೌನ್ಸಿಲ್, ಪುರ, [1][ಮುನ್ಸಿಪಲ್ ಏರಿಯಾ][1] ಅಥವಾ ಪಟ್ಟಣ ಸಮಿತಿಯಾಗಿದ್ದಲ್ಲಿ, ಅದು ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಈ ಅಧಿನಿಯಮದ ಉಪಬಂಧಗಳ ಮೇರೆಗೆ ಅಂಥ ನಿಕಾಯದ ಅಧಿಕಾರವ್ಯಾಪ್ತಿಯೊಳಗಿನ ಪ್ರದೇಶಕ್ಕಾಗಿ ಸಿಟಿ ಮುನ್ಸಿಪಲ್ ಕೌನ್ಸಿಲ್‌ನ್ನು ಕ್ರಮಬದ್ಧವಾಗಿ ರಚಿಸುವವರೆಗೆ, ಈ ಅಧಿನಿಯಮದ ಉಪಬಂಧಗಳ ಮೂಲಕ ಸಿಟಿ ಮುನ್ಸಿಪಲ್ ಕೌನ್ಸಿಲ್‌ಗೆ ಪ್ರದಾನ ಮಾಡಿದ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ii) ಖಂಡ (i) ರಲ್ಲಿ ಉಲ್ಲೇಖಿಸಿದ ನಿಕಾಯವಲ್ಲದ ಇತರ ಯಾವುದೇ ನಿಕಾಯವು ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ, ಈ ಅಧಿನಿಯಮದ ಉಪಬಂಧಗಳ ಮೇರೆಗೆ ಅಂಥ ನಿಕಾಯದ ಅಧಿಕಾರವ್ಯಾಪ್ತಿಯೊಳಗಿನ ಪ್ರದೇಶಕ್ಕಾಗಿ ಟೌನ್ ಮುನ್ಸಿಪಲ್ ಕೌನ್ಸಿಲ್‌ನ್ನು ಕ್ರಮಬದ್ಧವಾಗಿ ರಚಿಸುವವರೆಗೆ, ಈ ಅಧಿನಿಯಮದ ಉಪಬಂಧಗಳ ಮೂಲಕ ಟೌನ್ ಮುನ್ಸಿಪಲ್ ಕೌನ್ಸಿಲ್ ಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

(4) ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಪ್ರತಿಯೊಂದು ಪಂಚಾಯಿತಿ, ಟೌನ್ ಮುನ್ಸಿಪಲ್ ಕೌನ್ಸಿಲ್ ಅಥವಾ ಸಿಟಿ ಮುನ್ಸಿಪಲ್ ಕೌನ್ಸಿಲ್‌ಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಅವಧಿಯ ಮುಕ್ತಾಯಕ್ಕೆ ಮುಂಚೆ,

ಸಂದರ್ಭಾನುಸಾರ 1959ರ [1][ಕರ್ನಾಟಕ][1] ಗ್ರಾಮ ಪಂಚಾಯಿತಿಗಳು ಮತ್ತು ಸ್ಥಳೀಯ ಮಂಡಲಿಗಳ ಅಧಿನಿಯಮದ ಉಪಬಂಧಗಳ ಅಥವಾ ಈ ಅಧಿನಿಯಮದ ಉಪಬಂಧಗಳ ಮೇರೆಗೆ, ಪಂಚಾಯಿತಿ ಟೌನ್ ಮುನ್ಸಿಪಲ್ ಕೌನ್ಸಿಲ್ ಅಥವಾ ಸಿಟಿ ಮುನ್ಸಿಪಲ್ ಕೌನ್ಸಿಲ್‌ನ್ನು ಕ್ರಮಬದ್ಧವಾಗಿ ರಚಿಸತಕ್ಕದ್ದು ಮತ್ತು ಸಂದರ್ಭಾನುಸಾರ ಸದರಿ ಪಂಚಾಯಿತಿಯ ಅಥವಾ ಮುನ್ಸಿಪಲ್ ಕೌನ್ಸಿಲ್‌ನ ಮೊದಲನೇ ಸಭೆಯ ದಿನಾಂಕದಿಂದ, (1)ನೇ ಮತ್ತು (3)ನೇ ಉಪಪ್ರಕರಣಗಳ ಮೇರೆಗೆ ಸಂದರ್ಭಾನುಸಾರ ಪಂಚಾಯಿತಿಯ ಅಧಿಕಾರಗಳನ್ನು ಚಲಾಯಿಸುತ್ತಿರುವ ಮತ್ತು ಪ್ರಕಾರ್ಯಗಳನ್ನು ನೆರವೇರಿಸುತ್ತಿರುವ ಪ್ರತಿಯೊಂದು ನಿಕಾಯವು ಮತ್ತು ಟೌನ್ ಮುನ್ಸಿಪಲ್ ಕೌನ್ಸಿಲ್‌ನ ಅಥವಾ ಸಿಟಿ ಮುನ್ಸಿಪಲ್ ಕೌನ್ಸಿಲ್‌ನ ಅಧಿಕಾರಗಳನ್ನು ಚಲಾಯಿಸುತ್ತಿರುವ ಮತ್ತು ಪ್ರಕಾರ್ಯಗಳನ್ನು ನೆರವೇರಿಸುತ್ತಿರುವ ಪ್ರತಿಯೊಂದು ಮುನ್ಸಿಪಲ್ ನಿಕಾಯವು ವಿಘಟಿತವಾಗತಕ್ಕದ್ದು:

1. 1973ರ ಕರ್ನಾಟಕ ಕಾನೂನುಗಳ ಆದೇಶ ಅಳವಡಿಕೆಗಳ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

ಪರಂತು, ಈ ಉಪಪ್ರಕರಣದ ಮೇರೆಗೆ, ಯಾವುದೇ ಪಂಚಾಯಿತಿಗೆ, ಟೌನ್ ಮುನ್ಸಿಪಲ್ ಕೌನ್ಸಿಲ್‌ಗೆ ಅಥವಾ ಸಿಟಿ ಮುನ್ಸಿಪಲ್ ಕೌನ್ಸಿಲ್‌ಗೆ ಸಂಬಂಧಿಸಿದ ನಿರ್ದಿಷ್ಟಪಡಿಸಿದ ಅವಧಿಯು ಯಾವ ಅಧಿನಿಯಮಿತಿಯ ಉಪಬಂಧಗಳಿಗನುಸಾರವಾಗಿ ಸದರಿ ನಿಕಾಯವನ್ನು ರಚಿಸಲಾಗಿತ್ತೋ ಅಥವಾ ಪುನರ್ ರಚಿಸಲಾಗಿತ್ತೋ ಆ ಅಧಿನಿಯಮದ ಸದರಿ ಉಪಬಂಧಗಳಿಗನುಸಾರ ನಿಕಾಯದ ಅವಧಿಯನ್ನು ಯಾವ ಅವಧಿಯವರೆಗೆ ಮುಂದುವರಿಸಬಹುದಾಗಿತ್ತೋ ಆ ಅವಧಿಗಿಂತ ಕಡಿಮೆಯಾಗಿರತಕ್ಕದ್ದಲ್ಲ:

ಮತ್ತು ಪರಂತು, ಯಾವುದೇ ಪಂಚಾಯಿತಿ ಅಥವಾ ಟೌನ್ ಮುನ್ಸಿಪಲ್ ಕೌನ್ಸಿಲ್ ಅಥವಾ ಸಿಟಿ ಮುನ್ಸಿಪಲ್ ಕೌನ್ಸಿಲ್‌ಗೆ ಸಂಬಂಧಿಸಿದಂತೆ ಯಾವುದೇ ಅವಧಿಯನ್ನು ನಿರ್ದಿಷ್ಟಪಡಿಸದಿದ್ದರೆ, ಸದರಿ ನಿಕಾಯವನ್ನು ಯಾವ ಅಧಿನಿಯಮದ ಮೇರೆಗೆ ರಚಿಸಲಾಗಿದೆಯೋ ಅಥವಾ ಪುನರ್‌ರಚಿಸಲಾಗಿದೆಯೋ ಆ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಸದರಿ ನಿಕಾಯದ ಅವಧಿಯನ್ನು ಯಾವ ಅವಧಿಯವರೆಗೆ ಮುಂದುವರಿಸಬಹುದಾಗಿತ್ತೋ ಆ ಅವಧಿಯನ್ನು, ಈ ಉಪಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ಅವಧಿಯೆಂಬುದಾಗಿ ಭಾವಿಸತಕ್ಕದ್ದು:

ಅದೂ ಅಲ್ಲದೆ, ಈ ಉಪಪ್ರಕಣದ ಮೇರೆಗೆ ನಿರ್ದಿಷ್ಟಪಡಿಸಿದ ಅಥವಾ ನಿರ್ದಿಷ್ಟಪಡಿಸಲಾಗಿದೆ ಎಂದು ಭಾವಿಸುವ ಅವಧಿಯು,-

(i) ಅಂಥ ಯಾವುದೇ ಟೌನ್ ಮುನ್ಸಿಪಲ್ ಕೌನ್ಸಿಲ್ ಅಥವಾ ಸಿಟಿ ಮುನ್ಸಿಪಲ್ ಕೌನ್ಸಿಲ್‌ಗೆ ಸಂಬಂಧಿಸಿದಂತೆ ಈ ಅಧಿನಿಯಮದ 315ನೇ ಅಥವಾ 316ನೇ ಪ್ರಕರಣದ ಅಥವಾ ಇತರ ಯಾವುದೇ ಉಪಬಂಧದ ಮೇರೆಗಿನ ಅಧಿಕಾರಗಳನ್ನು, ರಾಜ್ಯ ಸರ್ಕಾರವು ಅಥವಾ ಇತರ ಸಕ್ಷಮ ಪ್ರಾಧಿಕಾರವು ಚಲಾಯಿಸುವುದನ್ನು; ಅಥವಾ

(ii) ಅಂಥ ಯಾವುದೇ ಪಂಚಾಯಿತಿಗೆ ಸಂಬಂಧಿಸಿದಂತೆ 1959ರ [2][ಕರ್ನಾಟಕ][2] ಗ್ರಾಮ ಪಂಚಾಯಿತಿಗಳ ಮತ್ತು ಸ್ಥಳೀಯ ಮಂಡಲಿಗಳ ಅಧಿನಿಯಮದ 203ನೇ ಪ್ರಕರಣದ ಅಥವಾ ಇತರ ಯಾವುದೇ ಉಪಬಂಧಗಳ ಮೇರೆಗಿನ ಅಧಿಕಾರಗಳನ್ನು [1][ಪೌರಾಡಳಿತ ನಿರ್ದೇಶಕ][1]ರು ಅಥವಾ ಇತರ ಸಕ್ಷಮ ಪ್ರಾಧಿಕಾರಿಯು ಚಲಾಯಿಸುವುದನ್ನು,

- ಬಾಧಿಸುತ್ತಿದೆ ಎಂದು ಭಾವಿಸತಕ್ಕದ್ದಲ್ಲ.

1. 2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 1973ರ ಕರ್ನಾಟಕ ಕಾನೂನುಗಳ ಆದೇಶ ಅಳವಡಿಕೆಗಳ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(5) ಪ್ರಕರಣ 383 ರ ಮೇರೆಗೆ ಮಾಡಿದ ಯಾವುದೇ ಆದೇಶಕ್ಕೊಳಪಟ್ಟು, (1)ನೇ ಮತ್ತು (3)ನೇ ಉಪಪ್ರಕರಣಗಳ ಮೇರೆಗೆ ಸಂದರ್ಭಾನುಸಾರ ಪಂಚಾಯಿತಿ, ಟೌನ್ ಮುನ್ಸಿಪಲ್ ಕೌನ್ಸಿಲ್ ಅಥವಾ ಸಿಟಿ ಮುನ್ಸಿಪಲ್ ಕೌನ್ಸಿಲ್‌ನ ಅಧಿಕಾರಗಳನ್ನು ಚಲಾಯಿಸುತ್ತಿರುವ ಮತ್ತು ಕರ್ತವ್ಯಗಳನ್ನು ನೆರವೇರಿಸುತ್ತಿರುವ ಪ್ರತಿಯೊಂದು ನಿಕಾಯದ ಸದಸ್ಯರ ಅಥವಾ ಕೌನ್ಸಿಲರ್ ಗಳ ಸ್ಥಾನಗಳಲ್ಲಿನ ಆಕಸ್ಮಿಕ ಖಾಲಿಸ್ಥಾನಗಳನ್ನು ಭರ್ತಿ ಮಾಡತಕ್ಕದ್ದು ಮತ್ತು ಅಂಥ ಖಾಲಿಸ್ಥಾನಗಳನ್ನು ಭರ್ತಿ ಮಾಡುವುದಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳನ್ನೂ, ಈ ಅಧಿನಿಯಮದ ಪ್ರಾರಂಭದ ದಿನಾಂಕದ ನಿಕಟಪೂರ್ವದಲ್ಲಿ ಜಾರಿಯಲ್ಲಿದ್ದಂಥ, ಅಂಥ ಖಾಲಿಸ್ಥಾನಗಳನ್ನು ಭರ್ತಿ ಮಾಡುವುದನ್ನು

ನಿಯಂತ್ರಿಸುವ ಮತ್ತು ಅಂಥ ವಿಷಯಗಳನ್ನು ನಿಯಂತ್ರಿಸುವ ಉಪಬಂಧಗಳಿಗನುಸಾರವಾಗಿ ವಿನಿಯಮಿಸತಕ್ಕದ್ದು.

382. ನಿರಸನ ಮತ್ತು ಉಳಿಸುವಿಕೆಗಳು.- (1) 1933ರ ಮೈಸೂರು ನಗರ ಪೌರಸಭೆಗಳ ಅಧಿನಿಯಮ (ಮೈಸೂರು ಅಧಿನಿಯಮ 1933ರ VII); 1951ರ ಮೈಸೂರು ಪಟ್ಟಣ ಪೌರಸಭೆಗಳ ಅಧಿನಿಯಮ (ಮೈಸೂರು ಅಧಿನಿಯಮ, 1951ರ XXII); 1901ರ ಮುಂಬಯಿ ಜಿಲ್ಲಾ ಪೌರಸಭಾ ಅಧಿನಿಯಮ (ಮುಂಬಯಿ ಅಧಿನಿಯಮ 1901ರ III); 1925ರ ಮುಂಬಯಿ ಪುರ ಪೌರಸಭೆಗಳ ಅಧಿನಿಯಮ, (ಮುಂಬಯಿ ಅಧಿನಿಯಮ 1925ರ XVIII); 1890ರ ಮುಂಬಯಿ ಪೌರಸಭಾ ನೌಕರರ ಅಧಿನಿಯಮ (ಮುಂಬಯಿ ಅಧಿನಿಯಮ 1890ರ V); 1956ರ ಹೈದರಾಬಾದ್ ಜಿಲ್ಲಾ ಪೌರಸಭೆಗಳ ಅಧಿನಿಯಮ (ಹೈದರಾಬಾದ್ ಅಧಿನಿಯಮ 1956ರ XVIII); 1920ರ ಮದರಾಸು ಜಿಲ್ಲಾ ಪೌರಸಭೆಗಳ ಅಧಿನಿಯಮ, (ಮದ್ರಾಸು ಅಧಿನಿಯಮ, 1920ರ V); 1907ರ ಕೊಡಗು ಮುನ್ಸಿಪಲ್ ರೆಗ್ಯೂಲೇಷನ್ (1907ರ ರೆಗ್ಯೂಲೇಷನ್ II); 1899ರ ಮದರಾಸು ಪಟ್ಟಣ ಉಪದ್ರವಗಳ ಅಧಿನಿಯಮ, (ಮದ್ರಾಸು ಅಧಿನಿಯಮ 1899ರ III); [1][1939ರ ಮದ್ರಾಸು ಸಾರ್ವಜನಿಕ ಆರೋಗ್ಯ ಅಧಿನಿಯಮಗಳ IIನೇ ಅಧ್ಯಾಯ (ಮದ್ರಾಸು ಅಧಿನಿಯಮ 1939ರ III)][1]; 1959ರ [2][ಕರ್ನಾಟಕ][2] ಗ್ರಾಮ ಪಂಚಾಯಿತಿಗಳು ಮತ್ತು ಸ್ಥಳೀಯ ಮಂಡಲಿಗಳ ಅಧಿನಿಯಮದ IXನೇ ಅಧ್ಯಾಯ ([2][ಕರ್ನಾಟಕ][2] ಅಧಿನಿಯಮ 1959ರ 10) - ಇವುಗಳನ್ನು ಈ ಮೂಲಕ ನಿರಸನಗೊಳಿಸಲಾಗಿದೆ:

1. 1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1973ರ ಕರ್ನಾಟಕ ಕಾನೂನುಗಳ ಆದೇಶ ಅಳವಡಿಕೆಗಳ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

ಪರಂತು, ಅಂಥ ನಿರಸನವು.-

(ಎ) ಸದರಿ ಕಾನೂನುಗಳ ಅಥವಾ ಅವುಗಳ ಮೇರೆಗೆ ವಿಧ್ಯುಕ್ತವಾಗಿ ಮಾಡಲಾದ ಅಥವಾ ಮಾಡಲು ಎಡೆ ಮಾಡಿಕೊಟ್ಟ ಯಾವುದೇ ಕಾರ್ಯದ ಪೂರ್ವಪ್ರವರ್ತನೆಗೆ; ಅಥವಾ

(ಬಿ) ಸದರಿ ಕಾನೂನುಗಳ ಮೇರೆಗೆ ಆರ್ಜಿಸಿದ, ಪ್ರಾಪ್ತವಾದ ಅಥವಾ ವಹಿಸಿದ ಯಾವುದೇ ಹಕ್ಕು, ವಿಶೇಷಾಧಿಕಾರ, ಬಾಧ್ಯತೆ ಅಥವಾ ಹೊಣೆಗಾರಿಕೆಗೆ; ಅಥವಾ

(ಸಿ) ಸದರಿ ಕಾನೂನುಗಳ ವಿರುದ್ಧ ಮಾಡಿದ ಯಾವುದೇ ಅಪರಾಧಕ್ಕೆ ಸಂಬಂಧಿಸಿದಂತೆ ಗುರಿಯಾದ ಯಾವುದೇ ದಂಡನೆ, ಮುಟ್ಟುಗೋಲು ಅಥವಾ ಶಿಕ್ಷೆಗೆ; ಅಥವಾ

(ಡಿ) ಹಿಂದೆ ಹೇಳಿದಂತೆ ಅಂಥ ಯಾವುದೇ ಹಕ್ಕು ವಿಶೇಷಾಧಿಕಾರ, ಬಾಧ್ಯತೆ ಹೊಣೆಗಾರಿಕೆ ಮುಟ್ಟುಗೋಲು ಅಥವಾ ಶಿಕ್ಷೆಗೆ ಸಂಬಂಧಿಸಿದಂತೆ ಯಾವುದೇ ತನಿಖೆ, ಕಾನೂನು ವ್ಯವಹರಣೆ ಅಥವಾ ಪರಿಹಾರೋಪಾಯಕ್ಕೆ,

- ಬಾಧಕವನ್ನುಂಟು ಮಾಡತಕ್ಕದ್ದಲ್ಲ:

ಮತ್ತು ಪರಂತು, ಈ ಅಧಿನಿಯಮವನ್ನು ಅಂಗೀಕರಿಸಿರದಿದ್ದರೆ ಹೇಗೆ ಅಂತಹ ಯಾವುದೇ ತನಿಖೆ, ಕಾನೂನು ವ್ಯವಹರಣೆ ಅಥವಾ ಪರಿಹಾರೋಪಾಯವನ್ನು ಹೂಡಬಹುದಾಗಿತ್ತೋ, ಮುಂದುವರಿಸಬಹುದಾಗಿತ್ತೋ ಅಥವಾ ಜಾರಿಗೊಳಿಸಬಹುದಾಗಿತ್ತೋ ಮತ್ತು ಅಂಥ ಯಾವುದೇ ದಂಡನೆ, ಮುಟ್ಟುಗೋಲು ಅಥವಾ ಶಿಕ್ಷೆಯನ್ನು ವಿಧಿಸಬಹುದಾಗಿತ್ತೋ ಹಾಗೆ ಹೂಡಬಹುದು ಅಥವಾ ಜಾರಿಗೊಳಿಸಬಹುದು ಅಥವಾ ವಿಧಿಸಬಹುದು:

ಮತ್ತೂ ಪರಂತು, ಹಿಂದಿನ ಪರಂತುಕಕ್ಕೆ ಒಳಪಟ್ಟು, ಸದರಿ ಕಾನೂನುಗಳ ಮೇರೆಗೆ ಮಾಡಿದ ಯಾವುದೇ ಕೃತ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು (ಮಾಡಿದ ಯಾವುದೇ ನೇಮಕ ಅಥವಾ ಪ್ರತ್ಯಾಯೋಜನೆ, ವಿಧಿಸಲಾದ ತೆರಿಗೆ, ಫೀಜು ಅಥವಾ ಉಪಕರ, ಹೊರಡಿಸಿದ ಅಧಿಸೂಚನೆ, ಆದೇಶ, ಲಿಖಿತ ಅಥವಾ ನಿರ್ದೇಶನ, ರಚಿಸಿದ ನಿಯಮ, ವಿನಿಯಮ, ನಮೂನೆ, ಬೈಲಾ ಅಥವಾ ಯೋಜನೆ, ಪಡೆದುಕೊಂಡ ಪ್ರಮಾಣಪತ್ರ, ಮಂಜೂರು ಮಾಡಿದ ಅನುಮತಿ ಅಥವಾ ಲೈಸೆನ್ಸ್ ಅಥವಾ ಮಾಡಿದ ನೋಂದಣಿಯನ್ನು ಒಳಗೊಂಡು) ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಅವುಗಳು ಈ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಕೃತ್ಯ ಅಥವಾ ಕೈಗೊಂಡ ಯಾವುದೇ ಕ್ರಮದ ಮೂಲಕ ರದ್ದುಪಡಿಸಿದ ಹೊರತು, ಅಥವಾ ಅಲ್ಲಿಯವರೆಗೆ ತದನುಸಾರವಾಗಿ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು:

[1][ಅಷ್ಟೇ ಅಲ್ಲದೆ ಹಿಂದಿನ ಪರಂತುಕದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಸ್ಥಿರ ಸ್ವತ್ತಿನ ವರ್ಗಾವಣೆಯ ಮೇಲಿನ ಸುಂಕವನ್ನು ಹೊರತುಪಡಿಸಿ ಸದರಿ ಕಾನೂನುಗಳ ಮೇರೆಗೆ ಯಾವುದೇ ತೆರಿಗೆ, ಸುಂಕ, ಫೀಜು ಅಥವಾ ಉಪಕರವನ್ನು, ಈ ಅಧಿನಿಯಮದ ಮೇರೆಗೆ ಅನುಮತಿಸಬಹುದಾದ ಗರಿಷ್ಠ ದರಕ್ಕಿಂತ ಹೆಚ್ಚಿನ ದರದಲ್ಲಿ ವಿಧಿಸಿರುವಲ್ಲಿ, ಅಂಥ ತೆರಿಗೆ, ಸುಂಕ, ಫೀಜು ಅಥವಾ ಉಪಕರವು, ಈ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಕೃತ್ಯ ಅಥವಾ ಕೈಗೊಂಡ ಯಾವುದೇ ಕ್ರಮದ ಮೂಲಕ ರದ್ದುಗೊಳಿಸಿದ ಹೊರತು ಮತ್ತು ಅಲ್ಲಿಯವರೆಗೆ ಅಂಥ ಹೆಚ್ಚಿನ ದರದಲ್ಲಿ ವಿಧಿಸುವುದನ್ನು ಮುಂದುವರಿಸಬಹುದು ಮತ್ತು ಸಂಗ್ರಹಿಸಬಹುದು][1]:

1.1966ರ ಅಧಿನಿಯಮ 34ರ ಮೂಲಕ 1.4.1965 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

ಅದೂ ಅಲ್ಲದೆ, ಯಾವುದೇ ಅಧಿನಿಯಮಿತಿಯಲ್ಲಿ ಅಥವಾ ಯಾವುದೇ ಲಿಖಿತದಲ್ಲಿ ನಿರಸನಗೊಳಿಸಿದ ಯಾವುದೇ ಕಾನೂನಿನ ಯಾವುದೇ ಉಪಬಂಧಕ್ಕೆ ಸಂಬಂಧಿಸಿದಂತೆ ಮಾಡಿದ ಯಾವುದೇ ಉಲ್ಲೇಖವನ್ನು, ಅದಕ್ಕೆ ಬೇರೊಂದು ಉದ್ದೇಶ ಕಂಡುಬಂದ ಹೊರತು, ಈ ಅಧಿನಿಯಮದ ಸಂವಾದಿ ಉಪಬಂಧಕ್ಕೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

(2) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದಾಗ್ಯೂ ಸದರಿ ಕಾನೂನುಗಳ ಮೇರೆಗೆ ವಿಧಿಸಿದ ಯಾವುದೇ ತೆರಿಗೆ, ಫೀಜು ಅಥವಾ ಉಪಕರವನ್ನು ಅಂಥ ತೆರಿಗೆ, ಫೀಜು ಅಥವಾ ಉಪಕರವನ್ನು ಈ ಅಧಿನಿಯಮದ ಉಪಬಂಧಗಳ ಮೇರೆಗೆ ವಿಧಿಸಲಾಗದಿದ್ದಾಗ್ಯೂ ಅಂಥ ವಿಧಿಸುವಿಕೆ ಮತ್ತು ವಸೂಲಿಗೆ ಸಂಬಂಧಪಟ್ಟಂಥ ಕಾನೂನುಗಳು ಮತ್ತು ಅದರ ಮೇರೆಗೆ ರಚಿಸಿದ ಅಥವಾ ಹೊರಡಿಸಿದ ನಿಯಮಗಳು, ಬೈಲಾಗಳು, ಆದೇಶಗಳು ಮತ್ತು ಅಧಿಸೂಚನೆಗಳ ಉಪಬಂಧಗಳನ್ನು ನಿರಸಿತಗೊಳಿಸದಿದ್ದರೆ ಹೇಗೆ, ಅವುಗಳ ವಿಧಿಸುವಿಕೆಯನ್ನು ಅಥವಾ ವಸೂಲು ಮಾಡುವಿಕೆಯನ್ನು ಮುಂದುವರಿಸಬಹುದಿತ್ತೋ ಹಾಗೆ ಮುಂದುವರಿಸಬಹುದು.

383. ಈ ಅಧಿನಿಯಮವನ್ನು ಜಾರಿಗೊಳಿಸುವುದಕ್ಕೆ ಆದೇಶಗಳು.- ಈ ಅಧಿನಿಯಮದಲ್ಲಿ ಅಥವಾ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದಾಗ್ಯೂ,-

(ಎ) ಈ ಅಧಿನಿಯಮದ ಉಪಬಂಧಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವುದಕ್ಕಾಗಿ;

(ಬಿ) 381ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ಪಂಚಾಯಿತಿಗೆ ಅಥವಾ ಯಾವುದೇ ಮುನ್ಸಿಪಲ್ ಕೌನ್ಸಿಲ್‌ಗೆ ಅಥವಾ [1][ಮುನ್ಸಿಪಲ್ ಏರಿಯಾ][1]ಕ್ಕೆ ಅವುಗಳನ್ನು ಅನ್ವಯಿಸುವಲ್ಲಿ 381ನೇ ಪ್ರಕರಣದ (1)ನೇ ಉಪಪ್ರಕರಣದ ಎರಡನೇ ಪರಂತುಕದಲ್ಲಿ ಉಲ್ಲೇಖಿಸಿದ ನಿಯಮಗಳಿಂದ, ಬೈಲಾಗಳಿಂದ, ಅಧಿಸೂಚನೆಗಳಿಂದ ಮತ್ತು ಆದೇಶಗಳಿಂದ ಬಿಟ್ಟುಬಿಡಲು, ಅವುಗಳಿಗೆ ಸೇರಿಸಲು ಮತ್ತು ಅವುಗಳನ್ನು ಅಂಗೀಕರಿಸುವುದಕ್ಕಾಗಿ ಮತ್ತು ಮಾರ್ಪಾಟುಗಳನ್ನು ಮಾಡುವುದಕ್ಕಾಗಿ;

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಸಿ) ಈ ಅಧಿನಿಯಮದ ಉಪಬಂಧಗಳ ಪರಿವರ್ತನೆಗೆ ಸಂಬಂಧಿಸಿದಂತೆ ಉದ್ಭವಿಸುವ ತೊಂದರೆಗಳನ್ನು ನಿವಾರಿಸುವುದಕ್ಕಾಗಿ;

(ಡಿ) ಮುನ್ಸಿಪಲ್ ಕೌನ್ಸಿಲ್‌ಗಳು ಅಥವಾ ಇತರ ಮುನ್ಸಿಪಲ್ ನಿಕಾಯಗಳು, ಈ ಮೊದಲು ನಿರ್ವಹಿಸುತ್ತಿದ್ದ ಸೇವೆಗಳನ್ನು ಮತ್ತು ಚಟುವಟಿಕೆಗಳನ್ನು ಮುನ್ಸಿಪಲ್ ಕೌನ್ಸಿಲ್‌ಗಳ ಪರವಾಗಿ ತತ್ಕಾಲದಲ್ಲಿ ನಿರ್ವಹಿಸುವುದನ್ನು ಮುಂದುವರಿಸಿ ಅಧಿಕೃತಗೊಳಿಸುವುದಕ್ಕಾಗಿ; ಮತ್ತು

(ಇ) ಮೇಲೆ ಹೇಳಿದ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಅವಶ್ಯವೆಂದು ಅಥವಾ ವಿಹಿತವೆಂದು ಕಂಡುಬರುವಷ್ಟರಮಟ್ಟಿಗೆ, ಯಾವುದೇ ನ್ಯಾಯಾಲಯದ ಅಥವಾ ಪ್ರಾಧಿಕಾರದ ಅಧಿಕಾರಗಳು ಅಥವಾ ಅಧಿಕಾರವ್ಯಾಪ್ತಿಯನ್ನು ವ್ಯತ್ಯಾಸಗೊಳಿಸುವುದಕ್ಕಾಗಿ ಮತ್ತು ಹೊಸ ನ್ಯಾಯಾಲಯಗಳಿಗೆ ಅಥವಾ ಇತರ ಪ್ರಾಧಿಕಾರಗಳಿಗೆ ಅಂಥ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅಧಿಕಾರವ್ಯಾಪ್ತಿಯನ್ನು ಚಲಾಯಿಸಲು ಅಧಿಕಾರ ನೀಡುವುದಕ್ಕಾಗಿ

- ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ ಅವಶ್ಯವೆಂದು ಅದಕ್ಕೆ ಅಥವಾ ವಿಹಿತವೆಂದು ಕಂಡುಬರುವ ಅಂಥ ಉಪಬಂಧಗಳನ್ನು ಮಾಡಬಹುದು.

(2) ಉಪಪ್ರಕರಣ (1)ರ ಮೇರೆಗಿನ ಯಾವುದೇ ಆದೇಶವು, ಅಂಥ ಪ್ರದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಅದರ ಪ್ರವರ್ತನೆಯಲ್ಲಿ ಉತ್ತರಾನ್ವಯವಾಗಿಯಾಗಲಿ ಅಥವಾ ಪೂರ್ವಾನ್ವಯವಾಗಿಯಾಗಲಿ ಇರಬಹುದು.

(3) ಉಪಪ್ರಕರಣ (1)ರ ಮೇರೆಗೆ ಮಾಡಿದ ಎಲ್ಲ ಆದೇಶಗಳನ್ನು, ರಾಜ್ಯ ವಿಧಾನಮಂಡಲದ ಎರಡೂ ಸದನದ ಮುಂದೆ ಮಂಡಿಸತಕ್ಕದ್ದು ಮತ್ತು ಅವುಗಳನ್ನು ಹಾಗೆ ಮಂಡಿಸಿದ ಅಧಿವೇಶನದಲ್ಲಿ ರಾಜ್ಯ ವಿಧಾನಮಂಡಲವು ಮಾಡಬಹುದಾದ ಮಾರ್ಪಾಟುಗಳಿಗೊಳಪಟ್ಟು ಈ ಅಧಿನಿಯಮದಲ್ಲಿ ಅಧಿನಿಯಮಿತವಾಗಿದ್ದರೆ ಹೇಗೆ ಅವು ಪರಿಣಾಮಕಾರಿಯಾಗುತ್ತಿದ್ದವೋ ಹಾಗೆ ಪರಿಣಾಮಕಾರಿಯಾಗಿರತಕ್ಕದ್ದು.

[1][384 ರಿಂದ 386ರ ವರೆಗೆ xxx][1]

1.2000ದ ಅಧಿನಿಯಮ 22ರ ಮೂಲಕ 29.11.2000 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[3][[1][387. xxx][3]

388. ಪೌರಾಡಳಿತ ನಿರ್ದೇಶನಾಲಯ.-[2][(1)][2] ರಾಜ್ಯ ಸರ್ಕಾರವು, ತಾನು ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ ಪೌರಾಡಳಿತ ನಿರ್ದೇಶನಾಲಯವನ್ನು ಸ್ಥಾಪಿಸತಕ್ಕದ್ದು. ನಿರ್ದೇಶನಾಲಯದ ರಚನೆ, ಪ್ರಕಾರ್ಯಗಳು, ಅಧಿಕಾರಗಳು ಮತ್ತು ಕರ್ತವ್ಯಗಳು ನಿಯಮಿಸಬಹುದಾದಂಥವುಗಳು ಆಗಿರತಕ್ಕದ್ದು.][1]

1. 1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ 387 ಹಾಗೂ 388 ಪ್ರಕರಣಗಳನ್ನು ಸೇರಿಸಲಾಗಿದೆ.

2. 1986ರ ಅಧಿನಿಯಮ 33ರ ಮೂಲಕ 6.6.1986 ರಿಂದ ಜಾರಿಗೆ ಬರುವಂತೆ ಮರು ಸಂಖ್ಯೆಯನ್ನು ನೀಡಲಾಗಿದೆ.

3. 2022ರ ಅಧಿನಿಯಮ 33ರ ಮೂಲಕ ದಿನಾಂಕ:12.08.2021 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][(1ಎ) ರಾಜ್ಯ ಸರ್ಕಾರವು, ಈ ಅಧಿನಿಯಮದ ಮೇರೆಗೆ ವಹಿಸಿಕೊಟ್ಟ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ಪೌರಾಡಳಿತ ನಿರ್ದೇಶಕರನ್ನು ಅಧಿಸೂಚನೆಯ ಮೂಲಕ, ನೇಮಕ ಮಾಡಬಹುದು][1]

1.2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(2) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಸರ್ಕಾರವು, ಪೌರಾಡಳಿತ ನಿರ್ದೇಶಕರಿಗೆ (ಇಲ್ಲಿ ಇನ್ನು ಮುಂದೆ 'ನಿರ್ದೇಶಕರು' ಎಂಬುದಾಗಿ ಉಲ್ಲೇಖಿಸಲಾಗಿದೆ) [2][xxx][2] ನಿಯಮಗಳನ್ನು ರಚಿಸುವ ಅಧಿಕಾರವನ್ನು ಹೊರಡುಪಡಿಸಿ, ಈ ಅಧಿನಿಯಮದ ಮೇರೆಗೆ ಅದರ ಅಂಥ ಅಧಿಕಾರಗಳನ್ನು ಅಧಿಸೂಚನೆಯ ಮೂಲಕ, ಪ್ರತ್ಯಾಯೋಜಿಸಬಹುದು.

1.1986ರ ಅಧಿನಿಯಮ 33ರ ಮೂಲಕ 6.6.1986 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2.2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(3) ಸರ್ಕಾರವು, ಈ ಅಧಿನಿಯಮದ ಮೇರೆಗೆ ಡೆಪ್ಯೂಟಿ ಕಮೀಷನರ್ ರು ಚಲಾಯಿಸಬಹುದಾದ ಎಲ್ಲಾ ಅಥವಾ ಯಾವುವೇ ಅಧಿಕಾರಗಳನ್ನು ಅಧಿಸೂಚನೆಯ ಮೂಲಕ ನಿರ್ದೇಶಕರಿಗೆ ಪ್ರತ್ಯಾಯೋಜಿಸಬಹುದು, [1][xxx][1]ಡೆಪ್ಯುಟಿ ಕಮಿಷನರ್ ನು, ನಿರ್ದೇಶಕರಿಗೆ ಪ್ರತ್ಯಾಯೋಜಿಸಿದ ಅಧಿಕಾರಗಳನ್ನು ಚಲಾಯಿಸುವುದು ಅಂಥ ಅಧಿಸೂಚನೆಯನ್ನು ಹೊರಡಿಸಿದ ತರುವಾಯ ನಿಂತುಹೋಗತಕ್ಕದ್ದು.

1.2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][(3ಎ) ಸರ್ಕಾರವು, ನಿರ್ದೇಶಕರು ಚಲಾಯಿಸಬಹುದಾದ ಯಾವುವೇ ಅಧಿಕಾರಗಳನ್ನು ಡೆಪ್ಯುಟಿ ಕಮಿಷನರ್ ಗೆ ಅಧಿಸೂಚನೆಯ ಮೂಲಕ ಪ್ರತ್ಯಾಯೋಜಿಸಬಹುದು.

(4) ನಿರ್ದೇಶನಾಲಯದಲ್ಲಿ, ನಿಯಮಿಸಬಹುದಾದಷ್ಟು ಸಂಖ್ಯೆಯ ಹಾಗೂ ಅಂಥ ವಿದ್ಯಾರ್ಹತೆಯನ್ನು ಪಡೆದಿರುವ ಅಧಿಕಾರಿಗಳನ್ನು ಒಳಗೊಂಡಿರುವ ಕಾನೂನು ಘಟಕವೊಂದು ಇರತಕ್ಕದ್ದು.][1]

1.2003ರ ಅಧಿನಿಯಮ 31ರ ಮೂಲಕ 20.8.2003 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][**388ಎ. ನಿರ್ದೇಶನ ಮತ್ತು ನಿಯಂತ್ರಣ.-** (1) ಈ ಅಧಿನಿಯಮದ ಯಾವುವೇ ಉಪಬಂಧಗಳಿಗೆ ಬಾಧಕವಾಗದಂತೆ ಹಾಗೂ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ರಾಜ್ಯ ಸರ್ಕಾರವು ಅಥವಾ ಸಂದರ್ಭಾನುಸಾರ ಪೌರಾಡಳಿತ ನಿರ್ದೇಶಕನು,-

(ಎ) ಎಲ್ಲಾ ಸಿಟಿ ಮುನ್ಸಿಪಲ್ ಕೌನ್ಸಿಲ್‌ಗಳನ್ನು, ಟೌನ್ ಮುನ್ಸಿಪಲ್ ಕೌನ್ಸಿಲ್‌ಗಳನ್ನು ಮತ್ತು ಪಟ್ಟಣ ಪಂಚಾಯಿತಿಗಳನ್ನು ಹಾಗೂ ಎಲ್ಲಾ ಅದರ ಅಧಿಕಾರಿಗಳನ್ನು;

(ಬಿ) ಕರ್ನಾಟಕ ಪೌರ ನಿಗಮ ಅಧಿನಿಯಮ, 1976ರ ಅಡಿಯಲ್ಲಿ ರಚನೆಗೊಂಡ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲದೆ, ಎಲ್ಲಾ ನಗರ ಪಾಲಿಕೆಗಳನ್ನು ಹಾಗೂ ಅದರ ಎಲ್ಲಾ ಅಧಿಕಾರಿಗಳನ್ನು;

(i) ಯಾವುದೇ ದಾಖಲೆಯನ್ನು, ಪತ್ರವ್ಯವಹಾರವನ್ನು ಅಥವಾ ಇತರ ದಸ್ತಾವೇಜುಗಳನ್ನು ಹಾಜರುಪಡಿಸಲು;

(ii) ಯಾವುದೇ ವಿವರಪಟ್ಟಿಕೆಯನ್ನು, ಯೋಜನೆಯನ್ನು, ಅಂದಾಜನ್ನು, ಲೆಕ್ಕಪತ್ರಗಳನ್ನು ಅಥವಾ ಅಂಕಿಅಂಶಗಳನ್ನು ಒದಗಿಸಲು; ಮತ್ತು

(iii) ಯಾವುದೇ ವರದಿಯನ್ನು ಒದಗಿಸಲು ಅಥವಾ ಪಡೆದುಕೊಳ್ಳಲು

- ಅಗತ್ಯಪಡಿಸತಕ್ಕದ್ದು ಮತ್ತು ಅಂಥ ಸಿಟಿ ಮುನ್ಸಿಪಲ್ ಕೌನ್ಸಿಲ್, ಟೌನ್ ಮುನ್ಸಿಪಲ್ ಕೌನ್ಸಿಲ್, ಪಟ್ಟಣ ಪಂಚಾಯಿತಿ ಅಥವಾ ಸಂದರ್ಭಾನುಸಾರ ಮುನ್ಸಿಪಲ್ ಕಾರ್ಪೊರೇಷನ್ ಅಂಥ ಅಗತ್ಯತೆಗಳನ್ನು ಪಾಲಿಸತಕ್ಕದ್ದು.

(2) ಪೌರಾಡಳಿತ ನಿರ್ದೇಶಕರು ಅಥವಾ ಸಂದರ್ಭಾನುಸಾರ ರಾಜ್ಯ ಸರ್ಕಾರವು, ಯಾವುದೇ ಇಲಾಖೆಯ, ಕಚೇರಿಯ, ಸೇವೆಯ, ಕೆಲಸದ ಅಥವಾ ಸಿಟಿ ಮುನ್ಸಿಪಲ್ ಕೌನ್ಸಿಲ್, ಟೌನ್ ಮುನ್ಸಿಪಲ್ ಕೌನ್ಸಿಲ್, ಪಟ್ಟಣ ಪಂಚಾಯಿತಿಯ ಅಥವಾ ಸಂದರ್ಭಾನುಸಾರ ಮುನ್ಸಿಪಲ್ ಕಾರ್ಪೊರೇಷನ್‌ಆಸ್ತಿಯನ್ನು ಪರಿಶೀಲಿಸಲು ಅಥವಾ ಪರೀಕ್ಷಿಸಲು ಹಾಗೂ ತದನಂತರ ವರದಿ ಮಾಡಲು, ಅದರ ಯಾರೇ ಅಧಿಕಾರಿಗಳನ್ನು ಪ್ರತ್ಯಾಯೋಜಿಸಬಹುದು ಪೌರಾಡಳಿತ ನಿರ್ದೇಶಕರ ಎಲ್ಲಾ ಅಧಿಕಾರಗಳನ್ನು ಚಲಾಯಿಸತಕ್ಕದ್ದು.][1]

1.2011ರ ಅಧಿನಿಯಮ 24ರ ಮೂಲಕ 10.06.2011 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][**389. ತೊಂದರೆಗಳನ್ನು ನಿವಾರಿಸುವುದು.-** ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದಲ್ಲಿ, ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಆದೇಶವನ್ನು ಪ್ರಕಟಿಸಿ ಸಂದರ್ಭಕ್ಕೆ ತಕ್ಕಂತೆ, ತೊಂದರೆಗಳನ್ನು ನಿವಾರಿಸುವುದಕ್ಕೆ ಅವಶ್ಯಕವೆಂದು ಕಂಡುಬರುವ ಯಾವುದೇ ಕ್ರಮವನ್ನು ಕೈಗೊಳ್ಳಬಹುದು][1].

1.2005ರ ಅಧಿನಿಯಮ 5ರ ಮೂಲಕ 7.3.2005 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][ಅನುಸೂಚಿ I xxx][1]

1.2001ರ ಅಧಿನಿಯಮ 28ರ ಮೂಲಕ 19.11.2001 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][ಅನುಸೂಚಿ II xxx][1]

1. 1979ರ ಅಧಿನಿಯಮ 21ರ ಮೂಲಕ 31.3.1979 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][ಅನುಸೂಚಿ III xxx
ಅನುಸೂಚಿ IV xxx][1]

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][ಅನುಸೂಚಿ V xxx][1]

1.1976ರ ಅಧಿನಿಯಮ 83ರ ಮೂಲಕ 8.12.1976 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

ಅನುಸೂಚಿ-VI
(ಪ್ರಕರಣ 94)
ಅಂಗಡಿಗಳು ಮತ್ತು ಇತರ ವ್ಯವಹಾರ ಅಥವಾ ವೃತ್ತಿ ನಡೆಸುವ ಸ್ಥಳಗಳ ಮೇಲೆ ವಿಧಿಸಬೇಕಾದ ತೆರಿಗೆಯ ಗರಿಷ್ಠ ದರಗಳು

ಬಾಬುಗಳು	ವರ್ಗ					
	1ನೆಯ	2ನೆಯ	3ನೆಯ	4ನೆಯ	5ನೆಯ	6ನೆಯ
	ರೂ.	ರೂ.	ರೂ.	ರೂ.	ರೂ.	ರೂ
1. ಅಂಗಡಿಗಳು,- ಪ್ರತಿಯೊಂದು ಅಂಗಡಿಗೆ – ಪ್ರತಿಯೊಂದು ವರ್ಷಕ್ಕೆ [1][ಸಿಟಿ ಮುನ್ಸಿಪಲ್ ಏರಿಯಾಗಳು][1] [1][ಟೌನ್ ಮುನ್ಸಿಪಲ್ ಏರಿಯಾಗಳು][1]	 100 50	 80 40	 60 30	 40 20	 20 10	 10 5
2. ಲಾಭದ ಉದ್ದೇಶಗಳಿಗಾಗಿ ವ್ಯವಹಾರ ಅಥವಾ ವೃತ್ತಿಯನ್ನು ನಡೆಸುತ್ತಿರುವ ಇತರ ಸ್ಥಳಗಳು						
ಬಾಬುಗಳು	**ವರ್ಗ**					
	1ನೆಯ	**2ನೆಯ**	**3ನೆಯ**	**4ನೆಯ**	**5ನೆಯ**	**6ನೆಯ**
	ರೂ.	ರೂ.	ರೂ.	ರೂ.	ರೂ.	ರೂ
ಪ್ರತಿಯೊಂದು ವರ್ಷಕ್ಕೆ ಪ್ರತಿ ಸ್ಥಳಕ್ಕೆ [1][ಸಿಟಿ ಮುನ್ಸಿಪಲ್ ಏರಿಯಾಗಳು][1] [1][ಟೌನ್ ಮುನ್ಸಿಪಲ್ ಏರಿಯಾಗಳು][1]	 50 30	 40 25	 30 20	 20 10	 10 4	 5 2

1.1994ರ ಅಧಿನಿಯಮ 36ರ ಮೂಲಕ 1.6.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ವಿವರಣೆ:- ಈ ಅನುಸೂಚಿಯ ಉದ್ದೇಶಗಳಿಗಾಗಿ ಅಂಗಡಿಯ ವರ್ಗವನ್ನು 95ನೇ ಪ್ರಕರಣದ ಮೇರೆಗೆ ಕೈಗೊಂಡ ನಿರ್ಣಯಕ್ಕೆ ಅನುಸಾರವಾಗಿ ನಿರ್ಧರಿಸತಕ್ಕದ್ದು.

ಅನುಸೂಚಿ- VII
(ಪ್ರಕರಣ-94)
ಜಾಹೀರಾತುಗಳ ಮೇಲೆ ತೆರಿಗೆ

ಕ್ರಮ ಸಂಖ್ಯೆ	ವಿವರಗಳು	ಪ್ರತಿ ವರ್ಷಕ್ಕೆ ತೆರಿಗೆಯ ಗರಿಷ್ಠ ಮೊಬಲಗು
1.	ಭೂಮಿ, ಕಟ್ಟಡ, ಗೋಡೆ, ಪ್ರಕಟಣಾ ಫಲಕಗಳು, ಚೌಕಟ್ಟು, ಸ್ತಂಭ ರಚನೆಗಳು ಇತ್ಯಾದಿಗಳ ಮೇಲೆ ದೀಪಾಲಂಕಾರ ಮಾಡದಿರುವ ಜಾಹೀರಾತುಗಳು	ರೂ. ಪೈ.
	(ಎ) 1 ಚದರ ಮೀಟರ್ ವರೆಗಿನ ಜಾಗಕ್ಕೆ	10-00
	(ಬಿ) 1 ಚದರ ಮೀಟರ್ ಗಿಂತ ಹೆಚ್ಚಾಗಿ ಆದರೆ 2.5 ಚದರ ಮೀಟರ್ ವರೆಗೆ	16-00
	(ಸಿ) ಪ್ರತಿಯೊಂದು ಹೆಚ್ಚಿನ 2.5 ಚದರ ಮೀಟರ್ ಗೆ ಅಥವಾ ಅದಕ್ಕಿಂತಕಡಿಮೆ ಜಾಗಕ್ಕೆ	16-00
2.	ಎತ್ತುಗಳ, ಕುದುರೆಗಳ ಅಥವಾ ಇತರ ಪ್ರಾಣಿಗಳ ಮನುಷ್ಯರ ಸೈಕಲ್ ಅಥವಾ ಯಾವುದೇ ಸಾಧನದ ಮೂಲಕ ಎಳೆಯಲಾಗುವ ವಾಹನಗಳ ಮೇಲೆ ಸಾಗಿಸುವದೀಪಾಲಂಕಾರ ಮಾಡದಿರುವ ಜಾಹೀರಾತುಗಳು.	
	(ಎ) 5 ಚದರ ಮೀಟರ್ ವರೆಗಿನ ಜಾಗಕ್ಕೆ	60-00
	(ಬಿ) ಹೆಚ್ಚಿನ ಪ್ರತಿ 5 ಚದರ ಮೀಟರು ಅಥವಾ ಕಡಿಮೆ ಜಾಗಕ್ಕೆ	60-00
3.	ವಾಹನಗಳ ಮೇಲೆ ಸಾಗಿಸುವ ದೀಪಾಲಂಕೃತ ಜಾಹೀರಾತು ಫಲಕಗಳು	
	(ಎ) 5 ಚದರ ಮೀಟರ್ ವರೆಗಿನ ಜಾಗಕ್ಕೆ	75-00
	(ಬಿ) ಪ್ರತಿ 1 ಚದರ ಮೀಟರ್ ಅಥವಾ ಕಡಿಮೆ ಜಾಗಕ್ಕೆ	15-00
4.	ಫಲಕಗಳನ್ನು ಹೊತ್ತುಕೊಂಡಿರುವವನು ಒಯ್ಯುವ ದೀಪಾಲಂಕೃತ ಜಾಹೀರಾತು ಫಲಕಗಳು	
	(ಎ) 1 ಚದರ ಮೀಟರ್ ನ್ನು ಮೀರದ ಪ್ರತಿಯೊಂದು ಫಲಕಕ್ಕೆ	15-00

ಕ್ರಮ ಸಂಖ್ಯೆ	ವಿವರಗಳು	ಪ್ರತಿ ವರ್ಷಕ್ಕೆ ತೆರಿಗೆಯ ಗರಿಷ್ಠ ಮೊಬಲಗು
	(ಬಿ) 1 ಚದರ ಮೀಟರ್ ಮೀರಿದ ಮತ್ತು 2.5 ಚದರ ಮೀಟರ್ ವರೆಗಿನ ಪ್ರತಿಯೊಂದು ಫಲಕಕ್ಕೆ	30-00
	(ಸಿ) ಪ್ರತಿಯೊಂದು 1 ಚದರ ಮೀಟರ್ ಅಥವಾ ಕಡಿಮೆ ಜಾಗಕ್ಕೆ	15-00
5.	ಜೋಡಿ ಜಾಹೀರಾತು ಫಲಕಗಳನ್ನು ಹೊತ್ತುಕೊಂಡಿರುವವನು ಸಾಗಿಸುವ ದೀಪಾಲಂಕೃತ ಜಾಹೀರಾತು ಫಲಕಗಳು	
	(ಎ) 1 ಚದರ ಮೀಟರ್ ನ್ನು ಮೀರದ ಪ್ರತಿಯೊಂದು ಫಲಕಕ್ಕೆ	30-00
	(ಬಿ) 1 ಚದರ ಮೀಟರ್ ನ್ನು ಮೀರಿದ ಮತ್ತು 2.5 ಚದರ ಮೀಟರ್ ವರೆಗಿನ ಪ್ರತಿಯೊಂದು ಫಲಕಕ್ಕೆ	50-00
	(ಸಿ) ಹೆಚ್ಚಿನ ಪ್ರತಿ 1 ಚದರ ಮೀಟರ್ ಜಾಗಕ್ಕೆ ಅಥವಾ ಕಡಿಮೆ ಜಾಗಕ್ಕೆ	30-00
6.	ಭೂಮಿ, ಕಟ್ಟಡ, ಗೋಡೆ ಅಥವಾ ಪ್ರಕಟಣಾ ಪಟಗಳು, ಚೌಕಟ್ಟು, ಸ್ತಂಭ, ರಚನೆಗಳು ಇತ್ಯಾದಿಗಳ ಮೇಲೆ ದೀಪಾಲಂಕೃತ ಜಾಹೀರಾತುಗಳು	
	(ಎ) 2 ಚದರ ಮೀಟರ್ ವರೆಗಿನ ಜಾಗಕ್ಕೆ	15-00
	(ಬಿ) 2 ಚದರ ಮೀಟರ್ ಗಿಂತ ಹೆಚ್ಚಿಗೆ ಮತ್ತು 5 ಚದರ ಮೀಟರ್ ವರೆಗಿನ ಜಾಗಕ್ಕೆ	30-00
	(ಸಿ) 5 ಚದರ ಮೀಟರ್ ಗಳಿಗೆ ಹೆಚ್ಚಿನ ಮತ್ತು 2.5 ಚದರ ಮೀಟರ್ ವರೆಗಿನ ಜಾಗಕ್ಕೆ	35-00
	(ಡಿ) ಹೆಚ್ಚಿನ ಪ್ರತಿ 2.5 ಚದರ ಮೀಟರ್ ಅಥವಾ ಕಡಿಮೆ ಜಾಗಕ್ಕೆ	35-00
7.	ಸಿನಿಮಾ ಮಂದಿರಗಳಲ್ಲಿ ಮತ್ತು ಇತರ ಸಾರ್ವಜನಿಕ ಸ್ಥಳಗಳಲ್ಲಿ, ಲ್ಯಾಂಟರ್ನ್ ಸ್ಲೈಡ್ಸ್ ಸಾಧನಗಳ ಅಥವಾ ಅಂಥವೇ ಸಾಧನಗಳ ಮೂಲಕ ಪರದೆಗಳ ಮೇಲೆ ಪ್ರದರ್ಶಿಸಿದ ಜಾಹೀರಾತುಗಳು	
	(ಎ) 5 ಚದರ ಮೀಟರ್ ವರೆಗಿನ ಜಾಗಕ್ಕೆ	50-00
	(ಬಿ) 5 ಚದರ ಮೀಟರ್ ಗಿಂತ ಹೆಚ್ಚಿಗೆ ಆದರೆ 2.5 ಚದರ ಮೀಟರ್ ವರೆಗಿನ ಜಾಗಕ್ಕೆ	55-00

ಕ್ರಮ ಸಂಖ್ಯೆ	ವಿವರಗಳು	ಪ್ರತಿ ವರ್ಷಕ್ಕೆ ತೆರಿಗೆಯ ಗರಿಷ್ಠ ಮೊಬಲಗು
(ಸಿ)	ಹೆಚ್ಚಿನ ಪ್ರತಿ 2.5 ಚದರ ಮೀಟರ್ ಅಥವಾ ಅದಕ್ಕಿಂತ ಕಡಿಮೆ ಜಾಗಕ್ಕೆ	55 – 00
8.	ಬೀದಿಗಳಿಗೆ ಅಡ್ಡಲಾಗಿ ತೂಗು ಹಾಕಿದ ದೀಪಾಲಂಕೃತವಿಲ್ಲದ ಜಾಹಿರಾತುಗಳು	
	(ಎ) 1 ಚದರ ಮೀಟರ್ ವರೆಗಿನ ಜಾಗಕ್ಕೆ	10-00
	(ಬಿ) 1 ಚದರ ಮೀಟರ್ ಗಿಂತ ಹೆಚ್ಚಿನ ಮತ್ತು 2.5 ಚದರ ಮೀಟರ್ ವರೆಗಿನ ಜಾಗಕ್ಕೆ	16-00
	(ಸಿ) ಹೆಚ್ಚಿನ ಪ್ರತಿ 2.5 ಚದರ ಮೀಟರ್ ಅಥವಾ ಕಡಿಮೆ ಜಾಗಕ್ಕೆ	16-00
	ಟಿಪ್ಪಣಿ:- 8ನೇ ಬಾಬಿನ ಮೇಲಿನ ತೆರಿಗೆಯು, ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ನು, ಯಾವ ಜಾಗಕ್ಕೆ ನಿರ್ಧರಿಸಬೇಕಾದ ಶ್ರೇಣಿಗನುಸಾರವಾಗಿ ವಿಧಿಸಬಹುದೋ ಆ ಜಾಗಕ್ಕೆ ವಿಧಿಸಬಹುದಾದ ತೆರಿಗೆ ಹೆಚ್ಚಿಗೆಯಾಗಿ ಇರುವುದು	
9.	ಖಾಲಿ ಇರುವ, ಆದರೆ ಜಾಹೀರಾತುದಾರನ ಹೆಸರು ಇರುವ ಅಥವಾ ಅದರ ಮೇಲೆ ``ಬಾಡಿಗೆಗೆ ಇದೆ'' ಎಂಬ ಪ್ರಕಟಣೆ ಇರುವ ದೀಪಾಲಂಕೃತವಿಲ್ಲದ ಜಾಹಿರಾತು ಪ್ರಕಟಣಾ ಫಲಕ-	

ಕ್ರಮ ಸಂಖ್ಯೆ	ವಿವರಗಳು	ಪ್ರತಿ ವರ್ಷಕ್ಕೆ ತೆರಿಗೆಯ ಗರಿಷ್ಠ ಮೊಬಲಗು
	(ಎ) 1 ಚದರ ಮೀಟರ್ ವರೆಗಿನ ಜಾಗಕ್ಕೆ	5-00
	(ಬಿ) 1 ಚದರ ಮೀಟರ್ ಗಿಂತ ಹೆಚ್ಚಿನ, ಆದರೆ 2.5 ಚದರ ಮೀಟರ್ ವರೆಗಿನ ಜಾಗಕ್ಕೆ	8-00
	(ಸಿ) ಹೆಚ್ಚಿನ ಪ್ರತಿ 2.5 ಚದರ ಮೀಟರ್ ಅಥವಾ ಕಡಿಮೆ ಜಾಗಕ್ಕೆ	8-00
10.	ಹರಾಜು ನಡೆಯುವ ಆವರಣಗಳಲ್ಲಿ ಇರುವವುಗಳನ್ನು ಹೊರತುಪಡಿಸಿ, ಪ್ರತಿಯೊಂದು ಹರಾಜು ಮಾರಾಟದ ಜಾಹೀರಾತು ಮಾಡುವುದಕ್ಕಾಗಿ ಎರಡಕ್ಕಿಂತ ಹೆಚ್ಚಿಗೆ ಇರದ, ಹಾಗೂ ಸೂಕ್ತ ಗಾತ್ರದ ಎರಡು ಫಲಕಗಳನ್ನು ಆ ಸ್ಥಳದಲ್ಲಿನ, ಎದ್ದು ಕಾಣುವ ಭಾಗದಲ್ಲಿ ಒಂದನ್ನು ಮತ್ತು ಮುನ್ಸಿಪಾಲಿಟಿ ದೀಪದ ಕಂಬದ ಮೇಲೆ ಮತ್ತೊಂದನ್ನು, ಫಲಕಗಳನ್ನು ಹಾಕಲು ಹರಾಜುದಾರರಿಗೆ ಅನುಮತಿ ಇದೆ.	100 (ಮುನ್ಸಿಪಾಲಿಟಿಯ ಸ್ತಂಭದ ಮೇಲೆ ಪ್ರದರ್ಶಿಸುವುದಕ್ಕಾಗಿ ಬಾಡಿಗೆಯೂ ಒಳಗೊಂಡಂತೆ)

ಅನುಸೂಚಿ - VIII
(ಪ್ರಕರಣ-112)
ಲಿಖಿತ ಪತ್ರದ ಮೂಲಕ ವರ್ಗಾವಣೆಯನ್ನು ಮಾಡಿರುವಾಗ ಕೊಡಬೇಕಾದ ವರ್ಗಾವಣೆಯ ನೋಟೀಸಿನ ನಮೂನೆ

..... ಮುನ್ಸಿಪಲ್ ಕೌನ್ಸಿಲಿನ ಮುನ್ಸಿಪಲ್ ಕಮಿಷನರ್/ಚೀಫ್ ಆಫೀಸರ್ ನಿಗೆ, ---------- ಎ.ಬಿ ಆದ ನಾನು, 1964ರ [1][ಕರ್ನಾಟಕ][1] ಮುನ್ಸಿಪಾಲಿಟಿಗಳ ಅಧಿನಿಯಮದ 111ನೇ ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ ಕೆಳಕಂಡ ಸ್ವತ್ತು ವರ್ಗಾವಣೆಯ ಬಗ್ಗೆ ಈ ಮೂಲಕ ನೋಟೀಸ್ ಕೊಡುತ್ತೇನೆ.

1. 1973ರ ಕರ್ನಾಟಕ ಕಾನೂನುಗಳ ಆದೇಶ ಅಳವಡಿಕೆಗಳ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

				ಸ್ವತ್ತಿನ ವಿವರ							ಷರಾ
ನೋಟೀಸಿನ ದಿನಾಂಕ	ಲಿಖಿತ ಪತ್ರದ ದಿನಾಂಕ	ಹಸ್ತಾಂತರಣದ ಮೂರಾಟುಗಾರನ ಹೆಸರು	ಖರೀದಿದಾರನ ಅಥವಾ ಹಸ್ತಾಂತರಿತನ ಹೆಸರು	ಪ್ರತಿಫಲದ ಮೊಬಲಗು	ಉದು ಸನನ್ನು ಒಳಗೊಂಡಿದೆ	ಸ್ಥಳ	ನಿರ್ದೇಶಕ ಪಟ್ಟಿಯಲ್ಲಿನ್ನ ಸಂಖ್ಯೆ	ಭೂಮಿಯ ಉದ್ದಗಲ	ಎಲ್ಲೆಗಳು	ಲಿಖಿತ ಪತ್ರವನ್ನು ನೋಂದಾಯಿಸಿದ್ದರೆ ನೋಂದಣಿಯ ದಿನಾಂಕ	

ಸಹಿ ಎ.ಬಿ

ಅನುಸೂಚಿ- IX
(ಪ್ರಕರಣ-112)
ಲಿಖಿತ ಪತ್ರದ ಮೂಲಕವಲ್ಲದೆ ಅನ್ಯಥಾ ವರ್ಗಾವಣೆಯು ಆಗಿರುವಾಗ ಅಥವಾ/ ಅದು ಪ್ರಾಪ್ತವಾಗಿರುವಾಗ ಕೊಡಬೇಕಾದ ವರ್ಗಾವಣೆಯ ನೋಟೀಸಿನ ನಮೂನೆ

..... ಮುನ್ಸಿಪಲ್ ಕೌನ್ಸಿಲ್ ನ ಮುನ್ಸಿಪಲ್ ಕಮಿಷನರ್/ಚೀಫ್ ಆಫೀಸರ್ ನಿಗೆ, ... ಎ.ಬಿ ಆದ ನಾನು, 1964ರ [1][ಕರ್ನಾಟಕ][1] ಮುನ್ಸಿಪಾಲಿಟಿಗಳ ಅಧಿನಿಯಮದ 111ನೇ ಪ್ರಕರಣದ ಮೂಲಕ ಅಗತ್ಯಪಡಿಸದಂತೆ ಕೆಳಕಂಡ ಸ್ವತ್ತು ವರ್ಗಾವಣೆಯ ಅಥವಾ ಪ್ರಾಪ್ತಿಯ ಬಗ್ಗೆ ಈ ಮೂಲಕ ನೋಟೀಸ್ ಕೊಡುತ್ತೇನೆ.

1. 1973ರ ಕರ್ನಾಟಕ ಕಾನೂನುಗಳ ಆದೇಶ ಅಳವಡಿಕೆಗಳ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

				ಸ್ವತ್ತಿನ ವಿವರ				
ನೋಟೀಸಿನದಿನಾಂಕ	ಮುನ್ಸಿಪಲ್ ರಿಜಿಸ್ಟರ್ ಗಳಲ್ಲಿ ಸದ್ಯದ ಸ್ವತ್ತು ಯಾರ ಹೆಸರಿನಲ್ಲಿ ಇದೆ	ಯಾರ ಹೆಸರಿಗೆ ಅದನ್ನು ವರ್ಗಾಯಿಸಬೇಕು	ಅದು ಏನನ್ನು ಒಳಗೊಂಡಿದೆ	ಸ್ಥಳ	ನಿರ್ದಿಷ್ಟಪಟ್ಟಿಯಲ್ಲಿನ ಸಂಖ್ಯೆ	ಭೂಮಿಯ ಉದ್ದಗಲ	ಎಲ್ಲೆಗಳು	ಷರಾ

ಸಹಿ ಎ. ಬಿ.

ಅನುಸೂಚಿ - X
(ಪ್ರಕರಣ-142)
ತಗಾದೆ ನೋಟೀಸಿನ ನಮೂನೆ

..... ರಲ್ಲಿ ವಾಸವಾಗಿರುವ ಶ್ರೀ/ಶ್ರೀಮತಿ ..... ಇವರಿಗೆ,

19..... ದಿನದಂದು ಪ್ರಾರಂಭವಾಗಿ 19 ..... ದಿನದಂದು ಕೊನೆಗೊಳ್ಳುವ ..... ನ ಅವಧಿಗಾಗಿ ..... ರ ಮೇರೆಗೆ ..... ಬಗ್ಗೆ (ತೆರಿಗೆಯನ್ನು ವಿಧಿಸಬಹುದಾದಂಥ ಸ್ವತ್ತು ಅಥವಾ ಇತರ ವಿಷಯವನ್ನು ಇಲ್ಲಿ ವಿವರಿಸಿ) ವಿಧಿಸಬಹುದಾದ .....ದಿಂದ ..... ಬಾಕಿಯಿರುವ ..... ಮೊತ್ತವನ್ನು ..... ದಿಂದ ..... ಮುನ್ಸಿಪಲ್ ಕೌನ್ಸಿಲ್ ತಗಾದೆ ಮಾಡುತ್ತದೆ ಎಂದು ದಯವಿಟ್ಟು

ತಿಳಿಯಿರಿ ಮತ್ತು ಈ ನೋಟೀಸ್ ಜಾರಿಯಾದಂದಿನಿಂದ ಮೂವತ್ತು ದಿನಗಳೊಳಗೆ ಸದರಿ ಮೊತ್ತವನ್ನು ..... ದಲ್ಲಿನ ಮುನ್ಸಿಪಲ್ ಕಚೇರಿಗೆ ಸಂದಾಯ ಮಾಡದಿದ್ದರೆ ಅಥವಾ ಸಂದಾಯ ಮಾಡದೇ ಇರುವುದಕ್ಕೆ ಮುನ್ಸಿಪಲ್ ಕೌನ್ಸಿಲ್ ಗೆ ಸಮಾಧಾನವಾಗುವಂತೆ ಸಾಕಷ್ಟು ಕಾರಣವನ್ನು ತೋರಿಸದಿದ್ದರೆ, ಅದನ್ನು ಖರ್ಚುಗಳ ಸಮೇತ ವಸೂಲು ಮಾಡುವುದಕ್ಕಾಗಿ ಕರಸ್ಥ ಅಥವಾ ಜಪ್ತಿಯ ವಾರಂಟ್ ನ್ನೂ ಹೊರಡಿಸಲಾಗುತ್ತದೆ.

19.....ನ ಈ ದಿನಾಂಕದಂದು

ಸಹಿ/-
ಮುನ್ಸಿಪಲ್ ಕೌನ್ಸಿಲ್ ನ ಆದೇಶದ ಮೇಲೆ

ಅನುಸೂಚಿ - XI
(ಪ್ರಕರಣ-143)
ವಾರೆಂಟಿನ ನಮೂನೆ

ಇವರಿಗೆ,

(ವಾರಂಟ್ ನ್ನು ಜಾರಿಗೊಳಿಸುವ ಜವಾಬ್ದಾರಿ ಹೊತ್ತ ಅಧಿಕಾರಿಯ ಹೆಸರನ್ನು ಇಲ್ಲಿ ಸೇರಿಸಿ)

..... ನ ಎ.ಬಿ.ನು, ... ಸಂಖ್ಯೆಯ ನಿಯಮದ ಮೇರೆಗೆ ವಿಧಿಸಬಹುದಾದಂಥ ಮೊತ್ತವನ್ನು, 19 ..... ದಿನಾಂಕದಂದು ಪ್ರಾರಂಭವಾಗಿ 19..... ದಿನದಂದು ಕೊನೆಗೊಳ್ಳುವ ..... ಅವಧಿಗಾಗಿ ..... ಬಗ್ಗೆ ಬಾಕಿಯಿರುವ (ಇಲ್ಲಿ ಹೊಣೆಗಾರಿಕೆಯನ್ನು ವಿವರಿಸಿ) ..... ಮೊತ್ತವನ್ನು ಸಂದಾಯ ಮಾಡದಿರುವುದರಿಂದ ಮತ್ತು ಸಂದಾಯ ಮಾಡದೆ ಇರುವುದಕ್ಕಾಗಿ ಸಮಾಧಾನಕರ ಕಾರಣವನ್ನು ತೋರಿಸದೆ ಇರುವುದರಿಂದ; ಮತ್ತು ಅದಕ್ಕಾಗಿನ ತಗಾದೆಯ ನೋಟೀಸನ್ನು ಅವನಿಗೆ ಜಾರಿ ಮಾಡಿದಂದಿನಿಂದ ಮೂವತ್ತು ದಿನಗಳು ಕಳೆದಿರುವುದರಿಂದ;

..... ರೂಪಾಯಿಗಳ ಸದರಿ ಮೊತ್ತಕ್ಕೆ ಸರಿ ಸಮಾನರಾಗಿ ಸಮಾನವಾದ ಮೌಲ್ಯದ ಸದರಿ ಎ.ಬಿ.ನ ಚರ ಸ್ವತ್ತು / ಸ್ಥಿರ ಸ್ವತ್ತು (ಕೆಳಗೆ ವಿವರಿಸಲಾದ) 1964ರ [1][ಕರ್ನಾಟಕ][1] ಮುನ್ಸಿಪಾಲಿಟಿಗಳ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳು ಮತ್ತು ಬೈಲಾಗಳಿಗೊಳಪಟ್ಟು ಕರಸ್ಥಗೊಳಿಸಲು/ಜಪ್ತಿ ಮಾಡಲು ಮತ್ತು ಅದರ ಮೇರೆಗೆ ನೀವುವಶಪಡಿಸಿಕೊಂಡ /ಜಪ್ತಿ ಮಾಡಿದ ಸ್ವತ್ತಿನ ಎಲ್ಲ ವಿವರಗಳನ್ನೂ ವಾರಂಟ್ ನೊಂದಿಗೆ ನನಗೆ ತತ್‌ಕ್ಷಣವೇ ಪ್ರಮಾಣೀಕರಿಸಲು ನಿಮಗೆ ನಿರ್ದೇಶಿಸಲಾಗಿದೆ.

1. 1973ರ ಕರ್ನಾಟಕ ಕಾನೂನುಗಳ ಆದೇಶ ಅಳವಡಿಕೆಗಳ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

19.....ದಿನಾಂಕದಂದು

(ಸಹಿ/-)
ಸ್ಥಿರ ಸ್ವತ್ತಿನ ವಿವರ

ಅನುಸೂಚಿ - XII
(ಪ್ರಕರಣ-129 ಮತ್ತು 143)
ತಪಶೀಲು ಪಟ್ಟಿ ಪತ್ರ ಮತ್ತು ನೋಟೀಸಿನ ನಮೂನೆ

..... ನಲ್ಲಿ ವಾಸವಾಗಿರುವ ಶ್ರೀ/ಶ್ರೀಮತಿ ..... ರವರಿಗೆ ತಗಾದೆ ನೋಟೀಸಿನ ಜಾರಿಗಾಗಿ ಸಲ್ಲಿಸತಕ್ಕ ..... ರೂಪಾಯಿಗಳ ಮತ್ತು ವಾರಂಟ್ ಗಾಗಿ ಸಲ್ಲಿಸತಕ್ಕ ..... ರೂಪಾಯಿಗಳನ್ನು ಒಟ್ಟಾಗಿ 19 ..... ರ ದಿನದಿಂದ ಪ್ರಾರಂಭವಾಗಿ 19 .....ದ ದಿವಸದಂದು ಕೊನೆಗೊಳ್ಳುವ ಅವಧಿಗಾಗಿ, ಅಂಚಿನಲ್ಲಿ ನಮೂದಿಸಿರುವ (ಇಲ್ಲಿ ಹೊಣೆಯನ್ನು ವಿವರಿಸಿ) ..... ಈ ಮೌಲ್ಯಕ್ಕಾಗಿ, ಇದಕ್ಕೆ ಲಗತ್ತಿಸಿದ ತಪಶೀಲು ಪತ್ರದಲ್ಲಿ ನಿರ್ದಿಷ್ಟಪಡಿಸಿದ ಸ್ವತ್ತನ್ನು ಈ ದಿನ ನಾನು, ಕರಸ್ಥ ಜಪ್ತಿ

ಮಾಡಿದ್ದೇನೆಂದು ದಯವಿಟ್ಟು ತಿಳಿಯಿರಿ ಮತ್ತು ಈ ನೋಟೀಸ್ ಜಾರಿಯಾದ ದಿನಾಂಕದಿಂದ ಹತ್ತು ದಿವಸಗಳೊಳಗಾಗಿ ..... ನಲ್ಲಿನ ಮುನ್ಸಿಪಲ್ ಕಚೇರಿಗೆ ಸದರಿ ಮೊಬಲಗನ್ನು ವಸೂಲ್ಮಾಡುವ ಖರ್ಚುಗಳ ಸಮೇತ ನೀವು ಸಂದಾಯ ಮಾಡದಿದ್ದರೆ, ಸದರಿ ಸ್ವತ್ತನ್ನು ಮಾರಾಟ ಮಾಡಲಾಗುವುದು.

19..... ದ ದಿನಾಂಕ .....

ವಾರಂಟ್ ನ್ನು ಜಾರಿ ಮಾಡುವ [1][xxx][1]

1.1979ರ ಅಧಿನಿಯಮ 21ರ ಮೂಲಕ 31.3.1979 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

ದಾರಿ ಸುಂಕವನ್ನು
ಸಂಗ್ರಹಿಸುವ ಅಧಿಕಾರಿಯ ರುಜು

[1][XXX][1]

1. 2025ರ ಅಧಿನಿಯಮ 64ರ ಮೂಲಕ 12.09.2025 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

ಅಧಿಸೂಚನೆಗಳು

I

[ಸಂ. ಪಿಎಲ್ಎಮ್ 1 ಎಮ್ಎಲ್ಆರ್ 64(1)]

ಎಸ್.ಒ. 2147.- ಮೈಸೂರು ಪೌರಸಭೆಗಳ ಅಧಿನಿಯಮ, 1964 (1964ರ ಮೈಸೂರು ಅಧಿನಿಯಮ 22)ರ 1ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಮೈಸೂರು ಸರ್ಕಾರವು 1965ರ ಏಪ್ರಿಲ್ 1ನೇ ದಿನವನ್ನು, ಸದರಿ ಅಧಿನಿಯಮದ ಉಪಬಂಧಗಳು (ಈಗಾಗಲೇ ಜಾರಿಯಲ್ಲಿರುವ 1, 2, 323, 345, 381, 383, 384 ಮತ್ತು 385 ಪ್ರಕರಣಗಳನ್ನು ಹೊರತುಪಡಿಸಿ) ಜಾರಿಗೆ ಬರತಕ್ಕ ದಿನಾಂಕವೆಂದು ಗೊತ್ತುಪಡಿಸಿದೆ.

ಮೈಸೂರು ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಲ್.ಎ. ಧಮಣಿಗಿ)
ಉಪ ಕಾರ್ಯದರ್ಶಿ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ-IV-2ಸಿ(ii), ದಿನಾಂಕ: 1965ರ ಮಾರ್ಚ್ 29 ರಂದು ಪುಟ ಸಂಖ್ಯೆ 72 ರಲ್ಲಿ ಪ್ರಕಟಿತವಾಗಿದೆ)

II

[ಸಂ. ಎಲ್ಎಮ್ಎ 2 ಎಮ್ಎನ್ಎಮ್ 67]

ಎಸ್.ಒ.124.- ಮೈಸೂರು ಪೌರಸಭೆಗಳ (ತಿದ್ದುಪಡಿ) ಅಧಿನಿಯಮ, 1966 (1966ರ ಮೈಸೂರು ಅಧಿನಿಯಮ 34)ರ 1ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಮೈಸೂರು ಸರ್ಕಾರವು 1967ರ ಜನವರಿ 16ನೇ ದಿನವನ್ನು, ಸದರಿ ಅಧಿನಿಯಮದ ಉಪಬಂಧಗಳು ಜಾರಿಗೆ ಬರತಕ್ಕ ದಿನಾಂಕವೆಂದು ಈ ಮೂಲಕ ಗೊತ್ತುಪಡಿಸಿದೆ.

ಮೈಸೂರು ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎನ್.ಎಸ್. ರಾಮಚಂದ್ರ)
ಸರ್ಕಾರದ ಕಾರ್ಯದರ್ಶಿ,
ಕಾರ್ಮಿಕ ಮತ್ತು ಪೌರಾಡಳಿತ ಇಲಾಖೆ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ-IV-2ಸಿ(ii), ದಿನಾಂಕ: 12.01.1967 ರಂದು ಪುಟ ಸಂಖ್ಯೆ 300 ರಲ್ಲಿ ಪ್ರಕಟಿತವಾಗಿದೆ)

III

ಬೆಂಗಳೂರು, ದಿನಾಂಕ: 4ನೇ ಮಾರ್ಚ್ 1992

[ಸಂ. ಡಿಪಿಎಆರ್ 3 ಎಸ್‌ಡಿಇ 92]

ಎಸ್.ಒ. 463.- ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ 14)ರ 1ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು 1992ರ ಏಪ್ರಿಲ್ ಎರಡನೇ ದಿನವನ್ನು, ಕರ್ನಾಟಕ ಸಿವಿಲ್ ಸೇವೆಗಳ ಅಧಿನಿಯಮ, 1978ರ ಉಪಬಂಧಗಳು ಜಾರಿಗೆ ಬರತಕ್ಕ ದಿನಾಂಕವೆಂದು ಈ ಮೂಲಕ ಗೊತ್ತುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮೋತಿರಾಮ್ ಪಾವರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ-2.
(ಸೇವಾ ನಿಯಮಗಳು)

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ-IV-2ಸಿ(ii), ದಿನಾಂಕ: 26.3.1992 ರಂದು; ಪುಟ ಸಂಖ್ಯೆ 376 ರಲ್ಲಿ ಪ್ರಕಟಿತವಾಗಿದೆ)

IV

ಬೆಂಗಳೂರು, ದಿನಾಂಕ: 1977ರ ಜುಲೈ 2

[ಸಂ. ಯುಡಿಡಿ 10 ಟಿಸಿಟಿ 96]

ಎಸ್.ಒ. 834.- ಕರ್ನಾಟಕ ಮುನ್ಸಿಪಾಲಿಟಿಗಳ (ತಿದ್ದುಪಡಿ) ಅಧಿನಿಯಮ, 1994 (1994ರ ಕರ್ನಾಟಕ ಅಧಿನಿಯಮ 36)ರ (1)ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು 1996ರ ಜನವರಿ ಒಂದನೇ ದಿನವನ್ನು, ಸದರಿ ಅಧಿನಿಯಮದ 24ನೇ, 26ನೇ, 27ನೇ ಮತ್ತು 28ನೇ ಪ್ರಕರಣಗಳು ಜಾರಿಗೆ ಬರತಕ್ಕ ದಿನಾಂಕವೆಂದು ಭಾವಿಸತಕ್ಕದ್ದೆಂದು ಹಾಗೂ [1][1997ರ ಆಗಸ್ಟ್ ಒಂದನೇ ದಿನ]1ವನ್ನು ಸದರಿ ಅಧಿನಿಯಮದ 35ನೇ ಪ್ರಕರಣವು ಜಾರಿಗೆ ಬರತಕ್ಕ ದಿನಾಂಕವೆಂದು ಭಾವಿಸತಕ್ಕದ್ದೆಂದು ಈ ಮೂಲಕ ಗೊತ್ತುಪಡಿಸಿದೆ.

1. ಅಧಿಸೂಚನೆ ಸಂಖ್ಯೆ ಯುಡಿಡಿ 10 ಟಿಸಿಪಿ 96, ದಿನಾಂಕ 1.8.1997 ರ ಮೂಲಕ ಪ್ರತಿಯೋಜಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಡಿ.ಬಿ. ಗಣಾಚಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ-IV-2ಸಿ(ii), ದಿನಾಂಕ: 5.7.1997 ರಂದು; ಪುಟ ಸಂಖ್ಯೆ 745 ರಲ್ಲಿ ಪ್ರಕಟಿತವಾಗಿದೆ)

V

ಬೆಂಗಳೂರು, ದಿನಾಂಕ: 1977ರ ಆಗಸ್ಟ್ 1

[ಸಂ. ಯುಡಿಡಿ 10 ಟಿಸಿಟಿ 96]

ಅಧಿಸೂಚನೆ ಸಂ. ಯುಡಿಡಿ 10 ಟಿಸಿಟಿ 96, ದಿನಾಂಕ: 2.7.1997ರ ಆರನೇ ಸಾಲಿನಲ್ಲಿ ಕಂಡುಬರುವ '1997ರ ಏಪ್ರಿಲ್ ಒಂದನೇ ದಿನ' ಎಂಬ ಪದಗಳಿಗೆ ಬದಲಾಗಿ '1997ರ ಆಗಸ್ಟ್ ಒಂದನೇ ದಿನ' ಎಂಬುದಾಗಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ

ಮತ್ತು ಅವರ ಹೆಸರಿನಲ್ಲಿ,

(ಡಿ.ಬಿ. ಗಣಾಚಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

VI

ಅಧಿಸೂಚನೆ

ಸಂ. ಯುಡಿಡಿ 26 ಟಿಸಿಟಿ 2000(ಪಿ-II), ಬೆಂಗಳೂರು, ದಿನಾಂಕ: 2001ರ ನವೆಂಬರ್, 12

ಕರ್ನಾಟಕ ಮುನ್ಸಿಪಾಲಿಟಿಗಳ (ತಿದ್ದುಪಡಿ) ಅಧಿನಿಯಮ, 2000 (2001ರ ಕರ್ನಾಟಕ ಅಧಿನಿಯಮ 28)ರ (1)ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು 2001ರ ನವೆಂಬರ್ 19ನೇ ದಿನವನ್ನು, ಸದರಿ ಅಧಿನಿಯಮವು ಜಾರಿಗೆ ಬರತಕ್ಕ ದಿನಾಂಕವೆಂದು ಈ ಮೂಲಕ ಗೊತ್ತುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ವಿ. ಶ್ರೀಧರಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

VII

ಅಧಿಸೂಚನೆ

ಸಂ. ಯುಡಿಡಿ 89 ಎಹೆಚ್‌ಡಿ 2000(ಪಿಟಿ-I), ಬೆಂಗಳೂರು, ದಿನಾಂಕ: 2001ರ ನವೆಂಬರ್, 12

ಕರ್ನಾಟಕ ಮುನ್ಸಿಪಾಲಿಟಿಗಳ (ತಿದ್ದುಪಡಿ) ಅಧಿನಿಯಮ, 2000 (2001ರ ಕರ್ನಾಟಕ ಅಧಿನಿಯಮ 31)ರ 1ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು 2001ರ ನವೆಂಬರ್ 19ನೇ ದಿನವನ್ನು, ಸದರಿ ಅಧಿನಿಯಮವು ಜಾರಿಗೆ ಬರತಕ್ಕ ದಿನಾಂಕವೆಂದು ಈ ಮೂಲಕ ಗೊತ್ತುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಆರ್. ರಾಮಚಂದ್ರ)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರಭಾರಿ),
ನಗರಾಭಿವೃದ್ಧಿ ಇಲಾಖೆ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ-IV-ಎ, ದಿನಾಂಕ: 13.11.2001 ರಲ್ಲಿ ಪ್ರಕಟಿತವಾಗಿದೆ)

VIII

ಅಧಿಸೂಚನೆ

ಸಂ. ಯುಡಿಡಿ 35 ಎಂಎಲ್‌ಆರ್ 2003, ಬೆಂಗಳೂರು, ದಿನಾಂಕ: 2003ರ ನವೆಂಬರ್ , 10
ಕರ್ನಾಟಕ ರಾಜ್ಯಪತ್ರ ವಿಶೇಷ ಸಂಚಿಕೆ ಸಂ. 1403, ದಿನಾಂಕ: 14.11.2003

ಕರ್ನಾಟಕ ಮುನ್ಸಿಪಾಲಿಟಿಗಳ (ತಿದ್ದುಪಡಿ) ಅಧಿನಿಯಮ, 2002 (2003ರ ಕರ್ನಾಟಕ ಅಧಿನಿಯಮ 23)ರ 1ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು 2003ರ ನವೆಂಬರ್ 10ನೇ ದಿನವನ್ನು ಸದರಿ ಅಧಿನಿಯಮವು ಜಾರಿಗೆ ಬರತಕ್ಕ ದಿನಾಂಕವೆಂದು ಈ ಮೂಲಕ ಗೊತ್ತುಪಡಿಸಿದೆ.

IX

ಅಧಿಸೂಚನೆ

ಸಂ. ಯುಡಿಡಿ 35 ಎಮ್‌ಎಲ್‌ಆರ್ 2003, ಬೆಂಗಳೂರು, ದಿನಾಂಕ: 2003ರ ಆಗಸ್ಟ್, 21

ಕರ್ನಾಟಕ ಮುನ್ಸಿಪಾಲಿಟಿಗಳ (ಮೂರನೇ ತಿದ್ದುಪಡಿ) ಅಧಿನಿಯಮ, 2002 (2003ರ ಕರ್ನಾಟಕ ಅಧಿನಿಯಮ 24)ರ 1ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು 2003ರ ಆಗಸ್ಟ್ 21ನೇ ದಿನವನ್ನು, ಸದರಿ ಅಧಿನಿಯಮವು ಜಾರಿಗೆ ಬರತಕ್ಕ ದಿನಾಂಕವೆಂದು ಈ ಮೂಲಕ ಗೊತ್ತುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಜಗದೀಶ್ ಜೋಷಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

(ಕರ್ನಾಟಕ ರಾಜ್ಯಪತ್ರ ವಿಶೇಷ ಸಂಚಿಕೆ ಸಂ. 980, ಭಾಗ-IVಎ, ದಿನಾಂಕ: 21.8.2003 ರಲ್ಲಿ ಪ್ರಕಟಿತವಾಗಿದೆ)

X

ಅಧಿಸೂಚನೆ

ಸಂ. ಯುಡಿಡಿ 35 ಎಮ್ಎಲ್ಆರ್ 2003, ಬೆಂಗಳೂರು, ದಿನಾಂಕ: 2003ರ ನವೆಂಬರ್, 10ಕರ್ನಾಟಕ ರಾಜ್ಯಪತ್ರ, ವಿಶೇಷ ಸಂಚಿಕೆ ಸಂ. 1402, ದಿನಾಂಕ 14.11.2003

ಕರ್ನಾಟಕ ಮುನ್ಸಿಪಾಲಿಟಿಗಳ (ಎರಡನೇ ತಿದ್ದುಪಡಿ) ಅಧಿನಿಯಮ, 2002 (2003ರ ಕರ್ನಾಟಕ ಅಧಿನಿಯಮ 40)ರ 1ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು 2003ರ ನವೆಂಬರ್ 10ನೇ ದಿನವನ್ನು, ಸದರಿ ಅಧಿನಿಯಮವು ಜಾರಿಗೆ ಬರತಕ್ಕ ದಿನಾಂಕವೆಂದು ಈ ಮೂಲಕ ಗೊತ್ತುಪಡಿಸಿದೆ.

XI

ಅಧಿಸೂಚನೆ

ಸಂ. ಯುಡಿಡಿ 68 ಬೆಂರುಪ್ರ 2007, ಬೆಂಗಳೂರು, ದಿನಾಂಕ: 2007ರ ಸೆಪ್ಟೆಂಬರ್, 7

ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 2004 (2007ರ ಕರ್ನಾಟಕ ಅಧಿನಿಯಮ 1)ರ 1ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು 2007ರ ಸೆಪ್ಟೆಂಬರ್ 15ನೇ ದಿನವನ್ನು, ಸದರಿ ಅಧಿನಿಯಮದ ಎಲ್ಲಾ ಉಪಬಂಧಗಳು ಜಾರಿಗೆ ಬರತಕ್ಕ ದಿನಾಂಕವೆಂದು ಈ ಮೂಲಕ ಗೊತ್ತುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಸಿ.ಟಿ. ನಾರಾಯಣಸ್ವಾಮಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

XII

ನಗರಾಭಿವೃದ್ಧಿ ಸಚಿವಾಲಯ

ಅಧಿಸೂಚನೆ

ಸಂ. ಯುಡಿಡಿ 209 ಜಿಇಎಲ್ 2011, ಬೆಂಗಳೂರು, ದಿನಾಂಕ: 10.06.2011

ಕರ್ನಾಟಕ ಪೌರ ನಿಗಮಗಳ ಮತ್ತು ಕೆಲವು ಇತರ ಕಾನೂನಿನ (ತಿದ್ದುಪಡಿ) ಅಧಿನಿಯಮ, 2011 (2011ರ ಕರ್ನಾಟಕ ಅಧಿನಿಯಮ 24)ರ 1ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು 2011ರ ಜೂನ್ 10ನೇ ದಿನವನ್ನು, ಸದರಿ ಅಧಿನಿಯಮದ ಎಲ್ಲಾ ಉಪಬಂಧಗಳು ಜಾರಿಗೆ ಬರತಕ್ಕ ದಿನಾಂಕವೆಂದು ಈ ಮೂಲಕ ಗೊತ್ತುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ

ಮತ್ತು ಅವರ ಹೆಸರಿನಲ್ಲಿ,

(ಸಿ.ಆರ್. ರವೀಂದ್ರ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

(ಕರ್ನಾಟಕ ರಾಜ್ಯಪತ್ರ ಭಾಗ-IVಎ, ವಿಶೇಷ ಸಂಚಿಕೆ ಸಂ. 580, ದಿನಾಂಕ: 10.06.2011 ರಲ್ಲಿ ಪ್ರಕಟಿತವಾಗಿದೆ)

2012ರ ಕರ್ನಾಟಕ ಅಧಿನಿಯಮ ಸಂಖ್ಯೆ. 31

(2012ರ ಆಗಸ್ಟ್ ಮೂವತ್ತನೇ ದಿನಾಂಕದಂದು ಕರ್ನಾಟಕ ರಾಜಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟಿತವಾಗಿದೆ)

ಕರ್ನಾಟಕ ಪೌರ ನಿಗಮಗಳು ಹಾಗೂ ಕೆಲವು ಇತರ ಕಾನೂನು (ಎರಡನೇ ತಿದ್ದುಪಡಿ) ಅಧಿನಿಯಮ, 2012

(2012ರ ಆಗಸ್ಟ್ ಇಪ್ಪತ್ತೇಳನೇ ದಿನದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಿತು)

ಕರ್ನಾಟಕ ಪೌರ ನಿಗಮಗಳ ಅಧಿನಿಯಮ, 1976 ಹಾಗೂ ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಪೌರ ನಿಗಮಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14) ಹಾಗೂ ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22) ಗಳನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಅರವತ್ಮೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

1. ಚಿಕ್ಕ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಕರ್ನಾಟಕ ಪೌರ ನಿಗಮಗಳು ಹಾಗೂ ಕೆಲವು ಇತರ ಕಾನೂನು (ಎರಡನೇ ತಿದ್ದುಪಡಿ) ಅಧಿನಿಯಮ, 2012 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಮತ್ತು ಈ ಅಧಿನಿಯಮದ ವಿವಿಧ ಉಪಬಂಧಗಳಿಗಾಗಿ ಗೊತ್ತುಪಡಿಸಬಹುದಾದ ವಿವಿಧ ದಿನಾಂಕಗಳಂದು ಜಾರಿಗೆ ಬರತಕ್ಕದ್ದು.

94ಎಎ ಪ್ರಕರಣವನ್ನು ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ.

ಅಧಿಸೂಚನೆ

ಸಂ. ಯುಡಿಡಿ 99 ಪಿಆರ್ ಜೆ 2013, ಬೆಂಗಳೂರು, ದಿನಾಂಕ: 07.10.2013

ಕರ್ನಾಟಕ ಪೌರ ನಿಗಮಗಳ ಹಾಗೂ ಕೆಲವು ಇತರ ಕಾನೂನು (ಎರಡನೇ ತಿದ್ದುಪಡಿ) ಅಧಿನಿಯಮ, 2012 (2012ರ ಕರ್ನಾಟಕ ಅಧಿನಿಯಮ 31)ರ (1)ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, 2013ರ ಅಕ್ಟೋಬರ್ 7ನೇ ದಿನವನ್ನು, ಸದರಿ ಅಧಿನಿಯಮದ ಎಲ್ಲಾ ಉಪಬಂಧಗಳು ಜಾರಿಗೆ ಬರತಕ್ಕ ದಿನಾಂಕವೆಂದು ಈ ಮೂಲಕ ಗೊತ್ತುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ.ಎಸ್. ಭಾಗ್ಯಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಪಿಎಂಸಿ)

2013ರ ಕರ್ನಾಟಕ ಅಧಿನಿಯಮ ಸಂಖ್ಯೆ. 57

(2013ರ ಆಗಸ್ಟ್ ಇಪ್ಪತ್ತೇಳನೇ ದಿನಾಂಕದಂದು ಕರ್ನಾಟಕ ರಾಜಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟಿತವಾಗಿದೆ)

ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಹಾಗೂ ಕೆಲವು ಇತರ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 2009

(1913ರ ಆಗಸ್ಟ್ ಎರಡನೇ ದಿನದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಿತು)

ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961, ಕರ್ನಾಟಕ ಪೌರ ನಿಗಮಗಳ ಅಧಿನಿಯಮ, 1976 ಹಾಗೂ ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11), ಕರ್ನಾಟಕ ಪೌರ ನಿಗಮಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14) ಹಾಗೂ ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22) ಗಳನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಅರವತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

1. ಚಿಕ್ಕ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಹಾಗೂ ಕೆಲವು ಇತರ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 2009 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

(187ಎ ಪ್ರಕರಣವನ್ನು ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ)

2013ರ ಕರ್ನಾಟಕ ಅಧಿನಿಯಮ ಸಂಖ್ಯೆ. 67

(2013ರ ಡಿಸೆಂಬರ್ ಮೂವತ್ತೊಂದನೇ ದಿನಾಂಕದಂದು ಕರ್ನಾಟಕ ರಾಜಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟಿತವಾಗಿದೆ)

ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಹಾಗೂ ಕೆಲವು ಇತರ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 2013

(1913ರ ಡಿಸೆಂಬರ್ ಇಪ್ಪತ್ತೆಂಟನೇ ದಿನದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಿತು)

ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961, ಕರ್ನಾಟಕ ಪೌರ ನಿಗಮಗಳ ಅಧಿನಿಯಮ, 1976 ಹಾಗೂ ಕರ್ನಾಟಕ ಮುನ್ಸಿಪಾಲಿಟಿಗಳಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11), ಕರ್ನಾಟಕ ಪೌರ ನಿಗಮಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14) ಹಾಗೂ ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22) ಗಳನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಅರವತ್ತಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

1.ಚಿಕ್ಕ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಹಾಗೂ ಕೆಲವು ಇತರ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 2013 ಎಂದು ಕರೆಯತಕ್ಕದ್ದು.

(2) ಇದು 2013ರ ಅಕ್ಟೋಬರ್ ಹತ್ತೊಂಬತ್ತನೇ ದಿನದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

187ಎ ಪ್ರಕರಣವನ್ನು ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ.

ನಿರಸನ ಮತ್ತು ಉಳಿಸುವಿಕೆಗಳು.- (1) 2013ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಹಾಗೂ ಕೆಲವು ಇತರ ಕಾನೂನು (ತಿದ್ದುಪಡಿ) ಅಧ್ಯಾದೇಶ, 2013 (2013ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 02)ವನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸನವಾಗಿದ್ದಾಗ್ಯೂ, ಅಥವಾ ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಮೇರೆಗೆ ಮಾಡಲಾದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಮೇರೆಗೆ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

2015ರ ಕರ್ನಾಟಕ ಅಧಿನಿಯಮ ಸಂಖ್ಯೆ. 06

(2015ರ ಜನವರಿ ಒಂಬತ್ತನೇ ದಿನಾಂಕದಂದು ಕರ್ನಾಟಕ ರಾಜಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟಿತವಾಗಿದೆ)

ಕರ್ನಾಟಕ ಮುನ್ಸಿಪಾಲಿಟಿಗಳ ಹಾಗೂ ಕೆಲವು ಇತರ ಕಾನೂನು (ತಿದ್ದುಪಡಿ)ಅಧಿನಿಯಮ, 2014

(1915ರ ಜನವರಿ ಏಳನೇ ದಿನದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಿತು)

ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964 ಹಾಗೂ ಪೌರ ನಿಗಮಗಳ ಅಧಿನಿಯಮ, 1976ಗಳನ್ನು ಮತ್ತಷ್ಟು ತಿದ್ದುಪಡಿ ಮಾಡಲು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22) ಹಾಗೂ ಕರ್ನಾಟಕ ಪೌರ ನಿಗಮಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14) ಗಳನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಅರವತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

1. ಚಿಕ್ಕ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಕರ್ನಾಟಕ ಮುನ್ಸಿಪಾಲಿಟಿಗಳ ಹಾಗೂ ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2014 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2ನೇ ಪ್ರಕರಣವನ್ನು ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ.

2015ರ ಕರ್ನಾಟಕ ಅಧಿನಿಯಮ ಸಂಖ್ಯೆ. 42

(2015ರ ಡಿಸೆಂಬರ್ ಇಪ್ಪತ್ತೂರನೇ ದಿನಾಂಕದಂದು ಕರ್ನಾಟಕ ರಾಜಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟಿತವಾಗಿದೆ)

ಕರ್ನಾಟಕ ಪೌರ ನಿಗಮಗಳು ಹಾಗೂ ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2015

(1915ರ ಡಿಸೆಂಬರ್ ಇಪ್ಪತ್ತೊಂದನೇ ದಿನದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಿತು)

ಕರ್ನಾಟಕ ಪೌರ ನಿಗಮಗಳ ಅಧಿನಿಯಮ, 1976 ಹಾಗೂ ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964 ಗಳನ್ನು ಮತ್ತಷ್ಟು ತಿದ್ದುಪಡಿ ಮಾಡಲು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಪೌರ ನಿಗಮಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14) ಹಾಗೂ ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22) ಗಳನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಅರವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

1.ಚಿಕ್ಕ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಕರ್ನಾಟಕ ಪೌರ ನಿಗಮಗಳು ಹಾಗೂ ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2015 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

256(1)ನೇ ಪ್ರಕರಣವನ್ನು ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ.

Certificate

Certified that this is the true Kannada
Transalation of the Karnataka MunicipalitiesAct, 1964.

The above translation of the Karnataka Municipalities Act, 1964 (Karnataka Act 22 of 1964) shall be authoritative text in the Kannada language under section 5A of the Karnataka Official Language Act, 1963 (Karnataka Act 26 of 1963).

VAJUBHAI VALA
GOVERNOR OF KARNATAKA

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
(ಕೆ.ದ್ವಾರಕನಾಥ್ ಬಾಬು)
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ

2020ರ ಕರ್ನಾಟಕ ಅಧಿನಿಯಮ ಸಂಖ್ಯೆ: 10

(2020ರ ಏಪ್ರಿಲ್ ತಿಂಗಳ 27 ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2020

(2020ರ ಏಪ್ರಿಲ್ ತಿಂಗಳ 24ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ನ್ನು ಮತ್ತು ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976ನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ 22) ಮತ್ತು ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976ನ್ನು (1977ರ ಕರ್ನಾಟಕ ಅಧಿನಿಯಮ 14) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತ ವಾಗಲಿ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2020 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

38ನೇ ಪ್ರಕರಣವನ್ನು ಮೂಲ ಅಧಿನಿಯಮದಲ್ಲಿ ಇಂದೀಕರಿಸಲಾಗಿದೆ.

3. 1977ರ ಕರ್ನಾಟಕ ಅಧಿನಿಯಮ 14ಕ್ಕೆ ತಿದ್ದುಪಡಿ.-ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976ರಲ್ಲಿ (1977ರ ಕರ್ನಾಟಕ ಅಧಿನಿಯಮ 14), 55ನೇ ಪ್ರಕರಣದ (2)ನೇ ಉಪಪ್ರಕರಣದ (ಎಚ್) ಖಂಡದಲ್ಲಿ (vi-ಎ) ಉಪಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ :-

``(vi-ಬಿ) ಅರ್ಹಮತದಾರನು, ಚುನಾವಣೆಯಲ್ಲಿ ಸ್ಪರ್ಧಿಸಿದ ಅಭ್ಯರ್ಥಿಗಳ ಪೈಕಿ ಯಾವೊಬ್ಬ ಅಭ್ಯರ್ಥಿಯ ಪರವಾಗಿ ತನ್ನ ಮತವನ್ನು ಚಲಾಯಿಸಲು ಇಚ್ಛಿಸದಿರುವ ಸಂದರ್ಭದಲ್ಲಿ ಆತನು None Of The Above (NOTA) (ಮೇಲಿನ ಯಾರೊಬ್ಬರಿಗೂ ಇಲ್ಲ) ಎಂದು ಮತವನ್ನು ಚಲಾಯಿಸುವ ರೀತಿ ;''

The above translation of the the Karnataka Municipalities and Certain Other Law (Amendment) Act, 2020(Karnataka Act 10 of 2020) shallbe authoritative text in the Kannada language under section 5-A of the Karnataka Official Language Act, 1963 (Karnataka Act 26 of 1963).

ವಜುಬಾಯಿವಾಲ
ಕರ್ನಾಟಕ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ.ದ್ವಾರಕನಾಥ್ ಬಾಬು)
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ

2020 ರ ಕರ್ನಾಟಕ ಅಧಿನಿಯಮ ಸಂಖ್ಯೆ: 39

(2020 ರ ಅಕ್ಟೋಬರ್ ತಿಂಗಳ 19 ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ಅಧಿನಿಯಮ, 2020

(2020 ರ ಅಕ್ಟೋಬರ್ ತಿಂಗಳ 19 ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಪೌರ ಸಭೆಗಳ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ 22) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ಅಧಿನಿಯಮ, 2020 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

ಅಧ್ಯಾಯ III-ಎ, 80-ಎ, 80-ಬಿ, 80-ಸಿ, 80-ಡಿ, 80-ಇ, 80-ಎಫ್, 80-ಜಿ, 80-ಹೆಚ್, 80-ಐ, 80-ಜೆ, 80-ಕೆ, 80-ಎಲ್, 80-ಎಮ್, 80-ಎನ್, 80-ಒ , 80ಪಿ ಮತ್ತು 80ಕ್ಯು ಪ್ರಕರಣಗಳನ್ನು ಮೂಲ ಅಧಿನಿಯಮದಲ್ಲಿ ಇಂದೀಕರಿಸಲಾಗಿದೆ.

The above translation of the Karnataka Municipalities (Amendment) Act, 2020 (Karnataka Act 39 of 2020) shall be authoritative text in the Kannada language under section 5A of the Karnataka Official Language Act, 1963 (Karnataka Act 26 of 2963).

ವಜುಬಾಯಿ ವಾಲ
ಕರ್ನಾಟಕ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ. ದ್ವಾರಕನಾಥ್ ಬಾಬು)
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ

ಅಧಿಸೂಚನೆ

ಸಂಖ್ಯೆ: ನಅಇ 416 ಜಿಇಎಲ್ 2015 (ಭಾಗ-1) ಬೆಂಗಳೂರು, ದಿನಾಂಕ: 01.12.2020

The Karnataka Munivipalities (Amendment) Act, 2020 (Karnataka Act 39 of 2020) ರ 1ನೇ ಪ್ರಕರಣದ (2)ನೇ ಉಪ-ಪ್ರಕರಣದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಲಕ ಸದರಿ ಅಧಿನಿಯಮದ ಎಲ್ಲಾ ಉಪಬಂಧಗಳು ದಿನಾಂಕ: 01.12.2020ರಿಂದ ಜಾರಿಗೆ ಬರತಕ್ಕದ್ದೆಂದು ಗೊತ್ತುಪಡಿಸುತ್ತದೆ.

ಕರ್ನಾಟಕ ರಾಜ್ಯಪಾಲರ
ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್. ವೀಣಾ)
ಸರ್ಕಾರದ ಅಧೀನ ಕಾರ್ಯದರ್ಶಿ
(ಪ್ರ)
ನಗರಾಭಿವೃದ್ಧಿ ಇಲಾಖೆ,
(ಪೌರಾಡಳಿತ-2 ಮತ್ತು ಮಂಡಳಿ)

2021 ರ ಕರ್ನಾಟಕ ಅಧಿನಿಯಮ ಸಂಖ್ಯೆ: 03

(2021 ರ ಫೆಬ್ರವರಿ ತಿಂಗಳ **18**ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

ಕರ್ನಾಟಕ ಪೌರಸಭೆಗಳ (ಎರಡನೇ ತಿದ್ದುಪಡಿ) ಅಧಿನಿಯಮ, 2021

(2021 ರ ಫೆಬ್ರವರಿ ತಿಂಗಳ **17** ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ 22) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಕರ್ನಾಟಕ ಪೌರಸಭೆಗಳ (ಎರಡನೇ ತಿದ್ದುಪಡಿ) ಅಧಿನಿಯಮ, 2021 ಎಂದು ಕರೆಯತಕ್ಕದ್ದು.

(2) ಇದು 19ನೇ ಜನವರಿ 2021ನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. 101ನೇ ಪ್ರಕರಣದ ತಿದ್ದುಪಡಿ.- ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 22) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 101ನೇ ಪ್ರಕರಣದಲ್ಲಿ,-

(i) (2)ನೇ ಉಪಪ್ರಕರಣದಲ್ಲಿ,-

(ಎ) (ಬಿ) ಖಂಡದಲ್ಲಿ, "ಶೇಕಡಾ 0.3 ಕ್ಕಿಂತ (ಒಂದು ಸಾವಿರಕ್ಕೆ ಮೂರು ರೂಪಾಯಿಗಳು)" ಮತ್ತು "ಶೇಕಡಾ ಒಂದಕ್ಕಿಂತ (ಒಂದು ಸಾವಿರಕ್ಕೆ ಹತ್ತು ರೂಪಾಯಿಗಳು)" ಎಂಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳಿಗೆ "ಶೇಕಡಾ 0.2 ಕ್ಕಿಂತ (ಒಂದು ಸಾವಿರಕ್ಕೆ ಎರಡು ರೂಪಾಯಿಗಳು)" ಮತ್ತು "ಶೇಕಡಾ 1.5ಕ್ಕಿಂತ (ಒಂದು ಸಾವಿರಕ್ಕೆ ಹದಿನೈದು ರೂಪಾಯಿಗಳು)" ಎಂಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳನ್ನು ಅನುಕ್ರಮವಾಗಿ ಪ್ರತಿಯೋಜಿಸತಕ್ಕದ್ದು.

(ಬಿ) (ಸಿ) ಖಂಡದಲ್ಲಿ,-

(i) "ಒಂದು ಸಾವಿರ ಚದರ ಮೀಟರಿಗಿಂತ ಹೆಚ್ಚಿಲ್ಲದ ಅಳತೆಯ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು; ಮತ್ತು

(ii) "ಶೇಕಡಾ 0.1 ಕ್ಕಿಂತ (ಸಾವಿರಕ್ಕೆ ಒಂದು ರೂಪಾಯಿಗಳು)" ಎಂಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳಿಗೆ "ಶೇಕಡಾ 0.2 ಕ್ಕಿಂತ (ಸಾವಿರಕ್ಕೆ ಎರಡು ರೂಪಾಯಿಗಳು)" ಎಂಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳನ್ನು ಪ್ರತಿಯೋಜಿಸತಕ್ಕದ್ದು.

(ಸಿ) (ಡಿ) ಮತ್ತು (ಇ) ಖಂಡಗಳನ್ನು ಬಿಟ್ಟುಬಿಡತಕ್ಕದ್ದು.

(ii) (3)ನೇ ಉಪಪ್ರಕರಣದಲ್ಲಿ ಎರಡನೇ ಪರಂತುಕಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"ಮತ್ತು ಪರಂತು ಕಟ್ಟಡಕ್ಕೆ ಹೊಂದಿಕೊಂಡಿರುವ ಒಂದು ಸಾವಿರ ಚದರಡಿಯವರೆಗಿನ ಖಾಲಿ ಭೂಮಿಗೆ ವಿನಾಯತಿಯನ್ನು ನೀಡತಕ್ಕದ್ದು ಮತ್ತು ಒಂದು ಸಾವಿರ ಚದರಡಿಗಿಂತ ಹೆಚ್ಚಿರುವ ಖಾಲಿ ಭೂಮಿಗೆ (2)ನೇ ಉಪಪ್ರಕರಣದ (ಸಿ) ಖಂಡದ ಅನುಸಾರವಾಗಿ ಸ್ವತ್ತು ತೆರಿಗೆಯನ್ನು ವಿಧಿಸತಕ್ಕದ್ದು."

3. 102ನೇ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 102ನೇ ಪ್ರಕರಣದಲ್ಲಿ,-

(i) (1)ನೇ ಉಪಪ್ರಕರಣದಲ್ಲಿ,-

(ಎ) "ಪ್ರಕಟಿಸಲಾದ ಸ್ವತ್ತಿನ" ಎಂಬ ಪದಗಳ ತರುವಾಯ "ಚಾಲ್ತಿಯಲ್ಲಿರುವ" ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬಿ) "ಮಾರುಕಟ್ಟೆ ಮೌಲ್ಯದ ಮಾರ್ಗಸೂಚಿಗಳನ್ನು ಶೇಕಡಾ ಐವತ್ತಕ್ಕೆ" ಎಂಬ ಪದಗಳಿಗೆ "ಚಾಲ್ತಿಯಲ್ಲಿರುವ ಮಾರುಕಟ್ಟೆ ಮಾರ್ಗಸೂಚಿ ಮೌಲ್ಯದ ಶೇಕಡ ಇಪ್ಪತ್ತೈದಕ್ಕೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) (2)ನೇ ಉಪಪ್ರಕರಣದಲ್ಲಿ "ಮಾರುಕಟ್ಟೆ ಮೌಲ್ಯದ ಮಾರ್ಗಸೂಚಿಗಳನ್ನು ಶೇಕಡಾ ಐವತ್ತಕ್ಕೆ" ಎಂಬ ಪದಗಳಿಗೆ "ಚಾಲ್ತಿಯಲ್ಲಿರುವ ಮಾರುಕಟ್ಟೆ ಮಾರ್ಗಸೂಚಿ ಮೌಲ್ಯದ ಶೇಕಡಾ ಇಪ್ಪತ್ತೈದಕ್ಕೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

4. 102ಎ ಪ್ರಕರಣದ ತಿದ್ದುಪಡಿ.- ಮೂಲ ಅಧಿನಿಯಮದ 102ಎ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"**102ಎ. ಸ್ವತ್ತು ತೆರಿಗೆಯನ್ನು ಹೆಚ್ಚಿಸುವುದು.-** 101 ಮತ್ತು 102ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಅವುಗಳಲ್ಲಿ ಯಾವುದೇ ಉಪಬಂಧದ ಅಡಿಯಲ್ಲಿ ನಿರ್ಧರಣೆ ಮಾಡಿದ ಮತ್ತು ವಿಧಿಸಿದ ಸ್ವತ್ತು ತೆರಿಗೆಯನ್ನು ಕರ್ನಾಟಕ ಸ್ಟಾಂಪುಗಳ ಅಧಿನಿಯಮ, 1957ರ 45ಬಿ ಪ್ರಕರಣದ ಅಡಿಯಲ್ಲಿ ಸ್ವತ್ತಿನ ಮಾರ್ಗಸೂಚಿ ಮೌಲ್ಯದ ಪರಿಷ್ಕರಣೆಯ ವರ್ಷದಲ್ಲಿ ನಿರ್ಧರಣೆ ಮಾಡತಕ್ಕದ್ದು.

(2) ಪ್ರತಿ ಹಣಕಾಸು ವರ್ಷಕ್ಕೆ ಶೇಕಡಾ ಮೂರರಷ್ಟು ಆಸ್ತಿ ತೆರಿಗೆಯು ಹೆಚ್ಚಳವಾಗತಕ್ಕದ್ದು, ಅದರಲ್ಲಿ ಮಾರ್ಗಸೂಚಿ ಮೌಲ್ಯದ ಪರಿಷ್ಕರಣೆ ಮಾಡತಕ್ಕದ್ದಲ್ಲ:

ಪರಂತು, ಪೌರನಿಗಮವು, ಪ್ರತಿ ಹಣಕಾಸು ವರ್ಷಕ್ಕೆ ಶೇಕಡಾ ಐದಕ್ಕಿಂತ ಹೆಚ್ಚಲ್ಲದಷ್ಟು ಅಂಥ ಸ್ವತ್ತು ತೆರಿಗೆಯನ್ನು ಹೆಚ್ಚಿಸಬಹುದು ಮತ್ತು ಬೇರೆ ಬೇರೆ ಪ್ರದೇಶಗಳಿಗೆ ಹಾಗೂ ಬೇರೆ ಬೇರೆ ಕಟ್ಟಡಗಳು ಮತ್ತು ಭೂಮಿಗಳ ವರ್ಗಗಳಿಗೆ ಬೇರೆ ಬೇರೆ ದರಗಳ ಹೆಚ್ಚಳವನ್ನು ಮಾಡಬಹುದು:

ಮತ್ತೂ ಪರಂತು, ಈ ಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ, ಸ್ವತ್ತು ತೆರಿಗೆಯನ್ನು ಇನ್ನೂ ಮುಂಚಿತವಾಗಿ ಪರಿಷ್ಕರಿಸುವಂತೆ ನಿರ್ದೇಶನ ನೀಡಲು ರಾಜ್ಯ ಸರ್ಕಾರಕ್ಕೆ ಇರುವ ಅಧಿಕಾರಕ್ಕೆ ಬಾಧಕ ಉಂಟು ಮಾಡುತ್ತದೆ ಎಂದು ಭಾವಿಸತಕ್ಕದಲ್ಲ.

ವಿವರಣೆ: "ಹಣಕಾಸು ವರ್ಷ" ಎಂದರೆ ಏಪ್ರಿಲ್ ಒಂದನೇ ದಿನಾಂಕದಿಂದ ಪ್ರಾರಂಭವಾಗುವ ವರ್ಷ"

5. ನಿರಸನ ಮತ್ತು ಉಳಿಸುವಿಕೆಗಳು.- (1) ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ಅಧ್ಯಾದೇಶ, 2021ನ್ನು (2021ರ ಕರ್ನಾಟಕ ಅಧ್ಯಾದೇಶ 02) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನವು ಏನೇ ಒಳಗೊಂಡಿದ್ದರೂ ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಅಡಿಯಲ್ಲಿ ಏನೇ ಮಾಡಿದ್ದರೂ ಅಥವಾ ಯಾವುದೇ ಕ್ರಮವನ್ನು ಕೈಗೊಂಡಿದ್ದರೂ ಈ ಅಧಿನಿಯಮದ ಅಡಿಯಲ್ಲಿ ತಿದ್ದುಪಡಿಯಾದಂತೆ ಅದನ್ನು ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

The above translation of the Karnataka Municipalities (Second Amendment) Act, 2021(Karnataka Act 03 of 2021) shall be authoritative text in Kannada language under section-5 A of the Karnataka Official Language Act, 1963 (Karnataka Act 26 of 1963).

ವಜೂಭಾಯಿ ವಾಲಾ
ಕರ್ನಾಟಕದ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

(ಕೆ. ದ್ವಾರಕನಾಥ್ ಬಾಬು)
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ

2021 ರ ಕರ್ನಾಟಕ ಅಧಿನಿಯಮ ಸಂಖ್ಯೆ: 7

(2021 ರ ಫೆಬ್ರುವರಿ ತಿಂಗಳ 19 ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2021

(2021 ರ ಫೆಬ್ರುವರಿ ತಿಂಗಳ 17 ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ನ್ನು ಮತ್ತು ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976ನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಪೌರಸಭೆಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22) ಮತ್ತು ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976ನ್ನು (1977ರ ಕರ್ನಾಟಕ ಅಧಿನಿಯಮ 14) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2021 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. 1964ರ ಕರ್ನಾಟಕ ಅಧಿನಿಯಮ 22ರ ತಿದ್ದುಪಡಿ.- ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 22) 105ನೇ ಪ್ರಕರಣದಲ್ಲಿ,-

(i) (1)ನೇ ಉಪ-ಪ್ರಕರಣದಲ್ಲಿನ ಪರಂತುಕದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಮತ್ತು ಪರಂತು, 2020-21ನೇ ಹಣಕಾಸು ವರ್ಷಕ್ಕೆ ತೆರಿಗೆಯನ್ನು ಪಾವತಿಸಲು ಹೊಣೆಗಾರನಾಗಿರುವ ಮಾಲೀಕ ಅಥವಾ ಅಧಿಭೋಗದಾರನು ಆತನ ವಿವರಪಟ್ಟಿಕೆ (ರಿಟರ್ನ್ಸ್) ಸಲ್ಲಿಸಿದಲ್ಲಿ ಮತ್ತು ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2021ರ ಪ್ರಾರಂಭದ ದಿನಾಂಕದಿಂದ ಒಂದು ತಿಂಗಳ ಒಳಗಾಗಿ ಬಾಕಿ ಇರುವ ತೆರಿಗೆಯನ್ನು ಕೂಡಾ ಪಾವತಿಸಿದಲ್ಲಿ ಆತನು ಪಾವತಿಸಬಹುದಾದ ತೆರಿಗೆಯ ಮೇಲೆ ಆತನಿಗೆ ಶೇಕಡ ಐದರ ರಿಯಾಯಿತಿಯನ್ನೂ ಸಹ ಅನುಮತಿಸತಕ್ಕದ್ದು.

ಅಲ್ಲದೆ ಪರಂತು, ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2021ರ ಪ್ರಾರಂಭಕ್ಕೆ ಮೊದಲು 2020-21ನೇ ಹಣಕಾಸು ವರ್ಷದಲ್ಲಿ ಪೂರ್ತಿಯಾಗಿ ಆಸ್ತಿ ತೆರಿಗೆಯನ್ನು ಪಾವತಿಸಿದ ಸಂದರ್ಭದಲ್ಲಿ ಹಾಗೆ ಅನುಮತಿಸಲಾದ ರಿಯಾಯಿತಿಯನ್ನು ಮುಂಬರುವ ವರ್ಷಗಳ ತೆರಿಗೆ ಪಾವತಿಯಲ್ಲಿ ಹೊಂದಿಸಿಕೊಳ್ಳತಕ್ಕದ್ದು."

(ii) (8)ನೇ ಉಪ-ಪ್ರಕರಣದ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು, 2020-21ನೇ ಹಣಕಾಸು ವರ್ಷಕ್ಕಾಗಿ, ಆಸ್ತಿ ತೆರಿಗೆಯನ್ನು ಪಾವತಿಸಲು ಮೂಲತಃ ಹೊಣೆಗಾರನಾಗಿರುವ ವ್ಯಕ್ತಿಯು ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (ಎರಡನೇ ತಿದ್ದುಪಡಿ) ಅಧಿನಿಯಮ, 2021ರ ಪ್ರಾರಂಭದ ದಿನಾಂಕದ ತರುವಾಯ ಒಂದು ತಿಂಗಳ ಒಳಗಾಗಿ ಅದನ್ನು ಪಾವತಿಸತಕ್ಕದ್ದು."

3. 1977ರ ಕರ್ನಾಟಕ ಅಧಿನಿಯಮ 14ರ ತಿದ್ದುಪಡಿ.- ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976ರಲ್ಲಿ (1977ರ ಕರ್ನಾಟಕ ಅಧಿನಿಯಮ 14),-

(i) 112ನೇ ಪ್ರಕರಣದಲ್ಲಿ, (3)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು, 2020-2021ನೇ ಹಣಕಾಸು ವರ್ಷಕ್ಕಾಗಿ, ಆಸ್ತಿ ತೆರಿಗೆಯನ್ನು ಪಾವತಿಸಲು ಮೂಲತಃ ಹೊಣೆಗಾರನಾಗಿರುವ ವ್ಯಕ್ತಿಯು ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2021ರ ಪ್ರಾರಂಭದ ದಿನಾಂಕದಿಂದ ಒಂದು ತಿಂಗಳ ಒಳಗಾಗಿ ಅದನ್ನು ಪಾವತಿಸತಕ್ಕದ್ದು."

(ii) 112ಎ ಪ್ರಕರಣದ (1)ನೇ ಉಪಪ್ರಕರಣದಲ್ಲಿ, ಪರಂತುಕದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಮತ್ತು ಪರಂತು, 2020-2021ನೇ ಹಣಕಾಸು ವರ್ಷಕ್ಕೆ ತೆರಿಗೆಯನ್ನು ಪಾವತಿಸಲು ಹೊಣೆಗಾರನಾಗಿರುವ ಮಾಲೀಕ ಅಥವಾ ಅಧಿಭೋಗದಾರನು ಆತನ ವಿವರಪಟ್ಟಿಕೆ (ರಿಟರ್ನ್ಸ್) ಸಲ್ಲಿಸಿದಲ್ಲಿ ಮತ್ತು ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2021ರ ಪ್ರಾರಂಭದ ದಿನಾಂಕದಿಂದ ಒಂದು ತಿಂಗಳ ಒಳಗಾಗಿ ಬಾಕಿ ಇರುವ ತೆರಿಗೆಯನ್ನು ಪಾವತಿಸಿದಲ್ಲಿ ಆತನು ಪಾವತಿಸಬಹುದಾದ ತೆರಿಗೆಯ ಮೇಲೆ ಆತನಿಗೆ ಶೇಕಡ ಐದರ ರಿಯಾಯಿತಿಯನ್ನೂ ಸಹ ಅನುಮತಿಸತಕ್ಕದ್ದು.

ಅಲ್ಲದೆ ಪರಂತು, ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2021ರ ಪ್ರಾರಂಭಕ್ಕೆ ಮೊದಲು 2020-21ನೇ ಹಣಕಾಸು ವರ್ಷದಲ್ಲಿ ಪೂರ್ತಿಯಾಗಿ ಆಸ್ತಿ ತೆರಿಗೆಯನ್ನು ಪಾವತಿಸಿದ ಸಂದರ್ಭದಲ್ಲಿ ಹಾಗೆ ಅನುಮತಿಸಲಾದ ರಿಯಾಯಿತಿಯನ್ನು ಮುಂಬರುವ ವರ್ಷಗಳ ತೆರಿಗೆ ಪಾವತಿಯಲ್ಲಿ ಹೊಂದಿಸಿಕೊಳ್ಳತಕ್ಕದ್ದು."

The above translation of the Karnataka Municipalities and Certain other Law (Amendment) Act, 2021 (Karnataka Act 7 of 2021) shall be authoritative text in the Kannada language under section 5A of the Karnataka Official Language Act, 1963 (Karnataka Act 26 of 1963).

ವಜುಬಾಯಿ ವಾಲ
ಕರ್ನಾಟಕ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ
ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ. ದ್ವಾರಕನಾಥ್ ಬಾಬು)
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

2021 ರ ಕರ್ನಾಟಕ ಅಧಿನಿಯಮ ಸಂಖ್ಯೆ: 16

(2021 ರ ಮಾರ್ಚ್ ತಿಂಗಳ 31 ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ಅಧಿನಿಯಮ, 2021

(2021 ರ ಮಾರ್ಚ್ ತಿಂಗಳ 29ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ 22) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ಅಧಿನಿಯಮ, 2021 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. 245ನೇ ಪ್ರಕರಣದ ಪ್ರತಿಯೋಜನೆ.- ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 22) 245ನೇ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"245. ಗಲಭೆಕೋರರು ಮುಂತಾದವರನ್ನು ಮಾರುಕಟ್ಟೆಗಳಿಂದ ಹೊರದೂಡಲು ಅಧಿಕಾರ.- ಮಾರುಕಟ್ಟೆಯಲ್ಲಿ ಯಾವುದೇ ವಸ್ತುವನ್ನು ಮಾರುವ ಅಥವಾ ಮಾರಾಟಕ್ಕೆ ತೆರೆದಿಟ್ಟಿರುವ ಅಥವಾ ಅದರಲ್ಲಿ ಮಾರಾಟಕ್ಕಾಗಿ ಇಟ್ಟಿರುವ ಯಾವುದೇ ವಸ್ತುವನ್ನು ಕೊಂಡಿರದೇ ಅದನ್ನು ಮುಟ್ಟಿ ನೋಡುವ, ಯಾವುದೇ ಅಪಾಯಕಾರಿ ಅಥವಾ ಅಂಟುರೋಗದಿಂದ ನರಳುತ್ತಿರುವ, ಯಾರೇ ವ್ಯಕ್ತಿಯು ಮಾರುಕಟ್ಟೆಗೆ ಪ್ರವೇಶಿಸುವುದನ್ನು, ಮಾರುಕಟ್ಟೆಯ ಪ್ರಭಾರದಲ್ಲಿರುವ ವ್ಯಕ್ತಿಯು ತಡೆಯತಕ್ಕದ್ದು ಮತ್ತು ಅಲ್ಲಿಂದ ಅವನನ್ನು ಹೊರದೂಡತಕ್ಕದ್ದು; ಮತ್ತು ಅಲ್ಲಿ ಗಲಭೆ ಎಬ್ಬಿಸುವ ಯಾರೇ ವ್ಯಕ್ತಿಯನ್ನು ಅಲ್ಲಿಂದ ಹೊರದೂಡಬಹುದು."

The above translation of the Karnataka Municipalities (Amendment) Act, 2021(Karnataka Act 16 of 2021) shall be authoritative text in Kannada language under section-5 A of the Karnataka Official Language Act, 1963 (Karnataka Act 26 of 1963).

ವಜೂಭಾಯಿ ವಾಲಾ
ಕರ್ನಾಟಕದ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ
ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ. ದ್ವಾರಕನಾಥ್ ಬಾಬು)
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

2021 ರ ಕರ್ನಾಟಕ ಅಧಿನಿಯಮ ಸಂಖ್ಯೆ: 30

(2021 ರ ಅಕ್ಟೋಬರ್ ತಿಂಗಳ 7ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (ಎರಡನೇ ತಿದ್ದುಪಡಿ) ಅಧಿನಿಯಮ, 2021

(2021 ರ ಅಕ್ಟೋಬರ್ ತಿಂಗಳ 5ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಪೌರಸಭೆಗಳ ಅಧಿನಿಯಮ, 1964 ಮತ್ತು ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976ನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಪೌರಸಭೆಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22) ಮತ್ತು ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (ಎರಡನೇ ತಿದ್ದುಪಡಿ) ಅಧಿನಿಯಮ, 2021 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. 1964ರ ಕರ್ನಾಟಕ ಅಧಿನಿಯಮ 22ರ ತಿದ್ದುಪಡಿ.- ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ರಲ್ಲಿ (1964ರ ಕರ್ನಾಟಕ ಅಧಿನಿಯಮ 22),-

(1) 94ನೇ ಪ್ರಕರಣದಲ್ಲಿ (1)ನೇ ಉಪಪ್ರಕರಣದಲ್ಲಿನ (ಬಿ) ಖಂಡದಲ್ಲಿ,-

(i) "ತೆರಿಗೆಗಳನ್ನು" ಎಂಬ ಪದದ ತರುವಾಯ "ಅಥವಾ ಶುಲ್ಕವನ್ನು" ಎಂಬ ಪದಗಳನ್ನು ಸೇರಿಸತಕ್ಕದ್ದು; ಮತ್ತು

(ii) (xiii)ನೇ ಉಪಖಂಡದಲ್ಲಿ "ತೆರಿಗೆ" ಎಂಬ ಪದದ ತರುವಾಯ "ಅಥವಾ ಶುಲ್ಕ" ಎಂಬ ಪದಗಳನ್ನು ಸೇರಿಸತಕ್ಕದ್ದು.

(2) 133ನೇ ಪ್ರಕರಣದಲ್ಲಿ (1) ಮತ್ತು (2)ನೇ ಉಪಪ್ರಕರಣದಲ್ಲಿ "ತೆರಿಗೆ" ಎಂಬ ಪದದ ತರುವಾಯ "ಅಥವಾ ಶುಲ್ಕ" ಎಂಬ ಪದಗಳನ್ನು ಸೇರಿಸತಕ್ಕದ್ದು.

3. 1977ರ ಕರ್ನಾಟಕ ಅಧಿನಿಯಮ 14ರ ತಿದ್ದುಪಡಿ.- ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976ರಲ್ಲಿ (1977ರ ಕರ್ನಾಟಕ ಅಧಿನಿಯಮ 14),-

(1) 103ನೇ ಪ್ರಕರಣದಲ್ಲಿನ (ಬಿ) ಖಂಡದಲ್ಲಿ,-

(i) "ತೆರಿಗೆಗಳನ್ನು" ಎಂಬ ಪದದ ತರುವಾಯ "ಅಥವಾ ಶುಲ್ಕವನ್ನು" ಎಂಬ ಪದಗಳನ್ನು ಸೇರಿಸತಕ್ಕದ್ದು; ಮತ್ತು

(ii) (vi)ನೇ ಉಪಖಂಡದಲ್ಲಿ "ತೆರಿಗೆ" ಎಂಬ ಪದದ ತರುವಾಯ "ಅಥವಾ ಶುಲ್ಕ" ಎಂಬ ಪದಗಳನ್ನು ಸೇರಿಸತಕ್ಕದ್ದು.

(2) 134ನೇ ಪ್ರಕರಣದಲ್ಲಿ,-

(i) ಶೀರ್ಷಿಕೆಯಲ್ಲಿ "ತೆರಿಗೆ" ಎಂಬ ಪದದ ತರುವಾಯ "ಅಥವಾ ಶುಲ್ಕ" ಎಂಬ ಪದಗಳನ್ನು ಸೇರಿಸತಕ್ಕದ್ದು; ಮತ್ತು

(ii) ಪ್ರಕರಣದಲ್ಲಿ "ತೆರಿಗೆ" ಎಂಬ ಪದವು ಬರುವ ಕಡೆಗಳಲ್ಲೆಲ್ಲಾ ಅದರ ತರುವಾಯ "ಅಥವಾ ಶುಲ್ಕ" ಎಂಬ ಪದಗಳನ್ನು ಸೇರಿಸತಕ್ಕದ್ದು.

(3) 135ನೇ ಪ್ರಕರಣದಲ್ಲಿ (1) ಮತ್ತು (2)ನೇ ಉಪಪ್ರಕರಣದಲ್ಲಿ "ತೆರಿಗೆ" ಎಂಬ ಪದದ ತರುವಾಯ "ಅಥವಾ ಶುಲ್ಕ" ಎಂಬ ಪದಗಳನ್ನು ಸೂಕ್ತ ಪ್ರತ್ಯಯಗಳೊಂದಿಗೆ ಸೇರಿಸತಕ್ಕದ್ದು; ಮತ್ತು

(4) 139ನೇ ಪ್ರಕರಣದಲ್ಲಿ ಶೀರ್ಷಿಕೆಯಲ್ಲಿ ಮತ್ತು ಪ್ರಕರಣದಲ್ಲಿ "ತೆರಿಗೆ" ಮತ್ತು "ತೆರಿಗೆಯ" ಎಂಬ ಪದಗಳ ತರುವಾಯ "ಅಥವಾ ಶುಲ್ಕ" ಮತ್ತು "ಅಥವಾ ಶುಲ್ಕದ" ಎಂಬ ಪದಗಳನ್ನು ಅನುಕ್ರಮವಾಗಿ ಸೇರಿಸತಕ್ಕದ್ದು.

The above translation of the Karnataka Municipalities and certain other Law (Second Amendment) Act, 2021 (Karnataka Act 30 of 2021) shall be authoritative text in Kannada language under section 5-A of the Karnataka Official Language Act, 1963 (Karnataka Act 26 of 1963).

ಥಾವರ್‌ಚಂದ್ ಗೆಹ್ಲೋಟ್
ಕರ್ನಾಟಕದ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ
ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

ಜಿ. ಶ್ರೀಧರ್
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

2022ರ ಕರ್ನಾಟಕ ಅಧಿನಿಯಮ ಸಂಖ್ಯೆ: 02

(2022**ರ ಜನವರಿ ತಿಂಗಳ**13**ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ** ಮೊದಲು **ಪ್ರಕಟವಾಗಿದೆ**)

ಕರ್ನಾಟಕ ನಗರಪಾಲಿಕೆಗಳ ಮತ್ತು ಕೆಲವು ಇತರ ಕಾನೂನು (ಎರಡನೇ ತಿದ್ದುಪಡಿ) ಅಧಿನಿಯಮ, 2021

(2022**ರ ಜನವರಿ ತಿಂಗಳ**11**ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ**)

ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ,1976 ಮತ್ತು ಕರ್ನಾಟಕ ಪೌರಸಭೆಗಳಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಕರ್ನಾಟಕನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14) ಮತ್ತು ಕರ್ನಾಟಕ ಪೌರಸಭೆಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22) ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಕರ್ನಾಟಕ ನಗರಪಾಲಿಕೆಗಳ ಮತ್ತು ಕೆಲವು ಇತರ ಕಾನೂನು (ಎರಡನೇ ತಿದ್ದುಪಡಿ) ಅಧಿನಿಯಮ, 2021 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. 1977ರ ಕರ್ನಾಟಕ ಅಧಿನಿಯಮ 14ರ ತಿದ್ದುಪಡಿ.-ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14) ರಲ್ಲಿ,-

(i) 108ನೇ ಪ್ರಕರಣದ (2)ನೇ ಉಪ ಪ್ರಕರಣದಲ್ಲಿನ (ಸಿ) ಖಂಡದಲ್ಲಿ "–ವಿಧಿಸತಕ್ಕದ್ದು." ಎಂಬ ಚಿಹ್ನೆ, ಪೂರ್ಣ ವಿರಾಮ ಮತ್ತು ಪದದ ಬದಲಾಗಿ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಡಿ) ಕೈಗಾರಿಕೆ ಕಟ್ಟಡಗಳ ಸಂಬಂಧದಲ್ಲಿ (ಎ) ಖಂಡದ ಅನುಸಾರವಾಗಿ ವಾಣಿಜ್ಯ ಕಟ್ಟಡಗಳ ಸಂದರ್ಭದಲ್ಲಿ ವಿಧಿಸಿದ ದರದ ಶೇಕಡಾ ಎಪ್ಪತ್ತಕ್ಕಿಂತ ಕಡಿಮೆಯಲ್ಲದಂಥ ಶೇಕಡಾವಾರು ಪ್ರಮಾಣದಲ್ಲಿ,

–ವಿಧಿಸತಕ್ಕದ್ದು:

ಪರಂತು, ಹಾಗೆ ನಿಗದಿಪಡಿಸಿದ ಶೇಕಡಾವಾರು ದರವು, (ಬಿ) ಖಂಡದ ಅನುಸಾರವಾಗಿ ವಾಣಿಜ್ಯ ಕಟ್ಟಡಗಳನ್ನು ಹೊರತುಪಡಿಸಿ ವಸತಿ ಕಟ್ಟಡಗಳು ಮತ್ತು ಕಟ್ಟಡಗಳ ಸಂದರ್ಭದಲ್ಲಿ ವಿಧಿಸಿದ ದರಕ್ಕಿಂತ ಕಡಿಮೆ ಇರತಕ್ಕದ್ದಲ್ಲ."

(ii) 110ನೇ ಪ್ರಕರಣದಲ್ಲಿ (1)ನೇ ಉಪಪ್ರಕರಣದಲ್ಲಿ,-

(ಎ) (ಜೆ) ಖಂಡದಲ್ಲಿ "ವಾಣಿಜ್ಯ" ಎಂಬ ಪದದ ತರುವಾಯ "ಅಥವಾ ಕೈಗಾರಿಕೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

(ಬಿ) ಎರಡನೇ ಪರಂತುಕದಲ್ಲಿ, "ವಾಣಿಜ್ಯ" ಎಂಬ ಪದದ ತರುವಾಯ "ಅಥವಾ ಕೈಗಾರಿಕೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

3. 1964ರ ಕರ್ನಾಟಕ ಅಧಿನಿಯಮ 22ರ ತಿದ್ದುಪಡಿ.-ಕರ್ನಾಟಕ ಪೌರಸಭೆಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22) ರಲ್ಲಿ,-

(i) 94ನೇ ಪ್ರಕರಣದಲ್ಲಿನ (1-ಎ) ಉಪ ಪ್ರಕರಣದಲ್ಲಿ,-

(ಎ) (ಜೆ) ಖಂಡದಲ್ಲಿ "ವಾಣಿಜ್ಯ" ಎಂಬ ಪದದ ತರುವಾಯ "ಅಥವಾ ಕೈಗಾರಿಕೆ" ಎಂಬ ಪದಗಳನ್ನು ಸೇರಿಸತಕ್ಕದ್ದು; ಮತ್ತು

(ಬಿ) ಎರಡನೇ ಪರಂತುಕದಲ್ಲಿ, "ವಾಣಿಜ್ಯ" ಎಂಬ ಪದದ ತರುವಾಯ "ಅಥವಾ ಕೈಗಾರಿಕೆ" ಎಂಬ ಪದಗಳನ್ನುಸೇರಿಸತಕ್ಕದ್ದು.

(ii) 101ನೇಪ್ರಕರಣದ (2)ನೇ ಉಪ ಪ್ರಕರಣದಲ್ಲಿ (ಸಿ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಡಿ) ತೆರಿಗೆಗೆ ಗುರಿಯಾಗತಕ್ಕ ಕಟ್ಟಡದ ಮೂಲ ಬೆಲೆಯ (2)ನೇ ಉಪ ಪ್ರಕರಣದ (ಎ) ಖಂಡದ ಅನುಸಾರವಾಗಿ ವಾಣಿಜ್ಯ ಕಟ್ಟಡದ ಸಂದರ್ಭದಲ್ಲಿ ವಿಧಿಸಿದ ದರದ ಶೇಕಡಾ ಎಪ್ಪತ್ತಕ್ಕಿಂತ ಕಡಿಮೆಯಲ್ಲದಂಥ ಶೇಕಡಾವಾರಿನಂತೆ,

–ವಿಧಿಸತಕ್ಕದ್ದು:

ಪರಂತು, ಹಾಗೆ ನಿಗದಿಪಡಿಸಿದ ಶೇಕಡಾವಾರು ದರವು, (ಬಿ) ಖಂಡದ ಅನುಸಾರವಾಗಿ ವಾಣಿಜ್ಯ ಕಟ್ಟಡಗಳನ್ನು ಹೊರತುಪಡಿಸಿ ವಸತಿ ಕಟ್ಟಡಗಳು ಮತ್ತು ಕಟ್ಟಡಗಳ ಸಂದರ್ಭದಲ್ಲಿ ವಿಧಿಸಲಾದ ದರಕ್ಕಿಂತ ಕಡಿಮೆ ಇರತಕ್ಕದ್ದಲ್ಲ."

The above translation of the Karnataka Municipal Corporations and Certain other Law (Second Amendment) Act, 2021 (Karnataka Act 02 of 2022) shall be authoritative text in the Kannada language under section 5A of the Karnataka Official Language Act, 1963 (Karnataka Act 26 of 1963).

ಥಾವರ್‌ಚಂದ್ ಗೆಹ್ಲೋಟ್
ಕರ್ನಾಟಕದ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ,

ಜಿ. ಶ್ರೀಧರ್
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

2022ರ ಕರ್ನಾಟಕ ಅಧಿನಿಯಮ ಸಂಖ್ಯೆ: 33

(2022ರ ಅಕ್ಟೋಬರ್ ತಿಂಗಳ 13ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

ಕರ್ನಾಟಕ ಮುನಿಸಿಪಾಲಿಟಿಗಳ (ತಿದ್ದುಪಡಿ) ಅಧಿನಿಯಮ, 2022

(2022 ರ ಅಕ್ಟೋಬರ್ ತಿಂಗಳ 12ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ 1964ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ 1964ನ್ನು (1964ರ ಕರ್ನಾಟಕ ಅಧಿನಿಯಮ 22) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು, ಕರ್ನಾಟಕ ಮುನಿಸಿಪಾಲಿಟಿಗಳ (ತಿದ್ದುಪಡಿ) ಅಧಿನಿಯಮ, 2022 ಎಂದು ಕರೆಯತಕ್ಕದ್ದು.

(2) ಇದು 2021ರ ಆಗಸ್ಟ್ 12ನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. 387ನೇ ಪ್ರಕರಣದ ತಿದ್ದುಪಡಿ.- ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22)ರ 387ನೇ ಪ್ರಕರಣವನ್ನು ಬಿಟ್ಟುಬಿಡತಕ್ಕದ್ದು.

3. ನಿರಸನ ಮತ್ತು ಉಳಿಸುವಿಕೆಗಳು.- (1) ಕರ್ನಾಟಕ ಮುನಿಸಿಪಾಲಿಟಿಗಳ (ತಿದ್ದುಪಡಿ) ಅಧ್ಯಾದೇಶ, 2022ನ್ನು (2022ರ ಕರ್ನಾಟಕ ಅಧ್ಯಾದೇಶ 03) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನವು ಏನೇ ಒಳಗೊಂಡಿದ್ದರೂ ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಅಡಿಯಲ್ಲಿ ಏನೇ ಮಾಡಿದ್ದರೂ ಅಥವಾ ಯಾವುದೇ ಕ್ರಮವನ್ನು ಕೈಗೊಂಡಿದ್ದರೂ ಈ

ಅಧಿನಿಯಮದ ಅಡಿಯಲ್ಲಿ ತಿದ್ದುಪಡಿಯಾದಂತೆ ಮೂಲ ಅಧಿನಿಯಮದಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

The above translation of the Karnataka Municipalities (Amendment) Act, 2022 (Karnataka Act 33 of 2022) shall be authoritative text in the Kannada language under section 5-A of the Karnataka Official Language Act, 1963 (Karnataka Act 26 of 1963).

ಥಾವರ್‌ಚಂದ್ ಗೆಹ್ಲೋಟ್
ಕರ್ನಾಟಕದ ರಾಜ್ಯಪಾಲರು
ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

ಜಿ. ಶ್ರೀಧರ್
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

2024 ರ ಕರ್ನಾಟಕ ಅಧಿನಿಯಮ ಸಂಖ್ಯೆ: 43

(2024 ರ ಸೆಪ್ಟೆಂಬರ್ ತಿಂಗಳ 10ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

ಕರ್ನಾಟಕ ಮುನಿಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2024

(2024 ರ ಸೆಪ್ಟೆಂಬರ್ ತಿಂಗಳ 5ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ 1964ನ್ನು ಮತ್ತು ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ 1964 (1964ರ ಕರ್ನಾಟಕ ಅಧಿನಿಯಮ 22)ನ್ನು ಮತ್ತು ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು, ಕರ್ನಾಟಕ ಮುನಿಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2024 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು .

2. 1964ರ ಕರ್ನಾಟಕ ಅಧಿನಿಯಮ 22ರ ತಿದ್ದುಪಡಿ.- ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22)ರ,-

(i) 105ನೇ ಪ್ರಕರಣದ (3) ನೇ ಉಪಪ್ರಕರಣದ ಕೊನೆಯಲ್ಲಿ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಈ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, (1)ನೇ ಉಪಪ್ರಕರಣದಡಿಯಲ್ಲಿ ಸಲ್ಲಿಸಲಾದ ಯಾವುದೇ ವಿವರಪಟ್ಟಿಕೆಗಾಗಿ 2023-24ರ ಆರ್ಥಿಕ ವರ್ಷದ ಪ್ರಾರಂಭದಿಂದ ಹಿಂದಿನ ಆರು ಆರ್ಥಿಕ ವರ್ಷಗಳಿಗಾಗಿ ಈ ಉಪಪ್ರಕರಣದಡಿಯಲ್ಲಿ ಮಾಡಲಾದ ನಿರ್ಧರಣೆಯನ್ನು ಒಂದು ವರ್ಷದೊಳಗಾಗಿ ನಿರ್ಣಯಿಸತಕ್ಕದ್ದು."

(ii) 106ನೇ ಪ್ರಕರಣದಲ್ಲಿ,-

(ಎ) ಉಪಪ್ರಕರಣ (1)ರಲ್ಲಿ "ಖಾಲಿ ಭೂಮಿಗಳು" ಎಂಬ ಪದಗಳ ಬದಲಾಗಿ "ಖಾಲಿ ಕಟ್ಟಡ ನಿವೇಶನಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) ಉಪಪ್ರಕರಣ (1)ರ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(1ಎ) (i) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಕಟ್ಟಡ ನಿರ್ಮಾಣದ ಉದ್ದೇಶಗಳಿಗಾಗಿ ಇರುವ ಕಟ್ಟಡ ನಿವೇಶನಗಳಿಗೆ ಹೊಸ PID (ಸ್ವತ್ತು ಗುರುತಿನ ಸಂಖ್ಯೆ) ಅಥವಾ ಖಾತಾ ನೀಡಲು ಅಧಿಕಾರ ವ್ಯಾಪ್ತಿಯ ಯೋಜನಾ ಪ್ರಾಧಿಕಾರವು ಲೇಔಟ್ ಪ್ಲಾನಿಗಾಗಿ ಪೂರ್ವಾನುಮತಿಯನ್ನು ಆಯುಕ್ತ ಅಥವಾ ಪುರಸಭೆಯ ಮುಖ್ಯಾಧಿಕಾರಿ ಅಥವಾ ಆಯುಕ್ತನಿಂದ ಅಧಿಕೃತಗೊಳಿಸಲಾದ ಯಾರೇ ಅಧಿಕಾರಿ ಅಥವಾ ಮುಖ್ಯಾಧಿಕಾರಿಯಿಂದ ಪಡೆಯತಕ್ಕದ್ದು.

(ii) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರಡಿಯಲ್ಲಿ ಅಧಿಸೂಚಿಸಲಾದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಒಳಪಡುವ ಪೌರ ಪ್ರದೇಶಗಳ ಸಂದರ್ಭದಲ್ಲಿ, ಮಂಜೂರಾದ ಲೇಔಟ್ ಪ್ಲಾನನ್ನು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರ 17ನೇ ಪ್ರಕರಣದಡಿ ಅಧಿಕಾರವ್ಯಾಪ್ತಿಯ ಯೋಜನಾ ಪ್ರಾಧಿಕಾರದಿಂದ ಪಡೆಯತಕ್ಕದ್ದು ಹಾಗೂ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರ 17ನೇ ಪ್ರಕರಣದ ಮತ್ತು 17ನೇ ಪ್ರಕರಣದ ಉಪಪ್ರಕರಣ (2-ಇ) ಉಪಬಂಧಗಳನ್ನು ಅನುಸರಿಸದೆ ಯಾವುದೇ ಹೊಸ ಪಿಐಡಿ ಅಥವಾ ಖಾತಾವನ್ನು ನೀಡತಕ್ಕದ್ದಲ್ಲ.

(iii) ಸ್ಥಳೀಯ ಯೋಜನಾ ಪ್ರದೇಶದ ಅಥವಾ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರಡಿಯಲ್ಲಿ ರಚಿಸಲಾದ ಯೋಜನಾ ಪ್ರಾಧಿಕಾರದ ವ್ಯಾಪ್ತಿಗೆ ಒಳಪಡದಿರುವ ಪೌರ ಪ್ರದೇಶದ ಸಂದರ್ಭದಲ್ಲಿ, ಮಂಜೂರಾದ ಲೇಔಟ್ ಪ್ಲಾನ್ ಅನ್ನು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರ 4-ಕೆ ಪ್ರಕರಣದ (2)ನೇ ಉಪಪ್ರಕರಣದಡಿಯಲ್ಲಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕ ಅಥವಾ ಆತನು ಅಧಿಕೃತಗೊಳಿಸಿದ ಅಧಿಕಾರಿಯಿಂದ ಪಡೆಯತಕ್ಕದ್ದು ಹಾಗೂ ಸಂಬಂಧಪಟ್ಟ ಅಧಿಕಾರಿಯು, ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರ ಉಪಬಂಧಗಳನ್ನು ಅನುಸರಿಸದೆ ಯಾವುದೇ ಹೊಸ ಪಿಐಡಿ ಅಥವಾ ಖಾತಾವನ್ನು ನೀಡತಕ್ಕದ್ದಲ್ಲ:

ಪರಂತು, ಪುರಸಭೆಯ ಯಾರೇ ಅಧಿಕಾರಿಯು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರ ಉಪಬಂಧಗಳನ್ನು ಅನುಸರಿಸಲು ವಿಫಲನಾದರೆ ಮತ್ತು ಕಾನೂನುಬಾಹಿರವಾಗಿ ರಚಿತವಾದ ಪ್ಲಾಟ್‌ಗೆ ಹೊಸ ಪಿಐಡಿ

ಅಥವಾ ಖಾತಾವನ್ನು ನೀಡಿದರೆ, ಸಂಬಂಧಪಟ್ಟ ಅಧಿಕಾರಿಯು ನಿಯಮಿಸಬಹುದಾದಂಥ ದಂಡನೆ ಮತ್ತು ಶಿಕ್ಷೆಗೆ ಹೊಣೆಗಾರನಾಗತಕ್ಕದ್ದು.

(1ಬಿ) (i) ಪುರಸಭೆಯು, ಸರ್ಕಾರಿ ಭೂಮಿಯಲ್ಲಿ, ಯಾವುದೇ ಸ್ಥಳೀಯ ಸಂಸ್ಥೆಗೆ, ಯಾವುದೇ ಶಾಸನಬದ್ಧ ಸಂಸ್ಥೆಗೆ ಅಥವಾ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಒಂದು ಸಂಘ ಸಂಸ್ಥೆಗೆ ಸೇರಿದ ಭೂಮಿಯಲ್ಲಿ, ಕಾನೂನು ಬಾಹಿರವಾಗಿ ನಿರ್ಮಿಸಿದ ಕಟ್ಟಡವನ್ನು ಹೊರತುಪಡಿಸಿ, ಕಟ್ಟಡ ಉಪ ವಿಧಿಗಳು ಉಪಬಂಧಗಳನ್ನು ಉಲ್ಲಂಘಿಸಿ ಕಟ್ಟಿರುವ ಅಥವಾ ಅನಧಿಕೃತ ಲೇಔಟ್‌ನಲ್ಲಿ ಅಥವಾ ರೆವಿನ್ಯೂ ಭೂಮಿಯಲ್ಲಿ ಕಟ್ಟಿರುವ ಕಟ್ಟಡವು ಸೇರಿದಂತೆ ಪ್ರತಿಯೊಂದು ಕಟ್ಟಡಕ್ಕೆ, ಖಾಲಿ ಭೂಮಿಗೆ ಅಥವಾ ಅವೆರಡನ್ನೂ ಒಳಗೊಂಡು ಅಥವಾ ಈ ಉಪಬಂಧದ ಪ್ರಾರಂಭದ ದಿನಾಂಕಕ್ಕೂ ಮೊದಲು ಸೃಜಿಸಿದ ಸ್ವತ್ತಿಗಾಗಿ ಮಾತ್ರ ಅಧಿಭೋಗ ಪ್ರಮಾಣ ಪತ್ರ ಅಥವಾ ಕಟ್ಟಡ ನಿರ್ಮಾಣ ಮುಕ್ತಾಯ ಪ್ರಮಾಣಪತ್ರವನ್ನು ನೀಡದೆಯೇ ವಾಸಕ್ಕೆ ಬಳಸುತ್ತಿರುವ ಕಟ್ಟಡಕ್ಕೆ ಮೊದಲ ವರ್ಷಕ್ಕಾಗಿ ಎರಡು ಪಟ್ಟು ಸ್ವತ್ತು ತೆರಿಗೆಯನ್ನು ವಿಧಿಸಬಹುದು ಮತ್ತು ನಂತರದ ವರ್ಷಗಳಿಗೆ ಸ್ವತ್ತು ತೆರಿಗೆಯನ್ನು ಮಾತ್ರ ವಿಧಿಸತಕ್ಕದ್ದು, ಅದನ್ನು ಒಂದು ಪ್ರತ್ಯೇಕ ರಿಜಿಸ್ಟರಿನಲ್ಲಿ ನಿರ್ವಹಿಸತಕ್ಕದ್ದು. ಕರ್ನಾಟಕ ಮುನಿಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2024ರ ಪ್ರಾರಂಭದ ದಿನಾಂಕದ ತರುವಾಯ ಆ ರಿಜಿಸ್ಟರಿನಲ್ಲಿ ಹೊಸ ಸ್ವತ್ತುಗಳನ್ನು ಸೇರಿಸತಕ್ಕದ್ದಲ್ಲ:

ಪರಂತು, ಈ ಉಪ-ಪ್ರಕರಣದ ಮೇರೆಗೆ ಅಂಥ ಕಟ್ಟಡಗಳಿಗೆ ಅಥವಾ ಖಾಲಿ ಭೂಮಿಗಳಿಗೆ ಸ್ವತ್ತು ತೆರಿಗೆಯನ್ನು ವಿಧಿಸುವುದು ಮತ್ತು ಅದನ್ನು ವಸೂಲು ಮಾಡುವುದು, ಮಾಡಿದ ಯಾವುದೇ ಉಲ್ಲಂಘನೆಯನ್ನು ಸಕ್ರಮಗೊಳಿಸಲು ಯಾವುದೇ ಹಕ್ಕನ್ನಾಗಲಿ ಅಥವಾ ಅಂಥ ಕಟ್ಟಡಕ್ಕೆ ಅಥವಾ ಖಾಲಿ ಭೂಮಿಗೆ ಹಕ್ಕುಸ್ವಾಮ್ಯ, ಒಡೆತನ ಅಥವಾ ಕಾನೂನಿನ ಸ್ಥಾನಮಾನವನ್ನಾಗಲಿ ದೊರಕಿಸಿ ಕೊಡುವುದಿಲ್ಲ. ಅಂಥ ಕಟ್ಟಡಗಳು ಅಥವಾ ಖಾಲಿ ಭೂಮಿಗಳು ಕಾನೂನಿನ ಉಲ್ಲಂಘನೆಗಾಗಿ ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳನ್ವಯ ಯಾವುದೇ ಕಾನೂನು ಕ್ರಮಕ್ಕೆ ಗುರಿಯಾಗಲು ಯಾವಾಗಲೂ ಬದ್ಧವಾಗಿರತಕ್ಕದ್ದು.

(ii) ಪೌರ ಆಯುಕ್ತ ಅಥವಾ ಮುಖ್ಯಾಧಿಕಾರಿಯು (i) ಖಂಡದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ದಾಖಲೆಯನ್ನು ನಿರ್ವಹಿಸತಕ್ಕದ್ದು, ಅದು ಈ ಪ್ರಕರಣದಡಿ ತೆರಿಗೆಗೆ ಒಳಪಡಿಸಿದ ಕಾನೂನುಬದ್ಧ ಕಟ್ಟಡಗಳು ಅಥವಾ ಖಾಲಿ ಭೂಮಿಗಳ ಹಾಗೂ ಕಾನೂನುಬದ್ಧವಲ್ಲದ ಕಟ್ಟಡಗಳು ಅಥವಾ ಖಾಲಿ ಭೂಮಿಗಳ ವಿವರಗಳನ್ನು ಒಳಗೊಂಡಿರತಕ್ಕದ್ದು."

(iii) 107ನೇ ಪ್ರಕರಣವನ್ನು ಬಿಟ್ಟುಬಿಡತಕ್ಕದ್ದು.

(iv) 143ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ "ತಪ್ಪಿತಸ್ಥನು" ಎಂಬ ಪದಕ್ಕೆ ಮೊದಲು "ವಾರೆಂಟು ನೀಡಿದ ದಿನಾಂಕದಿಂದ ಎರಡು ತಿಂಗಳೊಳಗಾಗಿ" ಎಂಬ ಪದಗಳನ್ನು ಸೇರಿಸತಕ್ಕದ್ದು.

(v) 154ನೇ ಪ್ರಕರಣದಲ್ಲಿ,-

(ಎ) 1ನೇ ಉಪ ಪ್ರಕರಣದಲ್ಲಿ "ಬಾಡಿಗೆಯ ಎಂಬ ಪದದ ತರುವಾಯ "ಅಥವಾ ಸ್ವತ್ತು ತೆರಿಗೆಯ" ಎಂಬ ಪದಗಳನ್ನು ಸೇರಿಸತಕ್ಕದ್ದು.

(ಬಿ) 2ನೇ ಉಪ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು ಎಂದರೆ.-

"(3) ಸ್ವತ್ತು ತೆರಿಗೆಯ ನಿರ್ಧರಣೆಯ ಮೇರೆಗೆ ಅಥವಾ ಪುರಸಭೆಗೆ ಯಾವುದೇ ಹಣಕಾಸು ಉದ್ದೇಶಗಳ ಮೇರೆಗೆ ಸ್ವತ್ತು ತೆರಿಗೆಯ ಬಾಕಿಯನ್ನು ಸಂಗ್ರಹಿಸಲು ವಿಫಲನಾದ ಪುರಸಭೆಯ ಯಾರೇ ಅಧಿಕಾರಿ ಅಥವಾ ಉದ್ಯೋಗಿಯು, ಪ್ರತಿಯೊಂದು ಪ್ರಕರಣಗಳಲ್ಲಿ ಐವತ್ತು ಸಾವಿರ ರೂಪಾಯಿಗಳವರೆಗೆ ಜುಲ್ಮಾನೆಗೆ ಒಳಗಾಗತಕ್ಕದ್ದು ಮತ್ತು ಹದಿನೈದು ದಿವಸಗಳ ಸಾದಾ ಕಾರಾವಾಸದಿಂದಲೂ ಸಹ ದಂಡಿತನಾಗಬಹುದು.

3. 1977ರ ಕರ್ನಾಟಕ ಅಧಿನಿಯಮ 14ರ ತಿದ್ದುಪಡಿ.- ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ರಲ್ಲಿ,-

(i) 112ಎ ಪ್ರಕರಣದ (3) ನೇ ಉಪಪ್ರಕರಣದ ಕೊನೆಯಲ್ಲಿ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಈ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, (1)ನೇ ಉಪಪ್ರಕರಣದಡಿಯಲ್ಲಿ ಸಲ್ಲಿಸಲಾದ ಯಾವುದೇ ವಿವರಪಟ್ಟಿಕೆಗಾಗಿ 2023-24ರ ಆರ್ಥಿಕ ವರ್ಷದ ಪ್ರಾರಂಭದಿಂದ ಹಿಂದಿನ ಆರು ಆರ್ಥಿಕ ವರ್ಷಗಳಿಗೆ ಈ ಉಪಪ್ರಕರಣದಡಿಯಲ್ಲಿ ಮಾಡಲಾದ ನಿರ್ಧರಣೆಯನ್ನು ಒಂದು ವರ್ಷದೊಳಗಾಗಿ ನಿರ್ಣಯಿಸತಕ್ಕದ್ದು."

(ii) 112ಬಿ ಪ್ರಕರಣದಲ್ಲಿ,-

(ಎ) ಉಪಪ್ರಕರಣ (1)ರಲ್ಲಿ "ಖಾಲಿ ಭೂಮಿಗಳು" ಎಂಬ ಪದಗಳ ಬದಲಾಗಿ "ಖಾಲಿ ಕಟ್ಟಡ ನಿವೇಶನಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) ಉಪಪ್ರಕರಣ (1)ರ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(1ಎ) (i) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಕಟ್ಟಡ ನಿರ್ಮಾಣದ ಉದ್ದೇಶಗಳಿಗಾಗಿ ಇರುವ ಕಟ್ಟಡ ನಿವೇಶನಗಳಿಗೆ ಹೊಸ PID (ಸ್ವತ್ತು ಗುರುತಿನ ಸಂಖ್ಯೆ) ಅಥವಾ ಖಾತಾ ನೀಡಲು ಅಧಿಕಾರ ವ್ಯಾಪ್ತಿಯ ಯೋಜನಾ ಪ್ರಾಧಿಕಾರವು ಲೇಔಟ್ ಪ್ಲಾನಿಗಾಗಿ ಪೂರ್ವಾನುಮತಿಯನ್ನು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರ 17ನೇ ಪ್ರಕರಣದಡಿ ಆಯುಕ್ತ ಅಥವಾ ಆಯುಕ್ತನಿಂದ ಅಧಿಕೃತಗೊಳಿಸಲಾದ ಯಾರೇ ಅಧಿಕಾರಿಯಿಂದ ಪಡೆಯತಕ್ಕದ್ದು.

(ii) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರ 17ನೇ ಪ್ರಕರಣದ ಮತ್ತು 17ನೇ ಪ್ರಕರಣದ ಉಪಪ್ರಕರಣ (2-ಇ) ಉಪಬಂಧಗಳನ್ನು ಅನುಸರಿಸದೆ ಪಾಲಿಕೆಯ ಆಯುಕ್ತ ಅಥವಾ ಆಯುಕ್ತನಿಂದ ಅಧಿಕೃತಗೊಳಿಸಿದ ಯಾರೇ ಅಧಿಕಾರಿಯು ಹೊಸ ಪಿಐಡಿ ಅಥವಾ ಖಾತಾವನ್ನು ನೀಡತಕ್ಕದ್ದಲ್ಲ:

ಪರಂತು, ಪಾಲಿಕೆಯ ಆಯುಕ್ತ ಅಥವಾ ಆಯುಕ್ತನಿಂದ ಅಧಿಕೃತಗೊಳಿಸಿದ ಯಾರೇ ಅಧಿಕಾರಿಯು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರ ಮತ್ತು ಈ ಅಧಿನಿಯಮದ 505ನೇ ಪ್ರಕರಣದ ಸದರಿ ಉಪಬಂಧಗಳನ್ನು ಅನುಸರಿಸಲು ವಿಫಲನಾದರೆ ಮತ್ತು ಕಾನೂನುಬಾಹಿರವಾಗಿ ರಚಿತವಾದ ಪ್ಲಾಟ್‌ಗೆ ಹೊಸ ಪಿಐಡಿ ಅಥವಾ ಖಾತಾವನ್ನು ನೀಡಿದರೆ, ಸಂಬಂಧಪಟ್ಟ ಅಧಿಕಾರಿಯು ನಿಯಮಿಸಬಹುದಾದಂಥ ದಂಡನೆ ಮತ್ತು ಶಿಕ್ಷೆಗೆ ಹೊಣೆಗಾರನಾಗತಕ್ಕದ್ದು.

(1ಬಿ) (i) ಪಾಲಿಕೆಯು, ಸರ್ಕಾರಿ ಭೂಮಿಯಲ್ಲಿ, ಯಾವುದೇ ಸ್ಥಳೀಯ ಸಂಸ್ಥೆಗೆ, ಯಾವುದೇ ಶಾಸನಬದ್ಧ ಸಂಸ್ಥೆಗೆ ಅಥವಾ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಒಂದು ಸಂಘ ಸಂಸ್ಥೆಗೆ ಸೇರಿದ ಭೂಮಿಯಲ್ಲಿ, ಕಾನೂನು ಬಾಹಿರವಾಗಿ ನಿರ್ಮಿಸಿದ ಕಟ್ಟಡವನ್ನು ಹೊರತುಪಡಿಸಿ, ಕಟ್ಟಡ ಉಪ ವಿಧಿಗಳು ಉಪಬಂಧಗಳನ್ನು ಉಲ್ಲಂಘಿಸಿ ಕಟ್ಟಿರುವ ಅಥವಾ ಅನಧಿಕೃತ ಲೇಔಟ್‌ನಲ್ಲಿ ಅಥವಾ ರೆವಿನ್ಯೂ ಭೂಮಿಯಲ್ಲಿ ಕಟ್ಟಿರುವ ಕಟ್ಟಡವು ಸೇರಿದಂತೆ ಪ್ರತಿಯೊಂದು ಕಟ್ಟಡಕ್ಕೆ, ಖಾಲಿ ಭೂಮಿಗೆ ಅಥವಾ ಅವೆರಡನ್ನೂ ಒಳಗೊಂಡು ಅಥವಾ ಈ ಉಪಬಂಧದ ಪ್ರಾರಂಭದ ದಿನಾಂಕಕ್ಕೂ ಮೊದಲು ಸೃಜಿಸಿದ ಸ್ವತ್ತಿಗಾಗಿ ಮಾತ್ರ ಅಧಿಭೋಗ ಪ್ರಮಾಣ ಪತ್ರ ಅಥವಾ ಕಟ್ಟಡ ನಿರ್ಮಾಣ ಮುಕ್ತಾಯ ಪ್ರಮಾಣಪತ್ರವನ್ನು ನೀಡದೆಯೇ ವಾಸಕ್ಕೆ ಬಳಸುತ್ತಿರುವ ಕಟ್ಟಡಕ್ಕೆ ಮೊದಲ ವರ್ಷಕ್ಕಾಗಿ ಎರಡು ಪಟ್ಟು ಸ್ವತ್ತು ತೆರಿಗೆಯನ್ನು ವಿಧಿಸಬಹುದು ಮತ್ತು ನಂತರದ ವರ್ಷಗಳಿಗೆ ಸ್ವತ್ತು ತೆರಿಗೆಯನ್ನು ಮಾತ್ರ ವಿಧಿಸತಕ್ಕದ್ದು, ಅದನ್ನು ಒಂದು ಪ್ರತ್ಯೇಕ ರಿಜಿಸ್ಟರಿನಲ್ಲಿ ನಿರ್ವಹಿಸತಕ್ಕದ್ದು. ಕರ್ನಾಟಕ ಮುನಿಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2024ರ ಪ್ರಾರಂಭದ ದಿನಾಂಕದ ತರುವಾಯ ಆ ರಿಜಿಸ್ಟರಿನಲ್ಲಿ ಹೊಸ ಸ್ವತ್ತುಗಳನ್ನು ಸೇರಿಸತಕ್ಕದ್ದಲ್ಲ:

ಪರಂತು, ಈ ಉಪ-ಪ್ರಕರಣದ ಮೇರೆಗೆ ಅಂಥ ಕಟ್ಟಡಗಳಿಗೆ ಅಥವಾ ಖಾಲಿ ಭೂಮಿಗಳಿಗೆ ಸ್ವತ್ತು ತೆರಿಗೆಯನ್ನು ವಿಧಿಸುವುದು ಮತ್ತು ಅದನ್ನು ವಸೂಲು ಮಾಡುವುದು, ಮಾಡಿದ ಯಾವುದೇ ಉಲ್ಲಂಘನೆಯನ್ನು ಸಕ್ರಮಗೊಳಿಸಲು ಯಾವುದೇ ಹಕ್ಕನ್ನಾಗಲಿ ಅಥವಾ ಅಂಥ ಕಟ್ಟಡಕ್ಕೆ ಅಥವಾ ಖಾಲಿ ಭೂಮಿಗೆ ಹಕ್ಕುಸ್ವಾಮ್ಯ, ಒಡೆತನ ಅಥವಾ ಕಾನೂನಿನ ಸ್ಥಾನಮಾನವನ್ನಾಗಲಿ ದೊರಕಿಸಿ ಕೊಡುವುದಿಲ್ಲ. ಅಂಥ ಕಟ್ಟಡಗಳು ಅಥವಾ ಖಾಲಿ ಭೂಮಿಗಳು ಕಾನೂನಿನ ಉಲ್ಲಂಘನೆಗಾಗಿ ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳನ್ವಯ ಯಾವುದೇ ಕಾನೂನು ಕ್ರಮಕ್ಕೆ ಗುರಿಯಾಗಲು ಯಾವಾಗಲೂ ಬದ್ಧವಾಗಿರತಕ್ಕದ್ದು.

(ii) ಆಯುಕ್ತನು (i)ನೇ ಖಂಡದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ದಾಖಲೆಯನ್ನು ನಿರ್ವಹಿಸತಕ್ಕದ್ದು, ಅದು ಈ ಪ್ರಕರಣದಡಿ ತೆರಿಗೆಗೆ ಒಳಪಡಿಸಿದ ಕಾನೂನುಬದ್ಧ ಕಟ್ಟಡಗಳು ಅಥವಾ ಖಾಲಿ ಭೂಮಿಗಳ ಹಾಗೂ ಕಾನೂನುಬದ್ಧವಲ್ಲದ ಕಟ್ಟಡಗಳು ಅಥವಾ ಖಾಲಿ ಭೂಮಿಗಳ ವಿವರಗಳನ್ನು ಒಳಗೊಂಡಿರತಕ್ಕದ್ದು."

(iii) 112ಸಿ ಪ್ರಕರಣ ಮತ್ತು ಅದರೊಂದಿಗಿನ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು.

4. ತೊಂದರೆಗಳನ್ನು ನಿವಾರಿಸುವ ಅಧಿಕಾರ.- (1) ಈ ಅಧಿನಿಯಮದ ಉಪಬಂಧಗಳಿಗೆ ಪರಿಣಾಮ ನೀಡುವಲ್ಲಿ ಏನಾದರೂ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು ಆದೇಶದ ಮೂಲಕ ತೊಂದರೆಯನ್ನು ನಿವಾರಿಸುವುದಕ್ಕಾಗಿ ಅವಶ್ಯಕವೆಂದು ಕಂಡುಬರುವ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಎರಡು ವರ್ಷಗಳ ಅವಧಿಯ ಮುಕ್ತಾಯದ ತರುವಾಯ ಯಾವುದೇ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಅಡಿಯಲ್ಲಿ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಸಾಧ್ಯವಾದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

The above translation of the Karnataka Municipalities and Certain other Law (Amendment) Act, 2024 (Karnataka Act No. 43 of 2024) shall be an authoritative text in Kannada language under section 6 of the Kannada Language Comprehensive Development Act, 2022 (Karnataka Act No. 13 of 2023).

ಥಾವರ್‌ಚಂದ್ ಗೆಹ್ಲೋಟ್
ಕರ್ನಾಟಕದ ರಾಜ್ಯಪಾಲರು
ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ

ಮತ್ತು ಅವರ ಹೆಸರಿನಲ್ಲಿ,

(ಜಿ. ಶ್ರೀಧರ್)
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

2025 ರ ಕರ್ನಾಟಕ ಅಧಿನಿಯಮ ಸಂಖ್ಯೆ: 64

(2025 ರ ಸೆಪ್ಟೆಂಬರ್ ತಿಂಗಳ 12ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

ಕರ್ನಾಟಕ ಮುನ್ಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2025

(2025 ರ ಸೆಪ್ಟೆಂಬರ್ ತಿಂಗಳ 11ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964 ಮತ್ತು ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22) ಮತ್ತು ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ:

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಕರ್ನಾಟಕ ಮುನ್ಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. 1964ರ ಕರ್ನಾಟಕ ಅಧಿನಿಯಮ 22ರ ತಿದ್ದುಪಡಿ.- ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22)ರಲ್ಲಿ,-

(i) 2ನೇ ಪ್ರಕರಣದ (9)ನೇ ಖಂಡದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(9ಎ) "ಪಟ್ಟಿ ಮಾಡಲಾದ ವೃತ್ತಿಪರರು" ಎಂದರೆ, ವೃತ್ತಿಪರರಾದ ವಾಸ್ತುಶಿಲ್ಪಿಗಳು, ಇಂಜಿನಿಯರುಗಳು, ರಚನಾ ವಿನ್ಯಾಸ ಸಮಾಲೋಚಕರು, ಯಾಂತ್ರಿಕ, ವಿದ್ಯುನ್ಮಾನ ಮತ್ತು ಕೊಳಾಯಿ

ಸಂಬಂಧಿ (ಎಂಇಪಿ) ಸಲಹೆಗಾರರು, ಪಟ್ಟಣ ಯೋಜಕರು, ಪರಿಸರ ಸಮಾಲೋಚಕರು ಮುಂತಾದವರು ಸಂದರ್ಭಾನುಸಾರ ಕಟ್ಟಡ ನಿರ್ಮಾಣದ ಮೊದಲು, ನಿರ್ಮಾಣದ ಸಮಯದಲ್ಲಿ ಮತ್ತು ನಂತರ ಪರಿಶೀಲಿಸಲು, ಅನುಮೋದಿತ ಯೋಜನೆಗಳ ಉಪಬಂಧಗಳನುಸಾರ ಮಾಡಲಾದ ನಿರ್ಮಾಣಗಳನ್ನು ಪ್ರಮಾಣೀಕರಿಸಲು ಮತ್ತು ಸ್ಥಳೀಯ ಪ್ರಾಧಿಕಾರಕ್ಕೆ ವರದಿ ಮಾಡಲು ಹಾಗೂ ಸರ್ಕಾರವು ಅಧಿಸೂಚಿಸಿದಂತೆ ಕೆಲವು ಕಟ್ಟಡಗಳ ಕಟ್ಟಡ ನಕ್ಷೆಗಳನ್ನು ಮಂಜೂರು ಮಾಡಲು ಸಹ ಸ್ಥಳೀಯ ಪ್ರಾಧಿಕಾರದಿಂದ ಅಧಿಕೃತಗೊಳಿಸಿದ ವ್ಯಕ್ತಿಗಳು ಎಂಬುದಾಗಿ ಪಟ್ಟಿ ಮಾಡಲಾದವರು".

(ii) ಪ್ರಕರಣ 180ರಲ್ಲಿ,-

(ಎ) ಉಪ-ಪ್ರಕರಣ (1)ರಲ್ಲಿ "ಮುನ್ಸಿಪಲ್ ಕೌನ್ಸಿಲ್‌ನ" ಎಂಬ ಪದಗಳ ಬದಲಿಗೆ "ಮುನಿಸಿಪಲ್ ಕಮಿಷನರ್ ಅಥವಾ ಮುಖ್ಯಾಧಿಕಾರಿಯ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ಬಿ) ಉಪ-ಪ್ರಕರಣ (4)ರಲ್ಲಿ "ಎರಡು ನೂರು ರೂಪಾಯಿಗಳವರೆಗೆ" ಎಂಬ ಪದಗಳ ಬದಲಿಗೆ "ಎರಡು ಸಾವಿರ ರೂಪಾಯಿಗಳವರೆಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(iii) ಪ್ರಕರಣ 184ರಲ್ಲಿ,-

(ಎ) ಉಪ-ಪ್ರಕರಣ (1)ರಲ್ಲಿ "ಮುನ್ಸಿಪಲ್ ಕೌನ್ಸಿಲ್‌ನಿಂದ" ಎಂಬ ಪದಗಳ ಬದಲಿಗೆ "ಮುನ್ಸಿಪಲ್ ಕಮಿಷನರ್ ಅಥವಾ ಮುಖ್ಯಾಧಿಕಾರಿಯಿಂದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ಬಿ) ಉಪ-ಪ್ರಕರಣ (2)ರಲ್ಲಿ "ಮುನ್ಸಿಪಲ್ ಕೌನ್ಸಿಲ್" ಎಂಬ ಪದಗಳ ಬದಲಿಗೆ "ಮುನ್ಸಿಪಲ್ ಕಮಿಷನರ್ ಅಥವಾ ಮುಖ್ಯಾಧಿಕಾರಿಯು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(iv) ಪ್ರಕರಣ 187ರಲ್ಲಿ,-

(ಎ) ಉಪ-ಪ್ರಕರಣ (1)ರ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(1) ಯಾವುದೇ ಕಟ್ಟಡವನ್ನು ನಿರ್ಮಿಸುವ ಅಥವಾ ಈಗಿರುವ ಯಾವುದೇ ಕಟ್ಟಡಕ್ಕೆ ಹೊರಗೆ ಮಾರ್ಪಾಟು ಮಾಡುವ ಅಥವಾ ಅದಕ್ಕೆ ಸೇರಿಸುವ ಅಥವಾ ಯಾವ ಕಟ್ಟಡವನ್ನು ತೆಗೆದುಹಾಕಲು ಅಥವಾ ಯಾವ ಕಟ್ಟಡದ ನಿರ್ಮಾಣವನ್ನು ಹಿಂದಕ್ಕೆ ಸರಿಸಲು ಅಧಿಕಾರ ನೀಡಲಾಗಿದೆಯೋ ಆ ಯಾವುದೇ ಕಟ್ಟಡದ ಯಾವುದೇ ಮುಂಚಾಚಿರುವ ಭಾಗವನ್ನು ಅಥವಾ ಯಾವ ಕಟ್ಟಡದ ನಿರ್ಮಾಣಕ್ಕೆ ಅಥವಾ ಪುನರ್ ನಿರ್ಮಾಣಕ್ಕೆ ಸಂಬಂಧಿಸಿದಂತೆ ಮುನ್ಸಿಪಲ್ ಕೌನ್ಸಿಲ್‌ಗೆ 181ನೇ ಪ್ರಕರಣದ ಮೂಲಕ ಅಧಿಕಾರ ನೀಡಲಾಗಿದೆಯೋ ಆ ಕಟ್ಟಡವನ್ನು ನಿರ್ಮಿಸುವುದಕ್ಕೂ ಮೊದಲು ಅಥವಾ ಪುನರ್ ನಿರ್ಮಿಸುವುದನ್ನು ಪ್ರಾರಂಭಿಸುವುದಕ್ಕೂ ಮೊದಲು, ಹಾಗೆ ನಿರ್ಮಿಸಲು, ಮಾರ್ಪಾಟು ಮಾಡಲು, ಸೇರಿಸಲು ಅಥವಾ ಪುನರ್ ನಿರ್ಮಿಸಲು ಉದ್ದೇಶಿಸುವ ವ್ಯಕ್ತಿಯು, ವೆಬ್ ಪೋರ್ಟಲ್ ಮೂಲಕ ಅರ್ಜಿಯನ್ನು ಸಲ್ಲಿಸತಕ್ಕದ್ದು ಮತ್ತು ಅದೇ ಸಮಯದಲ್ಲಿ ಅಂಥ ಕಟ್ಟಡದ ತಳಪಾಯವನ್ನು ಮತ್ತು ಅತಿ ಕೆಳಗಿನ ನೆಲ ಅಂತಸ್ತಿನ ಮಟ್ಟಗಳನ್ನು, ಮುನ್ಸಿಪಲ್ ಕೌನ್ಸಿಲ್‌ಗೆ ತಿಳಿದಿರುವ ಯಾವುದೇ ಮಟ್ಟವನ್ನು ತಿಳಿಸಿ ಯಾವ ಮಟ್ಟಗಳಲ್ಲಿ ನಿರ್ಮಿಸಲು ಪ್ರಸ್ತಾವಿಸಲಾಗಿದೆಯೋ ಆ ಮಟ್ಟಗಳನ್ನು ತೋರಿಸುವ ನಕ್ಷೆಯನ್ನು, ಮತ್ತು ಪ್ರಸ್ತಾವಿತ ಕಟ್ಟಡದ ಪರಿಮಿತಿಗಳು, ಉದ್ದಗಲ, ವಿನ್ಯಾಸ, ವಾಯು ಸಂಚಾರ, ಸಾಮಗ್ರಿಗಳ ಬಗ್ಗೆ ಬೈಲಾಗಳಲ್ಲಿ ಅಗತ್ಯಪಡಿಸಿದ ಅಥವಾ ಮುನ್ಸಿಪಲ್ ಕೌನ್ಸಿಲ್ ತಗಾದೆ ಮಾಡಿದ ಎಲ್ಲಾ ಮಾಹಿತಿಯನ್ನು ಮತ್ತು ಅದಕ್ಕೆ ಸಂಬಂಧಿಸಿದಂತೆ ಬಳಸಬೇಕಾದ ಚರಂಡಿಗಳು, ಗ್ರಾಮಸಾರ ಚರಂಡಿಗಳು, ಕಕ್ಕಸುಗಳು, ಶೌಚಗೃಹಗಳು ಮತ್ತು ರೊಚ್ಚುಗುಂಡಿಗಳು ಯಾವುದಾದರೂ ಇದ್ದರೆ ಅವುಗಳ ಉದ್ದೇಶಿತ ಸ್ಥಳ ಮತ್ತು ನಿರ್ಮಾಣದ ಬಗ್ಗೆ ಯಾವುದೇ ಈಗಿರುವ ಅಥವಾ ಯೋಜಿತ ಬೀದಿಗಳಿಗೆ ಸಂಬಂಧಪಟ್ಟಂತೆ ಕಟ್ಟಡದ ಸ್ಥಳವನ್ನು ಹಾಗೂ ಕಟ್ಟಡವನ್ನು ಯಾವ ಉದ್ದೇಶಕ್ಕಾಗಿ ಬಳಸಬೇಕಾಗಿದೆಯೋ ಆ ಉದ್ದೇಶದ ಬಗ್ಗೆ ಸರ್ಕಾರವು ಅಧಿಸೂಚಿಸಿದಂಥ ಕಟ್ಟಡಗಳ ಸಂದರ್ಭದಲ್ಲಿ ಲೈಸೆನ್ಸುಳ್ಳ ವೃತ್ತಿಪರರ ಸ್ವ-ಪ್ರಮಾಣೀಕರಣಕ್ಕೆ (self-certification) ಸಂಬಂಧಿಸಿದ ದಸ್ತಾವೇಜಿಗಳನ್ನು ಒಳಗೊಂಡು ಎಲ್ಲ ಮಾಹಿತಿಯನ್ನು ಮುನ್ಸಿಪಲ್ ಕೌನ್ಸಿಲ್‌ಗೆ ಒದಗಿಸತಕ್ಕದ್ದು."

(ಬಿ) ಹಾಗೇ ಪ್ರತಿಯೋಜಿಸಲಾದ ಉಪ-ಪ್ರಕರಣ (1)ರ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"**(1-ಎ). ಕರಗಳು, ನಿರ್ಬಂಧಗಳು ಮತ್ತು ಷರತ್ತುಗಳ ವಿಧಿಸುವಿಕೆ.-** (1) ಮುನ್ಸಿಪಲ್ ಕೌನ್ಸಿಲ್ ನಕ್ಷೆಯನ್ನು ಅನುಮೋದಿಸಲು ಅಥವಾ ಮಂಜೂರು ಮಾಡಲು ಅಥವಾ ಪ್ರಾರಂಭ ಪ್ರಮಾಣಪತ್ರ ಅಥವಾ ಅಧಿಭೋಗ ಪ್ರಮಾಣಪತ್ರವನ್ನು ನೀಡಲು, ಕರ್ನಾಟಕ ಸ್ವಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34) ರ ಉಪಬಂಧಗಳ ಅಡಿಯಲ್ಲಿ ನೋಂದಣಿ ಮತ್ತು ಮುದ್ರಾಂಕ ಇಲಾಖೆಯು ನಿಗದಿಪಡಿಸಿದ ಮಾರ್ಗಸೂಚಿ ಮೌಲ್ಯದ ಆಧಾರದ ಮೇಲೆ ಅಥವಾ ವಾರ್ಷಿಕ ಹೆಚ್ಚಳದೊಂದಿಗಿನ ಯಾವುದೇ ನಿಗದಿತ ದರಗಳ ಆಧಾರದ ಮೇಲೆ ನಿಯಮಗಳು ಅಥವಾ ಉಪವಿಧಿಗಳಲ್ಲಿ ನಿಯಮಿಸಬಹುದಾದಂಥ ದರಗಳಲ್ಲಿ ಈ ಮುಂದಿನ ಶುಲ್ಕವನ್ನು ವಿಧಿಸಬಹುದು ಮತ್ತು ವಸೂಲು ಮಾಡಬಹುದು, ಎಂದರೆ.-

(i) ಲೈಸೆನ್ಸು ನೀಡಿಕೆಗಾಗಿ ಶುಲ್ಕ;

(ii) ಲೈಸೆನ್ಸು ಮಂಜೂರು ಮಾಡಲಾದ ಕಟ್ಟಡಕ್ಕಾಗಿ ಭದ್ರತಾ ಶುಲ್ಕ;

(iii) ನಿರ್ಮಾಣದ ಸಮಯದಲ್ಲಿ ಸಾರ್ವಜನಿಕ ರಸ್ತೆಗಳ ನಿರ್ವಹಣೆ ಅಥವಾ ಸಾರ್ವಜನಿಕ ಸ್ಥಳಗಳಲ್ಲಿ ನಿರ್ಮಾಣ ಸಾಮಗ್ರಿಗಳ ಶೇಖರಣೆಗಾಗಿ ಶುಲ್ಕ, ಅಂದರೆ ನೆಲ ಬಾಡಿಗೆ;

(iv) ನಿರ್ಮಾಣವು ಮಂಜೂರಾದ ಯೋಜನೆಯ ಅನುಸಾರವಾಗಿರುವುದನ್ನು ಖಚಿತಪಡಿಸಲು ಭದ್ರತಾ ಶುಲ್ಕ;

(v) ಪ್ರಾರಂಭ ಪ್ರಮಾಣಪತ್ರಕ್ಕಾಗಿ ಶುಲ್ಕ;

(vi) ಅಧಿಭೋಗ ಪ್ರಮಾಣಪತ್ರಕ್ಕಾಗಿ ಶುಲ್ಕ;

(vii) ಪ್ರಾಧಿಕಾರದ ಅಗತ್ಯತೆಗಳಿಗೆ ಸಂಬಂಧಿಸಿದಂತೆ ಪಟ್ಟಿ ಮಾಡಲಾದ ವೃತ್ತಿಪರರು ಒದಗಿಸುವ ಸೇವೆಗಳಿಗಾಗಿ ಕಟ್ಟಡಗಳ ಮಾಲೀಕರು ಭರಿಸಬೇಕಾದ ಶುಲ್ಕ.

(viii) ನಿರ್ಮಾಣದ ಪ್ರಾರಂಭದಲ್ಲಿ ಪ್ರಾರಂಭ ಪ್ರಮಾಣ ಪತ್ರವನ್ನು ಪಡೆಯದಿದ್ದಕ್ಕಾಗಿ ಅಧಿಭೋಗ ಪ್ರಮಾಣ ಪತ್ರವನ್ನು ನೀಡುವ ಸಮಯದಲ್ಲಿ ವಿಧಿಸುವ ದಂಡ.

(ix) ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಮಂಜೂರಾದ ನಕ್ಷೆ ಅಥವಾ ವಲಯ ನಿಯಂತ್ರಣ ಮಿತಿಗೆ ಸಂಬಂಧಿಸಿದಂತೆ ನಿರ್ಮಾಣದಲ್ಲಿನ ಉಲ್ಲಂಘನೆ ಅಥವಾ ಮಾರ್ಗ ಪಲ್ಲಟದ ವ್ಯಾಪ್ತಿಯವರೆಗೆ ಕ್ರಮಬದ್ಧಗೊಳಿಸುವುದಕ್ಕಾಗಿ ದಂಡ; ಮತ್ತು

(x) ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಅಥವಾ ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದಂಥ ಇತರ ಶುಲ್ಕ."

(v) ಪ್ರಕರಣ 190ರಲ್ಲಿ, ಉಪ-ಪ್ರಕರಣ (2)ರ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(2ಎ) ಅದಿಭೋಗ ಪ್ರಮಾಣ ಪತ್ರವನ್ನು ಪಡೆಯುವುದರಿಂದ ವಿನಾಯಿತಿಸಬೇಕಾದ ಕಟ್ಟಡಗಳ ಪ್ರವರ್ಗವನ್ನು ಸರ್ಕಾರವು ಅಧಿಸೂಚಿಸಬಹುದು."

(vi) ಪ್ರಕರಣ 208ರಲ್ಲಿನ ಉಪ-ಪ್ರಕರಣ (1) ಮತ್ತು ಉಪ-ಪ್ರಕರಣ (3)ರಲ್ಲಿ, "ಮುನ್ಸಿಪಲ್ ಕೌನ್ಸಿಲ್" ಎಂಬ ಪದಗಳ ಬದಲಿಗೆ "ಮುನ್ಸಿಪಲ್ ಕಮಿಷನರ್ ಅಥವಾ ಮುಖ್ಯಾಧಿಕಾರಿಯು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(vii) ಪ್ರಕರಣ 256ರಲ್ಲಿ,-

(ಎ) ಉಪ-ಪ್ರಕರಣ (1)ರ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(1) ಬೈಲಾಗಳಲ್ಲಿ ನಿರ್ದಿಷ್ಟಪಡಿಸಿದಂತೆ ಅಥವಾ ಸರ್ಕಾರವು ಅಧಿಸೂಚಿಸಿದಂತೆ ಮುನ್ಸಿಪಲ್ ಕಮಿಷನರ್ ಅಥವಾ ಮುಖ್ಯಾಧಿಕಾರಿಯು ಈ ಕುರಿತು ಮಂಜೂರು ಮಾಡಿದ ಲೈಸೆನ್ಸಿನ ನಿಬಂಧನೆಗಳನ್ನು ಅನುಸರಿಸದೆ ಅಥವಾ ಅನ್ಯಥಾ ಯಾವುದೇ ಉದ್ದೇಶಗಳಿಗಾಗಿ ಯಾವುದೇ ಆವರಣಗಳನ್ನು ಯಾರೇ ವ್ಯಕ್ತಿಯು ಬಳಸತಕ್ಕದ್ದಲ್ಲ ಅಥವಾ ಬಳಸಲು ಅನುಮತಿಸತಕ್ಕದ್ದಲ್ಲ:

ಪರಂತು, ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಅಭಿವೃದ್ಧಿ ಅಧಿನಿಯಮ, 2006 (2006ರ ಕೇಂದ್ರ ಅಧಿನಿಯಮ 27)ರಡಿಯಲ್ಲಿ ಸಂಬಂಧಪಟ್ಟ ಜಿಲ್ಲಾ ಕೈಗಾರಿಕಾ ಕೇಂದ್ರದಲ್ಲಿ ನೋಂದಾಯಿಸಿರುವ ಎಲ್ಲಾ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮಗಳು ಮತ್ತು ಕೈಗಾರಿಕಾ ಸಹಾಯ ಸಚಿವಾಲಯ, ಕೈಗಾರಿಕಾ ನೀತಿ ಮತ್ತು ಪ್ರಚಾರ ಇಲಾಖೆ, ಭಾರತ ಸರ್ಕಾರ ಇದರೊಂದಿಗೆ ಕೈಗಾರಿಕಾ ಉದ್ಯಮಿಗಳ ಜ್ಞಾಪಕ ಪತ್ರ ಅಥವಾ ಕೈಗಾರಿಕಾ ಲೈಸೆನ್ಸನ್ನು ದಾಖಲಿಸಿರುವ ದೊಡ್ಡ ಕೈಗಾರಿಕೆಗಳಿಗೆ ವ್ಯಾಪಾರ ಲೈಸೆನ್ಸನ್ನು ಪಡೆಯುವುದರಿಂದ ವಿನಾಯಿತಿ ನೀಡಲಾಗುತ್ತದೆ."

(ಬಿ) ಉಪ-ಪ್ರಕರಣ (2)ರಲ್ಲಿ "XIIIನೇ ಅನುಸೂಚಿಯ Iನೇ ಹಾಗೂ IIನೇ ಭಾಗದಲ್ಲಿ ನಮೂದಿಸಿರುವ" ಎಂಬ ಅಕ್ಷರಗಳು ಮತ್ತು ಪದಗಳ ಬದಲಿಗೆ "ಬೈಲಾಗಳಲ್ಲಿ ನಿರ್ದಿಷ್ಟಪಡಿಸಿದಂತೆ ಅಥವಾ ಸರ್ಕಾರವು ಅಧಿಸೂಚಿಸಿದಂತೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಸಿ) ಉಪ-ಪ್ರಕರಣ (4)ರಲ್ಲಿ,-

(i) "(1)ನೇ ಉಪ-ಪ್ರಕರಣದ ಅಥವಾ (2)ನೇ ಉಪ-ಪ್ರಕರಣದ ಮೇರೆಗೆ" ಎಂಬ ಪದಗಳ ಬದಲಿಗೆ "ಬೈಲಾಗಳಲ್ಲಿ ನಿರ್ದಿಷ್ಟಪಡಿಸಿದಂತೆ ಅಥವಾ ಸರ್ಕಾರವು ಅಧಿಸೂಚಿಸಿದಂತೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) ಪರಂತುಕವನ್ನು ಬಿಟ್ಟುಬಿಡತಕ್ಕದ್ದು.

(ಡಿ) ಉಪ-ಪ್ರಕರಣ (6)ರ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(6) ಉಪ-ಪ್ರಕರಣ (1), ಅಥವಾ (2) ಅಥವಾ (3)ರ ಅಥವಾ 324ನೇ ಪ್ರಕರಣದ ಉಪ-ಪ್ರಕರಣ (1)ರಡಿ ರಚಿಸಲಾದ ಯಾವುದೇ ಬೈಲಾದ ಉಪಬಂಧಗಳನ್ನು ಉಲ್ಲಂಘಿಸಿ ಯಾವುದೇ ಆವರಣಗಳನ್ನು ಬಳಸಿದ ಯಾರಾದರೂ ದಂಡದೊಂದಿಗೆ ದಂಡಿತನಾಗತಕ್ಕದ್ದು."

(ಇ) ಉಪ-ಪ್ರಕರಣ (7)ರಲ್ಲಿ "ಉಪ-ಪ್ರಕರಣ (1)ರ (ಎ) ಅಥವಾ (ಬಿ) ಖಂಡದಲ್ಲಿ" ಎಂಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳ ಬದಲಿಗೆ "ಉಪ-ಪ್ರಕರಣ (1)ರಲ್ಲಿ" ಎಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳನ್ನು ಪ್ರತಿಯೋಜಿಸತಕ್ಕದ್ದು.

(viii) ಪ್ರಕರಣ 324ರ ಉಪ-ಪ್ರಕರಣ (1)ರಲ್ಲಿ,-

(ಎ) ಖಂಡ (ಸಿಸಿ)ಯಲ್ಲಿ "187ನೇ ಪ್ರಕರಣದ ಮೇರೆಗೆ" ಎಂಬ ಪದಗಳ ಬದಲಾಗಿ "ಅನುಮೋದಿತ ಯೋಜನೆಗಳ ಉಪಬಂಧಗಳ ಪ್ರಕಾರ ಮತ್ತು ಸ್ಥಳೀಯ ಪ್ರಾಧಿಕಾರಕ್ಕೆ ವರದಿ ಮಾಡಲು ಮತ್ತು ಸರ್ಕಾರವು ನಿಯಮಿಸಿದಂತೆ ಕೆಲವು ಕಟ್ಟಡಗಳ ಕಟ್ಟಡ ನಕ್ಷೆಗಳನ್ನು ಮಂಜೂರು ಮಾಡಲು ಮತ್ತು ಅವರ ಪಾತ್ರಗಳು, ಜವಾಬ್ದಾರಿಗಳು ಮತ್ತು ಉಲ್ಲಂಘನೆಯ ಪ್ರಕರಣಗಳಲ್ಲಿ ಅನ್ವಯವಾಗುವ ದಂಡದ ನಿಬಂಧನೆಗಳನ್ನು ಸ್ಪಷ್ಟವಾಗಿ ಪರಿಭಾಷಿಸಲು, ನಿರ್ಮಾಣದ ಮೊದಲು, ನಿರ್ಮಾಣದ ಸಮಯದಲ್ಲಿ ಮತ್ತು ನಂತರ ಕಟ್ಟಡ ಸ್ಥಳಗಳನ್ನು ಪರಿಶೀಲಿಸಲು ಮತ್ತು ಮಾಡಿದ ನಿರ್ಮಾಣಗಳನ್ನು ಪ್ರಮಾಣೀಕರಿಸಲು ವಿವಿಧ ವೃತ್ತಿಪರರನ್ನು ತಮ್ಮ ಸೇವೆಗಳನ್ನು ಪಡೆಯಲು ಪಟ್ಟಿ ಮಾಡುವುದನ್ನು ಒಳಗೊಂಡಂತೆ " ಎಂಬ ಪದಗಳನ್ನು ಸೇರಿಸತಕ್ಕದ್ದು.

(ಬಿ) ಖಂಡ (ಝಡ್)ರಲ್ಲಿ "ಮುನ್ಸಿಪಲ್ ಕೌನ್ಸಿಲ್" ಎಂಬ ಪದಗಳ ಬದಲಿಗೆ "ಮುನ್ಸಿಪಲ್ ಕಮಿಷನರ್ ಅಥವಾ ಮುಖ್ಯಾಧಿಕಾರಿಯು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ix) ಅನುಸೂಚಿ XIII ಮತ್ತು ಅದರೊಂದಿಗಿನ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು.

3. 1977ರ ಕರ್ನಾಟಕ ಅಧಿನಿಯಮ 14ರ ತಿದ್ದುಪಡಿ.- ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ರಲ್ಲಿ,-

(i) ಪ್ರಕರಣ 176ರ ಉಪ-ಪ್ರಕರಣ (6)ರಲ್ಲಿನ (ಬಿ) ಖಂಡದ (ii)ನೇ ಉಪ-ಖಂಡದಲ್ಲಿ "ಯಾವುದೇ ಸ್ಥಿರ ಸ್ವತ್ತನ್ನು " ಎಂಬ ಪದಗಳಿಗೆ ಮೊದಲು "ಸರ್ಕಾರದ ಪೂರ್ವಾನುಮತಿಯ ಹೊರತು" ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) ಪ್ರಕರಣ 310ರಲ್ಲಿ ಉಪ-ಪ್ರಕರಣ (2)ರ ತರುವಾಯ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(3) ಅದಿಭೋಗ ಪ್ರಮಾಣ ಪತ್ರವನ್ನು ಪಡೆಯುವುದರಿಂದ ವಿನಾಯಿತಿಸಲಾಗುವ ಕಟ್ಟಡಗಳ ಪ್ರವರ್ಗವನ್ನು ಸರ್ಕಾರವು ಅಧಿಸೂಚಿಸಬಹುದು."

(iii) ಪ್ರಕರಣ 353ರಲ್ಲಿ,-

(ಎ) ಉಪ-ಪ್ರಕರಣ (1)ರಲ್ಲಿ "ಅನುಸೂಚಿ Xರಲ್ಲಿ ನಿರ್ದಿಷ್ಟಪಡಿಸಿದ" ಎಂಬ ಪದಗಳು ಮತ್ತು ಅಕ್ಷರದ ಬದಲಿಗೆ "ಬೈಲಾಗಳಲ್ಲಿ ನಿರ್ದಿಷ್ಟಪಡಿಸಿದ ಅಥವಾ ಸರ್ಕಾರವು ಅಧಿಸೂಚಿಸಿದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ಬಿ) ಉಪ-ಪ್ರಕರಣ (2)ರಲ್ಲಿ "ಅನುಸೂಚಿ Xರಲ್ಲಿ" ಎಂಬ ಪದಗಳು ಮತ್ತು ಅಕ್ಷರದ ಬದಲಿಗೆ "ಬೈಲಾಗಳಲ್ಲಿ ನಿರ್ದಿಷ್ಟಪಡಿಸಿದ ಅಥವಾ ಸರ್ಕಾರವು ಅಧಿಸೂಚಿಸಿದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(iv) ಅನುಸೂಚಿ X ಮತ್ತು ಅದರೊಂದಿಗಿನ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು.

4. ತೊಂದರೆಗಳನ್ನು ನಿವಾರಿಸುವ ಅಧಿಕಾರ.- (1) ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಯಾವುದೇ ತೊಂದರೆ ಉದ್ಭವಿಸಿದಲ್ಲಿ, ರಾಜ್ಯ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ತೊಂದರೆಗಳನ್ನು ನಿವಾರಿಸುವ ಉದ್ದೇಶಗಳಿಗಾಗಿ ತನಗೆ ಅವಶ್ಯಕ ಅಥವಾ ಯುಕ್ತವೆಂದು ಕಂಡುಬರುವ ಉಪಬಂಧಗಳನ್ನು ರಚಿಸಬಹುದು:

(2) ಈ ಪ್ರಕರಣದ ಅಡಿಯಲ್ಲಿ ಮಾಡಲಾದ ಪ್ರತಿಯೊಂದು ಆದೇಶವನ್ನು ಸಾಧ್ಯವಾಧಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.

The above translation of the Karnataka Municipalities and Certain other Law (Amendment) Act, 2025 (Karnataka Act 64 of 2025) shall be an authoritative text in Kannada language under section 6 of the Kannada Language Comprehensive Development Act, 2022 (Karnataka Act No. 13 of 2023).

ಥಾವರ್‌ಚಂದ್ ಗೆಹ್ಲೋಟ್
ಕರ್ನಾಟಕದ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

ಜಿ. ಶ್ರೀಧರ್
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.